# ಕ್ರಾಂತಿ ಕಲ್ಯಾಣ

ಐತಿಹಾಸಿಕ ಕಾದಂಬರಿ

**ಶ್ರೀ ಬಸವೇಶ್ವರರ ಕಾಲ ಜೀವನಗಳನ್ನು ಕುರಿತ**
**ಕಾದಂಬರೀ ಮಾಲೆಯ ಆರನೆಯ ಕುಸುಮ**

**ಕರ್ತೃ**
**ಬಿ. ಪುಟ್ಟಸ್ವಾಮಯ್ಯ**

**ಕರ್ನಾಟಕ ಸರ್ಕಾರ**

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**KRANTI KALYANA** : A Historical novel, written by **B. Puttaswamaiah,** Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಎರಡನೇ ಮುದ್ರಣ : ೨೦೧೧
ಪ್ರತಿಗಳು : ೧೦೦೦
ಪುಟಗಳು : XVI + ೪೯೧
ಬೆಲೆ : ರೂ. ೧೧೦/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೧.೨೦೧೧

**(ಗೋವಿಂದ ಎಂ. ಕಾರಜೋಳ)**

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವಕನ್ನಡ ಸಮ್ಮೇಳದ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝುಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತಿವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳು ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ: ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**

ಪ್ರೊ: ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**

ಡಾ॥ ಚಂದ್ರಶೇಖರ ಕಂಬಾರ

ಡಾ॥ ಎಂ.ಎಂ. ಕಲಬುರ್ಗಿ

ಡಾ॥ ದೊಡ್ಡರಂಗೇಗೌಡ

ಡಾ॥ ಅರವಿಂದ ಮಾಲಗತ್ತಿ

ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಡಾ॥ ಪ್ರಧಾನ್ ಗುರುದತ್ತ

ಡಾ॥ ಹಂಪ ನಾಗರಾಜಯ್ಯ

ಡಾ॥ ಎಚ್.ಜೆ. ಲಕ್ಕಪ್ಪಗೌಡ

ಶ್ರೀಮತಿ ಸಾರಾ ಅಬೂಬಕರ್

ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**

ಶ್ರೀ ಮನು ಬಳಿಗಾರ್, ಕ.ಆ.ಸೇ.

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಪ್ರಮುಖ ಪಾತ್ರಗಳು

## (ಕಾದಂಬರಿಯಲ್ಲಿ ಕಾಣಿಸಿಕೊಳ್ಳುವ ಅನುಕ್ರಮದಲ್ಲಿ)

ನಾರಣಕ್ರಮಿತ– ರಾಜಪುರೋಹಿತ, ಬಿಜ್ಜಳನ ಧರ್ಮಾಧಿಕರಣದ ಮುಖ್ಯಾಧಿಕಾರಿ.

ಅಗ್ಗಳ– ಪಂಡಿತಕವಿ, ಚಾಲುಕ್ಯರಾಣಿ ಕಾಮೇಶ್ವರಿಯ ಮನೆಹೆಗ್ಗಡೆ.

ಬಿಜ್ಜಳ– ಮಂಗಳವೇಡೆಯ ಮಹಾಮಂಡಲೇಶ್ವರ, ಚಾಲುಕ್ಯರಾಜ್ಯದ ಸರ್ವಾಧಿಕಾರಿ.

ಕರ್ಣದೇವ– ಬಿಜ್ಜಳನ ಸಹೋದರ; 'ರಾಜಗೃಹ'ದ ರಕ್ಷಕ.

ಜಗದೇಕಮಲ್ಲ– ಬಿಜ್ಜಳನು 'ರಾಜಗೃಹ'ದಲ್ಲಿ ಬಂಧನದಲ್ಲಿಟ್ಟಿರುವ ಚಾಲುಕ್ಯ ಅರಸು. ದಿವಂಗತ ನೂರ್ಮಡಿ ತೈಲಪನ ಸಹೋದರ.

ಬೊಮ್ಮರಸ– ಚಾಲುಕ್ಯರಾಣಿ ಕಾಮೇಶ್ವರಿಯ ಪ್ರತಿನಿಧಿಯಾಗಿ ಚಾಲುಕ್ಯ ರಾಜತ್ವದ ಪುನಃಪ್ರತಿಷ್ಠೆಗಾಗಿ ಸಂಚು ನಡೆಸುತ್ತಿರುವ ಸಾಮಂತ.

ಬ್ರಹ್ಮಶಿವ ಪಂಡಿತ– ಬೊಮ್ಮರಸನ ಕಾರ್ಯದರ್ಶಿ.

ಮಾಚಿದೇವ– ವೃದ್ಧ ಶರಣ.

ಚೆನ್ನಬಸವ– ಬಸವೇಶ್ವರನ ಸೋದರಳಿಯ. ಪ್ರಸ್ತುತದಲ್ಲಿ ಅನುಭವಮಂಟಪದ ಮುಖ್ಯ ಕಾರ್ಯದರ್ಶಿ.

ಸಕಲೇಶಮಾದರಸ– ಅನುಭವಮಂಟಪದ ಅಧ್ಯಕ್ಷ.

ಮಂಚಣ– ಬಿಜ್ಜಳನ ವೃದ್ಧ ಮಂತ್ರಿ.

ನಾಗಲಾಂಬೆ– ಚೆನ್ನಬಸವನ ತಾಯಿ. ಬಸವೇಶ್ವರನ ಅಕ್ಕ.

ನೀಲಲೋಚನೆ– ಬಿಜ್ಜಳನ ಸಹೋದರಿ. ಬಸವೇಶ್ವರನ ಪತ್ನಿ.

ಸಂಗಮನಾಥ– ಬಸವೇಶ್ವರನಿಗೆ ಗಂಗಾಂಬಿಕೆಯಲ್ಲಿ ಹುಟ್ಟಿದ ಮಗ.

ಕಾಮೇಶ್ವರಿ– ನೂರ್ಮಡಿ ತೈಲಪನ ವಿಧವಾರಾಣಿ.

ಪ್ರೇಮಾರ್ಣವ– ಕಾಮೇಶ್ವರಿಯ ಕ್ಷೇತ್ರಜ ಪುತ್ರ.

ಸೋಮೇಶ್ವರ– ಬಿಜ್ಜಳನ ಹಿರಿಯ ಮಗ.

ಉಷಾವತಿ– ಕಾಮೇಶ್ವರಿಯ ಆಪ್ತ ದಾಸಿ.

ಮಧುವರಸ– ಬಿಜ್ಜಳನ ಮಂತ್ರಿ.

ಜವರಾಯ– ಸೆರೆಮನೆಯ ಭಟ.

ಲಾವಣ್ಯವತಿ– ಮಧುವರಸನ ಮಗಳು, ಶೀಲವಂತನ ಪತ್ನಿ.

ಶೀಲವಂತ– ಹರಳಯ್ಯನ ಮಗ, ವಿಖ್ಯಾತ ಚಿತ್ರಕಾರ.

ಹರಳಯ್ಯ– ಶೀಲವಂತನ ತಂದೆ, ಒಬ್ಬ ವೃದ್ಧ ಶರಣ.

ಮಾಧವ ನಾಯಕ– ಬಿಜ್ಜಳನ ಮುಖ್ಯ ದಂಡನಾಯಕ.

ನಾಗರಾಜ– ಒಬ್ಬ ಭಟನಾಯಕ.

ಮೋಳಿಗೆಯ ಮಾರಯ್ಯ– ಕಾಶ್ಮೀರದಿಂದ ಕಲ್ಯಾಣಕ್ಕೆ ಬಂದು ನೆಲೆಸಿದ ವೃದ್ಧಶರಣ.
ಪೂರ್ವಾಶ್ರಮದಲ್ಲಿ ಸಪಾದಲಕ್ಷದ ಅರಸು.

ಬಸವೇಶ್ವರ– ವರ್ಣಸಂಕರ ವ್ಯವಹಾರದಲ್ಲಿ ಬಿಜ್ಜಳನ ಆಜ್ಞೆಯಂತೆ ಕಲ್ಯಾಣವನ್ನು
ಬಿಟ್ಟು ಕೂಡಲಸಂಗಮದಲ್ಲಿ ವಾಸಮಾಡುತ್ತಿರುವ ನಿವೃತ್ತ ಮಂತ್ರಿ.

ಗಂಗಾಂಬಿಕೆ– ಬಸವೇಶ್ವರನ ಪತ್ನಿ.

# ಪರಿವಿಡಿ


| | |
|---|---|
| ಶುಭ ಸಂದೇಶ | III |
| ಚೆನ್ನುಡಿ | IV |
| ಎರಡು ನುಡಿ | V |
| ಅಧ್ಯಕ್ಷರ ಮಾತು | VI |
| ಪ್ರಕಾಶಕರ ಮಾತು | VII |
| ಆಯ್ಕೆ ಸಮಿತಿ | IX |
| ಪ್ರಮುಖ ಪಾತ್ರಗಳು | XI |
| ೧. ರಾಜಗೃಹದ ರಹಸ್ಯ | ೧ |
| ೨. ಸಿರಿಮನೆಯ ಕತ್ತಲೆಗೆ ಗುರುಮನೆಯ ದೀಪ | ೫೭ |
| ೩. ಮಂಗಲವೇಡೆಯ ಅಗ್ನಿದಾಹ | ೧೧೧ |
| ೪. ಮಾನವನು ದಾನವನಾದಾಗ | ೧೯೯ |
| ೫. ರಾಜಗೃಹದಿಂದ ಹೊನ್ನಮ್ಮನ ಚಾವಡಿಗೆ | ೩೧೦ |
| ೬. ಮಹಾಪ್ರಸ್ಥಾನ | ೩೮೫ |
| ಉಪಸಂಹಾರ | ೪೮೧ |
| ಕಡೆಯ ನಾಲ್ಕು ಮಾತು | ೪೮೫ |

# ಕ್ರಾಂತಿ ಕಲ್ಯಾಣ

# ೧ ರಾಜಗೃಹದ ರಹಸ್ಯ

ಬಿಜ್ಜಳರಾಯನ ಧರ್ಮಾಧಿಕರಣದ ವಿಚಾರಣೆ ಮುಗಿದು, ನಿರ್ವಾಸನದ ಆಜ್ಞೆ ಪ್ರಚಾರವಾಗಿ, ಬಸವಣ್ಣನವರು ಕಲ್ಯಾಣವನ್ನು ಬಿಟ್ಟ ಆ ಚರಿತ್ರಾರ್ಹವಾದ ದಿನ ಸಂಜೆ, ಆರು ಮಂದಿ ರಾವುತ ಪರಿವಾರದಿಂದ ಕೂಡಿದ ಒಂದು ದೊಡ್ಡ ರಥ ನಗರದ ಸದಾಚಾರಿ ಮಠದ ಪಾರ್ಶ್ವದಲ್ಲಿದ್ದ ಪಾಂಥ ನಿವಾಸದ ಎದುರಿಗೆ ನಿಂತಿತು. ರಾಜ ಪುರೋಹಿತ ನಾರಣಕ್ರಮಿತನು ರಥದಿಂದ ಇಳಿದು ನಿವಾಸದ ಉಪ್ಪರಿಗೆಯ ಅಲಂಕೃತವಾದ ಮೊಗಸಾಲೆಯತ್ತ ನೋಡುತ್ತ ನಿಂತನು.

ಹಜಾರದಿಂದ ಇದನ್ನು ಗಮನಿಸಿದ ನಿವಾಸದ ಕಾರ್ಯಕರ್ತನು ಅವಸರದಿಂದ ಹೊರಗೆ ಬಂದು, "ಒಡೆಯರು ಒಳಗೆ ದಯಮಾಡಿಸಬೇಕು," ಎಂದು ಬಿನ್ನವಿಸಿ ಕೊಂಡನು.

ಹಿಂದಿನ ದಿನ ಧರ್ಮಾಧಿಕರಣದಲ್ಲಿ ನಡೆದ ಅದ್ಭುತ ಘಟನೆಗಳ ಫಲವಾಗಿ ಕ್ರಮಿತನ ಅಕೀರ್ತಿ ಕುಪ್ರತಿಷ್ಠೆಗಳು ಶಿಖರಕ್ಕೆ ಏರಿದ್ದವು. ಸುಸಜ್ಜಿತವಾದ ರಥ, ಅಂಗ ರಕ್ಷಕ ರಾವುತ ಮತ್ತು ಸೈನ್ಯದಳಗಳೂ, ಕ್ರಮಿತನ ಉಪಯೋಗಕ್ಕಾಗಿ ಯಾವಾಗಲೂ ಸಿದ್ಧವಾಗಿರತಕ್ಕದ್ದೆಂದು ಬಿಜ್ಜಳನು ಆಜ್ಞೆ ಮಾಡಿದ್ದನು. ಕಲ್ಯಾಣದ ಶ್ರೀಮಂತ ಸಾಮಂತ ನಾಗರಿಕರಲ್ಲಿ ವಿಚಾರಣೆಯ ಉತ್ಪ್ರೇಕ್ಷಿತ ವರದಿಗಳೂ ಹರಡಿ ಆಶ್ಚರ್ಯ ಕುತೂಹಲಗಳಿಗೆ ಕಾರಣವಾಗಿತ್ತು. ಒಂದೇ ದಿನದಲ್ಲಿ ಬಸವಣ್ಣನವರಂತಹ ಮಾಹಿಮಾನ್ವಿತ ದಂಡನಾಯಕರ ನಿರ್ವಾಸನ, ಮಧುವರಸರಂತಹ ದಕ್ಷಮಂತ್ರಿಯ ಪದಚ್ಯುತಿ, ಈ ಎರಡು ಕಾರ್ಯಗಳನ್ನು ಸಾಧಿಸಬಲ್ಲ ವ್ಯಕ್ತಿ, ಸರ್ವಾಧಿಕಾರಿ ಬಿಜ್ಜಳರಾಯರ ಪರಿಪೂರ್ಣ ಅನುಗ್ರಹಕ್ಕೆ ಪಾತ್ರನೆಂದು ಜನರು ತಿಳಿದರು.

ತನ್ನ ಬಗೆಗೆ ಕಲ್ಯಾಣದಲ್ಲಿ ತಲೆದೋರಿದ ಘನತೆ ಗೌರವಗಳ ಮೂಲವನ್ನು ಅರಿತಿದ್ದ ಕ್ರಮಿತನು ಕಾರ್ಯಕರ್ತನ ವಿನಯದ ನುಡಿಗಳನ್ನು ಉಪೇಕ್ಷಿಸಿ, ಅಧಿಕಾರ ದರ್ಪದ ಬಿರುದನಿಯಿಂದ, "ಇಂದು ನಗರಕ್ಕೆ ಬಂದ ದೇವಗಿರಿಯ ಹರದರು ಇಲ್ಲಿ ಬಿಡಾರ ಮಾಡಿರುವರೆ?" ಎಂದು ಕೇಳಿದನು.

"ಅವರು ಇಲ್ಲಿಯೇ ಇದ್ದಾರೆ, ಒಡೆಯರೆ," ಕಾರ್ಯಕರ್ತನೆಂದನು :

“ಆದರೆ ಅವರಲ್ಲೊಬ್ಬನು ಹರದನಂತೆ ಕಂಡರೂ ವಾಸ್ತವದಲ್ಲಿ ಕವಿಯೋ ಸಾಮಂತನೋ ಆಗಿರಬೇಕು.”

“ನೀನು ಅದನ್ನು ಹೇಗೆ ತಿಳಿದೆ?”

“ಹೊರಗಿನಿಂದ ಪಾಂಥ ನಿವಾಸಕ್ಕೆ ಬರುವವರ ಹೆಸರು ಪರಿಚಯಗಳನ್ನು ನಗರ ರಕ್ಷಕರಿಗೆ ತಿಳಿಸಬೇಕೆಂಬ ಆಜ್ಞೆ ಈಗ ಎರಡು ತಿಂಗಳಿಂದ ಪ್ರಚಾರದಲ್ಲಿದೆ. ಅದರಂತೆ ವರದಿಯನ್ನು ಸಿದ್ಧಗೊಳಿಸುತ್ತಿದ್ದಂತೆ ನೀವು ಬಂದಿರಿ.”

“ಆ ವರದಿಯನ್ನು ನಾವು ನೋಡಬಹುದೆ?”

ಕಾರ್ಯಕರ್ತನು ಕಿಸೆಯಿಂದ ಕರಡು ಕಾಗದದ ಸುರುಳಿಯೊಂದನ್ನು ತೆಗೆದು ಎರಡು ಕೈಗಳನ್ನೂ ಮುಂದೆ ಚಾಚಿ ಕ್ರಮಿತನಿಗೆ ಕೊಟ್ಟನು. ಈ ಅತಿ ವಿನಯವನ್ನು ಕಂಡು ನಸುನಕ್ಕು ಕ್ರಮಿತನು ವರದಿಯನ್ನು ತೆಗೆದುಕೊಂಡು ಓದಿದನು.

ಕಳೆದ ಎರಡು ದಿನಗಳಿಂದ ಪಾಂಥ ನಿವಾಸಕ್ಕೆ ಬಂದ ಪ್ರವಾಸಿಗಳ ಹೆಸರು ಪರಿಚಯಗಳೂ ಅದರಲ್ಲಿದ್ದುವು. ಕ್ರಮಿತನಿಗೆ ಬೇಕಿದ್ದ ವಿವರಗಳು ಈ ರೀತಿ ಇತ್ತು:

೧. ಉಜ್ಜಯಿನಿಯ ವಡ್ಡ ವ್ಯವಹಾರಿ ಬ್ರಹ್ಮರಾಜ ಸೇಟ್, ಶ್ರೀಮಂತ ವರ್ತಕರು, ವಯಸ್ಸು ಸುಮಾರು ೫೦.

೨. ಮೇಲೆ ಕಂಡವರ ಕಾರ್ಯದರ್ಶಿ, ಶಿವಗಣ ಭಂಡಾರಿ, ವಯಸ್ಸು ಸುಮಾರು ೩೫. ವೇಣುಗ್ರಾಮದ ನಿವಾಸಿಯೆಂದು ಪರಿಚಯ ಹೇಳುತ್ತಾನೆ. ಜೀವನಕ್ಕಾಗಿ ಶ್ರೀಮಂತರನ್ನು ಆಶ್ರಯಿಸಿದ ಬುದ್ಧಿಜೀವಿ.

೩. ರಾಜಪುತ್ರ ಅಗ್ಗಳದೇವ, ವಯಸ್ಸು ಸುಮಾರು ೩೫. ಪರಿಚಯ ಹೇಳಲು ನಿರಾಕರಿಸುತ್ತಾನೆ. ತಾನು ಕ್ಷತ್ರಿಯ ಎಂಬುದನ್ನು ತೋರಿಸಿ ಕೊಳ್ಳಲು ಹೆಸರಿನ ಮುಂದೆ ರಾಜಪುತ್ರ ಪ್ರಶಸ್ತಿಯನ್ನು ಸೇರಿಸಿಕೊಂಡಂತೆ ಕಾಣುತ್ತದೆ. ಕವಿಯೋ ಸಾಮಂತನೋ ಆಗಿರಬೇಕು.

ಈ ದಿನ ದೇವಗಿರಿಯಿಂದ ಬಂದ ಹರದರ ತಂಡದೊಡನೆ ಇವರು ನಗರವನ್ನು ಪ್ರವೇಶಿಸಿದರು. ಬ್ರಹ್ಮರಾಜ ಸೇಟನೂ ಅವರ ಕಾರ್ಯದರ್ಶಿಯೂ ಹಿಂದೆ ಕೆಲವು ಸಾರಿ ನಮ್ಮ ಪಾಂಥ ನಿವಾಸದಲ್ಲಿ ಬಿಡಾರ ಮಾಡಿದ್ದಾರೆ. ಪರಿಚಿತರೂ ಶ್ರೀಮಂತರೂ ಆದ್ದರಿಂದ ಉಪ್ಪರಿಗೆಯ ಎರಡು ದೊಡ್ಡ ಕೊಟಡಿಗಳನ್ನು ಅವರ ವಾಸಕ್ಕಾಗಿ ಕೊಟ್ಟಿದ್ದೇನೆ. ಅವರ ಸಂಗಡ ಬಂದ ಗಾಡಿಯವನಿಗೆ ನಿವಾಸದ ಹಿಂದಿನ ಕೊಟ್ಟಿಗೆಯಲ್ಲಿ ಸ್ಥಳಮಾಡಿದೆ. ಅವರ ಗಾಡಿ ಮತ್ತು ಎತ್ತುಗಳು ಅಲ್ಲಿಯೇ ಇವೆ.

ಕ್ರಮಿತನು ವರದಿಯನ್ನು ಓದಿಕೊಂಡು, "ಅಗ್ಗಳನು ಕವಿಯೆಂದು ನಿನಗೆ ತಿಳಿದದ್ದು ಹೇಗೆ ?" ಎಂದು ಪ್ರಶ್ನಿಸಿದನು.

ಕ್ರಮಿತನ ಅನಿರೀಕ್ಷಿತ ಆಸಕ್ತಿಯಿಂದ ಧನ್ಯನಾದೆನೆಂದು ತಿಳಿದ ಕಾರ್ಯಕರ್ತನು ಇಮ್ಮಡಿ ವಿನಯದಿಂದ ಕೈಕಟ್ಟಿ ನಿಂತು ಹೇಳಿದನು : "ಮನುಷ್ಯರ ಚಹರೆ ನೋಡಿ ಅವರ ವೃತ್ತಿ ಅಂತಸ್ತುಗಳನ್ನು ತಿಳಿಯುವ ಚತುರತೆ ನನಗೆ ಚಿಕ್ಕಂದಿನಿಂದ ಅಭ್ಯಾಸವಾಗಿದೆ. ನನ್ನ ತಂದೆ ಗೋವೆಯಲ್ಲಿ ಒಂದು ದೊಡ್ಡ ಪ್ರವಾಸಿಗೃಹದ ಮಾಲಿಕರಾಗಿದ್ದರು. ಅವರ ಮೇಲ್ವಿಚಾರಣೆಯಲ್ಲಿ ನಾನು ಅನೇಕ ವರ್ಷಗಳು ಕೆಲಸಮಾಡಿದ್ದೇನೆ.

"ಅಗ್ಗಳನ ಚಹರೆಯಲ್ಲಿ ನೀನು ಕಂಡ ವಿಶೇಷವೇನು?"

ಕಾರ್ಯಕರ್ತನು ಯೋಚಿಸಿ ಉತ್ತರ ಕೊಟ್ಟನು: "ಸಾಮಾನ್ಯ ಜನರಿಗೂ ಕವಿಗೂ ಇರುವ ಅಂತರ ಕಣ್ಣಿಗೆ ಸಂಬಂಧಿಸಿದ್ದು. ಕವಿಯ ದೃಷ್ಟಿ ಬಾಹ್ಯ ಜಗತ್ತಿನೊಡನೆ ವ್ಯವಹರಿಸುವಾಗಲೂ ಅಂತರ್ಮುಖವಾಗಿರುತ್ತದೆ. ಕವಿ ಕಣ್ಣಿಂದ ಒಂದು ವಸ್ತುವನ್ನು ನೋಡುವಾಗ ಮನಸ್ಸಿನಲ್ಲಿ ಅದನ್ನು ಹೋಲುವ ಮತ್ತಾವುದೋ ವಸ್ತುವನ್ನು ಚಿಂತಿಸುತ್ತಾನೆ. ಈ ಪೂರ್ವಾಹ್ನ ಎರಡನೆಯ ಪ್ರಹರದಲ್ಲಿ ಆ ಮೂವರು ಪ್ರವಾಸಿಗಳು ಇಲ್ಲಿಗೆ ಬಂದಾಗ ಅಗ್ಗಳದೇವನ ದೃಷ್ಟಿ ಕಣ್ಣಿಗೆ ಕಾಣದ ಯಾವುದೋ ಅಲೌಕಿಕ ಲೋಕವನ್ನು ಹುಡುಕುತ್ತಿರುವಂತೆ ಕಂಡಿತು. ಬ್ರಹ್ಮರಾಜ ಸೇಟರ ಪರಿಚಯ ನನಗಿಲ್ಲದಿದ್ದ ಪಕ್ಷದಲ್ಲಿ, ಅಮಲೇರಿದ ವ್ಯಕ್ತಿಯೊಬ್ಬನನ್ನು ಅವನ ಇಬ್ಬರು ಗೆಳೆಯರು ವಿಶ್ರಾಂತಿಗಾಗಿ ಪಾಂಥ ನಿವಾಸಕ್ಕೆ ಕರೆತಂದಿದ್ದಾರೆಂದು ತಿಳಿಯುತ್ತಿದ್ದೆ."

"ಅಗ್ಗಳನು ಇಲ್ಲಿಗೆ ಬಂದಾಗ ಮದ್ಯಪಾನ ಮಾಡಿರಬಹುದು" ಕ್ರಮಿತನು ನಸುನಕ್ಕು ನುಡಿದನು.

"ಬ್ರಹ್ಮರಾಜ ಸೇಟರ ಹತ್ತಿರ ಅದು ಸಾಧ್ಯವಲ್ಲ. ಅವರು ನಿಷ್ಠಾವಂತರಾದ ಸಾತ್ವಿಕ ಮನುಷ್ಯರು. ಅಗ್ಗಳನು ನಿಜವಾಗಿ ಮದ್ಯಪಾನ ಮಾಡಿದ್ದರೆ, ಬ್ರಹ್ಮರಾಜ ಸೇಟರು ಅವನನ್ನು ದಾರಿಯ ಮಗ್ಗುಲಲ್ಲಿ ಮಲಗಿಸಿ ಬರುತ್ತಿದ್ದರು. ಮದ್ಯಪಾನವೆಂದರೆ ಅಷ್ಟೊಂದು ಅಸಹನೆ ಅವರಿಗೆ."

"ಹಾಗಾದರೆ ಅಗ್ಗಳನ ಆ ಅವಸ್ಥೆಗೆ ಬ್ರಹ್ಮರಾಜ ಸೇಟರು ಏನು ಸಮಾಧಾನ ಹೇಳಿದರು?"

"ಬ್ರಹ್ಮರಾಜ ಸೇಟರು ಏನೂ ಹೇಳಲಿಲ್ಲ. ಅವರ ಕಾರ್ಯದರ್ಶಿ ಶಿವಗಣ ಭಂಡಾರಿ ನನ್ನನ್ನು ಪ್ರತ್ಯೇಕವಾಗಿ ಕರೆದು......."

"ಏನು ಹೇಳಿದನು?"

"ಬರುವ ದಾರಿಯಲ್ಲಿ ನಾವು ಬಾಂಧವರ ಓಣಿಗೆ ಹೋಗಿದ್ದೆವು. ಕಲ್ಯಾಣದ ನಾಗರಿಕರು ಬಸವಣ್ಣನವರನ್ನು ಬೀಳ್ಕೊಡಲು ಅಲ್ಲಿಗೆ ಬಂದಿದ್ದರು. ಅಲ್ಲಿ ಆಗ ನಡೆದದ್ದನ್ನು ಕಂಡು ನನ್ನ ಗೆಳೆಯ ಹೀಗಾಗಿದ್ದಾನೆ ಎಂದು ಹೇಳಿದ. 'ಇವರು ಬಸವಣ್ಣನವರ ಭಕ್ತರೇ? ಶರಣರೇ?' ಎಂದೆ ನಾನು. 'ಶರಣನೂ ಅಲ್ಲ. ಭಕ್ತನೂ ಅಲ್ಲ. ಶರಣರ ದೃಷ್ಟಿ ತಗುಲಿ ಕಿಸುರಾಗಿದೆ. ತುಸುಹೊತ್ತು ವಿಶ್ರಮಿಸಿಕೊಂಡರೆ, ಸರಿಹೋಗುತ್ತದೆ' ಎಂದು ಭಂಡಾರಿ ನಗುತ್ತ ಉತ್ತರಿಸಿದ."

"ನಿಮ್ಮ ಆ ಭಂಡಾರಿ ಒಳ್ಳೆ ರಸಿಕನಂತೆ ಕಾಣುತ್ತದೆ. ಬಾಂಧವರ ಓಣಿಯಲ್ಲಿ ಏನಾದರೂ ವಿಶೇಷ ನಡೆಯಿತೆ ?"–ಕುತೂಹಲದಿಂದ ಕ್ರಮಿತನು ಪ್ರಶ್ನಿಸಿದನು.

ಕಾರ್ಯಕರ್ತನು ಹೇಳಿದನು : "ಬಸವಣ್ಣನವರ ಸಂಗಡಿದ್ದ ರಕ್ಷಕದಳದ ನಾಯಕ ರೇವದಾಸನು ಮೋಳಿಗೆಯ ಮಾರಯ್ಯನವರನ್ನು ಹೊಡೆಯಲು ಕತ್ತಿ ಎತ್ತಿದಾಗ ಬಸವಣ್ಣನವರು ಪವಾಡ ಮೆರೆಸಿದರಂತೆ. ಅವರ ದೃಷ್ಟಿಮಾತ್ರದಿಂದ ರೇವದಾಸನ ಕತ್ತಿ ಕೈಯಿಂದ ಕಳಚಿಬಿದ್ದು ಮುರಿದುಹೋಯಿತೆಂದು ಜನರು ಹೇಳುತ್ತಾರೆ."

ಕ್ರಮಿತನು ಅವಾಕ್ಕಾದನು. ದಾರಿಯಲ್ಲಿ ನಡೆದಿರಬಹುದಾದ ಒಂದು ಸಾಮಾನ್ಯ ಘಟನೆ ಅತ್ಯಲ್ಪ ಕಾಲದಲ್ಲಿ ಪವಾಡದ ರೂಪ ತಾಳಿ ನಗರದಲ್ಲಿ ಹರಡಿದ್ದು ಹೇಗೆ? ಎಂದು ಕ್ಷಣಕಾಲ ಚಿಂತಿಸಿ, "ಜನರು ಇದನ್ನು ನಂಬುವರೆ?" ಎಂದು ಕೇಳಿದನು.

"ಸಾಮಾನ್ಯದಿಂದ ಮನ್ನೆಯರವರೆಗೆ ಅನೇಕ ಬಾಯಿಂದ ನಾನು ಈ ವಿಚಾರ ಕೇಳಿದೆ, ಒಡೆಯರೆ. ಅದೊಂದು ಪವಾಡವೆಂದೇ ಅವರೆಲ್ಲ ತಿಳಿದಿದ್ದಾರೆ," ಕಾರ್ಯಕರ್ತನೆಂದನು.

ವ್ಯಂಗ್ಯದ ನಗೆಬೀರಿ ಕ್ರಮಿತನು, "ಮೂಢ ನಂಬಿಕೆಯ ಅವಿವೇಕಿ ಜನರಿಂದ ತುಂಬಿದೆ ಈ ಜಗತ್ತು. ಈಗ ಅಗ್ಗಳದೇವರೆಲ್ಲಿದ್ದಾರೆ ? ನಾನು ಅವರನ್ನು ನೋಡಬೇಕಾಗಿದೆ," ಎಂದನು.

"ಉಪ್ಪರಿಗೆಯ ಬಿಡಾರದಲ್ಲಿ ಅವರೊಬ್ಬರೇ ಕುಳಿತಿದ್ದಾರೆ. ಬ್ರಹ್ಮರಾಜ ಸೇಟರು ತುಸುಹೊತ್ತಿನ ಮೊದಲು ಕಾರ್ಯದರ್ಶಿಯನ್ನು ಕರೆದುಕೊಂಡು ಹೊರಗೆ ಹೋದರು. ಒಡೆಯರು ಹೀಗೆ ದಯಮಾಡಿಸಬೇಕು," ಎಂದು ಕಾರ್ಯಕರ್ತನು ಕ್ರಮಿತನನ್ನು ಪಾಂಥ ನಿವಾಸದ ಉಪ್ಪರಿಗೆಗೆ ಕರೆದುಕೊಂಡು ಹೋದನು.

ಕಾರ್ಯಕರ್ತನೂ ಕ್ರಮಿತನೂ ಬಿಡಾರದೊಳಗೆ ಬಂದಾಗ ಅಗ್ಗಳನು ಕವಿತೆಯ ಹೊತ್ತಿಗೆಯೊಂದನ್ನು ಓದುತ್ತಾ ಕುಳಿದ್ದನು. ಆ ದಿನ ಪೂರ್ವಾಹ್ನ

ಬಾಂಧವರ ಓಣಿಯಲ್ಲಿ ನಡೆದ ಘಟನೆಗಳಿಂದ ತನ್ನಲ್ಲಿ ತಲೆದೋರಿದ್ದ ಅಶಾಂತಿ ವಿಷಣ್ಣತೆಗಳನ್ನು ಮರೆಯುವುದು ಅವನ ಉದ್ದೇಶವಾಗಿತ್ತು.

"ಒಡೆಯರು ನಿಮ್ಮನ್ನು ನೋಡಲು ಬಂದಿದ್ದಾರೆ," ಎಂದು ಕಾರ್ಯಕರ್ತನು ನುಡಿದಾಗ ಅಗ್ಗಳನು ತಲೆಯೆತ್ತಿ, ಧರ್ಮಾಧಿಕರಣದ ಹಿರಿಯ ಅಧಿಕಾರಿಯಂತೆ ಜರತಾರಿಯ ಶಾಲು ಹೊದೆದು, ಉಷ್ಣೀಷ ಧರಿಸಿದ್ಧ ಪ್ರೌಢ ವಯಸ್ಸಿನ ಪುರುಷನೊಬ್ಬನು ಎದುರಿಗೆ ನಿಂತಿರುವುದನ್ನು ಕಂಡನು. ಅವನು ರಾಜಪುರೋಹಿತ ನಾರಣಕ್ರಮಿತನೆಂದು ತಿಳಿದಾಗ ಸಂಭ್ರಮದಿಂದ ಎದ್ದು ನಮಸ್ಕಾರ ಮಾಡಿ,

"ದಯಮಾಡಿಸಬೇಕು ಧರ್ಮಾಧಿಕಾರಿಗಳು. ಈ ದರಿದ್ರ ಕವಿಯ ಬಿಡಾರಕ್ಕೆ ರಾಜ್ಯದ ಉನ್ನತಾಧಿಕಾರಿಯೊಬ್ಬರು ಭೇಟಿಗಾಗಿ ಬರುವರೆಂದು ನಾನು ಭಾವಿಸಿರಲಿಲ್ಲ" ಎಂದನು.

"ಚಾಲುಕ್ಯ ಮಹಾರಾಣಿಯ ಮನೆಹೆಗ್ಗಡೆ ದರಿದ್ರ ಕವಿಯಾದರೂ ಅವರ ಬಿಡಾರ ರಾಜನಿವಾಸವಾಗುವುದು, ಅಗ್ಗಳದೇವರಸರೆ," ಎಂದು ನುಡಿದು ಕ್ರಮಿತನು ಅಗ್ಗಳನು ತೋರಿಸಿದ ಭದ್ರಾಸನದ ಮೇಲೆ ಕುಳಿತಾಗ ಕಾರ್ಯಕರ್ತನು ತನ್ನ ಕರ್ತವ್ಯ ಮುಗಿಯಿತೆಂದು ತಿಳಿದು, ಕೈಯೆತ್ತಿ ನಮಿಸಿ, ರಾಜಸಭೆಯ ಶಿಸ್ತಿನಿಂದ ಹಿಂದಕ್ಕೆ ನಡೆಯುತ್ತಾ ಬಿಡಾರದಿಂದ ಹೊರಗೆ ಹೋದನು.

"ಒಡೆಯರೊಡನೆ ನಮ್ಮ ಮಾತುಕಥೆಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಿರಿ, ಕಾರ್ಯಕರ್ತರೆ," ಎಂದು ಕೂಗಿ ಹೇಳಲು ಅಗ್ಗಳನು ಮರೆಯಲಿಲ್ಲ.

ಆಮೇಲೆ ಅವನು ಬಿಡಾರದ ಬಾಗಿಲನ್ನು ಮುಚ್ಚಿ, ಕ್ರಮಿತನ ಎದುರಿಗೆ ನಿಂತು, "ದೇವಗಿರಿಯ ಸಂದರ್ಶನಾನಂತರ ಇಷ್ಟು ಬೇಗ ಪುನಃ ನಿಮ್ಮನ್ನು ನೋಡುವೆನೆಂದು ನಾನು ಭಾವಿಸಿರಲಿಲ್ಲ." ಎಂದನು.

ಕ್ರಮಿತನು ಕೂಡಲೇ ಉತ್ತರ ಕೊಡಲಿಲ್ಲ. ಅಗ್ಗಳನು ಓದುತ್ತಿದ್ದ ಹೊತ್ತಿಗೆಯ ಪುಟಗಳನ್ನು ತಿರುವಿಹಾಕುತ್ತ ತುಸುಹೊತ್ತು ಸುಮ್ಮನಿದ್ದು ಬಳಿಕ ಅವನು,

"ಶರಣರ ಆ ಬಯಲಾಟದಿಂದ ಕದಡಿದ ನಿಮ್ಮ ಮನಃಶ್ಶಾಂತಿ ಭರ್ತೃಹರಿಯ ಸುಭಾಷಿತದಿಂದ ನವಚೈತನ್ಯ ಪಡೆದಂತಿದೆ ಅಲ್ಲವೆ ಅಗ್ಗಳದೇವರಸರೆ?" ಎಂದನು.

ಅಗ್ಗಳನ ಮುಖದಲ್ಲಿ ಕಿರುನಗೆಯೊಂದು ಮೂಡಿ ಮರೆಯಾಯಿತು. "ಸುಭಾಷಿತಗಳ ಮೂಲೋದ್ದೇಶವೆಂದರೆ ನೀತಿಬೋಧೆಯೊಡನೆ ಮನಶ್ಶಾಂತಿಯನ್ನು ಕೊಡುವುದೇ ಅಲ್ಲವೆ? ಭರ್ತೃಹರಿಯ ಒಂದು ಪದ್ಯ ನನ್ನ ಮನಸ್ಸನ್ನು ಸೆಳೆಯಿತು. ಅದರ ಅರ್ಥವನ್ನು ಚಿಂತಿಸುತ್ತ ಕುಳಿತಿದ್ದೆ. ಅಷ್ಟರಲ್ಲಿ ನೀವು ಬಂದಿರಿ," ಎಂದನು.

"ಯಾವುದು ಆ ಪದ್ಯ?"

"ಅದೊಂದು ಪ್ರಸಿದ್ಧ ಪದ್ಯ. ನಿವು ಅನೇಕ ಸಾರಿ ಕೇಳಿರಬಹುದು" :

"ನಿಂದಂತು ನೀತಿನಿಪುಣಾಃ ಯದಿ ವಾ ಸ್ತುವಂತು
ಲಕ್ಷ್ಮೀ ಸಮಾಶ್ರಯತು ಗಚ್ಛತು ವಾ ಯಥೇಚ್ಛಂ
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ
ನ್ಯಾಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥"

ಅಗ್ಗಳನು ತುಂಬುಕಂಠದಿಂದ ಪದ್ಯವನ್ನು ಪಠಿಸಿದನು. ಭರ್ತೃಹರಿಯ ಶಕ್ತಿಶಾಲಿ ಪದಗಳ ಜೋಡಣೆ, ಅರ್ಥಪುಷ್ಟಿ, ಸುರಗಿಯಂತೆ ಮೊನೆಗೂಡಿದ ಭಾವಗಳು ಕ್ರಮಿತನ ಕಿವಿಗಳಲ್ಲಿ ಝೇಂಕರಿಸಿ ಮನದಲ್ಲಿ ಮಿಡಿದವು.

ಹಿಂದಿನ ಸಂಜೆ ರಾಜಸಭೆಯ ಧರ್ಮಾಧಿಕರಣದಲ್ಲಿ ನಡೆದ ವಿವಾದವನ್ನು ಕುರಿತು ಅಗ್ಗಳನ ವ್ಯಾಖ್ಯಾನ ಭರ್ತೃಹರಿಯ ಕವಿತೆಯ ರೂಪದಲ್ಲಿ ವ್ಯಕ್ತವಾಗುತ್ತಿದೆಯೇ? ಎಂದು ಕ್ರಮಿತನಿಗೆ ಸಂಶಯ ಹುಟ್ಟಿತು.

"ಭರ್ತೃಹರಿ ಈ ಪದ್ಯದಲ್ಲಿ ಹೇಳಿರುವ ಧೀರರಂತೆ ನಡೆದುಕೊಳ್ಳುತ್ತಿದ್ದಾರೆ ಶರಣರು. ನೀತಿನಿಪುಣರಾದ ನಿಮ್ಮಂತಹವರ ನಿಂದಾಸ್ತುತಿಗಳು ಅವರಿಗೆ ಬೇಕಿಲ್ಲ. ಸಿರಿಸಂಪತ್ತುಗಳನ್ನು ಅವರು ಕಡೆಗಣಿಸಿದ್ದಾರೆ. ಮರಣಕ್ಕೂ ಅಂಜುತ್ತಿಲ್ಲ ಅವರು. ತಮಗೆ ನ್ಯಾಯವೆಂದು ತೋರಿದ ಮಾರ್ಗದಲ್ಲಿ ನಡೆದು ಭರ್ತೃಹರಿಯ 'ಧೀರ' ಪ್ರಶಸ್ತಿಗೆ ಅರ್ಹರಾಗುತ್ತಿದ್ದಾರೆ,"–ಎಂದು ಅಗ್ಗಳನು ಹೇಳಿದಾಗ ಕ್ರಮಿತನ ಸಂದೇಹ ಸ್ಥಿರವಾಯಿತು.

ಅಗ್ಗಳನು ಸಭೆಯಲ್ಲಿರಲಿಲ್ಲ. ಆದರೆ ಇದ್ದವರಿಂದ ವಾದ ಪ್ರತಿವಾದಗಳ ವಿವರಗಳನ್ನೂ, ಅದರಲ್ಲಿ ತನ್ನ ಪಾತ್ರವನ್ನೂ ಕೇಳಿ ತಿಳಿದಿರಬಹುದೆಂದು ಕ್ರಮಿತನು ಭಾವಿಸಿದನು.

ಧರ್ಮಾಧಿಕರಣದ ತೀರ್ಪು, ಬಸವಣ್ಣನವರ ನಿರ್ವಾಸನ, ಆಗಲೇ ಮುಗಿದ ಘಟನೆಗಳು. ಆದರೂ ಇನ್ನೂ ಕೆಲವು ದಿನಗಳು, ನಗರದ ಎಲ್ಲ ಕಡೆ ಆ ಬಗೆಗೆ ಪ್ರಕಟವಾಗಿಯೋ ರಹಸ್ಯವಾಗಿಯೋ ಚರ್ಚೆ ವ್ಯಾಖ್ಯಾನಗಳು ನಡೆಯುವುವೆಂದು ಕ್ರಮಿತನು ತಿಳಿದಿದ್ದನು. ಮನಸ್ಸಿನ ಅಸಮಾಧಾನವನ್ನು ತುಳಿದಿಟ್ಟು ಪ್ರಕಟವಾಗಿ ಅವನು,

"ಭರ್ತೃಹರಿಯ ಕವಿ ಪ್ರತಿಭೆ ಅವನು ರಾಜ್ಯಭ್ರಷ್ಟನಾಗಲು ಕಾರಣವೆಂದು ಕೇಳಿದ್ದೇನೆ, ಅಗ್ಗಳದೇವರಸರೆ. ನಿಮ್ಮ ಕಾವ್ಯಾಸಕ್ತಿ ಮನೆಹೆಗ್ಗಡೆಯ ಕಾರ್ಯಗಳಿಗೆ ಅಡಚಣೆ ಆಗದಿರಲಿ," ಎಂದು ನುಡಿದು ಹೊತ್ತಿಗೆಯನ್ನು ಮುಚ್ಚಿಟ್ಟು, "ನೀವು ಕಲ್ಯಾಣಕ್ಕೆ ಬಂದ ವಿಚಾರ ಬಿಜ್ಜಳರಾಯರಿಗೆ ವರದಿ ಆಗಿದೆ. ಅವರು ಕೂಡಲೇ

ನಿಮ್ಮನ್ನು ಸನ್ನಿಧಾನಕ್ಕೆ ಕರೆತರುವಂತೆ ಆಜ್ಞೆಮಾಡಿದ್ದಾರೆ. ನಾನು ಬಂದದ್ದು ಅದಕ್ಕಾಗಿ", ಎಂದನು.

ಅಗ್ಗಳನಿಗೆ ಗಗನವೇ ಕಳಚಿಬಿದ್ದಂತಾಯಿತು. ತಾನು ಯಾವ ಉದ್ದೇಶದಿಂದ ಕಲ್ಯಾಣಕ್ಕೆ ಬಂದೆನೆಂಬುದು ಬಿಜ್ಜಳರಾಯನಿಗೆ ತಿಳಿದಿರಬಹುದೆ? ತನ್ನ ಸಂಗಡಿದ್ದ ಬ್ರಹ್ಮಶಿವ ಬೊಮ್ಮರಸರ ವಿಚಾರದಲ್ಲಿ ರಾಜ್ಯದ ಬೇಹುಗಾರರ ಪಾತ್ರವೇನು? ಕ್ರಮಿತನ ಚತುರತೆಯೆಷ್ಟು? ಎಂದು ಯೋಚಿಸಿ, ಮನಸ್ಸಿನ ಕಳವಳವನ್ನು ಮುಚ್ಚಿಟ್ಟು, "ನಾನು ಈ ಪಾಂಥ ನಿವಾಸದಲ್ಲಿ ಉಳಿದಿರುವ ವಿಚಾರ ನಿಮಗೆ ತಿಳಿದದ್ದು ಹೇಗೆ?" ಎಂದು ಪ್ರಶ್ನಿಸಿದನು.

"ನೀವು ಚಾಲುಕ್ಯ ಅರಮನೆಯಲ್ಲಿ ಬಿಡಾರ ಮಾಡಿಲ್ಲವೆಂದು ಕೇಳಿದಾಗ ನನಗೆ ಆಶ್ಚರ್ಯವಾಯಿತು. ಬ್ರಹ್ಮರಾಜ ಸೇಟರ ಅತಿಥಿಯಾಗಿ ಇಲ್ಲಿಗೆ ಬಂದಿರಬೇಕೆಂದು ನಿರ್ಧರಿಸಿದೆ"–ಕ್ರಮಿತನು ಉತ್ತರ ಕೊಟ್ಟನು.

ಅಗ್ಗಳನ ಬುದ್ಧಿ ಚುರುಕಾಗಿ ಓಡಿತು. ಬೊಮ್ಮರಸ ಬ್ರಹ್ಮಶಿವ ಪಂಡಿತರು ತಮ್ಮ ವೇಷ ನಡೆನುಡಿಗಳಿಂದ ಎಲ್ಲರನ್ನು ವಂಚಿಸಿದ್ದಾರೆ. ಅವರ ನಿಜವಾದ ಪರಿಚಯ ಯಾರಿಗೂ ತಿಳಿದಿಲ್ಲ, ಸದ್ಯದಲ್ಲಿ ನಾನು ಅವರ ವಂಚನೆಯನ್ನು ಸಮರ್ಥಿಸಿ ಮಾತಾಡಿದರೆ ಒಳ್ಳೆಯದು ಎಂದು ನಿರ್ಧರಿಸಿಕೊಂಡು,

"ಬ್ರಹ್ಮರಾಜ ಸೇಟರೊಬ್ಬ ವಿಚಿತ್ರ ವ್ಯಕ್ತಿ. ನಾನೊಬ್ಬನೇ ಕಲ್ಯಾಣಕ್ಕೆ ಹೋಗುವೆನೆಂದು ತಿಳಿದಾಗ ತಮ್ಮ ಸಂಗಡ ಬರುವಂತೆ ಒತ್ತಾಯಪಡಿಸಿದರು. ಇಲ್ಲಿಗೆ ಬಂದಮೇಲೆ ಒಂದು ದಿನವಾದರೂ ತಮ್ಮ ಅತಿಥಿಯಾಗಿರಬೇಕೆಂದೂ, ಆಮೇಲೆ ಇಚ್ಛೆ ಬಂದಲ್ಲಿಗೆ ಹೋಗಬಹುದೆಂದೂ ಹೇಳಿದರು. ನಿರಾಕರಿಸಲು ನನ್ನಿಂದಾಗಲಿಲ್ಲ." ಎಂದನು.

"ಅವರು ದೇವಗಿರಿಗೆ ಬಂದಿದ್ದ ಕಾರಣ? ಯಾತ್ರೆಗಾಗಿಯೆ?"

"ದೇವಗಿರಿಯಲ್ಲಿ ಅವರು ಒಂದು ಬಸದಿ ಕಟ್ಟಿಸಲು ಯೋಚಿಸಿದ್ದಾರೆ. ಅದಕ್ಕಾಗಿ ಧನಸಂಗ್ರಹಿಸಲು ಅವರು ಚಾಲುಕ್ಯ ರಾಜ್ಯದ ಮುಖ್ಯ ನಗರಗಳನ್ನು ಸಂದರ್ಶಿಸಿ ದೇವಗಿರಿಗೆ ಬಂದಿದ್ದರು."

"ಅವರು ಉಜ್ಜಯಿನಿಯ ದೊಡ್ಡ ಶ್ರೀಮಂತರೆಂದು ಜನ ಹೇಳುತ್ತಾರೆ. ದೇಶಸಂಚಾರ ಮಾಡಿ ಧನ ಸಂಗ್ರಹಿಸುವ ಅಗತ್ಯವೇನಿದೆ ಅವರಿಗೆ?" ಕ್ರಮಿತನ ಪ್ರಶ್ನೆಯಲ್ಲಿ ಸಂದೇಹ ಇಣುಕುತ್ತಿತ್ತು.

"ಅವರು ಕೈಗೊಂಡಿರುವ ಕಾರ್ಯ ಒಬ್ಬರ ಹಣದಿಂದ ಮುಗಿಯುವುದಿಲ್ಲ. ಕೈಲಾಸನಾಥ ಮಂದಿರದ ಮಾದರಿಯಲ್ಲಿ ಒಂದೇ ಕಲ್ಲಿಂದ ಬಸದಿಯನ್ನು

ಕೊರೆಯಿಸುವುದು ಅವರ ಯೋಜನೆ. ಅದಕ್ಕಾಗಿ ಅವರು ಈಗೆರಡು ವರ್ಷಗಳಿಂದ ಹಣದ ಹೊಳೆಯನ್ನೇ ಹರಿಸುತ್ತಿದ್ದಾರೆ."–ಅಗ್ಗಳನು ಉತ್ತರಿಸಿದನು.

ದೇವಗಿರಿಗೆ ಹೋಗಿದ್ದಾಗ ಇಂತಹ ಯೋಜನೆಯೊಂದು ನಡೆಯುತ್ತಿರುವುದಾಗಿ ಕ್ರಮಿತನು ಕೇಳಿದ್ದನು. ಅನ್ಯಮತೀಯರ ಚಟುವಟಿಕೆಗಳ ಬಗೆಗೆ ಶ್ರೋತ್ರಿಯನಿಗೆ ಸಹಜವಾದ ಉದಾಸೀನ ತಾತ್ಸಾರಗಳಿಂದ ಆ ವಿಚಾರವಾಗಿ ಹೆಚ್ಚು ವಿವರಗಳನ್ನು ತಿಳಿಯಲು ಪ್ರಯತ್ನಿಸಿರಲಿಲ್ಲ. ಸಮಯಸ್ಫೂರ್ತಿಯಿಂದ ಅಗ್ಗಳನು ಹೇಳಿದ ಕಲ್ಪಿತ ಕಥೆಯನ್ನು ಅವನು ನಿಜವೆಂದೇ ಭಾವಿಸಿ, "ಈಗ ಬ್ರಹ್ಮರಾಜ ಸೇಟರು ಎಲ್ಲಿ ಹೋಗಿದ್ದಾರೆ?" ಎಂದು ಕೇಳಿದನು.

ರಹಸ್ಯ ನುಡಿಯುತ್ತಿರುವಂತೆ ದನಿ ತಗ್ಗಿಸಿ ಅಗ್ಗಳನು ಹೇಳಿದನು : "ವರ್ಣಾಶ್ರಮ ಧರ್ಮದ ವಿರುದ್ಧ ಶರಣರು ಪ್ರಾರಂಭಿಸಿರುವ ಹೊಸ ಆಂದೋಳನದ ವಿಚಾರ ಕೇಳಿದಾಗ ಬ್ರಹ್ಮರಾಜ ಸೇಟರಿಗೆ ಬಹಳ ಅಸಮಾಧಾನವಾಯಿತು. ವೈದಿಕ ಧರ್ಮದ ವಿರುದ್ಧವಾಗಿ ನಡೆಯುವ ಯಾವ ಚಳುವಳಿಯೇ ಆಗಲಿ, ಸಮಾಜದ ಅಸ್ತಿತ್ವ ದೃಢತೆಗಳಿಗೆ ಅಪಾಯಕಾರಿಯೆಂದು ಅವರು ನಂಬಿದ್ದಾರೆ. ಈ ಚಳುವಳಿಯ ಸುಳಿಯಲ್ಲಿ ಸಿಕ್ಕು ಬಸವಣ್ಣನವರು ದೇಶನಿರ್ವಾಸಿತರಾದರು. ಈಗಲಾದರೂ ಬುದ್ಧಿ ಕಲಿತು ವಿರೋಧವನ್ನು ನಿಲ್ಲಿಸಿ–ಎಂದು ಶರಣರಿಗೆ ಹೇಳುವುದು ಅವರ ಉದ್ದೇಶ. ಕಲ್ಯಾಣದಲ್ಲಿ ಶರಣ ಧರ್ಮಕ್ಕೆ ಪ್ರೋತ್ಸಾಹ ಕೊಡುತ್ತಿರುವ ಶೆಟ್ಟಿಸಾಮಂತರ ಸಭೆ ಕರೆಸುವ ಏರ್ಪಾಡಿಗಾಗಿ ಅವರು ವೀರಬಣಂಜು ಸಂಘದ ನಾನಾದೇಶಿ ಚಾವಡಿಗೆ ಹೋಗಿದ್ದಾರೆ :

ಕ್ರಮಿತನಿಗೆ ಆಶ್ಚರ್ಯವಾಯಿತು. ಅಗ್ಗಳನು ಹೇಳುತ್ತಿರುವುದು ನಿಜವೆ? ಅಥವಾ ಕವಿ ಕಲ್ಪನೆಯ ಕನಸೆ? ಎಂದು ಅವನು ಯೋಚಿಸಿದನು........

.....ಕಲ್ಯಾಣದ ಶೆಟ್ಟಿಸಾಮಂತರಲ್ಲಿ ಬಹುಸಂಖ್ಯಾತರು ಶೈವರು; ನಗರದ ನೂರೊಂದು ಶೈವಮಠಗಳಲ್ಲಿ ಯಾವುದಾದರೊಂದು ಮಠಕ್ಕೆ ಶಿಷ್ಯರಂತೆ ನಡೆದುಕೊಳ್ಳುತ್ತಿದ್ದಾರೆ. ಬಸವಣ್ಣನವರ ಆರು ವರ್ಷಗಳ ನಿರಂತರ ಪರಿಶ್ರಮದಿಂದ ಈಗ ಆ ಮಠಗಳೆಲ್ಲ ಶರಣಧರ್ಮದ ಕೇಂದ್ರಗಳಾಗಿವೆ. ಅವುಗಳ ಶಿಷ್ಯರು ಶರಣರಾಗಿದ್ದಾರೆ. ಉತ್ತರಾಪಥದಿಂದ ದಕ್ಷಿಣಕ್ಕೆ ಬಂದ ವಿಧರ್ಮಿ ವರ್ತಕನೊಬ್ಬನು, ಅವನು ಎಂತಹ ಶ್ರೀಮಂತನೇ ಆಗಿರಲಿ, ಅವರ ಮೇಲೆ ಪ್ರಭಾವ ಬೀರಲು ಸಮರ್ಥನಾಗುವನೆಂಬುದು ತೀರ ಅಸಂಭವ. ವಿಫಲತೆಯ ಶಾಪದೊಡನೆ ಹುಟ್ಟಿ ವಿಷಾದದಲ್ಲಿ ಮುಗಿಯುವ ದೂರದ ಆಸೆ. ಆದರೂ ಅನಪೇಕ್ಷಿತವಾಗಿ ದೊರಕಿದ ಈ ಸಹಾಯ ವೈದಿಕ ಧರ್ಮದ ಬಗೆಗೆ ಜನರಲ್ಲಿ ತಲೆ ಎತ್ತುತ್ತಿರುವ ಪರಿವರ್ತನೆಗೆ

ಮುನ್ಸೂಚನೆಯೆ?

ಹಾಗಾದರೆ ನನ್ನ ಸಾಧನೆ ಫಲಿಸಿದಂತೆ....... ಎಂದು ಭಾವಿಸಿ ಪ್ರಕಟವಾಗಿ ಕ್ರಮಿತನು, "ಬ್ರಹ್ಮರಾಜ ಸೇಟರ ಕಾರ್ಯ ವಿಧಾನವನ್ನು ನಾನು ಅಭಿನಂದಿಸುತ್ತೇನೆ, ಅಗ್ಗಳದೇವರಸರೆ. ಆದರೆ ಕಲ್ಯಾಣದ ಶರಣರು ಯಾರ ಹಿತೋಕ್ತಿಗಳನ್ನೂ ಕೇಳುವ ಸ್ಥಿತಿಯಲ್ಲಿಲ್ಲ." ಎಂದನು.

"ಕೇಳಲಿ, ಬಿಡಲಿ, ಹೇಳುವುದು ತಮ್ಮ ಹೊಣೆಯೆಂದು ಬ್ರಹ್ಮರಾಜ ಸೇಟರು ಭಾವಿಸಿದ್ದಾರೆ."

"ಅವರಿಗೆ ಸೂಕ್ತ ತೋರಿದಂತೆ ಅವರು ನಡೆಯಲಿ, ಈಗ ನೀವು ನನ್ನ ಸಂಗಡ ಬನ್ನಿರಿ. ಪ್ರಭುಗಳು ನಿಮಗಾಗಿ ಕಾಯುವಂತಾಗಬಾರದು,"–ಎಂದು ಕ್ರಮಿತನು ಆಸನದಿಂದೆದ್ದನು.

"ಈ ಕ್ಷಣದಲ್ಲಿ ನಾನು ಹೊರಡಲು ಸಿದ್ಧನಾಗಿದ್ದೇನೆ. ಆದರೆ ಹೋಗುವ ಮುನ್ನ ಬ್ರಹ್ಮರಾಜಸೇಟರಿಗೆ ವಂದನೆಯ ಪತ್ರವೊಂದನ್ನು ಬರೆಯಬೇಕು."– ಅಗ್ಗಳನು ಹೇಳಿದನು.

ಕ್ರಮಿತನು ಕೆಲವು ಕ್ಷಣಗಳು ಯೋಚಿಸುತ್ತಿದ್ದು, "ನಿಮ್ಮನ್ನು ಕರೆತರಬೇಕೆಂಬ ಅವಸರದ ಆಜ್ಞೆಯಲ್ಲಿ ಪತ್ರಲೇಖನಕ್ಕೆ ಅವಕಾಶ ಇರುವುದಿಲ್ಲ, ಅಗ್ಗಳದೇವರಸರೆ. ನಾಲ್ಕೇ ಪಂಕ್ತಿಯಲ್ಲಿ ಮುಗಿಸುವುದಾದರೆ ಬರೆಯಬಹುದು," ಎಂದನು.

ಅಗ್ಗಳನು ಪಾರ್ಶ್ವದ ಮಣೆಯ ಮೇಲಿದ್ದ ಓಲೆಕಂಠವನ್ನು ತೆಗೆದುಕೊಂಡು ತಾಡಪತ್ರದಲ್ಲಿ ಬರೆದನು.

"ಪ್ರಿಯ ಬಂಧೂ,

ಅವಸರದ ಒಂದು ಕಾರ್ಯಕ್ಕಾಗಿ ನಾನು ಬಿಡಾರವನ್ನು ಬಿಡುತ್ತಿದ್ದೇನೆ. ಇಂದೇ ಹಿಂದಿರುಗಬಹುದು. ಇಲ್ಲವೇ ತಡವಾಗಬಹುದು. ನಿಮ್ಮ ಆದರದ ಆತಿಥ್ಯಕ್ಕಾಗಿ ವಂದನೆಗಳು–

ಅಗ್ಗಳದೇವ."

ಕ್ರಮಿತನು ಪತ್ರವನ್ನು ಓದಿ, "ನೀವು ಕವಿಯಂತೆ ಪತ್ರಲೇಖನದಲ್ಲಿಯೂ ಚತುರರು, ಅಗ್ಗಳದೇವ. ನನ್ನ ಅಥವಾ ಬಿಜ್ಜಳರಾಯರ ಹೆಸರನ್ನು ಉಲ್ಲೇಖಿಸಬಹುದೆಂದು ಶಂಕಿಸಿದೆ. ನೀವು ನನ್ನ ಮನೋಗತವನ್ನು ಅರಿತು ಅದರಂತೆ ಮಾಡಿದಿರಿ," ಎಂದನು.

"ನಿಮ್ಮ ಹೆಸರು ಹೇಳುವುದನ್ನು ಕಾರ್ಯಕರ್ತನಿಗೆ ಬಿಟ್ಟಿದ್ದೇನೆ." ಎಂದು ಮನಸ್ಸಿನಲ್ಲಿ ಭಾವಿಸಿ ಅಗ್ಗಳನ್ನು ಪ್ರಕಟವಾಗಿ, "ಕಾರಣವಿಲ್ಲದೆ ಪ್ರಭುಗಳ ಹೆಸರೆತ್ತುವಂಥ

ಅವಿವೇಕಿಯೇ ನಾನು ?" ಎಂದು ನುಡಿದನು. ಅಂಗಿ ಉತ್ತರೀಯಗಳನ್ನು ಧರಿಸಿ ಕ್ರಮಿತನ ಸಂಗಡ ಹೊರಡಲು ಸಿದ್ಧನಾದನು.

* * *

ರಥ ಕಲಚೂರ್ಯ ಅರಮನೆಯನ್ನು ತಲುಪಿದಾಗ ಸಂಜೆ ಮುಗಿಯುತ್ತ ಬಂದಿತ್ತು. ಊಳಿಗದವರು ಪಂಜುಗಳನ್ನು ಹೊತ್ತಿಸಿಡುತ್ತಿದ್ದರು. ಮಹಾದ್ವಾರದ ಒಂದು ಪಾರ್ಶ್ವದಲ್ಲಿದ್ದ ನಾಟಕಶಾಲೆ ದೀಪಮಾಲಿಕೆಗಳಿಂದ ಬೆಳಗುತ್ತಿತ್ತು. ವಾತಾಯನ ಜಾಲಂದರಗಳಿಂದ ಸುಗಂಧ ಧೂಪಗಳ ಹೊಗೆ ಕತ್ತಲೆಯ ಕಿರು ಮೋಡಗಳಂತೆ ಹೊರಗೆ ಬರುತ್ತಿತ್ತು. ಗಾಯಕಿಯರ ಗೀತ ಧ್ವನಿಯೊಡನೆ ನರ್ತಕಿಯರ ಕಾಲ್ಗೆಜ್ಜೆಗಳ ನುಣ್ದನಿ ಅಪೂರ್ವ ಸಂಗೀತವೊಂದನ್ನು ಸೃಷ್ಟಿಸಿತ್ತು.

ಕ್ರಮಿತನು ಪಸಾಯಿತನೊಬ್ಬನನ್ನು ಹತ್ತಿರ ಕರೆದು, "ಪ್ರಭುಗಳೆಲ್ಲಿದ್ದಾರೆ?" ಎಂದು ಕೇಳಿದನು.

"ಪಟ್ಟಾಭಿಷೇಕಕ್ಕೆ ಆಹ್ವಾನಿತರಾಗಿ ಭುವನೇಶ್ವರದಿಂದ ಬಂದಿರುವ ನಾಟ್ಯ ತಂಡದ ಪ್ರದರ್ಶನ, ನಾಟಕಶಾಲೆಯಲ್ಲಿ ಪ್ರಭುಗಳ ಸಮಕ್ಷಮ ನಡೆಯುತ್ತಿದೆ."

"ನಾಟ್ಯಾರಂಭವಾಗಿ ಎಷ್ಟು ಹೊತ್ತಾಯಿತು?"

"ಪ್ರಹರಕ್ಕೆ ಮೇಲಾಯಿತು. ಇನ್ನೇನು ಮುಗಿಯುತ್ತದೆ."

"ಮುಗಿದ ಕೂಡಲೇ ಪ್ರಭುಗಳಿಗೆ ಅರಿಕೆ ಮಾಡಬೇಕು. ನಾನು ಮಂತ್ರಶಾಲೆಯಲ್ಲಿ ಪ್ರಭುಗಳ ಆಜ್ಞೆಗಾಗಿ ಕಾದಿರುತ್ತೇನೆ."

ಪಸಾಯಿತನು ಕುತೂಹಲದಿಂದ ತಲೆಯೆತ್ತಿ ಕ್ರಮಿತನ ಕಡೆ ನೋಡುತ್ತ, "ಏನೆಂದು ಅರಿಕೆ ಮಾಡಬೇಕು, ಒಡೆಯರೆ?" ಎಂದನು.

"ಪ್ರಭುಗಳ ಆಜ್ಞೆಯಂತೆ ಕವೀಂದ್ರರು ಸಂದರ್ಶನಕ್ಕಾಗಿ ಬಂದಿದ್ದಾರೆ ಎಂದು ತಿಳಿಸಿದರೆ ಸಾಕು."

"ಆಜ್ಞೆ", ಎಂದು ಹೇಳಿ ಪಸಾಯಿತನು ನಾಟಕಶಾಲೆಯ ಕಡೆ ಹೋಗುತ್ತಿದ್ದಂತೆ ನಾರಣಕ್ರಮಿತನು ಅಗ್ಗಳನನ್ನು ಅರಮನೆಯ ಇನ್ನೊಂದು ಭಾಗಕ್ಕೆ ಕರೆದುಕೊಂಡು ಹೋಗಿ, ಕಲಶ ಕನ್ನಡಿ ಭದ್ರಾಸನಗಳಿಂದ ಅಲಂಕೃತವಾಗಿದ್ದ ಮಂತ್ರಶಾಲೆಯಲ್ಲಿ ಕುಳ್ಳಿರಿಸಿದನು.

ಕೂಡಲೆ ಬಿಳಿಯ ಸೀರೆಗಳನ್ನುಟ್ಟ ತರುಣ ದಾಸಿಯರಿಬ್ಬರು ತಣ್ಣನೆಯ ಪನ್ನೀರನ್ನು ಅಭ್ಯಾಗತರ ಮೇಲೆ ಸಿಂಪಡಿಸಿ ಸುಖೋಷ್ಣವಾದ ಪಾನೀಯದ ಬಟ್ಟಲುಗಳನ್ನು ತಂದು ಮುಂದಿಟ್ಟರು. ಕ್ರಮಿತನೂ ಅಗ್ಗಳನೂ ಅವುಗಳನ್ನು ಹನಿಹನಿಯಾಗಿ ಹೀರುತ್ತಿದ್ದಂತೆ ಇನ್ನೊಬ್ಬ ದಾಸಿ ಹೂವು ತಾಂಬೂಲ ಪಟ್ಟಿಗಳ

ಚಿನ್ನದ ಹರಿವಾಣಗಳನ್ನು ಎದುರಿಗಿಟ್ಟಳು.

"ಚಾಲುಕ್ಯ ಮಹಾರಾಣಿಯವರ ಆದರಾತಿಥ್ಯದಲ್ಲಿ ಬೆಳೆದ ರಾಜಹಂಸಕ್ಕೆ ಈ ಪಾನಕ ಸಿಹಿನೀರಿನಂತೆ ಕಂಡಿರಬೇಕಲ್ಲವೇ?" ಎಂದು ಕ್ರಮಿತನು ನಗೆಯಾಡಿದನು.

ತನ್ನ ಮತ್ತು ರಾಣಿ ಕಾಮೇಶ್ವರಿಯ ಬಗೆಗೆ ಜನರಲ್ಲಿ ಹರಡಿದ್ದ ಅಪವಾದ ಅಗ್ಗಳನಿಗೆ ತಿಳಿದಿತ್ತು. ಆದರೆ ಅದನ್ನು ಪರಮಾರ್ಥವೆಂದು ಗ್ರಹಿಸುವುದರಿಂದ ಸುಳಿಗಾಳಿಗೆ ರೂಪು ಕೊಟ್ಟಂತಾಗುವುದೆಂದು ಭಾವಿಸಿ ಅವನು, ಉಪೇಕ್ಷೆಯಿಂದ ಕ್ರಮಿತನ ವ್ಯಂಗ್ಯವನ್ನು ಗಮನಿಸದೆ,

"ಮಹಾರಾಣೀ ಕಾಮೇಶ್ವರೀದೇವಿಯವರ ಬಗೆಗೆ ಸಲ್ಲದ ಅಪವಾದಗಳನ್ನಾಡುವ ಜನ ತೈಲಪದೇವರ ಗಣಿಕಾ ಪರಿವಾರದ ವಿಚಾರದಲ್ಲಿ ತುಟಿಪಿಟಕ್ಕೆನ್ನದೆ ಸುಮ್ಮನಿದ್ದದ್ದು ನನಗೆ ಆಶ್ಚರ್ಯವೆನಿಸುತ್ತದೆ, ಕ್ರಮಿತರೆ. ಕವಿಗಳು ಶಾಸಕರಾಗಿದ್ದರೆ ಪ್ರೇಮಜೀವನದಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಸಮಾನ ಸ್ವಾತಂತ್ರ್ಯ ಕೊಡುತ್ತಿದ್ದರು," ಎಂದನು.

ಕ್ರಮಿತನ ಮುಖ ಗಂಭೀರವಾಯಿತು. "ಹಾಗಾದರೆ ರಾಜನ ಗಣಿಕಾ ಪರಿವಾರದಂತೆ ರಾಣಿಯೂ ತನಗೊಪ್ಪಿದ ರಸಿಕ ಪರಿವಾರವನ್ನು ರಚಿಸಿಕೊಳ್ಳಬಹುದೆಂದೇ ನಿಮ್ಮ ಅಭಿಪ್ರಾಯ. ನಮ್ಮ ಧರ್ಮಶಾಸ್ತ್ರಗಳು ಅಂತಹ ಸ್ವೇಚ್ಛಾಚಾರವನ್ನು ಒಪ್ಪುವುದಿಲ್ಲ," ಎಂದನು.

"ಧರ್ಮಶಾಸ್ತ್ರಗಳು ಏನೇ ಹೇಳಲಿ, ಈಗಿನ ಎಲ್ಲ ರಾಜಮನೆತನಗಳ ಸ್ವೇಚ್ಛಾಚಾರ ವಿಲಾಸ ಜೀವನಗಳು ಕವಿಯ ಕಾವ್ಯವಸ್ತುಗಳಾಗಿ ಮಾತ್ರವೇ ಉಳಿಯದೆ, ವಾಸ್ತವ ವಿಷಯಗಳಾಗಿವೆ. ದಿವಂಗತ ತೈಲಪಮಹಾರಾಜರ ಅಂತಃಪುರ ಪರಿವಾರಗಳು, ವಿಕ್ರಮಾದಿತ್ಯ ಮಹಾರಾಜರ ಕಾಲದಿಂದ ನಡೆದುಬಂದ ಚಾಲುಕ್ಯ ಮಾದರಿಯಂತೆ ರಚಿತವಾಗಿತ್ತು. ಗಣಿಕೆಯರಂತೆ ಕವಿ ಗಾಯಕ ನಟ ನರ್ತಕರೂ ಅರಮನೆಯಲ್ಲಿದ್ದರು. ಮಹಾರಾಣಿ ಕಾಮೇಶ್ವರಿದೇವಿಯವರು ತಮ್ಮ ಅಂತಸ್ತಿನ ಗೌರವರಕ್ಷಣೆಗಾಗಿ ಹಿಂದಿನ ಆ ಪರಿವಾರದಲ್ಲಿ ಕೆಲವು ಜನರನ್ನು ಮಾತ್ರ ಈಗ ಉಳಿಸಿಕೊಂಡಿದ್ದಾರೆ," ಎಂದು ಅಗ್ಗಳನು ಉತ್ತರಕೊಟ್ಟನು.

ಕ್ರಮಿತನು ತಾಂಬೂಲದ ಪಟ್ಟಿಯೊಂದನ್ನು ತೆಗೆದುಕೊಂಡು ಮೆಲ್ಲುತ್ತ,

"ರಾಜಮಹಾರಾಜರ ಗೌರವ ಪ್ರತಿಷ್ಠೆಗಳಿಗೆ ಗಣಿಕೆಯರಂತೆ ಕವಿಗಾಯಕರ ದೊಡ್ಡ ಪರಿವಾರವೂ ಅಗತ್ಯ. ಆದರೆ ಒಂದು ಗೊತ್ತಾದ ರೀತಿಯಲ್ಲಿ, ವ್ಯವಸ್ಥಿತವಾದ ಪರಿಮಿತಿಯಲ್ಲಿ ಅದು ನಡೆಯಬೇಕು. ಧರ್ಮಶಾಸ್ತ್ರದ ನಿಬಂಧನೆಗಳು ಪುಸ್ತಕದ ಬದನೆಕಾಯಿಗಳಾಗಬಾರದು," ಎಂದು ಕಟುವಾಗಿಯೇ ನುಡಿದನು.

ಅಗ್ಗಳನ ಮುಖ ಮಿದುನಗೆಯಿಂದ ಕ್ಷಣಕಾಲ ಅರಳಿತು. ಅವನು ಹೇಳಿದನು : "ಹೆಣ್ಣಿನ ಕೈಗೆ ಅಧಿಕಾರ ಬಂದಾಗ, ಪುರುಷನ ಸುಖಕ್ಕಾಗಿ ಪುರುಷರು ರಚಿಸಿಕೊಂಡ ಏಕಮುಖವಾದ ಧರ್ಮಶಾಸ್ತ್ರ ನಿಬಂಧನೆಗಳು ಮೂಲೆ ಗುಂಪಾಗುವುವು, ನಾರಣ ಕ್ರಮಿತರೆ. ಆಗ ಅಧಿಕಾರ ನಡೆಸುವುದು ಧರ್ಮಸೂತ್ರಗಳಲ್ಲ, ಅವುಗಳಿಗಿಂತ ಎಷ್ಟೋ ಪ್ರಭಾವಶಾಲಿಯಾದ ಮರ್ಮಸೂತ್ರಗಳು. ಯವನ ಇತಿಹಾಸದಲ್ಲಿ ನಾನು ಅಂತಹ ರಾಣಿಯರ ಕಥೆಗಳನ್ನು ಓದಿದ್ದೇನೆ."

"ಯವನರಲ್ಲಿ ಅದು ಸಾಧ್ಯವಿರಬಹುದು. ಧರ್ಮಕ್ಷೇತ್ರವೆಂದು ಹೆಸರಾದ ಭಾರತವರ್ಷದಲ್ಲಿ ಅಂತಹ ರಾಣಿಯರು ಹಿಂದೆ ಯಾವಾಗಲೂ ಹುಟ್ಟಿಲ್ಲ. ಮುಂದೆ ಹುಟ್ಟುವುದಿಲ್ಲ," ಎಂದು ಕ್ರಮಿತನು ಉತ್ತರ ಕೊಟ್ಟನು.

"ಏಕೆ ಹುಟ್ಟುವುದಿಲ್ಲ? ಕಾಶ್ಮೀರದ ರಾಣಿ ದಿದ್ದಾ ಸ್ವೇಚ್ಛಾಚಾರದ ಜ್ವಲಂತ ನಿದರ್ಶನವಾಗಿ ಕಲ್ಹಣನ 'ರಾಜತರಂಗಿಣಿ'ಯನ್ನು ಬೆಳಗಿದ್ದಾಳೆ. ನಮ್ಮ ರಾಜಾಂತಃ ಪುರಗಳ ರಹಸ್ಯ ಇತಿಹಾಸಗಳನ್ನು ಹುಡುಕಿದರೆ ಅಂತಹ ಎಷ್ಟು ಮಂದಿ ದಿದ್ದೆಯರು ಸಿಕ್ಕುವರೋ !" ಎಂದನು ಅಗ್ಗಳ.

ಕ್ರಮಿತನು ತಾನು ಧರ್ಮಾಧಿಕರಣದ ಹಿರಿಯ ಅಧಿಕಾರಿ ಎಂಬುದನ್ನು ಮರೆತು ಕುತೂಹಲದಿಂದ, "ಕಾಶ್ಮೀರದ ಆ ರಾಣಿಯ ವಿಚಾರವೇನು?" ಎಂದು ಕೇಳಿದನು.

ವ್ಯಂಗ್ಯದ ನಗೆ ಹಾರಿಸಿ ಅಗ್ಗಳದೇವನೆಂದನು : "ಪ್ರೇಮತತ್ವದ ಪ್ರಯೋಗ ಶಾಲೆಯನ್ನೇ ಪ್ರಾರಂಭಿಸಿದ ದಿಟ್ಟ ಹೆಣ್ಣು ಅವಳು. ಮಂತ್ರಿಗಳು, ಸೈನ್ಯಾಧಿಕಾರಿಗಳು, ಸಾಮಂತರು, ಸಾಮಾನ್ಯರು, ಎಲ್ಲರೂ ಅವಳ ಪ್ರಯೋಗಶಾಲೆಯ ಮೆಟ್ಟಿಲು ಹತ್ತಿಬಂದವರೆ. ಕೊನೆಗೆ ತನ್ನ ವೃದ್ಧ ವಯಸ್ಸಿನಲ್ಲಿ ಆ ಮಹಾಸತಿ, ತನ್ನ ಬಂಧು ವರ್ಗದ ಇಬ್ಬರು ಬಾಲಕರನ್ನು ತನ್ನ ಕಾಮಕ್ಕೆ ಬಲಿಕೊಟ್ಟಳೆಂದು ಕಲ್ಹಣ ಹೇಳುತ್ತಾನೆ."

"ಅಂತಹ ಜಗಪಾರೆಯನ್ನು ನೀವು ಮಹಾಸತಿಯೆಂದು ಕರೆಯುವಿರಾ?"– ಕ್ರಮಿತನು ಆಕ್ಷೇಪಿಸಿದನು.

ಅಗ್ಗಳನು ನಸುನಕ್ಕು ನುಡಿದನು : "ಬಿಜ್ಜಳ ಮಹಾರಾಜರ ಧರ್ಮಾಧಿಕಾರಿ ರಾಜಪುರೋಹಿತರಿಗೆ ತಕ್ಕಂತಿದೆ ನಿಮ್ಮ ಆಕ್ಷೇಪ. ಅಶೋಕ ಚಕ್ರವರ್ತಿಗೆ, 'ದೇವಾನಾಂಪ್ರಿಯ' ಎಂಬ ಬಿರುದಿದ್ದಿತು. ದೇವತೆಗಳಿಗೆ ಪ್ರಿಯರೆಂದರೆ ತಿಳಿಗೇಡಿ ಹುಚ್ಚರು ಎಂದು ಪಂಡಿತರು ಅದಕ್ಕೆ ವ್ಯಾಖ್ಯಾನ ಮಾಡಿದರು. ಆ ವಿಶಿಷ್ಟ ಸಂಪ್ರದಾಯಕ್ಕೆ ಸೇರಿದವರಲ್ಲವೆ ನೀವು !"

ಕ್ರಮಿತನು ತಿಳಿದನು, ಕುತರ್ಕ ಕುಚೋದ್ಯಗಳಲ್ಲಿ ಅಗ್ಗಳನು ತನ್ನನ್ನು

ಮೀರಿಸಬಲ್ಲನೆಂದು, ಅವನೊಡನೆ ವಾದ ಹೂಡುವುದು ಅವಿವೇಕವೆಂದು, ನಗೆಗೂಡಿಸಿ ಹೇಳಿದನು : "ನೀವು ತುಂಬ ಚತುರರು, ಅಗ್ಗಳದೇವ. ಪ್ರಭುಗಳು ನಿಮ್ಮ ತರ್ಕ ಕೇಳಿದ್ದರೆ ಸಂತೋಷಪಡುತ್ತಿದ್ದರು," ಎಂದನು.

ಅಷ್ಟರಲ್ಲಿ ಪಸಾಯಿತನು ಅಲ್ಲಿಗೆ ಬಂದು, "ನಾಟಕಶಾಲೆಗೆ ನಿಮ್ಮನ್ನು ಕರೆತರ ಬೇಕೆಂದು ಅಪ್ಪಣೆ ಆಗಿದೆ" ಎಂದನು.

ಭುವನೇಶ್ವರ ನಾಟ್ಯತಂಡದ ಪ್ರದರ್ಶನ ಮುಗಿದು, ಬಿಜ್ಜಳರಾಯನು ನರ್ತಕಿಯರಿಗೆ ಪಾರಿತೋಷಕಗಳನ್ನು ಹಂಚುತ್ತಿದ್ದಾಗ ಕ್ರಮಿತನು ಅಗ್ಗಳನನ್ನು ನಾಟಕ ಶಾಲೆಗೆ ಕರೆದುಕೊಂಡು ಬಂದನು.

ನೆಲದಿಂದ ಒಂದು ಅಡಿ ಮಾತ್ರ ಎತ್ತರವಿದ್ದ ಅರ್ಧಚಂದ್ರಾಕೃತಿಯ ವೇದಿಕೆ, ಸುತ್ತ ಜೋಡಿಸಿದ ಭದ್ರಾಸನಗಳು, ವೇದಿಕೆಯ ಹಿಂದೆ ಎರಡು ಕಡೆಗಳಲ್ಲಿ ಎರಡು ಪ್ರಸಾಧನಗೃಹಗಳು, ಇಷ್ಟು ಮಾತ್ರ ಆ ಆಟಿಕೆಯ ನಾಟಕಶಾಲೆಯ ರಚನಾವಿಧಾನವಾಗಿತ್ತು.

ಕಲ್ಯಾಣದಲ್ಲಿದ್ದ ಚಾಲುಕ್ಯ ಅರಮನೆಯ ನಾಟಕಶಾಲೆಯ ಮಾದರಿಯಲ್ಲಿ ಕಟ್ಟಲ್ಪಟ್ಟು ಆಕೃತಿಯಲ್ಲಿ ಚಿಕ್ಕದಾದರೂ ಅಲಂಕಾರ ವೈಭವದಲ್ಲಿ ಅದಕ್ಕಿಂತ ಇದೇ ಉತ್ತಮವೆಂಬುದನ್ನು ಅಗ್ಗಳನು ಗಮನಿಸಿದನು.

ಪ್ರದರ್ಶನಕ್ಕಾಗಿ ಬಂದ ನಟನರ್ತಕಿಯರು, ಬಿಜ್ಜಳನ ಪರಿವಾರದ ಕೆಲವು ಮಂದಿ ನಿಯಕ್ತರು, ಇವರು ಮಾತ್ರವೆ ನಾಟಕಶಾಲೆಯಲ್ಲಿದ್ದರು. ಕೃಷ್ಣಪಾತ್ರ ಧಾರಿಣಿಯಾದ ಪ್ರಧಾನ ನರ್ತಕಿ ಬಿಜ್ಜಳನ ಮುಂದೆ ವೈಯಾರದಿಂದ ತಲೆಬಾಗಿ ನಿಂತಿದ್ದಳು.

ಬಿಜ್ಜಳನು ನರ್ತಕಿಯ ಗದ್ದಹಿಡಿದೆತ್ತಿ, ಕೆನ್ನೆ ಚಿವುಟಿ, "ನಿನ್ನ ಹೆಸರೇನು ಗೋಪಿಕಾಪತಿ?" ಎಂದು ನಗುತ್ತಾ ಕೇಳಿದನು.

"ನಾನು ಕೋಣಾರ್ಕ ದೇವಾಲಯದ ಪ್ರಧಾನ ನರ್ತಕಿ, ಹೆಸರು ಛಾಯಾ ದೇವಿ," ಎಂದು ನರ್ತಕಿ ಉತ್ತರ ಕೊಟ್ಟಳು.

"ಕೋಣಾರ್ಕ ದೇವಾಲಯದ ನೃತ್ಯಶೈಲಿ ಬೇರೆ ಮಾದರಿಯದೆಂದು ಕೇಳಿದ್ದೇನೆ. ನೀವು ಈ ರಾಸಲೀಲೆಯ ನಾಟ್ಯ ಕಲಿತದ್ದು ಹೇಗೆ?"

"ಪುರಿ ಜಗನ್ನಾಥದ ಪೂಜೋತ್ಸವದಲ್ಲಿ ನಾವು ಆಗಾಗ ಭಾಗವಹಿಸಬೇಕಾಗುತ್ತದೆ, ಅದಕ್ಕಾಗಿ ಇದನ್ನು ಕಲಿತೆ."

"ನೀವು ಮಂಗಳವೇಡೆಯಲ್ಲಿ ಕೋಣಾರ್ಕದ ಅಶ್ಲೀಲ, ಜಗನ್ನಾಥದ ಶ್ಲೀಲ. ಈ ಎರಡು ಬಗೆಯ ನಾಟ್ಯಗಳನ್ನೂ ಅಭಿನಯಿಸಬೇಕಾಗುತ್ತದೆ."

ಶ್ಲೀಲ ಅಶ್ಲೀಲಗಳ ಉಲ್ಲೇಖನದಿಂದ ನರ್ತಕಿಯ ಕೆನ್ನೆಗಳು ಕೆಂಪಾದವು. ಅದನ್ನೇ ನಿರೀಕ್ಷಿಸುತ್ತಿದ್ದ ಬಿಜ್ಜಳನು ಮತ್ತೊಮ್ಮೆ ಅವಳ ಕೆನ್ನೆಯನ್ನು ಚಿವುಟಿದನು.

"ಒಡೆಯರ ಸೇವಿಕೆ ನಾನು," ಎಂದು ಹೇಳಿ ನರ್ತಕಿ ಹಿಂದಕ್ಕೆ ಸರಿದಳು, ಪಾರಿತೋಷಕವಾಗಿ ಪಡೆದ ಕುಸುರಿಯ ಸಣ್ಣ ಚೀಲವನ್ನು ಝಣ ! ಝಣ ! ಆಡಿಸುತ್ತ.

ಒಂದು ಜಾತಿಯ ಪುರುಷರ ಜೀವನ ಸಂಧ್ಯೆಗೆ ಸಹಜವಾದ ವಾಕ್ಚಾಪಲ್ಯವನ್ನು ಮುಗಿಸಿ ಬಿಜ್ಜಳನು ಹಿಂದೆ ತಿರುಗಿದಾಗ ರಾಜಪುರೋಹಿತ ನಾರಣಕ್ರಮಿತನ ಸಂಗಡ ಅಪರಿಚಿತ ಪುರುಷನೊಬ್ಬನೂ ನಿಂತಿರುವುದನ್ನು ಕಂಡನು. ಸ್ವಾಗತದ ಮಿದುನಗೆಯಿಂದ ಅವನ ಮುಖ ಅರಳಿತು.

"ಕವೀಂದ್ರ ಅಗ್ಗಳದೇವರಸರನ್ನು ಪ್ರಭುಗಳ ಸಂದರ್ಶನಕ್ಕಾಗಿ ಕರೆತಂದಿದ್ದೇನೆ," ಕ್ರಮಿತನು ಕೈ ಜೋಡಿಸಿ ಬಿನ್ನವಿಸಿಕೊಂಡನು.

ಕೈಯೆತ್ತಿ ನಮಸ್ಕಾರ ಮಾಡಿದ ಅಗ್ಗಳನನ್ನು ಅಭಿವಂದಿಸಿ ಬಿಜ್ಜಳನು,

"ರಾಜಪುರೋಹಿತರಿಂದ ನಿಮ್ಮ ಪ್ರಶಂಸೆಯ ನುಡಿಗಳನ್ನು ಕೇಳಿದ್ದೇನೆ, ಅಗ್ಗಳದೇವ. ದೇವಗಿರಿಯ ಯಾತ್ರೆಯಲ್ಲಿ ನಿಮ್ಮಿಂದ ದೊರಕಿದ ಸಹಾನುಭೂತಿಗಾಗಿ ಕ್ರಮಿತರು ಯಾವಾಗಲೂ ಕೃತಜ್ಞರು," ಎಂದನು.

ಚಾಲುಕ್ಯ ಮಹಾರಾಣಿಯ ಮನೆಹೆಗ್ಗಡೆಯಾಗಿ ಅಗ್ಗಳನು ಅನೇಕ ದಿನಗಳು ಕಲ್ಯಾಣದಲ್ಲಿದ್ದರೂ ಬಿಜ್ಜಳನನ್ನು ನೋಡುವ ಅವಶ್ಯಕತೆ ಉಂಟಾಗಿರಲಿಲ್ಲ. ಹೆಗ್ಗಡೆ ಕಾರ್ಯಕರ್ತರ ಮುಖಾಂತರ ವ್ಯವಹಾರ ನಡೆಸಿದ್ದನು. ಈಗ ಅನಿರೀಕ್ಷಿತವಾಗಿ ಸಂದರ್ಶನಾವಕಾಶ ದೊರಕಿದುದು ಕ್ರಮಿತನ ಚತುರತೆಯಿಂದಲೊ, ಅಥವಾ ಅದಕ್ಕೆ ಬೇರೆ ಯಾವುದಾದರೂ ರಹಸ್ಯ ಉದ್ದೇಶವಿದೆಯೋ ಎಂದು ಅಗ್ಗಳನು ಯೋಚಿಸಿದನು.

ಆಗ ಬಿಜ್ಜಳನಿಗೆ ಅರವತ್ತು ವರ್ಷಗಳು ಸಂದಿದ್ದರೂ ವಾರ್ಧಿಕ್ಯದ ಲಕ್ಷಣಗಳಿರಲಿಲ್ಲ. ಎತ್ತರವಾದ ದೇಹ, ವಿಶಾಲವಾದ ಹಣೆ, ಹೊಳೆಯುವ ಕಣ್ಣುಗಳು ಹುರಿಮೀಸೆ, ಧೈರ್ಯ ಸಾಹಸ ಸ್ಥಿರತೆಯ ಸನ್ನೆಗೋಲುಗಳಂತೆ ನೀಳವಾದ ತೋಳುಗಳು. ಎಲ್ಲರ ಕಣ್ಣುಗಳನ್ನು ಅವನ ಕಡೆಗೆ ಆಕರ್ಷಿಸುತ್ತಿದ್ದವು. ಭುಜಬಲ ಚಕ್ರವರ್ತಿ, ನಿಶ್ಯಂಕಮಲ್ಲ, ಶನಿವಾರಸಿದ್ಧಿ–ಈ ಬಿರುದುಗಳು ಅವನಿಗಾಗಿಯೇ ರಚಿತವಾದಂತೆ ಭಾವುಕರು ತಿಳಿದಿದ್ದರು.

ಬಿಜ್ಜಳನ ತುಟಿಗಳು ಮಾತ್ರ ಒಮ್ಮೊಮ್ಮೆ, ಸಂಯತ ಕೋಪದ ಆವೇಗ ಅಸಹನೆಗಳಿಂದ ಮಿಡಿದು, ಮುಡಿಕಟ್ಟಿ, ತನ್ನ ಸಹಜಸರಳತೆಯನ್ನು

ಕಳೆದುಕೊಳ್ಳುತ್ತಿದ್ದವು. ಅಂತಹ ಸಮಯದಲ್ಲಿ ಮಾತುಕಥೆಗಳ ರೀತಿ ಎಂದಿನಂತಿದ್ದರೂ ಕಾರ್ಯ ವಿಧಾನ ವಕ್ರಗತಿಗೆ ತಿರುಗುತ್ತಿತ್ತು. ಪ್ರಭುಚಿತ್ತ ಪರಿವರ್ತನೆಯ ಈ ಸಂಕೇತವನ್ನು ತಿಳಿದಿದ್ದ ಸಾಮಾಜಿಕರು ಆ ಸಮಯದಲ್ಲಿ ಎಚ್ಚರದಿಂದ ನಡೆದುಕೊಳ್ಳುತ್ತಿದ್ದರು. ಸಭೆ ಉತ್ಸವಗಳ ಹೊರತಾಗಿ ಉಳಿದಕಾಲದಲ್ಲಿ ಬಿಜ್ಜಳನು ಧರಿಸುತ್ತಿದ್ದ ರಾಜವೈಭವಗಳಿಲ್ಲದ ಯೋಧನ ಉಡುಪುಗಳು ಅವನ ಗಂಭೀರ ವರ್ತನೆಗೆ ಮೆರಗುಕೊಟ್ಟಿದ್ದವು.

ಉಪಚಾರದ ಮಾತುಕಥೆ ಮುಗಿಯುತ್ತಿದ್ದಂತೆ ನಾಟಕಶಾಲೆ ಬರಿದಾಯಿತು. ಪ್ರಭುವಿನ ಇಂಗಿತವರಿತ ಸಮುಖ ಕಾರ್ಯದರ್ಶಿ ಪಸಾಯಿತರು ನರ್ತಕಿಯರನ್ನು ಬೀಳ್ಕೊಡುವ ನೆವದಲ್ಲಿ ಹೊರಗೆ ಹೋದರು.

ಬಿಜ್ಜಳನು ಕ್ರಮಿತನ ಕಡೆ ತಿರುಗಿ “ನಾಟಕಶಾಲೆಯಲ್ಲಿ ಮಂತ್ರಾಲೋಚನೆ ನಡೆಸುವುದು ನಿಮ್ಮ ಮಿತ್ರರಿಗೆ ಒಪ್ಪಿಗೆಯೇ?” ಎಂದನು.

“ಪ್ರಭುಗಳ ಇಚ್ಛೆಯೇ ನನ್ನ ಇಚ್ಛೆ.”–ಅಗ್ಗಳನು ತಲೆಬಾಗಿ ವಂದಿಸಿ ಉತ್ತರಕೊಟ್ಟನು. ಅವನ ಮನೋಭೂಮಿಯಲ್ಲಿ ಬಿಜ್ಜಳನ ಬಗೆಗೆ ಚಿತ್ರವಿಚಿತ್ರ ಭಾವನೆಗಳು ಮಿಂಚಿ ಮರೆಯಾದವು.

.......ಬಯಲಲ್ಲಿ ಸಭೆ ಕರೆದು ಬಸವಣ್ಣನವರನ್ನು ಕಲ್ಯಾಣದಿಂದ ಹೊರದೂಡಿದ ಈ ರಾಜ್ಯಾಪಹಾರಿ ನಿರಂಕುಶ ಅರಸು, ನಾಟಕಶಾಲೆಯಲ್ಲಿ ಮಂತ್ರಾಲೋಚನೆ ನಡೆಸಿ ನನ್ನನ್ನು ಏನು ಮಾಡಲು ಹವಣಿಸಿದ್ದಾನೆ ? ಕುಮಾರ ಸೋಮೇಶ್ವರನ ಪಟ್ಟಾಭಿಷೇಕಕ್ಕೆ ಚಾಲುಕ್ಯರಾಣಿ ಕಾಮೇಶ್ವರೀ ದೇವಿಯನ್ನು ಬರಮಾಡಿಕೊಳ್ಳುವ ಉದ್ದೇಶದಿಂದ ವಿನಯಪ್ರದರ್ಶನದ ಮಾಯಾನಾಟಕ ನಡೆಯುತ್ತಿದೆಯೇ? ಈ ಸಂಚು ಸಂಧಾನಗಳಲ್ಲಿ ನಾರಣಕ್ರಮಿತನ ಪಾತ್ರವೇನು? ಕುಮಾರ ಪ್ರೇಮಾರ್ಣವನ ಭಾಗ್ಯತಾರೆ ಉದಯಿಸುತ್ತಿದೆಯೆ ?..... ಈ ಪ್ರಶ್ನೆಗಳಿಗೆ ಸಂದಿಗ್ಧವಲ್ಲದ ಉತ್ತರ ಕೊಡುವುದು ತನ್ನ ಚತುರತೆಗೆ ಮೀರಿದ ಕಾರ್ಯವೆಂದು ಅಗ್ಗಳನು ತಿಳಿದನು.

ಕೆಲವು ಕ್ಷಣಗಳ ಅನಂತರ ಬಿಜ್ಜಳನು ಹೇಳಿದನು : “ಚಾಲುಕ್ಯ ಮಹಾರಾಣಿ ಕಾಮೇಶ್ವರೀದೇವಿಯವರು ಮಂಗಳವೇಡೆಗೆ ಬಂದಾಗ ಹಿಂದೆ ಯಾವಾಗಲೂ ಎಲ್ಲಿಯೂ ಯಾರಿಗೂ ದೊರಕದಿದ್ದಂತಹ ಅದ್ಭುತ ಸ್ವಾಗತಕ್ಕೆ ಏರ್ಪಡಿಸಬೇಕೆಂದು ನಮ್ಮ ಆಸೆ, ಅಗ್ಗಳದೇವರಸರೆ. ಅದಕ್ಕಾಗಿ ಈಗಿನಿಂದ ನಾವು ಸಿದ್ಧಮಾಡಿಕೊಳ್ಳಬೇಕು. ಹೆಜ್ಜೆ ಹೆಜ್ಜೆಗೂ ನಿಮ್ಮ ಸಹಾಯ ಬೇಕಾಗುವುದು.”

“ನಾನು ಸಿದ್ಧವಾಗಿದ್ದೇನೆ, ಆದರೆ.........” ಚಾಲುಕ್ಯ ಮಹಾರಾಣಿ ಕಾಮೇಶ್ವರೀ

ದೇವಿಯ ಮನೆಹೆಗ್ಗಡೆಗೆ ಉಚಿತವಾದ ಶ್ರೀಮದ್ಗಾಂಭೀರ್ಯದಿಂದ ಅಗ್ಗಳನು ನುಡಿದನು.

"ಆದರೆ.......ಆದರೇನು ?"–ಅಸಹನೆಯ ಸೂಚನೆಯಾಗಿ ಬಿಜ್ಜಳನ ತುಟಿಗಳು ಮಿಡಿದವು.

ಇಂತಹ ಸಂದರ್ಭದಲ್ಲಿ ಸಂದೇಹದ ಬಳಸು ನುಡಿಗಳಿಗಿಂತ ಸ್ಪಷ್ಟಭಾಷಣ ಉಪಯುಕ್ತವೆಂದು ತಿಳಿದಿದ್ದ ಅಗ್ಗಳನು ಹೇಳಿದನು : "ಮಹಾರಾಣಿಯವರು ಮಂಗಳವೇಡೆಗೆ ಬರುವರೇ ಇಲ್ಲವೇ ಎಂಬುದು ಇನ್ನೂ ಖಚಿತವಾಗಿಲ್ಲ. ಆ ವಿಚಾರದಲ್ಲಿ ಅವರ ಕೊನೆಯ ನಿರ್ಧಾರವನ್ನು ನಾನು ನಿರೀಕ್ಷಿಸುತ್ತಿದ್ದೇನೆ. ಅದನ್ನು ತಿಳಿದಮೇಲೆ ಸ್ವಾಗತದ ವಿವರಗಳನ್ನು ಪ್ರಸ್ತಾಪಿಸಬಹುದು."

ಕ್ಷಣಕಾಲ ಬಿಜ್ಜಳನ ಹುಬ್ಬುಗಳೂ ಮುದುರಿದವು. ಅಸಮಾಧಾನದಿಂದ ತುಟಿ ಅದುರಿತು. ಕ್ರಮಿತನು ತಳವೆಳಗಾದನು. "ಎಂತಹ ಸಾಹಸಿ ಈ ಮನೆ ಹೆಗ್ಗಡೆ! ಗುಹೆಯಲ್ಲಿ ಸಿಕ್ಕೂ ಸಿಂಹದ ಬಾಲವನ್ನು ತಿರುವಲು ಯೋಚಿಸುತ್ತಿದ್ದಾನೆ. ಏನಾದರೂ ಅನರ್ಥವಾದರೆ ನಾನು ಹೊಣೆಯಲ್ಲ," ಎಂದು ತನಗೆ ತಾನೆ ಹೇಳಿಕೊಂಡನು.

ಪ್ರತಿಕ್ಷಣದಲ್ಲಿ ಬಿಜ್ಜಳನ ಮುಖ ಮಿದುನಗೆಯಿಂದ ಅರಳಿತು. ಅವನು ಹೇಳಿದನು : "ಮಹಾರಾಣಿಯವರು ಈ ವಿಚಾರದಲ್ಲಿ ಯಾವ ನಿರ್ಧಾರಕ್ಕೂ ಬಾರದಿರಲು ನಾವು ಕಾರಣರು, ಅಗ್ಗಳದೇವರಸರೆ. ಕುಮಾರ ಪ್ರೇಮಾರ್ಣವನ ಪಟ್ಟಾಭಿಷೇಕದ ಸಲಹೆಯನ್ನು ನಾವು ಓಲೆ ಬರೆದು ತಿಳಿಸುವುದು ಉಚಿತವಾಗಿತ್ತು. ಹಾಗೆ ಮಾಡದೆ ಬಾಯಿಮಾತಿನಲ್ಲಿ ಹೇಳಿ ಕಳುಹಿಸಿದ್ದು ಸರಿಯಲ್ಲವೆಂದು ಈಗ ಅರಿವಾಗುತ್ತಿದೆ. ಆದರೆ ಈ ಸಂದರ್ಭದಲ್ಲಿ ಬೇರೆ ಉಪಾಯವಿರಲಿಲ್ಲ."

"ದೂತನಿಂದ ನಿಮ್ಮ ಸಲಹೆ ಕೇಳಿದಾಗ ಮಹಾರಾಣಿಯವರಿಗೆ ಆಶ್ಚರ್ಯವಾಯಿತು. 'ಈ ವಿಚಾರವನ್ನು ಆಹ್ವಾನ ಪತ್ರಿಕೆಯಲ್ಲಿ ಏಕೆ ಪ್ರಸ್ತಾಪಿಸಲಿಲ್ಲ?' ಎಂದು ಪ್ರಶ್ನಿಸಿದರು. ದೂತನು ತಬ್ಬಿಬ್ಬಾಗಿ ಉತ್ತರ ಕೊಡಲಿಲ್ಲ," ಎಂದನು ಅಗ್ಗಳ.

"ನಮ್ಮನ್ನೇ ತೊಂದರೆಯಲ್ಲಿ ಹಾಕಿರುವ ವಿಚಾರವಾಗಿ ಸಾಮಾನ್ಯ ದೂತನೊಬ್ಬನು ಉತ್ತರ ಕೊಡಲು ಶಕ್ತನಾಗುವನೆ? ಈಗಲೂ ಆ ತೊಂದರೆ ಪರಿಹಾರವಾಗಿಲ್ಲ."–ಎಂದು ಹೇಳಿ ಬಿಜ್ಜಳನು ಅರ್ಥಗರ್ಭಿತವಾಗಿ ಕ್ರಮಿತನ ಕಡೆ ನೋಡಿದನು.

ಇಂಗಿತವರಿತು ಕ್ರಮಿತನು ಹೇಳಿದನು– "ದಿವಂಗತ ತೈಲಪಮಹಾರಾಜರ ಸಹೋದರ ಜಗದೇಕಮಲ್ಲರಸರು ಈಗ ಚಾಲುಕ್ಯ ಸಿಂಹಾಸನದಲ್ಲಿ ಕುಳಿತಿರುವ

ಅರಸರು. ಕುಮಾರ ಪ್ರೇಮಾರ್ಣವರಿಗೆ ಯುವರಾಜ ಪಟ್ಟಕಟ್ಟಲು ಅವರ ಅನುಮತಿ ಅಗತ್ಯ. ಇದುವರೆಗೆ ಅವರು ಅನುಮತಿ ಕೊಟ್ಟಿಲ್ಲ. ನಮ್ಮ ಅನುನಯ ಒತ್ತಾಯಗಳೆಲ್ಲ ವಿಫಲವಾಗಿವೆ."

"ಜಗದೇಕಮಲ್ಲರಸರ ಅಭಿಮತವೇನು ?"–ಅಗ್ಗಳನು ಪ್ರಶ್ನಿಸಿದನು. ಬಿಜ್ಜಳನು ನಡುವೆ ಬಂದು, "ಅವರ ಅಭಿಪ್ರಾಯವೇನೆಂಬುದನ್ನು ತಿಳಿಯಲು ಇದುವರೆಗೆ ನಾವು ಸಮರ್ಥರಾಗಿಲ್ಲ. ನೀವು ಈ ವಿಚಾರದಲ್ಲಿ ನಮಗೆ ಸಹಾಯ ಮಾಡಬೇಕು," ಎಂದನು.

"ಜಗದೇಕಮಲ್ಲರಸರ ಪರಿಚಯವೇ ಇಲ್ಲದ ನನ್ನಿಂದ ನಿಮಗೆ ಸಹಾಯವೆ? ಪ್ರಭುಗಳು ಹಾಸ್ಯಪ್ರಿಯರು !"–ಅಗ್ಗಳನು ನಸುನಕ್ಕು ಉತ್ತರ ಕೊಟ್ಟನು.

"ನೀವು ಮಹಾರಾಣಿ ಕಾಮೇಶ್ವರೀದೇವಿಯ ಮನೆಹೆಗ್ಗಡೆಯೆಂದು ತಿಳಿದಾಗ ಜಗದೇಕಮಲ್ಲರಸರು ನಿಮ್ಮ ಮಾತುಗಳಿಗೆ ಕಿವಿಗೊಡುವರು. ನಮ್ಮಿಂದ ಆಗದಿದ್ದ ಕಾರ್ಯವನ್ನು ಒಂದೇ ದಿನದಲ್ಲಿ ಮುಗಿಸಲು ನೀವು ಸಮರ್ಥರಾಗುವಿರಿ."

"ಆದರೆ ಕರ್ಣದೇವರಸರ ಸರ್ಪಕಾವಲನ್ನು ದಾಟಿ ನಾನು ಜಗದೇಕಮಲ್ಲರಸರನ್ನು ನೋಡುವುದು ಹೇಗೆ ?"–ಅಗ್ಗಳನು ಸಹಜವಾಗಿ ಕೇಳಿದನು. ಜಗದೇಕ ಮಲ್ಲನ ಬಂಧನದ ವಿಚಾರದಲ್ಲಿ ಕುಚೋದ್ಯವಾಡುವ ಇಚ್ಛೆಯೂ ಅವನಿಗಿರಲಿಲ್ಲ.

ಬಿಜ್ಜಳನ ತುಟಿಗಳು ಕಂಪಿಸಿದವು. ಹಣೇ ಸುಕ್ಕಿಟ್ಟಿತು. ಪ್ರತಿಕ್ಷಣದಲ್ಲಿ ಅವನು ಮನಸ್ಸಿನ ಉದ್ವೇಗವನ್ನು ಮುಚ್ಚಿಟ್ಟು ಸರ್ವಾಧಿಕಾರಿಯ ದೃಢಕಂಠದಿಂದ, "ನಾರಣ ಕ್ರಮಿತರು ತಮ್ಮ ಬುದ್ಧಿ ಚತುರತೆಯಿಂದ ಆ ಕಾರ್ಯ ಮಾಡುವರು. ಅಪೇಕ್ಷಿಸುವುದಾದರೆ ನೀವು ಜಗದೇಕಮಲ್ಲರಸರ ಅತಿಥಿಯಾಗಿ ಎರಡು ದಿನಗಳೂ ರಾಜಗೃಹದಲ್ಲಿರಬಹುದು. ಅವರ ಮನಸ್ಸು ತಿರುಗಿಸಲು ನೀವು ಸಮರ್ಥರಾದರೆ ಕಾಮೇಶ್ವರೀದೇವಿಯುವರ ಆಸೆ ಪೂರೈಸುವುದು. ನಮ್ಮ ತೊಂದರೆ ಪರಿಹಾರವಾಗುವುದು,"–ಎಂದು, ಹೇಳಿ ಸಂದರ್ಶನ ಮುಗಿಯಿತೆಂಬುದನ್ನು ಸೂಚಿಸಲು ಕೈಮುಗಿದು ಅಲ್ಲಿಂದ ಹೊರಟನು. ಪಸಾಯಿತರ ಪರಿವಾರ ಬಿಜ್ಜಳನ ಹಿಂದೆ ಹೋಯಿತು.

ಅಗ್ಗಳನು ಕ್ರಮಿತನ ಕಡೆ ತಿರುಗಿ, "ಈಗ ನನ್ನನ್ನೇನು ಮಾಡುವಿರಿ, ಧರ್ಮಾಧಿಕಾರಿಗಳೇ? ಬಂಧನವೋ ನಿರ್ವಾಸನವೋ ?" ಎಂದನು.

ಕ್ರಮಿತನು ನಕ್ಕು, "ನೀವು ಎರಡಕ್ಕೂ ಯೋಗ್ಯರಲ್ಲ, ಅಗ್ಗಳದೇವರಸರೆ. ನಿಮ್ಮನ್ನು ರಾಜಗೃಹಕ್ಕೆ ಕರೆದುಕೊಂಡುಹೋಗಿ ಜಗದೇಕಮಲ್ಲರಸರಿಗೆ ಒಪ್ಪಿಸುತ್ತೇನೆ.

ಅವರು ತಮ್ಮಿಚ್ಛೆಬಂದಂತೆ ಮಾಡಲಿ." ಎಂದು ಹೇಳಿ ಅಗ್ಗಳನನ್ನು ನಾಟ್ಯ ಶಾಲೆಯಿಂದ ಹೊರಗೆ ಕರೆದುಕೊಂಡು ಹೋಗಿ ಮಹಾದ್ವಾರದಲ್ಲಿ ಕಾದಿದ್ದ ರಥದಲ್ಲಿ ಕುಳ್ಳಿರಿಸಿದನು.

* * *

ಕಲ್ಯಾಣದಲ್ಲಿ ನಾಲ್ಕು ಚಾಲುಕ್ಯ ಅರಮನೆಗಳಿದ್ದವು. ಅವುಗಳಲ್ಲಿ ಸರ್ವಜ್ಞ ಸೋಮೇಶ್ವರನು ಕಟ್ಟಿಸಿದ ದುರ್ಗ ಪ್ರಾಸಾದವೆಂಬ ಅರಮನೆ ಕೋಟೆ ಕೊತ್ತಳಗಳಿಂದ ಸುರಕ್ಷಿತವಾಗಿತ್ತು. ಸದ್ಯದಲ್ಲಿ ಅದು "ರಾಜಗೃಹ" ಎಂಬ ಹೊಸ ಹೆಸರನ್ನು ಪಡೆದು, ಹೆಸರಿಗೆ ದೊರೆಯಾಗಿದ್ದ ಜಗದೇಕಮಲ್ಲರಸನ ಮತ್ತು ಅವನ ಅಂಗರಕ್ಷಕ ಸೈನ್ಯದ ಆವಾಸಸ್ಥಳವಾಗಿತ್ತು. ಐನೂರು ಮಂದಿ ರಾವುತರು, ಸಾವಿರಮಂದಿ ಪದಾತಿಗಳು ಇದ್ದ ಆ ರಕ್ಷಕ ಸೈನ್ಯಕ್ಕೆ ಬಿಜ್ಜಳನ ಸಹೋದರ ಕರ್ಣದೇವನು ಅಧಿಪತಿಯಾಗಿದ್ದನು. ಅರಮನೆಯ ಮುಂಭಾಗದ ಕಟ್ಟಡದಲ್ಲಿ ಕರ್ಣದೇವನ ವಾಸದ ಮನೆ, ಚಾವಡಿ, ಅತಿಥಿ ಶಾಲೆಗಳೂ ಅಂತಃಪುರಕ್ಕಾಗಿ ರಚಿತವಾಗಿದ್ದ ಹಿಂಭಾಗದಲ್ಲಿ ಜಗದೇಕಮಲ್ಲನ ಮತ್ತು ಅವನ ಗಣಿಕಾಪರಿವಾರದ ವಾಸಗೃಹಗಳೂ, ಸಭಾಂಗಣ, ನಾಟ್ಯಶಾಲೆ, ಪಾಕಶಾಲೆ, ಉಗ್ರಾಣ, ಸ್ನಾನದ ಮನೆ ಮುಂತಾದವುಗಳೂ ಇದ್ದವು.

ನೂರ್ಮಡಿ ತೈಲಪನ ಸಹೋದರನಾದ ಜಗದೇಕಮಲ್ಲನನ್ನು ಚಾಲುಕ್ಯ ಅರಸೊತ್ತಿಗೆಯಲ್ಲಿ ಕುಳ್ಳಿರಿಸಿ, ಅರಮನೆಯಲ್ಲಿ ಬಂಧನದಲ್ಲಿಟ್ಟು ಅವನ ಹೆಸರಿನಲ್ಲಿ ಬಿಜ್ಜಳನು ಸರ್ವಾಧಿಕಾರಿ ಮಹಾಮಂಡಲೇಶ್ವರನಾಗಿ ರಾಜ್ಯದ ಆಡಳಿತ ನಡೆಸುತ್ತಿದ್ದನು. ತೈಲಪನು ಜೀವಿಸಿದ್ದಾಗಲೆ, ಅವನಿಗಾಗಲಿ, ಅವನ ಸಾಮಂತ ಮನ್ನೆಯರಿಗಾಗಲಿ ತಿಳಿಯದಂತೆ ಹೆಜ್ಜೆ ಹೆಜ್ಜೆಯಾಗಿ ನಡೆದ ಈ ರಾಜ್ಯಾಪಹಾರ ಮುಗಿದು ಆಗಲೆ ಆರು ವರ್ಷಗಳು ಕಳೆದಿದ್ದವು. ಈ ಆಖ್ಯಾಯಿಕೆಯ ಕಾಲಕ್ಕೆ ಬಿಜ್ಜಳನು ಚಾಳುಕ್ಯ ರಾಜ್ಯದ ಅನಭಿಷಿಕ್ತ ಚಕ್ರೇಶ್ವರನೂ, ಜನಪ್ರಿಯ ಸರ್ವಾಧಿಕಾರಿಯೂ ಆಗಿದ್ದನು. ಕ್ರಮಕ್ರಮವಾಗಿ ಬಿಜ್ಜಳನು ನಡೆಸಿದ ಈ ರಾಜ್ಯಾಪಹಾರವನ್ನು ಪ್ರಜೆಗಳಾಗಲಿ, ಸಾಮಂತ ಮನ್ನೆಯರಾಗಲಿ ವಿರೋಧಿಸದೆ ಇದ್ದುದಕ್ಕೆ ಮೂರು ಮುಖ್ಯ ಕಾರಣಗಳಿದ್ದವು.

ಮೊದಲನೆಯದು ಬಿಜ್ಜಳನ ಸೈನ್ಯದಳ. ಸುಮಾರು ೫೦ ಸಾವಿರ ರಾವುತರು, ಎರಡು ಲಕ್ಷ ಪದಾತಿ, ೮೦೦ ಆನೆಗಳು, ೨೦೦೦ ಒಂಟೆಗಳು, ಈ ಮಹಾಸೈನ್ಯಕ್ಕೆ ಅಗತ್ಯವಾದ ಮಾರಣಾಸ್ತ್ರಗಳ ತಯಾರಿಕೆ, ಮೇವು ಮತ್ತು ಆಹಾರ ವಸ್ತುಗಳ ಸರಬರಾಜು, ಮಾರ್ಗಪರಿಷ್ಕರಣ ಮತ್ತು ಶಿಬಿರ ರಚನೆ ಮೊದಲಾದ ಕಾರ್ಯಗಳಿಗೆ

ಬೇಕಾಗುವ ಶಿಲ್ಪಿಗಳು, ಹುಂಡಿಕಾರರು, ಬಣಜಾರರು, ಚಂಗೂಲಿಗಳು ಮುಂತಾದವರ ದೊಡ್ಡ ದಳಗಳು, ಬಿಜ್ಜಳನ ಅಧೀನದಲ್ಲಿತ್ತು. ರಾಜ್ಯದ ಪ್ರಮುಖ ನಗರಗಳಲ್ಲಿ, ದುರ್ಗಗಳಲ್ಲಿ, ಬಿಜ್ಜಳನ ಕಡೆಯವರು ಅಧಿಕಾರಿಗಳೂ ನಿಯುಕ್ತರೂ ಆಗಿದ್ದರು. ಈ ಮಹಾಸೈನ್ಯದ ಪಾಲನ ಪೋಷಣ ವೇತನಗಳಿಗಾಗಿ ಚಾಲುಕ್ಯ ಭಂಡಾರದಿಂದ ಅಪರಿಮಿತ ಹಣ ವೆಚ್ಚವಾಗುತ್ತಿದ್ದರೂ ವಾಸ್ತವದಲ್ಲಿ ಅದು ಬಿಜ್ಜಳನ ಸ್ವಂತ ಸೈನ್ಯವಾಗಿತ್ತು. ರಾಜ್ಯದ ದಕ್ಷಿಣ ಭಾಗದ ಕೆಲವು ಮಂದಿ ಸಾಮಂತರ ಹೊರತಾಗಿ ಉಳಿದ ಮಂಡಲಾಧಿಕಾರಿಗಳು ಬಿಜ್ಜಳನ ಆಡಳಿತವನ್ನು ಅನುಮೋದಿಸುತ್ತಿದ್ದರು. ಈ ವಿಪುಳ ಸೈನ್ಯದ ಬಲದಿಂದ ಬಿಜ್ಜಳನು ತ್ರಿಭುವನಮಲ್ಲ, ಭುಜಬಲ ಚಕ್ರವರ್ತಿ, ಶನಿವಾರ ಸಿದ್ಧಿ ಮುಂತಾದ ಬಿರುದುಗಳಿಂದ ಹೊಗಳಿಸಿಕೊಳ್ಳಲು ಪ್ರಾರಂಭಿಸಿದ್ದನು.

ಬಿಜ್ಜಳನ ದಕ್ಷ ಆಡಳಿತ ಅವನ ಜನಪ್ರಿಯತೆಯ ಎರಡನೆಯ ಕಾರಣವಾಗಿತ್ತು. ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಚಾಲುಕ್ಯ ರಾಜ್ಯದಲ್ಲಿ ಆಚರಣೆಗೆ ಬಂದ ಆಡಳಿತ ಕ್ರಮ, ಆಮೇಲಿನ ಎರಡು ತಲೆಮಾರುಗಳಲ್ಲಿ ಸುವ್ಯವಸ್ಥಿತವಾಗಿ ನಡೆದು ಬಂದು, ಜಗದೇಕಮಲ್ಲನ ಆಳ್ವಿಕೆಯಲ್ಲಿ ಸ್ವಲ್ಪ ಸಡಿಲವಾಗಿ, ನೂರ್ಮಡಿ ತೈಲಪನ ಆಳ್ವಿಕೆಯಲ್ಲಿ ಅವನ ಉದಾಸೀನ ಅದಕ್ಷತೆಗಳ ಕಾರಣದಿಂದ ಕೆಲವೇ ವರ್ಷಗಳಲ್ಲಿ ಹದಗೆಟ್ಟಿತು. ಮಂಡಲಾಧಿಕಾರಿಗಳು, ಸಾಮಂತರು ರಾಜ್ಯದ ಹಿತಾಸಕ್ತಿಗಳನ್ನು ಕಡೆಗಣಿಸಿ, ಸ್ವಾರ್ಥಪರರಾಗಿ ನ್ಯಾಯ ವಿರುದ್ಧವಾದ ದುರ್ಮಾರ್ಗಗಳಿಂದ ಧನಸಂಗ್ರಹ ಮಾಡಲು ಪ್ರಾರಂಭಿಸಿದರು. ರಾಜಮಾರ್ಗಗಳು ಅರಕ್ಷಿತವಾದವು. ಕಳ್ಳಕಾಕರು ಹೆಚ್ಚಿದರು. ಲೂಟಿ ದರೋಡೆಗಳು ರಾಜ್ಯದ ಅನೇಕ ಕಡೆಗಳಲ್ಲಿ ಪ್ರತಿನಿತ್ಯದ ಘಟನೆಗಳಾದವು. ವಾಣಿಜ್ಯ ವ್ಯವಹಾರಗಳ ಕಾಲು ಮುರಿದಂತಾಗಿ ದೇಶದ ಆರ್ಥಿಕ ಭದ್ರತೆ ಕದಲಿತು. ರಾಜ ಭಂಡಾರಗಳು ಬರಿದಾದವು.

ಆಗ ತೈಲಪನು ತನ್ನ ಮಂಡಲಾಧೀಶ್ವರರಲ್ಲಿ ಪ್ರಮುಖನೂ, ದಕ್ಷನೂ, ರಾಜ್ಯದ ಹಿರಿಯ ದಂಡನಾಯಕನೂ ಆಗಿದ್ದ ಬಿಜ್ಜಳನಿಗೆ ತನ್ನ ಎಲ್ಲ ಅಧಿಕಾರಗಳನ್ನು ಒಪ್ಪಿಸಿ ಅಂತಃಪುರದಲ್ಲಿ ಗಣಿಕಾ ಪರಿವಾರದ ವಿಹಾರ ವಿನೋದಗಳಲ್ಲಿ ಮಗ್ನನಾದನು.

ಬಿಜ್ಜಳನ ದಕ್ಷತೆಯಿಂದ ಒಂದೇ ವರ್ಷದಲ್ಲಿ ಆಡಳಿತ ಉತ್ತಮಗೊಂಡಿತು. ರಾಜಮಾರ್ಗಗಳು ಸುರಕ್ಷಿತವಾಗಿ ವಾಣಿಜ್ಯ ವ್ಯವಹಾರಗಳು ಹೆಚ್ಚಿದವು. ಕಳ್ಳಕಾಕರ ಹೆಸರಡಗಿತು. ರಾಜ್ಯದ ಸಾಮಂತ ಶ್ರೀಮಂತರು, ಪ್ರಭು ಮನ್ನೆಯರು, ಕೃಷಿಕ ಕಾರ್ಮಿಕರು, ವರ್ತಕ ವ್ಯವಹಾರಿಗಳು ಬಿಜ್ಜಳನ ಆಡಳಿತ ದಕ್ಷತೆಯನ್ನು ಬಿಚ್ಚುಗೊರಳಿಂದ ಹೊಗಳಿದರು. ಆಗ ಪ್ರಾರಂಭವಾದ ರಾಜ್ಯಾಪಹಾರ, ತೈಲಪನ ಅವಸಾನ ಕಾಲಕ್ಕೆ ಪೂರ್ಣವಾಗಿ, ಆಗಲೇ ಆರು ವರ್ಷಗಳು ಕಳೆದಿದ್ದವು.

ನೂರ್ಮಡಿ ತೈಲಪನ ಸಹೋದರನೂ, ಚಾಲುಕ್ಯ ಅರಸೊತ್ತಿಗೆಗೆ ನ್ಯಾಯವಾದ ಉತ್ತರಾಧಿಕಾರಿಯೂ ಆದ ಜಗದೇಕಮಲ್ಲನನ್ನು ನಿಜ್ಜಳನು ಹೆಸರಿಗೆ ಸಿಂಹಾಸನದಲ್ಲಿ ಕುಳ್ಳಿರಿಸಿ, ಬಂಧನದಲ್ಲಿಟ್ಟು ತಾನೇ ನಿಜವಾದ ಅರಸನಾಗಿದ್ದನು.

ತೈಲಪನಂತೆ ಜಗದೇಕಮಲ್ಲನೂ ವಿಲಾಸಪ್ರಿಯನಾಗಿದ್ದನು. ಗಣಿಕೆಯರು, ಮಧುಪಾನ, ಬೇಟೆ, ಇವು ಮೂರು ಅವನ ನಿತ್ಯವ್ಯಸನಗಳು. ಕಲ್ಯಾಣದಿಂದ ಎರಡು ಗಾವುದ ದೂರದಲ್ಲಿದ್ದ ಒಂದು ದೊಡ್ಡ ಅರಣ್ಯದಲ್ಲಿ ಅವನ ಬೇಟೆಗಾಗಿಯೆ ಜಿಂಕೆ, ಹಂದಿ, ಕಾಡುಕೋಣ, ಕಡವೆ ಮುಂತಾದ ವನ್ಯಮೃಗಗಳನ್ನು ರಕ್ಷಿಸಿಟ್ಟಿದ್ದರು. ತಿಂಗಳಲ್ಲಿ ಒಂದು ಸಾರಿಯಾದರೂ ಜಗದೇಕಮಲ್ಲನು ಬೇಟೆಗಾಗಿ ಅಲ್ಲಿಗೆ ಹೋಗಿ ಕೆಲವು ದಿನಗಳು ಶಿಬಿರವಾಸದಲ್ಲಿದ್ದು ಹಿಂದಿರುಗುವನು. ಜಗದೇಕಮಲ್ಲನಿಗಾಗಿ ಸುಂದರ ಗಣಿಕೆಯರನ್ನು ಹುಡುಕಿ ತರಲು ಒಬ್ಬ ಪ್ರತ್ಯೇಕ ಅಧಿಕಾರಿಯಿದ್ದನು. ತ್ರಿಪುರಿ, ಗೋವೆ, ಜಗನ್ನಾಥ, ಕಾಂಚೀ, ಮಧುರೆ ಮುಂತಾದ ಸ್ಥಳಗಳಿಂದ ಆರಿಸಿ ತಂದ ಚಲುವೆಯರಾದ ಗಾಯಕಿಯರು, ನರ್ತಕಿಯರು ಅವನ ಗಣಿಕಾಪರಿವಾರದಲ್ಲಿದ್ದರು. ಈ ವಿಲಾಸಜೀವನದ ಹೊನ್ನ ಪಂಜರದಿಂದ ಪಾರಾಗಿ ಚಾಲುಕ್ಯ ರಾಜ್ಯವನ್ನು ಪುನಃ ಪ್ರತಿಷ್ಠಿಸುವೆನೆಂಬ ದೂರದ ಆಸೆಯೂ ಜಗದೇಕಮಲ್ಲನಿಗಿಲ್ಲವೆಂದು ಬಿಜ್ಜಳನಿಗೆ ದೃಢವಾಗಿತ್ತು. ಈ ಕಾರಣದಿಂದ ಜಗದೇಕಮಲ್ಲನನ್ನು ಸೆರೆಯಲ್ಲಿಟ್ಟಿದ್ದ ಅರಮನೆಯ ಕಟ್ಟುಕಾಯಿದೆಗಳು ಬಹುಮಟ್ಟಿಗೆ ಸಡಲಿಸಲ್ಪಟ್ಟಿದ್ದುವು.

ರಾಜಗೃಹದ ಮಹಾದ್ವಾರದಲ್ಲಿ ರಥ ನಿಂತಿತು. ನಾರಣಕ್ರಮಿತನು ಭಟನೊಬ್ಬನನ್ನು ಹತ್ತಿರ ಕರೆದು, "ಕರ್ಣದೇವರಸರು ಚಾವಡಿಯಲ್ಲಿರುವರೆ? ನಾವು ಅವರನ್ನು ನೋಡಬೇಕಾಗಿದೆ" ಎಂದನು.

ರಥದ ಅಚ್ಚುಕಟ್ಟು, ಒಳಗಿದ್ದವರ ಶ್ರೀಮಂತ ಉಡಿಗೆ ತೊಡಿಗೆಗಳು, ರಥಕ್ಕೆ ಕಟ್ಟಿದ್ದ ಜಾತಿ ಕುದುರೆಗಳ ಅಲಂಕಾರ, ಸಾರಥಿ ಕುಳಿತಿದ್ದ ಠೀವಿ, ಇವುಗಳನ್ನು ಕಂಡು ಬೆದರಿದ ಭಟನು, "ಹೆಗ್ಗಡೆಯನ್ನು ಕೆರಯುತ್ತೇನೆ," ಎಂದು ಒಳಗೆ ಹೋದನು.

ಕೊಂಚ ಹೊತ್ತಿನ ಮೇಲೆ ಚಾವಡಿಯ ಕರಣಿಕನು ರಥದ ಬಳಿಗೆ ಬಂದು, "ಸಂಜೆ ವೈಹಾಳಿಗೆ ಹೋದ ಕರ್ಣದೇವರಸರು ಇನ್ನೂ ಹಿಂದಿರುಗಿಲ್ಲ," ಎಂದು ಹೇಳಿದನು.

ನಗರದ ವಿಲಾಸ ಗೃಹವೊಂದರಲ್ಲಿ ಯಾವಳೋ ಶ್ರೀಮಂತ ಸಾಮಂತ ಪುತ್ರಿಯೊಡನೆ ಕರ್ಣದೇವನು ವಿಹರಿಸುತ್ತಿರುವನೆಂದೂ, ಸರಿರಾತ್ರಿಯವರೆಗೆ

ಅವನು ಹಿಂದಿರುಗುವುದಿಲ್ಲವೆಂದೂ ತಿಳಿದು ಕ್ರಮಿತನು, "ಕರ್ಣದೇವರಸರ ಪರೋಕ್ಷದಲ್ಲಿ ಅರಮನೆಯ ಮುಖ್ಯಾಧಿಕಾರಿ ಯಾರು?" ಎಂದು ಕೇಳಿದನು.

ಅಷ್ಟರಲ್ಲಿ ರಾಜಗೃಹದ ಮನೆಹೆಗ್ಗಡೆ ಅಲ್ಲಿಗೆ ಬಂದನು. ಅವನಿಗೆ ಕ್ರಮಿತನ ಪರಿಚಯವಿತ್ತು. ಸಮೀಪಕ್ಕೆ ಬಂದು ನಮಸ್ಕಾರಮಾಡಿ, "ಒಡೆಯರು ಒಳಗೆ ದಯಮಾಡಿಸಬೇಕು," ಎಂದು ಕ್ರಮಿತ ಅಗ್ಗಳರನ್ನು ಮಹಾದ್ವಾರದ ಪಾರ್ಶ್ವದಲ್ಲಿದ್ದ ಅತಿಥಿಶಾಲೆಗೆ ಕರೆದುಕೊಂಡು ಹೋಗಿ ಸುಖಾಸನಗಳ ಮೇಲೆ ಕುಳ್ಳಿರಿಸಿ, "ಒಡೆಯರು ದಯಮಾಡಿ ಕಾರ್ಯಾವಸರವನ್ನು ತಿಳಿಸಿದರೆ ನನ್ನಿಂದಾಗುವುದೇ ನೋಡುತ್ತೇನೆ," ಎಂದನು.

"ನಾವು ಮಹಾರಾಜ ಜಗದೇಕಮಲ್ಲರಸರ ದರ್ಶನಕ್ಕಾಗಿ ಬಂದಿದ್ದೇವೆ," ಎಂದು ಹೇಳಿ ನಾರಣಕ್ರಮಿತನು ಬಿಜ್ಜಳನ ಆಜ್ಞಾಪತ್ರವನ್ನು ಹೆಗ್ಗಡೆಗೆ ಕೊಟ್ಟನು.

ಹೆಗ್ಗಡೆ ದೀಪದ ಬೆಳಕಿನಲ್ಲಿ ಮೌನವಾಗಿ ಆಜ್ಞಾಪತ್ರವನ್ನು ಓದಿಕೊಂಡನು. "ಈ ಪತ್ರವನ್ನು ತರುವ ಪಂಡಿತ ಕವಿ ಅಗ್ಗಳದೇವರು ಮಹಾರಾಜ ಜಗದೇಕ ಮಲ್ಲರಸರ ಸಮ್ಮುಖದ ಕಾವ್ಯೋಪದೇಶಕರಾಗಿ ನಿಯಮಿಸಲ್ಪಟ್ಟಿದ್ದಾರೆ. ಅರಮನೆಯ ಅತಿಥಿಗೃಹದಲ್ಲಿ ಅವರ ಸುಖವಸತಿಗೆ ಏರ್ಪಡಿಸತಕ್ಕದ್ದು," ಎಂದು ಬರೆದಿತ್ತು.

ಹೆಗ್ಗಡೆ ಕಣ್ಣಂಚಿನಿಂದ ಅಗ್ಗಳನ ಆಕಾರೇಂಗಿತಗಳನ್ನು ಪರಿಶೀಲಿಸುತ್ತ ಕ್ರಮಿತನ ಕಡೆ ತಿರುಗಿ, "ಬೇಟೆಗೆ ಹೋಗಿದ್ದ ಪ್ರಭುಗಳು ಇಂದು ಮಧ್ಯಾಹ್ನ ಹಿಂದಿರುಗಿದರು. ಈಗ ಅವರು ವಿಶ್ರಮಿಸಿಕೊಳ್ಳುತ್ತಿದ್ದಾರೆ. ಯಾರನ್ನೂ ನೋಡುವುದಿಲ್ಲ," ಎಂದು ಹೇಳಿದನು.

"ಹಾಗಾದರೆ ನೀವು ಪಂಡಿತ ಅಗ್ಗಳದೇವರಿಗೆ ಈ ರಾತ್ರಿ ಇಲ್ಲಿಯೇ ಬಿಡಾರ ಮಾಡಲು ಏರ್ಪಡಿಸಬೇಕಾಗುವುದು. ನಾಳಿನ ಬೆಳಿಗ್ಗೆ ನಾನೇ ಬಂದು ಇವರಿಗೆ ಪ್ರಭುಗಳ ದರ್ಶನ ಮಾಡಿಸುತ್ತೇನೆ."

ಆಜ್ಞಾಪತ್ರದ ಒಕ್ಕಣೆಗೂ ಕ್ರಮಿತನು ಹೇಳಿದುದಕ್ಕೂ ಇದ್ದ ಅಂತರವನ್ನು ಗಮನಿಸಿ ಹೆಗ್ಗಡೆ, 'ಇದರಲ್ಲೇನೋ ರಹಸ್ಯವಿದೆ. ಯಥಾಕಾಲದಲ್ಲಿ ಅದು ಹೊರಗೆ ಬೀಳುವುದು' ಎಂದು ಭಾವಿಸಿ ಪ್ರಕಟವಾಗಿ, "ಆಜ್ಞಾಪತ್ರದಂತೆ ನಡೆಯುತ್ತೇನೆ" ಎಂದು ಹೇಳಿ ಹೊರಗೆ ಹೋದನು.

ಇದುವರೆಗೆ ಮೌನವಾಗಿ ಕುಳಿತಿದ್ದ ಅಗ್ಗಳನು ಕೋಪಗೊಂಡವನಂತೆ ಕ್ರಮಿತನನ್ನು ದುರದುರನೆ ನೋಡುತ್ತ, "ನಿಮ್ಮ ಉದ್ದೇಶವೇನು ಧರ್ಮಾಧಿಕಾರಿಗಳೇ? ನನ್ನನ್ನು ಇಲ್ಲಿ ಸೆರೆಯಿಡುವುದಕ್ಕಾಗಿ ಕರೆ ತಂದಿರಾ?" ಎಂದು ಕೇಳಿದನು.

ಕ್ರಮಿತನು ನಸು ನಕ್ಕು, "ಬಿಜ್ಜಳರಾಯರು ಹೇಳಿದುದು ನೆನಪಿದೆಯೆ?

ನೀವು ಎರಡು ದಿನಗಳು ಇಲ್ಲಿಯೇ ಇದ್ದು ಮಹಾರಾಜ ಜಗದೇಕಮಲ್ಲರಸರು ಪ್ರೇಮಾರ್ಣವನ ಪಟ್ಟಾಭಿಷೇಕಕ್ಕೆ ಒಪ್ಪುವಂತೆ ಮಾಡಬೇಕು ?" ಎಂದನು.

"ಈ ರಾತ್ರಿ ಹಿಂದಿರುಗಿ ನಾಳೆ ಪುನಃ ಬಂದರಾಗದೆ?"

ಕ್ರಮಿತನು ಯೋಚಿಸಿ ಉತ್ತರ ಕೊಟ್ಟನು : "ಚಾಲುಕ್ಯರಾಜ್ಯದ ಈಗಿನ ಆತಂಕಕಾರಿ ಪರಿಸ್ಥಿತಿಯಲ್ಲಿ ಜಗದೇಕಮಲ್ಲರಸರಿಗೂ ಹೊರಗಿನ ಜನರಿಗೂ ಯಾವ ಸಂಬಂಧವೂ ಇಲ್ಲದಂತೆ ನಾವು ಎಚ್ಚರದಿಂದ ನೋಡಿಕೊಳ್ಳಬೇಕಾಗಿದೆ. ಒಂದು ಸಾರಿ ಇಲ್ಲಿಗೆ ಬಂದವರು, ಬಂದ ಕೆಲಸ ಮುಗಿಯುವವರೆಗೆ ಹೊರಗೆ ಹೋಗುವಂತಿಲ್ಲ. ಅದು ರಾಜಗೃಹದಲ್ಲಿ ಅನುಸರಿಸುತ್ತಿರುವ ನಿಯಮ. ಜಗದೇಕಮಲ್ಲರಸರ ಅಭಿಪ್ರಾಯದಲ್ಲಿ ನಾವು ಅಪೇಕ್ಷಿಸುವ ಪರಿವರ್ತನೆ ಆಗುವವರೆಗೆ ನೀವು ಇಲ್ಲಿರಬೇಕಾಗುವುದು. ಈ ಎಲ್ಲ ವಿಚಾರಗಳನ್ನು ನಾನು ಮೊದಲೇ ಯೋಚಿಸಿ ಆಜ್ಞಾಪತ್ರವನ್ನು ಸಿದ್ಧಪಡಿಸಿಕೊಂಡು ನಿಮ್ಮ ಬಿಡಾರಕ್ಕೆ ಬಂದೆ. ನಿಮ್ಮನ್ನು ಇಲ್ಲಿಗೆ ಕರೆತರುವ ವಿಚಾರ ನಿಮಗಾಗಲಿ, ನಿಮ್ಮ ಮಿತ್ರ ಬ್ರಹ್ಮರಾಜಸೇಟರಿಗಾಗಲಿ ತಿಳಿಯಕೂಡದೆಂಬುದು ನನ್ನ ಉದ್ದೇಶವಾಗಿತ್ತು."

ಹಾಗಾದರೆ ಆಮೇಲೆ ನಡೆದ ಬಿಜ್ಜಳರಾಯರ ಸಂದರ್ಶನ, ನಿಮ್ಮ ಈ ನಾಟಕದ ಒಂದು ದೃಶ್ಯವೇ ಆಗಿರಬೇಕು"–ಅಗ್ಗಳನೆಂದನು, ನಿರಾಶೆಗೊಂಡವನಂತೆ ನಿಟ್ಟುಸಿರುಟ್ಟು.

"ಅದು ನಾಟಕದಲ್ಲಿ ಬಹು ಮುಖ್ಯವಾದ ಒಂದು ಭಾಗ, ಅಗ್ಗಳದೇವರಸರೆ. ನಿಜವಾದ ರಾಜನ ಪ್ರವೇಶ ಆ ದೃಶ್ಯದಲ್ಲಿಯೇ. ಉಳಿದ ಪಾತ್ರಗಳೆಲ್ಲ ವಂಚನೆಯ ಖೋಟಾನಾಣ್ಯಗಳಂತೆ. ಆದರೆ ಅದಕ್ಕಾಗಿ ನೀವು ಚಿಂತಿಸುವ ಅಗತ್ಯವಿಲ್ಲ. ಚಾಲುಕ್ಯ ರಾಣಿವಾಸದಂತೆ ನಿಮ್ಮ ಸುಖ ವಸತಿಗೆ ಬೇಕಾದ ವಸ್ತುಗಳೆಲ್ಲವೂ ಇಲ್ಲಿರುವವು."–ಉಪಹಾಸದ ದನಿಯಿಂದ ಕ್ರಮಿತನು ಹೇಳಿದನು.

"ಆಜ್ಞಾಪತ್ರದ ಒಕ್ಕಣೆಯೇನೆಂಬುದನ್ನು ನಾನು ತಿಳಿಯಬಹುದೆ?"

"ಪಂಡಿತಕವಿ ಅಗ್ಗಳದೇವರು ಮಹಾರಾಜ ಜಗದೇಕಮಲ್ಲರಸರ ಸಮ್ಮುಖದ ಕಾವ್ಯೋಪದೇಶಕರಾಗಿ ನಿಯುಕ್ತರಾಗಿದ್ದಾರೆ, ಅವರ ಸುಖ ವಸತಿಗೆ ಏರ್ಪಡಿಸತಕ್ಕದ್ದು ಎಂದು."

"ನಾನೇ ಚತುರನೆಂದು ತಿಳಿದಿದ್ದೆ, ನಾರಣ ಕ್ರಮಿತರೆ. ಆದರೆ ನಿಮ್ಮ ಚಾತುರ್ಯದ ಮುಂದೆ ನಾನು ಕೇವಲ ಶಿಶು. ಸಂತೋಷದಿಂದ ಸೋಲೊಪ್ಪಿಕೊಳ್ಳುತ್ತೇನೆ."

–ವಿಚಲಿತನಾದಂತೆ ಆವೇಶದಿಂದ ಅಗ್ಗಳನು ನುಡಿದನು.

"ಕೊನೆಯದಾಗಿ ನಿಮಗೆ ನನ್ನ ಹಿತವಚನವಿದು, ಅಗ್ಗಳದೇವರಸರೆ. ನೀವು ಮಹಾರಾಜ ಜಗದೇಕಮಲ್ಲರೊಡನೆ ಕಾವ್ಯ, ಅಲಂಕಾರ, ಧರ್ಮಶಾಸ್ತ್ರ, ಕಾಮ ಶಾಸ್ತ್ರ, ಶಿಲ್ಪ, ಸಂಗೀತ, ನಾಟ್ಯ, ಇವುಗಳ ವಿಚಾರದಲ್ಲಿ ಬೇಕಾದಹಾಗೆ ಮಾತಾಡಬಹುದು. ಆದರೆ ರಾಜಕೀಯ ವಿಚಾರಗಳನ್ನು ಪ್ರಸ್ತಾಪಿಸದಿದ್ದರೆ ಒಳ್ಳೆಯದು."

ಕ್ರಮಿತನು ಮಾತು ಮುಗಿಸುತ್ತಿದ್ದಂತೆ ಹೆಗ್ಗಡೆ ಪುನಃ ಬಂದು, "ಕಾವ್ಯೋಪದೇಶಕರ ಬಿಡಾರ ಸಿದ್ಧವಾಗಿದೆ," ಎಂದನು.

ಅಗ್ಗಳನಿಂದ ಬೀಳ್ಕೊಂಡು ಕ್ರಮಿತನು ಅಲ್ಲಿಂದ ಹೊರಟನು. ರಥವೇರುವ ಮೊದಲು ಹೆಗ್ಗಡೆಯೊಡನೆ ರಹಸ್ಯವಾಗಿ, "ಈ ಹೊಸ ಅತಿಥಿಯ ಬಗೆಗೆ ನೀವು ಬಹಳ ಎಚ್ಚರದಿಂದ ನೋಡಿಕೊಳ್ಳಬೇಕು. ಯಾವ ಕಾರಣದಿಂದಲೇ ಆಗಲಿ ಅವರು ಹೊರಗೆ ಹೋಗಲು ಅವಕಾಶಕೊಡಲಾಗದು. ಹೊರಗಿನವರೊಡನೆ ಮಾತಾಡುವ ಅಥವಾ ಸಂಬಂಧವಿಟ್ಟುಕೊಳ್ಳುವ ಅವಕಾಶವಿರಬಾರದು. ಉಳಿದೆಲ್ಲ ವಿಚಾರಗಳಲ್ಲಿ ಅವರ ಬಗ್ಗೆ ಗೌರವಸ್ಥ ಮಾನ್ಯ ಅತಿಥಿಯಂತೆ ನಡೆದುಕೊಳ್ಳತಕ್ಕದ್ದು," ಎಂದು ಹೇಳಲು ಮರೆಯಲಿಲ್ಲ.

ಚೆಲುವೆಯಾದ ಒಬ್ಬ ತರುಣದಾಸಿ, ಸುಸಜ್ಜಿತವಾದ ಎರಡು ಕೋಣೆಗಳು, ಅಗ್ಗಳನ ಸುಖ ವಸತಿಗೆ ಸಿದ್ಧವಾಗಿದ್ದವು. ದಾಸಿ ತಂದಿಟ್ಟ ಆಹಾರದ ತಟ್ಟೆಗಳಲ್ಲಿ ತನಗೆ ಬೇಕಾದುದನ್ನು ತಿಂದು ತಾಂಬೂಲ ಮೆಲ್ಲುತ್ತಾ ಅಗ್ಗಳನು ಅವಳನ್ನು ಕೇಳಿದನು :

"ಅರಮನೆಯಲ್ಲಿ ಪುಸ್ತಕ ಭಂಡಾರವಿದೆಯೆ ?"

"ಇದೆ, ಒಡೆಯರೆ. ಆದರೆ ಪ್ರಭುಗಳು ಆ ಕಡೆ ಹೋಗುವುದೂ ಇಲ್ಲ. ಹೆಗ್ಗಡೆ ಕೋಣೆಗೆ ಬೀಗಮುದ್ರೆ ಹಾಕಿದ್ದಾರೆ."

"ಅವರನ್ನು ಕೇಳಿ ಒಂದೆರಡು ಹೊತ್ತಿಗೆಗಳನ್ನು ತರುವ ಕೆಲಸ ನಿನ್ನಿಂದಾಗುವುದೆ?"

"ಈಗ ಅವರನ್ನು ಕೇಳಿದರೆ ರೇಗಿಬಿಡುತ್ತಾರೆ. ನನ್ನ ಹತ್ತಿರ ಎರಡು ಹೊತ್ತಿಗೆಗಳಿವೆ. ಅವುಗಳನ್ನು ತಂದುಕೊಡಲೆ?"

"ತೆಗೆದುಕೊಂಡು ಬಾ."

ದಾಸಿ ಹೊರಗೆ ಹೋಗಿ ಸ್ವಲ್ಪ ಹೊತ್ತಿನ ಮೇಲೆ ಎರಡು ಸಣ್ಣ ಹೊತ್ತಿಗೆಗಳನ್ನು ತಂದು ಕೊಟ್ಟಳು. ಒಂದು ಅಶ್ಲೀಲ ನಾಡಹಾಡುಗಳ ಸಂಗ್ರಹ ಇನ್ನೊಂದು ದಕ್ಷಿಣ ಭಾರತದ ಪ್ರಮುಖ ಕ್ಷೇತ್ರಗಳನ್ನು ಸರಳ ಗದ್ಯದಲ್ಲಿ ವಿವರಿಸುವ ಯಾತ್ರಾ ಪ್ರಬಂಧ.

ಅಗ್ಗಳನು ನಾಡಹಾಡುಗಳ ಸಂಗ್ರಹವನ್ನು ಕುರಿತು ಚಿಂತಿಸಿದನು : ಪ್ರಾತಃಕಾಲ

ಬಾಂಧವರ ಓಣಿಯಲ್ಲಿ ಕಲ್ಯಾಣದ ನಾಗರಿಕರು ಬಸವಣ್ಣನವರನ್ನು ಬೀಳ್ಕೊಂಡಾಗಿನ ದೃಶ್ಯ ಈಗಲೂ ಅವನ ಕಣ್ಣಿಗೆ ಕಟ್ಟಿದಂತಿತ್ತು. ಒಂದು ಕಡೆ ಬಸವಣ್ಣನವರು ಮತ್ತು ಗಂಗಾಬಿಕೆ, ಇನ್ನೊಂದು ಕಡೆ ಮಾರಯ್ಯನವರು ಮತ್ತು ರಾಣಿ ಮಹಾದೇವಿ, ಸುತ್ತ ಕಲ್ಯಾಣದ ನಾಗರಿಕರು, ಹಿನ್ನೆಲೆಯಲ್ಲಿ ಬಾಂಧವರ ಓಣಿಯ ಪ್ರಕೃತಿರಮ್ಯವಾದ ಮರ ಗಿಡಗಳು. ವಿದಗ್ಧನಾದ ಚಿತ್ರ ಶಿಲ್ಪಿ ರಚಿಸಿದ ಭವ್ಯ ಚಿತ್ರ ತನ್ನ ಕಣ್ಣೆದುರಿಗೆ ಜೀವತಳೆದಂತೆ ಅಗ್ಗಳನು ಭಾವಿಸಿದನು.

ಜಗದೇಕಮಲ್ಲನನ್ನು ನೋಡಲು ಬೊಮ್ಮರಸನು ಇದುವರೆಗೆ ಮಾಡಿದ ಪ್ರಯತ್ನಗಳೆಲ್ಲ ವಿಫಲವಾಗಿದ್ದವು. 'ಈಗ ಅವಕಾಶ ತಾನಾಗಿ ನನಗೆ ದೊರಕಿದೆ. ಕಾಮೇಶ್ವರಿಯ ಸಂಚಿಗೆ ಸಹಾಯಕವಾಗುವಂತೆ ಅದನ್ನು ಸದುಪಯೋಗಪಡಿಸಿಕೊಳ್ಳುವುದು ಹೇಗೆ?' ಎಂದು ಯೋಚಿಸುತ್ತ ಅಗ್ಗಳನು ರಾತ್ರಿಯನ್ನು ಕಳೆದನು.

* * *

ಮರುದಿನ ಬೆಳಗ್ಗೆ ಅವನಿಗೆ ಎಚ್ಚರವಾದಾಗ ತರುಣದಾಸಿ ತೊಡೆಯ ಮೇಲೆ ಕಾಡಿಗೆಯಿಂದ ಮಾಡಿದ್ದ ನಾಲ್ಕು ಬೆರಳು ಗುರುತುಗಳನ್ನು ನೀರಿನಿಂದ ತೊಳೆದು ಅಳಿಸುತ್ತಿದ್ದಳು.

ಅಗ್ಗಳನು ನಸು ನಕ್ಕು, "ಏನು ಮಾಡುತ್ತಿರುವೆ?" ಎಂದು ಕೇಳಿದನು.

"ನಿಮ್ಮ ತುಂಟತನದ ಗುರುತುಗಳನ್ನು ಅಳಿಸುತ್ತಿದ್ದೇನೆ." –ದಾಸಿ ಕಡೆ ನೋಟ ಬೀರಿ ಉತ್ತರ ಕೊಟ್ಟಳು.

"ಅಳಿಸಿದ ಮಾತ್ರಕ್ಕೆ ಹೋಗುವ ಗುರುತುಗಳೇ ಅವು?"

'ನಿಜ, ಹೋಗುವುದಿಲ್ಲ. ಆದರೆ ಪುನಃ ಗುರುತು ಮಾಡಲು ಹಲಗೆಯನ್ನು ತೊಳೆದು ಸಿದ್ಧಪಡಿಸಬೇಕಲ್ಲವೆ?"

"ಇನ್ನೆರಡು ದಿನಗಳು ಹಲಗೆ ಬಳಪಗಳನ್ನು ಮುಚ್ಚಿಟ್ಟು ಬರೆಯುವುದನ್ನೇ ನಿಲ್ಲಿಸಬೇಕೆಂದಿದ್ದೇನೆ."

"ನೀವು ನಿಲ್ಲಿಸಬಹುದು, ಆದರೆ ಹಲಗೆ ಬಳಪಗಳು ಯಾರ ಮಾತೂ ಕೇಳುವುದಿಲ್ಲ"–ಎಂದು ದಾಸಿ ಹೋಗುತ್ತಿದ್ದಂತೆ ಅಗ್ಗಳನು ಅವಳನ್ನು ಹತ್ತಿರ ಕರೆದು "ನಿನ್ನ ಹೆಸರೇನು ಚೆಲುವೆ?" ಎಂದು ಕೇಳಿದನು.

"ವಸಂತ."

"ವಸಂತ ಗಂಡು ಹೆಸರಾಯಿತು."

"ಆದರೆ ನಾನು ಹದಿನಾರು ಕಲೆಯ ಹೆಣ್ಣು. ಒರೆ ಹಚ್ಚಿ ನೋಡಿದರೆ,

ತಿಳಿಯುವುದು."

"ಸಂತೆಯಲ್ಲಿ ನೀನು ಮಾರಲು ತಂದಾಗ ಒರೆ ಹಚ್ಚಿ ನೋಡಿ ಒಪ್ಪಿಗೆಯಾದರೆ, ಕೊಂಡುಕೊಳ್ಳುತ್ತೇನೆ. ಈಗ ನಾನು ಹೇಳಿದಂತೆ ಮಾಡು."

"ಏನು ಮಾಡಬೇಕು?"

"ಮೊದಲು ಸ್ನಾನಕ್ಕೆ ಸಿದ್ಧಪಡಿಸು, ಆಮೇಲೆ ಉಪಾಹಾರ ತಂದುಕೊಡು, ಆಮೇಲೆ......"

"ಹೇಳಿರಿ ಒಡೆಯರೆ, ನಾನು ಕಿವಿಯರಳಿಸಿ ಕಾದಿದ್ದೇನೆ."

"ಹೆಗ್ಗಡೆಗೆ ಹೋಗಿ ಹೇಳು. ಧರ್ಮಾಧಿಕರಣದ ಒಬ್ಬ ಹಿರಿಯ ಅಧಿಕಾರಿ ನನ್ನನ್ನು ನೋಡಲು ಬರುತ್ತಾರೆ, ಅವರನ್ನು ಇಲ್ಲಿ ಕರೆತರಬೇಕೆಂದು."

"ಆಜ್ಞೆ", ಎಂದು ದಾಸಿ ಕುಣಿಯುತ್ತ ಕುಲುಕುತ್ತ ಹೋದಳು.

ಪ್ರಹರಾನಂತರ ಅಗ್ಗಳನು ಸ್ನಾನ ಉಪಾಹಾರಗಳನ್ನು ಮುಗಿಸಿ, ಕುಳಿತಿದ್ದಂತೆ ಮನೆಹೆಗ್ಗಡೆ ಕ್ರಮಿತನನ್ನು ಕರೆದುಕೊಂಡು ಅಲ್ಲಿಗೆ ಬಂದನು. ಸಂಗಡ ಇಬ್ಬರು ಸೇವಕರು ಪಾಂಥ ನಿವಾಸದಲ್ಲಿ ಬಿಟ್ಟಿದ್ದ ಅಗ್ಗಳನ ಉಡಿಗೆ ತೊಡಿಗೆ ಸಾಮಾನು ಸರಂಜಾಮುಗಳ ಗಂಟು ಮೂಟೆ ಪೆಟ್ಟಿಗೆಗಳನ್ನು ತಂದು ಕೋಣೆಯಲ್ಲಿಟ್ಟರು.

ಸೇವಕರು, ಮನೆ ಹೆಗ್ಗಡೆ ಹೊರಗೆ ಹೋದ ಮೇಲೆ ಅಗ್ಗಳನು, "ನನ್ನ ವಸ್ತುಗಳನ್ನು ತಂದು ಕೊಟ್ಟಿದ್ದಕ್ಕಾಗಿ ವಂದನೆಗಳು, ಕ್ರಮಿತರೆ," ಎಂದನು.

"ನಿಮ್ಮನ್ನು ಈ ಚಿನ್ನದ ಪಂಜರದಲ್ಲಿ ಕೂಡಿಟ್ಟವನು ನಾನು, ನಿಮ್ಮ ವಸ್ತುಗಳನ್ನು ತಂದುಕೊಡುವುದು ನನ್ನ ಕರ್ತವ್ಯವಾಗಿತ್ತು. ಅದನ್ನು ನೆರವೇರಿಸಿದ್ದೇನೆ. ಪ್ರಭುಗಳ ಸಮಯವನ್ನು ತಿಳಿದು ಹೆಗ್ಗಡೆ ಹಿಂದಿರುಗಲು ಹೆಚ್ಚು ಹೊತ್ತಾಗುತ್ತದೆ. ಅಷ್ಟರಲ್ಲಿ ನಿಮ್ಮ ಸಂಗಡ ಕೆಲವು ವಿಚಾರಗಳನ್ನು ಪ್ರಸ್ತಾಪಿಸಬೇಕಾಗಿದೆ."– ಕೋಣೆಯಲ್ಲಿದ್ದ ಸುಖಾಸನದಲ್ಲಿ ಕುಳಿತು ಕ್ರಮಿತನು ಹೇಳಿದನು.

"ನಾನು ಸಿದ್ಧವಾಗಿದ್ದೇನೆ."

"ಈಗ್ಗೆ ಆರು ವರ್ಷಗಳ ಮೊದಲು ಜಗದೇಕಮಲ್ಲರಸರು ನವರಾತ್ರಿಯಲ್ಲಿ ಸಿಂಹಾಸನಾರೋಹಣ ಮಾಡಿದ್ದು ನಿಮಗೆ ನೆನಪಿದೆಯೆ?"

"ಆಗ ನಾನು ಸ್ವಸ್ಥಳವಾದ ಇಂಗಳೇಶ್ವರದಲ್ಲಿದ್ದೆ. ಜನರಿಂದ ಆ ವಿಚಾರ ಕೇಳಿದ್ದೇನೆ."

"ಪಟ್ಟಾಭಿಷೇಕವಾದ ಮೇಲೆ ಮಹಾರಾಜರು ನವರಾತ್ರಿಯಲ್ಲಿ ಅದೇ ಮೊದಲಸಾರಿ ಸಭೆ ನಡಸಿದರು. ದುರ್ದೈವದಿಂದ ಅದೇ ಕೊನೆಯ ಸಾರಿಯೂ ಆಯಿತು. ಈ ಆರು ವರ್ಷಗಳಲ್ಲಿ ಒಂದು ಸಾರಿಯೂ ಅವರು ಸಿಂಹಾಸನದ

ಮೇಲೆ ಕುಳಿತು ಪ್ರಜೆಗಳಿಗೆ ದರ್ಶನ ಕೊಡಲಿಲ್ಲ. ಅದಕ್ಕೊಂದು ವಿಶೇಷ ಕಾರಣವಿದೆ. ನವರಾತ್ರಿ ಮುಗಿದ ಕೆಲವು ದಿನಗಳ ಮೇಲೆ ಅವರು ಅಸ್ವಸ್ಥರಾದರು. ವೈದ್ಯರು ನಡೆಸಿದ ಚಿಕಿತ್ಸೆ ಇದುವರೆಗೆ ವಿಫಲವಾಗಿದೆ. ಪ್ರಭುಗಳು ಈಗಲೂ ಅದೇ ಸ್ಥಿತಿಯಲ್ಲಿದ್ದಾರೆ."

"ಅದೇ ಸ್ಥಿತಿಯೆಂದರೆ? ರೋಗವೇನೆಂಬುದನ್ನು ತಿಳಿಯಲು ವೈದ್ಯರು ಅಸಮರ್ಥರಾದರೆ?"

"ರೋಗದ ಲಕ್ಷಣಗಳು ವಿಚಿತ್ರವಾದ್ದರಿಂದ ವೈದ್ಯರು ಯಾವುದನ್ನೂ ಗೊತ್ತಾಗಿ ಹೇಳುವುದಿಲ್ಲ."

"ಲಕ್ಷಣಗಳೇನು?"

"ಒಂದೊಂದು ಸಾರಿ ಪ್ರಭುಗಳು ಮತಿಭ್ರಮಣೆಯಾದವರಂತೆ ನಡೆದುಕೊಳ್ಳುತ್ತಾರೆ. ತಮ್ಮ ಗೌರವ ಅಂತಸ್ತುಗಳನ್ನು ಮರೆತು ಮಕ್ಕಳಂತೆ ಆಡುತ್ತಾರೆ. ಸಂದರ್ಶನ ಕಾಲದಲ್ಲಿ ನೀವು ಅದೊಂದನ್ನೂ ಗಮನಿಸದವರಂತೆ ನಡೆದುಕೊಳ್ಳಬೇಕು. ನೀವು ಗಮನಿಸುತ್ತಿರುವಿರೆಂದು ಸಂದೇಹವಾದರೂ ಪ್ರಭುಗಳು ರೇಗಿಬಿಡುತ್ತಾರೆ. ಈ ವಿಚಾರ ನಿಮಗೆ ಮೊದಲೇ ಎಚ್ಚರಿಕೆ ಕೊಡುವುದು ನನ್ನ ಕರ್ತವ್ಯ."

ಅಗ್ಗಳನು ನಕ್ಕು, "ಧರ್ಮಾಧಿಕಾರಿಗಳು ನನ್ನ ವಿಚಾರದಲ್ಲಿ ನಿಶ್ಚಿಂತರಾಗ ಬಹುದು. ರಾಜವಂಶೀಯರ ಸಮ್ಮುಖದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ನನಗೆ ಚೆನ್ನಾಗಿ ತಿಳಿದಿದೆ. ರಾಜಾಂತಃಪುರಗಳನ್ನ ಅನುಭವದಿಂದ ರಾಜವಂಶೀಯರ ಬಗೆಗೆ ಒಂದು ನಿರ್ಧಾರಕ್ಕೆ ಬಂದಿದ್ದೇನೆ," ಎಂದನು.

ಕ್ರಮಿತನ ಕುತೂಹಲ ಕೆರಳಿತು. "ನಿಮ್ಮ ನಿರ್ಧಾರವೇನು?" ಎಂದು ಕೇಳಿದನು.

"ರಾಜಾಂತಃಪುರದ ಸ್ತ್ರೀಯರಲ್ಲಿ ನೂರಕ್ಕೆ ತೊಂಭತ್ತು ಜನ ಅಕ್ಕಳೆಯರು. ರಾಜವಂಶೀಯರಾದ ಪುರುಷರು ಸಾಮಾನ್ಯವಾಗಿ ತಿಳಿಗೇಡಿಗಳು, ಇಲ್ಲವೇ ವಿಷಯಾಸಕ್ತರು."

"ಅಕ್ಕಳೆಯರೆಂದರೆ?"

"ಗಣಿಕೆಯರಂತೆ ನಡೆದುಕೊಳ್ಳುವ ಕುಲೀನ ಮಹಿಳೆಯರು. ಪಂಪ ಮಹಾಕವಿ ಅವರ ವಿಚಾರ ಸ್ವಾರಸ್ಯವಾಗಿ ವರ್ಣಿಸಿದ್ದಾನೆ. ನಯ ನೋಟ ಕೂಟಗಳಂತೆ ದಿಟ್ಟತನ ಮೆಲ್ನುಡಿ ವಿಭ್ರಮ ವಿಲಾಸಗಳಲ್ಲಿ ಆ ಕುಲೀನ ಸ್ವೈರಿಣಿಯರು ಜಾತಿ ಸೂಳೆಯರನ್ನು ಮೀರಿಸುವರೆಂದು ಅವನ ಅಭಿಪ್ರಾಯ."

ಅಗ್ಗಳನ ಬಿಚ್ಚುಮನದ ನುಡಿಗಳನ್ನು ಕೇಳಿ ಕ್ರಮಿತನು ಬೆಬ್ಬೆರಗಾದನು.

ಅಪ್ರಿಯ ನಿಷ್ಠುರ ಸತ್ಯವನ್ನು ನಿರ್ಭಯವಾಗಿ ಹೇಳುವವರು ಜಗತ್ತಿನಲ್ಲಿ ವಿರಳರೆಂಬುದು ಅವನಿಗೆ ತಿಳಿದಿತ್ತು. ಕೊಂಚ ಹೊತ್ತು ಯೋಚಿಸುತ್ತ ಸುಮ್ಮನೆ ಕುಳಿತಿದ್ದು ಬಳಿಕ, "ನಿಮ್ಮ ಅಭಿಪ್ರಾಯ ಕ್ರಾಂತಿಕರವಾಗಿದೆ, ಅಗ್ಗಳ ದೇವರಸರೆ. ಆದರೆ ಚಾಲುಕ್ಯರಾಜ್ಯದ ದುರಾದೃಷ್ಟ ! ಇಂತಹ ಸ್ತ್ರೀಪುರುಷರೇ ಈಗ ನಮ್ಮ ಆಳರಸರು!" ಎಂದನು.

"ಬಿಜ್ಜಳರಾಯರಂತಹ ರಾಜಕಾರಣ ಪಟು, ಆಡಳಿತ ದಕ್ಷ, ಸರ್ವಾಧಿಕಾರಿ ಮಹಾಮಾಂಡಲೇಶ್ವರರನ್ನು ಪಡೆದಿರುವುದು ಚಾಲುಕ್ಯರಾಜ್ಯದ ಅದೃಷ್ಟವಲ್ಲವೆ?"– ಅಗ್ಗಳನೆಂದನು.

ಕ್ರಮಿತನು ಅಚ್ಚರಿಯಿಂದ, "ಹಾಗಾದರೆ ಬಿಜ್ಜಳರಾಯರು ಚಾಲುಕ್ಯ ರಾಜ್ಯವನ್ನು ಅಪಹರಿಸಿದರೆಂದು ತೆಗಳುವ ಸಾಮಂತರ ಅಭಿಪ್ರಾಯವನ್ನು ನೀವು ಒಪ್ಪುವುದಿಲ್ಲವೆ?" ಎಂದನು.

"ಬಿಜ್ಜಳರಾಯರು ಸ್ವಸಾಮರ್ಥ್ಯದಿಂದ ರಾಜ್ಯದ ಆಡಳಿತವನ್ನು ಸ್ವಾಧೀನ ಪಡಿಸಿಕೊಳ್ಳದೆ ಹೋಗಿದ್ದರೆ, ಇಷ್ಟು ದಿನಕ್ಕೆ ಚಾಲುಕ್ಯರಾಜ್ಯ ಅನಾಯಕವಾಗುತ್ತಿತ್ತು. ಹೇಳ ಹೆಸರಿಲ್ಲದೆ ಹೋಗುತ್ತಿತ್ತು. ಬಿಜ್ಜಳರಾಯರು ದೇಶವನ್ನು ಆ ವಿಪತ್ತಿನಿಂದ ರಕ್ಷಿಸಿದರು. ಅದಕ್ಕಾಗಿ ಜನರು ಅವರಿಗೆ ಕೃತಜ್ಞರಾಗಿರಬೇಕು."

ಅಗ್ಗಳನ ನುಡಿಗಳಲ್ಲಿ ಆವೇಶ ದೃಢತೆಗಳು ಎದ್ದು ಕಾಣುತ್ತಿದ್ದವು. ಇಂತಹ ಪ್ರಭುನಿಷ್ಠ ಪಂಡಿತನನ್ನು ನಾನು ಸರಿಯಾಗಿ ತಿಳಿದುಕೊಳ್ಳಲಾರದೆ ಬಿಜ್ಜಳರಾಯರ ಹತ್ತಿರ ದೂರಿದೆನಲ್ಲಾ ಎಂದು ಕ್ರಮಿತನು ಮನದಲ್ಲಿ ಮರುಗಿದನು.

ಈ ಮಾತುಗಳು ನಡೆಯುತ್ತಿದ್ದಂತೆ ಮನೆ ಹೆಗ್ಗಡೆ ಅಲ್ಲಿಗೆ ಬಂದು "ಪ್ರಭುಗಳು ಓಲಗಶಾಲೆಯಲ್ಲಿದ್ದಾರೆ. ದಯಮಾಡಿಸಬೇಕು," ಎಂದು ಅವರನ್ನು ಕರೆದುಕೊಂಡು ಅವರು ಓಲಗ ಶಾಲೆಗೆ ಬಂದಾಗ ಅಂಗಣದಲ್ಲಿ ಕರ್ಣದೇವರಸನು ತನ್ನ ಅಧೀನರಾದ ಸೈನ್ಯನಾಯಕರೊಡನೆ ಮಾತಾಡುತ್ತ ನಿಂತಿದ್ದನು. ಕ್ರಮಿತನನ್ನು ಕಂಡಕೂಡಲೆ ಅವನು, "ನೀವು ಆಗಲೇ ಬಂದುದಾಗಿ ಹೆಗ್ಗಡೆ ಹೇಳಿದನು. ಇದುವರೆಗೆ ಎಲ್ಲಿದ್ದಿರಿ? ಸಂಗಡವಿರುವ ಇವರಾರು ? ಬಂದ ಕಾರ್ಯವೇನು?" ಎಂದು ಪ್ರಶ್ನೆಗಳ ಮಳೆ ಸುರಿಸಿದನು.

"ಅರಸರು ಒಂದೇ ಉಸಿರಲ್ಲಿ, ಇಷ್ಟೆಲ್ಲ ಕೇಳಿದರೆ ಉತ್ತರಕೊಡುವುದು ಹೇಗೆ ? ಇವರು ಮಹಾರಾಜರ ಹೊಸ ಕಾವ್ಯೋಪದೇಶಕ, ಹೆಸರು ಪಂಡಿತ ಕವಿ ಅಗ್ಗಳದೇವ ಎಂದು. ಪ್ರಭುಗಳಿಗೆ ಇವರ ಪರಿಚಯ ಮಾಡಿಸುವುದಕ್ಕಾಗಿ ಬಂದಿದ್ದೇನೆ." ಎಂದು ಕ್ರಮಿತನು ಉತ್ತರ ಕೊಟ್ಟನು.

ಬಿಜ್ಜಳನ ಸಹೋದರನಿಗೆ ಸಹಜವಾದ ದರ್ಪದಿಂದ ಕರ್ಣದೇವನು ಅಗ್ಗಳನನ್ನು ತಲೆಯಿಂದ ಕಾಲವರೆಗೆ ನಿಟ್ಟಿಸಿ, "ಅಗ್ಗಳದೇವ ! ಎಲ್ಲಿಯೋ ಕೇಳಿದ ಹಾಗಿದೆ ಹೆಸರು !" ಎಂದನು.

"ಇದುವರೆಗೆ ಇವರು ಚಾಲುಕ್ಯ ಮಹಾರಾಣಿ ಕಾಮೇಶ್ವರೀ ದೇವಿಯವರ ಮನೆ ಹೆಗ್ಗಡೆಯಾಗಿದ್ದರು. ಈಗ ಜಗದೇಕಮಲ್ಲರ ಕಾವ್ಯೋಪದೇಶಕರಾಗಿ ಬಂದಿದ್ದಾರೆ."

"ಇವರ ಕೆಲಸ?"

"ಹೆಸರೇ ಕೆಲಸವನ್ನು ಹೇಳುವುದಲ್ಲವೆ ? ಮಹಾರಾಜರೆದುರಿಗೆ ಕಾವ್ಯ ನಾಟಕಗಳನ್ನು ಪಠಿಸಿ ಅರ್ಥ ಹೇಳುವುದು."

ಕರ್ಣದೇವನ ಮುಖ ಗಂಭೀರವಾಯಿತು. "ಎಂದಿನಿಂದ ಮಹಾರಾಜರ ಈ ಕಾವ್ಯಾಸಕ್ತಿ ? ಆ ವಿಚಾರ ಅಣ್ಣನವರಿಗೆ ವರದಿ ಮಾಡಿದವರಾರು ?" ಎಂದು ಚಡಪಡಿಸಿದನು. ಈ ಅವಿನಯದ ಪ್ರಶ್ನೆಗಳಿಗೆ ಉತ್ತರ ಕೊಡುವುದು ಧರ್ಮಾಧಿಕಾರಿಯ ಕೆಲಸವಲ್ಲವೆಂದು ಭಾವಿಸಿ ಕ್ರಮಿತನು ಮೌನವಾಗಿದ್ದನು.

ಕೊಂಚ ಹೊತ್ತಿನ ಮೇಲೆ ಕರ್ಣದೇವನು ಪುನಃ ಹೇಳಿದನು : "ಆ ಚಪಲ ಹೆಣ್ಣಿನ ಸೇವೆ ಮಾಡಲಾರದೆ ಇವರೇ ಅಣ್ಣನವರನ್ನು ಆಶ್ರಯಿಸಿರಬೇಕು. ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವುದರಲ್ಲಿ ತಮ್ಮ ಬುದ್ಧಿಯೆಲ್ಲವನ್ನು ಉಪಯೋಗಿಸುತ್ತಿದ್ದಾರೆ ಅಣ್ಣನವರು."

ಬಿಜ್ಜಳನ ಮೇಲೆ ಕರ್ಣದೇವನ ಅಸಮಾಧಾನಕ್ಕೆ ತಾನು ಅಪೇಕ್ಷಿಸಿದ ಯುವರಾಜ ಪದವಿ ದೊರಕದಿದ್ದುದು ಕಾರಣವೆಂದು ಕ್ರಮಿತನು ತಿಳಿದಿದ್ದನು. ಅನುನಯದ ಮೃದುಕಂಠದಿಂದ, "ಈ ಸಾಮಾನ್ಯ ವಿಚಾರಕ್ಕೆ ನೀವು ಇಷ್ಟೊಂದು ಕೋಪಮಾಡಬಾರದು, ಕರ್ಣದೇವರಸರೆ. ಬಸವಣ್ಣನವರ ನಿರ್ವಾಸನದಿಂದ ಬಿಜ್ಜಳರಾಯರ ಮನಸ್ಸು ಕೆಟ್ಟಿದೆ. ಎರಡು ದಿನ ಕಳೆಯಲಿ, ನಾನು ಎಲ್ಲವನ್ನು ಸರಿಪಡಿಸುತ್ತೇನೆ. ನಿಮ್ಮ ಸಲಹೆಯಿಲ್ಲದೆ ರಾಜಗೃಹದಲ್ಲಿ ಯಾವ ಕಾರ್ಯವೂ ನಡೆಯದಂತೆ ಏರ್ಪಡಿಸುತ್ತೇನೆ.," ಎಂದು ಸಮಾಧಾನ ಹೇಳಿದನು.

ತನ್ನ ವಿಷಯವಾಗಿ ಈ ಮಾತುಗಳು ನಡೆಯುತ್ತಿದ್ದಂತೆ ಅಗ್ಗಳನು ಉದಾಸೀನನಂತೆ ಓಲಗಶಾಲೆಯ ಬಾಗಿಲನ್ನು ನೋಡುತ್ತ ನಿಂತಿದ್ದನು. ಕರ್ಣದೇವನ ಉದ್ಧಟವರ್ತನೆಯ ವಿಚಾರ ಅವನು ಕೇಳಿದ್ದನು. ಒಂದು ಸಾರಿ ಸಾಮಂತರ ಸಭೆಯಲ್ಲಿ ಕರ್ಣದೇವನು ಕಾಮೇಶ್ವರಿಯ ಬಗೆಗೆ ಕುಚೋದ್ಯದ ಮಾತಾಡಿ ಬಿಜ್ಜಳನಿಂದ ಬೈಗುಳ ತಿಂದಿದ್ದನೆಂದು ಜನ ಹೇಳುತ್ತಿದ್ದುದು ಅಗ್ಗಳನಿಗೆ ತಿಳಿದಿತ್ತು.

"ಅದೇನೇ ಇರಲಿ, ನಾನು ಇಲ್ಲಿರುವವರೆಗೆ ಅವನ ವಿಚಾರದಲ್ಲಿ ಎಚ್ಚರದಿಂದ ನಡೆದುಕೊಳ್ಳಬೇಕು." ಎಂದು ಅಗ್ಗಳನು ತನ್ನಲ್ಲಿ ತಾನು ನಿರ್ಧರಿಸಿಕೊಂಡನು.

ಆಗ ಹೆಗ್ಗಡೆ ಅಲ್ಲಿಗೆ ಬಂದು ಕ್ರಮಿತ ಅಗ್ಗಳರನ್ನು ಓಲಗ ಶಾಲೆಗೆ ಕರೆದುಕೊಂಡು ಹೋದನು. ತಟ್ಟನೆ ಸಭೆಯಲ್ಲಿ ತನ್ನ ಕರ್ತವ್ಯದ ನೆನಪಾಗಿ ಕರ್ಣದೇವನು ಅವರ ಹಿಂದೆ ಹೋದನು.

ರಾಜಗೃಹದ ಓಲಗ ಶಾಲೆ ಚಾಲುಕ್ಯ ಮಾದರಿಯ ಒಂದು ಸುಂದರ ಕಟ್ಟಡ. ಗೋಡೆ ಕಂಭಗಳಲ್ಲಿ ಮಾನವಾಕಾರದ ಸುಂದರ ಪ್ರತಿಮೆಗಳು, ಕೊರೆದು ಮಾಡಿದ ವಾತಾಯನ ಜಾಲಂದ್ರಗಳು, ಸೂರಿನಲ್ಲಿ ಮದನಿಕಾ ವಿಗ್ರಹಗಳು, ಕುಸುರಿ ಕೆಲಸದ ಭುವನೇಶ್ವರಿ, ಇವುಗಳಿಂದ ಭವ್ಯವಾದ ಅಂತಹ ಸುಂದರ ಸಭಾಭವನ ಕಲ್ಯಾಣದ ಇನ್ನಾವ ಅರಮನೆಯಲ್ಲಿಯೂ ಇರಲಿಲ್ಲ. ನಡುವೆ ದುಂಡಾಗಿ ಕಟ್ಟಿದ ವೇದಿಕೆಯ ಮೇಲೆ ಚಾಲುಕ್ಯ ಸಿಂಹಾಸನ.

ಬಾಗಿಲುಗಳಲ್ಲಿ ಬಿಚ್ಚುಕತ್ತಿಯ ಪಹರೆ ಇತ್ತು. ಒಳಗೆ ಬೆಳ್ಳಿಯ ಕೋಲುಗಳನ್ನು ಹಿಡಿದ ಪಸಾಯಿತರು. ವಿಚಿತ್ರ ಉಡಿಗೆಗಳನ್ನು ಧರಿಸಿದ ಭಟ್ಟಂಗಿಗಳು, ಕವಿ ಗಾಯಕ ಸ್ತುತಿಪಾಠಕರು. ಪುರೋಹಿತ ನೈಮಿತ್ತಿಕ ಶಾಸ್ತ್ರಿ ಪಂಡಿತ ಪೌರಾಣಿಕರು, ತಮ್ಮ ತಮ್ಮ ಸ್ಥಾನಗಳಲ್ಲಿ ಸಾಲುಗಟ್ಟಿ ನಿಂತಿದ್ದರು. ಸಭೆಯಲ್ಲಿ ರಾಜಾಗಮನವನ್ನು ಸೂಚಿಸುವ ಗಂಭೀರ ಮೌನ. ವಂದಿಮಾಗಧರು ಉಗ್ಗಡಿಸಿದರು :

ಸ್ವಸ್ತಿ ಸಮಸ್ತ ಭುವನಾಶ್ರಯ, ಪೃಥ್ವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಪರಮ ಭಟ್ಟಾರಕ, ಸತ್ಯಾಶ್ರಯ ಕುಲತಿಲಕ, ಚಾಲುಕ್ಯಾಭರಣ, ಮಲ್ಲಿಕಾಮೋದ, ಮಾರ್ಪಡಿ ಭೀಮ, ರಾಯಗಜಕೇಸರಿ, ಗಂಡರೊಳು ಗಂಡ, ಗಂಡಬಂಗಾರ, ಚೋಳಾಗ್ರ ಕಾಲಾನಲ, ಚೋಳಬಂಡನಾಪೇಕ್ಷ ವಿದಗ್ಧರಾಯ, ಪ್ರತಾಪಾದಿತ್ಯ, ತೇಜೋಮಾರ್ತಂಡ, ಶೌರ್ಯನಾರಾಯಣ, ಚೌಹ್ಹಾನ ಸಹಸ್ರ ಬಾಹು, ರಾಯ ಜಗಝಂಪ ಕೀರ್ತಿ, ಚಾಲುಕ್ಯವಂಶೋದ್ಭವ ಶ್ರೀಮತ್ ಜಗದೇಕಮಲ್ಲ ಮಹಾರಾಜ ಬಹು ಪರಾಕ್ !

ಪ್ರತಿಹಾರಿ ಮುಂದೆ ನಡೆದು ದಾರಿ ತೋರುತ್ತಿರಲು ಜಗದೇಕಮಲ್ಲನು ಓಲಗಶಾಲೆಗೆ ಬಂದನು. ಪ್ರಧಾನ ನರ್ತಕಿ ಗಾಯಕಿ ಸಖಿ ಸವತಿ ಸೂಳೆ ಮೊದಲಾದ ಗಣಿಕಾವಾಸದ ಹೆಗ್ಗಡತಿಯರು ಹಿಂದಿದ್ದರು. ಅವರ ವಿಚಿತ್ರ ಭೂಷಣ ವಿಲಾಸಗಳೂ ಎಲ್ಲರ ಕಣ್ಮನಗಳನ್ನು ಸೆಳೆದವು.

ಈ ಪರಿವಾರದ ನಡುವೆ ಜಗದೇಕಮಲ್ಲನು ಸೊಕ್ಕೇರಿದ ಮದ್ದಾನೆಯಂತೆ ಜಗ್ಗುಹಾಕಿ ನಡೆಯುತ್ತಿದ್ದನು. ಮಧುಪಾನದಿಂದ ಕಣ್ಣುಗಳು ಕೆಂಪೇರಿದ್ದವು. ತೊಟ್ಟಿದ್ದ

ನಿಲುವಂಗಿ ಚಲ್ಲಣಗಳು ನಲುಗಿ ಅಂದಗೆಟ್ಟಿತ್ತು. ರತ್ನಕಂಠಿಕೆ ತಿರುಗು ಮುರುಗಾಗಿ, ರಾಜ ಮಕುಟ ಕೊಂಚ ಓರೆಯಾಗಿತ್ತು. ಪ್ರಭುಗಳನ್ನು ವೇದಿಕೆಯೇರಿಸುವ ನೆವದಲ್ಲಿ ಮನೆ ಹೆಗ್ಗಡೆ ಹತ್ತಿರ ಹೋಗಿ ಸರಿಪಡಿಸಿದನು. ಆದರೆ ಸಭಾಸದರು ಇವುಗಳೊಂದನ್ನೂ ಗಮನಿಸಲಿಲ್ಲ; ಕಂಡೂ ಕಾಣದಂತೆ ಮೌನವಾಗಿದ್ದರು ಅವರು. ಅರಸನು ಸಿಂಹಾಸನದಲ್ಲಿ ಹಿಂದುಮುಂದಾಗಿ ಕುಳಿತರೂ ಸರಿಯೆಂದು ನಮಸ್ಕಾರ ಮಾಡುವುದು ಆ ಕಾಲಕ್ಕೆ ರಾಜಸಭೆಯ ಸಂಪ್ರದಾಯವಾಗಿತ್ತು.

ಹೆಗ್ಗಡತಿಯರು ಆರತಿ ಬೆಳಗಿ, ಪುರೋಹಿತರು ರಾಜಾಶೀರ್ವಾದ ಮಾಡಿದ ಮೇಲೆ ನಾರಣಕ್ರಮಿತನು ಸಿಂಹಾಸನದ ಬಳಿಗೆ ಹೋಗಿ, "ಪ್ರಭುಗಳ ಅಪೇಕ್ಷೆಯಂತೆ ಕಾವ್ಯೋಪದೇಶಕನನ್ನು ಕರೆದುಕೊಂಡು ಬಂದಿದ್ದೇನೆ," ಎಂದನು.

ಜಗದೇಕಮಲ್ಲನು ಮನೆಹೆಗ್ಗಡೆಯ ಮುಖ ನೋಡಿದನು. ಮನೆಹೆಗ್ಗಡೆ ಕರ್ಣದೇವನ ಮುಖ ನೋಡಿದನು. ಕರ್ಣದೇವನು ಕ್ರಮಿತನ ಕಡೆ ತಿರುಗಿ ತಲೆ ಯಾಡಿಸಿದನು. ಅಗ್ಗಳನಿಗೆ ಅರ್ಥವಾಯಿತು, ರಾಜಗೃಹದ ಆಡಳಿತ ಯಾರ ಕೈಯಲ್ಲಿದೆಯೆಂದು.

ಈ ಮೂಕಾಭಿನಯ ಮುಗಿದ ಮೇಲೆ ಅಗ್ಗಳನನ್ನು ಹತ್ತಿರ ಕರೆದು ಸಿಂಹಾಸನದ ಮುಂದೆ ನಿಲ್ಲಿಸಿ ಕ್ರಮಿತನು, "ಪಂಡಿತ ಕವಿ ಅಗ್ಗಳದೇವನು ವಂದಿಸುವನು," ಎಂದು ಹೇಳಿದನು. ಅಗ್ಗಳನು ಕೈಯೆತ್ತಿ ನಮಸ್ಕಾರಮಾಡಿ ಆಸ್ಥಾನಪದ್ಧತಿಯಂತೆ ಆಶು ಪದ್ಯವೊಂದನ್ನು ಪಠಿಸಿದನು. ಮಾಗಧರು ಉಗ್ಗಡಿಸಿದ ಬಿರುದಾವಳಿ ಅವನಿಗೆ ಸ್ಫೂರ್ತಿ ಕೊಟ್ಟಿತು.

ಜಗದೇಕ, ಜಗಕ್ಕನೇಕ,
ಜಗದಲ, ಜಗದೇಕಮಲ್ಲ, ಜಗದ್ವಿಶಾಲಾ ।
ಜುಗ ಜುಗ ಜಗ ಝುಂಪನ. ಜಯ ।
ಜಗದೇವ. ಚಲುಕ್ಯರಾಜ್ಯ ಕರ್ಣಾಭರಣಾ ॥

ಅಗ್ಗಳನು ಗಮಕ ಸಂಗೀತಗಳನ್ನು ಅಭ್ಯಾಸ ಮಾಡಿದ್ದನು. ದೈವದತ್ತವಾದ ಮಧುರಕಂಠವಿತ್ತು. ಪದ್ಯದ ನುಡಿಗಳನ್ನು ಎಳೆದು ಅಳೆದು, ತಿರುವಿ ತೂಗಿ, ಅಲ್ಲಲ್ಲಿ ರಾಗಾಲಾಪಗಳನ್ನು ಸೇರಿಸಿ ಕೇಳುವವರು ತಲೆದೂಗುವಂತೆ ಅವನು ಪದ್ಯವನ್ನು ಹಾಡಿದನು. ಸಿಂಹಾಸನದ ತಲೆಹೊತ್ತಿಗೆ ಒರಗಿ ಕುಳಿತು ಅರೆಮುಚ್ಚಿದ ಕಣ್ಣುಗಳಿಂದ ಹೆಗ್ಗಡತಿಯರ ಹಾವಭಾವಗಳನ್ನು ಹೊಂಚಿ ನೋಡುತ್ತಿದ್ದ ಜಗದೇಕಮಲ್ಲನು ಕಿವಿ ನಿಮಿರಿ ತಲೆಯೆತ್ತಿ ಪದ್ಯವನ್ನು ಕೇಳಿದನು.

ಮನೆಹೆಗ್ಗಡೆ ಅಚ್ಚರಿಯಿಂದ, "ನಿಮ್ಮ ಕಾವ್ಯೋಪದೇಶಿ ಸಂಗೀತಗಾರನೆಂದು ತಿಳಿದಿದ್ದರೆ ವಾದ್ಯಗಳನ್ನು ತರಿಸುತ್ತಿದ್ದೆ, ಕ್ರಮಿತರೆ," ಎಂದನು.

ಕರ್ಣದೇವನು ಮೆಚ್ಚಿ ತಲೆದೂಗಿ, "ಸಂಗೀತಗಾರನಷ್ಟೇ ಅಲ್ಲ. ಚತುರ ಕವಿ," ಎಂದನು. ಸ್ತುತಿಯ ನೆವದಲ್ಲಿ "ಚಲುಕ್ಯಕರ್ಣಾಭರಣ" ಎಂದು ಅಗ್ಗಳನು ತನ್ನನ್ನು ಹೊಗಳಿದನೆಂದು ಭಾವಿಸಿ ಅವನು ಮನದಲ್ಲಿ ಹಿಗ್ಗಿದನು.

ಸಂದರ್ಶನ ಅನಿರೀಕ್ಷಿತವಾದ ಬೇರೆ ದಾರಿ ಹಿಡಿಯಿತೆಂದು ಕ್ರಮಿತನಿಗೆ ಸ್ವಲ್ಪ ಅಸಮಾಧಾನವಾದರೂ ಅಗ್ಗಳನಿಗೆ ದೊರೆತ ವಿಜಯಕ್ಕಾಗಿ ಆನಂದಿಸಿದನು. ಕವಿಗಾಯಕ ಪುರೋಹಿತ ಪೌರಾಣಿಕರು ಕರುಬಿದರು. ಒತ್ತೆಕೊಟ್ಟ ವೃದ್ಧನು ತಟ್ಟನೆ ತರುಣನಾದಂತೆ ಹೆಗ್ಗಡತಿಯರು ತಳುಕಿ ಬಳುಕಿ, ಸುಯ್ದು ಬಯ್ದು ತಳವೆಳಗಾದರು. ಈ ಬಗೆಯ ಯಾವ ಪ್ರಕೋಪಕ್ಕೂ ಸಿಕ್ಕದೆ ಶಾಂತವಾಗಿದ್ದವರೆಂದರೆ ಪಸಾಯಿತರು ಮತ್ತು ಭಟರು. ಪ್ರಭುಮನ್ನೆಯರ ವಿಲಾಸ ಜೀವನದ ಏಳು ಬೀಳು ಪರಿಹಾಸ ಸಂತೋಷಗಳು ಆ ಕಷ್ಟಜೀವಿ ಕರ್ಮಚಾರಿಗಳಿಗೆ ಸಂಪೂರ್ಣ ಅಪರಿಚಿತವಾಗಿತ್ತು.

ಅಗ್ಗಳನ ಕಾವ್ಯಪಠನದಿಂದ ಸಭೆಯನ್ನು ಮಸಗಿದ್ದ ಕತ್ತಲ ತೆರೆ ಕಳಚಿ ಬಿದ್ದಂತಾಯಿತು. ಕರ್ಣದೇವನು ಅವಸರದಿಂದ ಅಗ್ಗಳನ ಬಳಿಗೆ ಬಂದು, "ಬಹಳ ಚೆನ್ನಾಗಿ ಹಾಡಿದೆ, ಅಗ್ಗಳದೇವ," ಎಂದು ಅಭಿನಂದಿಸಿ, ಜಗದೇಕಮಲ್ಲನ ಕೈಯಿಂದ ಜೋಡೀಹಾರ ಶಾಲುಜೋಡಿಗಳ ಉಪಹಾರ ಕೊಡಿಸಿದನು. ಹೆಗ್ಗಡತಿಯರು ಹೂವು ಗಂಧೋದಕಗಳನ್ನು ಅಗ್ಗಳನ ಮೇಲೆರಚಿದರು. ಕಡೆನೋಟ ಮುಗುಳುನಗೆ ಸುಳಿವು ಸನ್ನೆಗಳ ಹಾರಾಟ ಕೆಲವು ಕ್ಷಣಗಳು ಬಿಡುವಿಲ್ಲದೆ ನಡೆಯಿತು. ಉಪಹಾಸಕ್ಕಾಗಿ ಪ್ರಾರಂಭವಾದ ಜಗದೇಕಮಲ್ಲನ ರಾಜಸಭೆ ಅಗ್ಗಳನ ವಿಜಯ ಸಭೆಯಾಗಿ ಮುಗಿಯಿತು.

* * *

ಮರುದಿನ ಸಂಜೆ ಜಗದೇಕಮಲ್ಲನ ವಾಸಗೃಹದ ಏಕಾಂತದಲ್ಲಿ ಸಭೆ ನಡೆದಾಗ ಕರ್ಣದೇವನು ಸಲಿಗೆಯಿಂದ ಜಗದೇಕಮಲ್ಲನ ಬೆನ್ನು ತಟ್ಟಿ, "ನೋಡಿದೆಯ, ಭಂಡರಾಜ ? ನಿನ್ನ ಕಾವ್ಯೋಪದೇಶಿ ಎಂತಹ ರಸಿಕನೆಂಬುದನ್ನು," ಎಂದು ನಗೆಯಾಡಿದನು.

ಈ ಏಕಾಂತ ಸಭೆಗಳಲ್ಲಿ ಕರ್ಣದೇವನ ದರ್ಪ ಧೂರ್ತತೆಗಳು ಮಿತಿಮೀರಿ ಜಗದೇಕಮಲ್ಲನು ಅವನ ವಿನೋದ ಉಪಹಾಸಗಳ ಆಟಿಕೆಯಾಗುತ್ತಿದ್ದನು. ಈ ಸಂದರ್ಭಗಳಲ್ಲಿ ಅವನು ಜಗದೇಕಮಲ್ಲನನ್ನು "ಭಂಡರಾಜ" ಎಂದು ಕರೆಯುವುದು ಅಭ್ಯಾಸವಾಗಿತ್ತು. ಈ ಸಭೆಗಳಲ್ಲಿ ಮನೆ ಹೆಗ್ಗಡೆಯ ಕೆಲಸವೆಂದರೆ ಸದಸ್ಯರು ಅಪೇಕ್ಷಿಸುವ ಪಾನಕ ಪಣ್ಯಾರಗಳನ್ನು ಒದಗಿಸುವುದು. ಅಂದಿನ ದಿನ ಕರ್ಣದೇವನ ಕಣ್ಣು ಬಿದ್ದ ಹೆಗ್ಗಡತಿಯರೂ "ಪಣ್ಯಾರ"ದಲ್ಲಿ ಸೇರುತ್ತಿದ್ದರು.

ಆಗಿನ ಪಾಶುಪತ ಶೈವ ಮಠಗಳಲ್ಲಿ ಪ್ರಚಾರದಲ್ಲಿದ್ದ ಪಾರಿಭಾಷಿಕ ಸಂಪ್ರದಾಯದಂತೆ ಕರ್ಣದೇವನು ತಾನು ಮತ್ತು ಹೆಗ್ಗಡೆ ಜಗದೇಕಮಲ್ಲನೊಡನೆ ನಡೆಸುತ್ತಿದ್ದ ಆ ತ್ರಿಪಕ್ಷ ಸಭೆಗೆ "ಮೂವರು ಕೋಣೆಯ ಸಮಿತಿ" ಎಂದು ಹೆಸರಿಟ್ಟಿದ್ದನು. ಈ ಸಮಿತಿಯ ನಾಲ್ಕನೆಯ ಸದಸ್ಯನಾಗಿ ಅಗ್ಗಳದೇವನು ಸೇರಿಕೊಳ್ಳುವ ಸಮಾರಂಭ ಆ ಸಂಜೆ ನಡೆಯಬೇಕಾಗಿತ್ತು. ಗಣಿಕಾವಾಸದ ಪ್ರತಿನಿಧಿಗಾಳಾಗಿ ಸಖಿ, ಸವತಿ, ಸೂಳೆ ಎಂದು ಕರೆಯಲ್ಪಡುತ್ತಿದ್ದ ಮೂವರು ಹೆಗ್ಗಡತಿಯರು ವಿಶೇಷಾಹ್ವಾನ ಪಡೆದು ಬಂದಿದ್ದರು. ಸದಸ್ಯರು ದಿಂಬುಗಳಿಗೊರಗಿ ಚಕ್ರಾಕಾರವಾಗಿ ಕುಳಿತುಕೊಂಡರು. ಮಧುಪಾತ್ರೆ ಮತ್ತು ಬಟ್ಟಲುಗಳು ಎದುರಿಗೆ ಸಿದ್ಧವಾಗಿದ್ದವು, ಮಧುಪಾನದ ಎರಡನೆಯ ಆವರ್ತ ಮುಗಿದು ಸಭೆ ಕಾವೇರಿದ ಮೇಲೆ ಅಧ್ಯಕ್ಷತೆ ವಹಿಸಿದ್ದ ಕರ್ಣದೇವನು, "ಇದುವರೆಗೆ ನಮ್ಮ ಸಭೆ 'ಮೂವರು ಕೋಣೆಯ ಸಮಿತಿ' ಎಂಬ ಹೆಸರಿಗೆ ಸರಿಯಾಗಿ ಮೂವರು ಸದಸ್ಯರನ್ನೊಳಗೊಂಡು ಜನರ ಅಪಹಾಸ್ಯಕ್ಕೆ ಗುರಿಯಾಗಿತ್ತು. ಕೆಲವರು ನಮ್ಮನ್ನು ಮಂಚಕ್ಕೆ ಮೂರೇಕಾಲು ಎಂದು ಮೂದಲಿಸಿದ್ದನ್ನು ಕೇಳಿದ್ದೇನೆ. ಅಗ್ಗಳ ದೇವರಂತಹ ಪಂಡಿತ ಕವಿ ಈಗ ನಮ್ಮ ಸಭೆಯ ನಾಲ್ಕನೆಯ ಸನ್ಮಾನ್ಯ ಸದಸ್ಯರಾಗಿ ಈ ಲೋಪವನ್ನು ಪರಿಹರಿಸಲು ನಿರ್ಧರಿಸಿರುವುದು ನಮಗೆ ಸಂತೋಷದ ವಿಷಯ. ಅವರನ್ನು ಆದರದಿಂದ ನಾವು ಸಭೆಗೆ ಸ್ವಾಗತಿಸುತ್ತೇವೆ. ಈ ಶುಭಾವಸರದಲ್ಲಿ ಅವರು ತಮ್ಮ ರಾಜಾಂತಃಪುರಗಳ ಅನುಭವಗಳನ್ನು ಕುರಿತು ನಾಲ್ಕು ಮಾತುಗಳಾಡಬೇಕಾಗಿ ಬಿಡುತ್ತೇನೆ." ಎಂದು ವಿನಯವಾಡಿದನು. ಸದಸ್ಯರು ಕೈತಟ್ಟಿ ಅನುಮೋದಿಸಿದರು.

ರಾಜಗೃಹದಲ್ಲಿ ಇದು ನನ್ನ ಎರಡನೆಯ ಪರೀಕ್ಷೆ. ಪ್ರತಿಭೆಯ ಗಂಧವೂ ಇಲ್ಲದ ಒಂದು ಸಾಮಾನ್ಯ ಪದ್ಯವನ್ನು ಶ್ರಾವ್ಯವಾಗಿ ಪಠಿಸಿ ನಿಮ್ಮ ಮೆಚ್ಚುಗೆ ಪಡೆದೆ. ಆದರೆ ಈ ದಿನ ನೀವು ಕೇಳುವ ವಿಚಾರ ಅಷ್ಟೊಂದು ಸುಲಭವಲ್ಲ." ಎಂದು ಪ್ರಾರಂಭಿಸಿ ಅಗ್ಗಳನು ತಟ್ಟನೆ ಬದಲಿಸಿದ ಕಂಠದಲ್ಲಿ, ಉಪಾಧ್ಯಾಯನು ಶಿಷ್ಯರನ್ನು ಪ್ರಶ್ನಿಸುವಂತೆ, "ರಾಜಾಂತಃಪುರಗಳ ವಿಚಾರ ನಿಮಗೇನು ತಿಳಿದಿದೆ?" ಎಂದು ಕೇಳಿದನು.

"ರಾಜಗೃಹದ ಗಣಿಕಾವಾಸ ಚಾಲುಕ್ಯರಾಜ್ಯದಲ್ಲಿ ಅತಿ ದೊಡ್ಡದು ಎಂದು ಹೆಸರಾಗಿದೆ. ಆರು ವರ್ಷಗಳ ಕಾಲ ನಾನು ಇಲ್ಲಿ ಹೆಗ್ಗಡೆಯಾಗಿ ಕೆಲಸ ಮಾಡಿದ್ದೇನೆ. ನನ್ನ ಅನುಭವಗಳನ್ನು ಬರೆದಿಡಬೇಕಾದರೆ ನಿಮ್ಮಂತಹ ನಾಲ್ಕು ಮಂದಿ ಪಂಡಿತ ಕವಿಗಳೂ ಬೇಕಾಗುವರು," ಎಂದು ಮನೆ ಹೆಗ್ಗಡೆ ಜಂಬದಿಂದ ಹೇಳಿದನು.

"ಕಳೆದ ಆರು ವರ್ಷಗಳಿಂದ ನಾನು ಬೇರೆಲ್ಲ ವ್ಯವಹಾರಗಳನ್ನು ಬದಿಗೊತ್ತಿ, ಗಣಿಕೆಯರ ಜೀವನ ವಿಕಾಸ ವಿಧಾನಗಳನ್ನು ಅಧ್ಯಯನ ಮಾಡಿದ್ದೇನೆ. ಈ ಅವಿವೇಕಿ ಶತಮೂರ್ಖ ಕರ್ಣದೇವನಲ್ಲದೆ ಬೇರೆ ಯಾರಾದರೂ ನಮ್ಮ ಸಭೆಯ ಅಧ್ಯಕ್ಷರಾಗಿದ್ದರೆ, ಗಣಿಕಾವಾಸ ಕಟಕಾಚಾರ್ಯ ಎಂಬ ಬಿರುದಿನಿಂದ ನನ್ನನ್ನು ಗೌರವಿಸಿ ಎಷ್ಟೋ ದಿನಗಳಾಗುತ್ತಿದ್ದವು," ಎಂದು ಜಗದೇಕಮಲ್ಲನು ಕಟುವಾಗಿ ಟೀಕಿಸಿದನು.

"ವಂದಿಮಾಗಧರು ಸಭೆಯಲ್ಲಿ ಉಗ್ಗಡಿಸುವ ಆ ಬಿರುದಾವಳಿ ನಿನಗೆ ಸಾಲದೆ, ಭಂಡರಾಜ ? ಕಂಡಕಂಡವರ ಬಿರುದುಗಳನ್ನು ಕದಿಯುವುದು ಚಾಲುಕ್ಯ ಅರಸರ ಕುಲವೃತ್ತಿಯೆಂದು ಕಾಣುತ್ತದೆ." ಎಂದು ಕರ್ಣದೇವನು ದರ್ಪದಿಂದ ಉತ್ತರಿಸಿದನು.

"ಕದ್ದು ಜೀವಿಸುವುದು ಕಲಚೂರ್ಯ ಸಂಪ್ರದಾಯ. ತ್ರಿಭುವನಮಲ್ಲ, ಭುವನೈಕವೀರ ಎಂಬ ಬಿರುದುಗಳನ್ನು ನೀವು ಚಾಲುಕ್ಯರಿಂದ ಕದಿಯಲಿಲ್ಲವೆ?"

"ಚಾಲುಕ್ಯರಿಗೆ ಸೇರಿದ ಎಲ್ಲ ವಸ್ತುಗಳಿಗೂ ಕಲಚೂರ್ಯರೇ ಉತ್ತರಾಧಿಕಾರಿಗಳು, ಭಂಡರಾಜ. ಅದಕ್ಕೆ ನಿನ್ನ ಗಣಿಕಾವಾಸ ನಿದರ್ಶನ," ಎಂದು ಕರ್ಣದೇವನು ತನ್ನ ಎರಡು ಕಡೆಗಳಲ್ಲಿ ಕುಳಿತಿದ್ದ ಸೂಳೆ ಸವತಿಯರ ಮುಖನೋಡಿದನು, ಜಗದೇಕಮಲ್ಲನ ಪಾರ್ಶ್ವದಲ್ಲಿ ಕುಳಿತಿದ್ದ ಸಖಿ ಮೆಲ್ಲನೆ ಕರ್ಣದೇವನ ಪಾರ್ಶ್ವಕ್ಕೆ ಸರಿದಳು.

"ಹಗಲು ದರೋಡೆ ! ಕಲಚೂರ್ಯ ಕರ್ಣದೇವನು ನನ್ನ ಸಖಿಯನ್ನು ಅಟ್ಟ ಹಗಲು ಅಪಹರಿಸಿದ್ದಾನೆ !" ಎಂದು ಜಗದೇಕಮಲ್ಲನು ಹುಚ್ಚನಂತೆ ಬೊಬ್ಬಿಟ್ಟನು.

ಪ್ರಸಂಗ ಕೈಮೀರುವಷ್ಟರಲ್ಲಿ ಮನೆ ಹೆಗ್ಗಡೆ ಇಬ್ಬರು ಸ್ಪರ್ಧಿಗಳ ಪಾನಪಾತ್ರೆಗಳನ್ನು ತುಂಬಿಸಿ, ಸಖಿಯ ಕೈಹಿಡಿದೆಳೆದು ಜಗದೇಕಮಲ್ಲನಿಗೊಪ್ಪಿಸಿದನು.

ರಾಜಬಂದಿ ರಕ್ಷಕರ ಈ ಕೂಗಾಟವನ್ನು ನಗುತ್ತ ನೋಡುತ್ತಿದ್ದ ಅಗ್ಗಳನು, "ಸಖಿ ಸವತಿ ಸೂಳೆಯರೇ ಗಣಿಕಾವಾಸದ ಸರ್ವಸ್ವವಲ್ಲ. ರಾಜಾಂತಃಪುರಗಳ ನಿಬಂಧನೆಯಂತೆ ಗಣಿಕಾವಾಸದಲ್ಲಿ ೧೮ ಮಂದಿ ಹೆಗ್ಗಡತಿಯರಿರಬೇಕು. ಅವರ ಹೆಸರುಗಳನ್ನಾದರೂ ಕೇಳಿರುವಿರಾ ನೀವು?" ಎಂದನು.

"ಅವುಗಳಲ್ಲಿ ಕೆಲವರ ಹೆಸರುಗಳನ್ನು ಎಲ್ಲಿಯೋ ಕೇಳಿದ ನೆನಪು"

"ಆ ಎಲ್ಲ ಹೆಸರುಗಳನ್ನು ಬರೆದಿಟ್ಟುಕೊಳ್ಳಲು ನಾವೇನು ಕರಣಿಕರೆ?"

"ನಮ್ಮ ಗಣಿಕಾವಾಸದಲ್ಲಿ ಹದಿನೆಂಟು ಜನ ಹೆಗ್ಗಡತಿಯರು ಇರುವರೆ?"

"ಅಗ್ಗಳರು ಇದೆಲ್ಲವನ್ನೂ ಕಲ್ಪಿಸಿಕೊಂಡು ಹೇಳುತ್ತಿದ್ದಾರೆ. ವಾಸ್ತವವಾಗಿ

ಹದಿನೆಂಟು ಮಂದಿ ಹೆಗ್ಗಡತಿಯರಿದ್ದರೆ ಅವರ ಹೆಸರುಗಳೇನು? ಅವರವರ ಕೆಲಸವೇನು? ಅಗ್ಗಳರೇ ಇದನ್ನು ವಿವರಿಸಲಿ.” ಗಂಡು ಹೆಣ್ಣು ಕೊರಳುಗಳಿಂದ ಈ ಎಲ್ಲ ಉದ್ಗಾರಗಳೂ ಏಕಕಾಲದಲ್ಲಿ ಕೇಳಿದವು. ಗೊಂದಲ ಅಡಗಿದ ಮೇಲೆ, ಅಗ್ಗಳನು ಗಂಭೀರವಾಗಿ ನುಡಿದನು :

“ಕಿವಿಗೊಟ್ಟು ಕೇಳಿರಿ, ಅವಿವೇಕಿ ಹೆಣ್ಣುಗಳೇ, ವಿವೇಕವಿಲ್ಲದ ಗಂಡುಗಳೆ, ಗಣಿಕಾವಾಸದ ಕಟ್ಟಲೆಯಂತೆ ಸರ್ವಾಂಗ ಸಂಪೂರ್ಣವಾದ ರಾಜಾಂತಃಪುರದಲ್ಲಿ ಗಾಯಕಿ, ನರ್ತಕಿ, ಸಖಿ, ಸವತಿ, ಸೂಳೆ, ಸಂಬಂಧಿ, ಸುಳುಹುಗಾರ್ತಿ, ಸಂವಾದಿನಿ, ಸುಗಂಧಿ, ಶಾರದೆ, ನೀರದೆ, ಸಜ್ಜೆವಳ್ತಿ, ಕಲಾವತಿ, ಕಾದಂಬಿನಿ, ಕಲ್ಯಾಣಿ, ಕಮಲಾಲಯೆ, ಕಲಾಪಿನಿ, ಕೋಲಾಹಲೆ ಎಂಬ ಹದಿನೆಂಟು ಮಂದಿ ಹೆಗ್ಗಡತಿಯರು ಇರತಕ್ಕದ್ದು. ಇವರಲ್ಲಿ ಒಬ್ಬಳು ಕಡಿಮೆಯಾದರೂ ಗಣಿಕಾವಾಸ ಪೂರ್ಣವಾಗುವುದಿಲ್ಲ. ಕೋಹಳ ಕೊಕ್ಕೋಳ ಕಾಮಂಧಕರು ಈ ಹೆಗ್ಗಡತಿಯರ ಕೆಲಸಗಳನ್ನು ಈ ರೀತಿ ವರ್ಣಿಸಿದ್ದಾರೆ:

“ಹಾಡುವವಳು ಗಾಯಕಿ, ಕುಣಿಯುವವಳು ನರ್ತಕಿ. ವಿಶೇಷವೆಂದರೆ ಗಣಿಕಾವಾಸದ ಗಾಯಕಿ ನರ್ತಕಿಯರು ಅಶ್ಲೀಲ ನಾಡ ಹಾಡುಗಳನ್ನು ಚೆನ್ನಾಗಿ ಕಲಿತಿರಬೇಕು. ಹಾಡಿಗೆ ಸರಿಯಾಗಿ ಅಶ್ಲೀಲ ಹಾವಭಾವಗಳನ್ನು ಪ್ರದರ್ಶಿಸಿ ಕುಣಿಯಲು ಅಭ್ಯಾಸ ಮಾಡಿರಬೇಕು. ಇನ್ನುಳಿದವರಲ್ಲಿ ಸಖಿ ಸವತಿ ಸೂಳೆಯರು ಒಂದು ವರ್ಗಕ್ಕೆ ಸೇರಿದವರು. ಯಾವಾಗಲೂ ರಾಜನೊಡನಿದ್ದು ಸಮಯ ಬಂದಾಗ ಪುರುಷವೇಷ ಧರಿಸಿ ವಿನೋದ ವಿಹಾರ ವೈಹಾಳಿಗಳಿಗೆ ಸಂಗಡ ಹೋಗುವವಳು ಸಖಿ. ಮತ್ಸರವೇ ಭೂಷಣವಾಗಿ ಗಣಿಕಾವಾಸದ ಇತರ ಹೆಣ್ಣುಗಳೊಡನೆ ಸಕಾರಣವಾಗಿಯೋ ನಿಷ್ಕಾರಣವಾಗಿಯೋ ಆಗಿಂದಾಗ ಜಗಳವಾಡುವವಳು ಸವತಿ. ಇಂತಹ ಕಲಹಕಾರಿಣಿಯನ್ನು ರಾಜನು ಸವತಿಗಂಧವಾರಣೆ ಎಂದು ಬಿರುದು ಕೊಟ್ಟು ಗೌರವಿಸುವುದೂ ಉಂಟು. ಗಣಿಕೆಯಾದರೂ ಸತಿಯಂತೆ ನಡೆಯುವವಳು ಸೂಳೆ. ಅಂತಃಪುರದಲ್ಲಿ ನಡೆಯುವ ಸಭೆಗಳಲ್ಲಿ ಇವಳು ರಾಜನೊಡನೆ ಅರ್ಧಾಸನದಲ್ಲಿ ಕುಳಿತು ರಾಣಿಯಂತೆ ಮೆರೆಯುವಳು. ಕದಂಬ, ಗಂಗ, ರಾಷ್ಟ್ರಕೂಟ, ಚಾಲುಕ್ಯ ಶಾಸನಗಳಲ್ಲಿ ಇಂತಹ ಕೆಲವು ಮಂದಿ ಸೂಳೆಯರ ಉಲ್ಲೇಖ ದೊರಕುತ್ತದೆ.

“ಸಂಬಂಧಿ ಸುಳುಹುಗಾರ್ತಿ ಸಂವಾದಿನಿಯರು ಇನ್ನೊಂದು ವರ್ಗ. ಸಂಬಂಧ ಕೂಡಿಸುವವಳು ಸಂಬಂಧಿ. ರಾಜ್ಯದ ಯಾವ ಸಾಮಂತ ಶ್ರೀಮಂತರ ಮನೆಗಳಲ್ಲಿ ಸುಂದರಿಯರಾದ ಸ್ತ್ರೀಯರಿದ್ದಾರೆ ಎಂಬುದನ್ನು ಪತ್ತೆ ಹಚ್ಚಿ, ರಾಜನಿಗೆ ಅವರ ಸ್ನೇಹ ಮಾಡಿಸುವುದು ಸಂಬಂಧಿಯ ಕೆಲಸ. ಸುಳುಹುಗಾರ್ತಿ

ಸಂವಾದಿನಿಯರು ಈ ಕಾರ್ಯದಲ್ಲಿ ಸಂಬಂಧಿಗೆ ಸಹಾಯಮಾಡುವರು. ಈ ರೀತಿ ರಾಜಾನುಗ್ರಹಕ್ಕೆ ಪಾತ್ರರಾದ ಕುಲೀನ ಸುಂದರಿಯರು ಕೆಲವು ಸಂದರ್ಭಗಳಲ್ಲಿ ಗಣಿಕಾವಾಸಕ್ಕೆ ಸೇರುವುದೂ ಉಂಟು.

"ಸುಗಂಧಿ, ಶಾರದೆ ನೀರದೆಯರು ಇನ್ನೊಂದು ಗುಂಪು. ಅರಸನಿಗೆ ಬೇಕಾದ ಸುಗಂಧದ್ರವ್ಯಗಳನ್ನು ಪೇಟೆಯಿಂದ ತರಿಸಿ ಜೋಪಾನಮಾಡಿ ಕೇಳಿದಾಗ ತಂದು ಕೊಡುವವಳು ಸುಗಂಧಿ. ಅರಸನ ಅಭಿರುಚಿಯನ್ನರಿತು ಅವನು ಅಪೇಕ್ಷಿಸುವ ಅಶ್ಲೀಲ ಸಾಹಿತ್ಯದ ಹೊತ್ತಿಗೆಗಳನ್ನು ಅರಮನೆಯ ಸರಸ್ವತೀ ಭಂಡಾರದಿಂದ ಹುಡುಕಿ ತಂದು ಓದಿ ಹೇಳುವವಳು ಶಾರದೆ. ಸ್ನಾನಕ್ಕೆ ಬೇಕಾಗುವ ತೈಲ ಚೂರ್ಣ ಲೇಪನಗಳನ್ನು ಒದಗಿಸುವವಳು ನೀರದೆ. ಸ್ನಾನಗೃಹದ ಊಳಗಿತ್ತಿಯರು, ಕ್ಷೌರಿಕ ಸಂವಾಹಕ ಜಲಗಾರರು ನೀರದೆಯ ಅಧೀನದಲ್ಲಿ ಕೆಲಸ ಮಾಡುವರು.

"ಸಜ್ಜೆವಳ್ತಿ ಕಲಾವತಿ ಕಾದಂಬಿನಿಯರು ಬೇರೊಂದು ವರ್ಗ. ರಾಜನ ಶಯನಾಗಾರಕ್ಕೆ ಬೇಕಾದ ಹಾಸಿಗೆ ದಿಂಬು ಹೊದ್ದಿಕೆಗಳನ್ನು ದಿನದಿನವೂ ಹೊಸದಾಗಿ ಅಣಿ ಮಾಡುವವಳು ಸಜ್ಜೆವಳ್ತಿ. ಕಲಶ ಕನ್ನಡಿ ಚಿತ್ರಗಳಿಂದ ಶಯನಗೃಹವನ್ನು ಅಲಂಕರಿಸುವವಳು ಕಲಾವತಿ. ಹಗಲಲ್ಲಿ, ಇರುಳಲ್ಲಿ ರಾಜನಿಗೆ ಬೇಕಾದ ಮಧು ಪಾನೀಯಗಳನ್ನು ಹದವಾಗಿ ತಯಾರಿಸಿ, ಮಧುಪಾತ್ರೆ ಬಟ್ಟಲುಗಳನ್ನು ಓರಣವಾಗಿಡುವವಳು ಕಾದಂಬಿನೀ. ನಾಲ್ಕಾರು ಮಂದಿ ಸುಂದರ ಬಾಲಕ ಬಾಲಕಿಯರು ಇವಳ ಅಧೀನದಲ್ಲಿ ರಾಜನಿಗೆ, ರಾಜಾತಿಥಿಗಳಿಗೆ ಪಾನೀಯಗಳನ್ನು ಹಂಚಲು ನಿಯುಕ್ತರಾಗುತ್ತಾರೆ. ಇದಕ್ಕಾಗಿ ಗಣಿಕಾವಾಸದಲ್ಲಿ ಹುಟ್ಟಿ ಬೆಳೆದ ಮಕ್ಕಳನ್ನು ಆರಿಸಿಕೊಳ್ಳುವುದು ಪದ್ಧತಿ," ಮುಂದೆ ಪಟ್ಟಕ್ಕೆ ಬರುವ ಮರಿರಾಜನ ರಾಣಿವಾಸ ಗಣಿಕಾವಾಸಗಳಿಗೆ ಈ ಬಾಲಕ ಬಾಲಕಿಯರು ಮೀಸಲಾಗುತ್ತಾರೆ.

"ಕಲ್ಯಾಣಿ ಕಮಲಾಲಯೆ ಕಲಾಪಿನಿಯರು ಇನ್ನೊಂದು ಗುಂಪು. ರಾಜನ ಉಡಿಗೆ ವಸ್ತ್ರಗಳನ್ನು ದಿನದಿನಕ್ಕೆ ಸ್ವಚ್ಛಗೊಳಿಸಿ ಹಸನಾಗಿಡುವುದು ಕಲ್ಯಾಣಿಯ ಕೆಲಸ. ಸಿಂಪಿಗ ಮಡಿವಾಳ ಮುಚ್ಚಿಗ ಮಾಲೆಗಾರ್ತಿಯರು ಇವಳ ಅಧೀನದಲ್ಲಿ ಕೆಲಸ ಮಾಡಬೇಕು. ರಾಜನು ಧರಿಸುವ ಚಿನ್ನರನ್ನದ ಆಭರಣಗಳನ್ನು ಜತನ ಮಾಡಿ ಬೇಕಾದಾಗ ತಂದುಕೊಡುವವಳು ಕಮಲಾಲಯೆ. ಗಣಿಕಾವಾಸಕ್ಕೆ ಅಗತ್ಯವಾದ ಉಡಿಗೆ ತೊಡಿಗೆ ಗಂಧ ಪುಷ್ಪ ಆಭರಣಗಳನ್ನು ಹಂಚುವವಳು ಕಲಾಪಿನಿ. ಅರಮನೆಯ ವಸ್ತ್ರಾಗಾರ ರತ್ನಬಂಡಾರಗಳ ಹೆಗ್ಗಡೆ ಕರಣಿಕರು ಈ ಮೂವರು ಹೆಗ್ಗಡತಿಯರಿಗೆ ಸಹಾಯ ಮಾಡುತ್ತಾರೆ.

"ಗಣಿಕಾವಾಸದ ಎಲ್ಲ ಹೆಣ್ಣುಗಳ ಮೇಲ್ವಿಚಾರಣೆ ನಡೆಸುವ ಹಿರಿಯ

ಹೆಗ್ಗಡತಿಯನ್ನು ಕೋಲಾಹಲೆ ಎಂದು ಕರೆಯುತ್ತಾರೆ. ಅಂತಃಪುರವಾಸಿನಿಯರ ರೋಗರುಜಿನ ಹೆರಿಗೆಗಳಲ್ಲಿ ವೈದ್ಯೋಪಚಾರಗಳನ್ನು ಏರ್ಪಡಿಸುವ ಹೊಣೆ ಇವಳ ಮೇಲಿರುತ್ತದೆ. ಸಾಮಾನ್ಯವಾಗಿ ಇವಳು ರಾಜನಿಗಿಂತ ಎಂಟು ಹತ್ತು ವರ್ಷಗಳು ಹಿರಿಯಳಾಗಿದ್ದು, ಹಿಂದಿನ ರಾಜನ ಬಂಧುವರ್ಗದ ಅಕ್ಕಳೆಯೋ ಅಥವಾ ಗಣಿಕಾವಾಸದ ಹೆಗ್ಗಡತಿಯರಲ್ಲಿ ಕಿರಿಯ ವಯಸ್ಸಿನವಳೋ ಆಗಿರುತ್ತಾಳೆ. ರಾಜನ ಕೈಶೋರದಲ್ಲಿ, ವಿಲಾಸ ಜೀವನದ ಪ್ರಥಮ ಪರಿಚಯ ಮಾಡಿಕೊಟ್ಟು ವಿದ್ಯಾಗುರುವಾದಳೆಂಬ ಕಾರಣದಿಂದ ಗುರು ಕಾಣಿಕೆಯಾಗಿ ಹಿರಿಯ ಹೆಗ್ಗಡತಿಯ ಸ್ಥಾನ ಅವಳಿಗೆ ದೊರಕಿರುತ್ತದೆ. ರಾಜ್ಯ ಅನ್ಯಾಕ್ರಾಂತನಾಗಿ ಬೇರೊಂದು ಅರಸುಮನೆತನ ಪಟ್ಟಕ್ಕೆ ಬಂದ ಸಂದರ್ಭಗಳಲ್ಲಿ ಹಿಂದಿನ ರಾಜನ ಪಟ್ಟಮಹಿಷಿಯೋ ಅಥವಾ ಪುತ್ರಿಯೋ ಈ ಸ್ಥಾನದಲ್ಲಿರುವುದೂ ಉಂಟು. ಹಿಂದಿನ ರಾಜನ ರಾಣಿವಾಸದಲ್ಲಿ ಕಳೆದುಳಿದವರನ್ನು ಹೊಸ ರಾಜನು ತನ್ನ ಗಣಿಕಾವಾಸಕ್ಕೆ ಸೇರಿಸಿಕೊಳ್ಳುವುದು ದೇವತೆಗಳ ಕಾಲದಿಂದ ನಮ್ಮ ದೇಶದಲ್ಲಿ ಪ್ರಚಾರದಲ್ಲಿರುವ ಪದ್ಧತಿ. ಗಣಿಕಾವಾಸದಲ್ಲಿ ಕೋಲಾಹಲೆಯ ಸ್ಥಾನ ಅವಳ ಹೆಸರೇ ಸೂಚಿಸುವಂತೆ ಬಹುಮುಖ್ಯವಾದದ್ದು. ಎಲ್ಲ ಹೆಗ್ಗಡತಿಯರೂ ಈ ಸ್ಥಾನಕ್ಕಾಗಿ ಸ್ಪರ್ಧೆ ನಡೆಸುವುದರಿಂದ ರಾಜನು ತನ್ನ ಪುತ್ರರನ್ನು ಎಚ್ಚರಿಕೆಯಿಂದ ರಕ್ಷಿಸಬೇಕೆಂದು ಕೋಹಳನು ಹೇಳಿದ್ದಾನೆ."

"ಬಹಳ ಚೆನ್ನಾಗಿದೆ ನಿನ್ನ ವಿವರಣೆ, ಅಗ್ಗಳ."

"ನಮ್ಮ ಗಣಿಕಾವಾಸದ ಅರೆಕೊರೆಗಳನ್ನು ಈಗ ತಿಳಿದೆ, ಪಂಡಿತರೆ."

"ಕಥೆಗಿಂತ ಸ್ವಾರಸ್ಯವಾಗಿತ್ತು ನೀವು ಹೇಳಿದ್ದು."

"ಇವರಿಗೇನು ಕೊಡಲಿ ಬಹುಮಾನ !"

"ನಿನ್ನ ತನು ಮನಗಳನ್ನು ಕೊಡು, ಸಖಿ." –ಎಲ್ಲ ಕಡೆಗಳಿಂದ ಪ್ರಶಂಸೆಯ ಮಾತುಗಳು ಕೇಳಿಬಂದವು.

"ಚಾಲುಕ್ಯ ಚಕ್ರೇಶ್ವರರೇಕೆ ಮೌನವಾಗಿದ್ದಾರೆ ? ನನ್ನ ಉಪನ್ಯಾಸ ರುಚಿಸಲಿಲ್ಲವೇ ಅವರಿಗೆ ?"– ಅಗ್ಗಳನು ಕುತೂಹಲದಿಂದ ಪ್ರಶ್ನಿಸಿದನು.

"ಏನಾದರೂ ಹೇಳಿಬಿಡು, ಭಂಡರಾಜ. ಕೇಳಲು ಆತುರನಾಗಿದ್ದಾನೆ ಅಗ್ಗಳ. ಹೊಗಳಿಕೆಯೆಂದರೆ ಕಳ್ಳು ಕುಡಿದಷ್ಟು ಆನಂದ ಕವಿಗಳಿಗೆ" – ಕರ್ಣದೇವನ ಒತ್ತಾಯವೂ ದೊರೆಯಿತು, ಅಗ್ಗಳನ ಪ್ರಶ್ನೆಗೆ.

ಜಗದೇಕಮಲ್ಲನು ಕೊಂಚ ಹೊತ್ತು ಯೋಚಿಸುತ್ತಿದ್ದು, "ನಾನು ಚಾಲುಕ್ಯ ಚಕ್ರೇಶ್ವರನಾಗಿ ಹೇಳತಕ್ಕದ್ದೇನೂ ಇಲ್ಲ," ಎಂದು ಉತ್ತರ ಕೊಟ್ಟನು.

"ಭಂಡರಾಜನಾಗಿ ಹೇಳು, ಹೇಳತಕ್ಕದ್ದನ್ನು" –ಅಮಲೇರಿ ತಬ್ಬಿಬ್ಬಾಗಿ

ನುಡಿದನು ಕರ್ಣದೇವ.

ಜಗದೇಕಮಲ್ಲನೆಂದನು : " ಈ ಹೆಣ್ಣು ದೇಹದ ಲಜ್ಜೆಗೇಡಿ ಭೂತಗಳ ಮಧ್ಯೆ ಸೆರೆಯಾಳಾಗಿ ಜೀವಿಸುವ ಆ ದುರ್ದೈವಿ ಅರಸನು ರಾಜ್ಯಭಾರ ಮಾಡುವುದು ಹೇಗೆ? ಈ ಸಮಸ್ಯೆಗೆ ನೀನು ಸಮಾಧಾನ ಹೇಳಬೇಕು, ಅಗ್ಗಳ."

"ಆ ಕಾರ್ಯವನ್ನು ಮಂತ್ರಿಗಳು ಮಾಡುತ್ತಾರೆ," ಅಗ್ಗಳನೆಂದನು. "ಅವರ ಸಹಾಯಕ್ಕಾಗಿ ಸಾಮಂತರು, ಸೇನಾಪತಿಗಳು, ನಿಯುಕ್ತರು, ಕಾರ್ಯಕರ್ತರು, ಕರಣಿಕರು, ನಿಯೋಗಿಗಳು ಮುಂತಾದ ಅಧಿಕಾರಿಗಳ ಒಂದು ದೊಡ್ಡ ಸೈನ್ಯವೇ ಇರುತ್ತದೆ. ಇವರು ವೈಯಕ್ತಿಕವಾಗಿ ನಡೆಸುವ ಪ್ರಜಾಹಿಂಸೆಯನ್ನು ನಾವು ರಾಜ್ಯಭಾರ ಎಂಬ ದೊಡ್ಡ ಹೆಸರಿನಿಂದ ಕರೆಯುತ್ತೇವೆ."

"ಹಾಗಾದರೆ ಪ್ರಜೆಗಳನ್ನು ರಕ್ಷಿಸುವುದು ರಾಜನ ಕರ್ತವ್ಯವೆಂಬ ಧರ್ಮಶಾಸ್ತ್ರ ನಿಬಂಧನೆಯನ್ನು ನೀವು ಒಪ್ಪುವುದಿಲ್ಲವೆ?"

"ಒಪ್ಪುತ್ತೇನೆ, ಜಗದೇಕಮಲ್ಲರಸರೆ," ಅಗ್ಗಳನು ಆವೇಶದಿಂದ ನುಡಿದನು. "ಆದರೆ ಪ್ರಜೆ, ರಾಜ್ಯ, ರಕ್ಷಣೆ ಈ ಮಾತುಗಳ ಅರ್ಥ ರಾಜನಿಗೆ ತಿಳಿದಿದ್ದರಲ್ಲವೆ ಆ ವಿಚಾರ ? ಬಾಲ್ಯದಲ್ಲಿ ಉಪಾಧ್ಯಾಯರು, ಧರ್ಮಬೋಧಕರು ಈ ಮಾತುಗಳ ಅರ್ಥವನ್ನು ರಾಜನಿಗೆ ಪಾಠ ಹೇಳಿರುತ್ತಾರೆ. ಕೆಲವು ಸಂದರ್ಭಗಳಲ್ಲಿ ಅದನ್ನು ರಾಜನು ಅರ್ಥಂಬರ್ಥವಾಗಿ ತಿಳಿದುಕೊಂಡಿರುವುದೂ ಸಾಧ್ಯ. ಆದರೆ ಕೈಶೋರವನ್ನು ದಾಟಿ ಯೌವನದಲ್ಲಿ ಅಡಿಯಿಡುತ್ತ ರಾಜನು ಎಲ್ಲವನ್ನೂ ಮರೆತುಬಿಡುತ್ತಾನೆ. ಗಣಿಕಾವಾಸದ ವಿನೋದ ವಿಲಾಸಗಳೂ ಅವನನ್ನು ತಮ್ಮ ಕಡೆಗೆ ಸೆಳೆಯುತ್ತವೆ. ಹಿರಿಯ ಹೆಗ್ಗಡತಿಯೊಬ್ಬಳ ರಹಸ್ಯ ಪತಿಯಾಗಿ ಪ್ರೇಮ ಜೀವನದ ಮೊದಲ ಪಾಠ ಕಲಿಯುತ್ತಾನೆ. ಕ್ರಮವಾಗಿ ಮದ್ಯಪಾನ ಅಭ್ಯಾಸವಾಗುತ್ತದೆ. ರಾಜ್ಯ, ಪ್ರಜೆಗಳು, ಮಂತ್ರಿಗಳು, ಅಧಿಕಾರಿಗಳು, ಇವರ ವಿಚಾರ ಬೇಡವಾಗುತ್ತದೆ. ಈ ವಿಲಾಸ ಜೀವನದಲ್ಲಿ ಅವನಿಗೆ ಎಲ್ಲೆಲ್ಲಿಯೂ ಕಾಣುವ ವಸ್ತುಗಳೆಂದರೆ, ಹೆಣ್ಣಿನ ಮುಖಕಮಲ, ಕನ್ನೈದಿಲೆ ಕಣ್ಣುಗಳು, ಜವಳಿ ಹಕ್ಕಿಯ ಎದೆಭಾವ, ತೊಡೆ ಮುಡಿಯ ತೀರ್ಥಶಿಲೆ, ತಾವರೆಯ ಎಳೇದಂಟಿನಂತೆ ಬಳಕುವ ಕೈಗಳು, ಶೈವಾಲದಂತೆ ನಿಬಿಡವಾದ ಕೇಶರಾಶಿ. ಈ ಕಾಳಿಂಗ ಮಡುವಿನಲ್ಲಿ ಮುಳುಗಿದ ರಾಜನು ಪುನಃ ಮಾನವನಾಗಿ ಮೇಲೇಳುವದು ಏಳೇಳು ಜನ್ಮಕ್ಕೂ ಸಾಧ್ಯವಾಗುವದಿಲ್ಲ."

"ರಾಜನ ಸ್ಥಿತಿ ಹೀಗಾದ ಮೇಲೆ ಮಂತ್ರಿಗಳ ಪಾಡೇನು? ಸ್ವಾರ್ಥದುರಭಿಮಾನಗಳು ಅವರ ಆಧಾರಸ್ತಂಭಗಳಾಗುವುವು. ಧನಸಂಗ್ರಹ ಆಸೆಯಿಂದ ಅವರು ನಿರಂಕುಶರಾಗಿ ಪ್ರಜಾಪೀಡನೆಗೆ ತೊಡಗುವರು. ಮಂತ್ರಿಶಾಖೆಯ

ಕರಣಿಕ ಕಾರ್ಯಕರ್ತರಲ್ಲಿ, ನಿಯುಕ್ತ ನಿಯೋಗಿಗಳಲ್ಲಿ, ನಿರಂಕುಶ ಸ್ವೇಚ್ಛಾಡಳಿತದ ವಿಷಜ್ವಾಲೆ ಹರಡಿ ರಾಜ್ಯವನ್ನೇ ಸುಡಲು ಮೊದಲಾಗುವುದು.

"ಇನ್ನು ಸಾಮಂತರು, ಮಾಂಡಲಿಕರು, ಸೇನಾನಾಯಕರು ಮುಂತಾದ ಶಸ್ತ್ರೋಪಜೀವಿಗಳ ವಿಷಯ ಕೇಳಬೇಕೆ? ಯುದ್ಧದಲ್ಲಿ ಶತ್ರುಗಳ ಸಂಗಡ ಹೋರಾಟ, ಶಾಂತಿಯಲ್ಲಿ ಪ್ರಜೆಗಳ ಸುಲಿಗೆ, ಇವೆರಡೇ ತಮ್ಮ ಧರ್ಮವೆಂದು ತಿಳಿದು ಅವರು ರಾಜನ ಪರೋಕ್ಷದಲ್ಲಿ ತಾವೇ ರಾಜರಂತೆ ಮೆರೆಯುವರು. ಇಂತಹ ರಾಜರು, ರಾಜ್ಯಗಳೂ ಚಾಳುಕ್ಯ ನಾಡಿನಲ್ಲಿ ಎಲ್ಲ ಕಡೆ ಬೆಳೆದು ನೂರು ಮುಖದ ಜಿಗಣಿಯಂತೆ ಪ್ರಜೆಗಳ ಸರ್ವಸ್ವವನ್ನು ಹೀರುತ್ತಿವೆ. ಈ ಸ್ಥಿತಿಯಲ್ಲಿ ರಾಜ್ಯದ, ಪ್ರಜೆಗಳ ಶ್ರೇಯಸ್ಸು ಅಭ್ಯುದಯಗಳನ್ನು ನಿರೀಕ್ಷಿಸುವದು ತಿರುಕನ ಕನಸಿನಂತೆ" – ಎಂದು ಅಗ್ಗಳನು ಮುಗಿಸಿದನು. ಅವನ ಮಾತುಗಳಲ್ಲಿ ಅರೆ ಮರೆಯಾಗಿದ್ದ ಕ್ರಾಂತಿಯ ಕಿಡಿಗಳನ್ನು ಗುರುತಿಸಬಲ್ಲವರು ಆಗ ಅಲ್ಲಿ ಯಾರೂ ಇರಲಿಲ್ಲ.

ಕರ್ಣದೇವನು ಮತ್ತನಾಗಿ ಕಟುಕನು ವಧಾಪೀಠಕ್ಕೆ ಕಟ್ಟಿದ ಹಂದಿಯಂತೆ ಗುರುಗುರು ಶಬ್ದಮಾಡುತ್ತಿದ್ದನು. ಪಾನೋನ್ಮತ್ತಳಾಗಿ ವಿಕೃತ ಚೇಷ್ಟೆಗಳಿಗೆ ತೊಡಗಿದ್ದ ಸಖಿಯನ್ನು ಸಮಾಧಾನಪಡಿಸುವುದರಲ್ಲಿ ಜಗದೇಕಮಲ್ಲನು ಮಗ್ನನಾಗಿದ್ದನು. ಹೆಗ್ಗಡೆಗೆ ಇನ್ನೂ ಮತ್ತೇರಿರಲಿಲ್ಲ. ಅಗ್ಗಳನ ಮಾತುಗಳಲ್ಲಿ ಏನೋ ಸಿಡಿಮದ್ದು ಅಡಗಿದೆಯೆಂದು ಅವನು ತಿಳಿದರೂ ಅದೇನೆಂಬುದನ್ನು ಬಿಚ್ಚಿ ನೋಡುವ ಬುದ್ಧಿಶಕ್ತಿಯಿರಲಿಲ್ಲ. ದನಿಯನ್ನು ನಸು ಗಡುಸಾಗಿಸಿ, "ನೀವು ಆಡುತ್ತಿರುವುದು ರಾಜದ್ರೋಹ ಅಗ್ಗಳ ?" ಎಂದನು.

ಅಗ್ಗಳನು ಸಿಡಿದೆದ್ದು ನುಡಿದನು : "ನಾನು ಹೇಳುತ್ತಿರುವುದನ್ನು ನೀವು ಅಪಾರ್ಥ ಮಾಡುತ್ತಿದ್ದೀರಿ, ಹೆಗ್ಗಡೆಗಳೆ. ಚಾಲುಕ್ಯ ಅರಸು ಜಗದೇಕಮಲ್ಲರಸರನ್ನು ರಾಜಕೀಯ ಕಾರಣಗಳಿಗಾಗಿ ಗೃಹಬಂಧನದಲ್ಲಿರಿಸುವುದು ಬಿಜ್ಜಳರಾಯರಿಗೆ ಅಗತ್ಯವಾಯಿತು. ಆ ಕಾರ್ಯವನ್ನು ದಕ್ಷತೆ, ವಿವೇಚನೆಗಳಿಂದ, ಜಗದೇಕಮಲ್ಲರ ಗೌರವ ಪ್ರತಿಷ್ಠೆಗಳಿಗೆ ಕುಂದಾಗದ ರೀತಿಯಲ್ಲಿ ನಿರ್ವಹಿಸಲು ನಂಬಿಕಸ್ತರಾದ ನಿಮ್ಮನ್ನು ಗೊತ್ತುಮಾಡಿದರು. ಆದರೆ ಇಲ್ಲಿ ನಡೆಯುತ್ತಿರುವುದೇನು ? ನಿಮ್ಮ ದೃಷ್ಟಿಯಲ್ಲಿ ಜಗದೇಕಮಲ್ಲ ಭಂಡರಾಜ, ವಿನೋದ ಉಪಹಾಸಗಳ ವಸ್ತು. ಹುಚ್ಚುದೊರೆ ! ಅವನ ಉಪಭೋಗಕ್ಕಾಗಿ ನೇಮಿಸಲ್ಪಟ್ಟ ಗಣಿಕೆಯರು ಒತ್ತೆಯಿಲ್ಲದೆ ನಿಮ್ಮನ್ನು ಸೇವಿಸುವ ದಾಸಿಯರು. ಬಿಜ್ಜಳರಾಯರು ಯಾರಲ್ಲಿ ಗೌರವದಿಂದ ನಡೆದುಕೊಳ್ಳುವರೋ ಆ ರಾಜಬಂದಿಯ ಮೇಲೆ ನಿಮ್ಮ ಅಪಮಾನ ಅತ್ಯಾಚಾರಗಳ ಸುರಿಮಳೆ ! ಈ ವಿಚಾರಗಳು ಬಿಜ್ಜಳರಾಯರಿಗೆ ತಿಳಿದರೆ ಏನಾಗುವುದೆಂಬುದನ್ನು

ಯೋಚಿಸಿದ್ದಿರಾ, ಹೆಗ್ಗಡೆಗಳೆ ? ಸಹೋದರನೆಂಬ ಕಾರಣದಿಂದ ಕರ್ಣದೇವರು ತಪ್ಪಿಸಿಕೊಳ್ಳಬಹುದು. ಆದರೆ ಬಿಜ್ಜಳರಾಯರ ಕೋಪ ಸಿಡಿಲಿನಂತೆ ಮೇಲೆರಗಿ ಖಂಡಿತವಾಗಿ ನಿಮ್ಮನ್ನು ನಾಶಮಾಡುವುದು."

ಹೆಗ್ಗಡೆ ಬೆದರಿದನು. "ಮಾತಾಡಿದ ರೀತಿಯನ್ನು ನೋಡಿದರೆ ನಿಜವಾಗಿ ಇವನು ಬಿಜ್ಜಳರಾಯರ ಅಧಿಕಾರಿಯೋ ನಿಯುಕ್ತನೋ ಆಗಿರಬೇಕು. ಅಲ್ಲದಿದ್ದರೆ ಸ್ವಯಂ ನಾರಣಕ್ರಮಿತರು ಇಲ್ಲಿಗೆ ಕರೆತಂದು ಬಿಡುತ್ತಿದ್ದರೆ ? ಕಾವ್ಯೋಪದೇಶಿಯೆಂದು ಹೇಳಿ ಸಂದರ್ಶನವನ್ನೇರ್ಪಡಿಸಿದ್ದು ಒಂದು ಮೋಸದ ನಾಟಕ," ಎಂದು ಭಾವಿಸಿದನು.

ಅಗ್ಗಳನ ಹತ್ತಿರ ಬಂದು ಪಿಸುದನಿಯಿಂದ ಅವನು, "ಇದರಲ್ಲಿ ನನ್ನ ತಪ್ಪೇನೂ ಇಲ್ಲ, ಅಗ್ಗಳದೇವರಸರೆ. ಕರ್ಣದೇವರಸರು ಹೇಳಿದರೆ ನಾನು ನಿರಾಕರಿಸುವುದು ಹೇಗೆ ? ಇವೊತ್ತು ಇವಳನ್ನು ಕಳುಹಿಸು, ನಾಳೆ ಅವಳು ಬರಲಿ ಎಂದು ದಿನಕ್ಕೊಂದು ಆಜ್ಞೆ ಮಾಡುತ್ತಾರೆ. ಹೆಣ್ಣು ತಲೆಗಳ ಸರ ಪೋಣಿಸಿ ಕೊರಳಿಗೆ ಹಾಕಿದರೂ ತೃಪ್ತಿ ಆಗುವುದಿಲ್ಲ ಅವರಿಗೆ. ನಿಮ್ಮ ಮಾತು ಕೇಳಿ ನನಗೆ ಭಯವಾಗುತ್ತಿದೆ. ಈ ವಿಚಾರಗಳೊಂದೂ ಬಿಜ್ಜಳರಾಯರ ಕಿವಿಗೆ ಬೀಳದಂತೆ ನಾವು ಎಚ್ಚರವಾಗಿರಬೇಕು," ಎಂದು ವಿನಯವಾಡಿದನು.

"ನೀವು ಮತ್ತು ಕರ್ಣದೇವ ನನ್ನ ಮಧುಪಾನದ ಗೆಳೆಯರು. ಈ ದಿನ ಒಂದೇ ಪಾತ್ರೆಯಲ್ಲಿ ಕುಡಿದು ಸಹೋದರರಾದೆವು. ನಿಮ್ಮ ಹಿತವೇ ನನ್ನ ಹಿತ. ಈ ವಿಚಾರಗಳು ಬಿಜ್ಜಳರಾಯರಿಗೆ ತಿಳಿಯದಂತೆ ನಾನು ನೋಡಿಕೊಳ್ಳುತ್ತೇನೆ. ನೀವು ಯೋಚನೆ ಮಾಡಬೇಕಾಗಿಲ್ಲ," ಎಂದು ಅಗ್ಗಳನು ಅವನಿಗೆ ಸಮಾಧಾನ ಹೇಳಿದನು.

ಕಣ್ಣ ಕೊನೆಯಿಂದ ಇದೆಲ್ಲವನ್ನೂ ನೋಡುತ್ತಿದ್ದ ಜಗದೇಕಮಲ್ಲನು, "ದಾಸಿಯರನ್ನು ಕರೆಯಿರಿ ಹೆಗ್ಗಡೆಗಳೆ, ಇವಳ ಚೇಷ್ಟೆ ತಡೆಯಲು ಇನ್ನು ನನ್ನಿಂದ ಸಾಧ್ಯವಿಲ್ಲ," ಎಂದನು.

ಹೆಗ್ಗಡೆ ಎದ್ದು ಹೊರಗೆ ಹೋಗಿ ಇಬ್ಬರು ಊಳಗಿತ್ತಿಯರನ್ನು ಕರೆತಂದನು. ಎದ್ದು ನಿಂತು ಉಡೆಗಳಚಲು ಅನುವಾಗಿದ್ದ ಸಖಿಯನ್ನು ಅವರು ಕೈ ಹಿಡಿದು ಬಲವಂತದಿಂದ ಅಂತಃಪುರಕ್ಕೆ ಕರೆದುಕೊಂಡು ಹೋದರು. ಪಾನಗೋಷ್ಠಿಯಲ್ಲಿ ಮತ್ತೆ ಶಾಂತಿ ನೆಲಸಿತು.

ಈ ರೀತಿ ಕೆಲವು ದಿನಗಳು ಕಳೆದವು. ಈ ಅವಧಿಯಲ್ಲಿ "ಮೂವರು ಕೋಣೆಯ ಸಮಿತಿ"ಯ ಸಭೆ ಎರಡು ಸಾರಿ ನಡೆಯಿತು. ಮೊದಲ ದಿನದಂತೆ

ಸಭೆಯಲ್ಲಿ ಕಲಹ ಕೋಲಾಹಲಗಳಿಗೆ ಎಡೆಯಿಲ್ಲದಂತೆ ಹೆಗ್ಗಡೆ ಎಚ್ಚರ ವಹಿಸಿದನು. ಮಧುವಿಗೆ ಇನ್ನಷ್ಟು ನೀರು ಬೆರಸಬೇಕೆಂದು ದಾಸಿಯರಿಗೆ ಆಜ್ಞೆಮಾಡಿದನು. ಪಾನಗೋಷ್ಠಿಗೆ ಆಹ್ವಾನಿತರಾಗುವ ಹೆಗ್ಗಡತಿಯರು ಎರಡು ಬಟ್ಟಲುಗಳಿಗಿಂತ ಹೆಚ್ಚು ಪಾನ ಮಾಡಕೂಡದೆಂದು ವಿಧಿಸಿದನು.

ಕರ್ಣದೇವನಿಗೆ ಈ ಮಾರ್ಪಾಡುಗಳು ತಿಳಿದಾಗ, "ಕಾವ್ಯೋಪದೇಶಿಯಂತೆ ಬಂದ ಅಗ್ಗಳನು ನಿನ್ನ ಭಾಗಕ್ಕೆ ಧರ್ಮೋಪದೇಶೀಯಾದಂತಿದೆ !" ಎಂದು ಹಾಸ್ಯ ಮಾಡಿದಾಗ ಹೆಗ್ಗಡೆ, "ನಿನ್ನೆ ಕಲಚೂರ್ಯ ಅರಮನೆಯ ಕರಣಿಕನೊಬ್ಬನು ಬಂದಿದ್ದ. ನನ್ನ ಪತ್ನಿಯ ಸೋದರ ಸಂಬಂಧ. 'ಬಿಜ್ಜಳರಾಯರು ಪ್ರತಿನಿತ್ಯ ರಾಜ ಗೃಹದ ವರದಿ ತರಿಸಿಕೊಳ್ಳುತ್ತಿದ್ದಾರೆ. ಎಚ್ಚರವಾಗಿರಿ' ಎಂದು ಹೇಳಿದ. ನಂಬದಿರುವುದು ಹೇಗೆ?" ಎಂದು ಉತ್ತರ ಕೊಟ್ಟಿದ್ದನು.

ಈ ಎಲ್ಲ ಪರಿವರ್ತನೆಗಳಿಂದ ಅಗ್ಗಳನಿಗೆ ಸಮಾಧಾನವಾಗಲಿಲ್ಲ. ಅವನಿಗೆ ಬೇಕಾಗಿದ್ದದ್ದು ಜಗದೇಕಮಲ್ಲನೊಡನೆ ರಹಸ್ಯವಾಗಿ ಮಾತಾಡುವ ಅವಕಾಶ. ಹತ್ತು ದಿನಗಳು ಕಳೆದರೂ ಅದು ಸಾಧ್ಯವಾಗಲಿಲ್ಲ. ಅವರು ಒಬ್ಬರನ್ನೊಬ್ಬರು ನೋಡುತ್ತಿದ್ದುದು ಪಾನಗೋಷ್ಠಿಯಲ್ಲಿ. ಕರ್ಣದೇವನೋ ಹೆಗ್ಗಡೆಯೋ ಆಗ ತಪ್ಪದೆ ಸಂಗಡಿರುತ್ತಿದ್ದರು. ಉಳಿದ ವೇಳೆಗಳಲ್ಲಿ ಜಗದೇಕಮಲ್ಲನ ವಾಸಗೃಹದ ಸುತ್ತ ಬಿಚ್ಚುಕತ್ತಿಯ ಕಾವಲಿರುತ್ತಿತ್ತು. ಕರ್ಣದೇವನ ವಿಶೇಷ ಅನುಮತಿಯಿಲ್ಲದೆ ಆ ಕಡೆ ಸುಳಿಯುವಂತೆಯೂ ಇರಲಿಲ್ಲ.

ತನ್ನ ಸೇವೆಗಾಗಿ ಗೊತ್ತಾಗಿದ್ದ ದಾಸಿ ಪ್ರತಿದಿನ ಅನೇಕ ಸಾರಿ ಗಣಿಕಾವಾಸಕ್ಕೆ ಹೋಗಿಬರುತ್ತಿದ್ದಳು. ಅವಳ ಮುಖಾಂತರ ರಹಸ್ಯವಾಗಿ ಜಗದೇಕಮಲ್ಲನೊಡನೆ ಸಂಪರ್ಕ ಬೆಳೆಸುವುದು ಸಾಧ್ಯವೇ ? ಎಂದು ಅಗ್ಗಳನು ಯೋಚಿಸಿದನು. ಆದರೆ ದಾಸಿಯ ಬುದ್ಧಿಶಕ್ತಿ ಚಮತ್ಕಾರಗಳು ಪ್ರಕಾಶಕ್ಕೆ ಬರುತ್ತಿದ್ದದ್ದು ಶಯನಾಗಾರದ ನಾಲ್ಕು ಗೋಡೆಗಳ ನಡುವೆ ಮಾತ್ರವೆಂದೂ, ಉಳಿದ ವಿಚಾರಗಳಲ್ಲಿ ಅವಳು ತಿಳಿಗೇಡಿಯಂತೆ ವರ್ತಿಸುವಳೆಂದೂ ತಿಳಿದು ಸುಮ್ಮನಾದನು.

ಬೊಮ್ಮರಸ ಮತ್ತು ಬ್ರಹ್ಮಶಿವ ಪಂಡಿತರೇನಾದರೆಂಬುದು ಅಗ್ಗಳನ ಚಿಂತೆಗೆ ಮತ್ತೊಂದು ಕಾರಣವಾಗಿತ್ತು. ಕ್ರಮಿತನ ಭಟರು ಅವರನ್ನು ಬಂಧಿಸಿರಬಹುದೆ? ಆಗ ಕಾಮೇಶ್ವರಿಯ ಒಳಸಂಚಿನ ವಿಚಾರ ಬಯಲಾಗುವುದು. ಅದಕ್ಕೆ ಬಿಜ್ಜಳನ ಪ್ರತಿಕ್ರಿಯೆಯೇನು? ಕ್ರಮಿತನನ್ನು ನೋಡುವುದರಿಂದ ಮಾತ್ರವೇ ಈ ಎಲ್ಲ ಸಮಸ್ಯೆಗಳೂ ಪರಿಹಾರವಾಗುವುದೆಂದು ಭಾವಿಸಿ ಪೆಟ್ಟಿಗೆಯಿಂದ ಲೇಖನೋಪಕರಣಗಳನ್ನು ತೆಗೆದುಕೊಂಡು ಬರೆದನು.

"ಬಿಜ್ಜಳ ಮಹಾರಾಜರ ಧರ್ಮಾಧಿಕಾರಿ ಪಂಡಿತ ನಾರಣಕ್ರಮಿತರ ಸನ್ನಿಧಾನಕ್ಕೆ ಅಗ್ಗಳನ ಬಿನ್ನಹ.

ನೀವು ನನ್ನನ್ನು ರಾಜಗೃಹದಲ್ಲಿ ಬಿಟ್ಟು ಹೋಗಿ ಇಂದಿಗೆ ಹತ್ತು ದಿನಗಳಾದವು. ಯಾವ ವಿಚಾರಕ್ಕಾಗಿ ನನ್ನನ್ನು ನೀವು ಕಳುಹಿಸಿದಿರೋ ಸಂಬಂಧ ಪಟ್ಟವರಲ್ಲಿ ಅದನ್ನು ಪ್ರಸ್ತಾಪ ಮಾಡುವ ಅವಕಾಶವೂ ಇದುವರೆಗೆ ನನಗೆ ದೊರಕಿಲ್ಲ. ಅದಕ್ಕಾಗಿ ಕಾಯುತ್ತ ಈ ಚಿನ್ನದ ಪಂಜರದಲ್ಲಿ ನಾನು ಇನ್ನೆಷ್ಟು ದಿನಗಳು ಕಳೆಯಬೇಕು ? ನೀವು ದಯಮಾಡಿ ಇಲ್ಲಿಗೆ ಬಂದರೆ ಈ ಸಮಸ್ಯೆಗಳು ಪರಿಹಾರವಾಗುವುವು.

ಇತಿ, ಅಗ್ಗಳ."

ಪತ್ರವನ್ನು ಮುಗಿಸಿ ದಾಸಿಯ ಮುಖಾಂತರ ಹೆಗ್ಗಡೆಗೆ ಹೇಳಿಕಳುಹಿಸಿದನು. "ಏನು ಸಮಾಚಾರ ಪಂಡಿತರೆ ?" ಎನ್ನುತ್ತಾ ಕೊಂಚ ಹೊತ್ತಿನ ಮೇಲೆ ಹೆಗ್ಗಡೆ ಅಲ್ಲಿಗೆ ಬಂದನು.

ಅಗ್ಗಳನ ವಿಚಾರದಲ್ಲಿ ಹೆಗ್ಗಡೆಯ ವರ್ತನೆ ಈಗ ಬಹುಮಟ್ಟಿಗೆ ಸುಧಾರಿತವಾಗಿತ್ತು. ಪಾನಗೋಷ್ಠಿಯ ಮೊದಲ ದಿನದ ಸಲಿಗೆಯ ಸ್ಥಾನದಲ್ಲಿ ವಿನಯ ತಲೆದೋರಿತ್ತು. ಹೆಸರು ಹಿಡಿದು ಕರೆಯುವುದನ್ನು ನಿಲ್ಲಿಸಿ ಗೌರವದಿಂದ, "ಪಂಡಿತರೆ" ಎಂದು ಸಂಬೋಧಿಸುತ್ತಿದ್ದನು.

"ಧರ್ಮಾಧಿಕರಣದ ಹಿರಿಯ ಅಧಿಕಾರಿ ನಾರಣಕ್ರಮಿತರಿಗೆ ಈ ಓಲೆ ಕಳುಹಿಸಬೇಕಾಗಿದೆ. ದಯಮಾಡಿ ಅದಕ್ಕೆ ಏರ್ಪಡಿಸಿರಿ," ಅಗ್ಗಳನು ಹೆಗ್ಗಡೆಗೆ ಹೇಳಿದನು.

ಹೆಗ್ಗಡೆ ಕೊಂಚ ಹೊತ್ತು ಯೋಚಿಸಿ, "ರಾಜಗೃಹದಲ್ಲಿ ಇರುವವರೇ ಆಗಲಿ ಕರ್ಣದೇವರಸರ ಅನುಮತಿಯಿಲ್ಲದೆ ಹೊರಗಿನವರಿಗೆ ಓಲೆ ಕಳುಹಿಸುವಂತಿಲ್ಲ. ನಾನು ನಿಮ್ಮ ಓಲೆಯನ್ನು ಕರ್ಣದೇವರಸರಿಗೆ ಕೊಡುತ್ತೇನೆ. ಕಳುಹಿಸುವುದೂ ಬಿಡುವುದೂ ಅವರ ಇಚ್ಛೆ" ಎಂದನು.

"ನಾನು ನಿಮ್ಮ ಬಂದಿಯಲ್ಲ, ಹೆಗ್ಗಡೆಗಳೇ. ನಾರಣಕ್ರಮಿತರ ಅಪೇಕ್ಷೆಯಂತೆ ಒಂದು ವಿಶೇಷ ಕಾರ್ಯಕ್ಕಾಗಿ ಅತಿಥಿಯಾಗಿ ಇಲ್ಲಿಗೆ ಬಂದಿದ್ದೇನೆ. ನಿಮ್ಮ ಕಾರಾಗೃಹದ ನಿಬಂಧನೆಗಳು ನನಗೆ ಅನ್ವಯಿಸುವುದಿಲ್ಲ" – ತುಸು ದರ್ಪದಿಂದಲೆ ಅಗ್ಗಳನು ನುಡಿದನು. ದರ್ಪ ದುರಭಿಮಾನ ಧೂರ್ತತೆಗಳೇ ರಾಜಗೃಹದಲ್ಲಿ ಸಲ್ಲುವ ನಾಣ್ಯಗಳೆಂದು ಅಗ್ಗಳನಿಗೆ ಅನುಭವವಾಗಿತ್ತು.

"ಇಷ್ಟಕ್ಕೇ ನೀವು ಕೋಪ ಮಾಡಿದರೆ ಹೇಗೆ ಪಂಡಿತರೆ ? ನೀವು ನನ್ನ

ಮಾನ್ಯ ಅತಿಥಿಗಳಾಗಿ ಇನ್ನೆಷ್ಟು ದಿನ ಇಲ್ಲಿರಬೇಕಾಗುವುದೋ ? ಕರ್ಣದೇವರಸರು ಈ ದಿನ ಮಂಗಳವೇಡೆಗೆ ಹೋದರು. ಇನ್ನೊಂದು ವಾರ ಅವರು ಹಿಂದಿರುಗುವುದಿಲ್ಲ. ಅವರ ಪರೋಕ್ಷದಲ್ಲಿ ನಾನೇ ಈ ವಿಚಾರ ನಿರ್ಧರಿಸಬೇಕಾಗುವುದು." – ಕೃತಕ ವಿನಯದಿಂದ ಹೆಗ್ಗಡೆ ಹೇಳಿದನು.

"ಯೋಚಿಸಿ ನಿರ್ಧರಿಸಬೇಕಾದ ಮಹತ್ಕಾರ್ಯವಲ್ಲ ಇದು, ಓಲೆಯನ್ನು ತೆರೆದೇ ನಿಮಗೆ ಕೊಡುತ್ತೇನೆ. ನೀವು ಓದಿಕೊಂಡು ನಂಬಿಕಸ್ತನಾದ ಭಟನೊಬ್ಬನ ಕೈಯಲ್ಲಿ ಕ್ರಮಿತರಿಗೆ ಕಳುಹಿಸಬಹುದು,"

–ಎಂದು ಅಗ್ಗಳನು ಓಲೆಯನ್ನು ಹೆಗ್ಗಡೆಗೆ ಕೊಟ್ಟನು.

"ನಿಮಗಿಷ್ಟವಿರಲಿ ಇಲ್ಲದಿರಲಿ ಓಲೆಯನ್ನು ಓದಿಯೇ ಕಳುಹಿಸಬೇಕು. ಅದು ರಾಜಗೃಹದ ನಿಯಮ," –ಎಂದು ಹೆಗ್ಗಡೆ ಓಲೆಯನ್ನು ಬಿಚ್ಚಿ ಓದಿದನು. "ಇಷ್ಟು ಸಲಿಗೆಯಿಂದ ಬರೆಯಬೇಕಾದರೆ ಇವನು ಬಿಜ್ಜಳರಾಯರ ನಿಯುಕ್ತ ಅಧಿಕಾರಿಯೇ ಆಗಿರಬೇಕು. ಜಗದೇಕಮಲ್ಲರೊಡನೆ ಏನೋ ಸಂಧಾನಕ್ಕೆ ಬಂದಂತಿದೆ," ಎಂದು ಭಾವಿಸಿ ಅವನು, "ನಿಮ್ಮ ಇಚ್ಚೆಯಂತೆ ಈಗಲೆ ಧರ್ಮಾಧಿಕರಣಕ್ಕೆ ಕಳುಹಿಸುತ್ತೇನೆ. ಜಗದೇಕಮಲ್ಲರಸರು ನಾಳೆ ನಗರದಲ್ಲಿರುವುದಿಲ್ಲ. ಆ ವಿಚಾರವನ್ನೂ ಕ್ರಮಿತರಿಗೆ ತಿಳಿಸಬೇಕಾಗಿದೆ," ಎಂದನು.

"ಎಲ್ಲಿಗೆ ಹೋಗುತ್ತಾರೆ ಜಗದೇಕಮಲ್ಲರಸರು ?" –ತುಟಿಗೆ ಬಂದ ಪ್ರಶ್ನೆ ಹಾಗೆಯೇ ಉಳಿಯಿತು.

ಉದಾಸೀನನಂತೆ ಅಗ್ಗಳನು, "ಈ ಅಲ್ಪ ವಿಚಾರಕ್ಕಾಗಿ ಹೇಳಿಕಳುಹಿಸಿದೆ, ಹೆಗ್ಗಡೆಗಳೆ. ನಿಮ್ಮ ಕಾರ್ಯಾವಸರಕ್ಕೆ ತೊಂದರೆಯಾಗಿದ್ದರೆ ಕ್ಷಮಿಸಿರಿ," ಎಂದು ವಿನಯವಾಡಿದನು.

"ನಿಜವಾಗಿ ನಾನು ತೊಂದರೆಯಲ್ಲಿ ಬಿದ್ದಿದ್ದೇನೆ, ಪಂಡಿತರೆ. ನಿಮ್ಮ ಸಲಹೆ ಕೇಳಲು ಬರಬೇಕೆಂದು ಯೋಚಿಸುತ್ತಿದ್ದೆ. ಅಷ್ಟರಲ್ಲಿ ದಾಸಿ ಕರೆದಳು."

"ತೊಂದರೆ ! ನಿಮಗೆ ! ಏನಾಯಿತು ಹೆಗ್ಗಡೆಗಳೆ ?" –ಸಹಾನುಭೂತಿಯ ನಗೆ ಹಾರಿಸಿ ಅಗ್ಗಳನೆಂದನು.

"ಎರಡು ದಿನದಿಂದ ಆಕಾಶ ಶುಭ್ರವಾಗಿರುವುದನ್ನು ಕಂಡು ಜಗದೇಕಮಲ್ಲರಸರಿಗೆ ಬೇಟೆಯ ಹುಚ್ಚು ಹತ್ತಿದೆ. ನಾಳೆಯೇ ಬೇಟೆಗೆ ಹೋಗಬೇಕೆಂದು ಹೇಳಿದ್ದಾರೆ. ಏನು ಮಾಡಬೇಕೋ ನನಗೊಂದೂ ತೋರುತ್ತಿಲ್ಲ" –ಹೆಗ್ಗಡೆ ದುಗುಡದಿಂದ ಹೇಳಿದನು.

"ಅರಸರು ಬೇಟೆಗೆ ಹೋದರೆ ನಿಮಗಾಗುವ ತೊಂದರೆಯೇನು?"

"ಬೇಟೆಯ ಕಾಲದಲ್ಲಿ ಅವರ ರಕ್ಷಣೆಯ ಹೊಣೆ ಸಂಪೂರ್ಣವಾಗಿ ನನ್ನ ಮೇಲೆ ಬೀಳುವುದು."

"ಬಿದ್ದರೇನಾಯಿತು? ಅದರಿಂದ ನಿಮ್ಮ ಬೆನ್ನು ಮುರಿಯುವುದಿಲ್ಲ," ಎಂದು ನಗೆಯಾಡಿದ ಅಗ್ಗಳ.

"ಜಗದೇಕಮಲ್ಲರಸರು ಕುದುರೆ ಸವಾರಿಯಲ್ಲಿ ನಿಪುಣರು. ಅವರಿಗೆ ಸಮನಾಗಿ ಕುದುರೆ ಓಡಿಸುವುದು ನನ್ನಿಂದಾಗುವುದಿಲ್ಲ."

"ನಾನು ಅವರಿಗಿಂತ ಚೆನ್ನಾಗಿ ಓಡಿಸಬಲ್ಲೆ. ಅಪೇಕ್ಷಿಸಿದರೆ ನಿಮ್ಮ ಸಂಗಡ ಬರುತ್ತೇನೆ."

ಉಳಿದೆನೆಂಬ ಸಂತೋಷದಿಂದ ಹೆಗ್ಗಡೆ, "ಹಾಗಾದರೆ ನಿಮಗೆ ಬೇಕಾದ ಕುದುರೆಯನ್ನು ಇಂದೇ ಆರಿಸಿಕೊಳ್ಳಿ," ಎಂದನು.

ಆ ಮಧ್ಯಾಹ್ನ ಅಗ್ಗಳನು ಅಶ್ವಶಾಲೆಯ ಜಾತಿಕುದುರೆಗಳಲ್ಲಿ ಕಪ್ಪು ಬಣ್ಣದ ಕುದುರೆಯೊಂದನ್ನು ತನಗಾಗಿ ಆರಿಸಿಕೊಂಡನು. ಮರುದಿನ ಬೆಳಕು ಹರಿಯುತ್ತಲೇ ೫೦ ಮಂದಿ ರಾವುತರ ರಕ್ಷಣೆಯಲ್ಲಿ ಜಗದೇಕಮಲ್ಲನು ಬೇಟೆಗೆ ಹೊರಟನು. ನಗರದಿಂದ ಗಾವುದ ದೂರದಲ್ಲಿ ಒಂದು ಸಣ್ಣ ಅಡವಿ ಬೇಟೆಗೆ ಗೊತ್ತಾಗಿದ್ದಿತು. ಸುಮಾರು ಹರಿದಾರಿ ಸುತ್ತಳತೆಯ ನಿಬಿಡ ವನ, ಅದರ ಸುತ್ತ ಹರಿದಾರಿಯವರೆಗೆ ಹರಡಿದ್ದ ಮರಗಿಡಗಳಿಲ್ಲದ ಬಯಲು. ಬೇಟೆಗಿಂತ ಕುದುರೆ ಸವಾರಿಗೆ ಅನುಕೂಲವಾಗಿತ್ತು ಆ ಪ್ರದೇಶ.

ವನದ ಹತ್ತಿರ ಬರುತ್ತಲೇ ಜಗದೇಕಮಲ್ಲನು ಕಡಿವಾಣವನ್ನು ಸಡಲಿಸಿ ಕದುರೆ ಇಚ್ಛೆ ಬಂದಂತೆ ಓಡಲು ಬಿಟ್ಟನು. ಮರದಡಿಯಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದ ಹೆಗ್ಗಡೆ ಇದನ್ನು ಕಂಡಕೂಡಲೇ ನಾಲ್ಕುಮಂದಿ ಸವಾರರನ್ನು ಹಿಂದೆ ಕಳುಹಿಸಿದನು. ಅಗ್ಗಳನೂ ಅವರ ಸಂಗಡ ಹೋದನು.

ಜಗದೇಕಮಲ್ಲನು ವನದ ಅಂಚಿನಲ್ಲಿ ಕುದುರೆಯನ್ನು ಓಡಿಸುತ್ತ ಹೆಗ್ಗಡೆ ಕಣ್ಮರೆಯಾಗುತ್ತಲೆ ಬಯಲ ಕಡೆ ತಿರುಗಿಸಿದನು. ನೆಲ ಅನುಕೂಲವಾಗಿದ್ದುದರಿಂದ ಕುದುರೆ ನಾಗಾಲೋಟದಿಂದ ವೇಗವಾಗಿ ಓಡಿತು. ಸವಾರರ ಕುದುರೆಗಳು ಹಿಂದುಳಿದವು. ಅಗ್ಗಳನ ಕುದುರೆ ಮಾತ್ರವೇ ಸಂಗಡ ಹೋಯಿತು. ಈ ರೀತಿ ಅವರು ಹೆಚ್ಚು ದೂರ ಹೋದಮೇಲೆ ಜಗದೇಕಮಲ್ಲನ ಕುದುರೆ, ಸವಾರನ ಅಜಾಗರೂಕತೆಯಿಂದಲೋ, ಆಕಸ್ಮಿಕವಾಗಿಯೋ ಬೆದರಿ ಕುಪ್ಪಳಿಸಿ, ಸವಾರನನ್ನು ಕೆಡವಿ ಓಡಿಹೋಯಿತು.

ಅಗ್ಗಳನು ಕುದುರೆಯಿಂದಿಳಿದು ಹತ್ತಿರ ಹೋಗಿ ನೋಡಿದಾಗ

ಜಗದೇಕಮಲ್ಲನು ಮೂರ್ಛೆಹೋದಂತೆ ಕದಲದೆ ಬಿದ್ದಿದ್ದನು. ಆಗ ಅಗ್ಗಳನು ತನ್ನ ತಡಿಚೀಲದಲ್ಲಿದ್ದ ಸ್ಥಾಲಿಯನ್ನು ತಂದು ಹಣೆ ಮುಖಗಳಿಗೆ ನೀರು ಸವರಿದಾಗ ಜಗದೇಕಮಲ್ಲನು ಕಣ್ತೆರೆದು ಸುತ್ತ ನೋಡಿದನು.

"ಪೆಟ್ಟಾಯಿತೇ, ಅರಸರೆ ?" ಅಗ್ಗಳನು ಕಳವಳದಿಂದ ಕೇಳಿದನು.

"ಹಿಂದೆ ಬರುತ್ತಿದ್ದ ಸವಾರರೆಲ್ಲಿ ?"

"ಅವರು ಬಹಳ ದೂರದಲ್ಲಿದ್ದಾರೆ. ಇಲ್ಲಿಗೆ ಬರಲು ಕೊಂಚ ಹೊತ್ತಾಗಬಹುದು."

ಆಗ ಜಗದೇಕಮಲ್ಲನು ಬದಲಿಸಿದ ಕಂಠದಿಂದ ಅವಸರವಾಗಿ, "ನಿನ್ನೊಡನೆ ಏಕಾಂತವಾಗಿ ಮಾತಾಡುವುದಕ್ಕಾಗಿ ನಾನು ಬೇಟೆಗೆ ಬಂದದ್ದು, ಹೇಳಬೇಕಾದ್ದನ್ನು ಜಾಗ್ರತೆ ಹೇಳು,' ಎಂದನು.

ಈ ಅವಕಾಶಕ್ಕಾಗಿಯೇ ಕಾಯುತ್ತಿದ್ದ ಅಗ್ಗಳನೆಂದನು : "ಮಹಾರಾಣಿ ಕಾಮೇಶ್ವರೀದೇವಿಯವರು ಚಾಲುಕ್ಯ ಅರಸುತನದ ಪುನರುದ್ಧಾರಕ್ಕಾಗಿ ಸಂಚು ಹೂಡಿದ್ದಾರೆ. ಕರ್ಹಾಡದ ವಿಜಯಾರ್ಕ ಮಹಾರಾಜರು, ದೇವಗಿರಿಯ ಸೇವುಣ ಅರಸರು, ಬನವಾಸಿ ನಾಡಿನ ಪ್ರಮುಖ ಸಾಮಂತರು ಸಂಚಿಗೆ ಅನುಮೋದನೆಯಿತ್ತು ಸಹಾಯ ಮಾಡಲು ಒಪ್ಪಿದ್ದಾರೆ. ಬಿಜ್ಜಳನ ರಾಜ್ಯಾಪಹಾರದ ದುರಾಡಳಿತವನ್ನು ಕೊನೆಗಾಣಿಸಿ, ನಿಮ್ಮನ್ನು ಚಾಲುಕ್ಯ ಸಿಂಹಾಸನದಲ್ಲಿ ಕುಳ್ಳಿರಿಸುವುದು ಸಂಚಿನ ಉದ್ದೇಶ. ನಿಡುಗಲ್ಲಿನ ದುರ್ಗಾಧಿಪತಿ ಬೊಮ್ಮರಸನು ಮಹಾರಾಣಿಯವರ ಪ್ರತಿನಿಧಿಯಾಗಿ ಚಾಲುಕ್ಯ ರಾಜ್ಯದ ಅನೇಕ ಕಡೆಗಳಲ್ಲಿ ಸಂಚಾರಮಾಡಿ ಸಾಮಂತಮನ್ನೆಯರ ಅಭಿಮತ ತಿಳಿದು ಬಂದಿದ್ದಾನೆ. ನಿಮ್ಮ ಒಪ್ಪಿಗೆ ಸಹಕಾರಗಳು ಈಗ ಅಗತ್ಯ."

ಜಗದೇಕಮಲ್ಲನು ಕೆಲವು ಕ್ಷಣಗಳು ಯೋಚಿಸಿ, "ಈಗ ಬೊಮ್ಮರಸನೆಲ್ಲಿದ್ದಾನೆ?" ಎಂದನು.

"ಏನಾದರೊಂದು ತಂತ್ರಹೂಡಿ ನಿಮ್ಮೊಡನೆ ಸಂಧಾನ ಪ್ರಾರಂಭಿಸುವ ಉದ್ದೇಶದಿಂದ ಹತ್ತು ದಿನಗಳ ಹಿಂದೆ ನಾವು ಕಲ್ಯಾಣಕ್ಕೆ ಬಂದೆವು. ನಮ್ಮ ದುರಾದೃಷ್ಟ, ಬಂದ ರಾತ್ರಿಯೆ ನಾರಣಕ್ರಮಿತನು ನನ್ನನ್ನು ಮೋಸದಿಂದ ರಾಜಗೃಹಕ್ಕೆ ಕರೆತಂದು ಸೆರೆಯಿಟ್ಟನು. ಆಮೇಲೆ ಬೊಮ್ಮರಸನೇನಾದನೆಂಬುದು ತಿಳಿಯದು."

"ಮಹಾರಾಣಿಯ ಒಳಸಂಚು ಬಿಜ್ಜಳನಿಗೆ ತಿಳಿದಿದೆಯೆಂದು ನೀನು ಭಾವಿಸುವೆಯಾ?"

"ತಿಳಿದಿಲ್ಲವೆಂದೇ ನನ್ನ ವಿಶ್ವಾಸ. ತಿಳಿದಿದ್ದರೆ ನನ್ನನ್ನು ರಾಜಗೃಹಕ್ಕೆ ಕರೆತಂದ

ಕ್ರಮಿತನು ಹತ್ತು ದಿನಗಳಾದರೂ ನನ್ನನ್ನು ನೋಡದೆ ಇರುತ್ತಿರಲಿಲ್ಲ. ಒಳಸಂಚಿನ ವಿಚಾರ ತಿಳಿಯದಿರುವುದೇ ಅವನ ಉದಾಸೀನದ ಕಾರಣ."

ಜಗದೇಕಮಲ್ಲನು ಮತ್ತೆ ಚಿಂತಾಮಗ್ನನಾದನು. ಪ್ರಯಾಸದಿಂದ ಆಕಸ್ಮಿಕವಾಗಿ ದೊರಕಿದ ಅವಕಾಶ ವ್ಯರ್ಥವಾಗುತ್ತಿದೆಯೆಂದು ಅಗ್ಗಳನು ತಳಮಳಿಸಿದನು. ಚಿಂತೆಯಲ್ಲಿ ಕಳೆದ ಆ ಒಂದೊಂದು ಕ್ಷಣವೂ ಸವಾರರನ್ನು ಅವರಿದ್ದ ಸ್ಥಳಕ್ಕೆ ಹತ್ತಿರ ತರುತ್ತಿತ್ತು.

ಜಗದೇಕಮಲ್ಲನು ಹೇಳಿದನು : "ಎರಡು ವಾರಗಳ ಮೊದಲು ಬಿಜ್ಜಳನ ರಹಸ್ಯ ದೂತನು ನನ್ನ ಬಳಿಗೆ ಬಂದು, ರಾಣಿಯ ಮಗ ಪ್ರೇಮಾರ್ಣವನೆಂಬ ಹುಡುಗನನ್ನು ನಾನು ದತ್ತಸ್ವೀಕಾರ ಮಾಡಬೇಕೆಂದೂ, ನನ್ನ ಅನಂತರ ಅವನು ಚಾಲುಕ್ಯ ಅರಸನಾಗುವನೆಂದೂ ಹೇಳಿದನು. ಆ ವಿಚಾರವೇನು ?"

"ನೀವು ಅದಕ್ಕೆ ಏನು ಉತ್ತರ ಕೊಟ್ಟಿರಿ?"

"ರಾಣಿಯ ಒಬ್ಬನೇ ಮಗನಾದ ಕೀರ್ತಿವರ್ಮನು ನನ್ನ ಬಂಧನದ ಅನಂತರ ಸತ್ತನೆಂದು ಕೇಳಿದ್ದೇನೆ. ಪ್ರೇಮಾರ್ಣವನ ವಿಚಾರ ನನಗೆ ತಿಳಿಯದು. ನಾನು ದತ್ತ ಸ್ವೀಕಾರ ಮಾಡುವುದಿಲ್ಲ—ಎಂದು ಹೇಳಿ ಕಳುಹಿಸಿದೆ."

"ಪ್ರೇಮಾರ್ಣವನು ಮಹಾರಾಣಿಯವರ ಕ್ಷೇತ್ರಜಪುತ್ರ. ಕೀರ್ತಿವರ್ಮನು ಮುಡುಪಿದ ಮೇಲೆ, ಚಾಲುಕ್ಯವಂಶ ಅಳಿಯದಿರಲೆಂದು ಮಹಾರಾಣಿಯವರು ನಿಯೋಗ ಪದ್ಧತಿಯಿಂದ ಪ್ರೇಮಾರ್ಣವನನ್ನು ಪಡೆದರು. ವಿಜಯಾರ್ಕನ ಅರಮನೆಯಲ್ಲಿ ಆರು ವರ್ಷಗಳಕಾಲ ರಹಸ್ಯವಾಗಿ ಸಲಹಿದರು. ಈಗೊಂದು ವರ್ಷದ ಹಿಂದೆ ಕರ್ಹಾಡದ ಚಾಲುಕ್ಯ ಭವನದಲ್ಲಿ ನಡೆದ ಸಭೆಯಲ್ಲಿ ಪ್ರೇಮಾರ್ಣವನ ಜನ್ಮ ವಿಚಾರ ಪ್ರಕಟಿಸಲ್ಪಟ್ಟಿತು."

"ಪ್ರೇಮಾರ್ಣವನ ತಂದೆ ಯಾರು?"

"ಆ ವಿಚಾರ ನನಗೆ ತಿಳಿಯದು. ಪ್ರೇಮಾರ್ಣವನ ದಮನಿಗಳಲ್ಲಿ ನೂರಕ್ಕೆ ನೂರು ಪಾಲು ಚಾಲುಕ್ಯ ರಕ್ತ ಹರಿಯುತ್ತಿದೆಯೆಂದು ಮಹಾರಾಣಿಯವರು ಹೇಳುತ್ತಾರೆ. ಅವನ ಜನ್ಮ ರಹಸ್ಯವನ್ನು ತಾವೇ ನಿಮಗೆ ತಿಳಿಸಬೇಕೆಂದು ಮಹಾರಾಣಿಯವರ ಇಚ್ಛೆ."

ಜಗದೇಕಮಲ್ಲನ ಹುಬ್ಬುಗಳು ಮುದುಡಿದವು. ಅವನು ಮತ್ತೆ ಯೋಚಿಸುತ್ತಿದ್ದನು. ಕ್ಷಣಗಳು ಯುಗಗಳಾದವು ಅಗ್ಗಳನಿಗೆ ಇನ್ನೇನು ಸವಾರರು ಬರುತ್ತಾರೆ ಎಂದುಕೊಂಡನು ತನ್ನಲ್ಲಿ ತಾನು.

ಕೊನೆಗೆ ಜಗದೇಕಮಲ್ಲನು, "ಇದು ಬಹಳ ಜಟಿಲವಾದ ವಿಚಾರ, ಅಗ್ಗಳ.

ಮಹಾರಾಣಿಯವರನ್ನು ನೋಡದೆ ನಾನು ಏನನ್ನೂ ನಿರ್ಧರಿಸುವುದಿಲ್ಲ," ಎಂದನು.

"ಕುಮಾರ ಸೋಮೇಶ್ವರನನ್ನು ಕಲಚೂರ್ಯ ಯುವರಾಜನನ್ನಾಗಿ ಮಾಡಲು ಬಿಜ್ಜಳರಾಯರು ನಿರ್ಧರಿಸಿದ್ದಾರೆ. ಮುಂದಿನ ಮಾಘಮಾಸದಲ್ಲಿ ಮಂಗಳವೇಡೆಯಲ್ಲಿ ಪಟ್ಟಾಭಿಷೇಕ ನಡೆಯುತ್ತದೆ. ಬಿಜ್ಜಳರಾಯರು ಮಹಾರಾಣಿಯವರನ್ನು ಆ ಸಮಾರಂಭಕ್ಕೆ ಆಹ್ವಾನಿಸಿದ್ದಾರೆ. ಮಹಾರಾಣಿಯವರು ಆಹ್ವಾನವನ್ನು ಅಂಗೀಕರಿಸಿದರೆ ನಿಮ್ಮನ್ನು ನೋಡಲು ಕಲ್ಯಾಣಕ್ಕೆ ಬರುವರು."

"ಈಗ ರಾಣಿ ಎಲ್ಲಿದ್ದಾಳೆ?"

"ದೇವಗಿರಿಯಲ್ಲಿ."

"ಇದರಲ್ಲೇನೋ ಮೋಸವಿದೆ. ಮಹಾರಾಣಿ ಮಂಗಳವೇಡೆಗೆ ಹೋಗದಂತೆ ತಡೆಯಬೇಕು. ದೇವಗಿರಿಗೆ ಕೂಡಲೆ ಸುದ್ದಿ ಕಳುಹಿಸುವುದು ಅಗತ್ಯ."

"ಕಳುಹಿಸುವುದು ಹೇಗೆ ? ಕರ್ಣದೇವನ ಸರ್ಪಕಾವಲನ್ನು ಭೇದಿಸುವುದು ಸುಲಭವಲ್ಲ" –ನಿರಾಶೆ ಇಣುಕಿತ್ತು ಅಗ್ಗಳನ ಮಾತಿನಲ್ಲಿ.

ಜಗದೇಕಮಲ್ಲನು ತಟ್ಟನೆ ಎದ್ದು ಕುಳಿತು ಚಾಲುಕ್ಯ ಅರಸನಿಗೆ ಉಚಿತವಾದ ಅಧಿಕಾರ ದರ್ಪದಿಂದ, "ನಾನು ಅದಕ್ಕೊಂದು ಉಪಾಯಹೂಡುತ್ತೇನೆ. ಚಾಲುಕ್ಯರು ಶೈವಧರ್ಮಿಗಳು. ಪಾಶುಪತ ಯತಿಗಳನ್ನು ನಾವು ಗುರುಗಳೆಂದು ಪೂಜಿಸುತ್ತೇವೆ. ಆದರೂ ಈ ಆರು ವರ್ಷಗಳಿಂದ ಒಂದು ಸಾರಿಯೂ ನಾನು ಜಂಗಮ ದಾಸೋಹ ಮಾಡಿಸಲಿಲ್ಲ. ಈಗ ಅದಕ್ಕೆ ಏರ್ಪಡಿಸುವಂತೆ ಬಿಜ್ಜಳರಾಯರಿಗೆ ಹೇಳಿ ಕಳುಹಿಸುತ್ತೇನೆ. ರಾಜಗೃಹಕ್ಕೆ ಜಂಗಮರು ಬರುವಂತಾದರೆ ಅವರ ಮುಖಾಂತರ ದೇವಗಿರಿಗೆ ಸುದ್ದಿ ಕಳುಹಿಸಬಹುದು. ಅವರಿಂದ ಬೊಮ್ಮರಸನ ವಿಚಾರವನ್ನು ತಿಳಿಯುವುದು ಸಾಧ್ಯ," ಎಂದನು.

"ಕರ್ಣದೇವನು ಇದಕ್ಕೊಪ್ಪುವನೆ ? ಜಂಗಮರೆಂದರೆ ಹಾರಿ ಬೀಳುವುದು ಅವನ ಸ್ವಭಾವ."

"ರಾಜಗೃಹದ ರಕ್ಷಕಸ್ಥಾನದಿಂದ ಅವನನ್ನು ತೆಗೆಸಿಹಾಕಲು ಏನಾದರೂ ಉಪಾಯ ಯೋಚಿಸಬೇಕು." –ಪುನಃ ಚಿಂತೆ ಅಂಕುರಿಸಿತ್ತು ಜಗದೇಕಮಲ್ಲನಲ್ಲಿ.

"ಈ ನಾಲ್ಕು ದಿನಗಳ ಸಹವರ್ತನೆಯಿಂದ ಕರ್ಣದೇವನ ವಿಚಾರವೆಲ್ಲ ನನಗೆ ತಿಳಿದಿದೆ. ನಾನು ಆ ಕಾರ್ಯ ಮಾಡುತ್ತೇನೆ," ಎಂದು ಅಗ್ಗಳನು ಭರವಸೆಯಿತ್ತನು.

ದೂರದಲ್ಲಿ ಸವಾರರು ಬರುತ್ತಿರುವುದು ಕಂಡಿತು. ಜಗದೇಕಮಲ್ಲನು ಮೊದಲಿನಂತೆ ನೆಲದ ಮೇಲೆ ಮಲಗಿ, "ನಾವು ರಹಸ್ಯವಾಗಿ ಮಾತಾಡಿದೆವೆಂದು

ಯಾರಿಗೂ ತಿಳಿಯಕೂಡದು, ಎಚ್ಚರವಿರಲಿ. ನೀನು ಶುಶ್ರೂಷೆ ಮಾಡುತ್ತ ಕುಳಿತಿರು," ಎಂದನು.

"ಕ್ರಮಿತನಿಗೆ ಈ ದಿನ ನಾನೊಂದು ಓಲೆ ಕಳುಹಿಸಿದ್ದೇನೆ. ಬೇಟೆಯಿಂದ ಹಿಂದಿರುಗಿದ ಮೇಲೆ ನನ್ನನ್ನು ನೋಡಲು ಬರುತ್ತಾನೆ. ಪ್ರೇಮಾರ್ಣವನ ಪಟ್ಟಾಭಿಷೇಕದ ವಿಚಾರ ಪ್ರಸ್ತಾಪ ಮಾಡಬಹುದು. ನಿಮ್ಮ ಉತ್ತರವನ್ನು ಮೊದಲೇ ಯೋಚಿಸಿದ್ದರೆ ಒಳ್ಳೆಯದು." –ಎಂದು ಹೇಳಿ ಅಗ್ಗಳನು ಶೈತ್ಯೋಪಚಾರಕ್ಕೆ ಆರಂಭಿಸಿದನು. ಸವಾರರು ಹತ್ತಿರ ಬಂದಾಗಲು ಅದು ನಡೆಯುತ್ತಿತ್ತು.

ಕೆಲವು ಕ್ಷಣಗಳ ಮೇಲೆ ಜಗದೇಕಮಲ್ಲನು ಕಣ್ತೆರೆದು ಸವಾರರನ್ನು ನೋಡಿ ಕಿಟ್ಟನೆ ಕಿರುಚಿ ಪುನಃ ಬಿದ್ದುಬಿಟ್ಟನು. ಬಾಯಿಂದ ನೊರೆ ನೊರೆಯಾಗಿ ಜೊಲ್ಲುಸುರಿಯಲು ಮೊದಲಾಯಿತು.

"ಅರಸರಿಗೆ ಒಂದೊಂದು ಸಾರಿ ಹೀಗಾಗುತ್ತದೆ. ಭಯವೇನೂ ಇಲ್ಲ," ಎಂದು ಹೇಳಿ ಸವಾರರ ನಾಯಕನು ಭಲ್ಲೆಯಗಳನ್ನು ನೆಲದಲ್ಲಿ ನೆಟ್ಟು, ಮೇಲೆ ಬಟ್ಟೆ ಹರಡಿ ಜಗದೇಕಮಲ್ಲನಿಗೆ ಬಿಸಿಲು ಬೀಳದಂತೆ ಮಾಡಿದನು. ಕುದುರೆಯನ್ನು ಹುಡುಕಿ ತರಲು ಒಬ್ಬ ಸವಾರನನ್ನು ಕಳುಹಿಸಿದನು. ಇನ್ನೊಬ್ಬ ಸವಾರನು ಹೆಗ್ಗಡೆಗೆ ಸುದ್ದಿ ಕೊಡಲು ಹೋದನು.

ಇಂತಹ ಆಕಸ್ಮಿಕಗಳಿಗಾಗಿ ಮೇನೆಯೊಂದು ಶಿಬಿರದಲ್ಲಿ ಸಿದ್ಧವಾಗಿರುತ್ತಿತ್ತು. ಗಳಿಗೆಯ ಅನಂತರ ಮೇನೆಯೊಡನೆ ಹೆಗ್ಗಡೆ ಬಂದನು. ಆಗಲೂ ಜಗದೇಕಮಲ್ಲನಿಗೆ ಎಚ್ಚರವಾಗಿರಲಿಲ್ಲ. ಪ್ರಜ್ಞಾಶೂನ್ಯವಾಗಿ ಕದಲದೆ ಬಿದ್ದಿದ್ದನು. ಕಣ್ಣುಗಳ ಶೂನ್ಯ ದೃಷ್ಟಿ ಯಾವುದೋ ಅದೃಶ್ಯ ಜಗತ್ತಿನ ಪರಿಶೀಲನೆಯಲ್ಲಿ ಮಗ್ನವಾಗಿತ್ತು. ಬಾಯಿಂದ ಸುರಿದ ನೊರೆ ಗಲ್ಲದ ಮೇಲೆ ಹರಿದಿತ್ತು.

"ಕಳೆದ ಸಾರಿ ಹೀಗಾದಾಗ ಪ್ರಭುಗಳು ಪ್ರಹರಕಾಲವಾದರೂ ಏಳಲಿಲ್ಲ. ಎಚ್ಚರವಾಗುವವರೆಗೆ ಯಾರೂ ಪ್ರಭುಗಳನ್ನು ಮುಟ್ಟಬಾರದೆಂದು ವೈದ್ಯರು ಹೇಳಿದ್ದಾರೆ," –ಎಂದು ಹೆಗ್ಗಡೆ ಮೇನೆಯ ನೆರಳಲ್ಲಿ ತಾನೂ ಕುಳಿತನು.

"ನಿಮ್ಮ ರಕ್ಷಣೆಯ ಹೊಣೆ ಈಗ ಕಡಮೆಯಾಯಿತಲ್ಲವೆ?" ಸಮೀಪದಲ್ಲಿದ್ದ ಅಗ್ಗಳನೆಂದನು.

"ಕಡಿಮೆಯಾಗಲಿಲ್ಲ, ಇನ್ನಷ್ಟು ಹೆಚ್ಚಿತು, ಪಂಡಿತರೆ. ಪ್ರಭುಗಳು ರಾಜಗೃಹ ಸೇರುವವರೆಗೆ ನನ್ನ ಜೀವ ತಹತಹಿಸುತ್ತದೆ. ಅಸ್ವಸ್ಥತೆಯ ವಿಚಾರ ಬಿಜ್ಜಳರಾಯರಿಗೆ ತಿಳಿದರೆ, ವೈದ್ಯರ ಸಲಹೆ ತೆಗೆದುಕೊಳ್ಳದೆ ಬೇಟೆಗೇಕೆ ಹೋದಿರಿ ಎನ್ನುತ್ತಾರೆ. ಅವರಿಗೆ ಏನು ಉತ್ತರ ಹೇಳುವುದು ಎಂದು ಯೋಚಿಸುತ್ತಿದ್ದೇನೆ," –ಎಂದು

ಹೆಗ್ಗಡೆ ಪೇಚಾಡಿದನು.

ಸ್ವಲ್ಪ ಹೊತ್ತಿನ ಮೇಲೆ ಜಗದೇಕಮಲ್ಲನು ಎಚ್ಚೆತ್ತು ಎದ್ದು ಕುಳಿತು, ಹತ್ತಿರಿದ್ದ ಸವಾರನನ್ನು, "ಹೆಗ್ಗಡೆಯೆಲ್ಲಿ?" ಎಂದು ಕೇಳಿದನು.

ಹೆಗ್ಗಡೆ ಹತ್ತಿರ ಹೋಗಿ, "ಪ್ರಭುಗಳ ಆಜ್ಞೆಯೇನು?" ಎಂದನು.

"ಮೇನೆ ಸಿದ್ಧವಾಗಿದೆಯೇ ?"

"ಸಿದ್ಧವಾಗಿದೆ."

"ತರುವಂತೆ ಹೇಳಿರಿ. ನಾನು ಕೂಡಲೇ ನಗರಕ್ಕೆ ಹಿಂದಿರುಗಬೇಕು."

ಪ್ರಾರಂಭವಾಗುವ ಮೊದಲೇ ಅಂದಿನ ಬೇಟೆ ಮುಗಿಯಿತು. ಮಧ್ಯಾಹ್ನದ ಹೊತ್ತಿಗೆ ಜಗದೇಕಮಲ್ಲನು ರಾಜಗೃಹಕ್ಕೆ ಹಿಂದಿರುಗಿದನು.

* * *

ಆ ದಿನ ಸಂಜೆ ಅಗ್ಗಳನು ಮಧ್ಯಾಹ್ನದ ಸುಖನಿದ್ರೆ ಮುಗಿಸಿ ವಾಸಗೃಹದಲ್ಲಿ ಕುಳಿತಿದ್ದಂತೆ ಭಟನೊಬ್ಬನು ನಾರಣಕ್ರಮಿತನನ್ನು ಕರೆದುಕೊಂಡು ಅಲ್ಲಿಗೆ ಬಂದನು.

"ನಿಮ್ಮ ಓಲೆ ನಿನ್ನೆಯೇ ತಲುಪಿತು, ಅಗ್ಗಳದೇವರಸರೆ. ಕಾರ್ಯಾವಸರದಲ್ಲಿ ನಿಮ್ಮನ್ನು ನೋಡಲಾಗಲಿಲ್ಲ. ನೀವು ಪ್ರಭುಗಳ ಸಂಗಡ ಬೇಟೆಗೆ ಹೋದಿರೆಂದು ಇಂದು ತಿಳಿಯಿತು. ಹಿಂದಿರುಗಿದ ಮೇಲೆ ನೋಡಬಹುದೆಂದು ಸುಮ್ಮನಾದೆ. ಅಷ್ಟರಲ್ಲಿ ಪ್ರಭುಗಳ ಅಸ್ವಸ್ಥದ ವಿಚಾರ ಕೇಳಿ ಕೂಡಲೇ ಬಂದೆ. ಈಗವರು ಹೇಗಿದ್ದಾರೆ?" –ಎಂದು ಕ್ರಮಿತನೇ ಪ್ರಾರಂಭಿಸಿದನು.

"ಮಧ್ಯಾಹ್ನ ಬೇಟೆಯಿಂದ ಹಿಂದಿರುಗಿದಾಗ ಸ್ವಸ್ಥರಾಗಿದ್ದರು," ಎಂದು ಅಗ್ಗಳನು ಉತ್ತರಿಸಿದನು.

"ನೀವು ಬೇಟೆಗೆ ಸಂಗಡ ಹೋದದ್ದು ಒಳ್ಳೆಯದೇ ಆಯಿತಲ್ಲವೆ?"

"ಹೌದು. ನೀವು ಹೇಳಿದ್ದ ಆ ವಿಚಿತ್ರ ರೋಗದ ಲಕ್ಷಣಗಳನ್ನು ಕಣ್ಣಾರೆ ಕಂಡೆ."

"ಅದರ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನು?" –ಕ್ರಮಿತನ ಪ್ರಶ್ನೆಯಲ್ಲಿ ಕುತೂಹಲ ಎದ್ದು ಕಾಣುತ್ತಿತ್ತು.

"ನಾನು ವೈದ್ಯನಲ್ಲ. ಅನುಭವದಿಂದ ಇಷ್ಟು ಮಾತ್ರ ಹೇಳಬಲ್ಲೆ. ನೀವು ಭಾವಿಸಿದಂತೆ ಅದು ಮೂರ್ಛಾರೋಗವಲ್ಲ."

"ಹಾಗಾದರೆ........?"

"ಪ್ರಭುಗಳು ಕುದುರೆಯಿಂದ ಬಿದ್ದು ಎಚ್ಚರ ತಪ್ಪಿದಾಗ ನಾನೂ, ನಾಲ್ವರು ಸವಾರರೂ ಹತ್ತಿರಿದ್ದೆವು. ಅವರು ಕದಲದೆ ಬಿದ್ದಿದ್ದರು. ಬಾಯಲ್ಲಿ ನೊರೆ

ಬರುತ್ತಿತ್ತು. ಇವು ಮೂರ್ಛಾರೋಗದ ಲಕ್ಷಣಗಳಂತೆ ಕಂಡರೂ ಪ್ರಭುಗಳ ಅರೆಮುಚ್ಚಿದ ಕಣ್ಣುಗಳ ದೃಷ್ಟಿ ನನ್ನನ್ನು ಅಚ್ಚರಿಗೊಳಿಸಿತು. ಅದರ ಅರ್ಥವೇನೆಂದು ನನಗೆ ತಿಳಿದಿದೆ. ಕೆಲವರ ಕಣ್ಣುಗಳಲ್ಲಿ ಆ ಮಾದರಿಯ ದೃಷ್ಟಿಯನ್ನು ನೋಡಿದ್ದೇನೆ."

ಕ್ರಮಿತನ ಕುತೂಹಲ ಇನ್ನೊಂದು ಮೆಟ್ಟಲು ಮೇಲೇರಿತು. "ಯಾರ ಮುಖಗಳಲ್ಲಿ ನೋಡಿದ್ದೀರಿ?" ಎಂದನು.

"ಯೋಗಿ ಸಾಧು ಸಂತರ ಕಣ್ಣುಗಳಲ್ಲಿ. ಅವರು ಧ್ಯಾನಕ್ಕೆ ಕುಳಿತು ಸಮಾಧಿಸ್ಥರಾದಾಗ ಅರೆಮುಚ್ಚಿದ ಅವರ ಕಣ್ಣುಗಳ ದೃಷ್ಟಿ ಯಾವುದೋ ಅಭೌಮ ಅದ್ಭುತವನ್ನು ಕಂಡಂತೆ ಸ್ಥಿರವಾದ ಅಪೂರ್ವ ಕಾಂತಿಯಿಂದ ಬೆಳಗುತ್ತದೆ. ಈ ದಿನ ಜಗದೇಕ ಮಲ್ಲರು ಎಚ್ಚರ ತಪ್ಪಿ ಬಿದ್ದಿದ್ದಾಗ ಅವರ ಕಣ್ಣುಗಳಲ್ಲಿ ಆ ಕಾಂತಿಯನ್ನು ನೋಡಿದೆ. ವಿಶೇಷವೆಂದರೆ ಯೋಗಿಗಳು ಪದ್ಮಾಸನದಲ್ಲಿ ಕುಳಿತು ಧ್ಯಾನಧಾರಣೆಗಳಿಂದ ಸಮಾಧಿ ಸ್ಥಿತಿಯನ್ನು ಪಡೆಯುತ್ತಾರೆ. ಜಗದೇಕಮಲ್ಲರಸರು ಮಲಗಿದ್ದಂತೆಯೇ ಸಮಾಧಿಸ್ಥರಾದದ್ದನ್ನು ಕಂಡು ನನಗೆ ಆಶ್ಚರ್ಯವಾಯಿತು."

ಕ್ರಮಿತನು ಬೆರಗುವಡೆದು ಎವೆಯಿಕ್ಕದೆ ಕೆಲವು ಕ್ಷಣಗಳು ಅಗ್ಗಳನ ಮೊಗನೋಡಿದನು. ಆಮೇಲೆ ಅವಿಶ್ವಾಸದ ನಗೆಹಾರಿಸಿ, "ಎಲ್ಲ ಕವಿಗಳಂತೆ ನೀವು ಭಾವಾಧೀನರು ಅಗ್ಗಳ. ತುಂಬೆಹೂವಲ್ಲಿ ಬ್ರಹ್ಮಾಂಡವನ್ನು ಕಾಣುವ ಸ್ವಭಾವ ನಿಮ್ಮದು. ಆದರೆ ರಾಜಾಂತಃಪುರಗಳಲ್ಲಿ ಬೆಳೆದ ನಿಮಗೆ ಯೋಗಿ ಸಾಧು ಸಂತರ ಪರಿಚಯವಾದದ್ದು ಹೇಗೆ ?": ಎಂದನು.

"ಕವಿಯಾಗಲು ಜೀವನದ ಎಲ್ಲ ಮುಖಗಳ ಪರಿಚಯ ಅಗತ್ಯ, ಕ್ರಮಿತರೆ," ಅಗ್ಗಳನು ಉತ್ತರಿಸಿದನು. "ಅರಮನೆಗಲ್ತು, ಸೂಳೆಮನೆಗಲ್ತು, ಸವಣ್ಮನೆಗಲ್ತು– ಎಂದು ಪ್ರಾರಂಭವಾಗುವ ಆ ಪದ್ಯವನ್ನು ನೀವು ಕೇಳಿಲ್ಲವೆ?"

"ಅರಮನೆಗಲ್ತು, ಸೂಳೆಮನೆಗಲ್ತು, ಸವಣ್ಮನೆಗಲ್ತು, ಕೂಡೆ ಬ ।
ಲ್ಲರ ಬಗೆಗಲ್ತು ವಸ್ತುಕೃತಿಯಂ ಸಲೆಪೇಳ್ದುದು, ಕಲ್ತು ಪೇಳದಂ ॥
ದರಮನೆಗಲ್ತು, ಸೂಳೆಮನೆಗಲ್ತು, ಸವಣ್ಮನೆಗಲ್ತು, ಕೂಡೆ ಬ ।
ಲ್ಲರ ಬಗೆಗಲ್ತದಾವೆಡಗಮಲ್ತದು ಕಲ್ಪಿ ವಲಂ ಕವೀಂದ್ರ ರಾ ॥

"ಅರಮನೆ ಗುರುಮನೆ ಸೂಳೆಮನೆಗಳ ವ್ಯವಹಾರವನ್ನು ಅರಿತು, ಅದರೊಡನೆ ಬಲ್ಲವರ ಮನೋಗತ ಅಭಿರುಚಿಗಳನ್ನು ತಿಳಿದುಕೊಂಡು ಕವಿ ಕಾವ್ಯವನ್ನು ರಚಿಸಬೇಕು. ಹೀಗೆ ಕಲಿತು ರಚಿಸದ ಕಾವ್ಯ ಅರಮನೆಗೆ ಸಲ್ಲ, ಬಲ್ಲವರನ್ನು ಅದು ಮೆಚ್ಚಿಸುವುದಿಲ್ಲ. ಕವೀಂದ್ರನೇ ಆಗಿರಲಿ, ಅಂತಹ ಕವಿಯ ಕಲ್ಪನೆ ಯಾವೆಡೆಯಲ್ಲಿಯೂ ಸಲ್ಲುವುದಿಲ್ಲ," ಎಂದು ಅಗ್ಗಳನು ಮುಗಿಸಿದನು.

ಕ್ರಮಿತನು ಹೇಳಿದನು : "ಎಲ್ಲ ಅರಸರಂತೆ ಜಗದೇಕಮಲ್ಲರಸರೂ ವಿಷಯಾಸಕ್ತರೆಂದು ನಿಮಗೆ ತಿಳಿಯದೆ, ಅಗ್ಗಳ. ರಾಜಗೃಹದ ಗಣಿಕಾ ಪರಿವಾರ ಚಾಲುಕ್ಯ ರಾಜ್ಯಕ್ಕೆ ಹೆಸರಾದದ್ದು. ಜಗದೇಕಮಲ್ಲರಸರ ಸಮಾರಾಧನೆಗಾಗಿಯೇ ಅದು ರಚಿಸಲ್ಪಟ್ಟಿತು. ಇಂತಹ ವಿಷಯಾಸಕ್ತರಲ್ಲಿ ನೀವು ಯೋಗಿಯ ಗುಣಗಳನ್ನು ಕಾಣುತ್ತಿರುವಿರಿ !"

ಅಗ್ಗಳನು ನಗೆಸೂಸಿ ಗಂಭೀರವಾಗಿ ನುಡಿದನು : "ಜಗದೇಕಮಲ್ಲರ ವಿಚಾರ ನಾನು ಕೇಳಿದ್ದೇನೆ. ಅವರು ನೂರ್ಮಡಿ ತೈಲಪನಂತೆ ವಿಷಯಲೋಲುಪ್ತರಾಗಿರಲಿಲ್ಲ. ತಮ್ಮ ಯೌವನದಲ್ಲಿ ಭಾರತದ ಅನೇಕ ರಾಜ್ಯಗಳಲ್ಲಿ ಸಂಚಾರ ಮಾಡಿ ವ್ಯವಹಾರ ರಾಜಕೀಯಗಳ ಅನುಭವ ಪಡೆದರು. ಈ ರಾಜಕೀಯ ಆಸಕ್ತಿಯಿಂದ ಅವರಲ್ಲಿ ಮಹತ್ವಾಕಾಂಕ್ಷೆ ಅಂಕುರಿಸಿತು. ರಾಜ್ಯದ ಹಿತರಕ್ಷಣೆಗಾಗಿ ಬಿಜ್ಜಳರಾಯರು ಅವರನ್ನು ಈ ಅರಮನೆಯಲ್ಲಿ ಗೃಹಬಂಧನದಲ್ಲಿಟ್ಟರು. ಅವರ ಬಂಧನ ಸುಖಮಯವಾಗಲು ನೀವು ರಚಿಸಿದ ಗಣಿಕಾವಾಸದ ನಿತ್ಯ ಕಲಹ, ನಿತ್ಯ ವಿಹಾರ, ನಿತ್ಯ ವ್ಯಭಿಚಾರಗಳ ನಡುವೆ ಆರು ವರ್ಷಗಳ ದೀರ್ಘಕಾಲವನ್ನು ಕಳೆದ ಮೇಲೂ ಜಗದೇಕಮಲ್ಲರು ತಮ್ಮ ಬುದ್ಧಿ ವಿವೇಕಗಳನ್ನು ಉಳಿಸಿಕೊಂಡಿದ್ದರೆ ಅದು ಯೋಗಿಗೆ ಮಾತ್ರವೇ ಸಾಧ್ಯ. ಇಂದು ಬೇಟೆಯಲ್ಲಿ ನಡೆದ ಘಟನೆಯಿಂದ ಅವರ ಬಗೆಗೆ ನನ್ನ ಗೌರವ ಹೆಚ್ಚಿದೆ."

ಅಗ್ಗಳನು ನಿಜ ಹೇಳುತ್ತಿರುವನೇ ? ಅಥವಾ ತನ್ನನ್ನು ವಂಚಿಸಲು ರಚಿಸಿದ ರೂಢಿಯ ಮಾತುಗಳೋ ಇವು? ಕ್ರಮಿತನ ಹೃದಯದಲ್ಲಿ ಸಂದೇಹ ಮೂಡಿತು. ಪ್ರಕಟವಾಗಿ, "ನಿಮ್ಮ ಸಂಧಾನ ಎಲ್ಲಿಗೆ ಬಂದಿದೆ ? ಅದನ್ನು ಹೇಳಿ," ಎಂದನು.

"ಜಗದೇಕಮಲ್ಲರಸರನ್ನು ಏಕಾಂತದಲ್ಲಿ ನೋಡಿ ಮಾತಾಡುವ ಅವಕಾಶ ದೊರಕಿದರಲ್ಲವೇ ಸಂಧಾನ ? ಕರ್ಣದೇವರಸರು, ಮನೆಹೆಗ್ಗಡೆ, ಅವರ ಸುತ್ತ ಬಿಚ್ಚುಗತ್ತಿಯ ಕೋಟೆ ಕಟ್ಟಿದ್ದಾರೆ. ಹತ್ತು ದಿನಗಳಾದರೂ ಅದನ್ನು ಭೇದಿಸಲು ನಾನು ಶಕ್ತನಾಗಲಿಲ್ಲ. ಅದಕ್ಕಾಗಿಯೇ ನಿಮಗೆ ಓಲೆ ಬರೆದದ್ದು," –ಅಗ್ಗಳನು ನಿರಾಶೆಗೊಂಡವನಂತೆ ನುಡಿದನು.

"ಕ್ಷಮಿಸಿರಿ, ಅಗ್ಗಳ. ರಾಜಗೃಹದ ನಿಬಂಧನೆಗಳೂ ಇಷ್ಟೊಂದು ನಿಷ್ಠುರವೆಂದು ನನಗೆ ತಿಳಿದಿರಲಿಲ್ಲ. ಹೆಗ್ಗಡೆಗೆ ಹೇಳಿ ಸರಿಪಡಿಸುತ್ತೇನೆ," –ಎಂದು ಕ್ರಮಿತನು ಹೇಳುತ್ತಿದ್ದಂತೆ ಮನೆಹೆಗ್ಗಡೆ ಓಡುತ್ತ ಅಲ್ಲಿಗೆ ಬಂದನು. ಅಸ್ತವ್ಯಸ್ತವಾಗಿದ್ದ ಅವನ ಉಡುಗೆ ತೊಡಿಗೆಗಳನ್ನು ಕಂಡು ಕ್ರಮಿತನು, "ಏನಾಯಿತು, ಹೆಗ್ಗಡೆಗಳೆ?" ಎಂದನು.

ಹೆಗ್ಗಡೆ ತಳಮಳಿದಿಂದ ಏದುತ್ತ ಹೇಳಿದನು : "ಬೇಟೆಯಿಂದ ಬಂದ ಮೇಲೆ ವಿಶ್ರಮಿಸಿಕೊಳ್ಳುತ್ತಿದ್ದ ಪ್ರಭುಗಳು ಕೊಂಚ ಹೊತ್ತಿನ ಮೊದಲು ನನಗೆ ಹೇಳಿ ಕಳುಹಿಸಿದರು. ಕೂಡಲೆ ಹೋಗಿ ಎದುರಿಗೆ ನಿಂತೆ. 'ರಾಜಪುರೋಹಿತ ನಾರಣ ಕ್ರಮಿತರನ್ನು ನೋಡಬೇಕಾಗಿದೆ,' ಎಂದರು. 'ಧರ್ಮಾಧಿಕರಣಕ್ಕೆ ಸುದ್ದಿ ಕಳುಹಿಸುತ್ತೇನೆ' ಎಂದೆ ನಾನು. 'ಅವರು ಅಗ್ಗಳನ ವಾಸಗೃಹದಲ್ಲಿದ್ದಾರೆ ಕರೆದುಕೊಂಡು ಬಾ' ಎಂದರು ಪ್ರಭುಗಳು. 'ಅವರು ಬಂದಿದ್ದರೆ ನನಗೆ ತಿಳಿಯುತ್ತಿರಲಿಲ್ಲವೆ?' ಎಂದೆ ನಾನು. ವಾಸ್ತವದಲ್ಲಿ ನೀವು ಬಂದ ವಿಚಾರ ನನಗೆ ತಿಳಿಯದು. ಇಷ್ಟಕ್ಕೇ ಪ್ರಭುಗಳು ಕೋಪಿಸಿಕೊಂಡು, 'ಹೇಳಿದಷ್ಟು ಮಾಡು, ಮುಠ್ಠಾಳ!' ಎಂದು ಬೈದರು. ಕೈಗೆ ಸಿಕ್ಕ ವಸ್ತುಗಳನ್ನು ನನ್ನ ಕಡೆಗೆಸೆಯಲು ಪ್ರಾರಂಭಿಸಿದರು. ನಾನು ಓಡುತ್ತ ಇಲ್ಲಿಗೆ ಬಂದೆ."

ಕ್ರಮಿತನು ಅಗ್ಗಳನ ಮುಖ ನೋಡಿದನು. 'ನೋಡಿದಿರಾ ನಿಮ್ಮ ಯೋಗಿಯ ವರ್ತನೆ!' ಎನ್ನುವಂತಿತ್ತು ಆ ದೃಷ್ಟಿ.

"ನೀವು ಬಂದ ವಿಚಾರ ಪ್ರಭುಗಳಿಗೆ ತಿಳಿದದ್ದು ಆಶ್ಚರ್ಯವಲ್ಲವೆ?" ಎಂದನು ಅಗ್ಗಳ.

ಹೆಗ್ಗಡೆ ಅವರನ್ನು ಅಂತಃಪುರಕ್ಕೆ ಕರೆದುಕೊಂಡು ಹೋದಾಗ ಜಗದೇಕಮಲ್ಲನು ವಾಸಗೃಹದಲ್ಲಿ ಶತಪಥ ತಿರುಗಾಡುತ್ತಿದ್ದನು. ಗೃಹೋಪಕರಣಗಳು, ಅಲಂಕಾರ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಕಣ್ಣುಗಳ ಕೆಂಪು ಆರಿರಲಿಲ್ಲ.

ಕ್ರಮಿತನನ್ನು ನೋಡುತ್ತಲೆ ಅವನು, "ನಾನು ಹುಚ್ಚು ಹಿಡಿಯದೆ ಇನ್ನೆರಡು ದಿನ ಬದುಕಿರುವುದು ಬಿಜ್ಜಳರಾಯರ ಇಚ್ಛೆಯಾದರೆ ಈ ತಿಳಿಗೇಡಿ ಹೆಗ್ಗಡೆ, ಅವನ ಸೂಳೆಯರ ತಂಡ, ಇವರನ್ನು ಇಲ್ಲಿಂದ ಹೊರಗೆ ಹಾಕಿರಿ, ಕ್ರಮಿತರೆ !" ಎಂದು ಗದರಿದನು.

"ಬಿಜ್ಜಳರಾಯರಿಗೆ ನಿಮ್ಮಿಚ್ಛೆಯೇನೆಂಬುದನ್ನು ತಿಳಿಸುತ್ತೇನೆ. ಇಂದಿನಿಂದ ಹೆಗ್ಗಡೆ ನಿಮಗೆ ಮುಖ ತೋರಿಸುವುದಿಲ್ಲ," ಎಂದು ಕ್ರಮಿತನು ಸಮಾಧಾನ ಹೇಳಿದನು. ಇಂಗಿತವರಿತು ಹೆಗ್ಗಡೆಯೂ ಅಲ್ಲಿಂದ ಸರಿದನು.

ತುಸು ಹೊತ್ತಿನ ಮೇಲೆ ಜಗದೇಕಮಲ್ಲನು ಶಾಂತನಾಗಿ ಸಹಜ ಕಂಠದಿಂದ, "ಕುಳಿತುಕೊಳ್ಳಿರಿ, ಕ್ರಮಿತರೆ, ನೀವು ಕೂಡ ಅಗ್ಗಳದೇವ. ನಿಮ್ಮ ಸಂಗಡ ಒಂದು ಮುಖ್ಯ ವಿಚಾರ ಮಾತಾಡಬೇಕಾಗಿದೆ," ಎಂದನು.

"ಪ್ರಭುಗಳು ಕುಳಿತುಕೊಳ್ಳಬೇಕು," ಎಂದು ಕ್ರಮಿತನು ವಿನಯವಾಡಿದನು. ಅವನ ಮನಸ್ಸು ನುಡಿಯುತ್ತಿತ್ತು, 'ಈ ಕ್ಷಣಿಕ ಪರಿವರ್ತನೆ ಉನ್ಮತ್ತನಿಗೆ ಸಾಧ್ಯವಲ್ಲ.

ಯೋಗಿಗೆ ಸಹಜವಾದ ಸಂಯಮದ ಒಂದು ಬಗೆ. ಅಗ್ಗಳನು ಹೇಳುವುದು ಅಸಂಭಾವ್ಯವಲ್ಲ,' –ಎಂದು.

ಮೂವರೂ ಕುಳಿತುಕೊಂಡ ಮೇಲೆ ಜಗದೇಕಮಲ್ಲನು ಹೇಳಿದನು : "ಎರಡು ವಾರಗಳ ಹಿಂದೆ ಬಿಜ್ಜಳರಾಯರ ವಿಶೇಷ ದೂತನು ನನ್ನಲ್ಲಿಗೆ ಬಂದು ಪ್ರೇಮಾರ್ಣವನೆಂಬ ಬಾಲಕನ ವಿಚಾರ ಪ್ರಸ್ತಾಪಮಾಡಿದನು. ಅವನು ಚಾಲುಕ್ಯರಾಣಿ ಕಾಮೇಶ್ವರಿಯ ಕ್ಷೇತ್ರಜಪುತ್ರನೆಂದೂ, ಅವನನ್ನು ನಾನು ದತ್ತಸ್ವೀಕಾರ ಮಾಡಿ ಯುವರಾಜನಾಗಿ ಒಪ್ಪಿಕೊಂಡು ಪಟ್ಟಾಭಿಷೇಕ ಮಾಡಲು ಅನುಮತಿ ಕೊಡಬೇಕೆಂದೂ ಹೇಳಿದನು. ಆಗ ನಾನು ಸಲಹೆಯನ್ನು ನಿರಾಕರಿಸಿದೆ. ಕಾರಣ ಪ್ರೇಮಾರ್ಣವನ ವಿಚಾರ ನನಗೇನೂ ತಿಳಿದಿರಲಿಲ್ಲ."

ಕ್ರಮಿತನು ನಡುವೆ ಹೇಳಿದನು : "ಪ್ರೇಮಾರ್ಣವನ ವಿಚಾರ ನಿಮಗೆ ತಿಳಿಸಿ, ಪಟ್ಟಾಭಿಷೇಕಕ್ಕೆ ನಿಮ್ಮ ಅನುಮತಿ ಪಡೆಯುವುದಕ್ಕಾಗಿಯೇ, ಕಾವ್ಯೋಪದೇಶಕನ ನೆವದಿಂದ ಬಿಜ್ಜಳರಾಯರು ಅಗ್ಗಳದೇವನನ್ನು ಇಲ್ಲಿಗೆ ಕಳುಹಿಸಿದರು. ಕರ್ಣದೇವರಸರ ದುಡಿಕಿನ ವರ್ತನೆಯ ಫಲವಾಗಿ ನಿಮ್ಮನ್ನು ಏಕಾಂತದಲ್ಲಿ ನೋಡುವ ಅವಕಾಶವೂ ಇದುವರೆಗೆ ಅಗ್ಗಳನಿಗೆ ದೊರಕಲಿಲ್ಲ."

"ಈಗ ಅದರ ಅಗತ್ಯವೂ ಇಲ್ಲ," ಜಗದೇಕಮಲ್ಲನು ತಟ್ಟನೆ ಉತ್ತರ ಕೊಟ್ಟನು. "ಪ್ರೇಮಾರ್ಣವನ ತಂದೆ ಯಾರೆಂಬುದು ನನಗೆ ತಿಳಿದಿದೆ."

"ಯಾವಾಗ ತಿಳಿದಿರಿ?" ಅಚ್ಚರಿಯಿಂದ ಕ್ರಮಿತನೆಂದನು.

"ಈ ದಿನ ಬೇಟೆಗೆ ಹೋಗಿ ಕುದುರೆಯಿಂದ ಬಿದ್ದಾಗ."

"ಯಾರು ಹೇಳಿದವರು ?"

"ಸ್ವಯಂ ಕಾಮೇಶ್ವರಿ, ಚಾಲುಕ್ಯರಾಣಿ."

"ನೀವು ಬೇಟೆಗೆ ಹೋಗಿದ್ದಾಗ ರಾಣಿಯನ್ನು ನೋಡಿದಿರಾ?"

"ನಾನು ಕುದುರೆಯಿಂದ ಬಿದ್ದು ಎಚ್ಚರತಪ್ಪಿ ಮಲಗಿದ್ದಾಗ ಒಂದು ದೀರ್ಘ ಕನಸನ್ನು ಕಂಡೆ, ಕ್ರಮಿತರೆ. ಕಾಮೇಶ್ವರಿ ಕನಸಲ್ಲಿ ಕಾಣಿಸಿಕೊಂಡು ಎಲ್ಲವನ್ನೂ ಹೇಳಿದಳು."

ಕ್ರಮಿತನ ಸಂದೇಹ ಮತ್ತೆ ಎಚ್ಚೆತ್ತಿತು. ಇದು ಹುಚ್ಚನ ಅರ್ಥವಿಲ್ಲದ ಮಾತುಗಳೆ ? ಅಥವಾ ವಂಚಕನ ಚತುರ ಅಭಿನಯವೇ ?

"ನಾವು ಕನಸಿನಲ್ಲಿ ಅನೇಕ ವಿಚಿತ್ರಗಳನ್ನು ಕಾಣುವೆವು. ವಿಲಕ್ಷಣ ಘಟನೆಗಳ ಅನುಭವವಾಗುವುದು. ವಾಸ್ತವಜಗತ್ತಿನಲ್ಲಿ ಅವು ನಿಜವಲ್ಲ. ಪ್ರಭುಗಳು ಈ ಕನಸಿನ ಮಾತು ಮರೆತರೆ ಒಳ್ಳೆಯದು" –ಕ್ರಮಿತನು ಹೇಳಿದನು.

"ಆದರೆ ಇಂದು ನನಗಾದನುಭವ ಎಲ್ಲ ಕನಸುಗಳಂತಲ್ಲ, ನಾರಣಕ್ರಮಿತರೆ. ವಾಸ್ತವಜಗತ್ತಿನ ಘಟನೆಗಳಿಗಿಂತ ಈ ದಿನ ನನ್ನ ಕನಸಿನಲ್ಲಾದ ಅನುಭವ ಹೆಚ್ಚು ಸತ್ಯವೆಂದು ನಾನು ನಂಬಿದ್ದೇನೆ."

"ನಿಮ್ಮ ನಂಬಿಕೆಯ ಕಾರಣ ?"

"ಅದರಿಂದ ನನಗಾದ ಶಾಂತಿ ಸಮಾಧಾನಗಳು. ಹಿಂದೆ ಕೆಲವು ಸಾರಿ ನಾನು ಇದೇ ರೀತಿ ಎಚ್ಚರತಪ್ಪಿ ವಿಚಿತ್ರ ಕನಸುಗಳನ್ನು ಕಂಡಿದ್ದೇನೆ. ಅದರಿಂದ ನನಗೆ ಮನಃಶಾಂತಿ ದೊರಕಿದೆ."

"ನಿಮ್ಮ ಆ ಹಿಂದಿನ ಕನಸುಗಳಲ್ಲಿಯೂ ರಾಣಿ ಕಾಣಿಸಿಕೊಂಡಿದ್ದಳೆ ?"

"ಕಾಮೇಶ್ವರಿ ಕನಸಲ್ಲಿ ಬಂದದ್ದು ಇಂದೇ ಮೊದಲ ಸಾರಿ."

ಜಗದೇಕಮಲ್ಲನ ಉತ್ತರಗಳು ಹುಚ್ಚನ ಉತ್ತರಗಳಂತಿಲ್ಲವೆಂಬುದನ್ನು ಕ್ರಮಿತನು ತಿಳಿದನು. ಹಾಗಾದರೆ ಈ ಎಲ್ಲ ಕನಸಿನ ವಾಸ್ತವತೆಯೇನು? ಯೋಗಿಯ ಅಲೌಕಿಕ ದರ್ಶನವೇ ? ಅಥವಾ ಕಲ್ಪಕತೆಯ ಚಾತುರ್ಯವೆ?

ಔದಾರ್ಯದ ಡಂಗಿನಿಂದ ಕ್ರಮಿತನು, "ಕನಸಿನಲ್ಲಿ ಕಾಮೇಶ್ವರಿ ಏನು ಹೇಳಿದಳು"? ಎಂದನು.

"ಅದೊಂದು ರಮ್ಯ ಕಥೆ. ಕೇಳುವ ಸಹನೆ ಇದೆಯೇ ನಿಮಗೆ ?"

"ಕೇಳುವುದಕ್ಕಾಗಿಯೇ ಕುಳಿತಿದ್ದೇನೆ. ಪ್ರಭುಗಳು ಸಂಕೋಚವಿಲ್ಲದೆ ಹೇಳಬಹುದು."

ಜಗದೇಕಮಲ್ಲನು ಅನ್ಯಮನಸ್ಕನಂತೆ ಕೆಲವು ಕ್ಷಣಗಳು ಮೌನವಾಗಿದ್ದು ಬಳಿಕ ನುರಿತ ಕತೆಗಾರನಂತೆ ಗಂಭೀರವಾಗಿ ಹೇಳಿದನು :

"ಆರು ವರ್ಷಗಳ ಹಿಂದಿನ ಮಾತು. ಅಣ್ಣ ತೈಲಪದೇವನು ಸ್ವರ್ಗಸ್ಥನಾಗಿ ಒಂದು ವರ್ಷವಾಗಿತ್ತು. ನವರಾತ್ರಿ ಸಮಾರಂಭದಲ್ಲಿ ನಾನು ಸಿಂಹಾಸನದಲ್ಲಿ ಕುಳಿತು ಸಭೆ ನಡೆಸಿದ್ದು ಆಗಲೆ. ಆಮೇಲೆ ಎರಡು ತಿಂಗಳ ಅವಧಿಯಲ್ಲಿ ನಾನು ಹೇಳುವ ಘಟನೆ ನಡೆದದ್ದು. ಆಗ ನಾನು ಕಲ್ಯಾಣದಿಂದ ಎರಡು ಗಾವುದ ದೂರದಲ್ಲಿರುವ ಒಂದು ದೊಡ್ಡ ಅರಣ್ಯಕ್ಕೆ ಬೇಟೆಗೆ ಹೋಗಿದ್ದೆ. ವಿಪುಳ ಪರಿವಾರದೊಡನೆ ಎರಡು ವಾರಗಳು ನಾವು ಅರಣ್ಯದ ನಡುವೆ ಶಿಬಿರ ಹಾಕಿಕೊಂಡಿದ್ದೆವು. ಆಗ ಮಾರನಾಯಕನೆಂಬ ಚತುರ ಸಾಮಂತ ನಮ್ಮ ಮನೆಹೆಗ್ಗಡೆ. ಪ್ರತಿದಿನ ಅವನು ನನ್ನ ಸೇವೆಗಾಗಿ ಸಮೀಪದ ಗ್ರಾಮಗಳಿಂದ ಹರೆಯದ ಹೆಣ್ಣೊಬ್ಬಳನ್ನು ಕರೆಸುತ್ತಿದ್ದ.

"ಈ ರೀತಿ ಒಂದು ವಾರ ಕಳೆದಮೇಲೆ ನಾನು ಹೆಗ್ಗಡೆಗೆ ಹೇಳಿದೆ, ಈ

ಬಿಜ್ಜೋಲೆ ಗುಂಜಾಹಾರದ ಬೇಡತಿಯರಿಂದ ನನಗೆ ಬೇಸರವಾಗಿದೆಯೆಂದು. ಅದಕ್ಕೆ ಅವನು, ಸಮೀಪ ಗ್ರಾಮದಲ್ಲಿ ಒಬ್ಬ ಸಾಮಂತ ಬಿಡಾರಮಾಡಿದ್ದಾನೆ. ಅವನ ಪರಿವಾರದಲ್ಲಿ ಗೋಮಂತಕದ ಒಬ್ಬ ನರ್ತಕಿ ಇದ್ದಾಳೆ. ಈ ದಿನ ಅವಳನ್ನು ಕರೆಸುತ್ತೇನೆ –ಎಂದು ಹೇಳಿದ, ನಾನು ಒಪ್ಪಿದೆ.

"ಅದರಂತೆ ಆ ರಾತ್ರಿ ಆ ನಟುವರ ಹೆಣ್ಣು ಶಿಬಿರಕ್ಕೆ ಬಂದಳು. ಅವಳ ಆಕರ್ಷಕ ಉಡಿಗೆ ತೊಡಿಗೆ ವಿಭ್ರಮವಿಲಾಸಗಳು ನನ್ನನ್ನು ಮರುಳುಗೊಳಿಸಿದವು. ದೇವಲೋಕದ ಅಪ್ಸರೆ ನನಗಾಗಿ ಭೂಮಿಗಿಳಿದು ಬಂದಳೆಂದು ಭಾವಿಸಿ ರಾತ್ರಿಯನ್ನು ಕಳೆದೆ. ಅದೇ ನನ್ನೊಡನೆ ಅವಳ ಮೊದಲ ಮತ್ತು ಕೊನೆಯ ಸಮಾಗಮ. ಆ ಮೇಲೆ ಎಷ್ಟು ಹುಡುಕಿಸಿದರೂ ಅವಳು ಸಿಕ್ಕಲಿಲ್ಲ. ಆರು ವರ್ಷಗಳಿಂದ ಅವಳಿಗಾಗಿ ಹಂಬಲಿಸಿದೆ, ಹಾರೈಸಿದೆ, ಪರಿತಪಿಸಿದೆ. ಈ ದಿನ ಅರಣ್ಯದಲ್ಲಿ ಕುದುರೆಯಿಂದ ಬಿದ್ದು ಎಚ್ಚರತಪ್ಪಿದ್ದಾಗ ಕನಸಿನಲ್ಲಿ ಪುನಃ ಅವಳನ್ನು ಕಂಡೆ. ಹಿಂದೆ ಪರಿಚಯ ಹೇಳಲು ನಿರಾಕರಿಸಿದ್ದ ಅವಳು ಇಂದು ತಾನಾಗಿ ಪರಿಚಯ ಹೇಳಿದಳು."

–ಮುಗಿಸುತ್ತಿದ್ದಂತೆ ಜಗದೇಕನ ಕಂಠ ಮೃದುವಾಯಿತು. ಪರವಶನಂತೆ ಕಣ್ಣುಗಳನ್ನು ಅರೆಮುಚ್ಚಿ ನಿಶ್ಚಲನಾಗಿ ಕುಳಿತನು.

ಆಸಕ್ತಿಯಿಂದ ಕೇಳುತ್ತ ಬೆರಗುವಡೆದು ಪಾರ್ಶ್ವದ ಪೀಠದಲ್ಲಿ ಕುಳಿತಿದ್ದ ಅಗ್ಗಳನ ಕಡೆ ತಿರುಗಿ ಕ್ರಮಿತನು ಮೆಲ್ದನಿಯಲ್ಲಿ "ಇದು ಯೋಗಿಯ ದಿವ್ಯ ದರ್ಶನವೋ ಅಥವಾ ಕಾಮುಕನ ಹಗಲುಗನಸೋ ನೀವೇ ನಿರ್ಧರಿಸಬೇಕು, ಪಂಡಿತ ಕವಿಗಳೆ," ಎಂದನು.

ಅಗ್ಗಳನು ಉತ್ತರಿಸಿದನು : "ಯೋಗಿಯ ಅಮೃತಾನುಭವ, ಕಾಮುಕನ ಹಗಲು ಕನಸು, ಇವೆರಡೂ ಒಂದೇ ಸಾಧನೆಯ ಎರಡು ಮುಖಗಳು. ತನ್ನ ಇಷ್ಟ ದೈವದ ಸಾಧನೆಯಲ್ಲಿ ಕುಳಿತು ಯೋಗಿಯು ಸಮಾಧಿಸ್ಥನಾದಾಗ ಆ ಇಷ್ಟದೈವ ರೂಪತಳೆದು ಎದುರಿಗೆ ನಿಲ್ಲುತ್ತದೆ, ಮಾತಾಡುತ್ತದೆ. ಕಾಮುಕನು ತನ್ನ ಪ್ರೇಯಸಿಯನ್ನು ಕುರಿತು ಚಿಂತಿಸುತ್ತಾನೆ. ಹಗಲಿರುಳುಗಳನ್ನು ಅವಳ ಧ್ಯಾನದಲ್ಲಿ ಕಳೆಯುತ್ತಾನೆ. ಕೊನೆಗೊಂದು ದಿನ ಅವನ ಅರಿವಿಲ್ಲದಂತೆಯೇ ಅವನ ಸಾಧನೆ ಫಲಿಸುತ್ತದೆ. ಅವನ ಒಳಗಣ್ಣುಗಳ ಮುಂದೆ ಪ್ರೇಯಸಿಯ ಕಲ್ಪನಾಮೂರ್ತಿಯನ್ನು ತಂದು ನಿಲ್ಲಿಸುತ್ತದೆ. ಆ ಕಲ್ಪನಾಮೂರ್ತಿಯ ಸಂಗಡ ಅವನು ಮಾತಾಡುತ್ತಾನೆ. ಈ ಎರಡು ನಿದರ್ಶನಗಳಲ್ಲಿ ಸಾಧನೆಯ ಮಾರ್ಗ ಒಂದೇ ಆದರೂ ಫಲಗಳು ಬೇರೆ. ಯೋಗಿಗೆ ದೊರಕುವ ಫಲ, ಜೀವನ ಪಥದಲ್ಲಿ ಅವನನ್ನು ಮೇಲಿಂದ ಮೇಲಕ್ಕೆ ಎತ್ತುತ್ತದೆ. ಕಾಮುಕನಿಗೆ ದೊರಕುವ ಫಲ ಅವನನ್ನು ವಿಷಯಾಸಕ್ತಿಯ ಮಡುವಿನಲ್ಲಿ ಮುಳುಗಿಸುತ್ತದೆ."

ಜಗದೇಕಮಲ್ಲನು ಕಣ್ತೆರೆದು ಪುನಃ ಹೇಳಿದನು : "ಆರು ವರ್ಷಗಳ ಹಿಂದೆ, ಅರಣ್ಯಮಧ್ಯದ ಶಿಬಿರದಲ್ಲಿ ನಾನು ಕಂಡ ಅಪ್ಸರೆಯೇ ಚಾಲುಕ್ಯರಾಣಿ ಕಾಮೇಶ್ವರಿ. ನಿಯೋಗ ವಿಧಿಯಿಂದ ನನ್ನನ್ನು ಬಯಸಿದ ಅವಳು, ಬಿಜ್ಜಳರಾಯರು ತಂದೊಡ್ಡಿದ ಅಡಚಣೆಯನ್ನು ದಾಟಿ ತನ್ನ ಇಷ್ಟಾರ್ಥವನ್ನು ಈಡೇರಿಸಿಕೊಂಡಳು. ಪ್ರೇಮಾರ್ಣವನು ನನ್ನ ಔರಸಪುತ್ರ. ನಾನು ಪುನಃ ಅವನನ್ನು ದತ್ತಸ್ವೀಕಾರಮಾಡುವ ಅಗತ್ಯವಿಲ್ಲ. ಚಾಲುಕ್ಯ ಅರಸೊತ್ತಿಗೆ ಅವನ ಕುಲಧನ. ಅವನ ಉತ್ತರಾಧಿಕಾರವನ್ನು ನಾನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ಅವನ ಪಟ್ಟಾಭಿಷೇಕಕ್ಕೆ ಏರ್ಪಡಿಸುವಂತೆ ಬಿಜ್ಜಳರಾಯರಿಗೆ ತಿಳಿಸಿರಿ."

ಕ್ರಮಿತನು ಸ್ತಂಭಿತನಾದನು. ಈ ಅಂತಃಪುರ ರಹಸ್ಯ ಜಗದೇಕಮಲ್ಲನಿಗೆ ತಿಳಿದದ್ದು ಹೇಗೆ? ಅಗ್ಗಳನಿಂದಲೆ ? ಅವನು ರಾಜಗೃಹದಲ್ಲಿದ್ದ ಹತ್ತು ದಿನಗಳೂ ಜಗದೇಕಮಲ್ಲನನ್ನು ರಹಸ್ಯವಾಗಿ ನೋಡುವ ಅವಕಾಶವಿರಲಿಲ್ಲವೆಂಬುದು ಕ್ರಮಿತನಿಗೆ ತಿಳಿದಿತ್ತು. ಆದರೆ ಬರೆದು ತಿಳಿಸುವ ಅವಕಾಶವಿತ್ತಲ್ಲವೆ ? ಜಗದೇಕಮಲ್ಲನ ಮಾತುಗಳಿಂದ ತನ್ನಂತೆ ಅಗ್ಗಳನೂ ಸ್ತಂಭಿತನಾದಂತೆ ಕಂಡಿತು. ಈ ಎಲ್ಲ ಅಭಿನಯದ ರಹಸ್ಯವೇನು? ಎಂದು ಯೋಚಿಸುತ್ತ ಕ್ರಮಿತನು ಮೌನವಾಗಿ ಕುಳಿತಿದ್ದನು.

ಕ್ರಮಿತನು ಸುಮ್ಮನಿರುವುದನ್ನು ಕಂಡ ಜಗದೇಕಮಲ್ಲನು, "ನನ್ನ ನಿರ್ಧಾರದ ಬಗೆಗೆ ನೀವು ಸಂದೇಹ ಪಡುವ ಅಗತ್ಯವಿಲ್ಲ. ಕರಣಿಕನನ್ನು ಕರೆಸಿ ನಿರೂಪವನ್ನು ಬರೆಸಿ, ನಿಮ್ಮ ಸಮಕ್ಷಮ ಹಸ್ತಾಕ್ಷರ ಹಾಕುತ್ತೇನೆ," ಎಂದನು.

ಕಾರಣವೇನೇ ಇರಲಿ ಜಗದೇಕಮಲ್ಲನ ಪರಿವರ್ತನೆ ಬಿಜ್ಜಳರಾಯರಿಗೆ ಸಂತೋಷವುಂಟುಮಾಡುವುದೆಂದು ಭಾವಿಸಿ ಕ್ರಮಿತನು ಅರಮನೆಯ ಚಾವಡಿಯಿಂದ ಕರಣಿಕನನ್ನು ಕರೆಸಿದನು. ಚಾಲುಕ್ಯರಾಣಿ ಕಾಮೇಶ್ವರೀದೇವಿಯ ಪುತ್ರ ಪ್ರೇಮಾರ್ಣವನು ಚಾಲುಕ್ಯರಾಜ್ಯದ ಉತ್ತರಾಧಿಕಾರಿಯೆಂದು ಘೋಷಿಸಿ, ಅವನ ಯುವರಾಜ ಪಟ್ಟಾಭಿಷೇಕವನ್ನು ನಡೆಸಲು ಆಜ್ಞೆ ಮಾಡುವ ನಿರೂಪ ರಚಿತವಾಗಿ ಜಗದೇಕ ಮಲ್ಲನು ಹಸ್ತಾಕ್ಷರ ಹಾಕಿದನು.

ಬಿಜ್ಜಳನ ಆಜ್ಞೆಯಂತೆ ಮರುದಿನವೇ ಕಲ್ಯಾಣದಲ್ಲಿ ನಿರೂಪ ಪ್ರಕಟಿಸಲ್ಪಟ್ಟು ನಾಗರಿಕರಲ್ಲಿ ಆಶ್ಚರ್ಯ ಕುತೂಹಲಗಳನ್ನು ಹುಟ್ಟಿಸಿತು. ಚಾಲುಕ್ಯ ಕಲಚೂರ್ಯ ರಾಜವಂಶಗಳ ಭವಿಷ್ಯವನ್ನು ಕುರಿತ ವಿಚಿತ್ರ ಊಹಾಪೋಹಗಳಿಗೆ ಪ್ರಾರಂಭವಾಯಿತು. ನಿರೂಪದ ಪ್ರತಿಯನ್ನು ಬಿಜ್ಜಳನು ಕಾಮೇಶ್ವರೀದೇವಿಗೆ ಕಳುಹಿಸಿ, ಪ್ರೇಮಾರ್ಣವನನ್ನು ಕಲ್ಯಾಣಕ್ಕೆ ಕರೆದುಕೊಂಡು ಬಂದು ಯುವರಾಜ ಪಟ್ಟಾಭಿಷೇಕಕ್ಕೆ ಏರ್ಪಡಿಸಬೇಕೆಂದು ಸೂಚಿಸಿ ಓಲೆ ಬರೆದನು.

ಜಗದೇಕಮಲ್ಲನ ಪರಿವರ್ತನೆಯ ಫಲವಾಗಿ ತನ್ನ ಬಿಡುಗಡೆಯಾಗುವುದೆಂದು ನಿರೀಕ್ಷಿಸಿದ್ದ ಅಗ್ಗಳನಿಗೆ ನಿರಾಶೆಯಾಯಿತು. ರಾಜಗೃಹದ ಪುನರ್ವ್ಯವಸ್ಥೆಯ ವಿಚಾರದಲ್ಲಿ ಆಜ್ಞೆ ಮಾಡಿದ ಬಿಜ್ಜಳನು, "ಚಾಲುಕ್ಯರಾಣಿ ಕಲ್ಯಾಣಕ್ಕೆ ಬರುವವರೆಗೆ ಅಗ್ಗಳನು ರಾಜಬಂಧಿಯಾಗಿರಲಿ. ಆಮೇಲೆ ರಾಣಿ ಅಪೇಕ್ಷಿಸುವುದಾದರೆ ಬಿಡುಗಡೆ ಮಾಡಬಹುದು," ಎಂದು ಕ್ರಮಿತನಿಗೆ ತಿಳಿಸಿದನು. ಈ ರೀತಿ ಇನ್ನೂ ಎರಡು ವಾರಗಳು ಕಳೆದವು.

* * * *

# ೨. ಸಿರಿಮನೆಯ ಕತ್ತಲೆಗೆ ಗುರುಮನೆಯ ದೀಪ

ಬೊಮ್ಮರಸ ಬ್ರಹ್ಮಶಿವ ಪಂಡಿತರೇನಾದರು ? ಚಾಲುಕ್ಯರಾಣಿ ಕಾಮೇಶ್ವರಿಯ ಗೂಢಚಾರರಾಗಿ, ಬ್ರಹ್ಮರಾಜಸೇಟ್, ಶಿವಗಣ ಭಂಡಾರಿ ಎಂದು ಹೆಸರಿಟ್ಟುಕೊಂಡು ಅವರು ಹೂಡಿದ ಹಗಲುವೇಷದ ಬಯಲಾಟ ಬಿಜ್ಜಳನ ಬೇಹುಗಾರರನ್ನು ವಂಚಿಸಿತೆ ? ಬಂಧನದಲ್ಲಿದ್ದ ಅಗ್ಗಳನ ಚಿಂತೆಗೆ ಕಾರಣವಾದ ಈ ವಿಚಾರಗಳನ್ನು ಈಗ ನಾವು ತಿಳಿಯಬೇಕಾಗಿದೆ.

ಕಲ್ಯಾಣದಿಂದ ಬಸವಣ್ಣನವರು ನಿರ್ಗಮಿಸಿದ ಆ ಚರಿತ್ರಾರ್ಹವಾದ ದಿನ ನಗರಕ್ಕೆ ಬಂದು ಪಾಂಥನಿವಾಸದಲಿ ಬಿಡಾರಮಾಡಿದ ಅಗ್ಗಳನು, ಆ ರಾತ್ರಿ ನಾರಣಕ್ರಮಿತನ ಚತುರತೆಯಿಂದ ರಾಜಗೃಹದಲ್ಲಿ ಬಂದಿಯಾಗಿ ತನ್ನ ಗೆಳೆಯರೇನಾದರೆಂದು ಚಿಂತಿಸುತ್ತ ಮಲಗಿದ್ದಂತೆ, ಪಾಂಥನಿವಾಸವಿದ್ದ ರಾಜಮಾರ್ಗದಲ್ಲಿ ಅಷ್ಟೇ ಕುತೂಹಲಕಾರಿಯಾದ ಮತ್ತೊಂದು ಘಟನೆಯ ನಾಂದಿ ನಡೆಯುತ್ತಿತ್ತು.

ರಾತ್ರಿ ಎರಡನೆಯ ಜಾಮ ಪ್ರಾರಂಭವಾಗಿ ಕೆಲವು ಗಳಿಗೆಗಳು ಕಳೆದಿದ್ದುವು. ರಾಜಮಾರ್ಗದಲ್ಲಿ ಜನ ಸಂಚಾರ ನಿಂತಿತ್ತು. ಇಕ್ಕೆಳದ ಮನೆಗಳಲ್ಲಿ ಜನರು ದೀಪಗಳನ್ನಾರಿಸಿ ನಿದ್ದೆ ಮಾಡುತ್ತಿದ್ದರು. ಬ್ರಹ್ಮಶಿವ ಬೊಮ್ಮರಸರು ಆಗ ತಾನೆ ಬಿಡಾರಕ್ಕೆ ಹಿಂದಿರುಗುತ್ತಿದ್ದರು. ಅವರು ಪಾಂಥನಿವಾಸವನ್ನು ಸಮೀಪಿಸುತ್ತಿದ್ದಂತೆ ಮಾರ್ಗದ ಇನ್ನೊಂದು ಕಡೆಗಿದ್ದ ಪಾನಶಾಲೆಯಿಂದ ಆಯುಧಪಾಣಿಗಳಾದ ನಾಲ್ಕು ಮಂದಿ ರಾಜಭಟರು ಹೊರಗೆ ಬಂದು ದಾರಿಯ ನಡುವೆ ತೂರಾಡುತ್ತ ನಿಂತರು. ದೂರದಿಂದ ಇದನ್ನು ನೋಡಿ ಬ್ರಹ್ಮಶಿವನು ಸನ್ನೆಯಿಂದ ಸುಮ್ಮನಿರುವಂತೆ ಬೊಮ್ಮರಸನಿಗೆ ಹೇಳಿ, ಕೈಹಿಡಿದು ದಾರಿಯ ಪಕ್ಕದಲ್ಲಿದ್ದ ಮರದ ನೆರಳಿಗೆ ಕರೆದುಕೊಂಡು ಹೋದನು. ನಿಬಿಡವಾದ ಕತ್ತಲೆ ತುಂಬಿತ್ತು ಅಲ್ಲಿ.

"ಏನಾಯಿತು, ಬ್ರಹ್ಮಶಿವ?" ಬೊಮ್ಮರಸನು ಮೆಲುದನಿಯಲ್ಲಿ ಕೇಳಿದನು. "ಶೃಂಗಿಣಾಂ ಶಸ್ತ್ರಪಾಣಿನಾಂ ಎಂದು ಹೇಳಿದ್ದಾನೆ ಚಾಣಕ್ಯ. ಆ ನೀತಿ ಬೋಧೆಯನ್ನು ನಾವು ಕಡೆಗಣಿಸುವುದು ಸಾಧ್ಯವೆ ?" ಬ್ರಹ್ಮಶಿವನು ಮಾರ್ಮಿಕವಾಗಿ ನುಡಿದನು.

"ಚಾಣಕ್ಯನಿಗೂ ನಮಗೂ ಏನು ಸಂಬಂಧ? ಏನಾಯಿತು ಸರಿಯಾಗಿ ಹೇಳು."

"ಕೊಂಬುಳ್ಳ ಪ್ರಾಣಿಗಳು, ಆಯುಧಪಾಣಿಗಳಾದ ಭಟರು, ಇವರಿಂದ ದೂರವಾಗಿರಬೇಕು ಎಂದು ಚಾಣಕ್ಯನ ಉಪದೇಶ. ಪಾನಶಾಲೆಯಿಂದ ಹೊರಗೆ ಬಂದ ಆ ನಾಲ್ವರು ಭಟರನ್ನು ನೋಡಲಿಲ್ಲವೆ ನೀವು ?"

"ನೋಡಿದೆ. ಅದರಿಂದೇನು ? ಕಲ್ಯಾಣದ ಪಾನಶಾಲೆಗಳು ಈಗ ಸೈನಿಕರಿಗೆ, ರಾಜಭಟರಿಗೆ ಮೀಸಲಾಗಿವೆಯೆಂದು ಕೇಳಿದ್ದೇನೆ. ಶೈವಧರ್ಮದ ಪ್ರಭಾವದಿಂದ ನಗರದ ಸಾಮಾನ್ಯ ಜನರು ಕುಡಿಯುವುದನ್ನು ಬಿಟ್ಟಿದ್ದಾರೆ. ಸಾಮಂತ ಶ್ರೀಮಂತರು ತಮಗೆ ಬೇಕಾದ ಮದ್ಯವನ್ನು ಮನೆಗೇ ತರಿಸಿಕೊಳ್ಳುತ್ತಾರೆ. ಇನ್ನುಳಿದ ರಾಜಭಟರು ಮತ್ತು ಸೈನಿಕರು ಈಗ ಪಾನಶಾಲೆಗಳ ಮುಖ್ಯ ಗಿರಾಕಿಗಳು."

ಪಿಸುದನಿಯಲ್ಲಿ ಈ ಮಾತುಕತೆಗಳು ನಡೆಯುತ್ತಿದ್ದಂತೆ ರಾಜಭಟರು ರಸ್ತೆಯಗಲವೂ ತೂರಾಡಿ ನಡೆಯುತ್ತ ಬ್ರಹ್ಮಶಿವ ಬೊಮ್ಮರಸರು ಅವಿತುಕೊಂಡಿದ್ದ ಮರದೆದುರಿಗೆ ಬಂದು ನಿಂತರು.

ಭಟನೊಬ್ಬನು ಕೇಳಿದನು : "ನಾವು ಎಲ್ಲಿಗಾ ಹೋಗ್ತಿರೋದು?"

"ಎಲ್ಲಿಗೆ ಮತ್ತಾ ? ಆ ಪಾಂಥಾಸಕ್ಕೆ."

"ಪಾಂಥಾಸಾ ಅಲ್ಲೋ ಬೆಪ್ತಕ್ಕಡಿ ! ಪಾಂಥ ನಿವಾಸ ಅಂತ ಹೇಳು. ಆ ಊಟದ ಮನಿ ಹೆಸರದು." –ಒಂದಿಷ್ಟು ಓದು ಬರಹ ಕಲಿತಿದ್ದ ಮೂರನೆಯ ಭಟನೆಂದನು.

"ಹೌದಣ್ಣಾ, ಅಲ್ಲಿ ನಮ್ ಕೆಲಸ ಹಾಂಗೇ ಉಳದೈತಿ."

ಕೆಲಸದ ಹೆಸರೆತ್ತಿದ ಕೂಡಲೇ ಮೊದಲನೆಯ ಭಟನಿಗೆ ಅಳುಕಿತು. "ಅಲ್ಲಿ ನಮ್ ಕೆಲಸ ಏನಪಾ ! ನಾ ಪೂರ್ತಾ ಮರತೀನಿ." ಎಂದು ಮರುಗಿದನು.

"ನಾ ಬೇಡಾಂದ್ರೂ ಕೇಳಿಲ್ಲ. ನಮ್ಮೆಲ್ಲರಿಗಿಂತ ಹೆಚ್ಚಿಗೆ ಕುಡಿದಿ ನೀನು. ಅದಕಾ ಎಲ್ಲಾನೂ ಮರತಿದ್ದಿ" –ಓದುಬರಹ ಕಲಿತಿದ್ದ ಭಟನು ಆಕ್ಷೇಪಿಸಿದನು.

"ನಾ ಮರತರೇನಾಯ್ತಣ್ಣಾ, ನಿಂಗೆ ನೆನಪಿದ್ರಾತು" ಎಂದನು ಮೊದಲ ಭಟ.

"ನಂಗೆ ನೆನಪಿರೋದರಿಂದ್ಲೆ ನಿಮ್ ನಾಯಕ ಆಗೀನಿ ನಾನು !" ಓದು ಬರಹ ಕಲಿತಿದ್ದ ಭಟ ದರ್ಪದಿಂದ ಹೇಳಿದ, "ಆ ಊಟದ ಮನೀಗ ಇಬ್ಬರು ಬರ್ತಾರ, ಬ್ರಹ್ಮರಾಜಸೇಟ, ಶಿವಗಣಭಂಡಾರಿ ಅಂತ. ಅವರನ್ನ ಹಿಡಕೊಂಡು ಬರಬೇಕು ಅಂತಲ್ವ ಒಡೇರು ಹೇಳಿದ್ದು?"

ಮರದಡಿಯಲ್ಲಿ ಬೊಮ್ಮರಸ ಬ್ರಹ್ಮಶಿವಪಂಡಿತರು ನಡುಗಿದರು. ಭಟರ

ಮಾತುಗಳು ಅವರಿಗೆ ಚೆನ್ನಾಗಿ ಕೇಳುತ್ತಿತ್ತು. "ನಾವು ನಗರಕ್ಕೆ ಬಂದು ಇನ್ನೂ ಒಂದು ದಿನ ತುಂಬಿಲ್ಲ. ಅಷ್ಟರಲ್ಲಿ ಬಿಜ್ಜಳನ ಬೇಹುಗಾರರು ನಮ್ಮ ನೆಲೆ ಪತ್ತೆ ಹಚ್ಚಿದ್ದು ಹೇಗೆ ? ಪಾಂಥ ನಿವಾಸದಲ್ಲಿದ್ದ ಅಗ್ಗಳನ ಗತಿಯೇನಾಯಿತು ?" ಎಂದು ತುಡುಕಿತು, ಅವರ ಮನಸ್ಸು. ಮರದ ಹಿಂದೆ ಕತ್ತಲಲ್ಲಿ ಅಡಗಿ ನಿಂತರು.

"ಒಡೇರು ಹೇಳಿದ್ದು ನೆನಪೈತಿ. ಆದರ ಪಾಂಥನಿವಾಸ ಯಾವ ಕಡೀಗದ ಎನ್ನೋದನ್ನ ಮರತೀನಿ," ಎಂದು ತಲೆ ಕೆರೆದುಕೊಳ್ಳುತ್ತ ಪರಿತಪಿಸಿದನು ನಾಯಕ.

"ನಾವ್ ಹೋಗ್ತಿರೂದು ಅದರ ಕಡೀಗೇ ಅಲ್ಲೇನು ?" –ಇನ್ನೊಬ್ಬ ಭಟನ ಪ್ರಶ್ನೆ.

ದಿಕ್ಕು ದೆಸೆಗಳ ಜ್ಞಾನ ಇನ್ನೂ ಕೊಂಚ ಉಳಿದಿದ್ದ ಎರಡನೆಯ ಭಟನೆಂದನು: "ನಾವು ಹಿಂಗೇ ಹೋದ್ರ ತ್ರಿಪುರಾಂತರ ಕೆರೆ ಸಿಗತೈತಿ, ಪಾಂಥನಿವಾಸ ಇರೋದು ನಮ್‌ಬೆನ್ನಿನ ಕಡಿ."

ಆಗ ಅವರಿಗೆ ತಮ್ಮ ತಪ್ಪಿನ ಅರಿವಾಯಿತು. ಹಿಂದಕ್ಕೆ ತಿರುಗಿ ಪಾಂಥ ನಿವಾಸದ ಕಡೆ ಹೊರಟರು. ಬೊಮ್ಮರಸ ಬ್ರಹ್ಮಶಿವರ ಜೀವ ಹೋಗಿ ಬಂದಂತಾಯಿತು.

ಕೊಂಚಹೊತ್ತಿನ ಮೇಲೆ ಬ್ರಹ್ಮಶಿವನು ಪಿಸುಮಾತಲ್ಲಿ, "ಈಗೇನು ಮಾಡುವುದು, ಬೊಮ್ಮರಸರೆ?" ಎಂದು ಮರುಗಿದನು. ಅವನ ನಾಲಿಗೆ ಒಣಗಿತ್ತು. ಕಾಲುಗಳು ಕುಸಿಯುತ್ತಿದ್ದವು. "ನಡೆಯಿರಿ, ಇಲ್ಲಿಂದ ತಪ್ಪಿಸಿಕೊಂಡರೆ ಉಳಿಯುವೆವು" ಎಂದು ಮತ್ತೆ ಮತ್ತೆ ಹೇಳಿದನು.

"ಇಲ್ಲಿಂದ ತಪ್ಪಿಸಿಕೊಂಡು ನಾವು ಎಲ್ಲಿಗೆ ಹೋಗುವುದು, ಬ್ರಹ್ಮಶಿವ?" ಬೊಮ್ಮಸರನೆಂದನು –ಈ ನಿಶೆಯಲ್ಲಿ ನಾವು ನೆಲೆ ಕಾಣದೆ ಬೀದಿ ಬೀದಿ ಅಲೆಯುತ್ತಿದ್ದರೆ ಖಂಡಿತವಾಗಿ ಬಿಜ್ಜಳನ ಭಟರಿಗೆ ಸಿಕ್ಕಿಬೀಳುವೆವು. ಇಲ್ಲಿಯೇ ಯಾವುದಾದರೊಂದು ಆಶ್ರಮ ಹುಡುಕಬೇಕು. ನಗರದ ಪರಿಚಯ ನನಗಿಂತ ನಿನಗೆ ಹೆಚ್ಚಾಗಿದೆ. ಯೋಚಿಸಿ ಹೇಳು, ಸಮೀಪದಲ್ಲಿ ಅಂತಹ ಸ್ಥಳ ಯಾವುದಿದೆ?"

ಬ್ರಹ್ಮಶಿವನು ಯೋಚಿಸಿ ಉತ್ತರಕೊಟ್ಟನು : "ಎದುರಿಗಿರುವ ಓಣಿಯಲ್ಲಿ ಸದಾಚಾರಿ ಮಠವಿದೆ. ಅದರ ಸ್ವಾಮಿಗಳು ಹಿಂದೆ ಸಾಮಂತಾಧಿಕಾರಿಯಾಗಿದ್ದು ಆಮೇಲೆ ಸನ್ಯಾಸ ತೆಗೆದುಕೊಂಡವರು. ಅವರು ನಮಗೆ ಆಶ್ರಯ ಕೊಟ್ಟರೂ ಕೊಡಬಹುದು. ಆದರೆ ಇಷ್ಟು ಹೊತ್ತಿನಲ್ಲಿ ಮಠದ ಬಾಗಿಲು ತೆಗೆದಿರುವುದೇ ಎಂದು ಸಂದೇಹ".

"ಹೋಗಿ ನೋಡಿದರೆ ಸಂದೇಹ ಪರಿಹಾರವಾಗುವುದು. ಜೀವ

ಉಳಿಸಿಕೊಳ್ಳಲು ಏನಾದರೂ ದಾರಿಯಿದೆಯೇ ಎಂದು ತಿಳಿಯುವುದು. ಇಲಿಯೇ ಇದ್ದರೆ ಎರಡೂ ಇಲ್ಲ." ಎಂದು ಬೊಮ್ಮರಸನು ರಸ್ತೆಯನ್ನು ದಾಟಿ ಆ ಪಾರ್ಶ್ವದ ಓಣಿಗೆ ಹೋಗಲು ಅನುವಾದನು.

ಪಾಂಥನಿವಾಸದ ಬಳಿಗೆ ಹೋದ ಭಟರು ಒಬ್ಬನನ್ನು ಹೊರಗೆ ಕಾವಲಿಟ್ಟು ಉಳಿದ ಮೂವರು ಒಳಗೆ ಹೋದರು. ಬ್ರಹ್ಮಶಿವ ಬೊಮ್ಮರಸರು ಆಶ್ರಯಿಸಿದ್ದ ಮರ ಕಾವಲು ನಿಂತಿದ್ದ ಭಟನಿಗೆ ಕಾಣುತ್ತಿತ್ತು. ಅವನ ಕಾಕದೃಷ್ಟಿಯಿಂದ ತಪ್ಪಿಸಿ ಕೊಳ್ಳಲು ಅವರು ಸಾಲುಮರಗಳ ಮರೆಯಲ್ಲಿ ಮುಂದೆ ಹೋಗಿ ಭಟನ ದೃಷ್ಟಿ ಬೀಳದ ಸ್ಥಳದಲ್ಲಿ ರಸ್ತೆಯನ್ನು ದಾಟಿ ಇನ್ನೊಂದು ಕಡೆಯ ಮರಗಳ ಮರೆಯಲ್ಲಿ ಎಚ್ಚರದಿಂದ ನಡೆಯುತ್ತ ಸದಾಚಾರಿಮಠವಿದ್ದ ಓಣಿಗೆ ಬರಲು ಸ್ವಲ್ಪ ಹೊತ್ತಾಯಿತು.

ಈ ಸಂಚಲನೆ ನಡೆಯುತ್ತಿದ್ದಂತೆ ಕಾವಲಿದ್ದ ಭಟನು ನಿಂತಲ್ಲಿಯೇ ಕುಳಿತು ಕೊಂಡನು. ತಲೆ ಪಾರ್ಶ್ವಕ್ಕೆ ಬಾಗಿತು. ತೂಕಡಿಸಿ ಕಣ್ಣು ಮುಚ್ಚಿದನು. ಮದ್ಯದ ಹುಳಿಯಿಂದ ನಾರುತ್ತಿತ್ತು ಅವನ ಬಾಯಿ. ಆ ವಾಸನೆ ಹಿಡಿದು ಬಂದ ಎರಡು ಸೊಳ್ಳೆಗಳು ಅವನ ಮೂಗಿನ ಮೇಲೆ ಕುಳಿತು ಬಲವಾಗಿ ಕಡಿದವು. ಭಟನು ತಟ್ಟನೆ ಎಚ್ಚೆತ್ತು ಕಣ್ತೆರೆದು ರಾಜಮಾರ್ಗದ ಮೇಲೆ ದೃಷ್ಟಿ ಹಾಯಿಸಿದನು. ಮರಗಳ ಮರೆಯಲ್ಲಿ ಯಾರೋ ಸುಳಿಯುತ್ತಿರುವಂತೆ ಕಂಡಿತು. ಕಣ್ಣೊರಸಿಕೊಂಡು ಪುನಃ ನೋಡಿದನು, ಯಾರೂ ಇರಲಿಲ್ಲ.

ಅಷ್ಟರಲ್ಲಿ ನಾಯಕನು ಹೊರಗೆ ಬಂದು, "ಕಾವಲಿರು ಅಂದ್ರ ತೂಕಡಿಸ್ತಾ ಕುಂತಲ್ಲೊ !" ಎಂದು ಗದರಿಸಿದನು.

ಭಟನಿಗೆ ತಾನು ತೂಕಡಿಸಲಿಲ್ಲವೆಂದು ತೋರಿಸಿಕೊಳ್ಳಲು ಆತುರ. ಎದ್ದು ನಿಂತು ಕೈತೋರಿಸಿ, "ಆ ಮರಗಳ ಸನಿಯದಾಗ ಇಬ್ಬರು ಸುಳಿದಂಗಾತು," ಎಂದನು.

"ಸರಿಯಾಗಿ ನೋಡಿದೆಯಾ?"

"ನೋಡಿದೆ ಅಣ್ಣ."

ನಾಯಕನು ತಾನೂ ನೋಡಿದನು. ಸಾಲು ಮರಗಳ ಕತ್ತಲ ಅಂಚುಗಳ ನಡುವೆ ರಾಜಮಾರ್ಗ ಮಸುಕಾಗಿ ಕಾಣುತ್ತಿತ್ತು.

"ಪಂಜು ಹಚ್ಕೊಂಡೇ ಹುಡುಕಬೇಕು." ಎಂದು ನಾಯಕನು ಪಾಂಥ ನಿವಾಸದ ಒಳಗೆ ಹೋದನು.

ಬ್ರಹ್ಮಶಿವ ಬೊಮ್ಮರಸರು ಓಣಿಯ ಕೊನೆಗೆ ಬಂದರು. ಮಠದ ಹೆಬ್ಬಾಗಿಲು, ಬಾಗಿಲ ಆಸರೆಗಾಗಿ ಕಟ್ಟಿದ ಮುಖಮಂಟಪ, ಕಾಣಿಸಿತು. ಬಾಗಿಲಿಗೆ ಅಡ್ಡವಾಗಿ

ಯಾವುದೋ ಒಂದು ದೊಡ್ಡ ವಸ್ತುವನ್ನು ನಿಲ್ಲಿಸಿತ್ತು. ಕೈಯಿಂದ ಮುಟ್ಟಿನೋಡಿ ತಿಳಿದರು ಹುಲ್ಲು ತುಂಬಿದ ಗಾಡಿಯೆಂದು. ಮಂಟಪವನ್ನೆಲ್ಲ ಆಕ್ರಮಿಸಿಕೊಂಡಿತ್ತು ಆ ಗಾಡಿ. ಒಂದು ಕಡೆ ಮಾತ್ರ ಅದಕ್ಕೂ ಗೋಡೆಗೂ ನಡುವೆ ಸ್ವಲ್ಪ ಸ್ಥಳವಿತ್ತು. ಬ್ರಹ್ಮಶಿವನು ನುಸುಳಿಕೊಂಡು ಬಾಗಿಲ ಹತ್ತಿರ ಹೋಗಿ ನೋಡಿದನು. ಕದಗಳನ್ನು ಮುಚ್ಚಿ ಒಳಗೆ ತಾಪಾಳ ಹಾಕಿತ್ತು.

"ಬಾಗಿಲು ಹಾಕಿದೆ, ಬೊಮ್ಮರಸರೆ. ನಾವು ಈ ಗಾಡಿಯಲ್ಲಿ ಅಡಗಿ ಕುಳಿತು ರಾತ್ರಿ ಕಳೆಯಬೇಕು," ಸಮೀಪಕ್ಕೆ ಬಂದು ಬ್ರಹ್ಮಶಿವನೆಂದನು.

ಬಳಿಕ ಅವರು ಗಾಡಿಯ ಚಕ್ರ ಮತ್ತು ಮಂಟಪದ ಗೋಡೆಯ ಸಹಾಯದಿಂದ ಹುಲ್ಲಿನರಾಶಿಯ ಮೇಲೇರಿದರು. ಕೈಕೊಟ್ಟು ಮೇಲೆಳೆದುಕೊಳ್ಳುವ ಸಾಹಸದಲ್ಲಿ ಬ್ರಹ್ಮಶಿವನು ಬೊಮ್ಮರಸನಿಗೆ ಸಹಾಯ ಮಾಡಿದನು. ಇಬ್ಬರೂ ಹುಲ್ಲಿನ ನಡುವೆ ಸ್ಥಳಮಾಡಿಕೊಂಡು ಮಲಗಿದರು. ಇಷ್ಟೆಲ್ಲ ಕಾರ್ಯ ಸದ್ದಿಲ್ಲದೆ ಕೆಲವೇ ಕ್ಷಣಗಳಲ್ಲಿ ನಡೆಯಿತು. ಪ್ರಾಣಭೀತಿ ಅವರಿಗೆ ಅದ್ಭುತ ಶಕ್ತಿ ಕೊಟ್ಟಿತ್ತು. ಗೂಡೊಳಗಿನ ಹಕ್ಕಿಗಳಂತೆ ಅವರು ಹುಲ್ಲಿನ ನಡುವೆ ಬೆಚ್ಚಗೆ ಮಲಗಿ ಸಮಾಧಾನದಿಂದ ಉಸಿರಾಡಲು ಪ್ರಾರಂಭಿಸಿದಾಗ ಓಣಿಯ ತಿರುವಿನಲ್ಲಿ ಪಂಜಿನ ಬೆಳಕು ಕಾಣಿಸಿತು. ಭಟರು ರಸ್ತೆಯಲ್ಲಿ ಹುಡುಕಿ ಯಾರನ್ನೂ ಕಾಣದೆ ಮಠದ ಓಣಿಗೆ ಬಂದಿದ್ದರು. ಬ್ರಹ್ಮಶಿವನು ಕಂಪಿಸುತ್ತ, "ನಾವು ಸಿಕ್ಕಿಬಿದ್ದೆವು. ಬೊಮ್ಮರಸರೆ !" ಎಂದು ಗದ್ಗದಿಸಿ ನುಡಿದನು.

"ಸದ್ದುಮಾಡಬೇಡ. ಈಗ ನಮ್ಮ ಪ್ರಾಣಗಳು ಶಿವನ ಕೈಯಲ್ಲಿ. ಕೊಂದರೆ ಕೊಲ್ಲಲಿ. ಉಳಿಸಿದರೆ ಉಳಿಸಲಿ," ಎಂದು ಬೊಮ್ಮರಸನು ಧೈರ್ಯ ಹೇಳಿದನು.

ಭಟರು ಹೆಬ್ಬಾಗಿಲಿಗೆ ಬಂದು ಅಡ್ಡವಾಗಿ ನಿಲ್ಲಿಸಿದ್ದ ಹುಲಿನ ಗಾಡಿಯನ್ನು ನೋಡಿದರು. ಭಟನೊಬ್ಬನು ಪಾರ್ಶ್ವದ ಸಂದಿನಲ್ಲಿ ನೋಡಿ ಬಂದು "ಬಾಗಿಲಾ ಒಳಗಿಂದ ಮುಚ್ಚೈತಿ," ಎಂದನು.

"ಹಂಗಾರ ಅವರು ಈ ಹುಲ್ಲು ಗಾಡಿಲೆಲ್ಲೊ ಅಡಗಿ ಕುಳಿತಿರಬೇಕು," ಎಂದು ನಾಯಕನು ಕತ್ತಿಯನ್ನೊರೆಗಳಚಿ ಹುಲ್ಲಿನ ರಾಶಿಯಲ್ಲಿ ಎರಡು ಮೂರು ಕಡೆ ಇರಿದು ನೋಡಿದನು.

"ಹುಲ್ಲಿನೊಳಗ ಇಬ್ಬರು ಕುಳ್ಳಿರಲಿಕ್ಕ ಸ್ಥಳಾನಾದರೂ ಎಲ್ಲೈತಿ, ಅಣ್ಣಾ. ಅವರಿದ್ರ ರಾಶೀಮೇಲೆ ಕುಂತಿರಬೇಕು," ಇನ್ನೊಬ್ಬ ಭಟನು ಹೇಳಿದನು.

ನಾಯಕನು ಪಂಜನ್ನು ಎತ್ತಿ ಹಿಡಿದು ನೋಡಿ "ಮಂಟಪದ ಮಾಳಗಿತನಕ ಅದ ಹುಲ್ಲಿನ ರಾಶಿ. ಎರಡು ಹಕ್ಕಿ ಅಡಗಿರಲಿಕ್ಕೆ ಸ್ಥಳಾನೂ ಇಲ್ಲ ಅಲ್ಲಿ," ಎಂದನು.

"ಯಾಕಿಲ್ಲ ಅಣ್ಣ? ಅವರು ಅಲ್ಲೇ ಅದಾರ. ನಾನು ಹತ್ತಿ ನೋಡ್ತೀನಿ," ಎಂದು ಮೊದಲಿನ ಭಟನು ಮುಂದಾದನು.

ಬೊಮ್ಮರಸನು ಕಂಪಿಸಿದನು. "ಇಷ್ಟು ದಿನಗಳ ಮೇಲೆ ಪುನಃ ಬಿಜ್ಜಳನ ಬಂದಿಯಾಗಿ ಕಟುಕನ ವಧಾಪೀಠದಲ್ಲಿ ಪಶುವಿನಂತೆ ಪ್ರಾಣ ಬಿಡಬೇಕೆ ನಾನು?" ಎಂದು ಮನದಲ್ಲಿ ಪರಿತಪಿಸಿದನು.

ಭಟನು ಗಾಡಿಯ ಚಕ್ರದ ಮೇಲೆ ಹತ್ತಿ ಮಂಟಪದ ಗೋಡೆಯ ಸಹಾಯದಿಂದ ಹುಲ್ಲಿನ ರಾಶಿಯ ಮೇಲೇರಲು ಹವಣಿಸಿದನು. ಇನ್ನೇನು ಅವನು ತುದಿಯನ್ನು ಮುಟ್ಟಬೇಕು, ಅಷ್ಟರಲ್ಲಿ ಹುಲ್ಲಿನ ನಡುವೆ ಮನೆ ಮಾಡಿಕೊಂಡಿದ್ದ ಒಂದು ಹೆಣ್ಣು ಕೋಳಿ ಗಟ್ಟಿಯಾಗಿ ಕೂಗುತ್ತ ಹೊರಗೆ ಬಂದಿತು. ಅದು ಹಾರಿದ ರಭಸಕ್ಕೆ ರೆಕ್ಕೆಗಳು ಮುಖಕ್ಕೆ ಬಡಿದು ಭಟನು ಆಯತಪ್ಪಿ ಕೆಳಗೆ ಬಿದ್ದನು. ಕೂಗುತ್ತ ಓಣಿಯ ಕಡೆ ಓಡಿತು ಕೋಳಿ. ಭಟರು ಗೊಳ್ಳೆಂದು ನಕ್ಕರು.

"ಮುಗೀತಾ ನಿನ್ನ ಹಾರಾಟ," ಎಂದು ನಾಯಕನು ಹಾಸ್ಯ ಮಾಡಿದನು.

"ತುಸು ಹೊತ್ತಿಗೆ ಮೊದಲು ಮನಸರು ಹುಲ್ಲಮೇಲೆ ಹತ್ತಿದ್ರ ಕೋಳಿ ಹಾಂಗೇ ಕೂತಿರೂದು ಸಾಧ್ಯಾನ ಹೇಳರಪ್ಪ ! ರಾಶೀಮೇಲೆ ಯಾರೂ ಇಲ್ಲ ಅನ್ನೋದನ್ನ ನಾವು ಇದರಿಂದಾದ್ರೂ ತಿಳೀಬೋದು," ಎಂದು ಮತ್ತೊಬ್ಬನು ತರ್ಕವಾಡಿದನು.

ಕೊನೆಗವರು, "ಇದು ನಿನ್ನ ಹೆಡ್ಡತನ, ನೆರಳನ್ನ ಮನಸರು ಅಂತ ತಿಳಕೊಂಡು ನಮಗೀಸೊಂದು ತೊಂದರೆ ಕೊಟ್ಟೆ!" ಎಂದು ಕಾವಲಿದ್ದ ಭಟನನ್ನು ಮೂದಲಿಸಿ ಅಲ್ಲಿಂದ ಸರಿದರು.

ಅಪರಾಧಿಗಳ ಪರಿಶೋಧನೆಗೆ ಧರ್ಮಾಧಿಕರಣದ ವಿಶೇಷಾಜ್ಞೆಯಿಲ್ಲದೆ ಮಠ ಮಂದಿರಗಳನ್ನು ಪ್ರವೇಶಿಸಬಾರದೆಂಬ ನಿಬಂಧನೆ ಆಗ ಅನುಷ್ಠಾನದಲ್ಲಿದ್ದುದರಿಂದ ಮಠದ ಬಾಗಿಲು ತೆಗೆಸಿ ಒಳಗೆ ಹುಡುಕುವ ಧೈರ್ಯ ಅವರಿಗೆ ಉಂಟಾಗಲಿಲ್ಲ. ಭಟರು ಓಣಿಯ ತಿರುವನ್ನು ಮುಟ್ಟಿ ಪಂಜಿನ ಬೆಳಕು ಮರೆಯಾದಾಗ ಬೊಮ್ಮರಸನು, "ಶಿವನು ಬದುಕಿಸಿದನು, ಬ್ರಹ್ಮಶಿವ," ಎಂದು ಕೈಮುಗಿದನು. ಎದ್ದು ಕುಳಿತುಕೊಳ್ಳುವಷ್ಟು ಸ್ಥಳವಿರಲಿಲ್ಲ ಹುಲ್ಲುರಾಶಿಯ ಮೇಲೆ.

ತುಸುಹೊತ್ತಿನ ಮೇಲೆ ಬ್ರಹ್ಮಶಿವನು, "ನಾವು ಬಂದಾಗ ಎಲ್ಲಿಯೋ ಅಡಗಿದ್ದ ಕೋಳಿ, ಭಟನ ಮೇಲೆ ಹಾರಿಬಂದದ್ದು ಹೇಗೆ?" ಎಂದನು.

"ಅದನ್ನೇ ನಾವು ಶಿವನ ಕರುಣೆ, ದೈವಲೀಲೆ ಎಂದು ಕರೆಯುವುದು."

"ನನಗೆ ಆ ಮಾತುಗಳಲ್ಲಿ ನಂಬಿಕೆಯಿಲ್ಲ, ಬೊಮ್ಮರಸರೆ. ನಾವು ಎಚ್ಚರದಿಂದ

ಸದ್ದಾಗದಂತೆ ಗಾಡಿ ಹತ್ತಿದೆವು. ಅಡಗಿ ಕುಳಿತು ನಿದ್ದೆಮಾಡುತ್ತಿದ್ದ ಕೋಳಿಗೆ ಎಚ್ಚರವಾಗಲಿಲ್ಲ. ಪಂಜಿನ ಬೆಳಕು, ಭಟರ ಕೂಗಾಟ, ಅದನ್ನು ಎಚ್ಚರಿಸಿತು. ಭಟನು ಗಾಡಿ ಹತ್ತಿದಾಗ ಅದು ಬೆದರಿ ಹೊರಗೆ ಹಾರಿಬಂತು. ಈ ಸಹಜ ಘಟನೆಗೆ ದೈವಲೀಲೆ ಎಂಬ ದೊಡ್ಡ ಹೆಸರೇಕೆ?" –ಪಿಸುದನಿಯಲ್ಲಿ ಬ್ರಹ್ಮಶಿವನೆಂದನು, ವಾಚಾಲಿಯ ಆವೇಶದಿಂದ.

ಬೊಮ್ಮರಸನಿಗೆ ಅಸಮಾಧಾನವಾಯಿತು. ಅವನು ಹೇಳಿದನು : "ಕೊಂಚ ಹೊತ್ತಿನ ಮೊದಲು ಭಟನ ಕತ್ತಿ ನಮ್ಮನ್ನು ಇರಿಯಲು ಸಿದ್ಧವಾಗಿತ್ತು. ಅದರಿಂದ ನಾವು ಉಳಿದುಕೊಂಡದ್ದು ಹೇಗೆಂಬುದನ್ನು ಯೋಚಿಸಿದೆಯಾ, ಬ್ರಹ್ಮಶಿವ? ಅದು ನಮ್ಮ ಚತುರತೆಯಿಂದಲ್ಲ, ಸಾಹಸದಿಂದಲ್ಲ. ಹುಲ್ಲಲ್ಲಿ ಅಡಗಿದ್ದ ಕೋಳಿ ಮನುಷ್ಯರ ಸುಳಿವು ತಿಳಿದಾಗ ಹೊರಗೆ ಹಾರಿ ಬರುವುದು ಸಹಜ ಘಟನೆ. ನಾವು ಹುಲ್ಲುರಾಶಿಯ ಮೇಲೇರಿದಾಗ ಅದು ಹೊರಗೆ ಬಂದಿದ್ದರೆ ನಮ್ಮ ವಿನಾಶದ ಕಾರಣವಾಗುತ್ತಿತ್ತು. ಆದರೆ ಆ ಸಹಜ ಘಟನೆ ಆಗ ನಡೆಯಲಿಲ್ಲ. ನಾಯಕನು ಕತ್ತಿಯಿಂದ ಹುಲ್ಲಿನ ರಾಶಿಯನ್ನು ಇರಿದಾಗಲೂ ಅದು ನಡೆಯಲಿಲ್ಲ. ಭಟನು ರಾಶಿಯನ್ನೇರಿ, ಇನ್ನೇನು ಸಿಕ್ಕಿ ಬಿದ್ದೆವು ಎಂದು ನಾವು ಕಂಪಿಸುತ್ತಿದ್ದಂತೆ ಆ ಸಹಜ ಘಟನೆ ನಡೆದು ನಮ್ಮನ್ನು ರಕ್ಷಿಸಿತು. ಇದು ದೈವಲೀಲೆಯಲ್ಲದೆ ಮತ್ತೇನು? ಕಣ್ಣಿದ್ದೂ ಕುರುಡರು ನೀವು. ಎದುರಿಗೆ ನಡೆಯುವುದನ್ನು ಸರಿಯಾಗಿ ತಿಳಿಯಲಾರದೆ ಬುದ್ಧಿ ಚತುರತೆಯಿಂದ ಏನೇನೋ ಕಲ್ಪಿಸಿಕೊಳ್ಳುತ್ತೀರಿ. ನಿಮ್ಮ ಬುದ್ಧಿಶಕ್ತಿ ನಿಮ್ಮನ್ನು ನಾಶದ ಕಡೆಗೊಯ್ಯುತ್ತಿದೆ."

ಬಹಳ ಹೊತ್ತು ಇಬ್ಬರೂ ಮೌನವಾಗಿ ಮಲಗಿದ್ದರು. ಮಧ್ಯರಾತ್ರಿಯ ಪ್ರಗಾಢ ಶಾಂತಿ ಎಲ್ಲೆಡೆ ಹರಡಿತ್ತು. ದೂರದಲ್ಲಿ ಗೂಬೆಯೊಂದು ಕೂಗಿದ ಸದ್ದು. ಸಮೀಪದ ಮನೆಯ ಮಾಳಿಗೆಯ ಮೇಲೆ ಎರಡು ಬೆಕ್ಕುಗಳ ಪ್ರಣಯ ಕಲಹ ಆಗ ತಾನೆ ಪ್ರಾರಂಭವಾಗಿತ್ತು. ಬ್ರಹ್ಮಶಿವನು ಪುನಃ ಮಾತಿಗೆ ಪ್ರಾರಂಭಿಸಿದನು.

"ಬೊಮ್ಮರಸರೆ!"

"ಏನು?"

"ಸದ್ಯಕ್ಕೆ ನಾವು ಉಳಿದುಕೊಂಡೆವು. ಬೆಳಕು ಹರಿದ ಮೇಲೆ ಏನು ಮಾಡುವುದು? ಎಲ್ಲಿಗೆ ಹೋಗುವುದು? ಏನಾದರೂ ಯೋಚಿಸಿದಿರಾ?

"ನಮ್ಮನ್ನು ಸದಾಚಾರಿ ಮಠದ ಬಾಗಿಲಿಗೆ ಕರೆತಂದ ದೈವ ಅದನ್ನು ಮೊದಲೇ ನಿರ್ಧರಿಸಿದೆ."

"ದೈವ ನಿರ್ಧರಿಸಿದಂತೆಯೇ ಎಲ್ಲವೂ ನಡೆಯುವುದು. ಆದರೆ ದೈವದ

ಮೇಲೆ ಭಾರಹಾಕಿ ನಾವು ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳುವುದು ಪುರುಷ ಲಕ್ಷಣವಲ್ಲ."

"ನಾನು ಹಿಂದೊಂದು ಸಾರಿ ಬುದ್ಧಿಚತುರತೆಗಳನ್ನು ನಂಬಿ ನಡೆದು ಬಿಜ್ಜಳನ ಬಂಧಿಯಾದೆ. ಈ ಸಾರಿ ಶಿವನು ತೋರಿದ ಮಾರ್ಗದಲ್ಲಿ ನಡೆಯಲು ನಿರ್ಧರಿಸಿದ್ದೇನೆ."

"ನಾವು ಬುದ್ಧಿಕುಶಲತೆಯಿಂದ ನಡೆದರೆ ದೈವಸಹಾಯ ತಾನಾಗಿ ದೊರಕುವುದು. ನಾನು ಯೋಚಿಸಿರುವುದನ್ನು ಹೇಳಲೆ ?"

"ಹೇಳು, ಬ್ರಹ್ಮಶಿವ. ನನ್ನ ನಿರ್ಧಾರಕ್ಕೆ ಅನುಕೂಲವಾಗಿದ್ದರೆ ಹಾಗೆಯೇ ಮಾಡಬಹುದು."

ತುಸುಹೊತ್ತು ಯೋಚಿಸುತ್ತಿದ್ದು ಆಮೇಲೆ ಬ್ರಹ್ಮಶಿವನು ಹೇಳಿದನು : "ಬೆಳಕು ಹರಿಯುವ ಮೊದಲೇ ಮಠದ ಸ್ವಾಮಿಗಳು ಬಾಗಿಲು ತೆಗೆಸಲು ಇಲ್ಲಿಗೆ ಬರುತ್ತಾರೆ. ಅವರ ಪಾದಗಳ ಮೇಲೆ ಬಿದ್ದು ರಕ್ಷಣೆ ಬೇಡುವುದು."

"ಅದು ನನ್ನ ನಿರ್ಧಾರಕ್ಕೆ ಸರಿಯಾದ ಮಾರ್ಗ. ಆದರೆ ನೀನು ?"

"ನಾನೂ ಹಾಗೆಯೇ ಮಾಡುತ್ತೇನೆ. ಪ್ರಾಣ ಉಳಿಸಿಕೊಳ್ಳಲು ಕಂಡ ಕಂಡವರ ಕಾಲುಕಟ್ಟುತ್ತೇವೆ. ಸದಾಚಾರಿಮಠದ ಸ್ವಾಮಿಗಳಂತಹ ಸಾಧು ಸಜ್ಜನರ ಕಾಲು ಹಿಡಿಯಬಾರದೇಕೆ ? ಆದರೊಂದು ಸಂದೇಹ."

"ಸಂದೇಹದ ಕಾರಣ ?'

"ಅವರು ನಮ್ಮ ವಿಚಾರ ಕೇಳಿದರೆ ಏನಾದರೂ ಸುಳ್ಳು ಹೇಳಬೇಕಾಗುವುದು."

ಸುಳ್ಳು ಹೇಳಲು ಇದೇ ಮೊದಲಸಾರಿ ಬ್ರಹ್ಮಶಿವನು ಹಿಂದೆಗೆಯುತ್ತಿರುವುದನ್ನು ಕಂಡು ಬೊಮ್ಮರಸನಿಗೆ ಆಶ್ಚರ್ಯವಾಯಿತು. "ಸುಳ್ಳು ಹೇಳುವ ಅಗತ್ಯವೇನಿದೆ? ನಿಜ ಹೇಳುವುದರಿಂದ ನಮಗೇನೂ ನಷ್ಟವಿಲ್ಲ." ಎಂದನು.

"ನಮಗೆ ನಷ್ಟವಿಲ್ಲ. ಆದರೆ ಅದರಿಂದ ಚಾಲುಕ್ಯರಾಣಿ ಕಾಮೇಶ್ವರೀದೇವಿಯವರಿಗೆ ದ್ರೋಹ ಮಾಡಿದಂತಾಗುವುದು. ಅವರು ನಡೆಸುತ್ತಿರುವ ರಾಜ್ಯಕ್ರಾಂತಿಯ ಸಂಚನ್ನು ಹೊರಪಡಿಸಲು ನಮಗೆ ಅಧಿಕಾರವಿಲ್ಲ."

"ನೀನು ಹೇಳುವುದು ನಿಜ. ನಮ್ಮ ವಿಚಾರ ಏನಾದರೂ ಕಥೆ ಕಟ್ಟಿ ಹೇಳುವುದಾದರೆ ಅದನ್ನು ನೀನೇ ಮಾಡಬೇಕು. ನಾನು ಮೌನವಾಗಿರುತ್ತೇನೆ."

ಮೃತ್ಯು ಎದುರಿಗೆ ನಿಂತಾಗ ಮಾನವನಲ್ಲಿ ಹುಟ್ಟುವ ಧರ್ಮಶ್ರದ್ಧೆ ಕ್ಷಣಿಕವೆಂದು ಬ್ರಹ್ಮಶಿವನು ಅರಿತಿದ್ದನು. ಬೊಮ್ಮರಸನಂತಹ ಹಠವಾದಿ ಧರ್ಮಾಂಧನಲ್ಲಿಯೂ ಅದು ನಿಜವಾದದ್ದು ಅವನಿಗೆ ಆಶ್ಚರ್ಯವೆನಿಸಿತು. ಮುಂದಿನ ಕಾರ್ಯವಿಧಾನದ

ಬಗೆಗೆ ತಾನು ಯೋಚಿಸಿದ್ದನ್ನು ಸಂಕೋಚವಿಲ್ಲದೆ ಧೈರ್ಯವಾಗಿ ಹೇಳಿದನು :

"ಇದುವರೆಗೆ ನೀವು ಉಜ್ಜಯಿನಿಯ ಶ್ರೀಮಂತ ವರ್ತಕರಾಗಿದ್ದಿರಿ. ನಾನು ನಿಮ್ಮ ಕರಣಿಕನಾಗಿದ್ದೆ. ವೃತ್ತಿಗೆ ತಕ್ಕಂತೆ ಬ್ರಹ್ಮರಾಜಸೇಟ್, ಶಿವಗಣ ಭಂಢಾರಿ ಎಂದು ಹೆಸರಿಟ್ಟುಕೊಂಡಿದ್ದೆವು. ಬಿಜ್ಜಳನ ಭಟರು ನಾವು ನಿಜವಾಗಿ ಆ ಹೆಸರಿನ ಹರದರೆಂದೇ ತಿಳಿದಿರಬಹುದು. ಅಥವಾ ನಮ್ಮ ನಿಜವಾದ ಹೆಸರು ಪೂರ್ವೋತ್ತರಗಳು ಅವರಿಗೆ ತಿಳಿದಿರಬಹುದು. ಅದೇನೇ ಇರಲಿ. ನಾಳಿನಿಂದ ಆ ಹೆಸರುಗಳು ಉಪಯೋಗವಿಲ್ಲ. ಋತು ಬದಲಾವಣೆಯಾದಂತೆ ಹೆಸರು ಬದಲಾಗಬೇಕು. ಉಡಿಗೆ ತೊಡಿಗೆಗಳು ಮಾರ್ಪಡಬೇಕು."

ಕತ್ತಲಲ್ಲಿ ಬೊಮ್ಮರಸನ ಮೊಗ ಮಿದುನಗೆಯಿಂದ ಅರಳಿತು. "ನಿಡುಗಲ್ಲು ದುರ್ಗದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ನನ್ನನ್ನು ಕರೆತಂದು ಚಾಲುಕ್ಯ ರಾಣಿಯ ಪ್ರತಿನಿಧಿಯಾಗಿ ಮಾಡಿದೆ. ಉತ್ತರಾಪಥದ ಹರದನ ವೇಷ ಹಾಕಿಸಿದೆ. ಈಗ ಮತ್ತಾವ ಹೆಸರಿಟ್ಟು ಬೇರೇನು ವೇಷ ಹಾಕಿಸುವೆಯೋ ಹಾಕಿಸು. ನಾನು ಎಲ್ಲಕ್ಕೂ ಸಿದ್ಧನಾಗಿದ್ದೇನೆ," ಎಂದನು.

"ಈ ಸಾರಿಯ ನಮ್ಮ ವೇಷ ತೊಡಕಿನದಲ್ಲ, ಬೊಮ್ಮರಸರೆ. ನೀವು ಬ್ರಹ್ಮೇಂದ್ರ ಶಿವಯೋಗಿ. ನಾನು ನಿಮ್ಮ ಅಂತೇವಾಸಿ ಹರೀಶ ರುದ್ರ. ಹೆಸರುಗಳು ಚೆನ್ನಾಗಿವೆಯಲ್ಲವೆ ? ನಾಳೆ ಅದಕ್ಕೆ ತಕ್ಕ ವೇಷಭೂಷಣಗಳನ್ನು ಹೊಂಚಿಕೊಳ್ಳಬೇಕು."

"ಸದಾಚಾರಿ ಮಠದ ಸ್ವಾಮಿಗಳು ನಮ್ಮ ಕಥೆಯನ್ನು ನಂಬಿ ಆಶ್ರಯ ಕೊಟ್ಟರಲ್ಲವೆ ಆ ಮಾತು? ಒಂದು ವೇಳೆ ಅವರು ಸಂದೇಹದಿಂದ ನಮ್ಮನ್ನು ರಕ್ಷಕ ಭಟರಿಗೊಪ್ಪಿಸಿದರೆ?"

"ಶರಣಧರ್ಮದಲ್ಲಿ ನಿನ್ನ ಶ್ರದ್ಧೆ ಅದ್ಭುತವಾದದ್ದು, ಬ್ರಹ್ಮಶಿವ. ಆದರೂ ನೀನು......." ಬೊಮ್ಮರಸನು ಮಾತು ಮುಗಿಸಲಿಲ್ಲ.

ಬ್ರಹ್ಮಶಿವನು ಮೃದುವಾಗಿ ನಕ್ಕು ಹೇಳಿದನು : "ಹೌದು ಬೊಮ್ಮರಸರೆ, ನಾನು ಎರಡು ಸಾರಿ ಮತಾಂತರವಾದವನು. ಈಗ ನನಗನಿಸುತ್ತದೆ, ಅದೊಂದು ವಿವೇಕಶೂನ್ಯ ಡೊಂಬರಾಟವೆಂದು. ಜಗತ್ತಿನ ಜಂಜಡದಲ್ಲಿ ಸಿಲುಕಿ ಹುಳುವಿನಂತೆ ಬದುಕಿ ಸಾಯುವವರು ಯಾವ ಧರ್ಮದಲ್ಲಿದ್ದರೂ ಒಂದೇ. ಮೋಕ್ಷಾರ್ಥಿಯಾದವನಿಗೆ ಎಲ್ಲಾ ಧರ್ಮಗಳೂ ಸಮಾನ."

ಬೊಮ್ಮರಸನಿಗೆ ಆಶ್ಚರ್ಯವಾಯಿತು. "ನಿನಗೆ ಜ್ಞಾನೋದಯವಾದದ್ದು ಯಾವಾಗ, ಪಂಡಿತ?" ಎಂದು ಕೇಳಿದನು.

"ಹುಲ್ಲರಾಶಿಯಿಂದ ಕೋಳಿ ಹಾರಿಬಂದ ವಿಚಾರವಾಗಿ ನಿಮ್ಮ ವಿವೇಕದ

ನುಡಿಗಳನ್ನು ಕೇಳಿದಾಗಿನಿಂದ.”

ಬ್ರಹ್ಮಶಿವನ ಉತ್ತರ ವಿಡಂಬನೆಯ ನುಡಿಗಳೇ ಅಥವಾ ಪರಿವರ್ತಿತ ಹೃದಯದ ಸತ್ಯದ ಕಿಡಿಗಳೇ ಎಂದು ಯೋಚಿಸುತ್ತ ಬೊಮ್ಮರಸನು ನಿದ್ರೆ ಮಾಡಿದನು. ಬ್ರಹ್ಮಶಿವನಿಗೆ ಆ ಮೊದಲೆ ನಿದ್ರೆ ಹತ್ತಿತ್ತು.

ಹೆಬ್ಬಾಗಿಲ ಭಾರವಾದ ಕದಗಳ ಅಗುಳಿ ಅಡ್ಡಹಲಿಗೆ ಸರಪಳಿಗಳನ್ನು ತೆಗೆಯುವ ಶಬ್ದ ಕೇಳಿ ಅವರು ಎಚ್ಚೆತ್ತರು. ಹುಲ್ಲಿನ ರಾಶಿಯನ್ನು ಹತ್ತಿದಷ್ಟೇ ನಿಶ್ಯಬ್ದವಾಗಿ ಕೆಳಗಿಳಿದು ಮಂಟಪದ ಹೊರಗೆ ಮರೆಯಲ್ಲಿ ನಿಂತರು. ಮೂಡಣ ದೆಸೆ ಕೆಂಪಡರಿತ್ತು. ಇನ್ನೂ ಸೂರ್ಯ ಹುಟ್ಟಿರಲಿಲ್ಲ.

* * *

ಸದಾಚಾರಿಮಠದ ಶಿವಕುಮಾರ ಸ್ವಾಮಿಗಳು ಬೆಳಗಾಗುವ ಮೊದಲೇ ಮಠದ ಹೆಬ್ಬಾಗಿಲನ್ನು ತೆಗೆಸಿ, “ನಮ್ಮ ರಾಯಣ್ಣಗೌಡ ಬಾಗಿಲು ಹಿಡಿಸದ ಹಾಗೆ ಹುಲ್ಲು ತುಂಬಿ ಕಳುಹಿಸಿದ್ದಾನೆ. ಗಾಡಿ ಮಂಟಪದಲ್ಲಿ ನಿಂತಿದೆ. ಕಟ್ಟು ಬಿಚ್ಚಿ ನಾಲ್ಕುಹೊರೆಗಳನ್ನ ತೆಗೆದರೆ ಆಮೇಲೆ ಗಾಡಿಯನ್ನು ಒಳಗೆ ತರಬಹುದು,” ಎಂದು ಅನುಚರರಿಗೆ ಹೇಳಿದರು.

ಸಂಗಡಿದ್ದವರು ಆ ಕೆಲಸ ಮಾಡುತ್ತಿದ್ದಂತೆ ಸ್ವಾಮಿಗಳು ಮಠದ ಅಂಗಣದಲ್ಲಿದ್ದ ಅಶ್ವತ್ಥಕಟ್ಟೆಯ ಬಳಿ ನಿಂತು ತಮ್ಮ ಪದ್ಧತಿಯಂತೆ ಮೌನವಾಗಿ ಜಪಕ್ಕೆ ಪ್ರಾರಂಭಿಸಿದರು. ಹಗಲಿರುಳು ಕುಳಿತಾಗ, ನಿಂತಾಗ, ಮಲಗಿದಾಗ, ಅವಕಾಶ ಸಿಕ್ಕಿದಾಗಲೆಲ್ಲಾ ಷಡಕ್ಷರ ಮಂತ್ರವನ್ನು ಜಪಿಸುವುದು ಅವರ ವ್ರತ. ಅದಕ್ಕಾಗಿ ಅವರಿಗೆ “ಮಂತ್ರಲಕ್ಷ್ಯ” ಎಂಬ ಅಡ್ಡ ಹೆಸರೂ ಬಂದಿತ್ತು.

ಮಠದ ಆಳುಗಳಿಬ್ಬರು ಕಟ್ಟುಗಳನ್ನು ಬಿಚ್ಚಲು ಗಾಡಿಯ ಮೇಲೆ ಹತ್ತಿದಾಗ ಬ್ರಹ್ಮಶಿವ, ಬೊಮ್ಮರಸರು ಹೆಬ್ಬಾಗಿಲನ್ನು ದಾಟಿ, ಸ್ವಾಮಿಗಳು ನಿಂತಲ್ಲಿಗೆ ಹೋಗಿ ಕಾಲುಗಳ ಮೇಲೆ ಬಿದ್ದು, “ಅಯ್ಯನವರು ಕಾಪಾಡಬೇಕು. ಪ್ರಾಣಭಯದಿಂದ ಓಡಿ ಬಂದಿದ್ದೇವೆ.” ಎಂದು ಮೊರೆಯಿಟ್ಟರು.

ಶಿವಕುಮಾರ ಸ್ವಾಮಿಗಳ ತೀವ್ರದೃಷ್ಟಿ ಅವರ ಮೊಗಗಳತ್ತ ತಿರುಗಿತು. ಹೆಬ್ಬಾಗಿಲ ಪಾರ್ಶ್ವದ ಗೋಡೆಗೆ ಸಿಲುಕಿಸಿದ್ದ ಪಂಜಿನ ಬೆಳಕಿನಿಂದ ಅವರಲ್ಲೊಬ್ಬನು ಗಂಭೀರ ಪ್ರಕೃತಿಯ ಪ್ರೌಢನೆಂದೂ, ಇನ್ನೊಬ್ಬನು ಚಾಣಾಕ್ಷ ವಾಚಾಳಿ ತರುಣನೆಂದೂ ಸ್ವಾಮಿಗಳು ತಿಳಿದರು. “ನೀವು ಎಲ್ಲಿಂದ ಬಂದಿರಿ, ನಿಮ್ಮ ಹೆಸರೇನು?” ಎಂದು ತರುಣನನ್ನು ಕೇಳಿದರು.

ಬ್ರಹ್ಮಶಿವನು ಎದ್ದುನಿಂತು ಕೈ ಜೋಡಿಸಿ ಹೇಳಿದನು : “ಇವರು ಭಗವಾನ್

ದಾಸ ಸೇಟರು. ನಾನು ಅವರ ಕಾರ್ಯದರ್ಶಿ ಚಂದನದಾಸ್. ನಾವು ಪಂಡರಪುರದ ನಿವಾಸಿಗಳು. ಬ್ರಹ್ಮಗಿರಿಗೆ ಯಾತ್ರೆ ಹೋಗಲು ಕಲ್ಯಾಣಕ್ಕೆ ಬಂದೆವು. ನಮ್ಮ ಯಾತ್ರಾತಂಡ ಒಟ್ಟಿಗೆ ಸೇರುವುದು ಸ್ವಲ್ಪ ತಡವಾದ್ದರಿಂದ ಇಲ್ಲಿಯ ಧರ್ಮಶಾಲೆಯೊಂದರಲ್ಲಿ ಎರಡು ದಿನಗಳಿಂದ ಉಳಿದಿದ್ದೇವೆ. ನಿನ್ನೆ ಸಂಜೆ ಇಬ್ಬರು ರಾಜಭಟರು ನಾವಿದ್ದ ಸ್ಥಳಕ್ಕೆ ಬಂದು, "ನಿಮ್ಮ ಸಾಮಾನುಗಳನ್ನು ಹುಡುಕಬೇಕು. ನೀವು ಸುಂಕಕೊಡದೆ ಹೊಯ್ಸಳ ರಾಜ್ಯಕ್ಕೆ ಚಿನ್ನ ಸಾಗಿಸುತ್ತಿರುವಿರೆಂದು ನಮಗೆ ಸುದ್ದಿ ಬಂದಿದೆ" ಎಂದರು. "ನಾವು ಯಾತ್ರೆಗೆ ಬಂದವರು. ದಾರಿಯ ವೆಚ್ಚಕ್ಕೆ ಬೇಕಾದ ಹಣದ ಹೊರತಾಗಿ ನಮ್ಮಲ್ಲಾವ ಚಿನ್ನವೂ ಇಲ್ಲ" ಎಂದೆವು ನಾವು. ಭಟರು ನಮ್ಮನ್ನು ಹೊಡೆದು ಬಡೆದು ನಮ್ಮ ವಸ್ತುಗಳನ್ನು ದೋಚಿದರು. ನಾವು ಪ್ರಾಣಭಯದಿಂದ ಓಡಿದೆವು."

ಸ್ವಾಮಿಗಳು ಯೋಚಿಸಿದರು : "ಇವರು ಹೇಳುವುದು ನಿಜವೇ? ರಾಜಭಟರ ಹಾವಳಿ ಈಚೆಗೆ ನಗರದಲ್ಲಿ ಹೆಚ್ಚುತ್ತಿದೆ. ನಿಜವಾಗಲಿ, ಅಲ್ಲದಿರಲಿ, ಶರಣು ಬಂದವರಿಗೆ ರಕ್ಷಣೆ ಕೊಡುವುದು ನಮ್ಮ ಕಾರ್ಯ" ಎಂದು ನಿರ್ಧರಿಸಿಕೊಂಡು, "ನೀವು ರಾತ್ರಿ ಎಲ್ಲಿದ್ದಿರಿ ?" ಎಂದು ಕೇಳಿದರು.

"ಮಠದ ಹೆಬ್ಬಾಗಿಲಲ್ಲಿ, ಹುಲ್ಲುಗಾಡಿಯ ಮರೆಯಲ್ಲಿ. ನಾವಿಲ್ಲಿಗೆ ಬಂದಾಗ ಮಧ್ಯರಾತ್ರಿಯಾಗಿತ್ತು."

"ಈಗ ನಮ್ಮಿಂದ ನಿಮಗೇನಾಗಬೇಕು ?"

"ಯಾತ್ರಾ ತಂಡದ ನಾಯಕರು ಇನ್ನೆರಡು ದಿನದಲ್ಲಿ ಕಲ್ಯಾಣಕ್ಕೆ ಬರುತ್ತಾರೆ. ಅಲ್ಲಿಯವರೆಗೆ ರಾಜಭಟರಿಂದ ನಮ್ಮನ್ನು ರಕ್ಷಿಸಬೇಕು."

"ಆಮೇಲೆ ನೀವೇನು ಮಾಡುವಿರಿ ?"

"ತಂಡದ ನಾಯಕರ ಮುಖಾಂತರ ಪ್ರಭುತ್ವಕ್ಕೆ ದೂರು ಕೊಡುವುದು. ನಮ್ಮ ಸಾಮಾನು ಹಣಕಾಸು ಸಿಕ್ಕಿದರೆ ಸರಿ. ಸಿಕ್ಕದೆ ಹೋದರೆ ಯಾತ್ರೆಯ ಯೋಚನೆ ಬಿಟ್ಟು ಪಂಡರಪುರಕ್ಕೆ ಹಿಂತಿರುಗುವುದು."

ಬ್ರಹ್ಮಶಿವನ ಸುಳ್ಳಿನ ಸರ ಕ್ರಮಕ್ರಮವಾಗಿ ವಾಸ್ತವತೆಯ ರೂಪು ತಾಳುತ್ತಿರುವುದನ್ನು ಕಂಡು ಬೊಮ್ಮರಸನು ತನ್ನಲ್ಲಿ ತಾನು ನಕ್ಕನು. ನಿಜವನ್ನು ಸಂದೇಹದಿಂದ ಕಂಡು, ಸುಳ್ಳನ್ನು ನಂಬುವುದು ಲೋಕ ಸ್ವಭಾವ, ಎಂದುಕೊಂಡನು.

ಸ್ವಾಮಿಗಳು, "ರಾಘವ ! ರಾಘವ !" ಎಂದು ಕೂಗಿದರು.

ರಾಘವ ಅವರ ಮೆಚ್ಚಿನ ಕಾರ್ಯದರ್ಶಿ, ಓಡಿಬಂದು "ಏನು ಬುದ್ಧೀ?" ಎಂದ.

"ಇವರಿಗೆ ಮಠದ ಹಿಂಭಾಗದ ಅತಿಥಿಶಾಲೆಯಲ್ಲಿ ಸ್ಥಳ ಮಾಡಿಕೊಡು. ಉಣ್ಣುವುದಾದರೆ ಅಲ್ಲಿಯೇ ಊಟ ಕಳುಹಿಸುವಂತೆ ತಮ್ಮಡಿಗೆ ಹೇಳು. ಇಲ್ಲವೆ ಅಡಿಗೆಗೆ ಬೇಕಾದ ಸರಂಜಾಮುಗಳನ್ನು ಕೊಡು. ಇವರು ಇಲ್ಲಿರುವ ವಿಚಾರ ಯಾರಿಗೂ ತಿಳಿಯಬಾರದು ಜೋಕೆ!" ಎಂದು ಸ್ವಾಮಿಗಳು ಅಪ್ಪಣೆ ಮಾಡಿದರು.

ಸಮಸ್ಯೆ ಇಷ್ಟು ಸುಲಭವಾಗಿ ಪರಿಹಾರವಾಗುವುದೆಂದು ಬೊಮ್ಮರಸನು ಭಾವಿಸಿರಲಿಲ್ಲ. ಕಾರ್ಯಕರ್ತನ ಹಿಂದೆ ಹೋಗುತ್ತಿದ್ದಂತೆ ಮೆಚ್ಚಿಗೆಯಿಂದ ಅವನು ಮೃದುವಾಗಿ ಬ್ರಹ್ಮಶಿವನ ಬೆನ್ನು ತಟ್ಟಿದನು.

ಮದ್ಯದ ಅಮಲಿಳಿದು ಭಟರು ನಿದ್ರೆಯಿಂದೆದ್ದಾಗ ಬೆಳಗಿನ ಮೊದಲ ಪ್ರಹರ ಮುಗಿಯುತ್ತ ಬಂದಿತ್ತು. ಪಾಂಥನಿವಾಸದ ಉಪಾಹಾರ ಘಟ್ಟಿಸಿ, ಬಂಧಿಸಲೆಳಸಿದ್ದ ಪ್ರವಾಸಿಗಳ ಸಾಮಾನು ಸರಂಜಾಮುಗಳನ್ನು ಗಾಡಿಯಲ್ಲಿ ತುಂಬಿಕೊಂಡು ಅವರು ಧರ್ಮಾಧಿಕರಣಕ್ಕೆ ಹೋದರು. ಪಾಂಥನಿವಾಸದ ಕಾರ್ಯಕರ್ತನಿಗೆ ಅವರನ್ನು ತಡೆಯುವ ಧೈರ್ಯವಿರಲಿಲ್ಲ. ಬೊಮ್ಮರಸನ ಗಾಡಿ ಮತ್ತು ಎತ್ತು ಮಾತ್ರ ಅಲ್ಲಿಯೇ ಉಳಿಯಿತು. ಸಂಗಡ ಬಂದಿದ್ದ ಆಳು ಭಟರನ್ನು ಕಂಡಾಗಲೇ ಪರಾರಿಯಾಗಿದ್ದ.

ಆ ದಿನ ಮಧ್ಯಾಹ್ನ ತಮ್ಮಡಿ ತಂದುಕೊಟ್ಟ ಊಟದ ತಟ್ಟೆಗಳನ್ನು ಬರಿದು ಮಾಡಿ ಬ್ರಹ್ಮಶಿವ ಬೊಮ್ಮರಸರು ಅತಿಥಿಶಾಲೆಯ ಕೊಠಡಿಯಲ್ಲಿ ಕುಳಿತು ಮೆಲ್ಲನೆ ಮಾತಾಡುತ್ತಿದ್ದರು.

"ಈಗ ನಾನು ಪೇಟೆಯ ಕಡೆಗೆ ಹೋಗಿ ಬರುವೆ, ಬೊಮ್ಮರಸರೆ. ಏನಾದರೂ ಹಣವಿದ್ದರೆ ಕೊಡಿರಿ" ಬ್ರಹ್ಮಶಿವನೆಂದನು.

"ಹಣವೇಕೆ ? ಪೇಟೆಯಲ್ಲೇನು ಕೆಲಸ ?"

"ನಮಗೆ ಬೇಕಾದ ಉಡಿಗೆ ತೊಡಿಗೆಗಳನ್ನು ಕೊಂಡುಕೊಳ್ಳಬೇಡವೆ ?"

"ನಿಜ. ನಡೆ, ನಾನೂ ಸಂಗಡ ಬರುತ್ತೇನೆ."

"ನೀವು ಬಂದರೆ ಅಪಾಯವಿದೆ, ಬೊಮ್ಮರಸರೆ. ನಿಮ್ಮನ್ನು ನೋಡಿದವರು ಬ್ರಹ್ಮರಾಜ ಸೆಟ್ಟರೆಂದು ಗುರುತಿಸಬಹುದು. ಭಟರು ನಮ್ಮನ್ನು ಇನ್ನೂ ಹುಡುಕುತ್ತಿರಬೇಕು !"

"ನೀನು ಹೋಗುವುದರಲ್ಲಿ ಅಪಾಯವಿಲ್ಲವೆ?"

"ಕಲ್ಯಾಣದಲ್ಲಿ ನನ್ನಂಥವರು ಹತ್ತು ಸಾವಿರ ಜನರಿದ್ದಾರೆ. ಹೊಯ್ಸಳ ಮಾದರಿಯಲ್ಲಿ ಧೋತ್ರ ಉಟ್ಟು ತಲೆಗೆ ಪಾಗು ಸುತ್ತಿಕೊಂಡರೆ ನನ್ನನ್ನು ಗುರುತಿಸಲು ನಿಮಗೂ ಕಷ್ಟವಾಗಬಹುದು."

ಬೊಮ್ಮರಸನು ನಡುವಿಗೆ ಕಟ್ಟಿದ್ದ ಚೀಲವನ್ನು ಬಿಚ್ಚಿ ಅದರಲ್ಲಿದ್ದ ಚಿನ್ನದ ನಾಣ್ಯಗಳನ್ನು ಕೆಳಗೆ ಸುರಿದು, "ನಿನಗೆ ಬೇಕಾದಷ್ಟು ತೆಗೆದುಕೋ," ಎಂದನು.

ಬ್ರಹ್ಮಶಿವನು ಹತ್ತು ವರಹಗಳನ್ನು ತೆಗೆದುಕೊಂಡು ಉಡುಗೆಯನ್ನು ಸರಿ ಕಂಡಂತೆ ಬದಲಾಯಿಸಿಕೊಂಡು, "ನಾನು ಕತ್ತಲಾದ ಮೇಲೆ ಹಿಂತಿರುಗುತ್ತೇನೆ. ಅಲ್ಲಿಯವರೆಗೆ ನೀವು ಬಾಗಿಲು ಹಾಕಿಕೊಂಡು ನಿದ್ರೆ ಮಾಡಿದರೆ ಒಳ್ಳೆಯದು. ಮಠದ ಜನರಿಗೂ ನಿಮ್ಮ ಪರಿಚಯವಿಲ್ಲದಂತೆ ನೋಡಿಕೊಳ್ಳಬೇಕು," ಎಂದು ಹೇಳಿ ಹೊರಗೆ ಹೋದನು.

ಮಧ್ಯಾಹ್ನದ ಮೇಲೆ ಮಠಕ್ಕೆ ಬಂದು ಹೋಗುವವರ ಸಂಖ್ಯೆ ಹೆಚ್ಚಿಗಿರುತ್ತಿದ್ದುದರಿಂದ ಅವನನ್ನು ಯಾರೂ ಗಮನಿಸಲಿಲ್ಲ. ಪಾಂಥನಿವಾಸದಲ್ಲಿದ್ದ ಅಗ್ಗಳನೇನಾದನು ? ನಮ್ಮ ವಸ್ತುವಾಹನಗಳ ಗತಿಯೇನು ? ಎಂಬ ಚಿಂತೆ ಅವನ ಮನದಲ್ಲಿ ಕುದಿಯುತ್ತಿತ್ತು. ಆದರೆ ಆ ಕಡೆ ತಿರುಗಿ ನೋಡುವ ಧೈರ್ಯವೂ ಇರಲಿಲ್ಲ. ಜನರೊಡನೆ ಬೆರೆತು ತ್ರಿಪುರಾಂತಕ ಕೆರೆಗೆ ಹೋಗುವ ಮಾರ್ಗದಲ್ಲಿ ಕೊಂಚ ದೂರ ಹೋಗಿ ಅಲ್ಲಿಂದ ನಗರದ ಮಧ್ಯಭಾಗಕ್ಕೆ ಹೋಗುವ ದಾರಿ ಹಿಡಿದನು.

ಕಲ್ಯಾಣದ ಮುಖ್ಯ ರಾಜಬೀದಿಯ ಹತ್ತಿರ ಜನನಿಬಿಡವಾದ ಒಂದು ಸಣ್ಣ ಓಣಿಯಲ್ಲಿ ಬಹುರೂಪಿ ಉದ್ದಾನಯ್ಯನ ಮನೆ. ದೊಡ್ಡಾಟದಲ್ಲಿ ಅವನ ಸೈಂಧವ ಮತ್ತು ಪರಶುರಾಮ ಪಾತ್ರಗಳು ಆಗ ಜನಪ್ರಿಯವಾಗಿದ್ದುವು. ಅಭಿನಯದಿಂದ ಸಾಕಾದಷ್ಟು ವರಮಾನವಿಲ್ಲದೆ ಅವನು ನಾಟ್ಯತಂಡಗಳಿಗೆ ಬೇಕಾಗುವ ಉಡಿಗೆ ತೊಡಿಗೆಗಳನ್ನು ಸಿದ್ಧಪಡಿಸಿ ಮಾರುವ ಉಪವೃತ್ತಿಯನ್ನು ನಡೆಸುತ್ತಿದ್ದನು.

ಆ ದಿನ ಅವನು ಅಪರಾಹ್ನದ ನಿದ್ರೆಯಿಂದೆದ್ದು ತಾಂಬೂಲ ಮೆಲ್ಲುತ್ತ ಮನೆಯಲ್ಲಿ ಗದ್ದಿಗೆಯ ಮೇಲೆ ಕುಳಿತಿದ್ದಂತೆ ಬ್ರಹ್ಮಶಿವನು ಅಲ್ಲಿಗೆ ಬಂದನು.

"ಓ ! ಬ್ರಹ್ಮಪ್ಪನೋರು ! ಈಸು ದಿನವೂ ಕಾಣಲಿಲ್ಲ. ಎಲ್ಲಿಗೆ ಹೋಗಿದ್ದಿರಣ್ಣ?" ಎಂದು ಅವನು ಬ್ರಹ್ಮಶಿವನನ್ನು ಸ್ವಾಗತಿಸಿದನು.

ವ್ಯರ್ಥ ಸಂಭಾಷಣೆಯಲ್ಲಿ ಹೊತ್ತು ಕಳೆಯುವ ಇಷ್ಟವಿಲ್ಲದೆ ಬ್ರಹ್ಮಶಿವನು "ಗೋಕರ್ಣದ ಜಾತ್ರೇಲಿ ನಾಕು ನಾಟಕ ಆಡಿಸಿದೆ ಉದ್ದಾನಪ್ಪನೋರ. ಎರಡು ಕಾಸೂ ಸಿಕ್ಕಿತು. ನಾನೇ ಒಂದು ತಂಡ ಕಟ್ಟಬೇಕು ಅಂತ ಯೋಚಿಸಿದೆ. ನಿಮ್ಮಿಂದ ಒಂದಿಷ್ಟು ಸಾಮಾನು ಬೇಕಾಗಿದ್ದುವು," ಎಂದನು.

"ಕಿರೀಟ, ಭುಜಕೀರ್ತಿ, ಜರಿ, ಅಂಗರೇಕುಗಳು ಎಲ್ಲ ತಯಾರೈತಿ, ಬ್ರಹ್ಮಪ್ಪ. ನಿಮಗೆ ಬೇಕಾದ್ದನ್ನು ಸಲೀಸು ಬೆಲೆಗೆ ಕೊಡುತ್ತೇನೆ," ಎಂದು ಉದ್ದಾನಯ್ಯ ವಾಣಿಜ್ಯದ ಮೆರಗು ಮಾತಾಡಿದನು.

"ನನಗೀಗ ಅಂಥಾ ಬೆಲೆ ಬಾಳೋ ಒಡವೇ ವಸ್ತು ಬೇಕಾಗಿಲ್ಲ, ಅಣ್ಣ. ಅದೆಲ್ಲಾ ಗೋಕರ್ಣದಾಗ ಕೊಂಡೀನ್ರಿ, ಬಾಳಾ ಸಲೀಸ ಬೆಲೇಗೆ. ಈಗ ನಂಗೆ ಬೇಕಾದ್ದು ವಿಶ್ವಾಮಿತ್ರ ಪಾತ್ರಕ್ಕೆ ಕಪನಿ, ಗಡ್ಡ, ಜಟಾ, ಕಮಂಡಲು, ಯೋಗದಂಡ ಮತ್ತಾ......ಅವನ ಇಬ್ಬರು ಶಿಷ್ಯರಿಗೆ ಉಡುಪುಗಳು. ಒಂದೆರಡು ಅಂಗವಸ್ತ್ರ, ಇಷ್ಟೇ."

ಉದ್ದಾನಯ್ಯ ಮನೆಯ ಒಳಗಿಂದ ಕೆಲವು ಅರಿವೆ ಗಂಟುಗಳನ್ನು ತಂದು ಬ್ರಹ್ಮಶಿವನ ಮುಂದಿಟ್ಟು, "ಇದರಾಗ ನಿಮಗೇನು ಬೇಕೋ ತೆಗೆದಿಡ್ರಿಯಪ್ಪ!" ಎಂದು ಹೇಳಿ ಅಲ್ಲಿಯೇ ಮೂಲೆಯಲ್ಲಿದ್ದ ದೊಡ್ಡ ಪೆಟ್ಟಗೆಯಲ್ಲಿ ಗಡ್ಡ ಜಟೆಗಳನ್ನು ಹುಡುಕಲು ಪ್ರಾರಂಭಿಸಿದನು.

ಬ್ರಹ್ಮಶಿವನು ಗಂಟುಗಳನ್ನು ಬಿಚ್ಚಿ ತನಗೆ ಬೇಕಾದ ಮೂರು ಜೊತೆ ಕಪನಿ, ಧೋತ್ರಗಳು, ಚೀವರಗಳು, ಮುಂತಾದವನ್ನು ಆರಿಸಿ ಬೇರೆ ತೆಗೆದಿಟ್ಟನು. ಅಷ್ಟರಲ್ಲಿ ಗಡ್ಡ ಮೀಸೆ ಜಟೆ ಯೋಗದಂಡ ಕಮಂಡಲಗಳು ಸಿದ್ಧವಾದುವು.

ಬ್ರಹ್ಮಶಿವನು ಒಂದೊಂದು ವಸ್ತುವನ್ನೂ ಪರೀಕ್ಷಿಸಿ ನೋಡಿ, "ಈ ಎಲ್ಲ ವಸ್ತುಗಳ ಬೆಲೆ ಏನಾಗ್ತದ, ಉದ್ದಾನಪ್ನೋರ?" ಎಂದನು.

ಉದ್ದಾನಯ್ಯ ಆರಿಸಿಟ್ಟ ವಸ್ತುಗಳನ್ನು ಇನ್ನೊಂದು ಸಾರಿ ಸರಿ ನೋಡಿ, ದೀರ್ಘವಾಗಿ ಯೋಚಿಸುವವನಂತೆ ಸ್ವಲ್ಪ ಹೊತ್ತು ಸುಮ್ಮನೆ ಕುಳಿತು ಅನಂತರ, "ಬೇರೆಯವರಾಗಿದ್ರ ಇಪ್ಪತ್ತುವರಹಕ್ಕ ಕಮ್ಮಿ ಇದನ್ನ ಕೊಡ್ತಿರಲಿಲ್ಲ, ಬ್ರಹ್ಮಪ್ಪ. ನೀವು ತಿಳಿದ ಜನ, ನಿಮಗೆ ಹಂಗ ಹೇಳಲಿಕ್ಕಾದೀತ? ಹತ್ತು ವರಹ ಕೊಟ್ಟು ತಕೊಂಡು ಹೋಗಿ," ಎಂದನು.

ಎರಡು ಗಳಿಗೆ ಕಾಲ ಚೌಕಾಸಿ ನಡೆದ ಮೇಲೆ ಬೆಲೆ ಐದು ವರಹಕ್ಕಿಳಿಯಿತು. ಬ್ರಹ್ಮಶಿವನು ಕಿಸೆಯಿಂದ ಹಣ ತೆಗೆದುಕೊಟ್ಟು ಅವುಗಳನ್ನು ಮೂಟೆ ಕಟ್ಟುತ್ತಿದ್ದಂತೆ ಉದ್ದಾನಯ್ಯನ ಪತ್ನಿ ತಿನಸಿ ತಟ್ಟೆಗಳು ಮತ್ತು ನೀರಿನ ಪಾತ್ರೆಯನ್ನು ತಂದಿಟ್ಟಳು. ಉಪಾಹಾರ ಮುಗಿಸಿ, ಉದ್ದಾನಯ್ಯನ ಅಭಿನಯವನ್ನು ಪ್ರಶಂಸಿಸಿ ನಾಲ್ಕು ಮಾತುಗಳನ್ನಾಡಿ ಬ್ರಹ್ಮಶಿವನು ಅಲ್ಲಿಂದ ಹೊರಟಾಗ ಸಂಜೆಯಾಗಿತ್ತು. ಅಂಗಡಿಗೆ ಹೋಗಿ ಎರಡು ಸಣ್ಣಗಂಬಳಿ ಮತ್ತು ಅಗತ್ಯವಾದ ಬೇರೆ ಅರಿವೆಗಳನ್ನು ಕೊಂಡುಕೊಂಡು ಕತ್ತಲೆ ಕವಿದ ಕೆಲವು ಗಳಿಗೆಗಳ ಅನಂತರ ಅವನು ಮಠಕ್ಕೆ ಹಿಂದಿರುಗಿದನು.

ಬೊಮ್ಮರಸನು ಇನ್ನೂ ಎದ್ದಿರಲಿಲ್ಲ. ಬ್ರಹ್ಮಶಿವನು ಕೋಣೆಯಲ್ಲಿನ ದೀಪ ಹಚ್ಚಿ, "ನಿನ್ನೆ ಕಳೆದುಕೊಂಡ ನಿದ್ದೆಯನ್ನು ಒಡೆಯರು ಇಂದು ಬಡ್ಡಿಸಹಿತ ಹಿಂದಕ್ಕೆ

ಪಡೆದಂತಿದೆ," ಎಂದು ನಗೆಯಾಡಿ ಬೊಮ್ಮರಸನನ್ನು ಎಚ್ಚರಗೊಳಿಸಿದನು. ಊಟ ಮುಗಿದ ಮೇಲೆ ರಾತ್ರಿ ಬಹಳ ಹೊತ್ತು ಅವರು ಮಾತಾಡುತ್ತಿದ್ದು ಆಮೇಲೆ ನಿದ್ದೆ ಹೋದರು.

* * *

ಬಸವಣ್ಣನವರು ನಿರ್ವಾಸಿತರಾಗಿ ಮಹಮನೆಯನ್ನು ಬಿಟ್ಟು ಹೋದ ನಾಲ್ಕನೆಯ ದಿನ ಅಂದು. ಬಿರುಗಾಳಿಗೆ ಸಿಕ್ಕ ಉಪವನದ ತರುಲತೆಗಳಂತಾಗಿತ್ತು ಅಲ್ಲಿಯ ಶರಣ ಶರಣೆಯರ ಸ್ಥಿತಿ. ಕಣ್ಣೀರನ್ನು ನೆಲಕ್ಕುರುಳಿಸದೆ ಬಸವಣ್ಣನವರನ್ನು ಬೀಳ್ಕೊಟ್ಟಿದ್ದ ನಾಗಲಾಂಬೆ ನೀಲಲೋಚನೆಯರು, ಮೂರು ದಿನಗಳಿಂದ ಪೂಜಾ ನಂತರ ನೈವೇದ್ಯಕ್ಕಿಟ್ಟ ಒಂದೊಂದು ಬಟ್ಟಲು ಹಾಲು ಕುಡಿದು ಜೀವ ಧರಿಸಿಕೊಂಡಿದ್ದರು.

ಇಂದು ನಿರ್ವಾಸಿತರ ಸಂಗಡ ಹೋಗಿದ್ದ ಶರಣನೊಬ್ಬನು ಹಿಂದಿರುಗಿ, "ಈಗ ಅವರು ಬಾಗೆವಾಡಿಯ ಹತ್ತಿರ ಹತ್ತಿರ ಹೋಗಿರಬೇಕು. ನಾಳೆ ನೇಸರು ಮುಳುಗುವ ಹೊತ್ತಿಗೆ ಸಂಗಮ ಸೇರುವರು. ಗಂಗಾಂಬಿಕೆಯರು ಎಂದಿನಂತೆ ಗೆಲುವಾಗಿದ್ದಾರೆ," ಎಂದು ಹೇಳಿದ ಮೇಲೆ ಬಾಲಕ ಸಂಗಮನ ಕಾಟ ತಡೆಯಲಾರದೆ ಅವರು ಪ್ರಸಾದ ತೆಗೆದುಕೊಂಡಿದ್ದರು.

ಬಸವಣ್ಣನವರನ್ನು ಬೀಳ್ಕೊಟ್ಟು ಮನೆಗೆ ಹಿಂದಿರುಗಿದ ಮಧುವರಸನು ಹಠಾತ್ತಾಗಿ ಅಸ್ವಸ್ಥನಾದನು. ನಾಲ್ಕುದಿನಗಳಾದರೂ ಜ್ವರ ನಿಲ್ಲದಿರುವುದನ್ನು ಕಂಡು ಅವರ ಆಪ್ತ ಕಾರ್ಯದರ್ಶಿ ಆ ದಿನ ಪ್ರಾತಃಕಾಲ ಕೂರ್ಮದುರ್ಗಕ್ಕೆ ಲಾವಣ್ಯವತಿಯ ಬಳಿಗೆ ಅವಸರದ ದೂತನನ್ನು ಕಳುಹಿಸಿದ್ದನು. ಮಧುವರಸನನ್ನು ನೋಡಲು ಬಂದಿದ್ದ ಹರಳಯ್ಯ ಈ ಸುದ್ದಿ ಕೇಳಿದಾಗ ಮಗನು ಹಿಂದಿರುಗಬಹುದೆಂಬ ಆಸೆಯಿಂದ ಉತ್ಸಾಹಗೊಂಡಿದ್ದನು.

ಬಸವಣ್ಣನವರ ನಿರ್ವಾಸನದಿಂದ ಆದ ಆಘಾತ ವ್ಯಾಧಿಗ್ರಸ್ಥರಾದ ಸಕಲೇಶ ಮಾದರಸರನ್ನು ತೀರ ದುರ್ಬಲರನ್ನಾಗಿ ಮಾಡಿತ್ತು. ಅವರ ಶುಶ್ರೂಷೆಗಾಗಿ ಯಾವಾಗಲೂ ಶರಣನೊಬ್ಬನು ಅವರ ಹತ್ತಿರ ಇರುತ್ತಿದ್ದನು. ಇನ್ನುಳಿದ ಶರಣರು ಶ್ರದ್ಧಾಭಕ್ತಿ ವಿಶ್ವಾಸಗಳಲ್ಲಿ ಒಬ್ಬರಿಗೊಬ್ಬರು ಕಡಿಮೆಯಲ್ಲದಿದ್ದರೂ, ಮಾರ್ಗದರ್ಶನ ಮಾಡಬಲ್ಲ ನಾಯಕರಿಲ್ಲದೆ ಏನನ್ನು ಮಾಡಲೂ ಅಶಕ್ತರಾಗಿದ್ದರು. ಹೀಗಾಗಿ, ಮಹಮನೆ ಅನುಭವಮಂಟಪಗಳ ವ್ಯವಸ್ಥೆ ಮತ್ತು ದಿನಚರಿ ಕಾರ್ಯಗಳು ಮುಖ್ಯವಾಗಿ ಚೆನ್ನಬಸವಣ್ಣನವರ ಮತ್ತು ಮಾಚಿದೇವರ ಮೇಲೆ ಬಿದ್ದಿದ್ದವು. ಅನುಭವಮಂಟಪದ ವಿಚಾರಗೋಷ್ಠಿ ಪ್ರವಚನಗಳು ಎಂದಿನಂತೆ ಪ್ರತಿದಿನ

ನಡೆಯುತ್ತಿದ್ದವು. ಅದಕ್ಕಾಗಿ ಕಾರ್ಯಕ್ರಮವನ್ನು ನಿರ್ಧರಿಸುವುದು, ಭಾಷಣಗಳನ್ನು ರಚಿಸುವುದು, ವರದಿಗಳನ್ನು ಪರಿಷ್ಕರಿಸುವುದು, ಇವೇ ಮೊದಲಾದ ಕಾರ್ಯಗಳಲ್ಲಿ ಚೆನ್ನಬಸವಣ್ಣನವರ ಅರ್ಧದಿನ ಕಳೆಯುತ್ತಿತ್ತು. ಸರಸ್ವತೀ ಭಂಡಾರದ ಪುನರ್ವ್ಯವಸ್ಥೆಗೆ ಉಳಿದರ್ಧ ದಿನ ಮೀಸಲಾಗಿತ್ತು. ಆರು ವರ್ಷಗಳ ಪರಿಶ್ರಮದಿಂದ ಅಲ್ಲಿ ಸಂಗ್ರಹವಾಗಿದ್ದ ವೇದಶಾಸ್ತ್ರ ಪುರಾಣ ಆಗಮಗಳ ಹೊತ್ತಗೆಗಳು, ಪುರಾತನರ ವಚನ ಸಂಗ್ರಹಗಳು, ನೂತನ ವಚನಕಾರರ ರಚನೆಗಳು, ಅನುಭವ ಮಂಟಪದ ಚರ್ಚಾಗೋಷ್ಠಿಯ ಅಂದಂದಿನ ವರದಿಗಳು, ನಾಲ್ಕಾರು ಕೋಣೆಗಳಲ್ಲಿ ಅಸ್ತವ್ಯಸ್ತವಾಗಿ ಬಿದ್ದಿದ್ದವು. ಅವುಗಳ ವರ್ಗೀಕರಣದ ಕಾರ್ಯ ಓಲೆ ಶಾಂತಯ್ಯನವರಿಂದಾಗಲಿ, ಅವರ ನಾಲ್ಕುಮಂದಿ ಸಹಾಯಕರಿಂದಾಗಲಿ ನಡೆಯುವುದಿಲ್ಲವೆಂದು ತಿಳಿದು ಚೆನ್ನಬಸವಣ್ಣನವರು ಎರಡು ತಿಂಗಳ ಮೊದಲು ಆ ಕಾರ್ಯವನ್ನು ತಾವೇ ಪ್ರಾರಂಭಿಸಿದ್ದರು. ಈಗ ಅದನ್ನು ಅರ್ಧದಲ್ಲಿ ನಿಲ್ಲಿಸುವುದು ಅವರಿಗಿಷ್ಟವಿರಲಿಲ್ಲ.

ಬಸವಣ್ಣನವರ ನಿರ್ವಾಸನದ ಸುದ್ದಿ ಕೇಳಿ ಕಳವಳಗೊಂಡ ಸಮೀಪದ ಗ್ರಾಮಗಳ ಶರಣರು ಪ್ರತಿದಿನ ತಂಡ ತಂಡವಾಗಿ ಮಹಮನೆಗೆ ಬಂದುಹೋಗುತ್ತಿದ್ದರು. ಅವರ ವಸತಿ ದಾಸೋಹಗಳನ್ನು ನೋಡಿಕೊಳ್ಳಲು ನಾಲ್ಕು ಮಂದಿ ಕಾರ್ಯಕರ್ತರಿದ್ದರೂ ತಂಡದ ನಾಯಕರೊಡನೆ ಮಾತುಕತೆ, ಕಾರ್ಯಕ್ರಮಗಳನ್ನು ಕುರಿತ ನಿರ್ದೇಶನ, ಈ ಕೆಲಸಗಳು ಮಾಚಿದೇವರ ಮೇಲೆ ಬಿದ್ದಿದ್ದವು. ವಾರ್ಧಿಕ್ಯದಲ್ಲಿಯೂ ತರುಣರಂತೆ ಉತ್ಸಾಹಶೀಲರೂ, ವ್ಯವಹಾರ ಕುಶಲರೂ ಆಗಿದ್ದ ಮಾಚಿದೇವರು ಈ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುತ್ತಿದ್ದರು.

ಎರಡು ಮೂರು ಗಾವುದಗಳ ದೂರ ಪ್ರದೇಶಗಳಿಂದ ಶರಣರು ಬರುವುದು ಆ ದಿನ ಆರಂಭವಾಗಿತ್ತು. ಪರಭಣಿ, ಸೊಲ್ಲಾಪುರ, ಭೂಸನೂರು, ಜೇವರಗಿ, ಚಿತ್ತಾಪುರ, ಈ ಕಡೆಗಳಿಂದ ಶರಣರು ಬಂದಿದ್ದರು. ಮಹಮನೆಯ ಅಂಗಳದಲ್ಲಿ ಅವರೊಡನೆ ಮಾತಾಡುತ್ತಿದ್ದ ಮಾಚಿದೇವರು, ತುಸು ದೂರದಲ್ಲಿ ಅಂದೇ ಬಂದ ಶರಣರಿಬ್ಬರು ಪ್ರತ್ಯೇಕವಾಗಿ ನಿಂತಿರುವುದನ್ನು ಕಂಡರು. ಅವರಲ್ಲಿ ಹಿರಿಯ ವ್ಯಕ್ತಿಯ ನೀಳವಾದ ಕಪನಿ, ಗಡ್ಡ ಮೀಸೆ ಜಟೆಗಳು, ಕೈಗಳಲ್ಲಿ ಹಿಡಿದಿದ್ದ ಕಮಂಡಲು ಯೋಗ ದಂಡಗಳು, ಪುರಾಣಗಳಲ್ಲಿ ವರ್ಣಿಸಲ್ಪಟ್ಟ ವಶಿಷ್ಠ ವಿಶ್ವಾಮಿತ್ರರನ್ನು ನೆನಪಿಗೆ ತರುತ್ತಿದ್ದವು. ಆ ಜಂಗಮನ ಹಿಂದೆ ಚೀವರಗಳ ಗಂಟು ಸಿಕ್ಕಿಸಿದ ದಂಡವನ್ನು ಹೆಗಲೇರಿಸಿ ನಿಂತಿದ್ದ ತರುಣನು ಆ ಜಂಗಮನ ಶಿಷ್ಯನೆಂದು ಸ್ಪಷ್ಟವಾಗಿ ಕಾಣುತ್ತಿತ್ತು.

ಅವರ ಉಡಿಗೆ ತೊಡಿಗೆಗಳು ಉಳಿದ ಜಂಗಮರ ಉಡಿಗೆಗಳಿಗಿಂತ ಸ್ವಲ್ಪ

ವಿಶಿಷ್ಟವಾಗಿ ಕಂಡರೂ ಅಸಹಜವಾಗಿರಲಿಲ್ಲ. ಪ್ರದರ್ಶನಕ್ಕಾಗಿಯೋ ವೈಯಕ್ತಿಕ ಅಭಿರುಚಿಯಿಂದಲೋ ವಿಚಿತ್ರ ಉಡಿಗೆ ತೊಡಿಗೆಗಳನ್ನು ಧರಿಸುತ್ತಿದ್ದ ಮಠಪತಿಗಳು ಆಗಲೂ ಇದ್ದರು.

ಮಾಚಿದೇವರು ತಾವೇ ಅವರಿದ್ದಲ್ಲಿಗೆ ಹೋಗಿ ವಂದಿಸಿ, "ಅಯ್ಯನವರು ಎಲ್ಲಿಂದ ಬಂದದ್ದು ?" ಎಂದರು.

ಹಿರಿಯ ಜಂಗಮನು ಪ್ರತಿವಂದನೆ ಮಾಡಿದನು, ಮಾತಾಡಲಿಲ್ಲ. ಮಾಚಿದೇವರ ಪ್ರಶಾಂತ ಗಂಭೀರ ವ್ಯಕ್ತಿತ್ವದಿಂದ ಪ್ರಭಾವಿತನಾದಂತೆ ಕಂಡ ತರುಣ ಜಂಗಮನು ಕೈಯೆತ್ತಿ ನಮಸ್ಕಾರ ಮಾಡಿ ಬೆದರಿದ ನಮ್ರಕಂಠದಿಂದ, "ಇವರು ಬ್ರಹ್ಮೇಂದ್ರ ಶಿವಯೋಗಿಗಳು. ನಾನು ಅವರ ಅಂತೇವಾಸಿ ಹರೀಶರುದ್ರ. ಸೂರ್ಯಾಸ್ತದಿಂದ ಮರುದಿನ ಮಧ್ಯಾಹ್ನದವರೆಗೆ ಮೌನವಾಗಿರುವುದು ನಮ್ಮ ಗುರುಗಳ ನೇಮ. ಅವರ ಪರವಾಗಿ ನಾನು ಉತ್ತರ ಕೊಡುತ್ತಿದ್ದೇನೆ." ಎಂದು ಬಿನ್ನವಿಸಿಕೊಂಡನು.

ಮಾಚಿದೇವರು ಕುತೂಹಲದಿಂದ ಹರೀಶನ ಮುಖ ನೋಡಿದರು. "ನನ್ನ ಪ್ರಶ್ನೆಗೆ ನೀನು ಉತ್ತರ ಕೊಟ್ಟಿಲ್ಲ" ಎಂದು ಗಜರಿದಂತಿತ್ತು ಆ ದೃಷ್ಟಿ.

ಹರೀಶ ಪುನಃ ಹೇಳಿದನು : "ನಾವು ಶ್ರೀಶೈಲ ಯಾತ್ರೆಯಿಂದ ಹಿಂದಿರುಗುತ್ತಿದ್ದೆವು, ಅಯ್ಯನವರೆ. ದಾರಿಯಲ್ಲಿ ಬಸವೇಶ ದಂಡನಾಥರ ನಿರ್ವಾಸನದ ಸುದ್ದಿ ಕೇಳಿ ಕಲ್ಯಾಣಕ್ಕೆ ಬಂದೆವು."

"ನಿಮಗೆ ಆ ಸುದ್ದಿ ತಿಳಿದದ್ದು ಯಾವಾಗ ?"

"ಎರಡು ದಿನಗಳ ಹಿಂದೆ, ನಾವು ಸುರಪುರದಲ್ಲಿದ್ದಾಗ."

"ಎರಡು ದಿನಗಳಲ್ಲಿ ಸುರಪುರದಿಂದ ಕಲ್ಯಾಣಕ್ಕೆ! ಅಶ್ವಾರೋಹಿ ಅವಸರದ ರಾಜಭಟರಿಗೂ ಅದು ಸಾಧ್ಯವಲ್ಲ. ಶ್ರೀಶೈಲ ಮಲ್ಲಿಕಾರ್ಜುನನು ನಿಮಗಾಗಿ ವಿಮಾನಗಳನ್ನು ಕಳುಹಿಸಿರಬೇಕು !"

ಮಾಚಿದೇವರ ನುಡಿಗಳ ಹಿಂದಿದ್ದ ತೀವ್ರ ವಿಡಂಬನೆಯನ್ನು ಕಂಡು ಬ್ರಹ್ಮಶಿವನು ಬೆದರಿದನು. ಈ ಚಾಣಾಕ್ಷ ವೃದ್ಧ ಜಂಗಮನೆದುರು ತನ್ನ ಚತುರತೆ ವಿಫಲವಾಯಿತೆಂದು ಮರುಗಿದನು.

ಬೊಮ್ಮರಸನ ಮುಖ ಬೆವರಿತು. ಕೈಕಾಲುಗಳು ಕಂಪಿಸಿದವು. "ಈ ನಿಷ್ಠುರ ಜಂಗಮನು ನಮ್ಮನ್ನು ರಾಜಭಟರಿಗೊಪ್ಪಿಸಿದರೆ! ಕರುಣೆಯಿಂದ ಹಾಗೆ ಮಾಡದಿದ್ದರೂ ಎಲ್ಲರೆದುರಿಗೆ ಗಡ್ಡ ಮೀಸೆ ಜಟೆಗಳನ್ನು ಕೀಳಿಸಿ, ಅಪಮಾನ ಮಾಡಿ ಕಳುಹಿಸುವುದು ಖಂಡಿತ. ಮತಾಂತರ ಹೊಂದಿದ ಈ ಭ್ರಷ್ಟನ ಮಾತು ಕೇಳಿ ನಾನು ಕೆಟ್ಟೆ," ಎಂದು ಭಾವಿಸಿ ಬ್ರಹ್ಮಶಿವನನ್ನು ನೂರು ಸಾರಿ ಶಪಿಸಿದನು.

ಪ್ರತಿಕ್ಷಣದಲ್ಲಿ ಭೂಮಿ ಇಬ್ಭಾಗವಾಗಿ ತಮ್ಮನ್ನು ನುಂಗಿಬಿಡುವುದೆಂದು ಅವರು ಭಾವಿಸಿದರು. ಕಾಲ ಚಲಿಸದೆ ನಿಂತಿತು ಅವರಿಗೆ.

"ನಿಮ್ಮ ಗುರುಗಳ ಸ್ಥಳ ಯಾವುದು ?" –ಮಾಚಿದೇವರು ಪುನಃ ಕೇಳಿದರು.

"ತಾಳಿಕೋಟೆಯ ಹತ್ತಿರ ಸತ್ಯಸಾಗರ. ಅಲ್ಲಿ ನಮ್ಮ ಗುರುಗಳ ಮಠವಿದೆ." –ಬ್ರಹ್ಮಶಿವನು ಚೇತರಿಸಿಕೊಂಡು ಉತ್ತರ ಕೊಟ್ಟನು.

"ನಿಮ್ಮ ಗುರುಗಳಿಗೆ ತಾಳಿಕೋಟೆಯ ಏರುಪರಸರ ಪರಿಚಯವಿದೆಯ?"

"ಅವರು ಸತ್ಯಸಾಗರಕ್ಕೆ ಬಂದಾಗಲೆಲ್ಲ ನಮ್ಮ ಮಠದಲ್ಲೇ ಬಿಡಾರ ಮಾಡುವುದು."

"ನೀವು ಕಲ್ಯಾಣಕ್ಕೆ ಬಂದ ಉದ್ದೇಶ?"

"ಶರಣರೊಡನಿದ್ದು ಎಲ್ಲ ಕಾರ್ಯಗಳಲ್ಲಿ ಅವರಿಗೆ ಸಹಾಯ ಮಾಡುವುದು."

ಮಾಚಿದೇವರು ಕೆಲವು ಕ್ಷಣಗಳು ಯೋಚಿಸಿ, "ನೀವು ಹೆಚ್ಚು ದಿನಗಳು ಮಹಮನೆಯಲ್ಲಿರುವುದಾದರೆ ಏನಾದರೊಂದು ಕಾಯಕ ಮಾಡಬೇಕಾಗುವುದು," ಎಂದರು.

ಕಾಯಕದ ವಿಚಾರ ಏನೂ ಅರಿಯದವನಂತೆ ಬ್ರಹ್ಮಶಿವನು ಮಾಚಿದೇವರ ಮುಖ ನೋಡಿದನು.

ಮಾಚಿದೇವರು ಹೇಳಿದರು : "ಗುರುಲಿಂಗ ಜಂಗಮವೆಲ್ಲ ಕಾಯಕಕ್ಕೆ ಒಳಗು ಎಂಬ ಮಹಮನೆಯ ನಿಯಮ ನಿಮಗೆ ತಿಳಿಯದೆ, ಹರೀಶರುದ್ರ ? ನಿಮ್ಮ ಗುರುಗಳೂ ಏನಾದರೊಂದು ಕಾಯಕ ಹಿಡಿಯಬೇಕಾಗುವುದು."

ಬ್ರಹ್ಮಶಿವ ಅರ್ಥಾತ್ ಹರೀಶರುದ್ರನು ಅಪ್ರತಿಭನಂತೆ ತನ್ನ ಗುರುಗಳ ಮುಖ ನೋಡಿದನು.

ಇಂಗಿತವರಿತು ಮಾಚಿದೇವರು, "ನಿಮಗೆ ಈ ಮಾತು ಹೇಳುತ್ತಿರುವ ನಾನು ಕೂಡಾ ಈ ನಿಬಂಧನೆಗೆ ಒಳಗು, ಬ್ರಹ್ಮೇಂದ್ರ ಶಿವಯೋಗಿಗಳೆ. ಪ್ರತಿನಿತ್ಯ ಮಹಮನೆಗೆ ಬರುವ ಪ್ರವಾಸಿ ಜಂಗಮರ ಬಟ್ಟೆಗಳನ್ನು ಒಗೆದು ಸ್ವಚ್ಛ ಮಾಡುವುದು ನನ್ನ ಕಾಯಕ," ಎಂದರು.

ಬ್ರಹ್ಮೇಂದ್ರ ಶಿವಯೋಗಿ ಅರ್ಥಾತ್ ಬೊಮ್ಮರಸನು ತಲೆಯಾಡಿಸಿ ಸಮ್ಮತಿ ಸೂಚಿಸಿದನು.

ಬ್ರಹ್ಮಶಿವನು ಕೈಜೋಡಿಸಿ, "ಗುರುದೇವರು ಒಪ್ಪಿದ್ದಾರೆ. ಅವರ ಕಾಯಕವೇನೆಂಬುದನ್ನು ಅಯ್ಯನವರೇ ಹೇಳಿಬಿಟ್ಟರೆ......." ಎಂದು ವಿನಯವಾಡಿದನು.

"ಪ್ರತಿ ಶನಿವಾರ ಅನುಭವಮಂಟಪದಲ್ಲಿ ಅರ್ಧ ಪ್ರಹರಕಾಲ ಪ್ರವಚನ.

ಶಿವಯೋಗಿಗಳಿಗೆ ಸಲ್ಲುವ ಕಾಯಕ ಅದು. ಇನ್ನು ಆರು ದಿನವಿದೆ ವಿಷಯ ಸಂಗ್ರಹಕ್ಕೆ."

ಬೊಮ್ಮರಸನು ಪುನಃ ತಲೆಯಾಡಿಸಿದನು.

ಮಾಚಿದೇವರು ಬ್ರಹ್ಮಶಿವನ ಕಡೆ ತಿರುಗಿ, "ಇನ್ನು ನಿಮ್ಮ ಕಾಯಕ ಹರೀಶ ರುದ್ರ, ಪ್ರತಿದಿನ ನಗರಕ್ಕೆ ಹೋಗಿ ಮಹಮನೆಗೆ ಬೇಕಾಗುವ ಕಾಯಿ–ಸೊಪ್ಪುಗಳನ್ನು ತರುವ ಕಾಯಕ ನಿಮ್ಮಿಂದಾಗುವುದೇ?" ಎಂದರು.

"ನನಗೆ ನಗರದ ಪರಿಚಯವಿಲ್ಲ. ಮಹಮನೆಯ ಶೌಚಕೂಪಗಳನ್ನು ಸ್ವಚ್ಛಗೊಳಿಸಬೇಕಾಗುವುದು."

ವೃದ್ಧನ ಮುಖದಲ್ಲಿ ಉಪಹಾಸದ ಗೆರೆ ಮೂಡಿದುದನ್ನು ಕಂಡು ಬ್ರಹ್ಮಶಿವನು, "ಅಯ್ಯನವರು ಬಟ್ಟೆ ಒಗೆಯುವ ಕಾಯಕ ಮಾಡುವಾಗ ನಾನು ಶೌಚ ಕೂಪಗಳನ್ನೇಕೆ ಸ್ವಚ್ಛಗೊಳಿಸಬಾರದು?" ಎಂದನು.

ಮಾಚಿದೇವರು ನಸುನಕ್ಕು, "ತಪ್ಪು ಮಾಡಿದವರಿಗೆ ಆ ಕಾಯಕ. ಸದ್ಯದಲ್ಲಿ ನೀವು ಸ್ನಾನಗೃಹವನ್ನು ಸ್ವಚ್ಛಗೊಳಿಸಿ ನೀರು ತುಂಬುವವನಿಗೆ ಸಹಾಯ ಮಾಡಿರಿ," ಎಂದರು.

ಬ್ರಹ್ಮಶಿವ ಬೊಮ್ಮರಸರ ಮಹಮನೆಯ ವಾಸ ಈ ರೀತಿ ನಾಟಕೀಯವಾಗಿ ಪ್ರಾರಂಭವಾಯಿತು. ಸ್ಪಷ್ಟವಾದಿಗಳೂ ನಿರ್ಭೀತರೂ ಆಗಿ ಸ್ಥಿತಪ್ರಜ್ಞರೆಂದು ಕರೆಸಿಕೊಳ್ಳುತ್ತಿದ್ದ ಮಾಚಿದೇವರು ತಿಳಿದೋ ತಿಳಿಯದೆಯೋ ಈ ವಂಚನೆಗೆ ಅನುಮೋದನೆಯಿತ್ತರು. ಅವರು ಹೀಗೇಕೆ ಮಾಡಿದರೆಂಬುದು ಅವರ ಇಷ್ಟ ದೈವ 'ಕಲಿದೇವರ ದೇವ'ರಿಗೂ ತಿಳಿದಿತ್ತೋ ಇಲ್ಲವೋ ನಾವರಿಯೆವು.

* * *

ಬೊಮ್ಮರಸನು ಜಂಗಮನಲ್ಲದಿದ್ದರೂ ಜನ್ಮತಃ ಶಿವಭಕ್ತನಾಗಿದ್ದನು. ಎರಡು ಸಾರಿ ಮತಾಂತರವಾಗಿದ್ದ ಬ್ರಹ್ಮಶಿವನಿಗೆ ಶರಣರ ಪೂಜಾನುಷ್ಠಾನಗಳು ತಿಳಿದಿದ್ದವು. ಮೌನವ್ರತದ ಬಗೆಗೆ ಬ್ರಹ್ಮಶಿವನ ಪ್ರಚಾರ ಬೊಮ್ಮರಸನಿಗೆ ಸಹಾಯಕವಾಯಿತು. ಪ್ರತಿನಿತ್ಯ ಪೂಜಾಪ್ರಸಾದಗಳು ಎಲ್ಲ ಜಂಗಮರೊಟ್ಟಿಗೆ ನಡೆಯುತ್ತಿದ್ದರೂ ಯಾರೂ ಬೊಮ್ಮರಸನನ್ನು ಮಾತಾಡಿಸುತ್ತಿರಲಿಲ್ಲ.

ಅನುಭವಮಂಟಪದ ಸರಸ್ವತೀ ಭಂಡಾರ ಮತ್ತು ತನ್ನ ಕುಶಾಗ್ರ ಬುದ್ಧಿ, ಇವೆರಡರ ಸಹಾಯದಿಂದ ಬ್ರಹ್ಮಶಿವನು ಆರು ದಿನಗಳು ಮುಗಿಯುವುದರೊಳಗೆ ಎರಡು ಪ್ರವಚನಗಳನ್ನು ಸಿದ್ಧಗೊಳಿಸಿದನು. ಅವುಗಳನ್ನು ಚೆನ್ನಾಗಿ ಅಭ್ಯಾಸಮಾಡಿ ಬೊಮ್ಮರಸನು ಅನುಭವಮಂಟಪದಲ್ಲಿ ತನಗೆ ಗೊತ್ತಾಗಿದ್ದ ಕಾಯಕವನ್ನು ದಕ್ಷತೆಯಿಂದ

ನಿರ್ವಹಿಸಿದನು. ಚೆನ್ನಬಸವಣ್ಣನವರೂ ಪ್ರವಚನಗಳನ್ನು ಮೆಚ್ಚಿದರು. ಬ್ರಹ್ಮೇಂದ್ರ ಶಿವಯೋಗಿಗಳು ಉತ್ತಮ ಪ್ರವಚನಕಾರರೆಂಬ ಕೀರ್ತಿಯ ಅಂಕುರಾರ್ಪಣವಾಯಿತು. ಈ ರೀತಿ ಎರಡು ವಾರಗಳು ಕಳೆದವು. ಆಮೇಲೆ ಒಂದು ದಿನ ಮಹಮನೆಯ ಸಡಗರವನ್ನು ಕಂಡು ಬ್ರಹ್ಮಶಿವನು, "ಈ ದಿನ ಏನು ವಿಶೇಷ?" ಎಂದು ಸ್ನಾನಗೃಹದ ತನ್ನ ಸಂಗಡಿಗನನ್ನು ಕೇಳಿದನು.

"ನಿಮಗೆ ತಿಳೀದ ಹರೀಶಣ್ಣನೋರ ? ಸರ್ವಾಧಿಕಾರಿ ಬಿಜ್ಜಳರಾಯರು ಇವೊತ್ತು ಮಹಮನೆಗೆ ಬರ್ತಾರ," ಎಂದು ಸಂಗಡಿಗನು ಹೇಳಿದನು.

ಬ್ರಹ್ಮಶಿವನು ಕೂಡಲೆ ಈ ವಿಚಾರವನ್ನು ಬೊಮ್ಮರಸನಿಗೆ ತಿಳಿಸಿ, "ಬಿಜ್ಜಳರಾಯರು ಬಂದು ಹೋಗುವವರೆಗೆ ನೀವು ಧ್ಯಾನದ ನೆವದಿಂದ ಈ ಕೋಣೆಯಲ್ಲಿಯೇ ಇದ್ದರೆ ಒಳಿತು," ಎಂದು ಎಚ್ಚರಕೊಟ್ಟನು.

ಬ್ರಹ್ಮಶಿವನ ಭೀತಿ ನಿರಾಧಾರವಾಗಿರಲಿಲ್ಲ. ಒಂದು ಸಾರಿ ನೋಡಿದವರ ಗುರುತು ಪರಿಚಯಗಳನ್ನು ಬಿಜ್ಜಳನು ಯಾವಾಗಲೂ ನೆನಪಿನಲ್ಲಿಡುತ್ತಿದ್ದನು. ಗಡ್ಡ ಮೀಸೆ ಜಟೆಗಳ ಮರೆಯಲ್ಲಿಯೂ ಅವನು ಬೊಮ್ಮರಸನ ಗುರುತು ಹಿಡಿಯಬಹುದಾಗಿತ್ತು.

ಕಲಚೂರ್ಯ ಅರಮನೆಯ ಹಿರಿಯ ಹೆಗ್ಗಡೆ ಹಿಂದಿನ ದಿನ ಮಹಮನೆಗೆ ಬಂದು, ಮರುದಿನ ಪ್ರಾತಃಕಾಲ ಸರ್ವಾಧಿಕಾರಿ ಬಿಜ್ಜಳರಾಯರು ಬರುವ ವಿಚಾರವನ್ನು ಚೆನ್ನಬಸವಣ್ಣನವರಿಗೆ ತಿಳಿಸಿ, ಅದಕ್ಕಾಗಿ ಯಾವ ವಿಶೇಷ ರೀತಿಯ ವೈಭವ ಸಿದ್ಧತೆಗಳೂ ನಡೆಯಕೂಡದೆಂದು ಪ್ರಭುಗಳು ಹೇಳಿರುವುದಾಗಿ ಎಚ್ಚರಿಸಿದ್ದನು. ಆದರೂ ಚಾಲುಕ್ಯ ಸರ್ವಾಧಿಕಾರಿ ಮಾಹಾಮಂಡಲೇಶ್ವರನ ಭೇಟಿಯನ್ನು ಯಾವ ಸಡಗರವೂ ಇಲ್ಲದೆ ನಿರೀಕ್ಷಿಸುವುದು ಸರಳಜೀವನದ ಆದರ್ಶವನ್ನು ಆಚರಣೆಗೆ ತಂದುಕೊಂಡಿದ್ದ ಮಹಮನೆಯ ಶರಣರಿಗೂ ಸಾಧ್ಯವಾಗಲಿಲ್ಲ. ಮಹಾದ್ವಾರ ಅಂಗಣಗಳನ್ನು ಸಾರಣೆ ರಂಗವಲ್ಲಿ ತಳಿರು ತೋರಣಗಳಿಂದ ಅಂದಗೊಳಿಸುವುದು ಅಗತ್ಯವಾಯಿತು. ಸಮಿತಿ ಚರ್ಚಾಗೋಷ್ಠಿಗಳೂ ನಡೆಯುತ್ತಿದ್ದ ಸಣ್ಣ ಸಭಾಂಗಣ ಸತ್ಕಾರಕ್ಕಾಗಿ ಸಿದ್ಧವಾಯಿತು. ನೀಲಲೋಚನೆ ಅಣ್ಣನ ಉಪಾಹಾರ ಪಾನೀಯಗಳನ್ನು ತಾನೇ ಸಿದ್ಧಗೊಳಿಸಿದಳು. ಸಂಗಮನಾಥನಿಗೆ ಸ್ನಾನಮಾಡಿಸಿ, ಅಂದದ ಹೊಸ ಉಡಿಗೆ ತೊಡಿಗೆಗಳಿಂದ ಸಿಂಗರಿಸುವ ಭಾರ ನಾಗಲಾಂಬೆಯ ಮೇಲೆ ಬಿದ್ದಿತು. ಬಿಜ್ಜಳನು ಬಂಧುವಿನಂತೆ ಮಹಮನೆಗೆ ಬರುತ್ತಿದ್ದುದರಿಂದ ಮನೆಯವರ ಹೊರತಾಗಿ ಮತ್ತಾರಿಗೂ ಭೇಟಿಯಲ್ಲಿ ಎದುರಿಗಿರುವ ಅವಕಾಶವಿರಲಿಲ್ಲ. ಭೇಟಿಯ ಉದ್ದೇಶವೇನು? ಎಂದು ಯೋಚಿಸುತ್ತಿದ್ದ ಚೆನ್ನಬಸವಣ್ಣನವರಿಗೆ ನಾಗಲಾಂಬೆ,

"ಶಂಕಿತರಾದವರು ಹಗ್ಗವನ್ನು ಕಂಡು ಹಾವೆಂದು ಹೆದರುತ್ತಾರೆ. ತಂಗಿಯ ದುಗುಡಕ್ಕೆ ಕಾರಣನಾದೆನೆಂಬ ಪಶ್ಚಾತ್ತಾಪ ಭೇಟಿಗೆ ಕಾರಣವಾಗಿರಬಹುದು. ನಾಳೆ ಬಂದಾಗ ಎಲ್ಲವೂ ಸ್ಪಷ್ಟವಾಗುವುದು. ಈಗಿನಿಂದ ಆ ವಿಚಾರ ನಾವೇಕೆ ಯೋಚಿಸಬೇಕು," ಎಂದು ಸಮಾಧಾನ ಹೇಳಿದ್ದಳು.

ಪೂರ್ವಾಹ್ನ ಮೊದಲ ಪ್ರಹರ ಮುಗಿಯುತ್ತಿದ್ದಂತೆ ಮುಚ್ಚಿದ ಎರಡು ಮೇನೆಗಳು ಮಹಮನೆಯ ಮಹಾದ್ವಾರವನ್ನು ದಾಟಿ ಅಂಗಳಕ್ಕೆ ಬಂದುನಿಂತವು. ಸಂಗಡಿದ್ದ ಎಂಟು ಮಂದಿ ಅಶ್ವಾರೋಹಿ ರಕ್ಷಕದಳ ಮಹಾದ್ವಾರದಲ್ಲಿ ಕಾವಲು ನಿಂತಿತು.

ಬಿಜ್ಜಳರಾಯನೂ ವೃದ್ಧಮಂತ್ರಿ ಮಂಚಣನೂ ಮೇನೆಗಳಿಂದಿಳಿದರು. ಚೆನ್ನಬಸವಣ್ಣನವರು ಅವರನ್ನು ಸ್ವಾಗತಿಸಿ ಸಿದ್ಧವಾಗಿದ್ದ ಸಭಾಂಗಣಕ್ಕೆ ಬಿಜಯ ಮಾಡಿಸಿ ಭದ್ರಾಸನಗಳಲ್ಲಿ ಕುಳ್ಳಿರಿಸಿದರು.

"ಮಂಚಣಮಂತ್ರಿಗಳು ನಮ್ಮ ನಿಮ್ಮ ಎರಡು ಮನೆಗಳಿಗೂ ಬಹಳ ಬೇಕಾದವರು, ಚೆನ್ನಬಸವಣ್ಣವವರೆ. ಅವರನ್ನು ನಮ್ಮ ಬಂಧುವೆಂದೇ ಸಂಗಡ ಕರೆತಂದಿದ್ದೇನೆ," ಎಂದು ಬಿಜ್ಜಳನು ಹೇಳಿದಾಗ, ಚೆನ್ನಬಸವಣ್ಣನವರು ಕೈಮುಗಿದು, "ಮಹಮನೆಯು ನಿಮ್ಮ ಮನೆ. ನಿಮ್ಮ ಇಷ್ಟಮಿತ್ರರಿಗೆ ಇಲ್ಲಿ ಯಾವಾಗಲೂ ಸುಸ್ವಾಗತವಿದೆ. ಮೇಲಾಗಿ ಮಂಚಣನವರು ನಮಗೂ ಹಿತಚಿಂತಕರು," ಎಂದು ಬಿನ್ನವಿಸಿಕೊಂಡರು.

ಅರ್ಘ್ಯಪಾದ್ಯಗಳ ಪ್ರಾಚೀನ ಪದ್ಧತಿ ಆಗಿನ ಶ್ರೀಮಂತ ಸಾಮಂತ ಸಮಾಜದಲ್ಲಿ ಇನ್ನೂ ಅಭ್ಯಾಸದಲ್ಲಿತ್ತು. ಆದರೆ ಬಸವಣ್ಣನವರು ಅದೊಂದು ವ್ಯರ್ಥವಿಡಂಬನೆಯೆಂದು ತಿಳಿದು ಜಂಗಮರ ಹೊರತಾಗಿ ಮತ್ತಾವ ಅತಿಥಿಯ,– ಅವನು ಎಷ್ಟೇ ಸನ್ಮಾನ್ಯನಾಗಿರಲಿ–ಪಾದಗಳನ್ನು ತೊಳೆಯಬಾರದೆಂಬ ಸಂಪ್ರದಾಯವನ್ನು ಶರಣರಲ್ಲಿ ಆಚರಣೆಗೆ ತಂದರು.

ಅದರಂತೆ ಬಿಳಿಯ ಸಮವಸ್ತ್ರಗಳನ್ನು ಧರಿಸಿದ್ದ ಇಬ್ಬರು ಬಾಲಕರು ಗಂಧ ಫಲಪುಷ್ಪ ತಾಂಬೂಲಗಳಿಂದ ತುಂಬಿದ ಹರಿವಾಣಗಳನ್ನು ತಂದು ಅತಿಥಿಗಳ ಮುಂದಿಟ್ಟು, ಗಂಧೋದಕವನ್ನು ಅವರ ಮೇಲೆ ಸಿಂಪಡಿಸಿ ಹೋಗುತ್ತಿದ್ದಂತೆ ನೀಲಲೋಚನೆ ನಾಗಲಾಂಬೆಯರು ಸಂಗಮನಾಥನನ್ನು ಕರೆದುಕೊಂಡು ಅಲ್ಲಿಗೆ ಬಂದರು.

ನೀಲಲೋಚನೆ ಬಿಜ್ಜಳನ ಕಾಲುಗಳನ್ನು ಮುಟ್ಟಿ ನಮಸ್ಕಾರಮಾಡಿ, ಸಂಗಮ ನಾಥನನ್ನು ಕಾಲುಗಳ ಮೇಲೆ ಹಾಕಿ, "ತಂದೆಯ ನಿರ್ವಾಸನದಿಂದ ಅರಕ್ಷಿತನಾದ

ಈ ಬಾಲಕನಿಗೆ ನೀವೇ ರಕ್ಷಕರು, ಅಣ್ಣ" ಎಂದು ನುಡಿದಳು.

ಅವಳ ನೊಂದ ನುಡಿ ಬಿಜ್ಜಳನ ಕಿವಿಗಳಲ್ಲಿ ಮಿಡಿದು ಅಂತರಂಗದಲ್ಲಿ ಕೋಪ ಕಳವಳಗಳ ಅಲೆಗಳನ್ನೆಬ್ಬಿಸಿತು.

ತನ್ನ ನ್ಯಾಯ ತೀರ್ಪಿನ ಬಗೆಗೆ ನೀಲಲೋಚನೆಯ ಅಸಮಾಧಾನ ತನ್ನನ್ನು ಕಂಡೊಡನೆ ಸಿಡಿದೇಳುವುದೆಂದು ಬಿಜ್ಜಳನು ಅರಿತಿದ್ದನು. ಆ ಸಂದರ್ಭದಲ್ಲಿ ರಕ್ಷಣೆಗಾಗಿಯೇ ಕಲಚೂರ್ಯ ವಂಶಕ್ಕೆ ದೂರದ ಬಂಧುವೂ ಕುಲವೃದ್ಧನೂ ಆಗಿದ್ದ ಮಂಚಣ ನಾಯಕನನ್ನು ಸಂಗಡ ಕರೆತಂದಿದ್ದನು. ಆದರೂ ನೀಲಲೋಚನೆಯ ಮಾತಿನ ಹಿಂದಿದ್ದ ಕಟು ವಿಮರ್ಶೆಯನ್ನು ಕಂಡು ಬಿಜ್ಜಳನಿಗೆ ಅಸಮಾಧಾನವಾಯಿತು. ಸಂಯತ ಕೋಪದಿಂದ ಹಣೇ ಸುಕ್ಕುಗಟ್ಟಿತು. ತುಟಿಗಳು ಅದುರಿದವು.

ಇಂಗಿತವರಿತು ಮಂಚಣನಾಯಕನು, "ಇದೇನು ಹೀಗೆ ನುಡಿಯುತ್ತಿರುವೆ ನೀಲಾಂಬಿಕೆ ? ಮನೆಗೆ ಬಂದ ಅಣ್ಣನನ್ನು ಸ್ವಾಗತಿಸುವ ಹೊಸ ವಿಧಾನವೋ ಇದು?" ಎಂದು ನಯವಾಗಿ ಎಚ್ಚರಿಸಿದನು.

ನೀಲಲೋಚನೆ ಬೆದರಲಿಲ್ಲ. "ಧರ್ಮಾಧಿಕರಣದ ಆ ಅಧರ್ಮ ವ್ಯವಹಾರದಲ್ಲಿ ಭಾಗವಹಿಸಿದ್ದ ಮಂತ್ರಿಗಳಲ್ಲಿ ನೀವೂ ಒಬ್ಬರಲ್ಲವೆ, ಮಂಚಣನಾಯಕರೆ ? ಅದಕ್ಕೆ ಸರಿಯಾಗಿ ಮಾತಾಡುತ್ತಿದ್ದೀರಿ," ಎಂದಳು.

ಆಗ ನಾಗಲಾಂಬೆ ನಡುವೆ ಬಂದು, "ಇದೇನು ನೀಲಾ? ಈ ರೀತಿ ಸಮಯ ಸಂದರ್ಭಗಳನ್ನು ಮರೆತು ನುಡಿಯುವುದು ಶರಣರಿಗೆ ಸಲ್ಲ. ಪ್ರಭುಗಳ ಆಜ್ಞೆಯ ಧರ್ಮಾಧರ್ಮ ವಿವೇಚನೆಯನ್ನು ಲೋಕಕ್ಕೆ ಬಿಟ್ಟು ನಿರ್ಲಿಪ್ತನಾಗಿ ಬಸವಣ್ಣ ಸಂಗಮಕ್ಕೆ ಹೋದನು. ಅವನ ಅರ್ಧಾಂಗಿನಿಯಾದ ನೀನು ಅದಕ್ಕೆ ಸರಿಯಾಗಿ ನಡೆದುಕೊಳ್ಳಬೇಡವೆ?" ಎಂದು ಗದರಿ ನುಡಿದು,

ಬಿಜ್ಜಳನ ಕಡೆ ತಿರುಗಿ ಕೈಮುಗಿದು, "ನೀಲಲೋಚನೆಯ ಪರವಾಗಿ ನಾನು ಪ್ರಭುಗಳ ಮತ್ತು ಮಂಚಣನಾಯಕರ ಕ್ಷಮೆ ಬೇಡುತ್ತೇನೆ. ಪತಿಯನ್ನಗಲಿ ನೀಲಲೋಚನೆ ತುಂಬ ಕಳವಳಗೊಂಡಿದ್ದಾಳೆ. ಅವಳನ್ನು ಸಮಾಧಾನಗೊಳಿಸುವುದು ನಮಗೂ ಕಷ್ಟವಾಗಿದೆ, ಎಂದು ಬಿನ್ನವಿಸಿಕೊಂಡಳು.

"ಅಣ್ಣ ತಂಗಿಯರಲ್ಲಿ ಉಂಟಾಗುವ ಕ್ಷಣಿಕವಾದ ಮನಃಕ್ಲೇಶದಲ್ಲಿ ಮಧ್ಯೆ ಬರುವ ಇಚ್ಛೆ ನನಗಿಲ್ಲ. ಆದರೂ ಅದಕ್ಕಾಗಿ ಪ್ರಭುಗಳ ಕ್ಷಮೆ ಬೇಡುತ್ತೇನೆ," ಎಂದರು ಚೆನ್ನಬಸವಣ್ಣನವರು.

ಈ ಮಾತುಗಳನ್ನು ನೀರವವಾಗಿ ನಿಂತು ಕೇಳುತ್ತಿದ್ದ ಬಾಲಕ ಸಂಗಮನಾಥನು, "ನೀನು ಹೇಳಿದಂತೆ ನಾನು ಅನಾಥನಲ್ಲ, ನೀಲಕ್ಕ. ಕೂಡಲ ಸಂಗಮದೇವನು

ನಮ್ಮೆಲ್ಲರ ರಕ್ಷಕನು," ಎಂದು ಹೇಳಿ, ಬಿಜ್ಜಳನ ಕಡೆ ತಿರುಗಿ ಮಿದುನಗೆ ಬೀರಿ, "ಅಕ್ಕ ತಿಳಿಯದೆ ಹೇಳಿದರೆ ನೀವೇಕೆ ಕೋಪಿಸಬೇಕು, ಮಾವಯ್ಯ?" ಎಂದನು.

ಬಿಜ್ಜಳರಾಯನ ಮುಖ ಅರಳಿತು. ಸಂಗಮನಾಥನನ್ನು ಬರಸೆಳೆದು ಮುದ್ದಿಟ್ಟು, ತೊಡೆಯ ಮೇಲೆ ಕುಳ್ಳಿರಿಸಿಕೊಂಡು, "ತಂದೆಗೆ ಸರಿಯಾದ ಮಗನು ನೀನು ಸಂಗಮನಾಥ. ಒಂದೇ ಮಾತಲ್ಲಿ ಅಣ್ಣ ತಂಗಿಯರಿಬ್ಬರ ಬಾಯನ್ನೂ ಮುಚ್ಚಿಸಿದೆ," ಎಂದನು.

ಬಳಿಕ ಅವನು ನೀಲಲೋಚನೆಯ ಕಡೆ ತಿರುಗಿ, "ಕಣ್ಣು ಕಿವಿಗಳೆರಡನ್ನೂ ಕಳೆದುಕೊಂಡ ಅಂಧಬಧಿರ ರಾಕ್ಷಸನಂತೆ ಈ ರಾಜಕೀಯ. ಅದರ ವಿನಾಶಕಾರಿ ಪ್ರಭಾವಕ್ಕೆ ಸಿಕ್ಕವರು ಬಂಧು ಬಳಗ, ಇಷ್ಟಮಿತ್ರ, ನೀತಿಧರ್ಮ ಎಲ್ಲವನ್ನೂ, ಎಲ್ಲರನ್ನೂ ಮರೆಯಬೇಕಾಗುತ್ತದೆ. ಚಾಲುಕ್ಯ ಸರ್ವಾಧಿಕಾರಿಯಾಗಿ ಸಂಪ್ರದಾಯ ಮೂಢರಾದ ಪ್ರಜಾವರ್ಗದ ರಂಜನೆಗಾಗಿ ನಾನು ಬಸವಣ್ಣನವರ ನಿರ್ವಾಸನಕ್ಕೆ ಆಜ್ಞೆ ಮಾಡಬೇಕಾಯಿತು. ಅದರಿಂದ ನನಗಾದ ಮನಃಕ್ಲೇಶವನ್ನು ನನ್ನ ಅಂತರ್ಯಾಮಿಯೊಬ್ಬನು ಬಲ್ಲನು.... ಈ ರಾಜಿಕದ ಮುಳ್ಳುಹಾಸಿಗೆಯನ್ನು ತ್ಯಜಿಸಲು ನಾನು ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇನೆ, ತಂಗಿ. ಅದಕ್ಕೆ ಇನ್ನೆರಡು ತಿಂಗಳು ಗಡುವಿದೆ. ಮುಂದಿನ ಮಾಘದಲ್ಲಿ ಕುಮಾರ ಸೋಮೇಶ್ವರನ ಯುವರಾಜ ಪಟ್ಟಾಭಿಷೇಕ ಪೂರೈಸಿ, ರಾಜ್ಯಭಾರ ಸಮರ್ಪಣೆ ಮಾಡಿದರೆ ನನ್ನ ಹೊಣೆ ಮುಗಿಯುವುದು. ಅನಂತರ ಬಸವಣ್ಣನವರೊಡನೆ ಕೂಡಲಸಂಗಮದಲ್ಲಿ, ಗುರುಚರಣದಡಿಯಲ್ಲಿ ಮೋಕ್ಷಾರ್ಥಿಯಾಗಿ ವ್ರತಾನುಷ್ಠಾನಗಳಿಂದ ನನ್ನ ಕೊನೆಯ ದಿನಗಳನ್ನು ಕಳೆಯಲು ನಿರ್ಧರಿಸಿದ್ದೇನೆ. ಆಮೇಲೆ ಬಿಜ್ಜಳನ ಗುಣಾವಗುಣಗಳನ್ನು ನಿರ್ಣಯಿಸಲಿ ಈ ಲೋಕ," ಎಂದನು.

ನುಡಿಯುತ್ತಿದ್ದಂತೆ ಬಿಜ್ಜಳನ ಕಂಠ ಗಂಭೀರವಾಯಿತು, ಗದ್ಗದಿತವಾಯಿತು. ತುಂಬಿ ಹರಿದ ನದಿ ತನ್ನ ಪೂರ್ವಸ್ಥಿತಿಯನ್ನು ಪುನಃ ಪಡೆದು ಶಾಂತವಾದಂತೆ ಬಿಜ್ಜಳನು ಮೌನವಾಗಿ ಕುಳಿತನು.

ಆಗ ಅಲ್ಲಿದ್ದವರ ಮೇಲೆ ಬಿಜ್ಜಳನ ನುಡಿಗಳಿಂದಾದ ಪ್ರತಿಕ್ರಿಯೆ ವಿಭಿನ್ನವೂ ವಿಚಿತ್ರವೂ ಆಗಿದ್ದಿತು.

ಸರಳ ಹೃದಯರೂ, ಪ್ರಾಪಂಚಿಕ ವ್ಯವಹಾರಗಳ ಅನುಭವವಿಲ್ಲದವರೂ ಆದ ಚೆನ್ನಬಸವಣ್ಣನವರು, "ಈ ಪರಿವರ್ತನೆ ನಿಜವಾದರೆ ಮಾವನವರ ನಿರ್ವಾಸನ ವಿಫಲವಾಗಲಿಲ್ಲ," ಎಂದುಕೊಂಡರು.

ಜಗತ್ತನ್ನು ಅರಿತವಳೂ ಸರ್ವಜನ ಹಿತಾಕಾಂಕ್ಷಿಣಿಯೂ ಆದ ನಾಗಲಾಂಬೆ,

"ಚಾಲುಕ್ಯರಾಜ್ಯದ ನವೋದಯಕ್ಕೆ ಶುಭಸೂಚನೆಯೇ ಇದು !" ಬಿಜ್ಜಳನ ಮನದಲ್ಲಿ ಅಂಕುರಿಸಿರುವ ಈ ತ್ಯಾಗಶೀಲ ಉದಾರ ಪ್ರವೃತ್ತಿ ಬೆಳೆದು ಗಿಡವಾಗಿ ಸತ್ಫಲವನ್ನು ಕೊಡಲಿ," ಎಂದು ಹಾರೈಸಿದಳು.

ಭಾವಪರವಶೆಯಾಗಿ ಮನದಳಲನ್ನು ತೋಡಿಕೊಂಡ ನೀಲಲೋಚನೆ, ಅಣ್ಣನ ಮನಃಕ್ಲೇಶಕ್ಕೆ ಕಾರಣಳಾದೆನೆಂಬ ಪಶ್ಚಾತ್ತಾಪದಿಂದ ನೊಂದು, ಬಿಜ್ಜಳನ ಕಾಲುಗಳ ಮೇಲೆ ಬಿದ್ದು, "ಕ್ಷಮಿಸು ಅಣ್ಣ, ನಿನ್ನ ಮಹತ್ವವನ್ನು ಅರಿಯದೆ ಬಿರುನುಡಿಯಾಡಿದೆ!" ಎಂದು ಮೊರೆಯಿಟ್ಟಳು.

ರಾಜಕೀಯ ವಂಚನೆ ವಿಪರ್ಯಾಸಗಳ ಪೂರ್ಣ ಪರಿಚಯ ಪಡೆದಿದ್ದ ಮಂಚಣ ನಾಯಕನು, "ಬಿಜ್ಜಳರಾಯರ ಮನಸ್ಸಿನಲ್ಲೇನಿದೆ ಎಂಬುದನ್ನು ತಿಳಿಯಲು ಜಗತ್ಕರ್ತನಿಗೂ ಸಾಧ್ಯವಿಲ್ಲ. ಯಾವುದೋ ಹೊಸ ತಂತ್ರದ ನಾಂದಿಯಿದು, ಕೊನೆಗಾಲದಲ್ಲಿ ನಾನು ಇನ್ನೇನನ್ನು ನೋಡಬೇಕಾಗಿದೆಯೋ !" ಎಂದು ತಲ್ಲಣಿಸಿದನು.

ಬಿಜ್ಜಳನ ತೊಡೆಯ ಮೇಲೆ ಕುಳಿತಿದ್ದ ಬಾಲಕ ಸಂಗಮನಾಥನು ಮಾತ್ರ ಈ ಎಲ್ಲ ಭಾವನೆಗಳಿಂದ ದೂರವಾಗಿ, ಮಾವನ ಕದಪುಗಳ ಮೇಲೆ ಬೆರಳಾಡಿಸುತ್ತ, "ಏಕೆ ಅಳುವಿರಿ, ಮಾವಯ್ಯ. ನೀವು ಬರುವ ಸುದ್ದಿ ಕೇಳಿ ನನಗೆಷ್ಟು ಆನಂದವಾಯಿತು, ಗೊತ್ತೆ? ನೀಲಕ್ಕ ಎರಡು ದಿನದಿಂದ ಹೇಳುತ್ತಿದ್ದರು, ನಿಮ್ಮನ್ನ ನೋಡಲು ಅರಮನೆಗೆ ಹೋಗಬೇಕು ಅಂತ. ಮೈ ಸ್ವಸ್ಥವಿಲ್ಲದೆ ಆಗಲಿಲ್ಲ," ಎಂದನು.

ಸಂಗಮನಾಥನನ್ನು ಬಿಗಿದಪ್ಪಿದನು ಬಿಜ್ಜಳ. ತಡೆದಿದ್ದ ಕಣ್ಣೀರು ಧಾರೆಯಾಗಿ ಸುರಿದು ಬಾಲಕನ ಮಂಡೆ ಬೆನ್ನುಗಳನ್ನು ತೋಯಿಸಿತು. ನೀರವವಾಗಿ ಅತ್ತನು ಚಾಲುಕ್ಯರಾಜ್ಯದ ಸರ್ವಾಧಿಕಾರಿ ಮಹಾಮಂಡಲೇಶ್ವರ !

ತುಸು ಹೊತ್ತು ಸಭಾಂಗಣದಲ್ಲಿ ಮೌನ. ಆಮೇಲೆ ದೂರದ ಪೂಜಾಗೃಹದಲ್ಲಿ ಶರಣನೊಬ್ಬನು ಮಧುರವಾಗಿ ಹಾಡುತ್ತಿದ್ದ ವಚನಗೀತ ಗಾಳಿಯಲ್ಲಿ ತೂರಿ ಬಂದು ಕೇಳಿಸಿತು :

ಭಾಂಡವ ತುಂಬಿದ ಬಳಿಕ ಸುಂಕದ ತೆತ್ತಲ್ಲದೆ,
ವಿರಹಿತ ಹೋಗಬಾರದು.
ಕಳ್ಳನಾಣ್ಯ ಸಲುಗೆಗೆ ಸಲ್ಲದು, ಕಳ್ಳನಾಣ್ಯವ ಸಲ್ಲಲೀಯರ್‍ಯ !
ಭಕ್ತಿಯೆಂಬ ಭಾಂಡಕ್ಕೆ ಜಂಗಮವೇ ಸುಂಕಿಗ,
ಕೂಡಲ ಸಂಗಮ ದೇವ !

ಬಿಜ್ಜಳನು ಚಕಿತನಾಗಿ, "ಎಲ್ಲಿಂದ ಕೇಳಿಬರುತ್ತಿದೆ ಈ ಗೀತ?" ಎಂದನು.

"ಮಹಮನೆಯಲ್ಲಿ ಪೂಜಾರಂಭವಾಗಿದೆ, ಅಣ್ಣನವರೆ. ಯಾರೋ

ಆವೇಶದಿಂದ ಹಾಡುತ್ತಿದ್ದಾರೆ," –ಎಂದು ಉತ್ತರ ಕೊಟ್ಟಳು ನಾಗಲಾಂಬೆ.

ಬಿಜ್ಜಳನು ತುಸು ಹೊತ್ತು ಮೌನವಾಗಿ ಗೀತವನ್ನು ಕೇಳುತ್ತಿದ್ದು ಬಳಿಕ,

"ಸರಿಯಾಗಿ ಹೇಳಿದ್ದಾರೆ ಬಸವಣ್ಣನವರು, –ಭಕ್ತಿಯೆಂಬ ಭಾಂಡಕ್ಕೆ ಜಂಗಮವೇ ಸುಂಕಿಗ. ನನ್ನ ರಾಜಿಕದ ಭಾಂಡ ತುಂಬಿ ಹರಿಯಿತು, ಆದರೆ ಸುಂಕ ತೆತ್ತಿಲ್ಲ ನಾನಿನ್ನೂ. ಈ ಸಾಲ ತೀರಿಸಿ, ಭಕ್ತಿಯ ಭಾಂಡವನ್ನು ತುಂಬುವುದು ನನ್ನ ಉದ್ದೇಶ. ಮಹಮನೆಯ ಜಂಗಮದಲ್ಲಿ ವಯಸ್ಸಿನಿಂದ ಕಿರಿಯರಾದರೂ ಜ್ಞಾನದಿಂದ ಹಿರಿಯರಾದ ನೀವಲ್ಲದೆ ಆ ಪುಣ್ಯ ಕಾರ್ಯದಲ್ಲಿ ನಮಗೆ ಮತ್ತಾರು ನೆರವಾಗಬಲ್ಲರು, ಚೆನ್ನಬಸವಣ್ಣನವರೆ ?" ಎಂದನು.

ಚೆನ್ನಬಸವಣ್ಣನವರು ಕ್ಷಣಕಾಲ ಅಪ್ರತಿಭರಾದರು. ಈ ಮಾತುಗಳ ಉದ್ದೇಶವೇನು? ಅದಕ್ಕೆ ನಾನೇನು ಉತ್ತರ ಹೇಳುವುದು? ಎಂದು ಅವರು ಯೋಚಿಸುತ್ತಿದ್ದಂತೆ ಬಿಜ್ಜಳನು ಮುಂದುವರಿದು ಹೇಳಿದನು :

"ರಾಜಕೀಯವೆಂದರೆ ಸಲ್ಲದ ಕಳ್ಳನಾಣ್ಯ. ಅದನ್ನು ಸಲ್ಲುವಂತೆ ಮಾಡುವ ಪ್ರಯತ್ನದಲ್ಲಿ ನಾನು ಬಾಳೆಲ್ಲ ಕಳೆದಿದ್ದೇನೆ. ಮಂಚಣನಾಯಕರಂತಹ ಅನುಭವ ವೃದ್ಧರು, ಮಧುವರಸರಂತಹ ವ್ಯವಹಾರ ವೃದ್ಧರು, ಬಸವಣ್ಣನವರಂತಹ ಜ್ಞಾನ ವೃದ್ಧರು, ಇವರೆಲ್ಲರನ್ನು ಮಂತ್ರಿಮಂಡಲದಲ್ಲಿ ಸೇರಿಸಿಕೊಂಡು, ಪರಂಪರಾಗತವಾಗಿ ಬಂದ ರಾಜಿಕದ ಕೊಳಕನ್ನು ತೊಳೆದು ಹಾಕುವುದು ನನ್ನ ಉದ್ದೇಶವಾಗಿತ್ತು. ಆದರೆ ದುರ್ದೈವದಿಂದ ಅದು ಇದುವರೆಗೆ ಫಲಿಸಿಲ್ಲ. ಬಸವಣ್ಣನವರು ಆರು ವರ್ಷಗಳ ಹಿಂದೆ ತಾವಾಗಿ ಮಂತ್ರಿಮಂಡಲದಿಂದ ನಿವೃತ್ತರಾದರು. ಈಗ ಮಧುವರಸರು ಅಸ್ವಸ್ಥತೆಯ ಕಾರಣದಿಂದ ನಿವೃತ್ತರಾಗಲೆಣಿಸಿದ್ದಾರೆ. ವೃದ್ಧರಾದ ಮಂಚಣನವರಿಗೆ ವಿಶ್ರಾಂತಿ ಕೊಡುವುದು ಅನಿವಾರ್ಯವಾಗಿದೆ. ಇಷ್ಟೆಲ್ಲ ಅಂತರಾಯಗಳೂ ಎದುರಿಗೆ ನಿಲ್ಲುತ್ತಿದ್ದರೂ ನಾನು ಮಾತ್ರ ನನ್ನ ಚಿರಸಾಧನೆಯನ್ನು ಬಿಟ್ಟಿಲ್ಲ. ಚೆನ್ನಬಸವಣ್ಣನವರು ಸಚಿವರಾಗಲು ಒಪ್ಪುವುದಾದರೆ, ಚಾಲುಕ್ಯ ರಾಜ್ಯಕ್ಕೆ ಆದರ್ಶವಾಗಬಲ್ಲ, ನನ್ನ ಅನಂತರವೂ ಆಡಳಿತವನ್ನು ಅಭ್ಯುದಯ ಪಥದಲ್ಲಿ ನಡೆಸಬಲ್ಲ ಮಂತ್ರಿಮಂಡಲವನ್ನು ರಚಿಸಬೇಕೆಂಬ ನನ್ನ ಹಿರಿಯಾಸೆ ಈಗಲೂ ಜಾಗೃತವಾಗಿದೆ. ಅದನ್ನು ಚರಿತಾರ್ಥಗೊಳಿಸುವುದಕ್ಕಾಗಿಯೇ ನಾನಿಂದು ಇಲ್ಲಿಗೆ ಬಂದದ್ದು."

ಈ ಸಾರಿ ಚೆನ್ನಬಸವಣ್ಣನವರು ನಿಜವಾಗಿ ಅಪ್ರತಿಭರಾದರು. ಈ ಸಲಹೆಗೆ ಏನೆಂದು ಉತ್ತರ ಕೊಡಲಿ ಎಂಬುದು ಅವರ ನಿಶಿತ ಬುದ್ಧಿಗೆ ತೋರದಾಯಿತು. ಕೆಲವು ಕ್ಷಣಗಳು ಮೌನವಾಗಿದ್ದು ಆಮೇಲೆ ಹೇಳಿದರು:

"ಪ್ರಭುಗಳು ನನ್ನನ್ನು ಬಾಲ್ಯದಿಂದ ಅರಿತಿದ್ದಾರೆ. ನನ್ನ

ಪರಮಾದರ್ಶವೇನೆಂಬುದು ಅವರಿಗೆ ತಿಳಿಯದಿಲ್ಲ. ಆದರೂ ಅದನ್ನು ಮತ್ತೊಮ್ಮೆ ಪ್ರಭುಗಳ ಗಮನಕ್ಕೆ ತರುವುದು ಅಗತ್ಯವೆನಿಸಿದೆ. ನಾನು ಬಳ್ಳಿಗಾವೆಯ ಕೋಡಿಯ ಮಠದಲ್ಲಿ ವಿದ್ಯಾರ್ಥಿಯಾಗಿದ್ದಾಗಲೆ ಒಂದು ನಿರ್ಧಾರಕ್ಕೆ ಬಂದೆ. ಜೀವಿತಕಾಲವೆಲ್ಲ ಬ್ರಹ್ಮಚಾರಿಯಾಗಿದ್ದು ಶರಣಧರ್ಮದ ಪ್ರಕಾರ ಸಂಸ್ಕಾರಗಳಿಗಾಗಿ ಜೀವನವನ್ನೇ ಮೀಸಲಾಗಿಸಬೇಕೆಂದು. ಅದಕ್ಕೆ ತಾಯಿಯ ಆಶೀರ್ವಾದ ದೊರಕಿತು. ಬಸವಣ್ಣನವರ ಒಪ್ಪಿಗೆ ದೊರೆಯಿತು. ಸ್ನಾತಕನಾಗಿ ಹಿಂದಿರುಗುತ್ತಲೆ ಅನುಭವಮಂಟಪದ ಕರಣಿಕನಾಗಿ, ಕಾರ್ಯದರ್ಶಿಯಾಗಿ, ವ್ಯವಸ್ಥಾಪಕನಾಗಿ ಆರು ವರ್ಷಗಳ ಕಾಲ ಕೆಲಸಮಾಡಿದ್ದೇನೆ. ಧಾರ್ಮಿಕ ವಿಚಾರಗಳ ಹೊರತಾಗಿ ಹೊರಗಿನ ವ್ಯವಹಾರಗಳ ಅನುಭವ ನನಗಿರುವುದಿಲ್ಲ, ರಾಜಕೀಯ ದೂರವಾಗಿಯೇ ಉಳಿಯಿತು. ಇಂತಹ ಅನನುಭವಿಯೂ, ವಯಸ್ಸಿನಲ್ಲಿ ಕಿರಿಯನೂ ಆದ ನಾನು ಚಾಳುಕ್ಯ ರಾಜ್ಯದ ಮಂತ್ರಿಮಂಡಲದಲ್ಲಿ ಸಚಿವನಾಗುವುದು ಅವ್ಯವಹಾರಿಕವಷ್ಟೇ ಅಲ್ಲ, ಹಾಸ್ಯಾಸ್ಪದ. ಪ್ರಭುಗಳು ಈ ಯೋಚನೆಗಳನ್ನು ಕೈಬಿಡಬೇಕಾಗಿ ಬೇಡುತ್ತೇನೆ."

ಬಿಜ್ಜಳನು ಯೋಚಿಸಿ ಹೇಳಿದನು : "ನಾನು ನಿಮ್ಮಿಂದ ಅಪೇಕ್ಷಿಸುವುದು ರಾಜಿಕದ ವ್ಯವಹಾರ ಚಾತುರ್ಯವನ್ನಲ್ಲ ಚೆನ್ನಬಸವಣ್ಣನವರೆ, ಧಾರ್ಮಿಕ ಮಾರ್ಗದರ್ಶನವನ್ನು. ಒಂದು ರೀತಿಯಲ್ಲಿ ಅದರ ಅಭಾವವೇ ಬಸವಣ್ಣನವರ ನಿರ್ವಾಸನಕ್ಕೆ ಕಾರಣವಾಯಿತು. ಪುನಃ ಆ ರೀತಿ ನಡೆಯದಂತೆ ಎಚ್ಚರ ವಹಿಸುವುದು ನನ್ನ ಕರ್ತವ್ಯ, ನೀವು ವಯಸ್ಸಿನಲ್ಲಿ ಕಿರಿಯರಾದರೂ ಜ್ಞಾನದಲ್ಲಿ ದೊಡ್ಡವರು. ಬಸವಣ್ಣನವರಂತಹ ಮೇಧಾವಿಗಳು, ಸಿದ್ಧರಾಮಣ್ಣನವರಂತಹ ಕರ್ಮಯೋಗಿಗಳು, ಪ್ರಭುದೇವರಂತಹ ತಪೋಧನರು, ಅನುಭವಮಂಟಪದಲ್ಲಿ ನಿಮ್ಮ ಗುಣಗಾನ ಮಾಡಿದರೆಂಬುದು ನನಗೆ ತಿಳಿದಿದೆ. ಇವರೆಲ್ಲರ ಪ್ರಶಂಸೆಗೆ ಪಾತ್ರರಾದ ನೀವು ನಮ್ಮ ಕಾಲದ ಯುಗಪುರುಷರೆಂದು ನಾನು ಭಾವಿಸಿದ್ದೇನೆ. ನಿಮ್ಮ ಇರುವಿಕೆಯಿಂದ ನಮ್ಮ ಮಂತ್ರಿಮಂಡಲ ಜನಪ್ರಿಯವಾಗುತ್ತದೆ. ಜನರ ಹಿತಾಸಕ್ತಿಗಳನ್ನು ಸಾಧಿಸಲು ಸಮರ್ಥವಾಗುತ್ತದೆ. ನಿಮ್ಮ ಅಪೂರ್ವ ಮೇಧಾಶಕ್ತಿಗೆ ಮಂತ್ರಿಪದವಿ ಹೊರೆಯೆನಿಸುವುದಿಲ್ಲ. ತಿಂಗಳಿಗೊಂದು ಸಾರಿಯೋ, ಎರಡು ಸಾರಿಯೋ ನಡೆಯುವ ಮಂತ್ರಿಮಂಡಲದ ಸಭೆಯಲ್ಲಿ ಒಂದು ಪ್ರಹರಕಾಲ ಭಾಗವಹಿಸಿದರೆ ನಿಮ್ಮ ಹೊಣೆ ಮುಗಿಯಿತು. ಉಳಿದ ದಿನಗಳಲ್ಲಿ ಅಗತ್ಯವಾದ ಶಾಸನ ನಿರೂಪಗಳು, ಧರ್ಮಾಧಿಕರಣದ ವರದಿಗಳು, ನಿಮಗೆ ಕಳುಹಿಸಲ್ಪಡುವುವು. ಅವಕಾಶ ಸಿಕ್ಕಾಗ ಅವುಗಳನ್ನು ಪರಿಶೀಲಿಸಿ ನಿಮ್ಮ ಅಭಿಪ್ರಾಯಗಳನ್ನು ಬರೆದು ಕಳುಹಿಸಬಹುದು. ಮಂಚಣ ನಾಯಕರು ಮಂತ್ರಿಮಂಡಲದಲ್ಲಿ ಪ್ರಧಾನರು. ಇನ್ನು ಕೆಲವು ವಾರಗಳಲ್ಲಿ

ಅವರು ನಿವೃತ್ತರಾಗುತ್ತಾರೆ. ಆಮೇಲೆ ಆ ಸ್ಥಾನವನ್ನು ನೀವು ಅಲಂಕರಿಸಬೇಕೆಂದು ನನ್ನ ಆಸೆ. ನೀವದನ್ನು ವ್ಯರ್ಥಗೊಳಿಸಬೇಡಿರಿ."

ಮಾತು ಮುಗಿಸಿ ಬಿಜ್ಜಳನು, ಸಾಭಿಪ್ರಾಯವಾಗಿ ಮಂಚಣನ ಕಡೆ ನೋಡಿದನು.

ಬಿಜ್ಜಳನ ರಾಜಕೀಯ ಚತುರತೆ, ಈ ರೀತಿ ಅನುನಯ ಪ್ರಶಂಸೆಗಳ ಮಾರ್ಗ ಹಿಡಿದಾಗ ಅದನ್ನು ವಿರೋಧಿಸುವುದು ಎಂತಹವರಿಗೂ ಸಾಧ್ಯವಿಲ್ಲವೆಂಬುದನ್ನು ಮಂಚಣನು ತಿಳಿದಿದ್ದನು. ಚಾಲುಕ್ಯರಾಜ್ಯವನ್ನು ಕಬಳಿಸಿ, ವಿರೋಧಿ ಸಾಮಂತರನ್ನು ತನ್ನವರನ್ನಾಗಿ ಮಾಡಿಕೊಂಡು, ಸರ್ವಾಧಿಕಾರಿಯ ನಿರಂಕುಶ ನಿಷ್ಠುರ ಆಡಳಿತ ಜನಪ್ರಿಯವಾಗುವಂತೆ ಮಾಡಿದ ಮಂತ್ರಶಕ್ತಿ ಬಿಜ್ಜಳನ ಮಧುರ ವಚನಗಳೇ ಎಂಬುದು ಮಂಚಣನ ಅನುಭವವಾಗಿತ್ತು. ಅದಕ್ಕೆ ಪ್ರತಿಯಾಡುವ ಚತುರತೆ ನೈಪುಣ್ಯಗಳಾಗಲಿ, ಅದರ ಹಿಂದಿರುವ ವಂಚನೆ ವಿಪರ್ಯಾಸಗಳನ್ನು ಅರಿತುಕೊಳ್ಳುವ ಶಕ್ತಿಯಾಗಲಿ, ಅನುಭವಮಂಟಪದ ಶರಣರಿಗಿಲ್ಲವೆಂದು ಮಂಚಣನು ಭಾವಿಸಿದನು.

ಮನಸ್ಸಿನ ಈ ಒಳತೋಟಿಯನ್ನು ಅರಿತವನಂತೆ ಬಿಜ್ಜಳನು ಮಂಚಣನ ಕಡೆ ತಿರುಗಿ, ದನಿಯನ್ನು ಮತ್ತಷ್ಟು ಮೃದುವಾಗಿಸಿ, "ನೀವಾದರೂ ಚೆನ್ನಬಸವಣ್ಣನವರಿಗೆ ಹೇಳಬಾರದೆ, ಮಂಚಣನಾಯಕರೆ. ಚಾಲುಕ್ಯರಾಜ್ಯದ ಹಿತಚಿಂತನೆಯ ಹೊರತಾಗಿ ನನ್ನ ಸಲಹೆಗೆ ಮತ್ತಾವ ಉದ್ದೇಶವೂ ಇರುವುದಿಲ್ಲ," ಎಂದನು.

ಮಂಚಣನು ಮಧ್ಯಸ್ತಿಕೆಯ ಮಾರ್ಗ ಹಿಡಿದು, "ಚೆನ್ನಬಸವಣ್ಣನವರು ಪ್ರಭುಗಳ ಸಲಹೆಯನ್ನು ನಿರಾಕರಿಸುವುದಿಲ್ಲವೆಂಬ ಭರವಸೆ ನನಗಿದೆ. ಆದರೆ ಅನುಭವ ಮಂಟಪದ ಶರಣರೊಡನೆ ಆಲೋಚನೆ ಮಾಡದೆ, ಬಸವಣ್ಣನವರ ಅಭಿಪ್ರಾಯ ತಿಳಿಯದೆ ಒಪ್ಪಿಗೆ ಕೊಡುವುದು ಹೇಗೆ? ಉತ್ತರಕ್ಕಾಗಿ ಮೂರು ನಾಲ್ಕು ದಿನಗಳಾದರೂ ನಾವು ಕಾಯಬೇಕಾಗುವುದು," ಎಂದನು.

ಚೆನ್ನಬಸವಣ್ಣನವರು ಕೃತಜ್ಞತೆಯಿಂದ ಮಂಚಣನನ್ನು ಮನಸಾ ವಂದಿಸಿದರು.

ಬಿಜ್ಜಳನು ಕ್ಷಣಕಾಲ ಅಸಮಾಧಾನದಿಂದ ಚಡಪಡಿಸಿದನು. ಪ್ರತಿಕ್ಷಣದಲ್ಲಿ ಮೋಸದ ಮಿದುನಗೆ ಬೀರಿ, "ಚೆನ್ನಬಸವಣ್ಣನವರು ನಾಲ್ಕಾರು ದಿನಗಳಲ್ಲಿ ತಮ್ಮ ಒಪ್ಪಿಗೆ ತಿಳಿಸಲಿ. ಅಷ್ಟರಲ್ಲಿ ನಾವು, ಅವರು ಮಂತ್ರಿಮಂಡಲಕ್ಕೆ ಸೇರುವರೆಂಬ ಶುಭ ವಾರ್ತೆಯನ್ನು ನಮ್ಮ ಸಾಮಂತಾಧಿಕಾರಿ ಮಾಂಡಲಿಕರಿಗೆ ತಿಳಿಸುವುದರಲ್ಲಿ ಅನುಚಿತವೇನಿದೆ?" ಎಂದನು.

ಚೆನ್ನಬಸವಣ್ಣನವರು ಆಗಲೂ ಮೌನ.

ಬಿಜ್ಜಳನು ಇಂಗಿತವರಿತು, "ನಿಮ್ಮ ಒಪ್ಪಿಗೆಯಿಲ್ಲದೆ ನೇಮಕದ ನಿರೂಪ ಪ್ರಕಟವಾಗುವುದಿಲ್ಲ. ಅದರಿಂದ ಬಾಧಕವೇನು ?" ಎಂದು ಮುಗಿಸಿದನು.

ಚೆನ್ನಬಸವಣ್ಣನವರು ನಿರುಪಾಯರಾಗಿ, "ರಾಜಕೀಯ ವ್ಯವಹಾರಗಳ ಅನುಭವವಿಲ್ಲದ ನನ್ನನ್ನು ಪ್ರಭುಗಳು ಮಾತಿನ ಶೃಂಖಲೆಯಿಂದ ಬಂಧಿಸಲು ಯೋಚಿಸಿದಂತಿದೆ. ನಾಲ್ಕು ದಿನಗಳ ಗಡುವು ಮುಗಿದ ಮೇಲೆ ಯಾವುದಾದರೊಂದು ಕಾರಣದಿಂದ ನಾನು ಒಪ್ಪಿಗೆ ಕೊಡಲು ಅಸಮರ್ಥನಾದರೆ, ಪ್ರಭುಗಳು ಉದಾರ ಚಿತ್ತದಿಂದ ನನ್ನನ್ನು ಕ್ಷಮಿಸಬೇಕು," ಎಂದು ಬಿನ್ನವಿಸಿಕೊಂಡರು.

"ನೀವು ಎಲ್ಲ ವಿಧದಿಂದಲೂ ಸ್ವತಂತ್ರರು. ನಿಮ್ಮ ಸ್ವಾತಂತ್ರ್ಯಕ್ಕೆ ಆತಂಕ ತಂದೊಡ್ಡುವುದು ನನ್ನ ಉದ್ದೇಶವಲ್ಲ," ಎಂದು ಬಿಜ್ಜಳನು ಸಂಧಾನ ಮುಗಿಸಿದನು.

ಆ ದಿನವೇ ಚೆನ್ನಬಸವಣ್ಣನವರು ಅನುಭವಮಂಟಪದಲ್ಲಿ ಶರಣರ ಸಭೆ ಕರೆದು ಬಿಜ್ಜಳನ ಸಲಹೆಯನ್ನು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಸಕಲೇಶ ಮಾದರಸರು ಆ ಸಂದರ್ಭದಲ್ಲಿ ಹೇಳಿದ ಬೆಡಗಿನ ವಚನವಿದು :

ಸರೋವರದ ಮಂಡುಕನು ತಾವರೆಯ ನೆಳಲ ಸಾರಿದೆಡೆ,
ಪರಿಮಳವದಕೇ, ಅಯ್ಯ, ಮದಾಳಿಗಲ್ಲದೆ ?
ಅರಿಯೆ ಬಾರದು, ಸಕಲೇಶ್ವರ ದೇವಾ ! ನಿಮ್ಮ
ವೇದಿಸಿದ ವೇದ್ಯಂಗಲ್ಲದೆ.

ಸಲಹೆಯನ್ನು ಅನುಮೋದಿಸಿದ ಹಾಗೂ ವಿರೋಧಿಸಿದ ಶರಣರು ತಮತಮಗೆ ಅನುಕೂಲವಾಗಿ ವಚನವನ್ನು ಅರ್ಥವಿಸಿಕೊಂಡರು.

ಅನುಮೋದಿಸಿದವರು ಹೇಳಿದರು : "ಸರೋವರವೆಂದರೆ ಕಲ್ಯಾಣ, ಅದರಲ್ಲಿರುವ ಮಂಡುಕನೇ ಬಿಜ್ಜಳ. ಅನುಭವಮಂಟಪವೇ ತಾವರೆ, ಬಿಜ್ಜಳನು ಈಗ ಅನುಭವಮಂಟಪದ ಆಶ್ರಯ ಬಯಸಿದ್ದಾನೆ. ಆದರೆ ಭ್ರಮರಕ್ಕಲ್ಲದೆ ಮಂಡುಕಕ್ಕುಂಟೆ ತಾವರೆಯ ಪರಿಮಳ? ಸಕಲೇಶ್ವರದೇವನನ್ನು ಅರಿತವರು ಮಾತ್ರವೆ ಅನುಭವಮಂಟಪದ ಘನತೆ ವಿಸ್ತಾರಗಳನ್ನು ಅರಿಯಬಲ್ಲರು. ಅದು ಕಾರಣ ಚೆನ್ನಬಸವಣ್ಣನವರು ಮಂತ್ರಿಗಳಾಗಿ ಬಿಜ್ಜಳನಿಗೆ ಶರಣಧರ್ಮದ ಅರಿವನ್ನುಂಟುಮಾಡಿಕೊಡಲಿ. ಅದರಿಂದ ಶರಣರ ಹಿತಸಾಧನೆಯಾಗುವುದು," ಎಂದು.

"ಅನುಭವಮಂಟಪದ ಅನುಭಾವವೆಂಬ ಪರಿಮಳವನ್ನು ಅರಿತು ಆಘ್ರಾಣಿಸುವುದು ಶರಣರಿಗೆ ಮಾತ್ರ ಸಾಧ್ಯ. ಅದುಕಾರಣ ಶರಣಧರ್ಮದ ವಿರೋಧಿಯಾಗಿ ಬಸವಣ್ಣನವರ ನಿರ್ವಾಸನಕ್ಕೆ ಆಜ್ಞೆಮಾಡಿದ ಬಿಜ್ಜಳನ ಸಲಹೆ

ನಮಗೆ ಮಾನ್ಯವಲ್ಲ, ಅದನ್ನು ನಾವು ವಿರೋಧಿಸುವೆವು. ಭವಿಯಾದ ಬಿಜ್ಜಳನ ಮಂತ್ರಿಮಂಡಲದಲ್ಲಿ ಭಾಗವಹಿಸುವುದು ಚೆನ್ನಬಸವಣ್ಣನವರಿಗೆ ಸಲ್ಲದು" ಎಂದರು, ಸಲಹೆಯ ವಿರೋಧಿಗಳು.

ಈ ವಿತಂಡವಾದವನ್ನು ಕೊನೆಗಾಣಿಸಲು ಮಾಚಿದೇವರು ಹೇಳಿದರು :

"ಕೈಗೆ ಸಿಕ್ಕ ಮಾಣಿಕವನ್ನು ಬೆಣಚುಕಲ್ಲೆಂದು ಬಿಸುಡುವಂತಿದೆ ನಿಮ್ಮ ವಾದ. ನಾಲ್ಕು ವಾರಗಳ ಹಿಂದೆ ಅನುಭವಮಂಟಪದ ಧರ್ಮಪ್ರಸಾರ ಸುಧಾರಣೆಗಳನ್ನು ವಿರೋಧಿಸಿದ ಸರ್ವಾಧಿಕಾರಿ ಬಿಜ್ಜಳರಾಯರೇ ಇಂದು ಶರಣ ಧರ್ಮದ ನೆರಳಲ್ಲಿ ಆಶ್ರಯಪಡೆದು ತಮ್ಮ ಪದವಿ ಪ್ರತಿಷ್ಠೆಗಳನ್ನು ಉಳಿಸಿಕೊಳ್ಳಲು ಯೋಚಿಸುತ್ತಿದ್ದಾರೆ. ಮಂತ್ರಿಮಂಡಲಕ್ಕೆ ಸೇರಲು ಚೆನ್ನಬಸವಣ್ಣನವರಿಗೆ ಬಂದಿರುವ ಆಹ್ವಾನಕ್ಕೆ ರಾಜಕೀಯದಲ್ಲಿ ಅದೊಂದೇ ಸ್ಪಷ್ಟಾರ್ಥ.

ನಾವು ಅವಿಚಾರದಿಂದ ಆಹ್ವಾನವನ್ನು ನಿರಾಕರಿಸಿದರೆ ಸರ್ವಕಾಲವೂ ಬಿಜ್ಜಳನ ಪ್ರತಿಕಕ್ಷಿಗಳಾಗಿ ನಿಲ್ಲಬೇಕಾಗುತ್ತದೆ. ಅದು ನಮ್ಮಿಂದ ಸಾಧ್ಯವೆ? ಪ್ರಸ್ತುತ ಪರಿಸ್ಥಿತಿಯಲ್ಲಿ ನಾವು ಧರ್ಮ ರಾಜಕೀಯಗಳನ್ನು ಸಮನ್ವಯಗೊಳಿಸಿ ಶರಣರ ಹಿತಸಾಧನೆಯಾಗುವಂತೆ ನಡೆಯಲು ಪ್ರಯತ್ನಿಸಬೇಕು. ಇದೊಂದು ಗಾರುಡಿವಿದ್ಯೆಯೆಂದೂ, ಗೋವು ಹುಲಿಗಳನ್ನು ಒಂದೇ ಹಗ್ಗದಲ್ಲಿ ಕಟ್ಟಿ ಒಂದೇ ಕೊಟ್ಟಿಗೆಯಲ್ಲಿ ಸಾಕುವಂತೆ ಕಷ್ಟಸಾಧ್ಯವೆಂದೂ ತಿಳಿದಿದ್ದೇನೆ. ಆದರೂ ಶರಣರಿಗೆ ಸಾಧ್ಯವಿಲ್ಲದ್ದು ಜಗತ್ತಿನಲ್ಲಿ ಯಾವುದೂ ಇಲ್ಲವೆಂದು ನನ್ನ ದೃಢ ವಿಶ್ವಾಸ. ಸದ್ಯದಲ್ಲಿ ಚೆನ್ನಬಸವಣ್ಣನವರು ಬಿಜ್ಜಳನ ಸಲಹೆಯಂತೆ ಮಂತ್ರಿಗಳಾಗಲಿ. ಆಗ ನಮಗೆ ಉಸಿರಾಡುವ ಅವಕಾಶ ದೊರಕುವುದು. ಮುಂದಿನ ಕಾರ್ಯವಿಧಾನವನ್ನು ನಾವು ಆಮೇಲೆ ನಿರ್ಧರಿಸಿಕೊಳ್ಳಬಹುದು. ಹಾಗಲ್ಲದೆ ಬಿಜ್ಜಳರಾಯರ ಕೋಪಕ್ಕೆ ಕರೆಯಿತ್ತು ಕಲ್ಯಾಣದಲ್ಲಿ ಉಳಿದಿರುವುದೆಂದರೆ ಆಗದ ಕಾರ್ಯ ಅದು" –

"ಮಾಚಿತಂದೆಯ ಕೈಲಾಗದು, ಹೋಚಿತಂದೆಯ ಕೈಲಾಗದು,
(ಈಗ ನಾವು) ಇಚ್ಚೆ ಬಂದಂತೆ ಇರಲಾಗದು,
ಅಚ್ಚೊತ್ತಿದಂತೆ ಇರಬೇಕು.
ಮಚ್ಚು ಪಲ್ಲಟವಾಗದೆ, ಆಶ್ಚರ್ಯಭರಿತರಾಗಿರಬೇಕು.
ಕಲಿ, ಕರುಳನೊತ್ತಿ ಮುಂದಕ್ಕೆ ಹರಿವನಲ್ಲದೆ,
ಎಡೆಗೋಲನಾಸೆ ಮಾಡುವನೆ, ಹೇಳಾ !
ಕಲಿದೇವರ ದೇವನ ಅಂಕೆಗೆ ಝುಂಕೆಗೆ ಬೆಚ್ಚಿ ಓಡದಿರು !
ವೀರ ಕಂಕಣ ಕಟ್ಟು !"

ಮಾಚಿದೇವರ ವೀರವಾಣಿ ಶರಣರನ್ನು ಒಂದುಗೂಡಿಸಿತು. ಒಮ್ಮತದಿಂದ

ಅವರು ಚೆನ್ನಬಸವಣ್ಣನವರ ಮಂತ್ರಿಪದವೀ ಸ್ವೀಕಾರಕ್ಕೆ ಅನುಮತಿಯಿತ್ತರು.

ಆ ದಿನವೇ ಸಂಗಮಕ್ಕೆ ಪಯಣ ಮಾಡಿದ ಶರಣನು ನಾಲ್ಕನೆಯ ದಿನ ಹಿಂದಿರುಗಿ ಬಸವಣ್ಣನವರ ಒಪ್ಪಿಗೆಯನ್ನು ತಿಳಿಸಿದನು. ಆಗಿನ ಸಂಪ್ರದಾಯದಂತೆ ಬಸವಣ್ಣನವರು ನಿದರ್ಶನ ರೂಪವಾದ ವಚನವೊಂದನ್ನು ಚೆನ್ನಬಸವಣ್ಣನವರಿಗೆ ಕಳುಹಿಸಿದರು.

ಅರೆವನಯ್ಯಾ ಸಣ್ಣವಹನ್ನಕ್ಕ,
ಒರೆವನಯ್ಯಾ ಬಣ್ಣಗಾಣ್ಬನ್ನಕ್ಕ,
ಅರೆದರೆ ಸಣ್ಣದಾಗಿ, ಒರೆದರೆ ಬಣ್ಣವಾದರೆ,
ಕೂಡಲ ಸಂಗಮದೇವನೊಲಿದು ಸಲಹುವನು.

ಶರಣರೊಡನೆ ಪರ್ಯಾಲೋಚಿಸಿ, ವಚನದ ಫಲಿತಾರ್ಥ ತಮ್ಮ ಅಧಿಕಾರ ಸ್ವೀಕಾರಕ್ಕೆ ಒಪ್ಪಿಗೆ ಕೊಡುವುದೆಂದು ದೃಢಮಾಡಿಕೊಂಡು ಚೆನ್ನಬಸವಣ್ಣನವರು ಬಿಜ್ಜಳನಿಗೆ ಬರೆದರು.

ಆದರೆ ಬಿಜ್ಜಳನ ಕುಟಿಲನೀತಿ, ಚೆನ್ನಬಸವಣ್ಣನವರ ಒಪ್ಪಿಗೆಗಾಗಿ ಕಾಯುತ್ತ ಕುಳಿತುಕೊಳ್ಳುವಷ್ಟು ಸಹನೆಪಡೆದಿರಲಿಲ್ಲ. ಧರ್ಮಾಧಿಕರಣದ ವಿಚಾರಣೆ, ಬಸವಣ್ಣನವರ ನಿರ್ವಾಸನ, ಈ ಅಪ್ರಿಯ ವಿಚಾರಗಳು ರಾಜ್ಯದ ಸಾಮಂತ ಮಾಂಡಲಿಕರಿಗೆ ವರದಿಯಾಗಿ, ಅವರ ಪ್ರತಿಕ್ರಿಯೆ ತನ್ನ ವಿರುದ್ಧವಾಗಿ ರೂಪುಗೊಳ್ಳುವ ಮೊದಲೆ, ಚೆನ್ನಬಸವಣ್ಣನವರ ಮಂತ್ರಿಪದವೀ ಸ್ವೀಕಾರದ ವಾರ್ತೆ ರಾಜ್ಯದಲ್ಲೆಲ್ಲಾ ಹರಡಬೇಕೆಂಬುದು ಬಿಜ್ಜಳನ ಉದ್ದೇಶವಾಗಿತ್ತು. ಅದಕ್ಕಾಗಿ ಅವಸರದ ಭಟರಿಂದ ರಾಜ್ಯದ ಎಲ್ಲ ಕಡೆ ನಿರೂಪಗಳನ್ನು ಕಳುಹಿಸಿದನು. ಶೀಘ್ರದಲ್ಲಿ ನಿವೃತ್ತರಾಗುವ ಮಂಚಣ ನಾಯಕರ ಸ್ಥಾನದಲ್ಲಿ ಅನುಭವ ಮಂಟಪದ ವ್ಯವಸ್ಥಾಪಕರೂ, ಬಸವೇಶದಂಡ ನಾಯಕರ ಸೋದರ ಅಳಿಯಂದಿರೂ ಆದ ಚೆನ್ನಬಸವಣ್ಣನವರು ಮಂತ್ರಿಯಾಗಿ ನೇಮಿಸಲ್ಪಡುವರೆಂದು ನಿರೂಪಗಳಲ್ಲಿ ತಿಳಿಸಲಾಗಿತ್ತು.

ಕಲ್ಯಾಣದಲ್ಲಿ ಈ ವಾರ್ತೆ ಹರಡಿದಾಗ ಬಸವಣ್ಣನವರ ನಿರ್ವಾಸನದಿಂದ ಒಳಗೊಳಗೇ ಕುದಿಯುತ್ತಿದ್ದ ಬಹುಮಂದಿ ನಾಗರಿಕ ಸಾಮಂತ ಮನ್ನೆಯರಿಗೆ ಸಮಾಧಾನವಾಯಿತು. ನಿರ್ವಾಸನದ ಆಜ್ಞೆ ನಾರಣಕ್ರಮಿತನ ಕುಟಿಲ ಕುತ್ಸಿತಗಳ ಫಲವೆಂದೂ, ಶೀಘ್ರದಲ್ಲಿ ಬಸವಣ್ಣನವರು ಕಲ್ಯಾಣಕ್ಕೆ ಹಿಂದಿರುಗುವರೆಂದೂ ಅವರು ಭಾವಿಸಿದರು.

ತನಗೆ ತಿಳಿಯದೆ, ತನ್ನ ಸಲಹೆ ಕೇಳದೆ, ಇಷ್ಟೆಲ್ಲ ನಡೆಯಿತೆಂದು ನಾರಣಕ್ರಮಿತನಿಗೆ ತೀವ್ರ ಅಸಮಾಧಾನವಾಯಿತು. ಆದರೆ ತನ್ನ ಅಸಮಾಧಾನವನ್ನು ಪ್ರಕಟವಾಗಿ

ತೋರ್ಪಡಿಸುವುದು ತನ್ನ ಪ್ರತಿಷ್ಠೆ ಗೌರವಗಳಿಗೆ ಹಾನಿಯೆಂದು ಭಾವಿಸಿ ಅವನು ತಟಸ್ಥನಾಗಿದ್ದನು. ಮುಂದೇನಾಗುವುದೆಂದು ನಿರೀಕ್ಷಿಸಿ ಬಳಿಕ ತನ್ನ ಕಾರ್ಯವಿಧಾನವನ್ನು ತೋರಿಸಿಕೊಳ್ಳುವುದು ಕ್ರಮಿತನ ಉದ್ದೇಶವಾಗಿತ್ತು.

* * *

ಚೆನ್ನಬಸವಣ್ಣನವರ ಒಪ್ಪಿಗೆಯ ಓಲೆ ತಲುಪಿದ ದಿನವೇ ಬಿಜ್ಜಳನು ಮೇನೆಕಳುಹಿಸಿ ಅವರನ್ನು ಸರ್ವಾಧಿಕಾರಿ ಚಾವಡಿಗೆ ಕರೆಸಿಕೊಂಡನು.

ಮಂಚಣನಾಯಕ, ನಾರಣಕ್ರಮಿತ, ಇವರೇ ಮುಖ್ಯರಾದ ಅಷ್ಟಪ್ರಧಾನಿಗಳು ಸಭೆಯಲ್ಲಿದ್ದರು. ಅವರ ಸಮಕ್ಷಮ ಚೆನ್ನಬಸವಣ್ಣನವರು ಧರ್ಮಾಧಿಕರಣದ ವಿಶೇಷ ಸಚಿವರಾಗಿ ಅಧಿಕಾರ ವಹಿಸಿಕೊಂಡರು.

ಪದವಿ ಗೌರವಗಳಿಗೆ ತಕ್ಕಂತೆ ರಕ್ಷಕ ಭಟರು, ರಾವುತರು, ಪಸಾಯತರು, ಕರಣಿಕರು ಮುಂತಾದ ಪರಿವಾರವನ್ನು ಮಹಮನೆಗೆ ಕಳುಹಿಸುವ ವಿಚಾರ ಬಿಜ್ಜಳನೇ ಪ್ರಸ್ತಾಪಿಸಿದಾಗ ಚೆನ್ನಬಸವಣ್ಣನವರು,

“ಈ ಎಲ್ಲ ವೈಭವ ಪ್ರದರ್ಶನಗಳು ವಿರಕ್ತನೂ ಶರಣನೂ ಆದ ನನಗೆ ಸಲ್ಲದು. ಮಂತ್ರಿಪದವಿಯ ಸ್ವೀಕಾರ ನನ್ನ ಸರಳ ಜೀವನಕ್ಕೆ ಕೊಡಲಿಯಾಗದಿರಲಿ ಎಂದು ಕೂಡಲ ಚೆನ್ನ ಸಂಗಮದೇವನನ್ನು ಪ್ರಾರ್ಥಿಸಿ ನಾನಿಲ್ಲಿಗೆ ಬಂದೆ. ಒಬ್ಬ ಕರಣಿಕ, ಇಬ್ಬರು ಪಸಾಯಿತರು, ಇವರನ್ನು ಕಳುಹಿಸಿದರೆ ಸಾಕು. ನಾನು ನನ್ನ ಕಾಲವೆಲ್ಲವನ್ನೂ ಮಹಮನೆಯಲ್ಲಿ ಕಳೆಯುತ್ತೇನೆ. ಹೊರಗೆ ಹೋಗುವುದು ಅಪರೂಪ. ಮೇನೆಯ ಅಗತ್ಯವಿಲ್ಲ. ಮಂತ್ರಿಮಂಡಲದ ಸಭೆಗಳಿಗೆ ಬರಬೇಕಾದಾಗ ಪ್ರಭುಗಳು ಮೇನೆ ಕಳುಹಿಸಿದರೆ ಸಾಕು,” ಎಂದರು.

ಚೆನ್ನಬಸವಣ್ಣನವರ ವಿರಕ್ತಿ ಸರಳತೆಗಳು ಉಳಿದ ಮಂತ್ರಿಗಳಿಗೆ ವಿಲಕ್ಷಣವಾಗಿ ಕಂಡವು. ಆದರೆ ಬಿಜ್ಜಳನು ಆ ವಿಚಾರವಾಗಿ ಏನೂ ಹೇಳದೆ ಸಲಹೆಗೆ ಒಪ್ಪಿಕೊಂಡನು. ಅವನಿಗೆ ಬೇಕಾಗಿದ್ದುದು ಮಂತ್ರಿಮಂಡಲಕ್ಕೆ ಚೆನ್ನಬಸವಣ್ಣನವರ ಪ್ರವೇಶ. ಅದನ್ನು ಹೇಗೋ ಸಾಧಿಸಿದ್ದಾಯಿತು. ಉಳಿದ ವಿಚಾರಗಳು ಮುಂದೆ ಸಹಜವಾಗಿ ಪರಿಹಾರವಾಗುವುದೆಂದು ಅವನು ತಿಳಿದಿದ್ದನು.

ದೇವಗಿರಿಯ ಯಾಗಶಾಲೆಯಲ್ಲಿ ವೀರಭದ್ರನಂತೆ ಅವತರಿಸಿ ತನ್ನ ಯಾಗವನ್ನು ಕೆಡಿಸಿದ ಶರಣ ಯುವಕನು ಮಂತ್ರಿಯಾಗಿ ತನ್ನೊಡನೆ ಸಮಾನಾಸನದಲ್ಲಿ ಕುಳಿತುದನ್ನು ಕಂಡು ನಾರಣಕ್ರಮಿತನ ಮನಸ್ಸು ಅಳುಕಿತು. ತನ್ನ ಪ್ರತಿಷ್ಠೆ ಮಹತ್ವಾಕಾಂಕ್ಷೆಗಳಿಗೆ ಆತಂಕ ತಂದೊಡ್ಡುವ ರಾಜಕೀಯ ಚತುರತೆ ಈ ಹೊಸ ಮಂತ್ರಿಗಿಲ್ಲವೆಂಬ ಭರವಸೆ ಸಮಾಧಾನವನ್ನುಂಟುಮಾಡಿತು.

ಇನ್ನೂ ಕೆಲವು ದಿನಗಳು ಕಳೆದವು. ಮಾರ್ಗಶಿರ ಮುಗಿದು ಪೌಷ

ಆರಂಭವಾಗಿ ಕೆಲವು ದಿನಗಳು ಕಳೆದವು. ಆಮೇಲೆ ಒಂದು ದಿನ ಅಪರಾಹ್ನ ಅಧ್ಯಯನ ಶಾಲೆಯಲ್ಲಿ ಚೆನ್ನಬಸವಣ್ಣನವರು, ಹಿಂದಿನ ದಿನ ಅನುಭವಮಂಟಪದಲ್ಲಿ ನಡೆದ ಚರ್ಚಾಗೋಷ್ಠಿಯ ವರದಿಯನ್ನು ಪರಿಷ್ಕರಿಸುತ್ತ ಕುಳಿತಿದ್ದಾಗ ಪಸಾಯಿತನು ಓಲೆಯೊಂದನ್ನು ತಂದುಕೊಟ್ಟನು. ಚೆನ್ನಬಸವಣ್ಣನವರು ಅದನ್ನು ಓದಿಕೊಂಡು, ಕೊಂಚ ಹೊತ್ತು ಯೋಚಿಸುತ್ತಿದ್ದು, ಬಳಿಕ ಮಾಚಿದೇವರನ್ನು ಹುಡುಕುತ್ತ ಹೊರಗೆ ಬಂದರು.

ಪ್ರತಿದಿನ ಅಪರಾಹ್ನ ಮೊದಲನೆಯ ಪ್ರಹರಾನಂತರ ಅನುಭವಮಂಟಪದ ಸಭೆ ಪ್ರಾರಂಭವಾಗುವವರೆಗೆ, ಆಪ್ತೇಷ್ಟರಾದ ಕೆಲವು ಮಂದಿ ವೃದ್ಧಶರಣರೊಡನೆ ಮಾತಾಡುತ್ತಾ ಮೊಗಶಾಲೆಯಲ್ಲಿ ಕುಳಿತುಕೊಳ್ಳುವುದು ಮಾಚಿದೇವರ ಪದ್ಧತಿ. ಕೆಲವು ವೇಳೆ ಈ ಮೊಗಶಾಲೆಯ ಚರ್ಚೆ, ಅನುಭವಮಂಟಪದಲ್ಲಿ ಪುನರ್ವಿಮರ್ಶೆಗೆ ಬರುವಷ್ಟು ಪ್ರಾಮುಖ್ಯವಾಗಿರುತ್ತಿತ್ತು.

ಚೆನ್ನಬಸವಣ್ಣನವರನ್ನು ನೋಡುತ್ತಲೆ ಮಾಚಿದೇವರು ಮೊಗಶಾಲೆಯಿಂದೆದ್ದು ಹತ್ತಿರಹೋಗಿ, "ಡಣ್ಣಾಯಕರು ಯಾರನ್ನೋ ಹುಡುಕುತ್ತಿರುವಂತಿದೆ?" ಎಂದರು. ಮಂತ್ರಿಯಾದ ಕೆಲವೇ ದಿನಗಳಲ್ಲಿ ಚೆನ್ನಬಸವಣ್ಣನವರನ್ನು, ಚಿಕ್ಕದಂಡನಾಯಕರು ಅಥವಾ ಡಣ್ಣಾಯಕರು ಎಂದು ಗೌರವದಿಂದ ಕರೆಯುವುದು ರೂಢಿಗೆ ಬಂದಿತ್ತು.

"ನಿಮ್ಮನ್ನೇ ಹುಡುಕುತ್ತಿದ್ದೆ, ಮಾಚಿದೇವಯ್ಯನವರೇ," ಎಂದು ಚೆನ್ನಬಸವಣ್ಣನವರು ಆ ವೃದ್ಧಜಂಗಮನನ್ನು ಸಂಗಡ ಕರೆದುಕೊಂಡು ಪುನಃ ಅಧ್ಯಯನ ಶಾಲೆಗೆ ಬಂದರು. ಅಲ್ಲಿದ್ದ ಸುಖಾಸನದ ಮೇಲೆ ಮಾಚಿದೇವರನ್ನು ಕುಳ್ಳಿರಿಸಿ, ಹತ್ತಿರ ತಾವೂ ಕುಳಿತುಕೊಂಡು,

"ಈಗೊಂದು ಸಮಸ್ಯೆ ಒದಗಿದೆ. ಏನು ಮಾಡಬೇಕೆಂಬುದನ್ನು ನಿರ್ಧರಿಸಲಾರದೆ ನಿಮ್ಮನ್ನು ಹುಡುಕಿದೆ." ಎಂದರು.

"ಡಣ್ಣಾಯಕರು ಬಿಡಿಸಲಾರದ ಸಮಸ್ಯೆಯೂ ಉಂಟೆ?" –ಎಂದು ಮಾಚಿದೇವರು ನಗೆಯಾಡಿದರು.

ವೃದ್ಧ ಜಂಗಮನ ಹಾಸ್ಯಪ್ರವೃತ್ತಿಯನ್ನು ಅರಿತಿದ್ದ ಚೆನ್ನಬಸವಣ್ಣನವರು, "ನಾನೇನು ಸರ್ವಜ್ಞನೇ? ನನ್ನಿಂದ ಬಿಡಿಸಲಾಗದ ಎಷ್ಟೋ ಸಮಸ್ಯೆಗಳು ಜಗತ್ತಿನಲ್ಲಿವೆ. ಅವುಗಳಲ್ಲಿ ಇದೊಂದು," –ಎಂದು ಹೇಳಿ ಕೊಂಚಹೊತ್ತಿಗೆ ಮೊದಲು ಪಸಾಯಿತನು ತಂದುಕೊಟ್ಟ ಓಲೆಯನ್ನು ಮಾಚಿದೇವರಿಗೆ ಕೊಟ್ಟರು.

ಓಲೆಯಲ್ಲಿ ಬಿಜ್ಜಳರಾಯನು ಈ ರೀತಿ ಬರೆದಿದ್ದನು ;

"......ಚಾಲುಕ್ಯ ಚಕ್ರೇಶ್ವರ ಜಗದೇಕಮಲ್ಲರಸರಲ್ಲಿ ಈಚೆಗೆ ಅಂಕುರಿಸಿರುವ

ಧರ್ಮನಿಷ್ಠೆ ನಮ್ಮನ್ನು ತೊಡಕಿನಲ್ಲಿ ಹಾಕಿದೆ. ಮುಂದಿನ ಮಾಘಮಾಸದ ಪರ್ವದಿನಗಳಲ್ಲಿ ಅವರು ಜಂಗಮ ದಾಸೋಹ ನಡೆಸಲು ಅಪೇಕ್ಷಿಸಿದ್ದಾರೆ. ದಾಸೋಹ ಎಷ್ಟು ದಿನಗಳು ನಡೆಯಬೇಕು, ಪ್ರತಿದಿನ ಎಷ್ಟು ಮಂದಿ ಜಂಗಮರಿಗೆ ಆಹ್ವಾನ ಕೊಡಬೇಕು, ಅದಕ್ಕೆ ಬೇಕಾಗುವ ಸಾಮಾನು ಸರಂಜಾಮುಗಳೇನು, ಈ ವಿಚಾರಗಳು ಇನ್ನೂ ನಿರ್ಧರವಾಗಿಲ್ಲ. ರಾಜ ಗೃಹದ ಮನೆಹೆಗ್ಗಡೆಗೆ ಧಾರ್ಮಿಕ ವಿಚಾರಗಳೇನೂ ತಿಳಿಯದು. ಕಾರಣ ನಿಮ್ಮ ಕಡೆಯ ಇಬ್ಬರು ಕಾರ್ಯದರ್ಶಿಗಳನ್ನು ರಾಜಗೃಹಕ್ಕೆ ಕಳುಹಿಸಿ ಈ ಕಾರ್ಯ ಸಮರ್ಪಕವಾಗಿ ನಡೆಯುವಂತೆ ಏರ್ಪಡಿಸಬೇಕಾಗಿ ಕೋರುತ್ತೇನೆ.

"ಜಗದೇಕಮಲ್ಲರಸರ ಇನ್ನೊಂದು ಇಚ್ಛೆ ನಮ್ಮನ್ನು ಇನ್ನೂ ಹೆಚ್ಚಿನ ತೊಂದರೆಗೆ ಗುರಿಪಡಿಸಿದೆ. ಶೈವಧರ್ಮ ಸಾಹಿತ್ಯಗಳಲ್ಲಿ, ಮುಖ್ಯವಾಗಿ ಶರಣಧರ್ಮದಲ್ಲಿ ಪರಿಚಯವುಳ್ಳ ಜಂಗಮರೊಬ್ಬರನ್ನು ಧರ್ಮೋಪದೇಶಕರಾಗಿ ಕಳುಹಿಸಬೇಕೆಂಬುದು ಪ್ರಭುಗಳ ಅಪೇಕ್ಷೆ. ಈ ಹೊಣೆಗಾರಿಕೆಯ ಸ್ಥಾನಕ್ಕೆ ನೇಮಿಸಲ್ಪಡುವ ಜಂಗಮ ಗುರು, ಕೆಲವು ತಿಂಗಳ ಮಟ್ಟಿಗಾದರೂ ಹೊರಗಿನ ಜಗತ್ತಿನೊಡನೆ ಎಲ್ಲ ಸಂಬಂಧವನ್ನೂ ತೊರೆದು ರಾಜಗೃಹದಲ್ಲಿರಬೇಕಾಗುವುದು. ಇದಕ್ಕೆ ತಕ್ಕವರನ್ನು ಆರಿಸುವ ಕಾರ್ಯಭಾರವನ್ನೂ ನಾನು ನಿಮಗೇ ಬಿಟ್ಟಿದ್ದೇನೆ......"

–ಎಂದು ಬಿಜ್ಜಳನು ಓಲೆಯನ್ನು ಮುಗಿಸಿದ್ದನು.

"ಕಲ್ಯಾಣದಲ್ಲಿ ಒಂದು ನೂರಾ ಎಂಟು ಜಂಗಮ ಮಠಗಳಿವೆ. ಅವುಗಳಲ್ಲಿ ಯಾವುದಾದರೂ ಒಂದು ಮಠಕ್ಕೆ ಬರೆದಿದ್ದರೆ ಈ ಎಲ್ಲ ಕಾರ್ಯಗಳನ್ನೂ ನಡೆಸಿಕೊಡುತ್ತಿದ್ದರು. ಹಾಗೆ ಮಾಡದೆ ಬಿಜ್ಜಳರಾಯರು ನಮಗೇ ಬರೆದಿರುವ ಉದ್ದೇಶವೇನು?"

–ಬೇಸರಗೊಂಡವರಂತೆ ಚೆನ್ನಬಸವಣ್ಣನವರು ಹೇಳಿದರು.

ಯಾವ ಮಠಕ್ಕೆ ಬರೆದಿದ್ದರೂ ಅದು ಕೊನೆಯ ನಿರ್ಧಾರಕ್ಕಾಗಿ ಮಹಮನೆಗೇ ಬರುತ್ತಿತ್ತೆಂಬುದು ಬಿಜ್ಜಳರಾಯರಿಗೆ ತಿಳಿದಿದೆ. ಆ ಬಳಸು ಮಾರ್ಗದಿಂದ ತಪ್ಪಿಸಿಕೊಳ್ಳಲು, ಅವರು ನೇರವಾಗಿ ನಿಮಗೇ ಬರೆದಿದ್ದಾರೆ. ಅಲ್ಲದೆ ನೀವು ಅವರ ಧರ್ಮಾಧಿಕರಣದ ಸಚಿವರು," –ಎಂದರು ಮಾಚಿದೇವರು ಅದೇ ದನಿಯಿಂದ.

"ಈಗ ನಾವೇನು ಮಾಡಬೇಕೆಂದು ನಿಮ್ಮ ಸಲಹೆ?"

"ನೀವು ಏನು ಯೋಚಿಸಿದ್ದೀರಿ ?" –ಪ್ರಶ್ನೆಗೆ ಉತ್ತರವಾಗಿ ಮತ್ತೊಂದು ಪ್ರಶ್ನೆ.

ಚನ್ನಬಸವಣ್ಣನವರು ಹೇಳಿದರು : "ಜಗದೇಕಮಲ್ಲರಸರು ಭವಿ. ಅವರು

ನಡೆಸುವ ದಾಸೋಹಕ್ಕೆ ನಾವು ಜಂಗಮರನ್ನು ಕಳುಹಿಸುವುದು ಹೇಗೆ ? ಈ ಧರ್ಮಸೂಕ್ಷ್ಮದ ಅರಿವಿಲ್ಲದೆ ಬಿಜ್ಜಳರಾಯರು ಬರೆದಿದ್ದಾರೆ."

ಮಾಚಿದೇವರು ಕೊಂಚಹೊತ್ತು ಯೋಚಿಸುತ್ತಿದ್ದು ಬಳಿಕ, "ದಾಸೋಹದಲ್ಲಿ ಭವಿ, ಭಕ್ತ ಎಂಬ ಭೇದಭಾವನೆ ಸರಿಯಲ್ಲವೆಂದು ನನ್ನ ಅಭಿಪ್ರಾಯ. ಶರಣ ಧರ್ಮದ ಪ್ರಭಾವದಿಂದ ರಾಜಧಾನಿ ಕಲ್ಯಾಣ ನಗರದಲ್ಲಿ, ಚಾಲುಕ್ಯರಾಜ್ಯದ ಬೇರೆ ಕಡೆಗಳಲ್ಲಿ ಭಕ್ತರಂತೆ ಭವಿಗಳೂ ವರ್ಷದಲ್ಲಿ ಒಂದೆರಡು ಸಾರಿಯಾದರೂ ದಾಸೋಹ ನಡೆಸುತ್ತಾರೆ. ಅವುಗಳಲ್ಲಿ ಭಕ್ತ ಜಂಗಮರೆಂಬ ಭೇದಭಾವವಿಲ್ಲದೆ ಎಲ್ಲರೂ ಭಾಗವಹಿಸುವುದನ್ನು ನೋಡಿದ್ದೇನೆ," ಎಂದರು.

"ಅಂತಹ ವರ್ತನೆ ಶರಣರಿಗೆ ಸಲ್ಲ, ಮಾಚಿದೇವಯ್ಯನವರೇ," ವ್ಯವಸ್ಥಾಪಕನ ಅಧಿಕಾರವಾಣಿಯಿಂದ ಚೆನ್ನಬಸವಣ್ಣನವರೆಂದರು. "ಈಗ ದೇಶದಲ್ಲಿ ಪ್ರಚಾರದಲ್ಲಿರುವ ವೈದಿಕ ತಾಂತ್ರಿಕ ಧರ್ಮಗಳ ನಡುವೆ ಶರಣಧರ್ಮ ತಲೆಯೆತ್ತಿ ನಿಲ್ಲಬೇಕಾದರೆ ಈ ಉಚ್ಛೃಂಖಲ ವರ್ತನೆಯನ್ನು ತಡೆಗಟ್ಟಲು ನಾವು ಕೆಲವು ಕಟ್ಟುಕಾಯಿದೆಗಳನ್ನು ರಚಿಸಿಕೊಳ್ಳಬೇಕಾಗುವುದು. ಅನುಭವಮಂಟಪದಲ್ಲಿ ಪ್ರಭುದೇವರು ಅಧ್ಯಕ್ಷರಾಗಿದ್ದಾಗಲೆ ಈ ವಿಚಾರಗಳು ಚರ್ಚೆಗೆ ಬಂದಿದ್ದವು. ಅಂತ್ಯ ನಿರ್ಧಾರವಾಗಲಿಲ್ಲ."

ಮಾಚಿದೇವರ ಮುಖದಲ್ಲಿ ವಿಡಂಬನೆಯ ಚುಚ್ಚು ನಗೆಯೊಂದು ಮಿಂಚಿ ಮರೆಯಾಯಿತು. ತುಸು ಗಡುಸಾದ ದನಿಯಲ್ಲಿ ಅವರು ಹೇಳಿದರು: "ಶರಣಧರ್ಮವು ವಿಶ್ವಧರ್ಮ. ಪ್ರಭುದೇವರು, ಬಸವಣ್ಣನವರು, ಸಿದ್ಧರಾಮ ಶಿವಯೋಗಿಗಳು, ಇವರೆಲ್ಲ ಅದನ್ನು ವಿಶ್ವಧರ್ಮವನ್ನಾಗಿ ಮಾಡಲು ಪರಿಶ್ರಮಿಸಿದ್ದಾರೆ. ಜಾತಿಮತ ಪಂಥಗಳ ಭೇದವಿಲ್ಲದೆ, ಸ್ತ್ರೀಪುರುಷ, ಬಾಲವೃದ್ಧ, ದರಿದ್ರಸಿರಿವಂತ ಎಂಬ ಅಂತರವಿಲ್ಲದೆ, ಎಲ್ಲ ವರ್ಗದ ಎಲ್ಲ ಮಾನವರಿಗೂ ಮಾರ್ಗದರ್ಶಕ ಜ್ಞಾನಜ್ಯೋತಿಯಾಗಬೇಕು ಶರಣಧರ್ಮ. ಕಾಯಿದೆ ಕಟ್ಟುಗಳಿಂದ ಅದರ ವ್ಯಾಪ್ತಿ ವೈಶಾಲ್ಯಗಳನ್ನು ಸೀಮಿತಗೊಳಿಸಲು ನೀವು ಪ್ರಯತ್ನಿಸಬೇಡಿರಿ. ಬಿಜ್ಜಳನನ್ನು ಕೂಪಮಂಡುಕವೆಂದು ಕರೆದ ನಾವು, ಅವನ ಈ ಸಲಹೆಯನ್ನು ನಿರಾಕರಿಸಿದರೆ ನಿಜವಾಗಿ ನಾವೇ ಕೂಪಮಂಡುಕಗಳಾಗುತ್ತೇವೆ."

"ಹಾಗಾದರೆ ದಾಸೋಹದ ಸಲಹೆಗೆ ನಾವು ಒಪ್ಪಬೇಕೆಂದು ಹೇಳುವಿರಾ?"

"ಅಹುದು, ಅದೇ ನನ್ನ ಅಭಿಪ್ರಾಯ. ರಾಜಕೀಯ ವಿಪರ್ಯಾಸ ಫಲವಾಗಿ ಜಗದೇಕಮಲ್ಲರಸರು ಈಗ ರಾಜಗೃಹದಲ್ಲಿ ಬಂದಿಯಾಗಿದ್ದರೂ ಅವರೇ ಚಾಲುಕ್ಯ ರಾಜ್ಯದ ನಿಜವಾದ ಒಡೆಯರು. ಬಿಜ್ಜಳರಾಯರು ಭುಜಬಲ ಪರಾಕ್ರಮಗಳಿಂದ

ಅರಸೊತ್ತಿಗೆಯನ್ನು ಆಕ್ರಮಿಸಿಕೊಂಡಿದ್ದರೂ ಮುಂದೊಂದು ದಿನ ಚಾಲುಕ್ಯ ಅರಸರಿಗೆ ಅದನ್ನು ಬಿಟ್ಟುಕೊಡಬೇಕಾಗುವುದು. ರಾಜ್ಯದ ಸಾಮಂತ ಮನ್ನೆಯರು ಬಿಜ್ಜಳನ ರಾಜ್ಯಾಪಹಾರವನ್ನು ಒಳಗೊಳಗೇ ವಿರೋಧಿಸುತ್ತಿದ್ದಾರೆ. ಚಾಲುಕ್ಯ ಅಧಿಕಾರವನ್ನು ಪುನಃ ಪ್ರತಿಷ್ಠಿಸುವ ಸಂಚು ನಡೆಯುತ್ತಿದೆ. ನಾವು ರಾಜಕೀಯದಿಂದ ದೂರವಿದ್ದರೂ ಈ ಒಳಗುದಿ ವಿಪ್ಲವಗಳು ಶರಣರ ಅಭ್ಯುದಯಕ್ಕೆ ಸಹಾಯಕವಾಗುವಂತೆ ನಡೆದುಕೊಳ್ಳಬೇಕು. ಜಗದೇಕಮಲ್ಲರಸರು ನಡೆಸಲೆಳಸಿರುವ ಈ ಜಂಗಮ ದಾಸೋಹ, ಶರಣಧರ್ಮದ ಬಗೆಗೆ ಅವರಲ್ಲಿ ಅಂಕುರಿಸಿರುವ ಆಸಕ್ತಿ, ಇವು ನಮಗೆ ಶುಭಸೂಚಕಗಳು. ದಾಸೋಹದ ಪೂರ್ವಸಿದ್ಧತೆಗಾಗಿ ಈ ದಿನವೇ ನೀವು ಮಹಮನೆಯ ಇಬ್ಬರು ಕಾರ್ಯಕರ್ತರನ್ನು ರಾಜಗೃಹಕ್ಕೆ ಕಳುಹಿಸಿದರೆ ಒಳ್ಳೆಯದು."

"ಅದಕ್ಕೆ ಶರಣರ ಅನುಮತಿ ಅಗತ್ಯವಲ್ಲವೆ?"

"ಮೊದಲು ಕಾರ್ಯಾರಂಭ ಮಾಡಿ ಆಮೇಲೆ ಅನುಮತಿ ಕೇಳಬಹುದು. ಶರಣರ ಒಪ್ಪಿಗೆ ದೊರಕುವಂತೆ ನಾನು ನೋಡಿಕೊಳ್ಳುತ್ತೇನೆ." ಮಾಚಿದೇವರ ಭರವಸೆಯ ನುಡಿಗಳಿಂದ ಚೆನ್ನಬಸವಣ್ಣನವರಿಗೆ ಸಮಾಧಾನ ಮೂಡಿತು.

"ಇನ್ನು ಧರ್ಮೋಪದೇಶಕನ ವಿಚಾರ. ಜಗದೇಕಮಲ್ಲರಸರ ಮನವರಿತು ಸಮಯೋಚಿತವಾಗಿ ನಡೆಯಬಲ್ಲ ತತ್ವದರ್ಶಿ ಜಂಗಮನನ್ನು ನಾವೆಲ್ಲಿ ಹುಡುಕುವುದು? ರಾಜಗೃಹದಲ್ಲಿ ಚಾಲುಕ್ಯ ಅರಸನೊಡನೆ ಬಂಧಿಯಾಗಿರಲು ಶರಣರಾರೂ ಒಪ್ಪುವುದಿಲ್ಲ," –ಎಂದು ಅವರು ಉದ್ಗಾರ ತೆಗೆದರು.

"ಅದಕ್ಕೆ ತಕ್ಕವರಿದ್ದಾರೆ. ಡಣ್ಣಾಯಕರು ಯೋಚಿಸಬೇಕಾಗಿಲ್ಲ."

–ಮಾಚಿದೇವರು ಹೇಳಿದರು.

"ಮಹಮನೆಯ ಶರಣರಲ್ಲಿ ಅಂತಹವರಾರೂ ನನಗೆ ಕಾಣುತ್ತಿಲ್ಲ."

"ಅವರು ಮಹಮನೆಯ ಅತಿಥಿಗೃಹದಲ್ಲಿಯೇ ಬಿಡಾರ ಮಾಡಿದ್ದಾರೆ."

"ಯಾರು ಅವರು?" –ಚೆನ್ನಬಸವಣ್ಣನವರು ಕುತೂಹಲದಿಂದ ಕೇಳಿದರು.

"ಬ್ರಹ್ಮೇಂದ್ರ ಶಿವಯೋಗಿ."

"ಆ ಹೆಸರಿನವರೊಬ್ಬರು ಮಹಮನೆಯಲ್ಲಿದ್ದಾರೆಯೆ?"

"ಕಳೆದ ನಾಲ್ಕು ವಾರಗಳಿಂದ ಪ್ರತಿ ಶನಿವಾರ ಅನುಭವಮಂಟಪದಲ್ಲಿ ಅವರ ಪ್ರವಚನ ನಡೆಯುತ್ತಿದೆ. ಮೊದಲೆರಡು ಪ್ರವಚನಗಳನ್ನು ಕೇಳಿ ನೀವೂ ಅವರನ್ನು ಮೆಚ್ಚಿಕೊಂಡಿರಿ."

ಆಗ ಚೆನ್ನಬಸವಣ್ಣನವರಿಗೆ ನೆನಪಾಯಿತು.

ಮಾಚಿದೇವರು ಮುಂದುವರಿಸಿ, "ಅವರು ಬೆಳವಳ ಪ್ರಾಂತದವರು. ಶ್ರೀಶೈಲ ಯಾತ್ರೆಯಿಂದ ಹಿಂದಿರುಗುತ್ತಾ ಬಸವಣ್ಣನವರ ನಿರ್ವಾಸನದ ಸುದ್ದಿ ಕೇಳಿ ಶರಣರಿಗೆ ನೆರವು ನೀಡಲು ಕಲ್ಯಾಣಕ್ಕೆ ಬಂದರು. ಶೈವಶರಣ ಧರ್ಮಗಳ ಬಗೆಗೆ ಅಧ್ಯಯನ ಮಾಡಿದ್ದಾರೆ."

"ರಾಜಗೃಹಕ್ಕೆ ಹೋಗಲು ಅವರು ಒಪ್ಪುವರೆ ?"

"ಒಪ್ಪಿಸುವ ಭರವಸೆ ನನಗಿದೆ. ಬಿಜ್ಜಳರಾಯರಿಗೆ ಇಂದೇ ನೀವು ಪತ್ರ ಬರೆಯಬಹುದು."

ಅದರಂತೆ ಚೆನ್ನಬಸವಣ್ಣನವರು,

"ರಾಜಗೃಹದ ದಾಸೋಹದ ವ್ಯವಸ್ಥೆಗಾಗಿ ಈ ದಿನ ಇಬ್ಬರು ಕಾರ್ಯಕರ್ತರನ್ನು ಕಳುಹಿಸಿದ್ದೇನೆ. ಧರ್ಮೋಪದೇಶಕರ ಸ್ಥಾನಕ್ಕೆ ಬ್ರಹ್ಮೇಂದ್ರ ಶಿವಯೋಗಿ ಎಂಬ ಹೆಸರಿನ ಜಂಗಮರಿದ್ದಾರೆ. ನಿಮಗೆ ಒಪ್ಪಿಗೆಯಾದರೆ ಅವರು ರಾಜಗೃಹದಲ್ಲಿರಲು ಅನುಮತಿಯ ಆಜ್ಞೆ ಕಳುಹಿಸಿಕೊಡಬೇಕಾಗಿ ಕೋರುತ್ತೇನೆ. ಅವರ ಅಂತೇವಾಸಿ ಹರೀಶರುದ್ರ ಎಂಬ ಹೆಸರಿನ ಇನ್ನೊಬ್ಬ ತರುಣ ಜಂಗಮನೂ ಸಂಗಡಿರಬೇಕಾಗುವುದು," –ಎಂದು ಓಲೆ ಬರೆದು ಕಳುಹಿಸಿದರು.

ಬಿಜ್ಜಳನು ಸಲಹೆಗೆ ಒಪ್ಪಿ ಮರುದಿನವೇ, ಬ್ರಹ್ಮೇಂದ್ರ ಶಿವಯೋಗಿಯನ್ನು ಚಾಲುಕ್ಯ ಚಕ್ರೇಶ್ವರ ಜಗದೇಕಮಲ್ಲರಸರ ಧರ್ಮೋಪದೇಶಕರಾಗಿ ನೇಮಿಸುವ ನಿರೂಪವನ್ನೂ, ಅವರಿಗೂ ಅವರ ಶಿಷ್ಯನಿಗೂ ರಾಜಗೃಹದಲ್ಲಿ ಬಿಡಾರವೇರ್ಪಡಿಸಲು ಮನೆಹೆಗ್ಗಡೆಗೆ ಆಜ್ಞಾಪತ್ರವನ್ನೂ ಬರೆಯಿಸಿ ಚೆನ್ನಬಸವಣ್ಣನವರಿಗೆ ಕಳುಹಿಸಿದನು.

ಈ ವಿಚಾರ ತಿಳಿದ ಕೂಡಲೆ ಮಾಚಿದೇವರು ಬ್ರಹೇಂದ್ರ ಶಿವಯೋಗಿಗೆ ಹೇಳಿ ಕಳುಹಿಸಿದರು. ಈ ಅವಧಿಯಲ್ಲಿ ಬೊಮ್ಮರಸನಿಗೆ ಕೃತಕ ಗಡ್ಡ ಮೀಸೆಗಳು ವಾಸ್ತವವೆನಿಸುವಷ್ಟು ಸಹಜವಾಗಿ ಕಾಣುತ್ತಿದ್ದವು. ಹಗಲೆಲ್ಲ ಕಟ್ಟಿಕೊಂಡಿದ್ದು ರಾತ್ರಿ ಮಲಗುವಾಗ ತೆಗೆದಿಟ್ಟು ಪುನಃ ಎದ್ದಾಗ ಕೆಲವೇ ಕ್ಷಣಗಳಲ್ಲಿ ಕಟ್ಟಿಕೊಳ್ಳುವುದನ್ನು ಅವನು ಅಭ್ಯಾಸ ಮಾಡಿಕೊಂಡನು.

ದಿನದಿನಕ್ಕೆ ಉತ್ತಮವಾಗುತ್ತಿದ್ದ ಈ ಕೈಚಳಕವನ್ನು ಗಮನಿಸಿದ ಬ್ರಹ್ಮಶಿವನು "ಹಿಂದಿನ ಯಾವುದೋ ಜನ್ಮದಲ್ಲಿ ನೀವು ರಾವಣ ಸನ್ಯಾಸಿಯಾಗಿರಬೇಕು. ಅದರಿಂದಲೆ ಈ ಕೃತಕ ಗಡ್ಡ ಮೀಸೆಗಳು ನಿಮಗೆ ಇಷ್ಟು ಒಪ್ಪುತ್ತವೆ," ಎಂದು ಹಾಸ್ಯ ಮಾಡಿದ್ದನು.

"ಸೀತೆಯನ್ನು ಕದ್ದೊಯ್ಯಲು ರಾವಣನಿಗೆ ಸಹಾಯ ಮಾಡಿದ ಮಾರೀಚ ಋಷಿಯ ವಂಶದಲ್ಲಿ ಹುಟ್ಟಿದವನು ನೀನು, ಬ್ರಹ್ಮಶಿವ. ಅದರಿಂದಲೆ ಗಡ್ಡ ಮೀಸೆ

ಕಟ್ಟಿ ನನ್ನನ್ನು ಕುಣಿಸುತ್ತಿರುವೆ," ಎಂದು ಬೊಮ್ಮರಸನು ಉತ್ತರ ಕೊಟ್ಟಿದ್ದನು.

"ನಿಮಗೆ ಈ ವೇಷ ಬೇಸರವಾಗಿದ್ದರೆ ಯಾತ್ರೆಯ ನೆವದಿಂದ ಮಹಮನೆಯನ್ನು ಬಿಟ್ಟು ಕಲ್ಯಾಣದ ಸಮೀಪದ ಯಾವುದಾದರೊಂದು ಅರಣ್ಯದಲ್ಲಿ ಕೆಲವು ದಿನಗಳಿದ್ದು ಬರಬಹುದು," ಎಂದು ಬ್ರಹ್ಮಶಿವನು ಸಲಹೆ ಮಾಡಿದನು.

ಆದರೆ ಸದ್ಯದಲ್ಲಿ ಅವರು ಮಹಮನೆಯ ಆಶ್ರಯವನ್ನು ಬಿಡುವಂತಿರಲಿಲ್ಲ. ಒಂದು ಕಡೆ ಬಿಜ್ಜಳನ ಬೇಹುಗಾರರ ಭೀತಿ, ಇನ್ನೊಂದು ಕಡೆ ದೇವಗಿರಿಯಿಂದ ಮಹಾರಾಣಿ ಕಾಮೇಶ್ವರೀದೇವಿಯ ಆಜ್ಞೆಯ ನಿರೀಕ್ಷಣೆ, ಇವು ಕಬ್ಬಿಣದ ಸರಪಣಿಗಳಂತೆ ಅವರನ್ನು ಮಹಮನೆಗೆ ಬಂಧಿಸಿದ್ದವು.

ಅಗ್ಗಳನು ಕಾಣೆಯಾದ ವಿಚಾರವಾಗಿ ದೇವಗಿರಿಗೆ ವರದಿ ಕಳುಹಿಸಲು ಬೊಮ್ಮರಸನು ತನ್ನಲ್ಲಿ ಉಳಿದಿದ್ದ ಸ್ವಲ್ಪ ಹಣದಲ್ಲಿ ಹತ್ತು ವರಹಗಳನ್ನು ವೆಚ್ಚಮಾಡಿದ್ದನು. ಅವಸರದ ಭಟನನ್ನು ದೇವಗಿರಿಗೆ ಕಳುಹಿಸಿ ಒಂದು ವಾರವಾದರೂ ಇನ್ನೂ ಉತ್ತರ ಬಂದಿರಲಿಲ್ಲ. "ರಾಣಿಯ ಉದ್ದೇಶ ತಿಳಿದ ಮೇಲೆ ಅದಕ್ಕೆ ಸರಿಹೋಗುವಂತೆ ನಾವು ಕಾರ್ಯಕ್ರಮವನ್ನು ನಿರ್ಧರಿಸಬೇಕು," ಎಂದು ಅವನು ಯೋಚಿಸಿದನು.

ಈ ವಿಚಾರಗಳನ್ನು ಚಿಂತಿಸುತ್ತ ಬ್ರಹ್ಮಶಿವ ಬೊಮ್ಮರಸರು ತಮ್ಮ ಬಿಡಾರದಲ್ಲಿ ಕುಳಿತಿದ್ದಾಗ ಶರಣನೊಬ್ಬನು ಅಲ್ಲಿಗೆ ಬಂದು, "ಮಾಚಿದೇವಯ್ಯನವರು ನಿಮ್ಮನ್ನು ಕರೆಯುತ್ತಾರೆ," ಎಂದು ಹೇಳಿದನು.

"ಬರುವುದಾಗಿ ತಿಳಿಸು," ಎಂದು ಹೇಳಿ ಶರಣನನ್ನು ಕಳುಹಿಸಿ ಬೊಮ್ಮರಸನು, "ನನ್ನ ಎಡಗಣ್ಣು ಹಾರುತ್ತಿದೆ, ಬ್ರಹ್ಮಶಿವ. ಇಷ್ಟು ದಿನ ನಮ್ಮನ್ನು ಮರೆತಿದ್ದ ಮಾಚಿದೇವರು ಇಂದೇಕೆ ಹೇಳಿಕಳುಹಿಸಿದ್ದಾರೆ. ನಮ್ಮ ವಂಚನೆ ಅವರಿಗೆ ತಿಳಿದಿರಬಹುದೇ ?" ಎಂದನು.

ಬ್ರಹ್ಮಶಿವನು ನಕ್ಕು, "ನನ್ನ ಬಲಗಿವಿ ಹಾರುತ್ತಿದೆ. ಯಾವುದೋ ಶುಭ ವಾರ್ತೆ ನಮಗಾಗಿ ಕಾದಿರಬೇಕು ಅಲ್ಲಿ," ಎಂದನು.

"ನಿನ್ನ ಉಪಹಾಸ ನಿಲ್ಲಲಿ, ಬ್ರಹ್ಮಶಿವ. ಇಷ್ಟು ದಿನ ನಾವು ಆ ಚಾಣಾಕ್ಷ ಮುದುಕನಿಂದ ತಪ್ಪಿಸಿಕೊಂಡಿದ್ದೆವು. ಈ ದಿನ ಸಿಕ್ಕಿಬೀಳುವುದು ಖಂಡಿತ" – ಎಂದು ಗೊಣಗಿದನು ಬೊಮ್ಮರಸ.

"ಸಿಕ್ಕಿ ಬೀಳುವುದು ನಮ್ಮ ಹಣೆಯಲ್ಲಿ ಬರೆದಿದ್ದರೆ ರೆಕ್ಕೆ ಮುರಿದ ಹಕ್ಕಿಯಂತೆ ಗೂಡಲ್ಲಿ ಕುಳಿತು ಸಾಯಬೇಕೆ? ಗರುಡನಂತೆ ಹಾರಾಡುತ್ತ ಸಿಕ್ಕಿಬೀಳುವುದು ಉತ್ತಮ."

–ಎಂದು ಬ್ರಹ್ಮಶಿವನೆದ್ದು ಹೊರಡಲು ಸಿದ್ಧನಾದನು. ಗಡ್ಡ ಮೀಸೆ ಜಟೆ

ಮುಂತಾದ ಪರಿಕರಣಗಳನ್ನು ಸರಿಪಡಿಸಿಕೊಂಡು ಬೊಮ್ಮರಸನೂ ಅವನ ಹಿಂದೆ ಹೋದನು.

ಎಂದಿನಂತೆ ಅನುಭವಮಂಟಪದ ಮೊಗಶಾಲೆಯಲ್ಲಿ ಕುಳಿತಿದ್ದ ಮಾಚಿದೇವರು, ಮಿದುನಗೆಯಿಂದ ಅವರನ್ನು ಸ್ವಾಗತಿಸಿ,

"ನಮ್ಮ ಕೀರ್ತಿಪ್ರತಾಪಗಳ ವರದಿ ಬಿಜ್ಜಳರಾಯರನ್ನು ಮುಟ್ಟಿವೆ, ಬ್ರಹ್ಮೇಂದ್ರ ಶಿವಯೋಗಿಗಳೆ," ಎಂದರು.

ಮಾಚಿದೇವರ ಸಹಜ ಮಂದಹಾಸ ಬೊಮ್ಮರಸನಿಗೆ ಕುಹಕದ ಕಿಡಿಯಾಗಿ ಕಂಡಿತು. ಮಾತು ಕುಚೋದ್ಯದ ಬಿರುನುಡಿಯಾಯಿತು. ತಬ್ಬಿಬ್ಬಾಗಿ, "ಕೀರ್ತಿ ! ಪ್ರತಾಪ ! ಬಿ–ಬಿ–ಬಿಜ್ಜಳರಾಯರು ! ನಿಮ್ಮ ಮಾತು ನನಗೆ ಅರ್ಥವಾಗಲಿಲ್ಲ," ಎಂದನು ಅವನು.

"ನಿಮ್ಮ ಕೀರ್ತಿ ಪ್ರತಾಪಗಳಿಗೆ ಮೆಚ್ಚಿದ ಬಿಜ್ಜಳರಾಯರು ನಿಮ್ಮ ವಿಷಯವಾಗಿ ನಮಗೊಂದು ಆಜ್ಞೆ ಕಳುಹಿಸಿದ್ದಾರೆ." ಮಾಚಿದೇವರು ತುಸು ಗಂಭೀರವಾಗಿ ಹೇಳಿದರು.

'ಇನ್ನೇನು ನನ್ನ ಅವತಾರ ಮುಗಿದಂತೆಯೇ !' ಎಂದು ಭಾವಿಸಿ ಬೊಮ್ಮರಸನು ನಿಲ್ಲಲಾರದೆ ಬ್ರಹ್ಮಶಿವನ ಹೆಗಲ ಮೇಲೆ ಕೈಯಿಟ್ಟನು. ದೇಹ ಥರ ಥರ ಕಂಪಿಸಿತು, ಹಣೆಯಲ್ಲಿ ಬೆವರಿನ ಹನಿಗಳೂ ಮೂಡಿದವು.

ಮಾಚಿದೇವರು ತೀವ್ರ ದೃಷ್ಟಿಯಿಂದ ಬೊಮ್ಮರಸವನ್ನು ನಿಟ್ಟಿಸಿ, "ನಿಮ್ಮಂಥ ಯೋಗಿಗಳನ್ನೂ ನಡುಗಿಸುವಂತಹ ಭಯಂಕರ ರಾಕ್ಷಸನೇ ಬಿಜ್ಜಳರಾಯನು!" ಎಂದರು.

"ಗುರುಗಳು ಈಗತಾನೇ ಧ್ಯಾನದಿಂದೆದ್ದರು. ಅದರಿಂದಲೆ ಅವರ ಮೈನಡುಗುತ್ತಿರುವುದು. ಒಂದೊಂದು ಸಾರಿ ಹೀಗಾಗುವುದುಂಟು." – ತಲೆಮರೆಸಿಕೊಂಡಿದ್ದ ಬುದ್ಧಿಚತುರತೆಗಳನ್ನು ಹೊಡೆದೆಬ್ಬಿಸಿ ಎಳೆತಂದು ಮಾಚಿದೇವರ ಮುಂದೆ ನಿಲ್ಲಿಸಿದಂತೆ ಬ್ರಹ್ಮಶಿವನು ಉತ್ತರ ಕೊಟ್ಟನು.

ಧ್ಯಾನದಲ್ಲಿ ಕುಳಿತು ಸಮಾಧಿಮಗ್ನರಾದವರು ಎಚ್ಚೆತ್ತ ಮೇಲೆ ಸ್ವಲ್ಪ ಹೊತ್ತು ದೇಹ ಕಂಪಿಸುವುದೆಂಬುದನ್ನು ಮಾಚಿದೇವರು ತಿಳಿದಿದ್ದರು. ಬ್ರಹ್ಮಶಿವನ ವಿವರಣೆಯಿಂದ ಬ್ರಹ್ಮೇಂದ್ರ ಶಿವಯೋಗಿಯಲ್ಲಿ ಅವರ ಗೌರವ ಹೆಚ್ಚಿತು.

ಬದಲಿಸಿದ ಕಂಠದಿಂದ ಅವರು, "ಹೀಗೆ ಕುಳಿತುಕೊಳ್ಳಿರಿ, ಯೋಗಿವರ್ಯರೆ. ಕೊಂಚಹೊತ್ತು ವಿಶ್ರಮಿಸಿಕೊಂಡು ಬರಬಹುದಾಗಿತ್ತು. ಈ ತಿಳಿಗೇಡಿ ಹರೀಶರುದ್ರ ಅವಸರ ಮಾಡಿದನೆಂದು ಕಾಣುತ್ತದೆ" ಎಂದರು.

ತನ್ನ ಬುದ್ಧಿ ಚತುರತೆಯ ಪುರಸ್ಕಾರವಾಗಿ ತಿಳಿಗೇಡಿ ಪ್ರಶಸ್ತಿಯನ್ನು ಪಡೆದ

ಬ್ರಹ್ಮಶಿವನು, ಕಟುಕನ ಮುಂದೆ ನಿಂತ ಅಸಹಾಯಕ ಕುರಿಯಂತೆ ತಲೆಬಾಗಿ ಬೆದರಿಕೆಯ ನಟನೆ ತೋರಿದನು.

ಬೊಮ್ಮರಸನು ಚೇತರಿಸಿಕೊಂಡು, "ಆಜ್ಞೆಯೇನು ಮಾಚಿದೇವಯ್ಯನವರೆ? ನಾವದನ್ನು ನೋಡಬಹುದೇ?" ಎಂದನು.

"ಚಾಲುಕ್ಯ ಚಕ್ರೇಶ್ವರ ಜಗದೇಕಮಲ್ಲರಸರ ಹೆಸರು ಕೇಳಿದ್ದೀರಾ ನೀವು?"

ಮಾಚಿದೇವರ ಪ್ರಶ್ನೆಯಿಂದ ಬೊಮ್ಮರಸ ಪುನಃ ಬೆದರಿ, "ಏನಾಯಿತು ಅವರಿಗೆ?" ಎಂದು ಕೇಳಿದನು.

"ಅವರಿಗೇನೂ ಆಗಿಲ್ಲ. ನಿಮ್ಮನ್ನು ಅವರ ಧರ್ಮೋಪದೇಶಕರಾಗಿ ನೇಮಿಸಿ ಬಿಜ್ಜಳರಾಯರು ನಿರೂಪ ಕಳುಹಿಸಿದ್ದಾರೆ," –ಎಂದು ಹೇಳಿ ಮಾಚಿದೇವರು ಆಜ್ಞಾಪತ್ರವನ್ನು ಬೊಮ್ಮರಸನಿಗೆ ಕೊಟ್ಟರು.

ಪತ್ರವನ್ನು ಓದುತ್ತ ಬೊಮ್ಮರಸನು ಚಿಂತಿಸಿದನು –'ಇದೇನು ಕನಸೇ, ವಾಸ್ತವವೇ ? ಕಳೆದ ಕೆಲವು ತಿಂಗಳಿಂದ ನಾನು ಯಾರನ್ನು ನೋಡಲು ಪ್ರಯತ್ನಿಸಿ ವಿಫಲನಾಗಿದ್ದೆನೋ ಆ ನನ್ನ ಯೌವನದ ಗೆಳೆಯ, ರಾಜಗೃಹದಲ್ಲಿ ಬಂಧಿಸಲ್ಪಟ್ಟ ಚಾಲುಕ್ಯ ಅರಸು, ಜಗದೇಕಮಲ್ಲನಿಗೆ ನಾನು ಧರ್ಮೋಪದೇಶಕ! ಸ್ವಯಂ ಬಿಜ್ಜಳರಾಯನ ಆಜ್ಞೆಯಿಂದ ! ಕನಸಿನಲ್ಲಲ್ಲದೆ ಜಾಗ್ರತ ಜಗತ್ತಿನಲ್ಲಿ ಇದು ಸಾಧ್ಯವೇ?

....ಅಥವಾ .....ಅಥವಾ....ಬೇಹುಗಾರರಿಂದ ಎಲ್ಲವನ್ನೂ ತಿಳಿದ ಬಿಜ್ಜಳನು ತನ್ನನ್ನು ಬಂಧನದಲ್ಲಿಡಲು ಮಾಡಿದ ವಿಡಂಬನೆಯ ಆಜ್ಞೆಯೇ ಇದು!'

"ಬಿಜ್ಜಳರಾಯರಿಗೆ ನಮ್ಮ ವಿಚಾರ ತಿಳಿದದ್ದು ಹೇಗೆ?" – ಕೆಲವು ಕ್ಷಣಗಳ ಮೇಲೆ ಬೊಮ್ಮರಸನು ಪ್ರಶ್ನಿಸಿದನು.

"ಅನುಭವಮಂಟಪದಲ್ಲಿ ನಿಮ್ಮ ಪ್ರವಚನಗಳನ್ನು ಕೇಳಿದವರು ವರದಿ ಮಾಡಿರಬಹುದು."

ಬೊಮ್ಮರಸನಿಗೆ ಧೈರ್ಯಮೂಡಿತು. ವಾಸ್ತವ ಪರಿಸ್ಥಿತಿ ತಾನು ನಿರೀಕ್ಷಿಸಿದಷ್ಟು ಕೆಟ್ಟಿಲ್ಲವೆಂದು ತಿಳಿದನು.

ಮಾಚಿದೇವರು ಮುಂದುವರೆದು, "ಅದೇನೇ ಇರಲಿ, ಶೈವಶರಣಧರ್ಮಗಳಲ್ಲಿ ನೀವು ಪರಿಣತ ಪಂಡಿತರೆಂದು ಬಿಜ್ಜಳರಾಯರ ನಂಬಿಕೆ. ಅದರಿಂದಲೆ ವಿಷಯಾಸಕ್ತರೆಂದು ವಿಖ್ಯಾತರಾದ ಜಗದೇಕಮಲ್ಲರಸರನ್ನು ಧರ್ಮಮಾರ್ಗಕ್ಕೆ ತಿರುಗಿಸುವ ದೊಡ್ಡ ಹೊಣೆಯನ್ನು ನಿಮ್ಮ ಮೇಲೆ ಹಾಕಿದ್ದಾರೆ. ಆ ಕಾರ್ಯವನ್ನು ನೀವು ಚಾತುರ್ಯ ದಕ್ಷತೆಗಳಿಂದ ನಿರ್ವಹಿಸಬೇಕು," ಎಂದು ಮುಗಿಸಿದರು.

* * *

ಮಾಚಿದೇವರ ಸಲಹೆಯಂತೆ ಚೆನ್ನಬಸವಣ್ಣನವರು ನಗರದಿಂದ ರಥವನ್ನು

ತರಿಸಿ ಬ್ರಹ್ಮೇಂದ್ರ ಶಿವಯೋಗಿಯನ್ನೂ ಅವರ ಅಂತೇವಾಸಿ ಹರೀಶರುದ್ರನನ್ನೂ ರಾಜಗೃಹಕ್ಕೆ ಕಳುಹಿಸಿದರು. ಹೋಗುವಾಗ ಶೈವ ಶರಣಧರ್ಮಗಳಿಗೆ ಸಂಬಂಧಿಸಿದ ಕೆಲವು ಹೊತ್ತಗೆಗಳನ್ನು ಪಾರಿತೋಷಕವಾಗಿ ಕೊಡಲು ಮರೆಯಲಿಲ್ಲ.

ಧರ್ಮೋಪದೇಶಕರು ಬರುವ ವಿಚಾರ ಮೊದಲೇ ತಿಳಿದಿದ್ದ ಮನೆಹೆಗ್ಗಡೆ ಅವರನ್ನು ರಾಜಗೃಹದ ಮಹಾದ್ವಾರದಲ್ಲಿ ಎದುರುಗೊಂಡು, ಗೌರವದಿಂದ ಅರಮನೆಯ ಅತಿಥಿಶಾಲೆಯಲ್ಲಿ ಮೊದಲೇ ಸಿದ್ಧವಾಗಿದ್ದ ಭದ್ರಾಸನದ ಮೇಲೆ ಕುಳ್ಳಿರಿಸಿ ಫಲಪುಷ್ಪ ತಾಂಬೂಲಗಳಿಂದ ಸತ್ಕರಿಸಿದನು.

ಸಂತುಷ್ಟನಾದ ಬೊಮ್ಮರಸನಿಗೆ ಸ್ವಲ್ಪಹೊತ್ತಿಗೆ ಮೊದಲು ದಾರಿಯಲ್ಲಿ ತನ್ನ ಮತ್ತು ಬ್ರಹ್ಮಶಿವನ ನಡುವೆ ನಡೆದ ಮಾತುಕತೆಗಳ ನೆನಪಾಯಿತು.....ಅವರು ಕುಳಿತಿದ್ದ ರಥ ಮರಗಿಡಗಳಿಂದ ನಿಬಿಡವಾದ ಒಂದು ನಿರ್ಜನ ಪ್ರದೇಶಕ್ಕೆ ಬಂದಾಗ ಬೊಮ್ಮರಸನು, "ಸ್ಥಳ ಅನುಕೂಲವಾಗಿದೆ. ನಾವು ರಥದಿಂದಿಳಿದು ಮರಗಿಡಗಳ ನಡುವೆ ತಪ್ಪಿಸಿಕೊಳ್ಳಬಹುದು," ಎಂದಿದ್ದನು.

ಬ್ರಹ್ಮಶಿವನು ನಕ್ಕು, "ಬಿಜ್ಜಳನ ಭಟರು ರಥವನ್ನು ಹಿಂಬಾಲಿಸುತ್ತಿದ್ದಾರೆ. ಅವರ ಕೈಗೆ ಸಿಕ್ಕಿ, ಕೊರಡೆಯೇಟು ತಿಂದು ಸೆರೆಮನೆಗೆ ಹೋಗುವುದು ನಿಮ್ಮಿಚ್ಛೆಯಾದರೆ ಹಾಗೆ ಮಾಡಬಹುದು," ಎಂದು ಕುಹಕವಾಡಿದ್ದನು.

"ಹಾಗಾದರೆ ರಾಜಗೃಹಕ್ಕೆ ಹೋಗಿ ನಾವಾಗಿ ಭಟರ ವಶವಾಗುವುದು ನಿನ್ನ ಇಷ್ಟವೆ?" –ಎಂದಿದ್ದನು ಬೊಮ್ಮರಸ.

ಬ್ರಹ್ಮಶಿವನು ಕೂಡಲೆ ಉತ್ತರ ಕೊಡಲಿಲ್ಲ. ಕೊಂಚಹೊತ್ತು ಯೋಚಿಸುತ್ತಿದ್ದು ಬಳಿಕ ಗಂಭೀರವಾಗಿ,

"ಈಗ ನಾವು ಬೊಮ್ಮರಸ, ಬ್ರಹ್ಮಶಿವ ಪಂಡಿತರಲ್ಲ. ನೀವು ಬ್ರಹ್ಮೇಂದ್ರ ಶಿವಯೋಗಿ, ನಾನು ನಿಮ್ಮ ಅಂತೇವಾಸಿ ಹರೀಶರುದ್ರ. ಮಾಚಿದೇವ ಚೆನ್ನಬಸವಣ್ಣನವರಂತಹ ಮಹಿಮಾಪುರುಷರ ಶುಭಾಶಯಗಳನ್ನು ಪಡೆದು, ರಾಜಗೃಹವೆಂಬ ಕತ್ತಲೆಯ ಸಿರಿಮನೆಗೆ ಗುರುಮನೆಯ ದೀಪಗಳಂತೆ ಹೋಗುತ್ತಿದ್ದೇವೆ. ಕರ್ತಾರನು ನಮಗಲ್ಲಿ ಸೆರೆಮನೆಯ ವಾಸ ಕೊಡಲಿ, ಅರಮನೆಯ ಭೋಗಕೊಡಲಿ, ಪರಮಗುರು ಪ್ರಸಾದವೆಂದು ಸ್ವೀಕರಿಸುವುದು ಈಗಿನ ನಮ್ಮ ವೇಷಭೂಷಣಗಳಿಗೆ ತಕ್ಕ ಕಾರ್ಯ. ಹಾಗಲ್ಲದೆ ರಥದಿಂದಿಳಿದು ಓಡಿಹೋದರೆ ಗುರುಮನೆಯ ಗೌರವಕ್ಕೆ ಹಾನಿತಂದು ಬೀದಿಯ ಭಂಡರಂತೆ ಹಗರಣಕ್ಕೀಡಾಗುವೆವು," ಎಂದಿದ್ದನು.

ಬ್ರಹ್ಮಶಿವನು ಹೇಳಿದಂತೆ ಇದುವರೆಗೆ ಎಲ್ಲವೂ ಗುರುಮನೆಯ ಗೌರವಕ್ಕೆ ತಕ್ಕಂತೆ ನಡೆದಿದೆ. ಆದರೆ ಆ ಗೌರವವನ್ನುಳಿಸಿಕೊಳ್ಳುವ ಶಕ್ತಿ ನಮಗಿದೆಯೆ?

ಎಂದು ಬೊಮ್ಮರಸನು ಯೋಚಿಸುತ್ತಿದ್ದಂತೆ.....

ಪ್ರಭುಗಳ ಧರ್ಮೋಪದೇಶಕರಾಗಿ ಬಂದಿರುವ ಜಂಗಮಗುರುಗಳ ಪಾದಗಳಿಗೆ ವಂದಿಸಿ, ಆಶೀರ್ವಾದ ಪಡೆಯಲು ರಾಜಗೃಹದ ಗಣಿಕಾವಾಸದ ಹೆಗ್ಗಡತಿಯರ ತಂಡ ಅಲ್ಲಿಗೆ ಬಂದಿತು.

ಬೇಟೆಯ ದುರ್ಘಟನೆಯ ಅನಂತರ ಜಗದೇಕಮಲ್ಲನಲ್ಲಿ ಅಂಕುರಿಸಿದ ವಿರಕ್ತಿಗೆ ಹೆಗ್ಗಡತಿಯರಲ್ಲಿ ಮೂವರು ಮಾತ್ರ ಬಲಿಯಾಗಿದ್ದರು. ಪಾನಗೋಷ್ಠಿಯಲ್ಲಿ ಅಸಭ್ಯತೆಯಿಂದ ವರ್ತಿಸುತ್ತಿದ್ದುದು ಅವರ ಪರಿತ್ಯಾಗದ ಮುಖ್ಯ ಕಾರಣವಾಗಿತ್ತು. ಉಳಿದ ಕೆಲವು ಹೆಗ್ಗಡತಿಯರು ಮತ್ತು ಮನೆಹೆಗ್ಗಡೆ ಎಂದಿನಂತೆ ಪ್ರಭುಗಳ ಕೃಪಾಶ್ರಯದ ಸುಖವಾಸದಲ್ಲಿದ್ದರು. ಅವರೊಬ್ಬೊಬ್ಬರೂ ಮೊದಲು ಬೊಮ್ಮರಸನ, ಅನಂತರ ಬ್ರಹ್ಮಶಿವನ ಕಾಲುಗಳನ್ನು ಮುಟ್ಟಿ ನಮಸ್ಕಾರ ಮಾಡಿ ಆಶೀರ್ವಾದ ರೂಪವಾದ ಫಲಪುಷ್ಪಗಳನ್ನು ಪಡೆದುಹೋಗಲು ಸುಮಾರು ಅರ್ಧ ಪ್ರಹರಕಾಲ ಹಿಡಿಯಿತು.

ಆ ದೀರ್ಘಕಾಲದಲ್ಲಿ ಜಂಗಮದೇವರಿಗೆ ಆಯಾಸವಾಗದಿರಲೆಂದು ಆಗಿಂದಾಗ ಬಿಸಿ ಕೇಸರಿಹಾಲನ್ನು ಕುಡಿಯಲು ಕೊಡಲು ಮನೆಹೆಗ್ಗಡೆ ಏರ್ಪಡಿಸಿದ್ದನು. ಅದಕ್ಕಾಗಿ ಇಬ್ಬರು ದಾಸಿಯರು ಬಿಸಿಹಾಲಿನ ಪಾತ್ರೆ ಬಟ್ಟಲುಗಳನ್ನು ಹಿಡಿದು ಸಿದ್ಧರಾಗಿ ನಿಂತಿದ್ದರು. ಹೊಟ್ಟೆ ಗಂಟಲುಗಳನ್ನು ಬಿಸಿಯಾಗಿಡುವ ಈ ಪಾನಕಪೂಜೆಯಲ್ಲದೆ ಬೇರೆ ವಿನೋದಗಳೂ ಅಲ್ಲಿ ಅವರಿಗೆ ದೊರಕಿದವು.

ಒಬ್ಬ ಹೆಗ್ಗಡತಿ ಬೊಮ್ಮರಸನ ಪಾದಗಳಿಗೆ ಸಂಪಿಗೆಯ ಎಣ್ಣೆ ಹಚ್ಚಿ ಹರಿದಾಡುವ ಕೇಶಗಳಿಂದ ಒರೆಸಿದಳು. ಇನ್ನೊಬ್ಬಳು ಅರಳಿದ ತಾವರೆಯೊಂದನ್ನು ಬ್ರಹ್ಮಶಿವನ ಕಾಲುಗಳ ಮೇಲಿಟ್ಟು ಅಂಗಾಲನ್ನು ಚಿವುಟಿದಳು. ಮತ್ತೊಬ್ಬಳು ಕುಂಕುಮದ ಕೆನ್ನೀರಿಂದ ಬೊಮ್ಮರಸನ ಪಾದಗಳಿಗೆ ಸಾರಣೆ ಮಾಡಿದಳು. ಮಗದೊಬ್ಬಳು ಬ್ರಹ್ಮಶಿವನ ಕಾಲುಗಳಿಗೆ ಅರಶಿನ ಹಚ್ಚಿದಳು. ವಿಭಿನ್ನ ಅಭಿರುಚಿ ಅಭಿಲಾಷೆಗಳಿಂದ ಪ್ರೇರಿತರಾದ ಆ ತರುಣ ಗಣಿಕೆಯರಿಗೆ ಆ ಇಬ್ಬರು ಜಂಗಮರು ಭಾವಾನುಗುಣವಾಗಿ ಬೇರೆ ಬೇರೆ ರೂಪಗಳಿಂದ ಕಂಡರು. ಕೆಲವರಿಗೆ ಒತ್ತೆ ಕೇಳಲು ಬಂದ ವಿಚಿತ್ರ ವಿಟರಂತೆ, ಇನ್ನುಳಿದವರಿಗೆ ಗಣಿಕಾವಾಸದ ಬೇಸರ ಕಳೆಯಲು ಕರೆಸಿದ ಗಾರುಡಿಗರಂತೆ ಚಿತ್ರ ವಿಚಿತ್ರವಾಗಿತ್ತು, ಅವರ ಸಾನ್ನಿಧ್ಯ.

ಈ ಸಮಾರಂಭ ಮುಗಿದ ಮೇಲೆ ಮನೆಹೆಗ್ಗಡೆ ಅವರನ್ನು ಬಿಡಾರಕ್ಕೆ ಬಿಜಯ ಮಾಡಿಸಿ, "ಜಂಗಮದೇವರು ಇಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದರೆ ಪ್ರಭುಗಳು ದರ್ಶನಕ್ಕೆ ಸಿದ್ಧರಾಗಿರುವರೇ ನೋಡಿಬರುತ್ತೇನೆ," ಎಂದು ಹೊರಗೆ ಹೋದನು.

"ಇದೇನು ಅರಮನೆಯೋ ಸೆರೆಮನೆಯೋ !"–ಅಚ್ಚರಿಯಿಂದ ಬ್ರಹ್ಮಶಿವನೆಂದನು ಬೊಮ್ಮರಸನ ಕಡೆ ತಿರುಗಿ.

"ನೀನು ಅಪೇಕ್ಷಿಸಿದ್ದು ಅರಮನೆಯ ಭೋಗವನ್ನಲ್ಲವೆ? ಅದನ್ನೇ ಕರುಣಿಸಿದ್ದಾನೆ ಪರಶಿವನು. ಬಿಜ್ಜಳರಾಯರು ಜಗದೇಕಮಲ್ಲರಸರನ್ನು ಕೈಕಾಲುಗಳಿಗೆ ಬೇಡಿ ಹಾಕಿ ಸೆರೆಮನೆಯಲ್ಲಿಟ್ಟಿರುವರೆಂದು ಭಾವಿಸಿದೆಯಾ ತಿಳಿಗೇಡಿ?" –ಮಾಚಿದೇವರು ಕೊಟ್ಟ 'ತಿಳಿಗೇಡಿ' ಪ್ರಶಸ್ತಿಯನ್ನು ಶಾಶ್ವತವಾಗಿ ಬ್ರಹ್ಮಶಿವನಿಗೆ ಅಂಟಿಸುವುದು ಬೊಮ್ಮರಸನ ಉದ್ದೇಶವಾಗಿತ್ತು.

"ಹಾಗಾದರೆ ನೀವಿಲ್ಲಿಗೆ ಬರಲು ಅಷ್ಟೊಂದು ಬೆದರಿದಿರೇಕೆ, ಬೊಮ್ಮರಸರೆ? ರಥದಿಂದಿಳಿದು ಓಡಿಹೋಗಲು ಯೋಚಿಸಿದ್ದಿರಲ್ಲವೆ?" –ಬ್ರಹ್ಮಶಿವನು ಅಚ್ಚರಿಯಿಂದ ನುಡಿದನು.

"ಅದಕ್ಕೆ ಕಾರಣವಿದೆ, ಪಂಡಿತ. ಈಗ ಓಲಗಶಾಲೆಯಲ್ಲಿ ನಮಗೆ ದರ್ಶನ ಕೊಡುವವರು ಜಗದೇಕಮಲ್ಲರಸರೆ? ಬಿಜ್ಜಳರಾಯರೆ? ಅಥವಾ ಒಟ್ಟಿಗೆ ಅವರಿಬ್ಬರೆ? ಅದನ್ನು ತಿಳಿದಮೇಲೆ ನನ್ನ ಭಯ ಪರಿಹಾರವಾಗುವುದು," ಎಂದು ಮಾರ್ಮಿಕವಾಗಿ ಬೊಮ್ಮರಸನು ಉತ್ತರ ಕೊಟ್ಟನು.

"ಏನೇ ಆಗಲಿ, ಅಷ್ಟೊಂದು ಜನ ಸುಂದರ ತರುಣಿಯರು ಏಕಕಾಲದಲ್ಲಿ ನನ್ನ ಕಾಲುಗಳನ್ನು ಹಿಡಿದದ್ದು ಇದೇ ಮೊದಲ ಸಾರಿ ಬೊಮ್ಮರಸರೆ. ನಿಮಗೂ ಹಾಗೆಯೇ ಇರಬೇಕು. ನಾನು ಭಾವಿಸಿದ್ದೆ, ಈ ಹೆಣ್ಣುಸಂತೆಯಲ್ಲಿ ನಮ್ಮ ಸನ್ಯಾಸಿವೇಷಕ್ಕೆ ಪಾದಪೂಜೆಯಲ್ಲದೆ, ಬೇರೇನಾದರೂ ಬೆಲೆಯಿದೆಯೇ ? ಎಂದು." –ನಿಟ್ಟುಸಿರಾಡಿಸಿ ಬ್ರಹ್ಮಶಿವನೆಂದನು.

"ಈ ಗಡ್ಡಮೀಸೆಗಳಲ್ಲದಿದ್ದರೂ ನನ್ನ ವಯಸ್ಸು ನನ್ನನ್ನು ರಕ್ಷಿಸಬಹುದು. ಆದರೆ ತರುಣನಾದ ನೀನು ಈ ರೊಚ್ಚು ಹೊಳೆಯಲ್ಲಿ ತೇಲಿಹೋಗುವೆ !"

ಶಕುನ ಪಲುಕಿದನು ಬೊಮ್ಮರಸ.

"ತರುಣರಿಗಿಂತ ಮುದುಕರಿಗೇ ಇಂಥ ರೊಚ್ಚಿನಾಸೆ ಹೆಚ್ಚು ಎನ್ನುತ್ತಾರೆ ಜನ. ಎಲ್ಲಾದರೊಂದು ಕಡೆ ವಾತ್ಸಾಯನನೂ ಅದನ್ನು ಹೇಳಿರಬೇಕು," –ಎಂದು ಬ್ರಹ್ಮಶಿವ ಮಾತಿನ ಮುಡಿಯಿಡುತ್ತಿದ್ದಂತೆ ಹೆಗ್ಗಡೆ ಅಲ್ಲಿಗೆ ಬಂದು,

"ಪ್ರಭುಗಳು ಸಿದ್ಧರಾಗಿದ್ದಾರೆ. ದಯಮಾಡಿಸಬೇಕು," –ಎಂದು ಅವರನ್ನು ಓಲಗಶಾಲೆಗೆ ಕರೆದುಕೊಂಡು ಹೋದನು.

ಬಾಗಿಲಲ್ಲಿ ಕಾವಲಿದ್ದ ಬಿಚ್ಚುಕತ್ತಿಯ ಭಟರ ಹೊರತಾಗಿ ಅದು ಪರಿಜನ ಶೂನ್ಯವಾಗಿತ್ತು. ಜಗದೇಕಮಲ್ಲನೊಬ್ಬನೆ ಮೆತ್ತನೆಯ ದಿಂಬುಗಳ ಸುಖಾಸನದಲ್ಲಿ

ಕುಳಿತು ಧರ್ಮೋಪದೇಶಕನ ಎದುರು ನೋಡುತ್ತಿದ್ದನು. ಹಿಂದೆ ಇಳಿಯಬಿಟ್ಟಿದ್ದ ಕೆಂಪುತೆರೆಯ ಮರೆಯಲ್ಲಿ ಕಂಡೂ ಕಾಣಿಸದಂತೆ ಅಗ್ಗಳನು ನಿಂತಿದ್ದನು.

ಮನೆಹೆಗ್ಗಡೆ ಜಂಗಮರಿಬ್ಬರನ್ನು ಕರೆದುಕೊಂಡು ಒಳಗೆ ಬರುತ್ತಿರುವುದನ್ನು ಕಂಡು ಜಗದೇಕಮಲ್ಲನು ಸುಖಾಸನದಿಂದೆದ್ದು ಕೆಲವು ಹೆಜ್ಜೆಗಳು ಮುಂದೆ ಬಂದು ಅವರನ್ನು ಸ್ವಾಗತಿಸಿ ಪಾರ್ಶ್ವದಲ್ಲಿದ್ದ ಭದ್ರಾಸನದ ಮೇಲೆ ಕುಳ್ಳಿರಿಸಿದನು.

"ಪ್ರಭುಗಳು ಕುಳಿತುಕೊಳ್ಳಬೇಕು." –ಗುರುಮನೆಗೆ ತಕ್ಕ ರೀತಿಯಿಂದ ಜಗದೇಕಮಲ್ಲನ ಕಡೆ ತಿರುಗಿ ಕೈತೋರಿಸಿ ಬೊಮ್ಮರಸನು ಹೇಳಿದನು.

ಜಗದೇಕಮಲ್ಲನು ಸುಖಾಸನದಲ್ಲಿ ಮಂಡಿಸಿ ಹೆಗ್ಗಡೆಯ ಕಡೆ ತಿರುಗಿ "ಗುರುದೇವರ ಬಿಡಾರದಲ್ಲಿ ಯಾವ ಅರೆಕೊರೆಗಳೂ ಇಲ್ಲದಂತೆ ಎಚ್ಚರ ವಹಿಸಬೇಕು, ನೆನಪಿರಲಿ. ನಿನ್ನ ಗಣಿಕಾಪರಿವಾರದ ಗಾಳಿ ಕೂಡ ಆ ಕಡೆಗೆ ಬೀಸಬಾರದು." ಎಂದು ಎಚ್ಚರಿಕೆಯಿತ್ತು ಬೊಮ್ಮರಸನಿಗೆ ಪುನಃ ವಂದಿಸಿ,

"ಈ ರಾಜಗೃಹದ ಏಕಾಂತವಾಸದಲ್ಲಿ, ವಿಲಾಸಿನಿಯರ ನಡುವೆ, ನನ್ನ ಮನಸ್ಸು ಚಲವಿಚಲವಾಗಿದೆ, ಗುರುದೇವ. ನಾನು ಮನಃಶಾಂತಿಯನ್ನು ಬಯಸಿ ನಿಮ್ಮನ್ನಾಶ್ರಯಿಸಿದ್ದೇನೆ. ನಿಮ್ಮ ಧರ್ಮಬೋಧೆಯಿಂದ ನನ್ನ ಅರಿವಿನ ದೀವಿಗೆ ಮತ್ತೆ ಉರಿಯಲಿ," –ಎಂದು ಗಂಭೀರವಾಗಿ ಹೇಳಿದನು.

ಬೊಮ್ಮರಸನು ಪ್ರತಿನಮಸ್ಕಾರ ಮಾಡಿ, "ಪ್ರಭುಗಳಿಗೆ ಯೋಗಭೋಗಗಳೆರಡೂ ಒಪ್ಪುವವು. ಭೋಗದ ಸರದಿ ಮುಗಿದ ಮೇಲೆ ಅದರ ಪ್ರತಿಕ್ರಿಯಾ ರೂಪವಾದ ವಿರಕ್ತಿಯ ಸರದಿ ಪ್ರಾರಂಭವಾಗುವುದು.

**"ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ।**
**ತ್ರೈ ಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ ॥**

–ಎಂದು ವೈರಾಗ್ಯನಿಧಿಯಾದ ಶಿವನನ್ನು ನುತಿಸಿದ ಕವಿ,

**"ನಿತಂಬಾಲಸಗಾಮಿನ್ಯಃ ಪೀನೋನ್ನತ ಪಯೋಧರಾಃ ।**
**ಮನ್ಮಥಾಯ ನಮಸ್ತಸ್ಮೈ ಯಸ್ಯಾಯತನಮಂಗನಾಃ ॥ ***

–ಎಂದು ಕಾಮದೇವನನ್ನು ಸ್ತುತಿಸಿದ್ದಾನೆ. ಧರ್ಮ, ಅರ್ಥ, ಕಾಮಗಳನ್ನು

---

*ಮೊದಲನೆಯದು ಚಾಲುಕ್ಯ ಶಾಸನಗಳಲ್ಲಿ ಸಾಮಾನ್ಯವಾಗಿ ದೊರಕುವ ಮಂಗಳ ಶ್ಲೋಕ "ಚಾಮರದಂತೆ ಹಾರಾಡುವ ಜಟೆಯಂತೆ ಚಂದ್ರನನ್ನು ಧರಿಸಿರುವ ಮತ್ತು ಮೂರು ಲೋಕಗಳ ಸೃಷ್ಟಿಸ್ಥಿತಿಲಯ ರೂಪವಾದ ಕಾರ್ಯಾರಂಭಕ್ಕೆ ಮೂಲಸ್ತಂಭವಾದ ಶಂಭುವಿಗೆ ನಮಸ್ಕಾರ" ಎಂದು ಪದ್ಯದ ತಾತ್ಪರ್ಯ, ಎರಡನೆಯ ಪದ್ಯ ಮನ್ಮಥನ ಸ್ತುತಿರೂಪವಾಗಿದೆ. "ನಿತಂಬಗಳ ಭಾರದಿಂದ ಜಗ್ಗಿ ನಡೆಯುವ, ತುಂಬೆದೆಯ ಅಂಗನೆಯರನ್ನು ಆಶ್ರಯಿಸಿದ ಮನ್ಮಥನಿಗೆ ನಮಸ್ಕಾರ" ಎಂದು ಅದರ ಅರ್ಥ. ಭರ್ತೃಹರಿ ವಿರಚಿತವೆಂದು ಹೇಳುವ 'ವಿಟವೃತ್ತ'ದ ಮಂಗಳ ಶ್ಲೋಕ ಇದು.

ಸಮಾನಭಾವದಿಂದ ಸೇವಿಸುವುದು ತಮ್ಮಂತಹ ಮಕುಟಾಭಿಷಿಕ್ತ ಮಹಾಪ್ರಭುಗಳಿಗೆ ಸಮುಚಿತವಾದ ವರ್ತನೆ. ಈ ಮೂರರಲ್ಲಿ ಒಂದನ್ನು ಮಾತ್ರ ಆಸಕ್ತಿಯಿಂದ ಆಶ್ರಯಿಸುವ ಮಾನವನು ನಿಂದಾರ್ಹನಾಗುತ್ತಾನೆ. ಎರಡರಲ್ಲಿ ನಿರತನಾದವನು ಮಧ್ಯಮ. ತ್ರಿವರ್ಗಗಳನ್ನೂ ಯಾವಾಗಲೂ ಶ್ರದ್ಧೆಯಿಂದ ಸೇವಿಸುವವನು ಉತ್ತಮ.

"ಶಿಷ್ಟರು ಅನುಮೋದಿಸುವ ಈ ಮಾರ್ಗವನ್ನು ಪ್ರಭುಗಳು ಅನುಸರಿಸುತ್ತಿರುವುದು ಚಾಲುಕ್ಯರಾಜ್ಯದ ಪ್ರಜೆಗಳಿಗೆ ಸಮಾಧಾನವನ್ನುಂಟುಮಾಡಿದೆ. ಪ್ರಭುಗಳ ಗಣಿಕಾ ಪರಿವಾರದಂತೆ ಶೌರ್ಯ ದಾನಗಳ ಕೀರ್ತಿಯೂ ಜನರಲ್ಲಿ ಹರಡಿದೆ. ಉತ್ಸಾಹಶಾಲಿಯೂ ಮಿತವಾಗಿ ಮಾತಾಡುವವನೂ, ಕಾರ್ಯಚತುರನೂ, ಪಾನದ್ಯೂತ ಮೃಗಯಾದಿ ವ್ಯಸನಗಳಿಲ್ಲದಿರುವವನೂ, ಶೂರನೂ ಕೃತಜ್ಞನೂ ಆದ ಅರಸನನ್ನು ರಾಜ್ಯಲಕ್ಷ್ಮಿ ತಾನಾಗಿಯೇ ಆಶ್ರಯಿಸುವಳು. ಪ್ರಭುದೇವರು ತಮ್ಮೊಂದು ವಚನದಲ್ಲಿ ಈ ಅರ್ಥವನ್ನೇ ಇನ್ನೊಂದು ಬಗೆಯಾಗಿ ಹೇಳಿದ್ದಾರೆ:

ಕಾಮಿಸುವ ಕಲ್ಪಿಸುವ ಬ್ರಹ್ಮನೆಂಬವ ವ್ರತಗೇಡಿ,
ವಿಷ್ಣುವೆಂಬವ ಸತ್ತುಬಿದ್ದ, ರುದ್ರನೆಂಬವ ಅಬದ್ಧ ಅವಿಚಾರಿ,
ಎಲ್ಲರ ಕೊಂದಕೊಲೆ ನಿಮ್ಮ ತಾಗುವುದು, ಗುಹೇಶ್ವರಾ,"

–ಎಂದು ಪಠಿಸಿ ಗಂಭೀರವಾಗಿ ಮುಗಿಸಿದನು

ಅನುಭವಮಂಟಪದಲ್ಲಿ ನಡೆಯುವ ಪ್ರವಚನಗಳನ್ನು ಮನೆಹೆಗ್ಗಡೆ ಒಂದೆರಡು ಸಾರಿ ಕೇಳಿದ್ದನು. ರಾಜಗೃಹಕ್ಕೆ ಬಂದ ಧರ್ಮೋಪದೇಶೀ ಜಂಗಮನು ಆ ಸರಣಿಯಲ್ಲಿಯೇ ಪ್ರಾರಂಭಿಸಿದ್ದನ್ನು ಕೇಳಿ ಅವನಿಗೆ ಸಮಾಧಾನವಾಯಿತು; ಗಣಿಕಾವಾಸವನ್ನು ಕುರಿತ ಪ್ರಶಂಸೆಯ ನುಡಿ ಹಿತವಾಗಿ ಕಂಡಿತು.

ಜಗದೇಕಮಲ್ಲನು ಹಾಗೆ ಭಾವಿಸಲಿಲ್ಲ. ಜಂಗಮದೇವನ ಪ್ರವಚನ, ರಾಜಗೃಹಕ್ಕೆ ನಿಷಿದ್ಧವಾದ ರಾಜಕೀಯದ ಮಾರ್ಗ ಹಿಡಿಯುತ್ತಿದೆಯೆಂದೂ, ಇದರಿಂದ ಧರ್ಮೋಪದೇಶಕನನ್ನು ಕರೆಸಿಕೊಂಡ ತನ್ನ ಉದ್ದೇಶಕ್ಕೆ ಭಂಗಬರಬಹುದೆಂದೂ ಅವನು ಭಾವಿಸಿದನು. ವಚನವನ್ನು ಪಠಿಸುವಾಗ "ಬ್ರಹ್ಮ ಬ್ರಹ್ಮ" ಎಂದು ಎರಡುಸಾರಿ ಒತ್ತಿ ಹೇಳಿದುದನ್ನು ಅವನು ಗಮನಿಸಿದ್ದನು. 'ಆ ಹೆಸರಿನ ನನ್ನ ಪರಿಚಿತರು ಯಾರಿದ್ದಾರೆ?' ಎಂದು ಅವನ ಬುದ್ಧಿಜ್ವಾಲೆ ನೆನಪಿನ ಕೋಣೆ ಕೋಣೆಗಳನ್ನೂ ಅರಸುತ್ತಿತ್ತು. ಪ್ರಕಟವಾಗಿ ಅವನು,

"ಗುರುದೇವರು ಮನ್ನಿಸಬೇಕು, ಅರ್ಥಕಾಮಗಳಲ್ಲಿ ನನಗೆ ಆಸಕ್ತಿಯಿಲ್ಲ.

ಅವುಗಳಲ್ಲಿ ಬಿಡುಗಡೆಯಾಗುವ ಉದ್ದೇಶದಿಂದ ಧರ್ಮವನ್ನು ಆಶ್ರಯಿಸಿದ್ದೇನೆ. ಧರ್ಮೋಪದೇಶಕರಾಗಿ ಬಂದ ನೀವು ನನ್ನ ಭಾಗಕ್ಕೆ ಬ್ರಹ್ಮೋಪದೇಶಕರಾದರೆ ಸಂತೋಷ," ಎಂದನು.

ಗಡ್ಡಮೀಸೆ ಜಟೆಗಳ ಮರೆಯಲ್ಲಿಯೂ ಜಗದೇಕಮಲ್ಲನು ತನ್ನ ಗುರುತು ಹಿಡಿದನೆಂದು ಬೊಮ್ಮರಸನು ತಿಳಿದನು. ಆದರೆ ಬಿಜ್ಜಳನ ಕಾರಾಗೃಹದಿಂದ ತನ್ನ ಬಿಡುಗಡೆ, ಚಾಲುಕ್ಯ ರಾಜಕೀಯದಲ್ಲಿ ತನ್ನ ಪಾತ್ರ, ತಾನು ಕಲ್ಯಾಣದಲ್ಲಿರುವುದು, ಈ ವಿಚಾರಗಳು ಗೃಹಬಂಧನದಲ್ಲಿದ್ದ ಚಾಲುಕ್ಯ ಅರಸನಿಗೆ ತಿಳಿದದ್ದು ಹೇಗೆ ? ಹೆಗ್ಗಡೆಯ ಎದುರಿಗೆ ಎಚ್ಚರದಿಂದ ಮಾತಾಡುವುದಗತ್ಯ, ಎಂದು ಭಾವಿಸಿ ಬೊಮ್ಮರಸನು,

"ಪ್ರಭುಗಳ ಮನೋಗತ ನಮಗೆ ತಿಳಿದಿದೆ. ಶೈವಶರಣಧರ್ಮಗಳನ್ನು ಸಮಗ್ರವಾಗಿ ಬೋಧಿಸುವ ಸೂತಸಂಹಿತೆಯನ್ನು ಪ್ರಭುಗಳ ಸಮ್ಮುಖದಲ್ಲಿ ಪುರಾಣ ಹೇಳಬೇಕೆಂಬುದು ನಮ್ಮ ಉದ್ದೇಶ. ಅಪ್ಪಣೆಯಾದರೆ ಇಂದೇ ಪ್ರಾರಂಭಿಸುತ್ತೇನೆ," ಎಂದು ಕೈಯ್ಯಲ್ಲಿದ್ದ ಹೊತ್ತಗೆಯ ಕಟ್ಟುಗಳನ್ನು ಬಿಚ್ಚಿದನು.

ಆಮೇಲೆ ಅರ್ಧ ಪ್ರಹರಕಾಲ ಪ್ರವಚನ ನಡೆದು ಬೊಮ್ಮರಸನು ಸಂಹಿತೆಯ ಪದ್ಯಗಳನ್ನು ಓದಿ ಅರ್ಥ ಹೇಳಿದನು. ಗಂಭಿರವಾಗಿ ಎದುರಿಗೆ ಕುಳಿತು ಕೇಳುತ್ತಿದ್ದ ಮನೆಹೆಗ್ಗಡೆಗೆ ಬ್ರಹ್ಮೇಂದ್ರ ಶಿವಯೋಗಿಯ ಬಗೆಗೆ ಗೌರವ ಮೂಡಿತು. "ಇಂತಹ ಧರ್ಮನಿಷ್ಠ ವಿರಕ್ತನ ಹತ್ತಿರ ರಾಜಕೀಯ ಸುಳಿಯುವ ಸಂಭವವೂ ಇರುವುದಿಲ್ಲ," ಎಂದು ನಿರ್ಧರಿಸಿಕೊಂಡನು.

ಬೀಳ್ಕೊಡುವ ಮುನ್ನ ಜಗದೇಕಮಲ್ಲನು, "ಇದೇ ರೀತಿ ಪ್ರತಿದಿನ ಒಂದು ಪ್ರಹರಕಾಲ ತಮ್ಮ ಬೋಧಾಮೃತವನ್ನು ಕರಣಿಸಬೇಕಾಗಿ ಬೇಡುತ್ತೇನೆ. ಅಪರಾಹ್ನ ಅದಕ್ಕೆ ಸರಿಯಾದ ಕಾಲ. ನಾಳಿನಿಂದ ನಮ್ಮ ಕಾವ್ಯೋಪದೇಶಕರು ಪದ್ಯಗಳನ್ನು ಓದುವರು. ನೀವು ಅರ್ಥವಿಸಿದರೆ ಸಾಕು," ಎಂದನು.

ಸೂಚನೆಯರಿತು ಸುಖಾಸನದ ಹಿಂದೆ ಮರೆಯಲ್ಲಿದ್ದ ಅಗ್ಗಳನು ಮುಂದೆ ಬಂದನು.

"ಇವರು ನಮ್ಮ ಕಾವ್ಯೋಪದೇಶಕ, ಪಂಡಿತಕವಿ ಅಗ್ಗಳದೇವ. ಇವರು ನಮ್ಮ ಧರ್ಮೋಪದೇಶಕರಾದ....ಗುರುದೇವ....." ಹೆಸರುಗಳನ್ನು ಮರೆತವನಂತೆ ಜಗದೇಕ ಮಲ್ಲನು ಅರ್ಧದಲ್ಲಿ ನಿಂತನು.

"....ಬ್ರಹ್ಮೇಂದ್ರ ಶಿವಯೋಗಿಗಳು. ಇವರು ಗುರುಗಳ ಅಂತೇವಾಸಿ ಹರೀಶರುದ್ರ," ಎಂದು ಹೆಗ್ಗಡೆ ಪರಿಚಯ ಮುಗಿಸಿದನು.

ಅಗ್ಗಳನು ಭಕ್ತಿನಮ್ರನಂತೆ ತಲೆಬಾಗಿ ವಂದಿಸಿದನು. ಸ್ತಂಭಿತರಂತೆ ಅಗ್ಗಳನನ್ನೇ ನೋಡುತ್ತಿದ್ದ ಗುರುಶಿಷ್ಯರು ಪ್ರತಿವಂದನೆ ಮಾಡಲು ಕೆಲವು ಕ್ಷಣಗಳಾದವು.

ಜಗದೇಕಮಲ್ಲನು ಹೆಗ್ಗಡೆಯ ಕಡೆ ತಿರುಗಿ, "ನಾಳೆ ಪ್ರವಚನ ನಡೆಯುವಾಗ ಕರ್ಣದೇವರಸರೂ ಎದುರಿಗಿದ್ದರೆ ಒಳ್ಳೆಯದು. ಅವರಿಗೆ ಈ ವಿಚಾರ ತಿಳಿಸು," ಎಂದನು.

"ಕರ್ಣದೇವರಸರು ಮಂಗಳವೇಡೆಯಿಂದ ಇನ್ನೂ ಹಿಂದಿರುಗಿಲ್ಲ. ಯಾವಾಗ ಬರುವರೋ ತಿಳಿಯದು" –ಎಂದು ಹೆಗ್ಗಡೆ ಉತ್ತರ ಕೊಟ್ಟನು.

* * *

ಆ ದಿನ ಅಪರಾಹ್ನ ಮನೆ ಹೆಗ್ಗಡೆ ಬ್ರಹ್ಮಶಿವನನ್ನು ಅರಮನೆಯ ಚಾವಡಿಗೆ ಕರೆಸಿಕೊಂಡು ರಾಜಗೃಹದ ನಿಬಂಧನೆಗಳನ್ನು ಓದಿ ಹೇಳಿ,

"ನೀವು ಇಲ್ಲಿರುವವರೆಗೆ ಹೊರಗಿನವರೊಡನೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಕರ್ಣದೇವರಸರ ಅಥವಾ ನನ್ನ ಅನುಮತಿ ಪಡೆಯದೆ ಹೊರಗೆ ಹೋಗಕೂಡದು. ಹೊರಗಿನ ವಿಚಾರಗಳನ್ನು ಪ್ರಭುಗಳಿಗಾಗಲಿ, ಇಲ್ಲಿಯ ವಿಚಾರಗಳನ್ನು ಹೊರಗಿನವರಿಗಾಗಲಿ, ತಿಳಿಸಕೂಡದು," –ಎಂದು ಹೇಳಿದನು.

"ನಾನು ಗುರುದೇವರ ಸೇವೆಗಾಗಿ ಸಂಗಡ ಬಂದಿದ್ದೇನೆ, ಹೆಗ್ಗಡೆಗಳೆ. ಅನ್ಯವಿಚಾರಗಳು ನಮಗೇಕೆ?" –ಎಂದು ಬ್ರಹ್ಮಶಿವನು ಉದಾಸೀನದಿಂದ ಉತ್ತರ ಕೊಟ್ಟನು.

"ಗುರುದೇವರಿಗೂ ಈ ವಿಚಾರ ತಿಳಿಸಿದ್ದರೆ ಒಳ್ಳೆಯದು."

"ದಿನದಲ್ಲಿ ಆರು ಪ್ರಹರಗಳ ಕಾಲ ಅವರು ಮೌನ. ಧ್ಯಾನ ಶಿವಪೂಜೆಗಳಲ್ಲಿ ಹೆಚ್ಚು ಹೊತ್ತು ಕಳೆಯುತ್ತಾರೆ. ಶಾಸ್ತ್ರಧರ್ಮಗಳ ಹೊರತಾಗಿ ಅವರು ಬೇರೆ ವಿಷಯಗಳನ್ನು ಪ್ರಸ್ತಾಪಿಸುವುದಿಲ್ಲ."

"ಹಾಗಾದರೆ ನಿಬಂಧನೆಯಂತೆ ನಡೆಯಲು ನಿಮಗಾವ ತೊಂದರೆಯೂ ಇಲ್ಲವಷ್ಟೇ?"

ಬ್ರಹ್ಮಶಿವನು ಯೋಚಿಸಿ, "ಗುರುಗಳ ಶಿವಪೂಜೆಗಾಗಿ ಬಿಲ್ವಪತ್ರೆ ತರಲು ನಾನು ದಿನಕ್ಕೊಂದು ಸಾರಿ ಹೊರಗೆಹೋಗಬೇಕಾಗುತ್ತದೆ. ಅದಕ್ಕೆ ಅನುಮತಿ ಕೊಟ್ಟರೆ ಸಾಕು," ಎಂದನು.

"ಪೂಜೆಗೆ ಬೇಕಾಗುವ ಪತ್ರಪುಷ್ಪಗಳನ್ನು ನಾನು ತರಿಸಿಕೊಡುತ್ತೇನೆ."

"ಮಹಮನೆಯ ಅಂಗಣದಲ್ಲಿರುವ ಬಿಲ್ವಮರದಿಂದ ಕೊನೆ ಮುರಿಯದ ಪತ್ರಗಳನ್ನು ಆರಿಸಿ ತರಬೇಕಾಗುವುದು. ಅದು ನಿಮ್ಮ ಭಟರಿಗೆ ಸಾಧ್ಯವಲ್ಲ."

"ಏಕೆ ಸಾಧ್ಯವಲ್ಲ?"

"ನಿಮ್ಮ ಭಟರು ಮಹಮನೆಯ ಮರದಿಂದಲೇ ಪತ್ರಗಳನ್ನು ತಂದರೆಂದು ಹೇಗೆ ನಂಬುವುದು?"

ಹೆಗ್ಗಡೆ ನಕ್ಕು, "ಬಿಲ್ವಪತ್ರಗಳಲ್ಲಿ ಒಂದು ಮರದ ಎಲೆಗೂ ಇನ್ನೊಂದು ಮರದ ಎಲೆಗೂ ವ್ಯತ್ಯಾಸವಿರುವುದೆಂದು ನಾನು ಇದೇ ಮೊದಲಸಾರಿ ಕೇಳಿದ್ದು," ಎಂದನು.

"ತಮ್ಮ ಕಣ್ಣುಗಳಿಗೆ ಯಾವ ವ್ಯತ್ಯಾಸವೂ ಕಾಣದಿರಬಹುದು. ಆದರೆ ನಮ್ಮ ಗುರುಗಳು ಪತ್ರಗಳನ್ನು ನೋಡುತ್ತಲೆ ಇದು ಮಹಮನೆಯ ಮರದ್ದು, ಇದು ಬೇರೆ ಮರದ್ದೆಂದು ಹೇಳಿಬಿಡುತ್ತಾರೆ. ಒಂದು ದಿನ ಏನಾಯಿತು ಗೊತ್ತೆ ಹೆಗ್ಗಡೆಗಳೆ?"

"ಏನಾಯಿತು ?"

"ಆ ದಿನ ನಾನು ನಗರಕ್ಕೆ ಸಮೀಪದಲ್ಲಿರುವ ಬಾಂಧವರ ಓಣಿಗೆ ಹೋಗಿದ್ದೆ. ಅಲ್ಲಿಂದ ತಂದ ಪತ್ರಗಳನ್ನೇ ಪೂಜೆಗಿಟ್ಟೆ. ಗುರುಗಳು ಪತ್ರವಿಲ್ಲದೆ ಪೂಜೆ ಮುಗಿಸಿದರು. ಪ್ರಸಾದ ತೆಗೆದುಕೊಳ್ಳಲಿಲ್ಲ. ಅವರ ಕೋಪ ಶಾಂತವಾಗಬೇಕಾದರೆ ನಾಲ್ಕು ದಿನಗಳಾದವು."

ಕೊನೆಗೆ ಹೆಗ್ಗಡೆ ಅನುಮತಿ ಕೊಡಲೊಪ್ಪಿ, "ದಿನಕ್ಕೊಂದು ಸಾರಿ ಹೊರಗೆ ಹೋಗಿಬರಲು ರಹದಾರಿ ಬರೆದುಕೊಡುತ್ತೇನೆ. ಅದನ್ನು ನಿಮ್ಮ ಹೊರತಾಗಿ ಮತ್ತಾರೂ ಉಪಯೋಗಿಸಬಾರದು. ಪ್ರತಿಯಾಗಿ ನೀವು ನನ್ನ ಇನ್ನೊಂದು ಕಾರ್ಯದಲ್ಲಿ ಸಹಾಯ ಮಾಡಬೇಕು," ಎಂದನು.

ಹೆಗ್ಗಡೆಯ ಸ್ನೇಹ ಪ್ರಯೋಜನಕಾರಿಯೆಂದು ಭಾವಿಸಿ ಬ್ರಹ್ಮಶಿವ ಕೂಡಲೆ ಒಪ್ಪಿದನು.

ಹೆಗ್ಗಡೆ ಹೇಳಿದನು : "ಮುಂದಿನ ಮಾಘಮಾಸದ ಪರ್ವದಿನಗಳಲ್ಲಿ ಒಂದುವಾರ ಜಂಗಮ ದಾಸೋಹ ನಡೆಸಲು ಪ್ರಭುಗಳು ಅಪೇಕ್ಷಿಸಿದ್ದಾರೆ. ಪ್ರತಿದಿನ ಸಾವಿರ ಮಂದಿ ಜಂಗಮರಿಗೆ ಆಹ್ವಾನ ಕೊಟ್ಟಿದೆ. ದಾಸೋಹದ ಏರ್ಪಾಡಿಗಾಗಿ ಮಂತ್ರಿ ಚೆನ್ನಬಸವಣ್ಣನವರು ಇಬ್ಬರು ಕಾರ್ಯಕರ್ತರನ್ನು ಕಳುಹಿಸುವರು. ಆದರೂ ಮುಖ್ಯ ಕೆಲಸಗಳು ನನ್ನ ಮೇಲೆ ಬೀಳುತ್ತವೆ."

"ನಿಮ್ಮ ಕೆಲಸದಲ್ಲಿ ನಾನು ಸಹಾಯ ಮಾಡುತ್ತೇನೆ," ಎಂದನು ಬ್ರಹ್ಮಶಿವ.

"ನಾನು ಅಪೇಕ್ಷಿಸುವುದು ನಿಮ್ಮ ಸಹಾಯವನ್ನಲ್ಲ. ಪ್ರವಚನ ನಡೆಯುವಾಗ ನಾನಾಗಲಿ, ಕರ್ಣದೇವರಸರಾಗಲಿ ಎದುರಿಗಿರಬೇಕೆಂದು ಬಿಜ್ಜಳರಾಯರ ಆಜ್ಞೆ. ಕರ್ಣದೇವರಸರು ಊರಲ್ಲಿಲ್ಲ. ದಾಸೋಹದ ಕೆಲಸ ಕಾರ್ಯಗಳಿಂದ ನನಗೆ

ಬಿಡುವಿಲ್ಲ. ನೀವು ನನ್ನ ಪ್ರತಿನಿಧಿಯಾಗಿ ಪ್ರವಚನ ನಡೆಯುವಾಗ ಎದುರಿಗಿದ್ದು ಏನು ನಡೆಯುತ್ತದೆ ಎಂಬುದನ್ನು ಪ್ರತಿದಿನ ನನಗೆ ವರದಿ ಮಾಡಬೇಕು. ಈ ಕಾರ್ಯ ನಿಮ್ಮಿಂದಾಗುವುದೆ ?"

ತುಟಿ ಮೀರಿ ಬರುತ್ತಿದ್ದ ನಗುವನ್ನು ಕಷ್ಟದಿಂದ ತಡೆದು ಬ್ರಹ್ಮಶಿವನೆಂದನು: " ನೀವು ನನ್ನಲ್ಲಿ ಇಷ್ಟೊಂದು ವಿಶ್ವಾಸವಿಟ್ಟಿರುವಾಗ ನಿರಾಕರಿಸಲೆ ? ಸಂತೋಷದಿಂದ ಮಾಡುತ್ತೇನೆ. ನಾನು ಯಾವ ವಿಚಾರಗಳನ್ನು ಕುರಿತು ವರದಿ ಮಾಡಬೇಕು ಎಂಬುದನ್ನು ತಿಳಿಸಿದರೆ ಸಾಕು."

ಹೆಗ್ಗಡೆ ಹೇಳಿದನು : "ಜಗದೇಕಮಲ್ಲರಸರು ಚಾಲುಕ್ಯ ಚಕ್ರೇಶ್ವರರಾದರೂ ಸದ್ಯದಲ್ಲಿ ರಾಜಬಂಧಿ. ಸರ್ವಾಧಿಕಾರಿ ಬಿಜ್ಜಳರಾಯರು ಅವರನ್ನು ಈ ಅರಮನೆಯಲ್ಲಿ ಗೃಹಬಂಧನದಲ್ಲಿಟ್ಟಿದ್ದಾರೆ. ಈ ವಿಚಾರ ನಿಮಗೆ ತಿಳಿದಿರಬೇಕಲ್ಲವೆ?"

"ನಮಗೆ ಇದೊಂದೂ ತಿಳಿಯದು. ಕೆಲವು ವಾರಗಳ ಹಿಂದೆ ನಾವು ಶ್ರೀಶೈಲದ ಯಾತ್ರೆ ಮುಗಿಸಿಕೊಂಡು ಕಲ್ಯಾಣಕ್ಕೆ ಬಂದೆವು."

"ಈ ಗಣಿಕಾ ಪರಿವಾರ, ಕಾವ್ಯೋಪದೇಶ ಧರ್ಮೋಪದೇಶಗಳು, ಬಂಧನದಲ್ಲಿ ಪ್ರಭುಗಳ ಬೇಸರ ಕಳೆಯಲು ಬಿಜ್ಜಳರಾಯರು ಏರ್ಪಡಿಸಿರುವ ವಿನೋದಗಳು. ರಾಜಗೃಹದ ರಕ್ಷಣೆಗಾಗಿ ಕರ್ಣದೇವರಸರ ಮೇಲ್ವಿಚಾರಣೆಯಲ್ಲಿ ಒಂದು ದೊಡ್ಡ ಸೈನ್ಯವೇ ಇರುತ್ತದೆ"

"ಇಲ್ಲಿಯ ಮಾತುಕಥೆ ವ್ಯವಹಾರಗಳನ್ನು ನೋಡಿದರೆ ಅದನ್ನು ನಂಬುವಂತೆಯೂ ಇಲ್ಲ, ಹೆಗ್ಗಡೆಗಳೆ. ನಿಮ್ಮ ಗಣಿಕಾಪರಿವಾರ ಗುರುಗಳ ದರ್ಶನಕ್ಕಾಗಿ ಬಂದಾಗ ನಾನು ಅವಾಕ್ಕಾಗಿ ನೋಡುತ್ತಿದ್ದೆ" –ನೋಟದಲ್ಲಿ, ದನಿಯಲ್ಲಿ, ಆಶ್ಚರ್ಯದ ಹೊಲುಬು ಮರೆಸಿ ಬ್ರಹ್ಮಶಿವನೆಂದನು.

"ನೀವು ಜಗತ್ತಿನ ಅನುಭವವಿಲ್ಲದ ಜಂಗಮರು, ಹರೀಶರುದ್ರಯ್ಯನವರೆ. ಈ ವಿಚಾರಗಳು ಹೇಗೆ ತಿಳಿಯಬೇಕು ನಿಮಗೆ? ಬಿಜ್ಜಳರಾಯರು ಮನಸ್ಸು ಮಾಡಿದರೆ ಕ್ಷಣಾರ್ಧದಲ್ಲಿ ಅರಮನೆ ಸೆರೆಮನೆಯಾಗುವುದು, ರಾಜನು ಬಂಧಿಯಾಗುವನು !"

–ಎಂದು ಹೆಗ್ಗಡೆ ದೀರ್ಘವಾಗಿ ಉಸಿರೆಳೆದು ಕಂಚ ಹೊತ್ತು ಮೌನವಾಗಿ ಕುಳಿತಿದ್ದು ಬಳಿಕ,

"ಜಗದೇಕಮಲ್ಲರಸರು ಅರಮನೆಯಿಂದ ತಪ್ಪಿಸಿಕೊಂಡು ಹೋಗದಂತೆ ನೋಡಿಕೊಳ್ಳಲು ಬಿಚ್ಚುಕತ್ತಿಯ ಭಟರಿದ್ದಾರೆ. ಸೆರೆಮನೆಯಂತೆ ಸುತ್ತ ರಾವುತರ ಕಾವಲಿದೆ. ಆ ವಿಚಾರ ನಾವು ಯೋಚಿಸಬೇಕಾಗಿಲ್ಲ. ರಾಜಬಂಧಿ ಹೊರಗಿನವರೊಡನೆ

ಮಾತಾಡದಂತೆ, ಸಂಪರ್ಕ ಬೆಳಸದಂತೆ ನೋಡಿಕೊಳ್ಳುವ ಹೊಣೆ ಮನೆ ಹೆಗ್ಗಡೆಯಾದ ನನ್ನ ಮೇಲೆ ಬಿದ್ದಿದೆ. ಅದನ್ನು ನಿರ್ವಹಿಸಲು ನಿಮ್ಮಂಥವರ ಸಹಾಯ ಅಗತ್ಯ," ಎಂದನು.

"ಸಹಾಯ ಮಾಡುವುದಾಗಿ ಹೇಳಿದ್ದೇನೆ, ಹೆಗ್ಗಡೆಗಳೆ. ನನ್ನ ಮಾತಲ್ಲಿ ನಿಮಗೆ ವಿಶ್ವಾಸವಿಲ್ಲವೆ ?"

"ವಿಶ್ವಾಸವಿರುವುದರಿಂದಲೆ ರಾಜಗೃಹದ ರಹಸ್ಯವನ್ನೆಲ್ಲ ನಿಮಗೆ ಹೇಳುತ್ತಿದ್ದೇನೆ, ಹರೀಶರುದ್ರಯ್ಯನವರೆ. ನಾನು ಎದುರಿಗಿಲ್ಲದಿರುವಾಗ ಪ್ರಭುಗಳು ನಿಮ್ಮಿಂದ ಹೊರಗಿನ ಸುದ್ದಿ ತಿಳಿದುಕೊಳ್ಳಲು ಪ್ರಯತ್ನಿಸಬಹುದು. ನೆನಪಿರಲಿ, ಅವರ ಎಲ್ಲ ಪ್ರಶ್ನೆಗಳಿಗೆ ನಿಮ್ಮದೊಂದೇ ಉತ್ತರ, 'ನನಗೆ ತಿಳಿಯದು' ಎಂದು."

"ಆ ಒಂದು ಉತ್ತರವನ್ನು ನಾಲ್ಕು ಭಾಷೆಗಳಲ್ಲಿ, ನಾಲ್ಕು ವಿಧವಾಗಿ ಹೇಳುವ ಚತುರತೆ ನನಗಿದೆ, ಹೆಗ್ಗಡೆಗಳೆ, ನೀವು ಹೆದರಬೇಕಾಗಿಲ್ಲ" –ಬ್ರಹ್ಮಶಿವನು ಎದೆ ತಟ್ಟಿ ಜಂಭದಿಂದ ಹೇಳಿದನು.

"ಅಷ್ಟೇ ಅಲ್ಲ. ಪ್ರಭುಗಳು ನಿಮ್ಮ ಮುಖಾಂತರ ಹೊರಗಿನವರಿಗೆ ಓಲೆ ಕಳುಹಿಸಲು, ತರಿಸಿಕೊಳ್ಳಲು ಪ್ರಯತ್ನ ಮಾಡಬಹುದು, ಆ ಸಂದರ್ಭಗಳಲ್ಲಿ........."

"ಏನು ಮಾಡಬೇಕು?"

"ಓಲೆ ತೆಗೆದುಕೊಂಡು ರಹಸ್ಯವಾಗಿ ನನಗೆ ಕೊಡಬೇಕು."

"ಆಗಬಹುದು," ಎಂದು ಬ್ರಹ್ಮಶಿವನು ತುಂಟಾಟಿಕೆಯ ನಗೆಹಾರಿಸಿ, ಆ ಕಾವ್ಯೋಪದೇಶಕ, ಅಗ್ಗಳ, ಅವನ ವಿಚಾರವೇನು ?" ಎಂದು ಕೇಳಿದನು.

"ಅವನೊಬ್ಬ ಮೋಜುಗಾರ ಭಂಡಕವಿ. ಹೆಣ್ಣೆಂದರೆ ಬಾಯಿಬಿಡುತ್ತಾನೆ. ಅವನ ಮೇಲೂ ನೀವು ಕಣ್ಣಿಟ್ಟಿರಬೇಕು. ಪ್ರಭುಗಳೊಡನೆ ರಹಸ್ಯವಾಗಿ ಮಾತಾಡಲು ಅವನಿಗೆ ಅವಕಾಶ ಕೊಡಬಾರದು. ಅವನು ರಾಜಗೃಹಕ್ಕೆ ಬಂದು ಕೆಲವೇ ವಾರಗಳಾದವು. ಹೆಂಗಸರು, ಪುಸ್ತಕ, ಇವೆರಡನ್ನು ಬಿಟ್ಟರೆ ಅವನಿಗೆ ಮತ್ತಾವ ಆಸಕ್ತಿಯೂ ಇಲ್ಲ."

"ಅವನೊಬ್ಬ ಪುಸ್ತಕಪ್ರಿಯ ಮೊನೆಗಾರ ರಸಿಕನೆಂದು ನಾನು ನೋಡುತ್ತಲೆ ತಿಳಿದೆ. ಅವನಿಗೆ ನೀವು ಗಣಿಕಾವಾಸದ ಹತ್ತಿರ ಬಿಡಾರ ಮಾಡಿಕೊಟ್ಟಿರುವುದು ಕುರಿಹಿಂಡನ್ನು ಕಾಯಲು ತೋಳನನ್ನು ನೇಮಿಸಿದಂತಾಗಿದೆ, ಹೆಗ್ಗಡೆಗಳೆ."

ಬ್ರಹ್ಮಶಿವನ ಕುಹಕ ಹೆಗ್ಗಡೆಗೆ ತಟ್ಟನೆ ಅರ್ಥವಾಗಲಿಲ್ಲ. " ಏನು ಹೇಳಿದಿರಿ, ಅಯ್ಯನವರೆ?" ಎಂದು ಕುತೂಹಲದಿಂದ ಪ್ರಶ್ನಿಸಿದನು.

"ಹಿಂಡನ್ನು ಕಾಯಲು ಬಂದ ತೋಳ, ದಿನಕ್ಕೊಂದು ಕುರಿಯನ್ನು

ಹಿಡಿದು ತಿಂದಿತಂತೆ. ನಿಮ್ಮ ಗಣಿಕಾಪರಿವಾರಕ್ಕೂ ಅದೇ ಗತಿ."

ಆಗ ಹೆಗ್ಗಡೆಗೆ ಅರ್ಥವಾಯಿತು. ಗಟ್ಟಿಯಾಗಿ ನಕ್ಕು, "ಉಪಯುಕ್ತ ವಸ್ತುಗಳು ನಿರುಪಯೋಗದಿಂದ ಕೊಳೆಯುತ್ತಿರುವುದನ್ನು ಕಂಡು ಅಗ್ಗಳನ ಕವಿ ಹೃದಯ ಮರುಕದಿಂದ ತಳಮಳಿಸಿರಬೇಕು, ಅಲ್ಲವೇ ಅಯ್ಯನವರೆ ? ಸನ್ಯಾಸಿಯಾದರೂ ರಸಿಕರು ನೀವು. ಹಿಂಡಿನಲ್ಲಿ ಯಾವುದಾದರೊಂದು ಕುರಿಯ ಮೇಲೆ ನಿಮ್ಮ ಕೃಪಾದೃಷ್ಟಿ ಬಿದ್ದರೆ ನನ್ನ ಅಡ್ಡಿಯಿಲ್ಲ," ಎಂದನು.

ಹೆಗ್ಗಡೆ ತನ್ನನ್ನು ಪರೀಕ್ಷಿಸುತ್ತಿರುವುದಾಗಿ ತಿಳಿದು ಬ್ರಹ್ಮಶಿವನು, "ಹೆಣ್ಣು ಮಾಯೆ, ಎಂದು ಶಾಸ್ತ್ರ ಹೇಳುತ್ತದೆ. ಆ ಮಾಯೆಯಿಂದ ಪಾರಾಗಲು ನಾನು ಗುರುದೇವರನ್ನು ಆಶ್ರಯಿಸಿದ್ದೇನೆ. ಬಿಟ್ಟದ್ದನ್ನು ಯಾರಾದರೂ ಮತ್ತೆ ಬಯಸುವರೆ?" ಎಂದು ವಿರಕ್ತಿಯಿಂದ ನುಡಿದನು.

"ನಿಮ್ಮ ಗುರುಗಳೂ ಮಾಯೆಯಿಂದ ಮುಕ್ತರಾದವರೆ? ವಯಸ್ಸಾದರೂ ದೇಹದಲ್ಲಿ ಶಕ್ತಿಯುಡುಗಿಲ್ಲ."

"ಹೆಣ್ಣಿನ ಹೆಸರು ಕೇಳಿದರೆ ಅವರು ಕಿಡಿಕಿಡಿಯಾಗುವರು."

"ಹಾಗಿದ್ದರೆ ಈ ದಿನ ಬೆಳಿಗ್ಗೆ ಅಷ್ಟೊಂದು ಮಂದಿ ಹೆಂಗಸರು ಅವರ ಕಾಲು ಹಿಡಿದಾಗ ಆ ವೈರಾಗ್ಯದ ಬೆಂಕಿ ಎಲ್ಲಿ ಮರೆಯಾಗಿತ್ತು ?"

–ಕುಹಕದ ನಗೆ ಬೀರಿ ಹೆಗ್ಗಡೆ ಹೇಳಿದನು.

"ಏಕಕಾಲದಲ್ಲಿ ಅಷ್ಟೊಂದು ಜನ ಹೆಂಗಸರ ಸೆರಗಿನ ಗಾಳಿಯಿಂದ ಉರಿ ಆರಿತ್ತು, ಹೆಗ್ಗಡೆಗಳೆ. ಕೆಂಡ ಹಾಗೆಯೇ ಇದೆ. ಈಗ ನಾವು ಪುನಃ ಆ ವಿಚಾರ ತೆಗೆದರೆ ಜ್ವಾಲೆಯೆದ್ದು ನಮ್ಮನ್ನು ಸುಡುವುದು."

ಸನ್ಯಾಸಿ ತನ್ನೊಡನೆ ನಗೆಯಾಡುತ್ತಿರುವನೆಂದು ಹೆಗ್ಗಡೆ ತಿಳಿದನು. 'ಎರಡು ದಿನ ಕಳೆದರೆ ಗುರುಶಿಷ್ಯರು ತಾವಾಗಿ ನನ್ನ ಬಳಿಗೆ ಬರುವರು. ಎಂಥೆಂಥ ಋಷಿ ಮುನಿಗಳನ್ನೋ ನುಂಗಿ ನೀರು ಕುಡಿದ ಮಾಯೆ ಈ ಬಡ ಜಂಗಮರನ್ನು ಬಿಡುವುದೆ ?' ಎಂದು ಭಾವಿಸಿ ಪ್ರಕಟವಾಗಿ ಅವನು,

"ನೀವು ಮತ್ತು ನಿಮ್ಮ ಗುರುಗಳು ನಿಜವಾಗಿ ಅದೃಷ್ಟಹೀನರು, ಹರೀಶ ರುದ್ರಯ್ಯನವರೆ. ರಾಜಗೃಹದ ಗಣಿಕಾವಾಸ ರತ್ನಗಳ ನಿಧಿ. ಅದು ತಾನಾಗಿ ನಿಮ್ಮನ್ನು ಹುಡುಕಿಕೊಂಡು ಬಂದಾಗ ಹಾವೆಂದು ಹಿಂದೆ ಹೋಗುವಿರಿ. ಆವಿನ ಕೆಚ್ಚಲಲ್ಲಿದ್ದೂ ಹಾಲಿನ ರುಚಿ ಕಾಣದ ಉಣ್ಣೆಗಳು ನೀವು," –ಎಂದ ನಗುತ್ತಾ ಮೂದಲಿಸಿದನು.

ಮರುದಿನ ಅಪರಾಹ್ನ ಓಲಗಶಾಲೆಯಲ್ಲಿ ಪ್ರವಚನ ಪ್ರಾರಂಭವಾದಾಗ

ಪಸಾಯಿತರಿಬ್ಬರು ಕೈಕಟ್ಟಿ ನಿಂತಿರುವುದನ್ನು ಕಂಡು ಜಗದೇಕಮಲ್ಲನು, "ಹೆಗ್ಗಡೆಯೆಲ್ಲಿ?" ಎಂದು ಕೇಳಿದನು.

"ಅವರು ದಾಸೋಹದ ಕಾರ್ಯಕ್ಕಾಗಿ ಹೊರಗೆ ಹೋಗಿದ್ದಾರೆ, ಒಡೆಯರೆ."

–ಪಸಾಯಿತನು ಉತ್ತರ ಕೊಟ್ಟನು.

"ಈಗ ಬರುವುದಿಲ್ಲವೆ ?"

"ಬರುವುದಿಲ್ಲ, ಒಡೆಯರೆ."

"ನೀವು ಹೋಗಬಹುದು, ನಿಮಗೆ ಇಲ್ಲೇನೂ ಕೆಲಸವಿಲ್ಲ."

–ಎಂದು ಜಗದೇಕಮಲ್ಲನು ಬೊಮ್ಮರಸನ ಕಡೆ ತಿರುಗಿ, "ಪ್ರವಚನಾರಂಭವಾಗಲಿ," ಎಂದನು.

ಹಿಂದಿನ ದಿನ ಗೊತ್ತಾಗಿದ್ದಂತೆ ಸೂತಸಂಹಿತೆಯ ಶ್ಲೋಕಗಳನ್ನು ಅಗ್ಗಳನು ರಾಗವಾಗಿ ಪಠಿಸಿದನು. ಬೊಮ್ಮರಸನು ಅರ್ಥವಿಸಿದನು.

ಹೀಗೆ ಕೊಂಚಕಾಲ ಪ್ರವಚನ ನಡೆದ ಮೇಲೆ, ಪಸಾಯಿತರು ಹೋದರೆ, ಕಾವಲುಭಟರೇನು ಮಾಡುತ್ತಿದ್ದಾರೆ, ಸಭೆಯಲ್ಲಿ ನಡೆಯುವ ಮಾತುಕತೆಗಳು ಬಾಗಿಲ ಹತ್ತಿರಿರುವವರಿಗೆ ಕೇಳಿಸುವುದೇ, ಇತ್ಯಾದಿ ವಿಚಾರಗಳನ್ನು ಎಚ್ಚರದಿಂದ ಪರಿಶೀಲಿಸಿದ ಬ್ರಹ್ಮಶಿವನು, ಬೊಮ್ಮರಸನ ಚರಣತಳದಲ್ಲಿ, ಬಾಗಿಲ ಕಡೆ ಮುಖ ಮಾಡಿ ಕುಳಿತು, ಆಸಕ್ತಶ್ರೋತೃವಿನಂತೆ ತಲೆಯೆತ್ತಿ, ಕಣ್ಣರಳಿಸಿ, ಕಿವಿ ತೆರೆದು ನೋಡುತ್ತ,

"ನನ್ನ ಸಂದೇಹವೊಂದಿದೆ. ಅದನ್ನು ಪರಿಹರಿಸಬೇಕಾಗಿ ಬೇಡುತ್ತೇನೆ," ಎಂದು ಬಿನ್ನವಿಸಿಕೊಂಡನು.

"ಕೇಳಬೇಕಾದ್ದನ್ನು ಕೇಳು, ಹರೀಶ."

–ಸುಪ್ರೀತನಂತೆ ಬೊಮ್ಮರಸನು ನುಡಿದನು.

"ಬೆಕ್ಕು ಸನ್ಯಾಸ ದೀಕ್ಷೆ ತೆಗೆದುಕೊಂಡಾಗ ಇಲಿಗಳೇನು ಮಾಡುವವು?"

ಬ್ರಹ್ಮಶಿವನ ಪ್ರಶ್ನೆ ಅಲ್ಲಿದ್ದವರನ್ನು ಅಚ್ಚರಿಗೊಳಿಸಿತು. ಬೊಮ್ಮರಸನು ಕೋಪದಿಂದ "ಎಂತಹ ಅಸಂಬದ್ಧ ಪ್ರಶ್ನೆ !" ಎಂದನು.

"ಅಸಂಬದ್ಧವಲ್ಲ. ಈಗ ಹೆಗ್ಗಡೆ ಸಭೆಯಲ್ಲಿಲ್ಲ. ಈ ದಿನ ಬರುವುದೂ ಇಲ್ಲ. ಅನಿರೀಕ್ಷಿತವಾಗಿ ದೊರೆತ ಈ ಕಾಲವನ್ನು ನಾವು ಮಂತ್ರಾಲೋಚನೆಗಾಗಿ ಉಪಯೋಗಿಸಿಕೊಳ್ಳುವುದು ಉಚಿತವಲ್ಲವೆ?"

ಜಗದೇಕಮಲ್ಲನು ಅಗ್ಗಳ ಬೊಮ್ಮರಸರಿಗೆ ಪಠನ ವ್ಯಾಖ್ಯಾನಗಳನ್ನು ಮುಂದುವರೆಸಲು ಸನ್ನೆಮಾಡಿ ಪ್ರಾರಂಭಿಸಿದನು. "ಹೆಗ್ಗಡೆ ನಿನಗೇನು ಹೇಳಿದನು?"

"ದಾಸೋಹದ ಗೊಂದಲದಿಂದ ಇನ್ನೆರೆಡು ವಾರ ತಾನು ಸಭೆಗೆ ಬರುವುದಿಲ್ಲವೆಂದು. ಆ ಸಮಯದಲ್ಲಿ ನಾನು ಅವನ ಪ್ರತಿನಿಧಿಯಾಗಿ ಇಲ್ಲಿದ್ದು ಸಭೆಯಲ್ಲಿ ನಡೆಯುವುದನ್ನು ವರದಿಮಾಡಬೇಕಂತೆ ?"

"ಅದಕ್ಕೆ ನೀನು ಒಪ್ಪಿದೆಯಾ ?"

"ಒಪ್ಪಿದೆ."

"ಏನೆಂದು ವರದಿಮಾಡುವೆ ?"

"ದಿನಕ್ಕೊಂದು ಅಧ್ಯಾಯದಂತೆ ಸೂತಸಂಹಿತೆಯ ವ್ಯಾಖ್ಯಾನ ನಡೆಯುತ್ತಿದೆಯೆಂದು. ಚತುರತೆಯಿಂದ ನಾನು ಆ ಕಾರ್ಯ ಮಾಡುತ್ತೇನೆ. ಪ್ರಭುಗಳು ನನ್ನ ಮೇಲೆ ಪೂರ್ಣ ಭರವಸೆಯಿಡಬಹುದು."

"ಹೆಗ್ಗಡೆ ಸಾಮಾನ್ಯನಲ್ಲ. ಅವಿವೇಕಿಯಂತೆ ನಟಿಸಿ, ಹೆಣ್ಣಿನಾಸೆ ತೋರಿಸಿ, ನಿಮ್ಮನ್ನು ವಂಚಿಸಲು ಪ್ರಯತ್ನಿಸುತ್ತಾನೆ. ಅವನ ವಿಚಾರದಲ್ಲಿ ನೀವು ಬಹಳ ಎಚ್ಚರದಿಂದಿರಬೇಕು. ನಮ್ಮ ಸಂಚಿತ ಸುಳಿವೂ ಅವನಿಗೆ ತಿಳಿಯದಂತೆ ನೋಡಿ ಕೊಳ್ಳಬೇಕು. ಈ ವಿಚಾರವನ್ನು ಬೊಮ್ಮರಸನಿಗೂ ತಿಳಿಸು."

"ಹೆಗ್ಗಡೆಯ ವಿಚಾರದಲ್ಲಿ ಆಗಲೆ ನಾನು ಅವರಿಗೆ ಎಚ್ಚರಿಕೆ ಕೊಟ್ಟಿದ್ದೇನೆ."

"ನೀವು ಕಲ್ಯಾಣಕ್ಕೆ ಬಂದು ಪಾಂಥನಿವಾಸದಲ್ಲಿ ಬಿಡಾರಮಾಡಿದವರೆಗಿನ ಎಲ್ಲ ಸುದ್ದಿಗಳೂ ನನಗೆ ಅಗ್ಗಳನಿಂದ ತಿಳಿದಿದೆ. ಆ ದಿನ ನೀವು ಪಾಂಥನಿವಾಸದಿಂದ ಹೋದ ಮೇಲೆ ನಿನ್ನೆ ರಾಜಗೃಹಕ್ಕೆ ಬಂದವರೆಗೆ ಏನೇನು ನಡೆಯಿತೆಂಬುದನ್ನು ಸಂಗ್ರಹವಾಗಿ ಹೇಳು."

ಬ್ರಹ್ಮಶಿವನು ಅದರಂತೆ ಎಲ್ಲವನ್ನೂ ತಿಳಿಸಿದನು. ಹುಲ್ಲಿನ ರಾಶಿಯಿಂದ ಕೋಳಿ ಹಾರಿ ಬಂದು ತಮ್ಮ ರಕ್ಷಣೆಗೆ ಕಾರಣವಾದದ್ದು ಮಹಮನೆಯಲ್ಲಿ ಮಾಚಿದೇವರ ಕಟುಹಾಸ್ಯ, ದೇವಗಿರಿಗೆ ಅವಸರದ ಭಟನನ್ನು ಕಳುಹಿಸಿದ್ದು, ಈ ಎಲ್ಲ ವಿಚಾರಗಳನ್ನೂ ಸಂಗ್ರಹವಾಗಿ ಹೇಳಿದನು.

"ದೇವಗಿರಿಗೆ ವರದಿ ಕಳುಹಿಸಿ ಎಷ್ಟು ದಿನಗಳಾದವು ?"

"ಸುಮಾರು ಹತ್ತು ದಿನಗಳು. ಪ್ರತಿದಿನ ಉತ್ತರ ನಿರೀಕ್ಷಿಸುತ್ತಿದ್ದೇವೆ."

"ಉತ್ತರ ಬಂದರೆ ನಿಮಗೆ ತಿಳಿಯುವುದು ಹೇಗೆ?"

"ಬಿಲ್ವಪತ್ರೆಗಾಗಿ ಪ್ರತಿದಿನ ಮಹಮನೆಗೆ ಹೋಗಿ ಬರಲು ಹೆಗ್ಗಡೆ ರಹದಾರಿ ಕೊಟ್ಟಿದ್ದಾನೆ. ಮಹಾರಾಣಿಯ ದೂತನು ನನಗಾಗಿ ಅಲ್ಲಿ ಕಾಯುವನು."

"ರಹದಾರಿಯನ್ನು ಬಹಳ ಎಚ್ಚರದಿಂದ ಉಪಯೋಗಿಸಿಕೊಳ್ಳಬೇಕು. ಎರಡು ಮೂರು ದಿನಗಳಿಗೊಂದು ಸಾರಿ ಹೋಗಿ ಬಂದರೆ ಸಾಕು. ಬರುವಾಗ

ಜೋಳಿಗೆಯ ತುಂಬ ಪತ್ರೆ ತುಂಬಿರಲಿ. ಹೋಗುವಾಗ ಬರುವಾಗ ದಾರಿಯಲ್ಲಿ ಯಾರ ಸಂಗಡಲೂ ಮಾತಾಡಬಾರದು. ರಾಜಗೃಹದ ಸುತ್ತ ಬಿಜ್ಜಳನ ಬೇಹುಗಾರರು ಸುಳಿದಾಡುತ್ತಾರೆ."

"ಆಜ್ಞೆ, ಪ್ರಭುಗಳು ಹೇಳಿದಂತೆ ಮಾಡುತ್ತೇನೆ."

"ದೇವಗಿರಿಯಿಂದ ಸುದ್ದಿ ಬರುವವರೆಗೆ ನಾವೇನೂ ಮಾಡುವಂತಿಲ್ಲ. ದಾಸೋಹ ನಡೆಯುವಾಗ ರಾಜಗೃಹದಲ್ಲಿ ಹೆಚ್ಚು ಸಂದಣಿಯಿರುತ್ತದೆ. ಅನೇಕ ಮಂದಿ ಜಂಗಮರು ಬರುತ್ತಾರೆ. ನೀವು ಅವರಲ್ಲಿ ಯಾರೊಡನೆಯೂ ಮಾತಾಡಬಾರದು. ಪ್ರತಿದಿನ ದಾಸೋಹ ಪ್ರಾರಂಭವಾಗಿ ಮುಗಿಯುವವರೆಗೆ ನಿಮ್ಮ ಬಿಡಾರದಲ್ಲಿಯೇ ಇದ್ದುಬಿಟ್ಟರೆ ಒಳ್ಳೆಯದು. ದಾಸೋಹದ ಕೊನೆಯ ದಿನ ನಾನು ಅತಿಥಿಗಳಿಗೆ ದರ್ಶನ ಕೊಡುತ್ತೇನೆ, ಆಗ ಮಾತ್ರ ನೀವು ನನ್ನ ಪರಿವಾರದ ಸಂಗಡಿರಬಹುದು. ಮುಂದಿನ ತಿಂಗಳಲ್ಲಿ ಮಂಗಳವೇಡೆಯಲ್ಲಿ ಕುಮಾರ ಸೋಮೇಶ್ವರನ ಪಟ್ಟಾಭಿಷೇಕ ನಡೆಯುತ್ತದೆ. ಆ ಸಮಾರಂಭಗಳನ್ನು ಮುಗಿಸಿಕೊಂಡು ಬಿಜ್ಜಳನು ಕಲ್ಯಾಣಕ್ಕೆ ಹಿಂದಿರುಗುತ್ತಾನೆ. ಆ ಮೇಲೆ ಅವನೇನು ಮಾಡುವನು, ಪ್ರೇಮಾರ್ಣವನ ಉತ್ತಾರಾಧಿಕಾರ ವಿಚಾರದಲ್ಲಿ ಅವನ ಪ್ರತಿಕ್ರಿಯೆಯೇನು ಎಂಬುದನ್ನು ನೋಡಿಕೊಂಡು ನಾವು ಮುಂದಿನ ಕಾರ್ಯಗಳನ್ನು ನಿರ್ಧರಿಸಬೇಕು. ಅಲ್ಲಿಯವರೆಗೆ ಓಲಗ ಶಾಲೆಯಲ್ಲಿ ಪ್ರತಿದಿನ ಪ್ರವಚನ ನಡೆಯುವುದು. ಅಗ್ಗಳ ಬೊಮ್ಮರಸರಿಗೆ ನೀನು ಪ್ರತ್ಯೇಕವಾಗಿ ಈ ವಿಚಾರಗಳನ್ನು ತಿಳಿಸತಕ್ಕದ್ದು. ನೀವು ಮೂವರು ಒಂದುಗೂಡಿ ಯಾವಾಗಲೂ ಮಾತಾಡಬೇಡಿರಿ. ಅದು ಸಂದೇಹಕ್ಕೆ ಎಡೆಗೊಡುತ್ತದೆ. ನಮ್ಮ ಮೂವರ ನಡುವೆ ನೀನು ಸಂಧಾನಿಯಂತೆ ನಡೆದುಕೊಳ್ಳಬೇಕು. ನಾನು ಹೇಳಿದುದೆಲ್ಲವೂ ನೆನಪಿದೆಯೆ ?"

"ನೆನಪಿದೆ."

"ಈಗ ನೀನು ಹೊರಗೆ ಹೋಗಿ ಭಟರಿಗೆ ಹೇಳಿ ಪಸಾಯಿತರನ್ನು ಕರೆಸು."

ಬ್ರಹ್ಮಶಿವನು ಭಟರ ಸಂಗಡ ಮಾತಾಡುತ್ತಿದ್ದಾಗ ಜಗದೇಕಮಲ್ಲನು ಬೊಮ್ಮರಸ ಅಗ್ಗಳರಿಗೆ ಮೆಲುದನಿಯಲ್ಲಿ, "ನಾನು ಬ್ರಹ್ಮಶಿವನಿಗೆ ಎಲ್ಲವನ್ನು ಹೇಳಿದ್ದೇನೆ. ಕೆಲವು ದಿನಗಳು ಸಂಚಿನ ಸಂಬಂಧವಾದ ಮಾತುಕಥೆಗಳು ಅವನ ಮುಖಾಂತರ ನಡೆದರೆ ಒಳ್ಳೆಯದು," ಎಂದು ಹೇಳಿದನು.

ಪಸಾಯಿತರು ಬಂದ ಮೇಲೆ ಕಾವ್ಯೋಪದೇಶಿ ಧರ್ಮೋಪದೇಶಕರಿಗೆ ಫಲ ಪುಷ್ಪ ದಕ್ಷಿಣೆಗಳ ವಿನಿಯೋಗದೊಡನೆ ಪ್ರವಚನ ಮುಗಿಯಿತು.

ರಾಜಗೃಹದಲ್ಲಿ ಒಟ್ಟುಗೂಡಿದೊಡನೆ ಜಗದೇಕಮಲ್ಲನು ಸಂಚಿನ ಎಲ್ಲ ಸೂತ್ರಗಳನ್ನೂ ತನ್ನ ಕೈಗೆ ತೆಗೆದುಕೊಂಡು ನಾಯಕನಂತೆ ಆಜ್ಞೆಮಾಡುತ್ತಿರುವುದನ್ನು ಕಂಡು ಅಗ್ಗಳ ಬೊಮ್ಮರಸರು ಆಶ್ಚರ್ಯಗೊಳ್ಳಲಿಲ್ಲ.

ಜಗದೇಕಮಲ್ಲನ ಚಾತುರ್ಯ ದಕ್ಷತೆಗಳನ್ನು ಅವರು ಚೆನ್ನಾಗಿ ತಿಳಿದಿದ್ದರು.

* * * *

# ೩. ಮಂಗಳವೇಡೆಯ ಅಗ್ನಿದಾಹ

ಮಂಗಳವೇಡೆಯಲ್ಲಿ ಕಲಚೂರ್ಯ ಅರಮನೆಯ ಹೊರಗಿನ ಉದ್ಯಾನ, ಕುಮಾರ ಸೋಮೇಶ್ವರನ ಪಟ್ಟಾಭಿಷೇಕಕ್ಕಾಗಿ ಅಲಂಕೃತವಾಗಿತ್ತು. ಉದ್ಯಾನದ ನಡುವೆ ದೊಡ್ಡ ಸಭಾಮಂಟಪ ರಚಿಸಲ್ಪಟ್ಟು, ಬಣ್ಣ ಬಣ್ಣದ ಬಟ್ಟೆಗಳ ಮೇಲ್ಕಟ್ಟು ತಳಿರು ತೋರಣ ಪತಾಕೆಗಳಿಂದ ಮೆರೆಯುತ್ತಿತ್ತು.

ಮಹೋತ್ಸವಕ್ಕಾಗಿ ಬರುವ ಸಾರ್ವಜನಿಕರ ಸಮಾರಾಧನೆಗಾಗಿ ಉದ್ಯಾನದ ಅಂಚಿನಲ್ಲಿ ರಾಜಮಾರ್ಗದ ಸಮೀಪ ಅರವಂಟಿಗೆಗಳು, ಮಿಠಾಯಿ ತಿಂಡಿ ತೀರ್ಥದ ಅಂಗಡಿಗಳು, ಪಾನಶಾಲೆ, ನಾಟ್ಯಗೃಹಗಳು, ನಟುವ ನಾಯಕಿ, ಜೋತಿಷಿ, ಹಾಡುಗಾರ, ಗಾರುಡಿಗ, ಹಾವಾಡಿಗ, ನಾಯಿಂದ, ಜಲಗಾರರ ಗುಡಿಸಲು ಗೂಡಾರ ಅವಾರಗಳು ಸಾಲಾಗಿದ್ದವು.

ಅಪರಾಹ್ನದ ಮೊದಲಜಾವ ಮುಗಿಯುತ್ತಿದ್ದಂತೆ ನಗರದ ಮಧ್ಯಮ ವರ್ಗದ ನಾಗರಿಕರು, ಸಮೀಪದ ಹಳ್ಳಿಗಳ ಶೆಟ್ಟಿ ಬಣಜಿಗ ಮೋಜುಗಾರ ಮೊನೆಗಾರರು, ಒಬ್ಬೊಬ್ಬರಾಗಿ ಇಬ್ಬಿಬ್ಬರಾಗಿ ಉದ್ಯಾನಕ್ಕೆ ಬರಲು ಪ್ರಾರಂಭಿಸಿದರು.

ಹಳ್ಳಿಯ ತರುಣ ಶೆಟ್ಟಿಯೊಬ್ಬನು ನಾಯಿಂದನ ಗೂಡಾರದಲ್ಲಿ ಮುಖ ಕೆರೆಸಿಕೊಂಡು, ಜಲಗಾರನ ಅವಾರದಲ್ಲಿ ಜಳಕಮಾಡಿ, ನಟುವ ಗೂಡಾರಗಳ ಹತ್ತಿರ ನಾಡ ಹಾಡಿತಿಯರ ಅಶ್ಲೀಲ ಹಾಡು ಕುಣಿತಗಳನ್ನು ನೋಡುತ್ತ ನಿಂತಿದ್ದಂತೆ ತರುಣ ನಾಗರಿಕನೊಬ್ಬನು ಅಲ್ಲಿಗೆ ಬಂದು, "ಏನಪ ಶೆಟ್ರ, ಯಾವಾಗ ಬಂದದ್ದು?" ಎಂದನು.

"ಇದೇ ಬಂದೀನ್ರಿ, ರಂಗಣ್ಣ. ಏನ್ ಇಚಾರ ? ಇಷ್ಟೆಲ್ಲ ಮೋಜು ನಡದೈತಿ?" – ಎಂದ ಶೆಟ್ಟಿ.

"ತಿಳೀದೇನ ನಿಮಗೆ ? ಇನ್ ಹತ್ತು ದಿನವೂ ಊರಾಗ ಉತ್ಸವವೋ ಉತ್ಸವ. ಕುಮಾರ ಸೋಮಿದೇವರ ಪಟ್ಟಾಭಿಷೇಕ ನಡೀತೈತಿ."

ಹತ್ತು ದಿನ ಉತ್ಸವ ! ಮೊದಲೇ ತಿಳಿದಿದ್ದರೆ ಗೆಳತಿಯನ್ನೂ ಸಂಗಡ ಕರೆತಂದು ಮೋಜು ಮಾಡಬಹುದಾಗಿತ್ತು – ಎಂದು ಯೋಚಿಸಿದ ಶೆಟ್ಟಿ.

ಇಂಗಿತವರಿತ ರಂಗಣ್ಣ, “ಈ ಹಳ್ಳಿಹಾಡಿತೀರ ನಾಡ ಕುಣಿತದಲ್ಲೇನದ ಶೆಟ್ರ? ಹಾಂಗಬನ್ರಿ, ನಾಟ್ಯಶಾಲೇಲಿ ಪಕ್ಕಾ ನರ್ತಕೀರ ನಾಟ್ಯ ನೋಡೋಣು,” ಎಂದ.

ನಗರದ ಅನುಭವವಿಲ್ಲದ ಶೆಟ್ಟಿಗೆ ವಾಸ್ತವದಲ್ಲಿ ಇಂಥ ‘ಗೆಳೆಯ’ ಬೇಕಾಗಿತ್ತು. “ನೀವ್ ಸಿಕ್ಕಿದ್ದು ಚಲೋ ಆತು, ರಂಗಣ್ಣ. ನಡೀರಿ,” ಎಂದು ಸಂಗಡ ಹೊರಟ.

ಅವರು ನಾಯಕಿಯರ ಗೂಡಾರಗಳ ಹತ್ತಿರ ಬಂದಾಗ ಸಿಂಗರಿಸಿಕೊಂಡು ಸಜ್ಜಾದ ಗಣಿಕೆಯರು ಬಾಗಿಲ ತೆರೆಗಳನ್ನು ಸರಿಸಿ–ನಿಂತು ಹೋಗಿ ಬರುವವರನ್ನು ಸನ್ನೆಮಾಡಿ ಕರೆಯುತ್ತಿದ್ದರು.

“ಯಾರಪ ಆಕಿ ? ನಮ್ಮನ್ನೇ ಕರೀತಿರೋ ಹಾಂಗದ !” ಎಂದ ಶೆಟ್ಟಿ, ಅವರಲ್ಲೊಬ್ಬಳನ್ನು ತೋರಿಸಿ.

“ಅವಳು ಕರೆಯೋದು ನಿಮ್ಮನ್ನಲ್ಲ, ಶೆಟ್ರ. ನಿಮ್ಮ ದುಡ್ಡಿನ ಚೀಲಾನ. ಅವರ ಸಾವಾಸ ಮಾಡಿದ್ರಿ ಅಂದ್ರ ನಿಮ್ ಕಿಸಿ ಬರೀದು ಮಾಡಿ ಕಳಿಸ್ತಾರ.”

ರಂಗಣ್ಣನ ಎಚ್ಚರಿಕೆಯನ್ನು ಗಮನಿಸಿದ ಶೆಟ್ಟಿ, “ಎಷ್ಟಪಾ ಕೇಳಾರವರು? ನಾನೇನ ಪಟ್ಟಣಕ್ಕೆ ಬರೀ ಕಿಸಾಗ ಬಂದೀನೇನು?” ಎಂದು ಜಂಭವಾಡಿದ.

“ಅವರು ಕೇಳೋದೇನೋ ಗಳಿಗೆಗೆ ಎರಡು ವರಹಾ, ಆದ್ರ ತಿಂಡಿ ತೀರ್ಥ ಬೋಮಾನ ಅಂತ ದುಪ್ಪಟ ಹಣ ಕಸೀತಾರ.”

“ಹಂಗಾರ ಈ ನಾಯಕಿ ನರ್ತಕಿ ಅಂತ ಹೇಳಿಕೊಳ್ಳೋರು ಸೂಳೇರಿಗಿಂತ ದುಬಾರಿ ಅಂತೀರಾ ರಂಗಣ್ಣ?”

“ಇವರು ನಾಟ್ಯ ಶಾಲೇಲಿ ನರ್ತಕೀರು, ಗೂಡಾರದಲ್ಲಿ ನಾಯಕಿಯರು, ಮನೇಲಿ ಸೂಳೆಯರು. ಸೂಳೆಯಲ್ಲದ ನಾಯಕಿ, ನಾಯಕಿಯಲ್ಲದ ನರ್ತಕಿ, ಅಪರೂಪ ಶೆಟ್ರ. ಎಲ್ಲೋ ಅಲ್ಲೊಬ್ಬಳು, ಇಲ್ಲೊಬ್ಬಳು ಅದಾಳ, ನಾಟ್ಯಶಾಲೇಗೆ ಬಂದ್ರ ಅಂಥವಳೊಬ್ಬಳನ್ನ ತೋರಿಸ್ತೇನು. ಅವಳ ಸಂಗಡ ಗೆಣೆಯ ಒಬ್ಬ ಅದಾನ. ಅವನ್ನಲ್ಲದ ಮತ್ತಾರನ್ನೂ ಕಣ್ಣೆತ್ತಿ ಸುದ್ದಾ ನೋಡೋಲ್ಲ ಅವಳು.”

“ಅಂದ್ರ, ಸೂಳೆಯಾದ್ರೂ ಸತಿ.”

“ಹೌದು, ಸತೀ ಸೂಳೆ. ಆದರೆ ಪತಿಗಳನ್ನ ತಿಂಗಳಿಗೊಂದ್ಸಾರಿ ಬದಲಾಯಿಸಿ ಕೊಳ್ತಾಳ. ಈ ತಿಂಗಳಿದ್ದವನು ನಾಳೆ ತಿಂಗಳಿಲ್ಲ. ನಿಮಗೆ ಇಚ್ಛಾ ಇದ್ದರ ಹೇಳ್ರಿ, ಸರದಿ ನೋಡಿಕೊಂಡು ನಿಮಗೂ ಒಂದು ತಿಂಗಳು ಗೊತ್ತುಮಾಡ್ತೇನು. ಒತ್ತಿಹಣ ಹೆಚ್ಚೇನೂ ಇಲ್ಲ. ತಿಂಗಳಿಗೊಂದು ಸಾವಿರ.”

“ಒಬ್ಬ ಸೂಳೇಗ ಅಷ್ಟು ಹಣ ಕೊಡಾವ್ರೂ ಅದಾರ !” –ಆಶ್ಚರ್ಯದಿಂದ ಶೆಟ್ಟಿ ಕೇಳಿದ.

"ಒಬ್ಬನ್ನೇ ನಂಬಿಕೊಂಡಿದ್ರೆ ಅವಳ ನಿಲವು ಹಣ ಸುರಿಯೋರದಾರ ಮಂಗಳವೇಡೇಲ್ಲಿ. ಆದರಾ ಮೋಜುಗಾತಿ ಒಪ್ಪಬೇಕಲ್ಲ? ತಿಂಗಳಿಗೊಬ್ಬ ಹೊಸಬನಾದ್ರವಳ ಮನಸಿಗೆ ಸಮಾಧಾನ, ದೇಹಕ್ಕೆ ಶಾಂತಿ," –ಎಂದು ರಂಗಣ್ಣ ಶೆಟ್ಟಿಯನ್ನು ನಾಟ್ಯಗೃಹಕ್ಕೆ ಕರೆದುಕೊಂಡು ಬಂದಾಗ ಶೆಟ್ಟಿ, "ಬಾ ರಂಗಣ್ಣ, ಹೊಟ್ಟೆ ಮೊದಲು ಬೆಚ್ಚಗಾಗಬೇಕು," ಎಂದ. ಇಬ್ಬರೂ ಪಾನಶಾಲೆಗೆ ಹೋದರು.

ಅಲ್ಲಿ ಜನ ತುಂಬಿತ್ತು. ಎರಡು ಪಾತ್ರೆ ಮಧುವನ್ನು ಕೊಳ್ಳಲು ಸಭಿಕನ ಗದ್ದಿಗೆಯ ಮುಂದೆ ಒಂದು ಗಳಿಗೆ ನಿಲ್ಲಬೇಕಾಯಿತು. ಕೊನೆಗವರು ಪಾತ್ರೆಗಳನ್ನು ಹಿಡಿದು ಪಾನಶಾಲೆಯ ಸುತ್ತ ಹಾಕಿದ್ದ ಜಗತಿಯ ಮೇಲೆ ಕುಳಿತಾಗ ಹಾಡುಗಾರನೊಬ್ಬ ಕುಣಿಯುತ್ತ ಒಳಗೆ ಬಂದ. ಅವನ ಹಿಂದೆ ನಾಲ್ಕಾರು ಜನರ ಸಣ್ಣ ಗುಂಪು,

ಹಾಡುಗಾರ ಹಾಡಿದ :

ಒಲಿದಾನ ಬಿಜ್ಜಳ ಚಾಲುಕ್ಯ ಲಕ್ಕಿಗೆ,
ಒಲಿದಾಳ ಲಕ್ಕಿ ಬಿಜ್ಜಳಗೆ !
ಹಿಟ್ಟು ಹಳಸಿತ್ತ ! ನಾಯಿ ಹಸಿದಿತ್ತ !
ಚೆನ್ನಾಯ್ತು ಮೇಳ ಇಬ್ಬರಿಗೆ !

ಗುಂಪಿನಲ್ಲಿದ್ದವನೊಬ್ಬನು, "ಆ ಲಕ್ಕಿ ಹೆಸರೇನು ಹಾಡುಗಾರ ?" –ಎಂದ.

ಹಾಡುಗಾರ ಹಾಡಿದ :

ತೈಲವಿಲ್ಲದ ದೀಪ, ಗಂಡನಿಲ್ಲದ ತಾಪ,
ಹಾರಿಹತ್ತಿಕ್ಕಾಳ ಲಕ್ಕಿ !
ಬಿಜ್ಜಳನ ಬಿಡುತಾಳ, ತೊಡೆಯೇರಿ ಕುಳಿತಾಳ,
ಇಬ್ಬರಿಗೂ ಮಕ್ಕೀಕಾ ಮಕ್ಕಿ !

ಜನರು ಗೊಳ್ಳೆಂದು ನಕ್ಕರು ; ಅವರಲ್ಲೊಬ್ಬನು ಮತ್ತೆ ಕೂಗಿದ. "ಹೆಸರು! ಹೆಸರು !" ಎಂದು. ಉಳಿದವರೂ ದನಿಗೂಡಿಸಿದರು.

ಹಾಡುಗಾರ ಹಾಡಿದ :

ಎರಡು ವರಹಕ್ಕೊಂದು ಗದ್ಯಾಣವೇಕೆಂದು
ಕೇಳುತ್ತಿದ್ದಾರೆಲ್ಲ ಕೊಸರಿ,
ಎರಡಕ್ಕ ಬೆಲೆ ಮೂರು ಲೋಕವೆಂದನುತಾಳ,
ಹೆಸರು ಕಾಮಕ್ಕ, ಅಧೀಶ್ವರಿ !

"ಕಾಮೇಶ್ವರಿ ಅಂತ ಕೂಡಿಸಿ ಹೇಳಬಾರದ, ಕಪೀಶ್ವರ?"–ಗುಂಪಿನಲ್ಲೊಬ್ಬನು ಗಟ್ಟಿಯಾಗಿ ಕೂಗಿದ. ಎಲ್ಲರೂ ದನಿಗೂಡಿಸಿದರು, " ಕಾಮೇಶ್ವರಿ! ಕಾಮೇಶ್ವರಿ !" ಎಂದು.

ಗಲಭೆ ಹೆಚ್ಚಬಹುದೆಂದು ತಿಳಿದು ಸಭಿಕನು ಗದ್ದಿಗೆಯಿಂದ ಎದ್ದು ಬಂದು, ಹಾಡುಗಾರನ ಕೈಗೊಂದು ಹಣ ಕೊಟ್ಟು ಹೊರಗೆ ಹೋಗಲು ಹೇಳುತ್ತಿದ್ದಂತೆ ನಗರದ ತಳವಾರ ನಾಯಕ ಇಬ್ಬರು ಭಟರೊಡನೆ ಅಲ್ಲಿಗೆ ಬಂದ.

ಹಾಡುಗಾರ ಜನರ ನಡುವೆ ನುಸುಳಿಕೊಂಡು ಹೋಗಲು ಹವಣಿಸಿದ. ತಳವಾರ ನಾಯಕನು ಅವನನ್ನು ತಡೆದು ನಿಲ್ಲಿಸಿ,

"ಆ ಪದ ಇನ್ನೊಂದ್ಸಾರಿ ಹೇಳು ಕೇಳೋಣ," ಎಂದ.

ಹಾಡುಗಾರ ತಬ್ಬಿಬ್ಬಾಗಿ, "ಯಾವ ಪದ, ನಾಯಕರೆ?" ಎಂದ.

"ನೀನು ಹಾಡುತಿದ್ದೆಯಲ್ಲ, ಆ ಪದ."

"ಗಾಳಿ ಸುಳಿದ ಹಾಂಗ ನನ್ನ ಬಾಯಿಂದ ಪದಗಳು ಬರ್ತಾವ್ರಿ. ಏನ್ ಹಾಡಿದೆನೋ ನೆನಪಿದ್ರ ತಾನೆ ತಿರುಗಿ ಹೇಳೋದು," – ಎಂದು ಹಾಡುಗಾರ ಜಾರಿಕೊಳ್ಳಲು ನೋಡಿದ.

ನಾಯಕ ಬಿಡಲಿಲ್ಲ. "ಚಾಲುಕ್ಯರಾಣಿ ಕಾಮೇಶ್ವರೀದೇವಿಯವರನ್ನು ಹಾಸ್ಯ ಮಾಡಿ ಹಾಡು ಕಟ್ಟಿ ಹಾಡಲಿಲ್ವೆ ನೀನು?" ಎಂದು ಗದರಿಸಿ ಕೇಳಿದ.

"ಚಾಲುಕ್ಯ ರಾಜ್ಯಲಕ್ಷ್ಮಿ ಬಿಜ್ಜಳರಾಯರಿಗೆ ಒಲಿದಾಳ ಅಂತ ಹಾಡಿದ್ದುಂಟು ನಾಯಕರೆ. ಚಾಲುಕ್ಯರಾಣೀ ಇಚಾರ ನಂಗೇಕೆ ?"

"ಬಿಜ್ಜಳರಾಯರು ಚಾಲುಕ್ಯರಾಜ್ಯಾನ ಅಪಹರಿಸಿದ್ರು ಎಂತ ನೀ ಹೇಳಿಲ್ಲೆ? ಚಾಲುಕ್ಯ ರಾಣಿಯನ್ನು ಹಾಸ್ಯಮಾಡಿದ್ದು, ಬಿಜ್ಜಳರಾಯರನ್ನ ದೂರಿದ್ದು, ಹಿಂಗ ಎರಡು ರಾಜದ್ರೋಹ ಮಾಡಿದ್ದೀಯ ನೀನು. ನಡೆ ನನ್ನ ಸಂಗಡ."

ನಾಯಕನ ಸನ್ನೆಯಂತೆ ಭಟರು ಹಾಡುಗಾರನನ್ನು ಹಿಡಿದು ಹಿಂಗಟ್ಟು ಮುರಿಕಟ್ಟಿ ಎಳೆದುಕೊಂಡು ಹೋದರು. ಹಾಡುಗಾರನ ಸಂಗಡಿದ್ದವರು ಭಟರನ್ನು ನೋಡಿದಾಗಲೆ ಚದುರಿದ್ದರು. ಕಣ್ಣ ಮುಂದೆ ಇದೆಲ್ಲ ನಡೆದರೂ ಕಾಣದವರಂತೆ ಕುಳಿತಿದ್ದರು ಪಾನಿಕರು. ರಾಜಕೀಯ ಅನಾಸಕ್ತಿ ಆಗಿನ ಎಲ್ಲ ವರ್ಗದ ಜನರ ರಕ್ಷಾಕವಚವಾಗಿತ್ತು.

ಪಾತ್ರೆಯನ್ನು ಕೆಳಗಿಟ್ಟು ಬೆಬ್ಬೆರಗಾಗಿ ನೋಡುತ್ತಿದ್ದ ಶೆಟ್ಟಿ, "ಅವನನ್ನ ಹಿಡಕೊಂಡು ಹೋದದ್ದೇಕೆ, ರಂಗಣ್ಣ ?" ಎಂದು ಗೆಳೆಯನನ್ನು ಕೇಳಿದ.

"ಇದನ್ನು ಕುಡಿದು ಮುಗಿಸಿರಿ, ಶೆಟ್ರ. ಹೊರಗೆ ಹೋದ ಮೇಲೆ ಹೇಳ್ತೇನು," –ಎಂದ ರಂಗಣ್ಣ.

ಅವರು ಹೊರಗೆ ಬಂದಾಗ ಉದ್ಯಾನದ ಎಲ್ಲ ಕಡೆ ರಾಜಭಟರು, ರಾಹುತರು ಪಹರೆ ಕೊಡುತ್ತಿದ್ದರು. ರಾಜಮಾರ್ಗದ ಇಕ್ಕೆಲಗಳಲ್ಲಿ ಜನ ಕಿಕ್ಕಿರಿದಿತ್ತು.

ಶೆಟ್ಟಿಯನ್ನು ರಂಗಣ್ಣ ಜನರಿಲ್ಲದ ಕಡೆ ಕರೆದುಕೊಂಡು ಹೋಗಿ ರಹಸ್ಯವಾಗಿ,

"ನೀವು ನಗರದಲ್ಲಿ ರಾಜಭಟರ ಮುಂದೆ ಹೀಗೆಲ್ಲ ನಡಕೊಳ್ಳಬಾರದು," ಎಂದು ಎಚ್ಚರಿಸಿದ.

"ಏನಪಾ ನಾ ಮಾಡಿದ್ದು ?" ಎಂದು ಶೆಟ್ಟಿ ಗೊಣಗಿದ.

"ಕಣ್ ಕೆಕ್ಕರಿಸಿ ಭಟರನ್ನ ನೋಡೋದು, ನಗೋದು, ಅವರು ಏನ್ ಮಾಡ್ತಾರ ಎಂತ ಕೇಳೋದು, ಇವೆಲ್ಲಾ ತಪ್ಪಾಗ್ತದ ಶೆಟ್ರ, ಈಗಿನ ಆಡಳಿತದಾಗ ರಾಜಭಟರ ಎದುರಿಗೆ ನೀವು ತಲೆಬಾಗಿ ನಿಂದಿರಬೇಕು. ಅವರು ಎದುರಾದ್ರ ಪಕ್ಕಕ್ಕೆ ಸರಿದು ಹೋಗಬೇಕು. ನೋಡಿದ್ರಲ್ಲ, ಆ ಹಾಡುಗಾರನ್ನ ಹಿಡಕೊಂಡು ಹೋದ್ದು? ಸೊಲ್ಪ ಸಿಟ್ಟಾದ್ರೂ ಜನರ್ನ ಹಿಡೀತಾರ ಈ ಭಟರು."

"ಅವನ್ನ ಏಕಾ ಹಿಡಿದದ್ದು ? ನೀ ಹೇಳಲೆ ಇಲ್ಲ ರಂಗಣ್ಣ."

"ಚಾಲುಕ್ಯ ಮಹಾರಾಣಿ ಕಾಮೇಶ್ವರೀದೇವೀನ ಹಾಸ್ಯಮಾಡಿ ಹಾಡು ಕಟ್ಟಿದ ಅಂತ".

"ಯಾರಪಾ ಆಕಿ, ಯಾರೂ ಹಾಡುಕಟ್ಟಿ ಹಾಡಬಾರದ ಹೆಣ್ಣು ?"

"ಈಗ ಬರತಾಳ ನೋಡೀವ್ರಂತ. ಆಕೀನ ಎದುರುಗೋಳ್ಳೋದಕ್ಕೇ ಇಷ್ಟೇಲ್ಲ ನಡೀತಿರೋದು. ಆ ಸಭಾಂಗಣದಾಗ ಬಿಜ್ಜಳರಾಯರ ಸಂಗಡ ಎಷ್ಟೊಂದು ಮಂದಿ ಸಾಮಂತರು ಕೂಡಿದಾರ ಗೊತ್ತೇ ನಿಮಗ? ರಾಜಬೀದ್ಯಾಗ ಜನ ಕಿಕ್ಕಿರಿದು ನಿಂತಿರೋದು ಆಕೀನ ನೋಡೋದಕ್ಕ."

ಅವರು ಮಾತಾಡುತ್ತಿದ್ದಂತೆ ರಾಜಮಾರ್ಗದ ತಿರುವಿನಲ್ಲಿ ರಾಹುತರು ಬರುತ್ತಿರುವುದು ಕಾಣಿಸಿತು. ರಂಗಣ್ಣ ಮತ್ತು ಶೆಟ್ಟಿ ಮಾರ್ಗದ ಒಂದು ಪಕ್ಕದಲ್ಲಿ ಜನರ ಹಿಂದೆ ನಿಂತರು. ಸ್ವಲ್ಪ ಹೊತ್ತಿನ ಮೇಲೆ ಕೆಂಪು ಹಸಿರು ಬಣ್ಣಗಳ ಸಮವಸ್ತ್ರ ಧರಿಸಿ, ಕತ್ತಿ ಗುರಾಣಿ ಭರ್ಜಿಗಳನ್ನು ಹಿಡಿದಿದ್ದ ನೂರು ಮಂದಿ ರಾಹುತರ ರಕ್ಷಕದಳ ಬಂದಿತು. ಅದರ ಹಿಂದೆ ಶೃಂಗತಮ್ಮಟೆ, ಶಂಖ, ಭೇರಿ, ಜಯಘಂಟೆ, ಜಾಗಟೆ, ಈ ಪಂಚವಾದ್ಯಗಳನ್ನು ನುಡಿಸುವವರು ಕುಳಿತಿದ್ದ ದೊಡ್ಡ ಗಾಡಿ, ಚಾಲುಕ್ಯರಾಜ್ಯ ಲಾಂಛನಗಳನ್ನು ಹಿಡಿದ ಭಟರು, ಹಾಡಿಕುಣಿಯುವ ನರ್ತಕಿಯರು, ಪ್ರಶಂಸಾಪದ್ಯಗಳನ್ನು ಪಠಿಸುವ ಮಾಗಧರು, ಬಿರುದಾವಳಿಗಳನ್ನು ಉಗ್ಗಡಿಸುವ ಬಡಿವಾರದವರು, ವೇದಮಂತ್ರಗಳನ್ನು ಓದುವ ಶ್ರೋತ್ರಿಯರು, ಈ ಅನುಕ್ರಮದಲ್ಲಿ ಮೆರವಣಿಗೆ ಸಾಗಿತ್ತು. ಈ ಎಲ್ಲ ಶಬ್ದಗಳ ಸಂಮಿಳಿತ ಘೋಷ ಕಡಲ ತೆರೆಗಳ ಅಬ್ಬರದಂತೆ ಕೇಳಿಸಿತು.

ಮೆರವಣಿಗೆಯ ಈ ಭಾಗದ ಹಿಂದೆ ಕಲಶ ಕನ್ನಡಿ ಫಲಪುಷ್ಪ ಮಂಗಳ ದ್ರವ್ಯಗಳ ತಟ್ಟೆಗಳನ್ನು ಹಿಡಿದ ನಾಗರಿಕ ಸುಮಂಗಲಿಯರು, ಮಂಗಳವೇಡೆಯ

ಪ್ರಮುಖ ಸಾಮಂತರು ನಾಗರಿಕರು, ಅದರ ಹಿಂದೆ ಕಲಚೂರ್ಯ ವಂಶೀಯ ಸಾಮಂತ ಪರಿವಾರದವರು ಹತ್ತಿದ್ದ ಚಿನ್ನದ ಕಲಶಗಳಿಂದ ಕೂಡಿದ ಬೆಳ್ಳಿಯ ಅಂದಣ. ಅದನ್ನು ಹೊತ್ತವರಲ್ಲಿ ಸೋಮೇಶ್ವರನೂ ಇರುವುದನ್ನು ಕಂಡು ಜನರು ಹರ್ಷಧ್ವನಿ ಮಾಡಿದರು.

ಅಂದಣದಲ್ಲಿ ಚಾಲುಕ್ಯರಾಣಿ ಕಾಮೇಶ್ವರಿಯೂ ಅವಳ ಆರು ವರ್ಷದ ಪುತ್ರ ಪ್ರೇಮಾರ್ಣವನೂ ಕುಳಿತಿದ್ದರು. ಕಾಮೇಶ್ವರಿ ತಿಳಿ ನೀಲಿ ಬಣ್ಣದ ಬಹುಮೂಲ್ಯದ ರೇಷ್ಮೆಯ ಸೀರೆಯುಟ್ಟಿದ್ದಳು. ಚಿನ್ನದ ಎಳೆಗಳಿಂದ ಅದರಲ್ಲಿ ಹೆಣೆದಿದ್ದ ಹೂವುಗಳು ಮೇಘಮಧ್ಯದ ನಕ್ಷತ್ರ ಮಾಲಿಕೆಯಂತೆ ಬೆಳಗುತ್ತಿದ್ದವು. ಅವಳು ತೊಟ್ಟಿದ್ದ ರತ್ನ ಕಂಚುಕ, ಎದೆಯ ವಿಸ್ತಾರ ಔನ್ನತ್ಯಗಳಿಗೆ ಮಣಿಖಚಿತವಾದ ಚಿನ್ನದ ಚೌಕಟ್ಟು ಹಾಕಿದಂತಿತ್ತು. ಕತ್ತಲನ್ನು ಸೆರೆಹಿಡಿದಂತೆ ಕೇಶರಾಶಿಯನ್ನು ಕುಂಡಲಾಕಾರವಾಗಿ ಕಟ್ಟಿ, ಮೇಲೆ ವಜ್ರ ಕೆತ್ತಿದ ಚಂದ್ರಮಡಿಯನ್ನು ಧರಿಸಿದ್ದಳು ಅವಳು. ತಿದ್ದಿ ಗೆರೆ ತೆಗೆದ ರಂಗಾದ ತುಟಿ, ಕಸ್ತೂರಿಯ ಕಜ್ಜಳದಿಂದ ಕೆನ್ನೆಗಳ ಮೇಲೆ ಬರೆದ ಬೆಡಗಿನ ತಿಲಕಗಳು. ಪ್ರೌಢವಯಸ್ಕಳಾದ ಅವಳಿಗೆ ಯೌವನಾವಿರ್ಭಾವದ ಹೊಸ ಚಲುವನ್ನು ಕೊಟ್ಟಿತ್ತು. ಅವಳು ಕೈಯಲ್ಲಿ ಹಿಡಿದಿದ್ದ ಅರೆಬಿರಿದ ತಾವರೆಯ ಕೆಂಪು, ಕೊರಳ ಮುತ್ತಿನ ಹಾರದಲ್ಲಿ ಪ್ರತಿಬಿಂಬಿಸಿ ಅಣಿಮುತ್ತುಗಳನ್ನು ಕೆಂಪುಮಣಿಗಳನ್ನಾಗಿ ಮಾಡಿದ್ದುವು.

ಪ್ರೇಮಾರ್ಣವನು ಕುಸುರಿ ಕೆಲಸದ ನೀಲಿಯ ಚಲ್ಲಣ ಕೆಂಪು ಬಣ್ಣದ ಕಸೆಯಂಗಿಗಳನ್ನು ತೊಟ್ಟಿದ್ದನು. ಕೊರಳ ರತ್ನಕಂಠಿಕೆ ಕಿವಿಯ ಕಡಕುಗಳು. ತೋಳುಗಳಿಗೆ ಕಟ್ಟಿದ್ದ ಬಿರುದು ಪಟ್ಟಗಳು, ಮಣಿಖಚಿತವಾದ ನಡುಕಟ್ಟು, ಅವನ ಸೌಮ್ಯಮುಖದ ಚಲುವಿಕೆಯನ್ನು ಎತ್ತಿ ತೋರುತ್ತಿದ್ದವು.

ರಾಣಿಯನ್ನು ಕಂಡು ಜನರು, "ಉಘೇ ! ಉಘೇ ! ಚಾಲುಕ್ಯರಾಣಿ ಕಾಮೇಶ್ವರಿ !" ಎಂದು ಜಯಘೋಷ ಮಾಡಿದರು. ಅಂದಣ ಮುಂದೆ ಹೋಗುತ್ತಿದ್ದಂತೆ ಕಾಮೇಶ್ವರಿ ಕೈಮುಗಿದು ಜನರನ್ನು ವಂದಿಸುತ್ತಿದ್ದಳು.

ಅಂದಣದ ಹಿಂದೆ ಮತ್ತೆ ಸುಮಂಗಲಿಯರ ಸಾಲು, ಸಾಮಂತ ನಾಗರಿಕರ ಪರಿವಾರ, ರಕ್ಷಕ ರಾಹುತರ ಇನ್ನೊಂದು ದಳ, ಈ ರೀತಿ ಮೆರವಣಿಗೆ ಕೊನೆಗೊಂಡಿತ್ತು. ಕಾಮೇಶ್ವರಿಯೊಡನೆ ಬಂದಿದ್ದ ದಾಸ ದಾಸಿಯರು, ಊಳಿಗದವರು ಸಾಮಾನು ಸರಂಜಾಮು ತುಂಬಿದ ರಥಗಳು ಗಾಡಿಗಳು ಬೇರೆ ಮಾರ್ಗವಾಗಿ ಈ ಮೊದಲೆ ಬಿಡಾರ ಸೇರಿದ್ದವು.

ಶೆಟ್ಟಿ ಮತ್ತು ರಂಗಣ್ಣ ಈ ವೈಭವವನ್ನು ನೋಡುತ್ತಿದ್ದಂತೆ ಉದ್ಯಾನದ

ನಡುವೆ ಕಟ್ಟಿದ್ದ ಸಭಾಂಗಣದಲ್ಲಿ ಕಲಚೂರ್ಯ ರಾಜ್ಯ ಕಾಲದ ಮೇಲೆ ಹೊಸ ಬೆಳಕನ್ನು ಚೆಲ್ಲುವ ಇನ್ನೊಂದು ಸಂವಿಧಾನ ವಿರಚಿತವಾಗುತ್ತಿತ್ತು.

ಸಭಾಂಗಣದ ಮಹಾದ್ವಾರಕ್ಕೆ ಅಂದಣ ಬಂದ ಕೂಡಲೆ ಅಲ್ಲಿ ನೆರೆದಿದ್ದ ಸಾಮಂತ ಮನ್ನೆಯರು ಜಯಘೋಷ ಮಾಡುತ್ತ ಹೂವು ಗಂಧೂಡಿಗಳನ್ನೆರಚಿ ಕಾಮೇಶ್ವರಿಯನ್ನು ಸ್ವಾಗತಿಸಿದರು. ಸಾಮಂತರನ್ನು ಹಿಂದಿಟ್ಟುಕೊಂಡು ಬಿಜ್ಜಳನು, ಅಂದಣದ ಬಳಿಗೆ ಬಂದು ಕಾಮೇಶ್ವರಿ ಪ್ರೇಮಾರ್ಣವರ ಕೈಹಿಡಿದು ಕೆಳಗಿಳಿಸಿ, ಅಲಂಕೃತವಾದ ವೇದಿಕೆಗೆ ಬಿಜಯಮಾಡಿಸಿ, ಸಿದ್ಧವಾಗಿದ್ದ ಭದ್ರಾಸನಗಳಲ್ಲಿ ಕುಳ್ಳಿರಿಸಿದನು. ಮೆರವಣಿಗೆಯ ಸಂಗಡಿದ್ದ ಸುಮಂಗಲಿಯರು, ಸಾಮಂತ ಮನ್ನೆಯರು, ನಾಗರಿಕ ಪ್ರಮುಖರು, ಪರಿವಾರದವರು, ವೇದಿಕೆಯ ಸುತ್ತ ಯಥೋಚಿತ ಸ್ಥಾನಗಳಲ್ಲಿ ನಿಂತರು. ಕ್ಷಣಾರ್ಧದಲ್ಲಿ ಸಮ್ಮೇಳನ ರಾಜಸಭೆಯ ರೂಪತಾಳಿತು.

ಬಿಜ್ಜಳನು ಸಭಾಸದರಿಗೆ ವಂದಿಸಿ ಗಂಭೀರವಾಣಿಯಿಂದ ಹೇಳಿದನು : "ಚಾಲುಕ್ಯ ಚಕ್ರೇಶ್ವರ ನೂರ್ಮಡಿ ತೈಲಪದೇವ ಮಹಾರಾಜರ ಪಟ್ಟಮಹಿಷಿ. ವಿದ್ಯಾಧರ ಕುಲಾವತಂಸ ಮಹಾಮಂಡಲೇಶ್ವರ ವಿಜಯಾರ್ಕ ಮಹಾರಾಜರ ಸಹೋದರಿ, ಚಾಲುಕ್ಯರಾಣಿ ಕಾಮೇಶ್ವರೀ ಮಹಾದೇವಿಯವರನ್ನೂ, ಅವರ ಪುತ್ರ ಕುಮಾರ ಪ್ರೇಮಾರ್ಣವನನ್ನೂ ಮಂಗಳವೇಡೆಗೆ ಸ್ವಾಗತಿಸುವ ಈ ಪುಣ್ಯದಿನ ಕಲಚೂರ್ಯ ಇತಿಹಾಸದ ಸುವರ್ಣದಿನವೆಂದು ನಾನು ತಿಳಿದಿದ್ದೇನೆ.

"ರಾಜ್ಯತ್ಯಾಗಮಾಡಿ ಕುಮ್ಮಟ ದುರ್ಗದಲ್ಲಿದ್ದ ತೈಲಪ ಮಹಾರಾಜರು ಸ್ವರ್ಗಸ್ಥರಾದಾಗ ಉತ್ತರಾಧಿಕಾರದ ವಿಚಾರದಲ್ಲಿ ಸ್ವಲ್ಪ ತೊಡಕಾಯಿತು. ತೈಲಪ ದೇವರು ತಮ್ಮ ಪುತ್ರ ಕೀರ್ತಿವರ್ಮನ ಸ್ಥಾನದಲ್ಲಿ ಸಹೋದರ ಜಗದೇಕಮಲ್ಲರಸರನ್ನು ಉತ್ತರಾಧಿಕಾರಿಯಾಗಿ ಅಂಗೀಕರಿಸುವಂತೆ ಕೋರಿದರು. ಮಂತ್ರಿಮಂಡಲ ಇದನ್ನು ನಿರಾಕರಿಸಿದ್ದರಿಂದ ಹೆಸರಿಗೆ ಮಾತ್ರ ಜಗದೇಕಮಲ್ಲರಸರಿಗೆ ಪಟ್ಟಕಟ್ಟಿ, ರಾಜ್ಯದ ಅಧಿಕಾರ ಸೂತ್ರಗಳನ್ನು ನನ್ನ ಕೈಯ್ಯಲ್ಲಿಟ್ಟುಕೊಳ್ಳುವುದು ಅಗತ್ಯವಾಯಿತು. ತರುವಾಯ ಕೆಲವು ದಿನಗಳಲ್ಲಿ ಕೀರ್ತಿದೇವನ ಅವಸಾನವಾಗಿ ಉತ್ತರಾಧಿಕಾರಿದ ಸಮಸ್ಯೆ ಇನ್ನೂ ತೊಡಕಾಯಿತು. ಆಗ ಕಾಮೇಶ್ವರೀದೇವಿಯವರನ್ನು ರಾಜ ಪ್ರತಿನಿಧಿಯಾಗಿ ಅಂಗೀಕರಿಸಿದ್ದರೆ ಚಾಲುಕ್ಯರಾಜ್ಯದ ಪ್ರಜೆಗಳಂತೆ ನನಗೂ ಪರಮಾನಂದವಾಗುತ್ತಿತ್ತು. ಹಾಗಾಗದಿದ್ದುದು ನಮ್ಮ ದುರಾದೃಷ್ಟ.

"ಮಹಾರಾಣಿ ಕಾಮೇಶ್ವರೀ ದೇವಿಯವರು ಕಳೆದ ಆರು ವರ್ಷಗಳಿಂದ ಕರ್ಹಾಡದಲ್ಲಿ ತಮ್ಮ ಸಹೋದರ ಮಹಾಮಂಡಲೇಶ್ವರ ವಿಜಯಾರ್ಕದೇವರಸರ

ಮನೆಯಲ್ಲಿ ಅಜ್ಞಾತವಾಸದಲ್ಲಿದ್ದು, ಈಗ ತಮ್ಮ ಕ್ಷೇತ್ರಜಪುತ್ರ ಕುಮಾರ ಪ್ರೇಮಾರ್ಣವನೊಡನೆ ಪುನಃ ಚಾಲುಕ್ಯರಾಜ್ಯಕ್ಕೆ ಹಿಂದಿರುಗಿದ್ದಾರೆ. ಅವರನ್ನು ಸ್ವಾಗತಿಸಿ ಉಚಿತರೀತಿಯಲ್ಲಿ ಗೌರವ ಸಲ್ಲಿಸುವುದು ಈಗ ನಮ್ಮ ಕರ್ತವ್ಯವಾಗಿದೆ. ಜಗದೇಕಮಲ್ಲರಸರ ಅನಂತರ ಚಾಲುಕ್ಯರಾಜ್ಯದ ಉತ್ತರಾಧಿಕಾರಿಯಾಗಿ ಕುಮಾರ ಪ್ರೇಮಾರ್ಣವನ ಯುವರಾಜ ಪಟ್ಟಾಭಿಷೇಕ ಶೀಘ್ರದಲ್ಲಿ ಕಲ್ಯಾಣದಲ್ಲಿ ನಡೆಯುವುದು."

ಸಭೆಯಲ್ಲಿದ್ದ ಸಾಮಂತ ಮನ್ನೆಯ ಅಧಿಕಾರಿಗಳು ಬಿಜ್ಜಳನ ಸಲಹೆಯಿಂದ ಆಶ್ಚರ್ಯಗೊಂಡರು. ಬಿಜ್ಜಳನ ರಾಜ್ಯಾಪಹಾರವನ್ನು ರಹಸ್ಯವಾಗಿ ವಿರೋಧಿಸುತ್ತಿದ್ದವರೂ ಈ ಕ್ಷಿಪ್ರ ಪರಿವರ್ತನೆಯನ್ನು ನಿರೀಕ್ಷಿಸಿರಲಿಲ್ಲ. ಸಲಹೆಯ ಹಿಂದೆ ತಮಗೆ ಅಗೋಚರವಾದ ಯಾವುದೋ ಕಾರಣವಿದೆಯೆಂದು ಅವರು ಅನುಮಾನಿಸಿದರು. ಬಿಜ್ಜಳನ ರಾಜ್ಯಾಪಹಾರವನ್ನು ಅನುಮೋದಿಸಿದ್ದ ಸಾಮಂತರು ಕರ್ತವ್ಯಮೂಢರಾದರು.

ಆಗ ಕುಮಾರ ಸೋಮೇಶ್ವರನೂ, ಅವನ ಸಂಗಡ ಅಂದಣಕ್ಕೆ ಹೆಗಲು ಕೊಟ್ಟಿದ್ದ ತರುಣ ಸಾಮಂತರೂ ಮುಂದೆ ಬಂದು,

"ನಾವು ಸರ್ವಾಧಿಕಾರಿ ಬಿಜ್ಜಳರಾಯರ ಸಲಹೆಯನ್ನು ಅನುಮೋದಿಸುತ್ತೇವೆ. ಜಯ! ಚಾಲುಕ್ಯ ಮಹಾರಾಣಿ ಕಾಮೇಶ್ವರೀದೇವಿ! ಜಯ! ಚಾಲುಕ್ಯ ಯುವರಾಜ ಪ್ರೇಮಾರ್ಣವ! ಉಘೇ! ಉಘೇ!" ಎಂದು ಜಯಘೋಷ ಮಾಡಿದರು. ಉಳಿದವರು ಇಚ್ಛೆಯಿಂದಲೋ ಅನಿಚ್ಛೆಯಿಂದಲೋ ಅವರೊಡನೆ ದನಿಗೂಡಿಸಿದರು. ಕೂಡಲೆ ಸುಮಂಗಲಿಯರು ಫಲಪುಷ್ಪ ಮಂಗಳದ್ರವ್ಯಗಳ ಹರಿವಾಣಗಳನ್ನು ಕಾಮೇಶ್ವರಿಯ ಮುಂದಿಟ್ಟರು. ಶ್ರೋತ್ರಿಯರು ಆಶೀರ್ವಾದ ಮಾಡಿದರು. ವಂದಿಮಾಗಧರು ಸ್ತುತಿಗೀತಗಳನ್ನು ಹಾಡಿದರು.

ಬಿಜ್ಜಳನು ಪುನಃ ಸಭಾಸದರಿಗೆ ವಂದಿಸಿ, "ನಾನು ಚಾಲುಕ್ಯ ರಾಜ್ಯದ ಮಹಾಮಂಡಲೇಶ್ವರ, ಸರ್ವಾಧಿಕಾರಿ ದಂಡನಾಯಕ, ಪ್ರಥಮ ಪ್ರಜೆ. ಮಹಾರಾಣಿಯವರ ಚರಣದಡಿಯಲ್ಲಿ ನನ್ನ ರಾಜಭಕ್ತಿ ಗೌರವಗಳನ್ನು ಅರ್ಪಿಸುತ್ತೇನೆ," ಎಂದು ಮೊಣಕಾಲೂರಿ ವಂದಿಸಿ ಕಾಮೇಶ್ವರಿ ಪ್ರೇಮಾರ್ಣವರಿಗೆ ಮುಜುರೆ ಮಾಡಿದನು. ನೆರೆದಿದ್ದ ಸಾಮಂತ ಮನ್ನೆಯರು ತಮ್ಮ ಪದವಿ ಅಧಿಕಾರಗಳ ಅನುಕ್ರಮದಲ್ಲಿ ಒಬ್ಬೊಬ್ಬರಾಗಿ ಮುಜುರೆ ಮಾಡಿದರು.

ಈ ಸಾಂಪ್ರದಾಯಿಕ ಸಭ್ಯಾಚರಣೆ ಮುಗಿದ ಮೇಲೆ ಕಾಮೇಶ್ವರಿ ಎದ್ದು ನಿಂತು ಕೈಮುಗಿದು.

"ನನ್ನ ಮತ್ತು ಕುಮಾರ ಪ್ರೇಮಾರ್ಣವನ ಪರವಾಗಿ ನಾನು ನಿಮಗೆಲ್ಲರಿಗೂ

ವಂದಿಸುತ್ತೇನೆ, ಚಾಲುಕ್ಯ ವಂಶದ ಈ ಕುಡಿಯನ್ನು ತನ್ನ ಪ್ರಾಣ ಸರ್ವಸ್ವದಂತೆ ಆರು ವರ್ಷಗಳ ಕಾಲ ರಕ್ಷಿಸಿ ಈಗ ನಿಮ್ಮ ಕೈಯಲ್ಲಿಡುತ್ತಿದ್ದೇನೆ. ಇನ್ನು ಮುಂದೆ ಅವನ ಯೋಗಕ್ಷೇಮ, ನಿಮಗೂ ಸರ್ವಾಧಿಕಾರಿ ಬಿಜ್ಜಳರಾಯರಿಗೂ ಸೇರಿದೆ. ನಾನು ನಿಮಿತ್ತ ಮಾತ್ರಳು, ನೀವೇ ಅವನ ರಕ್ಷಕರು, ಪೋಷಕರು, ಮತ್ತು ಪ್ರಜೆಗಳು. ತೈಲಪ ದೇವರ ಧೈರ್ಯ ಸಾಹಸಗಳು, ವಿಕ್ರಮಾಂಕ ಮಹಾರಾಜರ ಆಡಳಿತ ದಕ್ಷತೆ ರಾಜಿಕ ಕೌಶಲಗಳು, ಸರ್ವಜ್ಞ ಸೋಮೇಶ್ವರದೇವರ ಅಭಿಜ್ಞತೆ, –ಈ ಮೂರು ಗುಣ ಸಂಪತ್ತುಗಳು ಕುಮಾರ ಪ್ರೇಮಾರ್ಣವನಲ್ಲಿ ನೆಲೆಸಿ, ಅವನು ಚಾಲುಕ್ಯರಾಜ್ಯದ ಆದರ್ಶಜನಪ್ರಿಯ ಪ್ರಭುವಾಗಲೆಂಬುದೇ ಜಗದೀಶ್ವರನಲ್ಲಿ ನನ್ನ ಅನುದಿನದ ಪ್ರಾರ್ಥನೆ. ನನಗೆ ಈ ವೈಭವದ ಸ್ವಾಗತವೇರ್ಪಡಿಸಿ ನಿಮ್ಮೆಲ್ಲರ ಪರಿಚಯ ಸನ್ಮಾನ ಸಹಾಯಗಳು ದೊರಕುವಂತೆ ಮಾಡಿದುದಕ್ಕಾಗಿ ನಾನು ಮಹಾ ಮಂಡಲೇಶ್ವರ ಬಿಜ್ಜಳರಾಯರಿಗೂ, ಕುಮಾರ ಸೋಮೇಶ್ವರ ದೇವರಸರಿಗೂ ತುಂಬ ಕೃತಜ್ಞಳಾಗಿದ್ದೇನೆ," ಎಂದು ಹೇಳಿದಳು.

ಜಯಘೋಷ ಸ್ತೋತ್ರ ಪಾಠಗಳೊಡನೆ ಸಭೆ ಮುಗಿದು ರಾಣಿ ಕಾಮೇಶ್ವರಿ ತನಗಾಗಿ ಏರ್ಪಡಿಸಿದ್ದ ಬಿಡಾರಕ್ಕೆ ಬಿಜಯಮಾಡಿದಳು.

* * *

ಕಾಮೇಶ್ವರಿ ಮಂಗಳವೇಡೆಗೆ ಬಂದ ಮೂರನೆಯ ದಿನ. ಕುಮಾರ ಸೋಮೇಶ್ವರನ ಪಟ್ಟಾಭಿಷೇಕಕೆ ಒಂದು ದಿನ ಮಾತ್ರ ಉಳಿದಿತ್ತು. ಅಂದು ಪೂರ್ವಾಹ್ನ ಕಾಮೇಶ್ವರಿ ಅಂತಃಗೃಹದಲ್ಲಿ ಕುಳಿತಿದ್ದಂತೆ ದಾಸಿ ಉಷಾ ಓಡಿಬಂದು ಕಾಲುಗಳ ಮೇಲೆ ಬಿದ್ದು ನೀರವವಾಗಿ ಅಳುವುದಕ್ಕೆ ಮೊದಲು ಮಾಡಿದಳು.

ಕಾಮೇಶ್ವರಿ ಅಚ್ಚರಿಯಿಂದ, "ಏನಾಯಿತು, ಉಷಾ ? ಏಕೆ ಅಳುತ್ತಿರುವೆ?" ಎಂದು ಕೇಳಿದಳು.

"ಕಳೆದುಹೋಗಿದ್ದ ನನ್ನ ತವನಿಧಿ ಪುನಃ ಕೈಸೇರಿತು, ಮಹಾರಾಣೀ !" – ಉಷಾ ತಲೆಯೆತ್ತಿ ಗದ್ಗದಕಂಠದಿಂದ ಹೇಳಿದಳು.

"ಏನು ನೀನು ಹೇಳುತ್ತಿರುವುದು ? ನನಗೆ ಅರ್ಥವಾಗಲಿಲ್ಲ."

"ಅಗ್ಗಳದೇವರು ಮಹಾರಾಣಿಯವರ ದರ್ಶನಕ್ಕಾಗಿ ಬಂದಿದ್ದಾರೆ."

"ಈಗೆಲ್ಲಿದ್ದಾರೆ ಅವರು ?" –ಕಾಮೇಶ್ವರಿಯ ದನಿಯಲ್ಲಿ ಆತುರವಿಣುಕಿತ್ತು.

"ಹೊರಗಿನ ಅತಿಥಿಶಾಲೆಯಲ್ಲಿ".

"ಸಂಗಡಲೇ ಏಕೆ ಕರೆತರಲಿಲ್ಲ ? ಹೋಗು. ಬೇಗ ಅವರನ್ನು ಕಳುಹಿಸು."

ಉಷಾ ಎದ್ದು ಕಣ್ಣೊರೆಸಿಕೊಂಡು ನವಿಲಂತೆ ನಲಿಯುತ್ತ ಹೊರಗೆ

ಹೋದಳು. ಅಗ್ಗಳ ಉಷಾವತಿಯರ ಪ್ರಣಯ ಪ್ರಸಂಗ ಮಹಾರಾಣಿಯ ಪರಿವಾರದ ಪ್ರಕಟ ರಹಸ್ಯವಾಗಿತ್ತು. ಒಂದು ರೀತಿಯಿಂದ ಕಾಮೇಶ್ವರಿಯೂ ಅದಕ್ಕೆ ನೆರವು ಕೊಟ್ಟಿದ್ದಳು.

ಕೊಂಚ ಹೊತ್ತಿನ ಮೇಲೆ ಅಗ್ಗಳನು ಅಲ್ಲಿಗೆ ಬಂದು ಮೊಣಕಾಲೂರಿ ವಂದನೆ ಸಲ್ಲಿಸಿದಾಗ, ಕಾಮೇಶ್ವರಿ–

"ದೇವಗಿರಿಯಿಂದ ನಾನು ನಿಮ್ಮನ್ನು ಕಲ್ಯಾಣಕ್ಕೆ ಕಳುಹಿಸಿದಾಗ ಅದು ಅನರ್ಥದ ಕಾರಣವಾಗುವುದೆಂದು ಭಾವಿಸಿರಲಿಲ್ಲ, ಅಗ್ಗಳದೇವ. ನೀವು ಕಾಣೆಯಾದ ಸುದ್ದಿ ತಿಳಿದಕೂಡಲೆ ನಾನು ಬಿಜ್ಜಳರಾಯರಿಗೆ ಅವಸರದ ಪತ್ರ ಬರೆದೆ. ಅವರ ಉತ್ತರ ಬಂದಮೇಲೆ ಸ್ವಲ್ಪ ಸಮಾಧಾನವಾಯಿತು," ಎಂದಳು.

ಅಗ್ಗಳ, ಕುತೂಹಲದಿಂದ "ಬಿಜ್ಜಳರಾಯರು ಏನೆಂದು ಉತ್ತರ ಕೊಟ್ಟರು?"

"ನಿಮ್ಮ ಮನೆಹೆಗ್ಗಡೆ ರಾಜಕೀಯ ಕಾರಣಗಳಿಂದ ಅನಿವಾರ್ಯ ಅಜ್ಞಾತವಾಸದಲ್ಲಿದ್ದಾರೆ. ಅವರ ಯೋಗಕ್ಷೇಮಗಳು ನಮ್ಮ ಹೊಣೆ. ಮಂಗಳವೇಡೆಗೆ ಬರುತ್ತಲೆ ಅವರನ್ನು ನೋಡುವಿರಿ,' ಎಂದು."

"ಬಿಜ್ಜಳನ ರಾಜಕೀಯ ಚಾತುರ್ಯಕ್ಕೆ ಈ ಉತ್ತರ ಒಂದು ನಿದರ್ಶನ,"

"ಚಾತುರ್ಯವೇನಿದೆ ಇದರಲ್ಲಿ?"

"ನನ್ನನ್ನು ವಂಚನೆಯಿಂದ ಬಂಧನದಲ್ಲಿಟ್ಟು, ಅದನ್ನು ಅನಿವಾರ್ಯ ಅಜ್ಞಾತವಾಸವೆಂದು ಕರೆಯುವುದು ಚತುರತೆಯಲ್ಲವೆ?"

"ಬಿಜ್ಜಳರಾಯರು ನಿಮ್ಮನ್ನು ಬಂಧನದಲ್ಲಿಟ್ಟಿದ್ದರೆ ?" –ಅಗ್ಗಳನು ಉತ್ತರ ಕೊಡಲಿಲ್ಲ. ಸುತ್ತ ನೋಡಿ ಮೆಲುದನಿಯಲ್ಲಿ, "ಈಗ ಯಾರೂ ಇಲ್ಲಿಗೆ ಬರುವುದಿಲ್ಲವಷ್ಟೆ?" ಎಂದನು.

"ಯಾರನ್ನೂ ಒಳಗೆ ಬಿಡದಂತೆ ಭಟರಿಗೆ ಹೇಳಿಕಳುಹಿಸುತ್ತೇನೆ."

"ಅದರ ಅಗತ್ಯವಿಲ್ಲ, ರಾಣೀಜಿ. ನಮ್ಮ ಕಡೆಯ ಜನರನ್ನು ಅಂತಃಗೃಹದ ಬಾಗಿಲಲ್ಲಿ ಕಾವಲಿರುವಂತೆ ಆಜ್ಞೆ ಮಾಡಿದರೆ ಸಾಕು."

"ಏಕೆ ಹೀಗೆ ಹೇಳುತ್ತಿದ್ದೀರಿ ?"

"ಹೊರಗೆ ಕಾವಲಿರುವ ಭಟರು ಬಿಜ್ಜಳನ ಕಡೆಯವರು. ಅವರಿಗೇಕೆ ತಿಳಿಯಬೇಕು, ನಾವು ರಹಸ್ಯವಾಗಿ ಮಾತಾಡಿದೆವೆಂದು.

ಅಗ್ಗಳನ ಉದ್ದೇಶ ಆಗ ಕಾಮೇಶ್ವರಿಗೆ ಅರ್ಥವಾಯಿತು. ದಾಸಿಯನ್ನು ಕರೆದು ಆಜ್ಞೆಮಾಡಿ, "ಈಗ ನಿಮ್ಮ ಬಂಧನದ ವಿಚಾರ ಹೇಳಿರಿ," ಎಂದಳು.

"ಇಲ್ಲಿ ನಡೆಯುವ ಮಾತುಕಥೆಗಳನ್ನು ಹೊಂಚಿ ಕೇಳುವುದು ಸಾಧ್ಯವೆ?" –ಪುನಃ ಅಗ್ಗಳನು ಪ್ರಶ್ನಿಸಿದನು.

"ಇಷ್ಟೆಲ್ಲ ಎಚ್ಚರಿಕೆಯ ಅಗತ್ಯವೇನಿದೆ?"

"ಅದು ನಿಮಗೆ ಮುಂದೆ ಅರ್ಥವಾಗುವುದು," – ಎಂದು ಅಗ್ಗಳನು ಬಾಗಿಲು ಜಾಲಂದ್ರಗಳನ್ನು ಪರೀಕ್ಷಿಸಿ ಪುನಃ ಕಾಮೇಶ್ವರಿಯ ಬಳಿಗೆ ಬಂದು, "ನಾವು ಸಿಂಹದ ಗುಹೆಯಲ್ಲಿರುವಾಗ ಒಂದೊಂದು ಹೆಜ್ಜೆಯನ್ನೂ ಎಚ್ಚರಿಕೆಯಿಂದಿಡುವುದು ಅಗತ್ಯ, ರಾಣೀಜಿ," ಎಂದನು. "ಸಿಂಹವೀಗ ನನ್ನ ಆಟಿಕೆಯ ನವಿಲಾಗಿದೆ!" – ರಾಣಿಗಿರಿಯ ಅಭಿಮಾನದಿಂದ ನುಡಿದಳು ಕಾಮೇಶ್ವರಿ.

"ಸಿಂಹದಂತಹ ಹಿಂಸಕಜಂತುವಿನ ಉಗುರು ಕೋರೆದಾಡೆಗಳೊಡನೆ ಆಟವಾಡುವುದು ಅಪಾಯಕಾರಿ, ರಾಣೀಜಿ," ಎಂದು ಅಗ್ಗಳನು, ತನ್ನನ್ನು ನೋಡಲು ನಾರಣ ಕ್ರಮಿತನು ಪಾಂಥನಿವಾಸಕ್ಕೆ ಬಂದ ಕ್ಷಣದಿಂದ ಅಂದಿನವರೆಗಿನ ಎಲ್ಲ ಘಟನೆಗಳನ್ನು ವಿವರಿಸಿ ಕೊನೆಗೆ,

"ತನ್ನ ವಿರುದ್ಧ ನಡೆಯುತ್ತಿರುವ ರಾಜ್ಯಕ್ರಾಂತಿಯ ಒಳಸಂಚಿನಲ್ಲಿ ಭಾಗವಹಿಸಿದ್ದ ಮುಖ್ಯವ್ಯಕ್ತಿಗಳು ರಾಜಗೃಹದಲ್ಲಿ ಒಂದುಗೂಡಲು ಬಿಜ್ಜಳನೇ ಸಹಾಯಕನಾದನು. ಅವನು ಆ ಕಾರ್ಯವನ್ನು ಏನಾದರೊಂದು ರಹಸ್ಯ ಉದ್ದೇಶದಿಂದ ಮಾಡಿದನೇ? ಅಥವಾ ಇವೆಲ್ಲ ಕಾಕತಾಳೀಯ ಘಟನೆಗಳೇ? ಎಂಬುದನ್ನು ತಿಳಿಯಲು ನಾನು ಇದುವರೆಗೆ ಅಸಮರ್ಥನಾಗಿದ್ದೇನೆ," ಎಂದು ಮುಗಿಸಿದನು.

ಒಳಸಂಚಿನಲ್ಲಿ ಜಗದೇಕಮಲ್ಲನ ಸಹಾನುಭೂತಿ, ಪ್ರೇಮಾರ್ಣವನ ಬಗೆಗೆ ಅವನ ಆದರ, ಈ ವಿಚಾರಗಳನ್ನು ಕೇಳಿದಾಗ ಕಾಮೇಶ್ವರಿಗೆ ಸಮಾಧಾನವಾಯಿತು. ಆದರೆ ಗೋಮಂತಕದ ನರ್ತಕಿ ತಾನೇ ಎಂಬುದು ಜಗದೇಕಮಲ್ಲನಿಗೆ ತಿಳಿದದ್ದು ಹೇಗೆ ? ಎಂದು ಯೋಚಿಸಿ ಅವಳು,

"ನಿನ್ನೆ ಸ್ವಾಗತ ಸಭೆಯಲ್ಲಿ ನಡೆದ ವಿಚಾರಗಳು ನಿಮಗೆ ತಿಳಿದಿದೆಯೆ ?" ಎಂದಳು.

"ಸಾಮಂತನೊಬ್ಬನು ವಿವರಿಸಿದನು. ಆದರೆ ಅರೆಕೊರೆ ಪಕ್ಷಪಾತಗಳಿಂದ ಕೂಡಿದ ಆ ವಿವರಣೆ ನನ್ನನ್ನು ವಂಚಿಸಲು ಬಿಜ್ಜಳನಿಂದ ಪ್ರೇರಿತವಾಗಿರಬಹುದು. ತೊಂದರೆಯಾಗದಿದ್ದರೆ ಮಹಾರಾಣಿಯವರ ಬಾಯಿಂದ ಎಲ್ಲವನ್ನೂ ಕೇಳಬಯಸುತ್ತೇನೆ. ಅಗ್ಗಳನು ವಿನಯದಿಂದ ಬಿನ್ನವಿಸಿಕೊಂಡನು.

ಕಾಮೇಶ್ವರಿ ಎಲ್ಲವನ್ನೂ ವಿವರಿಸಿದಳು. ರಾಜಿಕದೃಷ್ಟಿಯಿಂದ ಉಪಯುಕ್ತವಾದ ಯಾವ ಅಂಶವನ್ನೂ ಬಿಡಲಿಲ್ಲ. ಮುಗಿದ ಮೇಲೆ ಅಗ್ಗಳನು, "ಈಗ ನನ್ನ ಬಂಧನದ ಉದ್ದೇಶ ಅರ್ಥವಾಗುತ್ತಿದೆ," ಎಂದನು.

"ಆ ಉದ್ದೇಶವೇನು ?"

"ಕಲ್ಯಾಣದ ವಿಚಾರಗಳೊಂದೂ ನಿಮಗೆ ತಿಳಿಯದಂತೆ ಮುಳ್ಳುಬೇಲಿ ಹಾಕಿ, ಏನಾದರೊಂದು ಉಪಾಯದಿಂದ ನಿಮ್ಮನ್ನು ಮಂಗಳವೇಡೆಗೆ ಕರೆಸಿಕೊಳ್ಳುವುದು. ಅದಕ್ಕಾಗಿಯೇ ಬಿಜ್ಜಳನು ನಾನು ಕಲ್ಯಾಣಕ್ಕೆ ಹೋದ ದಿನವೇ ನನ್ನನ್ನು ವಂಚನೆಯಿಂದ ರಾಜಗೃಹದಲ್ಲಿ ಬಂಧಿಸಿಟ್ಟನು. ಪ್ರೇಮಾರ್ಣವನ ಉತ್ತರಾಧಿಕಾರ ಸ್ವೀಕಾರಕ್ಕೆ ಜಗದೇಕಮಲ್ಲರಸರನ್ನು ಒಪ್ಪಿಸಬೇಕೆಂಬುದು ನಿಮಿತ್ತ ಮಾತ್ರ. ಒಳಸಂಚಿನ ವಿಚಾರ ಬಿಜ್ಜಳನಿಗೆ ತಿಳಿದಿದ್ದರೆ, ರಾಜಗೃಹದ ಬದಲಾಗಿ ನಾನು ಕಾರಾಗೃಹದಲ್ಲಿರಬೇಕಾಗುತ್ತಿತ್ತು."

"ಹಾಗಿದ್ದರೆ ಬೊಮ್ಮರಸ ಬ್ರಹ್ಮಶಿವರನ್ನು ಹಿಡಿಯಲು ಪ್ರಯತ್ನಿಸಿದ್ದೇಕೆ ?" –ಕಾಮೇಶ್ವರಿ ಸಂದೇಹದಿಂದ ಕೇಳಿದಳು.

"ಅದು ನನ್ನ ಬಂಧನವನ್ನು ರಹಸ್ಯವಾಗಿಡಲು ನಡೆದ ಪ್ರಯತ್ನ, ರಾಣೀಜಿ. ವಾಸ್ತವದಲ್ಲಿ ಬಿಜ್ಜಳನ ಬೇಹುಗಾರರು ಬೊಮ್ಮರಸನನ್ನು ಉಜ್ಜಯಿನಿಯ ಶ್ರೀಮಂತ ಹರದನೆಂದೇ ತಿಳಿದಿದ್ದಾರೆ. ಅದರಿಂದಲೆ ಬೊಮ್ಮರಸನು ಭಟರಿಂದ ಪಾರಾಗಿ ಜಂಗಮವೇಷದಿಂದ ಮಹಮನೆಯನ್ನು ಸೇರಿದನು, ಜಗದೇಕಮಲ್ಲರಸರ ಧರ್ಮೋಪದೇಶಕನಾದನು."

ಕಾಮೇಶ್ವರಿ ಮೌನವಾಗಿ ಯೋಚಿಸುತ್ತ ಕುಳಿತಳು. ಅಗ್ಗಳನ ಸಂದೇಹ ಸಕಾರಣವೇ? ಅಥವಾ ರಾಜಗೃಹದ ಅಜ್ಞಾತವಾಸದಲ್ಲಿ ನಿರಾಶೆಯ ನಡುವೆ ಮೂಡಿದ ಅಕಾರಣ ಕಲ್ಪನೆಗಳೆ?

ತುಸುಹೊತ್ತಿನ ಮೇಲೆ ಅವಳು, "ನಿನ್ನಿನ ಸಭೆಯ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನು? ಬಿಜ್ಜಳರಾಯರು ಮಾತಿನಂತೆ ನಡೆಯುವರೇ ಅಥವಾ ಮೋಸಮಾಡುವರೇ?" ಎಂದಳು.

"ಬಿಜ್ಜಳನು ಬಹಿರಂಗವಾಗಿ ಮಾಡುವ ಕಾರ್ಯಗಳಿಂದ ಅವನ ಅಂತರಂಗವನ್ನು ತಿಳಿಯುವುದು ಬ್ರಹ್ಮದೇವನಿಗೂ ಸಾಧ್ಯವಿಲ್ಲ, ರಾಣೀಜಿ. ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ದುರಾತ್ಮನಾಂ–ಎಂದು ಹೇಳುತ್ತದೆ ಸುಭಾಷಿತ. ಮನಸ್ಸಿನಲ್ಲೊಂದು, ಹೇಳುವುದೊಂದು, ಮಾಡುವುದು ಮತ್ತೊಂದು. ಬಿಜ್ಜಳನ ವಿಚಾರದಲ್ಲಿ ಇದು ಅಕ್ಷರಶಃ ಸತ್ಯ."

"ಹಾಗಾದರೆ ನೀವು ಬಿಜ್ಜಳನನ್ನು ಹೊರಗಿನ ನೋಟಕ್ಕೆ ಸಜ್ಜನನಂತೆ ಕಾಣುವ ವಂಚಕನೆಂದು ಭಾವಿಸುತ್ತೀರಾ ?"

"ಶರಣರನ್ನು ನಿರ್ಮೂಲಗೊಳಿಸುವುದು ಬಿಜ್ಜಳನ ಉದ್ದೇಶ. ಬಸವಣ್ಣನವರ ನಿರ್ವಾಸನದ ಅನಂತರ ಈ ವಿಚಾರದಲ್ಲಿ ಯಾರಿಗೂ ಸಂದೇಹ ಉಳಿದಿಲ್ಲ.

ಆದರೂ ಬಿಜ್ಜಳನು ಚೆನ್ನಬಸವಣ್ಣನವರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಂಡು ಶರಣರ ಹಿತಚಿಂತಕನಂತೆ ನಟಿಸುತ್ತಿದ್ದಾನೆ. ಶರಣರು ಅದನ್ನು ನಂಬಿದ್ದಾರೆ. ಇದಕ್ಕಿಂತ ದೊಡ್ಡ ವಂಚನೆ ಮತ್ತೇನಿದೆ?"

"ಶರಣರನ್ನು ವಂಚಿಸಿದರೆ ಬಿಜ್ಜಳನು ನಮ್ಮನ್ನೂ ವಂಚಿಸುವನೆಂದು ನಿಮ್ಮ ಅಭಿಪ್ರಾಯವೇ?"

"ಬಿಜ್ಜಳನು ವಂಚಿಸಲು ಹವಣಿಸಿರುವನೆಂಬುದು ಖಚಿತ. ಆದರೆ ಒಂದು ಆತಂಕವಿದೆ."

"ಯಾವ ಆತಂಕ?"

"ಕುಮಾರ ಸೋಮೇಶ್ವರ. ಬಿಜ್ಜಳನ ಎಲ್ಲ ದೌರ್ಜನ್ಯ ವಂಚನೆಗಳಿಗೆ ಸೋಮೇಶ್ವರನು ಆತಂಕಸ್ವರೂಪವಾಗಿ ಅಡ್ಡ ನಿಂತಿದ್ದಾನೆ. ಚೆನ್ನಬಸವಣ್ಣನವರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಂಡದ್ದು, ಕುಮಾರ ಪ್ರೇಮಾರ್ಣವನ ಉತ್ತರಾಧಿಕಾರದ ಅಂಗೀಕಾರ, ಇವು ಸೋಮೇಶ್ವರನ ಇಚ್ಛೆಯಂತೆ ನಡೆಯಿತೆಂದು ಸಾಮಂತರು ತಿಳಿದಿದ್ದಾರೆ. ನಾಳೆ ಪಟ್ಟಾಭಿಷೇಕ ಸಮಯದಲ್ಲಿ ರಾಜ್ಯಭಾರ ನಿರೂಪಣ ಮಡುವನೆಂದು ಸುದ್ದಿ ಹರಡಿದೆ. ಅದಕ್ಕಾಗಿ ಶಾಸನ ನಿರೂಪಗಳು ಆಗಲೆ ರಚಿತವಾಗಿವೆಯಂತೆ."

"ರಾಜ್ಯಭಾರ ನಿರೂಪಣವೆಂದರೆ?"

" ತನ್ನ ಎಲ್ಲ ಅಧಿಕಾರ ಪದವಿ ಗೌರವಗಳನ್ನು ಮಗನಿಗೆ ಬಿಟ್ಟು ಕೊಡುವುದು."

ಕಾಮೇಶ್ವರಿ ಕೆಲವು ಕ್ಷಣಗಳು ಯೋಚಿಸಿ, "ಮಂಗಳವೇಡೆಗೆ ಬಂದ ದಿನವೇ ನೀವು ಇಷ್ಟೆಲ್ಲ ವಿಷಯಗಳನ್ನು ತಿಳಿದದ್ದು ಹೇಗೆ?" ಎಂದಳು.

"ಗೂಢಚಾರನಂತೆ ವಿಷಯ ಸಂಗ್ರಹಕ್ಕೆ ತೊಡಗಿದಾಗ ಮಂಗಳವೇಡೆಯ ಗೋಡೆ ಕಂಬಗಳೂ ಮಾತಾಡುತ್ತವೆ. ಕಲಚೂರ್ಯ ಸಾಮಂತ ಮನ್ನೆಯರಲ್ಲಿ ಎರಡು ದಿನಗಳಿಂದ ಈ ಸಂಬಂಧವಾದ ಚರ್ಚೆ ನಡೆಯುತ್ತಿದೆ."

ಕಾಮೇಶ್ವರಿ ನಗೆಹಾರಿಸಿ, "ರಾಜಗೃಹದ ನಿರ್ಬಂಧದಿಂದ ನಿಮ್ಮ ರಾಜಕೀಯ ಕಲ್ಪಕತೆ ಎಚ್ಚೆತ್ತಿದೆ, ಅಗ್ಗಳದೇವ. ಗೋಡೆ ಕಂಬಗಳೂ ನಿಮ್ಮ ಸಂಗಡ ಮಾತನಾಡುತ್ತವೆ. ಆದರೆ ನಮ್ಮ ಸಾಮಾನ್ಯ ಕಿವಿಗಳಿಗೆ ಅದೊಂದೂ ಕೇಳಿಸುತ್ತಿಲ್ಲ," ಎಂದಳು.

"ಮಹಾರಾಣಿಯವರು ಕ್ಷಮಿಸಬೇಕು. ಇದು ನಗುವ ವಿಚಾರವಲ್ಲ. ನಿಮ್ಮ ಮತ್ತು ಬಿಜ್ಜಳನ ಸಂಬಂಧವಾಗಿ ಕುಚೋದ್ಯದ ಕತೆಯೊಂದು ನಗರದಲ್ಲಿ ಹರಡಿದೆ." –ಅಗ್ಗಳನು ಗಂಭೀರವಾಗಿ ಹೇಳಿದನು.

"ಏನು ಆ ಕಥೆ ?" –ಕಾಮೇಶ್ವರಿ ಕುತೂಹಲದಿಂದ ಕೇಳಿದಳು.

"ನಿನ್ನೆ ಮೆರವಣಿಗೆ ಸಭಾಂಗಣಕ್ಕೆ ಬರುವ ಮೊದಲು ನಡೆದ ಒಂದು ಘಟನೆ ಈಗ ಬೃಹದ್ರೂಪ ತಾಳಿ ಎದುರಿಗೆ ನಿಂತಿದೆ."

"ಯಾವ ಘಟನೆ ಅದು?"

"ಹಾಡುಗಾರನೊಬ್ಬನು ನಿಮ್ಮ ಮೇಲೆ ಒಂದು ಹಾಡು ಕಟ್ಟಿ ಜನರ ಮುಂದೆ ಹಾಡುತ್ತಿದ್ದ. ರಾಜಭಟರು ಅವನನ್ನು ಬಂಧಿಸಿದರು."

"ಬಂಧಿಸಲು ಕಾರಣ? ಅವನು ಹಾಡುತ್ತಿದ್ದುದೇನು?"

ಅಗ್ಗಳನು ಕಡತದ ಹಾಳೆಯೊಂದನ್ನು ಕೊಟ್ಟು, "ಹಾಡುಗಾರನನ್ನು ಬಂಧಿಸುವ ಮೊದಲೇ ಹಾಡಿನ ಕೆಲವು ಪ್ರತಿಗಳು ನಗರದ ಪ್ರಮುಖ ಸಾಮಂತರಿಗೆ ಕಳುಹಿಸಲ್ಪಟ್ಟಿದ್ದವು. ನಿಮ್ಮ ಮೇಲಿನ ಈ ಪ್ರಚಾರ ವ್ಯವಸ್ಥಿತ ರೀತಿಯಿಂದ ನಡೆಯುತ್ತಿದೆಯೆಂಬುದನ್ನು ನಾವು ಇದರಿಂದ ತಿಳಿಯಬಹುದು," ಎಂದನು.

ಕಾಮೇಶ್ವರಿ ಓದಿದಳು :

ಒಲಿದಾನ ಬಿಜ್ಜಳ ಚಾಲುಕ್ಯ ಲಕ್ಕಿಗೆ,
ಒಲಿದಾಳ ಲಕ್ಕಿ ಬಿಜ್ಜಳಗೆ.
ಹಿಟ್ಟು ಹಳಸಿತ್ತ ! ನಾಯಿ ಹಸಿದಿತ್ತ !
ಚೆನ್ನಾಯ್ತು ಮೇಳ ಇಬ್ಬರಿಗೆ !
ತೈಲವಿಲ್ಲದ ದೀಪ ಗಂಡನಿಲ್ಲದ ತಾಪ,
ಹಾರಿಹತ್ತಿಕ್ಕಾಳ ಲಕ್ಕಿ !
ಬಿಜ್ಜಳನ ಬಿಡುತಾಳ, ತೊಡೆಯೇರಿ ಕುಳಿತಾಳ.
ಇಬ್ಬರಿಗೂ ಮಕ್ಕೀಕಾ ಮಕ್ಕಿ !
ಎರಡು ವರಹಕ್ಕೊಂದು ಗದ್ಯಾಣವೇಕೆಂದು
ಕೇಳುತ್ತಿದ್ದಾರೆಲ್ಲ ಕೊಸರಿ,
ಎರಡಕ್ಕ ಬೆಲೆ ಮೂರು ಲೋಕವೆಂದನುತಾಳ
ಹೆಸರು ಕಾಮಕ್ಕ, ಅಧೀಶ್ವರಿ !

ಕಾಮೇಶ್ವರಿಯ ಹುಬ್ಬುಗಳು ಕುಂಚಿತವಾದವು, ಲಜ್ಜೆಯಿಂದ ಕೆನ್ನೆಗಳು ಕೆಂಪಾದವು. "ಜನರು ಇದನ್ನು ನಂಬಿದರೆ ?" ಎಂದಳು

"ಬಿಜ್ಜಳನ ಕಡೆಯವರು ಇದನ್ನು ನಂಬಿದ್ದಾರೆ. ನಿಮ್ಮ ಒನಪು ವೈಯಾರಗಳಿಗೆ ವಶನಾದ ಅವನು ಕಲಚೂರ್ಯ ಅಧಿಕಾರ ಗೌರವಗಳನ್ನು ನಿಮಗೆ ಸೂರೆಕೊಡುತ್ತಿರುವನೆಂದು ಅವರು ಹೇಳುತ್ತಾರೆ."

"ನಾನು ಮಂಗಳವೇಡೆಗೆ ಬಂದು ಇನ್ನೂ ಮೂರು ದಿನಗಳಾಗಿಲ್ಲ. ಆಗಲೆ

ನನ್ನ ಮೇಲೆ ಇಂತಹ ಆಪಾದನೆಯೆ ?" –ಕಾಮೇಶ್ವರಿ ವಿಷಾದದಿಂದ ನುಡಿದಳು.

"ಕ್ಷಮಿಸಿರಿ, ಮಹಾರಾಣಿ. ಈ ವಿಚಾರವನ್ನು ನಿಮಗೆ ತಿಳಿಸುವುದು ಮನೆ ಹೆಗ್ಗಡೆಯಾದ ನನ್ನ ಕರ್ತವ್ಯವಾಗಿತ್ತು, ಅದನ್ನು ಮಾಡಿದೆ." –ಅಗ್ಗಳನು ಕೈ ಜೋಡಿಸಿ ಕ್ಷಮೆ ಬೇಡಿದನು.

ಕೆಲವು ಕ್ಷಣಗಳ ಮೇಲೆ ಕಾಮೇಶ್ವರಿ, "ಈ ಹಾಡಿನ ವಿಚಾರ ಬಿಜ್ಜಳರಾಯರಿಗೆ ತಿಳಿದಿದೆಯೇ? ಹಾಡುಗಾರನೇನಾದನು ?" ಎಂದು ಕೇಳಿದಳು.

"ಹೀಗೆ ಬಂದರೆ ತೋರಿಸುತ್ತೇನೆ," ಎಂದು ಅಗ್ಗಳನು ಕಾಮೇಶ್ವರಿಯನ್ನು ಅಂತಃಗೃಹದ ವಾತಾಯನಕ್ಕೆ ಕರೆದುಕೊಂಡು ಹೋದನು. ಉದ್ಯಾನದ ಹೊರಗೆ ನಗರದ ಅಂಚಿನಲ್ಲಿದ್ದ ದೊಡ್ಡ ಬಯಲು ಅಲ್ಲಿಂದ ಕಾಣುತ್ತಿತ್ತು. ಅಗ್ಗಳನು ಕೈ ತೋರಿಸಿ,

"ಆ ಬಯಲ ನಡುವೆ ಶೂಲದ ಮರದಿಂದ ನೇತಾಡುತ್ತಿರುವ ವಸ್ತು ನಿಮಗೆ ಕಾಣುತ್ತಿದೆಯೇ ? ಅದು ಆ ಹಾಡುಗಾರನ ಶವ. ಈ ದಿನ ಮುಂಜಾವಿನಲ್ಲಿ ಅವನನ್ನು ಶೂಲಕ್ಕೇರಿಸಿದರು," ಎಂದನು.

ಅವರು ನೋಡುತ್ತಿದ್ದಂತೆ ಗಾಳಿಯಿಂದ ದೇಹ ಅಲುಗಿತು. ಸುತ್ತ ನಿಂತಿದ್ದ ಜನರ ಗುಂಪು ಶವದ ಕಡೆ ಕೈತೋರಿಸಿ ಕೇಕೆ ಹಾಕಿ ನಕ್ಕರು. ಕಾಮೇಶ್ವರಿ ಚೇಳು ಕುಟುಕಿದಂತೆ ಬೆಚ್ಚಿ ಹಿಂದಕ್ಕೆ ಸರಿದು ಅಂತಃಗೃಹದ ಸುಖಾಸನದಲ್ಲಿ ಕುಳಿತು ಕೊಂಡಳು. ತುಸುಹೊತ್ತಿನ ಮೇಲೆ ಅವಳು ನಿಟ್ಟುಸಿರಿಟ್ಟು,

" ಈ ದುರ್ಘಟನೆ ಏನೋ ಅಶುಭವನ್ನು ಸೂಚಿಸುತ್ತಿದೆ, ಅಗ್ಗಳದೇವ. ನಾನು ಮಂಗಳವೇಡೆಗೆ ಬಂದದ್ದು ಯುಕ್ತವೇ ಎಂದು ಯೋಚಿಸುತ್ತಿದ್ದೇನೆ," ಎಂದಳು.

"ಬಿಜ್ಜಳನ ಮಾತುಗಳಲ್ಲಿ ವಿಶ್ವಾಸವಿಟ್ಟು ನೀವು ಮಂಗಳವೇಡೆಗೆ ಬರುವುದು ಜಗದೇಕಮಲ್ಲರಸರಿಗೆ ಇಷ್ಟವಿರಲಿಲ್ಲ," ಅಗ್ಗಳನು ಹೇಳಿದನು. "ಕುಮಾರ ಪ್ರೇಮಾರ್ಣವನ ಉತ್ತರಾಧಿಕಾರದ ವಿಚಾರ ಮಂತ್ರಿಮಂಡಲದ ಅನುಮೋದನೆ ಪಡೆದು ಪಟ್ಟಾಭಿಷೇಕ ಗೊತ್ತಾಗುವವರಗೆ ನೀವು ದೇವಗಿರಿಯಲ್ಲಿಯೇ ಇರಬೇಕೆಂದು ಅವರು ಹೇಳುತ್ತಿದ್ದರು. ಅದನ್ನು ನಿಮಗೆ ತಿಳಿಸಲು ಅವಸರದ ಭಟನನ್ನು ಕಳುಹಿಸುವಷ್ಟರಲ್ಲಿ ನೀವು ಮಂಗಳವೇಡೆಗೆ ಬಂದಿರಿ."

ತನ್ನ ಕಡೆಯವರಿಂದ ಸುದ್ದಿ ಬರುವ ಮೊದಲೇ ದೇವಗಿರಿಯನ್ನು ಬಿಟ್ಟದ್ದು ಅವಿಚಾರವೆಂದು ಕಾಮೇಶ್ವರಿಗೆ ಅರಿವಾಯಿತು. "ಬಂದದ್ದಾಯಿತು. ಈಗೇನು ಮಾಡಬೇಕೆಂದು ಹೇಳುವಿರಿ ?" ಎಂದಳು.

"ಬಿಜ್ಜಳನ ಐದುಮಂದಿ ಪುತ್ರರಲ್ಲಿ ಸೋಮೇಶ್ವರ ಮತ್ತು ಮೈಲುಗಿ, ಈ ಇಬ್ಬರೇ ನೆನ್ನಿನ ಮೆರವಣಿಗೆಯಲ್ಲಿ ಭಾಗವಹಿಸಿದ್ದುದು. ಸಂಕಮ, ಆಹವಮಲ್ಲ ಮತ್ತು ಜೋಗಮರು ನಗರದಲ್ಲಿದ್ದರೂ ಮೆರವಣಿಗೆಗೆ ಬರಲಿಲ್ಲ. ಅವರು ಅಂತರಂಗದಲ್ಲಿ ತಂದೆಯನ್ನು ವಿರೋಧಿಸುತ್ತಿದ್ದಾರೆ. ಬಿಜ್ಜಳನ ಸಹೋದರ ಕರ್ಣದೇವನು 'ಆ ಮಾಟಗಾತಿ ಅಣ್ಣನವರ ಬುದ್ಧಿಗೆಡಿಸಿದ್ದಾಳೆ. ಅದರಿಂದಲೇ ಏನೇನೋ ನಡೆಯುತ್ತಿದೆ,' ಎಂದು ಪ್ರಕಟವಾಗಿ ಹೇಳಿದನಂತೆ. ಈ ಎಲ್ಲಾ ವಿಚಾರಗಳನ್ನು ವಿವರಿಸಿ ಕರ್ಹಾಡಕ್ಕೆ ವಿಜಯಾರ್ಕದೇವರಿಗೆ ಓಲೆ ಬರೆದಿದ್ದೇನೆ. ಅವರಸದ ಭಟನು ಹೊರಗೆ ಕಾದಿದ್ದಾನೆ. ಮಹಾರಾಣಿಯವರು ಅನುಮೋದಿಸಿದರೆ ಇಂದೇ ಕರ್ಹಾಡಕ್ಕೆ ಕಳುಹಿಸುತ್ತೇನೆ," –ಎಂದು ಅಗ್ಗಳನು ಸಿದ್ಧವಾಗಿದ್ದ ಓಲೆಯನ್ನು ಕೈಚೀಲದಿಂದ ಹೊರಗೆ ತೆಗೆದು ಕಾಮೇಶ್ವರಿಗೆ ಕೊಟ್ಟನು.

ಕಾಮೇಶ್ವರಿ ಓಲೆಯನ್ನು ಓದಿ ಹಿಂದಿರುಗಿಸಿ, "ನೀವು ನಿಮ್ಮ ಕಾರ್ಯವನ್ನು ಚತುರತೆಯಿಂದ ನಿರ್ವಹಿಸಿದಿರಿ, ಅಗ್ಗಳದೇವ. ಆದರೆ ನಾನು.....ಬಿಜ್ಜಳನು ಆಹ್ವಾನ ಪತ್ರದಲ್ಲಿ ಬರೆದುದೆಲ್ಲವನ್ನೂ ನಾನು ನಿಜವೆಂದು ನಂಬಿದೆ. ಸಾಕಾದಷ್ಟು ಮಂದಿ ರಕ್ಷಕ ಭಟರನ್ನು ಸಂಗಡ ಕರೆದುಕೊಳ್ಳದೆ ದೇವಗಿರಿಯನ್ನು ಬಿಟ್ಟೆ, ನನಗಾಗಿ ಗೊತ್ತಾದ ಈ ಬಿಡಾರದ ಸುತ್ತ ಬಿಜ್ಜಳನ ಭಟರು ಕಾವಲಿದ್ದಾರೆ. ನಾನು ವಿಪತ್ತಿನಲ್ಲಿ ಸಿಕ್ಕಿಬಿದ್ದೆನೇ ಎಂದು ಭಯವಾಗುತ್ತಿದೆ," ಎಂದು ಹೇಳಿದಳು.

"ಭಯವಿಲ್ಲ ಮಹಾರಾಣೀ. ಬಿಜ್ಜಳನ ಎಲ್ಲ ವಂಚನೆ ದೌರ್ಜನ್ಯಗಳಿಗೆ ಕುಮಾರ ಸೋಮೇಶ್ವರನು ಆತಂಕಸ್ವರೂಪನೆಂದು ಹೇಳಿದೆನಲ್ಲವೆ. ಅವನ ಸ್ವಂತ ಸೈನ್ಯದ ಎರಡು ಸಾವಿರ ಮಂದಿ ರಾವುತರು, ಐದುಸಾವಿರ ಪದಾತಿ, ಈಗ ಮಂಗಳವೇಡೆಯಲ್ಲಿದೆ. ನಿಮ್ಮ ಮತ್ತು ಪ್ರೇಮಾರ್ಣವನ ಯೋಗಕ್ಷೇಮ ತನ್ನ ವಿಶೇಷ ಹೊಣೆಯೆಂದು ಸೋಮೇಶ್ವರನು ತಿಳಿದಿದ್ದಾನೆ. ಅವನ ಸೈನ್ಯ ಇಲ್ಲಿರುವವರೆಗೆ ನೀವು ಸುರಕ್ಷಿತರು. ಕರ್ಣದೇವನಾಗಲಿ, ಬಿಜ್ಜಳನ ಬೇರೆ ಮಕ್ಕಳಾಗಲಿ, ಅವರ ಸಾಮಂತರಾಗಲಿ, ಸ್ವಯಂ ಬಿಜ್ಜಳನೇ ಆಗಲಿ, ಸೋಮೇಶ್ವರನ ವಿರುದ್ಧ ನಿಮಗೆ ಅಹಿತವೆಸಗಲು ಅಸಮರ್ಥರು,"

ಅಗ್ಗಳನ ಭರವಸೆಯ ನುಡಿಗಳಿಂದ ಕಾಮೇಶ್ವರಿಗೆ ಸಮಾಧಾನವಾಯಿತು. "ನಿಮ್ಮ ಬಿಡಾರವೆಲ್ಲಿದೆ? ನೀವು ಸಮೀಪದಲ್ಲಿದ್ದರೆ ನನಗೆ ಸಾವಿರ ಸೈನ್ಯವಿದ್ದಷ್ಟು ಧೈರ್ಯ", ಎಂದಳು.

"ನಿಮ್ಮ ಮನೆಹೆಗ್ಗಡೆಯಾದ ನನಗೆ ಇಲ್ಲಿಯೇ ಸ್ಥಳಮಾಡುವುದು ಉಚಿತವಾಗಿತ್ತು. ಆದರೆ ತಿಳಿದೋ ತಿಳಿಯದೆಯೋ ಬಿಜ್ಜಳನ ಕಾರ್ಯಕರ್ತರು

ಅರಮನೆಯ ಬೇರೊಂದು ಭಾಗದಲ್ಲಿ ನನ್ನ ಬಿಡಾರವನ್ನೇರ್ಪಡಿಸಿದ್ದಾರೆ. ಈಗ ಅದನ್ನು ಬದಲಾವಣೆ ಮಾಡಲು ಪ್ರಯತ್ನಿಸುವುದರಿಂದ ಸಂದೇಹಕ್ಕೆ ಅವಕಾಶ ಕೊಟ್ಟಂತಾಗುವುದು. ಚಾಲುಕ್ಯ ಮಂತ್ರಿವರ್ಗದವರು, ಕಲ್ಯಾಣದ ಸಾಮಂತ ನಾಗರಿಕ ಮನ್ನೆಯರು ನಾಳೆ ಇಲ್ಲಿಗೆ ಬರುತ್ತಾರೆ. ಪಂಚಮಿಯಂದು ಪಟ್ಟಾಭಿಷೇಕ ಮುಗಿಯುತ್ತಲೆ ಕೆಲವೇ ದಿನಗಳಲ್ಲಿ ನೀವು ಇಲ್ಲಿಂದ ಕಲ್ಯಾಣಕ್ಕೋ ದೇವಗಿರಿಗೋ ಪ್ರಯಾಣ ಮಾಡಿದರೆ ಒಳ್ಳೆಯದು." –ಎಂದು ಹೇಳಿ ಅಗ್ಗಳನು ಕಾಮೇಶ್ವರಿಯಿಂದ ಬೀಳ್ಕೊಂಡನು.

* * *

ಕಲಚೂರ್ಯ ಯುವರಾಜ ಸೋಮೇಶ್ವರನ ಪಟ್ಟಾಭಿಷೇಕೋತ್ಸವ ಮಾಘ ಪಂಚಮಿಯ ಶುಭದಿನ ಕಲಚೂರ್ಯ ಅರಮನೆಯ ಓಲಗಶಾಲೆಯಲ್ಲಿ ವೈಭವ ವಿಜೃಂಭಣೆಗಳಿಂದ ನಡೆಯಿತು.

ಮಂಚಣ, ನಾರಣಕ್ರಮಿತ, ಚೆನ್ನಬಸವಣ್ಣ, ಇವರೇ ಮೊದಲಾದ ಬಿಜ್ಜಳನ ಮಂತ್ರಿವರ್ಗದವರು, ಕಲ್ಯಾಣದ ನಾಗರಿಕ ಪ್ರಮುಖರು, ಚಾಲುಕ್ಯ ರಾಜ್ಯದ ಮಿತ್ರಸಾಮಂತರು, ಗೋಮಂತ ಹೈವೆ, ಕರ್ಹಾಡ, ದೇವಗಿರಿ, ಭಾಗಾನಗರ, ಓರಂಗಲ್ ರಾಜ್ಯಗಳ ರಾಜಪ್ರತಿನಿಧಿಗಳು ಆಹ್ವಾನಿತರಾಗಿ ಬಂದಿದ್ದರು.

ಸೋಮೇಶ್ವರ ಸುಂದರವಲ್ಲಿಯರು ಆದರದಿಂದ ವಿಶೇಷಾಹ್ವಾನ ಕಳುಹಿಸಿದ್ದರೂ ಮಧುವರಸ ಲಾವಣ್ಯವತಿ ಶೀಲವಂತರು ಮಹೋತ್ಸವಕ್ಕೆ ಬಂದಿರಲಿಲ್ಲ. ಮಧುವರಸನು ಅಸ್ವಸ್ಥ. ಲಾವಣ್ಯವತಿ ತಂದೆಯ ಶುಶ್ರೂಷೆಗಾಗಿ ಕಲ್ಯಾಣದಲ್ಲಿರುವುದು ಅಗತ್ಯವಾಯಿತು. ಆಹ್ವಾನವನ್ನು ಪರಮಾರ್ಥವೆಂದು ಭಾವಿಸಿ ಮಹೋತ್ಸವಕ್ಕೆ ಹೋಗುವುದರಿಂದ ತನ್ನನ್ನು ಅಪಮಾನಗೊಳಿಸಲು ನಾರಣಕ್ರಮಿತನಿಗೆ ಪುನಃ ಅವಕಾಶ ಕೊಟ್ಟಂತಾಗುವುದೆಂದು ಭಾವಿಸಿ ಶೀಲವಂತ ಸುಮ್ಮನಾದನು.

ಸೋಮೇಶ್ವರನೊಡನೆ ಸುಂದರವಲ್ಲಿಯೂ ಪಟ್ಟಾಭಿಷಿಕ್ತೆಯಾಗುವಳೆಂದು ತಿಳಿದಾಗ ಬಿಜ್ಜಳನ ಬೇರೆ ಮಕ್ಕಳೂ ಅವರ ತಾಯಂದಿರೂ ಕರುಬಿದುದುಂಟು. ಆದರೆ ಬಿಜ್ಜಳನಿಗೆ ಪ್ರತಿಯಾಡುವ ಧೈರ್ಯ ಸಾಹಸಗಳು ಅವರಲ್ಲಿ ಯಾರಿಗೂ ಇರಲಿಲ್ಲ.

ಗೊತ್ತಾದ ಶುಭಮುಹೂರ್ತದಲ್ಲಿ ಅಭಿಷೇಕ ವಿಧ್ಯುಕ್ತವಾಗಿ ನಡೆಯಿತು. ಶೈವ ಮಠಗಳ ಜಂಗಮ ಗುರುಗಳು, ವೈಷ್ಣವ ಧರ್ಮದ ಜೀಯರು, ಜೈನಬಸದಿಗಳ ಇಂದ್ರರು, ಪ್ರತ್ಯೇಕವಾಗಿ ಸಂಗ್ರಹಿಸಿದ್ದ ಏಳು ಮಹಾಸಾಗರಗಳ, ಏಳು ಪುಣ್ಯನದಿಗಳ

ಮಂತ್ರಪೂತವಾದ ಪವಿತ್ರ ಜಲಗಳ ಅಭಿಷೇಕದಿಂದ ಸೋಮೇಶ್ವರ ಸುಂದರವಲ್ಲಿಯರ ಮಸ್ತಕಗಳು ತೊಯ್ದವು. ಪುರೋಹಿತರು ಆಶೀರ್ವಚನಗಳನ್ನು ನುಡಿದರು. ವಂದಿ ಮಾಗಧರು ಕಲಚೂರ್ಯ ವಂಶದ ವಿಖ್ಯಾತ ಅರಸರ ಪ್ರಶಂಸೆಯ ಪದ್ಯಗಳನ್ನು ಪಠಿಸಿದರು. ಸ್ತುತಿ ಪಾಠಕರು ಹೊಸ ಮಂಡಲಾಧೀಶ್ವರನ ಮತ್ತು ಅವನ ಪತ್ನಿಯ ಮೇಲೆ ರಚಿಸಿದ್ದ ಸ್ತುತಿಗೀತಗಳನ್ನು ಹಾಡಿದರು. ಬಡಿವಾರದವರು ಸೋಮೇಶ್ವರರನ ಶೌರ್ಯ ಪ್ರತಾಪ ಬಿರುದಾವಳಿಗಳನ್ನು ಉಗ್ಗಡಿಸಿದರು.

ಈ ಕಾರ್ಯಗಳು ನಡೆಯುತ್ತಿದ್ದಂತೆ ಸೋಮೇಶ್ವರ ಸುಂದರವಲ್ಲಿಯರು ಅಭಿಷೇಕ ಪೀಠದಿಂದೆದ್ದು ಅಂತಃಗೃಹಕ್ಕೆ ಹೋಗಿ ರಾಜರಾಣಿಯರಿಗೆ ಉಚಿತವಾದ ವಸ್ತ್ರಾಭರಣಗಳಿಂದ ಅಲಂಕೃತರಾಗಿ ಪುನಃ ಓಲಗಶಾಲೆಗೆ ಬಂದರು. ಬೆಳ್ಳಿಯ ಕೋಲುಗಳನ್ನು ಹಿಡಿದ ಕಂಚುಕಿ ಪ್ರತಿಹಾರಿಗಳು ಅವರನ್ನು ಮೊದಲೆ ಸಿದ್ಧವಾಗಿದ್ದ ಶ್ವೇತಛತ್ರಶೋಭಿತವಾದ ಭದ್ರಾಸನದಲ್ಲಿ ಕುಳ್ಳಿರಿಸಿದರು.

ಆಗ ಬಿಜ್ಜಳನು ಮಹಾಮಂಡಲೇಶ್ವರನ ರಾಜಲಾಂಛನಗಳಾದ ರತ್ನಕಂಠಿಕೆ, ಮುದ್ರೆಯುಂಗುರ, ವಜ್ರಕೆತ್ತಿದ ಹಿಡಿ ಓರೆಗಳಿಂದ ಥಳಥಳ ಹೊಳೆಯುತ್ತಿದ್ದ ಕಿಗ್ಗತಾರಿ, ಪೇರ್ಮಾಡಿ ನಾಮಾಂಕಿತವಾದ ಬಿಚ್ಚುಗತ್ತಿ, ನವರತ್ನಗಳ ಸಾಲುದಂಡೆಗಳಿಂದ ಬೆಳಗುವ ಗೊಮ್ಮಟಾಕಾರದ ರಾಜಮಕುಟ, ಇವುಗಳನ್ನು ಸ್ವಹಸ್ತದಿಂದ ಸೋಮೇಶ್ವರನಿಗೆ ಅರ್ಪಿಸಿದನು, ಮಂತ್ರಿ ಸಾಮಂತಮನ್ನೆಯರು ಮುಜುರೆಮಾಡಿ ಕಪ್ಪಕಾಣಿಕೆಗಳನ್ನು ಸಲ್ಲಿಸಿದರು. ಬಿಜ್ಜಳನ ರಾಜ್ಯಭಾರ ನಿರೂಪಣ ಸಾಂಗವಾಗಿ ನೆರವೇರಿತು.

ಆ ದಿನ ಸಂಜೆ ಅರಮನೆಯ ಬಹಿರುದ್ಯಾನದಲ್ಲಿ ರಚಿತವಾಗಿದ್ದ ಸಭಾಮಂಟಪದಲ್ಲಿ ನೂತನ ಮಹಾಮಂಡಲೇಶ್ವರ ಸೋಮೇಶ್ವರನೂ ಅವನ ಪಟ್ಟಮಹಿಷಿ ಸಾವಳ ದೇವಿ ಎಂಬ ಹೆಸರಿಂದ ಕರೆಯಲ್ಪಡುತ್ತಿದ್ದ ಸುಂದರವಲ್ಲಿಯೂ ಮಂಡಲದ ಪ್ರಜೆಗಳಿಗೆ ದರ್ಶನಕೊಟ್ಟರು. ಆ ಸಂದರ್ಭದಲ್ಲಿ ಪ್ರಜಾಸಮುದಾಯದ ಸಮಾರಾಧನೆಗಾಗಿ ಬಿಜ್ಜಳನು ಏರ್ಪಡಿಸಿದ್ದ ಸಂಗೀತ, ನರ್ತನ, ಯಕ್ಷಗಾನ, ಬಯಲಾಟ, ದೊಡ್ಡಾಟ, ಗಾರುಡಿ, ಯಕ್ಷಿಣಿ, ಬೊಂಬೆಕುಣಿತ ಇತ್ಯಾದಿ ವಿನೋದಗಳಲ್ಲಿ ಪ್ರಾಚೀನ ಶ್ರೌತ ಸೂತ್ರಗಳಲ್ಲಿ ವರ್ಣಿಸಲ್ಪಟ್ಟಂತೆ ವಿಧ್ಯುಕ್ತವಾಗಿ ನಡೆದ 'ಮಹಾವ್ರತ'ವೆಂಬ ಹಾಸ್ಯ ರೂಪಕ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಈ ಸಂದರ್ಭದಲ್ಲಿ ದೇವಗಿರಿಯ ಯಾದವ ಅರಸರ ಪತ್ರಲೇಖಕನಾಗಿ ಮಂಗಳವೇಡೆಯಲ್ಲಿದ್ದ ರಾಜದೂತನು ತನ್ನ ಪ್ರಭುವಿಗೆ ಬರೆದ ಒಂದು ಪತ್ರದಲ್ಲಿ ಈ ಪ್ರದರ್ಶನದ ಸ್ವಾರಸ್ಯವಾದ ವಿವರಣೆ ದೊರಕುತ್ತದೆ. ಭಾಷೆಯನ್ನು ನವೀಕರಿಸಿ ಪತ್ರದ ಕೆಲವು ಭಾಗಗಳನ್ನು ಮುಂದೆ ಉಲ್ಲೇಖಿಸಿದೆ :

“ರಾಜಪುರೋಹಿತ ನಾರಣಕ್ರಮಿತನ ಫಲಭರಿತವಾದ ತಲೆಯಲ್ಲಿ ಜನ್ಮ ತಳೆದ ಕರುಣೆಯ ಶಿಶು ಈ ‘ಮಹಾವ್ರತ’. ಅಂತೆಯೇ ಅದರಲ್ಲಿ ಕ್ರಮಿತ ಬಂಧುಗಳಿಗೆ ಪ್ರಮುಖಪಾತ್ರ, ಅಧಿಕಸಂಭಾವನೆ. ಪಾಂಡವರು ಅಜ್ಞಾತವಾಸದಲ್ಲಿದ್ದಾಗ ಅವರು ಬೇಡಿತಂದ ಭಿಕ್ಷಾನ್ನವನ್ನು ಕುಂತೀದೇವಿ ಎರಡು ಭಾಗಗಳಾಗಿ ಮಾಡಿ ಒಂದು ಭಾಗವನ್ನು ಭೀಮಸೇನನಿಗೆ ಕೊಟ್ಟು ಇನ್ನೊಂದನ್ನು ತಾನೂ ಉಳಿದ ನಾಲ್ವರು ಮಕ್ಕಳೂ ಹಂಚಿಕೊಳ್ಳುತ್ತಿದ್ದರೆಂದು ಮಹಾಭಾರತ ಹೇಳುತ್ತದೆ.

“ಅದರಂತೆ ನಾರಣಕ್ರಮಿತರು ಮಹಾವ್ರತಕ್ಕೆ ಮೀಸಲಾಗಿದ್ದ ಹಣದಲ್ಲಿ ಅರ್ಧವನ್ನು ತಮ್ಮ ಬಂಧುವರ್ಗಕ್ಕೂ, ಉಳಿದರ್ಧವನ್ನು ಮಂಗಳವೇಡೆಯ ವಿಪ್ರೋತ್ತಮರಿಗೂ ಹಂಚಿದರು. ಕ್ರಮಿತರ ಈ ಉದಾರತೆ ರಾಜ್ಯದ ಉಳಿದ ಅಧಿಕಾರಿ ನಿಯುಕ್ತರಿಗೆ ಆದರ್ಶವೇ? ಎಂದು ಕುಹಕಿಗಳು ಪ್ರಶ್ನಿಸಿದುದುಂಟು.

“ಮಹಾವ್ರತ ಹಾಸ್ಯರೂಪಕದಲ್ಲಿ ಭಾಗವಹಿಸಿದ್ದವರ ಹೆಸರುಗಳಿವು : ಮುರಾರಿ, ಪದ್ಮನಾಭ, ಜಲಶಯನ, ಅಚ್ಯುತ–ಈ ನಾಲ್ವರು ಕ್ರಮಿತ ಬಂಧುಗಳು. ಪ್ರಭುಗಳು ದಯಮಾಡಿ ಈ ಹೆಸರುಗಳ ಕೊನೆಯಲ್ಲಿ ಕ್ರಮಿತ ಎಂಬ ಉಪನಾಮವನ್ನು ಸೇರಿಸಿ ಓದಿಕೊಳ್ಳಬೇಕಾಗಿ ವಿನಂತಿ.

“ಕೃಷ್ಣಪೆದ್ದಿ, ಕೇಶವ ಘೈಸ, ಗೋವಿಂದ ಪಂಡಿತ, ದಶಾವತಾರ ಭಟ್ಟ, ಕಮಲಾಕ್ಷ ತ್ರಿಪಾಠಿ, ಸತ್ಯಪಾಲ ತೀರ್ಥ, ವಿಶ್ವಬಂಧು ಭಾರವಿ, ಉಪೇಂದ್ರಮಾಘ,– ಇವರು ಮಂಗಳವೇಡೆಯ ವಿಪ್ರೋತ್ತಮರು.

ಮೊದಲಪಟ್ಟಿಯ ನಾಲ್ವರಿಗೆ ಎರಡನೆಯ ಪಟ್ಟಿಯ ಎಂಟು ಜನರು ಸಮತೂಕವೇ? ಎಂದು ಯಾರೂ ಪ್ರಶ್ನಿಸುವಂತಿಲ್ಲ. ಕೃಷ್ಣತುಲಾಭಾರದಲ್ಲಿ ಭಾಮೆಯ ಒಡವೆ ವಸ್ತುಗಳಿಗಿಂತ ಕೃಷ್ಣನ ತೂಕ ಹೆಚ್ಚಾದಾಗ ದೇವರ್ಷಿ ನಾರದನು ತುಲಸೀದಳವೊಂದನ್ನು ಒಡವೆಗಳ ಮೇಲಿಟ್ಟು ಸರಿದೂಗಿಸಿದನಂತೆ. ರಾಜಪುರೋಹಿತ ನಾರಣಕ್ರಮಿತರೂ ಅಂತಹ ಪ್ರಭಾವಶಾಲಿಗಳು. ಅವರ ಹಂಚಿಕೆಯ ಬಗೆಗೆ ಯಾರಾದರೂ ಪ್ರಶ್ನಿಸಿದರೆ ಕಣ್ಣುಗಳ ಕಿಡಿ ಹಾರಿಸಿ, ಪ್ರಶ್ನಿಸಿದವರ ಬಾಯಿ ಮುಚ್ಚಿಸುವ ಶಕ್ತಿಯಿದೆ ಅವರಿಗೆ.

“ವಿಭಿನ್ನ ಅಭಿರುಚಿಯ ಎಲ್ಲ ಬಗೆಯ ಜನರ ಸಮಾರಾಧನೆಗಾಗಿ ಅಭಿನಯಿಸಿದ ಲಘುಹಾಸ್ಯರೂಪಕ ‘ಮಹಾವ್ರತ’. ಅಗ್ರಯನ ಇಂದ್ರ ಯಜ್ಞಗಳಂತೆ ಹೋತೃ, ಅಧ್ವರ್ಯ, ಉದ್ಗಾತೃ, ಪ್ರಸ್ತೋತೃ, ಬ್ರಹ್ಮ ಮತ್ತು ಬ್ರಾಹ್ಮಣಾಶಂಸಿ ಎಂಬ ಆರು ಜನ ಋತ್ವಿಕ್ಕುಗಳೂ, ಅವರ ಆರುಜನ ಸಹಾಯಕರು ಮತ್ತು ಅವರ ಪತ್ನೀಪುತ್ರಿಯರ ತಂಡ, ಇವರು ಈ ಹಾಸ್ಯರೂಪಕದ ಸೂತ್ರಧಾರರು. ತೆರೆ

ಸರಿಯುತ್ತಿದ್ದಂತೆ ಈ ಮೇಳ ಚಕ್ರಾಕಾರವಾಗಿ ರಂಗದಮೇಲೆ ಕುಳಿತಿರುವುದನ್ನು ಕಾಣುತ್ತೇವೆ.

"ಉದ್ಗಾತೃವು ಮೆತ್ತನೆಯ ದಿಂಬುಗಳ ಸುಖಾಸನದಲ್ಲಿ, ಅವನ ಬಲದ ಕುಶಾಸನದ ಮೇಲೆ ಪ್ರಸ್ತೋತೃ, ರಂಗದ ಒಂದು ಕಡೆ ಮರಕ್ಕೆ ಕಟ್ಟಿದ ತೂಗು ಮಂಚದಲ್ಲಿ ಹೋತೃ, ರಂಗದ ನಡುವೆ ಎತ್ತರವಾದ ಅಟ್ಟಣೆಯ ಮೇಲೆ ಅಧ್ವರ್ಯು ಅಟ್ಟಣೆಯಿಕ್ಕೆಳಗಳಲ್ಲಿ ಕುಶಾಸನಗಳ ಮೇಲೆ ಸಭಾಪತಿ ಬ್ರಹ್ಮ ಮತ್ತು ಬ್ರಾಹ್ಮಣಾ ಶಂಸಿ, ಇವರೆಲ್ಲರ ಹಿಂದೆ ಬಣ್ಣಬಣ್ಣದ ವಸ್ತ್ರಾಭರಣಗಳಿಂದ ಅಲಂಕೃತವಾಗಿ ಚಕ್ರಾಕಾರವಾಗಿ ಕುಳಿತ ಬ್ರಾಹ್ಮಣಿಯರ ತಂಡ, ರಂಗದ ನಡುವೆ ಅಟ್ಟಣೆಯ ಕೆಳಗಿರುವ ಮಾರ್ಜಾಲೀಯವೆಂಬ ಮೋಟುಗುಡಿಸಲಿನ ಎರಡು ಕಡೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಇದು ರಂಗದ ಯೋಜನೆ.

"ಇವರಲ್ಲಿ ಅಧ್ವರ್ಯು ಮತ್ತು ಬ್ರಹ್ಮ, ಇವರ ಹೊರತಾಗಿ ಉಳಿದವರೆಲ್ಲರ ಕೈಯಲ್ಲಿ ಒಂದೊಂದು ವಾದ್ಯ. ಅವುಗಳ ಹೆಸರುಗಳನ್ನು ಮುಂದೆ ಕೊಟ್ಟಿದೆ. ಖಂಡವೀಣೆ, ತಂಬಲುವೀಣೆ, ತಾಲುಕವೀಣೆ–ಇವು ವೀಣೆಯ ವಿಭೇದಗಳು. ಪಿಚ್ಛೋಲ, ಕರ್ಕರೀಕ, ಕಪಿಶಿರ್ಷಿನಿ, ಇವು ಊದುವ ವಾದ್ಯಗಳು. ಆಘಾಟಿ, ಅವಘಟರಿಕಾ, ಮೃದಂಗ ಇವು ಮದ್ದಲೆಗಳು. ಹಳ್ಳತೋಡಿ ಅದರ ಮೇಲೆ ಚರ್ಮವನ್ನು ಬಿಗಿಯಾಗಿ ಎಳೆದು ಕಟ್ಟಿದ ಭೂಮಿದುಂದುಭಿ ಎಂಬ ನಗಾರಿ ಬ್ರಾಹ್ಮಣಾಶಂಸಿಯ ಮುಂದಿರುತ್ತದೆ. ಬ್ರಾಹ್ಮಣಿಯರ ಗೀತೆ ನಡೆಯುವಾಗ ಎಲ್ಲರೂ ಒಟ್ಟಿಗೆ, ಉಳಿದ ಸಮಯಗಳಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಕೆಲವರು ವಾದ್ಯ ನುಡಿಸುತ್ತಾರೆ.

"ಉದ್ಗಾತೃ, ಪ್ರಸ್ತೋತೃಗಳ ಸಾಮಗಾನದಿಂದ ರೂಪಕ ಆರಂಭವಾಗುತ್ತದೆ. ನಾರಣಕ್ರಮಿತರ ಯಜ್ಞಶಾಲೆಯಲ್ಲಿ ಪ್ರಭುಗಳಿಗೆ ಸಾಮಗಾನದ ಪರಿಚಯವಾಗಿರುವುದರಿಂದ ಅದನ್ನು ಪುನಃ ಇಲ್ಲಿ ವಿವರಿಸುವ ಅಗತ್ಯವಿರುವುದಿಲ್ಲ. ಮಂದ್ರದಲ್ಲಿ ಪ್ರಾರಂಭವಾಗುವ ಈ 'ಭುಭುಭೂ'ಗಾನ ತಾರಕಕ್ಕೇರಿ ತೀವ್ರಗತಿಯಲ್ಲಿ ಮೊಳಗುತ್ತಿದ್ದಂತೆ ಬ್ರಾಹ್ಮಣಿಯರು ಮೊದಲ ದೃಶ್ಯದ ವಸ್ತುವನ್ನು ಸೂಚಿಸುವ ಗಾಥೆಗಳನ್ನು ಹಾಡುತ್ತಾರೆ.

"ಗುರುಕುಲದ ವಿದ್ಯಾರ್ಥಿಯೊಬ್ಬನು ಪ್ರೇಮಪಾಠದ ಪ್ರಥಮ ಶಿಕ್ಷಣಕ್ಕಾಗಿ ವಯಸ್ಸಿನಲ್ಲಿ ತನಗಿಂತ ಹಿರಿಯಳಾದ ಗಣಿಕೆಯೊಬ್ಬಳ ಬಳಿಗೆ ಹೋದಾಗ ಅವರ ನಡುವೆ ನಡೆಯುವ ವಿನೋದ ಸಂಭಾಷಣೆಯೇ ಈ ದೃಶ್ಯದ ಕಥಾವಸ್ತು. ಛಾಂದಸನಾದ ಪತಿಯನ್ನು ಬಿಟ್ಟು ದೂರದ ಯಾವುದೋ ಗ್ರಾಮದಿಂದ ಮಂಗಳವೇಡೆಗೆ ಬಂದಿದ್ದ ಪಂಡಿತ ಪತ್ನಿಯೊಬ್ಬಳು ಗಣಿಕೆಯ ಪಾತ್ರವಹಿಸಿದ್ದಳು.

ನಗರದಲ್ಲಿ ಮೋಜುಗಾರನೆಂದು ಹೆಸರಾಗಿದ್ದ ಉಪೇಂದ್ರ ಮಾಘ ವಿದ್ಯಾರ್ಥಿಯ ಪಾತ್ರದಲ್ಲಿ. ಇವರ ಸಂಭಾಷಣೆ ಸಂಸ್ಕೃತ ಪ್ರಾಕೃತ ದೇಶೀಮಿಶ್ರಿತವಾದ ಒಂದು ವಿಚಿತ್ರಭಾಷೆಯಲ್ಲಿ ನಡೆಯಿತು. ಜನರಿಗೆ ಅದು ಅರ್ಥವಾಗದಿದ್ದರೂ, ಹೋತೃ ಅಧ್ವರ್ಯುಗಳ ಅಟ್ಟಹಾಸ, ಹಿಮ್ಮೇಳದ ಬ್ರಾಹ್ಮಣಿಯರ ವಿಕೃತ ಚೇಷ್ಟೆಗಳು, ಪಾತ್ರಧಾರಿಗಳ ಹಾವಭಾವ ವಿಲಾಸ, ಇವುಗಳ ಸಹಾಯದಿಂದ ಸಂಭಾಷಣೆಯ ಅಶ್ಲೀಲ ಕಲಾಸ್ಥಾನಗಳನ್ನು ಜನರು ಸುಲಭವಾಗಿ ಗುರುತಿಸಬಹುದಾಗಿತ್ತು.

"ದೃಶ್ಯಾಂತ್ಯದಲ್ಲಿ ವಾದ್ಯಘೋಷ, ಹಿಮ್ಮೇಳದ ಗೀತೆ, ಆಮೇಲೆ ಎರಡನೆಯ ದೃಶ್ಯ. ಅಂಗೈ ಅಗಲದ ಬಿಳಿಯ ಚರ್ಮದ ತುಂಡಿಗಾಗಿ ಹೋರಾಡುತ್ತ ತರುಣರಿಬ್ಬರು ಪ್ರವೇಶಿಸುವರು. ಅವರಲ್ಲಿ, ಒಬ್ಬ ಆರ್ಯ ಅಥವಾ ಬಿಳಿಯ ಜನಾಂಗಕ್ಕೆ ಸೇರಿದವನು. ಇನ್ನೊಬ್ಬನು ಅನಾರ್ಯ ಅಥವಾ ಶೂದ್ರ. ಅನಾಗರಿಕನಾದ ಶೂದ್ರನಿಗೆ ಚರ್ಮದ ಉಡಿಗೆ, ದೊಣ್ಣೆ, ಕಲ್ಲು, ಗುಂಡುಗಳು ಆಯುಧಗಳು. ಕಬ್ಬಿಣದ ಕವಚತೊಟ್ಟು ಕೈಯಲ್ಲಿ ಕತ್ತಿ ಭರ್ಜಿಗಳನ್ನು ಹಿಡಿದ ಆರ್ಯನು ಬೆಕ್ಕು ಇಲಿಯೊಡನೆ ಚೆಲ್ಲಾಟವಾಡುವಂತೆ ಶೂದ್ರನನ್ನು ಕೊಂಚಹೊತ್ತು ಆಡಿಸಿ, ಜನರನ್ನು ನಗಿಸಿ, ಕೊನೆಗೆ ಭರ್ಜಿ ಇರಿದು ಕೊಲ್ಲುತ್ತಾನೆ. ವಿಜಯ ಧನವಾಗಿ ತನಗೆ ಲಭಿಸಿದ ಚರ್ಮದ ತುಂಡು ಹೋರಾಟದಲ್ಲಿ ಚಿಂದಿಚಿಂದಿಯಾಗಿರುವುದನ್ನು ಕಂಡಾಗ ಆರ್ಯವೀರನಿಗಾಗುವ ದುಃಖ ಪ್ರದರ್ಶನವನ್ನು ನೋಡಿಯೇ ಆನಂದಿಸಬೇಕು. ಅಚ್ಯುತ ಕ್ರಮಿತನೂ ವಿಶ್ವಬಂಧು ಭಾರವಿಯೂ ಅನುಕ್ರಮವಾಗಿ ಈ ಪಾತ್ರಗಳನ್ನು ದಕ್ಷತೆಯಿಂದ ನಿರ್ವಹಿಸಿ ಎಲ್ಲರ ಮೆಚ್ಚುಗೆ ಪಡೆದರು.

"ಮತ್ತೆ ವಾದ್ಯಘೋಷ, ಬ್ರಾಹ್ಮಣಿಯರ ಗೀತೆ. ಆಮೇಲೆ ಮೂರನೆಯ ದೃಶ್ಯ ಒಬ್ಬ ವಿಪ್ರೋತ್ತಮನಿಗೂ ಇನ್ನೊಬ್ಬ ಶೂದ್ರನಿಗೂ ಯಜ್ಞಯಾಗಗಳ ವಿಚಾರವಾಗಿ ನಡೆಯುವ ಸಂವಾದವೇ ಈ ದೃಶ್ಯದ ವಸ್ತು. 'ದುಡಿಮೆಯಿಂದ ಗಳಿಸಿದ ಹಣವನ್ನು ಪೋಲುಮಾಡುವುದು ಯಜ್ಞಯಾಗಗಳ ಉದ್ದೇಶ. ತಿಂದು ತೇಗಿ ದಕ್ಷಿಣೆಗೆ ಕೈಯೊಡ್ಡುವ ಋತ್ವಿಕ್ಕುಗಳ ಹೊರತಾಗಿ ಮತ್ತಾವ ದೇವತೆಗಳೂ ಅವುಗಳಿಂದ ಸಂತುಷ್ಟರಾಗುವುದಿಲ್ಲ. ಅಗ್ರವರ್ಣದವರು ಉಳಿದ ಮೂರು ವರ್ಣಗಳವರ ಸಿರಿ ಸಂಪತ್ತುಗಳನ್ನು ಅಪಹರಿಸಲು ಹೂಡಿದ ತಂತ್ರವೇ ಯಜ್ಞಯಾಗಗಳು,' ಎಂದು ಶೂದ್ರನ ವಾದ. 'ಯಜ್ಞಯಾಗಗಳಿಂದ ಜಗತ್ತು ಉಳಿದಿದೆ, ಸೂರ್ಯ ಚಂದ್ರರು ಗಗನದಲ್ಲಿ ಚಲಿಸುತ್ತಿದ್ದಾರೆ, ಋತುಧರ್ಮ ನಡೆಯುತ್ತಿದೆ. ಯಜ್ಞಯಾಗಗಳು ನಿಂತರೆ ಇಂದ್ರನು ಮಳೆಗರೆಯುವುದಿಲ್ಲ. ಸಸ್ಯಗಳು ಬೆಳೆದು ಫಲಕೊಡುವುದಿಲ್ಲ. ಉದಯಾಸ್ತಗಳು ಸ್ತಂಭಿಸಿ ಜಗತ್ತಿನಲ್ಲಿ ಕತ್ತಲೆ ಹರಡುತ್ತದೆ. ಪ್ರಳಯವಾಗುತ್ತದೆ,' ಎಂದು ವಿಪ್ರನು ಉತ್ತರಕೊಡುತ್ತಾನೆ.

"ಈ ವಿವಾದದಲ್ಲಿ ಸಭಾಪತಿ ಬ್ರಹ್ಮನು ಶೂದ್ರನ ಕಡೆಗೂ, ಬ್ರಾಹ್ಮಣಾಶಂಸಿಯು ವಿಪ್ರನ ಕಡೆಗೂ ಸೇರುತ್ತಾರೆ. ಮೇಲಿಂದ ಮೇಲೆ ಭಲೆ! ಭಲೆ! ಭೇಷ್! ಭೇಷ್! ಎಂದು ಅಬ್ಬರಿಸಿ ತಮ್ಮ ಕಡೆಯವನಿಗೆ ಇಬ್ಬರು ಪ್ರೋತ್ಸಾಹ ಕೊಡುತ್ತಾರೆ. ವಿವಾದ ತುಟಿಗಳನ್ನು ದಾಟಿ ಕೈ ಕೈ ಮಸಗುವಂತಾದಾಗ ಅಟ್ಟಣೆಯ ಮೇಲೆ ಕುಳಿತು ಎಲ್ಲವನ್ನೂ ಕೇಳುತ್ತಿರುವ ಹೋತೃ ತನ್ನ ಕೈಯಲ್ಲಿರುವ ಬಾರುಗೋಲಿನಿಂದ ಇಬ್ಬರನ್ನೂ ಥಳಿಸಿ ರಂಗದಿಂದ ಓಡಿಸುತ್ತಾನೆ.

"ಅವರು ಓಡುತ್ತಿದ್ದಂತೆ ಕ್ಷತ್ರಿಯರಿಂದ ತುಂಬಿದ ಎರಡು ರಥಗಳು ಎರಡು ಕಡೆಗಳಿಂದ ರಂಗಕ್ಕೆ ಬರುತ್ತವೆ. ಇಬ್ಬರೂ ಆ ಕ್ಷತ್ರಿಯರಿಗೆ ಶರಣಾಗತರಾಗುತ್ತಾರೆ. ರಥದಲ್ಲಿ ತಂದಿದ್ದ ಚರ್ಮದ ಗುರಿಹಲಿಗೆಯನ್ನು ಶರಣಾಗತರಾದ ಆ ಇಬ್ಬರ ನಡುವೆ ನಿಲ್ಲಿಸಿ, ಕ್ಷತ್ರಿಯರು ಬಾಣ ಹೊಡೆಯುವ ಸ್ಪರ್ಧೆಗೆ ಪ್ರಾರಂಭಿಸುತ್ತಾರೆ. ಬಾಣ ಗುರಿಯನ್ನು ಮುಟ್ಟಿ ಕೆಳಗೆ ಬೀಳಬಾರದು. ಬಾಣದ ಅಲಗು ಗುರಿಗೆ ತಾಕಿ ಚರ್ಮ ಹರಿಯದಂತೆ ಅಲ್ಲಿಯೇ ನಿಲ್ಲಬೇಕು, ಎಂಬುದು ಸ್ಪರ್ಧೆಯ ನಿಯಮ. ಎಲ್ಲರೂ ಸ್ಪರ್ಧಿಸುತ್ತಾರೆ. ಯಾರೂ ಗೆಲ್ಲುವುದಿಲ್ಲ. ಪರಿಚಯವಿಲ್ಲದ ಕ್ಷತ್ರಿಯನೊಬ್ಬನು ನರ್ತಿಸುತ್ತ ರಂಗವನ್ನು ಪ್ರವೇಶಿಸಿ ಮೊದಲ ಬಾಣಕ್ಕೆ ಗುರಿಯನ್ನು ಭೇದಿಸುತ್ತಾನೆ. ಎಲ್ಲರೂ ಅವನನ್ನು ನಾಯಕನಾಗಿ ಆರಿಸುತ್ತಾರೆ.

"ಸ್ಪರ್ಧೆ ನಡೆಯುವಾಗ ಗುರಿಹಲಿಗೆಯನ್ನು ಹಿಡಿದ ವಿಪ್ರ ಶೂದ್ರನ ಪ್ರಾಣ ಭೀತಿ, ಆರ್ತಸ್ವರ, ಹೋತೃ ಅಧ್ವರ್ಯುಗಳ ಅಟ್ಟಹಾಸ, ಬ್ರಹ್ಮ ಬ್ರಾಹ್ಮಣಾಶಂಸಿಗಳ ವಿಕಾರ ಚೇಷ್ಟೆಗಳು, ಈ ದೃಶ್ಯದಲ್ಲಿ ಪರಿಹಾಸ ಸ್ಥಾನಗಳು.

"ಕ್ಷತ್ರಿಯ ವೀರರು ಹೊಸ ನಾಯಕನನ್ನು ಸುತ್ತುಗಟ್ಟಿ ಕುಣಿಯುತ್ತಿದ್ದಂತೆ ಪೂರ್ಣಕುಂಭಗಳನ್ನು ಹೊತ್ತ ಎಂಟು ಮಂದಿ ದಾಸಿಯರು ರಂಗವನ್ನು ಪ್ರವೇಶಿಸಿ ಕುಣಿಯುತ್ತ ರಂಗದ ಎಂಟು ದಿಕ್ಕುಗಳಲ್ಲಿ ಕುಂಭಗಳನ್ನಿಡತ್ತಾರೆ. ವಾದ್ಯಘೋಷ ಹಿಮ್ಮೇಳದ ಗೀತಗಳೊಡನೆ ರೂಪಕ ಮುಗಿಯುತ್ತದೆ.

"ಸಂಜೆ ನಾರಣಕ್ರಮಿತರನ್ನು ಕಂಡು ಅವರ ಪ್ರಯೋಗ ಜನಪ್ರಿಯವಾದುದಕ್ಕಾಗಿ ಅಭಿನಂದಿಸಿ, 'ನಿಮ್ಮ ರೂಪಕದ ಸಂಕೇತಾರ್ಥವೇನು?" ಎಂದು ಕೇಳಿದೆ. ಅವರು ನಕ್ಕು,

" 'ಆಪಸ್ತಂಭೀಯ ಶ್ರೌತಸೂತ್ರದಲ್ಲಿ ಮಹಾವ್ರತದ ವಿವರಣೆಯಿದೆ. ಅದನ್ನು ಆಧರಿಸಿ ನಾನು ರೂಪಕ ರಚಿಸಿದೆ. ಪ್ರಾಚೀನರ ರಾಜಕೀಯ ಜಾಗ್ರತೆಗೆ ಇದು ನಿದರ್ಶನ. ನೋಡುವವರು ತಮ್ಮ ತಮ್ಮ ಇಷ್ಟ ಬಂದಂತೆ ಅರ್ಥಮಾಡಿಕೊಳ್ಳಬಹುದು,' ಎಂದರು.

"ಪ್ರಯೋಗದ ಜನಪ್ರಿಯತೆಯಿಂದ ಕ್ರಮಿತರಿಗೆ ಪರಮಾನಂದವಾಗಿದೆ. ಮಂತ್ರಿ ಮಂಡಲಕ್ಕೆ ಚೆನ್ನಬಸವಣ್ಣನವರ ನೇಮಕದಿಂದ ತಮಗಾದ ಅಪಮಾನವನ್ನು ಈಗ ಅವರು ಮರೆತಿದ್ದಾರೆ." –ಎಂದು ಪತ್ರ ಮುಗಿಯುತ್ತದೆ.

ಪಟ್ಟಾಭಿಷೇಕಕ್ಕಾಗಿ ಬಂದಿದ್ದ ಅತಿಥಿಗಳು ಷಷ್ಠಿಯ ದಿನ ಮುಂಜಾವಿನಲ್ಲಿ ಬಿಜ್ಜಳನಿಂದ ಸನ್ಮಾನಿತರಾಗಿ ಸುಸ್ಥಾನಗಳಿಗೆ ತೆರಳಿದರು. ಬಿಜ್ಜಳನಿಗೆ ಆಪ್ತರಾದ ಕೆಲವು ಮಂದಿ ಸಾಮಂತರು, ನಾರಣಕ್ರಮಿತ, ಚಾಲುಕ್ಯರಾಣಿ ಕಾಮೇಶ್ವರಿ, ಇವರು ಮಾತ್ರವೇ ಕಲಚೂರ್ಯ ಅರಮನೆಯಲ್ಲಿ ಉಳಿದರು.

ಆ ದಿನವೇ ಕರ್ಹಾಡಕ್ಕೆ ಪ್ರಯಾಣಮಾಡಿ, ಪ್ರೇಮಾರ್ಣವನ ಪಟ್ಟಬಂಧೋತ್ಸವ ಗೊತ್ತಾದ ಮೇಲೆ ಅಣ್ಣ ವಿಜಯಾರ್ಕನೊಡನೆ ಕಲ್ಯಾಣಕ್ಕೆ ಬರುವುದು ಕಾಮೇಶ್ವರಿಯ ಇಚ್ಛೆಯಾಗಿತ್ತು.

ಆದರೆ ಬಿಜ್ಜಳನು ಒಪ್ಪಲಿಲ್ಲ. "ದಶಮಿ ಇನ್ನು ನಾಲ್ಕು ದಿನವಿದೆ. ಅಲ್ಲಿಯವರೆಗೆ ನಮ್ಮ ಅತಿಥಿಯಾಗಿದ್ದು ಆಮೇಲೆ ಹೋಗಬಹುದು," ಎಂದು ಒತ್ತಾಯ ಪಡಿಸಿದನು. ಕಾಮೇಶ್ವರಿ ನಿರ್ವಾಹವಿಲ್ಲದೆ ಒಪ್ಪಿಕೊಂಡಳು.

* * *

"ರಾಜಸೂಯಯಾಗ ಮುಗಿದಮೇಲೆ ದ್ಯೂತಸಭೆ ನಡೆಸುವುದು ಕ್ಷತ್ರಿಯ ಸಂಪ್ರದಾಯವೆಂದು ಮಹಾಭಾರತ ಹೇಳುತ್ತದೆ. ಅಂದಿನ ರಾಜಸೂಯವೇ ಇಂದಿನ ಪಟ್ಟಾಭಿಷೇಕ. ನವಮಿಯಂದು ಸಭಾಂಗಣ ಅಕ್ಷದ್ಯೂತಕ್ಕೆ ಅಣಿಯಾಗಲಿ. ಸ್ತ್ರೀ ಪುರುಷ ಭೇದವಿಲ್ಲದೆ ಇಷ್ಟವುಳ್ಳವರೆಲ್ಲ ಬಂದು ಅದೃಷ್ಟ ಪರೀಕ್ಷೆ ಮಾಡಬಹುದು."

ಬಿಜ್ಜಳನ ಆಜ್ಞೆ ನಾರಣಕ್ರಮಿತನನ್ನಾಗಲಿ, ಪರಿವಾರದ ಸಾಮಂತರನ್ನಾಗಲಿ ಅಚ್ಚರಿಗೊಳಿಸಲಿಲ್ಲ. ಉತ್ಸವ ಕಾಲಗಳಲ್ಲಿ ಹಣದ ಪರಿಮಿತಿಯಿಲ್ಲದೆ ಜೂಜಾಟವಾಡುವುದು ಆಗ ಚಾಲುಕ್ಯ ರಾಜ್ಯದ ಸಾಮಂತ ಶ್ರೀಮಂತರ ಪದ್ಧತಿಯಾಗಿತ್ತು. ಸರ್ವತ್ರ ಪ್ರಚಾರದಲ್ಲಿದ್ದ ಈ ಹಳೆಯ ಪದ್ಧತಿಗೆ ರಾಜಮನ್ನಣೆ ದೊರಕಿತೆಂದು ಅವರು ಸಂತುಷ್ಟರಾದರು.

"ಆಜ್ಞೆಯಂತೆ ಎಲ್ಲವನ್ನೂ ಏರ್ಪಡಿಸುತ್ತೇನೆ, ಸಭಿಕರ ಹೆಸರನ್ನು ದಯಮಾಡಿ ಪ್ರಭುಗಳೇ ಸೂಚಿಸಿದರೆ......" ಕ್ರಮಿತನು ಮಾತು ಮುಗಿಸದೆ ಬಿಜ್ಜಳನ ಕಡೆ ನೋಡಿದನು.

"ಕರ್ಣದೇವನೇಕಾಗಬಾರದು?"

ಬಿಜ್ಜಳನ ಸಲಹೆಯನ್ನು ವಿರೋಧಿಸುವುದು ಕ್ರಮಿತನ ಉದ್ದೇಶವಾಗಿರಲಿಲ್ಲ. ಆದರೂ ಕರ್ಣದೇವನಂತಹ ಅಸಂಯತ ಪಾನಾಸಕ್ತ ಉದ್ಧಟ ಕ್ಷತ್ರಿಯನ ಅಧ್ಯಕ್ಷತೆಯಲ್ಲಿ

ದ್ಯೂತಸಭೆ ನಡೆಸುವುದು ಅನರ್ಥಕ್ಕೆ ಆಹ್ವಾನವಿತ್ತಂತೆ ಎಂದು ಅವನಿಗೆ ತಿಳಿದಿತ್ತು.

"ದ್ಯೂತಸಭೆ ಪ್ರಭುಗಳ ಸಮ್ಮುಖದಲ್ಲಿ ನಡೆಯುತ್ತದೆ. ಮಂಗಳವೇಡೆಯ ಶ್ರೀಮಂತ ಸಾಮಂತ ಮನ್ನೆಯರು ಸಭೆಯಲ್ಲಿ ಭಾಗವಹಿಸುತ್ತಾರೆ. ಅನುಮತಿಯ ವಿಚಾರ ತಿಳಿದರೆ ಅಂತಃಪುರದ ಮಹಿಳೆಯರೂ ಬರಬಹುದು. ಇಂತಹ ಪ್ರತಿಷ್ಠಿತರ ಸಭೆಗೆ ಅಧ್ಯಕ್ಷನಾಗಲು ಅಗತ್ಯವಾದ ಸಹನೆ ಸೌಜನ್ಯ ಗಾಂಭೀರ್ಯಗಳು ಕರ್ಣ ದೇವರಸರಿಗಿದೆಯೇ ಎಂದು ನನಗೆ ಸಂದೇಹ," –ಎಂದು ಅವನು ಆಕ್ಷೇಪಿಸಿದನು.

"ಕರ್ಣದೇವನು ನನ್ನ ಸೋದರನೆಂಬುದನ್ನು ನೀವು ಮರೆತಂತಿದೆ." –ಬಿಜ್ಜಳನು ನಸುನಕ್ಕು ನುಡಿದನು.

"ಪ್ರಭುಗಳ ಘನತೆ ಗೌರವಗಳ ವಿಚಾರದಲ್ಲಿ ಸ್ಪಷ್ಟವಾಗಿ ಮಾತಾಡುವುದು ನನ್ನ ಕರ್ತವ್ಯ. ಅದರಿಂದ ನಿಮಗೆ ಅಸಮಾಧಾನವಾಗದಿದ್ದರೆ...."

ಕ್ರಮಿತನಿಗೆ ಮಾತು ಮುಗಿಸುವ ಅವಕಾಶಕೊಡದೆ ಬಿಜ್ಜಳನು, "ಇದು ಅಸಮಾಧಾನದ ವಿಚಾರವಲ್ಲ. ಸಭಿಕನಾಗಲು ಕರ್ಣದೇವ ಅನರ್ಹನಾದರೆ ನೀವೇ ಆ ಕಾರ್ಯ ನಿರ್ವಹಿಸಬೇಕಾಗುವುದು," ಎಂದನು.

"ಪ್ರಭುಗಳು ಇಚ್ಛಿಸುವುದಾದರೆ ನಾನು ಸಿದ್ಧ," ಎಂದು ಕ್ರಮಿತನು ಒಪ್ಪಿಕೊಂಡನು.

ನವಮಿಯ ದಿನ ಅಪರಾಹ್ನ ಮೊದಲನೆಯ ಪ್ರಹರ ಮುಗಿಯುತ್ತಿದ್ದಂತೆ ದ್ಯೂತ ಸಭೆ ಪ್ರಾರಂಭವಾಯಿತು. ಸಭಾಂಗಣದ ಒಂದು ಪಾರ್ಶ್ವದಲ್ಲಿ ಸಭಿಕರಿಗಾಗಿ ವೇದಿಕೆಯ ಮೇಲೆ ದಿಂಬುಗಳ ಸುಖಾಸನ, ಉಳಿದ ಕಡೆಗಳಲ್ಲಿ ಹತ್ತು ಗುಂಪು ಒಂದೇ ಸಾರಿ ಆಟವಾಡಲು ಅನುಕೂಲವಾಗುವಂತೆ ಜೋಡಿಸಿದ ಹಾಸಂಗಿ ದಿಂಬುಗಳು ಇದ್ದವು. ಆಟಗಾರರಿಗೆ ಆಗಾಗ ಉಪಾಹಾರ ಪಾನೀಯಗಳನ್ನು ತಂದುಕೊಡಲು ದಾಸಿಯರು ಸಿದ್ಧರಾಗಿ ನಿಂತಿದ್ದರು.

ಅಪರಾಹ್ನ ಮೊದಲನೆಯ ಪ್ರಹರ ಮುಗಿದ ಘಂಟೆ ಹೊಡೆಯುತ್ತಿದ್ದಂತೆ ಆಹ್ವಾನಿತರಾಗಿದ್ದ ಶ್ರೀಮಂತ ಸಾಮಂತರಲ್ಲಿ ಕೆಲವರು ಅಲ್ಲಿಗೆ ಬಂದರು.

ಕ್ರಮಿತನು ಅವರನ್ನು ಸ್ವಾಗತಿಸಿ, "ಹಾಸಂಗಿ ಲೆತ್ತಗಳು ನಿಮಗಾಗಿ ಕಾದಿವೆ, ಆಟ ಪ್ರಾರಂಭಿಸಬಹುದು," ಎಂದನು.

ವೇದಿಕೆಯ ಪಾರ್ಶ್ವದ ಮಂದಾಸನದಲ್ಲಿ ಧನದೇವತೆ ಲಕ್ಷ್ಮಿಯ ವಿಗ್ರಹವನ್ನು ಪೂಜೆಗಿಟ್ಟಿದ್ದರು. ಎದುರಿಗೆ ದೀಪಸ್ತಂಭಗಳು ಉರಿಯುತ್ತಿದ್ದವು. ಮಂದಾಸನದ ತಳದಲ್ಲಿ ಸಭೆಯ ಕರಣಿಕನ ಗದ್ದುಗೆ. ಸಾಮಂತರು ದೇವತೆಗೆ ವಂದಿಸಿ, ಆಟಕ್ಕೆ ಬೇಕಾಗುವ ಬಣ್ಣದ ಗುರುತು ಬಿಲ್ಲೆಗಳನ್ನು ಕರಣಿಕನಿಂದ ಕೊಂಡುಕೊಂಡು ಹಾಸಂಗಿಗಳ ಸುತ್ತ ಆಟಕ್ಕೆ ಕುಳಿತರು.

ರಾಜಾನುಮತಿ ಪಡೆದು ನಡೆಸಲ್ಪಡುತ್ತಿದ್ದ ಸಾರ್ವಜನಿಕ ದ್ಯೂತಾಗಾರಗಳು, ಚಾಲುಕ್ಯರಾಜ್ಯದ ಪ್ರಮುಖ ನಗರಗಳಲ್ಲಿ ಹಿಂದಿನಿಂದ ಪ್ರಚಾರದಲ್ಲಿದ್ದವು. ಅವುಗಳಲ್ಲಿ ಹಣದ ಪ್ರತಿಯಾಗಿ ಸಭಿಕನಿಂದ ಕೊಂಡುಕೊಂಡ ಗುರುತುಬಿಲ್ಲೆಗಳನ್ನು ಮಾತ್ರವೇ ಉಪಯೋಗಿಸಬೇಕೆಂಬ ಹೊಸನಿಬಂಧನೆಯನ್ನು ಕೆಲವು ವರ್ಷಗಳ ಹಿಂದೆ ಬಿಜ್ಜಳನು ಪ್ರಚಾರಕ್ಕೆ ತಂದಿದ್ದನು. ಪ್ರತಿದಿನ ಮಾರಾಟವಾಗುವ ಬಿಲ್ಲೆಗಳ ಮೇಲೆ ತೆರಿಗೆ ಕೊಡಬೇಕಾಗುತ್ತಿತ್ತು.

ದಾಳದಿಂದ ಆಡುತ್ತಿದ್ದ ಎರಡು ಬಗೆಯ ಆಟಗಳು ಆಗ ಜನಪ್ರಿಯವಾಗಿದ್ದವು. ಬೇರೆ ಬೇರೆ ಆಕಾರದ ಹಾಸಂಗಿಗಳ ಮೇಲೆ ಬಣ್ಣ ಬಣ್ಣದ ಕಾಯಿಗಳನ್ನು ಇಟ್ಟು ನಾಲ್ಕು ಮುಖದ ಎರಡು ದಾಳಗಳಿಂದ ಆಡುತ್ತಿದ್ದ ಪಗಡೆಯಾಟ ರಾಜಾಂತಃಪುರಗಳಂತೆ ಸಾಮಾನ್ಯ ಜನರಲ್ಲಿಯೂ ಪ್ರಚಾರದಲ್ಲಿತ್ತು. ಇದಕ್ಕೆ ಬೇಕಾದ ಆಟಗಾರರ ಸಂಖ್ಯೆ ಎರಡರಿಂದ ನಾಲ್ಕು.

ಹಾಸಂಗಿಯಿಲ್ಲದೆ ಘನಾಕೃತಿಯ ನಾಲ್ಕು ದಾಳ ಅಥವಾ ಲೆತ್ತದಿಂದ ಆಡುವ ಇನ್ನೊಂದು ಬಗೆಯ ಆಟ ದ್ಯೂತಾಗಾರಗಳಲ್ಲಿ, ಮುಖ್ಯವಾಗಿ ಜೂಜಾಟದ ಹುಚ್ಚಿದ್ದವರಲ್ಲಿ ಮಾತ್ರವೇ ಪ್ರಚಾರದಲ್ಲಿತ್ತು. ಇದಕ್ಕೆ ಉಪಯೋಗಿಸುತ್ತಿದ್ದ ಘನಾಕೃತಿಯ ಸಣ್ಣ ದಾಳಗಳ ಆರು ಮುಖಗಳ ಮೇಲೆ ೧ ರಿಂದ ೬ ರವರೆಗೆ ಗುರುತುಗಳಿರುತ್ತಿದ್ದವು. ನಾಲ್ಕು ಆರು ಅಥವಾ ಎಂಟು ದಾಳಗಳನ್ನು ಸೊಲಿಗೆಯಂತಹ ಮರದ ಬಟ್ಟಲಲ್ಲಿ ಹಾಕಿ ಆಡಿಸಿ ಚೆಲ್ಲಿ, ದಾಳದ ಮೇಲ್ಮೊಗದ ಸಂಖ್ಯೆಯನ್ನು ಕೂಡಿಸಿ ಬಂದ ಮೊತ್ತವನ್ನು ನಾಲ್ಕರಿಂದ ಭಾಗಿಸಿದಾಗ ಉಳಿಯುವ ಶೇಷದಿಂದ ಸೋಲು ಗೆಲುವುಗಳನ್ನು ಗೊತ್ತು ಮಾಡುತ್ತಿದ್ದರು. ಶೇಷ ೧ ಉಳಿದರೆ ಕಲಿ, ೨ ಕ್ಕೆ ದ್ವಾಪರ ಅಥವಾ ದುಗ್ಗ. ೩ ಕ್ಕೆ ತ್ರೇತಾ ಅಥವಾ ತಿಗ್ಗ, ನಿಶ್ಯೇಷವಾದರೆ ಕೃತ. ಕಲಿಯಿಂದ ಕೃತದವರೆಗೆ ಒಂದಕ್ಕಿಂತ ಒಂದು ಹೆಚ್ಚಿನದೆಂದು ಆಟದ ನಿಯಮ.

ಕ್ರಮಿತನು ಏರ್ಪಡಿಸಿದ್ದ ದ್ಯೂತ ಸಭೆಯಲ್ಲಿ ಮೇಲಿನ ಎರಡು ಬಗೆಯ ಆಟಗಳಿಗೂ ಅವಕಾಶವಿತ್ತು, ವಿನೋದಕ್ಕಾಗಿ ಆಡಲು ಬಂದಿದ್ದವರು ಕಡಿಮೆ ಹಣ ಕಳೆದುಕೊಂಡು ಹೆಚ್ಚುಕಾಲ ಆಡಲು ಅನುಕೂಲವಾದ ಪಗಡೆಯಾಟಕ್ಕೆ ಕುಳಿತರು. ಅತ್ಯಲ್ಪಕಾಲದಲ್ಲಿ ಹೆಚ್ಚು ಹಣ ಗಳಿಸುವ ಆಸೆಯಿದ್ದ ಅಲ್ಪಸಂಖ್ಯೆಯ ಹುಟ್ಟು ಜೂಜುಗಾರರು ಲೆತ್ತದಾಟಕ್ಕೆ ಕುಳಿತರು.

ಸಂಜೆ ದೀಪ ಹೊತ್ತಿಸುವ ಸಮಯಕ್ಕೆ ಬಿಜ್ಜಳನು ಅಲ್ಲಿಗೆ ಬಂದಾಗ ಆಟ ಕಳೆಯೇರಿತ್ತು. ಲೆತ್ತವಾಡುತ್ತಿದ್ದವರಲ್ಲಿ ಕೆಲವರು ಹೆಚ್ಚು ಹಣಗಳಿಸಿ ಶ್ರೀಮಂತರಾಗಿದ್ದರು. ಕೆಲವರು ತಂದದ್ದನ್ನೆಲ್ಲ ಕಳೆದುಕೊಂಡು ನಿರ್ಗತಿಕರಾಗಿ ಆಟದಿಂದ ಏಳುತ್ತಿದ್ದರು.

ಪಗಡೆಯಾಡುತ್ತಿದ್ದವರು ಈ ಏಳುಬೀಳುಗಳಿಗೆ ಸಿಕ್ಕದೆ ವಿನೋದವಾಗಿ ಮಾತಾಡುತ್ತಾ ಆಡುತ್ತಿದ್ದರು. ಪಾನಕ ಪಣ್ಯಾರಗಳ ಹಂಚಿಕೆ ಭರಾಟೆಯಿಂದ ನಡೆಯುತ್ತಿತ್ತು.

ಬಿಜ್ಜಳನನ್ನು ಕಂಡಕೂಡಲೆ ಕ್ರಮಿತನು ಸುಖಾಸನದಿಂದೆದ್ದು ಬಾಗಿಲಿಗೆ ಹೋಗಿ ಸ್ವಾಗತಿಸಿ ಒಳಗೆ ಕರೆತಂದನು. ಸಾಮಂತರು ಎದ್ದುನಿಂತು ಕೈಯೆತ್ತಿ ನಮಸ್ಕಾರಮಾಡಿದಾಗ ಬಿಜ್ಜಳನು,

"ನಾನೂ ನಿಮ್ಮಂತೆ ಆಟಗಾರನಾಗಿ ಇಲ್ಲಿಗೆ ಬಂದಿದ್ದೇನೆ. ಆಟ ಮುಂದುವರೆಯಲಿ," –ಎಂದು ಹೇಳಿ ಸಾವಿರ ವರಹಗಳ ಥೈಲಿಯೊಂದನ್ನು ಕರಣಿಕನ ಮುಂದಿಟ್ಟು, "ನಿಮ್ಮಲ್ಲಿರುವ ನಾಲ್ಕು ಪ್ರಮಾಣದ ಬಿಲ್ಲೆಗಳನ್ನು ಸಮಸಂಖ್ಯೆಯಲ್ಲಿ ಕೊಡಿ," ಎಂದನು.

ಕರಣಿಕನು ತಬ್ಬಿಬ್ಬಾದನು. ಅವನಲ್ಲಿದ್ದುದು ೫–೧೦–೫೦–೧೦೦ ಪ್ರಮಾಣದ ನಾಲ್ಕು ಬಣ್ಣದ ಗುರುತು ಬಿಲ್ಲೆಗಳು. ಅವುಗಳನ್ನು ಸಮಸಂಖ್ಯೆಯಲ್ಲಿ ಒಂದು ಸಾವಿರ ವರಹಕ್ಕೆ ಹಂಚುವುದು ಹೇಗೆ ? ಲೆಕ್ಕದಲ್ಲಿ ತನ್ನ ಚತುರತೆಯ ಪರೀಕ್ಷೆ ನಡೆಯುತ್ತಿರುವುದಾಗಿ ಕರಣಿಕನು ತಿಳಿದನು. ಒಂದೊಂದು ಕ್ಷಣವೂ ಪರೀಕ್ಷಕನ ರೂಪ ತಾಳಿ ಎದುರಿಗೆ ನಿಂತಂತಾಯಿತು ಅವನಿಗೆ. ಬಿಜ್ಜಳನ ದೃಷ್ಟಿ ಒಂದು ಎರಡು ಎಂದು, ಆ ಕ್ಷಣಗಳನ್ನು ಎಣಿಸುತ್ತಿರುವುದಾಗಿ ಭಾವಿಸಿದನು.

ಪರಿಗಣನೆ ಐದನ್ನು ಮುಟ್ಟಿದಾಗ ಕರಣಿಕನಿಗೆ ಉತ್ತರ ಹೊಳೆಯಿತು. ಎದುರಿಗಿದ್ದ ನಾಲ್ಕು ಗುಡ್ಡೆಗಳಿಂದ ಆರಾರು ಬಿಲ್ಲೆಗಳನ್ನು ತೆಗೆದಿಟ್ಟು, ಚೀಲದಿಂದ ಹತ್ತು ವರಹಗಳನ್ನು ತೆಗೆದು ಅದರೊಡನಿಟ್ಟನು. ಪ್ರಭುಮನ್ನೆಯರಿಗೆ ಕರಣಿಕನು ಹಣವನ್ನು ಕೈಯೆತ್ತಿಕೊಡುವುದು ಆಗ ಶಿಷ್ಟಾಚಾರವಾಗಿರಲಿಲ್ಲ.

ಬಿಜ್ಜಳನು ಗುರುತು ಬಿಲ್ಲೆಗಳನ್ನು ತೆಗೆದುಕೊಂಡು, "ನಿನ್ನ ಶೀಘ್ರ ಗಣಿತಕ್ಕೆ ಇದು ಬಹುಮಾನ," ಎಂದು ಹೇಳಿ ಹತ್ತು ವರಹಗಳನ್ನು ಅಲ್ಲಿಯೇ ಬಿಟ್ಟನು.

ಲಕ್ಷ್ಮೀಪ್ರತಿಮೆಯ ಅಡಿಯಲ್ಲಿ ಈ ಸರಳಗಣಿತದ ಪರೀಕ್ಷೆ ನಡೆಯುತ್ತಿದ್ದಂತೆ ಕುಮಾರ ಸೋಮೇಶ್ವರನು ಚಾಲುಕ್ಯ ರಾಣಿ ಕಾಮೇಶ್ವರಿಯನ್ನು ಕರೆದುಕೊಂಡು ಅಲ್ಲಿಗೆ ಬಂದನು. ಸಂಗಡ ಸುಂದರವಲ್ಲಿ ಮತ್ತು ಅಗ್ಗಳ.

ಬಿಜ್ಜಳನ ಮುಖ ಸ್ವಾಗತದ ಮಂದಹಾಸದಿಂದ ಅರಳಿತು. ತನ್ನ ಅನುಮತಿಯ ಫಲವಾಗಿ ಅಂತಃಪುರನಿವಾಸಿಯರಾದ ಕೆಲವು ಮಂದಿ ಸಭ್ಯ ಮಹಿಳೆಯರಾದರೂ ದ್ಯೂತಸಭೆಗೆ ಬರಬಹುದೆಂದು ಅವನು ನಿರೀಕ್ಷಿಸಿದ್ದನು. ಅವನ ರಾಣಿವಾಸದ ಒಬ್ಬಿಬ್ಬರು ಸಭಾಂಗಣದ ಉಪ್ಪರಿಗೆಯ ಮೊಗಶಾಲೆಗೆ ಬಂದು, ಕೆಳಗೆ ನಡೆಯುತ್ತಿದ್ದ ಜೂಜಾಟದ ಗೊಂದಲವನ್ನು ಕೊಂಚ ಹೊತ್ತು ನಿಂತು ನೋಡಿ ಆಗಲೆ ಹೊರಟು

ಹೋಗಿದ್ದರು. ಕ್ರಮಿತನ ಕಿಡಿಗಣ್ಣೆದುರಿಗೆ ನಿಲ್ಲುವ ಧೈರ್ಯ ಗಣಿಕಾವಾಸದ ಧೂರ್ತೆಯರಿಗೂ ಇರಲಿಲ್ಲ.

ಕ್ರಮಿತನು ಕಾಮೇಶ್ವರಿ ಸುಂದರವಲ್ಲಿಯರನ್ನು ಹತ್ತಿರ ಕರೆದುಕೊಂಡು ಬಂದಾಗ ಬಿಜ್ಜಳನು, "ರಾಣಿಯವರು ಪಗಡೆಯಾಟಕ್ಕೆ ಬಂದದ್ದು, ಸಂತೋಷ. ಪುರುಷರ ನಡುವೆ ಏಕಾಕಿನಿಯಾದೆನೆಂದು ಹಂಬಲಿಸುತ್ತಿದ್ದ ಸಿರಿದೇವಿ ಈಗ ಸಖಿಯರನ್ನು ಪಡೆದಳು," ಎಂದು ನಗೆಯಾಡಿದನು.

"ಪಗಡೆಯಾಡುವುದು ಸರ್ವಾಧಿಕಾರಿಗಳ ಇಚ್ಛೆಯಾದರೆ ನಾನು ಸಿದ್ಧ,"– ಎಂದು ಕಾಮೇಶ್ವರಿ ಅಗ್ಗಳನ ಮುಖ ನೋಡಿದಳು. ಸಾವಿರ ವರಹಗಳ ಥೈಲಿಯೊಂದನ್ನು ಕರಣಿಕನ ಮುಂದಿಟ್ಟು ಅಗ್ಗಳನು, ೧೦೦ ವರಹಗಳ ೧೦ ಗುರುತು ಬಿಲ್ಲೆಗಳನ್ನು ಕೊಂಡು ಕಾಮೇಶ್ವರಿಗೆ ಕೊಟ್ಟನು.

ಇಂತಹ ಸಂದರ್ಭಕ್ಕಾಗಿಯೇ ಕ್ರಮಿತನು ಜರಿಹೂವಿನ ಕುಸುರಿ ಕೆಲಸದ ದಿಂಬುಗಳು ಹಾಕಿದ ಹಾಸಂಗಿಯೊಂದನ್ನು ತೆರವಾಗಿಟ್ಟಿದ್ದನು. ಬಿಜ್ಜಳ ಕಾಮೇಶ್ವರಿ ಸುಂದರವಲ್ಲಿಯರು ಹಾಸಂಗಿಯ ಸುತ್ತ ದಿಂಬುಗಳಿಗೊರಗಿ ಪಗಡೆಯಾಟಕ್ಕೆ ಕುಳಿತರು. ಸುಂದರವಲ್ಲಿ ಅಪೇಕ್ಷಿಸಿದಂತೆ ೧೦೦ ವರಹಗಳ ಎರಡು ಗುರುತು ಬಿಲ್ಲೆಗಳನ್ನು ಸೋಮೇಶ್ವರನು ತಂದುಕೊಟ್ಟನು.

ಪಗಡೆಯಾಟದಲ್ಲಿ ಸುಂದರವಲ್ಲಿಯ ನೈಪುಣ್ಯ, ಅವಳು ಕಲಚೂರ್ಯ ಅರಮನೆಗೆ ಬಂದ ಎರಡೇ ದಿನಗಳಲ್ಲಿ ಅಂತಃಪುರವಾಸಿನಿಯರೆಲ್ಲರ ಮನೆಮಾತಾಗಿತ್ತು. ಅನುಕ್ರಮವಾಗಿ ಅವಳು ಬಿಜ್ಜಳನ ರಾಣಿಯರನ್ನು, ಸೊಸೆಯರನ್ನು ಆಟದಲ್ಲಿ ಸೋಲಿಸಿದ್ದಳು. "ಮಾವನವರೊಬ್ಬರು ಉಳಿದಿದ್ದಾರೆ. ಇಂದು ಅವರನ್ನೂ ಸೋಲಿಸುತ್ತೇನೆ," ಎಂಬ ನಿರ್ಧಾರದಿಂದ ಅವಳು ಆಟಕ್ಕೆ ಕುಳಿತಳು. ಮೊದಲ ಆಟ ಸೋತರೂ ಎರಡನೆಯ ಆಟ ಗೆಲ್ಲುತ್ತೇನೆ, ಎಂದು ಅವಳ ವಿಶ್ವಾಸ. ಅದರಿಂದಲೆ ಎರಡು ಬಿಲ್ಲೆಗಳನ್ನು ಮಾತ್ರ ತರಿಸಿಕೊಂಡಿದ್ದಳು.

ಆದರೆ ಮೊದಲ ಆಟದಲ್ಲಿಯೇ ಸುಂದರವಲ್ಲಿ ಗೆದ್ದು ಬಿಜ್ಜಳ ಕಾಮೇಶ್ವರಿಯ ರಿಂದ ೧೦೦ ವರಹಗಳ ಎರಡು ಬಿಲ್ಲೆಗಳನ್ನು ಪಡೆದಳು. ಎರಡನೆಯ ಆಟದಲ್ಲಿ ಕಾಮೇಶ್ವರಿ ಗೆದ್ದಳು.

"ಪಗಡೆ ಹೆಂಗಸರ ಆಟ. ಪುರುಷರು ಅದರಲ್ಲಿ ಗೆಲ್ಲುವುದಿಲ್ಲ,"–ಎನ್ನುತ್ತ ಬಿಜ್ಜಳನು ಮೂರನೆಯ ಆಟ ಪ್ರಾರಂಭಿಸಿದನು.

ಕಾಮೇಶ್ವರಿ ಬಿಜ್ಜಳರಾಯರ ಪಗಡೆಯಾಟದ ಸುದ್ದಿ ತಿಳಿದಾಗ ಸಭಾಂಗಣದಲ್ಲಿದ್ದವರು ಆಟ ಬಿಟ್ಟು ಬಂದು, ನೋಡುತ್ತ ನಿಂತರು. ಮೂರನೆಯ

ಆಟದ ಪ್ರಾರಂಭದಲ್ಲಿ ವೀಕ್ಷಕರ ಗುಂಪು ಆಟಗಾರರ ಸುತ್ತ ಗೋಡೆ ಕಟ್ಟಿದಂತಾಗಿತ್ತು.

ಗುಂಪಿನ ಅಂಚಿನಲ್ಲಿದ್ದ ಕರ್ಣದೇವನು ಅಗ್ಗಳನನ್ನು ಕರೆದು, "ಹೆಂಗಸರ ಆಟದಲ್ಲಿ ನಿಮಗೆ ಇಷ್ಟೇಕೆ ಆಸಕ್ತಿ ? ನಿಮ್ಮ ಸಂಗಡ ಮಾತಿದೆ, ಬನ್ನಿರಿ," ಎಂದು ಹೊರಗೆ ಕರೆದುಕೊಂಡು ಹೋದನು.

ರಾಣಿಯ ಸಾನ್ನಿಧ್ಯವನ್ನು ಬಿಟ್ಟು ಹೊರಗೆ ಹೋಗುವ ಇಚ್ಛೆ ಅಗ್ಗಳನಿಗಿರಲಿಲ್ಲ. ಆದರೂ ಕಲ್ಯಾಣದ ಸುದ್ದಿ ತಿಳಿಯಬಹುದೆಂಬ ನಿರೀಕ್ಷೆಯಿಂದ ಕರ್ಣದೇವನ ಹಿಂದೆ ನಡೆದನು.

ಸಾಮಂತ ಶ್ರೀಮಂತ ವೀಕ್ಷಕರೆದುರಿಗೆ ಮೂರನೆಯ ಆಟ ನಡೆಯಿತಾದರೂ ಕಾಮೇಶ್ವರಿಯಾಗಲಿ, ಸುಂದರವಲ್ಲಿಯಾಗಲಿ ಸ್ವಲ್ಪ ಮಾತ್ರವೂ ವಿಚಲಿತರಾಗಲಿಲ್ಲ. ಭಿನ್ನಪ್ರಕೃತಿಯ, ಭಿನ್ನ ಅಭಿರುಚಿಯ ಪ್ರೇಕ್ಷಕರೆದುರಿಗೆ ನಿರ್ಲಿಪ್ತಭಾವದಿಂದ ತನ್ಮಯರಾಗಿ ಅಭಿನಯಿಸುವ ವಿದಗ್ಧ ನಟಿಯರಂತೆ ಅವರು ತಮ್ಮ ಆಟದಲ್ಲಿ ಮಗ್ನರಾಗಿದ್ದರು. ಒಂದು ಸಾರಿ ಬಿಜ್ಜಳನಿಗೆ, ಇನ್ನೊಂದು ಸಾರಿ ಕಾಮೇಶ್ವರಿಗೆ ಜಯವಾಗುವಂತೆ ಕಂಡರೂ ಅವರ ಒಂದೊಂದು ಕಾಯಿ ಉಳಿದಿದ್ದಂತೆ ಸುಂದರವಾಗಿ ನಿಂತು ನೋಡುತ್ತಿದ್ದ ವೀಕ್ಷಕರು ಹರ್ಷಧ್ವನಿ ಮಾಡಿದರು.

ಅನೇಕರ ಕುತ್ಸಿತ ದೃಷ್ಟಿಯೆದುರಿಗೆ ತನ್ನ ಪಟ್ಟಮಹಿಷಿ ಪಗಡೆಯಾಡಿದುದು ಸೋಮೇಶ್ವರನಿಗೆ ಇಷ್ಟವಿರಲಿಲ್ಲ. ಅವನು ಅಸಹನೆಯಿಂದೆದ್ದು ಬಿಜ್ಜಳ ಕಾಮೇಶ್ವರಿಯರಿಗೆ ವಂದಿಸಿ ಹೊರಗೆ ಬಂದನು. ಸುಂದರವಲ್ಲಿ ಸಂಗಡ ಹೋದಳು.

ಕ್ರಮಿತನು ಅವರ ಹಿಂದೆ ಹೋಗಿ, "ಮಹಾಮಂಡಲೇಶ್ವರರಿಗೆ ಅಸಮಾಧಾನವಾಗಿದ್ದರೆ ಕ್ಷಮಿಸಬೇಕಾಗಿ ಬೇಡುತ್ತೇನೆ. ಪ್ರಭುಗಳ ಇಚ್ಛೆಗೆ ವಿರುದ್ಧವಾಗಿ ನಡೆಯುವುದು ನನ್ನಿಂದ ಸಾಧ್ಯವೇ?" ಎಂದನು. ದ್ಯೂತಸಭೆಯ ಯೋಜನೆಗೆ ತಾನು ಕಾರಣನಲ್ಲವೆಂದು ಸೂಚಿಸುವುದು ಕ್ರಮಿತನ ಉದ್ದೇಶವಾಗಿತ್ತು.

ಸೋಮೇಶ್ವರನು ಅದನ್ನು ಗಮನಿಸದೆ, "ತಂದೆಯವರ ಈ ಜೂಜಾಟದ ಹುಚ್ಚು ಅನರ್ಥಕ್ಕೆ ಎಡೆಕೊಡದಂತೆ ನೋಡಿಕೊಳ್ಳಿ," ಎಂದು ಹೇಳಿ ಸುಂದರವಲ್ಲಿಯನ್ನು ಕರೆದುಕೊಂಡು ಅಲ್ಲಿಂದ ಹೊರಟನು.

ನೂತನ ಮಹಾಮಂಡಲೇಶ್ವರನ ಹಠಾತ್ ನಿರ್ಗಮನದಿಂದ ಸಭಾಂಗಣದಲ್ಲಿದ್ದವರಿಗೆ ತಮ್ಮ ತಪ್ಪಿನ ಅರಿವಾಯಿತು. ಬಿಜ್ಜಳರಾಯನು ತನ್ನ ಸೊಸೆ ಮತ್ತು ಕಾಮೇಶ್ವರಿಯೊಡನೆ ಪಗಡೆಯಾಡುವುದನ್ನು ನಿಂತು ನೋಡಿ ಹರ್ಷಧ್ವನಿ ಮಾಡಿದುದು ಸಭ್ಯೋಚಿತವಲ್ಲವೆಂದು ತಿಳಿದರು. ಕ್ರಮಿತನು ಅಷ್ಟರಲ್ಲಿ ಅಲ್ಲಿಗೆ ಬಂದನು. ಅವನ ಕಿಡಿಗಣ್ಣ ಬಿರಿನೋಟದಿಂದ ಅಪಕರ್ಷಿತರಾಗಿ ಅವರು

ತಮ್ಮ ತಮ್ಮ ಹಾಸಂಗಿಗಳ ಸುತ್ತ ಹೋಗಿ ಕುಳಿತರು.

ಕಾಮೇಶ್ವರಿ ತಲೆಯೆತ್ತಿ ನೋಡಿ, ಕ್ರಮಿತನ ಕಡೆ ತಿರುಗಿ, "ನಮ್ಮ ಪ್ರೇಕ್ಷಕವರ್ಗ ರಾಜಪುರೋಹಿತರ ಕಿಡಿಗಣ್ಣ ಕಾಂತಿಯೆದುರಿಗೆ ಸೂರ್ಯನೆದುರಿನ ಮಂಜಿನಂತೆ ಕರಗಿಹೋಯಿತು !" ಎಂದಳು.

"ಇಲ್ಲಿ ರಹಸ್ಯವೇನೂ ನಡೆಯುತ್ತಿಲ್ಲ. ಆಟ ಮುಗಿದವರು ಬಂದು ನೋಡಬಹುದು. ಇದನ್ನು ಅವರಿಗೆ ತಿಳಿಸಿ, ಸಭಿಕರೆ," ಎಂದು ಬಿಜ್ಜಳನು ಹೇಳಿದನು.

ಸಲಹೆಯಂತೆ ಕ್ರಮಿತನು ಸಭಾಂಗಣದ ಸುತ್ತ ತಿರುಗಾಡಿ ಬಂದನು. ಆದರೆ ಅವನ ಆಹ್ವಾನವನ್ನು ಮನ್ನಿಸಿ ಎರಡನೆಯ ಸಾರಿ ನೋಡಲು ಬಂದವರು ನಾಲ್ಕು ಮಂದಿ ವೃದ್ಧ ಸಾಮಂತರು ಮಾತ್ರ.

ಎಲ್ಲರೂ ಕುಳಿತುಕೊಂಡ ಮೇಲೆ ಬಿಜ್ಜಳನು, "ಈಗ ರಾಣಿಯವರ ಇಚ್ಛೆಯೇನು ? ಆಟ ಮುಗಿಸುವುದೇ ? ಅಥವಾ ನಾವಿಬ್ಬರೇ ಆಡುವುದೇ?" ಎಂದನು. ಕಾಮೇಶ್ವರಿ ತೊಡಕಿನಲ್ಲಿ ಬಿದ್ದಳು. ಬಾಗಿಲ ಕಡೆ ನೋಡಿದಳು. ಅಗ್ಗಳನ ಸುಳಿವಿಲ್ಲ. ಅವನು ಬರುವವರೆಗೆ ಕಾಯುವುದು ಅಗತ್ಯ.

"ಪಗಡೆ ಹೆಂಗಸರ ಆಟವೆಂದು ಅಲ್ಲಗಳೆದಿರಲ್ಲವೆ ? ದಾಳ ಸೋಲಿಗೆಗಳನ್ನು ತರಿಸಿರಿ. ನಾನು ಲೆತ್ತವಾಡಲೂ ಸಿದ್ಧ," ಎಂದಳು ಅವಳು.

ಮಂದಾಸನದಲ್ಲಿ ಪೂಜೆಗಾಗಿ ಇಟ್ಟಿದ್ದ ಚಿನ್ನದ ಸಂಪುಟವೊಂದನ್ನು ಕ್ರಮಿತನು ತಂದುಕೊಟ್ಟು, "ರಾಜಮಹಾರಾಜರ ಆಟಕ್ಕೆ ಯೋಗ್ಯವಾದ ದಾಳಗಳಿವು. ದೇವತೆಗಳ ದ್ಯೂತಸಭೆಯಲ್ಲಿಯೂ ಇಂತಹ ದಾಳ ಸೋಲಿಗೆಗಳಿರುವುದಿಲ್ಲ," ಎಂದನು.

ಚತುರ ಅಕ್ಕಸಾಲೆಯ ಕಲಾತ್ಮಕ ಕೃತಿಗಳಾಗಿದ್ದವು ಆ ಸಂಪುಟ ಮತ್ತು ದಾಳಗಳು. ದಾಳದ ಆರು ಮುಖಗಳಲ್ಲಿ ಸಂಖ್ಯೆ ಗುರುತಿಗಾಗಿ ಕೆಂಪು ಹರಳುಗಳನ್ನು ಜೋಡಿಸಲಾಗಿತ್ತು. ಸಂಪುಟದ ಸುತ್ತ ಸಮುದ್ರ ಮಥನದ ರೇಖಾಚಿತ್ರ. ಮುಚ್ಚಳ ತೆಗೆದು ಸಂಪುಟವನ್ನು ದಾಳದ ಬಟ್ಟಲಾಗಿ ಉಪಯೋಗಿಸಬಹುದಾಗಿತ್ತು.

ದಾಳ ಸಂಪುಟಗಳನ್ನು ತೆಗೆದುಕೊಂಡು ನೋಡುತ್ತ ಕಾಮೇಶ್ವರಿ, "ಇದು ವಿಕ್ರಮಾಂಕ ಮಹಾರಾಜರ ಕಾಲದ ಕಲಾಕೃತಿ. ನಿಮಗೆ ದೊರಕಿದ್ದು ಹೇಗೆ ?" ಎಂದಳು.

ಕ್ರಮಿತನು ಉತ್ತರ ಕೊಡದಿದ್ದುದನ್ನು ಕಂಡು ಬಿಜ್ಜಳನು, "ರಾಣಿಯವರ ಪ್ರಶ್ನೆಗೆ ನಾನು ಉತ್ತರ ಹೇಳುತ್ತೇನೆ. ವಿಕ್ರಮಾಂಕ ಮಹಾರಾಜರ ನಿಧಿಗಾಗಿ ನಾವು ಸಂಶೋಧನೆ ನಡೆಸಿದಾಗ ಮಾನವಾಕಾರದ ಒಂದು ಲಕ್ಷ್ಮೀಪ್ರತಿಮೆಯೂ, ಈ

ಸಂಪುಟವೂ ಸಿಕ್ಕಿದವು. ಪ್ರತಿಮೆ ಚಾಲುಕ್ಯ ಭಂಡಾರದಲ್ಲಿ ಸುರಕ್ಷಿತವಾಗಿದೆ. ದಾಳ ಸಂಪುಟಗಳನ್ನು ಸಂಶೋಧಕನ ಭಾಗವಾಗಿ ನಾನು ತೆಗೆದುಕೊಂಡೆ," ಎಂದನು.

"ಇದು ನಿಜವಾಗಿ ದೇವತೆಗಳಿಗೆ ತಕ್ಕ ದಾಳ. ದ್ರೌಪದಿ ಕೌರವರ ದ್ಯೂತಸಭೆಗೆ ಬಂದಾಗ, ಇಂತಹ ದಾಳಗಳನ್ನು ಕೊಟ್ಟು ಆಟಕ್ಕೆ ಕರೆದಿದ್ದರೆ ಮಹಾಭಾರತದ ಕಥೆಯೇ ಬೇರೆಯಾಗುತ್ತಿತ್ತು." –ಕಾಮೇಶ್ವರಿ ನಸುನಕ್ಕು ಹೇಳಿದಳು.

"ಏನಾಗುತ್ತಿತ್ತು ?" –ಬಿಜ್ಜಳನೆಂದನು, ಕುಹಕದ ನಗೆ ಬೀರಿ.

"ದ್ಯೂತದಲ್ಲಿ ಯುಧಿಷ್ಠಿರನು ಸೋತ ರಾಜ್ಯಕೋಶಗಳನ್ನು ದ್ರೌಪದಿ ಗೆಲ್ಲುತ್ತಿದ್ದಳು. ಪಾಂಡವರ ವನವಾಸ ತಪ್ಪುತ್ತಿತ್ತು. ಕುರುಕ್ಷೇತ್ರದ ಮಹಾಯುದ್ಧ ನಡೆಯುತ್ತಿರಲಿಲ್ಲ."

"ಆದರೆ ದ್ರೌಪದಿ ಕುರುಸಭೆಗೆ ಬರುವ ಮೊದಲೆ ಯುಧಿಷ್ಠಿರನು ಅವಳನ್ನು ಪಣವಾಗಿಟ್ಟು ಸೋತಿದ್ದನು. ದಾಸಿಯರಿಗೆ ದ್ಯೂತವಾಡುವ ಸ್ವಾತಂತ್ರ್ಯವಿಲ್ಲ."

"ದ್ರೌಪದಿಯು ಪಾಂಡವರ ಮಟ್ಟಮಹಿಷಿ, ಮಕುಟಾಭಿಷಿಕ್ತೆ. ಅವಳನ್ನು ಪಣವಾಗಿಡುವ ಅಧಿಕಾರ ಯುಧಿಷ್ಠಿರನಿಗಿರಲಿಲ್ಲ. ಸಭೆಯಲ್ಲಿದ್ದ ಕುರುವೃದ್ಧರ ತೀರ್ಪಿನಂತೆ ದ್ರೌಪದಿ ಆಗಲೂ ಸ್ವತಂತ್ರಳಾಗಿದ್ದಳು. ಅವಳು ಅಪೇಕ್ಷಿಸಿದ್ದರೆ ದ್ಯೂತವಾಡಬಹುದಾಗಿತ್ತು."

"ವಾದದ ಮಟ್ಟಿಗೆ ನೀವು ಹೇಳುವುದನ್ನು ಒಪ್ಪಿಕೊಂಡರೂ ಪಣವಿಡಲು ಹಣವಿದ್ದರಲ್ಲವೆ ದ್ರೌಪದಿ ದ್ಯೂತವಾಡುವುದು. ಪಾಂಡವರ ರಾಜ್ಯಕೋಶಗಳೆಲ್ಲ ಅಷ್ಟು ಹೊತ್ತಿಗೆ ಕೌರವರಿಗೆ ಸೇರಿದ್ದವು" –ಎಂದು ಸಭಿಕನ ಅಧಿಕಾರಬಲದಿಂದ ಕ್ರಮಿತನು ನಡವೆ ಬಂದು ಹೇಳಿದನು.

"ಹೆಣ್ಣಿನ ಲಾವಣ್ಯ ವಿಭ್ರಮಗಳು ಎಚ್ಚೆತ್ತಿರುವವರೆಗೆ ಮತ್ತಾವ ಸಿರಿ ಸಂಪತ್ತುಗಳೂ ಅವಳಿಗೆ ಅಗತ್ಯವಿರುವುದಿಲ್ಲ ರಾಜಪುರೋಹಿತರೆ. ದ್ರೌಪದಿ ತನ್ನನ್ನು ತಾನೇ ಪಣವಾಗಿಟ್ಟು ಲೆತ್ತವಾಡಿ ಕೌರವರನ್ನು ಸೋಲಿಸಬಹುದಾಗಿತ್ತು."

ಕಾಮೇಶ್ವರಿಯ ಕೆಚ್ಚಿನ ನುಡಿ ಅಲ್ಲಿದ್ದವರನ್ನು ಅಚ್ಚರಿಗೊಳಿಸಿತು. ವೃದ್ಧ ಸಾಮಂತರು ಬೆಬ್ಬೆರಗಾಗಿ ನೋಡುತ್ತಿದ್ದರು. ಕ್ರಮಿತನು ತನ್ನಲ್ಲಿ ತಾನು, "ಎಂತಹ ದಿಟ್ಟ ಹೆಂಗಸು ಇವಳು. ಪ್ರಭುಗಳ ಮೇಲೆ ತನ್ನ ಲಾವಣ್ಯ ವಿಭ್ರಮಗಳ ಬಲೆ ಬೀಸಲು ಹವಣಿಸುತ್ತಿದ್ದಾಳೆ," ಎಂದು ಭಾವಿಸಿದನು.

ಪುಂಗಿಯ ಸ್ವರದಿಂದ ಮೈಮರೆತ ಕಾಳಿಂಗದಂತೆ ಕಾಮೇಶ್ವರಿಯ ರೂಪ ವಿಭ್ರಮ ಪ್ರತಿಭೆಗಳಿಂದ ಆಕರ್ಷಿತನಾದ ಬಿಜ್ಜಳನ ಅಂತರಂಗ ಚಲವಿಚಲವಾಗಿ ವಿವೇಕ ಮಸಗಿತ್ತು.

"ಬೇಕಾದರೆ ನಿಮಗಿದನ್ನು ನಿದರ್ಶನ ಮಾಡಿಕೊಡುತ್ತೇನೆ,"–ಕಾಮೇಶ್ವರಿ ಪುನಃ ಹೇಳಿದಳು, ಬಿಜ್ಜಳನ ಕಡೆಗೆ ಕಡೆನೋಟ ಹಾಯಿಸಿ.

"ನೀವು ಹೇಳುವುದು ನಂಬಲಾಗದ ಅದ್ಭುತ. ಅದನ್ನು ನಿದರ್ಶನ ಮಾಡಿ ಕೊಡುವುದು ಯಾರಿಗೂ ಸಾಧ್ಯವಲ್ಲ," – ಮೋಹದ ನಿದ್ರೆಯಿಂದ ಎಚ್ಚೆತ್ತವನಂತೆ ಕಣ್ಣರಳಿಸಿ ಕಾಮೇಶ್ವರಿಯನ್ನು ನೋಡುತ್ತ ಬಿಜ್ಜಳನೆಂದನು.

"ಎಲ್ಲರೂ ನಂಬುವ, ಎಲ್ಲರೂ ಮಾಡಬಹುದಾದ ಕಾರ್ಯವನ್ನು ಮಾಡುವುದರಲ್ಲಿ ಅದ್ಭುತವೇನಿದೆ ? ಈಗ ನೋಡಿರಿ, ನಾನೂ ದ್ರೌಪದಿಯಂತೆ ಹೆಣ್ಣು. ಪತಿಯ ಅವಿವೇಕದಿಂದ ರಾಜ್ಯಕೋಶಗಳನ್ನು ಕಳೆದುಕೊಂಡ ಹೆಣ್ಣು. ನೀವು ಈ ರಾಜ್ಯದ ನಿರಂಕುಶ ಸರ್ವಾಧಿಕಾರಿ, ಭುಜಬಲ ಚಕ್ರವರ್ತಿ, ಮಹಾ ಸೇನಾನಿ. ನಿಮ್ಮೊಡನೆ ನಾನು ನನ್ನನ್ನೇ ಪಣವಾಗಿಟ್ಟು ಲೆತ್ತವಾಡಿ, ಕಳೆದು ಹೋದ ರಾಜ್ಯಕೋಶಗಳನ್ನು ಪುನಃ ಗೆಲ್ಲುತ್ತೇನೆ. ಇದು ನಿಮಗೊಪ್ಪಿಗೆಯೆ ?" ಕಾಮೇಶ್ವರಿಯ ಇನಿದಾದ ಕಂಠ ಮಧುರ ಗಾನದಂತೆ ಬಿಜ್ಜಳನನ್ನು ಮತ್ತೆ ಮರುಳುಗೊಳಿಸಿತು.

ಅವಳ ಮಾತುಗಳ ಹಿಂದಿದ್ದ ರಾಜಿಕ ಕೌಶಲ ಆಕಾಂಕ್ಷೆಗಳನ್ನು ಉಪೇಕ್ಷಿಸಿ ಅವನು ಅನಾಸಕ್ತನಂತೆ, "ಸ್ಪರ್ಧೆಯಲ್ಲಿ ನೀವು ಸೋತರೆ?" ಎಂದನು.

"ಸೋತರೆ?.......ಕುರುಸಭೆಯಲ್ಲಿ ದ್ರೌಪದಿಗಾದ ಭಂಗವನ್ನು ನಾನು, ಲೆತ್ತ ಹಿಡಿದ ಈ ಎರಡು ಕೈಗಳಿಂದ ಎದುರಿಸಬೇಕಾಗುತ್ತದೆ. ಎಷ್ಟೇ ಮೊರೆಯಿಡಲಿ ಅಕ್ಷಯಾಂಬರವನ್ನು ಕೊಟ್ಟು ನನ್ನನ್ನು ರಕ್ಷಿಸಲು ಈ ಕಾಲದಲ್ಲಿ ಯಾವ ದೇವರೂ ಪ್ರತ್ಯಕ್ಷವಾಗುವುದಿಲ್ಲ" – ದರ್ಪದಿಂದ ನುಡಿದಳು ಕಾಮೇಶ್ವರಿ.

ಬಿಜ್ಜಳನು ಕ್ಷಣಕಾಲ ಕಣ್ಣುಗಳನ್ನು ಮುಚ್ಚಿದನು. ನಾಲ್ಕು ಸಾವಿರ ವರ್ಷಗಳನ್ನು ಕ್ಷಣಾರ್ಧದಲ್ಲಿ ಅತಿಕ್ರಮಿಸಿ ಅಂದಿನ ವೈಭವಶಾಲಿ ಕುರುಸಭೆಯ, ನೀತಿ ಭ್ರಷ್ಟ ಲಜ್ಜೆಗೇಡಿ ದೃಶ್ಯವನ್ನು ಸೃಷ್ಟಿಸಿ ಎದುರಿಗೆ ನಿಲ್ಲಿಸಿತು ಅವನ ಕಲ್ಪನಾ ದೃಷ್ಟಿ.

ಉತ್ತೇಜಿತನಾಗಿ ಅವನು, "ನಾನು ಪಣಕ್ಕೆ ಒಪ್ಪಿದ್ದೇನೆ ರಾಣಿಯವರೆ, ಆಟ ಪ್ರಾರಂಭವಾಗಲಿ," ಎಂದನು.

ದಾಳಗಳನ್ನು ಕೈಯಲ್ಲಿ ಹಿಡಿದು ಕಾಮೇಶ್ವರಿ ಕೆಲವು ಕ್ಷಣಗಳ ನೆಟ್ಟ ದೃಷ್ಟಿಯಿಂದ ಅವುಗಳನ್ನೇ ನೊಡುತ್ತಿದ್ದಳು. ತಾವರೆಯ ಸಂಪುಟದಲ್ಲಿ ಚಿನ್ನದ ತುಂಬಿಗಳನ್ನು ಸೆರೆಹಿಡಿದಂತಿತ್ತು ಆಗ, ಆ ದಾಳಗಳು.

ಸಂಪುಟದಲ್ಲಿ ದಾಳಗಳನ್ನು ಹಾಕಿ ಸ್ಪರ್ಧೆಯನ್ನು ಪ್ರಾರಂಭಿಸುವುದು ಆಟದ ನಿಯಮ. ಆಟಗಾರರಲೊಬ್ಬರು ಆ ಕಾರ್ಯ ಮಾಡಬೇಕಾಗಿತ್ತು. ಈಗ ಅದು ಕಾಮೇಶ್ವರಿಯ ಪಾಲಿಗೆ ಬಂದಿತ್ತು. ಆಮೇಲೆ ಆಟಗಾರರು ದಾಳಗಳನ್ನು ಕೈಯಿಂದ

ನೇರವಾಗಿ ಮುಟ್ಟಕೂಡದೆಂಬುದು ಆಟದ ಇನ್ನೊಂದು ನಿಯಮ. ಆಟ ಮೊದಲಾದ ಮೇಲೆ ದಾಳದಲ್ಲಿ ಬಿದ್ದ ಸಂಖ್ಯೆಗಳ ಗಣನೆ, ಫಲಶೃತಿ, ದಾಳಗಳನ್ನೆತ್ತಿ ಸಂಪುಟಕ್ಕೆ ಹಾಕುವುದು, ಈ ಕಾರ್ಯಗಳನ್ನು ಸಭಿಕನೋ ಅವನ ಸಹಾಯಕನೋ ಮಾಡುತ್ತಿದ್ದರು.

ಕಾಮೇಶ್ವರಿ ದಾಳಗಳನ್ನು ಸಂಪುಟದಲ್ಲಿ ಹಾಕಿ, ನಾಲ್ಕರಿಂದ ಶೇಷವಿಲ್ಲದೆ ಭಾಗಿಸಬಹುದಾದ ಮೊದಲ ಆರು ಅಂಕಿಗಳನ್ನು ಏಕಾಗ್ರತೆಯಿಂದ ಮನದಲ್ಲಿ ಚಿಂತಿಸಿ ದಾಳಗಳನ್ನೆಸೆದಳು.

ನಾಲ್ಕು ದಾಳಗಳೂ ಒಂದೇ ಸಂಖ್ಯೆಯನ್ನು ತೋರಿಸಿದವು.

"ನಾಲ್ಕು ಸಾರಿ ಎರಡು, ಎಂಟರ ಕೃತ," –ಎಂದು ಸಭಿಕ ಸ್ಥಾನದಲ್ಲಿದ್ದ ಕ್ರಮಿತನು ಸ್ವರವೆತ್ತಿ ಎಸೆತದ ಫಲವನ್ನು ಹೇಳಿ, ದಾಳಗಳನ್ನು ಸಂಪುಟಕ್ಕೆ ಹಾಕಿ ಬಿಜ್ಜಳನ ಕೈಗೆ ಕೊಟ್ಟನು.

ಬಿಜ್ಜಳನು ಯಾಂತ್ರಿಕವಾಗಿ ಸಂಪುಟವನ್ನು ತೆಗೆದುಕೊಂಡನು. ಅವನ ಮನಸ್ಸು ಆಟದ ಮೇಲಿರಲಿಲ್ಲ. ಕಾಂಮೇಶ್ವರಿಯ ರೂಪ ಯೌವನ ವಿಭ್ರಮ ವಿಲಾಸಗಳ ಪರಿಗಣನೆಯಲ್ಲಿ ಮಗ್ನವಾಗಿತ್ತು ಅದು. "ಯೌವನ ಕಳೆಯುತ್ತ ಬಂದಿದ್ದರೂ ಎಂತಹ ವಿಲಾಸವತಿ ಈ ರಾಣಿ. ಚೆಲ್ಲು ಹೊನಲಾಗಿ ಹರಿಯುತ್ತಿದೆ ಕಣ್ಣುಗಳಲ್ಲಿ. ದೇಹದ ಏರು ತಗ್ಗುಗಳ ಸೌಷ್ಟವ ಈಗ ಮತ್ತಷ್ಟು ಹೆಚ್ಚಿದೆ. ಇಂತಹ ಅಸಾಧಾರಣ ರೂಪವತಿಯನ್ನು ಇಷ್ಟು ದಿನಗಳು ನಾನು ಉಪೇಕ್ಷಿಸಿದ್ದು ಹೇಗೆ?" ಎಂದು ಅವನು ತನ್ನನ್ನು ತಾನೆ ಪ್ರಶ್ನಿಸಿಕೊಂಡನು.

ಕೈಗಳು ಯಾಂತ್ರಿಕವಾಗಿ ಸಂಪುಟಗಳನ್ನಾಡಿಸಿ ದಾಳಗಳನ್ನೆರಚಿದವು.

"೨–೧–೬–೪. ೧೩ರ ಕಲಿ."

ನೋಡುತ್ತ ಕುಳಿತಿದ್ದ ವೃದ್ಧ ಸಾಮಂತರು ಸಭಿಕನಿಂದ ಫಲಶೃತಿ ಕೇಳಿ ಸ್ತಬ್ಧರಾದರು. ಚಾಲುಕ್ಯ ರಾಜ್ಯ ಕೋಶಾಗಾರಗಳು ಪಗಡೆಯಾಟದ ಒಂದೇ ಒಂದು ಎಸೆತದಿಂದ ಹೋರಾಟ ರಕ್ತಪಾತಗಳಿಲ್ಲದೆ ಕಾಮೇಶ್ವರಿಯ ವಶವಾಗುವುದೆಂದು ಕ್ರಮಿತನಾಗಲಿ, ಸಾಮಂತರಾಗಲಿ, ಕನಸಿನಲ್ಲಿಯೂ ನೆನೆಸಿರಲಿಲ್ಲ.

ಬಿಜ್ಜಳನು ನಸುನಕ್ಕು, "ನಿಮ್ಮನ್ನು ರಾಜಪ್ರತಿನಿಧಿಯಾಗಿ ಮಾಡಿ ರಾಜ್ಯ ಕೋಶಾಗಾರಗಳನ್ನು ನಿಮಗೊಪ್ಪಿಸುವುದು ಮೊದಲಿಂದ ನನ್ನ ಉದ್ದೇಶವಾಗಿತ್ತು. ಲೆತ್ತ ಆ ಕಾರ್ಯ ಮಾಡಿತು. ಮುಂದಿನ ಆಟಕ್ಕೆ ಮಹಾರಾಣಿಯವರು ನನ್ನಿಂದ ಅಪೇಕ್ಷಿಸುವ ಪಣವೇನು ?" ಎಂದು ಕೇಳಿದನು.

"ನಿಮ್ಮ ಸರ್ವಾಧಿಕಾರ ಪದವಿ ಮತ್ತು ಅದಕ್ಕೆ ನೆರವಾದ ನಿಮ್ಮ ಸೇನಾಬಲ."

–ಕಾಮೇಶ್ವರಿ ಕೂಡಲೆ ಉತ್ತರ ಕೊಟ್ಟಳು.

"ಒಪ್ಪಿಗೆ !" –ಎಂದು ಹೇಳಿ ಬಿಜ್ಜಳನು ಕ್ರಮಿತನಿಂದ ಸಂಪುಟವನ್ನು ತೆಗೆದುಕೊಂಡನು. ಆ ಆಟದಲ್ಲಿ ಮೊದಲ ಸರದಿ ಅವನದಾಗಿತ್ತು.

"೬, ೬, ೬, ೫, ೨೩ರ ತಿಗ್ಗ (ತ್ರೇತಾ)."

ಫಲಶೃತಿ ಕೇಳಿ ಸಾಮಂತರು ಚಪ್ಪಾಳೆ ತಟ್ಟಿದರು. ಅವರ ಆನಂದಕ್ಕೆ ಒಂದು ಮುಖ್ಯ ಕಾರಣವಿದ್ದಿತು. ಆಗಿನ ಆಟದ ನಿಯಮದಂತೆ ೨೩ರ ತಿಗ್ಗವನ್ನು ೨೪ರ ಸರ್ವೋಚ್ಚ ಕೃತದಿಂದ ಮಾತ್ರ ಗೆಲ್ಲಬಹುದಾಗಿತ್ತು. ಎಲ್ಲ ಕೃತಸಂಖ್ಯೆಯ ಎಸೆತಗಳು ತಿಗ್ಗಕ್ಕಿಂತ ಹೆಚ್ಚೆಂಬ ಸಾಮಾನ್ಯ ನಿಯಮ ಇಲ್ಲಿ ಅನ್ವಯಿಸುತ್ತಿರಲಿಲ್ಲ.

ಸಾವಿರ ಎಸೆತಕ್ಕೊಂದು ಸರ್ವೋಚ್ಚ ಕೃತ ಬೀಳಬಹುದು, ಅಥವಾ ಬೀಳದಿರಬಹುದು !–ಎಂದು ಗಣಿತಶಾಸ್ತ್ರ ನಿಷ್ಣಾತರು ಹೇಳುತ್ತಿದ್ದರು. ಈ ಅರ್ಥದ ಶ್ಲೋಕಾರ್ಥವೂ ಆಗಿನ ದ್ಯೂತಾಸಕ್ತರಲ್ಲಿ ಪ್ರಚಾರದಲ್ಲಿತ್ತು. ಪರಿಣಾಮದಲ್ಲಿ ೨೩ರ ತಿಗ್ಗ ಸರ್ವೋಚ್ಚ ಕೃತದಷ್ಟೇ ಪ್ರಭಾವಶಾಲಿಯಾದ ಎಸೆತವಾಗಿತ್ತು.

೨೩ರ ತಿಗ್ಗದ ನಿಶ್ಚಿತ ಪರಾಭವದಿಂದ ತಪ್ಪಿಸಿಕೊಳ್ಳಲು ಪ್ರತಿಸ್ಪರ್ಧಿಗೆ ಒಂದು ಉಪಾಯವಿತ್ತು. ಅದೆಂದರೆ ಎಸೆತದ ತನ್ನ ಸರದಿಯನ್ನು ಸ್ಪರ್ಧಿಗೇ ಬಿಟ್ಟುಕೊಡುವುದು. ಆಗ ಸ್ಪರ್ಧಿ ಇನ್ನೊಂದು ಸಾರಿ ದಾಳವೆಸೆದು ಯಾವುದಾದರೊಂದು ಕೃತ ಸಂಖ್ಯೆಯನ್ನು ಪಡೆದು ೨೩ರ ತಿಗ್ಗವನ್ನು ಊರ್ಜಿತಪಡಿಸಿಕೊಳ್ಳಬೇಕಾಗುತ್ತಿತ್ತು.

ಕ್ರಮಿತನು ದಾಳಗಳನ್ನು ಸಂಪುಟಕ್ಕೆ ಹಾಕಿ ಕಾಮೇಶ್ವರಿಗೆ ಕೊಡುತ್ತಿದ್ದಂತೆ ವೃದ್ಧ ಸಾಮಂತರಲ್ಲೊಬ್ಬನು ಅಡ್ಡ ಬಂದು, "ಆಟದ ಎಲ್ಲ ನಿಬಂಧನೆಗಳು ಸ್ಪರ್ಧಿಗಳಿಗೆ ತಿಳಿದಿದೆಯೆ? ತಿಳಿಯದಿದ್ದರೆ ಸಭಿಕರಾದ ನೀವು ಅವರಿಗೆ ವಿವರಿಸಬೇಕಾಗುವುದು," ಎಂದನು.

ಕ್ರಮಿತನ ಹುಬ್ಬುಗಳು ಗಂಟಿಕ್ಕಿದವು. ಅಸಹನೆಯಿಂದ ಅವನು, "ಸ್ಪರ್ಧಿಗಳು ನಿಬಂಧನೆಗಳನ್ನು ತಿಳಿದು ಆಟಕ್ಕೆ ಕುಳಿತುಕೊಳ್ಳಬೇಕು. ವಿವರಣೆ ಸಭಿಕನ ಕರ್ತವ್ಯವಲ್ಲ." ಎಂದನು.

"ಹಾಗಾದರೆ ನಾನು ಆ ಕಾರ್ಯ ಮಾಡುತ್ತೇನೆ." ಎಂದು ಸಾಮಂತನು ಕಾಮೇಶ್ವರಿಯ ಕಡೆ ತಿರುಗಿ,

"ಈಗ ಮಹಾರಾಣಿಯವರು ಎಸೆತದ ಸರದಿಯನ್ನು ನಿಮ್ಮ ಸ್ಪರ್ಧಿಗೆ ಬಿಟ್ಟು ಕೊಟ್ಟರೆ ಅವರು ಕೃತಸಂಖ್ಯೆಯ ಇನ್ನೊಂದು ಎಸೆತದಿಂದ ೨೩ರ ತಿಗ್ಗವನ್ನು ಊರ್ಜಿತಪಡಿಸಿಕೊಳ್ಳಬೇಕಾಗುವುದು. ನೀವೇ ದಾಳ ಹಾಕಿದರೆ ೨೪ರ ಸರ್ವೋಚ್ಚ ಕೃತಸಂಖ್ಯೆಯಿಂದ ಮಾತ್ರ ಗೆಲ್ಲುವುದು ಸಾಧ್ಯ. ಆ ಸಂಖ್ಯೆಯ ದಾಳ ಬೀಳುವುದು

ಆಟದಲ್ಲಿ ಬಹಳ ಅಪರೂಪ. ಸಾವಿರ ಎಸೆತಕ್ಕೊಂದು ಸಾರಿ ಎಂದು ಗಣಿತಶಾಸ್ತ್ರ ತಜ್ಞರು ಹೇಳುತ್ತಾರೆ. ಈ ಎರಡು ಮಾರ್ಗಗಳಲ್ಲಿ ಯಾವುದು ಸೂಕ್ತವೋ ಯೋಚಿಸಿ ಅದನ್ನು ಮಾಡಬೇಕಾಗಿ ನನ್ನ ಸೂಚನೆ," ಎಂದನು.

ಕಾಮೇಶ್ವರಿ ಕಣ್ಣುಗಳನ್ನು ಮುಚ್ಚಿ ಯೋಚಿಸುತ್ತಿದ್ದಂತೆ ಬಿಜ್ಜಳನು ವೃದ್ಧ ಸಾಮಂತನ ಕಡೆಗೆ ತಿರುಗಿ, "ಸ್ಪರ್ಧಿಯಾಗಿ ನಾನು ಮಾಡಲಾಗದಿದ್ದ ಕಾರ್ಯವನ್ನು ನೀವು ಮಾಡಿದಿರಿ. ಅದಕ್ಕಾಗಿ ವಂದನೆಗಳು," ಎಂದನು.

ಕಾಮೇಶ್ವರಿ ಕಣ್ತೆರೆದು, "ನಾನು ಸರದಿಯಂತೆ ದಾಳವೆಸೆಯುತ್ತೇನೆ. ಸಾವಿರಕ್ಕೊಂದು ಸಾರಿ ಬರುವ ಆ ಸುಯೋಗ ನನ್ನ ಪಾಲಿಗೆ ಈ ಎಸೆತವೇ ಏಕಾಗಬಾರದು ?" – ಎಂದು ಹೇಳಿ, ಕ್ರಮಿತನಿಂದ ಸಂಪುಟವನ್ನು ತೆಗೆದುಕೊಂಡು ಚೆನ್ನಾಗಿ ಆಡಿಸಿ ದಾಳಗಳನ್ನೆಸೆದಳು.

ಹಾಸಂಗಿಯ ಸುತ್ತ ಕುಳಿತಿದ್ದವರೆಲ್ಲ ಬೆಬ್ಬೆರಗಾಗಿ ದಾಳಗಳನ್ನು ನೋಡಿದರು. ಕಾಮೇಶ್ವರಿಯ ಮೊಟ್ಟ ಮೊದಲ ಎಸೆತದಂತೆ ಈ ಸಾರಿಯೂ ನಾಲ್ಕು ಸಮಸಂಖ್ಯೆಗಳು?

"ನಾಲ್ಕು ಸಾರಿ ಅದು! ಸರ್ವೋಚ್ಚ ಕೃತ! ಮಹಾರಾಣಿ ಕಾಮೇಶ್ವರೀದೇವಿಯವರು ಗೆದ್ದರು." –ಫಲಶೃತಿ ನುಡಿಯುತ್ತಿದ್ದಂತೆ ಕ್ರಮಿತನ ಕಂಠ ಕಂಪಿಸಿತು.

ಚಾಲುಕ್ಯರಾಜ್ಯಕೋಶಗಳು, ಸರ್ವಾಧಿಕಾರ ಪದವಿ, ಇವೆಲ್ಲಕ್ಕೆ ಈಗ ಮಹಾರಾಣಿ ಕಾಮೇಶ್ವರಿಯೇ ಒಡತಿ. ಅರ್ಧಗಳಿಗೆಯಲ್ಲಿ ಎಂತಹ ಅದ್ಭುತ ಪರಿವರ್ತನೆ !

ಭುಜಬಲಚಕ್ರವರ್ತಿ ಬಿಜ್ಜಳರಾಯನು ಈ ಅನಿರೀಕ್ಷಿತ, ಅನಿಶ್ಚಿತ, ಪರಾಭವಕ್ಕೆ ತಲೆಬಾಗಿ ರಾಜ್ಯಕೋಶ ಅಧಿಕಾರಗಳನ್ನು ಹೋರಾಟವಿಲ್ಲದೆ ಬಿಟ್ಟುಕೊಡುವನೆ?

ಈ ಆಶ್ಚರ್ಯಕರ ಜೂಜಾಟದ ಕಥೆ ಕೇಳಿದಾಗ ಜನರೇನನ್ನುವರು? ಅಟ್ಟಹಾಸದಿಂದ ಚಪ್ಪಾಳೆ ತಟ್ಟಿ ಬಿಜ್ಜಳನನ್ನು ಅಪಹಾಸ್ಯ ಮಾಡುವ ಸಂಭವವೇ ಹೆಚ್ಚು.

ಅಭಿಮಾನಧನನಾದ ಬಿಜ್ಜಳನು ಅದನ್ನು ಕೇಳಿ ಸುಮ್ಮನಿರುವುದು ಸಾಧ್ಯವೆ? ಸಭೆ ನೀರವ ! ನಿಸ್ತಬ್ಧ !

ಸಭಾಂಗಣದ ಬೇರೆ ಕಡೆಗಳಲ್ಲಿದ್ದವರು ! ನುಡಿಗೆ ಬಾರದ ಯಾವುದೋ ಮಹಾವಿಪತ್ತು ಮೇಲೆರಗಿದಂತೆ, ಸ್ತಬ್ಧರಾಗಿ ಆಟನಿಲ್ಲಿಸಿ ಭಯ ಕುತೂಹಲಗಳಿಂದ ವಿಭ್ರಾಂತರಂತೆ ಬಿಜ್ಜಳ ಕಾಮೇಶ್ವರಿಯರು ಕುಳಿತಿದ್ದ ಹಾಸಂಗಿಯ ಕಡೆ ನೋಡುತ್ತಿದ್ದರು.

ಕಾಮೇಶ್ವರಿಯ ಕಮಲನಯನಗಳ ಸರಳದೃಷ್ಟಿ ವಿಲಾಸ ವಿಭ್ರಮಗಳಿಂದ ವಿಚಲಿತವಾದಂತೆ ಬಿಜ್ಜಳನ ಮೇಲೆ ಬಿದ್ದಿತು.

"ಪಂಥದಂತೆ ರಾಜ್ಯಕೋಶ ಸರ್ವಾಧಿಕಾರಗಳನ್ನು ಮಹಾರಾಣಿಯವರಿಗೊಪ್ಪಿಸಿದ್ದೇನೆ," –ಎಂದು ನುಡಿದು ಬಿಜ್ಜಳನು ರಾಜಮುಕುಟ ಮುದ್ರೆಯುಂಗುರಗಳನ್ನು ತೆಗೆದು ಕಾಮೇಶ್ವರಿಯ ಮುಂದಿಟ್ಟನು.

ಕಾಮೇಶ್ವರಿ ಅಪೇಕ್ಷಿಸಿದ್ದರೆ ಅಷ್ಟಕ್ಕೆ ಆಟ ಮುಗಿಸಬಹುದಾಗಿತ್ತು. ಆಟ ಮುಂದುವರಿಯಲು ಒತ್ತಾಯ ಪಡಿಸುವ ಅಧಿಕಾರ ಸಭಿಕನಿಗಾಗಲಿ, ಪ್ರತಿಸ್ಪರ್ಧಿಗಾಗಲಿ ಇರಲಿಲ್ಲ. ಆಟ ಮುಗಿದಿದ್ದರೆ ಬಿಜ್ಜಳನ ಪರಾಭವ ಪೂರ್ಣವಾಗುತ್ತಿತ್ತು.

ಆದರೆ ಕಾಮೇಶ್ವರಿ ಹೆಣ್ಣಿಗೆ ಸಹಜವಾದ ದುಡುಕುತನದ ಕ್ಷಣಿಕಾವೇಶದಿಂದ,

"ಇನ್ನೊಂದು ಸಾರಿ ಆಡಿ ನಾವು ಆಟ ಮುಗಿಸಬಹುದು. ಈ ಆಟದಲ್ಲಿ ನಾನು ನಿಮ್ಮಿಂದ ಗೆದ್ದ ರಾಜ್ಯಕೋಶ ಅಧಿಕಾರಗಳನ್ನು ಪಣವಾಗಿಡುತ್ತೇನೆ. ಪ್ರತಿಯಾಗಿ ನಿಮ್ಮ ಪಣವೇನು ? –ಎಂದು ಬಿಜ್ಜಳನನ್ನು ಪ್ರಶ್ನಿಸಿದಳು. ನುಡಿಯುತ್ತಿದ್ದಂತೆ ಅವಳು ಹಾರಿಸಿದ ಕಡೆ ನೋಟದ ಚೆಲ್ಲು, ಮಾತಿನ ಕರ್ಕಶತೆಯನ್ನು ಮುಚ್ಚಿತ್ತು.

"ಸರ್ವಸ್ವವನ್ನು ನಿಮಗೆ ಸೋತ ನಿರ್ಗತಿಕನು ನಾನು. ನನ್ನನ್ನು ನಾನೇ ಪಣವಾಗಿಡುತ್ತೇನೆ. ಮಹಾರಾಣಿಯವರು ಆಟ ಆರಂಭಿಸಬಹುದು,"

–ಎಂದು ಬಿಜ್ಜಳನು ಗಂಭೀರವಾಗಿ ನುಡಿದನು.

"ಈ ಆಟದಲ್ಲಿ ನೀವು ಸೋತರೆ ನನ್ನ ಗರುಡನಾಗಬೇಕಾಗುವುದು, ನೆನಪಿರಲಿ."–ಕಾಮೇಶ್ವರಿ ನಗೆದನಿಯಿಂದ ನುಡಿದಳು.

"ಸಿದ್ಧ. ನೀವೇ ಸೋತರೆ ?"

–ಬಿಜ್ಜಳನು ನಗುತ್ತಲೆ ಉತ್ತರಕೊಟ್ಟನು.

ಕ್ಷಣಕಾಲ ಕಾಮೇಶ್ವರಿ ನಿರುತ್ತರೆಯಾದಳು. ಆಮೇಲೆ ಅವಳು ಕಿಲ ಕಿಲ ನಕ್ಕು,

"ಬಿಜ್ಜಳರಾಯರಂತಹ ಭುಜಬಲ ಚಕ್ರವರ್ತಿಯನ್ನು ಗರುಡನಾಗಿ ಬಯುಸುವ ಹೆಣ್ಣು ಅದೃಷ್ಟದ ಪರಿವರ್ತನೆಯಾದಾಗ ಅವನ ದಾಸಿಯಾಗಲೂ ಒಪ್ಪಬೇಕಾಗುವುದಲ್ಲವೆ ?" ಎಂದು ಹೇಳಿದಳು.

ಮೂರನೆಯ ಆಟ ಮೊದಲಾಯಿತು. ಕಾಮೇಶ್ವರಿ ಅನಾಸಕ್ತಳಂತೆ ಸಂಪುಟವನ್ನು ಕ್ರಮಿತನ ಕೈಯಿಂದ ತೆಗೆದುಕೊಂಡು, ಎರಡುಸಾರಿ ಮೆಲ್ಲನೆ ಆಡಿಸಿ ದಾಳಗಳನ್ನು ಚೆಲ್ಲಿದಳು.

"ಮೂರುಸಾರಿ ೧, ೪, ಏಳರ ತಿಗ್ಗ," ಎಂದು ಕ್ರಮಿತನು ಫಲಶೃತಿ ನುಡಿದನು.

"ರಾಣಿಗೆ ಅದೃಷ್ಟದ ಸರದಿ ಮುಗಿಯಿತು. ಈ ಆಟ ಪ್ರಭುಗಳಿಗೇ !" ಎಂದು ನುಡಿಯುತ್ತಿತ್ತು ಅವನ ನಿಶಿತಮತಿ.

ರಾಜಪುರೋಹಿತನ ರಹಸ್ಯೋತ್ಸಾಹ, ಅಲೆ ಅಲೆಯಾಗಿ ಹರಿದು ಬಿಜ್ಜಳನ ಚೇತನವನ್ನು ಎಚ್ಚರಿಸಿದಂತಾಯಿತು. "ಏಳರ ತಿಗ್ಗವನ್ನು ಗೆಲ್ಲಲು, ನಾಲ್ಕು ತ್ರೇತಾ ಮತ್ತು ಆರು ಕೃತಸಂಖ್ಯೆಗಳಿವೆ. ಅವುಗಳಲ್ಲೊಂದನ್ನು ಹಾಕಲಾರೆನೆ ನಾನು ?" ಎಂದು ಭಾವಿಸಿ ಅವನು ಸಂಪುಟವನ್ನು ಸರಿಯಾಗಿ ಆಡಿಸದೆ ದಾಳಗಳನ್ನು ಚೆಲ್ಲಿದನು.

"೧, ೧, ೨, ೩" ಪುನಃ ದಾಳ ಹಾಕಬೇಕು. ಇದು ನಿಮ್ಮ ಸರದಿ,"

ಎಂದು ಕ್ರಮಿತನು ದಾಳಗಳನ್ನೆತ್ತಿ ಸಂಪುಟಕ್ಕೆ ಹಾಕಿ, ಪುನಃ ಬಿಜ್ಜಳನಿಗೆ ಕೊಟ್ಟನು. ಅಷ್ಟು ಹೊತ್ತಿಗೆ ಬಿಜ್ಜಳನ ಮೋಹನಿದ್ರೆ ಹರಿದು ಪ್ರಜ್ಞೆಯ ಉದಯವಾಗಿತ್ತು. "ಪ್ರರೀಕ್ಷ್ಯ ತಾರ್ಯಾ ವಿಪತ್ತಿಃ !" ವಿಪತ್ತನ್ನು ಪರೀಕ್ಷಿಸಿ ಎಚ್ಚರಿಕೆಯಿಂದ ದಾಟಬೇಕು ಎಂಬ ಚಾಣಕ್ಯ ಸೂತ್ರ ತಟ್ಟನೆ ಅವನ ಕಿವಿಗಳಲ್ಲಿ ಮಿಡಿಯಿತು. ಈಗಲಾದರೂ ಎಚ್ಚರಿಕೆಯಿಂದ ದಾಳಹಾಕಿದರೆ ವಿಪತ್ತಿನಿಂದ ಪಾರಾಗಬಹುದೆಂದು ಭಾವಿಸಿ, ಸಂಪುಟವನ್ನು ನಾಲ್ಕಾರು ಸಾರಿ ಚೆನ್ನಾಗಿ ಆಡಿಸಿ ದಾಳಗಳನ್ನೆಸೆದನು.

೫, ೪, ೫, ೨೦ ರ ಉಚ್ಚಕೃತ."

ಸಂತೃಪ್ತಿಯ ತುಂಬುಕಂಠದಿಂದ ಕ್ರಮಿತನು ಘೋಷಿಸಿದನು.

೨೦ರ ಉಚ್ಚ ಕೃತಸಂಖ್ಯೆಯನ್ನು ಸೋಲಿಸುವುದೆಂದರೆ ೨೪ರ ಸರ್ವೋಚ್ಚಕೃತವೊಂದೇ. ಕೆಲವೇ ನಿಮಿಷಗಳ ಅಂತರದಲ್ಲಿ ಒಬ್ಬಳೇ ಸ್ಪರ್ಧಿ, ಅವಳು ಚಾಲುಕ್ಯ ರಾಣಿಯೇ ಆಗಿರಲಿ, ಎರಡುಸಾರಿ ಸರ್ವೋಚ್ಚಕೃತ ಸಂಖ್ಯೆಯನ್ನು ಹಾಕುವುದು ದ್ಯೂತದ ಇತಿಹಾಸದಲ್ಲಿ ಎಲ್ಲಿಯೂ ಯಾವಾಗಲೂ ನಡೆಯದಿದ್ದ ಘಟನೆ. ಈ ಸಾರಿ ಪ್ರಭುಗಳಿಗೆ ವಿಜಯವು ನಿಶ್ಚಿತ....

ಎಂದು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತ ಕ್ರಮಿತನು ಒಂದೊಂದಾಗಿ ದಾಳಗಳನ್ನು ಆರಿಸಿ ಸಂಪುಟಕ್ಕೆ ಹಾಕಿ ಕಾಮೇಶ್ವರಿಗೆ ಕೊಟ್ಟನು.

ಕೈಗಳ ಚಲನೆಯಿಂದ ಅವನ ಮನೋಗತವನ್ನು ಕಾಮೇಶ್ವರಿ ಅರಿತಳು. ತಿರಸ್ಕಾರದ ಸೆಳೆಮಿಂಚು ಕ್ಷಣಕಾಲ ಅವಳ ಮುಖವನ್ನು ಬೆಳಗಿತು. "ನನ್ನ ಸಲುವಾಗಿ ಶೂಲಕ್ಕೇರಿಸಲ್ಪಟ್ಟ ಆ ಅಜ್ಞಾತ ಗ್ರಾಮ್ಯ ಕವಿ ಹಾಡಿದಂತೆ ನಾನು ನಿಜವಾಗಿ ಚಾಲುಕ್ಯ 'ಲಕ್ಕಿ' ಆಗಿದ್ದರೆ, ಗಣಿತಶಾಸ್ತ್ರ ತಜ್ಞರ ನಿರ್ಣಯವನ್ನು ವಿಫಲಗೊಳಿಸಿ, ಕೆಲವೇ ನಿಮಿಷಗಳ ಅಂತರದಲ್ಲಿ, ಎರಡನೆಯ ಸಾರಿ ನಾನು ಸರ್ವೋಚ್ಚ ಕೃತ ಸಂಖ್ಯೆ ಹಾಕುತ್ತೇನೆ," ಎಂಬ ದೃಢ ನಿಶ್ಚಯದಿಂದ ಕಾಮೇಶ್ವರಿ ಸಂಪುಟವನ್ನು ಆಡಿಸಿ ದಾಳಗಳನ್ನೆಸೆದಳು.

ಆ ಚರಿತ್ರಾರ್ಥ ಮಾಘ ಶುದ್ಧ ನವಮಿಯ ರಾತ್ರಿ ಮೊದಲ ಯಾಮದಲ್ಲಿ, ಮಂಗಳವೇಡೆಯ ಕಲಚೂರ್ಯ ಅರಮನೆಯ ದ್ಯೂತಶಾಲೆಯಲ್ಲಿ ಅದ್ಭುತವೊಂದು ನಡೆಯಿತು. ಕಾಮೇಶ್ವರಿ ಎಸೆದ ದಾಳಗಳು ಅಂದು ಎರಡನೆಯ ಸಾರಿ ಸಮಾನ ಸಂಖ್ಯೆಯ ಸರ್ವೋಚ್ಚ ಕೃತವನ್ನು ಮೆರೆದವು.

ಕ್ರಮಿತನು ಸ್ಥಂಭಿತನಾದನು. ಕೆಲವು ಕ್ಷಣಗಳು ಅವನ ವಾಕ್ಶಕ್ತಿ ಉಡುಗಿತು.

ವೃದ್ಧ ಸಾಮಂತರು ಎವೆಯಿಕ್ಕದೆ ದಾಳಗಳನ್ನು ನೋಡುತ್ತ ಬರೆದ ಬೊಂಬೆಗಳಂತೆ ಕುಳಿತಿದ್ದರು.

"ಏಕೆ ! ಸಭಿಕ ಮಹಾಶಯರು ಫಲಶೃತಿ ಘೋಷಿಸುವುದಿಲ್ಲವೆ ?"

–ಮೃದುವಾಗಿ ನಕ್ಕು ಬಿಜ್ಜಳನು ನುಡಿದನು.

ಕ್ರಮಿತನು ಚೇತರಿಸಿಕೊಂಡು ಕಂಪಿಸುವ ದನಿಯಿಂದ, "ನಾಲ್ಕುಸಾರಿ ಆರರ ಸರ್ವೋಚ್ಚಕೃತ. ಮಹಾರಾಣಿ ಕಾಮೇಶ್ವರೀ ದೇವಿಯವರು ಗೆದ್ದರು," ಎಂದು ಮುಗಿಸಿದನು.

"ಪಣದ ವಿವರಗಳನ್ನು ಹೇಳದೇ ಫಲಶೃತಿ ಮುಗಿಯುವುದಿಲ್ಲ."

–ಪುನಃ ಬಿಜ್ಜಳನು ಎಚ್ಚರಿಸಿದನು.

ಈ ಆಟದ ಪಣದಂತೆ ಕಲಚೂರ್ಯ ಭುಜಬಲಚಕ್ರವರ್ತಿ ಬಿಜ್ಜಳರಾಯರು ಚಾಲುಕ್ಯ ಮಹಾರಾಣಿ ಕಾಮೇಶ್ವರೀದೇವಿಯವರ...."

–ಮುಂದೆ ಹೇಳಲು ಕ್ರಮಿತನು ಶಕ್ತನಾಗಲಿಲ್ಲ. ಬಿಜ್ಜಳನು ತಾನೇ ಪೂರೈಸಿದನು: "ಚಾಲುಕ್ಯರಾಣಿ ಕಾಮೇಶ್ವರೀದೇವಿಯವರ ಗರುಡನಾಗುವರು," ಎಂದು.

ಕಾಮೇಶ್ವರಿಯ ಮುಖ ಸಂತುಷ್ಟಿಯ ಮಂದಹಾಸದಿಂದ ಅರಳಿತು.

"ಹಿಂದಿನಂತೆ ಮುಂದೆಯೂ ನೀವು ಚಾಲುಕ್ಯರಾಜ್ಯದ ಮೆಚ್ಚಿನ ಸರ್ವಾಧಿಕಾರಿಯಾಗಿರಬೇಕೆಂದು ನನ್ನ ಇಚ್ಛೆ. ನನ್ನ ನೆಚ್ಚಿನ ಗರುಡರಾಗಿ ನನ್ನ ಕೈಯಿಂದ ನೀವು ಈ ಲಾಂಛನಗಳನ್ನು ಸ್ವೀಕರಿಸಬೇಕು." –ಎಂದು ಹೇಳಿ ಕಾಮೇಶ್ವರಿ ಎದುರಿಗಿದ್ದ ರಾಜಮಕುಟ ಮುದ್ರೆಯುಂಗುರಗಳನ್ನು ತೆಗೆದು ಬಿಜ್ಜಳನಿಗೆ ಕೊಟ್ಟಳು.

ವೃದ್ಧ ಸಾಮಂತರು ಆಗ ಕೈತಟ್ಟಿ ಜಯಘೋಷಮಾಡಿದರು.

ಕಲಚೂರ್ಯ ಮಂಡಲೇಶ್ವರ ಕುಮಾರ ಸೋಮೇಶ್ವರನ ಪಟ್ಟಾಭಿಷೇಕ ಸಂದರ್ಭದಲ್ಲಿ, ಬಿಜ್ಜಳನ ರಾಜ್ಯಭಾರ ನಿರೂಪಣಾನಂತರ ನಡೆದ ದ್ಯೂತಸಭೆ ಮುಗಿದದ್ದು ಹೀಗೆ.

ಪರಿವಾರದೊಡನೆ ಸಭಾಂಗಣದಿಂದ ಹೊರಗೆ ಹೋಗುತ್ತಿದ್ದಂತೆ ಕಾಮೇಶ್ವರಿಗೆ ಅಗ್ಗಳನ ನೆನಪಾಯಿತು. ಬೀಳ್ಕೊಡಲು ಬಾಗಿಲವರೆಗೆ ಬಂದಿದ್ದ ಕ್ರಮಿತನ ಕಡೆ

ತಿರುಗಿ, ಅವಳು, "ನಮ್ಮ ಮನೆಹೆಗ್ಗಡೆ ಅಗ್ಗಳದೇವರನ್ನು ಕಂಡಿರಾ?" ಎಂದು ಕೇಳಿದಳು.

"ನೀವು ಪಗಡೆಯಾಡುತ್ತಿದ್ದಾಗ ಕರ್ಣದೇವರಸರೊಡನೆ ಹೊರಗೆ ಹೋದವರು ಹಿಂದಿರುಗಿದಂತಿಲ್ಲ. –ಎಂದು ಕ್ರಮಿತನು ಉತ್ತರಿಸಿದನು.

"ಅಗ್ಗಳ–ಕರ್ಣದೇವ, –ಇಬ್ಬರೂ ಎಲ್ಲಿಗೆ ಹೋದರು ?"

ಅಡಿಗಡಿಗೆ ತನ್ನನ್ನು ತಾನೇ ಕೇಳಿಕೊಂಡಳು ಕಾಮೇಶ್ವರಿ.

ಸಭಾಂಗಣದ ಹಿಂದೆ ಅರಮನೆಯ ಇನ್ನೊಂದು ಭಾಗದಲ್ಲಿ, ಅತಿಥಿ ಅಭ್ಯಾಗತರಿಗಾಗಿ ಕಳಶ ಕನ್ನಡಿ ಸುಖಾಸನಗಳಿಂದ ಅಲಂಕೃತವಾದ ಪಾನಶಾಲೆಯಿತ್ತು.

"ಒಳ್ಳೆಯ ಮಧುವಿಲ್ಲದೆ ನಾನು ಅರ್ಧ ಗಳಿಗೆ ಕೂಡ ಬದುಕಿರಲಾರೆ, ಅಗ್ಗಳ. ಅದಕ್ಕಾಗಿಯೇ ನಿಮ್ಮನ್ನಿಲ್ಲಿಗೆ ಕರೆತಂದೆ," –ಎಂದು ಕರ್ಣದೇವನು ಅಗ್ಗಳನನ್ನು ಪಾನಶಾಲೆಯ ಸುಖಾಸನದಲ್ಲಿ ಕುಳ್ಳಿರಿಸಿ ತಾನೂ ಕುಳಿತುಕೊಂಡನು.

ಕೂಡಲೆ ಅಲ್ಲಿಯ ಪ್ರಮುಖ ದಾಸಿ ಮಧುಪಾತ್ರೆ ಬಟ್ಟಲುಗಳಿದ್ದ ತಟ್ಟೆಯನ್ನು ತಂದು ಎದುರಿಗಿದ್ದ ಪೀಠದ ಮೇಲಿಟ್ಟಳು. ಕರ್ಣದೇವ ಬಟ್ಟಲುಗಳನ್ನು ತುಂಬಿ,

"ಕುಡಿಯಿರಿ, ಅಗ್ಗಳ. ನಾಳಿನ ವಿಜಯೋತ್ಸವದ ಆನಂದಕ್ಕೆ ಇದು ನಮ್ಮ ಮೊದಲ ಸ್ವಸ್ತಿಪಾನ," ಎಂದನು.

ಸ್ವಸ್ತಿಪಾನವನ್ನು ನಿರಾಕರಿಸುವುದು ಸಭ್ಯತೆಯ ಅಪವಾದವೆಂದು ತಿಳಿದಿದ್ದ ಅಗ್ಗಳನು ಬಟ್ಟಲನ್ನು ತೆಗೆದುಕೊಂಡು ಮೆಲ್ಲನೆ ಕುಡಿಯುತ್ತ,

"ನಾನು ಸಭಾಂಗಣಕ್ಕೆ ಬೇಗನೆ ಹಿಂದಿರುಗಬೇಕಾಗಿದೆ, ಕರ್ಣದೇವರಸರೆ, ಅಲ್ಲಿ ನಾನಿಲ್ಲದಿರುವುದು ತಿಳಿದರೆ ಮಹಾರಾಣಿಯವರು ಕೋಪಮಾಡುವರು," ಎಂದನು.

"ನೀವು ಈ ಬಂಡರಾಣಿಯ ಮನೆಹೆಗ್ಗಡೆಯಾಗುವುದಕ್ಕಿಂತ ಜಗದೇಕಮಲ್ಲರಸನ ಕಾವ್ಯೋಪದೇಶಿಯಾಗಿ ಕಲ್ಯಾಣದಲ್ಲಿಯೇ ಉಳಿದಿದ್ದರೆ ಚೆನ್ನಾಗಿತ್ತು, ಅಗ್ಗಳ." ಅಪಹಾಸ್ಯದ ನಗೆ ಹಾರಿಸಿ ಕರ್ಣದೇವನೆಂದನು.

"ಆ ವಿಚಾರದಲ್ಲಿ ನಮ್ಮ ಅಭಿಪ್ರಾಯಗಳೂ ಬೇರೆಯಾಗಬಹುದು, ಕರ್ಣದೇವರಸರೆ. ನಾನು ಮಂಗಳವೇಡೆಗೆ ಬಂದದ್ದು ಮಹಾರಾಣಿ ಕಾಮೇಶ್ವರಿದೇವಿಯವರ ಮನೆಹೆಗ್ಗಡೆಯಾಗಿ. ಹೊಸ ಪದವಿಯ ಮೋಹದಿಂದ ಹಳೆಯದನ್ನು ಮರೆಯುವುದು ಸಲ್ಲ. ಜಗದೇಕಮಲ್ಲರಸರು ಹೇಗಿದ್ದಾರೆ? ರಾಜಗೃಹದ ಸುದ್ದಿಯೇನು?" –ಅವಕಾಶ ದೊರೆತು ಅಗ್ಗಳನು ಪ್ರಶ್ನಿಸಿದನು.

"ಆ ಧರ್ಮೋಪದೇಶಿ ಜಂಗಮನಾಯಿತು, ಅವರಾಯಿತು. ಹೆಗ್ಗಡೆ ಕಳುಹಿಸಿದ

ವರದಿ ಇಂದು ನನ್ನ ಕೈಸೇರಿದೆ. ರಾಜಗೃಹದಲ್ಲಿ ಈಗೊಂದು ವಾರದಿಂದ ಪ್ರತಿದಿನ ಒಂದು ಸಾವಿರ ಮಂದಿ ಜಂಗಮರಿಗೆ ದಾಸೋಹ ನಡೆಯುತ್ತಿದೆಯಂತೆ. ದಿನ ದಿನಕ್ಕೆ ಶರಣರ ಪ್ರಭಾವ ಬೆಳೆಯುತ್ತಿರುವುದು ರಾಜ್ಯಕ್ಕೆ ವಿಪತ್ಕಾರಕ !"

–ಎಂದು ಉತ್ತರಿಸಿದನು ಕರ್ಣದೇವ.

ಬರಿದಾಗಿದ್ದ ಕರ್ಣದೇವನ ಪಾನಪಾತ್ರೆಯನ್ನು ದಾಸಿ ತುಂಬಿದಳು. ಒಂದೇ ಗುಟುಕಿಗೆ ಮುಗಿಸಿದನು. ದಾಸಿ ಪುನಃ ತುಂಬಿದಳು. ಕರ್ಣದೇವ ಮುಗಿಸಿದನು. ದಾಸಿಯ ಕೈಯಲ್ಲಿದ್ದ ಪಾತ್ರೆಯೂ ಬರಿದಾಯಿತು.

ಆಗ ಕರ್ಣದೇವ ದಾಸಿಯ ಕೈಹಿಡಿದೆಳೆದು ತೊಡೆಯ ಮೇಲೆ ಕುಳ್ಳಿರಿಸಿ ಕೊಂಡು ಚುಂಬಿಸುತ್ತ –

"ಈಗ ನಾನು ಈ ತುಟಿಗಳ ತನಿರಸವನ್ನು ಕುಡಿಯುತ್ತೇನೆ" ಎಂದನು.

ಈ ಬೆದೆಯಾಟ ನಡೆಯುತ್ತಿದ್ದಂತೆ ಅಗ್ಗಳನು ಪಾನಶಾಲೆಯ ಸುತ್ತ ನೋಡಿದನು. ದ್ಯೂತಕ್ಕೆ ಗೊತ್ತಾಗಿದ್ದ ಸಭಾಂಗಣ ಅರಮನೆಯ ಉಪ್ಪರಿಗೆಯಲ್ಲಿತ್ತು. ಅದರ ಇನ್ನೊಂದು ಕೊನೆಯಲ್ಲಿ ಪಾನಶಾಲೆ. ಅದರ ಪಾರ್ಶ್ವದ ಮೊಗಶಾಲೆಯಿಂದ ರಾಜೋದ್ಯಾನದ ಮರಗಿಡಗಳು ಕಾಣುತ್ತಿದ್ದವು. ಪಾರಿಜಾತದ ಕೊಂಬೆಗಳು ಮೊಗಶಾಲೆಯವರೆಗೆ ಹರಡಿ, ಅಲ್ಲಲ್ಲಿ ಹೂವು ಎಲೆಗಳು ಉದುರಿದ್ದವು.

ಕೊಂಚ ಹೊತ್ತಿನ ಮೊದಲು ಅವರು ಬಂದಾಗ ನಿರ್ಜನವಾಗಿದ್ದ ಪಾನಶಾಲೆಯ ಬಾಗಿಲು ವಾತಾಯನಗಳಲ್ಲಿ ಈಗ ಕರ್ಣದೇವನ ಭಟರು ಕಾವಲು ನಿಂತಿದ್ದರು. ಅಗ್ಗಳನ ಮನಸ್ಸು ಅಳುಕಿತು. ನನ್ನನ್ನು ಬಂಧಿಸುವುದಕ್ಕಾಗಿಯೇ ಕರ್ಣದೇವ ಇಲ್ಲಿಗೆ ಕರೆತಂದನೇ ? ಎಂದು ಅವನು ಶಂಕಿಸಿದನು.

"ನಿಮ್ಮ ಬೆಡಗಿನ ಮಧುಪಾನ ನಿರಾತಂಕವಾಗಿ ನಡೆಯಲಿ, ಕರ್ಣದೇವರಸರೆ. ನಾನು ಹೋಗುತ್ತೇನೆ," –ಎಂದು ಅಗ್ಗಳನು ಸುಖಾಸನದಿಂದೆದ್ದನು.

ಆಗ ಕರ್ಣದೇವ ದಾಸಿಯನ್ನು ಕೆಳಗೆ ತಳ್ಳಿ, "ಕುಳಿತುಕೊಳ್ಳಿರಿ, ಅಗ್ಗಳದೇವ. ನಿಮ್ಮ ಸಂಗಡ ಮಾತಿದೆ. ನಮ್ಮ ಮಂತ್ರಾಲೋಚನೆ ಮೊದಲಾಗುವುದರಲ್ಲಿ ನೀವು ಹೊರಟುಬಿಟ್ಟರೆ ಹೇಗೆ?"

ದಾಸಿ ಎದ್ದು ಸೆರಗು ಮುಂಗುರುಳುಗಳನ್ನು ಸರಿಪಡಿಸಿಕೊಂಡು ಮಧುಪಾತ್ರೆಯನ್ನು ತುಂಬಿ ತರಲು ಒಳಗೆ ಹೋದಳು.

"ನೋಡು ಅಗ್ಗಳ, ನಿಮ್ಮ ಮಹಾರಾಣಿ ಮಂಗಳವೇಡೆಗೆ ಬಂದು ಕಲಚೂರ್ಯ ರಾಜಿಕಕ್ಕೆ ಕೈಹಾಕುತ್ತಿದ್ದಾಳೆ. ಅದರಿಂದ ನಮ್ಮ ರಾಜವಾಡೆಯಲ್ಲಿ, ಸಾಮಂತ ಮನ್ನೆಯರಲ್ಲಿ ಒಡಕು ತಲೆದೋರಿದೆ. ಆಗಲೆ ಕೆಲವರು ರಾಣಿಯ ವಿರುದ್ಧ ಕತ್ತಿ

ಮಸೆಯುತ್ತಿದ್ದಾರೆ. ಈ ವಿರೋಧ ಉಗ್ರರೂಪ ತಾಳುವ ಮೊದಲೇ ರಾಣಿಯವರು ಇಲ್ಲಿಂದ ಹೊರಟುಹೋದರೆ ಒಳ್ಳೆಯದು. ಇದನ್ನು ತಿಳಿಸುವುದಕ್ಕಾಗಿಯೇ ನಾನು ನಿಮ್ಮನ್ನಿಲ್ಲಿಗೆ ಕರೆತಂದದ್ದು."

ಒಂದೇ ಸಾರಿಗೆ ನಾಲ್ಕು ಬಟ್ಟಲು ಮಧುವನ್ನು ಕುಡಿದ ಪ್ರಮತ್ತನಿಗೆ ಸಾಧ್ಯವಿದ್ದಷ್ಟು ಗಾಂಭೀರ್ಯದಿಂದ ಕರ್ಣದೇವನು ಈ ಮಾತುಗಳನ್ನು ಹೇಳಿದನು.

ಇದಕ್ಕೆ ತಾನು ಕೊಡುವ ಉತ್ತರ ಕರ್ಣದೇವನಿಗೆ ತೃಪ್ತಿಕರವಾಗಿದ್ದರೆ ಮಾತ್ರವೆ ಇಲ್ಲಿಂದ ನಿರಾಪದವಾಗಿ ಹೊರಗೆ ಹೋಗಬಹುದೆಂದು ಅಗ್ಗಳನು ತಿಳಿದನು.

"ಬಿಜ್ಜಳರಾಯರ ವಿಶೇಷಾಹ್ವಾನದಂತೆ ಅವರ ಅತಿಥಿಯಾಗಿ ಮಹಾರಾಣಿಯವರು ಮಂಗಳವೇಡೆಗೆ ಬಂದಿದ್ದಾರೆ. ಸ್ವಯಂ ಬಿಜ್ಜಳರಾಯರೇ ಮಹಾರಾಣಿಯವರ ಪ್ರವಾಸ ಕಾರ್ಯಕ್ರಮವನ್ನು ಗೊತ್ತುಮಾಡಿದ್ದಾರೆ. ಆ ವಿಚಾರದಲ್ಲಿ ನಾನು ಪ್ರವೇಶಿಸುವುದು ಹೇಗೆ ?" –ಎಂದು ಅವನು ವಿನಯವಾಡಿದನು.

"ಬಿಜ್ಜಳರಾಯರೊಡನೆ ಪಗಡೆಯಾಟಕ್ಕೆ ಕುಳಿತು ಮೋಹದ ಬಲೆ ಬೀಸಲು ಅವರೇ ಗೊತ್ತು ಮಾಡಿದರಲ್ಲವೆ ?" –ನಗೆ ಹಾರಿಸಿ ಕಟಕಿಯಾಡಿದನು ಕರ್ಣದೇವ.

ಅಗ್ಗಳನು ಮೌನ. ಅದಕ್ಕೆ ಅವನು ಕೊಡಬಹುದಾದ ಉತ್ತರವೇನೂ ಇರಲಿಲ್ಲ.

ಮುಂದುವರೆದು ಕರ್ಣದೇವ, "ನೀವು ನನ್ನ ಪಾನಗೋಷ್ಠಿಯ ಗೆಳೆಯರು, ಅಗ್ಗಳ. ನಿಮಗೆ ನಾನು ಸುಳ್ಳು ಹೇಳುವುದಿಲ್ಲ. ಚತುರೆಯಾದ ಗಣಿಕೆಯ ಎಲ್ಲ ಗುಣಗಳೂ ನಿಮ್ಮ ರಾಣಿಯಲ್ಲಿವೆ. ನಾಲ್ಕೇ ದಿನದಲ್ಲಿ ಅವಳು ಅಣ್ಣನವರನ್ನು ಮರುಳುಮಾಡಿ ಕಿರುಬೆರಳ ಕೊನೆಯಲ್ಲಿ ಕುಣಿಸುತ್ತಿದ್ದಾಳೆ," ಎಂದನು.

ಕಾಮೇಶ್ವರಿಯನ್ನು ಕುರಿತ ಈ ಕಲುಷಿತ ಆಪಾದನೆಯನ್ನು ಕೇಳಿ ಚೇಳು ಕುಟುಕಿದಂತಾಯಿತು ಅಗ್ಗಳನಿಗೆ. ಮನಸ್ಸಿನ ಅಸಮಾಧಾನವನ್ನು ನುಂಗಿಕೊಂಡು ಅವನು,

"ರಾಜಾಂತಃಪುರಗಳ ವಿಲಾಸ ವಿಭ್ರಮಗಳ ನಡುವೆ ನೀವು ಬೆಳೆಸುತ್ತಿರುವುದು ರಾಜಪುತ್ರಿಯರನ್ನಲ್ಲ, ರಾಜಗಣಿಕೆಯರನ್ನು, ಕರ್ಣದೇವರಸರೆ. ಮಹಾರಾಣಿಯವರು ಹುಟ್ಟಿಗೆ ತಕ್ಕಂತೆ ನಡೆಯುತ್ತಿದ್ದಾರೆ." ಎಂದನು.

ಅಗ್ಗಳನ ಕಟುವ್ಯಂಗ್ಯ ಕರ್ಣದೇವನಿಗೆ ಅರ್ಥವಾಗಲಿಲ್ಲ. ಪುನಃ ಅವನು,

"ನಾನು ಅನುಭವದಿಂದ ಹೇಳುತ್ತಿದ್ದೇನೆ, ಅಗ್ಗಳ. ಚಾಲುಕ್ಯ ರಾಜ್ಯದ ಎಲ್ಲ ವರ್ಗದ ಹೆಂಗಸರ ಅನುಭವವಿದೆ ನನಗೆ. ಕಾಮೇಶ್ವರಿಯಂತಹ ಚತುರೆಯಾದ

ಹೆಣ್ಣು ನಮ್ಮ ಗಣಿಕವಾಸದ ಹೆಗ್ಗಡತಿಯರಲ್ಲಿಯೂ ಸಿಕ್ಕುವುದಿಲ್ಲ," ಎಂದನು.

"ನಾನೂ ಅನುಭವದಿಂದ ಹೇಳುತ್ತಿದ್ದೇನೆ, ಕರ್ಣದೇವರಸರೆ. ನಿಮ್ಮ ರಾಜಾಂತಃಪುರಗಳ ಕುಲೀನ ಗಣಿಕೆಯರ ನಡುವೆ ರಾಣಿ ಕಾಮೇಶ್ವರಿ, ನೀರುಕೋಳಿಗಳ ಜೊತೆಗಿದ್ದ ರಾಜಹಂಸಿಯಂತೆ. ನಿಮ್ಮ ದೃಷ್ಟಿಗೆ ಅವರು ರಾಜ ಗಣಿಕೆಯಂತೆ ಕಂಡರೂ ವಾಸ್ತವದಲ್ಲಿ ನಿಜವಾದ ಸತಿ. ಕರ್ಹಾಡದ ವಿಲಾಸಮಯ ರಾಜಾಂತಃಪುರದಲ್ಲಿ ತುಂಬು ಯೌವನದ ಆರು ವರ್ಷಗಳನ್ನು ಕಳೆದರೂ ಅವರು ಸತಿಯಾಗಿಯೇ ಉಳಿದಿದ್ದಾರೆ. ಕುಮಾರ ಪ್ರೇಮಾರ್ಣವನ ಹಿತಸಾಧನೆಯೊಂದೇ ಅವರ ಏಕಮಾತ್ರ ಧ್ಯೇಯ. ನನಗೆ ತಿಳಿದಂತೆ ಬಿಜ್ಜಳರಾಯರನ್ನು ಮೋಹದಲ್ಲಿ ಕೆಡಹುವ ಇಚ್ಛೆಯೂ ಅವರಿಗಿರುವುದಿಲ್ಲ."

–ಅಗ್ಗಳನು ಆವೇಶದಿಂದ ಹೇಳಿದನು. ಈ ಅನಪೇಕ್ಷಿತ ಸಂಭಾಷಣೆಯನ್ನು ಸಾಧ್ಯವಿದ್ದಷ್ಟು ಬೇಗ ಮುಗಿಸುವುದು ಅವನ ಹಂಚಿಕೆಯಾಗಿತ್ತು.

ಕರ್ಣದೇವ ಗಹಗಹಿಸಿ ನಕ್ಕು, "ಏಳು ವರ್ಷಗಳ ಹಿಂದೆ, ಪ್ರೇಮಾರ್ಣವ ಹುಟ್ಟುವ ಮೊದಲು ನಡೆದ ಒಂದು ಕಥೆ ಹೇಳುತ್ತೇನೆ. ಆಗ ನೀವು ತಿಳಿಯುವಿರಿ, ಕಾಮೇಶ್ವರಿ ಎಂತಹ ಹೆಣ್ಣು ಎಂಬುದನ್ನು," –ಎಂದು ಹೇಳಿ ಮಧುವಿಗಾಗಿ ದಾಸಿಯನ್ನು ಕೂಗಿದನು.

"ವಾದ ಮುಗಿಯಿತು, ಈಗ ಕಥೆ ! ಚಾಲುಕ್ಯ ರಾಜ್ಯದ ವಿನಾಶಕ್ಕಾಗಿಯೇ ಈ ಕಲಚೂರ್ಯ ರಾಜವಂಶ ಉತ್ತರಾಪಥದಿಂದ ಇಲ್ಲಿಗೆ ಬಂದಿತೇ ?" ಎಂದು ಮನದಲ್ಲಿ ಚಿಂತಿಸಿ ಅಗ್ಗಳನು ಪ್ರಕಟವಾಗಿ,

"ನಿಮ್ಮ ಕಥೆ ಕೇಳುತ್ತ ಕುಳಿತುಕೊಳ್ಳುವ ಅವಕಾಶ ಈಗ ನನಗಿಲ್ಲ ಕರ್ಣ ದೇವರಸರೆ, ದಯಮಾಡಿ ಕ್ಷಮಿಸಿರಿ. ಇಷ್ಟು ಹೊತ್ತಿಗೆ ದ್ಯೂತಸಭೆ ಮುಗಿದಿರಬೇಕು. ನಿಮ್ಮ ಎಚ್ಚರಿಕೆಯ ನುಡಿಗಳನ್ನು ಇಂದೇ ರಾಣಿಯವರಿಗೆ ತಿಳಿಸುತ್ತೇನೆ. ಅವರು ಇಚ್ಛೆ ಬಂದಂತೆ ಮಾಡಲಿ," ಎಂದು ಹೇಳಿ ಪುನಃ ಹೊರಡಲು ಅನುವಾಗಿ ಎದ್ದನು.

ತುಂಬಿದ ಮಧುಪಾತ್ರೆಯನ್ನು ಹಿಡಿದು ಎದುರಿಗೆ ಬಂದಿದ್ದಳು ದಾಸಿ.

ಅಗ್ಗಳನ ಕಡೆ ತಿರುಗಿ ಕರ್ಣದೇವ, "ಈ ಹೊಸ ಮಧುವಿನ ಒಂದು ಬಟ್ಟಲು ಕುಡಿದು ಕೊಂಚ ಹೊತ್ತು ಕುಳಿತರೆ ಕೆಲವೇ ಮಾತುಗಳಲ್ಲಿ ಕಥೆ ಮುಗಿಸಿಬಿಡುತ್ತೇನೆ. ಪಂಡಿತ, ಕವಿ, ಕಾವ್ಯೋಪದೇಶಕರು ನೀವು. ನಿಮ್ಮಂಥವರು ಕೇಳಬೇಕಾದ ಕಥೆ ಅದು. ಅಲ್ಲದೆ.....ಕಾಮೇಶ್ವರೀ ದೇವಿಯವರಿಗೆ ಎಚ್ಚರಿಕೆ ಕೊಡುವ ಅಗತ್ಯವೂ ಇರುವುದಿಲ್ಲ ಈಗ. ನಾನು ಅದಕ್ಕೆ ವ್ಯವಸ್ಥೆ ಮಾಡಿದ್ದೇನೆ." ಎಂದನು.

ದಾಸಿ ಮಧುವನ್ನು ಬಟ್ಟಲುಗಳಿಗೆ ಸುರಿದು ಒಂದನ್ನು ಕರ್ಣದೇವನಿಗೆ ಕೊಟ್ಟಳು. ಇನ್ನೊಂದು ಬಟ್ಟಲನ್ನು ಅಗ್ಗಳನ ಮುಂದಿಟ್ಟಳು. ಪಾನಶಾಲೆಯ ದಾಸಿಯರಿಗೆ ಸಹಜವಾದ ಈ ಕಾರ್ಯ ಮಾಡುತ್ತಿದ್ದಂತೆ ಅವಳ ತೋರ್ಬೆರಳು ತನ್ನ ಕಡೆಗೆ ತಿರುಗಿ ಎಚ್ಚರಿಕೆ ಕೊಡುತ್ತಿರುವಂತೆ ಆಡಿದುದನ್ನು ಕಂಡು ಅಗ್ಗಳನು ಚಮತ್ಕೃತವಾಗಿ ತಲೆಯೆತ್ತಿ ನೋಡಿದನು. ದಾಸಿಯ ಕಣ್ಣುಗಳಲಿಯೂ ಅದೇ ಎಚ್ಚರಿಕೆಯ ಸಂಕೇತ. ಹುಬ್ಬುಗಳು ಕ್ಷಣಕಾಲ ಕುಂಚಿತವಾಗಿ ಮತ್ತೆ ಸರಳವಾದವು. "ವಿಪತ್ತು ನಿಮ್ಮನ್ನು ಸುತ್ತುವರಿದಿದೆ, ಎಚ್ಚರಿಕೆ !" ಎನ್ನುವಂತಿತ್ತು ಆ ಚಲನೆ.

ದಾಸಿ ಅಲ್ಲಿಂದ ಸರಿಯುತ್ತಲೆ ಅಗ್ಗಳನು ಪುನಃ ಆಸನದಲ್ಲಿ ಕುಳಿತು, "ರಾಣಿಯವರಿಗೆ ಎಚ್ಚರಿಕೆ ಕೊಡಲು ನೀವು ಮಾಡಿದ ವ್ಯವಸ್ಥೆಯೇನು ?" ಎಂದು ಕೇಳಿದನು.

"ನಾವು ಸಭಾಂಗಣದಿಂದ ಹೊರಗೆ ಬರುತ್ತಿದ್ದಾಗ ನಡೆಯುತ್ತಿದ್ದುದನ್ನು ನೀವು ಗಮನಿಸಲಿಲ್ಲವೆ?" ಎಂದು ಉತ್ತರಿಸಿದನು ಕರ್ಣದೇವ.

"ಏನು ನಡೆಯುತ್ತಿತ್ತು?"

"ಅರಮನೆಯ ಕಾವಲು ಪಡೆಯ ಬದಲಾವಣೆ. ಈಗೊಂದು ವಾರದಿಂದ ಕುಮಾರ ಸೋಮೇಶ್ವರನ ಸೈನಿಕರು ಅರಮನೆಯ ಸುತ್ತ ಕಾವಲಿದ್ದರು. ನಾಳೆ ನಡೆಯುವ ವಿಜಯೋತ್ಸವದ ಮೆರವಣಿಗೆಯಲ್ಲಿ ಅವರದು ಮುಖ್ಯ ಪಾತ್ರ. ಅದಕ್ಕಾಗಿ ಅವರನ್ನು ಶಿಬಿರಕ್ಕೆ ಕಳುಹಿಸಿ, ನನ್ನ ಕಡೆಯ ಸೈನಿಕರನ್ನು ಕಾವಲಿಗೆ ನೇಮಿಸಬೇಕಾಯಿತು. ನಾವು ಸಭಾಂಗಣವನ್ನು ಬಿಟ್ಟಾಗ ಈ ಬದಲಾವಣೆ ನಡೆಯುತ್ತಿತ್ತು. ಈಗ ರಾಣಿಯ ಬಿಡಾರದ ಸುತ್ತ ನನ್ನ ಸೈನ್ಯದ ಕಾವಲಿದೆ. ಚಾಲುಕ್ಯ ರಾಣಿ ಈಗ ನನ್ನ ಬಂಧಿ. ನಾಳೆ ಮುಂಜಾವಿನವರೆಗೆ ರಾಣಿಯ ಬಿಡಾರಕ್ಕೆ ಯಾರನ್ನೂ ಬಿಡಕೂಡದೆಂದು ಬಿಜ್ಜಳರಾಯರ ಆಜ್ಞೆ. ಅಲ್ಲಿಯವರೆಗೆ ರಾಣಿಯ ಮನೆ ಹೆಗ್ಗಡೆಗೆ ಪೂರ್ಣ ವಿರಾಮ. ನೀವು ಹಾಯಾಗಿ ಕುಳಿತು ನನ್ನ ಕಥೆ ಕೇಳಬಹುದು."

ಕರ್ಣದೇವನ ವಿವರಣೆ ಕೇಳಿ ಅಗ್ಗಳನು ಸ್ತಂಭಿತನಾದನು. ಕಾಮೇಶ್ವರಿ ಪಗಡೆಯಾಟದಲ್ಲಿ ಮಗ್ನಳಾದಂತೆ ಕಲಚೂರ್ಯ ರಾಜತಂತ್ರ ಅವಳನ್ನು ಸುತ್ತುಗಟ್ಟಿ ವಜ್ರಪಂಜರದಲ್ಲಿ ಹಾಕಿತು. ರಾಜಿಕದಲ್ಲಿ ವಿಜ್ಞನೆಂಬ ಅಭಿಮಾನದಿಂದ ಹಿರಿ ಹಿರಿ ಹಿಗ್ಗುತ್ತಿದ್ದ ನಾನು, ಆ ಪಂಜರದ ಹೊರಗೆ ಕರ್ಣದೇವನಂತಹ ತಿಳಿಗೇಡಿಯ ಕೈಗೆ ಸಿಕ್ಕಿದ್ದೇನೆ," ಎಂದು ತನ್ನನ್ನು ತಾನೆ ನಿಂದಿಸಿಕೊಂಡು, ಪ್ರಕಟವಾಗಿ–

"ಕಲಚೂರ್ಯ ರಾಜತಂತ್ರದ ಹೊಸ ಅವತರಣವೊಂದು ಈ ದಿನ

ಪ್ರಾರಂಭವಾದಂತಿದೆ, ಕರ್ಣದೇವರಸರೆ. ಅಣ್ಣನ ಆಹ್ವಾನದಂತೆ ಅತಿಥಿಯಾಗಿ ಬಂದ ಚಾಲುಕ್ಯ ರಾಣಿಯನ್ನು ತಮ್ಮನು ಬಂಧನದಲ್ಲಿಡಲು ಹವಣಿಸುತ್ತಿರುವನಲ್ಲವೆ? ಅದೇನೇ ಇರಲಿ, ನಾನು ಆ ವಿಚಾರಕ್ಕೆ ಪ್ರವೇಶಿಸುವುದಿಲ್ಲ. ಈಗ ನಿಮ್ಮ ಕಥೆ ಹೇಳಿ. ಶಾಂತಿಯಿಂದ ಕುಳಿತು ಕೇಳುತ್ತೇನೆ," ಎಂದನು.

ಕರ್ಣದೇವನು ತನ್ನ ಬಟ್ಟಲಲ್ಲಿದ್ದ ಮಧುವನ್ನು ಆಗಾಗ ಎತ್ತಿ ಕುಡಿಯುತ್ತ ಹೇಳಿದನು–

"ಏಳು ವರ್ಷಗಳ ಹಿಂದಿನ ಘಟನೆ. ಕಂಪಿಲ ದುರ್ಗದಲ್ಲಿ ಅಜ್ಞಾತವಾಸದಲ್ಲಿದ್ದ ತೈಲಪನು ತೀರಿಕೊಂಡು ಕೆಲವು ತಿಂಗಳಾಗಿದ್ದುವು. ತುಂಬುಜವ್ವನದ ಹೊಚ್ಚ ಹೊಸ ವಿಧವೆಗೆ ತಕ್ಕಂತೆ ತೈಲಪನ ರಾಣಿ ಕಾಮೇಶ್ವರಿ, ತನ್ನ ಮೈದುನನಾದ ಜಗದೇಕಮಲ್ಲರಸನನ್ನು ನಿಯೋಗ ವಿಧಿಯಿಂದ ವರಿಸಿ ಪುತ್ರ ಸಂತಾನ ಪಡೆಯಲು ಬಿಜ್ಜಳರಾಯರ ಅನುಮತಿ ಕೇಳಿದಳು. ನಿಯೋಗ ಪದ್ಧತಿ ಈಗ ಪ್ರಚಾರದಲ್ಲಿಲ್ಲವೆಂದು ಅಣ್ಣನವರು ನಿರಾಕರಿಸಿದರು. ಜಗದೇಕಮಲ್ಲರಸರನ್ನು ನೋಡುವ ಅವಕಾಶವೂ ದೊರಕಲಿಲ್ಲ ಕಾಮೇಶ್ವರಿಗೆ.

"ಆಗ ರಾಣಿ ನನ್ನನ್ನು ಆಶ್ರಯಿಸಿದಳು. ಸಹಾಯ ಮಾಡಲು ನಾನು ಒಪ್ಪಿದೆ. ಅದಕ್ಕೊಂದು ರಹಸ್ಯ ಕಾರಣವಿತ್ತು. ಕದಂಬ ರಾಜಕನ್ಯೆ ಕುಸುಮಾವಳಿಯ ಹೆಸರು ಕೇಳಿರಬಹುದು ನೀವು. ಆಗ ಅವಳು ಬನವಾಸಿಯ ಮಧುಕೇಶ್ವರ ಮಂದಿರದ ನರ್ತಕಿಯಾಗಿದ್ದಳು. ಅಸಮಾನ ರೂಪವತಿ. ಗೀತ ನರ್ತನಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಳು. ಕಾಮೇಶ್ವರಿಯ ಅತಿಥಿಯಾಗಿ ಚಾಲುಕ್ಯ ಬಿಡಾರದಲ್ಲಿದ್ದ ಅವಳನ್ನು ನಾನು ಮೋಹಿಸಿದ್ದೆ. ರಾಜಾಂತಃಪುರಗಳ ಎಲ್ಲ ಹೆಣ್ಣುಗಳಂತೆ ಅವಳು ನನ್ನೊಡನೆ ಒಲಿದೂ ಒಲಿಯದ ಕಣ್ಣಾಮುಚ್ಚಾಲೆಗೆ ಪ್ರಾರಂಭಿಸಿದ್ದಳು. ಹಕ್ಕಿ ಬಲೆಗೆ ಬೀಳಲು ಏನಾದರೊಂದು ಉಪಾಯ ಹೂಡುವುದು ಅಗತ್ಯವಾಗಿತ್ತು. ನಾನು ಕಾಮೇಶ್ವರಿಗೆ ಹೇಳಿದೆ, 'ಇನ್ನೆರಡು ದಿನದಲ್ಲಿ ಜಗದೇಕಮಲ್ಲರಸರು ಬೇಟೆಗೆ ಹೋಗುತ್ತಾರೆ. ಆಗ ನೀವು ಮತ್ತು ಕುಸುಮಾವಳಿ ಸಮೀಪ ಗ್ರಾಮದ ನನ್ನ ಬಿಡಾರಕ್ಕೆ ಬಂದರೆ, ಬೇಟೆಯ ಶಿಬಿರದಲ್ಲಿ ಜಗದೇಕಮಲ್ಲರಸರನ್ನು ನೋಡಲು ಏರ್ಪಡಿಸುತ್ತೇನೆ,' ಎಂದು.

"ಕಾಮೇಶ್ವರಿ ಒಪ್ಪಿಕೊಂಡಳು. ಅದರಂತೆ ಮರುದಿನ ನಾವು ಗ್ರಾಮ ಬಿಡಾರಕ್ಕೆ ಹೋದೆವು. ಆ ರಾತ್ರಿಯನ್ನು ಕಾಮೇಶ್ವರಿ, ಗೋಮಂತಕದ ನರ್ತಕಿಯ ವೇಷದಲ್ಲಿ ಜಗದೇಕಮಲ್ಲರಸರ ಶಿಬಿರದಲ್ಲಿ ಕಳೆದಳು. ಬಿಡಾರದಲ್ಲಿ ನಾನು ಮತ್ತು ಕುಸುಮಾವಳೀ ಇಬ್ಬರೇ ಉಳಿದೆವು. ಈಗ ಹಕ್ಕಿ ನನ್ನ ಕೈಗೆ ಸಿಕ್ಕಂತೆ ಎಂದು

ಆನಂದದಿಂದ ನಾನು ಮಧುಪಾನ ಮಾಡುತ್ತ ಕೊಠಡಿಯಲ್ಲಿ ಕುಳಿತಿದ್ದಂತೆ ಒಂದು ಅಚಾತುರ್ಯ ನಡೆಯಿತು.

"ರಾಣಿಯ ಸಂಗಡ ಶೀಲವಂತನೆಂಬ ಚಿತ್ರಗಾರ ಹುಡುಗ ಬಂದಿದ್ದ. ರಾಣಿಯ ಭಟರು ಮತ್ತು ಬೋಯಿಗಳೊಡನೆ ಗ್ರಾಮದಲ್ಲಿಯೇ ಇರಲು ಅವನಿಗೆ ಹೇಳಿತ್ತು. ಹೇಗೋ ನನ್ನ ಹಂಚಿಕೆಯ ಸುಳಿವು ತಿಳಿದುಕೊಂಡು ಅವನು ಬಿಡಾರಕ್ಕೆ ಬಂದು, ನಾನು ಕುಳಿತಿದ್ದ ಕೊಠಡಿಯ ಬಾಗಿಲು ಮುಚ್ಚಿ ಹೊರಗೆ ಚಿಲುಕ ಹಾಕಿದ. ಕುಸುಮಾವಳಿಗೂ ಅದೇ ಗತಿಯಾಯಿತು. ಬಿಡಾರದ ಬೇರೆ ಬೇರೆ ಕೊಠಡಿಗಳಲ್ಲಿ ಪರಸ್ಪರ ಮಿಲನಕ್ಕಾಗಿ ಹಂಬಲಿಸುತ್ತ ನಾವು ರಾತ್ರಿಯನ್ನು ಕಳೆದವು. ಕೈಗೆ ಸಿಕ್ಕಿದ್ದ ಹಣ್ಣು ಬಾಯಿಗೆ ಬರಲಿಲ್ಲವೆಂಬ ದುಃಖದಿಂದ ಮರುಗಿದ ನಾನು ಕೊಠಡಿಯಲ್ಲಿಇದ್ದ ಮಧುವನ್ನೆಲ್ಲ ಕುಡಿದುಬಿಟ್ಟೆ. ಮತ್ತನಾಗಿ ಮಲಗಿ ನಿದ್ದೆ ಮಾಡಿದೆ. ಎಚ್ಚರವಾದಾಗ ಬೆಳಗಿನ ಮೊದಲ ಜಾಮ ಕಳೆದಿತ್ತು. ನನ್ನ ಕೋಪಕ್ಕೆ ಹೆದರಿ ರಾಣಿ ಕಾಮೇಶ್ವರಿ ಕುಸುಮಾವಳಿಯನ್ನು ಸಂಗಡ ಕರೆದುಕೊಂಡು ಕಲ್ಯಾಣಕ್ಕೆ ಹೊರಟು ಬಿಟ್ಟಿದ್ದಳು. ಬಿಡಾರದಲ್ಲಿ ನನ್ನ ಕುದುರೆ ಮತ್ತು ಸಂಗಡಿದ್ದ ಭಟನು ಮಾತ್ರ ಇದ್ದರು.

"ಅಂದೇ ನಾನು ಕಲ್ಯಾಣಕ್ಕೆ ಹಿಂದಿರುಗಿದೆ. ಸೇಡು ತೀರಿಸಿಕೊಳ್ಳುವ ಅವಕಾಶ ಹುಡುಕುತ್ತಿದ್ದಂತೆ ನನ್ನ ಕಡೆಯ ಭಟರು ಶೀಲವಂತನನ್ನು ಸೆರೆಹಿಡಿದು ತಂದರು. ಅವನ ಹತ್ತಿರ ರಾಣಿಯ ರತ್ನಖಚಿತವಾದ ಕಡಗ. ರಾಣಿ ಅದನ್ನು ತಾನೇ ಅವನಿಗೆ ಕೊಟ್ಟಿದ್ದಳಂತೆ. ಕಡಗವನ್ನು ತೆಗೆದುಕೊಂಡು ಚಾಲುಕ್ಯ ಬಿಡಾರಕ್ಕೆ ಹೋಗಿ ರಾಣಿಗೆ ತೋರಿಸಿದೆ. ಶೀಲವಂತ ವಿಪತ್ತಿನಲ್ಲಿರುವನೆಂದು ತಿಳಿದು ಕಾಮೇಶ್ವರಿ ಅವನ ಪ್ರಾಣಭಿಕ್ಷೆ ಬೇಡಿದಳು. 'ಶೀಲವಂತ ಉಳಿಯಬೇಕಾದರೆ ನೀವು ಈ ರಾತ್ರಿಯನ್ನು ನನ್ನೊಡನೆ ಕಳೆಯಬೇಕು' ಎಂದೆ ನಾನು, ಒಪ್ಪಿಕೊಂಡಳು. ಗ್ರಾಮ ಬಿಡಾರದಲ್ಲಿ ನರ್ತಕಿ ರಾಜ ಕನ್ಯೆಯೊಡನೆ ಹಿಂದಿನ ರಾತ್ರಿ ನಡೆಯಬೇಕಾಗಿದ್ದ ಸಮಾಗಮ' ಮರುದಿನ ರಾತ್ರಿ ಚಾಲುಕ್ಯ ಅರಮನೆಯಲ್ಲಿ ರಾಣಿ ಕಾಮೇಶ್ವರಿಯೊಡನೆ ನಡೆಯಿತು. ಆಮೇಲೆ ಕುಮಾರ ಪ್ರೇಮಾರ್ಣವ ಹುಟ್ಟಿದ್ದು," –ಎಂದು ಕರ್ಣದೇವನು ಮುಗಿಸಿದನು.

ಕೇಳುತ್ತ ಮೌನವಾಗಿ ಕುಳಿತಿದ್ದ ಅಗ್ಗಳನು ಪಾನಶಾಲೆಯಿಂದ ತಪ್ಪಿಸಿಕೊಂಡು ಹೋಗುವುದು ಹೇಗೆ ? ಎಂದು ಯೋಚಿಸಿ ಒಂದು ನಿರ್ಧಾರಕ್ಕೆ ಬಂದಿದ್ದನು. ಅದನ್ನು ಕಾರ್ಯರೂಪಕ್ಕೆ ತರುವ ಅವಕಾಶಕ್ಕಾಗಿ ಕಾಯುತ್ತ ಅವನ ಮನಸ್ಸಿನ ಕಳವಳವನ್ನು ಮುಚ್ಚಿಡುವ ಸರಳ ಕಂಠದಿಂದ,

"ರಾಜಾಂತಃಪುರಕ್ಕೆ ಸಹಜವಾದ ಈ ಹಗಲು ಹಾದರದ ಕಥೆಯನ್ನು

ಹೇಳುವುದರಲ್ಲಿ ನಿಮ್ಮ ಉದ್ದೇಶವೇನು, ಕರ್ಣದೇವರಸರೆ ?" ಎಂದು ಪ್ರಶ್ನಿಸಿದನು.

ಕರ್ಣದೇವ ಅಟ್ಟಹಾಸದಿಂದ ನಕ್ಕು, "ಕಾಮೇಶ್ವರಿ ಎಂತಹ ಹೆಣ್ಣೆಂಬುದನ್ನುನಿಮಗೆ ತಿಳಿಸುವುದು, ಅಗ್ಗಳ. ಶೀಲವಂತನೆಂಬ ಮುಚ್ಚಿಗ ಹುಡುಗನ ಜೀವ ಉಳಿಸಲು ರಾಣಿ ಕಾಮೇಶ್ವರಿ ಒಂದಿರುಳು ಒತ್ತೆಯಾದಳು ನನಗೆ!" ಎಂದು ಉತ್ತರ ಕೊಟ್ಟನು.

"ಗಣಿಕಾವೃತ್ತಿಗಿಳಿದವಳು ರಾಣಿಯಾಗಲಿ, ಸಾಮಾನ್ಯ ಹೆಣ್ಣಾಗಲಿ ಸರಿಯಾದ ಗಿರಾಕಿ ಬಂದಾಗ ಒತ್ತೆಗೆ ನಿಲ್ಲಲೇಬಾಕಾಗುವುದು. ಒತ್ತೆಯ ಹಣದಲ್ಲಿ ಹೆಚ್ಚು ಕಡಿಮೆಯಾಗುವುದೊಂದೇ ಅಂತರ. ನಿಮ್ಮ ಕಥೆಗೆ ಮತ್ತೇನೋ ಉದ್ದೇಶವಿರಬೇಕು,"

–ಎಂದು ಅಗ್ಗಳನೂ ನಕ್ಕನು.

"ಹೌದು ಅಗ್ಗಳ, ಮರೆತಿದ್ದೆ. ಮತ್ತೊಂದು ಉದ್ದೇಶವಿದೆ. ಎಲ್ಲರೂ ಭಾವಿಸಿರುವಂತೆ ಕುಮಾರ ಪ್ರೇಮಾರ್ಣವನು ಜಗದೇಕಮಲ್ಲರಸರ ಔರಸನಲ್ಲ, ನನ್ನ ಔರಸ. ಚಾಲುಕ್ಯ ಕ್ಷೇತ್ರದಲ್ಲಿ ಹುಟ್ಟಿದ ಕಲಚೂರ್ಯ ಕುಡಿ. ಇದನ್ನು ನಿಮಗೆ ತಿಳಿಸಲೆಂದೇ ನಾನು ಈ ಕಥೆ ಹೇಳಿದ್ದು."

–ಎಂದು ಕರ್ಣದೇವ ಗಹಗಹಿಸಿ ನಗುತ್ತಾ ಮಧುವಿಗಾಗಿ ದಾಸಿಯನ್ನು ಕೂಗಿದನು.

ದಾಸಿ ಓಡಿ ಬಂದು ಬಟ್ಟಲನ್ನು ತುಂಬಿದಳು. ಅಗ್ಗಳನ ಬಟ್ಟಲು ತುಂಬಿರುವುದನ್ನು ಕಂಡಾಗ ಅವಳ ಮುಖದಲ್ಲಿ ಅಸ್ಫುಟ ಮಂದಹಾಸವೊಂದು ಮಿಂಚಿ ಮರೆಯಾಯಿತು.

ದಾಸಿ ಹೋದಮೇಲೆ ಅಗ್ಗಳನು, "ನಿಮ್ಮ ಕಥೆ ಅಷ್ಟಕ್ಕೇ ಮುಗಿಯುವುದಿಲ್ಲ, ಕರ್ಣದೇವರಸರೆ. ಅದಕ್ಕೆ ಅನುಬಂಧವಾಗಿ ಉಪಕಥೆಯೊಂದಿದೆ. ಅದನ್ನು ಕೇಳುವ ಸಹನೆಯಿದೆಯೇ ನಿಮಗೆ?" ಎಂದು ಮೃದುವಾಗಿ ಪ್ರಶ್ನಿಸಿದನು.

"ಕಥೆಗೊಂದು ಉಪಕಥೆ! ಕವಿಯಲ್ಲವೆ ನೀವು? ಹೇಳಿರಿ ಅಗ್ಗಳದೇವ,"

–ಎಂದು ಕರ್ಣದೇವ ಬಟ್ಟಲನ್ನು ಬರಿದುಮಾಡಿ ಕೆಳಗಿಟ್ಟನು.

ಅಗ್ಗಳನು ಹಳಿದನು : "ಒಬ್ಬ ಹೆಣ್ಣಿಗೆ ಅನೇಕ ಮಂದಿ ಪತಿಗಳಾಗಬಹುದು. ಗಣಿಕೆಯರಂತೆ ಗೃಹಿಣಿಯರ ವಿಚಾರದಲ್ಲಿಯೂ ಈ ಮಾತು ಅನ್ವಯಿಸುತ್ತದೆ. ನೀತಿ ವಿರುದ್ಧವಾದ ಈ ಬಗೆಯ ಬಹುಪತಿತ್ವ ಶಿಷ್ಟ ಸಮಾಜ ಭಾವಿಸಿರುವಷ್ಟು ಅಪರೂಪವಲ್ಲ. ಅಂತಹ ಹೆಣ್ಣೊಬ್ಬಳಿಗೆ ಮಗು ಹುಟ್ಟಿದಾಗ, ನನ್ನ ಮಗು ! ನನ್ನ ಮಗು! ಎಂದು ಪತಿಗಳೆಲ್ಲ ವಾದ ಹೂಡುತ್ತಾರೆ. ಆಗ ಮಗುವಿನ ತಂದೆ ಯಾರೆಂಬುದನ್ನು ತಾಯಿಯೇ ಹೇಳಬೇಕಲ್ಲವೆ ?"

ಕರ್ಣದೇವನು ತಲೆದೂಗಿ, "ಧರ್ಮಾಧಿಕರಣದಲ್ಲಿ ಇಂತಹ ಘಟನೆಯೊಂದರ ವಿಚಾರಣೆ ನಡೆದದ್ದು ನನಗೆ ನೆನಪಿದೆ. ಧರ್ಮಾಧ್ಯಕ್ಷರು ತಾಯಿಯ ಹೇಳಿಕೆಯನ್ನು ಅನುಮೋದಿಸಿ ತೀರ್ಪು ಕೊಟ್ಟರು." ಎಂದನು.

"ಕುಮಾರ ಪ್ರೇಮಾರ್ಣವನ ತಂದೆ ಯಾರೆಂಬುದನ್ನು ರಾಣಿ ಕಾಮೇಶ್ವರಿ ಖಚಿತವಾಗಿ ಹೇಳಿದ್ದಾರೆ. ಆ ವಿಚಾರದಲ್ಲಿ ಸಂದೇಹಕ್ಕೆ ಎಡೆಯೂ ಇರುವುದಿಲ್ಲ."

ಅಷ್ಟೇ ನಿರ್ಧಾರಕ ಕಂಠದಿಂದ ಅಗ್ಗಳನೆಂದನು.

"ಏನು ಹೇಳುತ್ತಾಳೆ ಆ ರಾಜಗಣಿಕೆ ?" –ಕರ್ಣದೇವ ಹೌಹಾರಿ ಬಿದ್ದನು.

"ಅರಸರು ದಯಮಾಡಿ ಕೊಂಚ ಹೊತ್ತು ಶಾಂತಿಯಿಂದಿದ್ದರೆ ನಿಮ್ಮ ಬಾಯಿಂದಲೇ ಅದನ್ನು ಹೇಳಿಸುತ್ತೇನೆ." –ಅನುನಯದ ದನಿಯಿಂದ ಅಗ್ಗಳನೆಂದನು.

ಕುತೂಹಲದ ಕೈ ಮೇಲಾಗಿ ಕರ್ಣದೇವನ ಚಡಪಡ ಅಷ್ಟಕ್ಕೇ ಮುಗಿಯಿತು. "ನೀವು ನನ್ನ ಪಾನಗೋಷ್ಠಿಯ ಗೆಳೆಯರು, ಅಗ್ಗಳ. ನಿಮ್ಮ ಮಾತನ್ನು ನಿರಾಕರಿಸುವುದಿಲ್ಲ," ಎಂದು ಅವನು ಅಮಲೇರಿದವನ ಕ್ಷಣಿಕ ಸಹನೆಯಿಂದ ಸುಮ್ಮನೆ ಕುಳಿತನು.

"ಆ ದಿನ ನೀವು ಚಾಳುಕ್ಯ ಬಿಡಾರಕ್ಕೆ ಹೋಗಿ ಕಾಮೇಶ್ವರೀ ದೇವಿಗೆ ಕಡಗವನ್ನು ಕೊಟ್ಟಮೇಲೆ ಏನಾಯಿತು ಹೇಳಿ ?"

–ಅಗ್ಗಳನು ಮತ್ತೆ ಕೇಳಿದನು.

"ರಾಣಿ ನನ್ನನ್ನು ಅಂತಃಗೃಹಕ್ಕೆ ಕರೆದುಕೊಂಡು ಹೋದಳು. ಅಲ್ಲಿ ನಾನು ಮಂಚದ ಮೇಲೆ ಕುಳಿತುಕೊಂಡೆ. ರಾಣಿ ದಾಸಿಯನ್ನು ಕರೆದು ಮಧುವನ್ನು ತರುವಂತೆ ಹೇಳಿದಳು. ಇಬ್ಬರೂ ಪಾನ ಮಾಡಿದೆವು."

"ಪಾನ ಮಾಡಿದವರು ನೀವು, ಕರ್ಣದೇವರಸರೆ. ನಿಮಗೆ ಕಾಣದಂತೆ ಬಟ್ಟಲಿನ ಮಧುವನ್ನು ಕೆಳಗೆ ಚಲ್ಲಿ ರಾಣಿ ಕಾಮೇಶ್ವರಿ ಪಾನದ ನಾಟಕ ಹೂಡಿದಳು."

"ಇದು ನಿಜವೇ ಅಗ್ಗಳ !"

"ರಾಣಿಗೆ ಕುಡಿಯುವ ಅಭ್ಯಾಸವಿಲ್ಲ. ಎಂದೋ ಯಾವಾಗಲೋ ಕುಡಿದರೆ ಅರ್ಧ ಬಟ್ಟಲು ಮಾತ್ರ. ಇದು ನನಗೆ ಚೆನ್ನಾಗಿ ತಿಳಿದಿದೆ."

"ಹಾಗಾದರೆ ರಾಣಿ ನನ್ನನ್ನು ವಂಚಿಸಿದಳು !" –ಕರ್ಣದೇವನ ದನಿಯಲ್ಲಿ ವಿಷಣ್ಣತೆ ತಲೆದೋರಿತ್ತು.

"ವಂಚನೆ ಅಷ್ಟಕ್ಕೇ ಮುಗಿಯಲಿಲ್ಲ, ಕರ್ಣದೇವರಸರೆ. ಆಮೇಲೆ ಏನಾಯಿತು ಹೇಳಿರಿ?"

"ಮಧು ಬಹಳ ರುಚಿಯಾಗಿತ್ತು, ನಾಲ್ಕಾರು ಬಟ್ಟಲುಗಳನ್ನು ಕುಡಿದೆ,

ಮತ್ತನಾಗಿ ದಿಂಬುಗಳಿಗೆ ಒರಗಿದೆ."

"ಆಮೇಲೆ ?"

"ರಾಣಿ ನನ್ನ ಪಾರ್ಶ್ವದಿಂದೆದ್ದು, ಈ ದೀಪಗಳ ಬೆಳಕು ನನಗೆ ಲಜ್ಜೆ ತರುತ್ತಿದೆ ಎಂದು ಹೇಳಿ, ಒಂದನ್ನುಳಿದು ಉಳಿದೆಲ್ಲ ದೀಪಗಳನ್ನು ಆರಿಸಿಬಿಟ್ಟಳು."

"ಆಮೇಲೆ?"

"ನಾನು ಒಳಗೆ ಹೋಗಿ ಈ ಒಡವೆ ವಸ್ತುಗಳನ್ನು ತೆಗೆದಿಟ್ಟು ಬೇರೆ ಬಟ್ಟೆ ಉಟ್ಟು ಬರುತ್ತೇನೆ, ಎಂದು ಹೇಳಿ ಪಾರ್ಶ್ವದ ಕೊಠಡಿಗೆ ಹೋದಳು. ನಾನು ದಿಂಬಿಗೊರಗಿ ಕಣ್ಣು ಮುಚ್ಚಿ ಆ ಅಪೂರ್ವ ಆನಂದ ಸಮಾಗಮದ ಕನಸು ಕಾಣುತ್ತಿದ್ದೆ."

"ಕನಸಂತೆಯೇ ಮುಗಿಯಿತು ನಿಮ್ಮ ಆ ಸಮಾಗಮ!"

–ಎಂದು ಅಗ್ಗಳನು ಗಹಗಹಿಸಿ ನಕ್ಕನು.

"ಮುಗಿಯಲಿಲ್ಲ ಅಗ್ಗಳ. ಕೊಂಚ ಹೊತ್ತಿನ ಮೇಲೆ ಕಾಮೇಶ್ವರಿ ಪುನಃ ಅಲ್ಲಿಗೆ ಬಂದಳು."–ಆತುರದಿಂದ ಒದರಿದನು ಕರ್ಣದೇವ.

"ಪುನಃ ಅಲ್ಲಿಗೆ ಬಂದವಳು ರಾಣಿಯಲ್ಲ, ಕರ್ಣದೇವರಸರೆ. ರಾಣಿಯಂತೆ ವೇಷ ಧರಿಸಿದ, ರೂಪ ಆಕೃತಿ ನಡೆ ನುಡಿಗಳಲ್ಲಿ ರಾಣಿಯನ್ನೇ ಹೋಲುವ ಒಬ್ಬ ಸಾಮಾನ್ಯ ದಾಸಿ. ಮಧುಪಾನದ ಅಮಲೇರಿದ್ದ ನಿಮಗೆ ಆ ವಂಚನೆಯನ್ನು ತಿಳಿಯುವ ಬುದ್ಧಿಕೂಡ ಉಳಿದಿರಲಿಲ್ಲ. ನಿಮಗೆ ಆ ರಾತ್ರಿ ಒತ್ತೆ ನಿಂತವಳು ರಾಣಿಯ ದಾಸಿ, ರಾಣಿಯಲ್ಲ. ಕುಮಾರ ಪ್ರೇಮಾರ್ಣವ ನಿಮ್ಮ ಔರಸನಲ್ಲವೆಂಬುದಕ್ಕೆ ಬೇರೆ ಪ್ರಮಾಣವೇಕೆ ?"

ಅಗ್ಗಳ ಹೇಳಿದುದನ್ನು ಕೇಳಿ ಕರ್ಣದೇವ ಸ್ತಂಭಿತನಾದನು. ಚಡಪಡಿಸಿ ಹಾರಾಡುವ ಚೈತನ್ಯವೂ ಉಳಿದಿರಲಿಲ್ಲ ಆಗ ಅವನಲ್ಲಿ. "ಮಧು! ಮಧು!" ಎಂದು ಕೂಗಿದನು ಮಾತ್ರ.

ದಾಸಿ ಓಡಿ ಬಂದು ಬಟ್ಟಲನ್ನು ತುಂಬಿದಳು. ಅಗ್ಗಳನ ಬಟ್ಟಲು ಹಿಂದಿನಂತೆ ತುಂಬಿರುವುದನ್ನು ಕಂಡು ಅವಳ ಮೊಗ ಮಿದುನಗೆಯಿಂದ ಅರಳಿತು. ಅಭಿನಂದನೆ ಆಶ್ವಾಸನೆಗಳನ್ನು ಚೆಲ್ಲಿತು, ಕಣ್ಣುಗಳ ಕಡೆನೋಟ.

ದಾಸಿ ಹೋದ ಮೇಲೆ ಅಗ್ಗಳನು ಅನುಕಂಪದ ಮೆಲ್ದನಿಯಿಂದ,

"ನಿಮ್ಮನ್ನು ನೋಡಿ ನನಗೆ ದುಃಖವಾಗುತ್ತಿದೆ, ಕರ್ಣದೇವರಸರೆ. ಆದರೆ ಏಳು ವರ್ಷಗಳ ಹಿಂದೆ ನಡೆದ ಒಂದು ಅಲ್ಪ ಘಟನೆಗಾಗಿ ನೀವೇಕೆ ಇಷ್ಟೊಂದು ಖಿನ್ನರಾಗಬೇಕು? ಅಲ್ಲಿಂದೀಚೆಗೆ ಎಷ್ಟು ನೀರು ಹರಿದಿದೆಯೋ ನಿಮ್ಮ ಬಾಳ

ಸೇತುವೆಯಡಿಯಲ್ಲಿ !" ಎಂದನು.

"ರಾಣಿ ನನ್ನನ್ನು ವಂಚಿಸಿದಳು, ಅಗ್ಗಳ. ನಾನು ಅಷ್ಟೊಂದು ಕುಡಿದದ್ದು ಮೊದಲ ತಪ್ಪು. ದೀಪ ಆರಿಸಲು ಒಪ್ಪಿದ್ದು ಎರಡನೆಯ ತಪ್ಪು. ಪಾರ್ಶ್ವದ ಕೊಠಡಿಗೆ ಹೋಗಲು ಅವಕಾಶ ಕೊಟ್ಟದ್ದು ಮೂರನೆಯ ತಪ್ಪು. ಎಲ್ಲವೂ ನನ್ನ ಅವಿವೇಕದ ಫಲ," –ಎಂದು ವಿಷಣ್ಣನಾಗಿ ನುಡಿದನು ಕರ್ಣದೇವ. "ಇದೆಲ್ಲ ನಿಮ್ಮ ಜಾತಕ ಫಲ ಕರ್ಣದೇವರಸರೆ," –ಅಗ್ಗಳನು ಸಮಾಧಾನ ಹೇಳಿದನು.

"ಅಂದರೆ?" –ಅಜ್ಞಾನ ರೂಪ ತಳೆದಿತ್ತು ಕರ್ಣದೇವನ ದೃಷ್ಟಿಯಲ್ಲಿ.

"ಅಂದರೆ ನಿಮ್ಮ ಜನ್ಮದೋಷ. ಹುಟ್ಟು ಬುದಕಿನ ಬೇರು ಎಂಬ ನಾಣ್ಣುಡಿ ಕೇಳಿಲ್ಲವೆ ನೀವು ?"

"ನನಗೆ ಅರ್ಥವಾಗಲಿಲ್ಲ."

"ಉಪಕಥೆ ಕೇಳಿದರೆ ಅರ್ಥವಾಗುವುದು."

"ಈಗ ನೀವು ಹೇಳಿದ್ದು ಉಪಕಥೆಯಲ್ಲವೆ?"

"ಅಲ್ಲ, ಅದು ಪ್ರಸ್ತಾವನೆ. ಈಗ ಕಥೆ ಹೇಳುತ್ತೇನೆ. ನೀವು ಕಾಲಂಜರ ದುರ್ಗದ ಹೆಸರು ಕೇಳಿಲ್ಲವೆ ?"

"ಕೇಳಿಲ್ಲ."

"ಒಳ್ಳೆಯದೇ ಆಯಿತು. ನನ್ನ ಕಥೆ ಕೇಳಿದ ಮೇಲೆ ನೀವು ಯಾವಾಗಲೂ ಕಾಲಂಜರ ದುರ್ಗದ ಹೆಸರು ಮರೆಯುವುದಿಲ್ಲ." –ಎಂದು ಪ್ರಾರಂಭಿಸಿ ಅಗ್ಗಳನು ಹೇಳಿದನು– "ಹಿಂದೆ ಉತ್ತರಾಪಥದಲ್ಲಿ ಕಾಲಂಜರ ದುರ್ಗವೆಂಬ ರಾಜ್ಯವಿತ್ತು. ಅದರ ಅರಸು ವೀರ ಕ್ಷತ್ರಿಯನಾದರೂ ನರಭಕ್ಷಕ. ಅವನು ಸಾಮಂತ ಅಧಿಕಾರಿಯಲ್ಲ, ಬಡ್ಡಿಗೆ ಹಣ ಕೊಟ್ಟು ಸುಖಜೀವನ ನಡೆಸುವ ಶ್ರೀಮಂತನಲ್ಲ, ರಾಜಭಟನಲ್ಲ, ಗಣಿಕಾಗೃಹ ನಡೆಸುವ ದಳ್ಳಾಳಿಯೂ ಅಲ್ಲ. ಆದರೂ ಅವನಿಗೆ ನರಮಾಂಸದ ರುಚಿ ಹತ್ತಿದ್ದು ಹೇಗೆ ಎಂಬುದೊಂದು ಚಿದಂಬರ ರಹಸ್ಯ.

"ಅವನಿಗೊಬ್ಬ ಬ್ರಾಹ್ಮಣ ಮಹಿಷಿ ಇದ್ದಳು. ಅಂದರೆ ಅವನು ಬ್ರಾಹ್ಮಣ ತರುಣಿಯೊಬ್ಬಳನ್ನು ಬಲಾತ್ಕಾರದಿಂದ ಹಿಡಿದು ತಂದು ಮಹಿಷಿ ಪದವಿಗೇರಿಸಿದ್ದನು. ಹಗಲಿರುಳೂ ಅವಳಿಗೆ ಒಂದೇ ಚಿಂತೆ, ಈ ನರಭಕ್ಷಕ ಪತಿಯಿಂದ ಹೇಗೆ ತಪ್ಪಿಸಿಕೊಳ್ಳುವುದು ಎಂದು.

"ರಾಜ್ಯದ ಮಂತ್ರಿ ಸಾಮಂತ ಸೇನಾಪತಿಗಳ ಕಾಲವೆಲ್ಲ ಆಡಳಿತದ ಹೆಸರಿನಲ್ಲಿ ಸುಲಿಗೆ ಸೂರೆ ದರೋಡೆಗಳನ್ನು ನಡೆಸಿ ಸ್ವಂತ ಭಂಡಾರಗಳನ್ನು ತುಂಬಿಕೊಳ್ಳುವುದರಲ್ಲಿ ಕಳೆದುಹೋಗುತ್ತಿತ್ತು. ಅರಸನನ್ನು ನೋಡಿ ಮಂತ್ರಾಲೋಚನೆ

ನಡೆಸುವ ಅವಕಾಶವೂ ಅವರಿಗಿರಲಿಲ್ಲ. ಅರಮನೆಯ ಸುತ್ತ ಸೈನಿಕರ ಕಾವಲಿಟ್ಟು, ರಾಜನು ಅಲ್ಲಿ ಬಂದಿಯಂತೆ ಸುಖವಾಗಿರಲು ಏರ್ಪಡಿಸಿ, ರಾಜನ ಹೆಸರಿನಲ್ಲಿ ತಾವೇ ರಾಜ್ಯಭಾರ ಮಾಡಲು ಪ್ರಾರಂಭಿಸಿದರು.

"ನಗರದ ನಾಪಿತನೊಬ್ಬನಿಗೆ ಮಾತ್ರ ಅರಮನೆಗೆ ಪ್ರವೇಶವಿತ್ತು. ಅವನು ನಗರಕ್ಕೆ ಹೊಸಬ, ತರುಣ, ತಕ್ಕಮಟ್ಟಿಗೆ ರೂಪವಂತನೂ ಹೌದು. ಕ್ಷೌರ ಕಾರ್ಯದಲ್ಲಿ ಸಹಾಯವಾಗಲೆಂದು ವೈದ್ಯ ವೇದಾಂತಗಳ ಅಧ್ಯಯನ ಮಾಡಿದ್ದ. ನಾಪಿತನ ಈ ಕಲ್ಯಾಣ ಗುಣಗಳನ್ನು ತಿಳಿದೇ ಮಂತ್ರಿಮಂಡಲ ಅವನನ್ನು ರಾಜನ ನಿತ್ಯಸೇವೆಗೆ ನೇಮಿಸಿತ್ತು. ಕಾಲಕ್ರಮದಲ್ಲಿ ಅವನು ಆ ನರಭಕ್ಷಕ ರಾಜನ ವೈದ್ಯ, ಉಪದೇಶಿ, ಕೊನೆಗೆ ಆಪ್ತಸಚಿವ ಸ್ಥಾನಕ್ಕೂ ಏರಿದ.

"ಇದನ್ನೆಲ್ಲ ನೋಡುತ್ತಿದ್ದ ರಾಜಮಹಿಷಿ, ಈ ನರಭಕ್ಷಕ ರಾಜನ ಸಹವಾಸ ತನಗೆ ತಪ್ಪಬೇಕಾದರೆ ಈ ನಾಪಿತನಿಂದಲೇ" ಎಂದು ನಿರ್ಧರಿಸಿಕೊಂಡು ಮೋಹದ ಬಲೆ ಬೀಸಿದಳು.

"ಕನ್ಯೆಯಾಗಿದ್ದಾಗ ತಂದೆಯ ಮನೆಯಲ್ಲಿ ರಾಜಮಹಿಷಿಗೆ ಸಂಗೀತ ಪಾಠವಾಗಿತ್ತು. ಮದುವೆಯಾಗಿ ಗಂಡನ ಮನೆಗೆ ಹೋಗಿ ನರ್ತನ ಕಲಿತಳು. ನರಭಕ್ಷಕ ರಾಜನು ಅಪಹರಿಸಿ ತಂದಮೇಲೆ ಅರಮನೆಯ ದಾಸಿಯರಿಂದ ಗಣಿಕೆಯರ ವಿಲಾಸ ವಿಭ್ರಮ ವಂಚನೆಗಳನ್ನು ಕಲಿತಳು. ಇಂತಹ ರಸಪಾಕ ತಾನಾಗಿ ಬಂದು ತಟ್ಟೆಗೆ ಬಿದ್ದಾಗ ಬೇಡವೆನ್ನುವುದು ಯಾರಿಗೆ ಸಾಧ್ಯ? ಪಾಲಿಗೆ ಬಂದದ್ದು ಪಂಚಾಮೃತ ಎಂದು ಹೇಳಿಕೊಂಡು ನಾಪಿತನು ಮುಂದಿನ ಕಾರ್ಯಕ್ಕೆ ಸಿದ್ಧನಾದನು.

"ಒಂದು ದಿನ ಅವನು ಕ್ಷೌರ ಮಾಡುತ್ತಿದ್ದಾಗ ಕತ್ತಿ ಕೆಳಕ್ಕೆ ಸರಿದು ರಾಜನ ಕೊರಳಿಗೆ ಗಾಯವಾಯಿತು. ಹಾ ! ಎನ್ನುವುದರಲ್ಲಿ ರಾಜನ ತಲೆ ಕೆಳಗುರುಳಿತು. ಅರಮನೆಯ ದಾಸ ದಾಸಿಯರಿಗೆ ಸಾಕು ಸಾಕಾಗಿ ಹೋಗಿತ್ತು, ನರಭಕ್ಷಕ ರಾಜನ ಚಿತ್ರಹಿಂಸೆ. ಅವರೆಲ್ಲ ರಾಣಿಯ ಕಡೆ ಸೇರಿ, ರಾಜನ ದೇಹವನ್ನು ಅರಮನೆಯ ಉದ್ಯಾನದಲ್ಲಿ ಹೂತಿಟ್ಟರು. ನಾಪಿತನಿಗೆ ರಾಜನ ಪೋಷಾಕುಗಳನ್ನು ಹಾಕಿ, ಸಿಂಹಾಸನದ ಮೇಲೆ ಕುಳ್ಳಿರಿಸಿ ಮಂತ್ರಿ ಸಾಮಂತರಿಗೆ ಹೇಳಿ ಕಳುಹಿಸಿದರು. ರಾಜಮಹಿಷಿಯ ಗೌರೀಪೂಜೆಯ ಫಲವಾಗಿ ರಾಜನ ನರಮಾಂಸಭಕ್ಷಣೆ ನಿಂತು, ಎಲ್ಲರಂತೆ ಅವನೂ ಮನುಷ್ಯನಾಗಿದ್ದಾನೆ ಎಂದು ಎಲ್ಲ ಕಡೆ ಸುದ್ದಿ ಹರಡಿದರು.

"ಹೊಸ ರಾಜನನ್ನು ಕಂಡಾಗ ಮಂತ್ರಿ ಸಾಮಂತರಿಗೆ ಆನಂದವಾಯಿತು. ಅವರನ್ನು ಸ್ವಾಗತಿಸಿ ರಾಜ ಭಾಷಣ ಮಾಡುತ್ತ, ಶಾಸ್ತ್ರ ಪುರಾಣಗಳಿಂದ

ಶ್ಲೋಕಾರ್ಥಗಳನ್ನು ಉದಾಹರಿಸಿದಾಗ ಕಾಲಂಜರದ ಉದ್ಧಾರಕ್ಕಾಗಿ ಪರಶಿವನೇ ಅವತಾರ ಮಾಡಿದನೆಂದು ಭಾವಿಸಿದರು. ಕರ್ಣಾಕರ್ಣಿಯಾಗಿ ವಾಸ್ತವ ವಿಚಾರಗಳನ್ನು ತಿಳಿದಿದ್ದ ಮಂತ್ರಿವರ್ಗದವರೂ, 'ನಾವು ಮಾಡಬೇಕಾಗಿದ್ದ ಕಾರ್ಯವನ್ನು ರಾಜ ಮಹಿಷಿ ಈ ನಾಪಿತನಿಂದ ಮಾಡಿಸಿದಳು. ಯಾರಾದರೇನು ? ನಾವು ಹೇಳಿದಂತೆ ಕೇಳಿಕೊಂಡು, ನಮ್ಮ ಪ್ರಜಾಪೀಡಾಕಾರ್ಯಗಳಿಗೆ ಅಡ್ಡಿಬರದಿರುವ ರಾಜನು ನಮಗೆ ಬೇಕು. ಅದಕ್ಕೆ ಈ ನಾಪಿತ ಸರಿಯಾಗಿದ್ದಾನೆ,' ಎಂದು ಬಗೆದು ತಟಸ್ಥರಾದರು. ಮುಂದೆ ರಾಣಿಗೆ ಮಕ್ಕಳು ಮೊಮ್ಮಕ್ಕಳಾಗಿ ವಂಶವೃಕ್ಷ ಬೆಳೆದು ಕಾಲಂಜರದಿಂದ ಕರ್ಣಾಟಕದವರೆಗೆ ಹರಡಿತು.

"ಅಜ್ಞಾತ ನಾಪಿತನೊಬ್ಬನು ತನ್ನ ಕ್ಷೌರಕತ್ತಿಯ ಬಲದಿಂದ ರಾಜನಾದ್ದರಿಂದ ಆ ರಾಜವಂಶದ ಹೆಸರು ಕಟಚ್ಚೂರಿ, ಕಲಚೂರ್ಯ ಎಂದಾಯಿತು. ಆ ನಾಪಿತ ವಂಶದಲ್ಲಿ ಹುಟ್ಟಿದ ನೀನು ರಾಣಿಗೂ ದಾಸಿಗೂ ಇರುವ ಅಂತರವನ್ನು ತಿಳಿಯುವುದು ಹೇಗೆ ಸಾಧ್ಯ ? ಧಿಕ್ಕಾರ ನಿನ್ನ ಅವಿವೇಕಕ್ಕೆ !"

–ಎಂದು ಅಗ್ಗಳನು ಸುಖಾಸನದಿಂದೆದ್ದು ಬಟ್ಟಲಲ್ಲಿ ತುಂಬಿಟ್ಟಿದ್ದ ಮಧುವನ್ನು ರಪ್ಪನೆ ಕರ್ಣದೇವನ ಮುಖಕ್ಕೆರಚಿ ಒಂದೇ ಹಾರಿಗೆ ಮೊಗಶಾಲೆಯನ್ನು ಸೇರಿ, ಕೈಪಿಡಿಯ ಮೇಲೆ ನಿಂತು ಪಾರಿಜಾತದ ಕೊಂಬೆಗೆ ಹಾರಿದನು. ಕೊಂಬೆ ಕಟ ಕಟ ಶಬ್ದ ಮಾಡಿ ಕೆಳಗೆ ಬಾಗಿತು. ಅಗ್ಗಳನು ಕೆಳಗೆ ಧುಮುಕಿ ಉದ್ಯಾನದ ಅಂಚಿನಲ್ಲಿದ್ದ ಪೊದರುಗಳ ನಡುವೆ ಮರೆಯಾದನು. ಕೆಲವೇ ಕ್ಷಣದಲ್ಲಿ ಇಷ್ಟೆಲ್ಲ ನಡೆದುಹೋಯಿತು.

ಮರಿಗಳನ್ನು ಕಳೆದುಕೊಂಡ ಕಿರುಬದಂತೆ ವಿಕಟವಾಗಿ ಅರಚಿದನು ಕರ್ಣದೇವ. ಕೂಗು ಕೇಳಿ ಭಟರು ಓಡಿಬಂದರು. ಹೀಗಾಗುವುದೆಂದು ಮೊದಲೇ ತಿಳಿದಿದ್ದ ದಾಸಿ ಮಧುವನ್ನು ತಂದುಕೊಟ್ಟಾಗ ಬಾಗಿಲ ಹತ್ತಿರ ಅಲ್ಲಲ್ಲಿ ಚೆಲ್ಲಿದ್ದಳು. ಓಡಿಬಂದ ಮೊದಲ ಭಟನು ಅಂತಹ ಒಂದೆಡೆಯಲ್ಲಿ ಜಾರಿಬಿದ್ದನು. ಎರಡನೆಯ ಭಟನಿಗೆ ಅದೇ ಗತಿಯಾಯಿತು. ಬಿದ್ದು ಎದ್ದು ಅವರು ಎದುರಿಗೆ ನಿಂತಾಗ ಕರ್ಣದೇವನು ಕಣ್ಣು ಮುಖಗಳಿಗೆ ಬಿದ್ದಿದ್ದ ಮಧುವನ್ನು ಒರೆಸಿಕೊಳ್ಳುತ್ತ, ಹಿಡಿಸಲಾಗದ ಕ್ರೋಧದಿಂದ ಹೂಂಕರಿಸಿ ಮೊಗಶಾಲೆಯ ಕಡೆ ಕೈ ತೋರಿಸಿದನು.

ಭಟರು ತಿಳಿದರು, ಯಾರನ್ನು ಹಿಡಿಯಲು ಪಾನಶಾಲೆಯ ಸುತ್ತ ಕಾವಲಿದ್ದೆವೋ ಆ ವ್ಯಕ್ತಿ ಮೊಗಶಾಲೆಯಿಂದ ಕೆಳಗೆ ಹಾರಿ ತಪ್ಪಿಸಿಕೊಂಡನೆಂದು.

ಭಟ ನಾಯಕನು ಕೈಪಿಡಿಯ ಬಳಿ ನಿಂತು ನೋಡಿದನು. ರಾಜೋದ್ಯಾನ ನಿರ್ಜನವಾಗಿತ್ತು. ಆಗತಾನೆ ಉದಯಿಸುತ್ತಿದ್ದ ನವಮಿಯ ಚಂದ್ರನ ಅಲ್ಪ ಕಾಂತಿ

ಮರ ಗಿಡಗಳ ಮೇಲೆ ಬಿದ್ದು ಕತ್ತಲೆಯ ನೆರಳೊಡ್ಡುಗಳನ್ನು ಹರಡಿದ್ದವು. ಉದ್ಯಾನದ ಎಲ್ಲ ಕಡೆ ಹುಡುಕಲು ಭಟರನ್ನು ಕಳುಹಿಸಲು ನಾಯಕನು ಹವಣಿಸುತ್ತಿದ್ದಂತೆ ಕರ್ಣದೇವ ಅಲ್ಲಿಗೆ ಬಂದು,

"ಭಟರನ್ನು ಕಳುಹಿಸಿ ಗೊಂದಲಮಾಡಬೇಡ. ಅಣ್ಣನವರಿಗೆ ತಿಳಿದರೆ ಕೋಪ ಮಾಡುವರು. ತಪ್ಪಿಸಿಕೊಂಡ ಮನುಷ್ಯ ನಾಳೆ ತಾನಾಗಿ ನಮಗೆ ಸಿಕ್ಕಿಬೀಳುತ್ತಾನೆ," ಎಂದು ತಡೆದನು.

ಉದ್ಯಾನದ ಅಂಚಿನಲ್ಲಿದ್ದ ಹೊದರಿನ ಮರೆಯಲ್ಲಿ ನಿಂತು ಅಗ್ಗಳನು ಮೊಗಶಾಲೆಯಲ್ಲಿ ನಡೆದುದನ್ನು ನೋಡಿದನು. ತನ್ನನ್ನು ಹುಡುಕಲು ಭಟರು ಉದ್ಯಾನಕ್ಕೆ ಬಂದರೆ ಏನು ಮಾಡಬೇಕು ಎಂಬುದನ್ನು ಆಗಲೆ ಅವನು ಯೋಚಿಸಿದ್ದನು. ಪೊದರುಗಳ ಮರೆಯಲ್ಲಿ ರಾಜಮಾರ್ಗವನ್ನು ದಾಟಿ ಸುಲಭವಾಗಿ ನಗರವನ್ನು ಸೇರಬಹುದು. ನಗರದ ಮನೆ ಮಠ ಸತ್ರ ಧರ್ಮಶಾಲೆಗಳು ಪ್ರವಾಸಿಗಳಿಂದ ತುಂಬಿದ್ದವು. ಅವರ ನಡುವೆ ಸಂದಣಿಯಲ್ಲಿ ರಾತ್ರಿ ಕಳೆಯಬೇಕಾಗುವುದು.

ಆದರೆ ಆ ಕೂಡಲೆ ಉದ್ಯಾನವನ್ನು ಬಿಡುವುದು ಅಗ್ಗಳನಿಗೆ ಇಷ್ಟವಿರಲಿಲ್ಲ. ಬಿಡಾರದಲ್ಲಿ ರಾಣಿ ಕಾಮೇಶ್ವರಿ ವಿಪತ್ತಿನಲ್ಲಿ ಸಿಲುಕಿರುವಾಗ ರಾಣಿಯ ಮನೆಹೆಗ್ಗಡೆಯಾದ ನಾನು ಪ್ರಾಣ ಭಯದಿಂದ ನಗರಕ್ಕೆ ಓಡುವುದೇ ಎಂದು ಅಳುಕಿದನು.

ಸುಮಾರು ಹೊತ್ತು ಕಳೆದರೂ ಭಟರು ಬಾರದಿರುವುದನ್ನು ಕಂಡು, ಉದ್ಯಾನದಲ್ಲಿ ನನ್ನನ್ನು ಹುಡುಕುವ ಯೋಚನೆಯನ್ನೇ ಅವರು ಬಿಟ್ಟಿರಬೇಕು ಎಂದು ಅಗ್ಗಳನು ತಿಳಿದನು. ಅರಮನೆಯ ದೀಪಗಳು ಆರಿ, ಜನರು ನಿದ್ರೆ ಮಾಡಿದ ಮೇಲೆ ಮೊಗಶಾಲೆ ವಾತಾಯನಗಳ ಮುಖಾಂತರ ರಾಣಿಯ ಬಿಡಾರವನ್ನು ಪ್ರವೇಶಿಸಬಹುದೆಂದೂ, ಏನೇ ಆಗಲಿ ರಾಣಿಯನ್ನು ಕಂಡು ಮಾತಾಡಿದಲ್ಲದೆ ಉದ್ಯಾನದಿಂದ ಹೊರಗೆ ಹೋಗಲಾಗದೆಂದೂ ನಿರ್ಧರಿಸಿಕೊಂಡು ಹೊದರಿನಡಿಯಲ್ಲಿ ಅಡಗಿ ಕುಳಿತನು.

ಅರಮನೆಯ ಆ ಪಾರ್ಶ್ವದ ಉಪ್ಪರಿಗೆಯಲ್ಲಿ ಆರು ದೊಡ್ಡ ಮೊಗಶಾಲೆಗಳೂ, ಅನೇಕ ವಾತಾಯನ ಜಾಲಂದ್ರಗಳೂ ಇದ್ದವು. ಕೆಳಗಿನ ಅಂತಸ್ತು ಅದೇ ಮಾದರಿಯಲ್ಲಿ ರಚಿತವಾಗಿತ್ತು. ಅವುಗಳಲ್ಲಿ ಕೆಲವು ಕತ್ತಲಾಗಿದ್ದವು. ಇನ್ನುಳಿದ ಮೊಗಶಾಲೆ ವಾತಾಯನಗಳು, ಅವುಗಳ ಹಿಂದಿನ ಕೊಠಡಿಗಳಲ್ಲಿ ಉರಿಯುತ್ತಿದ್ದ ದೀಪಮಾಲಿಕೆಗಳ ಬೆಳಕನ್ನು ಹೊರಗೆ ಚೆಲ್ಲಿ, ಉದ್ಯಾನದ ಎಲ್ಲ ಕಡೆ ಬೆಳಕು ನೆರಳಿನ ಚಿತ್ರಗಳನ್ನು ಬರೆದಿದ್ದವು. ಎಲ್ಲಿಯೂ ಕಾವಲುಗಾರರ ಸುಳಿವಿರಲಿಲ್ಲ.

ಅರಮನೆಯ ಒಂದು ಕೊನೆಯಲ್ಲಿ ದೀಪಮಾಲಿಕೆಗಳಿಂದ ಬೆಳಗುತ್ತಿದ್ದ ಮೊದಲ ಮೊಗಶಾಲೆ, ತಾನು ತಪ್ಪಿಸಿಕೊಂಡು ಬಂದ ಪಾನಶಾಲೆಗೆ ಸೇರಿದುದೆಂದು ಅಗ್ಗಳನು ತಿಳಿದನು. ಎರಡು ಮೂರನೆಯ ಮೊಗಶಾಲೆಗಳ ಪ್ರಕಾಶಮಾನವಾದ ಬೆಳಕು, ಅವು ಸಭಾಂಗಣಕ್ಕೆ ಸೇರಿದವುಗಳೆಂಬುದನ್ನು ಸೂಚಿಸುತ್ತಿದ್ದವು. ಉಳಿದ ಮೂರು ಮೊಗಶಾಲೆಗಳ ಹಿಂದೆ ರಾಣಿಯ ಬಿಡಾರವಿರಬೇಕು. ಆ ದಿನ ಪೂರ್ವಾಹ್ನದಲ್ಲಿ ರಾಣಿಯ ದರ್ಶನಕ್ಕೆ ಹೋಗಿದ್ದಾಗ ವಾತಾಯನದಿಂದ ಶೂಲದ ಮರವನ್ನು ತೋರಿಸಿದುದು ಅಗ್ಗಳನಿಗೆ ನೆನಪಾಯಿತು. ಎಲ್ಲ ಮೊಗಶಾಲೆಗಳಿಂದ ಆಚೆ, ಅರಮನೆಯ ಇನ್ನೊಂದು ಕೊನೆಯಲ್ಲಿ ಮಹಾದ್ವಾರ. ಇಷ್ಟು ಹೊತ್ತಿಗೆ ರಾಣಿ ಸಭಾಂಗಣದಿಂದ ಹೊರಟು ಬಿಡಾರವನ್ನು ಸೇರಿರಬೇಕು.

ಕರ್ಣದೇವನು ಹೇಳಿದ್ದು ನಿಜವಾದರೆ–

ರಾಣಿ ಕಾಮೇಶ್ವರಿಯ ಜೀವಿತದಲ್ಲಿ ಇದೆಂತಹ ದುರ್ದಿನ !

ಚಾಲುಕ್ಯ ಅರಸೊತ್ತಿಗೆಯನ್ನು ಪುನಃ ಪಡೆಯಲು ಕಳೆದ ಒಂದು ವರ್ಷದಿಂದ, ರಾಣಿ ಕಾಮೇಶ್ವರಿ ಯಾರ ವಿರುದ್ಧ ಒಳಸಂಚು ನಡೆಸುತ್ತಿದ್ದಳೋ ಆ ಬಿಜ್ಜಳನ ಅರಮನೆಯಲ್ಲೇ ಈಗ ಅವಳು ಸ್ವಯಂ ಬಂದಿಯಾಗಿದ್ದಾಳೆ. ದುರ್ದೈವವೆಂದರೆ, ಬಂದಿಯೆಂಬ ಅರಿವೂ ರಾಣಿಗಿರುವುದಿಲ್ಲ.

ಎಂಥ ವಿಚಿತ್ರ ಪರಿಸ್ಥಿತಿ ಇದು !

ಸಿಡಿಲಂತೆ ಎರಗಿ ಬರುತ್ತಿರುವ ಈ ವಿಪತ್ತಿನಿಂದ ರಾಣಿಯನ್ನು ರಕ್ಷಿಸುವುದು ಕುಮಾರ ಸೋಮೇಶ್ವರನಿಗೆ ಮಾತ್ರವೇ ಸಾಧ್ಯ. ಅವನೀಗ ಮಂಗಳವೇಡೆಯ ಮಹಾ ಮಂಡಲೇಶ್ವರ, ಚಾಲುಕ್ಯ ರಾಜ್ಯದ ಸಾಮಂತರಲ್ಲಿ ಹೆಚ್ಚು ಪ್ರಭಾವಶಾಲಿ. ಇದುವರೆಗೆ ಕಲ್ಯಾಣದ ಬಳಿಯಿದ್ದ ಅವನ ದೊಡ್ಡ ಸೈನ್ಯ ಈಗ ಮಂಗಳವೇಡೆಗೆ ಬಂದು ನಗರದ ಹೊರಗೆ ಬೀಡು ಬಿಟ್ಟಿದೆ. ನಾಳಿನ ವಿಜಯೋತ್ಸವದ ಮೆರವಣಿಗೆ ಮುಗಿಯುತ್ತಲೆ ಆ ಮಹಾಸೈನ್ಯ ಮಂಗಳವೇಡೆಯ ಕೋಟೆಯನ್ನು ಪ್ರವೇಶಿಸುವುದು. ಕರ್ಣದೇವನ ಆಧೀನಸ್ಥವಾದ ಬಿಜ್ಜಳನ ಸೈನ್ಯ ಪಡೆಗಳು ಕಲ್ಯಾಣಕ್ಕೆ ಮರಳುವವು. ಮಂಗಳವೇಡೆಯ ಸಾಮಂತರು, ನಾಗರಿಕರು, ಈ ಸೈನ್ಯ ಪರಿವರ್ತನೆಯನ್ನು ಉತ್ಸಾಹ ಆತಂಕಗಳ ಮಿಶ್ರಭಾವದಿಂದ ಎದುರು ನೋಡುತ್ತಿದ್ದರೆಂಬುದನ್ನು ಅಗ್ಗಳನು ತಿಳಿದಿದ್ದನು.

ಆದರೆ ರಾಜ್ಯಭಾರ ನಿರೂಪಣೆಯ ಮೊದಲ ಹಂತದಲ್ಲಿಯೇ ತಂದೆಯ ವಿರುದ್ಧ ರಾಣಿಯ ಸಹಾಯಕ್ಕೆ ಬರಲು ಸೋಮೇಶ್ವರನು ಒಪ್ಪುವನೆ?

ಈ ಎಲ್ಲ ವಿಚಾರಗಳನ್ನು ತನ್ನಲ್ಲಿ ತಾನು ಅಳೆದು ಸುರಿದು ಯೋಚಿಸುತ್ತ

ಅಗ್ಗಳನು ಹೊದರ ಮರೆಯಲ್ಲಿ ಅಡಗಿ ಕುಳಿತಿದ್ದಂತೆ ಇರುಳ ಮೊದಲ ಜಾಮ ಮುಗಿದ ಗಂಟೆ ಹೊಡೆಯಿತು, ಮೊಗಶಾಲೆ ವಾತಾಯನಗಳ ಬೆಳಕುಗಳು ಒಂದೊಂದಾಗಿ ಆರಿದವು. ಪಾನಶಾಲೆಯ ದೀಪಗಳು ಮಾತ್ರ ಉರಿಯುತ್ತಿದ್ದವು. ಕರ್ಣದೇವನ ಏಕಾಂತ ಪಾನಗೋಷ್ಠಿ ಇನ್ನೂ ನಡೆಯುತ್ತಿದೆಯೆಂದು ಅಗ್ಗಳನು ತಿಳಿದನು.

ಆಗ ಅರಮನೆಯ ಮಹಾದ್ವಾರದಲ್ಲಿ ತುತ್ತೂರಿಯ ಸದ್ದಾಗಿ ಎಂಟು ಜನ ಭಟರ ಒಂದು ಸಣ್ಣ ಪಡೆ ಆ ಪಾರ್ಶ್ವಕ್ಕೆ ಬಂದಿತು. ಕೆಳ ಅಂತಸ್ತಿನ ಮೊಗಶಾಲೆಗಳಲ್ಲಿ ಭಟರು ಪಹರೆಗೆ ನಿಂತರು. ಇರುಳು ಮೂರು ಜಾಮಗಳಲ್ಲಿ ಅರಮನೆಯ ಸುತ್ತ ಪಹರೆ ಕೊಡುವುದು ಅಲ್ಲಿನ ಪದ್ಧತಿಯಾಗಿತ್ತು. ಮೊಗಶಾಲೆಯನ್ನೇರಿ ರಾಣಿಯ ಬಿಡಾರವನ್ನು ಪ್ರವೇಶಿಸುವ ಅಗ್ಗಳನ ಹಂಚಿಕೆ ಇದರಿಂದ ಕುಸಿಯಿತು. ನಿರಾಶೆಯ ದಗ್ಧದೃಷ್ಟಿಯಿಂದ ಮೊಗಶಾಲೆಗಳತ್ತ ನೋಡುತ್ತ ಅವನು ಹೊದರಿನಡಿಯ ನೆಲದ ಮೇಲೆ ಮಲಗಿದನು.

ಸುಮಾರು ಎರಡು ಗಳಿಗೆ ಕಳೆದಿರಬಹುದು. ಆಗ ಹೆಂಗಸೊಬ್ಬಳು ಮಹಾದ್ವಾರದ ಕಡೆಯ ಎರಡನೆಯ ಮೊಗಶಾಲೆಗೆ ಬಂದು, ಕೈಪಿಡಿಯ ಕಂಬಕ್ಕೆ ಒರಗಿ, ಶೂಲದ ಮರವಿದ್ದ ಕಡೆಗೆ ಮುಖ ತಿರುಗಿಸಿ ನೋಡುತ್ತ ನಿಂತಳು. ನವಮಿಯ ಚಂದ್ರನ ಕ್ಷೀಣ ಕಿರಣಗಳು ಶೂಲದ ಮರದ ಮೇಲೆ ಬಿದ್ದು, ಜೋತಾಡುತ್ತಿದ್ದ ನಾಡಕವಿಯ ದೇಹ ಮಸಕು ಮಸಕಾಗಿ ಕಂಡಿತು. ಹೆಂಗಸು ತಟ್ಟನೆ ಹಿಂದಕ್ಕೆ ಸರಿದು ಮೊಗಶಾಲೆಯ ಕಂಬಗಳ ನಡುವೆ ಮರೆಯಾದಳು.

ಅಗ್ಗಳನು ಚಮತ್ಕೃತನಾದನು. ಹೆಂಗಸು ರಾಣಿ ಕಾಮೇಶ್ವರಿಯೇ ಆಗಿರಬೇಕು. ಆ ದಿನ ದರ್ಶನಕ್ಕೆ ಹೋಗಿದ್ದಾಗ ನಡೆದ ಮಾತುಕಥೆಗಳನ್ನು ರಾಣಿ ಇನ್ನೂ ಮರೆತಿಲ್ಲ. ಬಿಡಾರದ ಏಕಾಂತದಲ್ಲಿ ರಾಣಿ ಚಿಂತಿಸುತ್ತ ಕುಳಿತಾಗ ಶೂಲದ ಮರದ ನೆನಪಾಗಿ ಮೊಗಶಾಲೆಗೆ ಬಂದದ್ದು ಅಸಂಭವವಲ್ಲ. ದಾಸಿಯರು ಕರೆದದ್ದನ್ನು ಕೇಳಿ ಅವಳು ತಟ್ಟನೆ ಒಳಗೆ ಹೋಗಿರಬೇಕು.

ಎರಡನೆಯ ಪ್ರಹರದ ಘಂಟೆ ಹೊಡೆದಾಗ ಎಲ್ಲೆಡೆ ನಿಶ್ಯಬ್ದ. ಪಾನಶಾಲೆಯ ದೀಪಗಳು ಆರಿ ಸುಮಾರು ಹೊತ್ತಾಗಿತ್ತು. ರಾಣಿಯ ಬಿಡಾರದಲ್ಲಿ ಮಾತ್ರ ಕೆಲವು ದೀಪಗಳು ಮಸಕಾಗಿ ಉರಿಯುತ್ತಿದ್ದವು. ಹೊರಗೆ ಪ್ರಹರಿಗಳು ಶತಪಥ ತಿರುಗುತ್ತಿದ್ದರು. ಅವರು ಪೊದರುಗಳ ಹತ್ತಿರ ಬರುವುದಿಲ್ಲವೆಂದು ತಿಳಿದಮೇಲೆ ಅಗ್ಗಳನು ಮಲಗಿದ್ದಂತೆ ಕಣ್ಣುಗಳನ್ನು ಮುಚ್ಚಿ ವಿಶ್ರಾಂತಿಗೆ ಅನುವಾದನು.

ಜೊಂಪು ಹತ್ತಿ ಮೂರನೆಯ ಜಾಮದ ಘಂಟೆ ಹೊಡೆದಾಗ ಅವನಿಗೆ

ಎಚ್ಚರವಾಯಿತು. ಆಗಲೂ ಬಿಡಾರದಲ್ಲಿ ದೀಪಗಳು ಉರಿಯುತ್ತಿರುವುದನ್ನು ಕಂಡು ಅಗ್ಗಳನು, "ರಾಣಿಯ ಜಾಗರಣದ ಕಾರಣವೇನು ?" ಎಂದು ಚಿಂತಿಸಿದನು.

ಇನ್ನೆರಡು ಗಳಿಗೆ ಕಳೆದು ಪೂರ್ವ ದಿಗಂತದಲ್ಲಿ ಬೆಳಗಿನ ಕೆಂಜಾಯೆ ಹರಡುತ್ತಿದ್ದಂತೆ ಅರಮನೆಯ ಕೆಳಅಂತಸ್ತಿನಲ್ಲಿದ್ದ ಉಗ್ರಾಣ ಪಾಕಶಾಲೆಗಳಲ್ಲಿ ದೀಪಗಳು ಹೊತ್ತಿಸಲ್ಪಟ್ಟು ದಾಸ ದಾಸಿಯರ ತಿರುಗಾಟಕ್ಕೆ ಪ್ರಾರಂಭವಾಯಿತು. ಕಾವಲು ಭಟರು ಮೊಗಶಾಲೆಗಳಲ್ಲಿ ಕುಳಿತು ತೂಕಡಿಸುತ್ತ ಸರದಿ ಮುಗಿಸಿಕೊಂಡು ಮನೆಗಳಿಗೆ ಹೋಗಲು ಅನುವಾಗುತ್ತಿದ್ದರು.

ಅಗ್ಗಳನು ಎದ್ದುನಿಂತು ಜೊಂಪು ಹಿಡಿದಿದ್ದ ಕೈಕಾಲುಗಳನ್ನಾಡಿಸಿ ಬೆಳಕು ಹರಿಯುವ ಮೊದಲೇ ಹೊದರುಗಳ ಮರೆಯಲ್ಲಿ ರಾಜಮಾರ್ಗವನ್ನು ಹಾದು ನಗರವನ್ನು ಸೇರಲು ಅನುವಾಗುತ್ತಿದ್ದಾಗ ರಾಣಿಯ ಬಿಡಾರದ ಅಡಿಯಲ್ಲಿದ್ದ ಮೊಗಶಾಲೆಯ ಬಾಗಿಲಿಂದ ಹೆಂಗಸೊಬ್ಬಳು ಐದಾರು ವರ್ಷಗಳ ಬಾಲಕನೊಬ್ಬನ ಕೈಹಿಡಿದು ಉದ್ಯಾನಕ್ಕೆ ಬರುತ್ತಿರುವುದನ್ನು ಕಂಡನು. ಅವರ ಉಡಿಗೆ ಅರಮನೆಯ ದಾಸಿಯರಿಗೆ ತಕ್ಕಂತಿದ್ದವು. ಊಳಿಗದವರೆಂದು ಕಾವಲಿದ್ದ ಭಟನು ಅವರನ್ನು ತಡೆಯಲಿಲ್ಲ.

ಹೆಂಗಸಿನ ಮೈ ನಿಲುವು, ನಡಿಗೆ, ತನಗೆ ಎಲ್ಲಿಯೋ ಪರಿಚಿತವೆಂದು ಅಗ್ಗಳನು ಭಾವಿಸಿದನು. ಅವರು ಉದ್ಯಾನವನ್ನು ದಾಟಿ ರಾಜಮಾರ್ಗದಿಂದ ನಗರಕ್ಕೆ ಹೋಗುತ್ತಿದ್ದಂತೆ ಅಗ್ಗಳನು ತಾನು ವಿಪತ್ತಿನಲ್ಲಿರುವೆನೆಂಬುದನ್ನು ಮರೆತು, ಪೊದರ ಮರೆಯಿಂದ ಹೊರಗೆ ಬಂದು ಅವಳನ್ನು ಹಿಂಬಾಲಿಸಿದನು.

* * *

"ರಾಜ್ಯಕೋಶ ಅರಸೊತ್ತಿಗೆಗಳನ್ನು ಪಗಡೆಯಾಟದಲ್ಲಿ ಸೋಲುವುದು, ಗೆಲ್ಲುವುದು ಪುರಾಣಯುಗದಲ್ಲಿ ಸತ್ಯಘಟನೆಗಳಾಗಿರಬಹುದು. ಕಥೆ ಕಾವ್ಯಗಳಲ್ಲಿ ಅದರ ವರ್ಣನೆಯನ್ನು ಓದುತ್ತೇವೆ. ಆದರೆ ವಾಸ್ತವ ಜೀವನದಲ್ಲಿ ಹಾಗಾಗುವುದು ಸಾಧ್ಯವಲ್ಲ." –ಎಂದು ತನಗೆ ತಾನೆ ಹೇಳಿಕೊಳ್ಳುತ್ತ ರಾಣಿ ಕಾಮೇಶ್ವರಿ ಬಿಡಾರವನ್ನು ಸೇರಿದಳು.

"ಹಾಗಾದರೆ ನಾನು ಪಗಡೆಯಾಟದಲ್ಲಿ ಬಿಜ್ಜಳನನ್ನು ಸೋಲಿಸಿ ರಾಜ್ಯಕೋಶಗಳನ್ನು ಗೆದ್ದದ್ದು ನಿಜವಲ್ಲವೆ?" –ಎಂದು ಪ್ರಶ್ನಿಸಿತು, ಅವಳ ಅಂತರಂಗದ ಇನ್ನೊಂದು ಮುಖ.

"ನನ್ನನ್ನು ವಂಚಿಸಲು ಬಿಜ್ಜಳನು ಹೂಡಿದ ತಂತ್ರ ಅದು. ಇದನ್ನು ತಿಳಿದೇ ನಾನು, ಸರ್ವಾಧಿಕಾರಿಯ ರಾಜಮಕುಟ ಮುದ್ರೆಯುಂಗುರಗಳನ್ನು ಅವನಿಗೇ

ಹಿಂದಿರುಗಿ ಕೊಟ್ಟದ್ದು. ನುಂಗಲಾಗದ ತುತ್ತನ್ನು ನುಂಗಲು ಪ್ರಯತ್ನಿಸಿದಾಗ ತುತ್ತು ಗಂಟಲಲ್ಲಿ ಸಿಲುಕಿ ಪ್ರಾಣಾಪಾಯ ಉಂಟಾಗಬಹುದು. ಅಂತಹ ತಿಳಿಗೇಡಿ ಹೆಣ್ಣಲ್ಲ ನಾನು," –ಎಂದು ಉತ್ತರಿಸಿತು ರಾಣಿಯ ಮೊದಲ ಮುಖ.

"ಹಾಗಾದರೆ ನೀನು ಬೆಡಗು ಬಿನ್ನಾಣಗಳಿಂದ ಬಿಜ್ಜಳನ ಮೇಲೆ ಮೋಹದ ಬಲೆ ಬೀಸಿದೆಯೇಕೆ ?"

"ಬೆಡಗು ಬಿನ್ನಾಣಗಳು ಹೆಣ್ಣಿಗೆ ಸಹಜವಾದ ಅಸ್ತ್ರಗಳು. ಇಚ್ಛೆ ಇರಲಿ, ಇಲ್ಲದಿರಲಿ, ಸಮಯಾಸಮಯಗಳಲ್ಲಿ ಅವುಗಳ ಆಸ್ಫಾಲನೆ ನಡೆಯುವುದು. ಬೆಂಕಿಯು ಸುಡುವಂತೆ, ಗಾಳಿ ಬೀಸುವಂತೆ, ಸೂರ್ಯನು ಬೆಳಗುವಂತೆ ಅದೊಂದು ಸ್ವಾಭಾವಿಕ ಕಾರ್ಯ. ಅದರಲ್ಲಿ ನನಗಾವ ಹೆಚ್ಚಿನ ಉದ್ದೇಶವೂ ಇರಲಿಲ್ಲ."

"ಇಚ್ಛೆಯಿರಲಿ, ಇಲ್ಲದಿರಲಿ, ನಿನ್ನ ವರ್ತನೆ ಬಿಜ್ಜಳನ ಕಾಮಾಸಕ್ತಿಯನ್ನು ಕೆರಳಿಸಿದೆ. ಅದರ ದುಷ್ಟ ಫಲ ನಿನ್ನನ್ನು ಬಿಡುವುದಿಲ್ಲ."

"ಈಗ ಬಿಜ್ಜಳನು ನನ್ನ ಸರ್ವಾಧಿಕಾರಿ, ನನ್ನ ನೆಚ್ಚಿನ ಗರುಡ. ಅವನಿಂದ ನನಗಾವ ಭಯವೂ ಇರುವುದಿಲ್ಲ."

"ಸರ್ವಾಧಿಕಾರಿ ನಿನ್ನನ್ನು ಮೋಸದಿಂದ ಸೆರೆ ಹಿಡಿಯಬಹುದು. ನೆಚ್ಚಿನ ಗರುಡ ಮೋಹದ ಗೆಳೆಯನಾಗಲು ಹವಣಿಸಬಹುದು. ನೀನು ವಿಪತ್ತಿನಲ್ಲಿ ಬಿದ್ದಿರುವೆ, ರಾಣಿ."

"ಶಂಕಿಸುವುದು ನಿನ್ನ ಸ್ವಭಾವ, ನಿಶ್ಶಂಕೆಯಿಂದಿರುವುದು ನನ್ನ ಸ್ವಭಾವ. ನಾವಿಬ್ಬರೂ ಒಂದೇ ಮನಸ್ಸಿನ ಎರಡು ಮುಖಗಳು. ನಡೆಯಬೇಕಾದ ಕಾರ್ಯ ನಡೆದೇ ನಡೆಯುವುದು. ಶಂಕೆ ನಿಶ್ಶಂಕೆಗಳು ಅದನ್ನು ತಡೆಯಲಾರವು. ಅದಕ್ಕಾಗಿ ನಾವೇಕೆ ಹೋರಾಡಬೇಕು?"

ಎಂದು ಕಾಮೇಶ್ವರಿ ಅಂತರಂಗದ ತಳಮಳವನ್ನು ಕೊನೆಗಾಣಿಸಿ, ಸಭಾಂಗಣಕ್ಕಾಗಿ ಧರಿಸಿದ್ದ ಆಭರಣಗಳನ್ನು ತೆಗೆದಿಡುತ್ತಿದ್ದ ಉಷಾವತಿಯ ಕಡೆ ತಿರುಗಿ, "ಪ್ರೇಮಾರ್ಣವ ಏನು ಮಾಡುತ್ತಿದ್ದಾನೆ?" ಎಂದು ಕೇಳಿದಳು.

"ಆಗಲೆ ಊಟ ಮಾಡಿಸಿ ಮಲಗಿಸಿದೆ. ನಿದ್ರೆ ಮಾಡುತ್ತಿದ್ದಾನೆ."

"ಅಗ್ಗಳದೇವರು ಬಂದಿದ್ದರೆ?"

"ನಿಮ್ಮ ಸಂಗಡ ಸಭಾಂಗಣಕ್ಕೆ ಹೋದವರು ಹಿಂದಿರುಗಲಿಲ್ಲ."

ರಾಣಿ ಮೌನ.

"ಸಭಾಂಗಣದಲ್ಲಿ ಏನು ನಡೆಯಿತು, ರಾಣೀಜಿ ?"

"ಅದೊಂದು ದೊಡ್ಡ ಕಥೆ, ಉಷಾ. ನಾಳೆ ಎಲ್ಲವನ್ನೂ ಹೇಳುತ್ತೇನೆ. ಈಗ ಆರೋಗಣೆಗೆ ಸಿದ್ಧಪಡಿಸು."

ಬಿಡಾರದ ಕೆಳಗೆ ಅಡಿಗೆಯ ಸಾಲು. ರಾಣಿಯ ದಾಸಿಯರು ಬೇಕಾದ ಭಕ್ಷ್ಯ ಭೋಜನಗಳನ್ನು ಮಾಡಿಟ್ಟಿದ್ದರು. ಒಡತಿಯ ಕೈಕಾಲು ತೊಳೆಸಿ ಉಷಾವತಿ ಪಾರ್ಶ್ವದ ಕೊಠಡಿಯಲ್ಲಿ ಆರೋಗಣೆಗೆ ಅಣಿಮಾಡಿದಳು.

ಬಡಿಸಿದ ತಿನಿಸುಗಳ ರುಚಿ ನೋಡಿ ಏನನ್ನೂ ತಿನ್ನದೆ ಎದ್ದುಬಿಟ್ಟಳು ಕಾಮೇಶ್ವರಿ. ಮನಸ್ಸಿನ ತಳಮಳ ಮತ್ತೆ ಮರುಕಳಿಸಿತ್ತು.

ವಾಸಗೃಹದ ಮಂಚದ ಮೇಲೆ ದಿಂಬುಗಳಿಗೊರಗಿ ಅವಳು ಕ್ಷಣಕಾಲ ಮಲಗಿದಳು, ಎದ್ದು ಶತಪಥ ತಿರುಗಿದಳು. ಆ ಅಜ್ಞಾತ ಗ್ರಾಮ್ಯಕವಿಯ ಹಾಡಿನ ನುಡಿಯೊಂದರ ನೆನಪಾಯಿತು.

ತೈಲವಿಲ್ಲದ ದೀಪ, ಗಂಡನಿಲ್ಲದ ತಾಪ,
ಹೌಹಾರುತಿದ್ದಾಳ ಲಕ್ಕಿ.
ಬಿಜ್ಜಳನ ಬಿಡುತಾಳ. ತೊಡೆಯೇರಿ ಕುಳಿತಾಳ,
ಇಬ್ಬರಿಗೂ ಮಕ್ಕಿಕಾ ಮಕ್ಕಿ !

ಭಾಷೆ, ಛಂದಸ್ಸು, ಶ್ಲೀಲ, ಅಶ್ಲೀಲಗಳ ಪರಿವೆಯೂ ಇಲ್ಲದೆ ಎಷ್ಟೊಂದು ಸ್ವಾಭಾವಿಕವಾಗಿ ನುಡಿದಿದ್ದಾನೆ ಆ ನಾಡ ಕವಿ! ಬಿಜ್ಜಳನ ತೊಡೆಯೇರಲು ಬಯಸಿದೆನೇ ನಾನು? ನಮ್ಮ ವರಸಾಮ್ಯ "ಮಕ್ಕಿಕಾ ಮಕ್ಕಿ" ಎನ್ನುವಷ್ಟು ಈಡುಜೋಡಾಗಿದೆಯೇ?

ವಿದ್ಯೆಯ ಗಂಧವಿಲ್ಲದೆ ಕವಿಯಾಗಲೆಳಸುವ ಪಾಮರನಿಗೂ ಒಲಿಯುವ ಹೆಣ್ಣು ಸರಸ್ವತಿ ! ಮಾನವನ ಆಸೆ ಆಕಾಂಕ್ಷೆಗಳಿಗೆ ಅಧಿದೇವತೆಯಾಗಿ ಸರಸ್ವತಿಯನ್ನು ಸೃಷ್ಟಿಸಿದ ಬ್ರಹ್ಮದೇವನೇ ಅವಳ ಕಾಮದೇವನಾದದ್ದು ಹೇಗೆ? ಸರಸ್ವತಿಯ ಸ್ವೈರವರ್ತನೆಯನ್ನು ಸೂಚ್ಯವಾಗಿ ನಿರ್ದೇಶಿಸುವುದು ಆ ಪುರಾಣ ಕಥೆಯ ಉದ್ದೇಶವೆ?

ಸರಸ್ವತಿಯ ರಮ್ಯ ರೋಚಕ ಲಾವಣ್ಯಮಯ ಲಜ್ಜಾಹೀನ ಪ್ರತಿಸೃಷ್ಟಿಯೇ ಲಕ್ಷ್ಮೀ. ಮೂಲದಿಂದ ಬೇರೆಯಾಗುವುದು ಪ್ರಯತ್ನಿಸಿದರೂ ಸಾಧ್ಯವಲ್ಲ ಅವಳಿಗೆ. ಏಕಕಾಲದಲ್ಲಿ ಈ ಇಬ್ಬರು ಸ್ವೈರಿಣಿಯರನ್ನು ಒಲಿಸಲು ಪ್ರಯತ್ನಿಸಿ ಶೂಲಕ್ಕೇರಿದನು ಆ ನತದೃಷ್ಟ ಕವಿ,

–ಎಂದು ಯೋಚಿಸುತ್ತ ಕಾಮೇಶ್ವರಿ ವಾತಾಯನದ ಬಳಿ ಹೋದಳು. ಹೊರಗೆ ಗಾಡಾಂಧಕಾರ, ಏನೂ ಕಾಣುತ್ತಿರಲಿಲ್ಲ. ಬಿಡಾರದ ಹೊರಗಿನ ಮೊಗಸಾಲೆಯಲ್ಲಿ ನಿಂತು ನೋಡಿದರೆ, ಬೆಳುದಿಂಗಳ ಬೆಳಕಿನಲ್ಲಿ ಶೂಲದ ಮರ ಕಾಣಬಹುದು.

ಕಾಮೇಶ್ವರಿ ಬಿಡಾರದ ಬಾಗಿಲನ್ನು ತೆರೆದು ಹೋರಗೆ ಹೋದಳು. ಉಪ್ಪರಿಗೆಯ ಉದ್ದಕ್ಕೂ ಇದ್ದ ಮುಚ್ಚುದಾರಿ ಜನಶೂನ್ಯ. ದಾರಿಯ ಆ ಕೊನೆಯಲ್ಲಿ ತೂಗುದೀಪವೊಂದು ಮಂದಕಾಂತಿಯಿಂದ ಉರಿಯುತ್ತಿತ್ತು.

ಮೆಲ್ಲನೆ ನಡೆಯುತ್ತ ಮುಚ್ಚುದಾರಿಯನ್ನು ಹಾದು ಕಾಮೇಶ್ವರಿ ಮೊಗಶಾಲೆಗೆ ಬಂದಳು. ಕೈಪಿಡಿಯ ಕಂಬಕ್ಕೆ ಒರಗಿ ನಿಂತು ಶೂಲದ ಮರವಿದ್ದ ಕಡೆ ನಿಟ್ಟಿಸಿ ನೋಡಿದಳು.

ನವಮಿಯ ಚಂದ್ರನ ಮಂದಕಿರಣಗಳಲ್ಲಿ, ಆಗಾಗ ಶೂಲದ ಮರ ಸ್ಪಷ್ಟವಾಗಿ ಕಾಣುತ್ತಿತ್ತು. ಜೋತಾಡುತ್ತಿದ್ದ ದೇಹ ಗಾಳಿಯಲ್ಲಿ ಅಲುಗಿತು. ಕಾಮೇಶ್ವರಿ ಕಂಪಿಸಿದಳು!

ರಾಣಿ !

ಯಾರೋ ಕೂಗಿದಂತಾಗಿ ಕಾಮೇಶ್ವರಿ ಹಿಂದಿರುಗಿ ನೋಡಿದಳು. ಮೊಗ ಶಾಲೆಯ ಇನ್ನೊಂದು ಕಡೆಯ ಮುಚ್ಚುದಾರಿಯಲ್ಲಿ ಪುರುಷನೊಬ್ಬನು ನಿಂತಿರುವುದನ್ನು ಕಂಡು ಅವಳು ಚಕಿತಳಾದಳು.

ತಟ್ಟನೆ ಹಿಂದಕ್ಕೆ ಸರಿದು ಅವಳು ತನ್ನ ಬಿಡಾರದತ್ತ ಹೋಗಲು ಅನುವಾದಂತೆ ಪುರುಷನು ಎರಡು ಹೆಜ್ಜೆ ಮುಂದೆ ಬಂದು,

"ಏಕೆ, ರಾಣಿ ? ಗುರುತಾಗಲಿಲ್ಲವೆ ? ನಾನು ನಿನ್ನ ನೆಚ್ಚಿನ ಗರುಡ ! ಬಿಜ್ಜಳ!" ಎಂದನು.

ಕಾಮೇಶ್ವರಿ ಸ್ತಂಭಿತೆಯಾದಳು. ಅಸ್ಫುಟ ಕಂಠದಿಂದ, "ಸರ್ವಾಧಿಕಾರಿ ಬಿಜ್ಜಳರಾಯರು, ಈ ಅವೇಳೆಯಲ್ಲಿ, ನನ್ನ ಬಿಡಾರದ ಏಕಾಂತದಲ್ಲಿ !" ಎಂದು ತೊದಲುತ್ತ ನುಡಿದಳು.

ಬಿಜ್ಜಳನು ಮಿದುವಾಗಿ ನಕ್ಕು,

"ನಾನೀಗ ಸರ್ವಾಧಿಕಾರಿ ಬಿಜ್ಜಳರಾಯನಲ್ಲ, ರಾಣಿ. ಪಗಡೆಯಾಟದಲ್ಲಿ ಸೋತು, ಆತ್ಮಾರ್ಪಣ ಮಾಡಿಕೊಂಡ ನಿಮ್ಮ ನೆಚ್ಚಿನ ಗರುಡನು ಮಾತ್ರ. ಒಡತಿಯಿಂದ ಗರುಡನು ಪಡೆಯಬಹುದಾದ ಕೃಪಾದೃಷ್ಟಿಯ ಪ್ರಸಾದಕ್ಕಾಗಿ ಬಂದಿದ್ದೇನೆ," – ಎಂದು ಹೇಳಿ ಅಧಿಷ್ಠಾತೃ ದೇವೀಪ್ರತಿಮೆಯ ಸಂಮುಖದಲ್ಲಿ ಬೇಡುವ ಭಕ್ತನಂತೆ ಮೊಣಕಾಲೂರಿ ಕುಳಿತು ಕಾತರದ ಕಣ್ಣುಗಳಿಂದ ಕಾಮೇಶ್ವರಿಯ ಕಡೆ ನೋಡಿದನು.

ಅಚ್ಚರಿ ನೂರ್ಮಡಿಯಾಗಿ ಎಲ್ಲ ಕಡೆಗಳಿಂದ ಮೇಲೆರಗಿದಂತಾಯಿತು ಅವಳಿಗೆ. ಕೆಲವು ಕ್ಷಣಗಳು ಸ್ತಬ್ಧಳಾಗಿ ನಿಂತು ಬಳಿಕ ಚೇತರಿಸಿಕೊಂಡು, ಬಿಜ್ಜಳನ ಭುಜ ಹಿಡಿದೆಬ್ಬಿಸಿ ಅವಳು,

"ದ್ಯೂತಸಭೆಯಲ್ಲಿ ಪ್ರಾರಂಭವಾದ ಈ ನಗೆಯಾಟವನ್ನು ಅಲ್ಲಿಗೇ

ಮುಗಿಸುವುದು ಉಚಿತವಾಗಿತ್ತು, ಬಿಜ್ಜಳರಾಯರೆ. ನೀವು ಈ ಅವೇಳೆಯಲ್ಲಿ, ನನಗೆ ತಿಳಿಯದಂತೆ, ನನ್ನ ಬಿಡಾರಕ್ಕೆ ಬಂದು........." –ಎಂದು ಹೇಳುತ್ತ ಗಂಟಲು ಹಿಡಿದಂತಾಗಿ ಅರ್ಧದಲ್ಲಿ ನಿಲ್ಲಿಸಿದಳು.

"ಆತ್ಮಾರ್ಪಣ ಮಾಡಿದ ಗರುಡನಿಗೆ ತನ್ನ ಒಡತಿಯ ವಾಸಗೃಹವನ್ನು ಎಲ್ಲ ಕಾಲಗಳಲ್ಲಿಯೂ ಪ್ರವೇಶಿಸುವ ಅಧಿಕಾರವಿದೆ, ರಾಣಿ. ಆ ವಿಚಾರದಲ್ಲಿ ಅವನು ಪಾಲಿಸಬೇಕಾದ ಒಂದೇ ಒಂದು ನಿಬಂಧನೆ ಎಂದರೆ......" –ಎಂದು ನುಡಿದು ಬಿಜ್ಜಳನು ಅರ್ಥಗರ್ಭಿತವಾಗಿ ಕಾಮೇಶ್ವರಿಯ ಮುಖ ನೋಡಿದನು.

"ನಿಬಂಧನೆಯೇನು?" –ಕಾಮೇಶ್ವರಿ ಕೇಳಿದನು.

"ರಹಸ್ಯ ರಕ್ಷಣೆ. ನಾನು ಆ ಕಾರ್ಯ ಮಾಡಿದ್ದೇನೆ, ರಾಣಿ. ನೀವು ಮೊಗ ಶಾಲೆಯಲ್ಲಿ ನಿಂತಿದ್ದಾಗ ನಿಮ್ಮ ವಾಸಗೃಹದ ಬಾಗಿಲು ಮುಚ್ಚಿ ಹೊರಗೆ ಚಿಲುಕ ಹಾಕಿದೆ. ನಾನು ಇಲ್ಲಿಗೆ ಬಂದದ್ದು ಯಾರಿಗೂ ತಿಳಿಯದು. ಅರಮನೆಯ ಈ ಭಾಗಕ್ಕೆ ಯಾರನ್ನೂ ಬಿಡದಂತೆ ಭಟರಿಗೆ ಆಜ್ಞೆ ಮಾಡಿದ್ದೇನೆ. ನಮ್ಮ ರಹಸ್ಯ ಸಂಧಾನ, ನಾವು ಅಪೇಕ್ಷಿಸಿದಷ್ಟು ಕಾಲ ನಿರ್ವಿಘ್ನವಾಗಿ ನಡೆಯಬಹುದು."

ಬಿಜ್ಜಳನ ನುಡಿ ಕೇಳಿ ಕಾಮೇಶ್ವರಿಗೆ ತನ್ನ ವಿಪತ್ತಿನ ಅರಿವಾಯಿತು. ಹೆಣ್ಣಿಗೆ ಸಹಜವಾದ ಚತುರತೆಯಿಂದ ಅವಳು,

"ನಮ್ಮ ರಹಸ್ಯ ಸಂಧಾನ ನಾಳಿನವರೆಗೆ ತಡೆಯಬಹುದಾಗಿತ್ತು. ಅದಕ್ಕಾಗಿ ಈಗಲೇ ನೀವು ನನ್ನನ್ನು ನೋಡುವ ಅವಸರವೇನು?" ಎಂದಳು.

"ನಾನು ಅದಕ್ಕೆ ಉತ್ತರ ಹೇಳಲು ಶಕ್ತನಲ್ಲ, ರಾಣಿ. ನೀವೇ ಅದನ್ನು ನಿರ್ಧರಿಸಬೇಕು."

"ನಿಮ್ಮ ರಹಸ್ಯ ಸಂಧಾನವೇನೆಂಬುದನ್ನು ತಿಳಿಯದೆ ನಾನು ಹೇಗೆ ನಿರ್ಧರಿಸಲಿ?"

ನಿರುಪಾಯನಂತೆ ನಿಟ್ಟುಸಿರಿಟ್ಟು ಬಿಜ್ಜಳನು, "ಪಗಡೆಯಾಟದಲ್ಲಿ ನೀವು ಮೆರೆಸಿದ ಚತುರತೆ ಸಾಹಸಗಳು ಈಗೇನಾದವು, ರಾಣಿ? ದ್ಯೂತದ ಪಣವಾಗಿ ನೀವು ಪ್ರಯಾಸವಿಲ್ಲದೆ ನಿಮ್ಮ ಗರುಡನನ್ನು ಪಡೆದಿರಿ. ಇಲ್ಲವೆ ಅದಕ್ಕಾಗಿ ನೀವೇನು ಮಾಡಬೇಕಾಗಿತ್ತು ಗೊತ್ತೆ?" ಎಂದನು.

"ಗರುಡ ಸಂಪ್ರದಾಯದ ಹೆಸರು ಕೇಳಿದ್ದೇನೆ, ಅದರ ವಿಚಾರ ನನಗೇನೂ ತಿಳಿಯದು." –ಲಜ್ಜೆ ಸಂಕೋಚಗಳನ್ನು ಬದಿಗಿಟ್ಟು ಕಾಮೇಶ್ವರಿ ಹೇಳಿದಳು.

"ದಕ್ಷಿಣಾಪಥದಲ್ಲಿ ವಿಖ್ಯಾತವಾದ ಚೋಳ ಪಾಂಡ್ಯ ಗಂಗಕುಲದ ಅರಸರ ಅಂತಃಪುರವಾಸಿನಿಯರು ಗರುಡ ಸಂಪ್ರದಾಯವನ್ನು ಮೊದಲಿಗೆ ಆಚರಣೆಗೆ

ತಂದರು. ಮುಂದೆ ಅದು ಕುಂತಳ ಕೇರಳ ರಾಜ್ಯಗಳಿಗೆ ಹರಡಿತು. ಅಂತಃಪುರವಾಸಿನಿಯಾದ ಹೆಣ್ಣು ಯಾರನ್ನು ಗರುಡನನ್ನಾಗಿ ಬಯಸುವಳೋ ಆ ಪುರುಷನಿಗೆ, ಕನ್ಯೆಯಾಗಿದ್ದರೆ ಕೈಕಡಗಗಳನ್ನೂ, ವಿವಾಹಿತೆಯೋ ವಿಧವೆಯೋ ಆಗಿದ್ದರೆ ಕಂಚುಕ ಚಲ್ಲಣಗಳನ್ನೂ ಉಡುಗೊರೆಯಾಗಿ ಕಳುಹಿಸುವಳು. ಆಹ್ವಾನ ಪಡೆದ ಪುರುಷನು, ಕಳುಹಿಸಿದವಳು ಕನ್ಯೆಯಾಗಿದ್ದರೆ ಮದುವೆಯಾಗಿ ಮನೆ ತುಂಬಿಸಿಕೊಳ್ಳುವನು. ಕಳುಹಿಸಿದವಳು ವಿವಾಹಿತೆಯೋ ಪತಿಹೀನೆಯೋ ಆಗಿದ್ದರೆ ರಹಸ್ಯವಾಗಿ ಅವಳನ್ನು ಕಂಡು ಆತ್ಮಾರ್ಪಣ ಮಾಡಿಕೊಳ್ಳುವನು. ಅಂದಿನಿಂದ ಅವರ ಗೆಳೆತನದ ಪ್ರಾರಂಭ. ಒಡತಿ ನಲುಮೆಯ ಅಧಿದೇವಿಯಾಗುವಳು, ಗರುಡ ಅವಳ ರಹಸ್ಯಪತಿಯಾಗುವನು," –ಎಂದು ಬಿಜ್ಜಳನು ತಟ್ಟನೆ ಕಾಮೇಶ್ವರಿಯ ಕೈಹಿಡಿದನು.

"ಇದೆಂತಹ ದುಡುಕುತನ! ಬಿಡಿರಿ, ಬಿಡಿರಿ, ನನ್ನನ್ನು !" ಎಂದು ಕಾಮೇಶ್ವರಿ ಒದರಿದಳು.

ಎರಗಿ ಬಂದ ಗರುಡ ಹಕ್ಕಿ ಅರಗಿಣಿಯನ್ನು ಎತ್ತುವಂತೆ ಬಿಜ್ಜಳನು ತನ್ನೆರಡು ತೋಳುಗಳಿಂದ ಕಾಮೇಶ್ವರಿಯನ್ನು ಎತ್ತಿಕೊಂಡು ಬಿಡಾರದ ಮುಚ್ಚು ದಾರಿಯಲ್ಲಿ ನಡೆದನು.

ಹೆಬ್ಬುಲಿಗೆ ಸಿಕ್ಕ ಎಳೆಗರುವಿನಂತೆ ಕಾಮೇಶ್ವರಿ ಮೂರ್ಛಿತೆಯಾದಳು.

ಪುನಃ ಅವಳು ಎಚ್ಚೆತ್ತಾಗ ಯಾವುದೋ ಅಪರಿಚಿತ ವಾಸಗೃಹದಲ್ಲಿ, ಹಂಸ ತೂಲಿಕೆಯ ಮೃದುವಾದ ಹಾಸಿಗೆಯ ಮೇಲೆ, ಬಿಜ್ಜಳನ ತೋಳಸೆರೆಯಲ್ಲಿ ನಗ್ನೆಯಾಗಿ ಮಲಗಿದ್ದಳು. ತೈಲಾಧಾರಗಳಲ್ಲಿ ದೀಪಗಳು ಉರಿಯುತ್ತಿದ್ದವು. ಹೂಗಳ ಪರಿಮಳದಿಂದ ಭಾರವಾದ ಗಾಳಿ ಮಂದವಾಗಿ ಬೀಸುತ್ತಿತ್ತು. ಬಿಜ್ಜಳನು ಬೀಸಣಿಗೆಯಿಂದ ಗಾಳಿ ಹಾಕುತ್ತಿದ್ದನು.

ಕಾಮೇಶ್ವರಿ ಮೆಲ್ಲನೆ ಕಣ್ಣುಗಳನ್ನು ತೆರೆದು ವಾಸಗೃಹದ ಸುತ್ತ ನೋಡಿದಳು. ತನ್ನ ಸೀರೆ ಕುಪ್ಪುಸ ಎದೆಕಟ್ಟು ಚಲ್ಲಣಗಳು, ಬಿಜ್ಜಳನ ಪರಿತ್ಯಕ್ತ ಉಡುಗೆಗಳೊಡನೆ ಬೆರೆತು, ವಾಸಗೃಹದ ಮುಚ್ಚಿದ ಬಾಗಿಲಿಂದ ಮಂಚದವರೆಗೆ ಚಲ್ಲಾಪಿಲ್ಲಿಯಾಗಿ ಬಿದ್ದಿದ್ದವು.

"ಎಷ್ಟೊಂದು ಆತುರ–ಆವೇಗ ಈ ಗರುಡನಿಗೆ?" ಎಂದು ಭಾವಿಸಿ ಕಾಮೇಶ್ವರಿ ಪುನಃ ಕಣ್ಣುಗಳನ್ನು ಮುಚ್ಚಿ ಚಿಂತಾಮಗ್ನೆಯಾದಳು : ಮೊಗಶಾಲೆಯಲ್ಲಿ ಬಿಜ್ಜಳನನ್ನು ಕಂಡಮೇಲೆ ಏನು ನಡೆಯಿತು ಎಂಬುದನ್ನು ಅನುಕ್ರಮವಾಗಿ ನೆನಪಿಸಿಕೊಳ್ಳಲು ಪ್ರಯತ್ನಿಸಿದಳು. ಗರುಡ ಸಂಪ್ರದಾಯವನ್ನು ಕುರಿತ ಬಿಜ್ಜಳನ

ವಿವರಣೆ, ಆಮೇಲೆ ಅವನು ತನ್ನ ಕೈಹಿಡಿದದ್ದು, ಇಷ್ಟು ಮಾತ್ರ ನೆನಪಿನಲ್ಲಿತ್ತು.

ಮುಂದೆ ದುರ್ಭೇದ್ಯ ಅಂಧಕಾರ ! ಚಿರಸಂಚಿತ ಪೂರ್ವಸ್ಮೃತಿಗಳ ವಿಸ್ಮೃತಿ ಮಹಾಸಾಗರ ! ಅದರ ತಲದ ಕಾರ್ಗತ್ತಲಲ್ಲಿ ಅದೆಷ್ಟು ಕಲ್ಪನೆ ಸ್ಪಂದನ ಉದ್ರೇಕಗಳು ಉದಾಯಿಸಿ ಬೆಳೆದು ಅಸ್ತವಾಗಿದ್ದವು ! ಆ ಎಲ್ಲ ಸಮ್ಮರ್ದ ಆಘಾತ ಪ್ರತ್ಯಾಘಾತಗಳ ನೆನಪು ಅಳಿದಿದ್ದರೂ, ಅವುಗಳಿಗೆ ಆಶ್ರಯವಾಗಿದ್ದ ದೇಹದಲ್ಲಿ ಅವುಗಳಿಂದಾದ ಗುರುತುಗಳು ಇನ್ನೂ ಉಳಿದಿವೆ. ನರನಾಡಿ ಮಾಂಸಪಿಂಡಗಳು ಆ ಉನ್ಮತ್ತ ಅನುಭಾವಕ್ಕಾಗಿ ಈಗಲೂ ಹಂಬಲಿಸುತ್ತಿವೆ.

ಕಾಮೇಶ್ವರಿ ಚಿಂತಿಸಿದಳು—ಪಶುಪಕ್ಷಿ ಮಾನವರಿಗೆ ಸಮಾನವಾದ ಈ ಉದ್ರೇಕಕ್ಕಾಗಿ ಅನುಗಾಲ ಹಾರೈಸುವುದೇ ಮಾನವ ಜೀವನದ ಪರಾಕಾಷ್ಠೆಯೇ? ಅದಕ್ಕಿಂತ ಹೆಚ್ಚಿನ ಆಸೆ ಆಕಾಂಕ್ಷೆಗಳು ಮತ್ತಾವುದೂ ಇಲ್ಲವೆ ? ಇಂದ್ರಿಯಜನ್ಯವಾದ ಈ ಉದ್ರೇಕಕ್ಕೊಳಗಾದಾಗ ಮಾನವನ ವಿದ್ಯೆ ಗೌರವ ಅಧಿಕಾರ ಪದವಿಪ್ರತಿಷ್ಠೆಗಳು, ಗಾಳಿಗೆ ಸಿಕ್ಕಿದ ಅರಳೆಯ ರಾಶಿಯಂತೆ ತೂರಿಹೋಗುವುವು. ಆಗ ಕಾಮೇಶ್ವರಿ ರಾಣಿಯಲ್ಲ, ಬಿಜ್ಜಳನು ಸರ್ವಾಧಿಕಾರಿ ದಂಡನಾಯಕನಲ್ಲ, ಎಚ್ಚೆತ್ತ ಇಂದ್ರಿಯಗಳ, ಅರಳಿದ ಮಾಂಸಖಂಡಗಳ, ಮಿಡಿಯುವ ನರನಾಡಿಗಳ ಉನ್ಮತ್ತ ಸ್ಪಂದನಮಾತ್ರ. ಬಾಹ್ಯೇಂದ್ರಿಯಗಳಲ್ಲಿ ಹುಟ್ಟಿದ ಈ ಚಲನೆ, ಮನಸ್ಸಿನಲ್ಲಿ ಸೆಲೆಗೊಟ್ಟು, ಬುದ್ಧಿಯಲ್ಲಿ ಹರಡಿ, ಚೇತನದಲ್ಲಿ ಹಾರಾಡಿ, ಆನಂದದ ತೆರೆಗಳನ್ನು ಎಬ್ಬಿಸುವುದು ಬುದ್ಧಿಜೀವಿಯಾದ ಮಾನವನಿಗೆ ಮಾತ್ರ ವಿಶಿಷ್ಟವಾದ ಘಟನೆಯೇ ? ಅಥವಾ ಪಶುಪಕ್ಷಿಗಳೂ ಆ ಅನುಭಾವವನ್ನು ಪಡೆಯುವವೆ ?

ಪ್ರವಾಹ ರೂಪವಾದ ಸೃಷ್ಟಿಕಾರ್ಯ ನಿರಂತರವಾಗಿ ನಡೆಯಲು ಪ್ರಕೃತಿದೇವತೆ ನಿಯೋಜಿಸಿದ ಈ ಸಂವಿಧಾನ, ಮಾನವ ಜೀವನದ ಎಲ್ಲ ಆಸೆ, ಎಲ್ಲ ಆಕಾಂಕ್ಷೆ, ಎಲ್ಲ ಉದ್ಯಮಗಳನ್ನು ಪ್ರಚೋದಿಸುವ ಮೂಲಶಕ್ತಿಯಾದದ್ದು ಹೇಗೆ ? ಧರ್ಮ, ಯಜ್ಞ, ಶಿಲ್ಪ, ಕಲೆ, ಸಂಗೀತ, ಸಾಹಿತ್ಯ—ಮಾನವನನ್ನು ಅಮೃತಾನುಭಾವಕ್ಕೆ ಕರೆದೊಯ್ಯಬಲ್ಲ ಎಲ್ಲ ಸಂಚಲನಗಳ ಮೂಲ, ಹೆಣ್ಣಿನ ದೇಹದ ಮಾಂಸಪಿಂಡಗಳ ವಿಕಾಸ, ಸಂಕೋಚ, ವಿಸ್ಫುರಣ, ಆಸ್ಫಾಲನೆಯಲ್ಲಿ ನೆಲೆಸಬೇಕೆ ?

ಬುದ್ಧಿಜೀವಿಯಾದ ಮಾನವನ ಮೇಲೆ ಬುದ್ಧಿಶೂನ್ಯೆಯಾದ ಪ್ರಕೃತಿ ನಡೆಸುವ ಪ್ರತಿಹಿಂಸೆಯ ಅತ್ಯಾಚಾರ ಇದು ! ಆ ಪ್ರತಿಹಿಂಸೆಯಲ್ಲಿಯೂ ಸುಖದ ಕನಸು ಕಾಣುವುದು, ಆನಂದದ ನೆಲೆಯನ್ನು ಹುಡುಕುವುದು, ಮಾನವನ ಅವಿವೇಕ ! ಬಹುದಿನಗಳ ಅಭ್ಯಾಸದಿಂದ ರಕ್ತಗತವಾದ ಉನ್ಮಾದ !

ತುಟಿ ಕೆನ್ನೆ ಕಣ್ಣುಗಳ ಮೇಲೆ ಚುಂಬನಗಳ ನಿರಂತರಧಾರೆ ಕಾಮೇಶ್ವರಿಯನ್ನು

ಎಚ್ಚರಿಸಿತು.

"ನನ್ನ ರಾಣಿ ! ನನ್ನ ಮೆಚ್ಚಿನ ರಾಣಿ !"

–ಎಂದು ಹಂಬಲದಿಂದ ನುಡಿದನು ಬಿಜ್ಜಳ.

"ಯುದ್ಧರಾಜಿಕಗಳಂತೆ ಭೋಗದಲ್ಲಿಯೂ ಚತುರರು ನೀವು. ನಿಮ್ಮ ತೋಳ ಸೆರೆಯಲ್ಲಿ ನಾನು ಪರವಶೆಯಾದೆ. ಮಾನವ ಲೋಕದ ದ್ವಂದ್ವಗಳೆಲ್ಲ ಅಳಿದು ನಿರ್ದೇಹಿಯಾದ ದೇವತೆಯೇ ಆಗಿದ್ದೆ !"

ಕಾಮೇಶ್ವರಿಯ ಮೆಚ್ಚಿನ ನುಡಿಗಳು ಬಿಜ್ಜಳನನ್ನು ಪರವಶಗೊಳಿಸಿದವು ಮತ್ತೆ ಮತ್ತೆ ಅವನ ತುಟಿಗಳು ಕಾಮೇಶ್ವರಿಯ ತುಟಿಗಳನ್ನರಸಿದವು. ಪ್ರತಿಚುಂಬನದ ನಿರೀಕ್ಷೆಯಿಂದ.

"ಒಡತಿಯ ಪ್ರಸಾದ ಪಡೆದು ಗರುಡನ ಅವಸರ ಆವೇಗಗಳು ಶಾಂತವಾಯಿತಲ್ಲವೆ? ಈಗ ನೀವು ಸರ್ವಾಧಿಕಾರಿ ದಂಡನಾಯಕರಾದರೆ ಒಳ್ಳೆಯದು."

–ತುಸು ಹೊತ್ತಿನ ಮೇಲೆ ಕಾಮೇಶ್ವರಿ ಹೇಳಿದಳು.

ಬಿಜ್ಜಳನು ಕೆಲವು ಕ್ಷಣಗಳು ಯೋಚಿಸುತ್ತಿದ್ದು ಬಳಿಕ,

"ನನ್ನ ಅಪೇಕ್ಷೆಯೂ ಅದೇ, ರಾಣೀ. ಆಲಿಂಗನ ಚುಂಬನಗಳಲ್ಲಿ ಜಗತ್ತನ್ನು ಮರೆಯಲು ನಾವೇನು ನವ ತರುಣರೆ? ನಾಳೆ ವಿಜಯೋತ್ಸವದ ಮೆರವಣಿಗೆ ಮುಗಿದರೆ, ಮಂಗಳವೇಡೆಯೊಡನೆ ನನ್ನ ಸಂಬಂಧ ಕಳೆಯುತ್ತದೆ. ಏಕಾದಶಿಯಂದು ಕಲ್ಯಾಣಕ್ಕೆ ಪ್ರಯಾಣ. ಆಮೇಲೆ ಚಾಲುಕ್ಯ ರಾಜ್ಯದ ಪುನರ್ಘಟನೆಯ ಕಾರ್ಯಾರಂಭ," ಎಂದನು.

"ಚಾಲುಕ್ಯ ರಾಜ್ಯದ ಪುನರ್ಘಟನೆಯ ಅಗತ್ಯವೇನಿದೆ ಈಗ ? ರಾಜ್ಯದ ಎಲ್ಲ ಕಡೆ ಸುವ್ಯವಸ್ಥೆ ನೆಲೆಸಿದೆಯಲ್ಲವೆ ?"

ಕಾಮೇಶ್ವರಿಯ ಪ್ರಶ್ನೆ ಬಿಜ್ಜಳನನ್ನು ಕಾಮದ ಅವಸಾನದಿಂದ ಎಚ್ಚರಗೊಳಿಸಿತು. ಸೌಂದರ್ಯ ಸಮ್ಮೋಹಗಳ ಪ್ರತಿಮೂರ್ತಿಯಂತೆ ಪಾರ್ಶ್ವದಲ್ಲಿ ಪವಡಿಸಿದ್ದ ಪ್ರೇಯಸಿಯನ್ನು ಮರೆತು, ರಾಜಕಾರ್ಯ ಕಾರಣಗಳ ಕಂಕಾಲ ಎದುರಿಗೆ ನಿಂತು ವಿಕಟವಾಗಿ ನಗುತ್ತಿರುವಂತೆ ಭಾವಿಸಿ, ಕಳವಳದ ಕಾತರ ಕಂಠದಿಂದ ಅವನು,

"ಈಗ ಚಾಲುಕ್ಯರಾಜ್ಯ ಅಶಾಂತಿ ಆಂದೋಳನಗಳ ಅಗ್ನಿಸ್ತೂಪವಾಗಿದೆ, ರಾಣಿ. ಆ ಜ್ವಾಲಾಮುಖಿಯ ಮೇಲೆ ನಿಂತು ಸುಖಶಾಂತಿ ಸಮೃದ್ಧಿಗಳ ಕನಸು ಕಾಣುತ್ತಿದ್ದೇವೆ, ನಾವು. ದಕ್ಷಿಣದಲ್ಲಿ ದೋರಸಮುದ್ರದ ಹೊಯ್ಸಳರು, ಪೂರ್ವದಲ್ಲಿ ಗೋವೆಯ ಕದಂಬರಸರು, ಪಶ್ಚಿಮದಲ್ಲಿ ಓರಂಗಲ್ಲಿನ ಕಾಕತೀಯರು, ಚಾಲುಕ್ಯ ರಾಜ್ಯದ ಮೇಲೆ ಬೀಳಲು ಹವಣಿಸುತ್ತಿದ್ದಾರೆ. ಇವರಲ್ಲಿ ಹೊಯ್ಸಳ ಕದಂಬರು

ಚಾಲುಕ್ಯ ಮಾಂಡಲಿಕರಾದರೂ ಸ್ವತಂತ್ರ ಅರಸರಾಗುವ ಹಂಬಲ ಅವರನ್ನು ತಪ್ಪು ದಾರಿಗೆಳೆದಿದೆ. ಈ ಪರಿಸ್ಥಿತಿಯಲ್ಲಿ ಸಾಮಂತಮನ್ನೆಯರ ಸ್ವಾಮಿನಿಷ್ಠೆ ಆಕಾಶ ಕುಸುಮದಂತೆ ತೋರಿಕೆಯ ವಸ್ತುವಾದರೆ ಆಶ್ಚರ್ಯವೇನಿದೆ ? ರಾಜ್ಯದಲ್ಲಿ ಹೆಜ್ಜೆ ಹೆಜ್ಜೆಗೂ ನಮಗೆ ವೈರಿಗಳು. ಇವರೆಲ್ಲರನ್ನೂ ಹತ್ತಿಕ್ಕಿದಾಗ ಮಾತ್ರ ರಾಜ್ಯ ಸುಭದ್ರವಾಗುವುದು," ಎಂದನು.

"ಕಳೆದ ಕೆಲವು ವರ್ಷಗಳಿಂದ ಚಾಲುಕ್ಯರಾಜ್ಯ ಈ ಪರಿಸ್ಥಿತಿಯನ್ನು ಎದುರಿಸುತ್ತಿದೆಯಲ್ಲವೆ? ನಿಮ್ಮ ನೇತೃತ್ವದಲ್ಲಿ ಮುಂದೆಯೂ ಆ ಕಾರ್ಯ ದಕ್ಷತೆಯಿಂದ ನಡೆಯುವುದು."

"ನಾನು ಅದಕ್ಕಾಗಿ ಭಯಪಡುತ್ತಿಲ್ಲ, ರಾಣಿ. ನನ್ನ ಸಮಯ ಸಾಮರ್ಥ್ಯಗಳೆಲ್ಲವನ್ನೂ ಚಾಲುಕ್ಯ ರಾಜ್ಯದ ರಕ್ಷಣೆಗಾಗಿ ಕಳೆಯುವ ಉದ್ದೇಶದಿಂದ ಮಂಗಳವೇಡೆಯ ಮಂಡಲಾಧಿಕಾರವನ್ನು ಸೋಮೇಶ್ವರನಿಗೊಪ್ಪಿಸಿದೆ. ಸೈನ್ಯ ಸಹಾಯದಿಂದ ವಿರೋಧಿ ಸಾಮಂತರನ್ನು, ಮಾಂಡಲಿಕರನ್ನು ದಾರಿಗೆ ತರುವುದು ಸುಲಭ ಸಾಧ್ಯ. ಆದರೆ ಇನ್ನೊಂದು ವಿಚಾರ ನನಗೆ ತಲೆಶೂಲೆ ಆಗಿದೆ.

"ಯಾವುದು ಆ ವಿಚಾರ?

"ಶರಣಧರ್ಮದ ಹೆಸರಿನಲ್ಲಿ ಬಸವಣ್ಣನವರು ಪ್ರಾರಂಭಿಸಿರುವ ಆಂದೋಳನ ರಾಜ್ಯದ ಕೃಷಿಕ ಕಾರ್ಮಿಕರಲ್ಲಿ, ಶೆಟ್ಟಿ ಬಣಜಿಗ ಶ್ರೀಮಂತ ಮನ್ನೆಯರಲ್ಲಿ, ಕಾಳ್ಗಿಚ್ಚಿನಂತೆ ಹರಡುತ್ತಿದೆ ಅದು. ಇಂದು ವರ್ಣಧರ್ಮ ಜಾತಿಪಂಥಗಳನ್ನು ವಿರೋಧಿಸುತ್ತಿರುವ ಅವರು ನಾಳೆ ನಮ್ಮ ಪ್ರಭುತ್ವಾಧಿಕಾರವನ್ನು ಎದುರಿಸಲು ಸಿದ್ಧರಾಗಬಹುದು. ಅನಾದಿಕಾಲದಿಂದ ಕ್ಷತ್ರಿಯರಿಗೆ ಮೀಸಲಾದ ಅರಸುತನ ಬೇರೆ ವರ್ಣಗಳ ಕೈಸೇರಿದರೆ ಚಾಲುಕ್ಯರಾಜ್ಯ ನಾಶವಾದಂತೆಯೇ?"

ಕಾಮೇಶ್ವರಿ ಕೆಲವು ಕ್ಷಣಗಳು ಯೋಚಿಸಿ, "ಏಕೆ? ಹಿಂದೆ ಬ್ರಾಹ್ಮಣ ವೈಶ್ಯಶೂದ್ರರು ಅರಸರಾಗಿ ರಾಜ್ಯವಾಳಲಿಲ್ಲವೆ?" ಎಂದಳು.

"ಅರಸರಾಗುವ ಮುನ್ನ ಅವರು ಯಾವ ವರ್ಣಕ್ಕೇ ಸೇರಿರಲಿ, ಅರಸರಾದ ಮೇಲೆ ಕ್ಷತ್ರಿಯರಾಗುವರು. ಮೌರ್ಯ ಗುಪ್ತ ಕದಂಬರು ಇದಕ್ಕೆ ನಿದರ್ಶನ."

"ಹಾಗಾದರೆ ಈಗ ಒದಗಿರುವ ದುರಂತದಿಂದ ಚಾಲುಕ್ಯ ರಾಜ್ಯವನ್ನು ರಕ್ಷಿಸಲು ಯಾವ ಉಪಾಯವೂ ಇಲ್ಲವೆ?"

"ಇದೆ, ರಾಣಿ. ಶರಣಧರ್ಮದ ವಿನಾಶವೇ ಆ ಉಪಾಯ. ನಾನು ದೀರ್ಘ ಕಾಲ ಯೋಚಿಸಿ ಈ ನಿರ್ಧಾರಕ್ಕೆ ಬಂದಿದ್ದೇನೆ. ಚಾಲುಕ್ಯ ರಾಜ್ಯದಲ್ಲಿ ಶರಣ ಧರ್ಮಕ್ಕೆ ಪ್ರೋತ್ಸಾಹ ಕೊಡುವ ಎಲ್ಲ ಮಠಮಂದಿರಗಳನ್ನು ನಾಶ ಮಾಡುವುದು

ನನ್ನ ಸಂಕಲ್ಪ. ಚಾಲುಕ್ಯರಾಜ್ಯ ಉಳಿಯಲು ಅದೊಂದೇ ದಾರಿ.”

“ಶರಣರ ಪ್ರತಿನಿಧಿಯಾಗಿ ಚೆನ್ನಬಸವಣ್ಣನವರು ನಿಮ್ಮ ಮಂತ್ರಿಮಂಡಲದಲ್ಲಿದ್ದಾರೆ. ಅವರು ಇದಕ್ಕೆ ಒಪ್ಪುವರೆ?”

“ನನ್ನ ವಿಧ್ವಂಸನ ಕಾರ್ಯಕ್ಕೆ ಮಹಮನೆ ಅನುಭವಮಂಟಪಗಳು ಮೊದಲ ಬಲಿ. ವರ್ಣಧರ್ಮಜಾತಿಪಂಥಗಳನ್ನು ಒಪ್ಪಿಕೊಂಡು ಶರಣಧರ್ಮವನ್ನು ತ್ಯಜಿಸಿದರೆ ಚೆನ್ನಬಸವಣ್ಣನವರು ಉಳಿಯುವರು. ಇಲ್ಲವೆ ಬೇರೆ ಶರಣರಂತೆ ಅವರೂ ನನ್ನ ಭಟರ ಖಡ್ಗಧಾರೆಗೆ ಬಲಿಯಾಗುವರು.”

ಕಾಮೇಶ್ವರಿ ನಡುಗಿದಳು. ಬಿಜ್ಜಳನ ವಂಚನೆ ಕಾಠಿಣ್ಯ ನಿಷ್ಠುರತೆಗಳು ವಿಕೃತ ರೂಪದ ಪಿಶಾಚಿಗಳಂತೆ ಅವಳ ಕಣ್ಣೆದುರಿಗೆ ಸುಳಿದವು. ಚೆನ್ನಬಸವಣ್ಣನವರಂತಹ ಆದರ್ಶವಾದಿ ಸಾತ್ವಿಕ ಶರಣನು ಈ ಧೂರ್ತವಂಚಕ ರಾಜಕಾರಣಿಯಿಂದ ಪರಾಜಿತನಾಗುವುದು ಖಂಡಿತ. ಅವರನ್ನು ಉದ್ಧರಿಸುವ ಮಾರ್ಗವೇನೂ ಇಲ್ಲವೆ?..... ಎಂದು ಕಾಮೇಶ್ವರಿ ಯೋಚಿಸುತ್ತಿದ್ದಂತೆ ಬಿಜ್ಜಳನು ಇಮ್ಮಡಿ ಉತ್ಸಾಹದಿಂದ ಹೇಳಿದನು.

“ದಕ್ಷಿಣಾಪಥದಲ್ಲಿ ಚಾಲುಕ್ಯರಾಜ್ಯ ಅತ್ಯಂತ ವಿಶಾಲವೂ ಸಂಪದ್ಭರಿತವೂ ಆದ ದೇಶವೆಂದು ಹೆಸರಾಗಿದೆ. ಪರರಾಯರ ದಾಳಿ, ಅಂತಃಕಲಹ, ಈ ದ್ವಿಮುಖ ವಿಪತ್ತಿನಿಂದ ಇಷ್ಟೊಂದು ದೊಡ್ಡ ರಾಜ್ಯವನ್ನು ರಕ್ಷಿಸಲು ನಾವು ದೇವತೆಗಳಂತೆ ಬಿಡುಗಣ್ಣರಾಗಬೇಕಾಗುತ್ತದೆ, ರಾಣಿ. ಶರಣರು ತಮ್ಮ ಬಿಡುವಿಲ್ಲದ ಚಳುವಳಿಯಿಂದ ರಾಜ್ಯದ ಪ್ರಜಾ ಸಮುದಾಯವನ್ನು ಪ್ರಭುಮನ್ನೆಯರ ವಿರುದ್ಧ ಹುರಿದುಂಬಿಸುತ್ತಿದ್ದಾರೆ. ಅವರು ಪ್ರಚಾರಕ್ಕೆ ತರುತ್ತಿರುವ ಜಾತಿಪಂಥಗಳ ನಿರಾಕರಣೆ, ಸರ್ವಸಮಾನತೆ, ಸ್ತ್ರೀ ಪುರುಷರ ಸಮಾನಾಧಿಕಾರ, ವೇದ ಧರ್ಮಶಾಸ್ತ್ರಗಳ ವಿಡಂಬನೆ, ಈ ಕ್ರಾಂತಿಕಾರಿ ಭಾವನೆಗಳು ನಾಡಿನ ಎಲ್ಲ ಕಡೆ ಸಂಪ್ರದಾಯವಾದಿಗಳನ್ನು ರೊಚ್ಚಿಗೆಬ್ಬಿಸಿದೆ. ಈಗ ನಾವು ವೈದಿಕ ಸಂಪ್ರದಾಯವಾದಿಗಳ ಪಕ್ಷವಹಿಸಿ ಶರಣರ ಉಪಟಳದಿಂದ ಸಮಾಜವನ್ನು ರಕ್ಷಿಸದೆ ಹೋದರೆ ಚಾಲುಕ್ಯರಾಜ್ಯ ಅಳಿಯುವುದು. ಅದರೊಡನೆ ನಾವೂ ಅಳಿಯುವೆವು. ಕುಮಾರ ಪ್ರೇಮಾರ್ಣವನ ಉತ್ತರಾಧಿಕಾರಕ್ಕೆ ಏನೂ ಉಳಿಯುವುದಿಲ್ಲ.”

ಕಾಮೇಶ್ವರಿ ಮೌನ. ಉತ್ತರಕ್ಕಾಗಿ ಕೊಂಚಹೊತ್ತು ನಿರೀಕ್ಷಿಸುತ್ತಿದ್ದು ಬಳಿಕ ಬಿಜ್ಜಳನು, “ಏಕೆ ರಾಣಿ ? ಈ ವಿಚಾರದಲ್ಲಿ ನೀನು ಏನೂ ಹೇಳುವುದಿಲ್ಲವೆ ?” ಎಂದನು.

ಕಾಮೇಶ್ವರಿ ನುಡಿದಳು : “ನಿಮ್ಮ ಚಿಕಿತ್ಸೆ ರೋಗದಷ್ಟೇ ಭಯಂಕರವಾಗಿದೆ.

ಒಂದು ವಿಪತ್ತಿನಿಂದ ಉದ್ಧಾರವಾಗಲು ಅಷ್ಟೇ ಘೋರವಾದ ಇನ್ನೊಂದು ವಿಪತ್ತಿಗೆ ಬಿದ್ದಂತಾಗುವುದು. ಶರಣರ ವಿನಾಶದಿಂದ ಚಾಲುಕ್ಯ ರಾಜ್ಯದ ಪ್ರಜೆಗಳೆಲ್ಲ ನಮಗೆ ವಿರೋಧಿಗಳಾಗುವರು.

"ಮುಂದೆ ಒದಗಬಹುದಾದ ವಿಪತ್ತನ್ನು ತೊಡೆದುಹಾಕಲು ಈಗ ಈ ಚಿಕಿತ್ಸೆ ಅಗತ್ಯ."

"ಚಿಕಿತ್ಸಾನಂತರ ಮುಂದಿನ ಕಾರ್ಯ?"

"ಪ್ರೇಮಾರ್ಣವನ ಪಟ್ಟಾಭಿಷೇಕ. ಅವನು ಪ್ರಾಪ್ತವಯಸ್ಕನಾಗುವವರೆಗೆ ನಿನ್ನನ್ನು ರಾಜಪ್ರತಿನಿಧಿಯಾಗಿ ನೇಮಿಸುವುದು."

"ಈ ಯೋಜನೆಯಲ್ಲಿ ಜಗದೇಕಮಲ್ಲರಸರಿಗೆ ಯಾವ ಪಾತ್ರವೂ ಇಲ್ಲವೆ?"

"ಕುಮಾರ ಪ್ರೇಮಾರ್ಣವನನ್ನು ಜಗದೇಕಮಲ್ಲನ ದತ್ತಕನಾಗಿ ಮಾಡಬೇಕೆಂದು ನಾನು ಮೊದಲು ಯೋಚಿಸಿದ್ದೆ, ರಾಣಿ. ಆದರೆ ಈಗ ಅದರ ಅಗತ್ಯವಿರುವುದಿಲ್ಲ. ಕೊನೆಯವರೆಗೆ ಜಗದೇಕಮಲ್ಲನು ಬಂಧನದಲ್ಲಿರಬೇಕಾಗುವುದು."

ಉಕ್ಕಿಬರುತ್ತಿದ್ದ ಉಪಹಾಸದ ನಗುವನ್ನು ತಡೆಯಲು ಕಾಮೇಶ್ವರಿ ಸಮರ್ಥಳಾಗಲಿಲ್ಲ. "ನಿಮ್ಮ ಈ ಪರಿವರ್ತನೆಗೆ ನಮ್ಮ ಗುಪ್ತಪ್ರಣಯ ಕಾರಣವಲ್ಲವೆ? ನೀವು ಜಗದೇಕಮಲ್ಲರಸರನ್ನು ಬಿಡುಗಡೆಮಾಡಿ ಚಾಲುಕ್ಯ ಸಿಂಹಾಸನದಲ್ಲಿ ಕುಳ್ಳಿರಿಸುವಿರೆಂದು ಎಲ್ಲರೂ ಹೇಳುತ್ತಾರೆ. ನಾನು ಕೂಡಾ ಅದನ್ನು ನಂಬಿದೆ," ಎಂದಳು ಅವಳು. ಪ್ರಣಯಿಗಳಿಗೆ ಸಹಜವಾದ ಸಲಿಗೆ ಅವಳಿಗೆ ಸಹಾಯಕವಾಯಿತು.

"ನಿನ್ನ ಗರುಡನಾಗುವ ಮೊದಲು ನನಗೆ ಆ ಯೋಚನೆ ಇತ್ತು, ರಾಣಿ. ಈಗ ಅದು ಪರಿವರ್ತನೆ ಆಗಿದೆ. ನಿನ್ನ ಪ್ರೇಮದಲ್ಲಿ ನನಗೆ ಪ್ರತಿಸ್ಪರ್ಧಿಯಾದವರೆಲ್ಲ ನನ್ನ ಕೋಪಕ್ಕೆ ಪಾತ್ರರು. ಅವರಲ್ಲಿ ಒಬ್ಬರನ್ನು ಕೂಡಾ ಉಳಿಸಬಾರದೆಂದು ನನ್ನ ಶಪಥ". –ನಿರಂಕುಶ ಸರ್ವಾಧಿಕಾರಿಯ ನಿಷ್ಠುರತೆಯಿಂದ ಬಿಜ್ಜಳನು ಹೇಳಿದನು. ಕಲಚೂರ್ಯ ಅರಮನೆಯಲ್ಲಿ ಆ ಅಜ್ಞಾತ ವಾಸಗೃಹದಲ್ಲಿ ಹಠಾತ್ತಾಗಿ ಸಿಡಿಲೆರಗಿದಂತಾಯಿತು ಕಾಮೇಶ್ವರಿಗೆ.

ಆ ವಿಚಿತ್ರ ಅನುಭಾವ ಕ್ಷಣಾರ್ಧದಲ್ಲಿ ಬಿಜ್ಜಳನನ್ನೂ ಮುಟ್ಟಿತು. ಅನುತಾಪದ ಜ್ವಾಲೆಯಿಂದ ಅವನು ನಾಲಿಗೆ ಕಚ್ಚಿದನು. ಪ್ರಥಮ ಸಮಾಗಮದಲ್ಲಿಯೇ ತನ್ನ ಹೃದಯಾಂತರಾಳದ ತೀವ್ರಭಾವನೆಗಳನ್ನು ತೋಡಿಕೊಂಡದ್ದು ಅನುಚಿತವೆಂದು ತಿಳಿದನು. ಆಡಿದ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳುವ ಉಪಾಯವಿದ್ದಿದ್ದರೆ, ಅದರಂತೆ ನಡೆಯಲು ಆಗ ಅವನೆಂದಿಗೂ ಹಿಂಜರಿಯುತ್ತಿರಲಿಲ್ಲ. ತನ್ನ ನುಡಿಗಳ ದಯಾಹೀನ ಕಾಠಿಣ್ಯ ಕಾಮೇಶ್ವರಿಯನ್ನು ನಡುಗಿಸಿದ್ದನ್ನು ಕಂಡು ಅವನು ತಾನೂ

ನಡುಗಿದನು. ತುಸುಹೊತ್ತಿನ ಮೇಲೆ ಕಾಮೇಶ್ವರಿ ಚೇತರಿಸಿಕೊಂಡು ಕಿಲಕಿಲ ನಕ್ಕಾಗ ಅವನಿಗೆ ಸಮಾಧಾನವಾಯಿತು.

"ನನ್ನ ಪ್ರಿಯರ ಪಟ್ಟಿಯನ್ನೂ ಮಾಡಿರುವಿರಲ್ಲವೇ ?" –ನಗೆ ದನಿಯಿಂದ ಅವಳು ಪ್ರಶ್ನಿಸಿದಳು.

"ಪಟ್ಟಿ ಮಾಡುವ ಅಗತ್ಯವಿಲ್ಲ, ರಾಣಿ. ನಿನ್ನ ಪ್ರಿಯರೆಲ್ಲರ ಹೆಸರುಗಳು ನನಗೆ ತಿಳಿದಿವೆ." –ನಗೆದನಿಯಿಂದಲೇ ಬಿಜ್ಜಳನು ಉತ್ತರಿಸಿದನು.

"ಸರ್ವಾಧಿಕಾರಿ ದಂಡನಾಯಕರಿಗೆ ಕರಣಿಕ ವೃತ್ತಿಯ ಪರಿಚಯವೂ ಇದೆ ಹಾಗಾದರೆ ! ನಿಮ್ಮ ಪಟ್ಟಿಯಲ್ಲಿ ಮೊದಲ ಹೆಸರು ಹೇಳಿರಿ, ಕೇಳೋಣ."–ತುಸು ಗಂಭೀರವಾಗಿ, ಒಡತಿ ಲೆಕ್ಕಿಗರನ್ನು ಪ್ರಶ್ನಿಸುವಂತೆ ನುಡಿದಳು ಕಾಮೇಶ್ವರಿ.

"ಪಟ್ಟಿ ಅಷ್ಟೇನೂ ದೊಡ್ಡದಲ್ಲ. ತೈಲಪನ ಅವಸಾನವಾಗುವವರೆಗೆ ಸತಿಯಾಗಿಯೇ ಇದ್ದೆ ನೀನು. ನಿನ್ನ ಚೆಲ್ಲು ಪ್ರಾರಂಭವಾದದ್ದು ಕೆಲವು ತಿಂಗಳ ಅನಂತರ. ನೀನು ಕಲ್ಯಾಣಕ್ಕೆ ಬಂದು ಚಾಲುಕ್ಯ ಅರಮನೆಯಲ್ಲಿ ಬಿಡಾರ ಮಾಡಿದಾಗ." –ಬಿಜ್ಜಳನು ಅಷ್ಟೇ ಗಂಭೀರವಾಗಿ ಉತ್ತರ ಕೊಟ್ಟನು.

ಈ ನಿರಂಕುಶ ನಿಷ್ಠುರನಿಂದ ದಯೆ ಸಭ್ಯತೆಗಳನ್ನು ನಿರೀಕ್ಷಿಸುವುದು ವ್ಯರ್ಥವೆಂದು ತಿಳಿದು ಕಾಮೇಶ್ವರಿ,

"ನಾನು ಸಧವೆಯಾಗಿದ್ದವರೆಗೆ ಸತಿಯೆಂದು ನೀವು ತಿಳಿದಿರುವುದು ನನ್ನ ಭಾಗ್ಯ. ಈಗಿನ ರಾಜಾಂತಃಪುರಗಳ ವಿವಾಹಿತ ಸ್ತ್ರೀಯರಲ್ಲಿ ಸತೀತ್ವ ಒಂದು ಅಪರೂಪವಸ್ತು!" –ಎಂದು ಕಟಕಿಯಾಡಿದಳು.

"ನಿನ್ನ ವಿಚಾರದಲ್ಲಿಯೂ ಅಂತಹ ಕೆಲವು ಕಥೆಗಳು ಪ್ರಚಾರದಲ್ಲಿದ್ದವು. ಆ ಅಪವಾದಗಳಿಗೆ ಕಿವಿಗೊಟ್ಟು ತೈಲಪನು ಕೀರ್ತಿದೇವನನ್ನು ತನ್ನ ಔರಸನಲ್ಲವೆಂದು ನಿರಾಕರಿಸಿದನು. ಆ ಕಥೆಗಳೆಲ್ಲ ನಿರಾಧಾರವೆಂದು ನನಗೆ ಖಚಿತವಾಗಿದೆ. ನೀನು ಮೊದಲಸಾರಿ ಜಾರಿದ್ದು ಚಾಲುಕ್ಯ ಅರಮನೆಯಲ್ಲಿ, ಕಿಶೋರ ವಯಸ್ಸಿನ ಚಿತ್ರಕಾರನೊಬ್ಬನ ಚೆಲುವನ್ನು ಮೋಹಿಸಿ. ಅವನ ಹೆಸರು ಶೀಲವಂತ ಎಂದು."

ಕಾಮೇಶ್ವರಿ ಚಕಿತೆಯಾದಳು. ಅಂತರಂಗದ ತಳಮಳವನ್ನು ತಡೆಯಲಾರದೆ ಸಿಡಿದೆದ್ದು,

"ಎಂತಹ ಕಲುಷಿತ ಆಪಾದನೆ ! ಒಬ್ಬ ನಿರುಪದ್ರವಿ ಬಾಲಕನ ಮೇಲೆ," ಎಂದು ಚಡಪಡಿಸಿದಳು.

"ಶೀಲವಂತ ನಿನ್ನನ್ನು ನಗ್ನೆಯಾಗಿ ಚಿತ್ರಿಸಿದ ವರ್ಣಚಿತ್ರ ನನ್ನಲ್ಲಿದೆ, ರಾಣಿ. ಸತ್ಯವನ್ನು ನಿರಾಕರಿಸಲೇಕೆ ?" –ಎಂದನು ಬಿಜ್ಜಳನು ಅನುನಯದ ದನಿಯಿಂದ.

"ಆ ಚಿತ್ರ ನಿಮಗೆ ದೊರಕಿದ್ದು ಹೇಗೆ ?"

"ಚಾಲುಕ್ಯ ಅರಮನೆಯ ಕೆಲಸಗಾರನೊಬ್ಬನಿಗೆ ನೂರು ವರಹಗಳನ್ನು ಕೊಟ್ಟು ಕೊಂಡುಕೊಂಡೆ."

"ಕಾಮೇಶ್ವರಿ ನಕ್ಕು, ಚಿತ್ರ ಸಾಕ್ಷಿ ನುಡಿಯಲು ಸಮರ್ಥವಾಗಿದ್ದರೆ, ಅದು ಒಂದು ಕಲ್ಪನಾ ಚಿತ್ರವೆಂದೂ, ಶೀಲವಂತ ನನ್ನ ನಗ್ನತೆಯನ್ನು ಕಂಡರಿಯನೆಂದೂ ಸುಲಭವಾಗಿ ತಿಳಿಯುತ್ತಿದ್ದಿರಿ. ಇನ್ನು ನಿಮ್ಮ ಪಟ್ಟಿಯ ಎರಡನೆಯ ಹೆಸರು ?" ಎಂದಳು.

"ಜಗದೇಕಮಲ್ಲ. ಬೇಟೆಯ ಅರಣ್ಯ ಶಿಬಿರದಲ್ಲಿ, ಗೋಮಂತಕದ ನರ್ತಕಿಯ ವೇಷದಲ್ಲಿ ನೀನು ಅವನೊಡನೆ ಒಂದು ರಾತ್ರಿಯನ್ನು ಕಳೆದೆ. ಕರ್ಣದೇವ ನಿಮ್ಮ ಮಿಲನಕ್ಕೆ ಸಹಾಯಕನಾದನು."

"ನೀವು ನನ್ನ ಸಲಹೆಯನ್ನು ನಿರಾಕರಿಸಿದಿರಿ. ಬೇರೆ ಮಾರ್ಗ ಹಿಡಿಯಬೇಕಾಯಿತು. ಚಾಲುಕ್ಯ ವಂಶೋದ್ಧಾರಕನನ್ನು ಪಡೆಯುವ ಒಂದೇ ಉದ್ದೇಶದಿಂದ ನಾನು ಆ ಕಾರ್ಯ ಮಾಡಿದೆ."

"ನಿನ್ನ ಉದ್ದೇಶ ಸಫಲವಾಗಲಿಲ್ಲ, ರಾಣಿ. ಮರುದಿನ ನೀನು ಶೀಲವಂತನ ಪ್ರಾಣ ಪಣವಾಗಿ ಕರ್ಣದೇವನಿಗೆ ಒತ್ತೆಯಾದೆ. ಪ್ರೇಮಾರ್ಣವನು ಕರ್ಣದೇವನ ಔರಸ, ಚಾಲುಕ್ಯ ಕುಡಿಯಲ್ಲ."

"ನೀವು ಆ ಕಥೆಯನ್ನು ನಂಬಿದಿರಾ?

"ನಂಬದಿರಲು ಕಾರಣವೇನಿದೆ? ನನ್ನ ಗೂಢಚಾರರು ಆ ಘಟನೆಗಳ ಬಗೆಗೆ ಕುಲಂಕಷವಾದ ಸಂಶೋಧನೆ ನಡೆಸಿ ವರದಿ ಮಾಡಿದ್ದಾರೆ."

"ಚಾಲುಕ್ಯ ರಾಣಿಯ ಮೇಲೆ ನಡೆದ ಈ ಅತ್ಯಾಚಾರಕ್ಕೆ ನೀವು ಕರ್ಣದೇವನಿಗೆ ವಿಧಿಸಿದ ಶಿಕ್ಷೆಯೇನು? ಸಹೋದರನೆಂದು ಕ್ಷಮಿಸಿದಿರಾ?"

"ಸಹೋದರನೆಂಬ ಅಭಿಮಾನ ನನಗಿಲ್ಲ. ಮುಂದೊಂದು ದಿನ ಕರ್ಣದೇವ ತನ್ನ ಅಪರಾಧಕ್ಕೆ ತಕ್ಕ ಶಿಕ್ಷೆ ಪಡೆದೇ ಪಡೆಯುವನು."

"ಶಿಕ್ಷಿಸುವುದು ಬಿಡುವುದು ನಿಮ್ಮ ಕಾರ್ಯ. ಮುಗಿಯಿತೇ ನಿಮ್ಮ ಪಟ್ಟಿ?"

"ಇನ್ನೊಂದು ಹೆಸರು ಉಳಿದಿದೆ. ನಿಮ್ಮ ಮನೆಹೆಗ್ಗಡೆ ಅಗ್ಗಳ."

"ಅಗ್ಗಳನು ನನ್ನ ಸ್ವಾಮಿನಿಷ್ಠ ಹೆಗ್ಗಡೆ, ಪ್ರಿಯನಲ್ಲ. ಬ್ರಹ್ಮದೇವ ಪುರುಷರನ್ನು ಸೃಷ್ಟಿಸಿದಾಗ ಬುದ್ಧಿ ವಿವೇಕಗಳನ್ನು ತಲೆಯಲ್ಲಿಡದೆ ಮತ್ತಾವುದೋ ಅವಾಚ್ಯ ಅಶ್ಲೀಲಸ್ಥಾನದಲ್ಲಿ ಇಟ್ಟನೆಂದು ಕಾಣುತ್ತದೆ. ಮಿಥ್ಯೆಯನ್ನು ಸತ್ಯವೆಂದು ತಿಳಿಯುವ ನಿಮ್ಮಂತಹ ಅಂಧ ಅವಿಶ್ವಾಸಿಗಳೊಡನೆ ವಾದಿಸುವುದು ವ್ಯರ್ಥ," –ಎಂದು ಹೇಳಿ

ಕಾಮೇಶ್ವರಿ ಮಂಚದಿಂದ ಇಳಿದು ಬಿಜ್ಜಳನ ವಸ್ತ್ರಗಳೊಡನೆ ಬೆರೆತು, ಬಾಗಿಲಿಂದ ಮಂಚದವರೆಗೆ ಅಸ್ತವ್ಯಸ್ತವಾಗಿ ಬಿದ್ದಿದ್ದ ತನ್ನ ಸೀರೆ ಕುಪ್ಪುಸ ಎದೆಕಟ್ಟು ಚಲ್ಲಣಗಳನ್ನು ಬೇರ್ಪಡಿಸಲು ಮೊದಲುಮಾಡಿದಳು. ಕೆದರಿದ ಮುಂಗುರುಳುಗಳೂ ಕಣ್ಣುಗಳ ಮೇಲೆ ಬಿದ್ದು ನಾಲ್ಕಾರುಸಾರಿ ತೊಂದರೆ ಕೊಟ್ಟವು. ಕೊನೆಗವಳು ತನ್ನ ವಸ್ತ್ರಗಳನ್ನು ಬೇರ್ಪಡಿಸಿ ಒಂದೊಂದಾಗಿ ಉಡಲು ಪ್ರಾರಂಭಿಸಿದಾಗ ಬಿಜ್ಜಳನು, "ಆಗಲೆ ಹೋಗುವೆಯ ರಾಣೀ?" ಎಂದನು..

"ಹೋಗದೆ ಮತ್ತೇನು ಮಾಡಲಿ ? ನಿಮ್ಮ ಕಟುವಾಕ್ಯಗಳನ್ನು ಕೇಳಿ ಕಿವಿ ಬೇನೆಯಾಗಿದೆ ನನಗೆ. ಮಧ್ಯರಾತ್ರಿ ಕಳೆದಿರಬೇಕು. ನನ್ನ ವಾಸಗೃಹಕ್ಕೆ ಹೋಗಿ ಸ್ವಲ್ಪ ವಿಶ್ರಾಂತಿ ಪಡೆಯುತ್ತೇನೆ," –ಎಂದು ಬೇಸರದಿಂದ ನುಡಿದಳು ಕಾಮೇಶ್ವರಿ.

ಆಗ ಬಿಜ್ಜಳನಿಗೆ ಅರಿವಾಯಿತು. ಮೊದಲ ದಿನವೇ ಹೀಗಾದದ್ದು ಅನುಚಿತವೆಂದು.

ಕ್ಷಮಿಸು, ರಾಣಿ. ಸರ್ವಾಧಿಕಾರಿಯ ದರ್ಪದಿಂದ ನಿನ್ನೊಡನೆ ಮಾತಾಡಿ, ಗರುಡನಿಗೆ ಉಚಿತವಲ್ಲದ ರೀತಿಯಲ್ಲಿ ವರ್ತಿಸಿದೆ. ನಿನ್ನ ಮನಸ್ಸಿಗೆ ನೋವುಂಟು ಮಾಡಿದೆ." –ಎಂದು ದೈನ್ಯದಿಂದ ನುಡಿದನು ಅವನು.

"ನಿಮ್ಮ ಕಟಕಿ ಅಪವಾದಗಳಂತೆ ಈ ದೈನ್ಯದ ನುಡಿಗಳೂ ನನಗೆ ಅಪ್ರಿಯ. ಈಗ ಎರಡೂ ಬೇಡವಾಗಿದೆ ನನಗೆ."

"ಹಾಗಾದರೆ ನೀನು ನನ್ನಿಂದ ಅಪೇಕ್ಷಿಸುವುದೇನು ?"

"ನೀನು ಚಾಲುಕ್ಯ ರಾಜ್ಯದ ಅತ್ಯುನ್ನತ ಧರ್ಮಾಧಿಕಾರಿಯೆಂದು ಕೇಳಿದ್ದೇನೆ. ಶರಣರ ಮೇಲೆ ವರ್ಣಸಂಕರದ ಆಪಾದನೆ ಬಂದಾಗ ನೀವು ನಡೆಸಿದ ವಿಚಾರಣೆಯನ್ನು ಎಲ್ಲರೂ ಪ್ರಶಂಸಿಸುತ್ತಾರೆ. ನಾನು ಅಸತಿ, ಕುಲಟೆ ಎಂಬ ನಿಮ್ಮ ಆಪಾದನೆಯ ಬಗೆಗೆ ನನ್ನ ಸಮಾಧಾನವನ್ನು ಧರ್ಮಾಧಿಕಾರಿಯಂತೆ ಸಾವಧಾನದಿಂದ ಕೇಳಿ ತೀರ್ಪು ಕೊಡಿರಿ. ನಿಮ್ಮ ಆಪಾದನೆಗಳು ನಿಜವಾದರೆ ನೀವು ಹೇಳಿದ ಶಿಕ್ಷೆಗೆ ನಾನು ಗುರಿಯಾಗುತ್ತೇನೆ. ಆಪಾದನೆಗಳು ಸುಳ್ಳಾದರೆ......"

"ನಿನ್ನ ಇಚ್ಛೆ ಬಂದಂತೆ ನನಗೆ ಶಿಕ್ಷೆ ವಿಧಿಸಬಹುದು. ಈಗ ಹೇಳು, ರಾಣಿ. ನಿನ್ನ ಸಮಾಧಾನವೇನು ?" –ಬಿಜ್ಜಳನು ನಮ್ರನಾಗಿ ನುಡಿದನು.

ಆಗ ಕಾಮೇಶ್ವರಿ ಹೇಳಿದಳು :

"ಕರ್ಣಾಡದ ರಾಜಾಂತಃಪುರದಲ್ಲಿ ರಾಜಕನ್ಯೆಯಾಗಿ ನಾನು ಬೆಳೆದೆ. ಮಗುವಾಗಿದ್ದಾಗಲೆ ತಾಯನ್ನು ಕಳೆದುಕೊಂಡು ತಬ್ಬಲಿಯಾಗಿದ್ದ ನನ್ನ ಪಾಲನೆ ಪೋಷಣೆಗೆ ಗೊತ್ತಾಗಿದ್ದ ಮನೆತನಸ್ಥ ದಾದಿ ರಹಸ್ಯದಲ್ಲಿ ನನ್ನ ತಂದೆಯ

ಗಣಿಕೆಯಾಗಿದ್ದಳು. ಮಕ್ಕಳಿಲ್ಲದ ವಿಧವೆಯಾದವಳು ನನ್ನನ್ನು ಆದರ ಮಮತೆಗಳಿಂದ ಸಾಕಿದರೂ ರಾಜಾಂತಃಪುರಗಳಿಗೆ ಸಹಜವಾದ ದುಷ್ಟ ಪ್ರಭಾವಗಳಿಂದ ರಕ್ಷಿಸಲು ಸಮರ್ಥಳಾಗಲಿಲ್ಲ. ನನ್ನ ತಂದೆಗೆ ಇಬ್ಬರು ಪಟ್ಟಮಹಿಷಿಯರೂ, ಹಲವು ಮಂದಿ ಗಣಿಕಾಪತ್ನಿಯರು ಇದ್ದರಾದರೂ ನನ್ನನ್ನು ಸಾಕುತ್ತಿದ್ದ ದಾದಿಯ ಮೇಲೆ ಹೆಚ್ಚು ಪ್ರೇಮ. ನನ್ನನ್ನು ನೋಡಲು ಬಂದಾಗಲೆಲ್ಲಾ ದಾದಿಯೊಡನೆ ಚಕ್ಕಂದವಾಡದೆ ಹೋಗುತ್ತಿರಲಿಲ್ಲ ಅವರು. ಕೊನೆಕೊನೆಗೆ ತಂದೆ ಬರುವುದು ನನ್ನನ್ನು ನೋಡುವುದಕ್ಕಲ್ಲ, ದಾದಿಯೊಡನೆ ಚಕ್ಕಂದಕ್ಕಾಗಿ ಎನ್ನುವಷ್ಟು ದೂರಹೋಯಿತು ಆ ವಿಚಾರ. ಒಂದೊಂದು ದಿನ ರಾತ್ರಿ ಅರಮನೆಯಲ್ಲಿ ಎಲ್ಲರೂ ಮಲಗಿ ನಿದ್ದೆ ಹೋದಮೇಲೆ ತಂದೆ ನಾವಿದ್ದ ವಾಸಗೃಹಕ್ಕೆ ರಹಸ್ಯವಾಗಿ ಬರುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ದಾದಿ, ಪಾರ್ಶ್ವದಲ್ಲಿ ಮಲಗಿದ್ದ ನನ್ನನ್ನು ನಿದ್ರೆಮಾಡಿಸಿ ತಂದೆಯ ಆತುರಕ್ಕೆ ಮೈಯೊಡ್ಡ ಬೇಕಾಗುತ್ತಿತ್ತು. ಹೀಗೆ ಏಳೆಂಟು ವರ್ಷಗಳಾಗುವ ಮೊದಲೆ ನಾನು ಸ್ತ್ರೀ ಪುರುಷ ಸಂಬಂಧವನ್ನು ಕುರಿತ ಎಲ್ಲ ರಹಸ್ಯಗಳನ್ನೂ ತಿಳಿದೆ. ಅರಮನೆಯ ಬೇರೆ ವಾಸಗೃಹಗಳಲ್ಲಿ, ಮೊಗಶಾಲೆ ವಾತಾಯನಗಳ ಕತ್ತಲು ತುಂಬಿದ ಮೂಲೆಗಳಲ್ಲಿ, ಅರಮನೆಯ ರಾಜಮಹಿಳೆಯರು, ಗಣಿಕೆಯರು, ದಾಸದಾಸಿಯರು, ಪರಿವಾರದ ನಟ ನರ್ತಕ ಪಂಡಿತ ಗಾಯಕರು, ಇವರ ನಡುವೆ ನಡೆಯುತ್ತಿದ್ದ ಸರಸಸಲ್ಲಾಪ ಸಂಕೇತಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ನನಗೆ ಈ ಅನುಭವ ಸಹಾಯಕವಾಯಿತು.

"ಈ ರೀತಿ ನನ್ನ ಬುದ್ಧಿಚತುರತೆ ಅಶ್ಲೀಲದ ಕಡೆಗೆ ತಿರುಗುತ್ತಿದ್ದುದನ್ನು ಗಮನಿಸಿದ ದಾದಿ ನನ್ನನ್ನು ಎಚ್ಚರಿಕೆಯಿಂದ ನೋಡಿಕೊಳ್ಳಲು ಮೊದಲುಮಾಡಿದಳು. ಸಮವಯಸ್ಕರಾದ ಬಾಲಕರೊಡನೆ ಆಡಲು ಬಿಡತ್ತಿರಲಿಲ್ಲ. ಅಣ್ಣ ವಿಜಯಾರ್ಕನು ಕೂಡಾ ದಾದಿ ಎದುರಿಗಿದ್ದಾಗಲೇ ನನ್ನನ್ನು ನೋಡಬೇಕಾಗುತ್ತಿತ್ತು. ನನ್ನ ವಯಸ್ಸು ಹೆಚ್ಚಿದಂತೆ ದಾದಿಯ ಸರ್ಪಕಾವಲು ಬಲವಾಯಿತು. ಅದರ ಫಲವಾಗಿ ನಾನು ಕೈಶೋರವನ್ನು ಕಳೆದು ತರುಣಿಯಾದರೂ ಪುರುಷ ಸಂಬಂಧವಿಲ್ಲದ ಕನ್ಯೆ ಯಾಗಿಯೇ ಉಳಿದಿದ್ದೆ.

"ನಮ್ಮ ರಾಜಾಂತಃಪುರಗಳಲ್ಲಿ ಇದೊಂದು ಅಪೂರ್ವ ಅದ್ಭುತ ಘಟನೆ ಎಂಬುದನ್ನು ನೀವು ಅನುಭವದಿಂದ ತಿಳಿದಿರಬಹುದು. ಅಲ್ಲಿ ಎಲ್ಲ ಕಡೆ ಹರಡಿರುವ ಕಾಮೋತ್ತೇಜಕವಾದ ಕಲುಷಿತ ವಾತಾವರಣ, ಪರಿವಾರದ ದಾಸದಾಸಿಯರ ಅಸಂಯತ ಅನೀತಿ ವರ್ತನೆ, ರಾಜಮಹಿಳೆಯರ ಮತ್ತು ರಾಜನ ಗಣಿಕಾಪರಿವಾರದ ಅಕ್ರಮ ಅಗಮ್ಯ ಸಂಬಂಧಗಳು,–ಈ ದುಷ್ಟಶಕ್ತಿಗಳ ನಡುವೆ ಅವುಗಳ

ಪ್ರಭಾವಕ್ಕೊಳಗಾಗಿ ಬೆಳೆಯುವ ರಾಜಕನ್ಯೆ ಎಂಟು ಹತ್ತು ವರ್ಷಗಳು ತುಂಬುವ ಮೊದಲೆ ಪರಿವಾರದ ಯಾವನಾದರೊಬ್ಬ ಸಾಹಸಿ ತರುಣನ ಪ್ರೇಯಸಿ ಆಗುತ್ತಾಳೆ. ಮದುವೆಯಾಗಿ ಗಂಡನ ಮನೆಗೆ ಹೋಗುವ ಮೊದಲೇ ಗರ್ಭವತಿಯಾಗಿ ಮಗುವನ್ನು ಹೆತ್ತ ಪ್ರಸಂಗಗಳು ನಮ್ಮ ರಾಜಾಂತಃಪುರಗಳು ವರ್ಣಿಸಲ್ಪಟ್ಟಿವೆ.

"ಈ ಪರಿಸ್ಥಿತಿಯ ಫಲವಾಗಿ ಎಷ್ಟೇ ಉದ್ರೇಕಕ್ಕೆ ಒಳಗಾಗಲಿ ಮನಶ್ಶಕ್ತಿ ಸಂಕಲ್ಪಗಳಿಂದ ಅದನ್ನು ತಡೆದಿಡುವ ಸಂಯಮ ನನಗೆ ಅಭ್ಯಾಸವಾಯಿತು. ಹೆಣ್ಣಿಗೆ ಸಹಜವಾದ ವಿಭ್ರಮವಿಲಾಸ, ಆಕರ್ಷಣೆಗಳನ್ನು ನನ್ನ ಇಚ್ಛೆ ಅನುಕೂಲಗಳ ಸಾಧನಗಳನ್ನಾಗಿ ಉಪಯೋಗಿಸಿಕೊಳ್ಳುವ ಕೌಶಲ ಮೂಡಿತು. ಒಂದು ದೃಷ್ಟಿಯಿಂದ ಅವುಗಳಲ್ಲಿ ಸಿದ್ಧಿ ಪಡೆದೆನೆಂದೂ ಹೇಳಬಲ್ಲೆ.

"ತೈಲಪ ದೇವನೊಡನೆ ಮದುವೆಯಾದಾಗ ನನಗೆ ೧೮ ವರ್ಷ ವಯಸ್ಸು. ಕಲ್ಯಾಣದ ಚಾಲುಕ್ಯ ಅರಮನೆಗೆ ಬಂದು ಆಗತಾನೆ ಬೆಳೆಯುತ್ತಿದ್ದ ಗಣಿಕಾಪರಿವಾರವನ್ನು ಕಂಡಾಗ ನನಗೆ ಆಶ್ಚರ್ಯವಾಗಲಿಲ್ಲ. ರಾಜಾಂತಃಪುರಗಳ ಕಾಮೋತ್ತೇಜಕ ಅನೀತಿಮಯ ಅಶ್ಲೀಲ ಪರಿಸ್ಥಿತಿ ಆಗಲೆ ನನಗೆ ಪರಿಚಯವಾಗಿತ್ತು. ನನಗೆ ಇಚ್ಛೆ ಇರಲಿ, ಇಲ್ಲದಿರಲಿ, ಮೊದಲ ಕೆಲವು ವಾರಗಳು ಪತಿಯ ಆತುರ ಆವೇಗಗಳಿಗೆ ದೇಹವನ್ನು ಬಲಿಕೊಡುವುದು ನನಗೆ ಅನಿವಾರ್ಯವಾಯಿತು. ನನ್ನ ಹೊಸತನ ಕಳೆದು ಪತಿಯ ದೃಷ್ಟಿ ಪುನಃ ಗಣಿಕಾವಾಸದ ಕಡೆ ತಿರುಗುವಷ್ಟರಲ್ಲಿ ನಾನು ಗರ್ಭಿಣಿಯಾಗಿದ್ದೆ. ಆಮೇಲಿನ ಹತ್ತು ಹನ್ನೊಂದು ವರ್ಷಗಳಲ್ಲಿ ನಾನು ಹತ್ತು ರಾತ್ರಿಗಳನ್ನು ಪತಿಯೊಡನೆ ಕಳೆದಿದ್ದರೆ ಹೆಚ್ಚೆಂದು ಕಾಣುತ್ತದೆ. ಪತಿ ಗಣಿಕಾವಾಸದಲ್ಲಿ, ನಾನು ಅರಮನೆಯ ಏಕಾಂತದಲ್ಲಿ. ಪ್ರಿಯರನ್ನು ಹುಡುಕಲು ಸಾಕಾದಷ್ಟು ಅನುಕೂಲ ಅವಕಾಶಗಳು ನನಗಿದ್ದವು. ಅಭ್ಯರ್ಥಿಗಳ ಅಭಾವವಿರಲಿಲ್ಲ. ಆದರೆ ಚಿಕ್ಕಂದಿನಿಂದ ಅಭ್ಯಾಸವಾಗಿದ್ದ ಸಂಯಮ ನನ್ನನ್ನು ರಕ್ಷಿಸಿತು.

"ಮದುವೆಯಾದ ಹನ್ನೆರಡನೆಯ ವರ್ಷ ನನಗೆ ಪತಿವಿಯೋಗವಾದದ್ದು. ಕೆಲವೇ ವಾರಗಳ ಅಂತರದಲ್ಲಿ ಕುಮಾರ ಕೀರ್ತಿವರ್ಮನೂ ಮೃತನಾದನು. ಆಮೇಲೆ ಚಾಲುಕ್ಯ ವಂಶದ ಉದ್ಧಾರಕ್ಕಾಗಿ ಜಗದೇಕಮಲ್ಲರಸರ ಸಂಬಂಧ ಬೆಳೆಸುವ ಉದ್ದೇಶದಿಂದ ನಾನು ಕಲ್ಯಾಣಕ್ಕೆ ಬಂದೆ. ನನಗೆ ಶೀಲವಂತನ ಪರಿಚಯವಾದದ್ದು ಆ ಸಂದರ್ಭದಲ್ಲಿ. ಅವನು ವಯಸ್ಸಿನಲ್ಲಿ ಚಿಕ್ಕವನಾದರೂ ಕಲಾಜಾಗ್ರತಿ ಸೌಂದರ್ಯ ಪ್ರಜ್ಞೆಗಳು ಚೆನ್ನಾಗಿ ಬೆಳೆದಿದ್ದವು. ನಾನು ಅಸಾಮಾನ್ಯ ರೂಪವತಿ ಎಂಬುದನ್ನು ಮೊದಲು ಗುರುತಿಸಿದವನು ಆ ಕಿಶೋರ ವಯಸ್ಸಿನ ಕಲಾವಿದ. ಅವನ ಮೆಚ್ಚುಗೆ ನನ್ನನ್ನು ಆಕರ್ಷಿಸಿದ್ದು ನಿಜ. ಆದರೆ ಅದರಲ್ಲಿ ಪ್ರೇಮದ ಪಾತ್ರವೇನೂ ಇರಲಿಲ್ಲ."

ಇಷ್ಟು ಹೇಳಿ ಕಾಮೇಶ್ವರಿ ನಿಲ್ಲಿಸಿದಳು. ಆಗ ಬಿಜ್ಜಳನು, "ಹಾಗಾದರೆ ಅವನು ನಿನ್ನ ನಗ್ನ ಚಿತ್ರ ಬರೆದದ್ದು ಹೇಗೆ?" ಎಂದು ಪ್ರಶ್ನಿಸಿದನು.

ಕಾಮೇಶ್ವರಿ ಹೇಳಿದಳು : "ಅದೊಂದು ಕಲ್ಪನಾಚಿತ್ರ. ವಸ್ತ್ರ ಸಹಿತವಾದ ನನ್ನ ಬೆನ್ನ ಕಡೆಯ ನಿಲುವನ್ನು ತೋರಿಸುವ ಒಂದು ಚಿತ್ರವನ್ನು ಆಧರಿಸಿ ಶೀಲವಂತ ಆ ಚಿತ್ರವನ್ನು ಬರೆದನು. ಚಿಕ್ಕ ವಯಸ್ಸಿನಲ್ಲಿಯೇ ಅವನ ಕಲಾದೃಷ್ಟಿ ಪಾರದರ್ಶಕವಾಗಿತ್ತೆಂಬುದನ್ನು ಇದರಿಂದ ತಿಳಿಯಬಹುದು. ನಾನು ಅಪೇಕ್ಷಿಸಿದ್ದರೆ ಅವನನ್ನು ಸುಲಭವಾಗಿ ಒಲಿಸಿಕೊಳ್ಳುತ್ತಿದ್ದೆ. ಅಂತಃಪುರವಾಸಿನಿಯರ ಸಂಪ್ರದಾಯದಂತೆ ನನಗಿಂತ ಹತ್ತಾರು ವರ್ಷ ಚಿಕ್ಕವನಾಗಿದ್ದ ಶೀಲವಂತನಿಗೆ ನಾನು ಪ್ರೇಮಶಿಕ್ಷಕಿ ಆಗಬಹುದಾಗಿತ್ತು. ಆದರೆ ಪ್ರಯತ್ನ ಪರಿಶ್ರಮಗಳಿಲ್ಲದೆ ದೊರಕಬಹುದಾಗಿದ್ದ ಆ ಅಲ್ಪ ವಿಜಯಕ್ಕೆ ನಾನು ಹಾರೈಸಲಿಲ್ಲ. ಆಮೇಲೆ ನಾನು ಬೇಟೆಯ ಅರಣ್ಯ ಶಿಬಿರದಲ್ಲಿ ಜಗದೇಕಮಲ್ಲರಸರನ್ನು ಕಂಡದ್ದು. ಅದರ ವಿವರಗಳನ್ನು ನೀವು ತಿಳಿದಿದ್ದೀರಿ. ವಂಶವೃದ್ಧಿಗಾಗಿ ನಡೆದ ಆ ಸಂಬಂಧದಿಂದ ನನ್ನ ಸತೀತ್ವ ಭಂಗವಾಗಲಿಲ್ಲ."

–ಎಂದು ಕಾಮೇಶ್ವರಿ ಪುನಃ ನಿಲ್ಲಿಸಿದಳು. ಈ ಮಾತುಗಳು ನಡೆಯುತ್ತಿದ್ದಂತೆ ಬಿಜ್ಜಳನು ಅವಳ ಅಸಾಮಾನ್ಯ ಅಂಗಸೌಷ್ಟವ ಲಾವಣ್ಯಗಳನ್ನು ಬೆಬ್ಬೆರಗಾಗಿ ಎವೆಯಿಕ್ಕದೆ ನೋಡುತ್ತಿದ್ದನು. ಪ್ರವಾಸ ವಿಜಯ ಯಾತ್ರೆಗಳಲ್ಲಿ ಅವನು ಬಹು ಮಂದಿ ಚೆಲುವೆಯರನ್ನು ಕಂಡಿದ್ದನು. ವಿಭ್ರಮ ವಿಲಾಸಗಳಿಗೆ ಹೆಸರಾದ ತ್ರಿಪುರಿಯ ಕ್ಷತ್ರಿಯ ಕನ್ಯೆಯರು, ಕೋನಾರ್ಕದ ಶೃಂಗಾರಪ್ರಿಯ ನರ್ತಕಿಯರು, ಚೋಳ ಪಾಂಡ್ಯ ದೇಶಗಳ ಲಾವಣ್ಯವತಿಯರಾದ ಶ್ರೀಮಂತ ಪುತ್ರಿಯರು, ಕ್ರೀಡಾನಿಪುಣರಾದ ಗೋಮಂತಕದ ಗಣಿಕೆಯರು, ಗುಜರಾತಿನ ನಗೆಗಣ್ಣು ತುಂಬೆದೆಯ ವಣಿಕ್ ಪುತ್ರಿಯರು, ಸಪ್ತ ಕೊಂಕಣಗಳ ವಿಲಾಸವತಿ ಗ್ರಾಮೀಣ ಯುವತಿಯರು, ಅವನಿಗೆ ಪರಿಚಿತರಾಗಿದ್ದರು. ಆದರೆ ಕಾಮೇಶ್ವರಿಯಂತಹ ಅಸಾಮಾನ್ಯ ರೂಪವತಿಯನ್ನು ಅವನು ಯಾವಾಗಲೂ ಎಲ್ಲಿಯೂ ನೋಡಿರಲಿಲಲ. ಸೌಂದರ್ಯದ ನೆಲೆವೀಡೆಂದು ಕರೆಯಲ್ಪಡುತ್ತಿದ್ದ ಕುಂತಳದಲ್ಲಿಯೂ ಅಂತಹ ರೂಪವತಿಯರು ತಲೆಮಾರಿಗೆ ಒಬ್ಬರೋ ಇಬ್ಬರೋ ಜನ್ಮತಳೆಯುವರೆಂದು ಅವನು ತಿಳಿದಿದ್ದನು.

ಕಾಮೇಶ್ವರಿ ಸೀರೆಯುಟ್ಟು ಸೆರಗು ಮುಡಿಗಳನ್ನು ಸರಿಪಡಿಸಿಕೊಳ್ಳುತ್ತಿದ್ದಂತೆ ಅವನು, "ನಿನ್ನನ್ನು ನೋಡಿ ನನಗೊಂದು ಪದ್ಯ ನೆನಪಾಗುತ್ತಿದೆ ರಾಣಿ" ಎಂದನು.

"ರಾಜಕಾರಣಗಳ ನಡುವೆ ಕವಿತೆಗಳನ್ನು ಓದುವ ಹವ್ಯಾಸವೂ ಇದೆ ನಿಮಗೆ ! ಯಾವುದಾ ಪದ್ಯ?" –ಎಂದು ಕಾಮೇಶ್ವರಿ ಹುಡುಗಾಟಿಕೆಯಿಂದ ಕೇಳಿದಳು.

"ರಾಜಕಾರ್ಯಗಳ ನಡುವೆ ನನಗೆ ಕೊಂಚ ಶಾಂತಿಯನ್ನು ಕೊಟ್ಟಿದ್ದರೆ ಅದು ಈ ಪದ್ಯ," ಎಂದು ಬಿಜ್ಜಳನು ಪಠಿಸಿದನು –

"ಮಾತಿನಲಿ ವಕ್ರತೆಯು, ಕಣ್ಣುಗಳ ಚಾಂಚಲ್ಯ,
ಹುಬ್ಬುಗಳ ಕುಟಿಲತೆ ವಿಲಾಸವಿಭ್ರಮವು :
ಕುಚಯುಗದ ಕಠಿಣತೆ, ನಿತಂಬಗಳ ವಿಸ್ತಾರ,
ಶಾಂತಲೆ, ಇವೆಲ್ಲ ದೋಷಗಳು ನಿನ್ನ
ಅಂಗಗಳನಾಶ್ರಯಿಸಿ ಗುಣದಂತೆ ಮರೆಯುವವು.
ಸೋಜಿಗವು ನಿನ್ನ ಸೌಭಾಗ್ಯ ಲೀಲೆ !
ಇದನ್ನೆಲ್ಲ ಬಣ್ಣಿಸುವ ನಿಶಿತಮತಿ ಕವಿವರನು
ಹುಟ್ಟುವನೊ ಹುಟ್ಟನೋ ಅವನಿಯಲ್ಲಿ ?"*

"ಹೊಯ್ಸಳ ರಾಣಿ ಶಾಂತಲಾದೇವಿಯನ್ನು ಕುರಿತು ಉನ್ಮತ್ತ ಕವಿಯೊಬ್ಬನು ಹೇಳಿದ ಈ ಪದ್ಯವನ್ನು ನೀವು ನನಗೇಕೆ ಅನ್ವಯಿಸುವಿರಿ?"

"ಕವಿ ಉನ್ಮತ್ತನಾದರೂ ಅವನು ಬರೆದ ಪದ್ಯ ಶಾಸನಸ್ಥವಾಯಿತು, ರಾಣಿ. ದೋರಸಮುದ್ರದಲ್ಲಿರುವ ನಮ್ಮ ಪತ್ರಲೇಖಕನು, ವಿಷ್ಣುವರ್ಧನನ ಶಾಸನದಿಂದ ಈ ಪದ್ಯವನ್ನು ಉದ್ಧರಿಸಿ ಕಳುಹಿಸಿದನು. ಓದಿದಾಗ ಚಿತ್ರದ ನೆನಪಾಗಿ ಈ ಪದ್ಯವನ್ನು ಅದರೊಡನೆ ಕೂಡಿಸಿಟ್ಟೆ." –ಬಿಜ್ಜಳನು ಉತ್ತರ ಕೊಟ್ಟನು.

"ಕೂಡಿಸಿಟ್ಟ ಕಾರಣ?"

"ಐವತ್ತು ವರ್ಷಗಳ ಹಿಂದೆ ಹೊಯ್ಸಳ ಆಸ್ಥಾನದ ಕವಿಯೊಬ್ಬನು ಶಾಂತಲೆಯನ್ನು ವರ್ಣಿಸಿ ಬರೆದ ಆ ಪದ್ಯ ಶೀಲವಂತ ರಚಿಸಿದ ನಿನ್ನ ಚಿತ್ರಕ್ಕೆ ಹೊಂದಿಕೆಯಾಗುವುದೆಂದು. ಇಂದು ನಿನ್ನನ್ನು ನೋಡಿದಾಗ ನನಗೆ ಸತ್ಯ ದರ್ಶನವಾಯಿತು. ಶಾಂತಲೆಯ ಸೌಂದರ್ಯವನ್ನು ವರ್ಣಿಸಲು ಶಕ್ತನಾದ ಕವಿ ಹುಟ್ಟದಿರಬಹುದು. ಆದರೆ ಸಮಕಾಲೀನ ಶಿಲ್ಪಿಯೊಬ್ಬನು ಆ ಚೆಲುವನ್ನು ಶಿಲೆಯಲ್ಲಿ

---

* ಈ ಪದ್ಯದ ಮೂಲ " ಎಪಿಗ್ರಾಫಿಕಾ ಕರ್ನಾಟಕ"ದ ಶಿವಮೊಗ್ಗ ಸಂಪುಟದ ಸೊರಬ ೧೩೧ನೆಯ ಶಾಸನದಲ್ಲಿ ಈ ರೀತಿ ಇದೆ :

ಉಕ್ತೌ ವಕ್ರಗುಣಂ, ದೃಶೋಸ್ತರಳತಾ , ಸದ್ವಿಭ್ರಮಂ ಭ್ರೂಯುಗೇ,
ಕಾಠಿಣ್ಯ ಕುಚಯೋ, ನಿತಂಬ ಫಲಕೇ ಥತ್ಸೇತಿಮಾತ್ರಕ್ರಮಂ
ದೋಷಾನೇವ ಗುಣೀಕರೋಷಿ ಸುಭಗೇ ಸೌಭಾಗ್ಯ ಭಾಗ್ಯಂ ತವ
ವ್ಯಕ್ತಃಶಾಂತಲದೇವಿ ವಕ್ತುಮವನೌ ಶಕ್ನೋತಿ ಕೋವಾ ಕವಿಃ ॥

ಬಿಡಿಸಿದ್ದಾನೆ. ಆ ಶಿಲ್ಪಿಯ ಅವಿನಯ ಶಾಂತಲೆಯ ದುರ್ಮರಣಕ್ಕೆ ಕಾರಣವಾಯಿತೆಂದು ಜನ ಹೇಳುವುದನ್ನು ಕೇಳಿದ್ದೇನೆ."

"ಇನ್ನು ಕೆಲವರು ಹೇಳುತ್ತಾರೆ, ಹೊಸದಾಗಿ ಗರುಡನಾದ ತರುಣನೊಬ್ಬನ ದುಡುಕತನ ದುರಂತದ ಕಾರಣವೆಂದು. ರಾಜಕಾರಣಿಗಳಾದ ನೀವು ಈ ದಂತಕಥೆಗಳನ್ನು ನಂಬುವಿರಾ ?"

"ಸತ್ಯಕಥೆ ತಿಳಿಯುವವರೆಗೆ ದಂತಕಥೆ ಪ್ರಚಾರದಲ್ಲಿರುವುದು ಸಹಜ."

ಕಾಮೇಶ್ವರಿ ಆವೇಶದಿಂದ, "ಸತ್ಯಕಥೆ ನನಗೆ ತಿಳಿದಿದೆ. ಶಾಂತಲೆಯ ಮರಣಕ್ಕೆ ಕಾರಣ ಶಿಲ್ಪಿಯ ಅವಿನಯವೂ ಅಲ್ಲ, ಗರುಡನ ದುಡುಕುತನವೂ ಅಲ್ಲ. ಪುರುಷರು ಪ್ರತಿನಿತ್ಯ ನಡೆಸುವ ಅದಮ್ಯ ಅತ್ಯಾಚಾರ ! ವಿಷ್ಣುವರ್ಧನನಂತಹ ಲಂಪಟ ನಿರಂಕುಶ ಬರ್ಭರ ರಾಜನ ಭೋಗಿನಿ ಆಗಿರಲು ನಿರಾಕರಿಸಿ ಶಾಂತಲೆ ಸಾವನ್ನಪ್ಪಿದಳು," ಎಂದು ನುಡಿದಳು.

ಶಾಂತಲೆಯನ್ನು ಕುರಿತು ಆಗ ಪ್ರಚಾರದಲ್ಲಿದ್ದ ಅಪವಾದಗಳ ಅನೀತಿ ಅಸತ್ಯ ಆತ್ಯಾಚಾರಗಳೂ ಕಾಮೇಶ್ವರಿಯನ್ನು ಕೆರಳಿಸಿದ್ದವು. ಶಾಂತಲೆ ಮೃತಳಾದ ಕೆಲವೇ ತಿಂಗಳ ಅನಂತರ ವಿಷ್ಣುವರ್ಧನನು ರೂಪವತಿಯರಾದ ಇಬ್ಬರು ಸೋದರಿಯರನ್ನು ಏಕಕಾಲದಲ್ಲಿ ಮದುವೆಯಾದದ್ದು ಅವಳಿಗೆ ತಿಳಿದಿತ್ತು

"ಈ ಆವೇಶ ನಿನಗೊಪ್ಪುವುದು, ರಾಣಿ !"–ಎಂದು ಬಿಜ್ಜಳನು ಪುನಃ ಮೆಚ್ಚುಗೆಯ ಮಾತಾಡಿದನು.

"ನಿಮ್ಮ ಪಟ್ಟಿಯಲ್ಲಿ ಉಳಿದಿರುವ ಇನ್ನೆರಡು ಹೆಸರುಗಳ ವಿಚಾರದಲ್ಲಿ ನನ್ನ ವಿವರಣೆ ಕೇಳಿದ ಮೇಲೆ ಮೆಚ್ಚುಗೆ ಉಳಿಯುವುದೇ ಎಂದು ನನ್ನ ಸಂದೇಹ,"– ಎಂದು ಕೊಂಕು ನುಡಿದಳು ಕಾಮೇಶ್ವರಿ.

"ವಿವರಣೆ ಮುಗಿದರೆ ನಿನಗೇ ಅದು ತಿಳಿಯುವುದು," –ಎಂದು ಬಿಜ್ಜಳನು ಮಾರ್ಮಿಕವಾಗಿ ಉತ್ತರಿಸಿದನು.

ಕಾಮೇಶ್ವರಿ ಹೇಳಿದಳು : "ಬೇಟೆಯ ಅರಣ್ಯದ ಅಂಚಿನಲ್ಲಿದ್ದ ಒಂದು ಸಣ್ಣ ಹಳ್ಳಿಯಲ್ಲಿ ನಾವು ಬಿಡಾರ ಮಾಡಿದ್ದೆವು. ಆ ರಾತ್ರಿ ನಾನು ಜಗದೇಕಮಲ್ಲರಸರ ಶಿಬಿರಕ್ಕೆ ಹೋಗಿದ್ದಾಗ ನಿಮ್ಮ ಸಹೋದರ ಕರ್ಣದೇವನು ಬಿಡಾರದಲ್ಲಿದ್ದ ಕದಂಬ ರಾಜಕನ್ಯೆ ಕುಸುಮಾವಳಿಯ ಮೇಲೆ ನಡೆಸಿದ ಅತ್ಯಾಚಾರ ಪ್ರಯತ್ನ ಮುಂದಿನ ದುರ್ಘಟನೆಗೆ ಕಾರಣವಾಯಿತು. ರಾಜಕನ್ಯೆಯ ಸಹಾಯಕ್ಕೆ ಹೋದ ಶೀಲವಂತ ಕರ್ಣದೇವನ ಕೋಪಕ್ಕೆ ಪಾತ್ರನಾದನು. ನಾನು ಕಲ್ಯಾಣಕ್ಕೆ ಹಿಂದಿರುಗಿದ ದಿನ ರಾತ್ರಿ, ಕರ್ಹಾಡಕ್ಕೆ ಮರುದಿನ ಮುಂಜಾವಿನಲ್ಲಿ ಪಯಣಮಾಡಲು ಸಿದ್ಧಳಾಗುತ್ತಿದ್ದಂತೆ,

ಕರ್ಣದೇವ ನನ್ನನ್ನು ನೋಡಲು ಬಂದನು. ಶೀಲವಂತನಿಗೆ ನಾನು ಬಹುಮಾನವಾಗಿ ಕೊಟ್ಟಿದ್ದ ಕಡಗವನ್ನು ತೋರಿಸಿ ಬೆದರಿಸಿದನು. ಶೀಲವಂತನ ಪ್ರಾಣವನ್ನುಳಿಸಲು ನಾನು ಕರ್ಣದೇವನ ಸಲಹೆಗೆ ಒಪ್ಪಿದೆ. ಅವನನ್ನು ಅಂತಃಗೃಹಕ್ಕೆ ಕರೆದುಕೊಂಡು ಹೋಗಿ ತಲ್ಪದ ಮೇಲೆ ಕುಳ್ಳಿರಿಸಿ ಮಧುಪಾತ್ರೆಯನ್ನು ಮುಂದಿಟ್ಟೆ. ಆಮೇಲಿನ ಘಟನೆಗಳು ಯಾಂತ್ರಿಕವಾಗಿ ನಡೆದವು. ನಾಲ್ಕಾರು ಬಟ್ಟಲು ಮಧುವನ್ನು ಕುಡಿದು ಕರ್ಣದೇವ ಮತ್ತನಾದ. ನಾನು ಅಲ್ಲಿಂದ ಸರಿದು ನನ್ನಂತೆ ವೇಷ ಭೂಷಣಗಳನ್ನು ಧರಿಸಿದ್ದ ದಾಸಿಯನ್ನು ಕಳುಹಿಸಿದೆ. ಕರ್ಣದೇವನೊಡನೆ ಆ ರಾತ್ರಿಯನ್ನು ಕಳೆದವಳೂ ಆ ದಾಸಿ, ನಾನಲ್ಲ."

"ಆಹಾ ! ರಾಣಿ ದಾಸಿಯರ ನಡುವಣ ಅಂತರವನ್ನು ತಿಳಿಯಲು ಅಸಮರ್ಥನಾದನೇ ಕರ್ಣದೇವ !" –ಬಿಜ್ಜಳನು ಅವಿಶ್ವಾಸದಿಂದ ಹೇಳಿದನು.

"ಆಕಾರೇಂಗಿತಗಳಲ್ಲಿ ಆ ದಾಸಿ ನನ್ನನ್ನು ಬಹುಮಟ್ಟಿಗೆ ಹೋಲುತ್ತಾಳೆ. ನನ್ನಂತೆ ಉಡುಪು ಧರಿಸಿದರೆ ಪರಿಚಿತರಿಗೆ ಕೂಡಾ, ರಾಣಿ ಯಾರು, ದಾಸಿ ಯಾರು, ಎಂದು ತಿಳಿಯಲು ಕಷ್ಟವಾಗುವುದು."

"ಹಾಗಾದರೆ ನನ್ನೆದುರಿಗಿರುವ ಈ ಹೆಣ್ಣು ರಾಣಿಯೋ ದಾಸಿಯೋ ?"

–ಎಂದು ಬಿಜ್ಜಳನು ಮಂಚದಿಂದಿಳಿದು ಕಾಮೇಶ್ವರಿಯ ಕೈಹಿಡಿದನು.

"ನನ್ನ ಕೈಬಿಡಿರಿ. ಗರುಡ ಹಕ್ಕಿಯಂತೆ ಮೇಲೆರಗಿ ಅಸಲು ಮಾಲನ್ನೇ ಅಪಹರಿಸಿದಿರಿ ನೀವು. ವಂಚಿಸುವ ಅವಕಾಶವೂ ಇರಲಿಲ್ಲ ನನಗೆ,"–ಎಂದು ಕಾಮೇಶ್ವರಿ ಚಡಪಡಿಸಿದಳು.

ಬಿಜ್ಜಳನು ಬಟ್ಟೆಗಳನ್ನು ಉಡುತ್ತಿದ್ದಂತೆ ಕಾಮೇಶ್ವರಿ ಮುಂದುವರಿದು ಹೇಳಿದಳು : "ಇನ್ನು ಅಗ್ಗಳನ ವಿಚಾರ. ಅವನು ನನ್ನ ಸ್ವಾಮಿನಿಷ್ಠ ಸೇವಕನು ಮಾತ್ರ. ಅಣ್ಣ ವಿಜಯಾರ್ಕನ ಸಮಕ್ಷಮ ರಾಜನಿಷ್ಠೆಯ ಪ್ರಮಾಣ ಮಾಡಿದ ಮೇಲೆ ಅವನು ನನ್ನ ಮನೆಹೆಗ್ಗಡೆ ಆದನು. ಅವನೊಡನೆ ನಾನು ಸಲಿಗೆಯಿಂದ ನಡೆದುಕೊಂಡರೂ ಸಭ್ಯತೆಯನ್ನು ಮೀರಿಲ್ಲ. ಬಾಲ್ಯದಿಂದ ನನಗೆ ಅಭ್ಯಾಸವಾಗಿದ್ದ ಸಂಯಮ, ಕವಿಗೆ ಸಹಜವಾದ ಗಂಭೀರ ವರ್ತನೆ, ಇವು ನಮ್ಮನ್ನು ರಕ್ಷಿಸಿದವು."

"ಹಾಗಾದರೆ ಈ ಪದ್ಯದ ಅರ್ಥ ?" ಎಂದು ಬಿಜ್ಜಳನು ವಾಸಗೃಹದ ಪೀಠದ ಮೇಲಿದ್ದ ವರ್ಣಚಿತ್ರವನ್ನು ತೆಗೆದು ಕಾಮೇಶ್ವರಿಗೆ ಕೊಟ್ಟನು. ಕಡತದ ಹಾಳೆಯೊಂದನ್ನು ಚಿತ್ರಕ್ಕೆ ಕೂಡಿಸಿತ್ತು.

ಕಾಮೇಶ್ವರಿ ನೋಡಿದಳು. ಶೀಲವಂತ ಬರೆದ ನಗ್ನಚಿತ್ರ ಅದು ! ಕಡತದ ಹಾಳೆಯಲ್ಲಿ, ಶಾಂತಲೆಯನ್ನು ಕುರಿತ ಪದ್ಯದ ಅಡಿಯಲ್ಲಿ ಮುಂದಿನ ಪದ್ಯವಿತ್ತು:

ಎರಳೆ ಕಂಗಳ ಚಲುವೆ ಇವಳ ಸೃಷ್ಟಿಕ್ರಮದೆ
ನಾಭಿಯಿಂ ಮೇಲಿನಂಗಗಳನೆಲ್ಲ
ಮೊದಲಿನಮಿತೋತ್ಸಾಹದಿಂದೆ ಚಲುವಿಕೆಯ ನೆಲೆ
ಎಂಬಂತೆ ವಿರಚಿಸಿದ ವಿಧಿಯು ಬಳಿಕ ;
ದುಡಿದುಡಿದು ದಣಿದು ಬೇಸರಗೊಂಡ ಕೈಗಳಿಂ
ಮುಂದೆ ಜಘನ ಸ್ಥಳದ ಹರವನಿಂತು
ಪೃಥುಲ ಪೃಥುಲ ಸ್ಥೂಲ ಸ್ಥೂಲಮಾಗಿ
ನಿರ್ಮಿಸಿದನೋ ಕಾಣೆ, ಜಡತೆ ಮಸಗಿ !*

ಕಾಮೇಶ್ವರಿ ಬಿಜ್ಜಳನ ಕಡೆ ತಿರುಗಿ, "ಈ ಎರಡು ಪದ್ಯಗಳನ್ನು ನೀವು ಒಂದೇ ಕಡೆ ಬರೆದಿಟ್ಟ ಉದ್ದೇಶವೇನು?" ಎಂದು ಕೇಳಿದಳು.

ಒಂದಕ್ಕೊಂದು ಪೂರಕವೆಂದು ಶಾಂತಲೆಯನ್ನು ಕುರಿತ ಪದ್ಯದಲ್ಲಿ ನಿನ್ನ ಬೆನ್ನ ಕಡೆಯ ನಿಲುವಿನ ಸುಂದರ ವರ್ಣನೆಯಿದೆ. ಅದನ್ನು ಬರೆದ ಕವಿ ಅಷ್ಟಕ್ಕೆ ತೃಪ್ತನಾಗಬೇಕಾಯಿತೋ ಏನೋ ! ಅಗ್ಗಳನ ಪದ್ಯ ನಿನ್ನ ಮುಂಗಡೆಯ ನಿಲುವನು ಸ್ವಾರಸ್ಯವಾಗಿ ಕಣ್ಣಿಗೆ ಕಟ್ಟಿದಂತೆ ವರ್ಣಿಸುತ್ತದೆ." –ಬಿಜ್ಜಳನು ನಸನಕ್ಕು ಉತ್ತರ ಕೊಟ್ಟನು.

ಕಾಮೇಶ್ವರಿ ಕೆಲವು ಕ್ಷಣಗಳು ವಿಚಾರಮಗ್ನೆಯಾಗಿ ನಿಂತು ಬಳಿಕ,

"ಎಂತಹ ಅರಸಿಕರು ನೀವು ! ಅಗ್ಗಳನ ಪದ್ಯ ವರ್ಣಿಸುವುದು ನನ್ನನ್ನೇ ಹೋಲುವ ಆ ದಾಸಿಯ ಮುನ್ನಿಲವನ್ನು. ಆ ಪದ್ಯದಲ್ಲಿ ಹೇಳುವಂತೆ ನನ್ನ ಸೃಷ್ಟಿ ಕ್ರಮದಲ್ಲಿ ಬ್ರಹ್ಮದೇವನು ಬೇಸರಗೊಳ್ಳಲಿಲ್ಲ. ನನ್ನ ರಚನಾವಿಧಾನ ಪೃಥುಲ ಪೃಥುಲವೂ ಅಲ್ಲ, ಸ್ಥೂಲ ಸ್ಥೂಲವೂ ಅಲ್ಲ. ನಾಭಿಯ ಮೇಲೇ ಏಕೆ? ಸರ್ವಾಂಗದಲ್ಲಿಯೂ ನಾನು ಅನುಪಮ ಸುಂದರಿ !" –ಎಂದು ಬಿನ್ನಾಣದಿಂದ ಹೇಳಿದಳು.

ಬಿಜ್ಜಳನಿಗೆ ತನ್ನ ತಪ್ಪಿನ ಅರಿವಾಯಿತು. ನೋಡಿ, ಮುಟ್ಟಿ, ಅನುಭವದಿಂದ

---

* ವಲ್ಲಭದೇವನ "ಸುಭಾಷಿತಾವಳಿ" ಯಲ್ಲಿ ೧೫೬೩ನೆಯದಾಗಿ ಆರ್ಗಟ ಅರ್ಥಾತ್ ಅಗ್ಗಳನ ಹೆಸರಲ್ಲಿ ಉದ್ಧೃತವಾಗಿರುವ ಮೂಲ ಪದ್ಯ ಹೀಗಿದೆ :
ವಪುರನುಪಮಂ ನಾಭೇರೂರ್ಧ್ವಂ ನಿಧಾಯ ಮೃಗೀದೃಶೋ
ಲಲಿತಲಲಿತೈರಂಗನ್ಯಾಸೈಃ ಪುರಾ ರಭಸಾದಿವ
ತದನು ಸಹಸಾ ಖಿನ್ನೇನೇವ ಪ್ರಜಾಪತಿನಾ ಭೃಶಂ
ಪೃಥುಲ ಪೃಥುಲಾ ಸ್ಥೂಲ ಸ್ಥೂಲಾ ಕೃತಾ ಜಘನಸ್ಥಳೀ ॥

ತಿಳಿದ ವಿಚಾರದಲ್ಲಿ ನಾನು ತಪ್ಪು ಮಾಡಿದ್ದು ಹೇಗೆ ? ಎಂದು ಅವನು ಚಿಂತಿಸುತ್ತಿದ್ದಂತೆ ಕಾಮೇಶ್ವರಿ, "ಈ ಅಸತ್ಯ ಅಶ್ಲೀಲ ವಸ್ತುಗಳು ಉಳಿದಿರುವುದು ಸಲ್ಲ!" ಎಂದು ಹೇಳಿ ಚಿತ್ರವನ್ನೂ ಪದ್ಯಗಳು ಬರೆದಿದ್ದ ಕರಡು ಹಾಳೆಯನ್ನೂ ಎರಡಾಗಿ ಹರಿದು ದೀಪದ ಉರಿಗೆ ಹಿಡಿದಳು.

ಬಿಜ್ಜಳನು ಹಾರಿಬಂದು ತಡೆಯಲು ಪ್ರಯತ್ನಿಸಿದಾಗ ಅವಳು ಉನ್ಮತ್ತಳಂತೆ, "ಓಹ್ ! ದೂರ ನಿಲ್ಲಿರಿ. ಇಲ್ಲವೇ ಚಿತ್ರವನ್ನು ಸುಟ್ಟ ಬೆಂಕಿ ನನ್ನನ್ನೂ ಸುಡುವುದು!" ಎಂದು ಗಜರಿ ನುಡಿದಳು.

ಬಿಜ್ಜಳನು ನಿರುಪಾಯನಾಗಿ ಹಿಂದಕ್ಕೆ ಸರಿದನು.

ಸುಟ್ಟ ವಸ್ತುಗಳ ಕರಕನ್ನು ನೆಲಕ್ಕೆಸೆದು ಕಾಲಿಂದ ತುಳಿದು ಕಾಮೇಶ್ವರಿ,

"ಇನ್ನು ಸ್ವಾಮಿನಿಷ್ಠ ಗರುಡನಂತೆ ನನ್ನ ಬಿಡಾರದ ದಾರಿ ತೋರಿಸಿರಿ," ಎಂದಳು.

"ಏಕಾದಶಿಯ ದಿನದಂದು ನಾನು ಕಲ್ಯಾಣಕ್ಕೆ ಪಯಣಮಾಡುವೆನು. ನೀನೂ ನನ್ನ ಸಂಗಡ ಬರಬೇಕಾಗುವುದು, ರಾಣಿ." –ಎಂದು ಬಿಜ್ಜಳನು ಮುನ್ನೆಚ್ಚರಿಕೆ ಕೊಟ್ಟನು.

"ಮಂಗಳವೇಡೆಗೆ ಬರುವವರೆಗೆ ನಾನು ಸತಿಯಾಗಿದ್ದೆ. ನೀವು ನನ್ನನ್ನು ಅತಿಥಿಯಂತೆ ಬರಮಾಡಿಕೊಂಡು ವಂಚನೆಯಿಂದ ನನ್ನ ಸತೀತ್ವಹರಣಮಾಡಿದಿರಿ. ಈಗ ನನ್ನ ಸ್ವಾತಂತ್ರ್ಯಕ್ಕೂ ಮೊಟಕುಹಾಕಿ, ಬಂಧುಮಿತ್ರರಿಂದ ನನ್ನನ್ನು ಬೇರೆ ಮಾಡಲು ಯೋಚಿಸಿದಂತಿದೆ. ಪುರುಷನ ಅತ್ಯಾಚಾರಕ್ಕೆ ಬಲಿಯಾದ ಹೆಣ್ಣಿಗೆ ಅವನ ದಾಸಿಯಂತೆ ಬಾಳನ್ನು ಸವೆಸುವುದೊಂದೇ ಉಳಿದಿರುವ ಮಾರ್ಗ," –ಎಂದು ಕಾಮೇಶ್ವರಿ ವಿಷಣ್ಣೆಯಾಗಿ ನುಡಿದಳು.

ಬಿಜ್ಜಳನು ನಿರುತ್ತರವಾಗಿ ಸ್ವಾಮಿನಿಷ್ಠ ಸೇವಕನಂತೆ ಅವಳನ್ನು ಬಿಡಾರದ ಮುಚ್ಚಿದ ಬಾಗಿಲ ಬಳಿ ಬಿಟ್ಟು ತನ್ನ ವಾಸಗೃಹಕ್ಕೆ ಹಿಂದಿರುಗಿದನು.

* * *

ಬಿಡಾರದ ಬಾಗಿಲು ಮುಚ್ಚಿ ಹೊರಗೆ ಚಿಲಕ ಹಾಕಿತ್ತು. ಕಾಮೇಶ್ವರಿ ಚಿಲಕ ತೆಗೆದುಕೊಂಡು ಒಳಗೆ ಹೋದಾಗ ಉಷಾವತಿ ಎದುರಾಗಿ,

"ನೀವು ಎಲ್ಲಿಗೆ ಹೋದಿರೋ ಯಾವಾಗ ಬರುವಿರೋ ಎಂದು ಭಯದಿಂದ ನಾನು ಇಲ್ಲಿಯೆ ಕಾದು ಕುಳಿತಿದ್ದೆ, ರಾಣೀಜಿ," –ಎಂದಳು.

"ನನ್ನ ಸರ್ವನಾಶವಾಯಿತು, ಉಷಾ. ಮಂಗಳವೇಡೆಗೆ ರಾಣಿಯಂತೆ ಬಂದ ನಾನು ಈಗ ಅಸತಿ, ಕುಲಟೆ ! ಅತಿಥಿ ಹೆಣ್ಣಿನ ಮಾನಭಂಗಕ್ಕೂ ಹೇಸದ

ದಾನವರಿಗೆ ಜನ್ಮವಿತ್ತಿದೆ ಕಲಚೂರ್ಯವಂಶ"–ಎಂದು ವಿಷಾದದಿಂದ ನುಡಿಯುತ್ತ ಕಾಮೇಶ್ವರಿ ವಾಸಗೃಹವನ್ನು ಪ್ರವೇಶಿಸಿ ಸುಖಾಸನದ ಮೇಲೆ ಕುಸಿದು ಬಿದ್ದಳು.

"ಈ ಸಂಜೆ ಸೋಮೇಶ್ವರನ ಸೈನಿಕರು ಕರ್ಣದೇವನ ಕಡೆಯ ಭಟರಿಗೆ ಕಾವಲ ಸರದಿಯನ್ನು ಬಿಟ್ಟು ಕೊಟ್ಟಾಗಲೇ ನಾವು ವಿಪತ್ತಿನಲ್ಲಿ ಬಿದ್ದೆವೆಂದು ತಿಳಿದೆ, ರಾಣೀಜಿ" –ಎಂದಳು ಉಷಾವತಿ, ಕಾಮೇಶ್ವರಿಯ ಕಾಲುಗಳ ಬಳಿ ಕುಳಿತು.

"ಅಷ್ಟೆಲ್ಲ ಕೌಶಲ ಆ ಕುಡುಕ ಕರ್ಣದೇವನಿಗೆ ಎಲ್ಲಿಂದ ಬರಬೇಕು. ನನ್ನನ್ನು ವಂಚಿಸಿ, ಮಾನಹರಣ ಮಾಡಿದವನು ರಾಜ್ಯಾಪಹಾರಿ ಬಿಜ್ಜಳ. ಅರಸೊತ್ತಿಗೆಯ ಆಸೆ ತೋರಿಸಿ ಮಂಗಳವೇಡೆಗೆ ಕರೆಸಿಕೊಂಡನು. ಪಗಡೆಯಾಟದ ನೆವಹೂಡಿ ಸಲಿಗೆ ಬೆಳೆಸಿದನು. ಚಾಲುಕ್ಯ ರಾಣಿಯನ್ನು ಸಾಮಾನ್ಯ ಭೋಗಿನಿಯಂತೆ ನಡೆಸಿಕೊಳ್ಳುವುದು ಈಗ ಅವನ ಹಂಚಿಕೆ," –ಎಂದು ಕಾಮೇಶ್ವರಿ ದುಗುಡದಿಂದ ನುಡಿದಳು.

ದೀಪಸ್ತಂಭದಲ್ಲಿ ಒಂದು ದೀಪ ಮಾತ್ರ ಉರಿಯುತ್ತಿತ್ತು.; ಅದರ ಮಸಕು ಬೆಳಕಿನಲ್ಲಿ ಅವರು ಬಹಳ ಹೊತ್ತು ಮೌನವಾಗಿ ಕುಳಿತಿದ್ದರು. ಆಮೇಲೆ ಕಾಮೇಶ್ವರಿ ಕೆಟ್ಟ ಕನಸನ್ನು ಕಂಡು ಎಚ್ಚೆತ್ತವಳಂತೆ ಕರ್ಕಶ ಕಂಠದಿಂದ,

"ಓಹ್ ! ಆ ದಾನವನ ಸ್ಪರ್ಶದಿಂದ ಪುಳಕಿಸಿದ ನನ್ನ ಒಂದೊಂದು ಅಂಗವನ್ನೂ ತುಂಡು ತುಂಡಾಗಿ ಕತ್ತರಿಸಿ ಅಗ್ನಿಗೆಸೆಯುತ್ತೇನೆ. ನನ್ನ ಸತೀತ್ವ ನಾಶಕ್ಕೆ ಸಾಕ್ಷಿಯಾದ ಕಲಚೂರ್ಯ ಅರಮನೆಯನ್ನು ದಹಿಸುತ್ತೇನೆ. ಆಗ ನನ್ನ ಪ್ರತಿರೋಧ ಪೂರ್ಣವಾಗುವುದು," ಎಂದು ಆವೇಶಗೊಂಡವಳಂತೆ ನುಡಿದಳು.

"ಅಮಂಗಲ ನುಡಿಯಬೇಡಿರಿ ರಾಣೀಜಿ. ನಾನು ಹೋಗಿ ಸ್ನಾನಕ್ಕೆ ಸಿದ್ಧಪಡಿಸುತ್ತೇನೆ. ಜಳಕದಿಂದ ದೇಹದಂತೆ ಮನಸ್ಸಿಗೂ ವಿಶ್ರಾಂತಿ ದೊರಕುವುದು" –ಎಂದು ಉಷಾ ಎದ್ದಳು.

"ನನ್ನ ದೇಹದ ಅಶುಚಿ ಕಳೆಯಲು ಏಳು ಸಾಗರಗಳಲ್ಲಿ ಮುಳುಗಿ ಏಳಬೇಕಾಗುವುದು ! ಇನ್ನು ನನಗೆ ಮರಣವೇ ಮಹಾನವಮಿ!" –ಎಂದು ಸುಯ್ಗರೆದು ನುಡಿದಳು ಕಾಮೇಶ್ವರಿ.

ಉಷಾ ಉತ್ತರ ಕೊಡಲಿಲ್ಲ. ಕೊಂಚ ಹೊತ್ತಿನ ಮೇಲೆ ಅವಳು ಒಡತಿಗೆ ಸ್ನಾನಮಾಡಿಸಿ, ಮಡಿಬಟ್ಟೆಗಳನ್ನು ಉಡಿಸಿ ವಾಸಗೃಹಕ್ಕೆ ಕರೆತಂದಾಗ ಆವೇಗ ಶಾಂತವಾಗಿತ್ತು. ತಲ್ಪದ ಮೇಲೆ ಮಲಗಿ ಕಾಮೇಶ್ವರಿ ವಿಶ್ರಮಿಸಿಕೊಳ್ಳುತ್ತಿದ್ದಂತೆ ಮಹಾದ್ವಾರದಲ್ಲಿ ಮೂರನೆಯ ಜಾವ ಮುಗಿದ ಘಂಟೆ ಹೊಡೆಯಿತು.

"ನಡೆ, ಉಷಾ. ನಾನು ಪ್ರೇಮಾರ್ಣವನನ್ನೊಂದು ಸಾರಿ ನೋಡಿಬರುತ್ತೇನೆ," –ಎಂದು ಕಾಮೇಶ್ವರಿ ಎದ್ದಳು.

ಪಾರ್ಶ್ವದ ಇನ್ನೊಂದು ಕೊಠಡಿಯಲ್ಲಿ ಪ್ರೇಮಾರ್ಣವ ನಿದ್ರೆ ಮಾಡುತ್ತಿದ್ದ. ದಾಸಿಯೊಬ್ಬಳು ಬಾಗಿಲಲ್ಲಿ ಕುಳಿತು ತೂಕಡಿಸುತ್ತಿದ್ದಳು. ಕಾಮೇಶ್ವರಿ ಮಂಚದ ಬಳಿ ನಿಂತು ನೆಟ್ಟ ದೃಷ್ಟಿಯಿಂದ ಅನೇಕ ಕ್ಷಣಗಳು ಮಗನ ಮುಖವನ್ನು ನೋಡುತ್ತಿದ್ದಳು. ಬಳಿಕ ಅವಳು ಬಾಲಕನ ಮಂಡೆ ಕೆನ್ನೆಗಳನ್ನು ಮೃದುವಾಗಿ ಚುಂಬಿಸಿದಳು. ಅವಳ ಅಂತರಂಗ ನೀರವವಾಗಿ ನುಡಿಯುತ್ತಿತ್ತು. :

'ನಿನ್ನ ಹಿತಾಕಾಂಕ್ಷಿಯಾಗಿ ನಾನು ನಿನ್ನನ್ನಿಲ್ಲಿಗೆ ಕರೆತಂದೆ, ಪ್ರೇಮಾರ್ಣವ. ನಾನೊಂದು ನೆನೆದರೆ ದೈವ ಮತ್ತೊಂದು ಮಾಡಿತು. ನಮ್ಮ ಅರಸುತನದ ಆಸೆ ಮಣ್ಣುಗೂಡಿತು. ಇನ್ನು ನಿನ್ನ ರಕ್ಷಣೆಯೊಂದೇ ನನ್ನ ಏಕಮಾತ್ರ ಚಿಂತೆ' –ಎಂದು.

ಉಷಾವತಿ ಅಚ್ಚರಿಯಿಂದ ಒಡತಿಯ ಮುಖ ನೋಡಿದಳು, ತಾಯೊಲ್ಮೆಯ ಆ ಶಬ್ದಹೀನ ನುಡಿಗಳನ್ನು ಕೇಳಿದವಳಂತೆ.

"ನಾನು ಏಕಾಂತವನ್ನು ಬಯಸುತ್ತೇನೆ ಉಷಾ. ಪುನಃ ಕರೆಯುವವರೆಗೆ ನೀನಿಲ್ಲಿಯೇ ಇರು,"–ಎಂದು ಹೇಳಿ ಕಾಮೇಶ್ವರಿ ಮೆಲ್ಲನೆ ನಡೆಯುತ್ತ ವಾಸಗೃಹಕ್ಕೆ ಹೋದಳು.

ಅಲ್ಲಿ ಅವಳು ಮಂಚದ ಮೇಲೆ ದಿಂಬುಗಳಿಗೆ ಒರಗಿ ಕುಳಿತು, ಕೈಯಲ್ಲಿ ಹಲಿಗೆ ಬಳಪಗಳನ್ನು ಹಿಡಿದು, ಅಂದಿನ ಘಟನೆಗಳಿಂದ ತನಗಾದ ಲಾಭ–ನಷ್ಟಗಳ ಎಣಿಕೆಗೆ ತೊಡಗಿದಳು–

"ಕ್ಷೀಣಬಲರಾದ ಸಾಮಂತರ ನೆರವಿನಿಂದ ಚಾಲುಕ್ಯ ಅರಸೊತ್ತಿಗೆಗಾಗಿ ಸಂಧಾನ ನಡೆಸಲು ಮಂಗಳವೇಡೆಗೆ ಬಂದ ನಾನು ಈಗ ಬಿಜ್ಜಳನ ಪ್ರಣಯಿನಿ. ಕುಮಾರ ಪ್ರೇಮಾರ್ಣವನ ಉತ್ತರಾಧಿಕಾರವನ್ನು ಸಂಚು ಹೋರಾಟಗಳಿಲ್ಲದೆ ಈಗ ಎಲ್ಲರೂ ಒಪ್ಪಿಕೊಳ್ಳುವರು. ಪ್ರೇಮಾರ್ಣವನು ಪ್ರಾಪ್ತ ವಯಸ್ಕನಾಗುವವರೆಗೆ ನಾನು ರಾಜಪ್ರತಿನಿಧಿ ಆಗುವೆನು. ರಾಜ್ಯದಲ್ಲಿ ಶಾಂತಿ ಭದ್ರತೆಗಳನ್ನು ಕಾಪಾಡಲು ಬಿಜ್ಜಳನಂತಹ ದಕ್ಷ ಸೇನಾನಿಯ ಸಹಾಯ ದೊರಕುತ್ತದೆ. ಪಗಡೆಯಾಟದಲ್ಲಿ ನಾನು ಗೆದ್ದ ರಾಜ್ಯ ಕೋಶಗಳ ರಕ್ಷಣೆಗೆ ಇದ್ದ ಒಂದೇ ಒಂದು ಆತಂಕ ಇಂತಹ ವಿಚಿತ್ರ ರೀತಿಯಲ್ಲಿ ಪರಿಹಾರವಾಗುವುದೆಮದು ಯಾರು ತಿಳಿದಿದ್ದರು? ಇದು ನನ್ನ ಸೌಭಾಗ್ಯವೆಂದೇ ಭಾವಿಸುತ್ತೇನೆ." –ಎಂದು ನುಡಿಯಿತು ಅವಳ ಆಶಾವಾದಿ, ಪತನಶೀಲ, ವಿಲಾಸ ಪ್ರವೃತ್ತಿ.

"ಇದಕ್ಕಾಗಿ ನೀನು ಕೊಡಬೇಕಾದ ಬೆಲೆಯೇನು? ಅದನ್ನು ಲೆಕ್ಕ ಹಾಕಿದೆಯಾ, ಹುಚ್ಚು ಹೆಣ್ಣೆ ?" –ಎಂದು ಮತ್ತೆ ಪ್ರಶ್ನಿಸಿತು ಅವಳ ವಿವೇಕ.

ನಿನ್ನ ಬಗೆಗೆ ಅನೇಕ ಅಪವಾದಗಳು ಪ್ರಚಾರದಲ್ಲಿದ್ದರೂ, ನೀನು

ಯಾವಾಗಲೂ ಬುದ್ಧಿಪೂರ್ವಕವಾಗಿ ಸತೀಧರ್ಮದ ಕಠಿಣಪಥವನ್ನು ಅತಿಕ್ರಮಿಸಿಲ್ಲ. ಈ ಆತ್ಮವಿಶ್ವಾಸ ಇದುವರೆಗೆ ನಿನಗೆ ಶಾಂತಿ ಸಮಾಧಾನಗಳನ್ನು ಕೊಟ್ಟಿತ್ತು, ಬಿಜ್ಜಳನ ದುಡುಕಿನಿಂದ ನಿನ್ನ ಆತ್ಮವಿಶ್ವಾಸ ಇಂದು ಮಣ್ಣುಗೂಡಿತು. ಬಿಜ್ಜಳನು ನಿನ್ನ ಸತೀತ್ವವನ್ನು ಅಪಹರಿಸಿದನು. ನೀನು ಚಾಲುಕ್ಯ ಚಕ್ರೇಶ್ವರನ ವಿಧವಾರಾಣಿ. ಮುಂದೆ ನೀನು ರಾಜಪ್ರತಿನಿಧಿ ಆಗಬಹುದು. ರಾಜಮಾತೆ ಎನಿಸಬಹುದು. ಆದರೂ ಜನರು ನಿನ್ನನ್ನು ಬಿಜ್ಜಳನ ಭೋಗಿನಿ ಎಂದು ಕರೆಯುವರು. ಬಿಜ್ಜಳನ ಪಟ್ಟ ಮಹಿಷಿಯರು, ಅಂತಃಪುರವಾಸಿನಿಯರಾದ ಗಣಿಕೆಯರು, ಅವನ ವಿಪುಳ ಪರಿವಾರ, ರಾಜ್ಯಲೋಭದಿಂದ ದೇಹವನ್ನು ಮಾರಿಕೊಂಡ ಕುಲಟೆಯೆಂದು ನಿನ್ನನ್ನು ಹಳಿಯುವರು. ಸೋಮೇಶ್ವರ ಸುಂದರವಲ್ಲಿಯರು ನಿನ್ನ ವಿಚಾರದಲ್ಲಿ ತೋರಿದ ಗೌರವ ಸನ್ಮಾನಗಳೂ ಬೆಳಗಿನ ಮಂಜಿನಂತೆ ಕ್ಷಣಾರ್ಧದಲ್ಲಿ ಕರಗಿಹೋಗುವುವು. ಇವರೆಲ್ಲರ ತಿರಸ್ಕಾರ ಅವಹೇಳನಗಳನ್ನು ಸಹಿಸುವ ಶಕ್ತಿ ಇದೆಯೇ ನಿನಗೆ?

"ನಿನ್ನ ಪತನದಿಂದ ಎಷ್ಟೊಂದು ಜನರು ವಿಪತ್ತಿನಲ್ಲಿ ಬೀಳುವರೆಂಬುದನ್ನು ಯೋಚಿಸಿದೆಯ? ಅಸೂಯೆಯಿಂದ ಕುರುಡನಾದ ಬಿಜ್ಜಳನು ಮದವೇರಿದ ಸಲಗದಂತೆ ರಾಜ್ಯವನ್ನೇ ನಾಶಮಾಡುವನು. ಜಗದೇಕಮಲ್ಲರಸರ ಮೇಲಿನ ಕಾವಲು ಹೆಚ್ಚುವುದು. ಕೊಲ್ಲಿಸುವುದೂ ಅಸಂಭವವಲ್ಲ. ಅಗ್ಗಳ ಶೀಲವಂತರೂ ವಿಪತ್ತಿನಲ್ಲಿ ಬೀಳುವರು. ಶರಣರ ವಿನಾಶಕ್ಕಾಗಿ ಬಿಜ್ಜಳನು ಪ್ರಾರಂಭಿಸುವ ವಿಧ್ವಂಸಕ ಕಾರ್ಯಾಚರಣೆಯಿಂದ ರಾಜ್ಯ ಅಲ್ಲೋಲ ಕಲ್ಲೋಲವಾಗುವುದು. ಕುಮಾರ ಸೋಮೇಶ್ವರನು ಶರಣರ ಪಕ್ಷಪಾತಿ. ಬಳ್ಳಿಗಾವೆಯಲ್ಲಿ ವಿದ್ಯಾರ್ಥಿಯಾಗಿದ್ದಾಗಲೆ ತಂದೆಯ ಅನುಮತಿ ಪಡೆದು ಶರಣಧರ್ಮದಲ್ಲಿ ದೀಕ್ಷಿತನಾದನೆಂದು ಕೇಳಿದ್ದೇನೆ. ಚಾಲುಕ್ಯರಾಜ್ಯದ ಅನೇಕ ಮಂದಿ ಸಾಮಂತರು, ಶ್ರೀಮಂತ ಬಣಜಿಗ ಕೃಷಿಕ ಕಾರ್ಮಿಕರು ಶರಣಧರ್ಮದ ಅನುಯಾಯಿಗಳು. ಕುಮಾರ ಸೋಮೇಶ್ವರನು ಶರಣರ ಪಕ್ಷ ವಹಿಸಿದರೆ ರಾಜ್ಯ ಇಬ್ಭಾಗವಾಗಿ ತಂದೆ ಮಕ್ಕಳ ನಡುವೆ ಅಂತಃಕಲಹ ಮೊದಲಾಗುತ್ತದೆ. ಯುದ್ಧ ಸುಲಿಗೆಗಳಿಂದ ಚಾಲುಕ್ಯರಾಜ್ಯ ಹಾಳಾದ ಮೇಲೆ ಕುಮಾರ ಪ್ರೇಮಾರ್ಣವನ ಉತ್ತರಾಧಿಕಾರಕ್ಕೆ ರಾಜಿಕವಾಗಿ ಕುರುಡು ಕವಡೆಯ ಬೆಲೆಯೂ ಇರುವುದಿಲ್ಲ," –ಎಂದು ನುಡಿಯಿತು ಅವಳ ವಿವೇಕ.

ಕಾಮೇಶ್ವರಿಯ ಅಂತರಂಗ ಈ ಎಚ್ಚರಿಕೆಯ ನುಡಿಗಳಿಂದ ಉದ್ರಿಕ್ತವಾಗಿ ಕುದಿಯಲು ಮೊದಲಾಯಿತು. ಕೊನೆಗವಳು, "ಈ ಎಲ್ಲ ಅಪವಾದ ಆತಂಕ ವಿಧ್ವಂಸಗಳಿಂದ ಉದ್ಧಾರವಾಗಲು ನನಗಿರುವುದು ಒಂದೇ ಮಾರ್ಗ. ಸ್ಥಿರಚಿತ್ತದಿಂದ

ಆ ಮಾರ್ಗದಲ್ಲಿ ನಡೆಯುತ್ತೇನೆ," ಎಂದು ನಿರ್ಧರಿಸಿಕೊಂಡು ಕೈಯಲ್ಲಿದ್ದ ಹಲಿಗೆಯಲ್ಲಿ ಬರೆಯಲು ಪ್ರಾರಂಭಿಸಿದಳು.

ಅಳಿಸಿ ತಿದ್ದಿ ಬರಹವನ್ನು ಮುಗಿಸಲು ಗಳಿಗೆಕಾಲ ಹಿಡಿಯಿತು. ಆಮೇಲೆ ಅವಳು ಮಂಚದಿಂದೆದ್ದು ಬಾಗಿಲ ಬಳಿ ಹೋಗಿ ಉಷಾವತಿಯನ್ನು ಕರೆದಳು.

ಉಷಾವತಿ ಕಣ್ಣೊರೆಸಿಕೊಳ್ಳುತ್ತ ಒಳಗೆ ಬಂದು, "ಏಕೆ, ರಾಣೀಜಿ? ನೀವಿನ್ನೂ ಮಲಗಲಿಲ್ಲವೇ?" ಎಂದಳು.

ಉಷಾವತಿಯನ್ನು ದೀಪದ ಮುಂದೆ ಕುಳಿತುಕೊಳ್ಳುವಂತೆ ಹೇಳಿ ಕಾಮೇಶ್ವರಿ, ಹಲಿಗೆಯನ್ನು ಕೈಗೆಕೊಟ್ಟು, "ಇದನ್ನೊಂದು ಸಾರಿ ಓದಿಕೋ," ಎಂದಳು.

ಹಲಿಗೆಯಲ್ಲಿ ಈ ರೀತಿ ಬರೆದಿತ್ತು :

"ಕುಮಾರ ಸೋಮೇಶ್ವರನ ಪಟ್ಟಾಭಿಷೇಕಕ್ಕಾಗಿ ಮಂಗಳವೇಡೆಗೆ ರಾಜಾತಿಥಿಯಾಗಿ ಬಂದಿದ್ದ ನನ್ನ ಬಿಡಾರಕ್ಕೆ, ಮಾಘ ಶುದ್ಧ ನವಮಿಯಂದು ನರಿರಾತ್ರಿಯಲ್ಲಿ ಬಿಜ್ಜಳನು ವಂಚನೆಯಿಂದ ಪ್ರವೇಶಿಸಿ ನನ್ನ ಮಾನಹರಣ ಮಾಡಿದನು. ಆ ದಾನವನ ಸ್ಪರ್ಶದಿಂದ ಕಳಂಕಿತವಾದ ನನ್ನ ದೇಹವನ್ನು ಅಗ್ನಿಯಿಂದ ದಹಿಸಲು ನಿರ್ಧರಿಸಿದ್ದೇನೆ. ನನ್ನ ಭಾಗಕ್ಕೆ ಮರಣವೇ ಮಹಾನವಮಿ. ಈ ಸಂದೇಶ ನಿಮಗೆ ತಲಪುವಷ್ಟರಲ್ಲಿ ಈ ಅಭಾಗಿನಿಯ ಮರಣದ ಸುದ್ಧಿಯನ್ನು ನೀವು ಕೇಳುವಿರಿ. ಬಿಜ್ಜಳನು ಶರಣಧರ್ಮದ ಪರಮವೈರಿ. ಚಾಲುಕ್ಯರಾಜ್ಯದಲ್ಲಿರುವ ಶೈವಮಠಗಳನ್ನು ನಾಶಮಾಡಿ, ಶರಣಧರ್ಮವನ್ನು ನಿರ್ಮೂಲಗೊಳಿಸುವುದು ಅವನ ಉದ್ದೇಶ. ಚಾಲುಕ್ಯರ ಹೆಸರನ್ನು ಇತಿಹಾಸದಿಂದ ಅಳಿಸಿಹಾಕಿ ಕಲಚೂರ್ಯ ಸಾಮ್ರಾಜ್ಯವನ್ನು ಸ್ಥಾಪಿಸಲು ಅವನು ಹವಣಿಸುತ್ತಿದ್ದಾನೆ. ಈ ದಾನವರೂಪೀ ನಿರಂಕುಶ ಪ್ರಜಾಪೀಡಕನನ್ನು ವಧಿಸಿ, ಚಾಲುಕ್ಯರಾಜ್ಯವನ್ನು, ಶರಣಧರ್ಮವನ್ನು ವಿಪತ್ತಿನಿಂದ ಉದ್ಧರಿಸುವ ಧೈರ್ಯ ಸಾಹಸಗಳು ನಿಮಗಿದೆಯೆ? ಅದರಿಂದ ಮಾತ್ರವೇ ನಾನು ಕಳಂಕ ವಿಮುಕ್ತೆಯಾಗುವೆನು. ನನ್ನ ಆತ್ಮಕ್ಕೆ ಚಿರಶಾಂತಿ ದೊರಕುವುದು.

ಇತಿ ನಿಮ್ಮ ಚರಣ ದಾಸಿ,
ಕಾಮೇಶ್ವರಿ.

ಉಷಾವತಿ ಕಂಪಿಸಿದಳು. ಹಣೆ ಬೆವರಿತು. ಬೆದರಿದ ಕಣ್ಣುಗಳಿಂದ ಕಾಮೇಶ್ವರಿಯನ್ನು ನೋಡಿ, ತೊದಲುತ್ತ "ಓದಿದೆ, ರಾಣೀಜಿ!" ಎಂದಳು.

"ಓಲೆ ಬರೆಯುವುದು ಮೊದಲು ನನ್ನ ಉದ್ದೇಶವಾಗಿತ್ತು," ಕಾಮೇಶ್ವರಿ ಹೇಳಿದಳು. "ಆದರೆ ಇಂತಹ ವಿನಾಶದ ಸಂದೇಶವನ್ನು ನಿನ್ನ ಕೈಯಲ್ಲಿ ಕಳುಹಿಸುವುದು,

ಕೈಯಾರೆ ನಿನ್ನನ್ನು ಅಗ್ನಿಕುಂಡಕ್ಕೆ ತಳ್ಳಿದಂತೆ ಎಂದು ಭಾವಿಸಿ ಸುಮ್ಮನಾದೆ. ನೀನಿದನ್ನು ನಾಲ್ಕಾರು ಸಾರಿ ಚೆನ್ನಾಗಿ ಓದಿ ಒಕ್ಕಣೆಯನ್ನು ನೆನಪಿನಲ್ಲಿಟ್ಟುಕೊಂಡರೆ ಸಾಕು. ಕಲ್ಯಾಣಕ್ಕೆ ಹೋಗಿ ಜಗದೇಕಮಲ್ಲರಸರ ಮುಂದೆ ಈ ಸಂದೇಶವನ್ನು ಪಠಿಸಬೇಕು. ಈ ಕಾರ್ಯ ನಿನ್ನಿಂದಾಗುವುದೆ?"

ಕಾಮೇಶ್ವರಿಯ ನುಡಿಗಳು ಅಗ್ನಿಶಿಖಿಯಂತೆ ಉಷಾವತಿಯನ್ನು ದಹಿಸಿದವು. ಅವಳು ಒಡತಿಯ ಕಾಲುಗಳ ಮೇಲೆ ಬಿದ್ದು,

"ನಾನು ನಿಮಗಾಗಿ ಜೀವ ಕೊಡಲೂ ಸಿದ್ಧ, ರಾಣೀಜಿ. ಆದರೆ ನಿಮ್ಮನ್ನು ಈ ಸಂಕಟದಲ್ಲಿ ಬಿಟ್ಟು ನಾನು ಹೋಗಲಾರೆ. ನಿಮ್ಮನ್ನು ದಹಿಸುವ ಅಗ್ನಿ ನನ್ನನ್ನೂ ದಹಿಸಲಿ," ಎಂದು ಬಿಕ್ಕಿ ಬಿಕ್ಕಿ ಅತ್ತಳು.

"ಈ ಪಿಶಾಚ ಪುರಿಯಿಂದ ಪ್ರೇಮಾರ್ಣವನನ್ನು ಪಾರುಮಾಡುವುದು ನಿನಗೊಬ್ಬಳಿಗೆ ಸಾಧ್ಯ. ನೀನು ಆ ಕಾರ್ಯ ಮಾಡಲಾರದೆ ಹೋದರೆ ನನ್ನ ಸಂಗಡ ಅವನೂ ಸಾಯುವನು."

"ಅಬಲೆಯಾದ ನಾನು ಪ್ರೇಮಾರ್ಣವನನ್ನು ರಕ್ಷಿಸಲು ಸಮರ್ಥಳಾಗುವೆನೆ?"

"ನಾನು ಅದಕ್ಕೊಂದು ಉಪಾಯ ಯೋಚಿಸಿದ್ದೇನೆ. ಆದರೆ ಅದಕ್ಕೆ ನಿನ್ನ ಸಹಾಯ ಅಗತ್ಯ."

ಉಷಾ ನಿರುತ್ತರೆಯಾಗಿ ಒಪ್ಪಿಕೊಂಡಳು.

ಕಾಮೇಶ್ವರಿ ಹೇಳಿದಳು : "ಪ್ರೇಮಾರ್ಣವನನ್ನು ಈಗಲೆ ಎಚ್ಚರಗೊಳಿಸಿ ಸಾಮಾನ್ಯ ಬಾಲಕನಂತೆ ಉಡುಪು ಹಾಕು. ಪ್ರೌಢ ವಯಸ್ಸಿನ ಶರಣೆಯಂತೆ ನೀನು ಕೂಡಾ ವೇಷ ಹಾಕಬೇಕಾಗುತ್ತದೆ. ನಾಲ್ಕನೆಯ ಜಾಮ ಮುಗಿದ ಘಂಟೆ ಹೊಡೆಯುತ್ತಲೆ ಕಾವಲು ಭಟರು ಹೊರಟುಹೋಗುತ್ತಾರೆ. ದಾಸದಾಸಿಯರ ಸುಳಿದಾಟ ಪ್ರಾರಂಭವಾಗುತ್ತದೆ. ಆಗ ನೀನು ಪ್ರೇಮಾರ್ಣವನನ್ನು ಸಂಗಡ ಕರೆದುಕೊಂಡು ಬಿಡಾರದಿಂದ ಹೊರಟು ನಗರದ ನಡುವೆ ಇರುವ ಗಣಾಚಾರಿ ಮಠಕ್ಕೆ ಹೋಗಬೇಕು."

"ಮಠ ಎಲ್ಲಿದೆಯೆಂದು ನನಗೆ ತಿಳಿಯದು."

"ನಗರದ ನಡುವೆ ಇರುವ ತ್ರಿಪುರಾಂತಕ ಗುಡಿಯನ್ನು ನೀನು ನೋಡಿರುವೆಯಷ್ಟೆ. ಅದರ ಹಿಂಭಾಗದಲ್ಲಿರುವ ವಿಶಾಲವಾದ, ಆವರಣವೇ ಗಣಾಚಾರಿ ಮಠ. ಎತ್ತರವಾಗಿ ಹಾರಾಡುವ ಗೈರಿಕ ಪತಾಕೆಯಿಂದ ಅದನ್ನು ಗುರುತಿಸಬಹುದು."

ಉಷಾವತಿಗೆ ಪರಿಚಯ ಹತ್ತಿತು. " ಅಲ್ಲಿಗೆ ಹೋಗಿ ನಾನೇನು ಮಾಡಬೇಕು?"

ಎಂದು ಕೇಳಿದಳು.

"ಸೊನ್ನಲಾಪುರದಿಂದ ಕಲ್ಯಾಣಕ್ಕೆ ಹೋಗುತ್ತಿರುವ ಶರಣರ ಯಾತ್ರಾದಳವೊಂದು ಅಲ್ಲಿ ಬಿಡಾರ ಮಾಡಿದೆ. ನಾನು ಕಳುಹಿಸಿದುದಾಗಿ ಹೇಳಿದರೆ, ದಳದ ಸಂಗಡ ಪ್ರಯಾಣ ಮಾಡಲು ದಳದ ನಾಯಕ ಅನುಕೂಲ ಮಾಡಿಕೊಡುತ್ತಾನೆ."

"ನಾಯಕನು ನನ್ನ ಮಾತು ನಂಬದೆ ಹೋದರೆ?"

"ನಂಬದಿರಲು ಕಾರಣವಿಲ್ಲ. ನಿನ್ನೆ ಅವನು ನನ್ನನ್ನು ನೋಡಲು ಬಂದಿದ್ದ, ಆದರೂ ಈ ಉಂಗುರ ಹತ್ತಿರಿದ್ದರೆ ಒಳ್ಳೆಯದು," –ಎಂದು ಕಾಮೇಶ್ವರಿ ಬೆರಳಲ್ಲಿದ್ದ ಮುದ್ರೆಯುಂಗುರವನ್ನು ತೆಗೆದು ಉಷಾವತಿಗೆ ಕೊಟ್ಟಳು.

"ಶರಣರ ಯಾತ್ರಾದಳ ಮಂಗಳವೇಡೆಯಿಂದ ಯಾವಾಗ ಹೊರಡುತ್ತದೆ?" –ತುಸು ಹೊತ್ತಿನ ಮೇಲೆ ಉಷಾವತಿ ಕೇಳಿದಳು.

"ನೀನು ಹೋಗುವಷ್ಟರಲ್ಲಿ ಅವರು ಪಯಣಕ್ಕೆ ಸಿದ್ಧರಾಗುತ್ತಾರೆ. ನಿನ್ನ ಮತ್ತು ಪ್ರೇಮಾರ್ಣವನ ಪರಿಚಯ ಯಾತ್ರಾದಳದಲ್ಲಿ ಯಾರಿಗೂ ತಿಳಿಯದಂತೆ ನೀನು ಎಚ್ಚರವಾಗಿರಬೇಕು."

"ಕಲ್ಯಾಣದಲ್ಲಿ ನಾನು ಜಗದೇಕಮಲ್ಲರಸರನ್ನು ನೋಡುವುದು ಹೇಗೆ ?"

"ನೀನು ಕಲ್ಯಾಣಕ್ಕೆ ಹೋಗುತ್ತಲೆ ಪ್ರೇಮಾರ್ಣವನನ್ನು ಮಹಮನೆಗೆ ಕರೆದುಕೊಂಡು ಹೋಗಿ ಚೆನ್ನಬಸವಣ್ಣನವರ ಕಾಲುಗಳ ಮೇಲೆ ಹಾಕಿ, ಈ ಅನಾಥ ಬಾಲಕನನ್ನು ಶರಣರ ರಕ್ಷಣೆಯಲ್ಲಿ ಕರ್ಹಾಡಕ್ಕೆ, ಅವರ ಮಾವನ ಮನೆಗೆ ಕಳುಹಿಸಬೇಕಾಗಿ ನಾನು ಬೇಡಿದೆನೆಂದು ಹೇಳು. ಅವರು ನಿನಗೆ ಮಹಮನೆಯ ಅತಿಥಿ ಶಾಲೆಯಲ್ಲಿರಲು ಅನುಕೂಲ ಮಾಡಿಕೊಡುವರು. ಜಗದೇಕಮಲ್ಲರಸರನ್ನು ಬಂಧನದಲ್ಲಿಟ್ಟಿರುವ ರಾಜಗೃಹವೆಂಬ ಅರಮನೆಗೆ ಮಹಮನೆಯ ಜಂಗಮರು ಆಗಾಗ ಹೋಗಿ ಬರುವರೆಂದು ಕೇಳಿದ್ದೇನೆ. ಅವರ ಸಹಾಯದಿಂದ ನೀನು ಜಗದೇಕಮಲ್ಲರಸರನ್ನು ನೋಡಬಹುದು."

"ಹಾಗೆಯೇ ಮಾಡುತ್ತೇನೆ."

"ನೀನು ಜಗದೇಕಮಲ್ಲರಸರನ್ನು ಕಂಡು ನನ್ನ ಸಂದೇಶದ ನುಡಿಗಳನ್ನು ತಿಳಿಸುವವರೆಗೆ ಅದು ರಹಸ್ಯವಾಗಿರತಕ್ಕದ್ದು. ಚೆನ್ನಬಸವಣ್ಣನವರಿಗೆ ಇಲ್ಲಿ ನಡೆದುದನ್ನು ಸಂಕ್ಷೇಪವಾಗಿ ತಿಳಿಸಿ, ಶರಣರನ್ನು ನಿರ್ಮೂಲಗೊಳಿಸಲು ಬಿಜ್ಜಳನು ನಿರ್ಧರಿಸಿರುವನೆಂದು ಎಚ್ಚರಿಕೆ ಕೊಟ್ಟರೆ ಸಾಕು."

"ನೀವು ಹೇಳಿದಂತೆ ಮಾಡುತ್ತೇನೆ," ಎಂದು ಉಷಾವತಿ ಹೋಗುತ್ತಿದ್ದಂತೆ

ಕಾಮೇಶ್ವರಿ ಅವಳನ್ನು ತಡೆದು, "ಸಂದೇಶದ ಪಾಠ ಮುಗಿಯಿತೆ?" ಎಂದಳು.

ಉಷಾವತಿ ಹಲಿಗೆಯನ್ನು ಒಡತಿಯ ಕೈಗೆ ಕೊಟ್ಟು ಸಂದೇಶವನ್ನು ಯಥಾಪ್ರತಿ ಒಪ್ಪಿಸಿದಳು. ಕಾಮೇಶ್ವರಿ ಹಲಿಗೆಯಲ್ಲಿ ಬರೆದಿದ್ದುದನ್ನು ಅಳಿಸಿ, ಪ್ರಸನ್ನತೆಯ ತುಂಬು ಕಂಠದಿಂದ,

"ನನ್ನ ಹೃದಯದ ಸಂದೇಶ ಈಗ ನಿನಗೆ ಕಂಠಹಾರವಾಗಿದೆ, ತಂಗಿ. ಕಲ್ಯಾಣಕ್ಕೆ ಹೋಗುವವರೆಗೆ ಅದನ್ನು ಕುಲಧನದಂತೆ ರಕ್ಷಿಸಿಕೊಂಡಿದ್ದು ಜಗದೇಕ ಮಲ್ಲರಸರಿಗೆ ಅದನ್ನು ಒಪ್ಪಿಸುವುದು ನಿನ್ನ ಹೊಣೆ. ಇದಕ್ಕಾಗಿ ನಾನು ನಿನಗೆ ತುಂಬ ಕೃತಜ್ಞಳು. ಪ್ರವಾಸದಲ್ಲಿ ಪರಶಿವನು ನಿಮ್ಮನ್ನು ರಕ್ಷಿಸಲಿ," –ಎಂದು ಹೇಳಿ ಉಷಾವತಿಯನ್ನು ಬಿಗಿದಪ್ಪಿದಳು. ಒಡತಿ ದಾಸಿಯರ ಕಣ್ಣುಗಳು ಕಂಬನಿಯಿಂದ ತುಂಬಿದವು.

ಉಷಾವತಿ ಗದ್ಗದ ಕಂಠದಿಂದ, "ಅಗ್ಗಳ ! ನಾನವರನ್ನು ನಿನ್ನಿನ ಸಂಜೆ ನೋಡಿದ್ದು. ಅವರು ಬಿಡಾರಕ್ಕೆ ಬಂದಾಗ......." –ಎನ್ನುತ್ತಿದ್ದಂತೆ ಕಾಮೇಶ್ವರಿ, "ನಾನು ಅಗ್ಗಳ ದೇವರಿಗೆ ಹೇಳುತ್ತೇನೆ. ನಾಳಿನ ಸಂಜೆಯೊಳಗಾಗಿ ಅವರು ಯಾತ್ರಾದಳವನ್ನು ಸೇರುವರು," ಎಂದು ಹೇಳಿ ಕಳುಹಿಸಿದಳು.

ಕೊಂಚ ಹೊತ್ತಿನಮೇಲೆ ಮಹಾದ್ವಾರದಲ್ಲಿ ನಾಲ್ಕನೆಯ ಜಾಮ ಮುಗಿದ ಘಂಟೆ ಹೊಡೆಯುತ್ತಿದ್ದಂತೆ ಉಷಾವತಿ ಪ್ರೇಮಾರ್ಣವನನ್ನು ಕರೆದುಕೊಂಡು ಪುನಃ ಅಲ್ಲಿಗೆ ಬಂದಳು.

"ಉಷಕ್ಕನ ಸಂಗಡ ನಾನು ಎಲ್ಲಿಗೆ ಹೋಗಬೇಕಮ್ಮ?" –ಎಂದು ಬಾಲಕ ಪ್ರೇಮಾರ್ಣವ ಸಹಜವಾದ ಆತುರದಿಂದ ಕೇಳಿದನು.

"ಶರಣರ ಯಾತ್ರಾದಳದ ಸಂಗಡ ಜಂಗಮರೊಬ್ಬರು ಬಂದಿದ್ದಾರೆ ಮಗು. ಉಷಾ ನಿನಗೆ ಅವರ ದರ್ಶನ ಮಾಡಿಸುತ್ತಾಳೆ. ನೀವಿಬ್ಬರೂ ಅವರ ಸಂಗಡ ಹೋಗಬೇಕಾಗುವುದು." –ಮನಸ್ಸಿನ ಆವೇಗವನ್ನು ತುಳಿದಿಟ್ಟು ಕಾಮೇಶ್ವರಿ ಉತ್ತರಕೊಟ್ಟಳು.

"ನೀನು ಸಂಗಡ ಬರುವುದಿಲ್ಲವೆ, ಅಮ್ಮಾ?"

"ಬಿಡಾರದ ವ್ಯವಸ್ಥೆಮಾಡಿ ನಾನು ಬರಲು ತಡವಾಗುತ್ತದೆ, ಮಗು. ಯಾತ್ರಾದಳ ನನಗಾಗಿ ಕಾಯುವುದಿಲ್ಲ. ನಾಳೆ ನಾನು ಇಲ್ಲಿಂದ ಹೊರಟು ದಳವನ್ನು ಸೇರುತ್ತೇನೆ. ಆಮೇಲೆ ಯಾವಾಗಲೂ ನಿನ್ನ ಬಳಿಯಿಂದ ಕದಲುವುದಿಲ್ಲ." ನುಡಿಯುತ್ತಿದ್ದಂತೆ ಕಾಮೇಶ್ವರಿಯ ಕಂಠ ಗದ್ಗದಿತವಾಯಿತು. ಕಣ್ಣುಗಳು ಅಶ್ರುಪ್ಲಾವಿತವಾದವು. ಅವಳು ಬಾಲಕನನ್ನು ಬಿಗಿದಪ್ಪಿ ಮುದ್ದಿಟ್ಟು, "ಇನ್ನು ಪ್ರೇಮಾರ್ಣವ

ನಿನ್ನ ಮಗು, ತಂಗಿ !" ಎಂದು ಉಷಾವತಿಗೆ ಹೇಳಿದಳು.

ಅವರು ಕಾಮೇಶ್ವರಿಯ ಪಾದಗಳಿಗೆರಗಿ, ಬೀಳ್ಕೊಂಡು, ಬಿಡಾರದ ಕೆಳಗೆ ಊಳಿಗದವರಿಗಾಗಿ ಗೊತ್ತಾಗಿದ್ದ ಬಾಗಿಲಿಂದ ಹೊರಗೆ ಹೋದರು. ಅಲ್ಲಿದ್ದ ಕಾವಲು ಭಟನು ಅವರನ್ನು ಊಳಿಗದವರೆಂದೇ ತಿಳಿದು ತಡೆಯಲಿಲ್ಲ.

ರಾಣಿ ಕಾಮೇಶ್ವರಿ ವಾತಾಯನದ ತೆರೆಯ ಹಿಂದೆ ನಿಂತು ಉದ್ಯಾನವನ್ನು ಹಾದು ಅವರು ರಾಜಮಾರ್ಗದಲ್ಲಿ ಕಣ್ಮರೆ ಆಗುವವರೆಗೆ ನೋಡುತ್ತಿದ್ದಳು.

ಹೊದರ ಮರೆಯಿಂದ ಪುರುಷನೊಬ್ಬನು ಹೊರಗೆ ಬಂದು ಅವಸರದ ಹೆಜ್ಜೆಗಳಿಂದ ಉಷಾವತಿ ಪ್ರೇಮಾರ್ಣವರನ್ನು ಹಿಂಬಾಲಿಸಿ ಹೋದದ್ದನ್ನು ಕಾಮೇಶ್ವರಿ ನೋಡಲಿಲ್ಲ.

ಮಂಗಳವೇಡೆಯ ಮಹಾಮಂಡಲೇಶ್ವರ ಕುಮಾರ ಸೋಮೇಶ್ವರನ ಪಟ್ಟಾಭಿಷೇಕದ ಅಂಗವಾಗಿ, ದಶಮಿಯಂದು, ನಗರದ ಹೊರಗಿದ್ದ ಬನ್ನಿ ಮಂಟಪಕ್ಕೆ ಹೋಗುತ್ತಿದ್ದ ಮೆರವಣಿಗೆ ನಗರದ ಮಹಾದ್ವಾರವನ್ನು ದಾಟುತ್ತಿದ್ದಂತೆ ಅಶ್ವಾರೋಹಿಯಾದ ಅವಸರದ ಭಟನೊಬ್ಬನು ಬಿಜ್ಜಳನನ್ನು ಹುಡುಕುತ್ತ ಅಲ್ಲಿಗೆ ಬಂದನು.

ಕುಮಾರ ಸೋಮೇಶ್ವರನು ಕುಳಿತಿದ್ದ ಅಂಬಾರಿಯ ಮುಂಭಾಗದಲ್ಲಿ, ಸಾಮಂತರ ನಡುವೆ, ಅಲಂಕೃತವಾದ ದಿವ್ಯಾಶ್ವವನ್ನೇರಿ ಹೋಗುತ್ತಿದ್ದ ಬಿಜ್ಜಳನನ್ನು ಕೂಡಲೆ ನೋಡುವುದು ಭಟನಿಗೆ ಸಾಧ್ಯವಾಗಲಿಲ್ಲ. ಸಾಮಂತರ ಹಿಂದೆ ಮೆರವಣಿಗೆಯ ಅಂಚಿನಲ್ಲಿದ್ದ ಸಮ್ಮುಖದ ಪಸಾಯಿತನನ್ನು ಕರೆದು ಅವನು "ಸರ್ವಾಧಿಕಾರಿಗಳಿಗೆ ಈಗಲೇ ತಿಳಿಸಬೇಕಾದ ಅವಸರದ ಸುದ್ದಿಯಿದೆ." ಎಂದನು.

"ಸುದ್ದಿ ಏನೆಂದು ತಿಳಿಸಿದರೆ ಒಡೆಯರಿಗೆ ಅರಿಕೆ ಮಾಡುತ್ತೇನೆ." –ಪಸಾಯಿತನೆಂದನು.

"ಪ್ರಭುಗಳಿಗೆ ರಹಸ್ಯವಾಗಿ ತಿಳಿಸಬೇಕಾದ ವಿಚಾರವನ್ನು ಎಲ್ಲರ ಮುಂದೆ ಹೇಳುವುದೇ?" –ಎಂದು ಭಟನು ನಿರಾಕರಿಸಿದನು.

ಪಸಾಯಿತನು ಚತುರತೆಯಿಂದ ಕುದುರೆಯನ್ನು ನಡೆಸಿ ಬಿಜ್ಜಳನ ಪಾರ್ಶ್ವಕ್ಕೆ ಹೋಗಲು ಸ್ವಲ್ಪ ಹೊತ್ತಾಯಿತು. ಅವಸರದ ಭಟನೊಬ್ಬನು ರಹಸ್ಯವಾರ್ತೆ ತಂದಿರುವುದಾಗಿ ಕೇಳುತ್ತಲೇ ಬಿಜ್ಜಳನು ಮೆರವಣಿಗೆಯನ್ನು ಬಿಟ್ಟು ಪಾರ್ಶ್ವಕ್ಕೆ ಬಂದು ಕುದುರೆಯನ್ನು ನಿಲ್ಲಿಸಿದನು.

ಸಮಯಕ್ಕಾಗಿ ಕಾಯುತ್ತಿದ್ದ ಭಟನು ಹತ್ತಿರ ಬಂದು, "ಚಾಲುಕ್ಯರಾಣಿ ಕಾಮೇಶ್ವರೀ ದೇವಿಯವರಿದ್ದ ಬಿಡಾರಕ್ಕೆ ಬೆಂಕಿ ಬಿದ್ದಿದೆ. ಇದನ್ನು ನಿಮಗೆ

ರಹಸ್ಯವಾಗಿ ತಿಳಿಸಲು ಮನೆಹೆಗ್ಗಡೆ ಕಳುಹಿಸಿದರು." ಎಂದು ಹೇಳಿದನು.

"ಬೆಂಕಿ ಬಿದ್ದದ್ದು ಹೇಗೆ ? ರಾಣಿ ಎಲ್ಲಿದ್ದಾರೆ,"

ಬಿಜ್ಜಳನು ಆತುರದಿಂದ ಕೇಳಿದನು.

"ಅದೊಂದೂ ನನಗೆ ತಿಳಿಯದು, ಪ್ರಭೂ."

ಬಿಜ್ಜಳನು ಕುದುರೆಯನ್ನು ನಗರಾಭಿಮುಖವಾಗಿ ಓಡಿಸಿದನು. ಮೆರವಣಿಗೆಯಲ್ಲಿದ್ದ ಸಾಮಂತರು ಚಕಿತರಾಗಿ ನೋಡಿದರು. ಪ್ರಭುವಿನ ಹಿಂದೆ ಹೋಗಲು ಅವರಲ್ಲಿ ಯಾರಿಗೂ ಧೈರ್ಯವಿರಲಿಲ್ಲ. ರಾಜಪುರೋಹಿತ ನಾರಣಕ್ರಮಿತನು ಭಟನ ಬಳಿಗೆ ಬಂದು, "ಪ್ರಭುಗಳು ಎಲ್ಲಿಗೆ ಹೋದರು ?" ಎಂದು ಕೇಳಿದಾಗ ಭಟನು ಸಮಯ ಸ್ಫೂರ್ತಿಯಿಂದ, "ಮೆರವಣಿಗೆ ಮುಂದೆ ಸಾಗಬೇಕೆಂದೂ, ತಾವು ಬೇಗ ಬರುವುದಾಗಿಯೂ ಪ್ರಭುಗಳು ಹೇಳಿದರು," ಎಂದು ಉತ್ತರಿಸಿ ಕುದುರೆಯನ್ನೋಡಿಸಿಕೊಂಡು ಬಿಜ್ಜಳನನ್ನು ಹಿಂಬಾಲಿಸಿದನು.

ಮೆರವಣಿಗೆ ಬನ್ನಿ ಮಂಟಪಕ್ಕೆ ಬಂದಾಗ ನಗರ ಮಧ್ಯದಲ್ಲಿ ಹೊಗೆ ಪರ್ವತಾಕಾರವಾಗಿ ಮೇಲೇಳುತ್ತಿರುವುದನ್ನು ಜನರು ಕಂಡು ನಗರದಲ್ಲೆಲ್ಲಿಯೋ ಅಗ್ನಿಘಾತವಾಗಿರಬೇಕೆಂದು ತಿಳಿದರು. ಕುಮಾರ ಸೋಮೇಶ್ವರನು ಸುದ್ದಿ ತಿಳಿದು ಬರಲು ಸೈನಿಕರಿಬ್ಬರನ್ನು ನಗರಕ್ಕೆ ಕಳುಹಿಸಿದನು.

ಬಿಜ್ಜಳನು ಅರಮನೆಯ ಬಳಿಗೆ ಬಂದಾಗ ಉಪ್ಪರಿಗೆಯ ಎಲ್ಲ ಕಡೆ ಬೆಂಕಿಹರಡಿತ್ತು. ಭಟರು, ಊಳಿಗದವರು, ನಾಗರಕರು, ಮನೆಹೆಗ್ಗಡೆಯ ನೇತೃತ್ವದಲ್ಲಿ ಬೆಂಕಿಯನ್ನಾರಿಸಲು ಪ್ರಯತ್ನಿಸುತ್ತಿದ್ದರು.

ಪ್ರಯತ್ನ ವಿಫಲವೆಂದು ಬಿಜ್ಜಳನಿಗೆ ತಿಳಿದಿತ್ತು. ಆಗಿನ ವಾಸ್ತು ಪದ್ಧತಿಯಂತೆ ಅರಮನೆಯ ಉಪ್ಪರಿಗೆ ಮರದ ಕಂಬ ಹಲಗೆಗಳಿಂದ ರಚಿತವಾಗಿತ್ತು. ಬೆಂಕಿಯಿಂದ ಅದನ್ನು ಉಳಿಸಬಹುದಾದ ಉಪಾಯಗಳೊಂದೂ ಇರಲಿಲ್ಲ.

ಬಿಜ್ಜಳನು ಮನೆಹೆಗ್ಗಡೆಯನ್ನು ಕರೆದು, "ಉಪ್ಪರಿಗೆಯ ಬೆಂಕಿಯನ್ನಾರಿಸುವುದು ಯಾರಿಗೂ ಸಾಧ್ಯವಿಲ್ಲ. ಕೆಳಗಿನ ಅಂತಸ್ತಿನಲ್ಲಿರುವ ವಸ್ತು ಸಂಗ್ರಹಗಳನ್ನು ಈಚೆಗೆ ತೆಗೆಸಿ ಪಾರ್ಶ್ವದ ಕಟ್ಟಡಗಳಿಗೆ ಬೆಂಕಿ ಹರಡದಂತೆ ನೋಡಿಕೊಳ್ಳಿರಿ," ಎಂದು ಆಜ್ಞೆ ಮಾಡಿದನು.

ಅದರಂತೆ ಕಾರ್ಯಾರಂಭಮಾಡಿ ಮನೆಹೆಗ್ಗಡೆ ಹಿಂದಿರುಗಿದಾಗ ಬಿಜ್ಜಳನು "ಬೆಂಕಿ ಬಿದ್ದದ್ದು ಹೇಗೆ ?" ಎಂದು ಕೇಳಿದನು.

"ಬೆಂಕಿ ಹೇಗೆ ಪ್ರಾರಂಭವಾಯಿತೆಂದು ಯಾರಿಗೂ ತಿಳಿಯದು, ಮಹಾಪ್ರಭು," ಹೆಗ್ಗಡೆ ಹೇಳಿದನು. "ಚಾಲುಕ್ಯ ರಾಣಿಯವರಿದ್ದ ಬಿಡಾರದಲ್ಲಿ ಮೊದಲು ಬೆಂಕಿ

ಕಾಣಿಸಿದ್ದು. ದಾಸಿಯರ ಕೂಗು ಕೇಳಿ ಪಾರ್ಶ್ವದ ಚಾವಡಿಯಲ್ಲಿದ್ದ ನಾನು ಓಡಿ ಬಂದೆ. ಬಿಡಾರ ಹತ್ತಿ ಉರಿಯುತ್ತಿತ್ತು. ಮೆಟ್ಟಲುಗಳಿಂದ ಮೇಲೆ ಹೋಗಲು ಪ್ರಯತ್ನಿಸಿದೆವು. ಉರಿಯಿಂದ ಸಾಧ್ಯವಾಗಲಿಲ್ಲ."

"ರಾಣಿ ಕಾಮೇಶ್ವರೀದೇವಿಯೆಲ್ಲಿ ?"

"ಬೆಂಕಿ ಬಿದ್ದಾಗ ಅವರು ಬಿಡಾರದಲ್ಲಿದ್ದರೆಂದು ರಾಣಿಯ ದಾಸಿಯರು ಹೇಳುತ್ತಾರೆ. ಅವರು ಮತ್ತು ಕುಮಾರ ಪ್ರೇಮಾರ್ಣವನು ಬೆಂಕಿಯಲ್ಲಿ ಮಡಿದಿರಬೇಕು. ಅವರನ್ನು ಉಳಿಸಲು ನಾವು ಮಾಡಿದ ಪ್ರಯತ್ನಗಳೆಲ್ಲ ವ್ಯರ್ಥವಾದುವು."

ಬಿಜ್ಜಳನು ಕೆಲವು ಕ್ಷಣಗಳು ಮೌನವಾಗಿ ಚಿಂತಿಸಿದನು. ಕಾಮೇಶ್ವರಿಯ ದುರಂತ ಅವನನ್ನು ಸ್ತಂಭಿತಗೊಳಿಸಿತ್ತು. ಬೆಂಕಿಯು ಆಕಸ್ಮಿಕವೇ? ಅಥವಾ ಉದ್ದೇಶಪೂರ್ವಕವೇ ? ಹಾಗಿದ್ದರೆ ಅದಕ್ಕೆ ಕಾರಣರಾರು ? ಸ್ವಯಂ ಕಾಮೇಶ್ವರಿಯೇ, ಹೊರಗಿನವರೆ ? ಅಂದು ಮುಂಜಾವಿನಲ್ಲಿ ರಾಣಿ ಜ್ವರಪೀಡಿತೆಯಾಗಿರುವರೆಂದು ಮನೆಹೆಗ್ಗಡೆ ಹೇಳಿದಾಗ, ಭಾವೋದ್ರೇಕವೇ ಜ್ವರದ ಕಾರಣವೆಂದೂ, ವಿಶ್ರಾಂತಿಯಿಂದ ಸ್ವಸ್ಥಳಾಗುವಳೆಂದೂ ಭಾವಿಸಿ ಬಿಜ್ಜಳನು ಉಪೇಕ್ಷಿಸಿದ್ದನು. ಕಳೆದ ರಾತ್ರಿ ನಡೆದ ಘಟನೆಗಳಿಂದ ರಾಣಿಗೆ ಅಸಮಾಧಾನವಾಗಿರಬಹುದೇ ಎಂಬ ಸಂದೇಹ ಬಾರಿ ಬಾರಿಗೆ ಅವನ ಮನಸ್ಸಿನಲ್ಲಿ ಇಣುಕುತ್ತಿತ್ತು.

ತುಸುಹೊತ್ತಿನ ಮೇಲೆ ಅವನು, ಈಗ ರಾಣಿಯ ದಾಸಿಯರೆಲ್ಲಿದ್ದಾರೆ? ಎಂದು ಹೆಗ್ಗಡೆಯನ್ನು ಕೇಳಿದನು.

ರಾಣಿಯ ದಾಸಿಯರು ಉದ್ಯಾನದ ಒಂದು ಸುರಕ್ಷಿತ ಪ್ರದೇಶದಲ್ಲಿ ಗುಂಪಾಗಿ ಅಳುತ್ತ ನಿಂತಿದ್ದರು. ಮನೆಹೆಗ್ಗಡೆ ಮುಖ್ಯ ದಾಸಿಯನ್ನು ಕರೆತಂದು ಬಿಜ್ಜಳನ ಮುಂದೆ ನಿಲ್ಲಿಸಿದನು.

"ಬೆಂಕಿ ಮೊದಲಾದಾಗ ಬಿಡಾರದಲ್ಲಿ ಯಾರಿದ್ದರು?" –ಬಿಜ್ಜಳನು ದಾಸಿಯನ್ನು ಕೇಳಿದನು.

"ರಾಣಿಯವರು ಮತ್ತು ಕುಮಾರ ಪ್ರೇಮಾರ್ಣವ," –ದಾಸಿ ಉತ್ತರಕೊಟ್ಟಳು.

"ನೀವೆಲ್ಲರೂ ಎಲ್ಲಿ ಹೋಗಿದ್ದಿರಿ?"

"ಮೆರವಣಿಗೆ ನೋಡಲು ನಗರಕ್ಕೆ ಹೋಗಿದ್ದೆವು."

"ರಾಣಿ ಅಸ್ವಸ್ಥರೆಂದು ನಿಮಗೆ ತಿಳಿದಿರಲಿಲ್ಲವೆ ? ಅವರೊಬ್ಬರನ್ನೇ ಬಿಡಾರದಲ್ಲಿ ಬಿಟ್ಟು ನೀವೆಲ್ಲರೂ ಹೊರಗೆ ಹೋದದ್ದು ಹೇಗೆ?

"ನಮ್ಮಲ್ಲೊಬ್ಬರಿಗೂ ಹೋಗುವ ಇಷ್ಟವಿರಲಿಲ್ಲ. ರಾಣಿಯವರೆ ಒತ್ತಾಯದಿಂದ ನಮ್ಮನ್ನು ಕಳುಹಿಸಿದರು."

"ನೀವು ಹೋದಾಗ ರಾಣಿ ಏನು ಮಾಡುತ್ತಿದ್ದರು?"

"ತಮ್ಮ ಕೋಣೆಯಲ್ಲಿ ಮಲಗಿದ್ದರು."

"ಕುಮಾರ ಪ್ರೇಮಾರ್ಣವ ?"

"ಅವರ ಬಳಿ ಕುಳಿತಿದ್ದನು."

"ರಾಣಿಯವರು ಆಗ ಸ್ವಸ್ಥರಾಗಿದ್ದರೆ ? ಜ್ವರ ಬಿಟ್ಟಿತ್ತೆ ?"

"ಮಧ್ಯಾಹ್ನದ ವೇಳೆಗೆ ಜ್ವರ ಬಿಟ್ಟಿತ್ತು. ಸ್ವಲ್ಪ ಆಹಾರ ತೆಗೆದುಕೊಂಡು ವಿಶ್ರಮಿಸಿಕೊಳ್ಳುತ್ತಿದ್ದರು. ರಾಣಿಯವರು ತಾವಾಗಿ ಅನುಮತಿ ಕೊಟ್ಟಿದ್ದರಿಂದ ನಾವು ಧೈರ್ಯವಾಗಿ ಹೋದೆವು."

"ಕುಮಾರ ಪ್ರೇಮಾರ್ಣವ ನಿಮ್ಮೊಡನೆ ಬರುವುದಾಗಿ ರಗಳೆ ಮಾಡಲಿಲ್ಲವೆ?"

"ರಗಳೆ ಮಾಡಿದನು. ರಾಣಿಯವರು ಕಳುಹಿಸಲಿಲ್ಲ. ಒತ್ತಾಯದಿಂದ ತಮ್ಮ ಹತ್ತಿರವೇ ಇರಿಸಿಕೊಂಡರು."

"ಬೆಂಕಿ ಬಿದ್ದ ವಿಚಾರ ನಿಮಗೆ ತಿಳಿದಿದ್ದು ಹೇಗೆ?

"ಮೆರವಣಿಗೆ ನಗರದ ಮಹಾದ್ವಾರವನ್ನು ದಾಟಿದಮೇಲೆ ನಾವು ಹಿಂದಿರುಗಿದೆವು. ಆಗ ಬಿಡಾರ ಹತ್ತಿ ಉರಿಯುತ್ತಿತ್ತು. ನಾವು ಕೂಗಿಕೊಂಡೆವು."

"ರಾಣಿ ಕಾಮೇಶ್ವರಿ, ಕುಮಾರ ಪ್ರೇಮಾರ್ಣವ, ಇಬ್ಬರೂ ಬೆಂಕಿಯಲ್ಲಿ ಮಡಿದರೆಂದು ನಿಮಗೆ ಖಚಿತವಾಗಿ ತಿಳಿದಿದೆಯೆ?"

ದಾಸಿ ಬಿಕ್ಕಿ ಬಿಕ್ಕಿ ಅತ್ತಳು. ಉತ್ತರ ಕೊಡಲಿಲ್ಲ, ಮಾತಾಡುವ ಶಕ್ತಿಯೂ ಉಡುಗಿತ್ತು ಅವಳಲ್ಲಿ.

ಬಿಜ್ಜಳನು ದಾಸಿಯರು ನಿಂತಿದ್ದ ಕಡೆ ಹೋಗಿ ಒಬ್ಬೊಬ್ಬರಂತೆ ಅವರನ್ನು ಎದುರಿಗೆ ಕರೆಸಿದನು. ಎಲ್ಲರೂ ಮುಖ್ಯ ದಾಸಿ ಹೇಳಿದುದನ್ನು ಸಮರ್ಥಿಸಿದರು. ಅವರಲ್ಲಿ ಕಾಮೇಶ್ವರಿಯ ಆಕೃತಿ ನಿಲವುಗಳನ್ನು ಹೋಲುವವರು ಯಾರೂ ಇಲ್ಲದಿರುವುದನ್ನು ಕಂಡು ಬಿಜ್ಜಳನು ಅಚ್ಚರಿಯಿಂದ ಹೆಗ್ಗಡೆಯ ಕಡೆ ತಿರುಗಿ,

"ರಾಣಿಯ ದಾಸಿಯರೆಲ್ಲರೂ ಇಲ್ಲಿರುವರೆ? ಯಾರೂ ಕಾಣೆಯಾಗಿಲ್ಲವೆ?" ಎಂದು ಕೇಳಿದನು.

"ಎಲ್ಲರೂ ಸರಿಯಾಗಿರುವರೆಂದು ಮುಖ್ಯ ದಾಸಿ ಹೇಳುತ್ತಾಳೇ,"

–ಹೆಗ್ಗಡೆ ಉತ್ತರ ಕೊಟ್ಟನು.

"ರಾಣಿಯವರ ಮನೆಹೆಗ್ಗಡೆ ಅಗ್ಗಳದೇವನೆಲ್ಲಿ?"

"ಅವರು ಮೆರವಣಿಗೆಯ ಸಂಗಡಿರಬೇಕು. ಇನ್ನೂ ಇಲ್ಲಿಗೆ ಬಂದಿಲ್ಲ."

ಬಿಜ್ಜಳನು ಹೆಗ್ಗಡೆಯನ್ನು ಪ್ರತ್ಯೇಕವಾಗಿ ಕರೆದು, "ಇದರಲ್ಲೇನೋ ರಹಸ್ಯವಿದೆ.

ಸದ್ಯದಲ್ಲಿ ಅರಮನೆಯ ಸುತ್ತ ಕಾವಲು ಹೆಚ್ಚಿಸು. ಹೊರಗಿನವರಾರೂ ಉರಿಯುತ್ತಿರುವ ಬಿಡಾರದ ಹತ್ತಿರಹೋಗದಂತೆ ನೋಡಿಕೊಳ್ಳಬೇಕು. ಈ ದಾಸಿಯರಿಗೆ ಪ್ರತ್ಯೇಕ ಬಿಡಾರವನ್ನು ಗೊತ್ತುಮಾಡಿ ಯಾರೂ ತಪ್ಪಿಸಿಕೊಳ್ಳದಂತೆ ಎಚ್ಚರವಹಿಸು," ಎಂದು ಆಜ್ಞೆಮಾಡಿದನು.

ಉಪ್ಪರಿಗೆಯ ಚಾವಣಿ ಗೋಡೆಗಳು ಕುಸಿದು ದೊಡ್ಡ ಶಬ್ದವಾಯಿತು. ಉರಿ ಹೆಚ್ಚಿ ಗಗನಕ್ಕೇರಿತು.

ಆಗ ಮೆರವಣಿಗೆಯಿಂದ ಹಿಂದಿರುಗಿದ ಸೋಮೇಶ್ವರನು ಅಲ್ಲಿಗೆ ಬಂದನು. ಆಗಲೇ ಅವನ ಸೈನ್ಯದಳಗಳು, ಬೆಂಕಿ ನಗರದ ಬೇರೆ ಕಡೆಗೆ ಹರಡದಿರಲು ಅಗತ್ಯವಾದ ಎಚ್ಚರಿಕೆಯ ಕಾರ್ಯಗಳಲ್ಲಿ ತೊಡಗಿದ್ದವು.

ಬಿಜ್ಜಳನು ಸೋಮೇಶ್ವರನನ್ನು ಹತ್ತಿರ ಕರೆದು ದುಗುಡತುಂಬಿದ ಕಂಠದಿಂದ,

"ಗ್ರಹಗಳೆಲ್ಲ ನನಗೆ ವಿರುದ್ಧವಾಗಿವೆ, ಸೋಮೇಶ್ವರ. ರಾಜ್ಯಭಾರ ನಿರೂಪಣದಿಂದ ಮಣಿಹ ಮುಗಿಯಿತೆಂದು ಭಾವಿಸಿದ್ದೆ. ಮೇಘವಿಲ್ಲದ ಮುಗಿಲಿಂದ ಬರಸಿಡಿಲು ಬಡಿದಂತೆ ಈ ಅಗ್ನಿದುರಂತ ಬಂದೊದಗಿತು. ವಿಜಯಾರ್ಕದೇವರಿಗೆ ನಾಳೆಯೇ ಸುದ್ದಿ ಕಳುಹಿಸಬೇಕು. ಏನೆಂದು ಬರೆಯುವುದು ಎಂದು ಯೋಚಿಸುತ್ತಿದ್ದೇನೆ," ಎಂದು ವೈರಾಗ್ಯದ ಸೋಗು ಹಾಕಿದನು.

ತಂದೆಯ ವಂಚಕ ದ್ವಿಮುಖ ನೀತಿಯನ್ನು ಅರಿತಿದ್ದ ಸೋಮೇಶ್ವರನು ಉತ್ತರ ಕೊಡಲಿಲ್ಲ. ಕೊಂಚ ಹೊತ್ತು ಮೌನವಾಗಿ ನಿಂತಿದ್ದು ಬಳಿಕ ಮೆಲ್ಲನೆ ಅಲ್ಲಿಂದ ಸರಿದನು. ಕರ್ಹಾಡಕ್ಕೆ ದುರಂತದ ಸುದ್ದಿ ಕಳುಹಿಸುವ ಹೊಣೆಯನ್ನು ತಂದೆಯೇ ವಹಿಸಿಕೊಂಡದ್ದರಿಂದ ಅವನಿಗೆ ಸಮಾಧಾನವಾಗಿತ್ತು.

ಅರಮನೆ ಆ ರಾತ್ರಿಯೆಲ್ಲ ಉರಿಯಿತು. ಮರುದಿನ ಮುಂಜಾವಿನಲ್ಲಿ ಬಿಜ್ಜಳನು ಭಟರೊಡನೆ ಅಲ್ಲಿಗೆ ಬಂದಾಗ ಕೆಳಗಿನ ಅಂತಸ್ತಿನ ಗೋಡೆಗಳು ಮಾತ್ರ ಉಳಿದಿದ್ದವು. ಒಡೆಯನ ಆಜ್ಞೆಯಂತೆ ಭಟರು ಕೆಂಡಗಳ ನಡುವೆ ಬೂದಿಯ ರಾಶಿಯಲ್ಲಿ ಹುಡುಕಿದಾಗ ಬೆಂದ ಅಸ್ಥಿಗಳು ದೊರಕಿದವು.

ಭಟರು ಅವುಗಳನ್ನು ಆರಿಸಿ ತಂದು ಮುಂದೆ ಹರಡಿದಾಗ ಬಿಜ್ಜಳನು ನಡುಗಿದನು, ಕಣ್ಣುಗಳು ನೀರಿಂದ ತುಂಬಿದವು.

.........ನಿನ್ನಿನ ರಾತ್ರಿಯ ಘಟನೆಗಳು ಕನಸೋ ಕಲ್ಪನೆಯೋ ವಿಲಾಸ ವಿಭ್ರಮಗಳ ಅನಿಂದಿತ ಶುಭ್ರಕಾಂತಿಯಿಂದ ನಶ್ವರ ಜಗತ್ತನ್ನು ಬೆಳಗಿ, ಎಣಿಕೆಗೆ ಬಾರದ, ಮಾತಿಗೆ ನಿಲುಕದ ಅಪ್ಸರ ಲೋಕಕ್ಕೆ ನನ್ನನ್ನು ಕರೆದೊಯ್ದ ಆ ಅತುಲ ಸೌಂದರ್ಯ ರಾಶಿ ಇಂದೇನಾಯಿತು ? ಅದರ ಗುರರುತಾಗಿ ನನಗೆ ಉಳಿದದ್ದು

ಈ ಅಸ್ಥಿಶೇಷವೆ ?

.....ಗಗನದ ಜ್ಯೋತಿರ್ಮಯ ನಕ್ಷತ್ರವನ್ನು ಭೂಮಿಗುರುಳಿಸಿ, ಆಟಿಕೆಯ ಹರಳಂತೆ ತಿರುಕಲ್ಲಾಡಲು ಹವಣಿಸಿದ್ದು ನನ್ನ ಅವಿವೇಕ ! ಅದರ ಫಲವೇ ಈ ದುರಂತ !

–ಎಂದು ಅವನ ಅಂತರಂಗ ಚಿಂತಾಕುಲವಾಯಿತು.

ಎಂದೋ ಎಲ್ಲಿಯೋ ಕೇಳಿದ್ದ ಸೂಕ್ತಗಳು ಸುಟ್ಟ ಅರಮನೆಯ ಸಂತಪ್ತ ಭಸ್ಮರಾಶಿಯ ನಡುವೆ ಶಬ್ದಮಯವಾಗಿ ಮರಳಿ ಅವತರಿಸಿದಂತೆ ಅವನ ಕಿವಿಗಳಲ್ಲಿ ಅಸ್ಫುಟ ಅಮರವಾಣಿಯಿಂದ ನೀರವವಾಗಿ ಮೊಳಗಿದವು.

ವಾಯುರನಿಲಮಮೃತಮಥೇದಂ ಭಸ್ಮಾಂತಂ ಶರೀರಂ ।
ಓಂ ಕ್ರತೋಸ್ಮರ ಕೃತಂಸ್ಮರ ಕೃತಂಸ್ಮರ ॥
ಅಗ್ನೇನಯ ಸುಪಥಾ ರಾಯೇ ಅಸ್ಮಾನ್
ವಿಶ್ವಾನಿ ದೇವ ವಯುನಾನಿ ವಿದ್ವಾನ್ ॥
ಯುಯೋಧ್ಯಸ್ಮಜ್ಜು ಹರಣಾಮೇನೋ
ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ ॥*

ಓಂ ಶಾಂತಿಃ ಶಾಂತಿಃ

* * * *

---

* ಅಳಿದೆನ್ನ ಪ್ರಾಣಗಳು ಅಮೃತವಾಗಲಿ ಮುನ್ನ
ಭಸ್ಮವಾಗಲಿ ಸುಟ್ಟು, ತನುವು ಬಳಿಕ ;
ಹೇ ಅಗ್ನಿ, ಮರೆಯದಿರು ನಾಂಗೈದ ಕರ್ಮಗಳ,
ಮರೆಯದಿರು ನಾಂಗೈದ ಕರ್ಮಗಳನು.

ಕರೆದೊಯ್ಯುವೆನ್ನ ಸುಪಥದೆ ಕರ್ಮಫಲದೆಡೆಗೆ
ಅರಿತಿರುವೆ ಅಗ್ನಿ, ನೀನೆಲ್ಲವನು :
ನಾಂಗೈದ ಪಾಪಗಳ ಹರಿಸುವುದು ಕರುಣೆಯಿಂ,
ನಮಿಸಿ ಬೇಡುವೆ ನಿನ್ನ ಮರಳಿ ಮರಳಿ.

–"ಈಶಾವಾಸ್ಯೋಪನಿಷತ್," ೧೭ – ೧೮

# ೪. ಮಾನವನು ದಾನವನಾದಾಗ

ಹರಳಯ್ಯ ಮಧುವರಸರ ಮೇಲೆ ವರ್ಣಸಂಕರದ ಆಪಾದನೆ ಹೊರಿಸಿ ನಾಗರಿಕರು ಸಲ್ಲಿಸಿದ್ದ ಮನವಿ ಪತ್ರದ ವಿಚಾರಣೆ ನಡೆಸಲು ಬಿಜ್ಜಳನು ನೇಮಿಸಿದ ನಿಪುಣರ ಸಮಿತಿ, ಅನೇಕ ವಾರಗಳು ಕಳೆದರೂ ಇಲ್ಲಿಯವರೆಗೆ ಕಾರ್ಯರೂಪಕ್ಕೆ ಬಂದಿರಲಿಲ್ಲ. ಆಗ ಪ್ರಚಾರದಲ್ಲಿದ್ದ ನಿರಂಕುಶ ಆಡಳಿತ ಪದ್ಧತಿ ಇದರ ಕಾರಣವಾಗಿತ್ತು.

ಅಗತ್ಯವಿರಲಿ, ಇಲ್ಲದಿರಲಿ, ಪರಿಸ್ಥಿತಿಯ ಪ್ರಭಾವಕ್ಕೆ ಸಿಕ್ಕು, ಜನಪ್ರಿಯತೆಯನ್ನು ಗಳಿಸುವ ಏಕಮಾತ್ರ ಉದ್ದೇಶದಿಂದ ಇಂತಹ ಸಮಿತಿಗಳನ್ನು ರಚಿಸಲು ಬಿಜ್ಜಳನು ಮೊದಲು ಮಾಡಿದ್ದನು. ಬಹುತೇಕ ಸಂದರ್ಭಗಳಲ್ಲಿ ಆ ಸಮಿತಿಗಳು ಆಕಾಶ ಕುಸುಮಗಳಂತೆ ಬಯಲಲ್ಲಿ ಹುಟ್ಟಿ ಬಯಲಲ್ಲಿ ಅಳಿಯುತ್ತಿದ್ದವು. ಇಲ್ಲವೆ ಯಾವ ಬಗೆಯ ಪ್ರಚಾರ ಪ್ರಯೋಜನಗಳಿಲ್ಲದೆ ಒಂದೆರಡು ಸಾರಿ ಸಭೆ ನಡಸಿ, ಎಣ್ಣೆ ಮುಗಿದ ದೀಪದಂತೆ ಆರಿಹೋಗುತ್ತಿದ್ದವು. ಅಪರೂಪವಾಗಿ ಇಂತಹ ಸಮಿತಿಯೊಂದು ವಿಚಾರಣೆಯನ್ನು ಮುಂದುವರಿಸಿ ದೀರ್ಘಕಾಲಾನಂತರ ಸಲ್ಲಿಸುತ್ತಿದ್ದ ವರದಿ, ಸಮಯ ಸನ್ನಿವೇಶಗಳ ಬದಲಾವಣೆಯಿಂದ ನಿರುಪಯುಕ್ತವಾಗುತ್ತಿದ್ದುವು.

ವಿಚಾರಣೆ ನಡೆಸಲಿ ನಡೆಸದಿರಲಿ, ವರದಿ ಮಾಡಲಿ ಮಾಡದಿರಲಿ, ಸಮಿತಿಯ ಸದಸ್ಯರಿಗೆ ಗೊತ್ತಾದ ಸಂಭಾವನೆ ರಾಜ್ಯಭಂಡಾರದಿಂದ ಯಥಾಕಾಲದಲ್ಲಿ ಸಂದಾಯವಾಗುತ್ತಿತ್ತು. ದಕ್ಷತೆಯಿಂದ ಕೂಡಿದ್ದರೂ ವಾಸ್ತವದಲ್ಲಿ ಜನರಿಗೆ ಅಪ್ರಿಯವಾಗಿದ್ದ ತನ್ನ ನಿರಂಕುಶಾಡಳಿತದ ಅನ್ಯಾಯ ಅತ್ಯಾಚಾರಗಳನ್ನು ಲೋಕದ ಕಣ್ಣಿನಿಂದ ಮುಚ್ಚಿಡಲು ಬಿಜ್ಜಳನು ಈ ಸಮಿತಿಗಳನ್ನು ಉಪಯೋಗಿಸಿಕೊಳ್ಳುತ್ತಿದ್ದನು.

ಮಂತ್ರಿಮಂಡಲದ ಸಚಿವರು, ರಾಜ್ಯದ ಹಿರಿಯ ಅಧಿಕಾರಿಗಳು ಈ ರಹಸ್ಯವನ್ನು ತಿಳಿದಿದ್ದರೂ, ಸ್ವಾರ್ಥವಶರಾಗಿ ತಟಸ್ಥರಾಗಿರುತ್ತಿದ್ದರು. ಅಧಿಕಾರ ಲೋಭ ಅವರನ್ನು ಮೂಕರನ್ನಾಗಿ ಮಾಡಿತ್ತು.

ಬಿಜ್ಜಳನ ಇತರ ಸಮಿತಿಗಳಂತೆ ಅಂದಿನ ಅಗತ್ಯದ ಪೂರೈಕೆಗಾಗಿ, ವರ್ಣ ಸಂಕರ ನಡೆಯಿತೇ ಇಲ್ಲವೇ ಎಂಬುದನ್ನು ನಿರ್ಣಯಿಸಲು ನೇಮಕವಾದ

ನಿಪುಣರ ಸಮಿತಿಯೂ ಯಥಾಕಾಲದಲ್ಲಿ ಅಕಾಲ ಮೃತ್ಯುವಿಗೀಡಾಗುವುದೆಂದು ಭಾವಿಸಿ ಮಂತ್ರಿಮಂಡಲದ ಹಿರಿಯ ಸಚಿವ ಮಂಚಣನಾಯಕನು ಉಪೇಕ್ಷೆಯಿಂದ ಆ ವಿಚಾರವನ್ನೇ ಮರೆತಿದ್ದನು. ಮಂಗಳವೇಡೆಯಿಂದ ನಾರಣಕ್ರಮಿತನು ಹಿಂದಿರುಗಿ, ಮರುದಿನ ಸಮಿತಿಯ ಸಭೆ ನಡೆಯುವುದಾಗಿ ಹೇಳಿಕಳುಹಿಸಿದಾಗ ಮಂಚಣನಿಗೆ ನಿಜವಾಗಿ ಆಶ್ಚರ್ಯವಾಯಿತು.

ಆ ದಿನ ಅಪರಾಹ್ನ ಮೊದಲ ಪ್ರಹರದ ಗಂಟೆ ಹೊಡೆಯುತ್ತಿದ್ದಂತೆ ರಾಜಧಾನಿ ಕಲ್ಯಾಣದ ಧರ್ಮಾಧಿಕರಣದ ಚಾವಡಿಯಲ್ಲಿ ಸಮಿತಿ ಕೂಡಿತು. ಮಂಚಣ ರುದ್ರಭಟ್ಟರು ಮಾತ್ರವೇ ಸಭೆಗೆ ಬಂದಿದ್ದರು. ನಾರಣಕ್ರಮಿತನು ಅವರನ್ನು ಉಚಿತಾಸನಗಳಲ್ಲಿ ಕುಳ್ಳಿರಿಸಿ,

"ಮಾಘ ಬಹುಳ ಚೌತಿಯಂದು ಸರ್ವಾಧಿಕಾರಿಗಳು ನಗರಕ್ಕೆ ಹಿಂದಿರುಗುತ್ತಾರೆ. ಅಷ್ಟರಲ್ಲಿ ನಮ್ಮ ವಿಚಾರಣೆ ಮುಗಿದು ವರದಿ ಸಿದ್ಧವಾಗಬೇಕೆಂದು ಆಜ್ಞೆಯಾಗಿದೆ," –ಎಂದು ಹೇಳಿ ವ್ಯವಹಾರಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ಮುಂದಿಟ್ಟನು.

"ಇಂದು ಪಾಡ್ಯ, ಇನ್ನು ಮೂರು ದಿನದಲ್ಲಿ ನಾವು ವಿಚಾರಣೆ ಮುಗಿಸಿ ವರದಿ ಕಳುಹಿಸುವುದು ಸಾಧ್ಯವೆ? ಇಷ್ಟು ದಿನಗಳು ಸುಮ್ಮನಿದ್ದು ಈಗ ಈ ಅವಸರವೇಕೆ? –ಎಂದು ಮಂಚಣನಾಯಕನು ಪ್ರಶ್ನಿಸಿದನು.

"ನಾವು ಇಷ್ಟು ದಿವಸಗಳು ಸುಮ್ಮನಿದ್ದದ್ದು ಪ್ರಭುಗಳ ತೀವ್ರ ಅಸಮಾಧಾನದ ಕಾರಣ. ಮಂಗಳವೇಡೆಯಲ್ಲಿ ಘಟಿಸಿದ ಅರಮನೆಯ ಅಗ್ನಿಕಾಂಡದಿಂದ ಅವರ ಪ್ರಕೃತಿಯೇ ಬದಲಾಯಿಸಿದೆ. ಮರಿಗಳನ್ನು ಕಳೆದುಕೊಂಡ ಹೆಣ್ಣು ಹುಲಿಯಾಗಿದ್ದಾರೆ ಈಗವರು. ಆಜ್ಞೆಯಂತೆ ಮೂರು ದಿನಗಳಲ್ಲಿ ವಿಚಾರಣೆ ಮುಗಿಸಿ ವರದಿ ಒಪ್ಪಿಸದೆ ಹೋದರೆ ನಾವು ಉಗ್ರ ದಂಡನೆಗೆ ಗುರಿಯಾಗಬೇಕಾಗುವುದು," –ಎಂದು ನುಡಿದು ಕ್ರಮಿತನು ಸಹೋದ್ಯೋಗಿಗಳ ಕಡೆಗೆ ಸಹಕಾರದ ದೃಷ್ಟಿ ಬೀರಿದನು.

"ಅಗ್ನಿ ಅಪಘಾತದಲ್ಲಿ ಚಾಲುಕ್ಯರಾಣಿ ಮಡಿದಳೆಂದು ನಗರದಲ್ಲಿ ಸುದ್ದಿ ಹರಡಿರುವುದು ನಿಜವೆ?" –ಅವಕಾಶ ದೊರೆತು ರುದ್ರಭಟ್ಟನು ಕೇಳಿದನು. ಮಂಗಳವೇಡೆಯ ಘಟನೆಗಳನ್ನು ಕುರಿತು ಕಲ್ಯಾಣದಲ್ಲಿ ಹರಡಿದ್ದ ಚಿತ್ರ ವಿಚಿತ್ರ ವಾರ್ತೆಗಳು ಆ ನ್ಯಾಯಶಾಸ್ತ್ರಿಯನ್ನು ಅಚ್ಚರಿಗೊಳಿಸಿದ್ದವು.

"ಅಪಘಾತದಲ್ಲಿ ರಾಣಿಯವರು ಮಡಿದದ್ದೇ ನಮ್ಮ ಎಲ್ಲ ತೊಂದರೆಗಳಿಗೂ ಕಾರಣ, ರುದ್ರಭಟ್ಟರೆ. ಪಟ್ಟಾಭಿಷೇಕದ ಆನಂದ ಕೋಲಾಹಲ ಕಣ್ಣೀರಲ್ಲಿ ಮುಗಿಯುವುದೆಂದು ಯಾರು ಭಾವಿಸಿದ್ದರು !" –ಕ್ರಮಿತನು ಭಾವಾವೇಶದಿಂದ ಉತ್ತರಕೊಟ್ಟನು.

"ಬೆಂಕಿ ತಗುಲಿದ ಕಾರಣ ಗೊತ್ತಾಯಿತೇ? –ಕ್ರಮಿತನ ಉತ್ತರದಿಂದ ರುದ್ರಭಟ್ಟ ಪ್ರೋತ್ಸಾಹಗೊಂಡು ಪುನಃ ಕೇಳಿದನು.

"ಕಾರಣ ಗೊತ್ತಾಗಲಿಲ್ಲ. ಸರ್ವಾಧಿಕಾರಿಗಳು ವಿಚಾರಣೆ ನಡೆಸಿ ಬಿಡಾರದ ಕಾರ್ಯಕರ್ತನನ್ನು ಶೂಲಕ್ಕೇರಿಸಲು ಆಜ್ಞೆ ಮಾಡಿದರು."

"ಅವನಿಂದಾದ ಅಪರಾಧ?"

"ಚಾಲುಕ್ಯ ರಾಣಿಯ ಸಂಗಡ ಎಷ್ಟು ಜನ ದಾಸ ದಾಸಿಯರಿದ್ದರೆಂಬುದನ್ನು ಬರೆದಿಡದೆ ಹೋದದ್ದು. ಅವನ ಈ ಅಚಾತುರ್ಯದಿಮದ ಬೆಂಕಿಯಲ್ಲಿ ಎಷ್ಟು ಜನ ಬೆಂದರು ಎಂಬುದನ್ನು ಸರಿಯಾಗಿ ತಿಳಿಯಲಾಗಲಿಲ್ಲ."

"ರಾಣಿಯ ದಾಸಿಯರು ಏನು ಹೇಳುತ್ತಾರೆ?"

"ಬೆಂಕಿ ಬಿದ್ದಾಗ ರಾಣಿ ಮತ್ತು ಕುಮಾರ ಪ್ರೇಮಾರ್ಣವ, ಇಬ್ಬರೇ ಅರಮನೆಯಲ್ಲಿದ್ದದ್ದು ಎಂದು."

"ಕುಮಾರ ಪ್ರೇಮಾರ್ಣವನೂ ಮೃತನಾದನೆ?"

"ಮೃತನಾದನೆಂದು ದಾಸಿಯರು ಹೇಳುತ್ತಾರೆ. ಆದರೆ ಅದು ನಂಬಿಕೆಗೆ ಅರ್ಹವಲ್ಲ. ಸರ್ವಾಧಿಕಾರಿಗಳು ಅದನ್ನು ನಂಬಲಿಲ್ಲ."

"ನಂಬಲಿ, ನಂಬದಿರಲಿ, ಅಗ್ನಿಕಾಂಡದ ಕಾರಣವೇನೆಂಬುದನ್ನು ಕಲ್ಯಾಣದ ನಾಗರಿಕರು ತಿಳಿದಿದ್ದಾರೆ, ನಾರಣಕ್ರಮಿತರೆ."

"ಏನು ಹೇಳುತ್ತಾರೆ ನಾಗರಿಕರು?"

"ಅಪಮಾನಿತೆಯಾದ ಚಾಲುಕ್ಯರಾಣಿ ಕುಮಾರ ಪ್ರೇಮಾರ್ಣವನನ್ನು ಕರ್ಹಾಡಕ್ಕೆ ಕಳುಹಿಸಿ, ಬಳಿಕ ಅರಮನೆಗೆ ಬೆಂಕಿ ಹಚ್ಚಿ ಆತ್ಮಹತ್ಯೆ ಮಾಡಿಕೊಂಡಳೆಂದು."

ರುದ್ರಭಟ್ಟನ ಮಾತುಗಳನ್ನು ಕೇಳಿ ಕ್ರಮಿತನು ಕಂಪಿಸಿದನು. ಜನ ಹೇಳುವುದು ಸತ್ಯಕ್ಕೆ ದೂರವಲ್ಲವೆಂಬುದು ಅವನಿಗೆ ತಿಳಿದಿತ್ತು. ಆದರೆ ಅಪಘಾತ ನಡೆದ ಕೆಲವೇ ದಿನಗಳಲ್ಲಿ ಕಲ್ಯಾಣದಲ್ಲಿ ಸುದ್ದಿ ಹರಡಿದ್ದು ಹೇಗೆ ? ಶರಣರೇ ಆ ಕಾರ್ಯ ಮಾಡಿರಬೇಕು ಎಂದು ಕ್ರಮಿತನು ನಿರ್ಧರಿಸಿಕೊಂಡನು.

ಕೆಲವು ಕ್ಷಣಗಳ ಮೇಲೆ ಅವನು ರುದ್ರಭಟ್ಟನ ಕಡೆಗೆ ಬಿರುನೋಟ ಬೀರಿ, "ಪ್ರಭುಗಳ ಧವಳ ಕೀರ್ತಿಗೆ ಕಳಂಕ ಹಚ್ಚಲು ನಮ್ಮ ವಿರೋಧಿಗಳು ಮಾಡುತ್ತಿರುವ ಈ ಅಪಪ್ರಚಾರವನ್ನು ನೀವು ನಂಬಿದಿರಾ?" ಎಂದು ಕೇಳಿದನು.

"ಜನ ಹೇಳಿದ್ದನ್ನೆಲ್ಲ ನಂಬುವ ತಿಳಿಗೇಡಿಯೇ ನಾನು, ನಾರಣಕ್ರಮಿತರೆ, ಜನಶ್ರುತಿ ಯಾವ ದಾರಿ ಹಿಡಿದಿದೆ ಎಂಬುದು ನಿಮಗೆ ತಿಳಿಯಲಿ ಎಂದು ಈ ವಿಚಾರವನ್ನು ನಿಮ್ಮ ಗಮನಕ್ಕೆ ತಂದೆ. ನೀವು ರಾಜಪುರೋಹಿತರು,

ಧರ್ಮಾಧಿಕರಣದ ಶ್ರೇಷ್ಠ ಅಧಿಕಾರಿ. ಅಗ್ನಿಕಾಂಡದ ಎಲ್ಲ ವಿವರಗಳು ನಿಮಗೆ ತಿಳಿದಿದೆ. ನಾಗರಿಕರ ಸಭೆ ಕರೆದು ವಾಸ್ತವಾಂಶಗಳನ್ನು ಪ್ರಕಟಿಸಿದರೆ ಅಪಪ್ರಚಾರಕರ ಬಾಯಿ ಮುಚ್ಚಿದಂತಾಗುವುದು."

ರುದ್ರಭಟ್ಟನ ಉತ್ತರದಿಂದ ಕ್ರಮಿತನ ಅಚ್ಚರಿ ಇಮ್ಮಡಿಸಿತು. ಇದು ಸದುದ್ದೇಶದಿಂದ ಕೂಡಿದ ಆಪ್ತವಾಕ್ಯವೇ, ಅಥವಾ ವ್ಯಂಗ್ಯವಾಗಿ ನಿಂದಿಸುವ ವಿಡಂಬನೆಯೇ ಎಂಬುದನ್ನು ನಿರ್ಧರಿಸಲು ಅಸಮರ್ಥನಾಗಿ, ತಿರಸ್ಕಾರದ ನಗೆ ಹಾರಿಸಿ,

"ನಿಮ್ಮ ಸಲಹೆ ವಿಚಿತ್ರವಾಗಿದೆ, ರುದ್ರಭಟ್ಟರೆ. ನ್ಯಾಯಶಾಸ್ತ್ರದಲ್ಲಿ ಪಾಂಡಿತ್ಯಗಳಿಸುವ ಪರಿಶ್ರಮದಲ್ಲಿ ನೀವು ಲೋಕ ವ್ಯವಹಾರವನ್ನೇ ಮರೆತಂತಿದೆ. ಅಪಪ್ರಚಾರಕರ ಬಾಯಿ ಮುಚ್ಚಲು ಧರ್ಮಾಧಿಕರಣದ ವಿವರಣೆಗಿಂತ ರಾಜಭಟರ ಕೊರಡೆಯೇಟು ಹೆಚ್ಚು ಉಪಯುಕ್ತ. ಬಿಜ್ಜಳರಾಯರು ಚಾಲುಕ್ಯರಾಣಿಯನ್ನು ಅತ್ಯಂತ ಗೌರವದಿಂದ ಸ್ವಾಗತಿಸಿ ಸತ್ಕರಿಸಿದರು. ಚಾಲುಕ್ಯ ಅರಸೊತ್ತಿಗೆಗೆ ಕುಮಾರ ಪ್ರೇಮಾರ್ಣವನ ಉತ್ತರಾಧಿಕಾರವನ್ನು ಅಂಗೀಕರಿಸಿ, ಅವನು ಪ್ರಾಪ್ತವಯಸ್ಕನಾಗುವವರೆಗೆ ರಾಣಿಯನ್ನು ರಾಜಪ್ರತಿನಿಧಿಯಾಗಿ ನೇಮಿಸುವುದು ಪ್ರಭುಗಳ ಇಚ್ಛೆಯಾಗಿತ್ತು. ಕಲ್ಯಾಣಕ್ಕೆ ಹಿಂದಿರುಗಿ ಶುಭ ದಿನದಲ್ಲಿ ಕುಮಾರ ಪ್ರೇಮಾರ್ಣವನ ಪಟ್ಟಾಭಿಷೇಕ ನಡೆಸಲು ಅವರು ಯೋಚಿಸಿದ್ದರು. ಆ ರೀತಿ ನಡೆದಿದ್ದರೆ ಈ ಸಮಿತಿಯ ವಿಚಾರವನ್ನೇ ಪ್ರಭುಗಳು ಮರೆಯುತ್ತಿದ್ದರು. ರಾಣಿ ಕಾಮೇಶ್ವರೀ ದೇವಿಯವರ ಅಪಮೃತ್ಯುವೇ ನಮ್ಮ ತೊಂದರೆಗಳಿಗೆ ಕಾರಣ," ಎಂದನು.

ಈ ಮಾತುಗಳನ್ನು ಮೌನವಾಗಿ ಕೇಳುತ್ತಿದ್ದ ಮಂಚಣ್ಣನಾಯಕನು ಎದುರಿಗಿದ್ದ ದಾಖಲೆಗಳಿಂದ ಸಮಿತಿಯ ನೇಮಕಕ್ಕೆ ಸಂಬಂಧಿಸಿದ ನಿರೂಪವನ್ನು ಪ್ರತ್ಯೇಕಿಸಿ,

"ಪ್ರಭುಗಳ ಆಜ್ಞೆಯಂತೆ ಚಾಲುಕ್ಯರಾಜ್ಯದ ಶೈವಮಠಗಳು, ಹದಿನೆಂಟು ಅಗ್ರಹಾರಗಳು, ರಾಜಧಾನಿಯ ವೀರ ಬಣಂಜು ಸಂಘ, ಇವುಗಳಿಂದ ನಾವು ಒಬ್ಬೊಬ್ಬ ಪ್ರತಿನಿಧಿಯನ್ನು ತೆಗೆದುಕೊಂಡು ಸಮಿತಿಯನ್ನು ಪೂರೈಸಬೇಕು. ಆ ಕಾರ್ಯ ಮೊದಲು ನಡೆಯಲಿ ಆಮೇಲೆ ವಿಚಾರಣೆ," ಎಂದನು.

ಕ್ರಮಿತನ ಮುಖ ಮಿದುನಗೆಯಿಂದ ಅರಳಿತು. "ಪ್ರಭುಗಳು ಈ ವಿಚಾರವನ್ನು ಮೊದಲು ಯೋಚಿಸಿ, ಅದರ ಪರಿಹಾರಕ್ಕಾಗಿ ಹೊಸ ಕಾರ್ಯಕ್ರಮವನ್ನು ರಚಿಸಿದ್ದಾರೆ, ಮಂಚಣನಾಯಕರೆ, ಇದು ಅವರ ನಿರೂಪ." ಎಂದು ಅವನು ಎದುರಿಗಿದ್ದ ದಾಖಲೆಗಳಿಂದ ಪತ್ರವೊಂದನ್ನು ತೆಗೆದು ಮಂಚಣನಿಗೆ ಕೊಟ್ಟನು.

ಹೊಸ ಆಜ್ಞೆಯಲ್ಲಿ ಬಿಜ್ಜಳನು ನಿಪುಣರ ಸಮಿತಿಯನ್ನು ತಾತ್ಕಾಲಿಕ ನ್ಯಾಯಾಸ್ಥಾನವಾಗಿ ಮಾರ್ಪಡಿಸಿ, 'ಚಾಲುಕ್ಯ ರಾಜ್ಯದಲ್ಲಿ ನಡೆದಿರುವುದಾಗಿ ಹೇಳುವ ಈ ವರ್ಣಸಂಕರಕ್ಕೆ ಸಂಬಂಧಿಸಿದ ಆಪಾದಿತರನ್ನು, ಸಾಕ್ಷಿಗಳನ್ನು ಕರೆಸಿಕೊಂಡು ವಿಚಾರಣೆಮಾಡಿ ಮೂರು ದಿನಗಳ ಅವಧಿಯಲ್ಲಿ ವರದಿ ಮಾಡಬೇಕೆಂದು" ಆಜ್ಞೆಮಾಡಿದ್ದನು.

ನಿರೂಪದ ವ್ಯಾಪ್ತಿ ಉದ್ದೇಶಗಳನ್ನು ಅರಿತುಕೊಳ್ಳಲು ಅವಕಾಶ ಕೊಟ್ಟು ಕ್ರಮಿತನು,

"ಈ ನಿರೂಪದಂತೆ ವಿಚಾರಣೆಯನ್ನು ತ್ವರಿತಗೊಳಿಸಲು ಕೆಲವು ಕ್ರಮಗಳನ್ನು ಕೈಗೊಳ್ಳುವುದು ನನಗೆ ಅಗತ್ಯವಾಯಿತು. ಅದನ್ನು ನೀವು ಅನುಮೋದಿಸುವಿರೆಂದು ನಂಬಿದ್ದೇನೆ," ಎಂದನು.

ಮಂಚಣನು ಅಷ್ಟಕ್ಕೇ ಬಿಡಲಿಲ್ಲ. "ನೀವು ಕೈಗೊಂಡ ಕ್ರಮಗಳೇನೆಂಬುದನ್ನು ಮೊದಲು ತಿಳಿಸಿರಿ, ಕ್ರಮಿತರೆ. ಆಮೇಲೆ ಅನುಮೋದನೆಯ ವಿಚಾರ," ಎಂದು ಅವನು ಮತ್ತೆ ಹೇಳಿದನು.

"ತಿಳಿಸುತ್ತೇನೆ, ಮಂಚಣನಾಯಕರೆ. ಕಣ್ಣು ಕಟ್ಟಿ ನಿಮ್ಮನ್ನು ಹಳ್ಳಕ್ಕೆ ತಳ್ಳುವೆನೆಂದು ಭಾವಿಸಿದಿರಾ? ಈ ವ್ಯವಹಾರಕ್ಕೆ ಸಂಬಂಧಿಸಿದ ಪ್ರಮುಖ ಆಪಾದಿತರನ್ನು ಬಂಧನದಲ್ಲಿಡಲು ಪ್ರಭುಗಳು ಆಜ್ಞೆಮಾಡಿದ್ದಾರೆ. ಧರ್ಮಾಧಿಕರಣದ ಅಧಿಕಾರಿಯಾಗಿ ನಾನು ಅದನ್ನು ಕಾರ್ಯಗತ ಮಾಡಿದ್ದೇನೆ." –ಎಂದು ಕ್ರಮಿತನು ಹರಳಯ್ಯ ಮಧುವರಸರ ಬಂಧನ ಆಜ್ಞೆಯನ್ನು ಮುಂದಿಟ್ಟನು.

"ಮಂಗಳವೇಡೆಯಿಂದ ರಾಜಾಜ್ಞೆಗಳ ಕಟ್ಟನ್ನೇ ತಂದಂತಿದೆ, ರಾಜಪುರೋಹಿತರು! ಎಲ್ಲವನ್ನೂ ಒಂದೇ ಸಾರಿಗೆ ಹೊರಗಿಟ್ಟರೆ ನಮ್ಮ ಭವಿಷ್ಯವನ್ನೂ ತಿಳಿದಂತಾಗುವುದು." .....ಕುದಿಯುತ್ತಿದ್ದ ಅಸಮಾಧಾನವನ್ನು ಮುಚ್ಚಿದ್ದು ಮಂಚಣನೆಂದನು.

"ಇದರೊಂದಿಗೆ ನನ್ನ ಜೋಳಿಗೆ ಬರಿದಾಯಿತು, ಮಂಚಣನವರೆ. ಇಲ್ಲದ ಆಜ್ಞೆಗಳನ್ನು ಸೃಷ್ಟಿಸಲು ನಾನೇನು ಮಂತ್ರವಾದಿಯೇ?"

"ರಾಜಪುರೋಹಿತರ ಮಂತ್ರದಂಡ, ಮಂತ್ರವಾದಿಯ ಮಾಯಾದಂಡಕ್ಕಿಂತ ಅದ್ಭುತವಾದದ್ದು. ಹಠಾತ್ತಾಗಿ ಅದು ಹಾವಾಗಿ ನಮ್ಮ ಮೇಲೆ ಬಿದ್ದರೂ ಬೀಳಬಹುದು, ಏನು ಹೇಳುವಿರಿ, ರುದ್ರಭಟ್ಟರೆ ?" .....ಎಂದು ಮಂಚಣನು ನಗೆಯಾಡಿದನು.

"ವೃದ್ಧಮಂತ್ರಿಗಳು ಹಾಸ್ಯಪ್ರಿಯರು !" .....ಎಂದು ರುದ್ರಭಟ್ಟನು ನಕ್ಕನು.

ಈ ಮಾತುಗಳು ನಡೆಯುತ್ತಿದ್ದಂತೆ ಹೊರಗೆ ಕಾಲ ಸಪ್ಪಳ ಕೇಳಿಸಿತು. ಕ್ರಮಿತನು ಬಾಗಿಲ ಕಡೆ ನೋಡಿ,

"ರಾಜಭಟರು ಆಪಾದಿತರನ್ನು ಕರೆತಂದಂತಿದೆ. ನಾವು ಈಗಲೆ ವಿಚಾರಣೆ ಪ್ರಾರಂಭಿಸಬೇಕು," ಎಂದನು.

* * *

ಆ ದಿನ ಮುಂಜಾವಿನಲ್ಲಿ ಮಧುವರಸನು ಸ್ನಾನ ಪೂಜೆಗಳನ್ನು ಮುಗಿಸಿಕೊಂಡು ಹಜಾರಕ್ಕೆ ಬಂದಾಗ ಧರ್ಮಾಧಿಕರಣದ ಅಧಿಕಾರಿಯೊಬ್ಬನು ಬಾಗಿಲಲ್ಲಿ ಕಾದು ನಿಂತಿರುವುದನ್ನು ಕಂಡು, "ಒಳಗೆ ಬನ್ನಿ. ಏನಾಗಬೇಕಾಗಿದೆ?" ಎಂದನು.

ಅಧಿಕಾರಿ ಹಜಾರಕ್ಕೆ ಬಂದು, "ಮಧುವರಸರು ನೀವೇ ಅಲ್ಲವೆ?" ಎಂದು ಕೇಳಿದನು.

ಮಧುವರಸನು ಅಚ್ಚರಿಯಿಂದ, "ನಾನೇ ಮಧುವರಸ. ನೀವು ಯಾರು?" ಎಂದನು.

ಅಧಿಕಾರಿ ಹತ್ತಿರ ಬಂದು ಮಧುವರಸನ ಭುಜದ ಮೇಲೆ ಕೈಯಿಟ್ಟು, "ರಾಜಾಜ್ಞೆಯಂತೆ ನೀವು ನನ್ನ ಬಂಧಿ. ಕೂಡಲೆ ನನ್ನ ಸಂಗಡ ಬನ್ನಿರಿ," ಎಂದನು.

ಈ ಮಾತುಗಳನ್ನು ಕೇಳುತ್ತಲೆ ಬಾಗಿಲ ಮರೆಯಲ್ಲಿ ನಿಂತಿದ್ದ ಆಯುಧಪಾಣಿಗಳಾದ ಇಬ್ಬರು ಭಟರು ಒಳಗೆ ಬಂದು ಮಧುವರಸನ ಇಕ್ಕೆಲಗಳಲ್ಲಿ ನಿಂತರು.

ಅಧಿಕಾರಿ ರಾಜಭಟರ ಈ ಶಿಸ್ತಿನ ವರ್ತನೆಯನ್ನು ಕಂಡು ಮಧುವರಸನ ಮುಖದಲ್ಲಿ ವಿಷಾದ ಆಶ್ಚರ್ಯಗಳ ಗಂಭೀರ ಭಾವ ಮಿಂಚಿ ಮರೆಯಾಯಿತು. ಪ್ರತಿಕ್ಷಣದಲ್ಲಿ ಅವನು ಶಾಂತಿ ಸಮಾಧಾನಗಳ ಮಿದುನಗೆ ಸೂಸಿ,

"ನಾನು ಸಿದ್ಧನಾಗಿದ್ದೇನೆ, ನಾಯಕರೆ. ಆದರೆ ಬಂಧಿಸುವ ಮೊದಲು ಆಜ್ಞಾ ಪತ್ರವನ್ನು ತೋರಿಸಬೇಕೆಂಬುದು ಧರ್ಮಾಧಿಕರಣದ ನಿಬಂಧನೆಯಲ್ಲವೆ?" ಎಂದು ಕೇಳಿದನು.

ಆಗ ಅಧಿಕಾರಿ ಮಧುವರಸನಿಗೆ ವಂದಿಸಿ ಸೊಂಟದಲ್ಲಿದ್ದ ಆಜ್ಞಾಪತ್ರವನ್ನು ತೆಗೆದುಕೊಟ್ಟನು. ಧರ್ಮಾಧಿಕರಣದ ಶ್ರೇಷ್ಠ ನ್ಯಾಯಮೂರ್ತಿಯಾಗಿ ಸ್ವಯಂ ನಾರಣಕ್ರಮಿತನೇ ಆಜ್ಞೆಗೆ ಸಹಿ ಹಾಕಿರುವುದನ್ನು ಕಂಡಾಗ ಮಧುವರಸನಿಗೆ ಆಶ್ಚರ್ಯವಾಗಲಿಲ್ಲ. ಬಿಜ್ಜಳನ ರಾಜ್ಯಭಾರ ನಿರೂಪಣೆಯ ಅನಂತರ ಮಂಗಳ ವೇಡೆಯಲ್ಲಿ ನಡೆದ ದುರಂತ ಘಟನೆಗಳ ಪ್ರತಿಕ್ರಿಯೆಯೋ ಇದು? ಶರಣರ ಮೇಲಿನ ದಬ್ಬಾಳಿಕೆ ದುರಾಕ್ರಮಣಗಳ ನಾಂದಿಯೋ ನನ್ನ ಬಂಧನ? ಎಂದು ಅವನು ಶಂಕಿಸಿದನು.

ಅಧಿಕಾರಿಗೆ ಆಜ್ಞಾಪತ್ರವನ್ನು ಹಿಂದಿರುಗಿ ಕೊಟ್ಟು ಅವನು, "ನನ್ನ ಪುತ್ರಿಯಿಂದ

ಬೀಳ್ಕೊಂಡು ಅಗತ್ಯವಾದ ಉಡಿಗೆ ತೊಡಿಗೆಗಳನ್ನು ತೆಗೆದುಕೊಳ್ಳಲು ಅವಕಾಶ ಕೊಡುವಿರಲ್ಲವೆ?" ಎಂದನು.

"ನಿಮ್ಮನ್ನು ಕಾರಾಗೃಹ ಸೇರಿಸುವವರೆಗೆ ಎಚ್ಚರದಿಂದ ಸಂಗಡಲೇ ಇರಬೇಕೆಂದು ಧರ್ಮಾಧಿಕರಣದ ಆಜ್ಞೆ. ಅದರಂತೆ ನಾನು ನಡೆಯಬೇಕಾಗುತ್ತದೆ," –ಎಂದು ಅಧಿಕಾರಿ ವಿನಯದಿಂದ ಹೇಳಿದನು.

ಹಜಾರದ ಒಳಬಾಗಿಲಲ್ಲಿ ನಿಂತು ಈ ಮಾತುಗಳನ್ನು ಕೇಳುತ್ತಿದ್ದ ಲಾವಣ್ಯವತಿ ಮುಂದೆ ಬಂದು ತಂದೆಯ ಕಾಲುಗಳಿಗೆ ಎರಗಿ, ಗದ್ಗದ ಕಂಠದಿಂದ, "ಕ್ರಮಿತರು ತಮ್ಮ ಹಗೆ ತೀರಿಸಿಕೊಂಡರು, ಅಣ್ಣ. ನಿಮ್ಮನ್ನು ಬಂಧನದಲ್ಲಿಟ್ಟರೆ ನಾನು ಅರಕ್ಷಿತೆಯಾಗುವೆನು," ಎಂದು ಹೇಳಿದಳು.

ಮಧುವರಸನು ಮಗಳ ಭುಜ ಹಿಡಿದೆತ್ತಿ ಸಮಾಧಾನಪಡಿಸುತ್ತ, "ಶರಣರು ಯಾವಾಗಲೂ ಅರಕ್ಷಿತರಾಗುವುದಿಲ್ಲ, ಮಗಳೆ. ಶಿವನು ನಮ್ಮ ಏಕಮಾತ್ರ ಆಶ್ರಯ, ಏಕಮಾತ್ರ ರಕ್ಷಣೆ. ವಿಪತ್ತನ್ನು ಧೈರ್ಯದಿಂದ ಎದುರಿಸುವುದು ಶರಣರ ಶೀಲ. ನೀನು ಮಧುವರಸನ ಮಗಳು, ಕಾಳಿದಾಸ ಚಮೂಪತಿಯ ವಂಶೋದ್ಭವಳು. ಈ ಗೌರವವನ್ನು ಶಿರಸ್ಸಿನಲ್ಲಿ ಧರಿಸಿ, ಅದಕ್ಕೆ ತಕ್ಕಂತೆ ನಡೆ. ಇನ್ನು ನಾನು ಹೋಗುತ್ತೇನೆ," ಎಂದನು.

ತುಸು ಹೊತ್ತಿನ ಮೇಲೆ ಧರ್ಮಾಧಿಕರಣದ ಜೋಡೆತ್ತಿನ ರಥದಲ್ಲಿ ರಾಜಭಟರು ಮಧುವರಸನನ್ನು ಕಾರಾಗೃಹಕ್ಕೆ ಕರೆದುಕೊಂಡು ಹೋದರು. ಚಾಲುಕ್ಯ ಅರಸರ ಒಂದು ಪ್ರಾಚೀನ ಅರಮನೆ ಬಿಜ್ಜಳನ ಆಡಳಿತದಲ್ಲಿ ಧರ್ಮಾಧಿಕರಣದ ಚಾವಡಿಯಾಗಿ ಮಾರ್ಪಟ್ಟಿತ್ತು. ವಿಚಾರಣಾಧೀನರಾದವರನ್ನು ಆ ಅರಮನೆಯ ನೆಲಮಾಳಿಗೆಯಲ್ಲಿ ತಾತ್ಕಾಲಿಕವಾಗಿ ಬಂಧನದಲ್ಲಿಡುತ್ತಿದ್ದರು. ಅಲ್ಲಿಯ ಒಂದು ಸಾಮಾನ್ಯ ಕೋಣೆ ಮಧುವರಸನ ಸೆರೆಮನೆಯಾಯಿತು.

ಕಾರಾಗೃಹದ ಅಧಿಕಾರಿಗಳು ತನ್ನನ್ನು ಸಾಮಾನ್ಯ ಅಪರಾಧಿಯಂತೆ ನಡೆಸಿಕೊಳ್ಳುತ್ತಿರುವುದನ್ನು ಕಂಡು ಮಧುವರಸನಿಗೆ ಸಮಾಧಾನವೇ ಆಯಿತು. "ಪದವಿ ಪ್ರತಿಷ್ಠೆಗಳ ಮೇಲಿನ ಅಭಿಮಾನವೇ ಅನರ್ಥದ ಮೂಲ. ಅದನ್ನು ತ್ಯಜಿಸುವ ಅವಕಾಶವನ್ನು ಕಲ್ಪಿಸಿ ಕ್ರಮಿತನು ನನಗೆ ಉಪಕಾರವನ್ನೇ ಮಾಡಿದನು. ಏಕಾಂತವಾಸದ ಸುಯೋಗ ದೊರಕಿಸಿಕೊಟ್ಟನು," ಎಂದು ಭಾವಿಸಿ ಅವನು ಮನಸ್ಸಿನ ಉದ್ವೇಗವನ್ನು ಮರೆಯಲು ಪ್ರಯತ್ನಿಸಿದನು.

ಮಂತ್ರಿಪದವಿಯಿಂದ ನಿವೃತ್ತನಾಗಿ, ಅಸ್ವಸ್ಥತೆಯಿಂದ ಯಾವಾಗಲೂ ಮನೆಯಲ್ಲಿಯೇ ಇರುತ್ತಿದ್ದರೂ ಇರುವರೆಗೆ ಮಧುವರಸನಿಗೆ ನಿಜವಾದ ಏಕಾಂತವಾಸ

ಲಭಿಸಿರಲಿಲ್ಲ. ನಾಗರಿಕರು, ಅಧಿಕಾರಿಗಳು, ವರ್ತಕ ಪ್ರಮುಖರು, ಶರಣರು, ಇವರೇ ಮುಂತಾಗಿ ಎಲ್ಲ ವರ್ಗಗಳ ಜನರು ಯಾವುದಾದರೊಂದು ಕಾರ್ಯಕ್ಕಾಗಿ ಸಲಹೆ ಕೇಳಲು ಪ್ರತಿದಿನ ಅವನ ಬಳಿಗೆ ಬರುತ್ತಿದ್ದರು. ಒಂದೊಂದು ದಿನ ವಿಶ್ರಾಂತಿಯ ಅವಕಾಶವೂ ಸಿಕ್ಕುತ್ತಿರಲಿಲ್ಲ.

ಮದುವೆಯಾದ ಮೇಲೆ ಲಾವಣ್ಯವತಿ ಗಂಡನ ಮನೆಗೆ ಹೋಗಿರಲಿಲ್ಲ. ಅಳಿಯನನ್ನು ಮನೆಯಲ್ಲಿಯೇ ಇಟ್ಟುಕೊಳ್ಳುವುದು ಮಧುವರಸನ ಉದ್ದೇಶವಾಗಿತ್ತು. ಹರಳಯ್ಯ ಇದಕ್ಕೆ ಒಪ್ಪಿಗೆ ಕೊಟ್ಟಿದ್ದನು. ಆದರೆ ಮುದಿ ತಂದೆಯನ್ನು ಒಂಟಿಗನಾಗಿ ಮಾಡಿ ಮಾವನ ಸುಖವಸತಿಯಲ್ಲಿರಲು ಶೀಲವಂತ ಒಪ್ಪಿರಲಿಲ್ಲ. ಧರ್ಮಾಧಿಕರಣದ ವ್ಯವಹಾರ ಯಾವ ರೀತಿ ಕೊನೆಗೊಳ್ಳುವುದೆಂಬುದನ್ನು ನೋಡಿಕೊಂಡು ಮುಂದಿನ ವಿಚಾರ ನಿರ್ಧರಿಸಬಹುದೆಂದು ಎಲ್ಲರೂ ಸುಮ್ಮನಿದ್ದರು.

ಈ ಪರಿಸ್ಥಿತಿಯಲ್ಲಿ ತನ್ನ ಬಂಧನದಿಂದ ಲಾವಣ್ಯವತಿ, ಶೀಲವಂತ, ಹರಳಯ್ಯ, ಇವರ ಮೇಲೆ ಆಗುವ ಪರಿಣಾಮವೇನು ? ಎಂದು ಯೋಚಿಸುತ್ತ ಮಧುವರಸನು ಸೆರೆಮನೆಯ ಮುರುಕು ಮಂಚದ ಮೇಲೆ ಮಲಗಿದನು.

ಒಂದು ಹಳೆಯ ಮಂಚ, ಹುಲ್ಲು ತುಂಬಿದ ಹಾಸಿಗೆ ದಿಂಬುಗಳು, ಪಾರ್ಶ್ವದಲ್ಲೊಂದು ಕಾಲ್ಮಣೆ, ಮಣ್ಣಿನ ಕೆಲವು ತಟ್ಟೆ ಮಡಿಕೆಗಳು, –ಇವು ಆ ಕೊಠಡಿಯಲ್ಲಿದ್ದವು. ಮಧುವರಸನು ಸಂಗಡ ತಂದಿದ್ದ ಗಂಟನ್ನು ಬಿಚ್ಚಿ ಮಡಿಬಟ್ಟೆಯೊಂದನ್ನು ಹಾಸಿಗೆಯ ಮೇಲೆ ಹಾಸಿಕೊಂಡಿದ್ದನು.

ಅರಮನೆಯ ನೆಲಮಾಳಿಗೆ ದೊಡ್ಡ ಕಲ್ಲುಗಳಿಂದ ಕಟ್ಟಲ್ಪಟ್ಟಿತ್ತು. ಗೋಡೆ ಮಾಳಿಗೆಗಳು ಧೂಳು ಇಲ್ಲಣಗಳಿಂದ ತುಂಬಿದ್ದವು. ಆಳೆತ್ತರದಲ್ಲಿದ್ದ ಸಣ್ಣ ಗವಾಕ್ಷದಿಂದ ಗಾಳಿ ಬೆಳಕುಗಳು ಪ್ರಯಾಸದಿಂದ ಒಳಗೆ ಬರಬೇಕಾಗಿತ್ತು.

ಕಾರಾಗಾರದ ಅರೆಗತ್ತಲಲ್ಲಿ, ತೆರೆದ ಕಣ್ಣುಗಳಿಂದ, ಬರಿ ಗೋಡೆಗಳನ್ನು ನೋಡುತ್ತಿದ್ದಂತೆ ಮಧುವರಸನು ಚಿಂತಾಭಾರದಿಂದ ಕುಗ್ಗಿದನು. ಮನಸ್ಸು ಕಳವಳದಿಂದ ತಲ್ಲಣಗೊಂಡಿತು. ಬಾಹ್ಯ ಜಗತ್ತಿನಿಂದ ದೂರವಾಗಿ ದುಃಖ ದುರಂತಗಳಿಂದ ಸೀಮಿತವಾದ ಅಂಧಕಾರಮಯ, ಚೈತನ್ಯಶೂನ್ಯ ಪ್ರದೇಶದಲ್ಲಿ ತಾನು ಬಂಧಿಯಾಗಿರುವುದಾಗಿ ತಿಳಿದನು. ಬಿಜ್ಜಳನ ಮಂತ್ರಿಮಂಡಲದಲ್ಲಿ ಕುಶಲಮತಿಯಾದ ಸಚಿವನೆಂದು ಹೆಸರಾಗಿದ್ದ ಮಧುವರಸನು ಈಗಿಲ್ಲ. ಈ ಕತ್ತಲ ಕಾರಾಗೃಹದಲ್ಲಿರುವುದು ಅವನ ನಿರ್ಜೀವದೇಹ ಮಾತ್ರ. ಅವನ ಆತ್ಮ, ಬಂಧವಿಮುಕ್ತವಾಗಿ ಗಗನಕ್ಕೆ ಹಾರಿ ವಿಶಾಲ ವಿಶ್ವದಲ್ಲಿ ಎಲ್ಲಿಯೋ ವಿಹರಿಸುತ್ತಿದೆ ಎಂಬ ವಿಚಿತ್ರ ಕಲ್ಪನೆ ಅವನಲ್ಲಿ ಉದಯಿಸಿತು.

ಈ ಅಪೂರ್ವ ಅನುಭವದಲ್ಲಿ ತಲ್ಲೀನನಾಗಿದ್ದ ಮಧುವರಸನು, ಸೆರೆಮನೆಯ ಬಾಗಿಲು ತೆರೆದ ಸದ್ದು ಕೇಳಿ ತಟ್ಟನೆ ಎದ್ದು ಕುಳಿತನು. ಕಬ್ಬಿಣದ ಪಟ್ಟಿ ಅಲಗುಗಳಿಂದ ಭದ್ರಪಡಿಸಿದ್ದ ಭಾರವಾದ ಬಾಗಿಲನ್ನು ತೆರೆದುಕೊಂಡು ಇಳಿವಯಸ್ಸಿನ ಭಟನೊಬ್ಬನು ಒಳಗೆ ಬಂದನು. ಬೀಗದ ಕೈಗಳ ದೊಡ್ಡ ಗೊಂಚಲೊಂದು ಅವನ ಕೈಗೆ ಅಂಟಿಕೊಂಡಂತೆ ನೇತಾಡುತ್ತಿತ್ತು. ಸುರುಗಿನ ಅವನ ಗಲ್ಲಗಳಲ್ಲಿ ಕೂದಲು ಬೆಳೆದು ಗುಳಿಬಿದ್ದ ಕಣ್ಣುಗಳ ಆಳವನ್ನು ಮತ್ತಷ್ಟು ಹೆಚ್ಚಿಸಿದ್ದವು. ಸಾಕಾದಷ್ಟು ಬೆಳಕು ಗಾಳಿಗಳಿಲ್ಲದ ಕಡೆ ಹೆಚ್ಚು ದಿನಗಳನ್ನು ಕಳೆದಿದ್ದುದರಿಂದ ಅವನ ಮುಖ ಬಿಳಚಿ ಮೇಣದ ಬಣ್ಣಕ್ಕೆ ತಿರುಗಿತ್ತು. ನೀಳವಾದ ದೇಹ, ಮುರಿದು ಬೀಳಲಿದ್ದ ಮರದಂತೆ ಅರ್ಧ ಬಾಗಿತ್ತು.

ಮೆಲ್ಲನೆ ನಡೆಯುತ್ತ ವೃದ್ಧನು ಒಳಗೆ ಬಂದು, "ನಾನು ಜವರಾಯ. ಈ ಸೆರೆಮನೆಯ ಕಾವಲುಗಾರ. ಒಡೆಯರಿಗಾಗಿ ನೀರು ತಂದಿದ್ದೇನೆ," ಎಂದು ಕೈಯಲ್ಲಿದ್ದ ಮಣ್ಣಿನ ಕುಡಿಕೆಯನ್ನು ಮಧುವರಸನಿಗೆ ಕೊಟ್ಟನು.

ಮಧುವರಸನು ತೆಗೆದುಕೊಂಡು ಕುಡಿದನು. ನೀರು ತುಂಬ ಸಿಹಿಯಾಗಿತ್ತು. ಬಾಡಿದ ಎಳೆ ಬಳ್ಳಿ ನೀರು ಬಿದ್ದಾಗ ಚೇತರಿಸಿಕೊಂಡು ಮೇಲೇಳುವಂತೆ, ಅವನ ಚೈತನ್ಯ ಜಾಗೃತವಾಯಿತು. "ನಾನು ಬಾಯಾರಿಕೆಯಿಂದ ಬಸವಳಿದು ಎಚ್ಚರತಪ್ಪಿದ್ದೆ, ಜವರಾಯ. ಇನ್ನು ಕೊಂಚಹೊತ್ತು ನೀನು ಬಾರದೆಹೋಗಿದ್ದರೆ ಉಳಿಯುತ್ತಿದ್ದೆನೋ ಇಲ್ಲವೊ? ನೀನು ಬಂದು ಕಾಪಾಡಿದೆ. ಅದಕ್ಕಾಗಿ ನಾನು ಯಾವಾಗಲೂ ಕೃತಜ್ಞನು," ಎಂದು ಅವನು ಆವೇಗದಿಂದ ಹೇಳಿದನು.

"ಮೇಲಿನ ಅಪ್ಪಣೆಯಾಯಿತು, ನಾನು ಬಂದೆ, ಒಡೆಯರೆ. ನಿಮ್ಮ ನೀರಿನ ಋಣ ತಪ್ಪಿಸುವುದು ಯಾರಿಗೂ ಸಾಧ್ಯವಲ್ಲ." –ಜವರಾಯ ಕೈಯೆತ್ತಿ ಮೇಲೆ ತೋರಿಸಿ ಹೇಳಿದನು.

ಅವನು ತೋರಿಸಿದ್ದು ಧರ್ಮಾಧಿಕರಣದ ಅಧಿಕಾರಿಯನ್ನೋ ಅಥವಾ ಜಗನ್ನಿಯಾಮಕನನ್ನೋ ಎಂದು ತಿಳಿಯಲಾರದೆ ಮಧುವರಸನು,

"ಈ ಧೂಳು ಇಲ್ಲಣ ತುಂಬಿದ ನೆಲಮನೆ ನನ್ನ ವಾಸಗೃಹವಾದದ್ದು ಮೇಲಿನ ಅಪ್ಪಣೆಯಿಂದಲೇ ಅಲ್ಲವೆ?" ಎಂದು ಅರ್ಥಗರ್ಭಿತವಾಗಿ ನುಡಿದನು.

"ಏಕೆ ಒಡೆಯರೆ? ನೆಲಮನೆ ಚೆನ್ನಾಗಿಲ್ಲವೆ? ದಶಗಣದ ಸಿಂಗಿರಾಜ ಇಲ್ಲಿ ಆರು ವರ್ಷ ಬಂಧಿಯಾಗಿದ್ದ," –ಎಂದನು ಜವರಾಯ.

"ಈ ಕಾರಾಗೃಹದ ಇತಿಹಾಸ ನನಗೆ ತಿಳಿಯದು. ಯಾರು ಆ ಸಿಂಗಿರಾಜ?"

"ಬನವಸೆ ನಾಡಿನ ಒಬ್ಬ ಸಾಮಂತ, ಒಡೆಯರೆ. ಕಪ್ಪಕಾಣಿಕೆಗಳನ್ನು

ಕೊಡದೆ ದೇಶದಲ್ಲಿ ಲೂಟಿ ದರೋಡೆ ನಡೆಸಲು ಮೊದಲುಮಾಡಿದ. ಸರ್ವಾಧಿಕಾರಿಗಳು ಅವನ ಬಂಧನಕ್ಕೆ ಆಜ್ಞೆಮಾಡಿದರು. ಒಂದು ಸಾರಿ ಬಸವ ದಂಡನಾಯಕರು ಬನವಸೆಗೆ ಯಾತ್ರೆ ಹೋಗಿದ್ದಾಗ ಸಿಂಗಿರಾಜ ತಾನಾಗಿ ರಾಜಭಟನಿಗೆ ವಶನಾದ. ಧರ್ಮಾಧಿಕರಣದ ಅಧಿಕಾರಿಗಳು ಅವನನ್ನು ವಿಚಾರಣೆಗಾಗಿ ಕಲ್ಯಾಣಕ್ಕೆ ಕಳುಹಿಸಿದರು."

"ಅವನ ವಿಚಾರಣೆ ಮುಗಿಯಲು ಆರು ವರ್ಷಗಳು ಹಿಡಿಯಿತೆ?" –ಮಧುವರಸನು ಅಚ್ಚರಿಯಿಂದ ಪ್ರಶ್ನಿಸಿದನು. ಧರ್ಮಾಧಿಕರಣದ ಆಲಸ್ಯ ನೀತಿಯ ಬಗೆಗೆ ನಾಗರಿಕರ ಆಕ್ಷೇಪ ಈಗ ಅವನಿಗೆ ಅರ್ಥವಾಯಿತು.

"ಆರು ವರ್ಷಗಳು ಕಳೆದರೂ ಅವನ ವಿಚಾರಣೆ ನಡೆಯಲಿಲ್ಲ, ಒಡೆಯರೆ. ಕೊನೆಗೆ ಸರ್ವಾಧಿಕಾರಿಗಳು ಅವನೊಬ್ಬ ನಿರುಪದ್ರವಿ ಕವಿಯೆಂದೂ, ಮನೆ ಮಠಗಳನ್ನು ಬಿಟ್ಟು ಸನ್ಯಾಸಿಯಾಗುವುದು ಅವನ ಉದ್ದೇಶವೆಂದೂ ತಿಳಿದು ಬಿಡುಗಡೆಗೆ ಆಜ್ಞೆಮಾಡಿದರು. ಆಗಲೂ ಅವನ ಕಾವ್ಯ ಮುಗಿದಿರಲಿಲ್ಲ." –ಎಂದು ಜವರಾಯ ಉತ್ತರಿಸಿದನು.

"ಕಾರಾಗೃಹದಲ್ಲಿದ್ದಷ್ಟು ದಿನವೂ ಅವನು ಕಾವ್ಯರಚನೆಯಲ್ಲಿ ತೊಡಗಿದ್ದನೆ?"

"ಹೌದು, ಒಡೆಯರೆ. ಮೇಲಿನ ಅಪ್ಪಣೆ ಪಡೆದು ನಾನು ಅವನಿಗೆ ಬೇಕಾದ ತಾಡಪತ್ರ ಓಲೆ ಕಂಠಗಳನ್ನು ತಂದುಕೊಟ್ಟೆ. ಅವನೇನು ಹೇಳುತ್ತಿದ್ದ ಗೊತ್ತೆ ?"

"ಏನು ಹೇಳುತ್ತಿದ್ದ?"

"ನಾನು ಪಂಡಿತನಲ್ಲ, ಛಂದಸ್ಸು ಭಾಷೆಗಳು ತಿಳಿಯದು. ಆದರೂ ಕಾವ್ಯ ಬರೆಯಲು ತೊಡಗಿದ್ದೇನೆ. ಆ ಕಾಶೀ ವಿಶ್ವೇಶ್ವರನೆ ಅದನ್ನು ಮುಗಿಸಿಕೊಡಬೇಕು ಎಂದು."

ತುಸು ಹೊತ್ತು ಯೋಚಿಸಿ ಮಧುವರಸನು, "ಸಿಂಗಿರಾಜನು ಬರೆಯುತ್ತಿದ್ದ ಕಾವ್ಯದ ಹೆಸರೇನು? ಅದರ ಪತ್ರಗಳು ನಿನ್ನಲ್ಲಿ ಉಳಿದಿವೆಯೆ? ಎಂದು ಪ್ರಶ್ನಿಸಿದನು.

"ಕಾವ್ಯದ ಹೆಸರು ನನಗೆ ತಿಳಿಯದು, ಒಡೆಯರೆ. ಬಸವಣ್ಣನವರ ಅರವತ್ತ ನಾಲ್ಕು ಪವಾಡಗಳನ್ನು ವರ್ಣಿಸುತ್ತೇನೆ ಎಂದು ಸಿಂಗಿರಾಜ ಹೇಳುತ್ತಿದ್ದ. ಇಲ್ಲಿಂದ ಹೋದಾಗ ಅವನ ತಾಳೆಯೋಲೆಯ ಕಟ್ಟು ಸ್ವಲ್ಪ ದೊಡ್ಡದಾಗಿಯೇ ಇತ್ತು. ಅದರ ಎರಡು ಪತ್ರಗಳು ಮಾತ್ರ ನನ್ನಲ್ಲಿ ಉಳಿದಿವೆ," –ಎಂದು ಜವರಾಯ ನೀಳವಾಗಿ ಕತ್ತರಿಸಿ ನಡುವೆ ರಂಧ್ರ ಮಾಡಿದ ಎರಡು ಓಲೆಗರಿಗಳನ್ನು ಮಧುವರಸನಿಗೆ ಕೊಟ್ಟನು.

ಅರ್ಧ ಬರೆದು ಹಾಗೆಯೇ ಬಿಟ್ಟಿದ್ದ ಆ ಪತ್ರಗಳಲ್ಲಿನ ಒಂದು ಪದ್ಯ

ಮಧುವರಸನ ದೃಷ್ಟಿ ಸೆಳೆಯಿತು. ಅವನು ಓದಿದನು :

ಫಲವೀವ ವಸ್ತುವನು ಪರಹಿತಾರ್ಥಕೆ ಕೊಟ್ಟ
ಫಲವದಗಣಿತ ಕಣಾ ! ಮರ್ತ್ಯದೊಳು, ನೀನಿರ್ದ
ನೆಲೆಯೆ ಕೈಲಾಸವಹುದೀ ಪ್ರಮಥರೀ ರುದ್ರಲೋಕ
ಸಹಿತಾನೆ ಬಹೆನು *

"ಫಲಕೊಡುವ ವಸ್ತುಗಳನ್ನು ಪರಹಿತಕ್ಕಾಗಿ ದಾನ ಮಾಡುವುದಕ್ಕಿಂತ ಹೆಚ್ಚಿನ ತ್ಯಾಗ ಜಗತ್ತಿನಲ್ಲಿ ಮತ್ತಾವುದಿದೆ? ಇಂತಹ ಮಹಾತ್ಯಾಗಿಯಾದ ನೀನು ಎಲ್ಲಿರುವೆಯೋ ಅದೇ ಕೈಲಾಸ. ನಿನ್ನ ಒಡನಿರುವವರೆಲ್ಲ ಪ್ರಮಥರು. ರುದ್ರ ಲೋಕದೊಡನೆ ನಾನು ಅಲ್ಲಿ ಬಂದು ನೆಲಸುತ್ತೇನೆ."

ಈ ಮಾತುಗಳನ್ನು ಯಾರು ಯಾರಿಗೆ ಹೇಳಿದರು ಎಂಬುದನ್ನು ದೊರೆತ ಕಾವ್ಯಭಾಗದಿಂದ ತಿಳಿಯಲಾರದೆ ಮಧುವರಸನು ಚಿಂತಿಸತೊಡಗಿದನು.

.....ಭಕ್ತಿ ಭಂಡಾರಿ, ತ್ಯಾಗಮೂರ್ತಿ, ಬಸವಣ್ಣನರು ಕಲ್ಯಾಣದಲ್ಲಿದ್ದವರೆಗೆ ನಗರ ಸುರಕ್ಷಿತವಾಗಿತ್ತು. ಶರಣರು ಸನಾಥರಾಗಿದ್ದರು. ಅವರ ನಿರ್ವಾಸನದಿಂದ ಕಲ್ಯಾಣವೀಗ ಅರಕ್ಷಿತ. ಶರಣರು ಅನಾಥರು. ಈ ಪರಿಸ್ಥಿತಿಯಲ್ಲಿ ನಗರ ಅಪಾಯಕ್ಕೀಡಾಗುವುದು ಅಸಂಭವವಲ್ಲ. ಶರಣರ ಮೇಲೆ ಬಿಜ್ಜಳನ ದಬ್ಬಾಳಿಕೆ ದೌರ್ಜನ್ಯ ಇನ್ನು ಪ್ರಾರಂಭವಾಗುವುದು. ಮುಂದೆ ಶರಣರಿಗೆ ಎಂತಹ ಅಗ್ನಿ ಪರೀಕ್ಷೆ ಕಾದಿದೆಯೋ ಬಲ್ಲವರಾರು? ಶರಣರ ಏಳುಬೀಳುಗಳೆಲ್ಲ ಈಗ ಶಿವನ ಕೈಯಲ್ಲಿ. ಬಸವಣ್ಣನವರೇ ಒಂದು ವಚನದಲ್ಲಿ ಹೇಳಿದಂತೆ 'ಹಾಲಲದ್ದು ನೀರಲದ್ದು ನಿಮ್ಮ ಧರ್ಮ!' ಎಂದು ಸರ್ವಾರ್ಪಣ ಮಾಡುವುದೊಂದೇ ನಮಗುಳಿದಿರುವ ದಾರಿ. ಚೆನ್ನಬಸವಣ್ಣನವರು ಮಂತ್ರಿಪದವಿಗೇರಿದರು. ಆದರೆ ಬಿಜ್ಜಳನ ಸಂಚು ಸಂಧಾನಗಳಿಂದ ಶರಣರನ್ನು ರಕ್ಷಿಸುವ ಶಕ್ತಿ ಸಾಹಸಗಳು ಅವರಿಗಿದೆಯೆ?

ಮಧುವರಸನು ಚಿಂತಿಸುತ್ತಿದ್ದಂತೆ ಜವರಾಯ ವಿನಯದಿಂದ, "ಒಡೆಯರು ದಯಮಾಡಿ ನನ್ನ ಸಂಗಡ ಬರಬೇಕು. ಇಲ್ಲವೆ ಕಮ್ಮಾರನು ನನ್ನ ಮೇಲೆ ಕೋಪ ಮಾಡುವನು. ಚಮ್ಮಟಿಗೆಯಂತೆ ಕರುಣೆ ಮಾನವೀಯತ್ವಗಳನ್ನೇ ಅರಿಯದ ಜನ ಅವರು," ಎಂದನು.

"ಕಮ್ಮಾರನೊಡನೆ ನಮಗೇನು ಕೆಲಸ?"

–ಅನ್ಯ ಮನಸ್ಕನಂತೆ ಮಧುವರಸನು ಪ್ರಶ್ನಿಸಿದನು.

---

* ಸಿಂಗಿರಾಜ ಪುರಾಣ, ಸಂಧಿ ೪. ಪದ್ಯ ೪೬

“ಒಡೆಯರು ಮರೆತಂತಿದೆ. ರಾಜಸಭೆಗೆ ಕಂಚುಕಿಯಂತೆ ಸೆರೆಮನೆಗೆ ಕಮ್ಮಾರ. ಅವನ ರಾಜಮುದ್ರೆ ಬೀಳದ ಹೊರತಾಗಿ ಇಲ್ಲಿಗೆ ಪ್ರವೇಶವೇ ದೊರಕುವುದಿಲ್ಲ,”

–ಎಂದು ಜವರಾಯ ರಹಸ್ಯವಾಡಿದನು.

ಮಧುವರಸನಿಗೆ ಅರ್ಥವಾಯಿತು, ಘಟನಾಕ್ರಮದಲ್ಲಿ ತನಗೊದಗಿದ ಅವಕಾಶವನ್ನು ಸೇಡಿಗಾಗಿ ಉಪಯೋಗಿಸಿಕೊಳ್ಳುವುದು ಕ್ರಮಿತನ ಉದ್ದೇಶವೆಂದು. ಮಂಚದಿದಂದೆದ್ದು, “ನೀನು ಅನುಭವಸ್ಥನಾದ ತತ್ವದರ್ಶಿಯಂತೆ ಮಾತಾಡುತ್ತಿರುವೆ ಜವರಾಯ,” ಎಂದನು.

“ತತ್ವದರ್ಶಿಯಾಗುವ ಪುಣ್ಯ ನನಗೆಲ್ಲಿಯದು, ಒಡೆಯರೆ ? ನಿಮ್ಮಂತಹವರ ಸೇವೆಯಲ್ಲಿ ಕಲಿತ ನಾಲ್ಕು ಮಾತುಗಳನ್ನು ನುಡಿಯುತ್ತಿದ್ದೇನೆ. ಮನುಷ್ಯನಿಗೆ ಜೀವನದ ಕಹಿ ಸಿಹಿಗಳ ಪರಿಚಯವಾಗಲು ಅರಮನೆ ಗುರುಮನೆಗಳ ಪರಿಚಯ ಮಾತ್ರವೇ ಸಾಲದು. ಸೆರೆಮನೆಯ ಪರಿಚಯವೂ ಅಗತ್ಯ. ನಮ್ಮ ಸಾಮಂತರು, ಅಧಿಕಾರಿಗಳೂ, ವರ್ಷಕ್ಕೊಂದು ತಿಂಗಳು ಕಡ್ಡಾಯವಾಗಿ ಸೆರೆಮನೆಯ ವಾಸದಲ್ಲಿದ್ದರೆ ಅವರ ಆಡಳಿತ ದಕ್ಷತೆಗಳು ಉತ್ತಮವಾಗುತ್ತವೆ,” –ಎಂದು ಜವರಾಯ ಗಂಭೀರವಾಗಿ ನುಡಿದನು.

“ಮಂತ್ರಿಗಳ ವಿಚಾರದಲ್ಲಿಯೂ ಈ ನಿಬಂಧನೆ ಅನ್ವಯಿಸಬೇಕೇ?”

“ಮಂತ್ರಿಗಳೂ ಮನುಷ್ಯರಲ್ಲವೆ? ಮನುಷ್ಯತ್ವದ ಬೆಲೆ ಕಟ್ಟಲು ಅರಮನೆ ಗುರುಮನೆಗಳಿಗಿಂತ ಸೆರೆಮನೆಯೇ ಸರಿಯಾದ ಸ್ಥಾನ. ದರೋಡೆಕಾರ ಸಾಮಂತನಾಗಿ ಸೆರೆಮನೆಗೆ ಬಂದ ಸಿಂಗಿರಾಜನು ಭಕ್ತಕವಿಯಾಗಿ ಹೊರಗೆ ಹೋದನು. ಸೆರೆಮನೆಯ ವಾಸದಲ್ಲಿ ಮನುಷ್ಯನು ಮುರಿದು ಬೀಳುವನು, ಇಲ್ಲವೆ ಮೇಲಕ್ಕೇಳುವನು. ಎರಡರಲ್ಲಿ ಒಂದು ಆಗಲೇಬೇಕು.”

ಮಧುವರಸನು ನಸುನಕ್ಕು, “ನಾನು ಮುರಿದು ಬೀಳಲಾರದಷ್ಟು ಮೇಲಕ್ಕೇರಿದ್ದೀರಿ ನೀವು, ಒಡೆಯರೆ. ಇನ್ನು ಹೆಚ್ಚು ಬೆಳೆದರೆ ಸೆರೆಮನೆಯೇ ಮುರಿದು ಬೀಳುವುದು,” ಎಂದು ತಾನೂ ನಗೆಯಾಡಿದನು.

ಆಮೇಲೆ ಅವರು ನೆಲಮನೆಯ ಉಗ್ರಾಣ ಮೊಗಶಾಲೆಗಳನ್ನು ದಾಟಿ, ಪಾವಟಿಗೆಗಳನ್ನು ಹತ್ತಿ, ಅರಮನೆಯ ಹಿಂಭಾಗದ ಒಂದು ಸಣ್ಣ ಅಂಗಣಕ್ಕೆ ಬಂದರು. ಅಂಗಣದ ಸುತ್ತ ಮುಗಿಲು ಮುಟ್ಟುವ ಎತ್ತರವಾದ ಗೋಡೆಗಳು,

ನಡುವೆ ಉರಿಯುತ್ತಿದ್ದ ಕುಲುಮೆಯ ಮುಂದೆ ಕಮ್ಮಾರನೂ ಅವನ ಇಬ್ಬರು ಸಹಾಯಕರೂ ಕುಳಿತ್ತಿದ್ದರು.

ಜವರಾಯನನ್ನು ನೋಡುತ್ತಲೆ ಅವರಲ್ಲೊಬ್ಬನು ತಿದಿಯೊತ್ತಿ ಕುಲುಮೆಯ ಉರಿ ಹೆಚ್ಚಿಸುವ ಕಾರ್ಯದಲ್ಲಿ ತೊಡಗಿದನು.

ಕಮ್ಮಾರನು ಜವರಾಯನ ಬಳಿ ಬಂದು, ಗೋಡೆಗೆ ತಗುಲಿಹಾಕಿದ್ದ ಬೇರೆ ಬೇರೆ ಗಾತ್ರದ ಸರಪಳಿಗಳನ್ನು ತೋರಿಸಿ, "ಯಾವುದು ಹಾಕಲಿ, ಅಣ್ಣ? ನೂರರದ್ದೋ ಇನ್ನೂರರದೋ?" ಎಂದು ಕೇಳಿದನು. ಅವನ ಗಡಸುದನಿ, ಮಾಸಿದ ಅಂಗಿ ಚಲ್ಲಣಗಳು, ಅವನೊಬ್ಬ ದಿನಗೂಲಿಯ ಕೆಲಸಗಾರನೆಂಬುದನ್ನು ತೋರಿಸುತ್ತಿತ್ತು. ಸಹಾಯಕರು ಒಡೆಯನಿಗಿಂತ ಒರಟಾಗಿದ್ದರು.

"ನೂರು ಸೇರಿನ ಆ ಸಣ್ಣ ಸರಪಣಿ ಹಾಕು," –ಎಂದು ಕಮ್ಮಾರನಿಗೆ ಹೇಳಿ ಜವರಾಯ, ಮಧುವರಸನ ಕಡೆ ತಿರುಗಿ, "ಸಿಂಗಿರಾಜನಿಗೆ ಇನ್ನೂರು ಸೇರಿನ ದೊಡ್ಡ ಸರಪಣಿ ಹಾಕಿತ್ತು, ಒಡೆಯರೆ. ಅವನು ನಿಮಗಿಂತ ಗಟ್ಟಿಮುಟ್ಟಾದ ಆಳು. ಕಸರತ್ತು ಮಾಡಿ ಮೈ ಚೆನ್ನಾಗಿ ಬೆಳಸಿಕೊಂಡಿದ್ದ," ಎಂದನು.

"ಕೈಗೋ ಕಾಲಿಗೋ?" –ಕಮ್ಮಾರ ಮತ್ತೆ ಕೇಳಿದನು.

"ಎರಡಕ್ಕೂ."

ಕಮ್ಮಾರನು ಗೋಡೆಯ ಹತ್ತಿರ ಹೋಗಿ ಸರಪಣಿಯೊಂದನ್ನು ತೆಗೆದನು. ಘಣ ಘಣ ಶಬ್ದದಿಂದ ಅದು ಕೆಳಗೆ ಬಿತ್ತು. ಕಮ್ಮಾರ ಅದನ್ನು ತೆಗೆದುಕೊಂಡು, ಮಧುವರಸನ ಕೈಕಾಲುಗಳ ಅಳತೆಮಾಡಿ, "ಆರು ಮತ್ತು ಎಂಟು ಅಂಗುಲ," ಎಂದು ಕುಲುಮೆಯ ಹತ್ತಿರಿದ್ದವರಿಗೆ ಕೂಗಿ ಹೇಳಿದನು, –ಅಳತೆ ತೆಗೆದುಕೊಂಡ ಸಿಂಪಿಯಂತೆ.

ಕೊಂಚ ಹೊತ್ತಿಗೆ ಸರಪಣಿ ಸಿದ್ಧವಾಯಿತು. ಕಮ್ಮಾರನೂ ಅವನ ಸಹಾಯಕರೂ ಅದನ್ನು ಮಧುವರಸನ ಕೈಕಾಲುಗಳಿಗೆ ತೊಡಿಸಿದರು. ಅದಕ್ಕಾಗಿ ಅವರು ಅವನನ್ನು ಹೀಗೆ ಹಾಗೆ ನಿಲ್ಲಿಸಿ, ಬೆನ್ನು ತಟ್ಟಿ, ಕೈಕಾಲುಗಳನ್ನಾಡಿಸಿ ನೋಡಬೇಕಾಯಿತು, ಎತ್ತು ಕುದುರೆಗಳಿಗೆ ಗೊಲಸು ಕಟ್ಟಿ ನೋಡುವಂತೆ.

"ಈಗ ನಾನು ಇವರ ದೃಷ್ಟಿಯಲ್ಲಿ ಮನುಷ್ಯನಲ್ಲ, ಕೇವಲ ಪಶು. ದ್ವೇಷ ಆಸಕ್ತಿಗಳಿಲ್ಲದೆ ನಿರ್ಲಿಪ್ತಭಾವದಿಂದ ಇವರು ತಮ್ಮ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ನಾನೇಕೆ ಚಿಂತಿಸಬೇಕು ?" ಎಂದು ಮಧವರಸನು ಸುಮ್ಮನೆ ನಿಂತಿದ್ದನು.

ಅವನು ಮತ್ತೆ ತನ್ನನ್ನು ಬಂಧಿಸಿದ್ದ ಕೋಣೆಗೆ ಹೋದಾಗ ಸರಪಣಿಯ ಭಾರದಿಂದ ಕೈಕಾಲುಗಳು ಸೋತಿದ್ದವು. ಮಂಚದ ಮೇಲೆ ಕುಳಿತುಕೊಳ್ಳಲು

ಹೋಗಿ ಕಾಲು ತೊಡರಿ ಬಿದ್ದನು. ಸಂಗಡಿದ್ದ ಜವರಾಯ ಎತ್ತಿ ಮಲಗಿಸಿ, ಸರಪಣಿಯಿಂದ ತೊಂದರೆಯಾಗದಿರಲು, ಕೈಕಾಲುಗಳನ್ನ ಹೇಗಿಟ್ಟುಕೊಳ್ಳಬೇಕು, ಹೇಗೆ ಮಲಗಬೇಕು ಎಂದು ತೋರಿಸಿಕೊಟ್ಟನು.

ಬಳಿಕ "ಈಗ ನೀವು ಕೊಂಚ ಕಾಲ ವಿಶ್ರಮಿಸಿಕೊಳ್ಳಿ, ಒಡೆಯರೆ. ನಾನು ಹೋಗಿ ನಿಮಗೆ ಊಟಕ್ಕೆ ತರುತ್ತೇನೆ," ಎಂದನು ಜವರಾಯ.

"ಸೆರೆಮನೆಯ ಕೂಳು ನನಗೆ ಬೇಡ, ಜವರಾಯ," –ಮಧುವರಸ ಬೇಸರದಿಂದ ಹೇಳಿದನು.

"ತಿನ್ನದಿದ್ದರೆ ಹೇಗೆ ಒಡೆಯರೆ? ಮೇಲಿನ ಅಪ್ಪಣೆಯಂತೆ ನೀವು ನಡೆಯಲೇ ಬೇಕು. ಹೊರಗಿನಿಂದ ಊಟ ತರಿಸಿಕೊಳ್ಳಲು ಅವಕಾಶವಿಲ್ಲ, ಎಂದು ಆಜ್ಞಾಪತ್ರದಲ್ಲಿ ಬರೆದಿದೆ."

"ನಾನು ಉಪವಾಸ ಮಾಡುತ್ತೇನೆ." –ಮಧುವರಸನೆಂದನು, ನಿರ್ಧಾರಕ ಕಂಠದಿಂದ.

"ಹಾಗಾದರೆ ಒಡೆಯರ ಸಂಗಡ ನಾನೂ ಉಪವಾಸ ಮಾಡುತ್ತೇನೆ."

"ಅದಕ್ಕೆ ಮೇಲಿನ ಅಪ್ಪಣೆಯಾಗಿದೆಯೆ, ಜವರಾಯ ?"

"ಆಜ್ಞಾಪತ್ರದಲ್ಲಿ ಆ ವಿಷಯವಿಲ್ಲ. ಆದರೂ ಒಡೆಯರು ಉಪವಾಸ ಮಾಡುವಾಗ ನಾನು ಊಟ ಮಾಡುವುದು ಹೇಗೆ ? ನೀವು ಸೆರೆಮನೆಯಲ್ಲಿರುವವರೆಗೆ ನಾನು ನಿಮ್ಮ ರಕ್ಷಕ, ನಿಮ್ಮೊಡನೆ ನನ್ನ ಸಂಬಂಧ ಕಡಿಯಲಾಗದೆಂದು ಮೇಲಿನ ಅಪ್ಪಣೆಯಾಗಿದೆ."

"ನಾನು ಉಪವಾಸಮಾಡಿ ಸಾಯಲು ನಿರ್ಧರಿಸಿದ್ದೇನೆ, ಜವರಾಯ."

"ನನ್ನ ನಿರ್ಧಾರವೂ ಅದೇ."

"ಆಗ ಮೇಲಿನವರು ನಿನ್ನ ಮೇಲೆ ಕೋಪ ಮಾಡುವರು, ಶಿಕ್ಷೆ ವಿಧಿಸುವರು."

ಜವರಾಯನ ಸುರುಗಿದ ತುಟಿಗಳಲ್ಲಿ ವಿಡಂಬನೆಯ ಕಿರುನಗೆ ಮೂಡಿತು. ಗುಳಿಬಿದ್ದ ಕಣ್ಣುಗಳು ಅಪೂರ್ವ ಕಾಂತಿಯಿಂದ ಬೆಳಗಿದವು.

"ನಲವತ್ತು ವರ್ಷಗಳಿಂದ ನಾನು ಈ ಸೆರೆಮನೆಯಲ್ಲಿದ್ದೇನೆ, ಒಡೆಯರೆ. ತರುಣನಾಗಿ ಇಲ್ಲಿಗೆ ಬಂದೆ, ಈಗ ಬೆನ್ನು ಬಾಗಿದ ಮುದುಕನಾಗಿದ್ದೇನೆ. ಇದಕ್ಕಿಂತ ಹೆಚ್ಚಿನ ಶಿಕ್ಷೆ ಜಗತ್ತಿನಲ್ಲಿ ಮತ್ತಾವುದಿದೆ?" –ಎಂದು ಅವನು ಉತ್ತರ ಕೊಟ್ಟನು.

ತುಸು ಹೊತ್ತು ಇಬ್ಬರೂ ಮೌನ. ಆಮೇಲೆ ಜವರಾಯ, "ಒಡೆಯರು ಒಪ್ಪುವುದಾದರೆ ಇಲ್ಲಿಯೇ ಅಡಿಗೆ ಮಾಡಿಕೊಳ್ಳಬಹುದು. ಬೇಕಾದ ಸಾಮಗ್ರಿಗಳನ್ನು ತಂದುಕೊಡುತ್ತೇನೆ," ಎಂದನು.

"ಮೇಲಿನವರು ಅದಕ್ಕೊಪ್ಪುವರೆ ?"

"ಒಪ್ಪಿಗೆ ಪಡೆಯಲು ಪ್ರಯತ್ನಿಸುತ್ತೇನೆ. ಆದರೆ ಕೈಕಾಲುಗಳಿಗೆ ಸರಪಣಿ ತೊಟ್ಟ ನಿಮ್ಮಿಂದ ಆ ಕೆಲಸವಾಗುವುದೇ?"

ಮಧುವರಸನು ಕೆಲವು ಕ್ಷಣಗಳು ಯೋಚಿಸಿ, "ನಿನ್ನ ಸಹಾಯವಿದ್ದರೆ ಆಗ ಬಹುದು," ಎಂದನು.

ಅಡಿಗೆಯ ಏರ್ಪಾಡು ಮಾಡಲು ಹೊರಗೆ ಹೋದ ಜವರಾಯ ಕೊಂಚ ಹೊತ್ತಿಗೆ ಪುನಃ ಬಂದು, "ಒಡೆಯರು ದಯಮಾಡಿ ಈ ಹಾಲು ಕುಡಿದರೆ ನಾನು ಮೇಲೆ ಹೋಗಿ, ಅನುಮತಿ ಪಡೆದು ಬರುತ್ತೇನೆ," ಎಂದನು.

ನಿರಾಕರಿಸಲು ಮಧುವರಸನ ಮನ ಒಪ್ಪಲಿಲ್ಲ. ತೆಗೆದುಕೊಂಡು ಕುಡಿದನು. ದ್ರಾಕ್ಷಿ ಕೇಸರಿ ಸಕ್ಕರೆಗಳ ಸಂಪರ್ಕವಿಲ್ಲದಿದ್ದರೂ ಹಾಲು ರುಚಿಯಾಗಿತ್ತು. ಮಧುವರಸನು ಮಲಗಿ ಜೊಂಪುಹತ್ತಿ ನಿದ್ದೆಹೋದನು.

ಪುನಃ ಅವನಿಗೆ ಎಚ್ಚರವಾದಾಗ ಜವರಾಯ ಹತ್ತಿರ ನಿಂತು, "ಒಡೆಯರೆ! ಒಡೆಯರೆ!" ಎಂದು ಕೂಗುತ್ತಿದ್ದನು.

"ಏಕೆ, ಜವರಾಯ ? ಎಷ್ಟು ಹೊತ್ತಾಗಿದೆ ಈಗ ?" –ಎದ್ದು ಕುಳಿತು ಮಧುವರಸ ಕೇಳಿದನು.

"ಅಪರಾಹ್ನ ಮೊದಲ ಪ್ರಹರ ಮುಗಿಯುತ್ತ ಬಂದಿದೆ. ಒಡೆಯರು ದಯಮಾಡಿ ಸಂಗಡ ಬರಬೇಕು," –ಸಹಜ ವಿನಯದಿಂದ ಜವರಾಯ ಹೇಳಿದನು.

"ಪುನಃ ಎಲ್ಲಿಗೆ ಕರೆದುಕೊಂಡು ಹೋಗುವೆ?"

"ನ್ಯಾಯಾಸ್ಥಾನದ ಮುಂದೆ ವಿಚಾರಣೆಗೆ. ಮೇಲಿನ ಅಪ್ಪಣೆ ಆಗಿದೆ."

ಶೃಂಖಲಾಬದ್ಧನಾದ ಮಧುವರಸನನ್ನು ಕೈಹಿಡಿದೆಬ್ಬಿಸಿ ವೃದ್ಧ ಜವರಾಯ ಹೊರಗೆ ಕರೆದುಕೊಂಡು ಹೋದನು.

ನೆಲಮನೆಯ ಮೆಟ್ಟಿಲ ಹತ್ತಿರ ಧರ್ಮಾಧಿಕರಣದ ಭಟರು ಬಂಧಿಗಾಗಿ ಕಾದು ನಿಂತಿದ್ದರು.

ರಾಜಭಟರು ಮಧುವರಸನನ್ನು ಕರೆತಂದು ನ್ಯಾಯಪೀಠದೆದುರಿಗೆ ನಿಲ್ಲಿಸಿದರು.

ಆಗ ಅವನು ಧರಿಸಿದ್ದ ಮಡಿಕೆಯಳಿದು ಮಾಸಿದ ಉಡಿಗೆ ತೊಡಿಗೆಗಳು, ಬಾಡಿದ ಮುಖ, ಬಾಗಿದ ದೇಹ, ಕೈಕಾಲುಗಳಿಗೆ ತೊಡಿಸಿದ್ದ ಶೃಂಖಲೆಗಳು, ನೋಡಿದವರಿಗೆ ತಟ್ಟನೆ ಅವನ ಗುರುತು ಸಿಕ್ಕದಂತೆ ಮಾಡಿದ್ದವು.

ತನ್ನ ಶತ್ರುವಿನ ಈ ದುರವಸ್ಥೆಯನ್ನು ಕಂಡು ಕ್ರಮಿತನ ಮುಖದಲ್ಲಿ

ಕುಹಕದ ಕಿರುನಗೆ ಮೂಡಿತು. ಮಂಚಣ, ಬೆರಗುವಡೆದು ಸಂದೇಹದಿಂದ ನೋಡುತ್ತಿದ್ದನು. ನಿರ್ಲಿಪ್ತನಂತೆ ಕುಳಿತಿದ್ದ ರುದ್ರಭಟ್ಟನ ದೃಷ್ಟಿ, ವಾತಾಯನದಲ್ಲಿ ನುಸುಳಿ ದೂರಗಗನದಲ್ಲಿ ಕಾಣದ ಏನನ್ನೋ ಹುಡುಕುತ್ತಿತ್ತು.

ತನ್ನ ಪ್ರವೇಶದಿಂದ ನ್ಯಾಯಾಧೀಶರಲ್ಲಾದ ಈ ವಿಭಿನ್ನ ಪ್ರತಿಕ್ರಿಯೆಯನ್ನು ಗಮನಿಸಿ ಮಧುವರಸನು ನ್ಯಾಯಪೀಠಕ್ಕೆ ಗಂಭೀರವಾಗಿ ನಮಸ್ಕರಿಸಿದನು.

ಎದುರಿಗೆ ನಿಂತ ವ್ಯಕ್ತಿ ಮಧುವರಸನೆಂದು ತಿಳಿದಾಗ ಮಂಚಣನಿಗೆ ಹಿಡಿಸಲಾರದಷ್ಟು ಕೋಪ ಬಂದಿತು. ಹವಿಯುಂಡ ಅಗ್ನಿಯಂತೆ ಅವನು ಸಿಡಿದೆದ್ದು ಬಿರುದನಿಯಿಂದ, "ಆಪಾದಿತನ ಕೈಕಾಲುಗಳಿಗೆ ಕೋಳ ಹಾಕಲು ಯಾರು ಆಜ್ಞೆ ಮಾಡಿದವವರು ? ಕೂಡಲೆ ಅದನ್ನು ತೆಗೆಯಿರಿ. ಕುಳಿತುಕೊಳ್ಳಲು ಪೀಠ ತಂದು ಹಾಕಿ," ಎಂದು ಗಜರಿದನು.

ರಾಜಭಟರು ಭಯಗ್ರಸ್ತರಾಗಿ ಕ್ರಮಿತನ ಮುಖ ನೋಡಿದರು. ಕ್ರಮಿತನು ಭಟರ ಮೇಲೆ ಭರವಸೆಯ ದೃಷ್ಟಿ ಬೀರಿ, ಮಂಚಣನ ಕಡೆ ತಿರುಗಿ,

"ಧರ್ಮಾಧಿಕರಣದ ನಿಬಂಧನೆಯಂತೆ ಎಲ್ಲವೂ ನಡೆದಿದೆ, ಮಂಚಣ ನಾಯಕರೆ ಅಪರಾಧಿಯ ಸುರಕ್ಷಣೆಗಾಗಿ ಕೋಳ ಹಾಕುವುದು ಅಗತ್ಯವಾಯಿತು. ನೀವು ಕೋಪ ಮಾಡುವ ಕಾರಣವಿಲ್ಲ." ಎಂದು ಹೇಳಿದನು.

"ಆಪಾದನೆ ಸ್ಥಿರವಾಗುವವರೆಗೆ ಮಧುವರಸರು ಅಪರಾಧಿಯಲ್ಲ. ಮಂತ್ರಿ ಮಂಡಲದಲ್ಲಿ ಸಚಿವರಾಗಿದ್ದು ದೇಶಕ್ಕೆ, ಪ್ರಜೆಗಳಿಗೆ ಪ್ರಶಂಸನೀಯ ಸೇವೆ ಸಲ್ಲಿಸಿದ ಮಧುವರಸರನ್ನು ಗೌರವದಿಂದ ನಡೆಸಿಕೊಳ್ಳುವುದು ನ್ಯಾಯಪೀಠದ ಕರ್ತವ್ಯ. ಇವರ ಕೋಳಗಳನ್ನು ತೆಗೆಸಿಹಾಕಲು ಮೊದಲು ಆಜ್ಞೆಮಾಡಿರಿ,"

–ಮಂಚಣನ ಕಂಠ ಈ ಬಾರಿಗೆ ಮತ್ತಷ್ಟು ಬಿರುಸಾಯಿತು.

"ಪದವಿ ಗೌರವಗಳನ್ನು ಪರಿಗಣಿಸದೆ, ವಿಚಾರಣಾಧೀನರಾದವರನ್ನೆಲ್ಲ ಸಮಾನ ದೃಷ್ಟಿಯಿಂದ ನೋಡುವುದು ನ್ಯಾಯಪೀಠದ ಮೊದಲ ನಿಯಮ. ನಾನು ಅದರಂತೆ ಆಜ್ಞೆಮಾಡಿದ್ದೇನೆ. ಕೋಳಗಳನ್ನು ತೆಗೆಸುವುದಿಲ್ಲ." –ಕ್ರಮಿತನು ಅದೇ ದನಿಯಲ್ಲಿ ಉತ್ತರಿಸಿದನು.

"ಕ್ರಮಿತನು ಮಾಡಿದುದು ಸರಿಯಾಗಿದೆ, ಮಂಚಣ ನಾಯಕರೆ, ಈ ಅಲ್ಪ ವಿಚಾರಕ್ಕಾಗಿ ನಮ್ಮಲ್ಲಿ ವಿರಸವೇಕೆ?" –ಎಂದು ರುದ್ರಭಟ್ಟನು ಮಧ್ಯಸ್ಥಿಕೆಯ ಸೋಗು ಹಾಕಿದನು.

'ನ್ಯಾಯಪೀಠದ ಮೂವರಲ್ಲಿ ಇಬ್ಬರು ಒಂದಾಗಿದ್ದಾರೆ. ನಾನೊಬ್ಬನೆ ಬೇರೆ' ಎಂದು ಮಂಚಣನಿಗೆ ಅರಿವಾಯಿತು. ಆದರೂ ನಿರ್ಧಾರದಿಂದ ಚಲಿಸದೆ ಅವನು,

"ಕೋಳ ತೆಗೆಸದೆ ವಿಚಾರಣೆ ಪ್ರಾರಂಭವಾಗುವುದಿಲ್ಲ, ಕ್ರಮಿತರೆ. ನಿಮ್ಮ ನಿಲವು ನ್ಯಾಯಸಮ್ಮತವಲ್ಲ. ಚಾಲುಕ್ಯ ಧರ್ಮಾಧಿಕರಣದ ಮಾನವೀತ್ವ ವಿಶಾಲ ಭಾವನೆಗಳಿಗೆ ಕಳಂಕ ತರುವುದಾಗಿದೆ, ಅದು." –ಎಂದು ಮತ್ತೆ ಗಜರಿ ನುಡಿದನು.

ಕ್ರಮಿತನಾಗ ಅಪ್ರತಿಭನಾದನು. ವೃದ್ಧನೂ, ರಾಜಕೀಯದಲ್ಲಿ ಆಲಸ್ಯ ಪ್ರವೃತ್ತಿಯವನೂ ಆಗಿದ್ದ ಮಂಚಣನಿಂದ ಈ ಬಗೆಯ ಪ್ರತಿಭಟನೆಯನ್ನು ಕ್ರಮಿತನು ನಿರೀಕ್ಷಿಸಿರಲಿಲ್ಲ. ಮುಂದೇನು ಮಾಡಬೇಕೆಂಬುದನ್ನು ನಿರ್ಧರಿಸಲಾರದೆ ಅವನು ಕೆಲವು ಕ್ಷಣಗಳು ಸುಮ್ಮನೆ ಕುಳಿತನು.

ನ್ಯಾಯಪೀಠದಲ್ಲಿ ಉದ್ಭವಿಸಿದ ಈ ಘರ್ಷಣೆಯನ್ನು ಕಂಡು ಮಧುವರಸನು ವಿಡಂಬನೆಯ ನಗೆ ಬೀರಿ, ಗಾಂಭೀರ್ಯದ ಸ್ಥಿರಕಂಠದಿಂದ,

"ನನ್ನ ಕೋಳಗಳ ವಿಚಾರವಾಗಿ ನ್ಯಾಯಪೀಠ, ವಿವಾದಕ್ಕೆ ತೊಡಗಬಾರದಾಗಿ ಬೇಡುತ್ತೇನೆ. ನನಗೆ ಕೋಳ ತೊಡಿಸುವ ಮೊದಲೆ ಈ ಚರ್ಚೆ ನಡೆದಿದ್ದರೆ, ಕಮ್ಮಾರನ ಶ್ರಮ ಉಳಿಯುತ್ತಿತ್ತು. ನನ್ನ ಗೌರವ ಪ್ರತಿಷ್ಠೆಗಳ ಮೇಲೆ ಧರ್ಮಾಧಿಕರಣದ ದಬ್ಬಾಳಿಕೆಯ ಅಗತ್ಯವಿರುತ್ತಿರಲಿಲ್ಲ. ಈವರೆಗೆ ನಾನು ಪ್ರಭುತ್ವಕ್ಕೆ ಸಲ್ಲಿಸಿದ ಸೇವೆಯ ಪ್ರತಿಫಲವಾಗಿ ಚಾಲುಕ್ಯ ಧರ್ಮಾಧಿಕರಣ, ಈ ಕಬ್ಬಿಣದ ತೊಡವುಗಳನ್ನು ನನಗೆ ಕರುಣಿಸಿದೆ. ಕೂಡಲೇ ನಾನು ಆ ಗೌರವವನ್ನು ಬಿಟ್ಟುಕೊಡುವುದಿಲ್ಲ. ಸರ್ವಾಧಿಕಾರಿಗಳು ಪುನಃ ಆಜ್ಞೆ ಮಾಡುವವರೆಗೆ ಅವುಗಳನ್ನು ಧರಿಸಿರುತ್ತೇನೆ. ನ್ಯಾಯಪೀಠ ವಿಚಾರಣೆಯನ್ನು ಪ್ರಾರಂಭಿಸಬೇಕಾಗಿ ನನ್ನ ಪ್ರಾರ್ಥನೆ." –ಎಂದು ಬಿನ್ನವಿಸಿಕೊಂಡನು.

ವಿಚಾರಣೆ ಪ್ರಾರಂಭವಾಗುವ ಮೊದಲೆ ತನಗಾದ ಪರಾಭವದಿಂದ ಕ್ರಮಿತನಿಗೆ ಲಜ್ಜೆಯಾಯಿತು. ಮಧುವರಸನ ಮಾತಿಗೆ ಪ್ರತಿ ಹೇಳುವ ಇಚ್ಛೆಇಲ್ಲದೆ ಮಂಚಣನು,

"ಬಿಜ್ಜಳ ಮಹಾರಾಯರ ಆಜ್ಞೆಯಾಗುವವರೆಗೆ ಕೋಳಗಳು ಹಾಗೆಯೇ ಇರಬೇಕೆಂಬುದು ಮಧುವರಸರ ಅಪೇಕ್ಷೆಯಾದರೆ ನಾನು ಅಡ್ಡಿ ಬರುವುದಿಲ್ಲ. ಇನ್ನು ವಿಚಾರಣೆ ಮೊದಲಾಗಬಹುದು," ಎಂದರು.

ಅಷ್ಟರಲ್ಲಿ ಕ್ರಮಿತನ ಇಂಗಿತದಂತೆ ಭಟನು ಮಧುವರಸನಿಗಾಗಿ ಆಸನವೊಂದನ್ನು ತಂದು ನ್ಯಾಯಪೀಠದ ಮುಂದಿಟ್ಟನು.

"ಆಪಾದಿತರು ಕುಳಿತುಕೊಂಡೇ ಪ್ರಶ್ನೆಗಳಿಗೆ ಉತ್ತರಕೊಡಬೇಕಾಗಿ ಧರ್ಮಾಧಿಕರಣದ ಅಪೇಕ್ಷೆ." –ಎಂದು ಕ್ರಮಿತನು ಹೇಳಿದಾಗ ಮಧುವರಸನು ಮಾರುತ್ತರ ಕೊಡದೆ ಕುಳಿತುಕೊಂಡನು.

ಕೆಲವು ಕ್ಷಣಗಳು ಸಭಾಂಗಣದಲ್ಲಿ ಮೌನ. ಆಮೇಲೆ ಧರ್ಮಾಧಿಕರಣದ

ಪದ್ಧತಿಯಂತೆ ಆಪಾದಿತನ ಪರಿಚಯ ನಿರೂಪಣೆ ಪ್ರಮಾಣವಚನಗಳು ಮುಗಿದು, ಕ್ರಮಿತನ ಆದೇಶದಂತೆ ಕರಣಿಕನು ಬಿಜ್ಜಳನ ಆಜ್ಞಾಪತ್ರವನ್ನು ಪಠಿಸಿದನು.

"ಚಾಲುಕ್ಯ ರಾಜ್ಯದಲ್ಲಿ ಹಿಂದಿನಿಂದ ಪ್ರಚಾರದಲ್ಲಿರುವ ವರ್ಣಧರ್ಮಾನುಸಾರವಾದ ಜಾತಿ ಪದ್ಧತಿ ಸಂಪ್ರದಾಯಗಳನ್ನು ಅತಿಕ್ರಮಿಸಿ, ಉತ್ತಮ ವರ್ಣದ ಮಧುವರಸನು ತನ್ನ ಮಗಳಾದ ಲಾವಣ್ಯವತಿ ಎಂಬ ಪ್ರೌಢ ಕನ್ಯೆಯನ್ನು ಮುಚ್ಚಿಗಹರಳಯ್ಯನ ಮಗ ಶೀಲವಂತನೆಂಬ ತರುಣನಿಗೆ ಮದುವೆ ಮಾಡಿಕೊಟ್ಟು ವರ್ಣಸಂಕರ ಮಾಡಿದ್ದಾನೆ. ಪ್ರಭುತ್ವದ ದೃಷ್ಟಿಯಲ್ಲಿ ಇದು ದಂಡಾರ್ಹವಾದ ದೊಡ್ಡ ಅಪರಾಧವಾಗಿರುತ್ತದೆ. ಆಪಾದಿತನನ್ನು ಬಂಧನದಲ್ಲಿಟ್ಟು ಅಪರಾಧದ ಬಗೆಗೆ ವಿಚಾರಣೆ ನಡೆಸಲು ರಾಜಪುರೋಹಿತ ನಾರಣಕ್ರಮಿತರ ಅಧ್ಯಕ್ಷತೆಯಲ್ಲಿ, ಮಂತ್ರಿ ಮಂಚಣನಾಯಕ, ನ್ಯಾಯಶಾಸ್ತ್ರಿ ರುದ್ರಭಟ್ಟ, ಇವರನ್ನೊಳಗೊಂಡ ವಿಶೇಷ ನ್ಯಾಯಪೀಠ ರಚಿಸಲ್ಪಟ್ಟಿದೆ. ಆಪಾದಿತನು ಈ ನ್ಯಾಯಪೀಠ ವಿಚಾರಣೆ ನಡೆಸಿ ವಿಧಿಸುವ ದಂಡಾಜ್ಞೆಗೆ ಬದ್ಧನಾಗಿರುತ್ತಾನೆ."

ಆಪಾದನೆಯ ಅಂಶವನ್ನು ಕರಣಿಕನು ಓದಿ ಮುಗಿಸಿದ ಮೇಲೆ ಕ್ರಮಿತನು ಮಧುವರಸನ ಕಡೆ ತಿರುಗಿ,

"ಇದಕ್ಕೆ ನಿಮ್ಮ ಸಮಾಧಾನವೇನು?" ಎಂದು ಕೇಳಿದನು.

ವಿಚಾರಣೆ ತಾಳಿದ ಈ ಹೊಸ ರೂಪದಿಂದ ಮಧುವರಸನಿಗೆ ಆಶ್ಚರ್ಯವಾಯಿತು. ನ್ಯಾಯಪೀಠಕ್ಕೆ ವಂದಿಸಿ ಅವನು,

"ಈ ಆಜ್ಞಾಪತ್ರದ ವಿಚಾರದಲ್ಲಿ ಕೆಲವು ವಿವರಗಳನ್ನು ತಿಳಿದುಕೊಳ್ಳಬೇಕಾಗಿದೆ. ನ್ಯಾಯಪೀಠ ಅನುಮತಿ ಕೊಟ್ಟರೆ ಕೇಳುತ್ತೇನೆ," ಎಂದು ಮನವಿ ಮಾಡಿಕೊಂಡನು.

ಕ್ರಮಿತ– "ಕೇಳಬಹುದು."

ಮಧುವರಸ– "ನಾನು ವರ್ಣಸಂಕರ ಮಾಡಿದೆನೆಂದು ಆಪಾದಿಸಿ ಕಲ್ಯಾಣದ ನಾಗರಿಕರು ಸಲ್ಲಿಸಿದ್ದ ಮನವಿ ಪತ್ರ ಏನಾಯಿತು? ಆಪಾದಿತರ ಪಟ್ಟಿಯಲ್ಲಿ ಬೇರೆ ಯಾರಿದ್ದಾರೆ? ಮನವಿಯ ಬಗೆಗೆ ಸರ್ವಾಧಿಕಾರಿ ಬಿಜ್ಜಳರಾಯರು ರಾಜಸಭೆಯಲ್ಲಿ ನಡೆಸಿದ ವಿಚರಣೆಯ ವರದಿ ನ್ಯಾಯಪೀಠದ ಮುಂದಿದೆಯೆ? ಈ ಪ್ರಶ್ನೆಗಳಿಗೆ ಉತ್ತರ ದೊರಕಿದ ಮೇಲೆ ನನ್ನ ಮೇಲಿನ ಆಪಾದನೆಗೆ ಸಮಾಧಾನ ಹೇಳುತ್ತೇನೆ."

ಮಧುವರಸನ ಪ್ರಶ್ನೆ ನ್ಯಾಯಪೀಠವನ್ನು ಗೊಂದಲದಲ್ಲಿ ಕೆಡವಿತು. ಚರ್ಚೆ ನಡೆಸಿ ತಮ್ಮ ನಿಲವನ್ನು ನಿರ್ಧರಿಸಿಕೊಳ್ಳಲು, ಮೂವರು ನ್ಯಾಯಮೂರ್ತಿಗಳು ವಿಶ್ರಾಂತಿಗಾಗಿ ಪ್ರತ್ಯೇಕಿಸಲ್ಪಟ್ಟಿದ್ದ ಪಾರ್ಶ್ವದ ಕೊಠಡಿಗೆ ಹೋದರು. ಅವರು ಅಧಿಕರಣದ ಚಾವಡಿಗೆ ಹಿಂದಿರುಗಲು ಕೊಂಚಕಾಲ ಹಿಡಿಯಿತು.

ಮಧುವರಸನ ಮೇಲೆ ಅವಜ್ಞೆಯ ದೃಷ್ಟಿ ಬೀರಿ ಕ್ರಮಿತನು ಹೇಳಿದನು : "ನಿಮ್ಮ ಪ್ರಶ್ನೆಗಳು ಸರ್ವಾಧಿಕಾರಿ ಬಿಜ್ಜಳರಾಯರ ಆಜ್ಞೆಯನ್ನು ಸಂದೇಹಕ್ಕೀಡು ಮಾಡುತ್ತವೆ. ನ್ಯಾಯಪೀಠ ಅವುಗಳಿಗೆ ಉತ್ತರ ಕೊಡುವುದಿಲ್ಲ. ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಿ. ಅದಕ್ಕೆ ನಿಮ್ಮ ಸಮಾಧಾನವೇನು ?

ಕ್ರಮಿತನ ಅಂತರಂಗವನ್ನು ತಿಳಿದ ಮಧುವರಸನು, "ಸರ್ವಾಧಿಕಾರಿಗಳ ಆಜ್ಞೆಯನ್ನು ಪ್ರಶ್ನಿಸುವ ಉದ್ದೇಶ ನನಗಿರುವುದಿಲ್ಲ. ನನ್ನ ವಿರುದ್ಧವಾಗಿ ನಾಗರಿಕರ ಮನವಿ, ಅದರ ವಿಚಾರಣೆಗಾಗಿ ಸರ್ವಾಧಿಕಾರಿಗಳು ಏರ್ಪಡಿಸಿದ್ದ ರಾಜಸಭೆಯಲ್ಲಿ ನಡೆದ ವಾದವಿವಾದಗಳು, ನನಗೆ ಸಹಾಯಕವಾಗಿವೆ. ವಿಚಾರಣೆಯ ಕಡತದಿಂದ ಅವುಗಳನ್ನು ತೆಗೆದುಹಾಕಿದರೆ ನನ್ನ ಪ್ರತಿವಾದದ ಮೂಲವನ್ನೇ ಛೇದಿಸಿದಂತಾಗುವುದು," ಎಂದನು.

"ಪ್ರಭುತ್ವ ಈಗ ನಿಮ್ಮನ್ನು ವಿಚಾರಣೆಗೆ ಗುರಿಪಡಿಸಿದೆ. ನಾಗರಿಕರ ಮನವಿ, ಆ ಸಂಬಂಧವಾಗಿ ರಾಜಸಭೆಯಲ್ಲಿ ನಡೆದ ವಾದವಿವಾದಗಳು, ಈಗ ನಮ್ಮ ಮುಂದಿರುವ ಆಪಾದನೆಯ ವಿಚಾರಣೆಗೆ ಅಗತ್ಯವಿಲ್ಲವೆಂದು ಸರ್ವಾಧಿಕಾರಿಗಳು ನಿರ್ಧರಿಸಿರುವುದರಿಂದ ಅವುಗಳ ಉಲ್ಲೇಖನಕ್ಕೆ ನ್ಯಾಯಪೀಠ ಅವಕಾಶ ಕೊಡುವುದಿಲ್ಲ." –ಕ್ರಮಿತನು ನಿರ್ಧಾರಕ ಕಂಠದಿಂದ ಹೇಳಿದನು.

ಮಂಚಣ ರುದ್ರಭಟ್ಟರು ಕ್ರಮಿತನ ನಿಲವನ್ನು ಸಮರ್ಥಿಸಿದರು.

ತನ್ನ ರಕ್ಷಣೆಯ ಬಗೆಗೆ ನಿರಾಶನಾದ ಮಧುವರಸನು, "ಈ ವ್ಯವಹಾರದಲ್ಲಿ ನನ್ನ ಸಹ ಆಪಾದಿತರಾರೆಂಬುದನ್ನು ತಿಳಿಯುವ ಅವಕಾಶವೂ ನನಗಿಲ್ಲವೆ ?" ಎಂದು ಪುನಃ ಹೇಳಿದನು.

ಕ್ರಮಿತನು ಉತ್ತರಕೊಡದಿರುವುದನ್ನು ಕಂಡು ಮಂಚಣನು, "ಇದೇ ಆಪಾದನೆಯ ಮೇಲೆ ಹರಳಯ್ಯನ ವಿಚಾರಣೆ ಪ್ರತ್ಯೇಕವಾಗಿ ನಡೆಯುವುದು. ಈ ಎರಡು ವ್ಯವಹಾರಗಳನ್ನು ಒಂದುಗೂಡಿಸಲಾಗದೆಂದು ಸರ್ವಾಧಿಕಾರಿಗಳ ಆಜ್ಞೆ," ಎಂದು ಹೇಳಿದನು.

ಶೀಲವಂತ ಲಾವಣ್ಯವತಿಯರನ್ನು ಆಪಾದಿತರ ಪಟ್ಟಿಯಲ್ಲಿ ಸೇರಿಸಿಲ್ಲವೆಂದು ತಿಳಿದು ಮಧುವರಸನಿಗೆ ಸಮಾಧಾನವಾಯಿತು. "ಹರಳಯ್ಯನವರು ವ್ಯವಹಾರ ಕುಶಲರಲ್ಲ. ನನ್ನ ಪ್ರತಿವಾದದಿಂದ ಅವರಿಗೆ ಆಗಬಹುದಾದ ಸಹಾಯವನ್ನು ನಿರಾಕರಿಸುವುದು ನ್ಯಾಯಪೀಠದ ಉದ್ದೇಶವೆ?" ಎಂದು ಅವನು ಪ್ರಶ್ನಿಸಿದನು.

"ಆಪಾದಿತರಿಗೆ ನ್ಯಾಯಸಮ್ಮತವಾದ ರಕ್ಷಣೆ ಸಹಾಯಗಳನ್ನು ಕೊಡಲು ನ್ಯಾಯಪೀಠ ಯಾವಾಗಲೂ ಸಿದ್ಧವಾಗಿರುತ್ತದೆ. ಹರಳಯ್ಯನವರ ವಿಚಾರವಾಗಿ

ನೀವು ನಿಶ್ಚಿಂತರಾಗಿ ನಿಮ್ಮ ಪ್ರತಿವಾದವನ್ನು ಪ್ರಾರಂಭಿಸಬಹುದು," –ಕ್ರಮಿತನು ಅಧಿಕಾರವಾಣಿಯಿಂದ ನುಡಿದನು.

ಈ ವಿಚಾರವಾಗಿ ಹೆಚ್ಚಿನ ಚರ್ಚೆ ವಿಫಲವೆಂದು ತಿಳಿದು ಮಧುವರಸನು "ನ್ಯಾಯಪೀಠ ಈ ವಿಚಿತ್ರ ನಿಲುವನ್ನು ತಳೆಯುವುದಾದರೆ ನನ್ನ ಪ್ರತಿವಾದವನ್ನು ಕೆಲವೇ ಮಾತುಗಳಲ್ಲಿ ಮುಗಿಸುತ್ತೇನೆ." ಎಂದು ಪ್ರಾರಂಭಿಸಿ ಮುಂದುವರೆದು ಹೇಳಿದನು :

"ಆಜ್ಞಾಪತ್ರದಲ್ಲಿ ಸೂಚಿಸಿರುವಂತೆ ನನ್ನಿಂದ ವರ್ಣಸಂಕರದ ಅಪರಾಧ ನಡೆದಿರುವುದಿಲ್ಲ. ನಾನೂ ಹರಳಯ್ಯನವರೂ ಶರಣಧರ್ಮದ ಅನುಯಾಯಿಗಳು. ಸಮುದ್ರವನ್ನು ಸೇರಿದ ನದಿ ತನ್ನ ನಾಮರೂಪವನ್ನು ಕಳೆದುಕೊಂಡು ಸಮುದ್ರವೇ ಆಗುವಂತೆ ಈಗ ನಾನೂ ಹರಳಯ್ಯನವರೂ ನಮ್ಮ ಹಿಂದಿನ ಜಾತಿ ಸೂತಕಗಳನ್ನು ಕಳೆದುಕೊಂಡು ಸಮಾನ ಧರ್ಮಿಗಳಾಗಿದ್ದೇವೆ. ಜಾತಿಪಂಥ ವರ್ಣಾಶ್ರಮಗಳಿಂದ ಸಮಾಜದಲ್ಲಿ ಉದ್ಭವಿಸುವ ಮೇಲು ಕೀಳು ಸ್ಪೃಶ್ಯ ಅಸ್ಪೃಶ್ಯಭಾವನೆಗಳನ್ನು ತೊಡೆದು ಹಾಕಿ ಸ್ತ್ರೀ ಪುರುಷರಾದಿಯಾಗಿ ಎಲ್ಲರಿಗೂ ಸಮಾನ ಹಕ್ಕುಬಾಧ್ಯತೆಗಳನ್ನು ಕೊಡುವುದು ಶರಣಧರ್ಮದ ಮೂಲೋದ್ದೇಶ. ಶೈವಧರ್ಮ ಆಗಮಗಳು ಹಿಂದಿನಿಂದ ತಾತ್ವಿಕವಾಗಿ ಪ್ರತಿಪಾದಿಸಿರುವ ಈ ಸರ್ವ ಸಮಾನತೆಯ ತತ್ವವನ್ನು ಕಾರ್ಯಗತ ಮಾಡಲು ಶರಣಧರ್ಮ ಪ್ರಯತ್ನಿಸುತ್ತಿದೆ. ಶರಣಧರ್ಮದ ಪದ್ಧತಿ ಸಂಪ್ರದಾಯಗಳಿಗೆ ಅನುಗುಣವಾಗಿ ಲಾವಣ್ಯವತಿ ಶೀಲವಂತರ ವಿವಾಹ ನಡೆದಿರುತ್ತದೆ. ಶರಣರೆಲ್ಲ ಅದನ್ನು ಅನುಮೋದಿಸಿರುತ್ತಾರೆ. ಎಲ್ಲ ಮತಧರ್ಮಗಳ ಸಂಪ್ರದಾಯ ಪದ್ಧತಿಗಳನ್ನು ರಕ್ಷಿಸುವುದು ರಾಜನ ಕರ್ತವ್ಯ. ಅದರಂತೆ ಶರಣಧರ್ಮವನ್ನು ರಾಜನು ರಕ್ಷಿಸುವುದು ನಿಜವಾದ ರಾಜಧರ್ಮ. ಬೇರೆ ಧರ್ಮಗಳ ಪದ್ಧತಿ ಸಂಪ್ರದಾಯಗಳಿಂದ ಶರಣಧರ್ಮವನ್ನು ಅಳೆದು ನೋಡಿ ತಪ್ಪುಗಳನ್ನು ಹುಡುಕುವುದು ರಾಜಧರ್ಮಕ್ಕೆ ಉಚಿತವೆನಿಸದು. ಈ ಕಾರಣಗಳಿಂದ ನನ್ನ ಮೇಲಿನ ಆಪಾದನೆಗಳನ್ನು ತೊಡೆದು ಹಾಕಿ ಈ ಅನ್ಯಾಯದ ವ್ಯವಹಾರವನ್ನು ಮುಗಿಸಬೇಕಾಗಿ ಧರ್ಮಾಧಿಕರಣವನ್ನು ಪ್ರಾರ್ಥಿಸುತ್ತೇನೆ."

ಮಧುವರಸನ ಪ್ರತಿವಾದ ಮೂವರು ನ್ಯಾಯಮೂರ್ತಿಗಳಲ್ಲಿಯೂ ವಿಭಿನ್ನ ಪ್ರತಿಕ್ರಿಯೆಗಳನ್ನು ಉಂಟುಮಾಡಿತು. ಪ್ರತಿವಾದ ಸಂಕ್ಷಿಪ್ತವೂ ಸಮಗ್ರವೂ ಆಗಿದೆಯೆಂದೂ, ಅದನ್ನು ಮುಂದಿಟ್ಟುಕೊಂಡು ಬಿಜ್ಜಳನಲ್ಲಿ ಕ್ಷಮಾಯಾಚನೆಯ ಮನವಿ ಮಾಡಿಕೊಳ್ಳಬಹುದೆಂದೂ ಮಂಚಣನು ಯೋಚಿಸಿದನು. ನ್ಯಾಯಪೀಠದ ನಿಲವನ್ನು ಗೌರವಿಸಿ, ನಾಗರಿಕರ ಮನವಿಪತ್ರವನ್ನು ಉಲ್ಲೇಖಿಸದಿದ್ದುದು ರುದ್ರಭಟ್ಟನಿಗೆ

ಸಮಾಧಾನಕರವಾಗಿ ಕಂಡಿತು.

ಪ್ರತಿವಾದದ ಸ್ಪಷ್ಟತೆ ಸಂಯಮಗಳಿಂದ ನಾರಣಕ್ರಮಿತನು ಮಾತ್ರವೇ ಅಸಂತುಷ್ಟನಾದನು. ಮಧುವರಸನನ್ನು ಕೆಣಕಿ ಕಿಡಿನುಡಿಯಾಡಿಸುವ ಉದ್ದೇಶದಿಂದ ಅವನು, ದನಿಯನ್ನು ಮತ್ತಷ್ಟು ಬಿರುಸಾಗಿಸಿ,

"ಸನಾತನವಾದ ವೈದಿಕ ಧರ್ಮವನ್ನು ಅಪಹಾಸ್ಯಕ್ಕೆ ಗುರಿಪಡಿಸಿ, ಸಮಾಜದಲ್ಲಿ ಕ್ರಾಂತಿಭಾವನೆಯನ್ನು ಹರಡುವುದು, ದೇಶದಲ್ಲಿ ಅಶಾಂತಿ ಅಂತರ್ಯುದ್ಧಗಳಿಗೆ ಎಡೆಮಾಡಿಕೊಡುವುದು, ಈ ದುರುದ್ದೇಶಗಳಿಂದ ಶರಣರು ವರ್ಣವಿರೋಧ ಚಳುವಳಿಯನ್ನು ಪ್ರಾರಂಭಿಸಿದ್ದಾರೆ. ಶರಣರ ಪ್ರೇರಣೆ ಪ್ರೋತ್ಸಾಹಗಳಿಂದ ನೀವು ವರ್ಣ ಸಂಕರದ ಮಹಾಘೋರಕ್ಕೆ ತೊಡಗಿದ್ದೀರಿ. ನಿಮ್ಮ ಪುತ್ರಿಯ ವಿವಾಹವನ್ನು ಚಾಲುಕ್ಯರಾಜ್ಯಕ್ಕೆ ಹತ್ತಿದ ಮಹಾಕಲಂಕವೆಂದು ತಿಳಿಯುತ್ತದೆ ವೈದಿಕ ಧರ್ಮ. ಈಗಲೂ ಸಮಯವಿದೆ, ಧರ್ಮವಿರುದ್ಧ ಈ ವಿವಾಹವನ್ನು ಶರಣರ ಒತ್ತಾಯದಿಂದ ನಡೆದುದೆಂದು ನಿರಾಕರಿಸಿ, ಮಗಳನ್ನು ಮನೆಗೆ ಕರೆಸಿಕೊಂಡು ಪ್ರಾಯಶ್ಚಿತ್ತ ಮಾಡಿ, ನೀವು ಪುನಃ ವೈದಿಕ ಧರ್ಮವನ್ನು ಪರಿಗ್ರಹಿಸಿದರೆ ಧರ್ಮಾಧಿಕರಣ ನಿಮ್ಮ ಅಪರಾಧವನ್ನು ಕ್ಷಮಿಸುವುದು," ಎಂದು ಹೇಳಿದನು.

ತನ್ನನ್ನು ಸಿಟ್ಟಿಗೆಬ್ಬಿಸುವುದು, ಇಲ್ಲವೆ ಆಸೆ ತೋರಿಸಿ ಧರ್ಮಭ್ರಷ್ಟನನ್ನಾಗಿ ಮಾಡುವುದು ಕ್ರಮಿತನ ಉದ್ದೇಶವೆಂದು ತಿಳಿದು ಮಧುವರಸನು ಇಮ್ಮಡಿ ವಿನಯದಿಂದ ಹೇಳಿದನು–

"ಈ ವಿಚಿತ್ರ ಸಲಹೆಯನ್ನು ನನ್ನ ಮುಂದಿಡುವುದರಲ್ಲಿ ಧರ್ಮಾಧಿಕರಣದ ಉದ್ದೇಶವೇನು ? ಆಸೆ ತೋರಿಸಿ ಧರ್ಮಭ್ರಷ್ಟನನ್ನಾಗಿ ಮಾಡಲು ಹವಣಿಸುತ್ತಿದೆಯೇ ನ್ಯಾಯಪೀಠ ? ಈ ಪ್ರಶ್ನೆಗಳಿಗೆ ಉತ್ತರ ಸ್ಪಷ್ಟವಾಗಿದ್ದರೂ ಕಂಠೋಕ್ತವಾಗಿ ಅದನ್ನು ಹೇಳಲು ನಾನು ಸಿದ್ಧನಾಗಿಲ್ಲ. ಮತಧರ್ಮ ವಿಶ್ವಾಸಗಳು ಆತ್ಮನಿಗೆ ಸಂಬಂಧಿಸಿದ ವಿಚಾರಗಳು; ಬೇಕಾದಾಗ ಧರಿಸಿ, ಬೇಡದಿದ್ದಾಗ ತೆಗೆದುಹಾಕುವ ಉಡಿಗೆ ತೊಡಿಗೆಗಳಲ್ಲ. ವರ್ಣಾಶ್ರಮ ಜಾತಿ ಪಂಥಗಳು ಸಮಾಜ ಘಾತಕವೆಂಬ ದೃಢ ಸಂಕಲ್ಪದಿಂದ ತಾನು ವೈದಿಕ ಧರ್ಮವನ್ನು ತ್ಯಜಿಸಿ, ಶರಣ ಧರ್ಮವನ್ನು ಪರಿಗ್ರಹಿಸಿದೆ. ಆತ್ಮೋದ್ಧಾರಕ್ಕಾಗಿ ಅನುಸರಿಸಿದ ಈ ಮಾರ್ಗ, ನನ್ನಲ್ಲಿ ಅತಿಶಯ ಪರಿವರ್ತನೆಯನ್ನುಂಟುಮಾಡಿದೆ. ಮನಃಶಾಂತಿ ಸದಾಚಾರಗಳನ್ನು ತಂದು ಕೊಟ್ಟಿದೆ. ಈಗ ನಾನದನ್ನು ಬಿಡುವುದು ಸಾಧ್ಯವೆ? ಕುಂಬಾರನ ಕೌಶಲದಿಂದ ಮಣ್ಣು ಮಡಕೆಯಾದ ಮೇಲೆ, ಕ್ರಿಯೆಯಳಿದು ಮರಳಿ ಮಣ್ಣಾಗುವುದೇ ? ನಕ್ಷತ್ರ ಯೋಗದಿಂದ ನೀರಹನಿ ಮುತ್ತಾದ ಬಳಿಕ ಕ್ರಿಯೆಯಳಿದು ಮರಳಿ ನೀರಾಗುವುದೇ?

ಪರುಷ ಮುಟ್ಟಿ ಕಬ್ಬಿಣ ಚಿನ್ನವಾದ ಮೇಲೆ ಕ್ರಿಯೆಯಳಿದು ಮರಳಿ ಕಬ್ಬಿಣವಾಗುವುದೇ? ಶ್ರದ್ಧಾಭಕ್ತಿಗಳಿಂದ ನಾನು ಸಂಗ್ರಹಿಸಿದ ಶರಣ ಧರ್ಮವನ್ನು ಸ್ವಾರ್ಥ ಸಾಧನೆಗಾಗಿ ವಿಕ್ರಯಿಸಲೆ? ಚಾಲುಕ್ಯ ಧರ್ಮಾಧಿಕರಣವನ್ನು ಅಲಂಕರಿಸಿದ ನ್ಯಾಯಮೂರ್ತಿಯೊಬ್ಬರು ಆತ್ಮನಾಶಕವಾದ ಈ ಅನೀತಿ ಅಧರ್ಮದ ಸಲಹೆಯನ್ನು ಭಯ ಸಂಕೋಚಗಳಿಲ್ಲದೆ ದಿಟ್ಟತನದಿಂದ ಸೂಚಿಸುವಷ್ಟು ಹಗುರವಾಯಿತೆ ಈ ಪ್ರಭುತ್ವ ?"

ಕ್ರಮಿತನು ಚಡಪಡಿಸಿ ಎದ್ದು, "ಮುಗಿಯಲಿ ! ಮುಗಿಯಲಿ ನಿಮ್ಮ ಅನರ್ಥ ಪ್ರತಿವಾದ ! ನೀವು ನ್ಯಾಯಪೀಠಕ್ಕೆ ಅಪಮಾನ ಮಾಡುತ್ತಿದ್ದೀರಿ !" ಎಂದು ಗಜರಿ ನುಡಿದು ಬೊಬ್ಬಿಟ್ಟನು.

ಮಧುವರಸನು ತನ್ನ ಪ್ರತಿವಾದ ಮುಗಿದಿಲ್ಲವೆಂದು ಸೂಚಿಸಲು ಕೈಯೆತ್ತಿದಾಗ ಶೃಂಖಲೆ ಘಣ ! ಘಣ ! ಶಬ್ದಮಾಡಿತು.

ಮಂಚಣನು ಗಂಭೀರ ಕಂಠದಿಂದ, "ದಯಮಾಡಿ ರಾಜಪುರೋಹಿತರು ಸುಮ್ಮನಿದ್ದರೆ ಒಳಿತು. ಆಪಾದಿತನ ಪ್ರತಿವಾದವನ್ನು ಪೂರ್ಣವಾಗಿ ಕೇಳುವುದು ನ್ಯಾಯಪೀಠದ ಹೊಣೆ," ಎಂದನು.

ಶಾಂತಿ ನೆಲೆಸಿದ ಮೇಲೆ ಮಧುವರಸನು ಮುಂದುವರಿದು ಹೇಳಿದನು:

"ಶರಣರ ಅಗ್ನಿಪರೀಕ್ಷೆ ಸಮೀಪಿಸುತ್ತಿದೆಯೆಂದು ನನಗೆ ತಿಳಿದಿದೆ. ಅದಕ್ಕಾಗಿ ಯಜ್ಞಶಾಲೆ ಸಿದ್ಧವಾಗುತ್ತಿದೆ. ಸಮಿಧೆಗಳನ್ನು ಸಂಗ್ರಹಿಸುತ್ತಿದ್ದಾರೆ. ಬಲಿಪೀಠ ರಚಿತವಾಗಿದೆ. ಅಭಿಚಾರದ ಮಂತ್ರಘೋಷ ಆರಂಭವಾಗಿ ಯಜ್ಞಕುಂಡದಲ್ಲಿ ಅಗ್ನಿ ಪ್ರಜ್ವಲಿಸುತ್ತಿದೆ. ಬಸವಣ್ಣನವರ ನಿರ್ವಾಸನ ಅದಕ್ಕೆ ಕೊಟ್ಟ ಆಜ್ಯಾಹುತಿ. ಈ ನರಮೇಧ ಮಹಾಯಜ್ಞದ ಮೊದಲ ಬಲಿಪಶು ನಾನೆಂಬುದು ಈಶ್ವರೇಚ್ಛೆಯಾದರೆ ಸಿದ್ಧನಾಗಿದ್ದೇನೆ.

"ನಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆ ಮಾರುವೋದೆನೆಂದರೆ,
ತನುವನಲ್ಲಾಡಿಸಿ ನೋಡುವೆ ನೀನು,
ಮನವನಲ್ಲಾಡಿಸಿ ನೋಡುವೆ ನೀನು,
ಧನವನಲ್ಲಾಡಿಸಿ ನೋಡುವೆ ನೀನು,
ಇದಕೆಲ್ಲ ಅಂಜದಿದ್ದರೆ ಭಕ್ತಿ ಕಂಪಿತ ನಮ್ಮ ಕೂಡಲ ಸಂಗಮದೇವ!"

–ಎಂದು ಹೇಳಿದ್ದಾರೆ ಬಸವಣ್ಣನವರು. ನಿಮ್ಮ ದಯಾಶೂನ್ಯವಾದ ದಬ್ಬಾಳಿಕೆಯಿಂದ ಭಕ್ತಿ ಪ್ರಧಾನವಾದ ಶೈವಧರ್ಮದಲ್ಲಿ ವೀರತ್ವವನ್ನು ಮೂಡಿಸಲು ಶರಣರು ಪಣ ತೊಡಬೇಕಾಗುವುದು. ನನ್ನ ಬಲಿದಾನ ಅದಕ್ಕೆ ಮಾರ್ಗ ದರ್ಶಕವಾಗಲಿ."

ವಾದ ಮುಗಿಸಿ ಮಧುವರಸನು ನ್ಯಾಯಪೀಠಕ್ಕೆ ಕೈಮುಗಿದಾಗ ನಾರಣ ಕ್ರಮಿತನು ಆಪಾದಿತನನ್ನು ಕರೆದುಕೊಂಡು ಹೋಗುವಂತೆ ಭಟರಿಗೆ ಸನ್ನೆಮಾಡಿದನು. ಕ್ಷಣಕಾಲ ಕುಳಿತು ಮಿಶ್ರಮಿಸಿಕೊಳ್ಳುವ ಅವಕಾಶವನ್ನೂ ಕೊಡದೆ ಭಟರು ಮಧುವರಸನನ್ನು ನ್ಯಾಯಾಲಯದಿಂದ ಸೆರೆಮನೆಗೆ ಕರೆದುಕೊಂಡು ಹೋದರು.

ಸಭ್ಯವರ್ತನೆಯ ಈ ಅಪಚಾರವನ್ನು ಮೌನವಾಗಿ ಕುಳಿತು ನೋಡುತ್ತಿದ್ದ ಮಂಚಣನು, "ನೀವು ಕೊನೆಯಲ್ಲಿ ಮಧುವರಸನಿಗೆ ಕೊಟ್ಟ ಸೂಚನೆ ಧರ್ಮಸಮ್ಮತವಲ್ಲ, ನಾರಣಕ್ರಮಿತರೆ. ಆಪಾದಿತರೆದುರಿಗೆ ಅದನ್ನು ವಿರೋಧಿಸುವುದರಿಂದ ನಿಮಗೆ ಮುಖಭಂಗವಾಗುವುದೆಂದು ಸುಮ್ಮನಿದ್ದೆ", ಎಂದು ಅಸಮಾಧಾನದಿಂದ ನುಡಿದನು.

"ನೀವು ಮಧುವರಸನಿಗೆ ಸಹಾಪಾದಿತರ ಹೆಸರನ್ನು ಹೇಳಿದ್ದು ಕೂಡ ಸರಿಯಲ್ಲ. ಈ ವ್ಯವಹಾರದಲ್ಲಿ ನ್ಯಾಯಪೀಠ ಸರ್ವಾಧಿಕಾರಿಗಳ ಆಜ್ಞೆಯಂತೆ ಮೊದಲೇ ಗೊತ್ತಾದ ಮಾರ್ಗದಲ್ಲಿ ನಡೆಯಬೇಕಾಗಿದೆ. ನೀವು ಅವಿವೇಕದಿಂದ ಹೆಜ್ಜೆ ಹೆಜ್ಜೆಗೆ ಅದಕ್ಕೆ ಅಡ್ಡಿವಬಾರದಿದ್ದರೆ ಒಳ್ಳೆಯದು. ಕ್ರಮಿತನು ತುಸು ಒರಟಾಗಿಯೇ ಉತ್ತರ ಕೊಟ್ಟನು.

"ತನ್ನ ಸಂಗಡ ವಿಚಾರಣಾಧೀನರಾದವರ ಹೆಸರುಗಳನ್ನು ತಿಳಿಯುವುದು ಆಪಾದಿತನ ಹಕ್ಕು, ಅದನ್ನು ನಿರಾಕರಿಸುವುದು ನ್ಯಾಯಪೀಠಕ್ಕೆ ಉಚಿತವೆನಿಸದು."

"ನಾನು ನ್ಯಾಯಪೀಠದ ಅಧ್ಯಕ್ಷ, ಧರ್ಮಾಧಿಕರಣದ ಶ್ರೇಷ್ಠ ನ್ಯಾಯಮೂರ್ತಿ. ಯಾವುದು ಉಚಿತ, ಯಾವುದು ಅನುಚಿತ ಎಂಬುದನ್ನು ನಿರ್ಧರಿಸುವುದು ಸಂಪೂರ್ಣವಾಗಿ ನನ್ನ ಹೊಣೆ. ಆ ಕಾರ್ಯದಲ್ಲಿ ನಾನು ಯಾರ ಸಹಾಯವನ್ನೂ ಅಪೇಕ್ಷಿಸುವುದಿಲ್ಲ."

"ನ್ಯಾಯಪೀಠದ ನಿಮ್ಮ ಸಹೋದ್ಯೋಗಿಗಳ ಸಹಾಯವನ್ನೂ ಅಪೇಕ್ಷಿಸುವುದಿಲ್ಲವೆ?"

"ಅಪೇಕ್ಷಿಸುವುದಿಲ್ಲ. ಇದು ನಿಮಗಿಷ್ಟವಿಲ್ಲದೆ ಹೋದರೆ ನ್ಯಾಯಪೀಠದಿಂದ ವಿರಮಿಸಬಹುದು."

ಕೂಡಲೆ ಆಸನದಿಂದೆದ್ದು ನ್ಯಾಯಪೀಠದಲ್ಲಿ ತನ್ನ ಸ್ಥಾನದಿಂದ ನಿವೃತ್ತನಾಗುವುದು ಮಂಚಣನ ಮೊದಲ ಪ್ರತಿಕ್ರಿಯೆಯಾಗಿತ್ತು. ಆದರೆ ಹಾಗೆ ಮಾಡುವುದರಿಂದ ಮಧುವರಸ ಹರಳಯ್ಯಗಳಿಗೆ ತನ್ನಿಂದ ಆಗಬಹುದಾದ ಅಲ್ಪ ಸಹಾಯವೂ ತಪ್ಪಿದಂತಾಗುವುದೆಂದು ಭಾವಿಸಿ ಅವನು ವಂಚನೆಯ ಮಿದುನಗೆ ಬೀರಿ, "ರಾಜಪುರೋಹಿತರು ಮೂಗಿನ ಮೇಲೆ ಕೋಪದ ಉಪನೇತ್ರ

ಧರಿಸಿರುವರೆಂಬುದನ್ನು ನಾನು ಬಲ್ಲೆ. ನ್ಯಾಯಪೀಠದಲ್ಲಿ ಇರುವಷ್ಟು ಹೊತ್ತಾದರೂ ಅದನ್ನು ದಯಮಾಡಿ ತೆಗೆದಿಟ್ಟರೆ ಒಳ್ಳೆಯದು" ಎಂದು ನಗೆಯಾಡಿದನು.

ಕ್ರಮಿತನು ದರ್ಪದಿಂದ ತಲೆಯಾಡಿಸಿ ಹರಳಯ್ಯನನ್ನು ಕರೆತರುವಂತೆ ಭಟರಿಗೆ ಆಜ್ಞೆ ಮಾಡಿದನು.

ಹರಳಯ್ಯನ ಬಂಧನ ಕ್ರಮಿತನು ನಿರೀಕ್ಷಿಸಿದ್ದಷ್ಟು ಸುಲಭವಾಗಿ ನಡೆದಿರಲಿಲ್ಲ. ಎಲ್ಲ ಕಾಲಗಳ, ಎಲ್ಲ ದೇಶಗಳ, ರಾಜಕರ್ಮಚಾರಿಗಳಂತೆ ಕ್ರಮಿತನ ಭಟರು ದುಡುಕು ದರ್ಪ ದುರಾಗ್ರಹಗಳಿಂದ ಕರ್ಮಾಗಾರವನ್ನು ಪ್ರವೇಶಿಸಿ, ಗದ್ದಿಗೆಯ ಮೇಲೆ ಕುಳಿತಿದ್ದ ವೃದ್ಧ ಹರಳಯ್ಯನನ್ನು ಹಿಡಿದೆಳೆದು ಹೆಡೆಮುರಿಕಟ್ಟಲು ತೊಡಗಿದಾಗ ಕೆಲಸಗಾರರು ಕೆರಳಿ, ಚೂರಿ ಕೊಡತಿ ಸುತ್ತಿಗೆ ಮೊದಲಾದ ಉಪಕರಣಗಳನ್ನು ಹಿಡಿದು ಭಟರ ಮೇಲೆ ಬಿದ್ದರು.

ಹೊಡೆದಾಟ ಮೊದಲಾಗುವಷ್ಟರಲ್ಲಿ ಹೊರಗೆ ಹೋಗಿದ್ದ ಶೀಲವಂತ ಅಲ್ಲಿಗೆ ಬಂದು, ಕೆಲಸಗಾರರಿಗೆ ಅವರವರ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳುವಂತೆ ಆಜ್ಞೆ ಮಾಡಿ, "ನನ್ನ ತಂದೆಯವರನ್ನು ಬಂಧಿಸಿದ ಕಾರಣವೇನು?" ಎಂದು ಭಟರ ಸಂಗಡಿದ್ದ ಕರ್ಮಚಾರಿಯನ್ನು ಕೇಳಿದನು.

"ಧರ್ಮಾಧಿಕರಣದ ಆಜ್ಞೆಯಂತೆ ಬಂಧಿಸುತ್ತೇವೆ," ಎಂದು ಕರ್ಮಚಾರಿ ಕ್ರಮಿತನ ನಿರೂಪವನ್ನು ತೋರಿಸಿದನು.

ಕೆಲಸಗಾರರ ದುಡಿಕಿಗಾಗಿ ಶೀಲವಂತ ಕರ್ಮಚಾರಿಯ ಕ್ಷಮೆ ಕೇಳ ಬೇಕಾಯಿತು. ವಿಷಯವೇನೆಂಬುದನ್ನು ತಿಳಿದಾಗ ಹರಳಯ್ಯ, "ಇದು ರಾಜ ನಿರೂಪವಲ್ಲ ಶೀಲವಂತ, ಶಿವನ ಕರೆ. ನಾನು ಇದಕ್ಕಾಗಿ ಇಷ್ಟು ದಿನದಿಂದ ಕಾಯುತ್ತಿದ್ದೆ," ಎಂದು ಹೇಳಿ ಆಜ್ಞಾಪತ್ರವನ್ನು ತಲೆಗೊತ್ತಿಕೊಂಡು ಕರ್ಮಚಾರಿಗೆ ಹಿಂದಿರುಗಿ ಕೊಟ್ಟನು.

ಕೀಳುಜಾತಿಯವನೆಂದು ಪರಿಗಣಿಸಲ್ಪಟ್ಟಿದ್ದವನ ಸಜ್ಜನಿಕೆಯನ್ನು ಕಂಡು ಕರ್ಮಚಾರಿಯ ಮನಸ್ಸು ಮಿಡಿಯಿತು. "ನಾನು ಆಜ್ಞೆಯಂತೆ ನಡೆಯಬೇಕಾಗಿದೆ. ನಿಮಗೆ ತೊಂದರೆಯಾದದ್ದಕ್ಕೆ ಕ್ಷಮಿಸಿ," ಎಂದು ಹೇಳಿ ಭಟರಿಗೆ ಸರಿದು ನಿಲ್ಲುವಂತೆ ಸನ್ನೆಮಾಡಿದನು.

ಹೆಡೆಮುರಿಕಟ್ಟಿ ಬೀದಿಯಲ್ಲಿ ನಡೆಸಿಕೊಂಡು ಬರಬೇಕೆಂದು ಧರ್ಮಾಧಿ ಕರಣದ ಕಾರ್ಯಕರ್ತನು ಹೇಳಿದ್ದುದನ್ನು ಕರ್ಮಚಾರಿ ಮರೆತನು. ನಗರದಿಂದ ಗಾಡಿಯೊಂದನ್ನು ತರಿಸಿ ಅದರಲ್ಲಿ ಹರಳಯ್ಯನನ್ನು ಸೆರೆಮನೆಗೆ ಕರೆದುಕೊಂಡು ಹೋದನು. ನಡೆಯಲಾರದ ವೃದ್ಧನೆಂಬ ಕಾರಣದಿಂದ ಹರಳಯ್ಯನಿಗೆ ಕೈಕೋಳಗಳನ್ನು ಮಾತ್ರ ತೊಡಿಸುವಂತೆ ಸೆರೆಮನೆಯ ಅಧಿಕಾರಿ ಆಜ್ಞೆಮಾಡಿದನು.

ಮಧುವರಸ ಹರಳಯ್ಯಗಳ ಬಂಧನದ ಸುದ್ದಿ ಏಕಕಾಲದಲ್ಲಿ ಮಹಮನೆಗೆ ತಲುಪಿತು. ಚೆನ್ನಬಸವಣ್ಣನವರು ಸುದ್ದಿ ಕೊಡಲು ಬಂದ ಶೀಲವಂತ ಲಾವಣ್ಯ ವತಿಯರಿಗೆ ಸಮಾಧಾನ ಹೇಳಿ, "ಬಿಜ್ಜಳರಾಯರು ಇನ್ನೆರಡು ದಿನಗಳಲ್ಲಿ ಕಲ್ಯಾಣಕ್ಕೆ ಹಿಂದಿರುಗುತ್ತಾರೆ. ನೀವು ಅಪೇಕ್ಷಿಸಿದರೆ ಅವರಿಗೆ ಕ್ಷಮಾಯಾಚನೆಯ ಮನವಿ ಸಲ್ಲಿಸಬಹುದು. ಆದರೆ ಅದಕ್ಕಿಂತ ಧರ್ಮಾಧಿಕರಣದ ವಿಚಾರಣೆ ಯಾವ ಮಾರ್ಗ ಹಿಡಿಯುವುದೆಂಬುದನ್ನು ಕಾದು ನೋಡಿದರೆ ಒಳ್ಳೆಯದು," ಎಂದು ಹೇಳಿದರು.

ಸಂಗಡಿದ್ದ ಮಾಚಿದೇವರು, "ಚೆನ್ನಬಸವಣ್ಣನವರು ಸೂಚಿಸಿದ ಎರಡನೆಯ ಮಾರ್ಗ ಶರಣರಿಗೆ ಉಚಿತವಾದದ್ದು. ಜಿಜ್ಜಳರಾಯರಿಗೆ ಮನವಿ ಸಲ್ಲಿಸುವುದರಿಂದ ನಮ್ಮ ದೌರ್ಬಲ್ಯವನ್ನು ತೋರಿಸಿಕೊಂಡಂತಾಗುವುದು," ಎಂದರು.

ಈ ವಿಚಾರದ ಪರ್ಯಾಲೋಚನೆಗಾಗಿ ಮರುದಿನ ಶರಣರ ಸಭೆ ಕರೆಯ ತಕ್ಕದ್ದೆಂದೂ, ಅಷ್ಟರಲ್ಲಿ ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳನ್ನೂ ತಿಳಿಯಲು ಚೆನ್ನಬಸವಣ್ಣನವರು ಪ್ರಯತ್ನಿಸಬೇಕೆಂದೂ ಗೊತ್ತಾಯಿತು.

ಚೆನ್ನಬಸವಣ್ಣನವರು ಪಡಿಹಾರಿ ಉತ್ತಣ್ಣನನ್ನು ಕರೆದು, ಮಧುವರಸ ಹರಳಯ್ಯಗಳಿಗಾಗಿ ಪ್ರತಿದಿನ ಮಹಮನೆಯಿಂದ ಎಡೆಮಾಡಿ ಕಳುಹಿಸುವಂತೆ ಹೇಳಿದರು. ಅದರಂತೆ ತಮ್ಮಡಿಯೊಬ್ಬನು ಒಬ್ಬನಿಗೆ ಒಂದು ಹೊತ್ತಿಗೆ ಬೇಕಾಗುವಷ್ಟು ತಿಂಡಿಯ ಪೊಟ್ಟಣಗಳನ್ನು ತೆಗೆದುಕೊಂಡು ಹೋದಾಗ ಸೆರೆಮನೆಯ ಕಾವಲು ಭಟರು ತಡೆಯಲಿಲ್ಲ. ಸೆರೆಯಾಳುಗಳಿಗಾಗಿ ಊಟದ ಪೊಟ್ಟಣಗಳನ್ನು ಕಳುಹಿಸುವ ಮಹಮನೆಯ ಪರಿಪಾಟಿ ಅವರಿಗೆ ತಿಳಿದಿತ್ತು.

ಇಂತಹ ಪೊಟ್ಟಣವೊಂದನ್ನು ತಿಂದು ಹರಳಯ್ಯ ವಿಶ್ರಮಿಸಿಕೊಳ್ಳುತ್ತಿದ್ದಂತೆ ಭಟರು ಅವನನ್ನು ನ್ಯಾಯಾಲಯಕ್ಕೆ ಕರೆತಂದರು. ಹರಳಯ್ಯ ನ್ಯಾಯಪೀಠಕ್ಕೆ ವಂದಿಸಿ ತಲೆಬಾಗಿ ನಿಂತನು. ಮಧುವರಸನಿಗಾಗಿ ತಂದಿದ್ದ ಅಸನವನ್ನು ತೋರಿಸಿ ಮಂಚಣ ಕುಳಿತುಕೊಳ್ಳುವಂತೆ ಹೇಳಿದಾಗಲೂ ಹರಳಯ್ಯ ಕುಳಿತುಕೊಳ್ಳಲಿಲ್ಲ . ಪುನಃ ನ್ಯಾಯಪೀಠಕ್ಕೆ ವಂದಿಸಿ, "ಒಡೆಯರ ಮುಂದೆ ನಾನು ಕುಳಿತುಕೊಳ್ಳುವುದು ಸಲ್ಲ. ನಿಂತಿರಲು ಅನುಮತಿ ಬೇಡುತ್ತೇನೆ," ಎಂದು ಬಿನ್ನವಿಸಿಕೊಂಡನು.

ನ್ಯಾಯಪೀಠದ ಕರಣಿಕ ಆಪಾದನೆಯ ಆಜ್ಞೆಯನ್ನು ಪಠಿಸಿದ ಮೇಲೆ ಕ್ರಮಿತನು ಬಿರುಗಣ್ಣುಗಳಿಂದ ಹರಳಯ್ಯನನ್ನು ನೋಡುತ್ತ, "ಇದಕ್ಕೆ ನಿನ್ನ ಉತ್ತರವೇನು?" ಎಂದು ಗದರಿಸಿ ಕೇಳಿದನು.

ಹರಳಯ್ಯ ಕೆಲವು ಕ್ಷಣಗಳು ಬೆಚ್ಚಿದವನಂತೆ ಸುಮ್ಮನಿದ್ದು ಬಳಿಕ

ಸಂಕೋಚದಿಂದ, "ಉತ್ತರವೇನೂ ಇಲ್ಲ," ಎಂದನು.

"ಹಾಗಾದರೆ ಅಪರಾಧ ಒಪ್ಪಿಕೊಳ್ಳುವೆಯ ?"

"ಯಾವ ಅಪರಾಧವನ್ನು ?"

"ಮಧುವರಸರ ಮಗಳೊಡನೆ ನಿನ್ನ ಮಗನ ಮದುವೆ ನಡೆದುದನ್ನು."

"ಮಧುವರಸರ ಇಚ್ಛೆಯಂತೆ ಮದುವೆ ನಡೆಯಿತು. ಅಪರಾಧವಾಗಿದ್ದರೆ ಶರಣರು ಅದಕ್ಕೆ ಒಪ್ಪಿಗೆ ಕೊಡುತ್ತಿದ್ದರೆ?"

"ನಾನು ನಿನ್ನ ಉತ್ತರ ಕೇಳಬೇಕಾಗಿದೆ. ಪ್ರಶ್ನೆ ಬೇಕಾಗಿಲ್ಲ." –ಕ್ರಮಿತನು ಕೋಪದಿಂದ ಹೇಳಿದನು.

ಆಗ ಮಂಚಣನು ಮಧ್ಯೆ ಬಂದು, "ನೀವು ಆಪಾದಿತನನ್ನು ಬೆದರಿಸುತ್ತಿದ್ದೀರಿ, ನಾರಣಕ್ರಮಿತರೆ. ಈ ವಿಧಾನದಿಂದ ನಾವು ಏನನ್ನೂ ತಿಳಿಯಲಾಗುವುದಿಲ್ಲ," ಎಂದನು.

"ನನ್ನ ಪ್ರಶ್ನೆಗಳು ಸ್ಪಷ್ಟವಾಗಿವೆ. ಅದಕ್ಕೆ ನೇರವಾದ ಉತ್ತರ ಕೊಡದೆ ಆಪಾದಿತನು ಏನೇನೋ ಒದರುತ್ತಿದ್ದಾನೆ," ಎಂದು ಕ್ರಮಿತನು ಪುನಃ ಆಕ್ಷೇಪಿಸಿದನು.

"ಹರಳಯ್ಯ ನಿಮ್ಮಂತೆ ಪ್ರಬುದ್ಧರಲ್ಲ, ಹಳೆಯ ಕಾಲದವರು. ನಾನು ಅವರನ್ನು ಪ್ರಶ್ನಿಸುತ್ತೇನೆ. ಆಗ ಸರಿಯಾದ ಉತ್ತರ ಬರುವುದೇನೋ ನೋಡೋಣ,"

–ಎಂದು ಮಂಚಣ ಸಲಹೆ ಮಾಡಿದನು. ಕ್ರಮಿತನು ಒಪ್ಪಿದ ಮೇಲೆ ಮಂಚಣ ಹರಳಯ್ಯಗಳ ನಡುವೆ ಪ್ರಶ್ನೋತ್ತರಗಳು ನಡೆದವು.

ಮಂಚಣ– "ಮಧುವರಸರ ಮಗಳೊಡನೆ ನಿಮ್ಮ ಮಗನ ವಿವಾಹ ನಡೆಯಿತೆಂಬುದನ್ನು ನೀವು ಒಪ್ಪುತ್ತೀರಾ?"

"ಆ ಮದುವೆಯಿಂದ ನೀವು ವರ್ಣಸಂಕರ ಮಾಡಿರುವಿರೆಂದು ನ್ಯಾಯಪೀಠದ ಆಪಾದನೆ? ಅದಕ್ಕೆ ನಿಮ್ಮ ಉತ್ತರವೇನು?"

"ನನ್ನಿಂದ ಯಾವ ಅಪರಾಧವೂ ನಡೆದಿಲ್ಲ."

"ಕೀಳು ಜಾತಿಯ ವರನು ಉತ್ತಮ ವರ್ಣದ ಹೆಣ್ಣನ್ನು ಮದುವೆಯಾಗುವುದು ವರ್ಣಸಂಕರವೆಂದು ಧರ್ಮಶಾಸ್ತ್ರಗಳು ಹೇಳುತ್ತವೆ. ಅದರಂತೆ ನೀವು ಅಪರಾಧ ಮಾಡಿರುವಿರೆಂದು ನ್ಯಾಯಪೀಠದ ಆಪಾದನೆ."

"ಶರಣಧರ್ಮದಲ್ಲಿ ಮೇಲು ಕೀಳು ಭಾವನೆಯಿಲ್ಲವೆಂದು ಬಸವಣ್ಣನವರು ಹೇಳುತ್ತಾರೆ. ನಾನದನ್ನು ನಂಬಿದ್ದೇನೆ. ಶರಣರ ಅನುಮತಿ ಪಡೆದು ಶರಣಧರ್ಮಾನುಸಾರ ನನ್ನ ಮಗನ ಮದುವೆ ನಡೆಯಿತು. ಅದು ವರ್ಣಸಂಕರವಲ್ಲ. ನನ್ನಿಂದ ಅಂತಹ ಅಪರಾಧ ನಡೆದಿಲ್ಲ."

ವರ್ಣಸಂಕರದ ಅಪರಾಧವನ್ನು ಸ್ಪಷ್ಟವಾಗಿ ನಿರಾಕರಿಸುವ ಹರಳಯ್ಯನ ಹೇಳಿಕೆಯಿಂದ ಮಂಚಣನಿಗೆ ಸಮಾಧಾನವಾಯಿತು. ವಿಚಾರಣೆಯನ್ನು ಮಂಚಣನಿಗೆ ಬಿಡುವುದರಿಂದ ತನ್ನ ಉದ್ದೇಶ ಭಂಗವಾಗುವುದೆಂದು ತಿಳಿದು ಕ್ರಮಿತನು ಪುನಃ ಮಧ್ಯೆ ಬಂದು,

"ನನ್ನ ಪ್ರಶ್ನೆಯೊಂದಕ್ಕೆ ನೀವು 'ವಧೂವರರ ಇಚ್ಛೆಯಂತೆ ಮದುವೆ ನಡೆಯಿತು,' ಎಂದು ಹೇಳಿದಿರಿ. ಅದರ ಅರ್ಥವೇನು?" –ಎಂದು ಪ್ರಶ್ನಿಸಿದನು. ಈ ಸಾರಿ ಅವನ ಕಂಠ ಹೆಚ್ಚು ಮೃದುವೂ ಸಹಜವೂ ಆಗಿತ್ತು.

"ಹೆಣ್ಣು ಗಂಡು ಒಪ್ಪಿದ್ದರಿಂದ ಮದುವೆ ನಡೆಯಿತು. ಈ ವಿಚಾರದಲ್ಲಿ ನಾನಾಗಲಿ ಮಧುವರಸರಾಗಲಿ ಏನೂ ಮಾಡುವಂತಿರಲಿಲ್ಲ." –ಎಂದು ಹರಳಯ್ಯ ಉತ್ತರ ಕೊಟ್ಟಾಗ, ವಿಚಾರಣೆ ಹೊಸ ಜಾಡು ಹಿಡಿಯುತ್ತಿದೆಯೆಂದು ತಿಳಿದು ಕ್ರಮಿತನು ಉತ್ತೇಜಿತನಾದನು. ಚತುರತೆಯಿಂದ ಪ್ರಶ್ನೆಗಳನ್ನು ಕೇಳಿ, ಶೀಲವಂತ ಆರೋಗ್ಯಧಾಮದಲ್ಲಿ ಹಾವು ಕಚ್ಚಿ ಚಿಕಿತ್ಸೆ ಪಡೆಯುತ್ತಿದ್ದಾಗ ಲಾವಣ್ಯವತಿ ಹಣ್ಣು ಉಪಾಹಾರಗಳನ್ನು ತಂದುಕೊಡುತ್ತಿದ್ದದ್ದು, ಕೆಲವು ದಿನಗಳ ಮೇಲೆ ಮಧುವರಸನು ತಾನಾಗಿ ಮದುವೆಯ ಪ್ರಸ್ತಾಪ ಮಾಡಿದ್ದು, ಮೊದಲು ಹರಳಯ್ಯ ಸಲಹೆಯನ್ನು ನಿರಾಕರಿಸಿದ್ದು, ಶೀಲವಂತ ಲಾವಣ್ಯವತಿಯರು ಪರಸ್ಪರ ಪ್ರೀತಿಸುವರೆಂದು ತಿಳಿದ ಮೇಲೆ ಶರಣರ ಒತ್ತಾಯದಿಂದ ಮದುವೆಗೆ ಒಪ್ಪಿಗೆ ಕೊಟ್ಟಿದ್ದು, ಇತ್ಯಾದಿ ವಿಚಾರಗಳನ್ನು ಹರಳಯ್ಯನಿಂದಲೇ ಹೇಳಿಸಿದನು.

ಅನಂತರ ಹರಳಯ್ಯನ ನೈಷ್ಠಿಕ ಜೀವನದ ಬಗೆಗೆ ಪ್ರಶ್ನೋತ್ತರಗಳು ನಡೆದವು. ಪ್ರತಿದಿನ ಪ್ರಾತಃಕಾಲ ಅವನು ಸ್ನಾನ ಪೂಜೆಗಳನ್ನು ಮುಗಿಸಿಕೊಂಡು ಕರ್ಮಗಾರಕ್ಕೆ ಬರುತ್ತಿದ್ದದ್ದು, ಕೆಲಸಗಾರರ ವೇತನ ಮತ್ತು ಲಾಭಾಂಶವನ್ನು ಹಂಚುವುದರಲ್ಲಿ ಅನುಸರಿಸುತ್ತಿದ್ದ ನೀತಿ, ಸಂಜೆ ಮನೆಗೆ ಹಿಂದಿರುಗಿದ ಮೇಲೆ ಪುನಃ ಸ್ನಾನ, ಪೂಜೆ, ಮಧ್ಯರಾತ್ರಿಯವರೆಗೆ ಷಡಕ್ಷರ ಮಂತ್ರ ಜಪ ಮಾಡುತ್ತ ಧ್ಯಾನದಲ್ಲಿ ಕುಳಿತುಕೊಳ್ಳುತ್ತಿದ್ದದ್ದು ಮುಂತಾದ ವಿಚಾರಗಳನ್ನು ಹರಳಯ್ಯನೇ ವಿವರಿಸಿದನು.

"ಈ ನೈಷ್ಠಿಕ ಅಭ್ಯಾಸಗಳನ್ನು ನಿಮಗೆ ಹೇಳಿಕೊಟ್ಟವರಾರು ?" –ಕೊನೆಯಲ್ಲಿ ಕ್ರಮಿತನು ಪ್ರಶ್ನಿಸಿದನು.

"ನನಗೆ ಶರಣ ದೀಕ್ಷೆ ಕೊಟ್ಟ ಜಂಗಮ ಗುರು," –ಎಂದನು ಹರಳಯ್ಯ.

"ಅವರ ಹೆಸರೇನು?"

"ತಿಳಿಯದು. ಆರೇಳು ವರ್ಷಗಳ ಹಿಂದೆ ಅವರು ಕಲ್ಯಾಣಕ್ಕೆ ಬಂದು

ಕೆಲವು ದಿನಗಳಿದ್ದು ಹೊರಟುಹೋದರು."

"ಜಪತಪಗಳನ್ನು ಉತ್ತಮ ವರ್ಣದವರು ಮಾತ್ರವೇ ಆಚರಿಸತಕ್ಕದ್ದೆಂದು ನಿಮಗೆ ತಿಳಿಯದೆ?"

"ತಿಳಿಯದು."

"ಷಡಕ್ಷರ ಮಂತ್ರವನ್ನು ನೀವು ಉಚ್ಚರಿಸಬಾರದೆಂದು ಯಾರೂ ಎಚ್ಚರಿಕೆ ಕೊಡಲಿಲ್ಲವೆ?"

"ನಮ್ಮ ಗುರುಗಳು ಹಾಗೆ ಹೇಳಲಿಲ್ಲ"

"ಕೀಳು ಜಾತಿಯವನಾದ ನೀನು ವೈದಿಕ ಧರ್ಮದ ಸದಾಚಾರಗಳನ್ನು ಆಚರಿಸುವುದು ಅಪರಾಧ."

"ಅಪರಾಧವೆಂದು ನನಗೆ ತಿಳಿಯದು."

"ನೀನು ನಿನ್ನ ವರ್ತನೆಯಿಂದ ವೈದಿಕ ಧರ್ಮವನ್ನು ಅಪಹಾಸ್ಯ ಮಾಡುತ್ತಿರುವೆ. ಮಗನಿಗೆ ಉತ್ತಮ ವರ್ಣದ ಹೆಣ್ಣನ್ನು ತಂದು ಮದುವೆ ಮಾಡಿ ವರ್ಣಸಂಕರ ಮಾಡಿರುವೆ. ನಿನ್ನ ಈ ಎರಡು ಅಪರಾಧಗಳಿಗೆ ಮರಣದಂಡನೆ ವಿಧಿಸಬೇಕೆಂದು ಧರ್ಮಶಾಸ್ತ್ರಗಳು ಹೇಳುತ್ತವೆ." –ಕ್ರಮಿತನು ಹಠಾತ್ತನೆ ದನಿಯೆತ್ತಿ ದರ್ಪದಿಂದ ನುಡಿದನು.

ಹರಳಯ್ಯ ಹೆದರಲಿಲ್ಲ. ನ್ಯಾಯಪೀಠಕ್ಕೆ ವಂದಿಸಿ ವಿನಯದಿಂದ ಕೂಡಿದ ಗಂಭೀರ ಕಂಠದಿಂದ, "ರಾಜಾಜ್ಞೆಯನ್ನು ನೋಡಿದಾಗಲೆ ಶಿವನ ಕರೆ ಬಂದಿತೆಂದು ತಿಳಿದೆ, ಒಡೆಯರೆ. ಹಣ್ಣಾದ ಎಲೆ ತಾನಾಗಿ ಉದಿರಿದರೇನು ? ಪರರು ಕಿತ್ತರೇನು? ಎರಡೂ ಸಮಾನ," –ಎಂದು ಹೇಳಿ ಕೈಕಟ್ಟಿ ನಿಂತನು.

ಕ್ರಮಿತನು ಚಡಪಡಿಸಿ ಆಪಾದಿತನನ್ನು ಹೊರಗೆ ಕರೆದುಕೊಂಡು ಹೋಗುವಂತೆ ಆಜ್ಞೆ ಮಾಡಿದನು. ಭಟರು ಹೋದಮೇಲೆ ಅವನು ಸಹನ್ಯಾಯಾಧೀಶರ ಕಡೆ ತಿರುಗಿ, "ನಾಳೆ ಶೀಲವಂತ ಲಾವಣ್ಯವತಿಯರ ಸಾಕ್ಷ್ಯ ತೆಗೆದುಕೊಳ್ಳಬೇಕಾಗಿದೆ. ಮಧ್ಯಾಹ್ನಕ್ಕೆ ವಿಚಾರಣೆ ಪ್ರಾರಂಭ ಮಾಡಿದರೆ ಒಳ್ಳೆಯದು," ಎಂದನು.

"ವರ್ಣಸಂಕರ ನಡೆದಿದೆಯೇ ಇಲ್ಲವೇ ಎಂಬುದು ಈಗ ನ್ಯಾಯಪೀಠದ ಮುಂದಿರುವ ಪ್ರಶ್ನೆ. ಅದಕ್ಕಾಗಿ ಧರ್ಮಶಾಸ್ತ್ರ ತಜ್ಞರ, ಮಠಾಧಿಪತಿಗಳ ಸಾಕ್ಷ್ಯ ತೆಗೆದುಕೊಂಡರೆ ಸಹಾಯಕವಾಗುವುದು," –ಎಂದು ಮಂಚಣನು ತನ್ನ ಅಭಿಪ್ರಾಯ ತಿಳಿಸಿದನು.

"ವರ್ಣಸಂಕರ ನಡೆದಿದೆಯೆಂಬುದು ನ್ಯಾಯಪೀಠಕ್ಕೆ ನಿರ್ಧಾರವಾಗಿದೆ.

ಸರ್ವಾಧಿಕಾರಿಗಳು ತಮ್ಮ ಆಜ್ಞಾಪತ್ರದಲ್ಲಿ ಅದನ್ನು ಸ್ಪಷ್ಟಪಡಿಸಿದ್ದಾರೆ. ಈಗ ನಾವು, ನಡೆದಿರುವ ಅಪರಾಧದ ವ್ಯಾಪ್ತಿ ಮತ್ತು ಅದರ ರಹಸ್ಯೋದ್ದೇಶಗಳನ್ನು ಕುರಿತು ವಿಚಾರಣೆ ನಡೆಸಬೇಕಾಗಿದೆ. ಈ ದೃಷ್ಟಿಯಿಂದ ನಾನು ಮಂಚಣ ನಾಯಕರ ಸಲಹೆಯನ್ನು ವಿರೋಧಿಸುತ್ತೇನೆ,"

–ಎಂದು ರುದ್ರಭಟ್ಟನು ಹೇಳಿದಾಗ, ನ್ಯಾಯಪೀಠದಲ್ಲಿ ತಾನು ಒಂಟಿಗನೆಂದು ಮಂಚಣನು ತಿಳಿದನು. ಆದರೂ ಹೋರಾಟವಿಲ್ಲದೆ ಕ್ರಮಿತನಿಗೆ ಮಣಿಯುವುದು ಅವನಿಗೆ ಇಷ್ಟವಿರಲಿಲ್ಲ.

"ಶೀಲವಂತನ ಸಾಕ್ಷ್ಯ ತೆಗೆದುಕೊಳ್ಳಲು ನನ್ನ ಅಡ್ಡಿಯಿಲ್ಲ. ಆದರೆ ಲಾವಣ್ಯವತಿ ಅರಿಯದ ಹೆಣ್ಣು. ಸಾಕ್ಷ್ಯ ತೆಗೆದುಕೊಳ್ಳುವ ನೆವದಿಂದ ಅವಳನ್ನು ನ್ಯಾಯಾಸ್ಥಾನದ ಮುಂದೆ ನಿಲ್ಲಿಸುವುದು ಉಚಿತವೆನಿಸದು," –ಎಂದು ಅವನು ಪುನಃ ಆಕ್ಷೇಪಿಸಿದನು.

"ಮದುವೆಗೆ ಸಂಬಂಧಿಸಿದ ಕೆಲವು ವಿವರಗಳನ್ನು ತಿಳಿಯಲು ಲಾವಣ್ಯವತಿಯ ಸಾಕ್ಷ್ಯ ಅಗತ್ಯ, ಹೆಂಗಸೆಂಬ ಕಾರಣದಿಂದ ನಾವು ಮಾಡಬೇಕಾದ್ದನ್ನು ಮಾಡದೆ ಹೋದರೆ ಸರ್ವಾಧಿಕಾರಿಗಳ ಕೋಪಕ್ಕೆ ಪಾತ್ರರಾಗುವೆವು. ನ್ಯಾಯಪೀಠದ ಅಧ್ಯಕ್ಷನಾಗಿ ನಾನು ಈ ಎಚ್ಚರಿಕೆ ಕೊಡುತ್ತಿದ್ದೇನೆ." –ತಿರಸ್ಕಾರದ ಬಿರುದನಿಯಿಂದ ಕ್ರಮಿತನು ನುಡಿದನು. ಬೇರೆ ಮಾರ್ಗವಿಲ್ಲದೆ ಮಂಚಣನು ಸಲಹೆಗೆ ಒಪ್ಪಬೇಕಾಯಿತು.

ರಾಜಪುರೋಹಿತ ನಾರಣಕ್ರಮಿತನು ಬಿಜ್ಜಳನ ಧರ್ಮಾಧಿಕರಣದ ಶ್ರೇಷ್ಠ ನ್ಯಾಯಾಧೀಶನಾಗಿದ್ದರೂ ಭೋಗವಿಲಾಸಗಳ ಆಕರ್ಷಣೆಯಿಂದ ದೂರವಾಗಿರಲಿಲ್ಲ. ಲಾವಣ್ಯವತಿಯಂತಹ ಪ್ರಬುದ್ಧ ಸುಂದರ ಯುವತಿಯನ್ನು ನ್ಯಾಯಪೀಠದ ಮುಂದೆ ನಿಲ್ಲಿಸಿ ವಿಚಾರಣೆಯ ನೆವದಿಂದ ಸಂಬದ್ಧವೋ ಅಸಂಬದ್ಧವೋ ಆದ ಅಸಭ್ಯ ಅಶ್ಲೀಲ ಪ್ರಶ್ನೆಗಳನ್ನು ಕೇಳುವುದು ಅವನ ಉದ್ದೇಶವಾಗಿತ್ತು. ಭೋಗಕ್ಕೆ ಬಾರದ ವಸ್ತುವನ್ನು ನೋಡಿಯಾದರೂ ಆನಂದಿಸುವೆನೆಂದು ಅವನು ಭಾವಿಸಿದನು.

ಆದರೆ ಮರುದಿನ ಮಧ್ಯಾಹ್ನ ಸಾಕ್ಷ್ಯ ಕೊಡಲು ಬಂದ ಲಾವಣ್ಯವತಿ ನ್ಯಾಯಪೀಠದ ಮುಂದೆ ನಿಂತಾಗ ಕ್ರಮಿತನಿಗೆ ತೀವ್ರ ನಿರಾಶೆಯಾಯಿತು. ಸಾಮಾನ್ಯ ಸ್ತ್ರೀಯಂತೆ ಯಾವ ಅಲಂಕಾರವೂ ಇಲ್ಲದೆ ತಲೆ ತುಂಬ ಸೆರಗು ಹೊದೆದು ಅವಳು ನ್ಯಾಯಾಸ್ಥಾನಕ್ಕೆ ಬಂದಿದ್ದಳು. ಏಕಕಾಲದಲ್ಲಿ ತಂದೆ ಮತ್ತು ಮಾವ, ಇವರಿಬ್ಬರ ಬಂಧನದಿಂದ ಅವಳ ಹೃದಯದಲ್ಲಿ ದುಗುಡ ತುಂಬಿದ್ದಂತೆ ಕಂಡಿತು. ಅತ್ತು ಅತ್ತು ಕಣ್ಣುಗಳು ಕೆಂಪಾಗಿದ್ದವು. ಹಣೆಯ ವಿಭೂತಿ ವಿರಕ್ತಿಯನ್ನು ಮೆರೆಸಿತ್ತು.

ಕರಣಿಕನ ಪ್ರಶ್ನೆಗಳಿಗೆ ಯಾಂತ್ರಿಕವಾಗಿ ಉತ್ತರ ಕೊಟ್ಟು, ನ್ಯಾಯಪೀಠಕ್ಕೆ ವಂದಿಸಿ ಅವಳು ತಲೆಬಾಗಿ ನಿಂತಳು.

"ಸಾಕ್ಷಿ ಕುಳಿತುಕೊಂಡು ಉತ್ತರ ಕೊಡಬಹುದು," –ಕ್ರಮಿತನು ಗೌರವದಿಂದ ಹೇಳಿದನು.

"ನಿಂತುಕೊಂಡೇ ಉತ್ತರ ಕೊಡಲು ನ್ಯಾಯಪೀಠದ ಅನುಮತಿ ಕೇಳುತ್ತೇನೆ," –ಲಾವಣ್ಯವತಿ ವಿನಯದಿಂದ ಬಿನ್ನವಿಸಿಕೊಂಡಳು.

"ಶೀಲವಂತನೊಡನೆ ನಿಮ್ಮ ಮದುವೆ ನಿಮ್ಮ ಒಪ್ಪಿಗೆಯಿಂದ ನಡೆಯಿತೆ ?" –ಕೆಲವು ಕ್ಷಣಗಳು ಯೋಚಿಸುತ್ತಿದ್ದು ಕ್ರಮಿತನು ಪ್ರಶ್ನಿಸಿದನು.

"ಹೌದು, ಒಪ್ಪಿಗೆಯಿಂದಲೆ ನಡೆಯಿತು."

"ಮದುವೆಯಾಗುವ ಮೊದಲು ನೀವು ಶೀಲವಂತನನ್ನು ನೋಡಿದ್ದಿರಾ?"

"ನೋಡಿದ್ದೆ."

"ಯಾವಾಗ? ಎಲ್ಲಿ ನೋಡಿದ್ದಿರಿ ?"

"ಮಹಮನೆಯ ಆರೋಗ್ಯಧಾಮದಲ್ಲಿ ಅವರ ಚಿಕಿತ್ಸೆ ನಡೆಯುತ್ತಿದ್ದಾಗ."

"ನೋಡಲು ಕಾರಣ?"

"ಆಗ ಹರಳಯ್ಯನವರು ಕಲ್ಯಾಣದಲ್ಲಿರಲಿಲ್ಲ. ರೋಗಿಗೆ ಬೇಕಾದ ಫಲೋಪಹಾರಗಳನ್ನು ನಾನು ತೆಗೆದುಕೊಂಡುಹೋಗಿ ಕೊಡುತ್ತಿದ್ದೆ."

"ಆಗ ನೀವು ಶೀಲವಂತಯ್ಯನೊಡನೆ ಹೆಚ್ಚು ಸಲಿಗೆಯಿಂದ ನಡೆದುಕೊಳ್ಳುತ್ತಿದ್ದಿರಾ ?"

"ಉಪಚಾರಕ್ಕೆ ಎಷ್ಟು ಅಗತ್ಯವೋ ಅಷ್ಟು ಸಲಿಗೆಯಿಂದ ನಡೆದುಕೊಳ್ಳುತ್ತಿದ್ದೆ."

"ಆಗ ನಿಮ್ಮಲ್ಲಿ ಪರಸ್ಪರ ಪ್ರೇಮ ಹುಟ್ಟಿತಲ್ಲವೆ?"

"ಅದೆಲ್ಲ ನನಗೆ ತಿಳಿಯದು," –ಲಾವಣ್ಯವತಿ ಸಿಡುಕಿನಿಂದ ಉತ್ತರ ಕೊಟ್ಟಳು.

"ತಿಳಿಯದಿದ್ದರೆ ಹೋಗಲಿ. ಶೀಲವಂತನಿಗೆ ಗುಣಮುಖವಾದ ಮೇಲೆ ಒಂದು ದಿನ ಅಪರಾಹ್ನ ನೀವಿಬ್ಬರೂ ಗಾಡಿಯಲ್ಲಿ ಎಲ್ಲಿಗೆ ಹೋಗಿದ್ದಿರಿ ?" –ಕುಹಕದ ನಗೆ ಬೀರಿ ಕ್ರಮಿತನು ಪ್ರಶ್ನಿಸಿದನು.

"ಮೋಳಿಗೆ ಮಾರಯ್ಯನವರನ್ನು ನೋಡಿಬರಲು, ನಗರದ ಹೊರಗಿರುವ ಬಾಂಧವರ ಓಣಿಗೆ."

ಹಠಾತ್ತನೆ ಕ್ರಮಿತನು ದನಿಯನ್ನು ಗಡುಸಾಗಿ ಮಾಡಿಕೊಂಡು, "ನಿಜ ಹೇಳಿರಿ, ನೀವು ಹೋಗಿದ್ದದ್ದು ಮಾರಯ್ಯನವರನ್ನು ನೋಡುವುದಕ್ಕಲ್ಲ. ಭೋಗ ವಿಹಾರಕ್ಕಾಗಿ ನಗರದ ಹೊರಗಿನ ಯಾವುದೋ ರಹಸ್ಯ ಸ್ಥಳಕ್ಕೆ. ಆಗಲೇ ನೀವು ಪ್ರಣಯಿಗಳಾಗಿ ಒಬ್ಬರನ್ನೊಬ್ಬರು ಬಯಸುತ್ತಿದ್ದಿರಿ, ಅಲ್ಲವೆ ?" ಎಂದು ಗಜರಿ ಕೇಳಿದನು.

ಲಾವಣ್ಯವತಿ ಬೆದರಿದಳು. ಏನೋ ಹೇಳತೊಡಗಿ, ತುಟಿ ಕಚ್ಚಿಕೊಂಡು ಆಕ್ರೋಶದ ಬಿರುದನಿಯಿಂದ, "ಇಂತಹ ಅಸಭ್ಯ ಪ್ರಶ್ನೆಗಳಿಗೆ ನಾನು ಉತ್ತರ ಕೊಡುವುದಿಲ್ಲ," ಎಂದಳು.

ಕ್ರಮಿತನು ಅಸಮಾಧಾನದಿಂದ ಚಡಪಡಿಸುತ್ತಿರುವುದನ್ನು ಕಂಡು ಮಂಚಣನು

"ಅವರು ಬಾಂಧವರ ಓಣಿಗೆ ಹೋಗಿದ್ದರೇ ಇಲ್ಲವೇ ಎಂಬುದನ್ನು ನಾವು ಮಾರಯ್ಯನವರಿಂದ ತಿಳಿಯಬಹುದು. ಅಧ್ಯಕ್ಷರು ದಯಮಾಡಿ ಮುಂದಿನ ಪ್ರಶ್ನೆಗೆ ಹೋದರೆ ಒಳ್ಳೆಯದು," ಎಂದು ಸೂಚನೆಯಿತ್ತನು.

ಕ್ರಮಿತನು ಮಂಚಣನನ್ನು ದುರು ದುರು ನೋಡುತ್ತ ಲಾವಣ್ಯವತಿಯ ಕಡೆ ತಿರುಗಿ, "ಕ್ಷಮಿಸಿರಿ. ಮುಂದೆ ಸಭ್ಯತೆಗೆ ಕುಂದು ಬಾರದಂತೆ ನೋಡಿಕೊಳ್ಳುತ್ತೇನೆ. ಶೀಲವಂತ ಆಕರ್ಷಕ ವ್ಯಕ್ತಿಯಲ್ಲವೆ?" ಎಂದು ಕೇಳಿದನು.

"ನಿಮ್ಮ ಪ್ರಶ್ನೆ ನನಗೆ ಅರ್ಥವಾಗಲಿಲ್ಲ," ಲಾವಣ್ಯವತಿ ಬೇಸರದಿಂದ ಉತ್ತರ ಕೊಟ್ಟಳು.

"ಅರ್ಥವಾಗುವ ಹಾಗೆ ಕೇಳುತ್ತೇನೆ," ಎಂದು ಕ್ರಮಿತನು ಕ್ಷಣಕಾಲ ಯೋಚಿಸಿ "ಶೀಲವಂತನಂತಹ ಕಲಾವಿದ ಸುಂದರ ತರುಣನನ್ನು ಕಂಡಾಗ ಸಾಮಾನ್ಯವಾಗಿ ಹೆಂಗಸರು ಮೋಹಿಸುವರಲ್ಲವೆ ?" ಎಂದು ಕೇಳಿದನು.

ಪ್ರಶ್ನೆ ತಾನು ಅಪೇಕ್ಷಿಸಿದಷ್ಟು ಸಭ್ಯತೆಯಿಂದ ಕೂಡಿರಲಿಲ್ಲವೆಂಬುದನ್ನು ಅರಿತು ಕ್ರಮಿತನಿಗೆ ಸಂಕೋಚವಾಯಿತು. ಅದನ್ನು ಗಮನಿಸಿದ ಲಾವಣ್ಯವತಿ ಚತುರತೆಯಿಂದ, "ಸಾಮಾನ್ಯ ಹೆಂಗಸರ ಮನಸ್ಸು ನನಗೆ ಹೇಗೆ ತಿಳಿಯಬೇಕು? ನನ್ನ ವಿಚಾರ ಕೇಳಿದರೆ ಹೇಳುತ್ತೇನೆ," ಎಂದು ಉತ್ತರಿಸಿದಳು.

"ನೀವು ಶೀಲವಂತನನ್ನು ಆರೋಗ್ಯಧಾಮದಲ್ಲಿ ನೋಡಿದಾಗಲೆ ಮೋಹಿಸಿದಿರಲ್ಲವೆ?" ಕ್ರಮಿತನು ಪುನಃ ಪ್ರಶ್ನಿಸಿದನು.

ಲಾವಣ್ಯವತಿ ಮೌನ.

"ಮೋಹಿಸಿ ಎಂದರೆ ಮೆಚ್ಚಿ ಎಂದು ಅರ್ಥ. ಅದರಲ್ಲಿ ಅಸಭ್ಯತೆಯೇನೂ ಇರುವುದಿಲ್ಲ. ಸಾಕ್ಷಿ ಸಂಕೋಚವಿಲ್ಲದೆ ಉತ್ತರ ಕೊಡಬಹುದು," ಎಂದು ರುದ್ರಭಟ್ಟನು ವಿವರಣೆ ಕೊಟ್ಟನು.

"ಪ್ರಾಪ್ತ ವಯಸ್ಕರಾದ ವಧೂವರರು ಪರಸ್ಪರ ಮೆಚ್ಚಿದ ಮೇಲೆ ಮದುವೆ ಮಾಡುವುದು ಶರಣರ ಸಂಪ್ರದಾಯ," –ಎಂದು ಲಾವಣ್ಯವತಿ ದಿಟ್ಟತನದಿಂದ ಉತ್ತರಕೊಟ್ಟಳು.

"ಮೊದಲು ನೀವು ಮೆಚ್ಚಿದಿರಿ. ಆಮೇಲೆ ತಂದೆಗೆ ನಿಮ್ಮ ಮೆಚ್ಚುಗೆಯನ್ನು

ತಿಳಿಸಿದಿರಿ, ಅಲ್ಲವೆ?" ಎಂದು ಕ್ರಮಿತನು ಪುನಃ ಪ್ರಶ್ನಿಸಿದನು.

ನ್ಯಾಯಪೀಠದ ಪ್ರಶ್ನೆಗಳಿಗೆ ತನ್ನ ಉತ್ತರ ಸರಿಯೆ ? ಎಂದು ಲಾವಣ್ಯವತಿಗೆ ಸಂದೇಹವಾಯಿತು. "ನಾನು ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದುಕೊಂಡೆ. ತಂದೆ ನನ್ನನ್ನು ಸಾಕಿ ಸಲಹಿದರು. ನನ್ನ ಮನಸ್ಸನ್ನು ಅವರಿಗೆ ತಿಳಿಸದೆ ಮತ್ತಾರಿಗೆ ತಿಳಿಸಲಿ ?" ಎಂದು ಅವಳು ಮಾರುತ್ತರ ಕೊಟ್ಟಳು.

"ನಿಮ್ಮ ಮೆಚ್ಚಿಗೆ ತಿಳಿದ ಮೇಲೆ ನಿಮ್ಮ ತಂದೆ ಹರಳಯ್ಯನ ಹತ್ತಿರ ಮದುವೆಯ ಪ್ರಸ್ತಾಪ ಮಾಡಿದರಲ್ಲವೆ?"

"ನೀವು ಮತ್ತೆ ಮತ್ತೆ ಕೇಳಿದ್ದನ್ನೇ ಕೇಳುತ್ತಿದ್ದೀರಿ. ನಾನು ಮಧುವರಸರ ಮಗಳಲ್ಲದೆ ನಿಮ್ಮ ಮಗಳಾಗಿದ್ದರೆ ಏನು ಮಾಡುತ್ತಿದ್ದಿರಿ ?"

"ನಿನ್ನನ್ನು ಕತ್ತಲ ಕೋಣೆಯಲ್ಲಿ ಕೂಡಿ ಉಪವಾಸ ಹಾಕುತ್ತಿದ್ದೆ. ವರ್ಣ ಸಂಕರದ ಈ ಮದುವೆಗೆ ಒಪ್ಪುತ್ತಿರಲಿಲ್ಲ." – ಕ್ರಮಿತನು ಕೋಪದಿಂದ ಸಿಡಿದೆದ್ದು ಹೇಳಿದನು.

"ಶರಣ ಧರ್ಮಕ್ಕೂ ವೈದಿಕ ಧರ್ಮಕ್ಕೂ ಇರುವ ಅಂತರವನ್ನು ನಿಮ್ಮ ಮಾತುಗಳು ಹೇಳುತ್ತಿವೆ. ಜಾತಿಪಂಥ ಮೇಲು ಕೀಳು ಭಾವನೆಗಳನ್ನು ಶರಣಧರ್ಮ ಒಪ್ಪುವುದಿಲ್ಲ. ಅವರ ದೃಷ್ಟಿಯಲ್ಲಿ ಶಿವನ ಭಕ್ತರೆಲ್ಲ ಸಮಾನರು. ಪುರುಷರಂತೆ ಸ್ತ್ರೀಯರಿಗೂ ಸಮಾನಾಧಿಕಾರವಿದೆ." –ಲಾವಣ್ಯವತಿ ಅಷ್ಟೇ ಆವೇಶದಿಂದ ಹೇಳಿದಳು. ಅವಳ ಪ್ರಗಲ್ಭತೆ ಜಾಗ್ರತವಾಗಿತ್ತು.

ವಿಚಾರಣೆ ಪ್ರಕೋಪಕ್ಕೇರುವುದೆಂದು ಭಾವಿಸಿ ಮಂಚಣನು, "ಸಾಕಾದಷ್ಟು ಕಾಲ ಪ್ರಶ್ನೋತ್ತರಗಳೂ ನಡೆದಿವೆ. ಇನ್ನು ಮುಗಿಸಿದರೆ ಒಳ್ಳೆಯದಲ್ಲವೆ?" ಎಂದು ಸಲಹೆ ಮಾಡಿದನು.

ಕ್ರಮಿತನಿಗೂ ಅದು ಉಚಿತವಾಗಿ ಕಂಡಿತು. "ಕೊನೆಯದಾಗಿ ನನ್ನದೊಂದು ಪ್ರಶ್ನೆಯಿದೆ. ಅದನ್ನು ಬರೆದುಕೊಡುತ್ತೇನೆ. ಮಂಚಣನವರು ಓದಿಕೊಂಡು ಸಾಕ್ಷಿಗೆ ಕೊಡಬಹುದು. ಸಾಕ್ಷಿ ಇಚ್ಛೆಯಂತೆ ಪ್ರಕಟವಾಗಿಯೋ ಬರಹದಲ್ಲಿಯೋ ಅದಕ್ಕೆ ಉತ್ತರ ಕೊಡಲಿ," ಎಂದನು.

ಮಂಚಣನ ಒಪ್ಪಿಗೆ ಪಡೆದು ಕ್ರಮಿತನು ಪ್ರಶ್ನೆಯನ್ನು ಹಲಿಗೆಯ ಮೇಲೆ ಬರೆದನು. ಓದಿ ಮಂಚಣನ ಹುಬ್ಬು ಕುಂಚಿತವಾದವು. "ಪ್ರಶ್ನೆ ಅಸಭ್ಯ ಅಶ್ಲೀಲವಷ್ಟೇ ಅಲ್ಲ, ನಮ್ಮ ಮುಂದಿರುವ ವ್ಯವಹಾರಕ್ಕೆ ಯಾವ ವಿಧದಲ್ಲಿಯೂ ಸಂಬಂಧಿಸುವುದಿಲ್ಲ. ಇದನ್ನು ಸಾಕ್ಷಿಗೆ ಕೊಡಲು ನಿರಾಕರಿಸುತ್ತೇನೆ," ಎಂದು ಮಂಚಣ ಹಲಿಗೆಯನ್ನು ಕ್ರಮಿತನಿಗೆ ಹಿಂತಿರುಗಿ ಕೊಟ್ಟನು.

ಲಾವಣ್ಯವತಿಯ ಕುತೂಹಲ ಕೆರಳಿತು. ನ್ಯಾಯಪೀಠದ ಮುಂದಿದ್ದ ಹಲಿಗೆಯನ್ನು ಅವಳು ತಾನಾಗಿ ತೆಗೆದುಕೊಂಡು ಓದಿದಳು. ನಿರ್ಮಲ ಗಗನದಲ್ಲಿ ಇದ್ದಕ್ಕಿದ್ದಂತೆ ಮಿಂಚು ತಲೆದೋರಿತು. ಲಾವಣ್ಯವತಿಯ ಕಣ್ಣುಗಳಿಂದ ಕಿಡಿಗಳು ಉದುರಿದವು.

ಬರೆದಿದ್ದುದನ್ನು ಅಳಿಸಿ ಅವಳು ಕರ್ಕಶಕಂಠದಿಂದ, "ಘೋರನಾರಕಿಗಳು ನೀವು. ನಿಮ್ಮ ಮನಸ್ಸಿನಲ್ಲಿ ಇಂತಹ ಕಲುಷಿತ ಭಾವನೆ ನೆಲೆಸಿದೆಯೆಂದು ನಾನು ಕನಸಿನಲ್ಲಿಯೂ ಭಾವಿಸಿರಲಿಲ್ಲ, ನಿಮ್ಮ ಮುಂದೆ ನಿಲ್ಲುವುದೂ ಅಪರಾಧ!"

–ಎಂದು ಹೇಳಿ ಹಲಿಗೆಯನ್ನು ಕ್ರಮಿತನ ಮುಂದೆಸೆದು ನ್ಯಾಯಪೀಠದಿಂದ ಹೊರಟುಹೋದಳು.

* * * *

"ಸಾಮಾನ್ಯವಾಗಿ ಹೆಂಗಸರು ಬಹುಬೇಗ ಉದ್ರೇಕಗೊಳ್ಳುತ್ತಾರೆ. ಮದುವೆ ಯಾದ ಮೇಲಿನ ಘಟನೆಗಳಿಂದ ಲಾವಣ್ಯವತಿ ಹೆಚ್ಚು ನೊಂದಿದ್ದಾಳೆ. ದುರ್ಬಲೆ ಯಾಗಿದ್ದಾಳೆ. ಈ ಪರಿಸ್ಥಿತಿಯಲ್ಲಿ ನೀವು ಅವಳ ವಿಚಾರಣೆಯನ್ನು ದೀರ್ಘಕಾಲ ಎಳೆಯಬಾರದಾಗಿತ್ತು."–ಮಂಚಣನೆಂದನು, ಲಾವಣ್ಯವತಿ ಹೋದಮೇಲೆ.

"ಹೆಂಗಸೆಂಬ ಕಾರಣದಿಂದ ಅಗತ್ಯವೆನಿಸುವ ಎಲ್ಲ ಪ್ರಶ್ನೆಗಳನ್ನೂ ಕೇಳದೆ ಹೋದರೆ ಧರ್ಮಾಧಿಕರಣಕ್ಕೆ ದ್ರೋಹ ಮಾಡಿದಂತೆ." –ಕರ್ತವ್ಯ ನಿಷ್ಠೆಯ ಸೋಗಿನಲ್ಲಿ ಕ್ರಮಿತನು ಹೇಳಿದನು.

"ಆದರೂ ನೀವು ಬರೆದುಕೊಟ್ಟ ಪ್ರಶ್ನೆ ಯಾವ ದೃಷ್ಟಿಯಿಂದಲೂ ಉಚಿತವೆನಿಸದು. ನಿಮ್ಮ ಪರಿಶ್ರಮ ವಿಫಲವಾಯಿತು.

"ವಿಫಲವಾಗಲಿಲ್ಲ, ಮಂಚಣನಾಯಕರೆ. ನಾನು ನಿರೀಕ್ಷಿಸಿದ್ದ ಉತ್ತರ ದೊರಕಿತು."

"ಯಾವುದು ಆ ಉತ್ತರ ?"

"ಪ್ರಶ್ನೆ ಓದಿದಾಗ ಲಾವಣ್ಯವತಿಯಲ್ಲಾದ ಪ್ರತಿಕ್ರಿಯೆ."

"ಅದರಿಂದ ನಮ್ಮ ಮುಂದಿರುವ ವರ್ಣಸಂಕರ ವ್ಯವಹಾರಕ್ಕೆ ಆದ ಪ್ರಯೋಜನವೇನು ?"

"ಮುಂದೆ ನೀವೇ ಅದನ್ನು ತಿಳಿಯುವಿರಿ," –ಕ್ರಮಿತನ ಉತ್ತರ ಅರ್ಥಗರ್ಭಿತವಾಗಿತ್ತು.

"ಆದರೆ ಪ್ರಶ್ನೆಯೇನೆಂಬುದು ನ್ಯಾಯಪೀಠದ ಮೂರನೆಯ ಸದಸ್ಯ ರುದ್ರಭಟ್ಟರಿಗೆ ತಿಳಿಯದು," –ಎಂದು ಮಂಚಣನು ಆಕ್ಷೇಪಿಸಿದನು.

"ಸದ್ಯಕ್ಕೆ ತಿಳಿಯುವ ಅಗತ್ಯವೂ ಇಲ್ಲ. ಆ ರಹಸ್ಯ ಪ್ರಶ್ನೆ ನಮ್ಮಿಬ್ಬರಿಗೆ ತಿಳಿದಿದೆ. ಅದರಿಂದ ಸಾಕ್ಷಿಯಲ್ಲಾದ ಪ್ರತಿಕ್ರಿಯೆಯನ್ನು ರುದ್ರಭಟ್ಟರು ನೋಡಿದ್ದಾರೆ, ಈಗ ಅಷ್ಟು ಸಾಕು," –ಎಂದು ಹೇಳಿ ಕ್ರಮಿತನು ಶೀಲವಂತನನ್ನು ಕರೆತರುವಂತೆ ಭಟರಿಗೆ ಆಜ್ಞೆ ಮಾಡಿದನು.

ಶೀಲವಂತ ಲಾವಣ್ಯವತಿಯರು ಒಟ್ಟಿಗೆ ನ್ಯಾಯಾಲಯಕ್ಕೆ ಬಂದಿದ್ದರು. ಸಾಕ್ಷ್ಯ ಮುಗಿದ ಮೇಲೆ ಮೇನೆಯಲ್ಲಿ ಲಾವಣ್ಯವತಿ ಮನೆಗೆ ಹಿಂದಿರುಗಬೇಕೆಂದೂ ವಿಚಾರಣೆ ಮುಗಿದ ಮೇಲೆ ತಾನು ನಡೆದು ಬರುವುದಾಗಿಯೂ ಶೀಲವಂತ ಮೊದಲೇ ಹೇಳಿದ್ದನು. ಅದರಂತೆ ಲಾವಣ್ಯವತಿ ಮನೆಗೆ ಹಿಂದಿರುಗಿದಳು. ಸಾಕ್ಷ್ಯ ಮುಗಿಯದಿದ್ದ ಶೀಲವಂತನನ್ನು ಧರ್ಮಾಧಿಕರಣದ ಭಟರು ಪ್ರತ್ಯೇಕ ಕೋಣೆಯಲ್ಲಿ ಕುಳ್ಳಿರಿಸಿ ಕಾವಲಿದ್ದದ್ದರಿಂದ ಹಿಂದಿರುಗುವ ಮುನ್ನ ಶೀಲವಂತನನ್ನು ನೋಡುವ ಅವಕಾಶ ಅವಳಿಗೆ ದೊರಕಲಿಲ್ಲ.

ಶೀಲವಂತನ ಸಾಕ್ಷ್ಯ ಆವೇಶ ಉದ್ರೇಕಗಳಿಲ್ಲದೆ ಶಾಂತರೀತಿಯಿಂದ ಪ್ರಾರಂಭವಾಯಿತು. ನ್ಯಾಯಪೀಠದ ಮುಂದೆ ಯಾವರೀತಿ ನಡೆದುಕೊಳ್ಳಬೇಕು, ಏನು ಹೇಳಬೇಕು, ಎಂಬುದನ್ನು ಅವನು ಮೊದಲೇ ಯೋಚಿಸಿ ಸಿದ್ಧನಾಗಿ ಬಂದಿದ್ದನು.

ಕ್ರಮಿತನ ಪ್ರಶ್ನೆಗಳಿಗೆ ಉತ್ತರವಾಗಿ ಅವನು ತನ್ನ ಮದುವೆಯ ಸಾಮಾನ್ಯ ಘಟನೆಗಳನ್ನು ಯಥಾವತ್ತಾಗಿ ವಿವರಿಸಿದನು. ಮದುವೆಯ ಮರುದಿನ ಸತ್ಕಾರ ಸಭೆಯಲ್ಲಿ ನಡೆದ ಘಟಸ್ಫೋಟದ ವಿಚಾರ ಬಂದಾಗ ಅವನು,

"ಆ ಘಟನೆಯಲ್ಲಿ ನ್ಯಾಯಪೀಠದ ಪ್ರಮುಖ ನ್ಯಾಯಾಧೀಶರು ಮುಖ್ಯ ಪಾತ್ರ ವಹಿಸಿದ್ದರು. ಆ ಬಗೆಗೆ ಅವರಿಗೆ ಸಹಜವಾಗಿ ಆಸಕ್ತಿ ಇರುವುದರಿಂದ ಆ ಸಂಬಂಧವಾಗಿ ಉತ್ತರ ಕೊಡಲು ನಿರಾಕರಿಸುತ್ತೇನೆ," ಎಂದನು.

"ಘಟನೆಯಲ್ಲಿ ನಾನು ಪಾತ್ರವಹಿಸಿದ್ದದ್ದು ನಿಜ. ಆದರೆ ಆ ವಿಷಯದಲ್ಲಿ ನನ್ನ ಆಸಕ್ತಿ ಅಂದೇ ಮುಗಿಯಿತು. ಈಗ ನಾನು ನಿರ್ಲಿಪ್ತ ಮನಸ್ಸಿನಿಂದ ನ್ಯಾಯ ಪೀಠದಲ್ಲಿ ಕುಳಿತಿದ್ದೇನೆ. ಸಂಕೋಚವಿಲ್ಲದೆ ಉತ್ತರ ಕೊಡಬಹುದು," –ಎಂದು ಕ್ರಮಿತನು ಸಮಾಧಾನ ಹೇಳಿದನು.

"ಘಟನೆಯಲ್ಲಿ ಭಾಗವಹಿಸಿ ಈಗ ಆಸಕ್ತಿ ಇಲ್ಲವೆಂದು ಹೇಳುವುದು ಮಾನವ ಸ್ವಭಾವಕ್ಕೆ ವಿರೋಧವಾದ ಮಾತು. ವ್ಯವಹಾರ ಅದನ್ನೊಪ್ಪುವುದಿಲ್ಲ. ಸಂಬಂಧ ಪಟ್ಟ ನ್ಯಾಯಾಧೀಶರು ನ್ಯಾಯಪೀಠದಿಂದ ವಿರಮಿಸಿದರೆ ಮಾತ್ರವೇ ನಾನು ಸಾಕ್ಷ್ಯಕೊಡುತ್ತೇನೆ." –ಎಂದು ಶೀಲವಂತ ಪುನಃ ಉತ್ತರ ಕೊಟ್ಟನು.

ಕ್ರಮಿತನು ಕೋಪಾವೇಶದಿಂದ, "ನೀವು ನ್ಯಾಯಪೀಠವನ್ನು ಅಪಮಾನಗೊಳಿಸುತ್ತಿದ್ದೀರಿ. ನಿಮ್ಮನ್ನು ಬಂಧಿಸಿ ವಿಚಾರಣೆಗೆ ಗುರಿಪಡಿಸುವ ಅಧಿಕಾರ ನನಗಿದೆ," ಎಂದು ಹೇಳಿದನು.

"ನ್ಯಾಯಪೀಠವನ್ನು ಅವಮಾನಗೊಳಿಸುವ ಇಚ್ಛೆ ನನಗಿಲ್ಲ. ಒಂದು ಕೃತ್ಯದಲ್ಲಿ ಆಸಕ್ತಿಯಿಂದ ಭಾಗವಹಿಸಿದವರು ನ್ಯಾಯಾಧೀಶರಾಗಿ ಆ ಕೃತ್ಯದ ವಿಚಾರಣೆ ನಡೆಸಬಾರದೆಂಬುದು ಎಲ್ಲ ಧರ್ಮಶಾಸ್ತ್ರಗಳೂ ಒಪ್ಪುವ ಸಾಮಾನ್ಯ ನಿಯಮ. ಅದನ್ನು ಉಲ್ಲಂಘಿಸಿ ಧರ್ಮಾಧಿಕರಣವನ್ನು ಪ್ರತಿಶೋಧದ ಹಿಂಸಾಪೀಠವಾಗಿ ಮಾಡುವುದು ನಿಮ್ಮ ಅಭಿಮತವೆ?" –ಎಂದು ಶೀಲವಂತ ವಿನಯದಿಂದ ಬಿನ್ನವಿಸಿಕೊಂಡನು. ನ್ಯಾಯಪೀಠದೊಡನೆ ವಿರಸಕ್ಕೆ ಎಡೆ ಕೊಡುವುದು ಅನರ್ಥಕಾರಿಯೆಂದು ತಿಳಿದಿತ್ತಾದರೂ ಧೈರ್ಯ ಸಾಹಸಗಳು ಅವನನ್ನು ನುಡಿಸಿದವು.

ಕ್ರಮಿತನ ಕೋಪ ಇಮ್ಮಡಿಸಿತು. "ಅಂತ್ಯಜನಾದ ನಿನಗೆ ಧರ್ಮಶಾಸ್ತ್ರಗಳ ವಿಚಾರ ಏನು ತಿಳಿಯುತ್ತದೆ !" ಎಂದು ಆವೇಶದಿಂದ ಹೇಳಿದನು.

ಶೀಲವಂತನ ರಕ್ತ ಕುದಿಯಿತು. ದನಿಯನ್ನು ತುಸು ಗಡುಸಾಗಿಸಿ ಅವನು,

"ನಾನು ಅಂತ್ಯಜನಲ್ಲ. ಶರಣಧರ್ಮದಲ್ಲಿ ದೀಕ್ಷಿತನು. ನ್ಯಾಯಪೀಠ ನನ್ನನ್ನು ಕರೆಸಿದ್ದು ಸಾಕ್ಷ್ಯ ತೆಗೆದುಕೊಳ್ಳುವುದಕ್ಕೋ ಅಪಮಾನಪಡಿಸುವುದಕ್ಕೊ?" ಎಂದು ಪ್ರಶ್ನಿಸಿದನು.

"ಬಂಧಿಸಿರಿ ಈ ಧರ್ಮದ್ರೋಹಿ ಮುಚ್ಚಿಗನನ್ನು !" ಕ್ರಮಿತನು ಆವೇಶದಿಂದ ಚಡಪಡಿಸಿ ಭಟರಿಗೆ ಆಜ್ಞೆ ಮಾಡಿದನು.

ಪ್ರಸಂಗ ಅನ್ಯಾಯದ ಹಿಂಸಾರೂಪ ತಾಳುವಷ್ಟರಲ್ಲಿ ಮಂಚಣನು ಮಧ್ಯೆ ಬಂದು, ಭಟರಿಗೆ ಸರಿದು ನಿಲ್ಲುವಂತೆ ಹೇಳಿ, ಕ್ರಮಿತನ ಕಡೆ ತಿರುಗಿ,

"ಧರ್ಮಾಧಿಕರಣದ ಮೂಲ ಸೂತ್ರಗಳಂತೆ ನಾವು ನಡೆಯಬೇಕಾಗುತ್ತದೆ. ನಾರಣಕ್ರಮಿತರೆ. ಘಟಸ್ಫೋಟದಲ್ಲಿ ಮುಖ್ಯ ಪಾತ್ರವಹಿಸಿದ್ದ ನೀವು ನ್ಯಾಯ ಪೀಠದ ಅಧ್ಯಕ್ಷತೆಗೆ ಒಪ್ಪಿದುದು ಈ ತೊಂದರೆಯ ಕಾರಣ. ಈ ವಿಚಾರದಲ್ಲಿ ನಾವು ಎಚ್ಚರಿಕೆಯಿಂದ ನಡೆಯಬೇಕು. ಮಧ್ಯಸ್ಥವಾದ ಮಾರ್ಗಹಿಡಿದರೆ ಒಳ್ಳೆಯದು," ಎಂದು ಹೇಳಿದನು.

ರುದ್ರಭಟ್ಟನು ಮೌನ ! ಕ್ರಮಿತನ ವರ್ತನೆ ನ್ಯಾಯವಿರುದ್ಧವೆಂದು ಅವನಿಗೆ ತಿಳಿದಿತ್ತು.

ಕೊನೆಗೆ ಕ್ರಮಿತನು ಶಾಂತನಾಗಿ, "ನೀವು ಹೇಳುವ ಮಧ್ಯಸ್ಥಿಕೆಯ ಮಾರ್ಗವೇನು ?" ಎಂದು ಮಂಚಣನನ್ನು ಪ್ರಶ್ನಿಸಿದನು.

"ನನ್ನದೇನೂ ಕ್ರಾಂತಿಕಾರಿ ಸಲಹೆಯಲ್ಲ. ಘಟಸ್ಫೋಟದ ವಿಚಾರ ನೀವು ಪ್ರಶ್ನಿಸಬೇಡಿರಿ. ಶೀಲವಂತಯ್ಯ ತನ್ನ ಆಕ್ಷೇಪವನ್ನು ಹಿಂದಕ್ಕೆ ತೆಗೆದುಕೊಳ್ಳಲಿ."

–ಮಂಚಣನ ಸಲಹೆಗೆ ಕ್ರಮಿತನು ಒಪ್ಪಿದನು. ಶೀಲವಂತ ಆಕ್ಷೇಪಿಸಲಿಲ್ಲ. ವಿಚಾರಣೆ ಪುನರಾರಂಭವಾಯಿತು.

"ಮಧುವರಸರ ಮಗಳು ಲಾವಣ್ಯವತಿ ನಿಮಗೆ ಯಾವಾಗ ಪರಿಚಯವಾದದ್ದು?"

"ಮಹಮನೆಯ ಆರೋಗ್ಯಧಾಮದಲ್ಲಿ ಹಾವು ಕಚ್ಚಿದ್ದಕ್ಕಾಗಿ ನಾನು ಚಿಕಿತ್ಸೆ ಪಡೆಯುತ್ತಿದ್ದಾಗ." ಶೀಲವಂತ ಉತ್ತರ ಕೊಟ್ಟನು.

"ಹಾವು ಕಚ್ಚಿದಾಗ ನೀವು ಎಲ್ಲಿದ್ದಿರಿ?"

"ದೇವಗಿರಿಯ ಒಂದು ಗುಹೆಯಲ್ಲಿ. ಶರಣರ ಯಾತ್ರಾತಂಡದೊಡನೆ ನಾನು ಅಲ್ಲಿಗೆ ಹೋಗಿದ್ದೆ."

"ಗುಹೆಯಲ್ಲಿ ನಿಮ್ಮ ಸಂಗಡಿದ್ದ ಕದಂಬ ರಾಜಕನ್ಯೆ ಕುಸುಮಾವಳಿ ಘಾಯದಿಂದ ವಿಷಹೀರಿ ನಿಮ್ಮ ಪ್ರಾಣ ಉಳಿಸಿದ್ದು ನಿಜವೆ?"

"ನಿಜ. ಕುಸುಮಾವಳಿಯ ಬಲಿದಾನದಿಂದ ನಾನು ಉಳಿದೆ. ಆಗ ನಾನು ಪ್ರಜ್ಞಾಹೀನನಾಗಿದ್ದರೂ ಸಂಗಡಿದ್ದವರಿಂದ ಈ ವಿಚಾರ ತಿಳಿದುಕೊಂಡಿದ್ದೇನೆ,"

–ನುಡಿಯುತ್ತಿದ್ದಂತೆ ದೇವಗಿರಿಯ ಆ ಗುಹೆಯಲ್ಲಿ ಆದ ಚಮತ್ಕಾರದ ಘಟನೆಯ ನೆನಪಿಂದ ಶೀಲವಂತ ವಿಚಲಿತನಾದನು. ಕಂಠ ಗದ್ಗದಿತವಾಯಿತು.

"ಕುಸುಮಾವಳಿಯ ಬಲಿದಾನದ ಕಾರಣವೇನು?"

"ತಿಳಿಯದು. ಅದರಿಂದ ನನಗೇ ಆಶ್ಚರ್ಯವಾಗಿದೆ."

"ನಿಮಗೆ ಕುಸುಮಾವಳಿಯ ಪರಿಚಯವಾದದ್ದು ಯಾವಾಗ?"

"ಏಳು ವರ್ಷಗಳ ಹಿಂದೆ, ಕಲ್ಯಾಣದ ಚಾಲುಕ್ಯ ಅರಮನೆಯಲ್ಲಿ ನಾನು ಚಿತ್ರಕಾರನಾಗಿದ್ದಾಗ."

"ನೀವು ಚಾಲುಕ್ಯ ಅರಮನೆಯ ಚಿತ್ರಕಾರರಾದದ್ದು ಹೇಗೆ?"

"ಒಂದು ದಿನ ನಾನು ಚಾಲುಕ್ಯ ರಾಣಿ ಕಾಮೇಶ್ವರೀದೇವಿಯವರಿಗೆ ಪಾದರಕ್ಷೆಗಳನ್ನು ಕೊಡಲು ಅರಮನೆಗೆ ಹೋಗಿದ್ದಾಗ ರಾಣಿಯವರು ನನ್ನ ಚಿತ್ರಗಳನ್ನು ನೋಡಿ ಮೆಚ್ಚಿ ಚಿತ್ರಕಾರನನ್ನಾಗಿ ನಿಯಮಿಸಿಕೊಂಡರು. ರಾಣಿಯವರ ಸಂಗಡಿದ್ದ ಕುಸುಮಾವಳಿಯ ಪರಿಚಯವಾಯಿತು."

"ಆಗ ನಿಮ್ಮ ವಯಸ್ಸೆಷ್ಟು?"

"ಸುಮಾರು ಇಪ್ಪತ್ತು."

ಪ್ರಶ್ನೋತ್ತರಗಳನ್ನು ಕೇಳಿ ಮಂಚಣ ರುದ್ರಭಟ್ಟರು ಅಚ್ಚರಿಗೊಂಡರು. "ಈಗ ನಮ್ಮ ಮುಂದಿರುವ ವರ್ಣಸಂಕರದ ವ್ಯವಹಾರಕ್ಕೂ ಈ ಘಟನೆಗಳಿಗೂ ಇರುವ ಸಂಬಂಧವೇನು ?" ಎಂದು ಮಂಚಣನು ಪ್ರಶ್ನಿಸಿದನು.

"ನಾನು ವಿಚಾರಣೆ ನಡೆಸುತ್ತಿರುವ ವರ್ಣಸಂಕರದ ವ್ಯಾಪ್ತಿ ತೀವ್ರತೆಗಳನ್ನು ತಿಳಿದುಕೊಳ್ಳಲು ಈ ಘಟನೆಗಳು ಸಹಾಯಕವಾಗುವುವು."

–ಎಂದು ಹೇಳಿ ಕ್ರಮಿತನು ಪಾರ್ಶ್ವದ ಪೀಠದ ಮೇಲೆ ದಾಖಲೆಗಳ ನಡುವೆ ಇಟ್ಟಿದ್ದ ಚಿತ್ರವೊಂದನ್ನು ತೆಗೆದು ಶೀಲವಂತನಿಗೆ ಕೊಟ್ಟು, "ಇದು ನೀವು ಬರೆದ ಚಿತ್ರವೆ?" ಎಂದು ಕೇಳಿದನು.

ಶೀಲವಂತ ಚಿತ್ರವನ್ನು ನೋಡಿ ಸ್ತಂಭಿತನಾದನು. ಏಳು ವರ್ಷಗಳ ಹಿಂದೆ ತಾನು ಚಾಲುಕ್ಯ ಅರಮನೆಯಲ್ಲಿದ್ದಾಗ ಬರೆದ ಈ ಚಿತ್ರ ಕ್ರಮಿತನ ಕೈಗೆ ಬಂದದ್ದು ಹೇಗೆ ? ಎಂದು ಅವನು ಯೋಚಿಸುತ್ತಿದ್ದಂತೆ ಕ್ರಮಿತನು ಮುಂದುವರಿದು,

"ಇದರಲ್ಲಿ ನೀವು ನಗ್ನೆಯಾದ ಹೆಣ್ಣೊಬ್ಬಳ ಬೆನ್ನ ಕಡೆಯ ನಿಲುವನ್ನು ಚಿತ್ರಿಸಿರುವಿರಲ್ಲವೆ ? ಈ ಹೆಣ್ಣು ಯಾರು ? ಯಾವ ಸಂದರ್ಭದಲ್ಲಿ ನೀವು ಇದನ್ನು ಬರೆದಿರಿ?"

–ಎಂದು ಪ್ರಶ್ನಿಸಿದನು.

"ನಿಮ್ಮ ಮುಂದಿರುವ ವ್ಯವಹಾರಕ್ಕೂ ಈ ಚಿತ್ರಕ್ಕೂ ಯಾವ ಸಂಬಂಧವೂ ಇಲ್ಲ. ನಿಮ್ಮ ಪ್ರಶ್ನೆಗಳೀಗೆ ಉತ್ತರ ಕೊಡಲು ನಾನು ನಿರಾಕರಿಸುತ್ತೇನೆ."

–ಚಿತ್ರದ ಬಗೆಗೆ ತನ್ನ ನಿಲುವೇನೆಂಬುದನ್ನು ನಿರ್ಧರಿಸಿಕೊಂಡು ಶೀಲವಂತ ದಿಟ್ಟತನದಿಂದ ಉತ್ತರ ಕೊಟ್ಟನು.

"ಚಿತ್ರಕ್ಕೂ ಈಗ ನಮ್ಮ ಮುಂದಿರುವ ವರ್ಣಸಂಕರ ವ್ಯವಹಾರಕ್ಕೂ ಇರುವ ಸಂಬಂಧ ಮುಂದೆ ನಿಮಗೆ ತಿಳಿಯುವುದು. ಈಗ ನನ್ನ ಪ್ರಶ್ನೆಗಳಿಗೆ ನೀವು ಉತ್ತರ ಕೊಡಲೇಬೇಕು. ಇಲ್ಲವೆ ಚಿತ್ರಹಿಂಸೆಯಿಂದ ಉತ್ತರ ಪಡೆಯುವ ಅಧಿಕಾರ ನ್ಯಾಯ ಪೀಠಕ್ಕಿರುತ್ತದೆ." ಅಧಿಕಾರವಾಣಿಯಿಂದ ಕ್ರಮಿತನು ಹೇಳಿದನು.

ಆಗಿನ ನ್ಯಾಯಾಲಯಗಳಲ್ಲಿ ಚಿತ್ರಹಿಂಸೆ ವಿಚಾರಣೆಯ ಅಂಗವಾಗಿತ್ತು. ಅದಕ್ಕೆ ಬೇಕಾದ ವಿಚಿತ್ರ ಉಪಕರಣಗಳೂ ಅವುಗಳ ಪ್ರಯೋಗದಲ್ಲಿ ಚತುರರಾದ ಕರ್ಮಚಾರಿ ಭಟರೂ ಯಾವಾಗಲೂ ಸಿದ್ಧರಾಗಿರುತ್ತಿದ್ದರು.

ಶೀಲವಂತ ಬೆದರಿದನು. ಕೆಲವು ಕ್ಷಣಗಳು ಯೋಚಿಸಿ, "ನಿಮ್ಮ ಪ್ರಶ್ನೆ ಸಮರ್ಪಕವಾಗಿ ಕಂಡರೆ ಉತ್ತರ ಹೇಳುತ್ತೇನೆ," ಎಂದನು.

"ಆಗಬಹುದು. ಈ ಚಿತ್ರದ ಕೆಳಗಿನ ಮೂಲೆಯಲ್ಲಿ 'ಶೀಲ' ಎಂದು

ಬರೆದಿರುವುದು ನಿಮ್ಮ ಹೆಸರಿನ ಮೊದಲೆರಡು ಅಕ್ಷರಗಳಲ್ಲವೆ?"

"ಹೌದು."

"ನೀವು ಬರೆದ ಚಿತ್ರಗಳಿಗೆ ಈ ಹೆಸರಿನ ಗುರುತು ಹಾಕುತ್ತಿದ್ದಿರಿ, ಅಲ್ಲವೆ?"

"ನಿಜ."

"ಈ ಚಿತ್ರದಲ್ಲಿರುವ ಹೆಂಗಸು ಯಾರು ?"

"ಆ ಪ್ರಶ್ನೆಗೆ ನಾನು ಉತ್ತರ ಕೊಡುವುದಿಲ್ಲ."

ಕ್ರಮಿತನು ಕುಹಕದ ನಗೆ ಬೀರಿ, "ನಿಮಗೆ ಉತ್ತರ ಕೊಡುವ ಇಚ್ಛೆಯಿಲ್ಲದೆ ಹೋದರೆ ನಾನು ಒತ್ತಾಯಪಡಿಸುವುದಿಲ್ಲ, ಶೀಲವಂತಯ್ಯ. ಹೆಣ್ಣು ಹಿಂದಿರುಗಿ ನೋಡುತ್ತಿರುವಂತೆ ಮುಖದ ಅರ್ಧಭಾಗವನ್ನು ಚಿತ್ರಿಸಿರುವುದರಿಂದ ನಾವೇ ಗುರುತು ಹಿಡಿಯಬಹುದು," ಎಂದು ಹೇಳಿ ಪಾರ್ಶ್ವದ ಪೀಠದಿಂದ ಇನ್ನೊಂದು ಚಿತ್ರವನ್ನು ತೆಗೆದುಕೊಟ್ಟು, "ಇವೆರಡರಲ್ಲಿಯೂ ಚಿತ್ರಿಸಲ್ಪಟ್ಟಿರುವ ಹೆಣ್ಣು ಒಬ್ಬಳೇ ಅಲ್ಲವೆ?" ಎಂದು ಪುನಃ ಪ್ರಶ್ನಿಸಿದನು.

"ಈ ಚಿತ್ರಕ್ಕೆ ಸಂಬಂಧಿಸಿದ ಯಾವ ಪ್ರಶ್ನೆಗೂ ನಾನು ಉತ್ತರ ಕೊಡುವುದಿಲ್ಲ."

–ಈ ಸಾರಿ ಶೀಲವಂತ ಖಂಡಿತವಾಗಿ ಹೇಳಿದನು.

ಆಗ ಕ್ರಮಿತನು ಎರಡು ಚಿತ್ರಗಳನ್ನೂ ಮಂಚಣನಿಗೆ ಕೊಟ್ಟು, "ನೀವು ಮತ್ತು ರುದ್ರಭಟ್ಟರು ಈ ಎರಡು ಚಿತ್ರಗಳನ್ನು ನೋಡಿ ಅವುಗಳಲ್ಲಿ ಚಿತ್ರಿಸಲ್ಪಟ್ಟಿರುವ ಹೆಣ್ಣು ಒಬ್ಬಳೇಯೋ ಅಥವಾ ಬೇರೆ ಬೇರೆ ವ್ಯಕ್ತಿಗಳೇ ಎಂಬುದನ್ನು ನಿರ್ಧರಿಸಿ ಹೇಳಬೇಕಾಗಿ ಕೋರುತ್ತೇನೆ," ಎಂದನು.

ಒಂದು ಚಿತ್ರದಲ್ಲಿ ನಗ್ನೆಯಾದ ಹೆಣ್ಣೊಬ್ಬಳ ಬೆನ್ನು ಕಡೆಯ ಚಿತ್ರ. ಹೆಣ್ಣು ಹಿಂದಕ್ಕೆ ತಿರುಗಿ ನೋಡುತ್ತಿರುವಂತೆ ಮುಖದ ಪಾರ್ಶ್ವವನ್ನು ಮಾತ್ರ ಚಿತ್ರಿಸಲಾಗಿತ್ತು. ಇನ್ನೊಂದರಲ್ಲಿ ವಸ್ತ್ರಾಭರಣಗಳಿಂದ ಭೂಷಿತೆಯಾದ ರಾಜರಮಣಿಯೊಬ್ಬಳು ಮಣಿಖಚಿತವಾದ ಭದ್ರಾಸನದ ಮೇಲೆ ಕುಳಿತಿರುವಂತೆ ಚಿತ್ರಿಸಲಾಗಿತ್ತು. ವರ್ಣ ಮತ್ತು ರೇಖಾವಿನ್ಯಾಸದಿಂದ ಎರಡು ಚಿತ್ರಗಳು ಬೇರೆ ಬೇರೆ ಕಲಾಕಾರರ ಕೃತಿಗಳೆಂದು ಸ್ಪಷ್ಟವಾಗಿ ತಿಳಿಯುತ್ತಿತ್ತು.

ಮಂಚಣ ರುದ್ರಭಟ್ಟರು ಚಿತ್ರಗಳನ್ನು ಪರಿಶೀಲಿಸಿ, "ಈ ಎರಡು ಚಿತ್ರಗಳಲ್ಲಿರುವ ಹೆಣ್ಣು ಒಬ್ಬಳೇ ಎಂದು ನಿರ್ಧಾರವಾಗಿ ಹೇಳಬಹುದು," ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

"ಆ ಹೆಣ್ಣು ಯಾರೆಂಬುದು ಈಗ ನಿಮಗೆ ತಿಳಿದಿರಬೇಕಲ್ಲವೆ?"

–ವ್ಯಂಗ್ಯದ ಚುಚ್ಚುದನಿಯಿಂದ ಕ್ರಮಿತನು ಅವರನ್ನು ಪ್ರಶ್ನಿಸಿದನು.

ರುದ್ರಭಟ್ಟ, "ತಿಳಿಯದು," ಎಂದನು. ವಾಸ್ತವದಲ್ಲಿ ಅವನು ಚಿತ್ರಸ್ಥೆಯಾದ ಹೆಣ್ಣನ್ನು ನೋಡಿರಲಿಲ್ಲ.

"ಹೆಣ್ಣು ಯಾರಾದರೂ ಆಗಲಿ, ನಮ್ಮ ಮುಂದಿರುವ ವರ್ಣಸಂಕರದ ವ್ಯವಹಾರಕ್ಕೆ ಸಂಬಂಧಿಸದ ಆ ವಿಚಾರ ಈಗ ನಮಗೇಕೆ?" –ಎಂದು ಮಂಚಣ ಅರ್ಥಗರ್ಭಿತವಾಗಿ ಹೇಳಿದನು.

"ಹೆಣ್ಣು ಯಾರೆಂಬುದು ತಿಳಿದಿದ್ದರೂ ಹೆಸರು ಹೇಳುವ ಧೈರ್ಯ ಸಾಹಸ ನಿಮಗಿಲ್ಲ, ಅಲ್ಲವೆ ಮಂಚಣನಾಯಕರೆ?" ಎಂದು ಕ್ರಮಿತನು ಉತ್ತರಕ್ಕಾಗಿ ನಿರೀಕ್ಷಿಸುವ ಸೋಗಿನಿಂದ ಕೆಲವು ಕ್ಷಣಗಳು ಸುಮ್ಮನಿದ್ದು ಬಳಿಕ ಮುಂದುವರಿದು, "ನಾನು ಧೈರ್ಯವಾಗಿ ಹೆಸರು ಹೇಳುತ್ತೇನೆ. ಎರಡನೆಯ ಚಿತ್ರದಲ್ಲಿ ವಸ್ತ್ರಾಲಂಕಾರಭೂಷಿತೆಯಾಗಿ ಕುಳಿತಿರುವ ಹೆಣ್ಣು ಚಾಲುಕ್ಯ ರಾಣಿ ಕಾಮೇಶ್ವರೀ ದೇವಿ. ದಿವಂಗತ ತೈಲಪ ದೇವರ ಸಂಗ್ರಹದಲ್ಲಿದ್ದ ಈ ಚಿತ್ರ ಕಲ್ಯಾಣದ ಚಿತ್ರಕಾರನೊಬ್ಬನ ಕಲಾಕೃತಿ. ರಾಣಿ ಕಾಮೇಶ್ವರೀ ದೇವಿಯನ್ನು ನಗ್ನಾವಸ್ಥೆಯಲ್ಲಿ ತೋರಿಸುವ ಈ ಮೊದಲ ಚಿತ್ರ, ನಮ್ಮ ಮುಂದೆ ಸಾಕ್ಷ್ಯ ಕೊಡುತ್ತಿರುವ ಶೀಲವಂತ ಕಲ್ಯಾಣದ ಚಾಲುಕ್ಯ ಅರಮನೆಯಲ್ಲಿ ಚಿತ್ರಕಾರನಾಗಿದ್ದಾಗ ಬರೆದದ್ದು. ರಾಣಿ ಕಾಮೇಶ್ವರಿ ಮತ್ತು ಶೀಲವಂತರ ಪ್ರಣಯ ಸಂಬಂಧವನ್ನು ಈ ಚಿತ್ರದ ಸಹಾಯದಿಂದ ನಾವು ಊಹಿಸಿ ತಿಳಿಯಬಹುದು. ರಾಣಿ ಕಾಮೇಶ್ವರಿ ತಾನಾಗಿ ಪ್ರೀತಿಸಿ ಶೀಲವಂತನ ಪ್ರಣಯಿಯಾದಳು. ಆಮೇಲೆ ಲೋಕದ ಕಣ್ಣಿನಿಂದ ತನ್ನ ಪ್ರೇಮವನ್ನು ಮುಚ್ಚಿಡಲು ಶೀಲವಂತನಿಗೆ ತನ್ನ ಗೆಳತಿ, ಕದಂಬ ರಾಜ ಕನ್ಯೆ ಕುಸುಮಾವಳಿಯ ಪರಿಚಯ ಮಾಡಿಸಿದಳು. ವಿಲಾಸವೈಭವಗಳ ನಡುವೆ ಬೆಳೆದ ಇಬ್ಬರು ರಾಜರಮಣಿಯರು ಏಕಕಾಲದಲ್ಲಿ ಶೀಲವಂತನಂತಹ ಸುಂದರ ತರುಣಕಲಾವಿದನನ್ನು ಮೋಹಿಸಿದ್ದು ನಮ್ಮ ರಾಜಾಂತಃಪುರಗಳಲ್ಲಿ ಅಪರೂಪವೇನೂ ಅಲ್ಲ. ಇಬ್ಬರು ವಿಲಾಸೀ ಗೆಳೆಯರು ಭೋಗಾಪೇಕ್ಷೆಯಿಂದ ಒಬ್ಬ ಗಣಿಕೆಯಲ್ಲಿ ಅನುರಕ್ತರಾಗುವಂತೆ ಕಾಮೇಶ್ವರಿ ಕುಸುಮಾವಳಿಯರು ಶೀಲವಂತನನ್ನು ತಮ್ಮ ಭೋಗ ಸಾಧನವಾಗಿ ಮಾಡಿಕೊಂಡರು," ಎಂದು ಮುಗಿಸಿದನು.

ಕ್ರಮಿತನ ನುಡಿಗಳನ್ನು ಕೇಳಿ ನ್ಯಾಯಾಲಯದಲ್ಲಿದ್ದ ಕರ್ಮಚಾರಿಗಳು, ಕರಣಿಕರು, ಭಟರು ಸ್ತಂಭಿತರಾದರು. ಮಂಚಣ ರುದ್ರಭಟ್ಟರು ದಿಗ್ಭ್ರಾಂತರಂತೆ ತಲೆ ತಗ್ಗಿಸಿ ಕುಳಿತರು. ಕ್ರಮಿತನು ವಿಜಯೋತ್ಸಾಹದಿಂದ ಸುತ್ತ ನೋಡಿ ಶೀಲವಂತನ ಕಡೆ ತಿರುಗಿ, "ರಾಣಿಯೊಡನೆ ನಿನ್ನ ಪ್ರಣಯ ಸಂಬಂಧವನ್ನು ಈಗ ಒಪ್ಪುವೆಯ?" ಎಂದು ಕೇಳಿದನು.

ಕೆಟ್ಟ ಕನಸು ಕಂಡು ಬೆಚ್ಚಿ ಎಚ್ಚೆತ್ತವನಂತೆ ಶೀಲವಂತ ಕಣ್ಣೊರೆಸಿಕೊಂಡು ಕೆಕ್ಕರಿಸಿ ನೋಡುತ್ತ, ಉದ್ವೇಗದ ಕೀರಲು ಕೊರಳಿಂದ,

"ಸ್ವರ್ಗಸ್ಥರಾಗಿ, ಈಗ ನಿಮಗೆ ಉತ್ತರ ಕೊಡಲಾರದ ಇಬ್ಬರು ಸಭ್ಯ ಮಹಿಳೆಯರ ವಿಚಾರದಲ್ಲಿ ನೀವು ಈ ಅಸಭ್ಯ ಅಶ್ಲೀಲ ಅನುಚಿತ ಆಪಾದನೆಗಳನ್ನು ಮಾಡುತ್ತಿದ್ದೀರಿ. ಕುಸುಮಾವಳಿ ದೇವಗಿರಿಯಲ್ಲಿ ಬಲಿದಾನ ಮಾಡಿಕೊಂಡಳು. ಚಾಲುಕ್ಯ ರಾಣಿ ಕಾಮೇಶ್ವರಿ ಮಂಗಳವೇಡೆಯ ಅಗ್ನಿ ಅಪಘಾತಕ್ಕೆ ಅಹುತಿಯಾದಳು. ಅವರ ವಿಚಾರದಲ್ಲಿ ನಾನು ಯಾವಾಗಲೂ ಹೆಚ್ಚಿನ ಗೌರವ ಸಭ್ಯತೆಗಳಿಂದ ನಡೆದುಕೊಂಡಿದ್ದೇನೆ. ಚಾಲುಕ್ಯ ರಾಣಿಯನ್ನು ಒಡತಿಯೆಂದು, ಕುಸುಮಾವಳಿಯನ್ನು ಸಹೋದರಿಯೆಂದು ತಿಳಿದಿದ್ದೆ. ಅವರ ವಿಚಾರದಲ್ಲಿ ಕೆಟ್ಟ ಭಾವನೆಗೆ ಎಂದಿಗೂ ಎಡೆಗೊಡಲಿಲ್ಲ. ನೀವು ತೋರಿಸಿದ ನಗ್ನಚಿತ್ರ ವಾಸ್ತವದಲ್ಲಿ ಕಾಮೇಶ್ವರಿಯ ಚಿತ್ರವಲ್ಲ. ಅದನ್ನು ನಾನು ಬರೆದಾಗ ಕಾಮೇಶ್ವರೀದೇವಿ ನನ್ನೆದುರಿಗೆ ನಗ್ನೆಯಾಗಿ ನಿಂತಿದ್ದಳೆಂದು ನೀವು ಭಾವಿಸಿದ್ದರೆ ಅದು ತಪ್ಪು. ತಾರುಣ್ಯದ ಉನ್ಮತ್ತ ಉತ್ಸಾಹದಿಂದ, ಕಲೆಯ ಪಾರದರ್ಶಕ ಪ್ರತಿಭೆಯನ್ನು ಮೆರೆಸಲು ಆ ಕಲ್ಪನಾ ಚಿತ್ರವನ್ನು ನಾನು ಬರೆದೆ. ನನ್ನ ಆ ಕಾರ್ಯ ಎಷ್ಟೊಂದು ಅನುಚಿತವೆಂಬುದು ಈಗ ಅರ್ಥವಾಗುತ್ತಿದೆ. ನನ್ನ ಅವಿವೇಕದ ಫಲವಾದ ಈ ಕಲ್ಪನಾಚಿತ್ರವನ್ನು ಆಧರಿಸಿ ನೀವು ಈ ಅಪವಾದದ ನಿಂದಾಸೌಧವನ್ನು ರಚಿಸಬಾರದೆಂದೂ, ಮೃತರಾದ ಆ ಇಬ್ಬರು ಮಹಿಳೆಯರ ಬಗೆಗೆ ಪರೋಕ್ಷ ವಿನಯದ ಗುರುತಾಗಿ ಚಿತ್ರಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ವಿಚಾರಣೆಯ ಕಡತದಿಂದ ತೆಗೆದುಹಾಕಬೇಕೆಂದೂ ನಾನು ನ್ಯಾಯಪೀಠಕ್ಕೆ ಮನವಿಮಾಡಿಕೊಳ್ಳುತ್ತೇನೆ," ಎಂದು ಬಿನ್ನವಿಸಿಕೊಂಡನು.

ವಿನಯ ಔಚಿತ್ಯಗಳಿಂದ ಕೂಡಿದ ಶೀಲವಂತನ ನುಡಿಗಳಿಂದ ಪ್ರಭಾವಿತರಾಗಿ, ಮಂಚಣ ರುದ್ರಭಟ್ಟರು, "ಶೀಲವಂತಯ್ಯನ ಸಲಹೆ ಉಚಿತವಾಗಿದೆ. ನ್ಯಾಯಪೀಠ ಅದರಂತೆ ನಡೆದು ಈ ಅಪ್ರೀತಿಕರ ಪ್ರಸಂಗವನ್ನು ಕೊನೆಗಾಣಿಸಿದರೆ ಒಳ್ಳೆಯದು," ಎಂದು ಸೂಚಿಸಿದರು.

ಕ್ರಮಿತನು ತಿರಸ್ಕಾರದ ನಗೆ ಬೀರಿ, "ಚಿತ್ರಕಾರ ಶೀಲವಂತಯ್ಯನ ರೂಪ ಯೌವನ ಸವಿನುಡಿಗಳಿಗೆ ಹೆಂಗಸರು ಮರುಳಾಗುವರೆಂದು ಜನ ಹೇಳುತ್ತಾರೆ. ಈಗ ಅವನು ನಿಮ್ಮನ್ನೂ ಮರುಳುಮಾಡಿದಂತಿದೆ. ಈ ಮುಖ್ಯ ಪ್ರಸಂಗವನ್ನು ನಾವು ವಿಚಾರಣೆಯ ಕಡತದಿಂದ ತೆಗೆದುಹಾಕಿದರೆ ಧರ್ಮಾಧಿಕರಣಕ್ಕೆ ಅಪಚಾರಮಾಡಿ ದಂತಾಗುತ್ತದೆ. ಅದಕ್ಕೆ ನಾನು ಒಪ್ಪುವುದಿಲ್ಲ. ಅಲ್ಲದೆ ಸಾಕ್ಷಿ ಹೇಳುವಂತೆ ಈ ಅಪವಾದ ಕಲ್ಪಿತವಲ್ಲ. ದಾಖಲೆಗಳ ಆಧಾರದಿಂದ ನಾನು ಈ ಮಾತು ಹೇಳುತ್ತಿದ್ದೇನೆ."

ಎಂದು ನುಡಿದು ಪಾರ್ಶ್ವದ ಪೀಠದಿಂದ ಕಡತದ ಕಟ್ಟೊಂದನ್ನು ತೆಗೆದು ಮುಂದಿಟ್ಟನು.

ಮಂಚಣ ರುದ್ರಭಟ್ಟರು ಕಡತವನ್ನು ಬಿಚ್ಚಿ ನೋಡುತ್ತಿದ್ದಂತೆ ಕ್ರಮಿತನು ಹೇಳಿದನು : "ಏಳು ವರ್ಷಗಳ ಹಿಂದೆ ಜಗದೇಕಮಲ್ಲರಸರು ಪಟ್ಟಕ್ಕೆ ಬಂದು, ಶರನ್ನವರಾತ್ರಿಯಲ್ಲಿ ಮೊದಲ ಸಾರಿ ಪ್ರಜೆಗಳಿಗೆ ದರ್ಶನಕೊಟ್ಟ ಕೆಲವು ವಾರಗಳ ಮೇಲೆ ಶೀಲವಂತಯ್ಯನ ಅಪಹಾರಕ್ಕೆ ಸಂಬಂಧಿಸಿದ ಅನಾಮಿಕ ಮನವಿಯೊಂದು ಬಿಜ್ಜಳರಾಯರಿಗೆ ಕಳುಹಿಸಲ್ಪಟ್ಟಿತು. ಅದರ ಮೇಲೆ ಪ್ರಭುಗಳ ಆಜ್ಞೆಯಂತೆ ಧರ್ಮಾಧಿಕರಣ ರಹಸ್ಯ ವಿಚಾರಣೆ ನಡೆಸಿ ರಚಿಸಿದ ವರದಿ ಇದು. ಆಗ ಚಾಲುಕ್ಯ ಅರಮನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಯಕರ್ತ ಕರಣಿಕ ದಾಸದಾಸಿಯರು ಅಪಹಾರದ ಸಂಬಂಧದಲ್ಲಿ ಕೊಟ್ಟ ಹೇಳಿಕೆಗಳು ಇದರಲ್ಲಿರುತ್ತವೆ. ರಾಣಿ ಕಾಮೇಶ್ವರೀ ದೇವಿ ಮತ್ತು ಕುಸುಮಾವಳಿ, ಇವರಿಬ್ಬರೂ ಚಿತ್ರಕಾರ ಶೀಲವಂತನ ಪ್ರೇಯಸಿಯರಾಗಿದ್ದರೆಂದು ಅವರು ಹೇಳಿದ್ದಾರೆ. ಶೀಲವಂತ ಆ ಇಬ್ಬರೊಡನೆ ಏಕಾಂತದಲ್ಲಿದ್ದುದನ್ನು ಕಣ್ಣಾರೆ ಕಂಡವರ ಸಾಕ್ಷ್ಯಗಳೂ ಇದರಲ್ಲಿವೆ. ರಾಣಿ ಕಾಮೇಶ್ವರಿಯ ಗೌರವ ರಕ್ಷಣೆಗಾಗಿ ಇದುವರೆಗೆ ವರದಿಯನ್ನು ರಹಸ್ಯವಾಗಿಡಲಾಗಿತ್ತು. ಈಗ ಅದನ್ನು ಬಹಿರಂಗ ಪಡಿಸುವ ಸಮಯ ಒದಗಿದೆ."

ಕ್ರಮಿತನ ಆಪಾದನೆಗಳಿಗೆ ಆಧಾರವಾದ ಎಲ್ಲ ದಾಖಲೆಗಳೂ ಅದರಲ್ಲಿದ್ದವು. ಆಗ ಧರ್ಮಾಧಿಕರಣದ ಮುಖ್ಯಾಧಿಕಾರಿಯಾಗಿದ್ದ ನ್ಯಾಯಶಾಸ್ತ್ರಿ ಕೇಶವ ಫೈಸರು ಸಾಕ್ಷ್ಯಗಳನ್ನು ಅಧಿಕೃತವಾಗಿ ಸಂಗ್ರಹಿಸಿ ವರದಿಯನ್ನು ರಚಿಸಿದ್ದರು.

ದಾಖಲೆಗಳನ್ನು ಪರಿಶೀಲಿಸುವ ಅವಕಾಶ ಶೀಲವಂತನಿಗೂ ಕೊಡಲ್ಪಟ್ಟಿತು. ಅವನು ಎಲ್ಲವನ್ನೂ ನೋಡಿ ಕೊನೆಗೆ, "ಈ ವರದಿಯಲ್ಲಿರುವ ವಿಚಾರಣೆಗಳೆಲ್ಲವೂ ಅಸತ್ಯ, ಕಲ್ಪಿತ. ರಾಜಭಟರ ಒತ್ತಾಯದಿಂದ ಹಿಂಸೆಗೆ ಹೆದರಿ ದಾಸದಾಸಿಯರು ಸುಳ್ಳು ಹೇಳಿಕೆಗಳನ್ನು ಕೊಟ್ಟಿದ್ದಾರೆ. ರಾಣಿ ಕಾಮೇಶ್ವರಿಯ ಮೇಲೆ ಅಪವಾದ ಹೊರೆಸಿ, ಚಾಲುಕ್ಯ ರಾಜವಂಶವನ್ನು ಜನರಿಗೆ ಅಪ್ರಿಯವನ್ನಾಗಿ ಮಾಡುವ ದುರುದ್ದೇಶದಿಂದ ವರದಿ ರಚಿತವಾಗಿದೆ," ಎಂದು ಹೇಳಿದನು.

"ನಿಮ್ಮ ಅಭಿಪ್ರಾಯದ ಕಾರಣ?" –ಕ್ರಮಿತನು ಅಸಮಾಧಾನದಿಂದ ಪ್ರಶ್ನಿಸಿದನು.

"ವರದಿ ನನ್ನ ಅಪಹಾರಕ್ಕೆ ಸಂಬಂಧಿಸಿದ್ದರೂ ಆ ಕೃತ್ಯ ಯಾರಿಂದ ನಡೆಯಿತು ಎಂಬುದನ್ನು ಎಲ್ಲಿಯೂ ಸ್ಪಷ್ಟಪಡಿಸಿಲ್ಲ. ರಾಣಿ ಕಾಮೇಶ್ವರೀದೇವಿಯನ್ನು ಸ್ವೇಚ್ಛಾಚಾರಿಣಿಯಾದ ಕುಲಟೆಯೆಂದು ತೋರಿಸಲು ವರದಿ ಪ್ರಯತ್ನಿಸಿದೆ. ಅದಕ್ಕಾಗಿ ರಾಣಿಯನ್ನು ಕುರಿತು ಆಗ ಪ್ರಚಾರದಲ್ಲಿದ್ದ ಎಲ್ಲ ಅಸತ್ಯ ಅಪವಾದಗಳನ್ನು ವರದಿಯಲ್ಲಿ ಸಂಗ್ರಹಿಸಿದೆ. ದಾಸದಾಸಿಯರ ಹೇಳಿಕೆಗಳು ಪರಸ್ಪರ ವಿರುದ್ಧವೆಂದು

ವಿಚಾರಣೆ ನಡೆಸಿದ ನ್ಯಾಯಶಾಸ್ತ್ರಿ ಕೇಶವ ಫೈಸರೇ ಒಪ್ಪಿಕೊಂಡಿದ್ದಾರೆ. ಅನಾಮಿಕ ಮನವಿಯಲ್ಲಿದ್ದ ಕೆಲವು ಹೆಸರುಗಳನ್ನು ಕಾಡಿಗೆ ಹಚ್ಚಿ ಅಳಿಸಿರುವುದು ಸಂದೇಹಾಸ್ಪದವಾಗಿದೆ."

–ಎಂದು ಶೀಲವಂತ ಉತ್ತರ ಕೊಟ್ಟನು.

"ಅಪಹರಿಸಲ್ಪಟ್ಟವರು ನೀವೇ ಅಲ್ಲವೆ? ಕೃತ್ಯ ಯಾರಿಂದ ಹೇಗೆ ನಡೆಯಿತು ಎಂಬುದನ್ನು ಈಗ ನೀವು ನ್ಯಾಯಪೀಠಕ್ಕೆ ತಿಳಿಸಬಹುದು." –ವಂಚನೆಯ ಸವಿದನಿಯಿಂದ ಕ್ರಮಿತನು ನುಡಿದನು.

ಬಿಜ್ಜಳನ ಸಹೋದರ ಕರ್ಣದೇವರಿಂದ ಅಪಹಾರ ನಡೆಯಿತೆಂದು ಶೀಲವಂತ ನಿಂದಲೇ ಹೇಳಿಸುವುದು ಕ್ರಮಿತನ ಉದ್ದೇಶವಾಗಿತ್ತು.

"ಅಪಹಾರ ನಡೆಸಿದವರಾರು ಎಂಬುದನ್ನು ಆಗ ನಾನು ತಿಳಿಸದಿರಲು ಒಂದು ಮುಖ್ಯ ಕಾರಣವಿತ್ತು. ಈಗಲೂ ಆ ಕಾರಣ ನನ್ನ ಬಾಯಿ ಮುಚ್ಚಿಸಿದೆ,"

–ಎಂದು ಶೀಲವಂತ ಉತ್ತರ ಕೊಟ್ಟನು.

ಕ್ರಮಿತನು ಕೋಪದಿಂದ ಚಡಪಡಿಸಿ, "ಧರ್ಮಾಧಿಕರಣ ಅಧಿಕೃತವಾಗಿ ಅಂಗೀಕರಿಸಿದ ವರದಿಯ ಮೇಲೆ ನೀವು ಅಕಾರಣವಾಗಿ ಅಲ್ಲದ ಸಲ್ಲದ ಆಕ್ಷೇಪ ಮಾಡುತ್ತಿದ್ದೀರಿ. ನ್ಯಾಯಪೀಠ ಅದನ್ನು ತೀವ್ರವಾಗಿ ಗಮನಿಸಬೇಕಾಗುತ್ತದೆ," ಎಂದನು.

–ಶೀಲವಂತನು ಮೌನವಾಗಿದ್ದನು.

ಅಷ್ಟರಲ್ಲಿ ಮಂಚಣನು ಕ್ರಮಿತನನ್ನು ಉದ್ದೇಶಿಸಿ, "ಈಗ ನಮ್ಮ ಮುಂದಿರುವ ವರ್ಣಸಂಕರದ ವ್ಯವಹಾರಕ್ಕೂ ಈ ಘಟನೆಗೂ ಇರುವ ಸಂಬಂಧವೇನು ಎಂಬುದನ್ನು ಇದುವರೆಗೆ ಅಧ್ಯಕ್ಷರು ನ್ಯಾಯಪೀಠಕ್ಕೆ ತಿಳಿಸಿಲ್ಲ. ಈ ವಿಚಾರವನ್ನು ನಾನು ಪುನಃ ಅಧ್ಯಕ್ಷರ ಗಮನಕ್ಕೆ ತರಬೇಕಾಗಿ ಬಂದದ್ದು ವಿಷಾದಕರ," ಎಂದು ಆಕ್ಷೇಪ ಮಾಡಿದನು.

"ಆ ಸಂಬಂಧವೇನು ಎಂಬುದನ್ನು ಈಗ ನೀವು ತಿಳಿಯುವಿರಿ, ಮಂಚಣ ನಾಯಕರೆ. ಇನ್ನು ಹೆಚ್ಚು ಕಾಲ ನಿಮ್ಮನ್ನು ಅಂಧಃಕಾರದಲ್ಲಿರಿಸುವುದಿಲ್ಲ,"

–ಎಂದು ಹೇಳಿ ಕ್ರಮಿತನು ವಿಚಾರಣೆ ಮುಂದುವರೆಸಿ ಶೀಲವಂತನನ್ನು ಪ್ರಶ್ನಿಸಿದನು.

"ನೀವು ಅಜಂತದ ಚೀರಘಟ್ಟಿ ವಿದ್ಯಾಶಾಲೆಗೆ ಹೋದದ್ದು ಯಾವಾಗ?"

"ಅಪಹಾರ ನಡೆದ ಕೆಲವು ದಿನಗಳ ಮೇಲೆ."

"ಅಲ್ಲಿಂದ ಕಲ್ಯಾಣಕ್ಕೆ ಹಿಂದಿರುಗಿದ್ದು?"

"ಐದು ವರ್ಷಗಳ ಅನಂತರ."

"ಆಗ ರಾಣೀ ಕಾಮೇಶ್ವರಿ ಎಲ್ಲಿದ್ದಳು?"

"ನನಗೆ ತಿಳಿಯದು. ತಿಳಿಯಲು ಪ್ರಯತ್ನಿಸಲಿಲ್ಲ."

"ಕದಂಬ ರಾಜಕನ್ಯೆ ಕುಸುಮಾವಳೀ?"

"ಕಲ್ಯಾಣದಲ್ಲಿ."

"ಸ್ವಸ್ಥಳವಾದ ಬನವಾಸಿಯನ್ನು ಬಿಟ್ಟು ಆಕೆ ಕಲ್ಯಾಣಕ್ಕೆ ಬಂದಿರಲು ಕಾರಣ?"

"ನಾನು ಅಜಂತಕ್ಕೆ ಹೋದಮೇಲೆ ಕುಸುಮಾವಳಿ ಶರಣ ಧರ್ಮವನ್ನು ಪರಿಗ್ರಹಿಸಿ ಕಲ್ಯಾಣದಲ್ಲಿ ವಾಸಮಾಡುತ್ತಿದ್ದಳು."

"ನಿಮಗೆ ಈ ವಿಚಾರ ತಿಳಿದದ್ದು ಹೇಗೆ?"

"ಮಹಮನೆಯ ಶರಣರಿಂದ."

"ನೀವು ಅಜಂತದಿಂದ ಬಂದಮೇಲೆ ಕುಸುಮಾವಳಿಯನ್ನು ಆಗಾಗ ನೋಡುತ್ತಿದ್ದಿರಲ್ಲವೆ?"

"ಆಗ ನಾನು ಮಹಮನೆಯ ಸಭಾಮಂಟಪವನ್ನು ಚಿತ್ರಗಳಿಂದ ಅಲಂಕರಿಸುತ್ತಿದ್ದೆ, ಕುಸುಮಾವಳಿ ಆಗಾಗ ಆ ಚಿತ್ರಗಳನ್ನು ನೋಡಲು ಬರುತ್ತಿದ್ದಳು."

"ನಿಮ್ಮ ಪ್ರಣಯ ಸಂಬಂಧ ಆಗ ಪುನರಾರಂಭವಾಯಿತಲ್ಲವೆ!"

"ಇದು ಅಸಂಬದ್ಧ ಪ್ರಶ್ನೆ. ನಾನು ಉತ್ತರ ಕೊಡುವುದಿಲ್ಲ."

ಕ್ರಮಿತನು ಮಿದುನಗೆ ಬೀರಿ, "ನಾನು ಒತ್ತಾಯಪಡಿಸುವುದಿಲ್ಲ. ಚಿತ್ರ ಕಲೆಯ ಅಭ್ಯಾಸಕ್ಕಾಗಿ ಕುಸುಮಾವಳಿ ನಿಮ್ಮ ಹತ್ತಿರ ಬರುತ್ತಿದ್ದುದನ್ನು ಒಪ್ಪಿಕೊಳ್ಳುತ್ತೀರಾ?" ಎಂದು ಕೇಳಿದನು.

"ವಿದ್ಯಾರ್ಥಿಗಳ ಸಂಗಡ ಕುಸುಮಾವಳಿಯೂ ಬರುತ್ತಿದ್ದಳು."

"ನಿಮ್ಮ ಹತ್ತಿರ ಅವಳ ಕಲಾಭ್ಯಾಸ ಎಷ್ಟು ದಿನ ನಡೆಯಿತು?"

"ಸುಮಾರು ಒಂದು ವರ್ಷಕಾಲ."

"ಈ ಅವಧಿಯಲ್ಲಿ ನೀವು ಕುಸುಮಾವಳಿಯನ್ನು ಪ್ರತಿದಿನ ನೋಡುತ್ತಿದ್ದಿರಿ, ಅವಳೊಡನೆ ಹೆಚ್ಚು ಕಾಲ ಕಳೆಯುತ್ತಿದ್ದಿರಿ, ಅಲ್ಲವೆ?"

"ಎಲ್ಲ ವಿದ್ಯಾರ್ಥಿಗಳಂತೆ ಕುಸುಮಾವಳಿಯೂ ಬರುತ್ತಿದ್ದಳು. ಇತರರಂತೆ ಅವಳು ಬರೆದ ಚಿತ್ರಗಳನ್ನೂ ವಿಮರ್ಶಿಸಿ ಸಲಹೆ ಕೊಡುತ್ತಿದ್ದೆ."

"ನಿಮ್ಮ ಹಿಂದಿನ ಪ್ರಣಯ ಜೀವನವನ್ನು ಪುನರಾರಂಭಿಸುವ ಅವಕಾಶ ಆಗ ನಿಮಗೆ ದೊರಕಿರಬೇಕು?"

"ಹಿಂದೆ ಅಂತಹ ಸಂಬಂಧ ಇದ್ದಿದ್ದರಲ್ಲವೆ ಪುನರಾರಂಭವಾಗುವುದು. ನ್ಯಾಯಾಧೀಶರು ಇಂತಹ ಪ್ರಶ್ನೆಗಳನ್ನು ಕೇಳಬಾರದಾಗಿ ಪುನಃ ಬೇಡುತ್ತೇನೆ."

ಕ್ರಮಿತನು ಕೃತಕದ ನಗೆ ಹಾರಿಸಿ, "ಸಂಬಂಧವಿರಲಿ, ಇಲ್ಲದಿರಲಿ, ಶರಣರು ದೇವಗಿರಿಗೆ ಯಾತ್ರೆ ಹೋದಾಗ ನೀವು ಮತ್ತು ಕುಸುಮಾವಳಿ ಸಂಗಡ ಹೋದಿರಿ, ಅಲ್ಲವೆ?" ಎಂದು ಪ್ರಶ್ನಿಸಿದನು.

"ಮೊದಲೆ ಗೊತ್ತಾಗಿದ್ದಂತೆ ದೇವಗಿರಿಯ ಒಂದು ಗುಹಾಲಯದ ಜೀರ್ಣ ಚಿತ್ರಗಳ ಉದ್ಧಾರಕ್ಕಾಗಿ ನಾನು ಅಲ್ಲಿಗೆ ಹೋದದ್ದು. ಯಾತ್ರಾದಳದಲ್ಲಿ ಕುಸುಮಾವಳಿ ಇರುವಳೆಂದು ನನಗೆ ತಿಳಿದಿರಲಿಲ್ಲ."

"ಅದೇನೇ ಇರಲಿ, ದೇವಗಿರಿಯ ಒಂದು ಗುಹೆಯಲ್ಲಿ ಕುಸುಮಾವಳಿ ನಿಮಗಾಗಿ ಬಲಿದಾನವಾದಳು. ಹಾವು ಕಚ್ಚಿ ಸ್ಮೃತಿಭಗ್ನವಾಗಿ ನೀವು ಕಲ್ಯಾಣದ ಆರೋಗ್ಯ ಧಾಮಕ್ಕೆ ಹಿಂದಿರುಗಿದಿರಿ. ಅಲ್ಲಿ ನೀವು ಮಧುವರಸನ ಮಗಳು ಲಾವಣ್ಯವತಿಯನ್ನು ನೋಡಿದಿರಿ, ಅಲ್ಲವೆ?"

ಶೀಲವಂತ ಒಪ್ಪಿಕೊಂಡನು.

"ಲಾವಣ್ಯವತಿಯನ್ನು ನೋಡಿದಾಗ ನಿಮಗೆ ಕುಸುಮಾವಳಿಯು ನೆನಪಾಗಿರಬೇಕಲ್ಲವೆ?" –ಈ ಪ್ರಶ್ನೆಯಿಂದ ಸ್ತಂಭಿತನಾದ ಶೀಲವಂತ ತಟ್ಟನೆ ಉತ್ತರ ಕೊಡಲಿಲ್ಲ.

ಕ್ರಮಿತನು ಮುಂದುವರಿದು ಹೇಳಿದನು : "ಲಾವಣ್ಯವತಿ ಕುಸುಮಾವಳಿಯರಿಬ್ಬರೂ ಸಮಾನ ರೂಪವತಿಯರು. ಆಕಾರೇಂಗಿತಗಳಲ್ಲಿ ಅವರಿಗೆ ಹೆಚ್ಚು ಹೋಲಿಕೆಯಿದ್ದಿತು. ಒಂದೇ ಮಾದರಿಯ ಉಡಿಗೆ ತೊಡಿಗೆಗಳನ್ನು ಧರಿಸಿದಾಗ ಅವರಲ್ಲಿ ಲಾವಣ್ಯವತಿ ಯಾರು, ಕುಸುಮಾವಳಿ ಯಾರು ಎಂದು ಗುರುತುಹಿಡಿಯಲು ಪರಿಚಿತರಿಗೂ ಕಷ್ಟವಾಗುತ್ತಿತ್ತು, ಎಂದು ಹೇಳುವುದನ್ನು ಕೇಳಿದ್ದೇನೆ. ಇದು ನಿಜವೆ?"

"ಇದ್ದ ಅಲ್ಪ ಹೋಲಿಕೆಯನ್ನು ಜನ ಅತಿಶಯವಾಗಿ ಹೇಳುತ್ತಿದ್ದರು. ಅವರಿಬ್ಬರೂ ಒಂದೇ ಮಾದರಿಯ ಉಡುಪು ಧರಿಸಿದ್ದುದನ್ನು ನಾನು ಯಾವಾಗಲೂ ನೋಡಿಲ್ಲ."

"ಹೋಲಿಕೆ ಇತ್ತೆಂಬುದನ್ನು ನೀವು ಒಪ್ಪುವಿರಲ್ಲವೆ?"

"ಒಪ್ಪುತ್ತೇನೆ."

"ಆರೋಗ್ಯಧಾಮದಲ್ಲಿ ನೀವು ಮೊದಲಸಾರಿ ಲಾವಣ್ಯವತಿಯನ್ನು ನೋಡಿದಾಗ ನಿಮಗೆ ಕುಸುಮಾವಳಿ ಮೃತಳಾದ ವಿಚಾರ ತಿಳಿದಿರಲಿಲ್ಲ. ನೀವು

ಲಾವಣ್ಯವತಿಯನ್ನು ಕುಸುಮಾವಳಿಯೆಂದೇ ಭಾವಿಸಿದಿರಿ, ಅಲ್ಲವೆ?"

"ಸ್ಮೃತಿಭಗ್ನದ ಕಾರಣದಿಂದ ಆಗ ನನಗೆ ಹಿಂದೆ ನಡೆದುದೆಲ್ಲ ಮರೆತುಹೋಗಿತ್ತು. ಅದರಿಂದ ನಾನು ತಪ್ಪು ಮಾಡಿದೆ. ಮೋಳಿಗೆ ಮಾರಯ್ಯನವರನ್ನು ಕಂಡಾಗ ನನ್ನ ಸ್ಮೃತಿ ಪುನಃ ಎಚ್ಚೆತ್ತಿತ್ತು. ನನ್ನಿಂದಾದ ತಪ್ಪನ್ನು ತಿಳಿದೆ."

"ಇದನ್ನು ಯಾರೂ ನಂಬುವುದಿಲ್ಲ. ವಾಸ್ತವದಲ್ಲಿ ನಡೆದುದನ್ನು ನಾನು ಹೇಳುತ್ತೇನೆ. ಕುಸುಮಾವಳಿಯ ಮರಣದಿಂದ ಆದ ಅಭಾವವನ್ನು ನೀವು ಲಾವಣ್ಯವತಿಯಿಂದ ತೀರಿಸಿಕೊಳ್ಳಲು ಇಚ್ಛಿಸಿದಿರಿ. ಕುಸುಮಾವಳಿಯ ಮೇಲಿನ ನಿಮ್ಮ ಪ್ರೇಮ ಲಾವಣ್ಯವತಿಯ ಕಡೆಗೆ ಹರಿಯಿತು. ಪ್ರವಾಹಕ್ಕೆ ಸಿಕ್ಕ ಎಳೆ ಲತೆಯಂತೆ ಲಾವಣ್ಯವತಿ ಅದರಲ್ಲಿ ತೇಲಿಹೋದಳು."

ಶೀಲವಂತ ವಿಭ್ರಾಂತನಂತೆ ಥರಥರಿಸಿ ಚೀರಾಡಿ, "ನೀವು ಹೇಳಿದಂತೆ ಯಾವುದೂ ನಡೆದಿಲ್ಲ. ಇಬ್ಬರಿಗೂ ಇದ್ದ ಹೋಲಿಕೆಯ ಮೇಲಿಂದ ನೀವು ಈ ಅಸಂಗತಗಳನ್ನು ಕಲ್ಪಿಸಿಕೊಳ್ಳುತ್ತಿದ್ದೀರಿ!" ಎಂದನು.

ಕ್ರಮಿತನು ಹಠಾತ್ತನೆ ಉತ್ತೇಜಿತನಾಗಿ ಕುಹಕದ ಚುಚ್ಚುದನಿಯಿಂದ

"ಕಾಮೇಶ್ವರಿ ಕುಸುಮಾವಳಿಯರಂತಹ ವಿದಗ್ಧ ರಾಜಮಹಿಳೆಯರನ್ನು ಮರುಳುಗೊಳಿಸಿದ ನಿನ್ನ ರೂಪ ಯೌವನ ರಸಿಕತೆಗಳೆದುರಿಗೆ ಲಾವಣ್ಯವತಿಯಂತಹ ಗೃಹಸ್ಥ ಹೆಣ್ಣು ಉಳಿಯುವುದು ಸಾಧ್ಯವೇ? ಎರಡೇ ದಿನಗಳಲ್ಲಿ ಅವಳು ನಿನ್ನ ಕೈಗೊಂಬೆಯಾದಳು. ಮಹಮನೆಯ ಆರೋಗ್ಯಧಾಮ ನಿನ್ನ ಪ್ರೇಮಲೀಲೆಗೆ ಅನುವಾದ ಸ್ಥಳವಲ್ಲವೆಂದು ತಿಳಿದು ನೀನು ಅವಳನ್ನು ರಥದಲ್ಲಿ ನಗರದ ಹೊರಗಿನ ಒಂದು ರಹಸ್ಯ ಪ್ರದೇಶಕ್ಕೆ ಕರೆದುಕೊಂಡುಹೋಗಿ ಶೀಲಭಂಗ ಮಾಡಿದೆ. ಈ ಎಲ್ಲ ವಿಚಾರಗಳು ನ್ಯಾಯಪೀಠಕ್ಕೆ ತಿಳಿದಿದೆ," ಎಂದು ಗಜರಿ ನುಡಿದನು.

ಶೀಲವಂತ ಅಸಹನೆಯಿಂದ ಬೊಬ್ಬಿಟ್ಟನು. "ನಾವು ರಥದಲ್ಲಿ ಮೋಳಿಗೆ ಮಾರಯ್ಯನವರನ್ನು ನೋಡಲು ಹೋಗಿದ್ದುದು ನಿಜ. ನೀವು ಅದಕ್ಕೆ ಅಪಾರ್ಥ ಕಲ್ಪಿಸುತ್ತಿದ್ದೀರಿ," ಎಂದು ದೊಡ್ಡ ದನಿಯಿಂದ ಹೇಳಿದನು.

"ಈ ಅಕ್ರಮಕೃತ್ಯ ನಡೆದದ್ದು ನೀವು ಬಾಂಧವರ ಓಣಿಯಿಂದ ಹಿಂದಿರುಗುತ್ತಿದ್ದಾಗ, ಮಧುವರಸನಿಗೆ ಈ ವಿಚಾರ ತಿಳಿದು ಬೇರೆ ಮಾರ್ಗವಿಲ್ಲದೆ ಮಗಳನ್ನು ನಿನಗೆ ಕೊಟ್ಟು ಮದುವೆ ಮಾಡಲು ಒಪ್ಪಿದನು."

—ಕ್ರಮಿತನ ಮೊನೆ ಮಾತು ಅಪಾಯದ ಸ್ಥಳವನ್ನು ಪುನಃ ಚೂರಿಯಿಂದ ಚುಚ್ಚಿದಂತೆ ಶೀಲವಂತನ ಎದೆಯನ್ನಿರಿಯಿತು. ಸ್ತಬ್ಧನಾಗಿ ಅವನು ಕೆಕ್ಕರಿಸಿ

ನೋಡುತ್ತ ನಿಂತನು.

ಕ್ರಮಿತನು ವಿಕಟವಾಗಿ ನಕ್ಕು, "ಅಂತ್ಯಜನಾದ ನೀನು ನಿನ್ನ ರೂಪ ಯೌವನ ಅಭಿಜ್ಞತೆಗಳಿಂದ ಉತ್ತಮ ವರ್ಣದ ಕುಲೀನ ಸ್ತ್ರೀಯರನ್ನು ಆಕರ್ಷಿಸಿ, ಅವರ ಶೀಲ ಭಂಗಮಾಡಿ ವರ್ಣಸಂಕರದ ಈ ವ್ಯವಹಾರದಲ್ಲಿ ಪ್ರಮುಖ ಪಾತ್ರ ವಹಿಸಿರುವೆ. ಚಾಲುಕ್ಯ ರಾಜ್ಯದಲ್ಲಿ ವರ್ಣಾಶ್ರಮಗಳ ರಕ್ಷಣೆಗಾಗಿ ಪಣತೊಟ್ಟಿರುವ ಸರ್ವಾಧಿಕಾರಿ ಬಿಜ್ಜಳರಾಯರು ನಿನ್ನನ್ನು ಬಂಧನದಲ್ಲಿಟ್ಟು, ನಿನ್ನಿಂದಾದ ಈ ಘೋರ ಅಪರಾಧಗಳ ವಿಚಾರಣೆ ನಡೆಸಿ ಶಿಕ್ಷೆ ವಿಧಿಸಲು ಆಜ್ಞೆ ಮಾಡಿದ್ದಾರೆ," ಎಂದು ಹೇಳಿ ಪಾರ್ಶ್ವದ ಪೀಠದ ಮೇಲಿದ್ದ ಆಜ್ಞಾಪತ್ರವನ್ನು ತೆಗೆದು ಧರ್ಮಾಧಿಕರಣದ ಕಾರ್ಯಕರ್ತನಿಗೆ ಕೊಟ್ಟನು.

ಕಾರ್ಯಕರ್ತನು ಶೀಲವಂತನನ್ನು ಬಂಧಿಸುವಂತೆ ಭಟರಿಗೆ ಆಜ್ಞೆ ಮಾಡಿದನು. ಭಟರು ಶೀಲವಂತನ ಇಕ್ಕೆಲಗಳಲ್ಲಿ ನಿಂತು ತೋಳುಗಳನ್ನು ಹಿಡಿದರು.

ಕ್ರಮಿತನ ಶರವೇಗದ ಕಾರ್ಯಾಚರಣೆ ಶೀಲವಂತನಂತೆ ಮಂಚಣ ರುದ್ರ ಭಟ್ಟರನ್ನೂ ದಂಗುಗೊಳಿಸಿತು.

ಕೆಲವು ಕ್ಷಣಗಳ ಅನಂತರ ಮಂಚಣನು ಶೀಲವಂತನ ಮೇಲೆ ಆಶ್ವಾಸನೆಯ ದೃಷ್ಟಿ ಬೀರಿ, ಕ್ರಮಿತನ ಕಡೆ ತಿರುಗಿ, "ನಿಮ್ಮ ಮಾಯಾಜೋಳಿಗೆಯಲ್ಲಿ ಇರುವ ಎಲ್ಲ ಆಜ್ಞಾಪತ್ರಗಳನ್ನೂ ಹೊರಗೆ ತೆಗೆಯಿರಿ, ನಾರಣಕ್ರಮಿತರೆ. ನೀವು ಉದ್ದೇಶಿಸಿರುವ ಬಂಧನಗಳೆಲ್ಲ ಈಗಲೇ ನಡೆದುಹೋಗಲಿ," ಎಂದು ಕಟಕಿಯಾಡಿ ನಕ್ಕನು.

ವೃದ್ಧಮಂತ್ರಿಯ ಹಾಸ್ಯಪ್ರವೃತ್ತಿಯನ್ನು ಕಂಡು ಆಗಿನ ಪರಿಸ್ಥಿತಿಯಲ್ಲಿಯೂ ಶೀಲವಂತನ ಮುಖದಲ್ಲಿ ಮಿದುನಗೆ ಮೂಡಿತು. ನ್ಯಾಯಪೀಠಕ್ಕೆ ವಂದಿಸಿ ಅವನು, "ನಾನು ಸೆರೆಮನೆಗೆ ಹೋಗುವ ಮೊದಲು ಒಂದು ಹೇಳಿಕೆ ಕೊಡಲು ಇಚ್ಛಿಸುತ್ತೇನೆ," ಎಂದು ಬಿನ್ನವಿಸಿಕೊಂಡನು.

"ಅನುಮತಿ ಕೊಡುವುದೇ? ನಿರಾಕರಿಸುವುದೇ?" ಎಂದು ಕ್ರಮಿತನು ಯೋಚಿಸುತ್ತಿದ್ದಂತೆ ಮಂಚಣನು, "ಬಂಧನಾನಂತರ ಹೇಳಿಕೆ ಕೊಡುವುದು ನಿಮ್ಮ ಹಕ್ಕು, ಶೀಲವಂತಯ್ಯ. ನ್ಯಾಯಪೀಠಕ್ಕೆ ಅದನ್ನು ನಿರಾಕರಿಸುವ ಅಧಿಕಾರವಿಲ್ಲ," ಎಂದು ಹೇಳಿ ಕ್ರಮಿತನ ಬಾಯಿ ಮುಚ್ಚಿಸಿದನು.

"ಆಗಬಹುದು," ಎಂದು ಶ್ರೀಮದ್ಗಾಂಭೀರ್ಯದಿಂದ ಕ್ರಮಿತನು ಸಲಹೆಗೆ ಒಪ್ಪಿದನು.

ಶೀಲವಂತ ಪುನಃ ನ್ಯಾಯಪೀಠಕ್ಕೆ ವಂದಿಸಿ ಹೇಳಿದನು :

"ನಾನು ಸಾಕ್ಷಿ ಕೊಡಲು ಬಂದಾಗ ಸೆರೆಮನೆಯ ಶೃಂಖಲೆ ನನಗಾಗಿ ಇಲ್ಲಿ

ಕಾದಿದೆಯೆಂದು ನೆನೆಸಿರಲಿಲ್ಲ. ನನಗಾದ ಈ ಅನುಭವ ಬದುಕಿನ ಅಸ್ಥಿರ ಅನಿಶ್ಚಿತತೆಗಳಿಗೆ ನಿದರ್ಶನ. ಬದುಕಿನ ವಿಭವ ಪರಾಭವಗಳನ್ನು ಶಿವನ ಕೊಡುಗೆಯೆಂದು ತಲೆಬಾಗಿ ಮಸ್ತಕದಲ್ಲಿ ಧರಿಸಬೇಕೆಂದು ಶರಣಧರ್ಮದ ಮೊದಲ ಪಾಠ. ಮರ್ತ್ಯದಲ್ಲಿ ರಾಜನು ಆ ಜಗನ್ನಿಯಂತ್ರಣ ತತ್ವದ ಪ್ರತಿಷ್ಠಿತ ಪ್ರತಿನಿಧಿ. ರಾಜಾಜ್ಞೆಯನ್ನು ನಾನು ಶಿವನ ಆಜ್ಞೆಯೆಂದೇ ತಿಳಿದು ಮಸ್ತಕದಲ್ಲಿ ತಳೆದು ಮನ್ನಿಸುತ್ತೇನೆ.

ಆಜ್ಞಾಪತ್ರದಲ್ಲಿ ಆಪಾದಿಸಿರುವಂತೆ ನನ್ನಿಂದ ಯಾವ ಅಪರಾಧವೂ ನಡೆದಿರುವುದಿಲ್ಲ. ಶಿವನು ನನಗೆ ಕೊಟ್ಟ ಆಕಾರೇಂಗಿತಗಳನ್ನು, ಗುರುಕರುಣೆಯಿಂದ ಲಭಿಸಿದ ಕಿಂಚಿದಭಿಜ್ಞತೆಯನ್ನು, ಸ್ತ್ರೀಪುರುಷರನ್ನು ಆಕರ್ಷಿಸುವ ಅಲ್ಪ ಪ್ರಯೋಜನಕ್ಕಾಗಿ ನಾನು ಯಾವಾಗಲೂ ಉಪಯೋಗಿಸಿಲ್ಲ. ಕಾಮೇಶ್ವರಿ ಕುಸುಮಾವಳಿಯರು ಪ್ರಬುದ್ಧ ಶೀಲವಂತ ಸಭ್ಯ ಮಹಿಳೆಯರಾಗಿದ್ದರು. ಸ್ವರ್ಗಸ್ಥರಾದ ಅವರ ಮೇಲೆ ನನ್ನ ಹೆಸರಿನಿಂದ ಈ ಅಪಪ್ರಚಾರ ನಡೆಯುವುದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ.

"ಲಾವಣ್ಯವತಿ ನನ್ನ ವಿವಾಹಿತ ಪತ್ನಿ. ಅವಳನ್ನು ನಾನು ಪ್ರೀತಿಸುವುದು ಧರ್ಮವಿರುದ್ಧವಲ್ಲದ ಸಹಜವರ್ತನೆ. ಮದುವೆಯಾಗುವ ಮೊದಲು ನಾನು ವಂಚನೆಯಿಂದ ಅವಳ ಶೀಲಭಂಗ ಮಾಡಿದೆನೆಂದು ಅಪಾದಿಸುವುದು ದಾನವೀವರ್ತನೆಯ ಅಧರ್ಮ ಲಜ್ಜಾಹೀನ ನಿದರ್ಶನ. ಅದು ಅಸತ್ಯವೂ ನಿರಾಧಾರವೂ ಆದುದೆಂದು ನ್ಯಾಯಪೀಠದ ಮುಂದೆ ಪ್ರತಿಜ್ಞೆ ಮಾಡಿ ಹೇಳುತ್ತೇನೆ. ಆಜ್ಞಾಪತ್ರದಿಂದ ಆ ಆಪಾದನೆಯನ್ನು ತೆಗೆದುಹಾಕಿ ಚಾಲುಕ್ಯ ಧರ್ಮಾಧಿಕರಣದ ಧರ್ಮ ಸತ್ಯ ನಿಷ್ಠೆಗಳನ್ನು ರಕ್ಷಿಸಬೇಕಾಗಿ ನನ್ನ ಪ್ರಾರ್ಥನೆ."

ಹೇಳಿಕೆ ಮುಗಿದು ಭಟರು ಶೀಲವಂತನನ್ನು ಸೆರೆಮನೆಗೆ ಕರೆದುಕೊಂಡು ಹೋದಾಗ ಘೋರ ಭೀಭತ್ಸಕೃತ್ಯವೊಂದನ್ನು ಕಂಡು ದಿಗ್ಭ್ರಮೆಗೊಂಡಂತೆ ಕೆಲವು ಕ್ಷಣಗಳು ನ್ಯಾಯಾಲಯದಲ್ಲಿ ಸ್ಮಶಾನಶಾಂತಿ ನೆಲೆಸಿತು. ಬಳಿಕ ಕ್ರಮಿತನು ಆ ಗಭೀರತೆಯನ್ನು ಭೇದಿಸುವಂತೆ ವಿಕಟವಾಗಿ ನಕ್ಕು,

"ಈ ಎರಡು ದಿನಗಳೂ ನ್ಯಾಯಪೀಠ ತನ್ನ ಹೊಣೆಯನ್ನು ದಕ್ಷತೆಯಿಂದ ನಿರ್ವಹಿಸಿತೆಂಬುದು ನಮಗೆಲ್ಲ ಅಭಿಮಾನದ ವಿಚಾರ. ಈ ಸಂತೋಷ ಸಮಯದಲ್ಲಿ ನಿಮ್ಮ ಮೌನಚಿಂತೆ ನನ್ನನ್ನು ಅಚ್ಚರಿಗೊಳಿಸಿದೆ," ಎಂದು ಮೂದಲಿಸಿ ನುಡಿದನು.

ಕರಣಿಕ ಕಾರ್ಯಕರ್ತರು ಭೀತಿಯಿಂದ ತಲೆಬಾಗಿದರು. ರುದ್ರಭಟ್ಟ ಆತಂಕದಿಂದ ಮಂಚಣನ ಮುಖ ನೋಡಿದನು. ನ್ಯಾಯಾಲಯದಲ್ಲಿ ಮಸಗಿದ್ದ

ವಿಷಣ್ಣತೆಯ ಭಾರವನ್ನು ಕೆಳಗಿಳಿಸುವಂತೆ ಮಂಚಣನು ತಲೆಕೊಡವಿ, ಕ್ರಮಿತನ ಕಡೆ ತಿರುಗಿ,

"ಮಧುವರಸನಂತಹ ದಕ್ಷ ಮಂತ್ರಿಯನ್ನು, ಹರಳಯ್ಯನಂತಹ ನಿರುಪದ್ರವಿ ವೃದ್ಧನನ್ನು, ಶೀಲವಂತನಂತಹ ಅಭಿಜ್ಞ ಕಲಾಕಾರನನ್ನು ವರ್ಣಸಂಕರದ ಸಾಮಾನ್ಯ ಆಪಾದನೆಯ ಮೇಲೆ ವಿಚಾರಣೆಯಿಲ್ಲದೆ ಸೆರೆಮನೆಗೆ ಕಳುಹಿಸಿದ್ದು ನಮಗೆ ಅಭಿಮಾನಾಸ್ಪದವಾದ ವಿಷಯವಲ್ಲ, ನಾರಣಕ್ರಮಿತರೆ. ಚಾಲುಕ್ಯ ಜನ ಸಮುದಾಯ, ಭವಿಷ್ಯ ಇತಿಹಾಸಕಾರರು, ಈ ಅಕೃತ್ಯಕ್ಕಾಗಿ ನಮ್ಮನ್ನು ಶಪಿಸುವುದು ಖಂಡಿತ. ಅದಕ್ಕಾಗಿ ಚಿಂತಿಸುತ್ತಿದ್ದೇನೆ," ಎಂದು ಗಂಭೀರವಾಗಿ ನುಡಿದನು.

ರುದ್ರಭಟ್ಟನು ಮೌನ. ನಿರ್ಲಿಪ್ತತೆಯ ಮುಖವಾಡ, ಅವನ ಮನಸ್ಸಿನ ತಳಮಳವನ್ನು ಮರೆಮಾಡಿತ್ತು.

"ನಮ್ಮ ಕಾರ್ಯದಕ್ಷತೆಯಿಂದ ಸರ್ವಾಧಿಕಾರಿ ಬಿಜ್ಜಳರಾಯರು ಸುಪ್ರೀತರಾಗುವರು, ಮಂಚಣನಾಯಕರೆ. ಜನಸಮುದಾಯದ ಶಾಪ, ಇತಿಹಾಸಕಾರರ ಏಕಪಕ್ಷೀಯ ಟೀಕೆಗಳು, ನಮ್ಮನ್ನೇನೂ ಮಾಡಲಾರವು." ದರ್ಪ ದುರಭಿಮಾನಗಳಿಂದ ಕ್ರಮಿತನು ಹೇಳಿದನು.

"ಹಾಗಾದರೆ, 'ಸರ್ವಾಧಿಕಾರಿ ದೇವತಾ ಸುಪ್ರೀತಾ ಸುಪ್ರಸನ್ನಾ ವರದಾ ಭವಂತು' ಎಂಬ ಅನುಕೂಲಸಿಂಧು ಸೂತ್ರವನ್ನು ಧರ್ಮಾಧಿಕರಣದ ಗೋಡೆಗಳ ಮೇಲೆ ಬರೆಸಿಬಿಡಿ!" ಎಂದು ಕಟಕಿಯಾಡಿ ನಕ್ಕನು ಮಂಚಣ.

ನ್ಯಾಯಾಲಯದ ಕರಣಿಕ ಕಾರ್ಯಕರ್ತರೂ ನಕ್ಕರು.

ಕ್ರಮಿತನು ದುರದುರ ಸುತ್ತ ನೋಡಿ, "ಇಂದಿನ ನಿರೂಪದಂತೆ ಸರ್ವಾಧಿಕಾರಿಗಳು ನಾಳೆಯೇ ಕಲ್ಯಾಣಕ್ಕೆ ಬರುತ್ತಾರೆ, ಮಂಚಣನಾಯಕರೆ. ನಿಮ್ಮ ಸಲಹೆಗೆ ಅವರು ಒಪ್ಪಿದರೆ ಬರೆಸಲು ನನ್ನ ಅಡ್ಡಿಯಿಲ್ಲ," ಎಂದು ಹೇಳಿ ತಟ್ಟನೆದ್ದು ನ್ಯಾಯಾಲಯದಿಂದ ನಿಷ್ಕ್ರಮಿಸಿದನು. ಮಂಚಣ ಸುಯ್ಗರೆದು ರುದ್ರಭಟ್ಟನ ಮುಖ ನೋಡಿದನು. ರುದ್ರಭಟ್ಟ ಅರ್ಥಗರ್ಭಿತವಾಗಿ ನಕ್ಕನು.

* * *

ಮಂಗಳವೇಡೆಯಿಂದ ಹೊರಟ ಬಿಜ್ಜಳನು ಅವಸರದಿಂದ ಪ್ರಯಾಣಮಾಡಿ ಹತ್ತು ದಿನಗಳ ದಾರಿಯನ್ನು ಐದೇ ದಿನದಲ್ಲಿ ಕ್ರಮಿಸಿ ನಿರೀಕ್ಷಿಸಿದ್ದುದಕ್ಕಿಂತ ಒಂದು ದಿನ ಮೊದಲೇ ಕಲ್ಯಾಣಕ್ಕೆ ಬಂದಿದ್ದನು. ಈ ಅವಸರಕ್ಕೆ ಕಾರಣಗಳಿಲ್ಲದಿರಲಿಲ್ಲ.

ತನ್ನ ವಿರೋಧಿ ಸಾಮಂತರು ಸಿಂಧನಾಡಿನ ರಾಜಧಾನಿಯಲ್ಲಿ ನಡೆಸಿದ ರಹಸ್ಯ ಸಭೆಯಲ್ಲಿ ಓರಂಗಲ್ಲಿನ ಪ್ರತಾಪರುದ್ರದೇವನು ಭಾಗವಹಿಸಿದ್ದನೆಂಬ ಸುದ್ದಿ

ಬಿಜ್ಜಳನಿಗೆ ಮಂಗಳವೇಡೆಯಲ್ಲೇ ತಲಪಿತ್ತು. ಸಿಂಧನಾಡಿನ ರಾಚಮಲ್ಲನೊಡನೆ ಪ್ರತಾಪರುದ್ರನು ಸೇರಿದರೆ ದಕ್ಷಿಣದಲ್ಲಿ ದೊಡ್ಡ ಸೈನ್ಯವನ್ನೇ ಎದುರಿಸಬೇಕಾಗುವುದು. ಹಿಂದಿನಿಂದ ಕಲಚೂರ್ಯರ ಮೇಲೆ ಹಗೆ ಸಾಧಿಸುತ್ತಿರುವ ದೋರಸಮುದ್ರದ ಹೊಯ್ಸಳರು, ಗೋವೆಯ ಕದಂಬರು ಶತೃಗಳ ಕಡೆ ಸೇರುವರು. ಅಗ್ನಿ ಅಪಘಾತದಲ್ಲಿ ತನ್ನ ಸಹೋದರಿ ಕಾಮೇಶ್ವರಿ ಮಡಿದ ಸುದ್ದಿ ಕೇಳಿದಾಗ ಕರ್ಹಾಡದ ವಿಜಯಾರ್ಕನೂ ವಿರೋಧಿಯಾಗಬಹುದು. ಪಶ್ಚಿಮದಲ್ಲಿ ದೇವಗಿರಿಯ ಯಾದವರು ಆಗಲೇ ಪ್ರತಿಕಕ್ಷಿಗಳಾಗಿದ್ದಾರೆ. ದಕ್ಷಿಣ ಪೂರ್ವ ಪಶ್ಚಿಮ, ಈ ಮೂರು ದಿಕ್ಕುಗಳಿಂದ ಒಂದೇ ಕಾಲದಲ್ಲಿ ಆಕ್ರಮಣ ನಡೆದರೆ ಚಾಲುಕ್ಯ ರಾಜ್ಯದ ಅಸ್ತಿತ್ವವೇ ಸಂದೇಹಗ್ರಸ್ತವಾಗುವುದು. ಚಾಲುಕ್ಯ ರಾಜ್ಯವನ್ನು ಕಬಳಿಸಿ, ಕಲಚೂರ್ಯ ಪ್ರಭುತ್ವವನ್ನು ಸ್ಥಾಪಿಸಲು ತಾನು ಮಾಡಿದ ಶ್ರಮವೆಲ್ಲ, ಸೂರ್ಯನ ಬೆಳಕಿನೆದುರು ಮುಂಜಾವಿನ ಮಂಜಿನಂತೆ ಒಂದೇ ಗಳಿಗೆಯಲ್ಲಿ ಕರಗಿ ಹೋಗುವುದು ಅಸಂಭವವಲ್ಲವೆಂದು ಬಿಜ್ಜಳನು ತಿಳಿದಿದ್ದನು.

ಈ ವಿಪತ್ಕಾರೀ ಆತಂಕವನ್ನು ಎದುರಿಸುವುದು ಹೇಗೆ ಎಂದು ಯೋಚಿಸುತ್ತ ಅವನು, ಕಲ್ಯಾಣಕ್ಕೆ ಹಿಂದಿರುಗಿದ ಆ ರಾತ್ರಿ, ಕಲಚೂರ್ಯ ಅರಮನೆಯ ವಿಶ್ರಾಂತಿ ಗೃಹದಲ್ಲಿ ಕುಳಿತಿದ್ದಾಗ ನಾರಣಕ್ರಮಿತನು ಅಲ್ಲಿಗೆ ಬಂದನು. ಬೀಸಣಿಗೆ ಪಾನಪಾತ್ರೆಗಳನ್ನು ಹಿಡಿದು ಸೇವೆಗಾಗಿ ನಿಂತಿದ್ದ ಪಡಿಯರತಿಯರು ರಾಜಪುರೋಹಿತನನ್ನು ಕಂಡು ಹಿಂದಕ್ಕೆ ಸರಿದರು.

“ನಮ್ಮ ಮಂತ್ರಾಲೋಚನೆ ಮುಗಿಯುವವರೆಗೆ ಯಾರನ್ನೂ ಒಳಗೆ ಬಿಡಲಾಗದು,” –ಎಂದು ದೂರದಲ್ಲಿ ಕೈಕಟ್ಟಿ ನಿಂತಿದ್ದ ಹೆಗ್ಗಡೆಗೆ ಆಜ್ಞೆ ಮಾಡಿ ಬಿಜ್ಜಳನು ಕ್ರಮಿತನಿಗೆ ಕುಳಿತುಕೊಳ್ಳುವಂತೆ ಹೇಳಿದನು.

ಬಿಜ್ಜಳನು ನಗರಕ್ಕೆ ಬಂದಾಗಿನಿಂದ ಸಮೀಪದಲ್ಲಿಯೇ ಇದ್ದರೂ ಒಡೆಯರನ್ನು ಏಕಾಂತದಲ್ಲಿ ನೋಡುವ ಅವಕಾಶ ಇದುವರೆಗೆ ರಾಜಪುರೋಹಿತನಿಗೂ ದೊರಕಿರಲಿಲ್ಲ. ‘ಕಾಮೇಶ್ವರಿಯ ಮರಣದಿಂದ ಪ್ರಭುಗಳ ಮೇಲಾದ ಪರಿಣಾಮವೇನು? ಇನ್ನೂ ಅವರು ಉದ್ವಿಗ್ನರಾಗಿರುವರೆ?’ ಎಂದು ಯೋಚಿಸುತ್ತ ಕ್ರಮಿತನು ಮೌನವಾಗಿ ಕುಳಿತಿದ್ದಂತೆ ಬಿಜ್ಜಳನು,

“ನ್ಯಾಯಪೀಠದ ವಿಚಾರಣೆ ಯಾವ ಘಟ್ಟದಲ್ಲಿದೆ? ನಾನು ಹೇಳಿದಂತೆ ಕಾರ್ಯ ನಡೆಸಿದಿರಾ ?” ಎಂದು ತಾನೇ ಪ್ರಶ್ನಿಸಿದನು.

ನ್ಯಾಯಪೀಠದ ಕಾರ್ಯಕಲಾಪಗಳನ್ನು ಕ್ರಮಿತನು ವಿವರಿಸುತ್ತಿದ್ದಂತೆ ಬಿಜ್ಜಳನ ಮುಖ ಗಂಭೀರವಾಯಿತು. ಹುಬ್ಬುಗಳು ಕುಂಚಿತವಾದವು. ಅಸಹನೆಯಿಂದ ಅವನು,

"ನೀವು ಶುದ್ಧ ಕರ್ಮಠರು, ನಾರಣಕ್ರಮಿತರೆ. ವಿಧಿ ನಿಷೇಧಗಳ ನಿರರ್ಥಕ ಚರ್ಚೆಯಲ್ಲಿ ಎರಡು ದಿನಗಳನ್ನು ವ್ಯರ್ಥಮಾಡಿದಿರಿ. ನಾನು ನ್ಯಾಯಪೀಠದಿಂದ ಅಪೇಕ್ಷಿಸಿದ್ದು ಅಪರಾಧಿಗಳ ದಂಡನೆಯನ್ನು, ಕಾಲಹರಣದ ವಿಚಾರಣೆಯನ್ನಲ್ಲ." ಎಂದು ಒತ್ತಿ ಹೇಳಿದನು.

ಅವಕಾಶ ದೊರೆತು ಕ್ರಮಿತನು, "ಪ್ರಭುಗಳ ಆಜ್ಞೆಯಂತೆ ನಡೆಯಲು ಯಾವಾಗಲೂ ಸಿದ್ಧವಾಗಿದೆ ನ್ಯಾಯಪೀಠ. ಆದರೆ ಮಂಚಣನವರು ಹೆಜ್ಜೆ ಹೆಜ್ಜೆಗೂ ಅಡ್ಡಿಯಾಗಿದ್ದಾರೆ," ಎಂದನು.

"ಅಡ್ಡಿಪಡಿಸುವ ಕಾರಣ?"

"ವರ್ಣಸಂಕರ ನಡೆದಿದೆಯೇ ಇಲ್ಲವೇ ಎಂಬುದನ್ನು ನಿರ್ಧರಿಸಲು ಕುಲವೃದ್ಧರ, ಮಠಾಧಿಪತಿಗಳ ಸಾಕ್ಷ್ಯ ತೆಗೆದುಕೊಳ್ಳಬೇಕೆಂದು ಅವರು ಹೇಳುತ್ತಾರೆ."

"ವರ್ಣಸಂಕರ ನಡೆದಿದೆಯೆಂದು ನಿರ್ಧರಿಸಿ ನಾನು ಆಜ್ಞೆ ಮಾಡಿದ ಮೇಲೆ ಬೇರೆ ಸಾಕ್ಷ್ಯದ ಅಗತ್ಯವಿಲ್ಲ. ಆಜ್ಞೆಯಂತೆ ದಂಡನೆ ವಿಧಿಸುವುದು ನ್ಯಾಯಪೀಠದ ಕಾರ್ಯ. ಅಷ್ಟಕ್ಕೆ ಅಸಮರ್ಥವಾಯಿತೇ ಧರ್ಮಾಧಿಕರಣ?" –ಬಿಜ್ಜಳನ ಮಾತು ಬೇಸರ ತಿರಸ್ಕಾರಗಳಿಂದ ಕೂಡಿತ್ತು.

"ಧರ್ಮಾಧಿಕರಣ ಪ್ರಭುತ್ವದಿಂದ ಸ್ವತಂತ್ರವಾದದ್ದೆಂದು ಮಂಚಣನಾಯಕರು ತಿಳಿದಿದ್ದಾರೆ. ನ್ಯಾಯಪೀಠದಲ್ಲಿ ನಿಮ್ಮ ಆಜ್ಞೆಯ ವಿಚಾರ ಬಂದಾಗ ಅವರು, ಕಟಕಿಯಾಡಿ ಮೂದಲಿಸಿದರು." –ಎಂದು ಕ್ರಮಿತನು ಉತ್ತರ ಕೊಟ್ಟನು.

ಬಿಜ್ಜಳನು ವಿಚಲಿತನಾದನು. ವೃದ್ಧಮಂತ್ರಿ ಮಂಚಣನು ಕೊನೆಗಾಲದಲ್ಲಿ ತನ್ನ ವಿರೋಧಿಯಾಗುವನೆಂದು ಅವನು ನಿರೀಕ್ಷಿಸಿರಲಿಲ್ಲ. ಕೆಲವು ಕ್ಷಣಗಳು ಯೋಚಿಸಿ ಅವನು,

"ಶರಣರಂತೆ ಮಂಚಣನ ಕಾಲವೂ ಮುಗಿಯುತ್ತಾ ಬಂದಿದೆ, ಕ್ರಮಿತರೆ. ಈ ಎಲ್ಲ ನ್ಯಾಯ ಸೂಕ್ಷ್ಮಗಳನ್ನು ಗಮನಿಸುತ್ತಾ ಹೋದರೆ ವಿಚಾರಣೆ ಎಂದಿಗೂ ಮುಗಿಯುವುದಿಲ್ಲ." ಎಂದನು.

"ಹಾಗಾದರೆ ಪ್ರಭುಗಳ ಆಜ್ಞೆಯೇನು? ಅದರಂತೆ ನಾನು ಕಾರ್ಯನಿರ್ವಹಿಸುತ್ತೇನೆ." –ಕ್ರಮಿತನು ನಮ್ರತೆಯಿಂದ ಹೇಳಿದನು.

ಬಿಜ್ಜಳನ ಮುಖ ಉನ್ಮತ್ತ ಅಟ್ಟಹಾಸದಿಂದ ಬಿರಿಯಿತು. ಸರ್ವಾಧಿಕಾರಿಯ ಉದ್ಧಟ ದರ್ಪದಿಂದ ಅವನು,

ನಾನು ಜೀವಿಸಿರುವವರೆಗೆ ಚಾಲುಕ್ಯ ರಾಜ್ಯದಲ್ಲಿ ನನ್ನ ಆಜ್ಞೆಯಿಲ್ಲದೆ ಹುಲ್ಲು ಕಡ್ಡಿಯೂ ಚಲಿಸುವುದಿಲ್ಲವೆಂಬುದನ್ನು ಮಂಚಣನಿಗೆ ತಿಳಿಸಿರಿ. ನ್ಯಾಯಪೀಠಕ್ಕೆ

ಇನ್ನೆರಡು ದಿನ ಅವಕಾಶ ಕೊಡುತ್ತೇನೆ. ಅಷ್ಟರಲ್ಲಿ ನಿಮ್ಮ ವಿಚಾರಣೆ ಮುಗಿದು ತೀರ್ಪು ನನ್ನ ಕೈಯಲ್ಲಿರಬೇಕು. ಮಂಚಣನಾಯಕರು ಅರ್ಥಮಂತ್ರಿಯಾಗಿದ್ದಾಗ ರಾಜಧನದ ದುರುಪಯೋಗವೊಂದು ಪತ್ತೆಯಾಗಿತ್ತು. ದಾಕ್ಷಿಣ್ಯದಿಂದ ಇದುವರೆಗೆ ನಾನದನ್ನು ಮುಚ್ಚಿಟ್ಟಿದ್ದೆ. ಮಂಚಣನಾಯಕರು ತಮ್ಮ ವರ್ತನೆಯನ್ನು ಸರಿಪಡಿಸಿಕೊಳ್ಳದೆ ಹೋದರೆ ವೃದ್ಧಾಪ್ಯದಲ್ಲಿ ಸೆರೆಮನೆ ಸೇರಬೇಕಾಗುವುದು," ಎಂದನು.

ಏನನ್ನೋ ಹೇಳಲೆಳಸಿ ಸಂಕೋಚಗೊಂಡವನಂತೆ ಕ್ರಮಿತನು ಸುಮ್ಮನಿರುವುದನ್ನು ಕಂಡು ಬಿಜ್ಜಳನು, "ಏಕೆ ಆ ಮುದುಕನನ್ನು ಎದುರಿಸುವ ಸಾಮರ್ಥ್ಯವೂ ಇಲ್ಲವೇ ನಿಮಗೆ? ನ್ಯಾಯಪೀಠದ ಅಧ್ಯಕ್ಷರು ನೀವು!" ಎಂದು ಅಪಹಾಸ್ಯಮಾಡಿ ನಕ್ಕನು.

ಕ್ರಮಿತನು ಚಮತ್ಕೃತನಾಗಿ, "ಪ್ರಭುಗಳು ಕ್ಷಮಿಸಬೇಕು. ಇದು ಧೈರ್ಯ ಸಾಹಸಗಳ ಪ್ರಶ್ನೆಯಲ್ಲ. ನಿಮ್ಮ ಆಜ್ಞೆ ಯಾವಾಗಲೂ ನನಗೆ ಶಿರೋಧಾರ್ಯ. ಆದರೆ ಒಂದು ಸಂದೇಹ....." –ಎಂದು ಅರ್ಧೋಕ್ತಿಯಲ್ಲಿ ನಿಲ್ಲಿಸಿದನು.

"ಸಂದೇಹ ! ಸಂದೇಹ! ಸಂದೇಹಗ್ರಸ್ತರಿಂದ ತುಂಬಿದೆ ಈ ಜಗತ್ತು ! ಏನು ನಿಮ್ಮ ಸಂದೇಹ?" –ಬಿಜ್ಜಳನು ಚಡಪಡಿಸಿ ನುಡಿದನು.

ಅತಿ ವಿನಯದ ಮೆಲ್ದನಿಯಿಂದ ಕ್ರಮಿತನು, "ವರ್ಣಸಂಕರದ ಅಪರಾಧಕ್ಕೆ ಧರ್ಮಶಾಸ್ತ್ರಗಳು ವಧಾದಂಡ ವಿಧಿಸುತ್ತವೆ. ಈಗಿನ ಸಂದರ್ಭದಲ್ಲಿ ನ್ಯಾಯಪೀಠ...."

ಮುಂದುವರಿಸುವ ಅವಕಾಶವನ್ನೂ ಕೊಡದೆ ಬಿಜ್ಜಳನು,

"....ಆ ಅತಿ ಹೆಚ್ಚಿನ ದಂಡಾಜ್ಞೆಯನ್ನೇ ನಾನು ನ್ಯಾಯಪೀಠದಿಂದ ಅಪೇಕ್ಷಿಸುತ್ತೇನೆ, ಕ್ರಮಿತರೆ. ರಾಮರಾಜ್ಯದಲ್ಲಿ ವರ್ಣಸಂಕರದ ಅಪರಾಧಕ್ಕಾಗಿ ವಿಚಾರಣೆಯಿಲ್ಲದೆ ಶಂಭುಕನ ವಧೆ ನಡೆಯಿತು. ಬಿಜ್ಜಳನ ರಾಜ್ಯದಲ್ಲಿ ಧರ್ಮಶಾಸ್ತ್ರ ನಿಬಂಧನೆಯಂತೆ ವಿಚಾರಣೆ ನಡೆದು, ನ್ಯಾಯಪೀಠದ ಆಜ್ಞೆಯಂತೆ ಆ ಕಾರ್ಯ ನಡೆಯುತ್ತದೆ. ಪುರಾಣಯುಗದ ಆದರ್ಶಪಾಲನೆಗಾಗಿ ಆಧುನಿಕರಾದ ನಾವು ಇಷ್ಟಾದರೂ ಮಾಡಬೇಡವೆ?" –ಎಂದು ಮುಗಿಸಿದನು.

"ಶ್ರೀರಾಮಚಂದ್ರನ ಆ ವಧಾಕೃತ್ಯ ವಾಲ್ಮೀಕಿಯಿಂದ ಅಮರವಾಯಿತು. ನಿಮ್ಮ ಈ ವರ್ಣಾಶ್ರಮೋದ್ಧಾರ ಕಾರ್ಯವನ್ನು ಬಣ್ಣಿಸುವ ಕವಿ....."

ಎಂದು ಕ್ರಮಿತನು ಎರಡನೇ ಸಾರಿ ಅರ್ಧೋಕ್ತಿಯಲ್ಲಿ ನಿಲ್ಲಿಸಿದನು.

".....ಹುಟ್ಟುತ್ತಾನೆ, ನಾರಣಕ್ರಮಿತರೆ. ಆ ವಿಚಾರದಲ್ಲಿ ನೀವು ಚಿಂತಿಸುವ ಅಗತ್ಯವಿಲ್ಲ." –ಉಗ್ರವಾದಿಯ ಉನ್ಮತ್ತ ಉತ್ಸಾಹದಿಂದ ಬಿಜ್ಜಳನು ಹೇಳಿದನು.

ಕ್ರಮಿತನು ಆಸನದಿಂದೆದ್ದು ನಮಸ್ಕರಿಸಿ ಹೋಗಲನುವಾಗುತ್ತಿದ್ದಂತೆ ಹೆಗ್ಗಡೆ

ಪ್ರವೇಶಿಸಿ, "ಮಂತ್ರಿ ಚೆನ್ನಬಸವಣ್ಣನವರು ದರ್ಶನಕ್ಕಾಗಿ ಬಂದಿದ್ದಾರೆ," ಎಂದು ಅರಿಕೆ ಮಾಡಿದನು.

"ಈ ಆವೇಳೆಯಲ್ಲಿ ದರ್ಶನಕ್ಕಾಗಿ ! ಅವರ ಅವಸರ ಕಾರ್ಯ ನಾಳಿನವರೆಗೆ ತಡೆಯಲಿ," –ಅಸಹನೆಯಿಂದ ಬಿಜ್ಜಳನೆಂದನು.

"ಹಾಗಾದರೆ ಈಗ ಅವಕಾಶವಿಲ್ಲವೆಂದು ಹೇಳಿಬಿಡುತ್ತೇನೆ." –ಎಂದು ಹೆಗ್ಗಡೆ ಹೋಗುತ್ತಿದ್ದಂತೆ ಬಿಜ್ಜಳನು ಅವನನ್ನು ಕರೆದು, ಕ್ರಮಿತನು ಇಲ್ಲಿರುವ ವಿಚಾರ ಚೆನ್ನಬಸವಣ್ಣನವರಿಗೆ ತಿಳಿದಿದೆಯೇ?" ಎಂದು ಕೇಳಿದನು.

"ಪ್ರಭುಗಳು ವಿಶ್ರಾಂತಿ ಪಡೆಯುತ್ತಿರುವರೆಂದು ಹೇಳಿದೆ. ಕ್ರಮಿತರ ವಿಚಾರ ತಿಳಿಸಲಿಲ್ಲ." –ಹೆಗ್ಗಡೆ ಉತ್ತರ ಕೊಟ್ಟನು.

ಬಿಜ್ಜಳನು ಕೆಲವು ಕ್ಷಣಗಳು ಯೋಚಿಸಿ, "ಹಾಗಾದರೆ ಚೆನ್ನಬಸವಣ್ಣನವರನ್ನು ಕರೆದುಕೊಂಡು ಬಾ," ಎಂದು ಆಜ್ಞೆ ಮಾಡಿದನು.

ಹೆಗ್ಗಡೆ ಹೋದಕೂಡಲೆ ಬಿಜ್ಜಳನು ಕ್ರಮಿತನ ಕಡೆ ತಿರುಗಿ, "ನೀವು ಇಲ್ಲಿದ್ದಿರೆಂದು ಆ ಶರಣನಿಗೆ ತಿಳಿಯದಿದ್ದರೆ ಒಳ್ಳೆಯದು. ಕೊಂಚಕಾಲ ಪಾರ್ಶ್ವದ ಆ ಸಣ್ಣ ಕೋಣೆಯಲ್ಲಿರಿ," ಎಂದನು. ಬಿಜ್ಜಳನ ವಿಚಿತ್ರ ಸಲಹೆ ಕ್ರಮಿತನನ್ನು ಅಚ್ಚರಿಗೊಳಿಸಿತು. 'ಪ್ರಭುಗಳು ಇಂದು ಹೀಗೇಕೆ ವರ್ತಿಸುತ್ತಿದ್ದಾರೆ. ಸಂದರ್ಶನದಲ್ಲಿ ನಡೆಯುವ ಮಾತುಕಥೆಗಳು ನನಗೆ ತಿಳಿದಿರಲೆಂದೇ?' ಎಂದು ಯೋಚಿಸುತ್ತ ಅವಸರದಲ್ಲಿ ಒಳಹೊಕ್ಕು ತೆರೆ ಸರಿಸಿಕೊಂಡನು.

ವಿಶ್ರಾಂತಿಗೃಹದ ಚಿತ್ರಾಲಂಕೃತವಾದ ನೆಲದಮೇಲೆ ಬಿಜ್ಜಳನು ಶತಪಥ ತಿರುಗಾಡುತ್ತಿದ್ದಂತೆ ಹೆಗ್ಗಡೆ ಚೆನ್ನಬಸವಣ್ಣನವರನ್ನು ಕರೆದುಕೊಂಡು ಅಲ್ಲಿಗೆ ಬಂದನು.

"ಅವೇಳೆಯಲ್ಲಿ ಪ್ರಭುಗಳಿಗೆ ತೊಂದರೆ ಕೊಟ್ಟಿದ್ದಕ್ಕಾಗಿ ಕ್ಷಮೆ ಬೇಡುತ್ತೇನೆ. ಕಾರ್ಯಾವಸರ ನನ್ನನ್ನು ಈ ಸಾಹಸಕ್ಕೆ ತಳ್ಳಿತು."

–ಎಂದು ಹೇಳಿ ಚೆನ್ನಬಸವಣ್ಣನವರು ಬಿಜ್ಜಳನಿಗೆ ವಂದಿಸಿದರು.

ಮಾರ್ದವ ಗಾಂಭೀರ್ಯಗಳ ಸಹಜ ಮಿಶ್ರಣದಿಂದ ಗುರುಮನೆಗೆ ಅಗತ್ಯವೂ ಅರಮನೆಗೆ ಅಪರೂಪವೂ ಆಗಿದ್ದ ಚೆನ್ನಬಸವಣ್ಣನವರ ಕಂಠ, ಅವರ ಮಾತುಗಳಿಗೆ ಸ್ವಾಭಿಮಾನ ಸರಳತೆಗಳನ್ನು ಕೊಟ್ಟಿತ್ತು. ನಿನ್ನೆ ಮೊನ್ನಿನ ಈ ಬಾಲಕ, ಪಾಂಡಿತ್ಯದ ಪ್ರತಿಭೆಯಿಂದ ನೈಷ್ಠಿಕ ಜೀವನದ ತೇಜಸ್ಸಿನಿಂದ ತನ್ನೊಡನೆ ಸಮಾನಸ್ಕಂದನಂತೆ ವರ್ತಿಸುವುದನ್ನು ಕಂಡು ಬಿಜ್ಜಳನು ಮೊದಲಿಂದ ಅಸಮಾಧಾನಗೊಂಡಿದ್ದನು. ಕುಳಿತುಕೊಳ್ಳುವ ಅವಕಾಶವನ್ನೂ ಕೊಡದೆ ನಾಲ್ಕೇ ಮಾತುಗಳಿಂದ ಸಂದರ್ಶನವನ್ನು

ಮುಗಿಸುವುದು ಈಗ ಅವನ ಉದ್ದೇಶವಾಗಿತ್ತು.

"ರಾಜಕಾರ್ಯದ ಹೊಣೆ ನಿಮ್ಮಂತೆ ನನ್ನನ್ನೂ ತ್ವರಿತಗೊಳಿಸುತ್ತಿದೆ, ಚೆನ್ನಬಸವಣ್ಣನವರೆ, ಮಂಗಳವೇಡೆಯ ಅಗ್ನಿಅಪಘಾತದಿಂದ ನಾನು ಕೆಲವು ದಿನಗಳು ನಿಶ್ಚೇಷ್ಟಿತನಾದೆ. ಇಲ್ಲವೆ ವಾರಕ್ಕೆ ಮೊದಲೆ ಕಲ್ಯಾಣಕ್ಕೆ ಬರಬೇಕಾಗಿತ್ತು. ನೀವು ಬಂದ ಅವಸರದ ಕಾರ್ಯವೇನು?" ಎಂದು ಬಿಜ್ಜಳನು ತಾನೇ ಮಾತಿಗೆ ಪ್ರಾರಂಭಿಸಿದನು.

"ಪ್ರಭುಗಳು ಚಾಲುಕ್ಯರಾಜ್ಯದ ಸರ್ವಾಧಿಕಾರಿಯಾಗಿರುವಾಗ ಧರ್ಮಾಧಿಕರಣದ ಹೆಸರಿನಲ್ಲಿ ನಡೆಯುತ್ತಿರುವ ಸತ್ಯಧರ್ಮಗಳ ಅಪಚಾರವನ್ನು ತಮ್ಮ ಗಮನಕ್ಕೆ ತರುವ ಉದ್ದೇಶದಿಂದ ನಾನಿಲ್ಲಿಗೆ ಬಂದೆ. ಮಧುವರಸ ಹರಳಯ್ಯಗಳ ಬಂಧನ, ಸಾಕ್ಷ್ಯ ಕೊಡಲು ಹೋದ ಶೀಲವಂತನನ್ನು ಅಲ್ಲಿಯೇ ಬಂಧಿಸಿ ಸೆರೆಮನೆಗೆ ಕಳುಹಿಸಿದ್ದು, ಧರ್ಮಾಧಿಕರಣದ ಈ ಕಾರ್ಯಗಳು ಕಲ್ಯಾಣದ ನಾಗರಿಕರನ್ನು ಸ್ತಂಭಿತಗೊಳಿಸಿವೆ. ಜನರು ಬೆದರಿದ್ದಾರೆ. ಪ್ರಭುಗಳ ಪರೋಕ್ಷದಲ್ಲಿ ನಡೆದ ಈ ಅಕ್ರಮ ಅನ್ಯಾಯಗಳನ್ನು ಸರಿಪಡಿಸಬೇಕಾಗಿ ಬೇಡಿಕೊಳ್ಳುತ್ತೇನೆ." – ಎಂದು ಚೆನ್ನಬಸವಣ್ಣನವರು ಬಿನ್ನವಿಸಿಕೊಂಡರು.

ಬಿಜ್ಜಳನು ಕೂಡಲೆ ಉತ್ತರ ಕೊಡಲಿಲ್ಲ. ತುಸು ಹೊತ್ತು ಯೋಚಿಸಿ ಗಂಭೀರವಾಗಿ,

"ವಸ್ತುಸ್ಥಿತಿ ಏನೆಂಬುದನ್ನು ತಿಳಿಯದೆ ನೀವು ಈ ವಿಷಯಕ್ಕೆ ಪ್ರವೇಶಿಸುತ್ತಿದ್ದೀರಿ, ಚೆನ್ನಬಸವಣ್ಣನವರೆ. ಈ ಎಲ್ಲ ಬಂಧನಗಳೂ ನನ್ನ ಆಜ್ಞೆಯಿಂದ ನಡೆದವು. ಹರಳಯ್ಯ ಮಧುವರಸರಿಂದ ವರ್ಣಸಂಕರದ ಅಪರಾಧ ನಡೆದಿದೆಯೆಂದು ನಮಗೆ ಖಚಿತವಾಗಿ ತಿಳಿದಮೇಲೆ, ಚಾಲುಕ್ಯ ರಾಜ್ಯದ ಘನತೆ ಗೌರವ ಸಂಪ್ರದಾಯಗಳ ರಕ್ಷಣೆಗಾಗಿ ಆ ಅವಸರದ ಆಜ್ಞೆಯನ್ನು ಮಾಡಬೇಕಾಯಿತು. ಈ ಅಕೃತ್ಯದಲ್ಲಿ ಶೀಲವಂತ ಪ್ರಮುಖ ವ್ಯಕ್ತಿ. ಅವನ ಬಂಧನ ಮತ್ತು ವಿಚಾರಣೆ ಧರ್ಮಾಧಿಕರಣದ ನಿಯಮ ನಿಬಂಧನೆಗಳಂತೆ ನಡೆಯುತ್ತಿದೆ." ಎಂದು ಹೇಳಿದನು.

"ಪ್ರಭುಗಳು ಧರ್ಮಾಧಿಕಾರಿಗಳಾಗಿ ನಡೆಸಿದ ರಾಜಸಭೆಯಲ್ಲಿ ವರ್ಣಸಂಕರದ ವಿಚಾರವಾಗಿ ಚರ್ಚೆ ನಡೆದು, ನಿಪುಣರ ಸಮಿತಿ ನೇಮಕವಾಯಿತು. ಆ ಸಮಿತಿ ವರದಿ ಮಾಡುವ ಮೊದಲೇ ಪ್ರಭುಗಳು ಈ ಹೊಸ ಆಜ್ಞೆ ಹೊರಡಿಸಿ ವಧುವರಸ ಹರಳಯ್ಯಗಳನ್ನು ನ್ಯಾಯಪೀಠದ ಮುಂದೆ ನಿಲ್ಲಿಸಿದ್ದು ಕ್ರಮಬದ್ಧವಲ್ಲವೆಂದು ಅರಿಕೆ ಮಾಡಿಕೊಳ್ಳುತ್ತೇನೆ."

–ಇಮ್ಮಡಿ ವಿನಯದಿಂದ ಚೆನ್ನಬಸವಣ್ಣನವರು ಮತ್ತೆ ಬಿನ್ನವಿಸಿಕೊಂಡರು.

"ರಾಜಸಭೆ ಧರ್ಮಾಧಿಕರಣವಲ್ಲ. ವರ್ಣಸಂಕರದ ಬಗೆಗೆ ನಾಗರಿಕರ ಮನವಿ ಪತ್ರವನ್ನು ಅಧಿಕೃತವಾಗಿ ಸ್ವೀಕರಿಸಿ, ಉಭಯಪಕ್ಷಗಳ ಅಭಿಮತವನ್ನು ತಿಳಿದುಕೊಳ್ಳುವುದು, ಸಭೆ ನಡೆಸುವುದರಲ್ಲಿ ನಮ್ಮ ಉದ್ದೇಶವಾಗಿತ್ತು. ಆ ಸಂದರ್ಭದಲ್ಲಿ ನಡೆದ ವಾದ ವಿವಾದಗಳು ನ್ಯಾಯಪೀಠದ ವಿಚಾರಣೆಯ ರೂಪ ತಾಳುವುದೆಂದು ನಾವು ನಿರೀಕ್ಷಿಸಿರಲಿಲ್ಲ. ಪರಿಸ್ಥಿತಿಯ ಅವಸರ ಆವೇಗಗಳನ್ನು ಗಮನಿಸಿ ಆಗ ನಾವು ನಿಪುಣರ ಸತ್ಯಶೋಧನಾ ಸಮಿತಿಯನ್ನು ನೇಮಿಸುವುದು ಅಗತ್ಯವಾಯಿತು. ನ್ಯಾಯಪೀಠದ ಸಾಮಾನ್ಯ ಅಧಿಕಾರಗಳೂ ಆ ಸಮಿತಿಗಿರಲಿಲ್ಲ. ಯಥಾಕಾಲದಲ್ಲಿ ಸಭೆ ಸೇರಿ ವರದಿ ಮಾಡದಿದ್ದುದರಿಂದ ಸಮಿತಿಯನ್ನು ವಿಸರ್ಜಿಸಿ ಅದರ ಸ್ಥಾನದಲ್ಲಿ ನ್ಯಾಯಪೀಠವನ್ನು ರಚಿಸಿದೆ. ಚಾಲುಕ್ಯರಾಜ್ಯದಲ್ಲಿ ಅನಾದಿಕಾಲದಿಂದ ಆಚರಣೆಯಲ್ಲಿರುವ ಜಾತಿಪಂಥ ವರ್ಣಾಶ್ರಮಧರ್ಮಗಳ ರಕ್ಷಣೆಗಾಗಿ ಈ ಕಾರ್ಯ ಅಗತ್ಯವಾಯಿತು. ವರ್ಣಸಂಕರದ ಅಪರಾಧ ನಡೆದಿದೆಯೆಂದು ದೃಢವಾಗಿ ತಿಳಿದ ಮೇಲೆ, ಅಪರಾಧಿಗಳನ್ನು ದಂಡಿಸಿ, ಆ ಬಗೆಯ ದುಷ್ಟಪ್ರವೃತ್ತಿಯನ್ನು ನಿರ್ಮೂಲ ಮಾಡುವುದು ನಮ್ಮ ಕರ್ತವ್ಯ. ಅದನ್ನು ನಿರ್ವಹಿಸಲು ನಾನು ಪಣ ತೊಟ್ಟಿದ್ದೇನೆ." –ಅಧಿಕಾರ ದರ್ಪದಿಂದ ಬಿಜ್ಜಳನು ಹೇಳಿದನು.

ಬಿಜ್ಜಳನ ರಾಜ್ಯಾಪಹಾರದ ಅನಂತರ ಪ್ರಚಾರಕ್ಕೆ ಬಂದಿದ್ದ ನಿರಂಕುಶ ಪ್ರಭುತ್ವದ ನಗ್ನರೂಪವನ್ನು ಕಂಡು ಚೆನ್ನಬಸವಣ್ಣನವರು ಸ್ತಂಭಿತರಾದರು. ಈ ದುರ್ದಮ್ಯ ದಬ್ಬಾಳಿಕೆಯ ಕೋರೆದಾಡೆಗಳಿಂದ ಶರಣರನ್ನು ರಕ್ಷಿಸಲು ನಾನು ಸಮರ್ಥನಾಗುವೆನೆ? ಎಂಬ ಸಂದೇಹ ಅವರ ಮನಸ್ಸಿನಲ್ಲಿ ಮೊದಲಬಾರಿಗೆ ತಲೆದೋರಿತು. ಆದರೆ ನಿರಾಶೆಯಿಂದ ಕರ್ತವ್ಯವಿಮುಖರಾಗುವುದು ಅವರ ಸ್ವಭಾವವಾಗಿರಲಿಲ್ಲ. ನ್ಯಾಯಧರ್ಮಶಾಸ್ತ್ರಗಳ ಅಧ್ಯಯನದಿಂದ ಹುಟ್ಟಿದ ಧೃಢ ವಿಶ್ವಾಸದಿಂದ ಅವರು,

"ಆದರೆ ಈ ಕರ್ತವ್ಯ ನಿರ್ವಹಣೆಯಲ್ಲಿ ಪ್ರಭುಗಳು ಧರ್ಮವಿರುದ್ಧವಾದ ಮಾರ್ಗ ಹಿಡಿಯಬಾರದಾಗಿ ನನ್ನ ಮನವಿ. ಪ್ರಭುತ್ವ ವಿಚಾರಣೆ ನಡೆಸಿ ಶಿಕ್ಷೆ ವಿಧಿಸುವ ಹದಿನೆಂಟು ಅಪರಾಧ ಸ್ಥಾನಗಳಲ್ಲಿ ವರ್ಣಸಂಕರ ಸೇರುವುದಿಲ್ಲ. ಕುಲವೃದ್ಧರು, ಮಠಾಧಿಪತಿಗಳೂ ವಿಚಾರಣೆ ನಡೆಸಿ ತೀರ್ಪುಕೊಡುವ ಆ ವಿಷಯದಲ್ಲಿ ಪ್ರಭುತ್ವದ ಪ್ರವೇಶವನ್ನು ಧರ್ಮಶಾಸ್ತ್ರಗಳು ನಿಷೇಧಿಸುತ್ತವೆ. ಚಾಲುಕ್ಯ ರಾಜ್ಯದಲ್ಲಿ ಸತ್ಯ ಧರ್ಮಗಳ ರಕ್ಷಣೆಗಾಗಿ ಪಣತೊಟ್ಟ ಪ್ರಭುಗಳು, ಬಂಧನದಲ್ಲಿರುವವರನ್ನು ಬಿಡುಗಡೆ ಮಾಡಿ ಅವರ ವಿಚಾರಣೆಯ ಹೊಣೆಯನ್ನು ಕುಲವೃದ್ಧ ಮಠಾಧಿಪತಿಗಳಿಗೊಪ್ಪಿಸುವುದು ಸೂಕ್ತವಾದ ಮಾರ್ಗ," ಎಂದು ನುಡಿದರು.

“ಎಲ್ಲ ಸಂದರ್ಭಗಳಲ್ಲಿಯೂ ಧರ್ಮಶಾಸ್ತ್ರ ನಿಬಂಧನೆಯಂತೆ ಆಡಳಿತ ನಡೆಸುವುದು ಸಾಧ್ಯವಲ್ಲ. ಯುದ್ಧ ಕ್ಷಾಮ ಡಾಮರ ಮುಂತಾದ ವಿಶೇಷ ಸಂದರ್ಭಗಳಲ್ಲಿ ಕುಲವೃದ್ಧ ಮಠಾಧಿಕಾರಿಗಳ ಅಧಿಕಾರವನ್ನು ರಾಜನೇ ನಿರ್ವಹಿಸುವುದು ಅಗತ್ಯವಾಗುತ್ತದೆ. ಈಗ ಚಾಲುಕ್ಯ ರಾಜ್ಯಕ್ಕೆ ಅಂತಹ ವಿಶೇಷ ಪರಿಸ್ಥಿತಿ ಒದಗಿದೆಯೆಂದು ಭಾವಿಸಿ, ಕುಲವೃದ್ಧ ಮಠಾಧಿಕಾರಿಗಳ ಅಧಿಕಾರವನ್ನು ನಾವು ವಹಿಸಿಕೊಂಡಿದ್ದೇವೆ. ಅದರಂತೆ ರಚಿತವಾದ ನ್ಯಾಯಪೀಠದ ಮುಂದೆ ಆಪಾದಿತರ ಪರವಾಗಿ ನೀವು ಮನವಿ ಸಲ್ಲಿಸಬಹುದು,” –ಎಂದು ನುಡಿದು ಬಿಜ್ಜಳನು ಸಂದರ್ಶನ ಮುಗಿದುದನ್ನು ಸೂಚಿಸಲು ಹೊರಡಲನುವಾದನು.

“ಸತ್ಯಧರ್ಮಗಳಿಗೆ ವಿರುದ್ಧವಾಗಿ ರಚಿತವಾದ ಈ ನ್ಯಾಯಪೀಠವನ್ನು ನಾಗರಿಕರು ಒಪ್ಪುವುದಿಲ್ಲ. ಅದು ನಡೆಸುವ ವಿಚಾರಣೆಗೆ, ಕೊಡುವ ತೀರ್ಪಿಗೆ ಆಪಾದಿತರು ಬದ್ಧರಾಗುವುದಿಲ್ಲ. ಪ್ರಭುಗಳ ಈ ನಿರಂಕುಶ ವರ್ತನೆಯನ್ನು ವಿರೋಧಿಸುವುದು ಮಂತ್ರಿಮಂಡಲದ ಸದಸ್ಯನಾದ ನನ್ನ ಕರ್ತವ್ಯ.” –ಚೆನ್ನಬಸವಣ್ಣನವರ ದನಿಯಲ್ಲಿ ಕರ್ಕಶತೆ ಇಚ್ಛೆಯಿಲ್ಲದೆ ತಲೆಹಾಕಿತ್ತು. ತಿರಸ್ಕಾರದ ಸ್ಪರ್ಧಾಭಾವದಿಂದ ಅವರು ನುಡಿದರು.

ಬಿಜ್ಜಳನ ಹುಬ್ಬುಗಳು ಕುಂಚಿತವಾದವು. ಕಣ್ಣುಗಳಿಂದ ಉನ್ಮತ್ತ ಕೋಪದ ಕಿಡಿಗಳು ಹಾರಿದವು. ದೀರ್ಘಾಭ್ಯಾಸದಿಂದ ಅವನು ಉಕ್ಕಿಬರುತ್ತಿದ್ದ ಆವೇಗವನ್ನು ಅದಮಿಟ್ಟು, ಮುಖದಲ್ಲಿ ಕುಹಕದ ನಗೆ ಮೂಡಿಸಿ,

“ನೀವು ರಾಜಕೀಯಾನುಭವವಿಲ್ಲದ ತರುಣರು, ಚೆನ್ನಬಸವಣ್ಣನವರೆ. ಬಸವ ದಂಡನಾಥರ ಬಂಧುವೆಂಬ ಕಾರಣದಿಂದ ನಿಮ್ಮನ್ನು ಮಂತ್ರಿಯಾಗಿ ತೆಗೆದುಕೊಳ್ಳುವುದು ಅಗತ್ಯವಾಯಿತು. ಆದರೆ ನೀವು ಪ್ರಭು–ಭೃತ್ಯ ಸಂಬಂಧವನ್ನು ಮರೆತು, ಸಭೆಯ ಮರ್ಯಾದೆಯನ್ನು ಕಡೆಗಣಿಸಿ, ನನ್ನೊಡನೆ ಈ ರೀತಿ ವರ್ತಿಸುವಿರೆಂದು ನಾನು ಯಾವಾಗಲೂ ನಿರೀಕ್ಷಿಸಿರಲಿಲ್ಲ. ಶರಣಧರ್ಮದ ದರ್ಪ ದುರಭಿಮಾನಗಳು ನಿಮ್ಮನ್ನು ನುಡಿಸುತ್ತಿದೆಯೆಂದು ತಿಳಿದು ಮನ್ನಿಸಿದ್ದೇನೆ. ದೀರ್ಘ ಪ್ರವಾಸದಿಂದ ಬಳಲಿದ ನನಗೆ ಈಗ ವಿಶ್ರಾಂತಿ ಅಗತ್ಯ. ಸಂದರ್ಶನ ಮುಗಿಯಿತು.” –ಎಂದು ನುಡಿದು ಮುಖ ತಿರುಗಿಸಿದನು.

ಪ್ರಯತ್ನ ವಿಫಲವಾಯಿತೆಂದು ಚೆನ್ನಬಸವಣ್ಣನವರು ತಿಳಿದರು. ಬರಿಗೈಯಿಂದ ಮಹಮನೆಗೆ ಹಿಂದಿರುಗುವುದು ಹೇಗೆ ? ಎಂದು ಚಿಂತಿಸಿ,

“ಸೆರೆಮನೆಯಲ್ಲಿ ಆಪಾದಿತರನ್ನು ಅಮಾನುಷ ಕ್ರೌರ್ಯದಿಂದ ನಡೆಸಿಕೊಳ್ಳುತ್ತಿದ್ದಾರೆ. ಈ ಸಾಮಾನ್ಯ ವಿಚಾರದಲ್ಲಾದರೂ ಪ್ರಭುಗಳು

ಉದಾರತೆಯಿಂದ ನಡೆದುಕೊಳ್ಳಬೇಕಾಗಿ ಬೇಡುತ್ತೇನೆ," –ಎಂದು ಬಿನ್ನವಿಸಿಕೊಂಡರು.

ಬಿಜ್ಜಳನು ಮುಖ ತಿರುಗಿಸಿ ಉಪೇಕ್ಷೆಯ ಕಟು ಧ್ವನಿಯಿಂದ, "ಧರ್ಮಾಧಿಕರಣದ ಸಾಮಾನ್ಯ ನಿಬಂಧನೆಗಳಂತೆ ಬಂಧಿತರನ್ನು ನಡೆಸಿಕೊಳ್ಳಲಾಗುತ್ತಿದೆ. ಶರಣರೆಂಬ ಕಾರಣದಿಂದ ಯಾವ ಹೊಸ ಪದ್ಧತಿಯನ್ನೂ ಆಚರಣೆಗೆ ತಂದಿಲ್ಲ," ಎಂದು ಹೇಳಿದನು.

ಚೆನ್ನಬಸವಣ್ಣನವರು ನಿರಾಶೆಯ ತೀವ್ರತೆಯಿಂದ ನಿಟ್ಟುಸಿರಿಟ್ಟು ಹೆಗ್ಗಡೆಯೊಡನೆ ಅಲ್ಲಿಂದ ಸರಿದರು.

ತುಸುಹೊತ್ತಿನ ಮೇಲೆ ಬಿಜ್ಜಳನು ಕ್ರಮಿತನನ್ನು ಹೊರಗೆ ಕರೆದು "ಹೇಗಿತ್ತು ನನ್ನ ಅಭಿನಯ?" ಎಂದು ನಗುತ್ತ ಕೇಳಿದನು.

"ಪ್ರಭುಗಳ ರಾಜನೀತಿ ಅನುಭವಗಳು ಅಗಾಧ. ಕ್ಷಣಕಾಲ ನಾನೆಲ್ಲಿರುವೆನೆಂಬುದನ್ನೇ ಮರೆತೆ." –ಮೆಚ್ಚುಗೆಯ ಆವೇಶದಿಂದ ಕ್ರಮಿತನು ನುಡಿದನು "ಇಷ್ಟೆಲ್ಲ ಚಾತುರ್ಯ ಕೌಶಲಗಳು ರಾಜಿಕಕ್ಕೆ ಅಗತ್ಯವೇ?" –ಬೇಸರದಿಂದ ಹೇಳಿದನು ಬಿಜ್ಜಳ.

"ಅಗತ್ಯ, ಪ್ರಭು. 'ವಾರಾಂಗನೇವ ನೃಪನೀತಿರನೇಕ ರೂಪಾ' ಎಂದು ಕವಿ ಹೇಳಿದ್ದಾನೆ. ಸೂಳೆಯಂತೆ ರಾಜನೂ ಸಂದರ್ಭೋಚಿತವಾಗಿ ಬೇರೆ ಬೇರೆ ಮುಖವಾಡಗಳನ್ನು ಧರಿಸಿ ಅಭಿನಯಿಸಬೇಕಾಗುವುದು."

"ನೀವು ವಾರಾಂಗನೆಯೆಂದದ್ದು ನೆನಪಾಯಿತು, ಕ್ರಮಿತರೆ. ಕಲ್ಯಾಣದ ನಮ್ಮ ಗಣಿಕಾವಾಸಗಳಲ್ಲಿ ಯಾವುದು ತೆರವಾಗಿದೆ?"

"ಧರ್ಮಾಧಿಕರಣದ ಪಾರ್ಶ್ವದಲ್ಲಿರುವ ಸಮ್ಮುಖದ ಚಾವಡಿ. ಉಳಿದೆಲ್ಲ ಕಡೆಗಳಲ್ಲಿ ಮಂಗಳವೇಡೆಗೆ ಬಂದಿದ್ದ ನರ್ತಕಿಯರು ಬಿಡಾರ ಮಾಡಿದ್ದಾರೆ. ಇನ್ನೆರಡು ವಾರಗಳವರೆಗೆ ಅವುಗಳಲ್ಲಿ ಯಾವುದೂ ತೆರವಾಗುವುದಿಲ್ಲ."

"ಹಾಗಾದರೆ ಸಮ್ಮುಖದ ಚಾವಡಿಗಳನ್ನು ಅತ್ಯಾಧುನಿಕ ಅಲಂಕಾರ ವಸ್ತುಗಳಿಂದ ಸಜ್ಜುಗೊಳಿಸಿರಿ, ಕ್ರಮಿತರೆ. ಮಂಗಳವೇಡೆಯ ಹೊಸ ಹೆಗ್ಗಡತಿಯೊಬ್ಬಳು ಇನ್ನೆರಡು ದಿನಗಳಲ್ಲಿ ಅದರ ಒಡತಿಯಾಗಿ ಬರುತ್ತಾಳೆ. ನಂಬಿಕಸ್ಥರಾದ ಎಂಟುಮಂದಿ ದಾಸದಾಸಿಯರು, ಕಾವಲುಭಟರು ಸಿದ್ಧರಾಗಿರಬೇಕು."

"ಆಜ್ಞೆ".

"ನೀವಿನ್ನು ಹೋಗಬಹುದು. ನ್ಯಾಯಪೀಠದ ತೀರ್ಪಿನ ವಿಚಾರದಲ್ಲಿ ನನ್ನ ಆದೇಶ ನೆನಪಿರಲಿ."

ಕ್ರಮಿತನು ತಲೆಬಾಗಿ ನಮಸ್ಕಾರ ಮಾಡಿ ಹೊರಗೆ ಹೋಗುತ್ತಿದ್ದಂತೆ ಪಾನ ಪಾತ್ರೆ ಬೀಸಣಿಗೆಗಳನ್ನು ಹಿಡಿದ ದಾಸದಾಸಿಯರು ಪುನಃ ಅಲ್ಲಿಗೆ ಬಂದರು.

ರಾಜಪೌರೋಹಿತ್ಯ-ಧರ್ಮಾಧಿಕರಣಗಳಂತೆ ಬಿಜ್ಜಳನ ಗಣಿಕಾವಾಸಗಳ ಮೇಲ್ವಿಚಾರಣೆಯನ್ನೂ ಕ್ರಮಿತನೇ ನೋಡಿಕೊಳ್ಳಬೇಕಾಗಿತ್ತು. ಅಗ್ನಿ ಅಪಘಾತದ ಅನಂತರ, ತಾನು ಮಂಗಳವೇಡೆಯನ್ನು ಬಿಟ್ಟ ನಾಲ್ಕು ದಿನಗಳ ಅಂತರದಲ್ಲಿ ಪ್ರಭುಗಳ ಮೇಲೆ ಮೋಹದ ಇಂದ್ರಜಾಲ ಬೀರಿದ ಆ ಹೊಸ ಹೆಗ್ಗಡತಿ ಯಾರು? ಎಂಬ ಚಿಂತೆಯಲ್ಲಿ ಕ್ರಮಿತನು ಮಗ್ನನಾದನು. ತಾನೇ ಏರ್ಪಡಿಸಿದ್ದ ಮಹಾ ವ್ರತದ ಬಯಲಾಟದಲ್ಲಿ ಗಣಿಕೆಯ ಪಾತ್ರ ವಹಿಸಿದ್ದ ಪಂಡಿತ ಪತ್ನಿಯೇ ಆ ಹೊಸ ಹೆಗ್ಗಡತಿಯೆಂಬುದು ಆಗ ಕ್ರಮಿತನಿಗೆ ತಿಳಿದಿದ್ದರೆ, ಅವನ ಏಳು ತಲೆಮಾರಿನ ಪಿತೃಗಳು ಸ್ವರ್ಗದಲ್ಲಿ ಬೆಚ್ಚಿ ಏಳುತ್ತಿದ್ದರು.

* * *

ಚೆನ್ನಬಸವಣ್ಣನವರ ಮ್ಲಾನ ಮುಖವನ್ನು ಕಂಡಾಗ ಮಾಚಿದೇವ ಸಕಲೇಶ ಮಾದರಸರು ತಿಳಿದರು, ಸಂಧಾನ ವಿಫಲವಾಯಿತೆಂದು. ಸಂದರ್ಶನದಲ್ಲಿ ನಡೆದುದನ್ನು ವಿವರಿಸಿ ಚೆನ್ನಬಸವಣ್ಣನವರು,

"ಬಿಜ್ಜಳರಾಯರ ಸವಿನುಡಿಗಳಿಗೆ ಮರುಳಾಗಿ ಮಂತ್ರಿಯಾಗಿರಲು ನಾನು ಒಪ್ಪಿಕೊಂಡದ್ದು ತಪ್ಪು ಹೆಜ್ಜೆಯೆಂದು ಈಗ ಅರಿವಾಗುತ್ತಿದೆ. ರಾಜಕೀಯಾನುಭವವಿಲ್ಲದ ನಾನು ರಾಜಕೀಯ ವ್ಯವಹಾರದಲ್ಲಿ ಚತುರರಾದ ಬಿಜ್ಜಳರಾಯರೊಡನೆ ಸೆಣಸುವುದು ಸಾಧ್ಯವೆ? ಮಂತ್ರಿಮಂಡಲದಿಂದ ನಿವೃತ್ತನಾಗಲು ಯೋಚಿಸಿದ್ದೇನೆ," ಎಂದರು.

ಚೆನ್ನಬಸವಣ್ಣನವರ ನುಡಿಗಳಿಂದ ಶರಣರಲ್ಲಿ ನಿರಾಶೆ ಮೂಡಿತು. ಮಧುವರಸ ಹರಳಯ್ಯಗಳ ಬಂಧನದಿಂದ ತಳಮಳಗೊಂಡಿದ್ದ ಅವರು ಹಿಂದಿನ ಸಂಜೆ ಲಾವಣ್ಯವತಿಯಿಂದ ಶೀಲವಂತನ ಬಂಧನದ ಸುದ್ದಿ ಕೇಳಿ ಕರ್ತವ್ಯಮೂಢರಾದರು. ಬಿಜ್ಜಳರಾಯರ ಪರೋಕ್ಷದಲ್ಲಿ ನಾರಣಕ್ರಮಿತನಿಂದ ಈ ಕಾರ್ಯ ನಡೆದಿದೆಯೆಂದೂ, ಪ್ರಭುಗಳು ಕಲ್ಯಾಣಕ್ಕೆ ಬಂದಕೂಡಲೆ ಅವರನ್ನು ಸಂದರ್ಶಿಸಿ ಶರಣರ ಬಿಡುಗಡೆಗೆ ಪ್ರಯತ್ನಿಸುವುದಾಗಿಯೂ ಹೇಳಿ ಚೆನ್ನಬಸವಣ್ಣನವರು ಅವರನ್ನು ಸಮಾಧಾನಗೊಳಿಸಿದ್ದರು.

"ಹಾಗಾದರೆ ಬಂಧನದಲ್ಲಿರುವ ಶರಣರ ಗತಿಯೇನು ? ಅವರ ರಕ್ಷಣೆಗೆ ಯಾವ ಉಪಾಯವೂ ಇಲ್ಲವೆ?" ತೀವ್ರ ನಿರಾಶೆಯಿಂದ ಶರಣನೊಬ್ಬನು ಪ್ರಶ್ನಿಸಿದನು.

ದೀರ್ಘಕಾಲ ಪರ್ಯಾಲೋಚನೆ ನಡೆದು ಕೊನೆಗೆ ಸಕಲೇಶ ಮಾದರಸರು ಹೇಳಿದರು: "ಧರ್ಮಾಧಿಕರಣದಲ್ಲಿ ಪ್ರಾರಂಭವಾದ ಈ ವ್ಯವಹಾರ ಅಷ್ಟಕ್ಕೇ

ಮುಗಿಯುವುದಿಲ್ಲ. ರಾಜಕೀಯ ಆಡಳಿತಗಳಲ್ಲಿಯೂ ಹರಡುತ್ತದೆ. ಶರಣಧರ್ಮವನ್ನು ನಿರ್ಮೂಲಗೊಳಿಸುವುದು ಬಿಜ್ಜಳನ ಉದ್ದೇಶ. ಈಗ ಚೆನ್ನಬಸವಣ್ಣನವರು ಮಂತ್ರಿಪದವಿಯಿಂದ ನಿವೃತ್ತರಾದರೆ ರಾಜ್ಯದಲ್ಲಿ ಶರಣರ ಬಲ ಕುಂದುವುದು. ನಾನು ಆ ಮಾರ್ಗವನ್ನು ಅನುಮೋದಿಸುವುದಿಲ್ಲ. ನ್ಯಾಯಪೀಠದ ವಿಚಾರಣೆ ಯಾವ ರೀತಿ ಮುಗಿಯುವುದೆಂಬುದನ್ನು ಕಾದು ನೋಡಿ ಆಮೇಲೆ ನಾವು ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸಬೇಕಾಗುವುದು."

ಮಾಚಿದೇವರ ಅಭಿಪ್ರಾಯ ಬೇರೆಯಾಗಿತ್ತು. ಅವರು ಹೇಳಿದರು : "ನ್ಯಾಯಪೀಠದ ರಚನೆಯಲ್ಲಿ ಬಿಜ್ಜಳನು ಸತ್ಯಧರ್ಮಗಳನ್ನು ಕಡೆಗಣಿಸಿ, ನಿರಂಕುಶ ಸರ್ವಾಧಿಕಾರಿಯಂತೆ ನಡೆದುಕೊಂಡಿದ್ದಾನೆ. ಚಾಲುಕ್ಯ ಧರ್ಮಾಧಿಕರಣ ಅಧರ್ಮ ಅತ್ಯಾಚಾರಗಳ ನೆಲೆವೀಡಾಗುತ್ತಿದೆ. ಈ ದುಷ್ಟ ಪ್ರವೃತ್ತಿಯನ್ನು ಪ್ರತಿಭಟಿಸುವುದು ನಮ್ಮ ಮೊದಲ ಕರ್ತವ್ಯ. ಶರಣರು ಸೆರೆಮನೆಯಲ್ಲಿರಲಿ, ಹೊರಗಿರಲಿ, ಈ ಅನ್ಯಾಯದ ವ್ಯವಹಾರದಲ್ಲಿ ಧರ್ಮಾಧಿಕರಣದೊಡನೆ ಸಹಕರಿಸಲು ನಿರಾಕರಿಸಬೇಕು. ನ್ಯಾಯಪೀಠದ ವಿಚಾರದಲ್ಲಿ ನಮ್ಮ ಆಕ್ಷೇಪಣೆಗಳೇನೆಂಬುದನ್ನು ಚೆನ್ನಬಸವಣ್ಣನವರು ಆಗಲೇ ಬಿಜ್ಜಳರಾಯರಿಗೆ ತಿಳಿಸಿದ್ದಾರೆ. ಮುಂದಿನ ಕಾರ್ಯವಿಧಾನವನ್ನು ಅದಕ್ಕೆ ಅನುಗುಣವಾಗಿ ರೂಪಿಸಬೇಕು."

"ನಾಳೆ ಪುನಃ ನ್ಯಾಯಪೀಠದ ವಿಚಾರಣೆ ಪ್ರಾರಂಭವಾಗುತ್ತದೆ. ಆಪಾದಿತರು ಹೇಳಿಕೆ ಕೊಡಬೇಕಾಗುತ್ತದೆ. ಈ ವಿಚಾರದಲ್ಲಿ ನಿಮ್ಮ ಸಲಹೆಯೇನು?" –ಎಂದು ಪ್ರಶ್ನಿಸಿದರು ಚೆನ್ನಬಸವಣ್ಣನವರು.

"ವರ್ಣಸಂಕರದ ಅಪರಾಧ ನಮ್ಮಿಂದ ನಡೆದಿಲ್ಲ. ಧರ್ಮಾಧಿಕರಣದ ಮೂಲತತ್ವಗಳಿಗೆ ವಿರುದ್ಧವಾಗಿ ರಚಿತವಾದ ನ್ಯಾಯಪೀಠದೊಡನೆ ನಾವು ಸಹಕರಿಸುವುದಿಲ್ಲ ಎಂದು ಮೂವರೂ ಒಂದೇ ರೀತಿಯ ಪ್ರತ್ಯೇಕ ಹೇಳಿಕೆಗಳನ್ನು ಕೊಟ್ಟರೆ ಸಾಕು," –ಎಂದು ಮಾಚಿದೇವರು ಉತ್ತರ ಕೊಟ್ಟರು.

ಶರಣರೆಲ್ಲ ಅದಕ್ಕೊಪ್ಪಿದರು.

ಮರುದಿನ ನ್ಯಾಯಪೀಠ ಕೂಡಿದಾಗ ಆಪಾದಿತರು ಒಂದೇ ರೀತಿಯ ಮೂರು ಪ್ರತ್ಯೇಕ ಹೇಳಿಕೆಗಳನ್ನು ಕೊಟ್ಟು, ನ್ಯಾಯಪೀಠದೊಡನೆ ಸಹಕರಿಸಲು ನಿರಾಕರಿಸಿದಾಗ ಕ್ರಮಿತನು ಗೊಂದಲದಲ್ಲಿ ಬಿದ್ದನು. ಆಪಾದಿತರನ್ನು ಕಳುಹಿಸಿ, ಸಹೋದ್ಯೋಗಿಗಳ ಕಡೆ ತಿರುಗಿ ಅವನು,

"ನಾವು ಮೂವರನ್ನೂ ಪ್ರತ್ಯೇಕ ಬಂಧನದಲ್ಲಿಟ್ಟಿದ್ದೇವೆ. ಒಬ್ಬರನ್ನೊಬ್ಬರು ನೋಡುವ ಅವಕಾಶವೂ ಇರುವುದಿಲ್ಲ. ಆದರೂ ಮೂವರ ಹೇಳಿಕೆಗಳು ಒಂದೇ ಆಗಿರುವುದು ಆಶ್ಚರ್ಯ," ಎಂದನು.

ರುದ್ರಭಟ್ಟನು ಮೌನ.

"ಶರಣರು ಪ್ರತ್ಯೇಕವಾಗಿ ಬಂಧಿಸಲ್ಪಟ್ಟಿದ್ದರೂ ಅವರ ರೀತಿ ನೀತಿ ಕಾರ್ಯ ವಿಧಾನ ಒಂದೇ ಅಲ್ಲವೆ? ಅದರಂತೆ ಹೇಳಿಕೆ ಒಂದೇ ಆಗಿರುವುದರಲ್ಲಿ ಆಶ್ಚರ್ಯವೇನಿದೆ? ಈ ಪರಿಸ್ಥಿತಿಯಲ್ಲಿ ಮುಂದೇನು ಮಾಡಬೇಕೆಂಬುದನ್ನು ನಿರ್ಧರಿಸಿಕೊಳ್ಳಬೇಕು," ಎಂದನು ಮಂಚಣ.

ಕ್ರಮಿತನು ತುಸುಹೊತ್ತು ಯೋಚಿಸಿ, "ಆಪಾದಿತರ ಹೇಳಿಕೆಯ ವಿಚಾರದಲ್ಲಿ ಪಭುಗಳ ಪ್ರತಿಕ್ರಿಯೆ ಏನೆಂಬುದನ್ನು ನಾವು ಮೊದಲು ತಿಳಿಯಬೇಕು. ಆಮೇಲೆ ಮುಂದಿನ ಕಾರ್ಯ," ಎಂದು ಹೇಳಿದನು.

ನ್ಯಾಯಪೀಠದ ಅಂದಿನ ಅಧಿವೇಶನ ಸಂದಿಗ್ಧದಲ್ಲಿ ಮುಗಿಯಿತು. ಬಂಧಿತರೊಡನೆ ಹೊರಗಿನವರ ಸಂಬಂಧವಿಲ್ಲದಂತೆ ಎಚ್ಚರದಿಂದ ನೋಡಿಕೊಳ್ಳಬೇಕೆಂದು ಸೆರೆಮನೆಯ ಅಧಿಕಾರಿಗಳಿಗೆ ಎಚ್ಚರಿಕೆ ಕೊಡಲು ಕ್ರಮಿತನು ಮರೆಯಲಿಲ್ಲ.

ಮರುದಿನ ಸಂಜೆ ಮಂಚಣನು ಸ್ನಾನ ಮುಗಿಸಿ ವಾಸಗೃಹದಲ್ಲಿ ವಿಶ್ರಮಿಸಿ ಕೊಳ್ಳುತ್ತಿದ್ದಾಗ ಕ್ರಮಿತನು ಅಲ್ಲಿಗೆ ಬಂದು, ವಂದನೆ ಪ್ರತಿವಂದನೆಗಳು ಮುಗಿದ ಮೇಲೆ ಆಸನದಲ್ಲಿ ಕುಳಿತು, ಧರ್ಮಾಧಿಕರಣದ ಆಜ್ಞಾಪತ್ರವೊಂದನ್ನು ಮುಂದಿಟ್ಟು, "ಇದಕ್ಕೆ ನಿಮ್ಮ ಒಪ್ಪಿಗೆಯ ಹಸ್ತಾಕ್ಷರ ಬೇಕಾಗಿದೆ," ಎಂದನು.

"ಇಷ್ಟಕ್ಕಾಗಿ ನೀವೇಕೆ ಬರಬೇಕಾಗಿತ್ತು? ಕರಣಿಕನನ್ನು ಕಳುಹಿಸಿದ್ದರೆ ಒಪ್ಪಿಗೆ ಹಾಕುತ್ತಿದ್ದೆ," –ಎನ್ನುತ್ತ ಮಂಚಣನು ದೀಪದ ಬೆಳಕಿನಲ್ಲಿ ಪತ್ರವನ್ನು ಓದಿದನು. ಆಶ್ಚರ್ಯ ಭೀಭತ್ಸಗಳಿಂದ ಅವನ ಮುಖ ಬಿಳುಪೇರಿತು. ಕೈಗಳು ನಡುಗಿ ಆಜ್ಞಾಪತ್ರ ಕೆಳಗೆ ಬಿತ್ತು.

ಕ್ರಮಿತನು ಬಾಗಿ ಪತ್ರವನ್ನು ತೆಗೆದುಕೊಂಡು ಪೀಠದ ಮೇಲಿಟ್ಟು, "ಏಕೆ ಮಂಚಣನವರೆ ? ಸ್ವಸ್ಥವಿಲ್ಲವೆ?" ಎಂದನು.

ಅನೇಕ ಕ್ಷಣಗಳು ಮಂಚಣ ಉತ್ತರ ಕೊಡಲಿಲ್ಲ. ಆಮೇಲೆ ಕಂಪಿಸುವ ಕಂಠದಿಂದ, "ಇದೇನು ಉಪಹಾಸವೆ, ಕ್ರಮಿತರೆ? ಅಥವಾ ಈ ಅನ್ಯಾಯದ ಭೀಕರ ದಂಡಾಜ್ಞೆಗೆ ನನ್ನ ಒಪ್ಪಿಗೆ ಪಡೆಯಲು ಪ್ರಭುಗಳು ನಿಮ್ಮನ್ನು ಕಳುಹಿಸಿದರೆ?" ಎಂದನು.

"ಆಪಾದಿತರು ನ್ಯಾಯಪೀಠದ ಕ್ರಮಬದ್ಧತೆಯನ್ನು ಪ್ರಶ್ನಿಸಿ ಸಹಕರಿಸಲು ನಿರಾಕರಿಸಿದರೆಂದು ಕೇಳಿದಾಗ ಪ್ರಭುಗಳು ರೌದ್ರಾವತಾರವಾದರು. ಅವರನ್ನು ಸಮಾಧಾನಪಡಿಸುವುದು ಕಷ್ಟವಾಯಿತು. ಕೊನೆಗೆ ಅವರೇ ಕರಣಿಕನಿಂದ ಈ

ದಂಡಾಜ್ಞೆಯನ್ನು ಬರೆಯಿಸಿ ನಿಮ್ಮ ಮತ್ತು ರುದ್ರಭಟ್ಟರ ಒಪ್ಪಿಗೆ ಪಡೆಯುವಂತೆ ಹೇಳಿದರು. ರುದ್ರಭಟ್ಟರು ಮರುಮಾತಾಡದೆ ಒಪ್ಪಿಗೆ ಹಾಕಿದ್ದಾರೆ. ಅದರಂತೆ ನೀವೂ ಒಪ್ಪಿಗೆ ಹಾಕಿದರೆ ನಾನು ಉಳಿಯುತ್ತೇನೆ, ನೀವೂ ಉಳಿಯುತ್ತೀರಿ." –ಅನುಕಂಪದ ಮೆರಗುಹಚ್ಚಿದ ಅನುನಯದ ದನಿಯಿಂದ ಕ್ರಮಿತನು ನುಡಿದನು.

"ವರ್ಣಸಂಕರದ ಅಪರಾಧ ಸ್ಥಿರವಾಗುವ ಮೊದಲೆ ಆಪಾದಿತರಿಗೆ ಮರಣದಂಡನೆ ವಿಧಿಸುವುದು ಪ್ರಭುಗಳ ಇಚ್ಛೆಯಾಗಿದ್ದರೆ ತಮ್ಮ ಪ್ರಭುಶಕ್ತಿಯಿಂದ ಅವರು ಆ ಕಾರ್ಯವನ್ನು ಮಾಡಬಹುದಾಗಿತ್ತು. ಆ ನಿರಂಕುಶ ಮಾರ್ಗದಲ್ಲಿ ನಡೆಯದೆ ವಿಚಾರಣೆಗಾಗಿ ನ್ಯಾಯಪೀಠವನ್ನು ರಚಿಸಿದ ಮೇಲೆ, ಅದರ ತೀರ್ಪಿಗಾಗಿ ಕಾಯುವುದು ಉಚಿತ. ಧರ್ಮಾಧಿಕರಣದ ಈ ಸಾಮಾನ್ಯ ನಿಯಮವನ್ನು ಪ್ರಭುಗಳು ಮರೆತಿದ್ದರೆ, ಅದನ್ನು ಅವರ ನೆನಪಿಗೆ ತರುವುದು ನಿಮ್ಮ ಕರ್ತವ್ಯವಾಗಿತ್ತು," –ನೊಂದದನಿಯಿಂದ ಮಂಚಣನೆಂದನು.

"ಪ್ರಭುಶಕ್ತಿಯೇ ಧರ್ಮಾಧಿಕರಣದ ಹಿಂದಿರುವ ಅಧಿಕಾರ. ಅದರ ಹೊರತಾಗಿ ನ್ಯಾಯಪೀಠಕ್ಕೆ ಪ್ರತ್ಯೇಕ ಅಧಿಕಾರವಿದೆಯೆಂಬುದನ್ನು ನಾನು ಒಪ್ಪುವುದಿಲ್ಲ. ಪ್ರಭುಗಳ ಸೂಚನೆಯಂತೆ ತೀರ್ಪು ಕೊಡುವುದು ನ್ಯಾಯಪೀಠದ ಕರ್ತವ್ಯ. ಅದರಂತೆ ನಾನು ನಡೆದುಕೊಳ್ಳುತ್ತಿದ್ದೇನೆ. ನ್ಯಾಯಪೀಠವನ್ನು ರಚಿಸಿದ ಪ್ರಭುವಿಗೆ ಅದರ ತೀರ್ಪನ್ನು ರಚಿಸುವ ಅಧಿಕಾರವೂ ಇರುತ್ತದೆ." –ಕ್ರಮಿತನ ಉತ್ತರ ಅವನ ರಾಜನಿಷ್ಠೆಯ ಪ್ರತೀಕವಾಗಿತ್ತು.

ಆ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಮಂಚಣನ ವಿನೋದ ಪ್ರವೃತ್ತಿ ಎಚ್ಚೆತ್ತಿತು. ಕಟುಹಾಸ್ಯದ ನಗೆಬೀರಿ ಅವನು,

"ನಿಮ್ಮ ಪ್ರಭುನಿಷ್ಠೆಯನ್ನು ನಾನು ತಿಳಿದಿದ್ದೇನೆ, ಕ್ರಮಿತರೆ. ನನ್ನ ರಾಜನಿಷ್ಠೆ ಅದಕ್ಕಿಂತ ಕಡಿಮೆಯೇನಲ್ಲ. ಚಾಲುಕ್ಯ ಧರ್ಮಾಧಿಕರಣದ ಕೀರ್ತಿ ಪ್ರತಿಷ್ಠೆಗಳಿಗೆ ಕಳಂಕ ಹತ್ತದಿರಲೆಂಬುದು ನನ್ನ ಉದ್ದೇಶ. ಆಪಾದಿತರು ನ್ಯಾಯಪೀಠದೊಡನೆ ಸಹಕರಿಸುವುದಿಲ್ಲವೆಂದ ಮಾತ್ರಕ್ಕೆ ನಾವೇಕೆ ವಿಚಾರಣೆಯನ್ನು ನಿಲ್ಲಿಸಬೇಕು? ವರ್ಣ ಸಂಕರದ ಅಪರಾಧ ವಾಸ್ತವವಾಗಿ ನಡೆದಿದೆಯೆ? ನಡೆದಿದ್ದರೆ ಧರ್ಮಶಾಸ್ತ್ರಗಳು ಅದಕ್ಕೆ ವಿಧಿಸುವ ಶಿಕ್ಷೆಯೇನು ? ಬೇರೆ ಸಾಕ್ಷ್ಯಗಳಿಂದ ನಾವು ಈ ಪ್ರಶ್ನೆಗಳಿಗೆ ಉತ್ತರ ಪಡೆಯಬೇಕಾಗಿದೆ. ಮದುವೆ ನಡೆದಾಗ ಅಲ್ಲಿದ್ದ ಕುಲವೃದ್ಧರು, ಮಠಾಧಿಕಾರಿಗಳು ಮುಂತಾದವರ ಸಾಕ್ಷ್ಯಗಳನ್ನು ತೆಗೆದುಕೊಂಡು, ಅನಂತರ ತೀರ್ಪನ್ನು ರಚಿಸಿ ಪ್ರಭುಗಳ ಅನುಮೋದನೆಗೆ ಕಳುಹಿಸುವುದು ಈಗ ನ್ಯಾಯಪೀಠ ಅನುಸರಿಸಬೇಕಾದ ಮಾರ್ಗ. ಆ ರೀತಿ ನಡೆಯುವುದರಿಂದ ಧರ್ಮಾಧಿಕರಣದ

ಪರಂಪರಾಗತವಾದ ನೀತಿ ನಿಬಂಧನೆಗಳನ್ನು ರಕ್ಷಿಸಿದಂತಾಗುವುದು," ಎಂದನು.

ಕ್ರಮಿತನ ಅಸಹನೆ ಇಮ್ಮಡಿಸಿತು. ಅಧಿಕಾರ ದರ್ಪದಿಂದ ಅವನು,

"ಈ ನಿರರ್ಥಕ ವಿಚಾರಣೆ ಮುಂದುವರಿಯುವುದನ್ನು ಪ್ರಭುಗಳು ನಿಷೇಧಿಸಿದ್ದಾರೆ. ಅಪರಾಧ ನಡೆದಿದೆಯೆಂದು ನಿರ್ಧರಿಸಲು ಸಾಕಾದಷ್ಟು ಸಾಕ್ಷ್ಯಗಳು ಈಗ ನ್ಯಾಯಪೀಠದ ಮುಂದಿವೆ. ಅದರಂತೆ ದಂಡಾಜ್ಞೆಯ ತೀರ್ಪು ರಚಿತವಾಗಿದೆ. ಇದಕ್ಕೆ ನೀವು ಒಪ್ಪಿಗೆ ಕೊಡದೆಹೋದರೆ ಪ್ರಭುಕೋಪಕ್ಕೆ ಪಾತ್ರರಾಗಬೇಕಾಗುವುದು. ಸಹೋದ್ಯೋಗಿಯೆಂಬ ಅಭಿಮಾನದಿಂದ ನಿಮಗೆ ಮೊದಲೆ ಎಚ್ಚರಿಕೆ ಕೊಡುತ್ತಿದ್ದೇನೆ," ಎಂದನು.

ಮಂಚಣನ ಮುಖದಲ್ಲಿ ತಿರಸ್ಕಾರದ ಮಿದುನಗೆ ಅರಳಿತು. ಉಪೇಕ್ಷೆಯ ಚುಚ್ಚುದನಿಯಿಂದ ಅವನು.

"ಈ ಗೊಡ್ಡು ಬೆದರಿಕೆಗೆ ನಾನು ಅಂಜುವೆನೆಂದು ಭಾವಿಸಿದಿರಾ, ಕ್ರಮಿತರೆ? ಪ್ರಭುಸೇವೆಯಲ್ಲಿ ನಾನು ಜೀವಿತಕಾಲವೆಲ್ಲವನ್ನೂ ಕಳೆದಿದ್ದೇನೆ. ನನ್ನ ಅಧಿಕಾರಾವಧಿಯಲ್ಲಿ ನಿಮ್ಮಂತಹ ಅನೇಕ ಮಂದಿ ರಾಜಪುರೋಹಿತರು, ಧರ್ಮಾಧಿಕಾರಿಗಳು ಆಗಿಹೋದರು. ಈ ನಗೆಯಾಟ ನಿಲ್ಲಿಸಿ ವಿಚಾರಣೆ ಮುಂದುವರೆಯಲು ಏರ್ಪಡಿಸಿರಿ," ಎಂದನು.

ಕ್ರಮಿತನ ಕಣ್ಣುಗಳಿಂದ ಕೋಪದ ಕಿಡಿಗಳು ಹಾರಿದವು. ಪ್ರತಿಕ್ಷಣದಲ್ಲಿ ಅವನ ಮನಸ್ಸಿನ ಆವೇಗವನ್ನು ಮುಚ್ಚಿಟ್ಟು ವಂಚಕ ವಿನಯದಿಂದ,

"ಇದು ಗೊಡ್ಡು ಬೆದರಿಕೆಯಲ್ಲ ಮಂಚಣನವರೆ, ಹನ್ನೆರಡು ವರ್ಷಗಳ ಹಿಂದೆ ನೀವು ಅರ್ಥಮಂತ್ರಿಯಾಗಿದ್ದಾಗ, ಅಶ್ವವಾಣಿಜ್ಯದಲ್ಲಿ ನಡೆದ ರಾಜಧನದ ಅಪಹಾರ ಪ್ರಸಂಗವನ್ನು ಪ್ರಭುಗಳಿನ್ನೂ ಮರೆತಿಲ್ಲ. ಕೊನೆಗಾಲದಲ್ಲಿ ವಿಶ್ವಸಘಾತುಕನೆಂದು ಹೆಸರಾಗಿ ಸರ್ವಸ್ವವನ್ನೂ ಕಳೆದುಕೊಂಡು ಸೆರೆಮನೆಯಲ್ಲಿ ಸಾಯುವುದು ನಿಮಗಿಷ್ಟವೆ?" ಎಂದನು.

"ಅಪಹಾರ ನಡೆದದ್ದು ತೈಲಪಮಹಾರಾಜರ ಮನೆಹೆಗ್ಗಡೆ ಮಹದೇವರಸರಿಂದ. ಪ್ರಭುಗಳಿಗೆ ಆ ವಿಚಾರ ತಿಳಿದಿದೆ. ಒಬ್ಬರ ತಪ್ಪಿಗಾಗಿ ಮತ್ತೊಬ್ಬರನ್ನು ಶಿಕ್ಷಿಸುವಂತಹ ಅಚತುರರಲ್ಲ ಬಿಜ್ಜಳರಾಯರು," –ಮಂಚಣ ಅಷ್ಟೇ ವಿನಯದಿಂದ ಉತ್ತರ ಕೊಟ್ಟನು.

"ನೀವು ರಹಸ್ಯದಲ್ಲಿ ಶರಣಧರ್ಮದ ಅನುಮೋದಕರೆಂಬುದನ್ನೂ ಪ್ರಭುಗಳು ತಿಳಿದಿದ್ದಾರೆ."

ಈ ಸಾರಿ ಕ್ರಮಿತನ ವಾಗ್ಬಾಣ ಗುರಿಮುಟ್ಟಿತು. ಮಂಚಣ ಅಪ್ರತಿಭನಾಗಿ,

"ಬಿಜ್ಜಳರಾಯರ ಮಂತ್ರಿಗೆ ಮತಾಂತರದ ಸ್ವಾತಂತ್ರ್ಯವೂ ಇಲ್ಲವೆ?" ಎಂದು ನಿರಾಶೆಯಿಂದ ನುಡಿದನು.

"ಇದು ಕೇವಲ ಮತಾಂತರದ ವಿಚಾರವಲ್ಲ, ಮಂಚಣನವರೆ," ಕ್ರಮಿತನು ಹೇಳಿದನು. "ಹರಳಯ್ಯ ಮಧುವರಸರಂತೆ ನೀವು ಪ್ರಕಟವಾಗಿ ಶರಣಧರ್ಮವನ್ನು ಸ್ವೀಕರಿಸಿದ್ದರೆ ಮುದಿತನದ ಅವಿವೇಕವೆಂದು ಪ್ರಭುಗಳು ಸುಮ್ಮನಿರುತ್ತಿದ್ದರು. ನೀವು ಅನುಸರಿಸಿದ ರಹಸ್ಯವಿಧಾನ ಸಂದೇಹಕ್ಕೆಡೆಕೊಟ್ಟಿದೆ. ಶರಣರು ಪ್ರಾರಂಭಿಸಿರುವ ಧರ್ಮವಿಧ್ವಂಸಕ ಆಂದೋಳನಕ್ಕೆ ನೀವೂ ಕಾರಣರೆಂದು ಪ್ರಭುಗಳು ತಿಳಿದಿದ್ದಾರೆ".

ಕ್ರಮಿತನೊಡನೆ ವಾದ ಹೂಡುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದು ಆಗ ಮಂಚಣನಿಗೆ ಅರಿವಾಯಿತು. "ನಾಳೆ ನಾನು ಪ್ರಭುಗಳನ್ನು ನೋಡಿ ಎಲ್ಲವನ್ನೂ ಅರಿಕೆ ಮಾಡಿಕೊಳ್ಳುತ್ತೇನೆ. ನನ್ನಿಂದ ಅಪರಾಧವಾಗಿದ್ದರೆ ಅವರು ಶಿಕ್ಷೆ ವಿಧಿಸಲಿ. ಈಗ ಈ ವಾದ ಮುಗಿಸಿದರೆ ಒಳ್ಳೆಯದು." ಎಂದು ಅವನು ನಯವಾಗಿ ಹೇಳಿದನು.

"ತೀರ್ಪನ್ನು ನಾನು ನಾಳೆಯೇ ಪ್ರಭುಗಳಿಗೆ ಕಳುಹಿಸುತ್ತೇನೆ. ಅವರ ಸಮ್ಮುಖದಲ್ಲಿಯೇ ನೀವು ಒಪ್ಪಿಗೆ ಕೊಡಬಹುದು," –ಎಂದು ಹೇಳಿ ಕ್ರಮಿತನು ಬೀಳ್ಕೊಂಡನು.

ಆಮೇಲೆ ಮಂಚಣನು ಗರಬಡಿದವನಂತೆ ಬಹಳ ಹೊತ್ತು ನಿಶ್ಚಲನಾಗಿ ಕುಳಿತಿದ್ದನು. ಹಠಾತ್ತನೆ ತನ್ನ ಮೇಲೆ ಎರಗಿ ಬಂದಿದ್ದ ವಿಪತ್ತನ್ನು ಮರೆತು, ಬಾಳಿನ ಎಲ್ಲ ಪರಿಶ್ರಮ, ಎಲ್ಲ ಸಿದ್ಧಿಸಾಧನೆಗಳ ಪರಮಾರ್ಥ ವಿಫಲತೆಯ ಕಡೆಗೆ ಹರಿದಿತ್ತು ಅವನ ಚಿಂತೆ. ಅನುಭವಮಂಟಪದ ಶರಣರ ಮೈತ್ರಿಯಿಂದ ಅವನಲ್ಲಿ ಮೂಡಿದ್ದ ಶಾಂತಿಯೆದುರು, ವಿಪತ್ತಿನ ಭೀತಿ ತನ್ನ ತೀವ್ರತೆಯನ್ನು ಕಳೆದುಕೊಂಡಿತ್ತು.

ದೀಪಗಳಿಗೆ ಎಣ್ಣೆ ಹಾಕಿ ಸರಿಪಡಿಸಲು ಊಳಗಿತ್ತಿ ಒಳಗೆ ಬಂದಾಗ ಮಂಚಣನ ಚಿಂತೆ ಸರಿಯಿತು. ಕಾರ್ಯಕರ್ತನನ್ನು ಕರೆಯುವಂತೆ ಹೇಳಿ ಬರೆಯಲು ಕುಳಿತನು.

ಕಾರ್ಯಕರ್ತನು ಬರುವಷ್ಟರಲ್ಲಿ ಪತ್ರ ಮುಗಿದು ದಾರ ಸುತ್ತಿ ಸಿದ್ಧವಾಗಿತ್ತು. ಅದನ್ನು ಕಾರ್ಯಕರ್ತನಿಗೆ ಕೊಟ್ಟು ಮಂಚಣ, "ನಾಳಿನ ಮುಂಜಾವಿಗೆ ಈ ಪತ್ರವನ್ನು ಅನುಭವಮಂಟಪದ ಅತಿಥಿಶಾಲೆಯಲ್ಲಿರುವ ವೃದ್ಧ ಜಂಗಮ ಮಾಚಿದೇವರಿಗೆ ಕೊಡತಕ್ಕದ್ದು," ಎಂದು ಹೇಳಿದನು.

"ಮಾಚಿದೇವ ಎಂದರೆ ಮಡಿವಾಳ ಮಾಚಯ್ಯನವರೇ ಅಲ್ಲವೇ?"

–ಕಾರ್ಯಕರ್ತನು ಸಂದೇಹದಿಂದ ಪ್ರಶ್ನಿಸಿದನು.

"ಅಹುದು, ಕಲ್ಯಾಣ ಮಹಾನಗರವಾದರೂ ಆ ಹೆಸರಿನ ಇಬ್ಬರು ಮಹಾತ್ಮರನ್ನು ತಳೆದಿರುವುದು ಸಾಧ್ಯವಲ್ಲ. ಈಗ ನೀನು ಹೋಗಬಹುದು."

ಕಾರ್ಯಕರ್ತನು ವಂದಿಸಿ ಅಲ್ಲಿಂದ ಸರಿದಮೇಲೆ ಮಂಚಣ ತನ್ನ ವೃದ್ಧ ಪತ್ನಿಯನ್ನು ಕರೆದು, "ಪೂಜೆಗೆ ಕುಳಿತುಕೊಳ್ಳುವ ಮೊದಲು ನಾನು ಪುನಃ ಸ್ನಾನಮಾಡಬೇಕು," ಎಂದನು.

"ಏಕೆ? ನೀವು ಸ್ನಾನಮಾಡಿ ಒಂದು ಗಳಿಗೆ ಕೂಡ ಮುಗಿದಿಲ್ಲ !"

"ಸ್ನಾನ ಮಾಡಿದ ಕೂಡಲೆ ಪೂಜೆಗೆ ಕುಳಿತಿದ್ದರೆ ಸರಿಯಾಗುತ್ತಿತ್ತು. ವಿಶ್ರಾಂತಿಗಾಗಿ ಇಲ್ಲಿಗೆ ಬಂದದ್ದರಿಂದ ಮನಸ್ಸು ದೇಹಗಳು ಮಲಿನವಾದವು."

"ನಿಮ್ಮನ್ನು ನೋಡಲು ಬಂದಿದ್ದವರು ರಾಜಪುರೋಹಿತ ನಾರಣಕ್ರಮಿತರಲ್ಲವೆ? ಏನು ಹೇಳಿದರು ಆ ಮಂತ್ರವಾದಿ?"

"ಕ್ರಮಿತನು ಮಂತ್ರವಾದಿಯಲ್ಲದಿದ್ದರೂ ಅವನ ಮಾತುಕಥೆ ಅಭಿಚಾರದಷ್ಟೇ ಘೋರ, ಅಪವಿತ್ರ ! ನಾನು ಹಿಂದೆ ಒಂದು ವಿಚಾರ ಹೇಳಿದ್ದು ನೆನಪಿದೆಯೆ ?"

–ಮಂಚಣನ ನುಡಿಯಲ್ಲಿ ವಿಷಣ್ಣತೆ ಮೂಡಿತ್ತು.

"ಯಾವ ವಿಚಾರ?"

ಗೃಹಿಣಿ ಅಚ್ಚರಿಯಿಂದ ಪ್ರಶ್ನಿಸಿದಳು.

ಸಕಾಲದಲ್ಲಿ ಶಿವನ ಕರೆ ಬಾರದೆ ಹೋದರೆ ನಾವೇ ಹುಡುಕುತ್ತ ಹೋಗಬೇಕೆಂದು. ನಾವು ಬಹುದಿನದಿಂದ ನಿರೀಕ್ಷಿಸುತ್ತಿದ್ದ ಆ ಕಾಲ ಈಗ ಸನ್ನಿಹಿತವಾಗಿದೆ. ಅದಕ್ಕಾಗಿ ಎಲ್ಲವನ್ನೂ ಸಿದ್ಧಗೊಳಿಸಬೇಕಾಗುವುದು."

ಕೆಲವು ಕ್ಷಣಗಳು ಗೃಹಿಣಿ ಅವಾಕ್ಕಾಗಿ ನಿಂತಳು. ಅನಂತರ ಸಂಯತ ಆವೇಗದ ದೃಷ್ಟಿಯೊಂದನ್ನು ಪತಿಯ ಮೇಲೆ ಬೀರಿ, "ಆಜ್ಞೆಯಂತೆ ಎಲ್ಲಾ ಸಿದ್ಧ ಮಾಡುತ್ತೇನೆ," ಎಂದು ಹೇಳಿ ಒಳಗೆ ಹೋದಳು.

ಮರುದಿನ ಮುಂಜಾವಿನಲ್ಲಿ ಅನುಭವಮಂಟಪದ ಪ್ರಾರ್ಥನಾಸಭೆ ಮುಗಿಯುತ್ತಿದ್ದಂತೆ ವಟುವೊಬ್ಬನು ಮಂಚಣನ ಪತ್ರವನ್ನು ಮಾಚಿದೇವರಿಗೆ ತಂದುಕೊಟ್ಟನು.

"ಯಾರು ಇದನ್ನು ತಂದವರು?"

"ಯಾರೋ ಅಪರಿಚಿತ, ಗುರುಗಳೆ. ತುಸುಹೊತ್ತು ನಿಮಗಾಗಿ ಕಾದಿದ್ದ. ನೀವು ಬರಲಿಕ್ಕ ಹೊತ್ತಾಗ್ತದ ಅಂತ ಕೊಟ್ಟುಹೋದಾನ್ರಿ."

ಮಾಚಿದೇವರು ಕಟ್ಟು ಬಿಚ್ಚಿ ಓದಿದರು. ಮಂಚಣ ಬರೆದಿದ್ದನು :

"ದುಃಖಾತಿರೇಕದ ಕೆಟ್ಟ ಸುದ್ದಿಯೊಂದನ್ನು ನಿಮಗೆ ತಿಳಿಸುವುದು ನನ್ನ

ಕರ್ತವ್ಯವಾಗಿದೆ. ಪ್ರಸ್ತುತ ಬಂಧನದಲ್ಲಿರುವ ಮಧುವರಸ ಹರಳಯ್ಯ ಶೀಲ ವಂತರಿಗೆ ವರ್ಣಸಂಕರದ ಅಪರಾಧಕ್ಕಾಗಿ ಮರಣದಂಡನೆ ವಿಧಿಸಲು ಸರ್ವಾಧಿಕಾರಿ ಬಿಜ್ಜಳರಾಯರು ನಿರ್ಧರಿಸಿದ್ದಾರೆ. ಈ ಸಂಬಂಧವಾದ ದಂಡಾಜ್ಞೆಗೆ ನ್ಯಾಯಪೀಠದ ಅನುಮೋದನೆ ಪಡೆಯಲು ಈ ಸಂಜೆ ನಾರಣ ಕ್ರಮಿತರು ನನ್ನ ಬಳಿಗೆ ಬಂದಿದ್ದರು. ನಾನು ಒಪ್ಪಿಗೆ ಕೊಡಲು ನಿರಾಕರಿಸಿದಾಗ, 'ನೀವು ಗುಪ್ತಶರಣರೆಂಬುದನ್ನು ಬಯಲುಮಾಡುತ್ತೇನೆ," ಎಂದು ಬೆದರಿಕೆ ಹಾಕಿದರು. ಶರಣರ ಮೇಲೆ ನಿರಂತರ ದಬ್ಬಾಳಿಕೆ, ಶರಣಧರ್ಮದ ವಿಧ್ವಂಸ, ಇವು ಮುಂದೆ ಬಿಜ್ಜಳರಾಯರ ಆಡಳಿತ ಸೂತ್ರಗಳಾಗುತ್ತವೆ. ಈ ವಿಷಮ ಸನ್ನಿವೇಶದಲ್ಲಿ ಶರಣರ ರಕ್ಷಣೆಗಾಗಿ ನೀವು ನಿಮ್ಮ ಶಕ್ತಿ ಸಾಮರ್ಥ್ಯಗಳೆಲ್ಲವನ್ನೂ ಉಪಯೋಗಿಸಬೇಕಾಗುವುದು. ಈ ವಿಚಾರವನ್ನು ಅನುಭವಮಂಟಪದ ಪ್ರಮುಖ ಶರಣರಿಗೆ ರಹಸ್ಯವಾಗಿ ತಿಳಿಸಿ ಬಂಧನದಲ್ಲಿರುವವರ ಬಿಡುಗಡೆಗಾಗಿ ಪ್ರಯತ್ನಿಸಬೇಕೆಂದು ನನ್ನ ಸಲಹೆ.

ಇತಿ, ಮಂಚಣ."

ಸಭೆ ಮುಗಿದು ಶರಣರೆಲ್ಲ ಹೊರಗೆ ಹೋದಮೇಲೆ ಮಾಚಿದೇವರು ಸಕಲೇಶ ಮಾದರಸ, ಚೆನ್ನಬಸವಣ್ಣನವರಿಗೆ ಪತ್ರದ ವಿಚಾರ ತಿಳಿಸಿದರು.

ಪತ್ರವನ್ನು ಓದಿದಾಗ ಚೆನ್ನಬಸವಣ್ಣನವರ ಮುಖ ವಿವರ್ಣವಾಯಿತು. ಕಾತರದಿಂದ ಅವರು, "ಬಂಧಿಗಳನ್ನು ಉಳಿಸಲು ನಾವು ಎಲ್ಲ ಪ್ರಯತ್ನಗಳನ್ನೂ ಮಾಡಬೇಕು," ಎಂದರು.

"ಅದು ಅಷ್ಟು ಸುಲಭವಾದ ಕಾರ್ಯವಲ್ಲ. ಮಂಗಳವೇಡೆಗೆ ಹೋಗಿದ್ದ ಬಿಜ್ಜಳನ ದೊಡ್ಡ ಸೈನ್ಯ, ಕರ್ಣದೇವನ ಅಧೀನದಲ್ಲಿ ನಾಳೆ ಕಲ್ಯಾಣಕ್ಕೆ ಹಿಂದಿರುಗುತ್ತದೆ. ಮಂಚಣನವರೇ ಹೇಳಿರುವಂತೆ ಶರಣರ ನಾಶ ಬಿಜ್ಜಳನ ಉದ್ದೇಶವಾದರೆ, ನಗರ ಸೈನ್ಯಶಿಬಿರವಾಗುತ್ತದೆ. ದಂಡಾಜ್ಞೆಯನ್ನು ನಾವು ಪ್ರತಿಭಟಿಸುವೆವೆಂಬ ಸಂದೇಹ ಹುಟ್ಟಿದರೂ ಬಂಧಿಗಳ ರಹಸ್ಯವಧೆಗೆ ಬಿಜ್ಜಳನು ಆಜ್ಞೆಮಾಡಬಹುದು. ಈ ಸಂದರ್ಭದಲ್ಲಿ ನಾವು ಬಹಳ ಎಚ್ಚರದಿಂದ ವರ್ತಿಸಬೇಕು."

–ಮಾಚಿದೇವರು ಯೋಚಿಸಿ ಹೇಳಿದರು.

"ಹಾಗಾದರೆ ನಿಮ್ಮ ಸಲಹೆಯೇನು?" ಎಂದರು ಸಕಲೇಶ ಮಾದರಸರು.

"ಚಾಲುಕ್ಯರಾಜ್ಯದ ಶೈವಮಠಗಳಿಗೆ, ಶರಣಧರ್ಮದ ಪ್ರೋತ್ಸಾಹಕರಾದ ಸಾಮಂತರಿಗೆ, ಇಂದೇ ರಹಸ್ಯವಾಗಿ ಸುದ್ದಿ ಕಳುಹಿಸುತ್ತೇನೆ. ಅವರಿಂದ ಸಹಾಯ ಬರಲು ಒಂದೆರಡು ವಾರಗಳಾದರೂ ಆಗಬಹುದು. ಈ ಅವಧಿಯಲ್ಲಿ ನಾವು ಬಂಧಿಗಳ ಪರವಾಗಿ ಕ್ಷಮಾಯಾಚನೆಯ ಮನವಿಯೊಂದನ್ನು ಸಿದ್ಧಗೊಳಿಸಿ,

ಕಲ್ಯಾಣದ ಪ್ರಮುಖ ನಾಗರಿಕರ ಒಪ್ಪಿಗೆ ಪಡೆದು ಬಿಜ್ಜಳನಿಗೆ ಅರ್ಪಿಸಬೇಕು."

ಮಾಚಿದೇವರ ಸಲಹೆಯ ಹಿಂದಿದ್ದ ಹಿಂಸಾಮಾರ್ಗದ ಸುಳಿವು ತಿಳಿದು ಚೆನ್ನಬಸವಣ್ಣನವರು, "ಆತ್ಮರಕ್ಷಣೆಗಾಗಿ ಬಲಪ್ರಯೋಗವನ್ನು ನಿರಾಕರಿಸಿ ಬಸವಣ್ಣನವರು ಕಲ್ಯಾಣವನ್ನು ತ್ಯಜಿಸಿದರು. ನಾವು ಆ ಆದರ್ಶವನ್ನು ರಕ್ಷಿಸಿಕೊಳ್ಳುವುದು ಅಗತ್ಯ. ಸಾಮಂತರಿಗೆ ಬರೆಯುವುದರಿಂದ ನಾಡಿನಲ್ಲಿ ಕ್ರಾಂತಿಗೆ ಕರೆಕೊಟ್ಟಂತಾಗುವುದಿಲ್ಲವೆ?" ಎಂದರು.

"ಬಲಪ್ರಯೋಗ ನನ್ನ ಉದ್ದೇಶವೂ ಅಲ್ಲ," ಮಾಚಿದೇವರು ಹೇಳಿದರು. "ಆದರೆ ಬಿಜ್ಜಳನ ಸೈನ್ಯಬಲ ಶರಣಧರ್ಮದ ಆಕ್ರಮಣಕ್ಕೆ ಅನುವಾಗುತ್ತಿರುವಾಗ ಶಕ್ತಿಯನ್ನು ಶಕ್ತಿಯಿಂದ ಎದುರಿಸಲು ನಾವು ಸಿದ್ಧರಾಗಬೇಕು. ಅನುಭವಮಂಟಪದ ಜ್ಞಾನವೃದ್ಧರು ಅಹಿಂಸಾ ಮಾರ್ಗವನ್ನು ಅನುಸರಿಸಲಿ. ಆದರೆ ಶರಣಧರ್ಮದ ಅನುಯಾಯಿಗಳಾದ ಭಕ್ತರ, ನಾಗರಿಕರ ರಕ್ಷಣೆಗೆ ಬಲಪ್ರಯೋಗ ಅಗತ್ಯವಾಗುವುದು. ಮುಂದೆ ನಮಗೊದಗಬಹುದಾದ ವಿಷಯ ಸಂಕಟದಲ್ಲಿ ಶರಣಧರ್ಮದ ರಕ್ಷಣೆ ನಾವು ಭರಿಸಲಾಗದ ದೊಡ್ಡ ಹೊರೆಯಾಗುವುದು. ಈಗಿನಿಂದ ನಾವು ಅದಕ್ಕೆ ಸಿದ್ಧರಾಗಬೇಕು."

ಚೆನ್ನಬಸವಣ್ಣನವರಿಗೆ ತಮ್ಮ ದೌರ್ಬಲ್ಯದ ಅರಿವಾಯಿತು. ತುಸು ಹೊತ್ತು ಯೋಚಿಸುತ್ತಿದ್ದು ಅವರು,

"ನಾನು ಆ ರಕ್ಷಣಾಕಾರ್ಯಕ್ಕೆ ಸಮರ್ಥನಲ್ಲ, ಮಾಚಿದೇವಯ್ಯನವರೆ. ಬಿಜ್ಜಳರಾಯನ ನಿರಂಕುಶ ದಬ್ಬಾಳಿಕೆ ಉಗ್ರರೂಪ ತಾಳಿದರೆ ಬಸವಣ್ಣನವರಂತೆ ಅನುಭವ ಮಂಟಪದ ಶರಣರೂ ಕಲ್ಯಾಣವನ್ನು ಬಿಡಬೇಕಾಗುವುದು. ಈ ವಿಷಯ ಸಂಕಟದಲ್ಲಿ ಶರಣರ ರಕ್ಷಣೆಯ ಹೊಣೆಯನ್ನು ನೀವೇ ವಹಿಸಿಕೊಳ್ಳಬೇಕಾಗಿ ಬೇಡುತ್ತೇನೆ," ಎಂದರು.

"ಬಿಜ್ಜಳನಿಂದ ನಿರ್ವಾಸಿತರಾಗಿ ಬಸವಣ್ಣನವರು ಕಲ್ಯಾಣವನ್ನು ಬಿಟ್ಟರು. ನೀವು ಕಲ್ಯಾಣವನ್ನು ಬಿಟ್ಟು ಎಲ್ಲಿಗೆ ಹೋಗಲು ಯೋಚಿಸಿರುವಿರಿ? ಪ್ರಾಣಭಯದಿಂದ ಓಡಿಹೋಗುವುದು ಮಹಮನೆಯ ಅಹಿಂಸಾವಾದಿ ಶರಣರಿಗೆ ಸಲ್ಲ." –ಮಾಚಿದೇವರ ನುಡಿಗಳಲ್ಲಿ ಕಟಕಿ ತಲೆಹಾಕಿತ್ತು.

ಚೆನ್ನಬಸವಣ್ಣನವರು ಅದನ್ನು ಗಮನಿಸಲಿಲ್ಲ. ನಿರ್ಲಿಪ್ತತೆಯ ಆವೇಗದಿಂದ ಅವರು ಹೇಳಿದರು :

"ಪ್ರಾಣಭಯದಿಂದ ಶರಣರು ಕಲ್ಯಾಣವನ್ನು ಬಿಡಬೇಕೆಂದು ನಾನು ಹೇಳುತ್ತಿಲ್ಲ, ಮಾಚಿದೇವಯ್ಯನವರೆ. ಅದಕ್ಕೆ ಮತ್ತೊಂದು ಮುಖ್ಯ ಕಾರಣವಿದೆ. ಕಳೆದ ಹನ್ನೆರಡು

ವರ್ಷಗಳಿಂದ ಬಸವಣ್ಣನವರು ಶರಣಧರ್ಮಕ್ಕೆ ಆಧಾರವಾದ ಅನೇಕ ಗ್ರಂಥಗಳನ್ನು ಪ್ರಯಾಸದಿಂದ ಸಂಗ್ರಹಿಸಿದ್ದಾರೆ. ಅದಕ್ಕಾಗಿ ಅವರೊಂದು ಸಾರಿ ಗುಪ್ತ ವೇಷದಿಂದ ಕಾಶ್ಮೀರಕ್ಕೆ ಹೋಗಬೇಕಾಯಿತು. ಶೈವಾಗಮಗಳು, ಪುರಾತನ ವಚನಗಳು ಅನುಭವಮಂಟಪದಲ್ಲಿ ಅಂದಂದಿಗೆ ನಡೆದ ಅನುಭಾವ ಗೋಷ್ಠಿಯ ವರದಿಗಳು, ಧರ್ಮ ಸಾಹಿತ್ಯಗಳ ಬಗೆಗೆ ಶರಣರಿಂದ ರಚಿತವಾದ ಪ್ರಬಂಧಗಳು, ಈ ಸಂಗ್ರಹದಲ್ಲಿ ಸೇರಿರುತ್ತವೆ. ಮಹಮನೆಯ ಸರಸ್ವತೀ ಭಂಡಾರದಲ್ಲಿರುವ ಈ ಸಾಹಿತ್ಯ ಸಂಗ್ರಹವೇ ಶರಣಧರ್ಮದ ಜೀವಾಳ, ಅಸ್ತಿತ್ವದ ಅಡಿಗಲ್ಲು. ಕಲ್ಯಾಣ ಕ್ರಾಂತಿಯ ದಳ್ಳುರಿಯಲ್ಲಿ ಈ ಗ್ರಂಥ ಭಂಡಾರ ನಾಶವಾಗದಂತೆ ನೋಡಿಕೊಳ್ಳುವುದು ಈಗ ನಮ್ಮ ಮುಖ್ಯ ಹೊಣೆ. ಜನಸ್ಥಾನದಿಂದ ದೂರವಾದ ಯಾವುದಾದರೊಂದು ದುರ್ಗಮ ಸ್ಥಳದಲ್ಲಿ ಈ ಗ್ರಂಥ ಭಂಡಾರವನ್ನು ಜೋಪಾನಗೊಳಿಸುವುದು ಮೊದಲಿಂದ ಬಸವಣ್ಣನವರ ಉದ್ದೇಶವಾಗಿತ್ತು. ಅದಕ್ಕಾಗಿ ಅವರು ಬನವಾಸಿ ನಾಡಿನಲ್ಲಿ, ಸಹ್ಯಾದ್ರಿಶೃಂಗಗಳ ನಡುವೆ, ಒಂದು ಸ್ಥಾನದಲ್ಲಿ ಆಶ್ರಮ ಮಹಮನೆಗಳನ್ನು ರಚಿಸಿದರು. ಗ್ರಂಥ ಭಂಡಾರವನ್ನು ಆ ಸ್ಥಳಕ್ಕೆ ಸಾಗಿಸಿ ಪ್ರಕೃತಿರಮ್ಯವಾದ ನಿರ್ಜನಾರಣ್ಯದಲ್ಲಿ, ಮಾನವನ ಆಸೆ ಆಕಾಂಕ್ಷೆ, ಸ್ಪರ್ಧೆ ಹೋರಾಟ, ಕ್ರೌರ್ಯ ಹಿಂಸೆಗಳಿಂದ ದೂರವಾಗಿ ಆಶ್ರಮವಾಸದಲ್ಲಿ ತಮ್ಮ ಕೊನೆಯ ದಿನಗಳನ್ನು ಕಳೆಯಲು ಬಸವಣ್ಣನವರು ಯೋಚಿಸಿದ್ದರು. ಅವರ ಆ ಉದ್ದೇಶವನ್ನು ಕಾರ್ಯಗತವಾಗಿ ಮಾಡಲು ನಾನು ನಿರ್ಧರಿಸಿದ್ದೇನೆ. ನನ್ನ ಜೀವಿತ ಕಾಲವೆಲ್ಲವನ್ನೂ ಅನುಭಾವಿ ಶರಣರ ಸಹವಾಸದಲ್ಲಿ ಆಶ್ರಮವಾಸಿಯಾಗಿ ಕಳೆಯುವುದು ನನ್ನ ಪರಮೋದ್ದೇಶ. ಚಾಲುಕ್ಯ ರಾಜ್ಯದಲ್ಲಿ ಬಸವಣ್ಣನವರು ಹಚ್ಚಿದ ಧಾರ್ಮಿಕ ಪುನರುಜ್ಜೀವನದ ನಂದಾದೀಪ, ಬಸವಣ್ಣನವರು ಹರಿಯಿಸಿದ ನವಜಾಗ್ರತಿಯ ಮಹಾಪೂರ, ರಾಜ್ಯಕ್ರಾಂತಿಯ ಪ್ರಳಯದಲ್ಲಿ ಕೊಚ್ಚಿಹೋಗದಿರಬೇಕಾದರೆ ನಮಗಿರುವ ಉಳಿವೆಯ ಮಾರ್ಗ ಇದೊಂದೇ ಎಂದು ನಾನು ದೃಢವಾಗಿ ನಂಬಿದ್ದೇನೆ. ಕಲ್ಯಾಣದಲ್ಲಿ ಶರಣರ ಮಣಿಹ ಮುಗಿಯಿತು. ಕ್ರಾಂತಿಯ ಕಿಚ್ಚು ಹರಡುವ ಮುನ್ನ ನಾವು ಕಲ್ಯಾಣವನ್ನು ಬಿಡಬೇಕೆಂದು ಶರಣರಲ್ಲಿ ನನ್ನ ಬಿನ್ನಹ."

ಭಾವಾವೇಶದಿಂದ ಚೆನ್ನಬಸವಣ್ಣನವರು ತಮ್ಮನ್ನು ತಾವೇ ಮರೆತರು. ಕಂಠ ಗದ್ಗದಿತವಾಯಿತು. ದೂರದ ಯಾವುದೋ ಅಜ್ಞಾತ ಅಪರಿಚಿತ ಅಗೋಚರ ಬಯಲೊಂದು ಕಣ್ಣೆದುರಿಗೆ ನಿಂತಂತೆ ದೃಷ್ಟಿ ಸ್ಥಿರವಾಯಿತು. ಭಾವಪಾರವಶ್ಯದ ಈ ಅಪೂರ್ವ ದರ್ಶನವನ್ನು ಕಂಡು ಸಕಲೇಶ ಮಾದರಸರು, ಮಾಚಿದೇವರು ವಿಚಲಿತರಾಗಿ ಚೆನ್ನಬಸವಣ್ಣನವರ ಮುಖವನ್ನು ನೋಡುತ್ತಾ ಸುಮ್ಮನೆ ಕುಳಿತರು.

ತುಸು ಹೊತ್ತಿನ ಮೇಲೆ ಮಾಚಿದೇವರು ಮೃದುವಾಗಿ ನಕ್ಕು, ಆದರಾಭಿಮಾನಗಳ ತುಂಬು ಕಂಠದಿಂದ,

“ನೀವು ನಿಜವಾಗಿ ಕಾರಣಪುರುಷರು, ಚೆನ್ನಬಸವಣ್ಣನವರೆ. ಅದರಿಂದಲೇ ಈ ತರುಣ ವಯಸ್ಸಿನಲ್ಲಿ ಆದರ್ಶಸಾಧನೆಗೆ ಅಗತ್ಯವಾದ ತ್ಯಾಗ ವೈರಾಗ್ಯಗಳೂ ನಿಮಗೆ ಲಭಿಸಿವೆ. ಮಧುವರಸರು ನ್ಯಾಯಪೀಠದ ಮುಂದೆ ಕೊಟ್ಟ ಹೇಳಿಕೆಯನ್ನು, ‘ಭಕ್ತಿ ಪ್ರಧಾನವಾದ ಶೈವಧರ್ಮದಲ್ಲಿ ವೀರತ್ವವನ್ನು ಮೂಡಿಸಲು ಶರಣರು ಪಣ ತೊಡಬೇಕಾಗುವುದು’ ಎಂದು ಮುಗಿಸಿದರಂತೆ. ನಾನು ಆ ಆದರ್ಶದಂತೆ ನಡೆದು ಶರಣರ ರಕ್ಷಣೆಗೆ ಪ್ರಯತ್ನಿಸುತ್ತೇನೆ. ಜ್ಞಾನವೃದ್ಧರಾದ ನೀವು ನಿಮಗೆ ಉಚಿತವಾದ ಆದರ್ಶ ಪಥದಲ್ಲಿ ನಡೆದು ಶರಣಧರ್ಮದ ಉದ್ಧಾರ ಮಾಡಿರಿ. ನಿಮ್ಮನ್ನೂ ನಿಮ್ಮ ಸಂಗಡ ಕಲ್ಯಾಣವನ್ನು ಬಿಡುವ ಅನುಭಾವೀಶರಣರನ್ನೂ, ಸಹ್ಯಾದ್ರಿ ಮಧ್ಯದ ಉಳಿವೆಯ ಮಹಾಮನೆಗೆ ಸುರಕ್ಷಿತವಾಗಿ ಕಳುಹಿಸಲು ನಾನು ನೆರವಾಗುತ್ತೇನೆ,” ಎಂದು ಹೇಳಿದರು.

ಆಮೇಲೆ ಅವರು ಬಂಧಿಗಳ ಪರವಾಗಿ ಬಿಜ್ಜಳನಿಗೆ ಸಲ್ಲಿಸಬೇಕಾದ ಮನವಿ ಪತ್ರದ ರಚನೆ, ಸಾಮಂತರಿಗೆ ಕಳುಹಿಸುವ ರಹಸ್ಯ ಪತ್ರ, ಇವುಗಳ ವಿವರಗಳನ್ನು ಪರ್ಯಾಲೋಚಿಸುತ್ತಿದ್ದಂತೆ, ನಗರದಿಂದ ಭಕ್ತ ಬಣಜಿಗನೊಬ್ಬನು ಸಂದರ್ಶನಕ್ಕೆ ಬಂದಿರುವುದಾಗಿ ವಟು ತಿಳಿಸಿದನು.

“ನಗರದ ಸುದ್ದಿ ಕೇಳಿದ್ರ ಅಣ್ಣಾ ಅವ್ರ?” –ಎನ್ನುತ್ತ ಬಣಜಿಗ ಒಳಗೆ ಬಂದನು.

“ಏನಾಯಿತು ಶೆಟ್ಟರೆ?” –ಮಾಚಿದೇವರು ಕುತೂಹಲದಿಂದ ಪ್ರಶ್ನಿಸಿದರು.

“ಮಂಚಣ ಮಂತ್ರಿಗಳ ಮನೀಮುಂದ ಭರಪೂರಾ ಜನಾ ಸೇರಾರ್ರಿ. ರಾಜ ಪುರೋಹಿತ ಕ್ರಮಿತರು ಭಟರನ್ನೂ ಕರಸಾರ.”

“ಭಟರು ಮಂಚಣನವರನ್ನು ಸೆರೆಹಿಡಿದರೆ?”

“ಸೆರೀ ಹಿಡಿಯೋ ಹಾಂಗಿಲ್ಲ. ಈಗವ್ರು ಅಂತಸ್ಥ!”

“ಅಂದರೆ? ಅರ್ಥವಾಗುವ ಹಾಗೆ ಹೇಳಿರಿ, ಶೆಟ್ಟರೆ?”

“ಹೇಳತೇನ್ರಿ ಅಣ್ಣಾವ್ರ. ಇಂದು ಮುಂಜಾವಿನಾಗ ಊಳಿಗದೋರು ಮಂಚಣನವರ ಮನೆಗೆ ಹೋದಾಗ ಬಾಗಿಲು ಮುಚ್ಚಿತ್ತಂತ್ರಿ. ಎಷ್ಟು ಕೂಗಿದ್ರೂ ತೆಗೀಲಿಲ್ಲ. ನೆರೆಹೊರೆಯೋರು ಸೇರಿ ಗೊಂದಲ ಹಚ್ಚಿದರೂ ತೆಗೀಲಿಲ್ಲ. ಅಷ್ಟರಲ್ಲಿ ರಾಜಪುರೋಹಿತರ ರಥಾ ಅಲ್ಲೀಗೆ ಬಂತ್ರಿ. ಅವರು ಅಲ್ಲಿನ ವಿಚಾರಗಳ್ನ ತಿಳ್ದು, ಭಟರನ್ನ ಕರೆಸಿ ಬಾಗಿಲಾ ಹೊಡಿಸಾರಂತ. ಆಗ ತಿಳೀತ್ರಿ....”

"ಏನು ತಿಳಿದದ್ದು?"

"ಮಂಚಣ್ಣಾವ್ರು, ಅವರ ಕುಟುಂಬ, ಒಟ್ಟಿಗೇ ಪ್ರಾಣಬಿಟ್ಟಿದ್ರು."

ಮಾಚಿದೇವರು ಸ್ತಂಭಿತರಾಗಿ ಚೆನ್ನಬಸವಣ್ಣನವರ ಮುಖ ನೋಡಿದರು.

ಬಣಜಿಗ ಮುಂದುವರಿದು, "ಪೂಜೇಗೆ ಕುಂತಹಾಂಗಾ ಪ್ರಾಣಬಿಟ್ಟಾರ್ರಿ ಮಂಚಣ್ಣಾವ್ರು. ಅವ್ರ ಕೈಲಿದ್ದ ಲಿಂಗದೇವರನ್ನು ಕಂಡಾಗ ಕ್ರಮಿತರಿಗೆ ತಿಳೀತು, ಮಂಚಣನವ್ರು ಶಿವಭಕ್ತರಂತ. ಸದಾಚಾರಿ ಮಠದ ಭಕ್ತರನ್ನ ಕರೆಸಿ ಗಂಡ ಹೆಂಡಿರ ಸಂಸ್ಕಾರಕ್ಕೆ ಏರ್ಪಡಿಸಾರ," ಎಂದು ಮುಗಿಸಿದನು.

"ಶರಣರೆಂದು ತಿಳಿದಮೇಲೆ ಸಂಸ್ಕಾರವನ್ನು ಶರಣರಿಗೊಪ್ಪಿಸುವ ಮಾನವೀಯತೆ ಇನ್ನೂ ಉಳಿದಿದೆ ಕ್ರಮಿತರಲ್ಲಿ !" –ಎಂದು ಉದ್ಗಾರ ತೆಗೆದರು ಸಕಲೇಶ ಮಾದರಸರು.

ಹಿಂದಿನ ರಾತ್ರಿ ಊಳಿಗದವರನ್ನು ಮನೆಗೆ ಕಳುಹಿಸಿ ಮಂಚಣ, ಅವರ ಪತ್ನಿ, ಇಬ್ಬರೇ ಮನೆಯಲ್ಲಿದ್ದರೆಂದೂ, ಕಾರ್ಯಕರ್ತ ಕಾಣೆಯಾಗಿರುವನೆಂದೂ ಬಣಜಿಗನಿಂದ ತಿಳಿಯಿತು. ಮನೆಯ ಒಡವೆ ವಸ್ತುಗಳೂ ಯಥಾಸ್ಥಿತಿಯಲ್ಲಿದ್ದವು. ವೃದ್ಧ ದಂಪತಿಗಳು ವಾರ್ಧಿಕ್ಯದ ದುರ್ಬಲತೆಯಿಂದ ಪ್ರಾಣಬಿಟ್ಟಿರಬೇಕೆಂದು ಜನರು ತಿಳಿದಿದ್ದಾರೆ. ಅಸೂಯಾಪರರಾದ ಕೆಲವರು ಆತ್ಮಹತ್ಯೆಯೆಂದು ಸಂದೇಹಿಸಿದರು.

ಬಣಜಿಗನು ಹೋದಮೇಲೆ ಚೆನ್ನಬಸವಣ್ಣನವರು, "ಪರೋಕ್ಷ ವಿನಯಕ್ಕಾಗಿ ನಾವು ಅಲ್ಲಿಗೆ ಹೋಗಿಬರಬೇಕು," ಎಂದರು.

"ನಾನು ಆ ಕಾರ್ಯ ಮಾಡುತ್ತೇನೆ. ನಿಮ್ಮನ್ನಲ್ಲಿ ನೋಡಿದರೆ ಕ್ರಮಿತರಿಗೆ ಸಂದೇಹ ಹುಟ್ಟಬಹುದು. ಮಂಚಣ ಶರಣನೆಂಬುದು ನಿಮಗೆ ತಿಳಿದಿತ್ತೆಂದು ಭಾವಿಸಬಹುದು." –ಎಂದು ಮಾಚಿದೇವರು ತಡೆದರು.

"ಮಂಚಣನವರು ಗುಪ್ತಶರಣರೆಂದು ನಿಮಗೆ ಮೊದಲೇ ತಿಳಿದದ್ದು ಹೇಗೆ?"

–ತುಸು ಹೊತ್ತಿನಮೇಲೆ ಚೆನ್ನಬಸವಣ್ಣನವರು ಕೇಳಿದರು.

"ನನ್ನ ಗುರುಗಳಾದ ಹಿಪ್ಪರಿಗೆಯ ಮಲ್ಲಿಕಾರ್ಜುನದೇವರೇ ಮಂಚಣನವರ ದೀಕ್ಷಾ ಗುರುಗಳಾಗಿದ್ದರು. ಆಗ ಮಂಚಣ ಹೇಳಿದ್ದರು, 'ರಾಜಕೀಯ ಕಾರಣಗಳಿಗಾಗಿ ನಾನು ಗುಪ್ತನಾಗಿದ್ದೇ ಶರಣರ ಸೇವೆ ಮಾಡುತ್ತೇನೆ. ರಹಸ್ಯ ಬಯಲಾದ ಮೇಲೆ ಒಂದು ಗಳಿಗೆಯೂ ಉಳಿಯುವುದಿಲ್ಲ' ಎಂದು. ನುಡಿದಂತೆ ನಡೆದುಕೊಂಡಿದ್ದಾರೆ," –ಎಂದು ಮಾಚಿದೇವರು ಉತ್ತರ ಕೊಟ್ಟರು.

ಮಂಚಣನಾಯಕನ ಅನಿರೀಕ್ಷಿತ ಮೃತ್ಯು, ಆಪಾದಿತ ಶರಣರ ಪರವಾಗಿ ಕಲ್ಯಾಣದ ನಾಗರಿಕರು ಒಪ್ಪಿಸಿದ ಕ್ಷಮಾಯಾಚನೆಯ ಮನವಿ ಪತ್ರ, ಬಿಜ್ಜಳನ ಸೈನ್ಯದ ಮುಖ್ಯಭಾಗ ಮಂಗಳವೇಡೆಯಿಂದ ಕಲ್ಯಾಣಕ್ಕೆ ಹಿಂತಿರುಗಲು ತಡವಾದದ್ದು, ಈ ಕಾರಣಗಳಿಂದ ಮರಣದಂಡನೆಯ ಆಜ್ಞೆ ಯಥಾಕಾಲದಲ್ಲಿ ಪ್ರಕಟವಾಗಲಿಲ್ಲ.

ಮಂತ್ರಿಮಂಡಲದಲ್ಲಿ ಹಿರಿಯನೂ, ವಯೋವೃದ್ಧನೂ ಆಗಿದ್ದ ಮಂಚಣ ನಾಯಕನ ಒಪ್ಪಿಗೆ ಪಡೆಯುವುದರಿಂದ ನ್ಯಾಯಪೀಠದ ತೀರ್ಪು ಜನಪ್ರಿಯವಾಗುವುದೆಂದು ಬಿಜ್ಜಳನು ಭಾವಿಸಿದ್ದನು. ಒಪ್ಪಿಗೆ ಕೊಡುವ ಮುನ್ನ, ಸಂದೇಹಾಸ್ಪದವಾದ ರೀತಿಯಲ್ಲಿ ಮಂಚಣನು ಮೃತನಾದ ಸುದ್ದಿ ಕೇಳಿ ಬಿಜ್ಜಳನು ಚಡಪಡಿಸಿದನು. ಲಜ್ಜೆಯಿಂದ ತಲೆಬಾಗಿ ಪ್ರಭುವಿನ ಬಿರುನುಡಿಗಳನ್ನು ಕೇಳಬೇಕಾದ ಪರಿಸ್ಥಿತಿಯುಂಟಾಗಿ ಕ್ರಮಿತನು ಕೊರಗಬೇಕಾಯಿತು. ಮರುದಿನ ಚೆನ್ನಬಸವಣ್ಣನವರ ನೇತೃತ್ವದಲ್ಲಿ ಕಲ್ಯಾಣದ ಪ್ರಮುಖ ಶರಣರು, ನಾಗರಿಕರು ಆಪಾದಿತರ ಪರವಾಗಿ ಕ್ಷಮಾಯಾಚನೆಯ ಮನವಿಪತ್ರವನ್ನು ಸಲ್ಲಿಸಿದಾಗ ಕ್ರಮಿತನು ಪುನಃ ತಲೆಬಾಗಿದನು.

ನಿಯೋಗದ ಬಿನ್ನಪವನ್ನು ಕೇಳಿದ ಮೇಲೆ ಬಿಜ್ಜಳನು ರಾಜಕೀಯ ಚತುರತೆಯಿಂದ, "ನ್ಯಾಯಪೀಠದ ತೀರ್ಪು ನಮಗಿನ್ನೂ ತಲುಪಿರುವುದಿಲ್ಲ. ಬಂದಮೇಲೆ ನಿಮ್ಮ ಮನವಿಪತ್ರವನ್ನು ಪರಿಶೀಲಿಸಿ ಆಜ್ಞೆ ಮಾಡುತ್ತೇವೆ," ಎಂದು ಹೇಳಿ ಸಂದರ್ಶನ ಮುಗಿಸಿದನು. ನಿಯೋಗ ಸಭಾಗೃಹದಿಂದ ನಿರ್ಗಮಿಸಿದ ಮೇಲೆ ಕ್ರಮಿತನ ಕಡೆ ತಿರುಗಿ ಅವನು, "ಮುಗಿಯಿತೇ ನಿಮ್ಮ ವರ್ಣಸಂಕರದ ನಾಟಕ! ಈ ಹುಚ್ಚಾಟವನ್ನು ಪ್ರಾರಂಭಿಸಿದವರು ನೀವು. ಈಗ ಅದರ ಬಿಸಿ ನಮ್ಮನ್ನು ಸುಡುತ್ತಿದೆ." ಎಂದು ಕಟಕಿಯಾಡಿದನು.

ಕ್ರಮಿತನು ನಡುಗಿದನು. ವರ್ಣಸಂಕರದ ವ್ಯವಹಾರ ಅವನಿಗೆ ಜೀವನ ಮರಣಗಳ ಪ್ರಶ್ನೆಯಾಗಿತ್ತು. ರಾಜಪುರೋಹಿತನಿಗೆ ಸಹಜವಾದ ಉದ್ಧಟತನದಿಂದ ಅವನು, "ಚೆನ್ನಬಸವಣ್ಣನವರ ಕಾರ್ಯಚತುರತೆ ಪ್ರಭುಗಳನ್ನು ವಂಚಿಸಿದಂತಿದೆ. ಒಬ್ಬಿಬ್ಬರ ಹೊರತಾಗಿ ನಿಯೋಗದಲ್ಲಿದ್ದವರೆಲ್ಲ ಶರಣರೆಂಬುದನ್ನು ನೀವು ಗಮನಿಸಲಿಲ್ಲವೆ? ನಿಯೋಗದಲ್ಲಿದ್ದವರ ಪಟ್ಟಿ ನನ್ನಲ್ಲಿದೆ, ಅದು ಕಲ್ಯಾಣದ ನಾಗರಿಕರನ್ನು ಪ್ರತಿನಿಧಿಸುವುದಿಲ್ಲ," ಎಂದು ಹೇಳಿ ಪತ್ರವನ್ನು ಬಿಜ್ಜಳನ ಮುಂದಿಟ್ಟನು.

"ನಿಯೋಗವು ನಾಗರಿಕರನ್ನು ಪ್ರತಿನಿಧಿಸುವುದೇ ಇಲ್ಲವೇ ಎಂಬುದನ್ನು ನಾವು ಕೊನೆಗೆ ನಿರ್ಧರಿಸಬಹುದು. ಮನವಿ ಪತ್ರಕ್ಕೆ ನಮ್ಮ ಉತ್ತರವೇನು.?"

ಪಟ್ಟಿಯನ್ನು ನೋಡಿ ಬಿಜ್ಜಳನು ಪ್ರಶ್ನಿಸಿದನು.

ಕ್ರಮಿತನು ಕುಹಕದ ನಗೆಬೀರಿ, "ಉತ್ತರವೇನೆಂಬುದನ್ನು ನೀವಾಗಲೇ

ಸೂಚಿಸಿದಿರಲ್ಲವೆ? ನೀವು ಒಪ್ಪುವುದಾದರೆ ವರ್ಣಸಂಕರದ ಅಪರಾಧಕ್ಕೆ ಮರಣ ದಂಡನೆಯನ್ನು ಒತ್ತಾಯಪಡಿಸುವ ವೈದಿಕ ನಿಯೋಗವೊಂದನ್ನು ನಿಮ್ಮ ಮುಂದೆ ತಂದು ನಿಲ್ಲಿಸುತ್ತೇನೆ," ಎಂದನು.

"ಈ ಮಕ್ಕಳಾಟದಲ್ಲಿ ದಿನಗಳನ್ನು ಕಳೆಯುವುದು ನಮಗಿಷ್ಟವಿಲ್ಲ, ರಾಜ ಪುರೋಹಿತರೆ. ನಮ್ಮ ಮಹಾಸೈನ್ಯ ಕಲ್ಯಾಣದಿಂದ ಒಂದು ಹರಿದಾರಿ ದೂರದಲ್ಲಿದೆ. ಇಂದು ಸಂಜೆ ಅದು ನಗರವನ್ನು ಪ್ರವೇಶಿಸುವುದು. ನಾಳಿನ ಪ್ರಾತಃಕಾಲ ನಮ್ಮ ದಂಡಾಜ್ಞೆ ಪ್ರಚಾರವಾಗಲಿ. ದಂಡಾಜ್ಞೆಯನ್ನು ವಿರೋಧಿಸುವವರು ನಮ್ಮ ಉಗ್ರಕೋಪಕ್ಕೆ ಪಾತ್ರರಾಗುವರು." –ಬಿಜ್ಜಳನು ಗಂಭೀರವಾಗಿ ನುಡಿದನು.

"ಇದೀಗ ಭುಜಬಲ ಚಕ್ರವರ್ತಿ, ಶನಿವಾರಸಿದ್ಧಿ, ಸರ್ವಾಧಿಕಾರಿಯ ನಿರ್ಧಾರ," –ಎಂದು ಹೇಳಿ ಕ್ರಮಿತನು ಜಯಘೋಷ ಮಾಡಿದನು. ಪ್ರಶಂಸೆಯ ನುಡಿಗಳು ಬಿಜ್ಜಳನಿಗೆ ಮಧುರಸದಷ್ಟೇ ಪ್ರಿಯವೆಂದು ಅವನಿಗೆ ತಿಳಿದಿತ್ತು.

ನಿರೀಕ್ಷಿಸಿದ್ದಂತೆ ಬಿಜ್ಜಳನ ದೊಡ್ಡ ಸೈನ್ಯ, ಆ ದಿನ ಸಂಜೆ, ಕರ್ಣದೇವನ ಅಧೀನದಲ್ಲಿ ಕಲ್ಯಾಣಕ್ಕೆ ಬಂದಿತು. ಮರಣದಂಡನೆಯ ಆಜ್ಞೆಗಳು ಮರುದಿನ ನಗರದಲ್ಲಿ ಪ್ರಚಾರವಾದವು. ಮಧುವರಸ ಹರಳಯ್ಯಗಳನ್ನು ಕುರಿತ ಮೊದಲ ದಂಡಾಜ್ಞೆಯಲ್ಲಿ ವಿಶೇಷವೇನೂ ಇರಲಿಲ್ಲ. ವರ್ಣಸಂಕರದ ಅಪರಾಧಕ್ಕಾಗಿ ಅವರನ್ನು ಶೂಲಕ್ಕೇರಿಸಲು ಬಿಜ್ಜಳನು ಆಜ್ಞೆ ಮಾಡಿದ್ದನು.

ಶೀಲವಂತನನ್ನು ಕುರಿತ ಎರಡನೆಯ ದಂಡಾಜ್ಞೆ ನಾಗರಿಕರನ್ನು ಅಚ್ಚರಿಗೊಳಿಸಿತು. ಅದರ ವಿಚಿತ್ರ ಒಕ್ಕಣೆ ಚಾಲುಕ್ಯ ಧರ್ಮಾಧಿಕರಣಕ್ಕೆ ಹೊಸದಾಗಿತ್ತು.

"ಶೀಲವಂತನು ಮಂತ್ರವಾದಿ. ತನ್ನ ರೂಪ ಯೌವನ ಅಭಿಜ್ಞತೆಗಳಿಂದ ಅವನು ಚಾಲುಕ್ಯರಾಣಿ ಕಾಮೇಶ್ವರಿ, ಕದಂಬರಾಜಕನ್ಯೆ ಕುಸುಮಾವಳಿ, ಇವರೇ ಮೊದಲಾಗಿ ಬಹುಮಂದಿ ಉತ್ತಮಕುಲದ ಹೆಂಗಸರನ್ನು ಮರುಳುಮಾಡಿ ಅವರ ಕುಲಶೀಲಗಳನ್ನು ಕೆಡಿಸಿದನೆಂದು ಸಂದೇಹಕ್ಕೆಡೆಯಿಲ್ಲದ ಸಾಕ್ಷ್ಯಾಧಾರಗಳಿಂದ ನಮಗೆ ತಿಳಿದುಬಂದಿದೆ. ಶೀಲವಂತನ ಮಾಯಾಜಾಲಕ್ಕೆ ಸಿಕ್ಕು ಭ್ರಷ್ಟರಾದ ಕುಲೀಣ ತರುಣಿಯರಲ್ಲಿ ಲಾವಣ್ಯವತಿಯೊಬ್ಬಳು. ಮಗಳ ಶೀಲಹರಣದ ಬಗ್ಗೆ ತಿಳಿದ ಮಧುವರಸನು ಬೇರೆಮಾರ್ಗವಿಲ್ಲದೆ ಮಗಳನ್ನು ಶೀಲವಂತನಿಗೆ ಮದುವೆ ಮಾಡಿಕೊಟ್ಟನು. ಮಧುವರಸ ಹರಳಯ್ಯಗಳ ವರ್ಣಸಂಕರ ಕೃತ್ಯಕ್ಕೆ ಮೂಲಕಾರಣನಾದ ಶೀಲವಂತನು ಮೊದಲ ದರ್ಜೆಯ ಸಮಾಜಘಾತಕನೆಂದು ಪರಿಗಣಿಸಿ ಅವನ ಶಿರಶ್ಛೇದನೆಗೆ ಆಜ್ಞೆಮಾಡಿದೆ. ಅವನ ದೇಹವನ್ನು ಸಂಸ್ಕಾರಕ್ಕೆ ಕೊಡದೆ, ತುಂಡು ತುಂಡಾಗಿ ಕತ್ತರಿಸಿ ನಾಯಿನರಿಗಳಿಗೆ ಹಾಕತಕ್ಕದ್ದು. ಅವನ

ತಲೆಯನ್ನು ಕಬ್ಬಿಣದ ಪಂಜರದಲ್ಲಿಟ್ಟು ಕಲ್ಯಾಣಮಹಾನಗರದ ದಕ್ಷಿಣಮಹಾದ್ವಾರದಲ್ಲಿ ತೂಗುಹಾಕತಕ್ಕದ್ದು," ಎಂದು ದಂಡಾಜ್ಞೆ ಕೊನೆಗೊಂಡಿತ್ತು.

ಧರ್ಮಾಧಿಕರಣದ ಮೊಗಶಾಲೆಯಲ್ಲಿ ನಿಂತು, ನೆರೆದಿದ್ದ ನಾಗರಿಕರ ಸಮಕ್ಷಮ ದಂಡಾಜ್ಞೆಯನ್ನು ಪಠಿಸಿದ ಕರಣಿಕನು ಮೇಲೆ ಉಲ್ಲೇಖಿಸಿದ ಕೊನೆಯ ಭಾಗವನ್ನು ಸಂಕೋಚದಿಂದ ದನಿ ತಗ್ಗಿಸಿ ಓದಿದನಾದರೂ, ಕುತೂಹಲದಿಂದ ಕೂಡಿದ ಜನ ಸಮೂಹ ಸ್ತಂಭಿತವಾಗಿ ಸದ್ದಿಲ್ಲದೆ ನಿಂತಿದ್ದುದರಿಂದ ಪ್ರತಿಯೊಂದು ಮಾತೂ ಸ್ಪಷ್ಟವಾಗಿ ಕೇಳಿಸಿತು. ಚಾವಡಿಯ ಸುತ್ತ ಸೈನಿಕರು ಕಾವಲಿದ್ದುದರಿಂದ ಗುಂಪು ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸದೆ ಮೌನವಾಗಿ ಚದುರಿತು.

ಆ ದಿನ ಸಂಜೆ ಬಿಜ್ಜಳನು ಸೈನ್ಯಾಧಿಕಾರಿ ನಾಯಕರ ರಹಸ್ಯ ಸಭೆ ಕರೆದು, ದಕ್ಷಿಣದಲ್ಲಿ ವಿರೋಧಿ ಸಾಮಂತರ ಚಟುವಟಿಕೆಗಳಿಂದ ರಾಜ್ಯಕ್ಕೊದಗಿರುವ ವಿಪತ್ತು, ವರ್ಣಾಶ್ರಮ ಜಾತಿ ಪಂಥಗಳ ವಿನಾಶಕ್ಕಾಗಿ ಶರಣರು ನಡೆಸುತ್ತಿರುವ ಸಮಾಜ ಘಾತುಕ ಆಂದೋಳನ, ವರ್ಣಸಂಕರದ ಅಪರಾಧಕ್ಕಾಗಿ ವಿಚಾರಣೆ ನಡೆಸಿದ ನ್ಯಾಯ ಪೀಠ ಮಧುವರಸ ಹರಳಯ್ಯ ಶೀಲವಂತರ ಮೇಲೆ ವಿಧಿಸಿರುವ ಮರಣದಂಡನೆಯ ಆಜ್ಞೆ, ಈ ವಿಚಾರಗಳನ್ನು ಪ್ರಸ್ತಾಪಿಸಿ, "ಈ ಬಿಕ್ಕಟ್ಟಿನ ಸನ್ನಿವೇಶದಲ್ಲಿ ರಾಜ್ಯ ರಕ್ಷಣೆಗೆ ಸೈನ್ಯದ ಪಾತ್ರ ಅತ್ಯಂತ ಮುಖ್ಯವಾದುದಾಗಿದೆ. ನಿಮ್ಮ ರಾಜನಿಷ್ಠೆ ಶೌರ್ಯಸಾಹಸಗಳ ಪರೀಕ್ಷೆಯ ಕಾಲವಿದು. ಧರ್ಮದ ಹೆಸರಿನಲ್ಲಿ ಶರಣರು ನಡೆಸುತ್ತಿರುವ ಆಂದೋಳನವನ್ನು ಅಂಕುರದಲ್ಲಿಯೇ ನಾಶ ಮಾಡುವುದು ಅಗತ್ಯ. ಉಪೇಕ್ಷೆಯಿಂದ ಬೆಳೆಯಲು ಅವಕಾಶಕೊಟ್ಟರೆ ಮುಂದೆ ಅದು ಹೆಮ್ಮರವಾಗಿ, ರಾಜಕೀಯ ರೂಪ ತಳೆದು, ನಮ್ಮನ್ನೇ ಭಕ್ಷಿಸುವ ಸಂಭವವಿರುತ್ತದೆ. ಶರಣ ಧರ್ಮಕ್ಕೆ ಪ್ರೋತ್ಸಾಹ ಕೊಡುತ್ತಿರುವ ಮಠಮಂದಿರ ಸಂಸ್ಥೆಗಳನ್ನು ಶಾಸನಬಾಹಿರವೆಂದು ಘೋಷಿಸುವ ಅವಶ್ಯಕತೆ ಮುಂದೆ ಉದ್ಭವಿಸಬಹುದು. ಮೂವರು ಶರಣರ ಮೇಲೆ ನ್ಯಾಯಪೀಠ ವಿಧಿಸಿರುವ ಮರಣದಂಡನೆಯ ಆಜ್ಞೆಯನ್ನು ವಿರೋಧಿಸುವವರು ಯಾರೇ ಆಗಲಿ ಕೂಡಲೆ ಅವರನ್ನು ವಿಚಾರಣೆಯಿಲ್ಲದೆ ವಧಿಸಲು ನಿಮಗೆ ಅಧಿಕಾರ ಕೊಟ್ಟಿದ್ದೇನೆ," ಎಂದು ಹೇಳಿದನು.

ಬಿಜ್ಜಳನಲ್ಲಿ ರಾಜನಿಷ್ಠೆಯಿಂದ ನಡೆದುಕೊಳ್ಳುವುದಾಗಿ ಸೈನ್ಯಾಧಿಕಾರಿಗಳ ಪ್ರಮಾಣವಚನದೊಡನೆ ರಹಸ್ಯಸಭೆ ಮುಗಿಯಿತು. ಪ್ರತಿಯೊಬ್ಬ ಸಾಮಾನ್ಯ ಸೈನಿಕನಿಗೆ ಹತ್ತು ವರಹಗಳು, ಅಧಿಕಾರಿಗಳಿಗೆ ಅಂತಸ್ತಿಗೆ ತಕ್ಕಂತೆ ನೂರರಿಂದ ಐನೂರು ವರಹಗಳು, ಪಾರಿತೋಷಕ ಕೊಡುವಂತೆ ಆ ದಿನ ಬಿಜ್ಜಳನು ಆಜ್ಞೆ ಮಾಡಿದನು. ಸೈನಿಕರ ಸ್ವಾಮಿನಿಷ್ಠೆ ಶೌರ್ಯಸಾಹಸಗಳು, ಸ್ವರ್ಣಮುದ್ರೆಗಳ

ತಳಹದಿಯ ಮೇಲೆ ಭದ್ರವಾಗಿ ನಿಲ್ಲುವುದೆಂಬುದನ್ನು ಅವನು ಅರಿತಿದ್ದನು.

ಮರುದಿನ ಪ್ರಕಟವಾದ ಇನ್ನೊಂದು ಆಜ್ಞೆ ಕರ್ಣದೇವನ ಅಸಮಾಧಾನಕ್ಕೆ ಕಾರಣವಾಯಿತು. ಬಿಜ್ಜಳನು ಅದರಲ್ಲಿ ಮಾಧವನೆಂಬ ಹಿರಿಯ ಸಾಮಂತರನ್ನು ಮುಖ್ಯ ದಂಡನಾಯಕನನ್ನಾಗಿ ಮಾಡಿ ಕರ್ಣದೇವನನ್ನು ಮೊದಲಿನಂತೆ ರಾಜಗೃಹದ ರಕ್ಷಣಾಧಿಕಾರಿಯಾಗಿ ನಿಯಮಿಸಿದ್ದನು.

ಬಿಜ್ಜಳನ ಅನಂತರ ಚಾಲುಕ್ಯರಾಜ್ಯದ ಸರ್ವಾಧಿಕಾರದ ಕನಸು ಕಾಣುತ್ತಿದ್ದ ಕರ್ಣದೇವನಿಗೆ ಇದರಿಂದ ತುಂಬ ನಿರಾಶೆಯಾಯಿತು. ಅಸಮಾಧಾನ ಪ್ರಕಟರೂಪ ತಳೆದಾಗ ಬಿಜ್ಜಳನು ಸಹೋದರನನ್ನು ಕರೆಸಿ, "ಮುಂದೆ ನಗರದಲ್ಲಿ ಗಲಭೆ ಆರಂಭವಾದರೆ ಶರಣರ ಮೇಲೆ ಉಗ್ರಕ್ರಮ ಕೈಗೊಳ್ಳಬೇಕಾಗುತ್ತದೆ. ಅದು ನಿನ್ನಿಂದಾಗುವುದಿಲ್ಲ. ವೈದಿಕ ಧರ್ಮದ ನಿಷ್ಠಾವಂತ ಅನುಯಾಯಿಯೆಂದು ಹೆಸರಾಗಿ ಮೊದಲಿಂದ ಶರಣರ ಮೇಲೆ ವೈರ ಸಾಧಿಸುತ್ತಿರುವ ಮಾಧವನೇ ಈ ಸಂದರ್ಭದಲ್ಲಿ ಸರಿಯಾದ ದಂಡನಾಯಕ. ಹಿಂದಿನಂತೆ ಮುಂದೆಯೂ ನಾವು ಚಾಲುಕ್ಯ ವಂಶೀಯನೊಬ್ಬನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಅವನ ಹೆಸರಿನಲ್ಲಿ ಸರ್ವಾಧಿಕಾರ ನಡೆಸಬೇಕಾಗುವುದು. ರಾಜಗೃಹದಲ್ಲಿ ಬಂಧಿಯಾಗಿರುವ ಜಗದೇಕಮಲ್ಲನು ನಿನ್ನ ಗೆಳೆಯ. ನನ್ನ ಅನಂತರ ಸರ್ವಾಧಿಕಾರಿಯಾಗಬೇಕಾದ ನೀನು ಅವನ ರಕ್ಷಕನಾಗಿದ್ದರೆ ಒಳ್ಳೆಯದು," ಎಂದು ಸಮಾಧಾನ ಹೇಳಿದ್ದನು.

ಪ್ರಕಟವಾದ ಎರಡು ವಾರಗಳ ಅನಂತರ ಮರಣದಂಡನೆಯ ಆಜ್ಞೆಗಳನ್ನು ಕಾರ್ಯಗತ ಮಾಡುವುದು ಆಗ ಆಡಳಿತ ಪದ್ಧತಿಯಾಗಿತ್ತು. ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಧರ್ಮಾಧಿಕರಣದ ಮುಖ್ಯಾಧಿಕಾರಿಯಾಗಿದ್ದ ವಿಜ್ಞಾನೇಶ್ವರ ಪಂಡಿತನು ವಧಾದಂಡಕ್ಕೆ ಗುರಿಯಾದವರ ಅನುಕೂಲಕ್ಕಾಗಿ ಆಚರಣೆಗೆ ತಂದ ಈ ಸುಧಾರಣೆ ಬಿಜ್ಜಳನ ಕಾಲದಲ್ಲಿಯೂ ಪ್ರಚಾರದಲ್ಲಿತ್ತು.

ಧರ್ಮಾಧಿಕರಣದ ನಿಬಂಧನೆಯಂತೆ ದೊರಕಿದ ಈ ಅವಕಾಶವನ್ನು ಬಿಜ್ಜಳನು ತನ್ನ ದುರುದ್ದೇಶದ ಸಾಧನೆಗಾಗಿ ಉಪಯೋಗಿಸಿಕೊಂಡನು. ಅಪರಾಧಿಗಳ ಪರವಾಗಿ ಸಲ್ಲಿಸಿದ ಮನವಿ ಪತ್ರಕ್ಕೆ ಒಪ್ಪಿಗೆ ಹಾಕಿದ್ದ ಶರಣರಲ್ಲದ ನಾಗರಿಕರಲ್ಲಿ ಇಬ್ಬರು ಪ್ರಮುಖರ ವಿರುದ್ಧ ಮೋಸ, ವ್ಯಭಿಚಾರ, ಅಗಮ್ಯಾಗಮನ ಮುಂತಾದ ಸುಳ್ಳು ಆಪಾದನೆಗಳ ಸೃಷ್ಟನೆ ನಡೆದು ಧರ್ಮಾಧಿಕರಣಕ್ಕೆ ವರದಿಯಾಯಿತು. ವಿಚಾರಣೆ ಪ್ರಾರಂಭವಾಗುವ ಸೂಚನೆ ತಿಳಿದು ನಾಗರಿಕರು ಕ್ರಮಿತನ ಬಳಿ ಬಂದಾಗ ಅವನು, "ಮನವಿಪತ್ರಕ್ಕೆ ನೀವು ಒಪ್ಪಿಗೆ ಹಾಕಿರುವಿರೆಂದು ಕೇಳಿ ಪ್ರಭುಗಳು ಕೋಪಗೊಂಡಿದ್ದಾರೆ. ನೀವು ಒಬ್ಬೊಬ್ಬರು ಒಂದು ಸಾವಿರ ವರಹಗಳ

ತಪ್ಪು ಕಾಣಿಕೆ ಕೊಟ್ಟು ಒಪ್ಪಿಗೆಗಳನ್ನು ಹಿಂದಕ್ಕೆ ತೆಗೆದುಕೊಂಡರೆ ವ್ಯವಹಾರ ನಿಲ್ಲುವುದು," ಎಂದು ಸಲಹೆ ಮಾಡಿದನು. ನಾಗರಿಕರು ಒಪ್ಪಿ, ಚೆನ್ನಬಸವಣ್ಣನವರ ಒತ್ತಾಯದಿಂದ ನಾವು ಮನವಿ ಪತ್ರಕ್ಕೆ ಒಪ್ಪಿಗೆ ಹಾಕಿದೆವು. ವರ್ಣಸಂಕರದ ಅಪರಾಧ ನಡೆದಿದೆಯೆಂದು ಈಗ ನಮಗೆ ಖಚಿತವಾಗಿ ತಿಳಿದಿರುವುದರಿಂದ ಒಪ್ಪಿಗೆಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇವೆ," ಎಂದು ಹೇಳಿಕೆ ಕೊಟ್ಟು ವಿಪತ್ತಿನಿಂದ ಪಾರಾದರು.

ಈ ವಿಚಾರ ಚೆನ್ನಬಸವಣ್ಣನವರಿಗೆ ತಿಳಿದಾಗ ಅವರ ಚಿಂತೆ ಇಮ್ಮಡಿಸಿತು. "ಬಂಧಿಗಳ ಬಿಡುಗಡೆಗೆ ಬೇರೆ ಮಾರ್ಗ ಹಿಡಿಯಬೇಕಾಗುವುದು," ಎಂದು ಮಾಚಿದೇವರು ಭಾವಿಸಿದರು.

ಇನ್ನೊಂದು ವಾರ ಕಳೆದು ಮರಣದಂಡನೆಯ ಆಜ್ಞೆ ಕಾರ್ಯಗತವಾಗಲು ಎರಡು ದಿನಗಳು ಮಾತ್ರವೇ ಉಳಿದಿದ್ದಾಗ, ಕಲಚೂರ್ಯ ಕುಲಗುರುಗಳಾದ ಮತ್ತ ಮಯೂರ ಮಠದ ಚಿದ್ಘನ ಶಿವಾಚಾರ್ಯಸ್ವಾಮಿಗಳ ಪರಿಚಯ ಪತ್ರದೊಡನೆ ಅವಧೂತ ಸನ್ಯಾಸಿಯೊಬ್ಬನು ಬಿಜ್ಜಳನ ಸಂದರ್ಶನಕ್ಕಾಗಿ ಬಂದನು.

"ಈ ಪತ್ರವನ್ನು ತರುವವರು ಚಾಲುಕ್ಯರಾಜ್ಯದ ಉನ್ನತ ಪ್ರಭಾವಶಾಲಿ ವ್ಯಕ್ತಿಗಳಲ್ಲೊಬ್ಬರು. ಒಂದು ಮಹತ್ವದ ಕಾರ್ಯಕ್ಕಾಗಿ ಅವರು ನಿಮ್ಮ ಬಳಿಗೆ ಬಂದಿದ್ದಾರೆ. ನೀವು ಅವರನ್ನು ಸನ್ಮಾನದಿಂದ ಕಂಡು ಅವರ ಇಚ್ಛೆಯನ್ನು ನಡೆಸಿ ಕೊಡಬೇಕಾಗಿ ನಮ್ಮ ಆಗ್ರಹದ ಕೋರಿಕೆ." –ಎಂದು ಪರಿಚಯಪತ್ರ ಮುಗಿದಿತ್ತು.

ಬಿಜ್ಜಳನು ಪತ್ರವನ್ನು ಓದಿಕೊಂಡು, "ರಾಜ್ಯಾಡಳಿತದಲ್ಲಿ ಗುರುಮನೆಯ ಪ್ರವೇಶಕ್ಕೆ ಅವಕಾಶ ಕಲ್ಪಿಸಿ ವಿಕ್ರಮಾದಿತ್ಯ ಮಹಾರಾಜರು ಪ್ರಚಾರಕ್ಕೆ ತಂದ ದುಷ್ಟ ಸಂಪ್ರದಾಯ ಈಗ ನಮ್ಮ ತಲೆ ತಿನ್ನುತ್ತಿದೆ," ಎಂದು ಭಾವಿಸಿ, ಪತ್ರವನ್ನು ತಂದ ಪಸಾಯಿತನ ಕಡೆ ತಿರುಗಿ, "ಈಗ ಸನ್ಯಾಸಿದೇವರೆಲ್ಲಿದ್ದಾರೆ?" ಎಂದು ಕೇಳಿದನು.

"ಸಭಾಂಗಣದಲ್ಲಿ ಕುಳಿತಿದ್ದಾರೆ."

"ಸಂಗಡ ಯಾರಾದರೂ ಇರುವರೆ ?"

"ಒಬ್ಬ ವಟು ಮತ್ತು ಪೆಟ್ಟಿಗೆಗಳನ್ನು ಹೊತ್ತ ಹತ್ತು ಮಂದಿ ಆಳುಗಳು."

"ಸನ್ಯಾಸಿದೇವರನ್ನು ಕರೆದುಕೊಂಡು ಬಾ. ಆಳುಗಳ ಮೇಲೆ ದೃಷ್ಟಿಯಿರಲಿ."

ತುಸು ಹೊತ್ತಿನ ಮೇಲೆ ಅಲ್ಲಿಗೆ ಬಂದ ಮಧ್ಯಮ ವಯಸ್ಸಿನ ವ್ಯಕ್ತಿ ಎಲ್ಲ ಸನ್ಯಾಸಿಗಳಂತೆ ಕಾವಿಯ ಕಪಿನಿ ಉತ್ತರೀಯಗಳನ್ನು ಧರಿಸಿದ್ದರೂ, ನಡಿಗೆಯ ಠೀವಿ, ಕಣ್ಣುಗಳ ತೀಕ್ಷ್ಣದೃಷ್ಟಿ, ವಿಶಾಲವಾದ ಹಣೆ, ಜಡೆಕಟ್ಟಿದ ಕೇಶಗಳು ಅವನು ಅಸಾಮಾನ್ಯನೆಂಬುದನ್ನು ಸೂಚಿಸುತ್ತಿದ್ದವು.

ಗೌರವ ಅನುಕಂಪಗಳು ಬೆರೆತ ಸರಳ ಗಂಭೀರದೃಷ್ಟಿಯಿಂದ ಬಿಜ್ಜಳನನ್ನು ನೋಡುತ್ತ ಸನ್ಯಾಸಿ ನಿಂತನು.

ಬಿಜ್ಜಳನು ಆಸನದಿಂದೆದ್ದು ಎರಡು ಹೆಜ್ಜೆ ಮುಂದೆ ಹೋಗಿ ಕೈ ಮುಗಿದು, "ಅಪರಿಚಿತರಿಗೆ ದರ್ಶನ ಕೊಡುವುದು ನನ್ನ ಪದ್ಧತಿಯಲ್ಲ. ಆದರೂ ಗುರುದೇವರ ಆಜ್ಞೆಯಂತೆ ನಿಮ್ಮನ್ನು ಸ್ವಾಗತಿಸುತ್ತೇನೆ. ದಯೆಮಾಡಿ ಆಸನವನ್ನು ಪರಿಗ್ರಹಿಸಬೇಕು," ಎಂದು ಒಳಗೆ ಕರೆತಂದು ಕುಳ್ಳಿರಿಸಿದನು.

"ನಾನು ನಾಥಪಂಥದ ಒಬ್ಬ ಸಾಮಾನ್ಯ ಸನ್ಯಾಸಿ. ಹೆಸರು ಸಿದ್ಧಿನಾಥ. ಅಷ್ಟು ಮಾತ್ರ ತಿಳಿಸಿದ್ದರೆ, ಪರಿಚಯಪತ್ರ ಕೊಟ್ಟವರು ನಿಮ್ಮ ಕುಲಗುರು ಚಿದ್ಘನ ಶಿವಾಚಾರ್ಯರೇ ಆಗಿದ್ದರೂ ನೀವು ದರ್ಶನ ಕೊಡುತ್ತಿರಲಿಲ್ಲವೆಂದು ನಾನು ತಿಳಿದೆ. ಕಾವಿಯುಟ್ಟವರೆಲ್ಲ ಪರಿಶಿವನ ಅವತಾರವೆಂದು ಭಾವಿಸಿ ಸನ್ಮಾನಿಸುವ ಕಾಲ ಕಳೆಯಿತು. ನವಯುಗ ಆರಂಭವಾಗುತ್ತಿದೆ. ಈಗಿನ ಸಾಮಂತ ಸರ್ವಾಧಿಕಾರಿಗಳು ಹಿಂದಿನವರಂತೆ ಅರಮನೆಯ ವ್ಯವಹಾರದಲ್ಲಿ ಗುರುಮನೆಯ ಪ್ರವೇಶವನ್ನು ಒಪ್ಪುವುದಿಲ್ಲ," ಎಂದು ಹೇಳಿ ಸನ್ಯಾಸಿ ಅರ್ಥಗರ್ಭಿತವಾಗಿ ನಕ್ಕನು.

ಪರಿಚಯ ಪತ್ರವನ್ನು ಓದಿದಾಗ ತನ್ನ ಮನಸ್ಸಿನಲ್ಲಾದ ಭಾವನೆಯನ್ನು ಸನ್ಯಾಸಿ ಊಹೆಯಿಂದ ತಿಳಿದಿರಬೇಕೆಂದು ಬಿಜ್ಜಳನು ಭಾವಿಸಿದನು. ಪರರ ಇಂಗಿತವನ್ನು ಅರಿಯುವುದು ಯೋಗಸಾಧನೆಯಲ್ಲಿ ತೀರ ಕೆಳಗಿನ ಹಂತ. ತನ್ನ ಬುದ್ಧಿಜ್ವಾಲೆಯ ಎದುರಿಗೆ ಭೇದಿಸಲಾಗದ ಲೋಹಪ್ರಾಕಾರವೊಂದು ನಿಂತಂತೆ ಭಾಸವಾಯಿತು ಬಿಜ್ಜಳನಿಗೆ. ಸನ್ಯಾಸಿ ಬಂದ ಉದ್ದೇಶವೇನೆಂಬುದನ್ನು ತಿಳಿಯಲಾರದೆ ಅವನು ಮೌನವಾಗಿ ನಿಂತನು.

ಕೆಲವು ಕ್ಷಣಗಳ ಮೇಲೆ ಸನ್ಯಾಸಿ ಮುಂದುವರೆದು, "ನನ್ನ ಪೂರ್ಣ ಪರಿಚಯ ತಿಳಿಯಲು ಚಾಲುಕ್ಯ ಇತಿಹಾಸದ ಕೆಲವು ಅಜ್ಞಾತ ಪ್ರಸಂಗಗಳನ್ನು ಉಲ್ಲೇಖಿಸುವುದು ಅಗತ್ಯ. ಸರ್ವಾಧಿಕಾರಿಗಳು ದಯೆಮಾಡಿ ಕುಳಿತುಕೊಳ್ಳಬೇಕು," ಎಂದನು.

ನಿಂತಂತೆ ಕೆಲವೇ ಮಾತುಗಳಲ್ಲಿ ಸಂದರ್ಶನವನ್ನು ಮುಗಿಸುವ ತನ್ನ ಉದ್ದೇಶ ಸನ್ಯಾಸಿಗೆ ತಿಳಿಯಿತೆಂದು ಬಿಜ್ಜಳನು ಅಪ್ರತಿಭನಾಗಿ ನಸುನಕ್ಕು ಆಸನದಲ್ಲಿ ಕುಳಿತು, "ಪೂರ್ಣ ಪರಿಚಯಕ್ಕೆ ಪೀಠಿಕೆ ಅಗತ್ಯವಾದರೆ ನಾನು ಕೇಳಲು ಸಿದ್ಧನಾಗಿದ್ದೇನೆ," ಎಂದನು.

ಸನ್ಯಾಸಿ ಹೇಳಿದನು : "ಚಾಲುಕ್ಯ ಅರಸರಲ್ಲಿ ಆರನೆಯ ವಿಕ್ರಮಾದಿತ್ಯನ ಹೆಸರನ್ನು ನಾವು ಪ್ರತಿದಿನ ಎಲ್ಲರ ಬಾಯಲ್ಲಿ ಕೇಳುತ್ತೇವೆ. ಆದರೆ ರಾಜ್ಯಕ್ಕೆ,

ಪ್ರಜೆಗಳಿಗೆ ಅವನಷ್ಟೇ ಉಪಕಾರ ಮಾಡಿದ ಐದನೆಯ ವಿಕ್ರಮಾದಿತ್ಯನನ್ನು ಯಾರೂ ಒಂದು ಸಾರಿಯೂ ಸ್ಮರಿಸುವುದಿಲ್ಲ. ಚಾಲುಕ್ಯ ಅರಸೊತ್ತಿಗೆ ಪುನಃ ಪ್ರತಿಷ್ಠಿತವಾಗಲು ಐವಡಿ ವಿಕ್ರಮಾದಿತ್ಯನ ದೂರದೃಷ್ಟಿ, ಅವನು ಅನುಸರಿಸಿದ ಸಂಪ್ರದಾಯಕ್ಕೆ ಪ್ರತಿವಾದಿಯಾದ ವಿಚಿತ್ರ ರಾಜನೀತಿ ಕೌಶಲ, ಇವು ಮುಖ್ಯ ಕಾರಣಗಳೆಂಬುದನ್ನು ಮರೆತಿದ್ದೇವೆ. ಐವಡಿ ವಿಕ್ರಮಾದಿತ್ಯನು ತ್ರಿಪುರಿಯ ಕಲಚೂರ್ಯ ಅರಸು ಲಕ್ಷ್ಮಣದೇವನ ಮಗಳು ಮಹರ್ಲೇಖೆಯನ್ನು ಮದುವೆಯಾಗಿದ್ದನು. ಇತಿಹಾಸದಲ್ಲಿ ಆ ಸಾಧ್ವೀಮಣಿ ಬೊಂತಾದೇವಿಯೆಂದು ವಿಖ್ಯಾತೆಯಾಗಿದ್ದಾಳೆ.

"ಆಗ ಚಾಲುಕ್ಯ ರಾಜ್ಯ ರಾಷ್ಟ್ರಕೂಟರ ಅಧೀನದಲ್ಲಿತ್ತು. ಐವಡಿ ವಿಕ್ರಮಾದಿತ್ಯನು ರಾಷ್ಟ್ರಕೂಟರ ಸಾಮಂತನಾಗಿ ಪಟ್ಟದಕಲ್ ಸೀಮೆಯನ್ನು ಆಳುತ್ತಿದ್ದನು. ಕಳೆದುಕೊಂಡ ರಾಜ್ಯವನ್ನು ಪುನಃ ಪಡೆಯಲು ಸಾಮಾನ್ಯವಾಗಿ ಎಲ್ಲ ಕ್ಷತ್ರಿಯರು ಅನುಸರಿಸುವ ಯುದ್ಧ ಹೋರಾಟಗಳ ವಿಧ್ವಂಸಕ ಮಾರ್ಗವನ್ನು ಬಿಟ್ಟು, ಆಗಿನ ಜನರಿಗೆ ವಿಚಿತ್ರವೆಂದು ತೋರಿದ ಬೇರೆ ಮಾರ್ಗವನ್ನು ಅವನು ಅನುಸರಿಸಿದನು. ಸಾಮಂತಾಧಿಕಾರವನ್ನು ಬಿಟ್ಟುಕೊಟ್ಟು ಸಾಮಾನ್ಯ ನಾಗರಿಕನಂತೆ ವಾಣಿಜ್ಯೋದ್ಯಮಗಳಲ್ಲಿ ತೊಡಗಿದನು. ತಲೆಮಾರುಗಳಿಂದ ಸಂಗ್ರಹವಾಗಿದ್ದ ತನ್ನ ಅಪಾರ ಸಂಪತ್ತಿನಿಂದ ರಾಜ್ಯದ ಅನೇಕ ಕಡೆಗಳಲ್ಲಿ ಹೊಸ ಉದ್ಯಮಗಳನ್ನು ಸ್ಥಾಪಿಸಿದನು.

"ರಾಷ್ಟ್ರಕೂಟ ಅರಸರ ಅಂಧನೀತಿಯ ಪರಿಣಾಮವಾಗಿ ಆಗ ಚಾಲುಕ್ಯ ರಾಜ್ಯದ ವಾಣಿಜ್ಯೋದ್ಯಮಗಳು ದಕ್ಷಿಣಕ್ಕೆ ವಲಸೆ ಬಂದು ನೆಲೆಸಿದ್ದ ಔತ್ತರೇಯರ ಕೈಯಲ್ಲಿದ್ದವು. ಸಾಕಾದಷ್ಟು ಮೂಲಧನವಿಲ್ಲದೆ ನಮ್ಮ ವರ್ತಕರು ಅವರೊಡನೆ ಸ್ಪರ್ಧಿಸಲು ಸಮರ್ಥರಾಗಿರಲಿಲ್ಲ. ಕೃಷಿಕ ಕಾರ್ಮಿಕ ಪಾಂಚಾಲ ವರ್ಗಗಳವರು ದಿನ ದಿನಕ್ಕೆ ಹೆಚ್ಚು ಹೆಚ್ಚು ಬಡವರಾಗುತ್ತಿದ್ದರು. ಈ ಪರಿಸ್ಥಿತಿಯಲ್ಲಿ ಐವಡಿ ವಿಕ್ರಮಾದಿತ್ಯನು ವಾಣಿಜ್ಯ ಕ್ಷೇತ್ರವನ್ನು ಪ್ರವೇಶಿಸಿ ರಾಜ್ಯದ ವಾಣಿಜ್ಯ ಉದ್ಯಮಗಳನ್ನು ಭದ್ರವಾದ ತಳಹದಿಯ ಮೇಲೆ ಕಟ್ಟಲು ತನ್ನ ಅಪಾರ ಸಂಪತ್ತನ್ನು ವಿನಿಯೋಗಿಸಿದನು. ಅದಕ್ಕಾಗಿ ಅವನು ಎರಡು ಹೊಸ ಸಂಸ್ಥೆಗಳನ್ನು ಸ್ಥಾಪಿಸುವುದು ಅಗತ್ಯವಾಯಿತು. ಅವುಗಳಲ್ಲಿ ಮೊದಲನೆಯದು ಐಯ್ಯಾವಳೆಯ ಐನೂರ್ವರು ಸ್ವಾಮಿಗಳ ಮಹಾಸಂಘ, ಎರಡನೆಯದು ಅದರ ಕ್ರಿಯಾರೂಪವಾದ ವೀರಬಣಂಜು ವಾಣಿಜ್ಯ ಸಂಘ. ಈ ಎರಡು ಸಂಸ್ಥೆಗಳ ಬಿಡುವಿಲ್ಲದ ಕಾರ್ಯಕ್ರಮದಿಂದ ಕೆಲವೇ ವರ್ಷಗಳಲ್ಲಿ ಚಾಲುಕ್ಯ ರಾಜ್ಯದ ಆರ್ಥಿಕ ಪುನರ್ಘಟನೆ ನಡೆಯಿತು. ವಿಕ್ರಮಾದಿತ್ಯನ ಅನಂತರ ಅವನ ಪುತ್ರ ನೂರ್ಮಡಿ ತೈಲಪನು ಚಾಲುಕ್ಯ ಅರಸೊತ್ತಿಗೆಯನ್ನು

ಪುನಃ ಪಡೆಯಲು ಪ್ರಯತ್ನಿಸಿದಾಗ ಮೇಲಿನ ಎರಡು ಸಂಸ್ಥೆಗಳು ಅವನಿಗೆ ಎಲ್ಲ ವಿಧದಲ್ಲಿಯೂ ಸಹಾಯ ಮಾಡಿದವು."

ಸನ್ಯಾಸಿಯ ನುಡಿಗಳನ್ನು ಕುತೂಹಲದಿಂದ ಕೇಳುತ್ತಿದ್ದ ಬಿಜ್ಜಳನು ಮಧ್ಯೆಬಂದು, "ಈ ಐತಿಹಾಸಿಕ ಘಟನೆಗಳಿಗೂ ನಿಮ್ಮ ಪರಿಚಯಕ್ಕೂ ಇರುವ ಸಂಬಂಧವೇನು?" ಎಂದು ಕೇಳಿದನು.

"ನಾನು ಆ ವಿಚಾರಕ್ಕೇ ಬರುತ್ತಿದ್ದೇನೆ, ಸರ್ವಾಧಿಕಾರಿಗಳೆ," ಸನ್ಯಾಸಿ ಉತ್ತರಕೊಟ್ಟನು. "ಚಾಲುಕ್ಯ ರಾಜ್ಯದ ಆರ್ಥಿಕ ಭದ್ರತೆ ಈಗ ವೀರಬಣಂಜು ಸಂಘದ ಕಾರ್ಯಚಟುವಟಿಕೆಗಳನ್ನು ಅವಲಂಬಿಸಿದೆ. ಸಾಮಂತ ಅಧಿಕಾರಿಗಳಂತೆ ಸಾಮಾನ್ಯ ಜನರೂ ಇದನ್ನು ತಿಳಿದಿದ್ದಾರೆ. ಆದರೆ ವೀರಬಣಂಜು ಸಂಘದ ಮಾತೃಸಂಸ್ಥೆಯಾದ ಐಯ್ಯಾವಳೆಯ ಐನೂರ್ವರು ಸ್ವಾಮಿಗಳ ಮಹಾಸಂಘದ ವಿಚಾರ ಯಾರಿಗೂ ತಿಳಿಯದು. ಈ ವಿಚಿತ್ರ ಪರಿಸ್ಥಿತಿಯ ಕಾರಣವೇನು ಎಂಬುದನ್ನು ನೀವು ಯಾವಾಗಲಾದರೂ ಯೋಚಿಸಿದ್ದೀರಾ ?"

"ಈ ಸಂದೇಹ ಪರಿಹಾರಕ್ಕಾಗಿ ಚಿದ್ಘನ ಶಿವಾಚಾರ್ಯರು ನಿಮ್ಮನ್ನು ನನ್ನ ಬಳಿಗೆ ಕಳುಹಿಸಿದರೆ?" ಬಿಜ್ಜಳನು ನಸುನಕ್ಕು ನುಡಿದನು. "ರಾಷ್ಟ್ರಕೂಟದ ಕನ್ನರದೇವನು ಐನೂರ್ವರು ಸ್ವಾಮಿಗಳ ಮಹಾಸಂಘವನ್ನು ಶಾಸನಬಾಹಿರವೆಂದು ಘೋಷಿಸಿದನು. ಅನಂತರ ಕೆಲವು ವರ್ಷಗಳು ಅದು ರಹಸ್ಯವಾಗಿ ಕಾರ್ಯಾಚರಣೆ ನಡೆಸುತ್ತಿದ್ದು ಅನಂತರ ನಾಮಾವಶೇಷವಾಯಿತು. ಈಗ ಅದು ಅಸ್ತಿತ್ವದಲ್ಲಿಲ್ಲ."

ಇದುವರೆಗೆ ಸರಳತೆಯ ಮೃದುಕಂಠದಿಂದ ಮಾತಾಡುತ್ತಿದ್ದ ಸನ್ಯಾಸಿ ಹಠಾತ್ತನೆ ದನಿ ಹೆಚ್ಚಿಸಿ, "ಈ ನಿಮ್ಮ ತಪ್ಪು ತಿಳುವಳಿಕೆಯೇ ರಾಜ್ಯದಲ್ಲಿ ನಡೆಯುತ್ತಿರುವ ಎಲ್ಲ ಅನರ್ಥ ಅತ್ಯಾಚಾರಗಳ ಕಾರಣ. ಐನೂರ್ವರ ಮಹಾಸಂಘ ಈಗಲೂ ಅಸ್ತಿತ್ವದಲ್ಲಿದೆ. ಪ್ರಚಾರ ಪ್ರಕಟನೆಗಳಿಲ್ಲದೆ ರಹಸ್ಯವಾಗಿ ಕಾರ್ಯ ನಡೆಸುತ್ತಿರುವುದರಿಂದ ಅದರ ವಿಚಾರ ಯಾರಿಗೂ ತಿಳಿಯದು. ಇಂಗಿತ ಮಾತ್ರದಿಂದ ರಾಜ್ಯಾದ್ಯಂತ ಅಶಾಂತಿ ಅಂತಃಕಲಹಗಳನ್ನು ಪ್ರಾರಂಭಿಸಿ ನಿಮ್ಮ ರಾಜ್ಯಾಪಹಾರಕ ಸರ್ವಾಧಿಕಾರಿ ಆಡಳಿತವನ್ನು ಕ್ಷಣಾರ್ಧದಲ್ಲಿ ಧ್ವಂಸ ಮಾಡುವ ಶಕ್ತಿ ಆ ಮಹಾಸಂಸ್ಥೆಗಿರುತ್ತದೆ. ನಿಮಗೆ ಸಕಾಲದಲ್ಲಿ ಎಚ್ಚರಿಕೆ ಕೊಡುವ ಪರಮೋದ್ದೇಶದಿಂದ ನಾನಿಲ್ಲಿಗೆ ಬಂದಿದ್ದೇನೆ," ಎಂದು ಗಂಭೀರವಾಗಿ ನುಡಿದನು.

ಬಿಜ್ಜಳನು ಚಡಪಡಿಸಿ ಭದ್ರಾಸನದಿಂದೆದ್ದನು. ಕಣ್ಣುಗಳು ಕೆಂಪೇರಿ ಕಿಡಿಯುಗುಳಿದವು. ಕರ್ಕಶಕಂಠದಿಂದ ಅವನು, "ವೇಷಧಾರಿ ಕ್ರಾಂತಿಕಾರನು ನೀನು ! ನನ್ನ ಶತ್ರುಗಳು ಯಾವುದೋ ದುರುದ್ದೇಶದಿಂದ ನಿನ್ನನ್ನಿಲ್ಲಿಗೆ ಕಳುಹಿಸಿರಬೇಕು.

ನಿನ್ನನ್ನು ಬಂಧಿಸಿ ಸೆರೆಯಲ್ಲಿಡುತ್ತೇನೆ. ಯಾರಲ್ಲಿ?" ಎಂದು ಗಜರಿ ನುಡಿದು ಭಟರನ್ನು ಕರೆದನು.

ಕೆಲವು ಕ್ಷಣಗಳಾದರೂ ಭಟರು ಬರಲಿಲ್ಲ. ನಿರ್ಲಿಪ್ತನಂತೆ ಗಂಭೀರವಾಗಿ ಕುಳಿತಿದ್ದ ಸನ್ಯಾಸಿ ತುಸು ಹೊತ್ತಿನ ಮೇಲೆ ಕುಹಕದ ನಗೆ ಹಾರಿಸಿ, "ನಮ್ಮ ಏಕಾಂತ ಸಂದರ್ಶನಕ್ಕೆ ಅಡ್ಡಿಯಾಗದಿರಲೆಂದು ನಿಮ್ಮ ಭಟರು ಅರಮನೆಯ ಈ ಭಾಗದಿಂದ ದೂರ ಹೋಗಿದ್ದಾರೆ, ಬಿಜ್ಜಳರಾಯರೆ. ನಿಮ್ಮ ಕರೆ ಅವರಿಗೆ ಕೇಳಿಸುವುದಿಲ್ಲ. ಒಂದು ವೇಳೆ ಕೇಳಿಸಿ ಅವರಿಲ್ಲಿಗೆ ಬಂದರೂ ಐಯ್ಯಾವಳೆಯ ಐನೂರ್ವರು ಸ್ವಾಮಿಗಳ ಮಹಾಸಂಘದ ಅಧ್ಯಕ್ಷನನ್ನು ಸೆರೆಹಿಡಿಯುವ ಧೈರ್ಯ ಅವರಲ್ಲಿ ಯಾರಿಗೂ ಇರುವುದಿಲ್ಲ," ಎಂದು ಹೇಳಿ ಬೆರಳಲ್ಲಿ ಮುಚ್ಚಿಟ್ಟಿದ್ದ ಮುದ್ರೆಯುಂಗುರ ಕಾಣುವಂತೆ ಬಲಗೈಯನ್ನು ಮುಂದೆ ಚಾಚಿದನು.

ಉಂಗುರಕ್ಕೆ ಜೋಡಿಸಿದ್ದ ನೀಲಮಣಿ ಗಗನದ ತೇಜಃಪೂರ್ಣ ನಕ್ಷತ್ರವೊಂದನ್ನು ಕಿತ್ತು ಭೂಮಿಗೆ ತಂದಂತೆ ಅಪೂರ್ವ ಕಾಂತಿಯಿಂದ ಕಣ್ಣುಗಳು ಕೋರೈಸುವಂತೆ ಬೆಳಗಿತು.

ಗರುಡ ಮಣಿಯನ್ನು ಕಂಡ ಸರ್ಪದಂತೆ ಬಿಜ್ಜಳನು ಸ್ತಂಭಿತನಾಗಿ ನೆಟ್ಟ ದೃಷ್ಟಿಯಿಂದ ಉಂಗುರವನ್ನು ನೋಡುತ್ತಿದ್ದನು. ಕೆಲವು ಕ್ಷಣಗಳ ಅನಂತರ ತಲೆ ತಿರುಗಿ ಗರ ಬಡಿದಂತಾದಾಗ, ಸನ್ಯಾಸಿ ಸನ್ನೆಯಿಂದ ಕುಳಿತುಕೊಳ್ಳುವಂತೆ ಹೇಳಿ, ಅನುನಯದ ಮಿದುದನಿಯಿಂದ, "ಈಗ ನನ್ನ ಪೂರ್ಣ ಪರಿಚಯ ನಿಮಗೆ ತಿಳಿದಂತಾಯಿತು. ಇನ್ನು ನಾವು ಬಹುದಿನದ ಗೆಳೆಯರಂತೆ ಆವೇಶ ಆಕ್ರೋಶಗಳಿಲ್ಲದೆ ಮಾತುಕಥೆಗಳನ್ನು ಮುಗಿಸಬಹುದಲ್ಲವೆ?" ಎಂದನು.

ಬಿಜ್ಜಳನು ತಲೆಯಾಡಿಸಿ ಸಮ್ಮತಿ ಸೂಚಿಸಿದನು.

ಸನ್ಯಾಸಿ ಹೇಳಿದನು : "ಐನೂರ್ವರು ಸ್ವಾಮಿಗಳ ಮಹಾಸಂಘದ ಧಾರ್ಮಿಕ ಸಂಸ್ಥೆ, ದಕ್ಷಿಣ ಭಾರತದ ಸಂಸ್ಥಾನಾಧೀಶರು, ಸಾಮಂತರು, ಪ್ರಭಾವಶಾಲಿ ಗುರುಪೀಠಗಳ ಕಾರ್ಯಕರ್ತರು, ಶ್ರೀಮಂತ ವರ್ತಕರು, ಸಾಮಾನ್ಯ ಪ್ರಜೆಗಳು, ಇವರೆಲ್ಲ ಮಹಾಸಂಘಕ್ಕೆ ಪ್ರತಿನಿಧಿಗಳನ್ನು ಕಳುಹಿಸಿದ್ದಾರೆ. ಸಂಸ್ಥೆಯ ಸದಸ್ಯತ್ವ ಪಡೆಯಲು ನೀವು ಕೂಡ ಎರಡು ಸಾರಿ ಪ್ರಯತ್ನಿಸಿ ವಿಫಲರಾದಿರಿ. ಈಗ ಮೂರನೆಯ ಸಾರಿ ನಿಮ್ಮ ಅಭ್ಯರ್ಥಿ ಪತ್ರ ನನ್ನ ಹತ್ತಿರ ಬಂದಿದೆ. ಅದನ್ನು ಅಂಗೀಕರಿಸುವುದೇ ನಿರಾಕರಿಸುವುದೇ ಎಂಬುದನ್ನು ನಿರ್ಧರಿಸುವ ಮೊದಲು ನಿಮ್ಮೊಡನೆ ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕಾಗಿದೆ."

"ನಾನು ಸಿದ್ಧವಾಗಿದ್ದೇನೆ, ಭಗವನ್. ಆದರೆ ನನ್ನ ಪ್ರಶ್ನೆಯೊಂದಕ್ಕೆ ನೀವು

ಮೊದಲು ಉತ್ತರ ಕೊಡಬೇಕಾಗುವುದು.” –ಬಿಜ್ಜಳನು ಯೋಚಿಸಿ ಹೇಳಿದನು. ಐನೂರ್ವರ ಮಹಾಸಂಘದಂತಹ ಐತಿಹಾಸಿಕ ಪ್ರಭಾವಶಾಲಿ ಸಂಸ್ಥೆಯ ಅಧ್ಯಕ್ಷರೊಡನೆ ರೂಢಾಚರಣೆ, ಜ್ವಾಲಾಮುಖಿಯೊಡನೆ ಸರಸವಾಡಿದಂತೆ ಎಂಬುದು ಅವನಿಗೆ ತಿಳಿದಿತ್ತು. ಅರಮನೆಯ ರಕ್ಷಕಭಟರು ತನ್ನ ಆಜ್ಞೆಗಳನ್ನು ಉಲ್ಲಂಘಿಸಿ ದೂರ ಸರಿದು ನಿಂತಿದ್ದನ್ನು ಕಂಡು ಅವನು ಅಚ್ಚರಿಗೊಂಡಿದ್ದನು. ತನ್ನ ಅಭ್ಯರ್ಥಿ ಪತ್ರದ ಬಗೆಗೆ ಮಹಾಸಂಘದ ಪ್ರತಿಕ್ರಿಯೆಯನ್ನು ತಿಳಿದುಕೊಳ್ಳುವ ಕುತೂಹಲ ಎಚ್ಚೆತ್ತಿತ್ತು.

“ನಿಮ್ಮ ಪ್ರಶ್ನೆಯೇನು? ಸಂಕೋಚವಿಲ್ಲದೆ ಕೇಳಬಹುದು.” –ಸನ್ಯಾಸಿ ಕೂಡಲೆ ಉತ್ತರ ಕೊಟ್ಟನು.

“ನಾನು ಕಳುಹಿಸಿದ ಮೊದಲೆರಡು ಅಭ್ಯರ್ಥಿ ಪತ್ರಗಳನ್ನು ಮಹಾಸಂಘ ನಿರಾಕರಿಸಿದ ಕಾರಣವೇನು?”

“ಅಂಗೀಕಾರ ನಿರಾಕರಣೆಗೆ ಕಾರಣ ಕೊಡುವುದು ಮಹಾಸಂಘದ ಸಂಪ್ರದಾಯವಲ್ಲ. ಆದರೂ ವಿಶೇಷ ಸಂದರ್ಭವೆಂದು ಪರಿಗಣಿಸಿ ನಿಮಗೆ ಉತ್ತರ ಕೊಡುತ್ತೇನೆ. ನಿರಾಕರಣೆಗೆ ನೀವು ತಿಳಿದಿರುವ ಕಾರಣವೇನು?”

ಪ್ರಶ್ನೆಗೆ ಮರುಪ್ರಶ್ನೆ. ಬಿಜ್ಜಳನು ಅಪೇಕ್ಷಿಸಿದ್ದುದೂ ಆ ಅವಕಾಶವನ್ನೇ.

“ಮಹಾಸಂಘದ ದ್ವೈವಾರ್ಷಿಕ ಸಭೆಗಳಲ್ಲಿ ತನ್ನ ಅಭ್ಯರ್ಥಿ ಪತ್ರ ಚರ್ಚೆಗೆ ಬಂದಾಗ ದೇವಗಿರಿ, ಸಿಂಧವಾಡಿ, ಗೋವೆ ಮತ್ತು ಹೊಯ್ಸಳನಾಡಿನ ಪ್ರತಿನಿಧಿಗಳು ತೀವ್ರವಾಗಿ ವಿರೋಧಿಸಿದರೆಂದು ಕೇಳಿದ್ದೇನೆ. ಈ ಪ್ರದೇಶಗಳ ಸಾಮಂತರು, ಮಾಂಡಲಿಕರು, ಮೊದಲಿಂದ ವಿನಾಕಾರಣ ನನ್ನ ಮೇಲೆ ಮತ್ಸರ ಸಾಧಿಸುತ್ತಿದ್ದಾರೆ. ಮಹಾಸಂಘದಿಂದ ನನ್ನನ್ನು ದೂರವಾಗಿಡುವುದು ಅವರ ಅಪೇಕ್ಷೆ.” –ಎಂದು ಅವನು ಉತ್ತರಿಸಿದನು.

ಸನ್ಯಾಸಿ ಹೇಳಿದನು : “ನಿಮಗೆ ಬಹುಮತ ದೊರಕಿತು. ಆದರೂ ಅನಂತರ ನಡೆದ ಪ್ರಕಟ ಅಧಿವೇಶನದಲ್ಲಿ ನೀವು ನಿರೀಶ್ವರವಾದಿ ನಾಸ್ತಿಕರೆಂಬ ಕಾರಣದಿಂದ ಪತ್ರ ನಿರಾಕರಿಸಲ್ಪಟ್ಟಿತು.”

ಬಿಜ್ಜಳನು ಆ ದಿನ ಎರಡನೆಯ ಸಾರಿ ವಿಚಲಿತನಾದನು. ಚಾಲುಕ್ಯ ರಾಜ್ಯದ ಸರ್ವಾಧಿಕಾರಿ, ಮಹಾಮಂಡಲೇಶ್ವರನಾದ ನನ್ನ ಮೇಲೆ ನಾಸ್ತಿಕವಾದದ ಆರೋಪವೆ? ಐನೂರ್ವರ ಮಹಾಸಂಘ ಎಂತಹ ಪ್ರಭಾವಶಾಲಿ ಸಂಸ್ಥೆಯೇ ಆಗಿರಲಿ, ತನ್ನ ಅಧಿಕಾರವ್ಯಾಪ್ತಿ ಉಪಯುಕ್ತತೆಗಳನ್ನು ಅತಿಕ್ರಮಿಸುತ್ತಿದೆಯೆಂದು ಅವನು ಭಾವಿಸಿದನು. ರಾಜ್ಯಾಪಹಾರಕ ನಿರಂಕುಶ ಸರ್ವಾಧಿಕಾರಿಗೆ ಸಹಜವಾದ ಉದ್ಧಟತನದಿಂದ

ದರ್ಪದ ದನಿಯಲ್ಲಿ, "ನನ್ನ ಧಾರ್ಮಿಕ ವಿಶ್ವಾಸ ಅವಿಶ್ವಾಸಗಳನ್ನು ಮಹಾಸಂಘವೇಕೆ ಪರಿಗಣಿಸಬೇಕು ? ನಾನು ನಾಸ್ತಿಕನೆಂದು ನಿಮಗೆ ತಿಳಿದದ್ದು ಹೇಗೆ?" ಎಂದನು.

ಸನ್ಯಾಸಿ ಹೇಳಿದನು : "ಐನೂರ್ವರ ಮಹಾಸಂಘವೊಂದು ಧಾರ್ಮಿಕ ಸಂಸ್ಥೆ. ಜಗತ್ಕರ್ತನನ್ನು ನಿರಾಕರಿಸುವ ನಾಸ್ತಿಕ ಚಾರ್ವಾಕರಿಗೆ ಅದರಲ್ಲಿ ಸ್ಥಾನ ಕೊಡಕೂಡದೆಂಬುದು ನಮ್ಮ ಮೂಲ ನಿಬಂಧನೆ. ಭುಜಬಲ ಚಕ್ರವರ್ತಿ, ನಿಶ್ಯಂಕಮಲ್ಲ, ಶನಿವಾರ ಸಿದ್ಧಿ ಮುಂತಾದ ನಿಮ್ಮ ಬಿರುದುಗಳು ನಿಮ್ಮ ನಾಸ್ತಿಕ ವಾದವನ್ನು ಸ್ಪಷ್ಟಪಡಿಸುವುದೆಂದು ಮಹಾಸಂಘ ಭಾವಿಸಿದೆ. ನಾರಣಕ್ರಮಿತನಂತಹ ನಿರೀಶ್ವರವಾದಿ ಮೀಮಾಂಸಕನನ್ನು ರಾಜಪುರೋಹಿತನನ್ನಾಗಿ ನೇಮಿಸಿ, ಭಕ್ತಿಪ್ರಧಾನವಾದ ಶೈವಶರಣಧರ್ಮದ ಮೇಲೆ ದಬ್ಬಾಳಿಕೆ ಆರಂಭಿಸಿ, ನೀವು ಆ ಅಭಿಪ್ರಾಯವನ್ನು ಸಮರ್ಥಿಸುತ್ತಿದ್ದೀರಿ. ಐನೂರ್ವರ ಮಹಾಸಂಘ ನಿಮ್ಮ ಕಾರ್ಯವಿಧಾನವನ್ನು ವಿರೋಧಿಸುತ್ತದೆ."

ಬಿಜ್ಜಳನ ಮೊಗದಲ್ಲಿ ತಿಸ್ಕಾರದ ನಗೆ ಮೂಡಿತು. ಕುಹಕದ ಚುಚ್ಚು ದನಿಯಿಂದ ಅವನು, "ಹಾಗಾದರೆ ಶರಣರು ಪ್ರಾರಂಭಿಸಿರುವ ವರ್ಣಸಂಕರದ ಕೃತ್ಯಗಳನ್ನು, ವೈದಿಕ ಧರ್ಮದ ಅಪಚಾರಗಳನ್ನು, ನೀವು ಅನುಮೋದಿಸುವಿರಾ?" ಎಂದು ಕೇಳಿದನು.

"ಈಗ ನಮ್ಮಲ್ಲಿ ಪ್ರಚಾರದಲ್ಲಿರುವ ಸಮಾಜಘಾತುಕವಾದ ಜಾತಿ ಪಂಥವನ್ನು ನೀವು ವರ್ಣಾಶ್ರಮಧರ್ಮವೆಂದು ಕರೆಯುವಿರಾ?" ಸನ್ಯಾಸಿ ಉತ್ತರಿಸಿದನು. "ಹಿಂದೊಂದು ಕಾಲದಲ್ಲಿ ನಮ್ಮ ಸಂಸ್ಕೃತಿ ಸಂಪ್ರದಾಯಗಳ ರಕ್ಷಣೆಗೆ ಅಗತ್ಯವಾಗಿದ್ದ ವರ್ಣಧರ್ಮದ ಅಪವಾದ ರೂಪವಾದ ವಿರೂಪಚಿತ್ರವೇ ಈಗಿನ ಜಾತಿ ಪಂಥ. ಅದು ನಮ್ಮ ಸಮಾಜವನ್ನು ನೂರು ಚೂರುಗಳಾಗಿ ಮಾಡಿದೆ. ಅದನ್ನು ಹೀಗೆಯೇ ಬೆಳೆಯಬಿಟ್ಟರೆ ಆ ನೂರು ಚೂರುಗಳು ಸಾವಿರ ಚೂರುಗಳಾಗುವುವು. ಸಂಪ್ರದಾಯ ಶರಣರಾದ ವೈದಿಕರು ಈ ವಿದ್ರೂಪ ವರ್ಣಧರ್ಮವನ್ನು ಅನುಮೋದಿಸಿ ಸಮಾಜ ದ್ರೋಹಕ್ಕೆ ತೊಡಗಿದ್ದಾರೆ. ಈ ವಿಚಿತ್ರ ಪರಿಸ್ಥಿತಿಯಲ್ಲಿ ಜಾತಿಪಂಥವನ್ನು ವಿರೋಧಿಸಿ ಸಮಾಜದಲ್ಲಿ ಭಾವೈಕ್ಯತೆಯನ್ನು ಸಾಧಿಸಲು ಶರಣಧರ್ಮ ಪ್ರಯತ್ನಿಸುತ್ತಿದೆ. ಚಾಲುಕ್ಯ ರಾಜ್ಯದ ಸಾಮಾನ್ಯ ಪ್ರಜೆಗಳು, ಶ್ರೀಮಂತ ಸಾಮಂತರು, ಬುದ್ಧಿಜೀವಿ ಶಿಷ್ಟರು ಅದಕ್ಕೆ ಅನುಮೋದನೆ ಕೊಟ್ಟಿದ್ದಾರೆ. ಆರು ವರ್ಷಗಳ ಅಲ್ಪಾವಧಿಯಲ್ಲಿ ಶೈವಶರಣ ಧರ್ಮ ಸಾಧಿಸಿರುವ ವ್ಯಾಪ್ತಿ ಪ್ರಭಾವಗಳು ಅದರ ನಿದರ್ಶನ."

"ಹರಳಯ್ಯ ಮಧುವರಸರ ವಿವಾದ ಸಂಬಂಧ, ಅಸ್ಪೃಶ್ಯ ತರುಣನೊಬ್ಬನಿಗೆ ಬ್ರಾಹ್ಮಣ ಕನ್ಯೆಯನ್ನು ಕೊಟ್ಟು ಮದುವೆ ಮಾಡಿದ್ದು, –ಈ ವರ್ಣಸಂಕರವನ್ನು

ಮಹಾಸಂಘ ಒಪ್ಪುವುದೆ?" –ಬಿಜ್ಜಳನು ಅಚ್ಚರಿಯಿಂದ ಪ್ರಶ್ನಿಸಿದನು.

ಸನ್ಯಾಸಿ ಹೇಳಿದನು : "ವರ್ಣವಿಭಾಗ ಗುಣಕರ್ಮಗಳನ್ನು ಅವಲಂಬಿಸಿದೆ, ಜಾತಿಯನ್ನಲ್ಲ. ಈ ಆರ್ಯಸತ್ಯವನ್ನು ಮರೆಯುವ ಸಮಾಜ, ಪತನದ ದಾರಿ ಹಿಡಿದಂತೆಯೆ. ತನ್ನ ಭಕ್ತಿ ನಿಷ್ಠೆ ಸದ್ವರ್ತನೆಗಳಿಂದ ಹರಳಯ್ಯ ಶ್ರೇಷ್ಠ ಕಲಾವಿದ. ಅಜಂತದ ಚೀರಘಟ್ಟ ಕಲಾ ಸಂಪ್ರದಾಯ ಅವನಲ್ಲಿ ಜೀವಂತವಾಗಿದೆ.

"ದುಶ್ಶೀಲಃ ಶಿಲಯುಕ್ತೋ ವಾ ಯಾ ವಾ ಕೋಪ್ಯಸ್ಯ ಲಕ್ಷಣಂ
ಪ್ರತಿಭಾಭೂತಿ ಸಂಯುಕ್ತೋ ಸ ಪೂಜ್ಯೋ ರಾಜಪುತ್ರವತ್ ॥

"ಲೆಂಕನಾಗಲಿ, ಕಿಂಕರನಾಗಲಿ, ಶರಣನಾಗಲಿ ಸಂದೇಹಿಯಾಗಲಿ, ದರ್ಶನ ಸ್ಪರ್ಶನವುಳ್ಳವರಾಗಲಿ ಪ್ರತಿಭಾಶಾಲಿಯಾದ ಕಲಾಕಾರನನ್ನು ರಾಜಪುತ್ರನಂತೆ ಗೌರವಿಸಬೇಕು ಎಂದು ಶೈವಾಗಮಗಳು ಹೇಳುತ್ತವೆ. ತಿಳಿದೋ ತಿಳಿಯದೆಯೋ, ಪ್ರಕಟವಾಗಿಯೋ ರಹಸ್ಯವಾಗಿಯೋ ನಮ್ಮ ಸಮಾಜದಲ್ಲಿ ನಡೆಯುವ ಅಸವರ್ಣ ವಿವಾಹಗಳಲ್ಲಿ ಶೀಲವಂತ ಲಾವಣ್ಯವತಿಯರ ಮದುವೆಯೂ ಒಂದು. ಅದರಿಂದ ವರ್ಣಸಂಕರವಾಯಿತೆಂದು ಬೊಬ್ಬಿಟ್ಟು ಗೊಂದಲವೆಬ್ಬಿಸುವುದು ಅವಿವೇಕದ ಹಾದಿ. ರಾಜಪುರೋಹಿತ ನಾರಣಕ್ರಮಿತರು ವೈಯಕ್ತಿಕ ಕಾರಣಗಳಿಂದ ಈ ಅಲ್ಪ ವಿಚಾರವನ್ನು ಬೆಟ್ಟವಾಗಿ ಮಾಡಿ ಚಾಲುಕ್ಯ ಧರ್ಮಾಧಿಕರಣವನ್ನು ಅಪಹಾಸ್ಯಕ್ಕೀಡುಮಾಡಿದ್ದಾರೆ. ಆಪಾದಿತರ ವಿಚಾರಣೆ ನಡೆಸದೆ ನೀವು ವಿಧಿಸಿರುವ ದಂಡಾಜ್ಞೆ ಎಲ್ಲ ಧರ್ಮ, ಎಲ್ಲ ಸತ್ಯ, ಎಲ್ಲ ಕಾಲ, ಎಲ್ಲ ದೇಶಗಳಿಗೆ ವಿರುದ್ಧವಾದದ್ದು. ನೀವು ಈಗಲೇ ಎಚ್ಚೆತ್ತುಕೊಳ್ಳದೆ ಹೋದರೆ ನಿರ್ಮೂಲವಾಗಿ ನಾಶವಾಗುವಿರಿ. ನಿಮ್ಮೊಡನೆ ಚಾಲುಕ್ಯ ರಾಜ್ಯವೂ ನಾಶವಾಗುವುದು."

ನುಡಿಯುತ್ತಿದ್ದಂತೆ ಸನ್ಯಾಸಿಯ ಕಂಠ ಹೆಚ್ಚು ಗಂಭೀರವಾಯಿತು. ಭವಿಷ್ಯ ನುಡಿಯುವ ಪ್ರವಾದಿಯಂತೆ ಅವನು ದೊಡ್ಡ ದನಿಯಲ್ಲಿ ಮಾತು ಮುಗಿಸಿದನು.

ಬಿಜ್ಜಳನ ಹುಬ್ಬುಗಳು ಗಂಟಿಕ್ಕಿದವು. ದೇಹ ಕಂಪಿಸಿತು. ತುಟಿಗಳು ಅದುರಿದವು. ಅಧಿಕಾರದ ದನಿಯಿಂದ ಅವನು,

"ದಂಡಾಜ್ಞೆ ಪ್ರಚಾರವಾಗಿ ಆಗಲೆ ಹನ್ನೆರಡು ದಿನಗಳು ಕಳೆದುಹೋಗಿವೆ. ಇನ್ನೆರಡು ದಿನಗಳಲ್ಲಿ ಅದು ಕಾರ್ಯಗತವಾಗುತ್ತದೆ. ಅದನ್ನು ವಿರೋಧಿಸುವವರು ಯಾರೇ ಆಗಲಿ ವಿಚಾರಣೆಯಿಲ್ಲದೆ ವಧಿಸಲ್ಪಡುವರು. ನೀವು ಈ ವಿಚಾರದಲ್ಲಿ ಪ್ರವೇಶಿಸುವುದು ವ್ಯರ್ಥ, ನನ್ನ ನಿರ್ಧಾರ ಬದಲಿಸುವುದಿಲ್ಲ," ಎಂದನು.

"ಹಾಗಾದರೆ ಮಹಾಸಂಘದ ಸೂಚನೆಯನ್ನು ನೀವು ತಿರಸ್ಕರಿಸುವಿರಾ?"
–ಸನ್ಯಾಸಿಯ ಕಂಠ ಗಡುಸಾಗಿ ಕೇಳಿಸಿತು.

"ಈಗಿನ ಸಂದರ್ಭದಲ್ಲಿ ತಿರಸ್ಕರಿಸುವುದು ಅನಿವಾರ್ಯ."

–ಬಿಜ್ಜಳನು ಅಷ್ಟೇ ಬಿರುಸಾಗಿ ಉತ್ತರ ಕೊಟ್ಟನು.

"ಅದರ ಪರಿಣಾಮವೇನೆಂಬುದು ನಿಮಗೆ ತಿಳಿದಿದೆಯೆ?"

ಬಿಜ್ಜಳನು ವಿಕಟವಾಗಿ ನಕ್ಕು, "ನನ್ನ ಬಿರುದುಗಳು ನಾಸ್ತಿಕವಾದದ ಕುರುಹುಗಳೆಂದು ನೀವೇ ಹೇಳಿದಿರಲ್ಲವೆ? ಬಿಜ್ಜಳನನ್ನು ಹೆದರಿಸುವ ಶಕ್ತಿ ಈ ಜಗತ್ತಿನಲ್ಲಿ ಯಾವುದೂ ಇರುವುದಿಲ್ಲ," ಎಂದನು.

ಸನ್ಯಾಸಿ ಚಡಪಡಿಸಿ, "ಇದುವರೆಗೆ ನಿಮ್ಮ ಶತಾಪರಾಧಗಳನ್ನು ಮಹಾಸಂಘ ಮನ್ನಿಸಿದೆ. ಆದರೆ ಈ ಸಾರಿ ನೀವು ಸಂಘದ ಆದೇಶವನ್ನು ತಿರಸ್ಕರಿಸಿದರೆ, ಖಂಡಿತವಾಗಿ ವಿಪತ್ತಿಗೆ ಗುರಿಯಾಗಬೇಕಾಗುವುದು," ಎಂದು ಆವೇಗದಿಂದ ನುಡಿದನು.

"ಶತಾಪರಾಧಗಳು ! ಮಹಾಸಂಘ ನನ್ನ ತಪ್ಪುನೆಪ್ಪುಗಳ ಎಣಿಕೆಗೆ ತೊಡಗಿದ್ದು ಎಂದಿನಿಂದ ?" ಉಪಹಾಸದ ನಗೆ ಹಾರಿಸಿ ಬಿಜ್ಜಳನು ಪ್ರಶ್ನಿಸಿದನು.

ಸನ್ಯಾಸಿ ಹೇಳಿದನು : "ಕಳೆದ ಹನ್ನೆರಡು ವರ್ಷಗಳಿಂದ ನಿಮ್ಮ ಕಾರ್ಯಾಚರಣೆಯ ಒಂದೊಂದು ಘಟನೆಯೂ ಮಹಾಸಂಘಕ್ಕೆ ವರದಿಯಾಗಿದೆ. ತೈಲಪ ಮಹಾರಾಜರನ್ನು ವಿಲಾಸದ ಮಡುವಿನಲ್ಲಿ ತಳ್ಳಲು ನೀವು ಹೂಡಿದ ತಂತ್ರ, ಹಂತಹಂತವಾಗಿ ನಡೆಸಿದ ರಾಜ್ಯಾಪಹಾರ, ತೈಲಪನ ಕಡೆಯ ಸಾಮಂತ ಅಧಿಕಾರಿಗಳನ್ನು ಪದಚ್ಯುತರಾಗಿ ಮಾಡಲು ನೀವು ಕೈಗೊಂಡ ಭೇದೋಪಾಯಗಳು, ಚಾಲುಕ್ಯ ವಂಶೀಯರನ್ನು ದೇಶದಿಂದ ಓಡಿಸಲು ನೀವು ನಡೆಸಿದ ರಹಸ್ಯ ಹಿಂಸಾಕೃತ್ಯಗಳು, ಅತಿಥಿಯಾಗಿ ಮಂಗಳವೇಡೆಗೆ ಬಂದ ಚಾಲುಕ್ಯ ರಾಣಿ ಕಾಮೇಶ್ವರಿಯ ಬಗೆಗೆ ನಿಮ್ಮ ವಿಶ್ವಾಸಘಾತಕ ದುರ್ವರ್ತನೆ, ಅದರ ಪರಿಣಾಮವಾಗಿ ನಡೆದ ಅಗ್ನಿ ಅಪಘಾತ–ಈ ಎಲ್ಲ ವಿಚಾರಗಳೂ ಮಹಾಸಂಘಕ್ಕೆ ತಿಳಿದಿದೆ. ಮಹಾಭಾರತದಲ್ಲಿನ ಶಿಶುಪಾಲಕಥೆ ಕೇಳಿಲ್ಲವೆ ನೀವು. ಅವನ ನೂರು ಅಪರಾಧಗಳನ್ನು ಕೃಷ್ಣನು ಕ್ಷಮಿಸಿದನು. ನೂರೊಂದನೆಯ ಅಪರಾಧ ನಡೆದಾಗ ನಿಷ್ಕರುಣೆಯಿಂದ ಶಿರಶ್ಛೇದನ ಮಾಡಿದನು. ನಿಮ್ಮ ಅಂತ್ಯವೂ ಹಾಗಾಗದಿರಬೇಕಾದರೆ ಮಹಾಸಂಘದ ಸೂಚನೆಯಂತೆ ನಡೆಯುವುದು ಅಗತ್ಯ."

ಕಾಮೇಶ್ವರಿಯ ಹೆಸರು ಕೇಳಿ ಬಿಜ್ಜಳನು ಬೆಚ್ಚಿದನು. ಅವಳ ವಿಚಾರದಲ್ಲಿ ತನ್ನ ದುರ್ವರ್ತನೆ ಯಾವ ಘಟ್ಟಕ್ಕೆ ಮುಟ್ಟಿತೆಂಬುದನ್ನು ಮಹಾಸಂಘ ತಿಳಿದಿರಬಹುದೇ ಎಂದು ಅವನು ಸಂದೇಹಿಸಿದನು. ಆ ವಿಚಾರ ಪ್ರಜೆಗಳಿಗೆ ತಿಳಿದರೆ ರಾಜ್ಯಾದ್ಯಂತ ವಿರೋಧ ಅವಹೇಳನಗಳ ಮಹಾಪೂರವೇ ಹರಿಯಬಹುದೆಂದು ಭಾವಿಸಿ

ಅವನು, "ನನ್ನ ಈ ಎಲ್ಲ ಅಪರಾಧಗಳನ್ನು ಮಹಾಸಂಘ ಕರುಣೆಯಿಂದ ಮನ್ನಿಸಲು ಕಾರಣ ?" ಎಂದು ವಿನಯದ ಬಲೆ ಬೀಸಿ ನುಡಿದನು.

"ನೀವು ದಕ್ಷರಾದ ಆಡಳಿತಗಾರರೆಂದು, ದೇಶದಲ್ಲಿ ಶಾಂತಿ ಸುರಕ್ಷಣೆಗಳನ್ನು ಸ್ಥಾಪಿಸಿ ಆರ್ಥಿಕ ಭದ್ರತೆಯನ್ನು ಉತ್ತಮಪಡಿಸಲು ನೀವು ಶಕ್ತರೆಂದು, ಬಸವಣ್ಣನವರು ಪ್ರಾರಂಭಿಸಿದ ಧಾರ್ಮಿಕ ಆರ್ಥಿಕ ಸಾಮಾಜಿಕ ಸುಧಾರಣೆಗಳಿಗೆ ನೀವು ನೆರವಾದದ್ದು ಮಹಾಸಂಘ ನಿಮ್ಮ ವಿಚಾರದಲ್ಲಿ ಅನುಸರಿಸಿದ ಕ್ಷಮಾನೀತಿಯ ಮುಖ್ಯ ಕಾರಣಗಳಲ್ಲೊಂದು."

–ಸನ್ಯಾಸಿ ಅಷ್ಟೇ ವಿನಯದಿಂದ ಉತ್ತರ ಕೊಟ್ಟನು.

ಬಿಜ್ಜಳನು ಕೆಲವು ಕ್ಷಣಗಳು ಯೋಚಿಸಿ ಬದಲಿಸಿದ ಕಂಠದಿಂದ, "ಈಗಿನ ಪರಿಸ್ಥಿತಿಯಲ್ಲಿ ಮಹಾಸಂಘ ನನ್ನಿಂದ ಅಪೇಕ್ಷಿಸುವುದೇನು?" ಎಂದು ಪ್ರಶ್ನಿಸಿದನು.

"ನೀವು ಪ್ರಚಾರ ಮಾಡಿರುವ ಮರಣದಂಡನೆಯ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಂಡು ಮಧುವರಸ ಹರಳಯ್ಯ ಶೀಲವಂತರನ್ನು ಬಿಡುಗಡೆಮಾಡುವುದು. ಶರಣ ಧರ್ಮದ ವಿರುದ್ಧವಾಗಿ ಪ್ರಾರಂಭಿಸಿರುವ ದಬ್ಬಾಳಿಕೆಯ ಕಾರ್ಯಗಳನ್ನು ನಿಲ್ಲಿಸುವುದು."

"ಪ್ರತಿಯಾಗಿ ಮಹಾಸಂಘ ನನಗೆ ಕೊಡುವ ಪರಿಹಾರವೇನು?"

"ಸದಸ್ಯತ್ವಕ್ಕಾಗಿ ನೀವು ಕಳುಹಿಸಿರುವ ಅಭ್ಯರ್ಥಿ ಪತ್ರವನ್ನು ಮಹಾಸಂಘ ಅಂಗೀಕರಿಸುತ್ತದೆ. ಶರಣರ ವಿರುದ್ಧ ನೀವು ಪ್ರಾರಂಭಿಸಿರುವ ಕಾರ್ಯಕ್ರಮವನ್ನು ನಿಲ್ಲಿಸುವುದರಿಂದ ನಿಮಗಾಗುವ ಆರ್ಥಿಕ ನಷ್ಟವನ್ನು ತುಂಬಿಕೊಡಲು ಮಹಾಸಂಘ ನಿಮ್ಮ ಸ್ವಂತ ರಾಜಕೋಶಕ್ಕೆ ಹತ್ತು ಲಕ್ಷ ವರಹಗಳನ್ನು ಪರಿಹಾರ ಧನವಾಗಿ ನೀಡುತ್ತದೆ."

ಬಿಜ್ಜಳನು ಸ್ತಂಭಿತನಾದನು.

ಹತ್ತು ಲಕ್ಷ ವರಹಗಳು! ಮಂಗಳವೇಡೆಯ ಹತ್ತು ವರ್ಷಗಳ ಉತ್ಪನ್ನ ! ಚಾಲುಕ್ಯ ರಾಜ್ಯಕ್ಕೆ ಸಾಮಂತ ಮಾಂಡಲಿಕರು ಸಲ್ಲಿಸುವ ವಾರ್ಷಿಕ ಕಪ್ಪಕಾಣಿಕೆಗಳ ದಶಮಾಂಶ !

ಲಂಚ ಕೊಟ್ಟು ನ್ಯಾಯಾಧೀಶರನ್ನು ಒಲಿಸಿಕೊಳ್ಳುವುದು, ದಂಡಾಜ್ಞೆಕಾರ್ಯಗತವಾಗದಂತೆ ಮಾಡುವುದು, ನ್ಯಾಯವನ್ನು ಬೆಲೆಕೊಟ್ಟು ಕೊಳ್ಳುವುದು, ಈ ಎಲ್ಲ ರೀತಿಯ ಭ್ರಷ್ಟಾಚಾರಗಳನ್ನು ಶಿಕ್ಷಾರ್ಹ ಅಪರಾಧಗಳೆಂದು ಧರ್ಮಶಾಸ್ತ್ರಗಳು ಹೇಳುತ್ತವೆ. ನ್ಯಾಯಪೀಠದ ತೀರ್ಪಿನಂತೆ ಮರಣದಂಡನೆಗೆ ಗುರಿಯಾದ ಅಪರಾಧಿಗಳನ್ನು ಉಳಿಸಿಕೊಳ್ಳಲು ರಾಜನಿಗೆ ಲಂಚ ಕೊಡುವುದು

ರಾಜದ್ರೋಹದಷ್ಟೇ ಗುರುತರವಾದ ಅಪರಾಧ. ಐನೂರ್ವರ ಮಹಾಸಂಘ ಇಂತಹ ಅಚಿಂತ್ಯ ಸಾಹಸ ಕೃತ್ಯಕ್ಕೆ ತೊಡಗಿದ್ದು ಹೇಗೆ?

ಬಿಜ್ಜಳನು ಯೋಚಿಸುತ್ತ ಮೌನವಾಗಿ ಕುಳಿತಿದ್ದಂತೆ ಸನ್ಯಾಸಿ ಮುಂದುವರೆದು, “ಇದು ಅಪರಿಚಿತನೊಬ್ಬನ ಉನ್ಮತ್ತಾಲಾಪವಲ್ಲ. ಐಯ್ಯಾವಳೆಯ ಐನೂರ್ವರು ಸ್ವಾಮಿಗಳ ಅಧ್ಯಕ್ಷನಾಗಿ, ಸಂಘದ ಅನುಮತಿ ಪಡೆದು ನಾನೀ ಮಾತುಗಳನ್ನು ಹೇಳುತ್ತಿದ್ದೇನೆ. ಗೊತ್ತಾದ ಹತ್ತು ಲಕ್ಷ ಹಣವನ್ನು, ಒಂದೇ ಮೊತ್ತದಲ್ಲಿ, ಸ್ವರ್ಣಮುದ್ರೆಗಳ ರೂಪದಿಂದ ನಿಮಗೆ ಸಲ್ಲಿಸಲು ಮಹಾಸಂಘ ಉದ್ದೇಶಿಸಿದೆ. ಪೂರ್ಣ ಹಣವನ್ನು ನಾನು ಸಂಗಡ ತಂದಿದ್ದೇನೆ,” –ಎಂದು ಹೇಳಿ, ಆಸನದಿಂದೆದ್ದು ಎರಡು ಹೆಜ್ಜೆ ಮುಂದೆ ಹೋಗಿ, ಸಭಾಗೃಹದ ಮೊಗಶಾಲೆಯಲ್ಲಿ ತನ್ನ ಸಂಕೇತಕ್ಕಾಗಿ ಕಾಯುತ್ತಿದ್ದ ಪರಿಜನರನ್ನು ಕರೆದನು. ಕೂಡಲೆ ಅವರು ಸಾಲಾಗಿ ಒಳಗೆ ಬಂದು, ತಲೆಯ ಮೇಲೆ ಹೊತ್ತಿದ್ದ ಪೆಟ್ಟಿಗೆಗಳನ್ನು ಕೆಳಕ್ಕಿಳಿಸಿ, ಅವುಗಳಲ್ಲಿ ಅಡಕವಾಗಿಟ್ಟಿದ್ದ ನೂಲಿನ ಜಾಳಿಗೆಗಳನ್ನು ಒಂದೊಂದಾಗಿ ಹೊರಕ್ಕೆ ತೆಗೆದು ಬಾಯಿ ಬಿಚ್ಚಿ, ಅವುಗಳಲ್ಲಿದ್ದ ಚಿನ್ನದ ನಾಣ್ಯಗಳನ್ನು ಬಿಜ್ಜಳನ ಮುಂದೆ ಸುರಿದರು. ಚಾಲುಕ್ಯ, ಹೊಯ್ಸಳ, ಚೋಳ, ಪಾಂಡ್ಯ, ಸಿಂಧು, ಸೌರಾಷ್ಟ್ರ, ಮಾಳವ, ಮಗಧ, ಅಯೋಧ್ಯ, ಬಂಗಾಳ, ರೋಮಕ, ಮ್ಲೇಚ್ಛ, ಚೀನ, ಬ್ರಹ್ಮ, ಮಲಯ ದೇಶಗಳ ವಿವಿಧಾಕಾರದ, ವಿಭಿನ್ನ ತೂಕದ ಸ್ವರ್ಣಮುದ್ರೆಗಳು ಅವುಗಳಲ್ಲಿದ್ದವು.

ನೋಡುತ್ತಿದ್ದಂತೆ ಹಣದ ಗುಡ್ಡೆ ಬೆಳೆದು ರಾಶಿಯಾಯಿತು. ರಾಶಿ ಬೆಳೆದು ಬೆಟ್ಟವಾಯಿತು. ಝಣ ಝಣ ಶಬ್ದ ಕೇಳಿ ಓಡಿಬಂದ ರಾಜಭಟರು, ಪಸಾಯಿತರು, ಪ್ರತಿಹಾರಿ ಮಾಗಧರು, ಸಾಮಂತ ಸಾಮಾಜಿಕ ಹೆಗ್ಗಡೆಗಳೂ ಬಾಗಿಲು ಬೆಳ ಕಂಡಿಗಳಲ್ಲಿ ನಿಂತು, ತೆರೆದ ಕಣ್ಣುಗಳಿಂದ ಬೆಬ್ಬೆರಗಾಗಿ ಆ ಅಪೂರ್ವ ದೃಶ್ಯವನ್ನು ನೋಡುತ್ತಿದ್ದರು.

ಅಷ್ಟರಲ್ಲಿ ನಾರಣಕ್ರಮಿತನು ಅಲ್ಲಿಗೆ ಬಂದನು. ಹಣದ ರಾಶಿಯನ್ನು ಕಂಡು ಅವನು ಚಕಿತನಾಗಿ ಸನ್ಯಾಸಿಯ ಮುಖ ನೋಡಿದನು. ಸೆಳೆಮಿಂಚಿನ ಎರಡು ಬಳ್ಳಿಗಳು ಒಂದನ್ನೊಂದು ಸಂಧಿಸಿದಂತೆ ಆ ಇಬ್ಬರ ನೋಟಗಳು ಸಂಧಿಸಿ ಸ್ಪರ್ಧೆ ಆಕ್ರೋಶಗಳ ಕಿಡಿಗಳು ಹಾರಿದವು. ಕಾದಲು ಅಣಿಯಾದ ಕಾಳಿಂಗಗಳಂತೆ ಅವರು ಬುಸುಗುಟ್ಟಿದರು.

ಕ್ರಮಿತನು ಒಂದೇ ಹಾರಿಗೆ ಬಿಜ್ಜಳನ ಪಾರ್ಶ್ವವನ್ನು ಸೇರಿ ರಾಜಪುರೋಹಿತನ ವಜ್ರಖಚಿತವಾದ ಮಂತ್ರದಂಡವನ್ನು ಆಡಿಸುತ್ತ, “ಆಜ್ಞೆ ಮಾಡಿರಿ, ಮಹಾಪ್ರಭು. ಈ ವಂಚಕನನ್ನು ಬಂಧಿಸಿ ಸೆರೆಯಲ್ಲಿಡುತ್ತೇನೆ. ಅವನಾರೆಂಬುದು ನನಗೆ ತಿಳಿದಿದೆ,” ಎಂಬ ಅಬ್ಬರಿಸಿದನು.

ಬಿಜ್ಜಳನು ಅಸಮಾಧಾನದಿಂದ ಕ್ರಮಿತನನ್ನು ದುರುದುರು ನೋಡಿ, ಸನ್ಯಾಸಿಯ ಕಡೆ ತಿರುಗಿ,

"ಈ ಹೊನ್ನರಾಶಿಯಿಂದ ಭೂಮಿ ಕಾಣಿ, ಪ್ರತಿಷ್ಠೆ ಗೌರವ, ದೇಶಕೋಶ, ಅಧಿಕಾರ ಮಂಡಲ, ಇವೆಲ್ಲವನ್ನೂ ಕೊಳ್ಳಬಹುದು. ಆದರೆ ಬಿಜ್ಜಳನನ್ನು ಕೊಳ್ಳಬಲ್ಲ ಸಂಪತ್ತು ಜಗತ್ತಿನಲ್ಲಿ ಇನ್ನೂ ಸೃಷ್ಟಿಯಾಗಿಲ್ಲ. ಬಿಜ್ಜಳನನ್ನು ಆಜ್ಞೆ ಮಾಡಬಲ್ಲ ಶಕ್ತಿ ಜಗತ್ತಿನಲ್ಲೆಲ್ಲಿಯೂ ಇರುವುದಿಲ್ಲ. ಇವನು ಭುಜಬಲ ಚಕ್ರವರ್ತಿ, ನಿಶ್ಯಂಕಮಲ್ಲ, ಶನಿವಾರಸಿದ್ಧಿ ! ಇದನ್ನು ತಿಳಿಯಲಿ ನಿಮ್ಮ ಮಹಾಸಂಘ,"

–ಎಂದು ಹೇಳಿ ಕ್ರಮಿತನೊಡನೆ ಅಲ್ಲಿಂದ ನಿಷ್ಕ್ರಮಿಸಿದನು.

ಬಿಜ್ಜಳನು ಹೋದಕಡೆಯೇ ನಿರಾಶೆಯ ಸ್ತಬ್ಧದೃಷ್ಟಿಯಿಂದ ನೋಡುತ್ತ ಸನ್ಯಾಸಿ, ಕರ್ತವ್ಯಮೂಢನಂತೆ ಕೆಲವು ಕ್ಷಣಗಳು ನಿಂತನು. ಬಳಿಕ ಅವನು ಚೇತರಿಸಿಕೊಂಡಂತೆ ತಲೆಯಾಡಿಸಿ, ಹಣವನ್ನು ಜಾಳಿಗೆಗಳಿಗೆ ತುಂಬುವಂತೆ ತನ್ನ ಕಡೆಯವರಿಗೆ ಆಜ್ಞೆ ಮಾಡಿದನು.

ರಾಜಭಟ ಪಸಾಯಿತ ಹೆಗ್ಗಡೆಗಳು ಬಾಗಿಲು ಬೆಳಕಂಡಿಗಳಲ್ಲಿ ನಿಂತು ನೋಡುತ್ತಿದ್ದಂತೆ ಸನ್ಯಾಸಿಯ ಕಡೆಯವರು ಸ್ವರ್ಣ ಮುದ್ರೆಗಳನ್ನು ಜಾಳಿಗೆಗಳಿಗೆ ತುಂಬಿ ಪೆಟ್ಟಿಗೆಗಳಲ್ಲಿಟ್ಟು ತಲೆಯಮೇಲೆ ಹೊತ್ತು ಸಾಲಾಗಿ ಹೊರಗೆ ಹೋದರು.

ಕೊನೆಯಲ್ಲಿ ಸನ್ಯಾಸಿ, ಹೆಗ್ಗಡೆಗಳಲ್ಲಿ ಹಿರಿಯನನ್ನು ಕರೆದು, ಜಾಳಿಗೆಯೊಂದನ್ನು ಕೊಟ್ಟು, "ಅರಮನೆಯ ಪರಿವಾರಕ್ಕೆ ಹಂಚಿರಿ," ಎಂದು ಹೇಳಿದಾಗ ಹೆಗ್ಗಡೆ ನಿರಾಕರಿಸಿ, "ಈ ವಿಚಾರ ಪ್ರಭುಗಳಿಗೆ ತಿಳಿದರೆ ನನ್ನ ತಲೆ ಕೆಳಗುರುಳುತ್ತದೆ," ಎಂದನು.

ಸ್ವರ್ಣಕಾರರು ಮುತ್ತುರತ್ನಗಳನ್ನು ತಟ್ಟೆಯಲ್ಲಿಟ್ಟು ಬಹಿರಂಗವಾಗಿ ಅಂಗಡಿ ಮುಂಗಟ್ಟುಗಳಲ್ಲಿ ಮಾರುತ್ತಿದ್ದ ಕಾಲ ಅದು. ಸರ್ವಾಲಂಕೃತೆಯಾದ ಹೆಣ್ಣು, ನಡುರಾತ್ರಿಯಲ್ಲಿ ನಿರ್ಭೀತಿಯಿಂದ, ಏಕಾಕಿನಿಯಾಗಿ ನಗರದ ಬೀದಿಗಳಲ್ಲಿ ಸಂಚರಿಸುತಿದ್ದಳು ಆಗ. ನಾಗರಿಕರು ಮನೆ ಬಾಗಿಲುಗಳನ್ನು ತೆರೆದು ನಿರ್ಭಯವಾಗಿ ಮಲಗಿ ನಿದ್ರೆ ಮಾಡುತ್ತಿದ್ದರು. ರಾಜಮಾರ್ಗಗಳಲ್ಲಿ ಸಿಕ್ಕ ಹಣದ ಜಾಳಿಗೆ ಆಭರಣಗಳನ್ನು ಕಳೆದುಕೊಂಡವರು ಬಂದು ತೆಗೆದುಕೊಳ್ಳಲೆಂದು ಪಾರ್ಶ್ವದ ಮರಗಳಿಗೆ ತಗುಲಿ ಹಾಕುತ್ತಿದ್ದರು.

ಸನ್ಯಾಸಿಯೂ, ಹೊನ್ನು ತುಂಬಿದ ಪೆಟ್ಟಿಗೆಗಳನ್ನು ಹೊತ್ತ ಅವನ ಕಡೆಯವರೂ ಅರಮನೆಯ ಮಹಾದ್ವಾರವನ್ನು ದಾಟಿ ಹೋದಮೇಲೆ, ಹೆಗ್ಗಡೆ ಪಸಾಯಿತ ಪರಿವಾರದವರು ನಿಟ್ಟುಸಿರಿಟ್ಟು ಹೇಳಿದರು :

"ಮನೆಗೆ ಬಂದ ಮಹಾಲಕ್ಷ್ಮಿಯನ್ನು ಪ್ರಭುಗಳು ನಿರಾಕರಿಸಿ ಹೊರಗೆ ಕಳುಹಿಸಿದರು. ಮುಂಬರುವ ವಿಪತ್ತಿನ ಸೂಚನೆ ಇದು!" ಎಂದು.

ಅರಮನೆಯ ಆ ಭಾಗಕ್ಕೆ ಅಂದಿನಿಂದ ಜನರಲ್ಲಿ "ಹೊನ್ನಮ್ಮನ ಚಾವಡಿ" ಎಂಬ ಹೆಸರು ಪ್ರಚಾರಕ್ಕೆ ಬಂದಿತು.

* * *

ಮರಣದಂಡನೆಯ ಆಜ್ಞೆ ಕಾರ್ಯಗತವಾಗಲು ಒಂದು ದಿನ ಮಾತ್ರ ಉಳಿದಿತ್ತು. ನಗರದ ಈಶಾನ್ಯದಲ್ಲಿದ್ದ ಬರಮಪ್ಪನ ಗುಡ್ಡದಡಿಯಲ್ಲಿ ಎತ್ತರವಾದ ಶೂಲದ ಮರವೂ, ವೇದಿಕೆ ವಧಾಪೀಠಗಳೂ ಸಿದ್ಧವಾಗುತ್ತಿದ್ದವು. ಬಡಗಿ, ಲೋಹಕಾರ, ಚಂಗೂಲಿಗಳ ದೊಡ್ಡ ತಂಡ ಮೂರು ರಾತ್ರಿ, ಮೂರು ಹಗಲು ಬಿಡುವಿಲ್ಲದೆ ಕೆಲಸಮಾಡಿ ವಧಾಸ್ಥಾನಕ್ಕೆ ಎದುರಾಗಿ ತುಸು ದೂರದಲ್ಲಿ ಧರ್ಮಾಧಿಕರಣದ ಆಹ್ವಾನ ಪಡೆದ ಪ್ರೇಕ್ಷಕರಿಗಾಗಿ ಅಟ್ಟಣೆಗಳನ್ನು ಕಟ್ಟುತ್ತಿದ್ದರು. ನಗರದ ಸಾಮಾನ್ಯ ಜನರು ಸಣ್ಣ ಗುಂಪುಗಳಾಗಿ ಬಂದು, ನಡೆಯುತ್ತಿದ್ದ ಸಿದ್ಧತೆಗಳನ್ನು ಮೌನವಾಗಿ ನಿಂತು ನೋಡಿ ಹಿಂದಿರುಗುತ್ತಿದ್ದರು. ನೂತನ ಮಹಾಸೇನಾನಿ ಮಾಧವ ದಂಡನಾಯಕನ ಸೈನ್ಯಪಡೆಗಳು ಆ ಪ್ರದೇಶದಲ್ಲಿ ಎಲ್ಲ ಕಡೆ ಶಾಂತಿ ರಕ್ಷಣೆಗಾಗಿ ಕಾವಲು ಕೊಡುತ್ತಿದ್ದುವು.

ಅಂದು ಪ್ರಾತಃಕಾಲ ಮಹಮನೆಯ ಆವರಣದಲ್ಲಿ ಗಂಭೀರ ಶಾಂತಿ ನೆಲೆಸಿತ್ತು. ಅನುಭವಮಂಟಪದ ಪ್ರಾರ್ಥನಾಸಭೆ ಮುಗಿದು, ಒದಗಿ ಬಂದಿದ್ದ ಆ ಕಠಿಣ ಪ್ರಸಂಗಕ್ಕಾಗಿ ಹೊಸದಾಗಿ ಸ್ವರಸಂಯೋಜನೆ ಮಾಡಿದ್ದ ಬಸವಣ್ಣನವರ ವಚನವೊಂದನ್ನು ಶರಣಶರಣೆಯರು ಭಕ್ತಿ ಉದ್ರೇಕಗಳ ತುಂಬುಕಂಠದಿಂದ ಭಾವಪೂರ್ಣವಾಗಿ ಹಾಡುತ್ತಿದ್ದರು :

"ನಾಳೆ ಬರುವುದು ನಮಗಿಂದೇ ಬರಲಿ.
ಇಂದು ಬಪ್ಪುದು ನಮಗೀಗಲೇ ಬರಲಿ,
ಇದಕಾರಂಜುವರು, ಇದಕಾರಳಕುವರು ?
'ಜಾತಸ್ಯ ಮರಣಂ ಧ್ರುವಂ' ಎಂಬುದಾಗಿ
ನಮ್ಮ ಕೂಡಲ ಸಂಗಮ ದೇವರು ಬರೆದ ಬರಹವ
ತಪ್ಪಿಸುವರೆ ಹರಿ ಬ್ರಹ್ಮಾದಿಗಳವಲ್ಲ."

ವಚನ ಗೀತದ ಆ ನುಡಿಗಳು, ಉಕ್ಕಿ ಹರಿಯುವ ಸ್ಥೈರ್ಯ ವಿರಕ್ತಿಗಳ ಹೆದ್ದೊರೆಯಂತೆ ಮಹಮನೆಯ ಎಲ್ಲ ಕಡೆ ಹರಿದು ಗಂಭೀರ ಶಾಂತಿಯನ್ನು ಸೃಷ್ಟಿಸಿದ್ದವು.

ಸಭೆ ಮುಗಿದು ಶರಣೆಯರು ಹೊರಗೆ ಬರುತ್ತಿದ್ದಂತೆ, ಶೀಲವಂತನ ಬಂಧನವಾದಂದಿನ ದಿನದಿಂದ ಮಹಮನೆಯಲ್ಲಿ ಆಶ್ರಯ ಪಡೆದಿದ್ದ ಲಾವಣ್ಯವತಿ ನೀಲಲೋಚನೆಯ ಬಳಿ ಬಂದು, "ನಿನ್ನಿಂದ ನನಗೊಂದು ಸಹಾಯವಾಗಬೇಕಾಗಿದೆ, ಅಕ್ಕ," ಎಂದಳು.

"ಏನಾಗಬೇಕಾಗಿದೆ? ಸಂಕೋಚವಿಲ್ಲದೆ ಹೇಳು."

"ನಾನು ಸರ್ವಾಧಿಕಾರಿ ಬಿಜ್ಜಳರಾಯರನ್ನು ನೋಡಬೇಕಾಗಿದೆ. ನೀನು ಪತ್ರ ಬರೆದು ಸಂದರ್ಶನಕ್ಕೆ ಏರ್ಪಡಿಸಬೇಕು."

ನೀಲಲೋಚನೆ ಒಪ್ಪಿಕೊಂಡಳು. ಅವಳು ವಾಸಗೃಹವನ್ನು ಸೇರಿದ ಕೂಡಲೆ ಪತ್ರ ಸಿದ್ಧವಾಗಿ ಅವಸರದ ಭಟನಿಂದ ಬಿಜ್ಜಳನಿಗೆ ಕಳುಹಿಸಲ್ಪಟ್ಟಿತು. ನೀಲಲೋಚನೆ ಬರೆದಿದ್ದಳು :

"ತಂದೆ, ಪತಿ, ಮಾವ, ಈ ಮೂವರನ್ನೂ ಏಕ ಕಾಲದಲ್ಲಿ ಕಳೆದು ಕೊಳ್ಳಲಿರುವ ನಿರ್ಭಾಗ್ಯ ಹೆಣ್ಣೊಬ್ಬಳು ನಿಮ್ಮ ಸಂದರ್ಶನಕ್ಕೆ ಬರುವವಳಿದ್ದಾಳೆ. ಕರುಣೆಯಿಂದ ಅವಳ ಬೇಡಿಕೆಯನ್ನು ನಡೆಸಿಕೊಡಬೇಕಾಗಿ ಬೇಡುತ್ತೇನೆ.

ಇತಿ ನಿಮ್ಮ ಅಭಾಗಿನಿ ತಂಗಿ,
ನೀಲಲೋಚನೆ."

ಪತ್ರವನ್ನು ಓದಿ ಬಿಜ್ಜಳನು ಸ್ವಲ್ಪ ಹೊತ್ತು ಯೋಚಿಸಿ, "ಇಂದು ಅಪರಾಹ್ನ ಎರಡನೆಯ ಜಾವದಲ್ಲಿ ಸಮುಖದ ಚಾವಡಿಗೆ ಬರುವಂತೆ ತಿಳಿಸು," ಎಂದು ಅವಸರದ ಭಟನಿಗೆ ಹೇಳಿದನು.

ಅಂದು ಲಾವಣ್ಯವತಿ ಹೆಚ್ಚು ಹೊತ್ತು ಪೂಜೆಗೆ ಕುಳಿತಳು. ಅಂಗೈಯಲ್ಲಿ ಬೆಳಗುವ ಲಿಂಗಮೂರ್ತಿಯನ್ನು ಏಕಾಗ್ರತೆಯ ದೃಷ್ಟಿ ಕುಸುಮಗಳಿಂದ ಅರ್ಚಿಸಿ, "ಮರಣಕ್ಕಂಜದ ಶರಣರನ್ನು ಮಾನವ ಮಾತ್ರರ ದಂಡಾಜ್ಞೆಯಿಂದ ರಕ್ಷಿಸುವೆ ನೆಂಬುದು ಅವಿವೇಕ. ಚೆನ್ನಬಸವಣ್ಣನವರು, ಮಾಚಿದೇವರು, ಕಲ್ಯಾಣದ ಶ್ರೀಮಂತ ನಾಗರಿಕರು, ಐನೂರ್ವರು ಸ್ವಾಮಿಗಳ ಮಹಾಸಂಘ, ಇವರೆಲ್ಲರಿಂದ ಆಗದ ಕಾರ್ಯ ನನ್ನಿಂದಾಗುವುದೆಂಬುದು ಭ್ರಮಾತ್ಮಕ ಕಲ್ಪನೆ. ನನ್ನ ಕರ್ತವ್ಯವನ್ನು ನಾನು ಮಾಡುತ್ತೇನೆ. ಫಲಾಫಲಗಳು ನಿನಗೆ ಅರ್ಪಿತ" ಎಂದು ಬೇಡಿಕೊಂಡಳು.

ಅವಳು ಪೂಜೆಯಿಂದೆದ್ದು ಪ್ರಸಾದ ರೂಪವಾದ ಹಣ್ಣು ಹಾಲುಗಳನ್ನು ತೆಗೆದುಕೊಂಡು, ಹೊರಡಲು ಸಿದ್ಧಳಾಗಿ ನಾಗಲಾಂಬೆ ನೀಲಲೋಚನೆಯರ ಪಾದಗಳಿಗೆ ನಮಸ್ಕಾರ ಮಾಡಿದಾಗ, "ಸಂಗಡ ದಾಸಿಯೊಬ್ಬಳನ್ನು ಕರೆದುಕೊಂಡು ಹೋಗು," ಎಂದಳು ನೀಲಲೋಚನೆ.

ಲಾವಣ್ಯವತಿ ಹೇಳಿದಳು : "ರಾಜಸಮ್ಮುಖದಲ್ಲಿ ಮೃತ್ಯು ಎದುರಿಗೆ ನಿಂತಾಗ ಮನವನ ಆತ್ಮಶಕ್ತಿ ಏಕನಿಷ್ಠೆಗಳು ಮಾತ್ರವೇ ಅವನಿಗೆ ಅವಲಂಬನ. ಪರರ ಸಹಾಯ ಆಗ ಏನನ್ನೂ ಮಾಡಲಾರದು."

ನಾಗಲಾಂಬೆ ತಲೆದೂಗಿ, "ನೀನು ದಿಟ್ಟ ಹೆಣ್ಣು, ಲಾವಣ್ಯ. ಕಲ್ಯಾಣದ ಎಲ್ಲ ಶರಣೆಯರ ಸತೀಶಕ್ತಿ ಅದೃಶ್ಯರೂಪದಿಂದ ಸಂಗಡಿದ್ದು ನಿನ್ನನ್ನು ರಕ್ಷಿಸಲಿ," ಎಂದು ಹರಸಿ ಬೀಳ್ಕೊಟ್ಟಳು.

ತೀರ ಸಾಮಾನ್ಯವಾದ ಉಡಿಗೆ ತೊಡಿಗೆಗಳನ್ನು ಧರಿಸಿದ್ದರೂ ಪಾಚಿ ಮುಚ್ಚಿದ ತಾವರೆಯಂತೆ ಬೆಳಗುವ ಚಲುವೆ ಹೆಣ್ಣೊಬ್ಬಳು ಎದುರಿಗೆ ನಿಂತದ್ದನ್ನು ಕಂಡು ಬಿಜ್ಜಳನು ಚಕಿತನಾದನು. ನಾನು ಹಿಂದೆ ನೋಡಿದ್ದ ಬಾಲಿಕೆಯೇ ಇವಳು, ಎಂದು ಅವನಿಗೆ ಆಶ್ಚರ್ಯವಾಯಿತು. ಜಗತ್ತಿನ ಎಲ್ಲ ರತ್ನಗಳು ರಾಜನ ಸ್ವತ್ತೆಂಬ ಸರ್ವಾಧಿಕಾರಿ ಭಾವನೆ ಬೆಳೆದುಬಂದಿದ್ದ ಆ ಕಾಲಕ್ಕೆ ಸಹಜವಾಗಿ ಅವನು ಭಾವಿಸಿದನು, 'ನಾನು ಮೊದಲೆ ಇವಳನ್ನು ನೋಡಿದ್ದರೆ, ಈ ಅಸವರ್ಣ ವಿವಾಹದ ಪ್ರಸಂಗವೇ ಹುಟ್ಟುತ್ತಿರಲಿಲ್ಲ," ಎಂದು.

ವರ್ಣಸಂಕರದ ವಿಚಾರ ಮೊದಲಸಾರಿ ರಾಜಸಭೆಯಲ್ಲಿ ಚರ್ಚೆಗೆ ಬಂದಾಗ ಬಸವಣ್ಣನವರ ವಾದಕ್ಕೆ ಕ್ರಮಿತನು ಕೊಟ್ಟ ಉತ್ತರದಲ್ಲಿ ಉಲ್ಲೇಖಿಸಿದ ವೇದ ಸೂಕ್ತದ ನೆನಪಾಯಿತು,–"ಹತ್ತು ಜನ ಅಬ್ರಾಹ್ಮಣರು ಒಬ್ಬ ಹೆಣ್ಣಿನ ಪತಿಗಳಾಗಿರಲಿ, ಬ್ರಾಹ್ಮಣನು ಕೈಹಿಡಿದರಾಯಿತು. ಅವನೇ ಅವಳ ಪತಿ. ಕ್ಷತ್ರಿಯ ವೈಶ್ಯ ಶೂದ್ರರು ಪತಿಗಳಾಗುವುದಿಲ್ಲ," ಎಂದು.

ವರ್ಣಸಂಕರದ ವಿಚಾರದಲ್ಲಿ ಕ್ರಮಿತನ ಉನ್ಮತ್ತ ಆವೇಶ ಈಗ ಬಿಜ್ಜಳನಿಗೆ ಅರ್ಥವಾಯಿತು. ನಂದನದಲ್ಲಿ ಬೆಳೆದ ಪಾರಿಜಾತದ ಹೂವನ್ನು ಗೋಪಾಲಕನೊಬ್ಬನು ಅಪಹರಿಸಿದಾಗ ಇಂದ್ರನು ಕೋಪಿಸಿದನೆಂದು ಪುರಾಣಗಳು ಹೇಳುತ್ತವೆ, ನಾರಣ ಕ್ರಮಿತನೂ, ಅವನಿಗೆ ಪ್ರೋತ್ಸಾಹ ಕೊಡುತ್ತಿರುವ ವೈದಿಕರೂ ಈ ಅಸವರ್ಣ ವಿವಾಹದಿಂದ ಅಷ್ಟೇ ಕೋಪಗೊಳ್ಳುವುದು ಸ್ವಾಭಾವಿಕ ಎಂದು ಅವನು ತಿಳಿದನು.

"ಮಧುವರಸರ ಮಗಳು, ಶೀಲವಂತಯ್ಯನವರ ಅಂಗನೆ, ಲಾವಣ್ಯವತಿ ನಮಸ್ಕರಿಸುವಳು," –ಎಂದು ಹೇಳಿ ಲಾವಣ್ಯವತಿ ತಲೆಬಾಗಿ ನಿಂತಳು.

ಮಧುವರಸ ! ಶೀಲವಂತ ! ಆ ಹೆಸರುಗಳನ್ನು ಕೇಳಿದಾಗ ಬಿಜ್ಜಳನ ಅಸಹನೆ ಸಿಡಿದೆದ್ದಿತು. ಹುಬ್ಬುಗಳು ಕುಂಚಿತವಾದವು. ತುಟಿ ಅದುರಿತು.

"ಒಬ್ಬ ನಿರ್ಭಾಗ್ಯನ ಮಗಳಾಗಿ, ಇನ್ನೊಬ್ಬ ನಿರ್ಭಾಗ್ಯನ ಕೈ ಹಿಡಿದು ನೀನು

ಕೂಡಾ ನಿರ್ಭಾಗ್ಯಳಾದೆ!” –ಎಂದು ಬಿರುನುಡಿಯಾಡಿದನು.

“ನಾನು ನಿರ್ಭಾಗ್ಯಳಲ್ಲ. ಸರ್ವಾಧಿಕಾರಿ ಬಿಜ್ಜಳರಾಯರು ನನಗೆ ಕರುಣೆಯಿಂದ ದರ್ಶನ ಕೊಟ್ಟದ್ದು ನನ್ನ ಸೌಭಾಗ್ಯದ ಗುರುತು. ಈಗ ನನ್ನ ಸೌಭಾಗ್ಯ ದೌರ್ಭಾಗ್ಯ ಜೀವನ ಮರಣಗಳೂ ನಿಮ್ಮ ಕೈಯಲ್ಲಿವೆ.” –ಲಾವಣ್ಯವತಿ ನಮ್ರತೆಯಿಂದ ಬಿನ್ನವಿಸಿಕೊಂಡಳು.

ಬಿಜ್ಜಳನು ಕ್ಷಣಕಾಲ ಯೋಚಿಸಿ : “ನೀನು ನನ್ನಿಂದ ಅಪೇಕ್ಷಿಸುವುದೇನು?” ಎಂದು ಕೇಳಿದನು.

“ನನ್ನ ತಂದೆ, ಪತಿ, ಮಾವ–ಈ ಮೂವರ ಪ್ರಾಣಭಿಕ್ಷೆ.”

–ಎಂದು ಲಾವಣ್ಯವತಿ ಮೊಣಕಾಲೂರಿ ಕುಳಿತು ಸೆರಗೊಡ್ಡಿ ಬೇಡಿಕೊಂಡಳು. ಆಗ ಅವಳು ಕುಳಿತಿದ್ದ ರೀತಿ, ಚಾಚಿದ ಕೈಗಳ ಸುಂದರ ಹರವು, ಕಣ್ಣುಗಳ ಕರುಣಾ ದೃಷ್ಟಿ, ಚಿತ್ರಕಾರನ ಶ್ರೇಷ್ಠ ಕಲಾಕೃತಿಯಂತೆ ಕಂಡಿತು ಬಿಜ್ಜಳನಿಗೆ.

ಆ ಕರುಣಾವ್ಯಂಜನ ಸುಂದರ ಚಿತ್ರವನ್ನು ಕೆಲವು ಕ್ಷಣಗಳು ಅವನು ಎವೆಯಿಕ್ಕದೆ ನೋಡುತ್ತಿದ್ದು ಬಳಿಕ,

“ವರ್ಣಸಂಕರದ ಘೋರ ಅಪರಾಧಕ್ಕಾಗಿ ಅವರು ಮರಣದಂಡನೆಗೆ ಗುರಿಯಾಗಿದ್ದಾರೆ, ಲಾವಣ್ಯವತಿ. ಸಮಾಜಕ್ಕೆ ತಮ್ಮಿಂದಾಗಿರುವ ಅನ್ಯಾಯವನ್ನು ಸರಿಪಡಿಸಿ ಶಿಕ್ಷೆಯಿಂದ ಮುಕ್ತರಾಗಲು ಈಗಲೂ ಅವರಿಗೆ ಅವಕಾಶವಿದೆ. ಮೊಂಡುತನದಿಂದ ಅವರು ಈ ಮಾರ್ಗವನ್ನು ನಿರಾಕರಿಸಿದ್ದಾರೆ.”

–ಎಂದು ಗಂಭೀರವಾಗಿ ಹೇಳಿದನು.

“ಯಾವುದು ಆ ಮಾರ್ಗ?” –ಲಾವಣ್ಯವತಿ ಆತುರದಿಂದ ಪ್ರಶ್ನಿಸಿದಳು.

“ಅಷ್ಟೇನು ಕಠಿಣವಾದ ಮಾರ್ಗವಲ್ಲ ಅದು. ಶರಣ ಧರ್ಮವನ್ನು ಪರಿತ್ಯಜಿಸಿ, ನಿನ್ನ ಮತ್ತು ಶೀಲವಂತನ ಮದುವೆಯನ್ನು ರದ್ದುಪಡಿಸುವುದು. ಅದರಿಂದ ನಿನ್ನ ತಂದೆ ಮಂತ್ರಿಪದವಿ ಗೌರವಗಳನ್ನು ಪುನಃ ಪಡೆಯುವರು. ನೀನು ಈ ಅಧಃಪಾತದ ಅನಪೇಕ್ಷಿತ ವಿವಾಹ ಬಂಧನದಿಂದ ಮುಕ್ತಳಾಗುವೆ. ನಿನ್ನ ಇಚ್ಛೆಬಂದಂತೆ ಸ್ವತಂತ್ರ ಜೀವನ ನಡೆಸುವ ಅವಕಾಶವನ್ನು ಪುನಃ ಪಡೆಯುವೆ,” –ಬಿಜ್ಜಳನು ಉತ್ತರಕೊಟ್ಟನು.

ಆ ಅನೀತಿಯ ಸಲಹೆ ಕೇಳಿ ಲಾವಣ್ಯವತಿ ಬೆಚ್ಚಿದಳು. ತಟ್ಟನೆ ಎದ್ದುನಿಂತು ಬದಲಿಸಿದ ಕಂಠದಿಂದ, “ನನಗೆ ಸ್ವಾತಂತ್ರ್ಯ ಕೊಡಲು ಇಚ್ಛಿಸುವ ನೀವು ನನ್ನ ತಂದೆ, ಮಾವ, ಇವರಿಗೆ ಅದನ್ನು ನಿರಾಕರಿಸುತ್ತಿರುವುದೇಕೆ ? ಕಲ್ಪಿತ ಅವಾಸ್ತವ ಅಪರಾಧಗಳಿಗಾಗಿ ನನ್ನ ಪತಿಯನ್ನು ಬಂಧಿಸಿ ವಿಚಾರಣೆಯಿಲ್ಲದೆ ಮರಣದಂಡನೆ ವಿಧಿಸಿದ ಕಾರಣವೇನು? ದಯೆಮಾಡಿ ಉತ್ತರ ಕೊಡಬೇಕಾಗಿ ಬೇಡುತ್ತೇನೆ,” ಎಂದು ಬಿನ್ನವಿಸಿಕೊಂಡಳು.

"ಅವರು ನಿನ್ನನ್ನು ಈ ವಿವಾಹ ಬಂಧನಕ್ಕೆ ತಳ್ಳಿ ಅಪರಾಧಿಗಳಾಗಿದ್ದರೆ," ಎಂದು ಬಿಜ್ಜಳನು ಮತ್ತೆ ಹೇಳಿದನು.

"ಒತ್ತಾಯಪಡಿಸಿದವಳು ನಾನು. ಮದುವೆ ನಮ್ಮ ಒಮ್ಮತದಿಂದ ನಡೆಯಿತು. ವಾಸ್ತವದಲ್ಲಿ ನನ್ನ ತಂದೆಯವರಿಗಾಗಲಿ, ಹರಳಯ್ಯನವರಿಗಾಗಲಿ, ಈ ಸಂಬಂಧ ಇಷ್ಟವಿರಲಿಲ್ಲ, –ಎಂದು ಲಾವಣ್ಯವತಿ, ತಾನು ಮೊದಲಸಾರಿ ಆರೋಗ್ಯಧಾಮದಲ್ಲಿ ಶೀಲವಂತನನ್ನು ಕಂಡಾಗಿನಿಂದ ನಡೆದುದೆಲ್ಲವನ್ನೂ ವಿವರಿಸಿದಳು. ಸರ್ಪದ್ರಷ್ಟವಾಗಿ ದೇವಗಿರಿಯಿಂದ ಕಲ್ಯಾಣಕ್ಕೆ ಹಿಂತಿರುಗಿದಾಗ ಶೀಲವಂತ ಸ್ಮೃತಿಭಂಗದಿಂದ ಮೂಕನಾಗಿದ್ದದ್ದು, ಅವನ ನೆನಪುಗಳನ್ನು ಎಚ್ಚರಗೊಳಿಸಲು ಕುಸುಮಾವಳಿಯಂತೆ ನಟಿಸಿದ್ದು, ಅದರಿಂದ ತನ್ನಲ್ಲಾದ ಮನೋಪರಿವರ್ತನೆ, ಚಿತ್ರಸ್ಥೆಯಾದ ರಾಗಿಣಿ ಮತ್ತು ಮೃತಳಾದ ಕುಸುಮಾವಳಿ –ಈ ಇಬ್ಬರನ್ನು ಕುರಿತ ಚಿಂತನೆ ಅನುಶೀಲನಗಳಿಂದ ಮನಸ್ಸಿನ ಮೇಲಾದ ಪರಿಣಾಮ, ಮಧುವಯ್ಯನವರ ಯೌಗಿಕ ಚಿಕಿತ್ಸೆ, ಶೀಲವಂತನಲ್ಲಿ ತನ್ನ ಪ್ರಗಾಢ ಪ್ರೇಮವನ್ನು ತಂದೆ ತಿಳಿದು ಹರಳಯ್ಯನವರನ್ನು ಮದುವೆಗೆ ಒಪ್ಪಿಸಿದ್ದು–ಈ ಎಲ್ಲ ವಿಚಾರಗಳನ್ನು ವಿವರಿಸಿದಳು.

"ವಿವಾಹ ಅಪರಾಧವೆಂದು ನೀವು ಭಾವಿಸುವುದಾದರೆ ತಪ್ಪಿತಸ್ಥಳು ನಾನು. ನನ್ನ ತಂದೆಯವರಾಗಲಿ, ಹರಳಯ್ಯ ಶೀಲವಂತರಾಗಲಿ, ಮಹಮನೆಯ ಶರಣರಾಗಲಿ, ಇದರ ಕಾರಣವಲ್ಲ. ಅಪರಾಧ ಮಾಡಿದವಳು ನಾನು. ನನ್ನನ್ನು ವಧಿಸಲು ಆಜ್ಞೆ ಮಾಡಿರಿ. ನಾನು ಸಂತೋಷದಿಂದ ಸಾವನ್ನಪ್ಪುತ್ತೇನೆ," ಎಂದು ಅವಳು ತನ್ನ ವಿವರಣೆಯನ್ನು ಮುಗಿಸಿದಳು.

ಬಿಜ್ಜಳನು ಎಲ್ಲವನ್ನೂ ಕೇಳಿದನು. ನ್ಯಾಯಪೀಠ ನಡೆಸಿದ ವಿಚಾರಣೆಯಲ್ಲಿ ಸಂದಿಗ್ಧವಾಗಿದ್ದ ಅನೇಕ ವಿಷಯಗಳು ಲಾವಣ್ಯವತಿ ಕೊಟ್ಟ ವಿವರಗಳಿಂದ ಪರಿಷ್ಕಾರವಾದಂತೆ ಅವನು ತಿಳಿದನು. ವಿದ್ವೇಷ ಪೂರ್ವಾಗ್ರಹಗಳಿಗೆ ಅಧೀನನಾಗಿ ಕ್ರಮಿತನಂತೆ ತಾನೂ ತಪ್ಪುದಾರಿ ಹಿಡಿಯುತ್ತಿರುವೆನೆಂದು ಅರಿತುಕೊಂಡನು. ಇದುವರೆಗೆ ಇಷ್ಟು ಧೈರ್ಯದಿಂದ ಯಾವ ಹೆಣ್ಣೂ ಅವನೊಡನೆ ವಾದಿಸಿರಲಿಲ್ಲ. ಶರಣ ಧರ್ಮದಲ್ಲಿ ಬೆಳೆದ ಬ್ರಾಹ್ಮಣ ಕನ್ಯೆ ! ರತ್ನಕ್ಕೆ ಚಿನ್ನದ ಚೌಕಟ್ಟು ಹಾಕಿದಂತೆ!

ಬಿಜ್ಜಳನು ಅವಾಕ್ಕಾಗಿ ಕೆಲವು ಕ್ಷಣಗಳು ಯೋಚಿಸುತ್ತಿದ್ದು ಬಳಿಕ, "ಶೀಲವಂತ ಹೀನಕುಲದವನೆಂದು ತಿಳಿದೂ ನೀನು ಅವನನ್ನು ಪ್ರೀತಿಸಿದ್ದು ಹೇಗೆ ?" ಎಂದು ಕೇಳಿದನು.

ಲಾವಣ್ಯವತಿ ಹೇಳಿದಳು : "ಪ್ರೇಮಕ್ಕೆ ಕಣ್ಣಿಲ್ಲವೆಂದು ನೀವು ಕೇಳಿಲ್ಲವೆ ? ತಮಂಧದ ಕಗ್ಗತ್ತಲಲ್ಲಿ ತನ್ನಂತೆಯೇ ಅಂಧವಾದ ಮತ್ತೊಂದು ಆತ್ಮವನ್ನು ಹುಡುಕುತ್ತ

ಅಲೆಯುವ ವಾಸನಾಜೀವಿಯೆಂದು ತತ್ವದರ್ಶಿಗಳು ಕರೆಯುತ್ತಾರೆ ಪ್ರೇಮವನ್ನು. ನಾನು ಪ್ರೇಮಾಂಧಳಾಗಿ ನನ್ನ ವರನನ್ನು ನಾನೇ ಆರಿಸಿಕೊಂಡೆ. ಜಾತಿಪಂಥವನ್ನು ನಿರಾಕರಿಸಿದೆ. ಸ್ತ್ರೀ ಪುರುಷರಿಗೆ ಸಮಾನಾಧಿಕಾರವನ್ನು ಕೊಡುವ ಶರಣ ಧರ್ಮ ನನ್ನ ಆರಿಕೆಯನ್ನು ಸಮರ್ಥಿಸಿತು. ಕಾಲದೇಶಗಳಿಗೆ ಅನುಗುಣವಾಗಿ ನಮ್ಮ ಸಂಸ್ಕೃತಿ ಸಂಪ್ರದಾಯಗಳಲ್ಲಿ ಮಾರ್ಪಾಟುಗಳೂ ನಡೆಯುವುದು ಅಗತ್ಯವೆಂದು ತಿಳಿದಿದ್ದಾರೆ ಶರಣರು. ಬಸವಣ್ಣನವರು ಆಚರಣೆಗೆ ತಂದ ಧಾರ್ಮಿಕ ಸಾಮಾಜಿಕ ಸುಧಾರಣೆಗಳು ಈ ವಿಶಾಲ ತಳಹದಿಯ ಮೇಲೆ ಕಟ್ಟಲ್ಪಟ್ಟಿವೆ."

ಅಪರಾಧಿಗಳ ಪ್ರಾಣಭಿಕ್ಷೆ ಬೇಡಲು ಬಂದ ತರುಣಿಯೊಡನೆ ಧರ್ಮ ಸಮಾಜಗಳನ್ನು ಕುರಿತ ವಾದ ಅನುಚಿತವೆಂದು ಬಿಜ್ಜಳನು ತಿಳಿದನು. ಪಾರ್ಶ್ವದ ಪೀಠದ ಮೇಲಿದ್ದ ಕಟ್ಟೊಂದನ್ನು ತೆಗೆದುಕೊಂಡು, "ಇದು ನ್ಯಾಯಾಸ್ಥಾನದಲ್ಲಿ ನೀನು ಕೊಟ್ಟ ಸಾಕ್ಷ್ಯ. ಈ ಎಲ್ಲ ವಿಚಾರಗಳನ್ನು ಆಗ ನೀನೇಕೆ ತಿಳಿಸಲಿಲ್ಲ?" ಎಂದು ಕೇಳಿದನು.

ಲಾವಣ್ಯವತಿ ಕೆಲವು ಕ್ಷಣಗಳು ಯೋಚಿಸಿ, "ನಾರಣಕ್ರಮಿತರು ಅಸಂಬದ್ಧ ಅಶ್ಲೀಲ ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸಿದ್ದರಿಂದ ನಾನು ಹಠಾತ್ತಾಗಿ ನ್ಯಾಯಾಸ್ಥಾನವನ್ನು ಬಿಡಬೇಕಾಯಿತು. ಅವಕಾಶ ಕೊಟ್ಟಿದ್ದರೆ ಎಲ್ಲವನ್ನೂ ತಿಳಿಸುತ್ತಿದ್ದೆ," ಎಂದಳು.

"ನಿನ್ನ ಸಾಕ್ಷ್ಯವನ್ನು ನಾನು ಎಚ್ಚರದಿಂದ ಓದಿದ್ದೇನೆ, ಲಾವಣ್ಯವತಿ. ಕ್ರಮಿತರ ಪ್ರಶ್ನೆಗಳಲ್ಲಿ ನನಗೆ ಅಶ್ಲೀಲವೇನೂ ಕಾಣಲಿಲ್ಲ. ಹೆಣ್ಣಿಗೆ ಸಹಜವಾದ ಆವೇಶಕ್ಕೊಳಗಾಗಿ ನೀನು ಹಠಾತ್ತನೆ ನ್ಯಾಯಾಸ್ಥಾನವನ್ನು ಬಿಟ್ಟೆ. ವಾಸ್ತವವಿಚಾರಗಳನ್ನು ತಿಳಿಸಲು ನ್ಯಾಯಪೀಠ ನಿನಗೆ ಕೊಟ್ಟ ಅವಕಾಶವನ್ನು ನಿರಾಕರಿಸಿದೆ," ಎಂದನು ಬಿಜ್ಜಳ.

ಲಾವಣ್ಯವತಿ ಉತ್ತರಕೊಡಲಿಲ್ಲ. ನ್ಯಾಯಪೀಠದ ಮುಂದೆ ತನ್ನ ಅವಸರದ ವರ್ತನೆ ಅನುಚಿತವೆಂದು ಅವಳಿಗೆ ಅರಿವಾಗಿತ್ತು.;

"ಕೊನೆಯಲ್ಲಿ ಕ್ರಮಿತರು ಹಲಿಗೆಯಲ್ಲಿ ಬರೆದು ಕೇಳಿದ ಪ್ರಶ್ನೆಯೇನು?" ಬಿಜ್ಜಳನು ಮತ್ತೆ ಪ್ರಶ್ನಿಸಿದನು.

"ಪ್ರಶ್ನೆಯೇನೆಂಬುದನ್ನು ವರದಿಯಲ್ಲಿ ತಿಳಿಸಿಲ್ಲವೆ?"

"ತಿಳಿಸಿದ್ದರೆ ನಾನು ಕೇಳುತ್ತಿದ್ದೆನೇ ?"

ಪ್ರಶ್ನೆಗೆ ಮರು ಪ್ರಶ್ನೆ. ಉತ್ತರ ಕೊಡದೆ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ತಿಳಿದ ಲಾವಣ್ಯವತಿ ಹೇಳಿದಳು – "ಆಗ ನಾನು ಕ್ರಮಿತರಿಗೆ ಉತ್ತರ ಕೊಡದಿರಲು ಒಂದು ಮುಖ್ಯ ಕಾರಣವಿತ್ತು. ನ್ಯಾಯಪೀಠ ಸ್ವತಂತ್ರವೆಂದೂ, ಸರ್ವಾಧಿಕಾರಿಯ

ಕೈಗೊಂಬೆಯಲ್ಲವೆಂದೂ ನಾನು ಭಾವಿಸಿದ್ದೆ. ನನ್ನ ಆ ಭ್ರಮೆ ಈಗ ಪರಿಹಾರವಾಗಿದೆ. ಕ್ರಮಿತರು ಬರಹದ ಮೂಲಕ ನನ್ನನ್ನು ಕೇಳಿದ ಪ್ರಶ್ನೆ, 'ಮದುವೆಗೆ ಮೊದಲು ನಿನಗೂ ಶೀಲವಂತನಿಗೂ ದೈಹಿಕ ಸಂಬಂಧವಿದ್ದಿತೆ?' ಎಂದು."

ಬಿಜ್ಜಳನು ನಸುನಕ್ಕು, "ಅದಕ್ಕೆ ಈಗ ನಿನ್ನ ಉತ್ತರ?" ಎಂದನು.

ಲಾವಣ್ಯವತಿ ಹೇಳಿದಳು– "ಆಗ ನಾನು ಶೀಲವಂತನನ್ನು ಪತಿಯಂತೆ ಪ್ರೀತಿಸುತ್ತಿದ್ದೆ. ಇನ್ನೂ ಮದುವೆಯಾಗದಿದ್ದ ಕಾರಣ ದೇಹ ಸಂಬಂಧವಿರಲಿಲ್ಲ."

ಸಂದರ್ಶನ ಪ್ರಾರಂಭವಾಗಿ ಆಗಲೆ ಅರ್ಧ ಪ್ರಹರ ಕಳೆದಿತ್ತು. ಸಭಾಂಗಣದ ಹೊರಗೆ ಪಸಾಯಿತರೂ ಪ್ರಹರಿಗಳೂ, ಪ್ರಭುವಿನ ಸಮಯವನ್ನು ನಿರೀಕ್ಷಿಸುತ್ತ ನಿಂತಿದ್ದರು. ಬೇಗ ಮುಗಿಸುವುದು ಉಚಿತವೆಂದು ಭಾವಿಸಿ ಬಿಜ್ಜಳನು, "ನೀನು ಬುದ್ಧಿಮತಿ, ಪ್ರಗಲ್ಭೆ, ಚತುರೆ. ನಿನ್ನ ಉತ್ತರಗಳೂ ಈ ಸಂದಿಗ್ಧ ವ್ಯವಹಾರದ ಮೇಲೆ ಹೊಸ ಬೆಳಕನ್ನು ಚೆಲ್ಲಿವೆ. ನಿನ್ನ ಕ್ಷಮಾಪ್ರಾರ್ಥನೆಯನ್ನು ಸಂಪೂರ್ಣವಾಗಿ ನಿರಾಕರಿಸುವುದು ನನಗಿಷ್ಟವಿಲ್ಲ. ಮೂವರು ಅಪರಾಧಿಗಳಲ್ಲಿ ಇಬ್ಬರನ್ನು ನಾನು ಕ್ಷಮಿಸುತ್ತೇನೆ. ಆದರೆ ಆ ಇಬ್ಬರನ್ನು ನೀನು ಆರಿಸಬೇಕು." ಎಂದು ತನ್ನ ಕೊನೆಯ ನಿರ್ಧಾರವನ್ನು ತಿಳಿಸಿದನು.

ಲಾವಣ್ಯವತಿ ತೊಡಕಿನಲ್ಲಿ ಬಿದ್ದಳು. ತನ್ನನ್ನು ಸಂದಿಗ್ಧದಲ್ಲಿ ಹಾಕುವುದೇ ಬಿಜ್ಜಳನ ಉದ್ದೇಶವೆಂದು ಅವಳು ಭಾವಿಸಿದಳು. ತುಸುಹೊತ್ತು ಯೋಚಿಸುತ್ತಿದ್ದು ಬಳಿಕ ಹೇಳಿದಳು–

"ಸತ್ಯವಾನನ ಒಂದು ಜೀವನವನ್ನು ಕೈಯಲ್ಲಿ ಹಿಡಿದು ಯಮಧರ್ಮನು ಸಾವಿತ್ರಿಯನ್ನು ವರದಾನದ ತೊಡಕಿನಲ್ಲಿ ಹಾಕಿದನು. ನೀವು ಮೂರು ಜೀವಗಳನ್ನು ಸೆರೆಯಲ್ಲಿಟ್ಟು ನನ್ನೊಡನೆ ಆಡುತ್ತಿದ್ದೀರಿ. ಭುಜಬಲ ಚಕ್ರವರ್ತಿಯೆಂದು ವಿಖ್ಯಾತರಾದ ನಿಮಗೆ ಉಚಿತವೆ ಇದು ? ಪತಿ, ತಂದೆ, ಮಾವ, ಈ ಮೂವರಲ್ಲಿ ನಾನು ಯಾರಿಬ್ಬರನ್ನು ಉಳಿಸಿಕೊಂಡರೂ ಪಾಪಭಾಗಿನಿಯಾಗುತ್ತೇನೆ. ನನ್ನ ಸತೀತ್ವ, ಶರಣ ಧರ್ಮ, ಇವೆರಡೂ ಒಕ್ಕೊರಲಿಂದ ಹೇಳುತ್ತಿವೆ –ಮೂವರೂ ನಿನಗೆ ಸಮಾನ, ಅವರಲ್ಲಿ ಯಾರಿಬ್ಬರನ್ನು ಉಳಿಸಿಕೊಂಡು ನೀನು ಸತಿಯಾಗಿ ಬಾಳಲಾರೆ ಎಂದು, ಶರಣೆ ಎನಿಸಲಾರೆ ಎಂದು. ಮಾನವನ ಬಾಳು ತನ್ನ ಸುಖಕ್ಕಾಗಿ ಮಾತ್ರವಲ್ಲ, ತನ್ನವರೆಲ್ಲರ ಸುಖಕ್ಕಾಗಿ, ಸಮಾಜದ ಕಲ್ಯಾಣಕ್ಕಾಗಿ, ವಿಶ್ವದ ಮಂಗಳಕ್ಕಾಗಿ, ಈ ಆದರ್ಶವನ್ನು ರಕ್ಷಿಸಿಕೊಳ್ಳಲು ನಾನು ಅಸಮರ್ಥಳಾದರೆ, ನನ್ನ ಉಳಿವಿಗಿಂತ ಅಳಿವೇ ಲೇಸು. 'ಜಾತಸ್ಯ ಮರಣಂ ಧ್ರುವಂ" ಎಂಬುದಾಗಿ ಶಿವನು ಬರೆದ ಬರಹವನಳಿಸಲು ಶಕ್ತಳೇ ನಾನು ! ಬರಿಗೈಯಲ್ಲಿ ಬಂದೆ, ಬರಿಗೈಯಲ್ಲಿ ಹಿಂದಿರುಗುತ್ತೇನೆ,"

–ಎಂದು ನುಡಿದು ಲಾವಣ್ಯವತಿ ಬಿಜ್ಜಳನಿಗೆ ಕೈಯೆತ್ತಿ ವಂದಿಸಿ ಹೊರಡಲನುವಾದಳು.

ಅವಳು ಎರಡು ಹೆಜ್ಜೆ ಹೋಗುವಷ್ಟರಲ್ಲಿ ಬಿಜ್ಜಳನು ಅಧಿಕಾರ ದರ್ಪಿತ ಕಂಠದಿಂದ "ನಿಲ್ಲು, ಲಾವಣ್ಯವತಿ !" ಎಂದನು.

ಲಾವಣ್ಯವತಿ ನಿಂತು, ಹಿಂದಿರುಗಿ ನೋಡಿ, ನಮ್ರಕಂಠದಿಂದ, "ನಾನು ಹೇಳತಕ್ಕದ್ದೇನೂ ಉಳಿದಿಲ್ಲ. ಪ್ರಭುಗಳು ದಯೆಮಾಡಿ ನನಗೆ ಹೋಗಲು ಅನುಮತಿ ಕೊಡಬೇಕಾಗಿ ಬೇಡುತ್ತೇನೆ," ಎಂದು ಬಿನ್ನವಿಸಿಕೊಂಡಳು.

ಬಿಜ್ಜಳನೆಂದನು : "ಬರಿಗೈಯ್ಯಲ್ಲಿ ಹಿಂದಿರುಗಲು ನಿನಗೆ ಲಜ್ಜೆಯಾಗುವುದಿಲ್ಲವೇ, ಲಾವಣ್ಯವತಿ ? ನೀನು ಒಪ್ಪುವುದಾದರೆ ಕ್ಷಮಾರ್ಹರಾದ ಇಬ್ಬರನ್ನು ನಾನು ಆರಿಸುವೆನು. ಅದು ನಿನಗಿಷ್ಟವೇ !"

ಲಾವಣ್ಯವತಿ ಪುನಃ ತೊಡಕಿನಲ್ಲಿ ಬಿದ್ದಳು. ಅಂತರ್ವಾಣಿ ನುಡಿಯುತ್ತಿತ್ತು.... 'ಇದರಲ್ಲೇನೋ ಜಾಲವಿದೆ, ನೀನೇ ಆರಿಸಿಕೊಳ್ಳುವುದು, ಅವರು ಆರಿಸಿದ್ದಕ್ಕೆ ಒಪ್ಪುವುದು, ಎರಡೂ ಒಂದೇ ಅಲ್ಲವೇ? 'ಇಬ್ಬರನ್ನು ಉಳಿಸಿಕೊಳ್ಳಲು ಒಬ್ಬರನ್ನು ಬಲಿ ಕೊಟ್ಟಂತೆ, ಒಂದೇ ಪಾತಕದ ಎರಡು ಮುಖಗಳು' ಎಂದು.

ಸ್ಥಿರಕಂಠದಿಂದ ಲಾವಣ್ಯವತಿ ಹೇಳಿದಳು–"ನೀವು ನಿರಂಕುಶ ಸರ್ವಾಧಿಕಾರಿ. ಚಾಲುಕ್ಯರಾಜ್ಯದ ದೊಡ್ಡ ಸೈನ್ಯ ನಿಮ್ಮ ಸಹಾಯಕ್ಕಿದೆ. ನಾಡಿನ ಸಹಸ್ರ ಸಹಸ್ರ ಪ್ರಜೆಗಳು,–ಅವರಲ್ಲಿ ಶರಣರೂ ಸೇರುತ್ತಾರೆ, –ನಿಮ್ಮ ದುರಾಗ್ರಹ ದಬ್ಬಾಳಿಕೆಗಳಿಗೆ ಅಧೀನರು. ಅವರನ್ನು ರಕ್ಷಿಸುವುದು ಅಬಲೆಯಾದ ಹೆಣ್ಣೊಬ್ಬಳಿಗೆ ಸಾಧ್ಯವೆ? ಮೂವರಲ್ಲಿ ಇಬ್ಬರನ್ನು ನಾನಾಗಿ ಆರಿಸಿಕೊಂಡಿದ್ದರೆ ನನ್ನ ಬೆನ್ನು ಹತ್ತುತ್ತಿದ್ದ ಪಾಪ ಪಶ್ಚಾತ್ತಾಪಗಳು, ನಿಮ್ಮ ಆರಿಕೆಗೆ ಒಪ್ಪುವುದರಿಂದ ಇಮ್ಮಡಿ ಭಾರವಾಗಿ ನನ್ನನ್ನು ಅಧಃಪಾತಾಳಕ್ಕೆ ತುಳಿಯುವುದು. ನಿಮ್ಮ ಇಚ್ಛೆ ಬಂದಂತೆ ಮಾಡಲು ನೀವು ಸ್ವತಂತ್ರರು. ಅದಕ್ಕಾಗಿ ನನ್ನ ಒಪ್ಪಿಗೆ ಕೇಳುವ ಅಗತ್ಯವಿರುವುದಿಲ್ಲ. ನಾನು ಈಗ ಹೋಗಲು ಅನುಮತಿ ಕೊಡಬೇಕಾಗಿ ಬೇಡುತ್ತೇನೆ," –ಎಂದು ನುಡಿದು ಅವಳು ಮತ್ತೆ ಹೊರಡಲನುವಾಗುತ್ತಿದ್ದಂತೆ ಬಿಜ್ಜಳನು ದಢಾರನೆ ಆಸನದಿಂದೆದ್ದು ಎರಡು ಹೆಜ್ಜೆ ಮುಂದೆ ಹೋಗಿ, "ನಿಲ್ಲು ಹಠಮಾರಿ ಹೆಣ್ಣೆ ! ಜಿಜ್ಜಳನಿಂದ ಅಷ್ಟು ಸುಲಭವಾಗಿ ಪಾರಾಗಲಾರೆ ನೀನು. ಮೂವರು ಅಪರಾಧಿಗಳನ್ನೂ ನಾನು ಬಿಡುಗಡೆ ಮಾಡುತ್ತೇನೆ. ಆದರೆ ಅದರ ಪ್ರತಿಯಾಗಿ ನೀನು ನನ್ನ ಬಂಧಿಯಾಗಬೇಕಾಗುವುದು," ಎಂದನು.

ಲಾವಣ್ಯವತಿ ಚಮತ್ಕೃತೆಯಾದಳು. ಇಷ್ಟೊಂದು ಸುಲಭವಾಗಿ ತನ್ನ ಅಭೀಷ್ಟ

ಸಿದ್ಧಿಸುವುದೆಂದು ಅವಳು ಕನಸಿನಲ್ಲಿಯೂ ಭಾವಿಸಿರಲಿಲ್ಲ. ಉತ್ತೇಜಿತೆಯಾಗಿ ಅವಳು, “ನಿಮ್ಮ ಬಂಧಿಯಾಗಲು ನಾನು ಒಪ್ಪುತ್ತೇನೆ. ನಿಮ್ಮ ಸೆರೆಮನೆಯ ಅಧಿಕಾರಿಗಳನ್ನು ಕರೆಸಿರಿ. ನನ್ನ ತಂದೆ, ಪತಿ, ಮಾವ–ಅವರನ್ನು ಬಂಧಿಸಿರುವ ಶೃಂಖಲೆ ನನ್ನ ಕೈ ಕಾಲುಗಳನ್ನು ಬಂಧಿಸಲಿ. ಸೆರೆಮನೆಯ ವಾಸ ನನ್ನ ತ್ಯಾಗದ ಬಲಿದಾನವಾಗುವುದು,” ಎಂದು ನುಡಿದಳು.

ಬಿಜ್ಜಳನ ಮುಖದಲ್ಲಿ ಮೂಡಿದ್ದ ಸ್ಥೈರ್ಯದ ಗೆರೆಗಳೂ ಮಿದುನಗೆಯಲ್ಲಿ ಮರೆಯಾದವು. ಕಂಠ ಮೃದುವಾಯಿತು, ಅವನು ಹೇಳಿದನು– “ನಿನ್ನನ್ನು ಬಂಧಿಸಲು ಸೆರೆಮನೆಯ ಅಧಿಕಾರಿಗಳ ಅಗತ್ಯವಿಲ್ಲ, ಲಾವಣ್ಯವತಿ. ನನ್ನ ಹೆಗ್ಗಡತಿಯರು ಆ ಕಾರ್ಯ ಮಾಡುವರು. ಸರ್ವಾಭರಣಭೂಷಿತೆಯಾದ ನಿನ್ನನ್ನು ಹಂಸತೂಲಿಕೆಯ ತಲ್ಪದಲ್ಲಿ ಮೆರೆಸುವರು. ನನ್ನ ಅಂತಃಪುರವಾಸಿನಿಯರಲ್ಲಿ ನೀನು ಅಗ್ರಗಣ್ಯೆಯಾಗುವೆ. ಬಿಜ್ಜಳನ ಪ್ರೌಢವಯಸ್ಸಿನ ಪ್ರಿಯತಮೆ ಪ್ರೇಯಸಿ ಎನಿಸುವೆ.”

ನುಡಿಯುತ್ತಿದ್ದಂತೆ ಬಿಜ್ಜಳನ ಕಂಠ, ಶೃತಿತಪ್ಪಿದ ವೀಣೆಯ ಮಿಡಿತದಂತೆ ಮಧುರವೂ ವಿಕೃತವೂ ಆಗಿ ಕೇಳಿಸಿತು ಲಾವಣ್ಯವತಿಗೆ. ಅವನ ಉನ್ಮತ್ತ ನೋಟದಲ್ಲಿ ಕಾಮನೆಯ ಕಿಡಿಗಳು ಹಾರುವುದನ್ನು ಅವಳು ಕಂಡಳು. ಅಸಾಮಾನ್ಯರೂಪಿಯಾದ ಅಪ್ಸರೆಯಾಗಿದ್ದಳು ಆಗ ಅವಳು, ಬಿಜ್ಜಳನ ಉದ್ರಿಕ್ತ ಕಣ್ಣುಗಳಿಗೆ.

ಲಾವಣ್ಯವತಿ ಸ್ಥಂಭಿತೆಯಾದಳು. ಅವಳ ವಾಕ್ಶಕ್ತಿ ಉಡುಗಿತು. ಬಿಜ್ಜಳನ ಅತಿಕಾಮಿ ಉಚ್ಛೃಂಖಲ ವರ್ತನೆಯ ಕಥೆಗಳನ್ನು ಅವಳು ಕರ್ಣಾಕರ್ಣಿಯಾಗಿ ಕೇಳಿದ್ದಳು. ‘ಮುಪ್ಪು ಸಮೀಪಿಸಿದಂತೆ ಪ್ರಭುಗಳ ಚಾಪಲ್ಯ ಹೆಚ್ಚುತ್ತಿದೆ, ಚಲುವೆಯರಲ್ಲಿ ಈಗ ಅವರಿಗೆ ಒಂದೇ ಮಂತ್ರ, ‘ಆರೋಹ ತಲ್ಪಂ.....’ ಎಂದು ಜನ ಹೇಳುವುದನ್ನು ಅವಳು ಕೇಳಿದ್ದಳು. ತನ್ನ ಸಂದರ್ಶನವೂ ಈ ಮಂತ್ರಪಠಣದಿಂದ ಮುಗಿಯುವುದು ಅಸಂಭವವಲ್ಲವೆಂದು ತಿಳಿದಿದ್ದರೂ, ಶರಣರಿಗೆ ಸಹಜವಾದ ಧೈರ್ಯದಿಂದ ಅವಳು ಒಂಟಿಗಳಾಗಿ ಸಂದರ್ಶನಕ್ಕೆ ಬಂದಿದ್ದಳು. ‘ಇದು ನನ್ನ ಅಗ್ನಿಪರೀಕ್ಷೆ, ಅದರೊಡನೆ ಬಿಜ್ಜಳನ ಪರೀಕ್ಷೆಯೂ ಆದರೆ ನಷ್ಟವೇನು?’ ಎಂದು ಅವಳು ಭಾವಿಸಿದಳು.

ಆ ಸಣ್ಣ ಸಭಾಗೃಹದಲ್ಲೊಂದು ಕಡೆ, ಪೀಠದ ಮೇಲೆ ಬೆಳ್ಳಿಯ ಮಂದಾಸನದಲ್ಲಿ ಕಲಚೂರ್ಯ ರಾಜಲಾಂಛನವಾದ ವೃಷಭದ ಒಂದು ದೊಡ್ಡ ವಿಗ್ರಹ ಚಿನ್ನದ ಮೆರುಗಿನಿಂದ ಫಳಫಳ ಹೊಳೆಯುತ್ತಿತ್ತು. ಕಾಲೊಂದನ್ನು ಮುಂದೆ ಚಾಚಿ, ವಿಜಯ ಗರ್ವದಿಂದ ತಲೆಯೆತ್ತಿ ನೋಡುತ್ತಿರುವಂತೆ ರಚಿತವಾಗಿದ್ದ ಆ ಲೋಹ

ವಿಗ್ರಹ, ಬಿಜ್ಜಳನ ಆಶ್ರಯ ಪಡೆದು ಕಲ್ಯಾಣದಲ್ಲಿ ನೆಲೆಸಿದ್ದ ಚೋಳದೇಶದ ವಿಖ್ಯಾತ ಲೋಹ ಶಿಲ್ಪಿಯೊಬ್ಬನ ಶ್ರೇಷ್ಠ ಕಲಾಕೃತಿಯಾಗಿತ್ತು. ಎದುರಿಗೆ ತಟ್ಟೆಯಲ್ಲಿ ತಾವರೆ ಹೂಗಳ ಅರ್ಘ್ಯ, ಎರಡು ಕಡೆ ದೀಪಸ್ತಂಭಗಳಲ್ಲಿ ದೀಪಗಳು ಉರಿಯುತ್ತಿದ್ದವು. ವಿಗ್ರಹದ ಕಣ್ಣುಗಳಿಗೆ ಜೋಡಿಸಿದ್ದ ಗೋಮೇದಿಕದ ಹರಳುಗಳು ಆ ದೀಪಗಳ ಬೆಳಕಿನಲ್ಲಿ ಬಹು ವರ್ಣದ ಕಾಂತಿ ಕಿರಣಗಳನ್ನು ಚೆಲ್ಲುತ್ತಿದ್ದವು.

ಹಂಸಿಯಂತೆ ಚಲಿಸುತ್ತ ಲಾವಣ್ಯವತಿ, ಮಂದಾಸನದ ಬಳಿ ಹೋಗಿ ನಿಂತು, ಬಿಜ್ಜಳನ ಕಡೆ ತಿರುಗಿ ಸ್ಥಿರ ನಮ್ರಕಂಠದಿಂದ ಹೇಳಿದಳು– "ಇದು ನಿಮ್ಮ ರಾಜಲಾಂಛನ. ಧರ್ಮದ ಪ್ರತೀಕವೆಂದು ಶರಣರು ಆರಾಧಿಸುವ ವೃಷಭ ಮೂರ್ತಿಯೂ ಇದೇ. ಈ ಮಂಗಳ ವಿಗ್ರಹದ ಸಾನ್ನಿಧ್ಯದಲ್ಲಿ ನಿಂತು ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಪರನಾರೀಸಹೋದರರೆಂದು ಹೊಗಳಿಸಿಕೊಳ್ಳುವ ನಿಮಗೆ ಉಚಿತವಾದ ವರ್ತನೆಯೇ ಇದು? ಚಾಲುಕ್ಯ ಧರ್ಮಾಧಿಕರಣದ ಸರ್ವೋನ್ನತ ಪ್ರಭುವೆಂದು ತಿಳಿದು ನ್ಯಾಯಭಿಕ್ಷೆ ಬೇಡಲು ನಿಮ್ಮ ಬಳಿಗೆ ಬಂದ ಅನಾಥ ಅಬಲೆಯೊಡನೆ ನಿಮ್ಮ ಲಜ್ಜಾಹೀನ ಪ್ರೇಮದ ಅಸದ್ವ್ಯವಹಾರವೇ? ತಿಳಿಯಿರಿ ಪ್ರಭು, ಶರಣ ಧರ್ಮವು, ಸತೀ ಸಾಧ್ವಿಯರ ಧರ್ಮ. ಕಾಮಾಸಕ್ತರಾದ ಕುಲಟೆಯರ, ಪತಿಯನ್ನು ವಂಚಿಸಿ ಪ್ರಿಯರನ್ನು ಹುಡುಕುವ ಸ್ವೈರಿಣಿಯರ, ಹಣದಾಸೆಗಾಗಿ ದೇಹವನ್ನು ಮಾರಿಕೊಳ್ಳುವ ವೇಶ್ಯೆಯರ ಧರ್ಮವಲ್ಲ. ಸತ್ಯ ಧರ್ಮಗಳನ್ನು ಕಡೆಗಣಿಸಿ ನಾನು ನಿಮ್ಮ ಅಂತಃಪುರವಾಸಿನಿಯಾಗುವೆನೆಂದು, ನನ್ನ ಪತಿತ ಜೀವನದ ಮೌಲ್ಯವಾಗಿ ಬಂಧವಿಮುಕ್ತರಾಗುವ ನನ್ನ ತಂದೆ, ಪತಿ ಮತ್ತು ಮಾವಂದಿರು ಅಪಮಾನದ ಹೊರೆ ಹೊತ್ತು, ಶರಣರೆಲ್ಲರ ಅವಹೇಳನೆಗೆ ಗುರಿಯಾಗಿ ಜೀವಿಸುವರೆಂದು ಭಾವಿಸುವಿರಾ ನೀವು ? ಮಾನ ಅಪಮಾನಗಳು ಒಂದಾದವೆ ನಿಮ್ಮ ದೃಷ್ಟಿಯಲ್ಲಿ ? ಸತ್ಯ ಧರ್ಮಗಳಿಗೆ ಯಾವ ಬೆಲೆಯೂ ಇಲ್ಲವೇ ನಿಮ್ಮಲ್ಲಿ? ನನ್ನ ಜಾರ ಜೀವನದ ಕಥೆ ಕೇಳಿ ನನ್ನ ಆ ಬಂಧುಗಳು ನಿಮ್ಮನ್ನು ಶಪಿಸುವರು. ಪ್ರತೀಕಾರದ ಪ್ರಯತ್ನದಲ್ಲಿಯೋ, ನಿರಾಶೆಯಿಂದ ಆತ್ಮಹತ್ಯೆ ಮಾಡಿಕೊಂಡೋ ಕೆಲವೇ ದಿನಗಳಲ್ಲಿ ಅವರು ಸಾವನ್ನಪ್ಪುವರು."

ಬಿಜ್ಜಳನು ಬೆರಗಾಗಿ ಲಾವಣ್ಯವತಿಯ ಆವೇಶದ ನುಡಿಗಳನ್ನು ಕೇಳುತ್ತಿದ್ದನು. ಒಬ್ಬ ಸಾಮಾನ್ಯ ಹೆಣ್ಣಿಗೆ ಎಷ್ಟೊಂದು ದರ್ಪ ! ಭುಜಬಲಚಕ್ರವರ್ತಿ ! ನಿಶ್ಯಂಕ ಮಲ್ಲ, ಶನಿವಾರಸಿದ್ಧಿ ಬಿಜ್ಜಳರಾಯನೆದುರಿಗೇ ಈ ದರ್ಪೋಕ್ತಿಗಳು !

"ರತ್ನಂ ಯತ್ ಕ್ವಚಿದಸ್ತಿ ತತ್ ಪರಿಣಮತ್ಯಸ್ಮಾಸು ಶಕ್ರಾದ್ರಪಿ !

"ರತ್ನವು ಎಲ್ಲಿರಲಿ, ಅದು ನಮಗೆ ಸೇರತಕ್ಕದ್ದು. ಇಂದ್ರನಿಂದಲೇ ಆಗಲಿ

ನಾವು ಅದನ್ನು ತೆಗೆದುಕೊಳ್ಳುತ್ತೇವೆ," ಎಂಬ ರಾಕ್ಷಸೀ ಧರ್ಮ ಬಿಜ್ಜಳನಿಗೆ ಹೆಚ್ಚು ಪ್ರಿಯವಾಗಿತ್ತು. ಲಾವಣ್ಯವತಿಯಂತಹ ಸ್ಫುರದ್ರೂಪಿ ಪ್ರತಿಭಾಶಾಲಿನಿಯಾದ ಹೆಣ್ಣು ತನ್ನ ಅಂತಃಪುರದ ಅಲಂಕಾರಕ್ಕೆ ಅಗತ್ಯವೆಂದು ಅವನು ಭಾವಿಸಿದನು. ಮಂಗಳವೇಡೆಯ ಅಗ್ನಿದಾಹ ಅವನ ಸ್ವೈರವೃತ್ತಿಗೆ ಪುಟ ಕೊಟ್ಟಿತ್ತು. ಕೊನೆಗೆ ವಿಜಯ ತನ್ನದೆಂಬ ವಿಶ್ವಾಸದಿಂದ ಅವನು ಮುಸಿ ಮುಸಿ ನಗುತ್ತ ಲಾವಣ್ಯವತಿಯ ಆವೇಶ ಮುಗಿಯಲು ಕಾಯುತ್ತಿದ್ದನು.

ಲಾವಣ್ಯವತಿ ಮುಂದುವರಿದು ಹೇಳಿದಳು : "ಅಳಿವ ಈ ಹೇಸಿಗೆಯ ದೇಹವನ್ನು ಬಯಸಿದಿರಲ್ಲವೇ ನೀವು ? ಅದರಲ್ಲಿ ನೀವು ಕಂಡ ಸೌಂದರ್ಯವೇನು? ಎಲ್ಲರಂತೆ ನಾನೂ ಒಬ್ಬ ಸಾಮಾನ್ಯ ಹೆಣ್ಣು. ನನ್ನ ಸೃಷ್ಟಿಕ್ರಮದಲ್ಲಿ ಬ್ರಹ್ಮದೇವ ಯಾವ ಹೊಸ ವಿಧಾನವನ್ನೂ ಅನುಸರಿಸಲಿಲ್ಲ. ದೇಹವು ಅಕಿಂಚನ, ಅಶಾಶ್ವತ. ದೇಹಕ್ಕಿಂತ ದೇಹಾತೀತವಾದ ಆತ್ಮ ಶರಣರಿಗೆ ಹೆಚ್ಚು ಪ್ರಿಯವಾದದ್ದು. ಆತ್ಮೋದ್ಧಾರಕ್ಕಾಗಿ ಎಲ್ಲ ತ್ಯಾಗ, ಬಲಿದಾನಗಳಿಗೆ ಸಿದ್ಧರಾಗಬೇಕೆಂದು ಶರಣಧರ್ಮ ಹೇಳುತ್ತದೆ. ನಿಮ್ಮ ಕಾಮಸಾಧನೆಯ ಪರಮಾರ್ಥವೆಂದು ನೀವು ತಿಳಿದಿರುವ ಈ ದೇಹ ರೂಪ ಯೌವನಗಳಿಗೆ ನಾನೀಯುವ ಬೆಲೆಯಿದು," –ಎನ್ನುತ್ತಾ, ಮಂದಾಸನದ ಮುಂದಿದ್ದ ದೀಪಸ್ತಂಭದಲ್ಲಿ ಉರಿಯುತ್ತಿದ್ದ ಬತ್ತಿಯೊಂದನ್ನು ತೆಗೆದುಕೊಂಡು ತನ್ನೆರಡು ಕೆನ್ನೆಗಳಿಗೆ ಉಜ್ಜಿದಳು. ಅಗ್ನಿಜ್ವಾಲೆ ಚುಂಬನೋತ್ಸಕ ಪ್ರಣಯಿಯಂತೆ ಚುರುಚುರುಗುಟ್ಟಿತು. ಕೆನ್ನೆಗಳು ಸುಟ್ಟು ಬೆಂದ ಮಾಂಸದ ವಾಸನೆ ಹರಡಿತು. ಲಾವಣ್ಯವತಿ ಸ್ಥಿರಗಂಭೀರಭಾವದಿಂದ ನಿಶ್ಚಲೆಯಾಗಿ ನಿಂತಿದ್ದಳು. ನೋವಿನ ಅರಿವೂ ಇರಲಿಲ್ಲ ಅವಳಿಗೆ.

ಬಿಜ್ಜಳನು ಚೀರಿದನು. ಒಂದೇ ಹಾರಿಕೆಗೆ ಬಳಿ ಸಾರಿ, ಬತ್ತಿಯನ್ನು ಕಿತ್ತುಕೊಂಡು ಕೆಳಗೆಸೆದು ಕಾಲಿಂದ ತುಳಿದು ಉರಿಯನ್ನಾರಿಸಿದನು.

ಚೀತ್ಕಾರದ ದನಿ ಕೇಳಿ ಪಸಾಯಿತರು, ಪ್ರಹರಿಗಳೂ ಓಡುತ್ತ ಬಂದರು. ದರ್ಶನಕ್ಕಾಗಿ ಸಮಯ ಕಾಯುತ್ತಿದ್ದ ಕ್ರಮಿತನೂ ಅವರ ಸಂಗಡಿದ್ದನು.

"ಈ ಉನ್ಮಾದಿನಿ, ಧೂರ್ತ ಹೆಂಗಸನ್ನು ಹೊರಗಟ್ಟಿರಿ!" –ಎಂದು ಹೇಳಿ ಬಿಜ್ಜಳನು ಕ್ರಮಿತನನ್ನು ಕರೆದುಕೊಂಡು ಅಲ್ಲಿಂದ ಸರಿದನು.

ಮುಖದ ಮೇಲಿನ ಸುಟ್ಟ ಗಾಯಗಳನ್ನು ಸೆರಗಿನಿಂದ ಮುಚ್ಚಿಕೊಂಡು ಲಾವಣ್ಯವತಿ ಹೊರಗೆ ಹೋಗಿ ಕಾದು ನಿಂತಿದ್ದ ಮೇನೆ ಹತ್ತಿದಳು.

ಪಸಾಯಿತರು, ಪ್ರಹರಿಗಳು ದಿಗ್ಭ್ರಾಂತರಾಗಿ ನೋಡುತ್ತಿದ್ದರು. ಪ್ರಭುಗಳೇಕೆ ಚೀರಿದರು? ದೀಪದ ಉರಿಯಿಂದ ಲಾವಣ್ಯವತಿ ಮುಖ ಸುಟ್ಟುಕೊಂಡದ್ದು

ಆಕಸ್ಮಿಕವೇ ? ಉದ್ದೇಶಪೂರ್ವಕವೇ ? ಮಂಗಳವೇಡೆಯ ಅಗ್ನಿ ಅಪಘಾತವನ್ನು ಅವರಿನ್ನೂ ಮರೆತಿರಲಿಲ್ಲ.

* * *

ಮರುದಿನ ಮುಂಜಾವಿನಲ್ಲಿ ಸೆರೆಮನೆಯ ಬಿದಿರು ಮಂಚದ ಮೇಲೆ ಮಲಗಿದ್ದ ಮಧುವರಸನು ಎಚ್ಚೆತ್ತು ಕಣ್ಣೊರೆಸಿಕೊಂಡು, ಕೈಕಾಲುಗಳಿಗೆ ತೊಡಿಸಿದ್ದ ಸಂಕಲೆಗಳನ್ನು ಸರಿಸಿ ಕಷ್ಟದಿಂದ ಎದ್ದು ಕುಳಿತಾಗ ಕಾವಲು ಭಟ ಜವರಾಯ ಒಳಗೆ ಬಂದು ಎದುರಿಗೆ ನಿಂತನು.

ಕಳೆದ ನಾಲ್ಕು ವಾರಗಳ ಕಾರಾಗೃಹವಾಸದಿಂದ ಆ ವೃದ್ಧ ಭಟನೊಡನೆ ಮಧುವರಸನ ಸಂಬಂಧ ಹೆಚ್ಚು ನಿಕಟವಾಗಿತ್ತು. ಮೊದಲ ಕೆಲವು ದಿನಗಳೂ ಮಧುವರಸನು ಸೆರೆಮನೆಯ ಹೊರಗೆ ಏನು ನಡೆಯುತ್ತಿದೆಯೆಂಬುದನ್ನು ಅವನಿಂದ ತಿಳಿಯಲು ಪ್ರಯತ್ನಿಸಿ ನಿರಾಶನಾಗಿದ್ದನು. ಮಧುವರಸನ ಎಲ್ಲ ಪ್ರಶ್ನೆಗಳಿಗೆ ಜವರಾಯನದು ಒಂದೇ ಉತ್ತರ– "ಹೊರಗಿನ ಹುಚ್ಚು ಜಗತ್ತಿನ ವಿಚಾರ ನನಗೇನೂ ತಿಳಿಯದು, ಒಡೆಯರೆ," ಎಂದು.

ತನ್ನ ಸುದೀರ್ಘ ಜೀವನವನ್ನು ಸೆರೆಮನೆಯ ಕಾವಲುಗಾರನಾಗಿ ಕಳೆದಿದ್ದ ಜವರಾಯ ವಾಸ್ತವವಾಗಿ ಕಲ್ಯಾಣದ ಜನಜೀವನದೊಡನೆ ತನ್ನ ಎಲ್ಲ ಸಂಬಂಧಗಳನ್ನೂ ಕಳೆದುಕೊಂಡಿದ್ದನು. ಸೆರೆಮನೆಯ ನಿಯಮ ನಿಬಂಧನೆಗಳು, ದಿನಚರಿ ಕಾರ್ಯಕ್ರಮಗಳು ನಿರ್ಬಂಧ ಅನುರೋಧಗಳು, ಅವನ ವೈವಿಧ್ಯಹೀನ ಜೀವನದಲ್ಲಿ ಆದರ್ಶ ಸಾಧನೆಯ ಮೆಟ್ಟಲುಗಳಾಗಿದ್ದವು. ಚಾಲುಕ್ಯರಾಜ್ಯದ ಪ್ರಜೆಗಳೆಲ್ಲ ಸ್ವೇಚ್ಛಾಚಾರಿ ಉನ್ಮತ್ತರು, ಅವರ ದೃಷ್ಟಿಯಲ್ಲಿ ಬುದ್ಧಿ ವಿವೇಕಗಳು ಅಪರಾಧ, ಅಂತಹವರನ್ನು ಅಧಿಕಾರಿಗಳು ಏನಾದರೊಂದು ನೆವದಿಂದ ಸೆರೆಮನೆಗೆ ಕಳುಹಿಸುತ್ತಾರೆ–ಎಂದು ಅವನು ತಿಳಿದಿದ್ದನು. ನ್ಯಾಯಾಧೀಶರು, ಕಾರಾಗೃಹದ ಅಧಿಕಾರಿಗಳು ಬಂಧಿಗಳಿಗೆ ಅವರ ಆತ್ಮೋದ್ಧಾರಕ್ಕಾಗಿ ಶಿಕ್ಷೆ ವಿಧಿಸುವರೆಂದೂ, ಅದರಿಂದ ಬಂಧಿಗಳ ಬುದ್ಧಿ ವಿವೇಕಗಳು ಹೆಚ್ಚು ಹೆಚ್ಚು ಪರಿಷ್ಕೃತವಾಗಿ ಮುಂದೆ ಅವರು ಸಫಲ ಜೀವನ ನಡೆಸಲು ಸಮರ್ಥರಾಗುವರೆಂದೂ ಅವನು ದೃಢವಾಗಿ ನಂಬಿದ್ದನು.

ಜವರಾಯನ ಈ ವಿಚಿತ್ರ ಕಲ್ಪನೆಯಲ್ಲಿ ಯಾವುದೋ ಅಜ್ಞಾತ ಸತ್ಯ ಅಡಗಿದೆಯೆಂದು ಅನುಸಂಧಾನದಿಂದ ತಿಳಿದಿದ್ದ ಮಧುವರಸನು ದಿನಗಳು ಕಳೆದಂತೆ ತಾನೂ ಆ ಅಭಿಪ್ರಾಯಕ್ಕೆ ಬಂದಿದ್ದನು. ಬಹು ದಿನಗಳಿಂದ ಅವನು ಅಪೇಕ್ಷಿಸಿದ್ದ ಶಾಂತಿ ಏಕಾಂತಗಳು ಸೆರೆಮನೆಯ ವಾಸದಲ್ಲಿ ಅವನಿಗೆ ದೊರಕಿದ್ದವು.

ಅಲ್ಲಿ ತನಗಾಗುತ್ತಿದ್ದ ಸಂಕಷ್ಟಗಳಿಂದ ತನ್ನ ಮಾಲಿನ್ಯವೆಲ್ಲ ಕಳೆದು ಮುಕ್ತಿ ಸನ್ನಿಹಿತವಾಗುವುದೆಂದು ಅವನು ಭಾವಿಸಿದನು; ಬಾಹ್ಯ ಜಗತ್ತಿನೊಡನೆ ಎಲ್ಲ ಬಗೆಯ ಸಂಬಂಧಗಳನ್ನೂ ತೊರೆಯಲು ನಿರ್ಧರಿಸಿಕೊಂಡನು.

ತನ್ನಲ್ಲಾದ ಈ ಭಾವಪರಿವರ್ತನೆಯ ಫಲವಾಗಿ ಮಧುವರಸನು ತನ್ನ ಮೇಲೆ ನ್ಯಾಯಾಸ್ಥಾನದಲ್ಲಿ ನಡೆಯುತ್ತಿದ್ದ ವರ್ಣಸಂಕರದ ವ್ಯವಹಾರವನ್ನೇ ಮರೆತನು. ವಿಚಾರಣೆ ಅರ್ಧದಲ್ಲೇಕೆ ನಿಂತಿತು, ಅದು ಪುನಃ ಯಾವಾಗ ಆರಂಭವಾಗುವುದು, ತನ್ನ ಸಹ ಆಪಾದಿತರಾರು, ಈ ವಿಚಾರಗಳನ್ನು ತಿಳಿಯುವ ಆಸಕ್ತಿ ಈಗ ಅವನಲ್ಲಿರಲಿಲ್ಲ. ಜವರಾಯ ನೀರು ತಂದಾಗ ಸ್ನಾನಮಾಡುವನು. ಪೂಜೆಗೆ ಕುಳಿತರೆ ಪುನಃ ಜವರಾಯ ಕರೆಯುವವರೆಗೆ ಏಳುತ್ತಿರಲಿಲ್ಲ. ಮಹಮನೆಯಿಂದ ಬರುತ್ತಿದ್ದ ತಿಂಡಿಯ ಪೊಟ್ಟಣಗಳು, ಜವರಾಯ ದಿನಕ್ಕೆರಡು ಸಾರಿ ತಂದು ಕೊಡುತ್ತಿದ್ದ ಹಾಲು, ಅವನ ದೇಹರಕ್ಷಣೆಗೆ ಸಾಕಾಗುತ್ತಿದ್ದವು. ದಿನಗಳು ಕಳೆದಂತೆ ಲಾವಣ್ಯವತಿ ಶೀಲವಂತ ಹರಳಯ್ಯಗಳ ನೆನಪೂ ಕನಸಿನ ಚಿತ್ರದಂತೆ ಅವನ ಮನಸ್ಸಿನಿಂದ ಅಳಿಸಿ ಹೋಗಲು ಮೊದಲಾಗಿತ್ತು.

ಭಟನು ಮೌನವಾಗಿ ನಿಂತಿರುವುದನ್ನು ಕಂಡು ಮಧುವರಸನು, "ಏಕೆ ಜವರಾಯ? ಮೇಲಿಂದ ಏನಾದರೂ ಆಜ್ಞೆ ತಂದಿರುವೆಯಾ?" ಎಂದು ಕೇಳಿದನು.

"ಒಡೆಯರು ಹೇಳಿದ್ದು ನಿಜ. ಆಜ್ಞೆ ಬಂದಿದೆ, –ಚಿಹ್ನೆಗಳು ಮಿರುಗುವ ದೂರದ ಗಗನದಿಂದಲ್ಲ, ಸೆರೆಮನೆಯ ಅಧಿಕಾರಿಯಿಂದ," –ಎಂದು ಹೇಳಿ ಜವರಾಯ ಕಿಸೆಯಿಂದ ಪತ್ರದ ಸುರುಳಿಯೊಂದನ್ನು ತೆಗೆದು ಮಧುವರಸನಿಗೆ ಕೊಟ್ಟನು.

ಮಧರುವರಸನು ಪತ್ರವನ್ನು ಓದಿ ಹಿಂದಿರುಗಿ ಕೊಟ್ಟು. "ನನ್ನ ಬಿಡುಗಡೆ ಇಷ್ಟೊಂದು ಬೇಗ, ಇಷ್ಟೊಂದು ಸುಲಭವಾಗಿ ಸನ್ನಿಹಿತವಾಗುವುದೆಂದು ಯಾರು ತಿಳಿದಿದ್ದರು ಜವರಾಯ ? ವಧೆಯ ದಂಡಾಜ್ಞೆಯಾವಾಗ ಕಾರ್ಯಗತವಾಗುವುದು? ಅದಕ್ಕೆ ಮೊದಲು ನನ್ನ ದೇಹವನ್ನು ಬಂಧಿಸಿರುವ ಈ ಸಂಕಲೆಗಳನ್ನು ತೆಗೆಸಬೇಕಲ್ಲವೆ?" ಎಂದು ಸಹಜ ಕಂಠದಿಂದ ಕೇಳಿದನು.

ಜವರಾಯ ಅವಾಕ್ಕಾದನು. ಅವನ ಸುದೀರ್ಘ ಜೀವನದಲ್ಲಿ ಇಂತಹ ದಂಡಾಜ್ಞೆಗಳನ್ನು ಬಂಧಿಗಳಿಗೆ ಮುಟ್ಟಿಸುವ ಪ್ರಸಂಗ ಅವನಿಗೆ ಅನೇಕ ಸಾರಿ ಒದಗಿ ಬಂದಿತ್ತು. ಆ ಸಂದರ್ಭಗಳಲ್ಲಿ ಬಂಧಿಗಳ ಪ್ರತಿಕ್ರಿಯೆ ಅವನಲ್ಲಿ ವಿಷಾದದ ನೆನಪುಗಳಾಗಿ ಉಳಿದಿದ್ದವು. ಅನುಕಂಪದ ದನಿಯಿಂದ ಅವನು, "ಒಡೆಯರು ಚಿತ್ತಸಮತೆಯನ್ನು ಚೆನ್ನಾಗಿ ಸಾಧಿಸಿಕೊಂಡಂತಿದೆ. ಇಷ್ಟೊಂದು ಸ್ಥೈರ್ಯ

ಸಮಾಧಾನಗಳಿಂದ ವಧೆಯ ದಂಡಾಜ್ಞೆಯನ್ನು ಸ್ವಾಗತಿಸಿದವರಾರನ್ನೂ ನಾನು ನೋಡಿಲ್ಲ," ಎಂದನು.

ಮಧುವರಸನು ಕುತೂಹಲದಿಂದ, "ಹಾಗಾದರೆ ನೀನು ದಂಡಾಜ್ಞೆಯನ್ನು ಕೊಟ್ಟಾಗ ಅವರೇನು ಮಾಡುತ್ತಿದ್ದರು?" ಎಂದು ಕೇಳಿದನು.

ಜವರಾಯ ಹೇಳಿದನು : "ಕೆಲವರು ಚೀತ್ಕಾರ ಮಾಡುತ್ತಿದ್ದರು. ಕೆಲವರು ಗಟ್ಟಿಯಾಗಿ ಅಳುತ್ತಿದ್ದರು. ಕೆಲವರು ತಲೆ ಚಚ್ಚಿಕೊಂಡು ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದರು. ಹೊಡೆದಾಟದಲ್ಲಿ ಎದುರಾಳಿಯನ್ನು ಕೊಂದ ಬಂಧಿಯೊಬ್ಬನು ಆಜ್ಞೆ ಕೇಳಿ ಮೂರ್ಛೆ ಹೋದನು, ವಧಾಸ್ಥಾನಕ್ಕೆ ಕರೆದುಕೊಂಡು ಹೋದಾಗಲೂ ಅವನಿಗೆ ಎಚ್ಚರವಾಗಲಿಲ್ಲ."

ಮಧುವರಸನು ತುಸು ಹೊತ್ತು ಮೌನವಾಗಿ ಯೋಚಿಸುತ್ತಿದ್ದು ಬಳಿಕ ಹೇಳಿದನು : "ಮರಣಕ್ಕೆ ಹೆದರುವುದೇ ಈ ಎಲ್ಲ ವಿಕಾರಗಳ ಕಾರಣ. ಜನರು ಭಾವಿಸುವಂತೆ ಜೀವನ ಮರಣಗಳು ಪರಸ್ಪರ ಶತ್ರುಗಳಲ್ಲ. ಒಂದಕ್ಕೊಂದು ಪೂರಕ. ಜೀವನದಿಂದ ಮರಣ, ಮರಣದಿಂದ ಜೀವನ. ಒಂದೇ ಬಾಳಿನ ಎರಡು ಧೃವಗಳು ಅವು. ಇದನ್ನು ತಿಳಿದುಕೊಳ್ಳಲಾರದೆ ನಾವು ಮೃತ್ಯುವನ್ನು ಶತೃವೆಂದು ಭಾವಿಸಿ, ಅದರಿಂದ ತಪ್ಪಿಸಿಕೊಂಡು ಸಾಧ್ಯವಿದ್ದಷ್ಟು ಕಾಲ ಬದುಕಿರಲು ಹವಣಿಸುತ್ತೇವೆ. ನಮ್ಮ ಅವಿವೇಕದ ಫಲವಾಗಿ ಮಿತ್ರನಂತೆ ಸಹಜವಾಗಿ ಬರಬೇಕಾದ ಮೃತ್ಯು, ಶತೃವಿನಂತೆ ಬಂದು ಆಕ್ರಮಣ ನಡೆಸಬೇಕಾಗುತ್ತದೆ. ಹುಟ್ಟಿದವನು ಸಾಯಲೇಬೇಕು. ಅದರಿಂದ ತಪ್ಪಿಸಿಕೊಳ್ಳುವುದು ಸಾಧ್ಯವಲ್ಲ, ಎಂದು ತಿಳಿದಾಗ ಸಾವಿನ ಭಯವಳಿದು, ಮೃತ್ಯವನ್ನು ಮಿತ್ರನಂತೆ ಆದರದಿಂದ ಸ್ವಾಗತಿಸಲು ಶಕ್ತರಾಗುತ್ತೇವೆ. ಇಂತಹ ಸುಖೀಮೃತ್ಯುವಿಗೆ ಮಾನವನನ್ನು ಸಿದ್ಧಗೊಳಿಸುವುದು ಶರಣಧರ್ಮದ ಮಹೋದ್ದೇಶಗಳಲ್ಲೊಂದು."

"ಧನ್ಯರು ನೀವು ಒಡೆಯರೆ!" ಎಂದು ಹೇಳಿ ಜವರಾಯ ಮಧುವರಸನ ಮೇಲೆ ಭಕ್ತಿ ಗೌರವಗಳ ದೃಷ್ಟಿ ಬೀರಿ, ಕೆಲವು ಕ್ಷಣಗಳ ಅನಂತರ "ಯಾರಾದರೂ ಬಂಧುಗಳನ್ನು ನೋಡಲಿಚ್ಛಿಸುವರೇ ನಿನ್ನ ಬಂಧಿ? ಎಂದು ಕೇಳುತ್ತಾರೆ ಸೆರೆಮನೆಯ ಅಧಿಕಾರಿ. ಅವರಿಗೆ ಏನು ಉತ್ತರ ಹೇಳಲಿ?" ಎಂದು ಪ್ರಶ್ನಿಸಿದನು.

"ಮೃತ್ಯು ಸನ್ನಿಹಿತವಾದಾಗ ನಮಗೆ ನಾವೇ ಬಂಧುಗಳು, ಜವರಾಯ. ನಾನಾಗಿ ಯಾರನ್ನೂ ನೋಡಲಿಚ್ಛಿಸುವುದಿಲ್ಲ. ತಾವಾಗಿ ಯಾರಾದರೂ ಬಂದರೆ ಬೇಡವೆನ್ನುವುದಿಲ್ಲ. ಅಧಿಕಾರಿಗೆ ಇದನ್ನು ತಿಳಿಸು." –ಒಂದು ಕ್ಷಣವೂ ಯೋಚಿಸದೆ ಮಧುವರಸ ಉತ್ತರ ಕೊಟ್ಟನು.

ಜವರಾಯ ಕೈ ಮುಗಿದು ಹೇಳಿದನು : "ನೀವು ಮಹಾನುಭಾವರು ಅಣ್ಣನವರೆ, ದಶಗಣದ ಸಿಂಗಿರಾಜರು ಹೇಳುತ್ತಿದ್ದರು,–ಮರಣಕ್ಕೆ ಸಿದ್ಧರಾದವರು ಬಂಧುಗಳನ್ನು ನೋಡುವುದರಿಂದ ಅವರ ದುಃಖವನ್ನು ಹೆಚ್ಚಿಸುವರು. ತಮ್ಮ ಸಂಕಲ್ಪ ಸಡಿಲವಾಗಲು ಅವಕಾಶ ಕಲ್ಪಿಸುವರು. ಈ ಎರಡು ವಿಪತ್ತುಗಳಿಂದ ಆತ್ಮವನ್ನು ರಕ್ಷಿಸಿಕೊಳ್ಳುವುದು ವಿವೇಕದ ಹಾದಿ' ಎಂದು."

"ಸೆರೆಮನೆಯ ನಿನ್ನ ಅನುಭವ ಅದನ್ನು ದೃಢಪಡಿಸುವುದೇ ಜವರಾಯ?"

"ನಿಸ್ಸಂದೇಹವಾಗಿ ದೃಢಪಡಿಸುತ್ತದೆ, ಒಡೆಯರೆ. ಕೊನೆಗಾಲದಲ್ಲಿ ಬಂಧು ಬಾಂಧವರನ್ನು ನೋಡಿದಾಗ ಮರಣದ ಭೀತಿ ಮರುಕಳಿಸಿ ಸ್ಥೈರ್ಯ ಸಂಕಲ್ಪಗಳು ಮುಗ್ಗುರಿಸುತ್ತವೆ. ಬಂಧುಗಳಿಂದ ಬೀಳ್ಕೊಂಡು ವಧಾಸ್ಥಾನಕ್ಕೆ ಹೋದವರು ಬಿಕ್ಕಿ ಬಿಕ್ಕಿ ಅಳುತ್ತಾ ಕಂಡಕಂಡವರಿಗೆ ಕೈಮುಗಿದು ಪ್ರಾಣಭಿಕ್ಷೆ ಬೇಡುವುದನ್ನು ನೋಡಿದ್ದೇನೆ. ಈಗ ಒಡೆಯರು ದಯಮಾಡಿ ಸಂಗಡ ಬಂದರೆ ಕಮ್ಮಾರ ಶಾಲೆಗೆ ಕರೆದುಕೊಂಡು ಹೋಗುತ್ತೇನೆ," –ಎಂದು ಜವರಾಯ ಮಧುವರಸನನ್ನು ಅಲ್ಲಿಂದ ಕರೆದುಕೊಂಡು ಸೆರೆಮನೆಯ ಮೇಲಿನ ಅಂಗಣಕ್ಕೆ ಹೋದನು. ಅಲ್ಲಿ ಕಮ್ಮಾರರು ಅಂದೇ ಬಂದ ಇಬ್ಬರು ಬಂಧಿಗಳಿಗೆ ಸಂಕಲೆ ತೊಡಿಸುತ್ತಿದ್ದರು. ಆ ಕಾರ್ಯ ಮುಗಿದ ಕೂಡಲೆ ಅವರು ಪಶುವೊಂದಕ್ಕೆ ಗೊಲಸು ಕಟ್ಟುವಂತೆ ನಿರ್ಲಿಪ್ತ ಭಾವದಿಂದ, ಮಧುವರಸನನ್ನು ಹಿಂದಕ್ಕೆ ಮುಂದಕ್ಕೆ ನಿಲ್ಲಿಸಿ ಸಂಕಲೆಗಳನ್ನು ತೆಗೆದರು. ಮಧುವರಸನು ಯಾರು? ಏತಕ್ಕಾಗಿ ಅವನನ್ನು ಸೆರೆಮನೆಗೆ ಕಳುಹಿಸಿದ್ದಾರೆ? ಇಂದು ಸಂಕಲೆಗಳನ್ನು ತೆಗೆದ ಉದ್ದೇಶವೇನು? ಈ ವಿಚಾರಗಳಲ್ಲಿ ಅವರಿಗೆ ಯಾವ ಆಸಕ್ತಿಯೂ ಇರಲಿಲ್ಲ.

ಬಂಧವಿಮುಕ್ತವಾದ ಹಕ್ಕಿ ಗರಿಗೆದರಿ ಗಗನಕ್ಕೆ ಹಾರುವಂತೆ ಮಧುವರಸ, ಹಗುರವಾದ ಹೆಜ್ಜೆಗಳಿಂದ ಪಾವಟಿಗೆಗಳನ್ನು ಇಳಿದು ಪುನಃ ನೆಲೆಮನೆ ಸೇರಿದನು. ಅಲ್ಲಿಯೇ ಒಂದು ಕಡೆ ಸ್ನಾನಕ್ಕಾಗಿ ಬೇರ್ಪಡಿಸಿದ್ದ ಸ್ಥಳದಲ್ಲಿ ಸ್ನಾನಮಾಡಿ ಮಡಿಬಟ್ಟೆಗಳನ್ನುಟ್ಟು, ಇನ್ನೊಂದು ಮೂಲೆಯಲ್ಲಿ ತೃಣಾಸನವನ್ನು ಹರಡಿ ಪೂಜೆಗೆ ಕುಳಿತನು. ಪೂಜೆಗೆ ಬೇಕಾದ ಉಪಕರಣಗಳೊಂದೂ ಇಲ್ಲದಿದ್ದರೂ ಎಂದಿನಂತೆ ಜವರಾಯ ಹೊಸಕುಡಿಕೆಯಲ್ಲಿ ನೀರನ್ನೂ ಎಲೆಯ ಸಂಪುಟದಲ್ಲಿ ಅಂದೇ ತಿರಿದ ಹೂವು ಬಿಲ್ವದಳಗಳನ್ನೂ ಸಿದ್ಧಪಡಿಸಿದ್ದನು.

ಪೂಜಾರಂಭಮಾಡಿ ಲಿಂಗದೇವನನ್ನು ಕರಸ್ಥಲದಲ್ಲಿ ಪ್ರತಿಷ್ಠಿಸಿ ಏಕಾಗ್ರಚಿತ್ತದಿಂದ ಧ್ಯಾನಮಗ್ನನಾದ ಮಧುವರಸನು ಮಧ್ಯಾಹ್ನವಾಗಿ ಮಹಮನೆಯಿಂದ ತಿಂಡಿಯ ಪೊಟ್ಟಣಗಳು ಬಂದಾಗಲೂ ಏಳಲಿಲ್ಲ. ಜವರಾಯ ಎಚ್ಚರಿಸುವ ಪ್ರಯತ್ನವನ್ನೂ ಮಾಡಿರಲಿಲ್ಲ.

ಅಪರಾಹ್ನ ಮೊದಲ ಜಾವ ಮುಗಿಯುತ್ತಿದ್ದಂತೆ ಮಧುವರಸನು ಕಣ್ತೆರೆದು ಪೂಜೆ ಮುಗಿಸಿ ಕೂಗಿದಾಗ, ಬಾಗಿಲಲ್ಲಿ ತೂಕಡಿಸುತ್ತ ಕುಳಿತಿದ್ದ ಜವರಾಯ ಒಳಗೆ ಬಂದು ಕೈಜೋಡಿಸಿ ನಿಂತನು.

"ಎಷ್ಟು ಹೊತ್ತಾಗಿದೆ, ಜವರಾಯ ? ನನಗಾಗಿ ಭಟರು ಬಂದರೆ ?" –ಮಧುವರಸ ಕೇಳಿದನು.

"ಒಡೆಯರು ಎದ್ದು ಆರೋಗಣೆ ಮುಗಿಸಿ, ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡರೆ ಒಳಿತು. ಭಟರ ವಿಚಾರ ನನಗೆ ತಿಳಿಯದು," –ಎಂದು ಜವರಾಯ ಪೊಟ್ಟಣಗಳನ್ನು ಮುಂದಿಟ್ಟನು.

"ಚೆನ್ನಬಸವಣ್ಣನವರು ನನ್ನನ್ನು ಮರೆತಿಲ್ಲ. ಅವರು ಕಳುಹಿಸುತ್ತಿರುವ ಈ ಪ್ರಸಾದವೇ ಅದಕ್ಕೆ ಸಾಕ್ಷಿ," –ಎಂದು ಮಧುವರಸ ಉಣಲು ಪ್ರಾರಂಭಿಸಿದಂತೆ ಜವರಾಯ ಮೆಚ್ಚುಗೆಯ ಆವೇಗದಿಂದ, "ಶರಣರ ನುಡಿಚೆನ್ನ, ನಡೆಚೆನ್ನ, ಅವರು ಮಾಡುವುದೆಲ್ಲ ಚೆನ್ನ. ಅದು ಕಾರಣ ಹೊರಗಿನ ಆ ಹುಚ್ಚು ಜಗತ್ತಿನಲ್ಲಿ ಅವರಿಗೆ ಇಷ್ಟೆಲ್ಲ ಬವಣೆ ಆಗುತ್ತಿರುವುದು!" ಎಂದು ಉದ್ಗಾರ ತೆಗೆದನು.

"ಶರಣರ ಅನಪೇಕ್ಷೆಯೇ ಅವರ ವರ್ತನೆ ಚೆನ್ನಾಗಲು ಕಾರಣ, ಜವರಾಯ. 'ತ್ಯಕ್ತೇನ ಭೂಂಜೀಥ" ಎಂದು ಉಪನಿಷತ್ತು ಹೇಳುತ್ತದೆ. ನಾವು ಕರ್ಮಠರಾಗಿ ಮರೆತಿದ್ದ ಆ ಸತ್ಯವನ್ನು ಶರಣಧರ್ಮ ಪುನಃ ನೆನಪಿಗೆ ತಂದಿದೆ. ನಾಲ್ಕು ವಾರಗಳ ಸೆರೆಮನೆಯ ವಾಸದಿಂದ ನನಗೆ ಅದರ ಅರಿವಾಯಿತು." –ಮಧುವರಸನು ಊಟ ಮುಗಿಸಿ ಹೇಳಿದನು.

ಆಮೇಲೆ ಬಹಳ ಹೊತ್ತು ಅವನು ಸೆರೆಮನೆಯ ಮಂಚದ ಮೇಲೆ ಮಲಗಿ ವಿಶ್ರಮಿಸಿಕೊಂಡು ಸಂಜೆಯಾಗುತ್ತಿದ್ದಂತೆ ಜವರಾಯನನ್ನು ಕರೆದು, "ನಿನ್ನಿಂದ ನನಗೊಂದು ಉಪಕಾರವಾಗಬೇಕಾಗಿದೆ. ಮಾಡುವೆಯಾ?" ಎಂದು ಕೇಳಿದನು.

"ಮಾಡುತ್ತೇನೆ, ಒಡೆಯರೆ –ಆದರೆ ಸೆರೆಮನೆಯ ನಿಬಂಧನೆಗಳಿಗೆ ಹೊರತಲ್ಲದಿದ್ದರೆ ಮಾತ್ರ."

"ನಿಬಂಧನೆಗಳು ಎಷ್ಟೇ ಉತ್ತಮವಾಗಿರಲಿ, ಅನಿವಾರ್ಯವಾಗಿರಲಿ, ಎಲ್ಲಕಾಲ ಎಲ್ಲದೇಶಗಳಿಗೆ ಏಕಪ್ರಕಾರವಾಗಿ ಸಲ್ಲುವುದಿಲ್ಲ. ವಿಶೇಷ ಸಂದರ್ಭಗಳಲ್ಲಿ ನಾವು ನಿಬಂಧನೆಗಳನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಬೇಕಾಗುತ್ತದೆ."

"ಒಡೆಯರ ಆಜ್ಞೆ, ನಿಬಂಧನೆಗೆ ಹೊರತಾದರೂ ಸರಿ, ಮಾಡುತ್ತೇನೆ."

ಮಧುವರಸ ಹೇಳಿದನು : "ಶರಣರಿಗೆ ನನ್ನ ಕೊನೆಯ ಸಂದೇಶವೊಂದಿದೆ. ಶೂಲದ ಮರದಡಿಯಲ್ಲಿ ನಿಂತು ನೆರೆದ ಪ್ರಜಾವರ್ಗಕ್ಕೆ ಅದನ್ನು ಹೇಳಬೇಕೆಂದಿದ್ದೆ.

ಅಂತಹ ಅವಕಾಶ ದೊರಕುವುದೋ ಇಲ್ಲವೋ ಎಂದು ಈಗ ಸಂದೇಹವಾಗುತ್ತಿದೆ. ನೀನು ಈ ಸಂದೇಶವನ್ನು ನನ್ನ ನುಡಿಗಳಲ್ಲಿಯೇ ಶರಣರಿಗೆ ಮುಟ್ಟಿಸಬೇಕು. ಆ ಕಾರ್ಯ ನಿನ್ನಿಂದಾಗುವುದೆ?

"ಆಗುತ್ತದೆ, ಒಡೆಯರೆ," –ಜವರಾಯ ದೃಢಕಂಠದಿಂದ ಹೇಳಿದನು.

"ಹಾಗಾದರೆ ಮನಮುಟ್ಟಿ ಕೇಳು," ಎಂದು ಮಧುವರಸ ದನಿ ತಗ್ಗಿಸಿ, ಬಿಡಿಸಿ ಬಿಡಿಸಿ, ನಿಧಾನವಾಗಿ ಹೇಳಿದನು.

"ಶರಣರ ಅಗ್ನಿಪರೀಕ್ಷೆ ಆರಂಭವಾಗಿದೆ. ಅದಕ್ಕಾಗಿ ಬಿಜ್ಜಳರಾಯರು ಯಾಗಶಾಲೆ ರಚಿಸಿದ್ದಾರೆ. ಸಮಿಧೆ ಸಂಗ್ರಹಿಸಲ್ಪಟ್ಟಿದೆ. ಬಲಿಪೀಠ ಸಿದ್ಧವಾಗಿದೆ. ಅಭಿಚಾರದ ಮಂತ್ರಘೋಷ ಆರಂಭವಾಗಿ ಯಜ್ಞಕುಂಡದಲ್ಲಿ ಅಗ್ನಿ ಪ್ರಜ್ವಲಿಸುತ್ತಿದೆ. ಮುಂದೆ ನಡೆಯಲಿರುವ ದಯಾಶೂನ್ಯವಾದ, ಧರ್ಮವರ್ಜಿತವಾದ ದಬ್ಬಾಳಿಕೆಯಿಂದ ಶರಣರನ್ನು ರಕ್ಷಿಸಲು ಭಕ್ತಿ ಪ್ರಧಾನವಾದ ಶರಣಧರ್ಮದಲ್ಲಿ ವೀರತ್ವವನ್ನು ಮೂಡಿಸಲು ನಾವು ಪಣತೊಡಬೇಕು. ಶರಣರು ವೀರರಾಗಬೇಕು. ಶರಣಶೈವಧರ್ಮ ವೀರಶೈವಧರ್ಮವಾಗಬೇಕು. ಆತ್ಮಧರ್ಮಗಳ ರಕ್ಷಣೆಗಾಗಿ ಅಸ್ತ್ರ ಧರಿಸುವುದು ಶರಣರ ಅಹಿಂಸಾವಾದಕ್ಕೆ ಪ್ರತಿವಾದಿಯಲ್ಲ. ಆತ್ಮೋದ್ಧಾರಕ್ಕಾಗಿ, ತನ್ನ ಮನೆ ಮಠ ಮಡದಿ ಮಕ್ಕಳ ರಕ್ಷಣೆಗಾಗಿ, ಅಸ್ತ್ರ ಧರಿಸುವುದನ್ನು ಶರಣಧರ್ಮ ನಿಷೇಧಿಸಲಾಗದು. ಬಲಪ್ರಯೋಗವನ್ನು ಬಲಪ್ರಯೋಗದಿಂದ ಎದುರಿಸುವುದು ಮಾನವಧರ್ಮವೆಂಬುದನ್ನು ಶರಣರು ಅರಿಯಲಿ. ಶಿವಂ ಭೂಯಾತ್."

ನಾಲ್ಕಾರು ಸಾರಿ ಹೇಳಿದ ಮೇಲೆ ಜವರಾಯನಿಗೆ ಸಂದೇಶವು ಪೂರ್ಣವಾಗಿ ಕಂಠಗತವಾಯಿತು.

ಆಮೇಲೆ ಮಧುವರಸನು ಕೈಕಾಲುಗಳನ್ನು ತೊಳೆದು, ಜವರಾಯ ತಂದುಕೊಟ್ಟ ಹಾಲು ಕುಡಿದು ಮಲಗಿ ಹೊದಿಕೆಯನ್ನು ತಲೆ ಮುಚ್ಚುವಂತೆ ಮೇಲೆಳೆದುಕೊಂಡನು. ಜವರಾಯ ಸಂದೇಶದ ನುಡಿಗಳನ್ನು ನೆನಪಿಸಿಕೊಳ್ಳುತ್ತ ಬಾಗಿಲಲ್ಲಿ ಕುಳಿತನು.

ಪ್ರಹರಗಳು ಕಳೆದವು. ಸೆರೆಮನೆಯ ಆ ಭಾಗವೆಲ್ಲ ನೀರವ, ನಿಸ್ತಬ್ಧ. ಅರ್ಧರಾತ್ರಿ ಮುಗಿದು ಸ್ವಲ್ಪ ಹೊತ್ತಿನ ಮೇಲೆ ಸೆರೆಮನೆಯ ಮೇಲಿನ ಅಂಗಣದಲ್ಲಿ ಹೆಜ್ಜೆಯ ಸಪ್ಪಳ ಕೇಳಿ ಜವರಾಯ ಎದ್ದು ನಿಂತನು.

ಪಂಜುಗಳನ್ನು ಹಿಡಿದು ನಾಲ್ವರು ಭಟರೊಡನೆ ಧರ್ಮಾಧಿಕರಣದ ಅಧಿಕಾರಿಯೊಬ್ಬನು ಅಲ್ಲಿಗೆ ಬಂದು, ಸಲಿಕೆಯ ಆಜ್ಞಾಪತ್ರವನ್ನು ಜವರಾಯನಿಗೆ ಕೊಟ್ಟು, "ಬಂಧಿಯನ್ನು ನಮಗೊಪ್ಪಿಸಿರಿ," ಎಂದನು.

ಅವರು ಸೆರೆಮನೆಗೆ ಹೋದಾಗ ಮಧುವರಸನು ಮಂಚದಿಂದೆದ್ದು ನಿಂತು ಉಡಿಗೆ ತೊಡಿಗೆಗಳನ್ನು ಸರಿಪಡಿಸಿಕೊಳ್ಳುತ್ತಿದ್ದನು. ನಿರ್ಲಿಪ್ತತೆಯ ಗಂಭೀರ ಶಾಂತಿ ಅವನ ಚಹರೆಯಂತೆ ಒಂದೊಂದು ಚಲನೆಯಲ್ಲಿಯೂ ಎದ್ದು ಕಾಣುತ್ತಿತ್ತು.

ಭಟರು ಹಗ್ಗಗಳಿಂದ ಮಧುವರಸನ ಕೈಗಳನ್ನು ಹಿಂದಕ್ಕೆಳೆದು ಕಟ್ಟಿ ಹೊರಗೆ ಕರೆದುಕೊಂಡು ಹೋಗುತ್ತಿದ್ದಂತೆ ಜವರಾಯ ನೀರವವಾಗಿ ಕಣ್ಣೀರಿಡುತ್ತ ಮಧುವರಸನ ಕಾಲುಗಳ ಮೇಲೆ ಬಿದ್ದನು. ಆ ಕರ್ತವ್ಯನಿಷ್ಠ ವೃದ್ಧ ಕಾವಲುಗಾರನ ವಿಚಿತ್ರ ಆವೇಗ ಉದ್ವೇಗಗಳ ಪರಿಚಯವಿದ್ದ ಭಟರು ನಿಷೇಧಿಸಲಿಲ್ಲ.

ರಾಜಬೀದಿಗೆದುರಾಗಿ ಸೆರೆಮನೆಯ ಅಂಗಣದಲ್ಲಿ ಮುಚ್ಚಿದ ರಥವೊಂದು ನಿಂತಿತ್ತು. ಎಂಟು ಮಂದಿ ಸೈನಿಕರು ರಥದ ಸುತ್ತ ಕಾವಲಿದ್ದರು. ಭಟರು ಮಧುವರಸನನ್ನು ರಥದಲ್ಲಿ ಕುಳ್ಳಿರಿಸಿ ಬಾಗಿಲನ್ನು ಬಂಧಿಸಿದರು. ರಥ ಬರಮಪ್ಪನ ಗುಡ್ಡದಡಿಯ ವಧಾಸ್ಥಾನವನ್ನು ಸೇರಿದಾಗ ರಾತ್ರಿ ಮೂರನೆಯ ಪ್ರಹರ ಮುಗಿದ ಗಂಟೆ ಹೊಡೆಯಿತು. ಶೂಲದ ಮರದ ಸುತ್ತ ಪಂಜುಗಳು ಉರಿಯುತ್ತಿದ್ದವು. ಸೈನಿಕರು ಪಹರೆ ಕೊಡುತ್ತಿದ್ದರು. ವಧಕರು ಸಿದ್ಧರಾಗಿ ನಿಂತಿದ್ದರು.

ಭಟರು ರಥದ ಬಾಗಿಲು ತೆರೆದು ಮಧುವರಸನನ್ನು ಕೆಳಗಿಳಿಸಿ ಶೂಲದ ಮರದ ಬಳಿಗೆ ಕರೆದುಕೊಂಡು ಹೋಗುತ್ತಿದ್ದಂತೆ ಎರಡು ಕುದುರೆಗಳ ಸುಸಜ್ಜಿತ ರಥವೊಂದು ಅಲ್ಲಿಗೆ ಬಂದಿತು. ಮಾಧವ ದಂಡನಾಯಕನೂ, ಮುಖವಾಡ ಹಾಕಿಕೊಂಡಿದ್ದ ಇನ್ನೊಬ್ಬ ಯೋಧನೂ ರಥದಿಂದ ಇಳಿದರು.

ತನ್ನಂತೆ ಕೈಗಳನ್ನು ಹಿಂದಕ್ಕೆ ಕಟ್ಟಿದ್ದ ಇನ್ನೊಬ್ಬ ಬಂಧಿ ಶೂಲದ ಮರದಡಿ ನಿಂತಿರುವುದನ್ನು ಕಂಡು ಮಧುವರಸನು ಚಕಿತನಾದನು. ಪಂಜುಗಳ ಬೆಳಕಿನಲ್ಲಿ ಬಂಧಿ ಹರಳಯ್ಯನೆಂದು ತಿಳಿಯಲು ಹೆಚ್ಚು ಹೊತ್ತಾಗಲಿಲ್ಲ.

"ಶರಣು ಶರಣಾರ್ಥಿ, ಹರಳಯ್ಯನವರೆ. ನಿಮ್ಮ ಈ ಬವಣೆಗೆ ಕಾರಣನಾದ ನನ್ನನ್ನು ಕ್ಷಮಿಸಿರಿ," –ಎಂದು ಹೇಳುತ್ತಾ, ಮಧುವರಸ ಕ್ಷಮಾಯಾಚನೆಗಾಗಿ ತಲೆಬಾಗಿದನು.

ಗರಬಡಿದಂತೆ ನಿಶ್ಚೇಷ್ಟನಾಗಿ ನಿಂತಿದ್ದ ಹರಳಯ್ಯ ಮಧುವರಸನನ್ನು ಗುರುತಿಸಲು ಕೆಲವು ಕ್ಷಣಗಳಾದವು. ಆಗ ಅವನು ದುಃಖಾವೇಗದಿಂದ ನಿಟ್ಟುಸಿರಿಟ್ಟು, ಗದ್ಗದ ಕಂಠದಿಂದ, "ಒಂದು ಸಾರಿ ನಿಮ್ಮನ್ನು ನೋಡಬೇಕೆಂದು ಹಾರೈಸುತ್ತಿದ್ದೆ. ಶಿವನು ಕರುಣಿಸಿದನು. ಇನ್ನು ಸಮಾಧಾನದಿಂದ ಸಾಯುವೆ," ಎಂದು ಹೇಳುತ್ತ ಮಧುವರಸನಿಗೆ ತಲೆಬಾಗಿ ವಂದನೆ ಸಲ್ಲಿಸಿದನು. ಮುಖದಲ್ಲಿ ಕಣ್ಣೀರು ಧಾರೆಯಾಗಿ ಹರಿಯುತ್ತಿತ್ತು.

"ಚಿಂತಿಸಬೇಡಿರಿ ಹರಳಯ್ಯನವರೆ. ಈ ಮಹಾಪ್ರಸ್ಥಾನದಲ್ಲಿ ನಾನು ನಿಮ್ಮ ಸಹಯಾತ್ರಿ !" –ಎಂದು ಮಧುವರಸನು ಅವನನ್ನು ಸಂತೈಸಿದನು.

ವಧಕರು ಅವರನ್ನು ಬೇರ್ಪಡಿಸಿ ಶೂಲದ ಮರದಡಿಯಲ್ಲಿ ನಿಲ್ಲಿಸಿದರು. ಕುಣಿಕೆ ಹಾಕಿದ ಎರಡು ಹಗ್ಗಗಳು ಮರದ ಮುಡಿಗಂಬದಿಂದ ಜೋತು ಕೆಳಗೆ ಬಿದ್ದಿದ್ದವು, –ಯೂಪಸ್ತಂಭಕ್ಕೆ ಕಟ್ಟಿದ ಜೊಂಡುಹುಲ್ಲಿನ ಹಗ್ಗಗಳಂತೆ. ಹಗ್ಗದ ಕೊನೆಗಳನ್ನು ಮರದ ಹಿಂದೆ ನಿಂತಿದ್ದ ಭಟರು ಹಿಡಿದಿದ್ದರು.

ವಧಕರು ಕುಣಿಕೆಗಳನ್ನು ಕೊರಳಿಗೆ ಹಾಕಿದಾಗ ಹರಳಯ್ಯ ಮೂರ್ಛೆ ಹೋದನು. ಮಧುವರಸ ಹತ್ತಿರ ಸರಿದು ಕಿವಿಯಲ್ಲಿ ಷಡಕ್ಷರ ಮಂತ್ರವನ್ನು ಪಠಿಸಿದಾಗ ಹರಳಯ್ಯ ಎಚ್ಚೆತ್ತನು. ಕೆಲವು ಕ್ಷಣಗಳ ಮೇಲೆ ಅವನು ತಲೆಯೆತ್ತಿ, ಸೆಟೆದು ನಿಂತು ಮಧುವರಸನೊಡನೆ ದನಿಗೂಡಿಸಿ ತಾನೂ ಹೇಳಿದನು : 'ಓಂ ನಮಃ ಶಿವಾಯ' ಎಂದು.

ಇರುಳ ಗಂಭೀರ ಶಾಂತಿಯಲ್ಲಿ ಆ ಮಂತ್ರರಾಜದ ಅಮೃತಾಕ್ಷರಗಳು ಗಾಳಿಯಲ್ಲಿ ಅರಳಿದ ಶಬ್ದರೂಪವಾದ ಹೂವುಗಳಂತೆ ವಧಾಸ್ಥಾನವನ್ನು ಶಬ್ದಮಯವಾಗಿ ಮಾಡಿದವು. ವಧಕರು, ಭಟರು, ಸೈನಿಕರು, ಪಂಜಿನವರು, ಕೇಳುತ್ತ ಮಂತ್ರಮುಗ್ಧರಂತೆ ಸ್ತಬ್ಧರಾಗಿ ನಿಂತರು.

ಪಿಸುದನಿಯಲ್ಲಿ ಪ್ರಾರಂಭವಾದ ಮಂತ್ರಪಠನೆ, ಕೆಲವೇ ಕ್ಷಣಗಳಲ್ಲಿ ಘೋಷಣೆಯಾಗಿ ಗಾಳಿಯಲ್ಲಿ ಹರಡಿ ದೂರದಲ್ಲಿ ನಿಂತಿದ್ದ ಮಾಧವ ದಂಡನಾಯಕನ, ಮುಖವಾಡ ಹಾಕಿಕೊಂಡಿದ್ದ ಅವನ ಗೆಳೆಯನ ಕಿವಿಗಳಿಗೆ ಮುಟ್ಟಿದವು.

ಅಸಹನೆ ಆಕ್ರೋಶಗಳಿಂದ ಅವರು ತಳಮಳಿಸಿದರು. ಮುಖವಾಡ ಧರಿಸಿದ್ದ ಯೋಧನು ಸಿಟ್ಟಿಗೆದ್ದ ಸಿಂಹದಂತೆ ಹೂಂಕಾರಮಾಡಿ ಹತ್ತಿರಿದ್ದ ಭಟನ ಕೈಯಿಂದ ಪಂಜನ್ನು ತೆಗೆದುಕೊಂಡು ಮೊದಲೆ ಗೊತ್ತಾಗಿದ್ದ ಸಂಕೇತದಂತೆ ಮೇಲಿಂದ ಕೆಳಗೆ ಆಡಿಸಿದನು.

ಆಜ್ಞಾರೂಪವಾದ ಆ ಸಂಕೇತಕ್ಕಾಗಿ ಕಾಯುತ್ತಿದ್ದ ಭಟರು ನೇಣಿನ ಹಗ್ಗಗಳನ್ನು ಮೇಲಕ್ಕೆಳೆದರು. ಮಂತ್ರಘೋಷ ತಟ್ಟನೆ ನಿಂತಿತು. ಕಾವಲಿದ್ದ ಸೈನಿಕರು ತಲೆಯೆತ್ತಿ ನೋಡಿದಾಗ ಶೂಲದ ಮರದಿಂದ ಎರಡು ದೇಹಗಳು ನೇತಾಡುತ್ತಿದ್ದವು. ವಧಾಸ್ಥಾನದಲ್ಲಿ ಗಂಭೀರ ಶಾಂತಿ ! ನಿಸ್ತಬ್ಧ ಮೌನ ! ಸೈನಿಕರು, ಭಟರು, ವಧಕರು, ಮತ್ತೊಂದು ಮಹಾಘೋರಕ್ಕಾಗಿ ಕಾಯುತ್ತಿದ್ದರು.

ಮಾಧವ ದಂಡನಾಯಕನು ಕೈಕಟ್ಟಿ ಗಂಭೀರವಾಗಿ ನಿಂತಿದ್ದನು. ಮುಖವಾಡ ಹಾಕಿಕೊಂಡಿದ್ದ ಯೋಧನು ವಿಚಲಿತನಾಗಿ ಶತಪಥ ತಿರುಗಾಡುತ್ತಿದ್ದನು.

ಅರ್ಧ ಗಳಿಗೆಯ ಅನಂತರ ಸೆರೆಮನೆಯ ಇನ್ನೊಂದು ಮುಚ್ಚುಗಾಡಿ ಭಟರ ರಕ್ಷಣೆಯಲ್ಲಿ ಅಲ್ಲಿಗೆ ಬಂದಿತು. ಭಟರು ಬಾಗಿಲನ್ನು ತೆರೆದು ಶೀಲವಂತನನ್ನು ಕೆಳಗಿಳಿಸಿದರು. ಅವನ ಕೈಗಳನ್ನು ಹಿಂದಕ್ಕೆ ಎಳೆದು ಕಟ್ಟಿತ್ತು.

ಧರ್ಮಾಧಿಕರಣದ ವಿಧಿಯಂತೆ ದಂಡಾಜ್ಞೆ ಶೀಲವಂತನಿಗೆ ಪ್ರಚಾರವಾಗಿರಲಿಲ್ಲ. ತನನ್ನು ಎಲ್ಲಿಗೆ, ಏತಕ್ಕಾಗಿ ಕರೆದುಕೊಂಡು ಬಂದರೆಂಬುದು ಅವನಿಗೆ ತಿಳಿಯದು. ಭಟರು ಅವನನ್ನು ವೇದಿಕೆಯ ಬಳಿ ಕರೆದುಕೊಂಡುಹೋದಾಗ, ಶೂಲದ ಮರದಿಂದ ಎರಡು ದೇಹಗಳು ಜೋತು ಬಿದ್ದಿರುವುದನ್ನು ಕಂಡು ಅವನಿಗೆ ವಾಸ್ತವದ ಅರಿವಾಯಿತು. ಶೂಲಕ್ಕೇರಿಸಲ್ಪಟ್ಟವರು ಹರಳಯ್ಯ ಮಧುವರಸರೆಂದು ತಿಳಿದು, ತಲೆಬಾಗಿ ವಂದಿಸಿದನು. ಕಣ್ಣೀರು ಧಾರೆಯಾಗಿ ಸುರಿಯುತ್ತಿತ್ತು.

ಕೆಲವು ಕ್ಷಣಗಳ ನಂತರ ಅವನು ತಲೆಯೆತ್ತಿ ಶೂಲದ ಮರದಿಂದ ಜೋತಾಡುತ್ತಿದ್ದ ದೇಹಗಳನ್ನು ಏಕಾಗ್ರದೃಷ್ಟಿಯಿಂದ ನೋಡುತ್ತಿದ್ದಂತೆ ಒಂದು ಅದ್ಭುತ ನಡೆಯಿತು. ಗಾಳಿಯಿಂದ ದೇಹಗಳು ಅಲುಗಿದವು. ವಾಯುಮಂಡಲದಲ್ಲಿ ಬೆರೆತಿದ್ದ ಮಂತ್ರಪಠನೆಯ ಅಲೆಯೊಂದು ಚಲಿಸಿ, ಉದ್ವೇಗದಿಂದ ತೀವ್ರತೆ ಪಡೆದಿದ್ದ ಶೀಲವಂತನ ಕಿವಿಗಳಿಗೆ ಅಸ್ಫುಟವಾಗಿ ಕೇಳಿಸಿತು.

ಶೀಲವಂತ ಚಮತ್ಕೃತನಾದನು. ಕಲಾವಂತಿಕೆಯಿಂದ ಸ್ವಚ್ಛವಾಗಿದ್ದ ಅವನ ಪ್ರತಿಭೆಯ ದರ್ಪಣದಲ್ಲಿ ಆ ಶಬ್ದದ ಅಲೆಗಳು ಪ್ರತಿಫಲಿಸಿ ದೊಡ್ಡದಾಗಿ ಷಡಕ್ಷರ ಮಂತ್ರದ ತಾರಕರೂಪ ತಳೆಯಿತು. ಮನಸ್ಸನ್ನು ಏಕಾಗ್ರಗೊಳಿಸಿ ಶೀಲವಂತ ತಾನೂ ಮಂತ್ರವನ್ನು ಪಠಿಸಿದನು. ಆ ಪ್ರದೇಶದಲ್ಲಿ ಆಗ ನೆಲೆಸಿದ್ದ ವಿದ್ಯುತ್ಪೂರ್ಣವಾದ ಉದ್ರಿಕ್ತ ವಾತಾವರಣದ ಒತ್ತಡದಿಂದ ಕೆಲವೇ ಕ್ಷಣಗಳಲ್ಲಿ ಅವನಿಗೆ ಎಚ್ಚರ ತಪ್ಪಿತು; ಸಮಾಧಿಸ್ಥನಾದಂತೆ ಬಾಹ್ಯಜಗತ್ತಿನೊಡನೆ ಎಲ್ಲ ಸಂಬಂಧಗಳನ್ನೂ ಕಳೆದುಕೊಂಡನು. ಆಮೇಲಿನ ಘಟನೆಗಳು ಅವನ ಅರಿವಿಲ್ಲದೆ ಯಾಂತ್ರಿಕವಾಗಿ ನಡೆದವು.

ಭಟರು ಅವನನ್ನು ವಧಾಪೀಠದ ಬಳಿ ಕರೆದುಕೊಂಡು ಹೋಗಿ ವಧಕನಿಗೆ ಒಪ್ಪಿಸಿದರು. ಮುಖವಾಡ ಧರಿಸಿದ್ದ ಯೋಧನು ನಿಂತಿದ್ದ ಸ್ಥಳದಿಂದಲೇ ಪಂಜನ್ನಾಡಿಸಿ ಸಂಕೇತದಿಂದ ವಧೆಗೆ ಆಜ್ಞೆ ಮಾಡಿದನು. ಧರ್ಮಾಧಿಕರಣದ ಅಧಿಕಾರಿ ದಂಡಾಜ್ಞೆಯನ್ನು ಓದಿ ಹೇಳಿದನು.

ವಧಕನು ಶೀಲವಂತನ ಕೊರಳನ್ನು ವಧಾಪೀಠದ ಮೇಲಿಟ್ಟು ಕತ್ತಿಯ ಒಂದೇ ಏಟಿಗೆ ಮುಂಡದಿಂದ ರುಂಡ ಬೇರೆಯಾಗುವಂತೆ ಹೊಡೆದನು. ತಲೆ ನೆಲಕ್ಕುರುಳಿ ಕೊರಳಿಂದ ಧಾರೆಯಾಗಿ ರಕ್ತ ಹರಿಯಿತು.

ಬಳಿಕ ವಧಕನು ಶೀಲವಂತನ ಬಟ್ಟೆಗಳನ್ನು ಹರಿದು ಬಿಸಾಡಿ, ದಂಡಾಜ್ಞೆಯಲ್ಲಿ ಹೇಳಿದ್ದಂತೆ ದೇಹವನ್ನು ಅರ್ಧಕ್ಕೆ ಸೀಳಿಸಿ ತುಂಡುತುಂಡಾಗಿ ಕತ್ತರಿಸಿ ಪಾರ್ಶ್ವದಲ್ಲಿದ್ದ ಬಿದಿರು ಬುಟ್ಟಿಯೊಳಗೆ ಹಾಕಿದನು. ಕರುಳನ್ನು ಬೇರೆಯಾಗಿ ತೆಗೆದು ತುಂಡುಗಳ ಮೇಲೆಸೆದನು.

ನೆಲದಮೇಲೆ ಬಿದ್ದಿದ್ದ ತಲೆಯನ್ನು ಜುಟ್ಟು ಹಿಡಿದೆತ್ತಿ ಅದಕ್ಕಾಗಿ ಸಿದ್ಧಗೊಳಿಸಿದ್ದ ತಂತಿಯ ಜಾಳಿಗೆಯಲ್ಲಿಟ್ಟು, ಕಾದುನಿಂತಿದ್ದ ಅಶ್ವಾರೋಹಿ ಭಟನಿಗೆ ಕೊಟ್ಟನು. ಭಟನು ಅದನ್ನು ಕಲ್ಯಾಣದ ಕೋಟೆಯ ದಕ್ಷಿಣ ಮಹಾದ್ವಾರದ ಮೇಲೆ ಕಟ್ಟಬೇಕಾಗಿತ್ತು.

ಭಟನು ಜಾಳಿಗೆಯನ್ನು ತೆಗೆದುಕೊಂಡು ಒಳಗಿದ್ದ ತಲೆಯ ಕಡೆಗೆ ದೃಷ್ಟಿಹಾಯಿಸಿದನು. ಅದರ ಕಣ್ಣುಗಳು ಚಲಿಸಿ ನೆಟ್ಟದೃಷ್ಟಿಯಿಂದ ತನ್ನನ್ನೇ ನೋಡುತ್ತಿರುವಂತೆ ಕಂಡಿತು. ತುಟಿಗಳು ಅಲುಗಿ ಮಂತ್ರೋಚ್ಚಾರಣೆಯ ಸುಳುಹು ಅಸ್ಫುಟವಾಗಿ ಕೇಳಿಸಿತು. ಭಟನು ಬೆಚ್ಚಿ ಜಾಳಿಗೆಯನ್ನು ಬಟ್ಟೆಯಿಂದ ಮುಚ್ಚಿ, ಕುದುರೆಯ ಮೇಲೆ ಹಾರಿ ಕುಳಿತು ಕಡಿವಾಣಗಳನ್ನು ಸಡಿಲ ಬಿಟ್ಟನು. ಕುದುರೆ ನಾಗಾಲೋಟದಿಂದ ಕೋಟೆಯ ದಕ್ಷಿಣದ ಬಾಗಿಲ ಕಡೆ ಓಡಿತು.

ಚಾಲುಕ್ಯ ಧರ್ಮಾಧಿಕರಣದ ಹೆಸರಿನಲ್ಲಿ ನಡೆದ ಈ ಅಮಾನುಷ ಹತ್ಯೆಯಿಂದ ವಧಾಪೀಠ ರಕ್ತಮಯವಾಗಿತ್ತು. ವಧಕನ ಕೈಕಾಲು ತೋಳುಗಳು ರಕ್ತದಿಂದ ಕೆಂಪಾಗಿದ್ದವು. ವಧೆಯಲ್ಲಿ ಉಪಯೋಗಿಸಿದ ಕತ್ತಿಯನ್ನು ಬಟ್ಟೆಯನ್ನು ಸುತ್ತಿ ಕಂಕುಳಲ್ಲಿ ಇಟ್ಟುಕೊಂಡು, ಮುಖ ಕಾಣದಂತೆ ಹಚ್ಚಡವನ್ನು ಹೊದೆದು ವಧಕನು ಸದ್ದಿಲ್ಲದೆ ಅಲ್ಲಿಂದ ಸರಿದನು.

ಕಡಿದ ದೇಹದ ತುಂಡುಗಳಿದ್ದ ಬಿದಿರು ಬುಟ್ಟಿಯನ್ನು ಅರಣ್ಯಕ್ಕೊಯ್ದು ನಾಯಿ ನರಿಗಳಿಗೆ ಹಂಚುವುದು ಬೇರೊಬ್ಬ ವಧಕನ ಕಾರ್ಯವಾಗಿತ್ತು.

ಎಂಟು ಜನ ಸೈನಿಕರ ಸಣ್ಣ ದಳವೊಂದನ್ನು ವಧಾಸ್ಥಾನದ ಕಾವಲಿಗೆ ಬಿಟ್ಟು ಮುಖ್ಯಸೈನ್ಯ ದಳಬದ್ಧವಾಗಿ ಆ ಅಭಿಶಪ್ತ ಪ್ರದೇಶವನ್ನು ಬಿಡುತ್ತಿದ್ದಂತೆ ಮಾಧವ ದಂಡನಾಯಕನೂ ಮುಖವಾಡ ಧರಿಸಿದ್ದ ಯೋಧನೂ ರಥವನ್ನು ಹತ್ತಿದರು. ರಥ ಚಲಿಸಿತು.

ಯೋಧನು ಮುಖವಾಡವನ್ನು ತೆಗೆದಿಟ್ಟು ದುಗುಡದ ದನಿಯಿಂದ, "ವೈದಿಕ ವರ್ಣಧರ್ಮದ ರಕ್ಷಣೆಗಾಗಿ ಇಷ್ಟೆಲ್ಲ ಘೋರ ನಡೆಯಬೇಕಾಗಿತ್ತೆ ಎಂದು ಈಗ ನನಗೆ ಸಂದೇಹವಾಗುತ್ತಿದೆ," ಎಂದು ಹೇಳಿ ನಿಟ್ಟುಸಿರಿಟ್ಟನು.

ಯೋಧನ ಮೇಲೆ ಅನುಕಂಪದ ದೃಷ್ಟಿ ಬೀರಿ ಮಾಧವ ದಂಡನಾಯಕನು, "ರಾಜಪುರೋಹಿತರಾದ ನಿಮಗೆ ಈ ಕಾತರತೆ ಸಲ್ಲದು, ಕ್ರಮಿತರೆ. ಯೋಧ

ವೇಷದಲ್ಲಿಯೂ ನೀವು ಕರ್ಮಠ ಬ್ರಾಹ್ಮಣರಾಗಿಯೇ ಉಳಿದಿದ್ದೀರಿ. ಸಂದೇಹಗ್ರಸ್ತರಾಗಿ ನಾವು ಕಾರ್ಯ ನಡೆಸಿದರೆ ಏನನ್ನು ಸಾಧಿಸಲೂ ಶಕ್ತರಾಗುವುದಿಲ್ಲ. ಇದು ಪ್ರಾರಂಭ ಮಾತ್ರ. ಶರಣಧರ್ಮದ ವಿನಾಶಕ್ಕಾಗಿ ಇಂತಹ ಅನೇಕ ಘೋರಗಳಿಗೆ ನಾವು ಸಿದ್ಧರಾಗಬೇಕಾಗುತ್ತದೆ," ಎಂದು ಕಟಕಿಯಾಡಿದನು.

ತುಸುಹೊತ್ತು ರಥದಲ್ಲಿ ಮೌನ. ಆಮೇಲೆ ಕ್ರಮಿತನು, "ಶರಣಧರ್ಮದ ಮೇಲೆ ನಿಮಗೆ ಇಷ್ಟೊಂದು ವಿದ್ವೇಷವೇಕೆ?" ಎಂದು ಕೇಳಿದನು.

"ಕಸಪಯಾದಿ ದುರ್ಮಂತ್ರಿಗಳಿಂದ ಗಳಕುಳವಾದ ರಾಜ್ಯವನ್ನು ಅಳವಡಿಸಿ, ಅರಸೊತ್ತಿಗೆಯಲ್ಲಿ ಕಲಚೂರ್ಯರನ್ನು ಪ್ರತಿಷ್ಠಿಸಲು ನಾನು ಪಣತೊಟ್ಟಿದ್ದೇನೆ," –ಎಂದು ಮಾಧವ ದಂಡನಾಯಕನು ಉತ್ತರಿಸಿದನು. ಆರು ವರ್ಷಗಳ ಹಿಂದೆ ಬಸವಣ್ಣನವರು ಬಿಜ್ಜಳನ ಮಂತ್ರಿಯಾಗಿದ್ದಾಗ ಪ್ರಚಾರದಲ್ಲಿದ್ದ "ಕಸಪಯ" ಎಂಬ ಹೆಸರನ್ನು ಅವನು ಆಗಲೂ ಮರೆತಿರಲಿಲ್ಲ.

* * *

ಬಿಜ್ಜಳನೊಡನೆ ಸಂದರ್ಶನ ಮುಗಿಸಿಕೊಂಡು ಲಾವಣ್ಯವತಿ ಮಹಮನೆಗೆ ಹಿಂದಿರುಗಿದಾಗ ನಾಗಲಾಂಬೆ ಎದುರಾಗಿ, "ಇಷ್ಟು ಹೊತ್ತಾದರೂ ಬರಲಿಲ್ಲವೆಂದು ನಿನಗಾಗಿ ಕಾತರಗೊಂಡಿದ್ದೆ, ಲಾವಣ್ಯ. ಹೋದ ಕಾರ್ಯವೇನಾಯಿತು?" ಎಂದು ಕೇಳಿದನು.

ಲಾವಣ್ಯವತಿ ಮುಸುಕು ತೆಗದು ಮುಖದ ಮೇಲಿನ ಸುಟ್ಟ ಗಾಯವನ್ನು ತೋರಿಸಿದಳು.

"ಏಕೆ! ಏನಾಯಿತು?" –ನಾಗಲಾಂಬೆ ಕಾತರದಿಂದ ಕೇಳಿದಳು.

ಲಾವಣ್ಯವತಿ ಹೇಳಿದಳು : "ಬೆಂಕಿಯನ್ನು ಮುಟ್ಟಲು ಹೋದವರು ಕೈಸುಟ್ಟುಕೊಳ್ಳದೆ ಹಿಂದಿರುಗುವರೆ, ಅಕ್ಕಾ? ಬಿಜ್ಜಳರಾಯರು ಸಂತೆಯ ಹರದರಂತೆ ಚೌಕಾಸಿಗೆ ಪ್ರಾರಂಭಿಸಿದರು. ಮೊದಲಲ್ಲಿ ಅವರು ಮೂವರಲ್ಲಿ ನಾನು ಆರಿಸುವ ಇಬ್ಬರನ್ನು ಬಿಡುಗಡೆ ಮಾಡುವುದಾಗಿ ಹೇಳಿದರು. ನಾನು ನಿರಾಕರಿಸಿದೆ. ಕೊನೆಗೆ ಮೂವರನ್ನೂ ಬಿಡುವುದಾಗಿ ಹೇಳಿದರು. ಆದರೆ ಅದಕ್ಕೆ ಅವರು ಕೇಳಿದ ಬೆಲೆ, ನಾನು ಕೊಡುವಂತಹುದಾಗಿರಲಿಲ್ಲ, ಶರಣರು ಮೆಚ್ಚುವಂತಹುದಾಗಿರಲಿಲ್ಲ. ನಿರಾಶೆಯಿಂದ ಬರಿಗೈಯಲ್ಲಿ ಹಿಂದಿರುಗಿದೆ."

ನಾಗಲಾಂಬೆ ಮುಂದೆ ಪ್ರಶ್ನಿಸಲಿಲ್ಲ. ವಾಸಗೃಹಕ್ಕೆ ಕರೆದುಕೊಂಡು ಹೋಗಿ, ಸುಟ್ಟ ಗಾಯಗಳಿಗೆ ಎಣ್ಣೆ ಹಚ್ಚಿ "ನೀನು ಇಲ್ಲಿಯೇ ಕೊಂಚ ಹೊತ್ತು ವಿಶ್ರಮಿಸಿ ಕೊಳ್ಳುತ್ತಿರು, ಲಾವಣ್ಯ. ಯಾರು ಬಂದು ತೊಂದರೆ ಕೊಡದಂತೆ ಹೇಳುತ್ತೇನೆ,"

ಎಂದು ಬಾಗಿಲು ಮುಚ್ಚಿ ಹೊರಗೆ ಹೋದಳು.

ಆರೋಗಣೆಗೆ ಕರೆಯಲು ಪುನಃ ನಾಗಲಾಂಬೆ ಅಲ್ಲಿಗೆ ಬಂದಾಗ, ಲಾವಣ್ಯವತಿ ನಿದ್ದೆ ಮಾಡುತ್ತಿದ್ದಳು. ಎಚ್ಚರಗೊಳಿಸದೆ ದೊಡ್ಡ ಬಟ್ಟಲೊಂದರಲ್ಲಿ ಹಾಲು ತುಂಬಿ ಮಂಚದ ಬಳಿಯಿಟ್ಟು ಹೊರಗೆ ಹೋದಳು.

ಎಲ್ಲ ಕಡೆ ಸೂಚೀಭೇದ್ಯವಾದ ಗಭೀರ ತಮಂಧ. ನಡುವೆ ಪಂಜಿನ ಬೆಳಕಿನಲ್ಲಿ ಕಾಣುತ್ತಿದ್ದ ವಧಾಪೀಠ ರಕ್ತದಿಂದ ಕೆಂಪಾಗಿತ್ತು. ವಧಕನ ಕತ್ತಿಯ ಅಲಗು ಮಿಂಚಿನ ಲತೆಯಂತೆ ಮೇಲಿಂದ ಕೆಳಗೆ, ಕೆಳಗಿಂದ ಮೇಲೆ ಚಲಿಸುತ್ತಿತ್ತು. ವಧಕನು ಕಡಿದು ಕಡಿದು ಬುಟ್ಟಿಯಲ್ಲಿ ತುಂಬುತ್ತಿದ್ದ ಆ ಜಡವಸ್ತುವೇನು? ಕನಸಿನ ಮಾಯಾಲೋಕದಲ್ಲಿ ಅದನ್ನು ಗುರುತಿಸಲು ಅಸಮರ್ಥಳಾಗಿ ಲಾವಣ್ಯವತಿ ತಲೆಯೆತ್ತಿ ನೋಡಿದಳು.

ಮೇಲೆ ಎಲ್ಲ ಕಡೆ ಹರಡಿದ್ದ ಆ ಗಭೀರ ಸೂಚೀಭೇದ್ಯ ತಮಂಧದ ನಡುವೆ ದುಂಡಾದ ವಸ್ತುವೊಂದು ಬೆಳಗುತ್ತ ಕೈಯಾಡಿಸಿ ತನ್ನನ್ನು ಕರೆಯುತ್ತಿರುವಂತೆ ಲಾವಣ್ಯವತಿ ಭಾವಿಸಿದಳು. ಆ ವಸ್ತು ಶೀಲವಂತನ ತಲೆಯೆಂದು ತಿಳಿದಾಗ ಮೈ ನಡುಗಿ, ಹಣೆ ಬೆವರಿ, ತಟ್ಟನೆ ಎಚ್ಚರವಾಯಿತು.

ವಾಸಗೃಹದಲ್ಲಿ ಸಣ್ಣ ದೀಪವೊಂದು ಉರಿಯುತ್ತಿತ್ತು. ಹೊರಗಿನ ತೋಟದಲ್ಲಿ ಇರುಳ ಹಕ್ಕಿಯೊಂದು ಕೂಗಿತು. ಲಾವಣ್ಯವತಿ ಬಾಗಿಲು ತೆರೆದು ನಡುಮನೆ ಮೊಗಶಾಲೆಗಳನ್ನು ಹಾದು ಹೊರಗೆ ಹೋದಳು.

ಎಲ್ಲ ಕಡೆ ನೀರವ, ನಿಸ್ತಬ್ಧ! ಆಗಿನ ದಿನಗಳಲ್ಲಿ ಕಲ್ಯಾಣದ ಶರಣರಿಗೆ ತೆರೆದ ಬಾಗಿಲ ಅತಿಥಿಶಾಲೆಯಾಗಿದ್ದ ಮಹಮನೆಯಲ್ಲಿ ಯಾರೂ ಎಚ್ಚೆತ್ತಿರಲಿಲ್ಲ.

ತೋಟವನ್ನು ದಾಟಿ ಅವಳು ಮುಚ್ಚಿದ್ದ ಮಹಾದ್ವಾರದ ಪಾರ್ಶ್ವದಲ್ಲಿನ ದಿಡ್ಡಿ ಬಾಗಿಲನ್ನು ತೆರೆದುಕೊಂಡು ರಾಜಮಾರ್ಗದಲ್ಲಿ ನಿಂತಳು. ಆ ಅಂಧಕಾರದಲ್ಲಿ ಎಲ್ಲಿಗೆ ಹೋಗುವುದೆಂಬ ಅರಿವೂ ಅವಳಿಗಿರಲಿಲ್ಲ. ಕನಸಲ್ಲಿ ಕಂಡ ಶೀಲವಂತನ ಶಿರಸ್ಸನ್ನು ಹುಡುಕುತ್ತ, ಅದು ಯಾವ ದಿಸೆಯಲ್ಲಿ ಕಾಣಿಸಿತೆಂದು ಭಾವಿಸಿದ್ದಳೋ ಆ ದಿಸೆಯತ್ತ ನಡೆದಳು.

ಹೀಗೆ ಅವಳು ಮಹಮನೆಯಿಂದ ಹೊರಟು ಅರ್ಧ ಪ್ರಹರ ಕಾಲ ನಡೆದಮೇಲೆ ದೂರದಲ್ಲಿ ಬೆಂಕಿ ಉರಿಯುತ್ತಿರುವುದನ್ನು ಕಂಡಳು. ವಧಾಸ್ಥಾನದಲ್ಲಿ ಕಾವಲಿದ್ದ ಸೈನಿಕರು ಶಿಬಿರಾಗ್ನಿಯನ್ನು ರಚಿಸಿಕೊಂಡು ಸುತ್ತ ಕುಳಿತಿದ್ದರು. ವಧಾಪೀಠ ಶೂಲದ ಮರಗಳು ಆ ಬೆಳಕಿನಲ್ಲಿ ಮಸುಕುಮಸುಕಾಗಿ ಕಾಣುತ್ತಿದ್ದವು.

ಶಿಬಿರಾಗ್ನಿಯ ಹಿಂದಿನ ಕಡೆಯಿಂದ ಲಾವಣ್ಯವತಿ ವಧಾಸ್ಥಾನವನ್ನು ಪ್ರವೇಶಿಸಿ

ವಧಾಪೀಠದ ಬಳಿ ನಿಂತಳು. ಶೂಲಕ್ಕೇರಿಸಿದ ದೇಹಗಳು ಅಸ್ಫುಟವಾಗಿ ಕಾಣುತ್ತಿದ್ದವು. ಅವು ಯಾರ ದೇಹಗಳೆಂಬುದನ್ನು ಗುರುತು ಹಿಡಿಯುವುದು ಸಾಧ್ಯವಿರಲಿಲ್ಲ. ಆದರೂ ಪತಿಪ್ರಾಣೆಯಾದ ಹೆಣ್ಣಿಗೆ ಸಹಜವಾದ ಜಾಣ್ಮೆಯಿಂದ ಲಾವಣ್ಯವತಿ ಅರಿತಳು, ಅವು ತನ್ನ ತಂದೆ ಮಾವಂದಿರ ದೇಹಗಳೆಂದು, ಶಿಲವಂತನ ದೇಹವಲ್ಲವೆಂದು.

ಹಾಗಾದರೆ ಶೀಲವಂತ ಏನಾದರು? ವಧಾಪೀಠದ ಮೇಲೆ ಹೆಪ್ಪುಗಟ್ಟಿದ್ದ ರಕ್ತದಕಲೆಗಳಿಂದ ತನ್ನ ಪತಿಯ ಘೋರ ಅಂತ್ಯವನ್ನು ಲಾವಣ್ಯವತಿ ಊಹಿಸಿದಳು.... ದೇಹವೇನಾಯಿತು?.... ಅಂತ್ಯಸಂಸ್ಕಾರಕ್ಕಾಗಿ ಭಟರು ತೆಗೆದುಕೊಂಡು ಹೋಗಿರಬಹುದೆ?.....

ದುಃಖಾವೇಗದಿಂದ ಅವಳು ವಧಾಪೀಠದ ಮೇಲೆ ತಲೆಯಿಟ್ಟು ಅಳುತ್ತಿದ್ದಂತೆ ಪೀಠದಡಿಯ ಮಣ್ಣಿನ ಮರೆಯಲ್ಲಿ ಯಾವುದೋ ವಸ್ತು ಮಿರುಗುತ್ತಿರುವುದನ್ನು ಕಂಡಳು. ಅದು ತನ್ನ ಪತಿಯ ಬೆರಳಲ್ಲಿದ್ದ ವಜ್ರದ ಉಂಗುರ. ಲಾವಣ್ಯವತಿ ಚಕಿತೆಯಾಗಿ, ಕೈಯಿಂದ ಮಣ್ಣನ್ನು ಸರಿಸಿ, ಹುದುಗಿಸಿಟ್ಟಿದ್ದ ತೋಳೊಂದನ್ನು ಹೊರಗೆ ತೆಗೆದಳು. ಅದು ತನ್ನ ಪತಿಯ ತೋಳೆಂಬುದರಲ್ಲಿ ಅವಳಿಗೆ ಯಾವ ಸಂದೇಹವೂ ಉಳಿಯಲಿಲ್ಲ.

ವಧಕನು ಉಂಗುರದ ಆಸೆಯಿಂದ ಕಡಿದ ತೋಳನ್ನು ಮಣ್ಣಿನಲ್ಲಿ ಹುದುಗಿಸಿಟ್ಟು ಹೋಗಿದ್ದನು. ಸೈನಿಕರು ಹೋದಮೇಲೆ ಅಲ್ಲಿಗೆ ಬಂದು ಅದನ್ನು ತೆಗೆದುಕೊಳ್ಳುವುದು ಅವನ ಉದ್ದೇಶವಾಗಿತ್ತು. ತುಸುಹೊತ್ತಿನ ಮೊದಲು ಇನ್ನೊಬ್ಬ ವಧಕನು ದೇಹವಿದ್ದ ಬಿದಿರು ಬುಟ್ಟಿಯನ್ನು ಗಾಡಿಯಲ್ಲಿ ಅಡವಿಗೆ ಸಾಗಿಸಿದ್ದನು.

ಲಾವಣ್ಯವತಿ ತೋಳನ್ನು ಉಡಿಯಲ್ಲಿ ಅವಿಚಿಟ್ಟುಕೊಂಡು ಅಲ್ಲಿಂದ ಹೊರಟಳು. ತಂದೆ, ಪತಿ, ಮಾವ ಮೂವರೂ ಮೃತರಾದ ಮೇಲೆ ತಾನೇಕೆ ಬದುಕಿರಬೇಕು ? ಪತಿಯ ತೋಳನ್ನು ಉಡಿಯಲ್ಲಿಟ್ಟುಕೊಂಡು ನೀರಿಗೆ ಬೀಳಲು ನಿರ್ಧರಿಸಿಕೊಂಡು ಅಲ್ಲಿಂದ ಹೊರಟಳು.

ಅವಳು ನಾಲ್ಕು ಹೆಜ್ಜೆ ಹೋಗುವಷ್ಟರಲ್ಲಿ ಶಿಬಿರಾಗ್ನಿಯ ಸುತ್ತ ಕುಳಿತಿದ್ದ ಸೈನಿಕರು ಅವಳನ್ನು ನೋಡಿದರು. ಹೋ ! ಹೋ ! ಎಂದು ಕೂಗುತ್ತ ಅವರಲ್ಲಿಬ್ಬರು ಲಾವಣ್ಯವತಿಯ ಕಡೆ ಧಾವಿಸಿದರು.

ಲಾವಣ್ಯವತಿ ಸೈನಿಕರನ್ನು ಕಂಡು ಬೆದರಿದಳು. ಬೇಟೆಗಾರನನ್ನು ಕಂಡ ಜಿಂಕೆಯಂತೆ ಓಡಿದಳು. ಕೊಂಚ ದೂರ ಹೋಗಿ ಅವಳು ಎಡವಿ ಬಿದ್ದಾಗ, ಸೈನಿಕರು ಹತ್ತಿರ ಬಂದು ಕೈಯಲ್ಲಿದ್ದ ಬಲ್ಲೆಯುಗಳಿಂದ ಅವಳನ್ನು ಬಲವಾಗಿ ಇರಿದರು. ಅನುಮತಿಯಿಲ್ಲದೆ ವಧಾಸ್ಥಾನಕ್ಕೆ ಬರುವವರು ಯಾರೇ ಆಗಲಿ,

ಕೂಡಲೆ ಅವರನ್ನು ವಧಿಸತಕ್ಕದ್ದೆಂದು ಮಾಧವ ದಂಡನಾಯಕನು ಸೈನಿಕರಿಗೆ ಕಟ್ಟಾಜ್ಞೆ ಮಾಡಿದ್ದನು.

ದಳದ ನಾಯಕನು ಪಂಜುಹಿಡಿದ ಮತ್ತೊಬ್ಬ ಸೈನಿಕನೊಡನೆ ಅಲ್ಲಿಗೆ ಬಂದಾಗ ಲಾವಣ್ಯವತಿ ಮೃತಳಾಗಿದ್ದಳು. ಬಲ್ಲೆಯಗಳ ಗಾಯದಿಂದ ರಕ್ತ ಹರಿದಿತ್ತು.

"ಹೆಂಗಸೊಬ್ಬಳನ್ನು ತಡೆದು ನಿಲ್ಲಿಸಲು ನಿಮ್ಮಿಂದಾಗಲಿಲ್ಲವೆ?"–ದಳದ ನಾಯಕನು ಅಸಮಾಧಾನದಿಂದ ಸೈನಿಕರನ್ನು ಕೇಳಿದನು.

"ಕತ್ತಲಲ್ಲಿ ಹೆಂಗಸೆಂದು ನಮಗೆ ತಿಳಿಯಲಿಲ್ಲ, ಒಡೆಯರೆ." –ಸೈನಿಕರು ತಲೆಬಾಗಿ ಉತ್ತರ ಕೊಟ್ಟರು. ತಮ್ಮ ಅವಸರದ ಬೀಭತ್ಸಕ ವರ್ತನೆಯಿಂದ ಅವರಿಗೆ ಲಜ್ಜೆಯಾಗಿತ್ತು.

'ಹೆಣ್ಣು ಶರಣೆಯಂತಿದೆ. ಶೂಲಕ್ಕೇರಿಸಲ್ಪಟ್ಟವರ ಬಂಧುವಾಗಿರಬೇಕು. ಸುದ್ದಿ ಕೇಳಿ ನೋಡಲು ಬಂದವಳು ಸೈನಿಕರ ಅವಿವೇಕಕ್ಕೆ ಬಲಿಯಾದಳು. ಈ ವಿಚಾರ ಮಾಧವ ದಂಡನಾಯಕರಿಗೆ ತಿಳಿದರೆ ಏನು ಹೇಳುವರು ? ತಿಳಿಯದಂತೆ ದೇಹವನ್ನು ಮುಚ್ಚಿಡುವುದು ಸಾಧ್ಯವೆ?' –ಎಂದು ದಳದ ನಾಯಕನು ಯೋಚಿಸುತ್ತಿದ್ದಂತೆ ಮಾಚಿದೇವರ ನೇತೃತ್ವದಲ್ಲಿ ಶರಣರ ತಂಡವೊಂದು ಅಲ್ಲಿಗೆ ಬಂದಿತು.

ದಳದ ನಾಯಕನು ಹೆಣ್ಣಿನ ವಿಚಾರವನ್ನು ಮರೆತು, "ನಿಲ್ಲಿರಿ! ಅಲ್ಲಿಯೆ ನಿಲ್ಲಿರಿ!" ಎಂದು ಕೂಗಿ ಹೇಳಿ ತಂಡದ ಕಡೆ ಹೋದನು.

ಶರಣರು ನಿಂತರು. ವಧೆಯ ದಂಡಾಜ್ಞೆ ಕಾರ್ಯಗತವಾದ ಸುದ್ದಿಯನ್ನು ಧರ್ಮಾಧಿಕರಣದಿಂದ ಅಧಿಕೃತವಾಗಿ ತಿಳಿದು, ದೇಹಗಳನ್ನು ಸಂಸ್ಕಾರಕ್ಕಾಗಿ ತೆಗೆದುಕೊಂಡು ಹೋಗಲು ಅವರು ಬಂದಿದ್ದರು. ವಧಾಸ್ಥಾನಕ್ಕೆ ಅತಿಕ್ರಮ ಪ್ರವೇಶ ಮಾಡುವ ಉದ್ದೇಶ ಅವರಿಗಿರಲಿಲ್ಲ.

ದಳದ ನಾಯಕನು ಬರುತ್ತಲೇ ಮಾಚಿದೇವರು ಧರ್ಮಾಧಿಕರಣದ ಅನುಮತಿ ಪತ್ರವನ್ನು ಕೊಟ್ಟು, "ನಾವು ದೇಹಗಳಿಗಾಗಿ ಬಂದಿದ್ದೇವೆ," ಎಂದರು.

ದಳದ ನಾಯಕನು ಮಾಚಿದೇವರೊಡನೆ ಪ್ರತ್ಯೇಕವಾಗಿ, "ನಿಮಗೆ ದೇಹಗಳನ್ನು ಒಪ್ಪಿಸುವುದಕ್ಕಾಗಿಯೆ ನಾವಿಲ್ಲಿ ಕಾವಲಿದ್ದಾಗ ಒಂದು ಅಚಾತುರ್ಯ ನಡೆಯಿತು, ಹೆಣ್ಣೊಬ್ಬಳು ಕಳ್ಳತನದಿಂದ ವಧಾಸ್ಥಾನಕ್ಕೆ ಬಂದಾಗ ಕತ್ತಲಲ್ಲಿ ಯಾರೆಂದು ತಿಳಿಯದೆ ನಮ್ಮ ಸೈನಿಕರು ಅವಳನ್ನು ಇರಿದು ಕೊಂದರು," ಎಂದು ಹೇಳಿ ಲಾವಣ್ಯವತಿಯ ದೇಹವನ್ನು ತೋರಿಸಿದನು.

ಅವಳಾರೆಂಬುದನ್ನು ಮಾಚಿದೇವರು ಕೂಡಲೆ ತಿಳಿದರು. ಆದರೆ ಪರಿಚಯ ಹೇಳುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದು ಭಾವಿಸಿ, "ಹೆಣ್ಣು ಮೃತರ ಬಂಧು. ದೇಹವನ್ನು ನಮಗೊಪ್ಪಿಸಿದರೆ ಸಂಸ್ಕಾರ ನಡೆಸುತ್ತೇವೆ," ಎಂದರು.

"ಬೇರೆ ದೇಹಗಳೊಡನೆ ನೀವು ಇದನ್ನೂ ತೆಗೆದುಕೊಂಡು ಹೋಗಬಹುದು. ಆದರೆ ಹೆಂಗಸು ಎಲ್ಲಿ, ಹೇಗೆ ಸತ್ತಳೆಂಬುದನ್ನು ನೀವು ರಹಸ್ಯವಾಗಿಡಬೇಕು."

ಮಾಚಿದೇವರು ಒಪ್ಪಿಕೊಂಡರು. ಆಗಿನ ವಿಷಮ ಪರಿಸ್ಥಿತಿಯಲ್ಲಿ ಮಾಧವ ದಂಡನಾಯಕನ ಸೇನಾದಳದೊಡನೆ ಘರ್ಷಣೆ ಪ್ರಾರಂಭಿಸುವ ಉದ್ದೇಶ ಅವರಿಗಿರಲಿಲ್ಲ.

ಆಮೇಲೆ ಶರಣರು ಶೂಲದ ಮರಕ್ಕೆ ಕಟ್ಟಿದ್ದ ಹಗ್ಗಗಳನ್ನು ಬಿಚ್ಚಿ ದೇಹಗಳನ್ನು ಕೆಳಗಿಳಿಸಿದರು. ಭಕ್ತಿಯ ಮೃದುಹಸ್ತದಿಂದ ಕೊರಳನ್ನು ಬಿಗಿದಿದ್ದ ಕುಣಿಕೆಯನ್ನು ಸಡಲಿಸಿ, ಬಿರಿಗಣ್ಣುಗಳನ್ನು ಮುಚ್ಚಿ, ಮಧುವರಸ ಹರಳಯ್ಯಗಳನ್ನು ಸಿದ್ಧವಾಗಿದ್ದ ಚಟ್ಟಗಳ ಮೇಲಿಟ್ಟರು. ಅಲ್ಲಿದ್ದ ಬಿದಿರು ಹಗ್ಗಗಳಿಂದ ಲಾವಣ್ಯಗತಿಗೆ ಹೊಸ ಚಟ್ಟವನ್ನು ಕಟ್ಟಿದರು.

ಎಂದಿನಂತೆ ಸೂರ್ಯನ ಹೊಂಗಿರಣಗಳೂ ಆ ಪಾಪಮಯ ಕಲುಷಿತ ಪ್ರದೇಶವನ್ನು ಬೆಳಗುತ್ತಿದ್ದಂತೆ ಅವರು, ಬಿಜ್ಜಳನ ದುರಾಗ್ರಹದ ಮೊದಲ ಬಲಿಯಾದ ಆ ಮೂವರು ಹುತಾತ್ಮರ ದೇಹಗಳನ್ನು ಹೊತ್ತು ಅಲ್ಲಿಂದ ಹೊರಟರು.

ನಗರದ ದಕ್ಷಿಣಕ್ಕಿದ್ದ ರುದ್ರಭೂಮಿಯಲ್ಲಿ ಮೃತರ ಅಂತ್ಯಕರ್ಮಗಳು ನಡೆದವು. ಮಹಮನೆಯ ಶರಣಶರಣೆಯರೆಲ್ಲ ಮೃತರ ಅಂತ್ಯದರ್ಶನಕ್ಕಾಗಿ ಅಲ್ಲಿಗೆ ಬಂದಿದ್ದರು. ನಾಗಲಾಂಬೆ ನೀಲಲೋಚನೆಯರು ಲಾವಣ್ಯವತಿಯ ದೇಹವನ್ನು ತೊಳೆದು ಭಸ್ಮ ಬಿಲ್ವದಳಗಳು ಹರಡಿದ್ದ ಸಮಾಧಿಯಲ್ಲಿಟ್ಟರು. ನಾಗಲಾಂಬೆಯ ಸಲಹೆಯಂತೆ ಶೀಲವಂತನ ತೋಳನ್ನು ಅದೇ ಸಮಾಧಿಯಲ್ಲಿ, ಲಾವಣ್ಯವತಿಯ ಪಾರ್ಶ್ವದಲ್ಲಿಟ್ಟರು.

ಸಮಾಧಿಗಳು ರಚಿತವಾದ ಮೇಲೆ ಮಾಚಿದೇವರು, ಚೆನ್ನಬಸವಣ್ಣನವರು, ಮೋಳಿಗೆಯ ಮಾರಯ್ಯನವರು, ಪರೋಕ್ಷ ವಿನಯಕ್ಕಾಗಿ ಪ್ರಶಂಸೆಯ ನುಡಿಗಳನ್ನಾಡಿದರು.

ಆ ಸಂದರ್ಭದಲ್ಲಿ ಮೋಳಿಗೆಯ ಮಾರಯ್ಯನವರು ಹೇಳಿದುದನ್ನು ಶರಣರು ಮುಂದೆಂದೂ ಮರೆಯಲಿಲ್ಲ :

"ಜಾತಿ ಪಂಥಗಳ ಭಿನ್ನಭೇದಗಳನ್ನು ನಿರ್ಮೂಲಗೊಳಿಸಿ, ಜನತೆಯಲ್ಲಿ

ಶಿವಭಕ್ತಿ ಭಾವೈಕ್ಯತೆಗಳನ್ನು ಸಾಧಿಸುವುದು ಶರಣಧರ್ಮದ ಮುಖ್ಯೋದ್ದೇಶವೆಂದು ನಾನು ತಿಳಿದಿದ್ದೇನೆ. ಮಧುವರಸ ಹರಳಯ್ಯಗಳು ವರ್ಣಧರ್ಮದ ಎರಡು ಧೃವಗಳು. ಆ ಎರಡು ಧೃವಗಳನ್ನು ಒಂದೇ ಸೂತ್ರದಿಮದ ಬಂಧಿಸಿ, ಶತಮಾನಗಳಿಂದ ಒಂದು ವರ್ಣ ಇನ್ನೊಂದು ವರ್ಣದ ಮೇಲೆ ನಡೆಸುತ್ತಿರುವ ಅನ್ಯಾಯ ಅತ್ಯಾಚಾರಗಳನ್ನು ತೊಡೆದು ಹಾಕಲು ಬಸವಣ್ಣನವರು ಪ್ರಯತ್ನಿಸಿದರು. ಶೀಲವಂತ ಲಾವಣ್ಯವತಿಯರ ಪತಿಪ್ರೇಮ ಸತೀಧರ್ಮಗಳು ಧೃವತಾರೆಗಳಾಗಿ ಬೆಳಗಲಿ.

"ಅಗ್ರಜ–ಅಂತ್ಯಜ, ವರ್ಣಧರ್ಮದ ಎರಡು ಧೃವಗಳು ;
ಒಂದು ಉತ್ತರ, ಇನ್ನೊಂದು ದಕ್ಷಿಣ. ನಡುವೆ ದೊಡ್ಡ ಕಮರಿ !
ಅನುರಾಗದ ಗಾಳಿಬೀಸಿ, ಪ್ರೇಮಸೂತ್ರ ಬಂಧಿಸಿತ್ತು ಎರಡನ್ನು.
ಅಗ್ರಜನ ಪುತ್ರಿ ಅಂತ್ಯಜನಣುಗನ ಕೈ ಹಿಡಿದಳು.
ಸಾಧಿಸಿತ್ತು ಮಾನವತೆಯ ಮಹಾಸಿದ್ಧಿ ಶರಣರಲ್ಲಿ,
ನಿಃಕಲಂಕ ಮಲ್ಲಿಕಾರ್ಜುನಾ ! ನೋಡಿ ಬೆರಗಾದೆ ನಾನು !"
–ಎಂದು ಅವರು ಭಾಷಣ ಮುಗಿಸಿದ್ದರು.

* * * *

# ೫. ರಾಜಗೃಹದಿಂದ ಹೊನ್ನಮ್ಮನ ಚಾವಡಿಗೆ

ಆಮೇಲಿನ ಎರಡು ವಾರಗಳು ಅನುಭವಮಂಟಪದ ಇತಿಹಾಸದಲ್ಲಿ ಎಂದಿಗೂ ಮರೆಯದ ಚರಿತ್ರಾರ್ಹ ದಿನಗಳಾಗಿ ಪರಿಣಮಿಸಿದವು. ಮಂಗಳವೇಡೆಯಲ್ಲಿ ಚಾಲುಕ್ಯರಾಣಿ ಕಾಮೇಶ್ವರಿದೇವಿಯ ಮೇಲೆ ಬಿಜ್ಜಳನು ನಡೆಸಿದ ರಹಸ್ಯ ಅತ್ಯಾಚಾರ ಅಗ್ನಿದಾಹದಲ್ಲಿ ಪರ್ಯವಸಾನವಾಗಿ, ಅದರ ಕಿಡಿಗಳು ಕಲ್ಯಾಣಕ್ಕೆ ಹಾರಿ ಹೊನ್ನಮ್ಮನ ಚಾವಡಿಯ ದುರಂತದಲ್ಲಿ ಮುಕ್ತಾಯವಾಯಿತು.

ಮುಂದಿನ ದಿನಗಳಲ್ಲಿ ಸಂಪಾದನೆ ಕಾಲಜ್ಞಾನಗಳ ರಚನೆಗಾಗಿ ಪರಿಶ್ರಮಿಸಿದ ಶರಣಕವಿಗಳು ಐತಿಹಾಸಿಕ ದೃಷ್ಟಿಯನ್ನು ಬೆಳೆಸಿಕೊಂಡಿದ್ದರೆ,

"ಮಂಗಳವೇಡೆಯ ಅಗ್ನಿದಾಹವೆ ಪ್ರಣತೆಯಾಗಿ,
ಹರಳಯ್ಯ ಮಧುವರಸ ಶೀಲವಂತರ ರಕ್ತವೆ
ಕೆಂಬಣ್ಣದ ಎಣ್ಣೆಯಾಗಿ,
ಚಾಲುಕ್ಯರಾಜ್ಯ ಪ್ರತಿಷ್ಠೆಯ ಬತ್ತಿಯ ಹಚ್ಚಿದರು, ನೋಡಾ !
ಉರಿದಿತ್ತು ಪ್ರಜ್ವಲಿಸಿ, ಹರಡಿತ್ತು ನಾಲ್ದೆಸೆಗೆ !
ದೀಪಕೆಳೆಸಿದ ಶಲಭದಂತೆ ಆ ಉರಿಯಲ್ಲಿ
ಅಳಿದನು ಬಿಜ್ಜಳನು ಭಸ್ಮವಾಗಿ," –ಎಂದು ಬರೆಯುತ್ತಿದ್ದರು.

ಆದರೆ ಭಾರತೀಯರ ದೃಷ್ಟಿಯಲ್ಲಿ ರಾಜಕೀಯ ಘಟನೆಗಳ ಪಟ್ಟಿಯಾಗಿರಲಿಲ್ಲ ಇತಿಹಾಸ. ರಾಜ್ಯದ ಸಂಸ್ಕೃತಿ ಸಮನ್ವಯಗಳೇ ಇತಿಹಾಸವೆಂದು ಅವರು ತಿಳಿದಿದ್ದರು. ಅಂತೆಯೇ ಶರಣಕವಿಗಳು ರಾಜಕೀಯ ಘಟನೆಗಳನ್ನು ಉಪೇಕ್ಷಿಸಿ ಸಾಂಸ್ಕೃತಿಕ ಇತಿಹಾಸವನ್ನು ಚರಿತ್ರೆ ಪುರಾಣಗಳಾಗಿ ಚಿತ್ರಿಸಿದರು.

ವಧಾಪೀಠದ ಅಮಾನುಷ ದಾನವೀ ಘಟನೆಗಳು ಮುಗಿದ ಮಾರನೆಯ ದಿನ ಅನುಭವಮಂಟಪದಲ್ಲಿ ಶರಣರ ಸಭೆ ನಡೆದು ಮಧುವರಸನ ಅಂತ್ಯ ಸಂದೇಶದ ಪಾಠವಾಯಿತು. ಆ ಸಂದರ್ಭದಲ್ಲಿ ಸಭೆಯಲ್ಲಿದ್ದ ವೃದ್ಧ ಜವರಾಯ ಆ ದಿನವೇ ಕಲ್ಯಾಣವನ್ನು ಬಿಟ್ಟು ಚಾಲುಕ್ಯರಾಜ್ಯದ ಐಹೊಳೆಯ ಸಮೀಪದಲ್ಲಿದ್ದ

ತನ್ನ ಸ್ವಗ್ರಾಮಕ್ಕೆ ಹೋದವನು ಪುನಃ ಕಲ್ಯಾಣಕ್ಕೆ ಹಿಂದಿರುಗಲಿಲ್ಲ.

ಮಧುವರಸನ ಸಂದೇಶ ಶರಣರಿಗೆ ಸ್ಫೂರ್ತಿದಾಯಕವಾಯಿತು. ಶರಣಧರ್ಮದ ರಕ್ಷಣೆಗೆ ಮುಂದೇನು ಮಾಡಬೇಕೆಂಬ ವಿಚಾರವಾಗಿ ಕೆಲವು ನಿರ್ಣಯಗಳು ಅಂಗೀಕರಿಸಲ್ಪಟ್ಟವು, ಶರಣರು ಕಲ್ಯಾಣವನ್ನು ಬಿಟ್ಟು ನೆರೆಹೊರೆಯ ರಾಜ್ಯಗಳಿಗೆ ವಲಸೆ ಹೋಗುವುದು, ಅನುಭವಮಂಟಪದಲ್ಲಿ ಸಂಗ್ರಹವಾಗಿದ್ದ ಗ್ರಂಥಭಂಡಾರವನ್ನು ಸುರಕ್ಷಣೆಗಾಗಿ ಸಹ್ಯಾದ್ರಿ ಮಧ್ಯದ ಉಳಿವೆಗೆ ಕಳುಹಿಸುವುದು, ಅನುಭಾವಿ ಶರಣರ ಸಾಧನೆ ಸಹಜೀವನಗಳಿಗಾಗಿ ಪುರಾಣಪ್ರಸಿದ್ಧವಾದ ನೈಮಿಷಾರಣ್ಯದ ಮಾದರಿಯಲ್ಲಿ ಉಳಿವೆಯ ಸಮೀಪದ ಅರಣ್ಯದಲ್ಲಿ ಆಶ್ರಮವನ್ನು ಸ್ಥಾಪಿಸುವುದು, ಶರಣಧರ್ಮದ ಪ್ರಸಾರ ಮತ್ತು ಶರಣರ ರಕ್ಷಣೆಗಾಗಿ ಮಾಚಿದೇವರ ನೇತೃತ್ವದಲ್ಲಿ ಗಣಾಚಾರದ ಜಂಗಮದಳಗಳನ್ನು ರಚಿಸುವುದು, ಇವೇ ಆ ನಿರ್ಣಯಗಳು.

ಶರಣಧರ್ಮದ ಮೂಲತತ್ವಗಳಲ್ಲಿ ಒಂದಾದ ಅಹಿಂಸಾಧರ್ಮದ ವಿವೇಚನಾತ್ಮಕ ವಿಶ್ಲೇಷಣೆ ಸಭೆಯಲ್ಲಿ ನಡೆದು, ಆತ್ಮರಕ್ಷಣೆಗಾಗಿ ಆಯುಧಗಳನ್ನು ಧರಿಸುವುದು, ಸ್ವಧರ್ಮ ಸ್ವರಾಜ್ಯಗಳಿಗಾಗಿ ಹೋರಾಡುವುದು, ಅಹಿಂಸಾ ತತ್ವಕ್ಕೆ ವಿರುದ್ಧವಲ್ಲವೆಂಬ ಅಭಿಪ್ರಾಯಕ್ಕೆ ಮನ್ನಣೆ ದೊರೆಯಿತು.

ಅಧ್ಯಕ್ಷತೆ ವಹಿಸಿದ್ದ ಸಕಲೇಶಮಾದರಸರ ಆದೇಶದಂತೆ ಈ ನಿರ್ಣಯಗಳನ್ನು ಚಾಲುಕ್ಯರಾಜ್ಯದ ಎಲ್ಲ ಶೈವಮಠಗಳಿಗೆ, ಶರಣರ ಸಂಘ ಸಂಸ್ಥೆ ಸಮಾಜಗಳಿಗೆ, ಪ್ರಮುಖ ಶರಣರಿಗೆ ಶೃತಪಡಿಸಲು ಮಾಚಿದೇವರು ವಿಶೇಷ ದೂತರನ್ನು ಕಳುಹಿಸಿದರು. ಈ ಎಲ್ಲ ಘಟನೆಗಳ ವರದಿಯನ್ನು ತೆಗೆದುಕೊಂಡು ಹಡಪದ ಅಪ್ಪಣ್ಣನು ಕೂಡಲ ಸಂಗಮಕ್ಕೆ ಬಸವಣ್ಣನವರ ಬಳಿಗೆ ಹೋದನು.

ಗೂಢಚಾರರಿಂದ ಬಿಜ್ಜಳನು ಈ ವಿಷಯಗಳನ್ನು ತಿಳಿದನು. ಕೂಡಲೆ ಅವನು ಚೆನ್ನಬಸವಣ್ಣನವರನ್ನು ಕರೆಸಿಕೊಂಡು, “ಇದೇನು ನಿಮ್ಮ ಯೋಜನೆ? ಶರಣರನ್ನು ತಪ್ಪು ದಾರಿಗೆಳೆಯುತ್ತಿದ್ದೀರಿ ನೀವು!” ಎಂದು ಜಂಕಿಸಿ ನುಡಿದನು.

“ಶರಣರನ್ನು ಸರಿಯಾದ ದಾರಿಯಲ್ಲಿ ನಡೆಸಲು ನಾನು ಪ್ರಯತ್ನಿಸುತ್ತಿದ್ದೇನೆ. ಎಲ್ಲಿ ಪ್ರಜಾರಕ್ಷಕನಾದ ಅರಸು ಪ್ರಜಾಪೀಡಕನಾಗುವನೋ, ಎಲ್ಲಿ ಧರ್ಮಾಧಿಕರಣದ ನ್ಯಾಯಪೀಠ ವಧಾಪೀಠವಾಗುವದೋ ಅಲ್ಲಿ ಶರಣರಿಗೆ ಸ್ಥಾನವಿಲ್ಲ. ಅದರಿಂದ ನಾವು ಕಲ್ಯಾಣವನ್ನು ತ್ಯಜಿಸುತ್ತಿದ್ದೇವೆ,” –ಎಂದು ಚೆನ್ನಬಸವಣ್ಣನವರು ದೃಢಕಂಠದಿಂದ ಗಂಭೀರವಾಗಿ ಉತ್ತರ ಕೊಟ್ಟರು.

ಬಿಜ್ಜಳನು ಚಕಿತನಾದನು. ಮಧುವರಸ ಹರಳಯ್ಯಗಳ ಕ್ಷಮಾಯಾಚನೆಗಾಗಿ

ಬಂದಿದ್ದ ಆ ವಿನಯಭೂಷಣ ಮಂತ್ರಿಯೆಲ್ಲಿ? ಪಂಜರ ಬದ್ಧವಾದ ಸಿಂಹದಂತೆ ಗರ್ಜಿಸುವ ಈ ಶರಣಪ್ರತಿನಿಧಿಯೆಲ್ಲಿ? ಕೆಲವೇ ದಿನಗಳ ಅಂತರದಲ್ಲಿ ಇಷ್ಟೊಂದು ಪರಿವರ್ತನೆ ಸಾಧ್ಯವೆ? ಎಂದು ಅವನಿಗೆ ಆಶ್ಚರ್ಯವಾಯಿತು.

"ನಮ್ಮಿಂದ ಶರಣರಿಗಾದ ಹಾನಿಯೇನು? ರಾಜ್ಯದ ಇತರ ಪ್ರಜೆಗಳಂತೆಯೇ ನಾವು ಅವರನ್ನು ನಡೆಸಿಕೊಳ್ಳುತ್ತಿದ್ದೇವೆ," ಎಂದು ಬಿಜ್ಜಳನು ನಯವಾಡಿದನು.

ಚೆನ್ನಬಸವಣ್ಣನವರು ಹೇಳಿದರು : "ಬಸವಣ್ಣನವರ ನಿರ್ವಾಸನ, ವಿಚಾರಣೆ ನಡೆಸದೆ ಮಧುವರಸ ಹರಳಯ್ಯ ಶೀಲವಂತರನ್ನು ಶೂಲಕ್ಕೇರಿಸಿದ್ದು, ಇವು ಶರಣರ ವಿರುದ್ಧ ನಡೆದ ಹಿಂಸಾಕ್ರಿಯೆಗಳಲ್ಲವೆ? ಶರಣಧರ್ಮದ ಆಜನ್ಮಶತೃವಾದ ಮಾಧವ ದಂಡನಾಯಕನನ್ನು ಮಹಾಸೇನಾನಿಯಾಗಿ ನಿಯಮಿಸಿ ಕಲ್ಯಾಣ ನಗರದ ರಕ್ಷಣೆಯನ್ನು ಅವನಿಗೆ ಒಪ್ಪಿಸಿರುವುದು ಶರಣರ ಮೇಲೆ ನಡೆಯಲಿರುವ ದಬ್ಬಾಳಿಕೆಯ ಉಗ್ರರೂಪವನ್ನು ಸೂಚಿಸುವುದಲ್ಲವೆ? ಈಗಲೂ ಶರಣರು ಜಾಗ್ರತರಾಗದೆ ಹೋದರೆ, ಎಂದಿನಂತೆ ಮುಂದೆಯೂ ನಾವು ಕಲ್ಯಾಣದಲ್ಲಿ ಸುಖದ ಬಾಳ್ವೆ ನಡೆಸುವೆವೆಂದು ಭಾವಿಸಿದರೆ, ಅದು ಆತ್ಮಘಾತದಷ್ಟೇ ಅವಿವೇಕ. ಶರಣರ ನಿರ್ಧಾರ ಚಲಿಸುವುದಿಲ್ಲ. ಪ್ರಭುಗಳು ದಯಮಾಡಿ ಕಲ್ಯಾಣವನ್ನು ಬಿಡಲು ಅನುಮತಿ ಕೊಡಬೇಕಾಗಿ ಬೇಡುತ್ತೇನೆ."

ಬಿಜ್ಜಳನು ಯೋಚಿಸಿ ಉತ್ತರ ಕೊಟ್ಟನು : "ನೀವು ಪ್ರಭುತ್ವದ ಮೇಲೆ ಮಾಡುವ ಈ ಆಪಾದನೆಗಳನ್ನು ನಾನು ನಿರಾಕರಿಸುತ್ತೇನೆ. ತಮ್ಮ ನಿರ್ವಾಸನಕ್ಕೆ ಬಸವಣ್ಣನವರೇ ಕಾರಣರು. ಪ್ರಭುತ್ವದ ನಿಬಂಧನೆಗಳಿಗೊಪ್ಪಿ ಅವರು ಕಲ್ಯಾಣದಲ್ಲಿರ ಬಹುದಾಗಿತ್ತು. ಮಧುವರಸಾದಿಗಳು ಧರ್ಮಾಧಿಕರಣದ ನಿಬಂಧನೆಯಂತೆ ಶಿಕ್ಷೆಗೊಳಗಾದರು. ತೀರ್ಪನ್ನು ಕಾರ್ಯಗತ ಮಾಡುವುದು ಪ್ರಭುತ್ವದ ಹೊಣೆ. ಈ ಸಾಮಾನ್ಯ ಘಟನೆಗಳನ್ನು ಶರಣರ ಮೇಲಿನ ದಬ್ಬಾಳಿಕೆಯೆಂದು ತಿಳಿದು ನೀವು ಕಲ್ಯಾಣವನ್ನು ಬಿಟ್ಟು ಹೋಗುವುದು ನಮಗೆ ಅಸಮ್ಮತ. ನಮ್ಮ ವಿಶೇಷ ಅನುಮತಿಯಿಲ್ಲದೆ ಶರಣರಾರೂ ಕಲ್ಯಾಣವನ್ನು ಬಿಡಲಾಗದು. ನಗರದ ಕಾವಲು ಪಡೆಗಳನ್ನು ಹೆಚ್ಚಿಸುವಂತೆ ಇಂದೇ ಮಾಧವ ನಾಯಕರಿಗೆ ಆಜ್ಞೆಮಾಡುತ್ತೇನೆ."

ಈ ದರ್ಪದ ನುಡಿಗಳೊಡನೆ ಸಂದರ್ಶನ ಮುಗಿಸುವುದು ಬಿಜ್ಜಳನ ಉದ್ದೇಶವಾಗಿತ್ತು. ಆದರೆ ಚೆನ್ನಬಸವಣ್ಣನವರು ಅದಕ್ಕೆ ಅವಕಾಶ ಕೊಡಲಿಲ್ಲ. "ನಮ್ಮ ವಲಸೆಯ ದಿನ ಗೊತ್ತಾಗಿದೆ. ಸಿದ್ಧತೆಗಳು ನಡೆಯುತ್ತಿವೆ. ನಮ್ಮನ್ನು ತಡೆಯುವುದು ಯಾರಿಗೂ ಸಾಧ್ಯವಲ್ಲ. ಇನ್ನುಳಿದಿರುವ ಕೆಲವೇ ದಿನಗಳ ಅವಧಿಯಲ್ಲಿ ಪ್ರಭುಗಳ ಅಭಿಪ್ರಾಯ ಬದಲಾದರೆ ಒಳ್ಳೆಯದು, ನಿಮ್ಮ ಮಂತ್ರಿಮಂಡಲದ

ಸದಸ್ಯನಾಗಿ ಮಿತ್ರನಂತೆ ನಾನು ಈ ಸಲಹೆ ಕೊಡುತ್ತಿದ್ದೇನೆ," ಎಂದು ಹೇಳಿ ವಂದಿಸಿ ಅಲ್ಲಿಂದ ನಿರ್ಗಮಿಸಿದರು.

ಈ ಉದ್ಧಟ ಜಂಗಮನ ಬಂಧನಕ್ಕೆ ಆಜ್ಞೆ ಮಾಡಲೇ ಎಂದು ಬಿಜ್ಜಳನು ಯೋಚಿಸಿದನು. ಪ್ರತಿಕ್ಷಣದಲ್ಲಿ, "ಮಹಮನೆಯ ಸುತ್ತ ಸೈನಿಕರ ಕಾವಲಿಡುತ್ತೇನೆ. ಇವರು ನನ್ನಿಂದ ಹೇಗೆ ತಪ್ಪಿಸಿಕೊಂಡು ಹೋಗುವರೋ ನೋಡೋಣ !" ಎಂದು ಸುಮ್ಮನಾದನು.

ಸಂದರ್ಶನದ ವಿವರಗಳನ್ನು ಕೇಳಿದ ಮಾಚಿದೇವರು, "ವಲಸೆಗೆ ಬಿಜ್ಜಳನ ಅನುಮತಿ ಕೋರಿದುದು ಉಚಿತವೇ ಎಂದು ನನಗೆ ಸಂದೇಹವಾಗುತ್ತಿದೆ, ಚೆನ್ನ ಬಸವಣ್ಣನವರೇ. ಅನುಮತಿ ನಿರಾಕರಿಸಿದರೆ ಮುಂದೇನು ಮಾಡುವುದು?" ಎಂದು ಪ್ರಶ್ನಿಸಿದರು.

ಚೆನ್ನಬಸವಣ್ಣನವರು ಹೇಳಿದರು : "ಅನುಮತಿ ದೊರಕಲಿ, ದೊರಕದಿರಲಿ, ನಮ್ಮ ನಿರ್ಧಾರ ಚಲಿಸುವುದಿಲ್ಲ. ಮೊದಲೆ ಗೊತ್ತಾದಂತೆ ನಾವು ಕಲ್ಯಾಣವನ್ನು ಬಿಡುವುದು ಖಂಡಿತ. ಬಿಜ್ಜಳನ ಸೈನಿಕರಿಗೆ ನಮ್ಮನ್ನು ತಡೆಯುವ ಶಕ್ತಿಯಿದೆಯೇ ಎಂಬುದನ್ನು ಮುಂದೆ ನೋಡಬೇಕಾಗಿದೆ. ನಾವು ಮಡಿವಾಳ ಮಾಚಿದೇವರ ರಕ್ಷಣೆಯಲ್ಲಿ ಹೋಗುತ್ತಿರುವೆವೆಂಬುದನ್ನು ಅವರು ತಿಳಿಯಲಿ."

ಚೆನ್ನಬಸವಣ್ಣನವರು ತಮ್ಮಲ್ಲಿಟ್ಟ ಅನನ್ಯ ವಿಶ್ವಾಸವನ್ನು ಕಂಡು ಮಾಚಿದೇವರು ಸಂತುಷ್ಟರಾದರು. ಗಂಭೀರಭಾವದಿಂದ ದನಿಯೆತ್ತಿ ಅವರು ಹೇಳಿದರು :

"ನಮ್ಮ ಪ್ರಮಥಗಣಂಗಳು ಉಳಿವೆಯ ಮಹಾಮನೆಗೆ
ಹೋಹ ಪರಿಯಂತ ಒಬ್ಬರನು ಬಿಟ್ಟೆನಾದೊಡೆ,
ನನ್ನ ಕೈಯಲಿರ್ಪ ವೀರಭದ್ರ ರಣವಿಜಯವೆಂಬ ಖಡ್ಗ
ಉರಿದೇಳುತ್ತ ಸಿಡಿದುಹೋಗದೆ?
ನನ್ನ ಕೈಯಲಿರ್ಪ ಕಾಲಾಗ್ನಿ ರುದ್ರವೆಂಬ ಮುರಿಗೆಯು
ಅಳವಾಡಿ ನಗದೆ?
ಕಾಲಕರ್ಮಂಗಳ ಗಂಡನೆಂಬ ಸುರಿಗೆಯು ಎನ್ನೆದೆಯಲ್ಲಿ
ಹಾಯ್ದು ಬೆನ್ನಲ್ಲಿ ಒಡಮೂಡದೆ?
ಪರವಾದಿಗಳ ಗಂಡನೆಂಬ ಪದದ ಬಾವುಲಿಯ ಬೊಂಬೆಯ
ತೊಡರು ಭಂಗಿಸುತ್ತ ಹೋಗದೆ?
ಎನ್ನ ಕರ್ಣದಲ್ಲಿದ್ದ ಲಿಂಗಾಂಗವೆಂಬ ಘಂಟೆ
ಬಿದ್ದುಹೋಗದೆ, ಅಯ್ಯಾ,
ಕಲಿದೇವರ ಸಾಕ್ಷಿಯಾಗಿ, ಚೆನ್ನಬಸವಣ್ಣಾ !"

ಗಣಾಚಾರಿ ಜಂಗಮದಳದ ಉದ್ಬೋಧನೆಗೆಂದು ಹೊಸದಾಗಿ ತಾವೇ ರಚಿಸಿದ ಈ ವಚನವನ್ನು ಮಾಚಿದೇವರು ಪಠಿಸಿದಾಗ ಚೆನ್ನಬಸವಣ್ಣನವರ ಉತ್ಸಾಹ ಇಮ್ಮಡಿಸಿತು. ಅವರು ಅಂದೇ ಸಕಲೇಶಮಾದರಸರ ಅನುಮತಿ ಪಡೆದು, ಕಲ್ಯಾಣದ ಎಲ್ಲ ಶೈವಮಠಗಳಿಗೆ ಆಹ್ವಾನ ಕಳುಹಿಸಿದರು :

"ಮುಂದೆ ಕಲ್ಯಾಣದಲ್ಲಿ ಮಹಾ ಕದನವಾಗುವುದು,
ನೆತ್ತರ ಕೋಡಿ ಹರಿಯುವುದು. –ಅದು ಕಾರಣ,
ನಿಮ್ಮೆಲ್ಲರಿಗೆ ಸಾಷ್ಟಾಂಗ ನಮಸ್ಕಾರಮಂ ಮಾಡಿ
ವಿಭೂತಿ ವೀಳಯಗಳಂ ಮುಂದಿರಿಸಿ, ಕರಗಳ ಮುಗಿದು,
–ಎಲೈ ಸ್ವಾಮಿಗಳಿರಾ, ಉಳುವೆಯ ಮಹಾಮನೆಗೆ
ಪೋಪ ಪಯಣ ನಮಗಾಯಿತ್ತು. ನೀವು
ಸಂಗಡ ಚಿತ್ತೈಸುವುದು–ಎಂದು ಬೇಡುವೆವು,"

–ಎಂದು ಆಹ್ವಾನಪತ್ರ ಮುಗಿದಿತ್ತು.

ಸ್ನಾನ ಮಾಡಿ ಮಡಿಬಟ್ಟೆಗಳನ್ನು ಧರಿಸಿದ್ದ ಐನೂರು ಮಂದಿ ಗಣಾಚಾರದ ಜಂಗಮರು, ಕೈಯಲ್ಲಿ ತಾಂಬೂಲ ವಿಭೂತಿಗಳನ್ನು ಹಿಡಿದು ಕಲ್ಯಾಣದ ಸಾವಿರದೊಂದು ಜಂಗಮ ಮಠಗಳಿಗೆ ಆಹ್ವಾನ ಮುಟ್ಟಿಸಲು "ಹರಹರ ಮಹಾದೇವ!" ಎಂದು ಜಯಘೋಷ ಮಾಡುತ್ತ ಹೊರಟರು.

ವಲಸೆಯ ನಿಜವಾದ ಅರ್ಥ ಶರಣರ ದೃಷ್ಟಿಪಥದಿಂದ ಅಳಿಸಿ ಮಂಗಳ ಯಾತ್ರೆಯ ರೂಪತಾಳಬೇಕೆಂಬುದು ಮಾಚಿದೇವ ಚೆನ್ನಬಸವಣ್ಣನವರ ಉದ್ದೇಶವಾಗಿತ್ತು. ಸಂಪ್ರದಾಯಕ್ಕೆ ಅನುಗುಣವಾಗಿ ಈ ಕಾರ್ಯವನ್ನು ಮುಗಿಸಿ ಸಕಲೇಶ ಮಾದರಸರು, ಮಾಚಿದೇವರು, ಸೊಡ್ಡಳ ಬಾಚರಸರು, ಚೆನ್ನಬಸವಣ್ಣನವರು ಅನುಭವಮಂಟಪ ಓಲಗಶಾಲೆಯಲ್ಲಿ ಕುಳಿತಿದ್ದಾಗ ವಿದ್ಯಾರ್ಥಿ ವಟುವೊಬ್ಬನು ಅಲ್ಲಿಗೆ ಬಂದು, "ಮಂಗಳವೇಡೆಯಿಂದ ಅಪರಿಚಿತ ಭಕ್ತರೊಬ್ಬರು ಸಂದರ್ಶನಕ್ಕಾಗಿ ಬಂದಿದ್ದಾರೆ," ಎಂದು ಬಿನ್ನವಿಸಿಕೊಂಡನು.

ಮಂಗಳವೇಡೆಯಿಂದ! ಮಾಚಿದೇವರ ಕಿವಿಗಳು ನಿಮಿರಿದವು. "ಸಂಗಡ ಯಾರಿದ್ದಾರೆ ?" ಎಂದು ವಟುವನ್ನು ಕೇಳಿದರು.

"ಹೆಂಗಸೊಬ್ಬಳು, ಮತ್ತು ಐದಾರು ವರ್ಷಗಳ ಒಬ್ಬ ಬಾಲಕ."

ಅವರನ್ನು ಒಳಗೆ ಕರೆತರುವಂತೆ ಮಾಚಿದೇವರು ಹೇಳಿದರು.

ಶ್ರೀಮಂತ ಹರದನಂತೆ ಅಂಗಿ ಮುಂಡಾಸುಗಳನ್ನು ಧರಿಸಿದ್ದ ಮಧ್ಯವಯಸ್ಸಿನ ಒಬ್ಬ ಪುರುಷನೂ, ಶರಣೆಯಂತೆ ವಿಭೂತಿಯಿಟ್ಟು ತಲೆ ತುಂಬ ಮುಸುಕುಹಾಕಿದ್ದ

ಒಬ್ಬ ಹೆಂಗಸೂ, ಅವಳ ಕೈಹಿಡಿದಿದ್ದ ಐದಾರು ವರ್ಷದ ಒಬ್ಬ ತೇಜಸ್ವಿ ಬಾಲಕನೂ ಒಳಗೆ ಬಂದು ಕೈಮುಗಿದು ನಿಂತರು.

ಯಾರಿವರು?..... ಹಿಂದೆ ಎಲ್ಲಿಯೋ ನೋಡಿದಂತಿದೆ.......ಯಾರೆಂದು ನಿರ್ಧರಿಸಲಾರದೆ ಚೆನ್ನಬಸವಣ್ಣನವರು, "ನೀವು ಬಂದ ಕಾರ್ಯವೇನು?" ಎಂದು ಕೇಳಿದರು.

"ಅಣ್ಣನವರು ನನ್ನನ್ನು ಮರೆತಂತಿದೆ. ಚಾಲುಕ್ಯರಾಣಿ ಕಾಮೇಶ್ವರೀದೇವಿಯವರ ಮನೆಹೆಗ್ಗಡೆ ಅಗ್ಗಳನು ನಾನು. ದೇವಗಿರಿಯ ಶರಣಶಿಬಿರಕ್ಕೆ ರಾಣಿಯವರೊಡನೆ ತಮ್ಮ ಸಂದರ್ಶನಕ್ಕಾಗಿ ಬಂದಿದ್ದೆ," ಎಂದು ಅಗ್ಗಳನು ತನ್ನ ಪರಿಚಯ ಹೇಳಿದನು.

ಚೆನ್ನಬಸವಣ್ಣನವರ ಮುಖ ಸ್ವಾಗತದ ಮಿದುನಗೆಯಿಂದ ಅರಳಿತು. "ನೀವು ರಾಣಿಯವರ ಸಂಗಡ ಮಂಗಳವೇಡೆಗೆ ಹೋಗಿದ್ದಿರಲ್ಲವೆ. ಅಗ್ನಿ ಅಪಘಾತ ನಡೆದಾಗ ನೀವು ಅಲ್ಲಿಯೇ ಇದ್ದಿರಬೇಕು. ರಾಣಿಯ ಮನೆಹೆಗ್ಗಡೆ ಶ್ರೀಮಂತ ಹರದನಾದದ್ದು ಹೇಗೆ?" ಎಂದು ಅವರು ಅಗ್ಗಳನನ್ನು ಕೇಳಿದರು.

"ಅದೊಂದು ಹೃದಯವಿದ್ರಾವಕ ದುರಂತಕಥೆ. ಅಣ್ಣನವರು ಅನುಮತಿ ಕೊಟ್ಟರೆ ಹೇಳುತ್ತೇನೆ," ಎಂದು ಅಗ್ಗಳನು ಸಭೆಯಲ್ಲಿದ್ದವರ ಕಡೆ ನೋಡಿದನು.

ಚೆನ್ನಬಸವಣ್ಣನವರು ಇಂಗಿತವರಿತು, "ಇವರೆಲ್ಲರೂ ನಮ್ಮ ಆಪ್ತರು, ಅನುಭವ ಮಂಟಪದ ಆಧಾರಸ್ತಂಭಗಳಾದ ಮಹಾ ವಿಭೂತಿಗಳು. ಇವರೆದುರಿಗೆ ನೀವು ಯಾವ ರಹಸ್ಯವನ್ನಾಗಲಿ ಸಂಕೋಚವಿಲ್ಲದೆ ಹೇಳಬಹುದು," ಎಂದು ಅಗ್ಗಳನಿಗೆ ಅಲ್ಲಿದ್ದವರೆಲ್ಲರ ಪರಿಚಯ ಮಾಡಿಕೊಟ್ಟರು ; ಬಾಗಿಲುಗಳನ್ನು ಮುಚ್ಚಿ, ಒಳಗೆ ಯಾರನ್ನೂ ಬಿಡಲಾಗದೆಂದು ವಟುವಿಗೆ ಹೇಳಿ ಹೊರಗೆ ಕಳುಹಿಸಿದರು.

ಆಮೇಲೆ ಅಗ್ಗಳನು ಮಂಗಳವೇಡೆಯಲ್ಲಿ ನಡೆದ ಎಲ್ಲ ಘಟನೆಗಳನ್ನು ಅವರಿಗೆ ವಿವರಿಸಿ ಹೇಳಿದನು. ಆ ಘಟನೆಗಳಲ್ಲಿ ಕೆಲವನ್ನು ಅವನು ಕಣ್ಣಾರೆ ಕಂಡಿದ್ದನು. ಉಳಿದುದನ್ನು ಎದುರಿಗಿದ್ದವರಿಂದ ಕೇಳಿ ತಿಳಿದಿದ್ದನು. ಕವಿಗೆ ಸಹಜವಾದ ಜಾಣ್ಮೆಯಿಂದ ಅವನು ಎಲ್ಲವನ್ನೂ ವಿವರಿಸಿ ಕೊನೆಗೆ ಹೇಳಿದನು.–

"ಅಗ್ನಿ ಅಪಘಾತ ನಡೆದ ಹಿಂದಿನ ರಾತ್ರಿ ರಾಣಿಯವರು ಉಳಿದುಕೊಂಡಿದ್ದ ಅರಮನೆಯ ಬಿಡಾರದಲ್ಲಿ ಏನು ನಡೆಯಿತೆಂಬುದು ಯಾರಿಗೂ ತಿಳಿಯದು. ಅತಿಥಿ ಸತ್ಕಾರದ ಸದ್ವರ್ತನೆ ಶಿಷ್ಟಾಚಾರಗಳನ್ನು ಗಾಳಿಗೆ ತೂರಿ ಬಿಜ್ಜಳನು ರಾಣಿಯವರ ಬಿಡಾರಕ್ಕೆ ಹೋಗಿ ಶೀಲಭಂಗಕ್ಕೆ ಪ್ರಯತ್ನಿಸಿದುದಾಗಿ ಜನರಲ್ಲಿ ಹರಡಿರುವ ಸುದ್ದಿ ನಿಜವೇ ಸುಳ್ಳೇ ಎಂಬುದನ್ನು ಖಚಿತವಾಗಿ ತಿಳಿಯುವುದು ಈಗ ಸಾಧ್ಯವಲ್ಲ. ಆ ರಾತ್ರಿ ರಾಣಿಯವರು ಬಹಳ ಹೊತ್ತು ಹೊರಗಿನ

ಮೊಗಶಾಲೆಯಲ್ಲಿದ್ದು ಆಮೇಲೆ ಬಿಡಾರಕ್ಕೆ ಹಿಂದಿರುಗಿದರೆಂದೂ, ಆಗ ಅವರ ವಿಷಣ್ಣತೆಯ ನಡೆನುಡಿಗಳು ಯಾವುದೋ ಅತ್ಯಾಚಾರಕ್ಕೆ ಸಿಕ್ಕು ತಪ್ಪಿಸಿಕೊಂಡು ಬಂದವರ ನಡೆನುಡಿಗಳಂತಿದ್ದುವೆಂದೂ ಸಮೀಪದ ದಾಸಿ–ಉಷಾವತಿ ಹೇಳುತ್ತಾಳೆ. ರಾತ್ರಿ ಕಳೆದು ಬೆಳಕು ಹರಿಯುತ್ತಿದ್ದಂತೆ ರಾಣಿಯವರು ಜಗದೇಕಮಲ್ಲರಸರಿಗೆ ಸಂದೇಶವೊಂದನ್ನು ಉಷಾವತಿಗೆ ಪಾಠಮಾಡಿಸಿ, ಕುಮಾರ ಪ್ರೇಮಾರ್ಣವನನ್ನು ಅವಳ ರಕ್ಷಣೆಯಲ್ಲಿ ಹೊರಗೆ ಕಳುಹಿಸಿದರು. ಮುಂದೆ ರಾಣಿಯ ಉದ್ದೇಶವೇನೆಂಬುದು ದಾಸಿಗೆ ತಿಳಿಯದು. ಪಾನಶಾಲೆಯಿಂದ ತಪ್ಪಿಸಿಕೊಂಡು ಉದ್ಯಾನದಲ್ಲಿ ಅವಿತುಕೊಂಡಿದ್ದ ನಾನು ದಾಸಿಯನ್ನು ಹಿಂಬಾಲಿಸಿ ನಗರ ಮಧ್ಯದ ಯಾತ್ರಾಶಿಬಿರಕ್ಕೆ ಹೋದೆ. ಯಾತ್ರಾತಂಡದ ನಾಯಕನು ರಾಣಿಯವರ ಮುದ್ರೆಯುಂಗುರವನ್ನು ನೋಡಿ ನಮಗೆ ಆಶ್ರಯ ಕೊಟ್ಟನು. ಅವನ ಸಲಹೆಯಂತೆ ನಾನು ಈ ಹರದನ ವೇಷ ಧರಿಸಿದೆ. ಆ ಪ್ರಾತಃಕಾಲವೇ ನಾವು ಮಂಗಳವೇಡೆಯನ್ನು ಬಿಟ್ಟು ನಾಲ್ಕು ವಾರಗಳ ಅನಂತರ ನೆನ್ನೆ ಸಂಜೆ ಕಲ್ಯಾಣಕ್ಕೆ ಬಂದೆವು. ತೀರ್ಥಸ್ಥಾನಗಳಲ್ಲಿ ಕೆಲವು ದಿನಗಳು ಉಳಿದದ್ದರಿಂದ ಪಯಣ ತಡವಾಯಿತು. ಕುಮಾರ ಪ್ರೇಮಾರ್ಣವನನ್ನು ನಿಮ್ಮ ರಕ್ಷಣೆಗೊಪ್ಪಿಸಿ, ಅವನನ್ನು ಸುರಕ್ಷಿತವಾಗಿ ಕರ್ಹಾಡಕ್ಕೆ ವಿಜಯಾರ್ಕದೇವರ ಬಳಿಗೆ ಕಳುಹಿಸಬೇಕೆಂದು ರಾಣಿಯವರು ಬೇಡಿಕೊಳ್ಳುತ್ತಾರೆ.” –ಎಂದು ಅಗ್ಗಳನು ಕುಮಾರ ಪ್ರೇಮಾರ್ಣವನನ್ನು ಚೆನ್ನಬಸವಣ್ಣನವರ ಕಾಲುಗಳ ಮೇಲೆ ಹಾಕಿದನು. ಆಮೇಲೆ ಪ್ರೇಮಾರ್ಣವನು ಸಭೆಯಲ್ಲಿದ್ದವರೆಲ್ಲರ ಪಾದಗಳಿಗೆ ನಮಸ್ಕಾರ ಮಾಡಿದನು. ಮಾಚಿದೇವರು ಬಾಲಕನ ತಲೆಯನ್ನು ಆದರದಿಂದ ನೇವರಿಸಿ ಹತ್ತಿರ ಕುಳ್ಳಿರಿಸಿಕೊಂಡರು.

“ಅಗ್ನಿ ಅಪಘಾತ ನಡೆದದ್ದು ನೀವು ಮಂಗಳವೇಡೆಯನ್ನು ಬಿಟ್ಟ ದಿನವೇ ಅಲ್ಲವೆ?” –ತುಸು ಹೊತ್ತಿನ ಮೇಲೆ ಚೆನ್ನಬಸವಣ್ಣನವರು ಕೇಳಿದರು.

“ಆ ದಿನ ಮಧ್ಯಾಹ್ನ ಎಲ್ಲರೂ ವಿಜಯೋತ್ಸವದ ಮೆರವಣಿಗೆಗೆ ಹೋಗಿದ್ದಾಗ ಅಗ್ನಿ ಅಪಘಾತ ನಡೆದದ್ದು. ಆಗ ಬಿಡಾರದಲ್ಲಿ ಮಹಾರಾಣಿಯವರೊಬ್ಬರೇ ಇದ್ದರೆಂದು ಹೇಳುತ್ತಾರೆ. ಸುಟ್ಟು ಭಸ್ಮವಾಗಿದ್ದ ಒಂದು ದೇಹದ ಅಸ್ತಿಗಳು ಮಾತ್ರ ಅವಶೇಷದಲ್ಲಿ ಸಿಕ್ಕವು, ಬಿಜ್ಜಳರಾಯರು ಅದನ್ನು ಕುಂಭದಲ್ಲಿಟ್ಟು ಕರ್ಹಾಡಕ್ಕೆ ಕಳುಹಿಸಿದರಂತೆ,”

–ಎಂದು ಅಗ್ಗಳನು ಉತ್ತರ ಕೊಟ್ಟನು.

“ರಾಣಿಯ ಪರಿವಾರದವರೇನಾದರು?

“ಬಿಜ್ಜಳನು ಕುಂಭದೊಡನೆ ಅವರನ್ನು ಕರ್ಹಾಡಕ್ಕೆ ಕಳುಹಿಸಿದುದಾಗಿ ಹೇಳುತ್ತಾರೆ.”

"ಜಗದೇಕಮಲ್ಲರಸರಿಗೆ ರಾಣಿಯವರು ಕಳುಹಿಸಿದ ಸಂದೇಶವೇನೆಂಬುದನ್ನು ನಾವು ತಿಳಿಯಬಹುದೆ?" –ಈ ಸಾರಿ ಮಾಚಿದೇವರು ಕೇಳಿದರು.

"ಜಗದೇಕಮಲ್ಲರಸರಿಗೆ ತಿಳಿಸುವ ಮೊದಲು ಸಂದೇಶದ ನುಡಿಗಳನ್ನು ರಹಸ್ಯವಾಗಿಟ್ಟಿರಬೇಕೆಂದು ರಾಣಿಯವರು ಹೇಳಿದ್ದಾರೆ. ಸಂದೇಶವೇನೆಂಬುದು ನನಗೆ ಕೂಡ ತಿಳಿಯದು," ಎಂದು ಹೇಳಿ ಅಗ್ಗಳನು ಅದುವರೆಗೆ ಮೌನವಾಗಿ ದೂರದಲ್ಲಿ ನಿಂತಿದ್ದ ಉಷಾವತಿಯನ್ನು ಕರೆದನು. ಅವಳು ಹತ್ತಿರ ಬಂದು ಸಭೆಯಲ್ಲಿದ್ದವರಿಗೆ ನಮಸ್ಕಾರಮಾಡಿ, "ಜಗದೇಕಮಲ್ಲರಸರಿಗೆ ರಹಸ್ಯವಾಗಿ ಸಂದೇಶ ಮುಟ್ಟಿಸಬೇಕೆಂದೂ, ಅದುವರೆಗೆ ಆ ವಿಚಾರ ಯಾರಿಗೂ ತಿಳಿಯಬಾರದೆಂದೂ ರಾಣಿಯವರು ಹೇಳಿದ್ದರು. ಅದರಂತೆ ನಡೆಯಲು ನಿಮ್ಮ ಅನುಮತಿ ಬೇಡುತ್ತೇನೆ," ಎಂದಳು.

"ನಿನ್ನ ಸ್ವಾಮಿನಿಷ್ಠೆ ಪ್ರಶಂಸಾರ್ಹವಾಗಿದೆ, ತಂಗಿ. ಅದರಂತೆ ನಡೆಯಲು ಸಮರ್ಥಳಾಗು," ಎಂದು ಹೇಳಿ ಚೆನ್ನಬಸವಣ್ಣನವರು ಅಗ್ಗಳನ ಕಡೆ ತಿರುಗಿ, "ಈಗ ಕಲ್ಯಾಣದಲ್ಲಿ ಶರಣರ ಪ್ರತಿಷ್ಠೆ ಗೌರವಗಳು ರಾಣಿಯವರು ಭಾವಿಸಿದಷ್ಟು ಸಮರ್ಪಕವಾಗಿಲ್ಲ. ಬಿಜ್ಜಳರಾಯರ ದುರಾಗ್ರಹ ದಬ್ಬಾಳಿಕೆಗಳಿಂದ ತಪ್ಪಿಸಿಕೊಳ್ಳಲು ನಾವು ಕಲ್ಯಾಣವನ್ನು ಬಿಡಲು ಯೋಚಿಸಿದ್ದೇವೆ. ಈ ಸಂಕಟದಲ್ಲಿ ಚಾಲುಕ್ಯ ವಂಶೀಯನಾದ ಬಾಲಕನೊಬ್ಬನನ್ನು ಶತೃಗಳಿಂದ ರಕ್ಷಿಸಲು ನಾವು ಸಮರ್ಥರಾಗುವೆವೇ ಎಂಬುದು ಸಂದೇಹ. ಆದರೂ ಶರಣು ಬಂದವರನ್ನು ಪ್ರಾಣಪಣವಾಗಿಯಾದರೂ ರಕ್ಷಿಸುವುದು ನಮ್ಮ ಕರ್ತವ್ಯ. ಮುಂದೇನು ಮಾಡಬೇಕೆಂಬುದನ್ನು ನಿರ್ಧರಿಸುವವರೆಗೆ ನೀವು ರಹಸ್ಯವಾಗಿ ಮಹಮನೆಯಲ್ಲಿರಬೇಕಾಗುವುದು," ಎಂದು ಹೇಳಿದರು.

"ನಾವು ಅಣ್ಣನವರ ಸಲಹೆಯಂತೆ ನಡೆದುಕೊಳ್ಳುತ್ತೇವೆ." ಎಂದನು ಅಗ್ಗಳ.

"ನೀವು ಕಲ್ಯಾಣಕ್ಕೆ ಬಂದ ವಿಚಾರ ಬಿಜ್ಜಳರಾಯರಿಗೆ ತಿಳಿದಿದೆಯೆ?"

"ಬಿಜ್ಜಳರಾಯರ ವಿಶೇಷ ಅನುಮತಿ ಪಡೆದು ನಮ್ಮ ಯಾತ್ರಾತಂಡ ಪ್ರವಾಸ ಮಾಡುತ್ತಿರುವುದರಿಂದ ನಗರ ರಕ್ಷಕರು ನಮ್ಮ ಗಾಡಿಗಳನ್ನು ಹುಡುಕಲಿಲ್ಲ. ಅನುಮತಿ ಪತ್ರದಲ್ಲಿ ಕಾಣಿಸಿದ್ದ ಸಂಖ್ಯೆಗಿಂತ ಮೂವರು ಹೆಚ್ಚಿಗಿದ್ದರೆಂದು ಅವರಿಗೆ ತಿಳಿಯದು."

ಬಾಲಕನೊಡನೆ ಪಿಸುದನಿಯಲ್ಲಿ ಮಾತಾಡುತ್ತಿದ್ದ ಮಾಚಿದೇವರು ನಡುವೆ ಬಂದು ಹೇಳಿದರು : "ಎಂತಹ ಚಾಣಾಕ್ಷ ವಿಶ್ವಾಸಘಾತುಕ ರಾಜಕಾರಿಣಿಯೊಡನೆ ನಾವು ವ್ಯವಹರಿಸುತ್ತಿರುವೆವೆಂಬುದನ್ನು ಮರೆತಿದ್ದೀರಿ, ಚೆನ್ನಬಸವಣ್ಣನವರೆ. ಮಂಗಳ

ವೇಡೆಯಿಂದ ಅದೃಶ್ಯನಾದ ಚಾಲುಕ್ಯರಾಜ್ಯದ ಉತ್ತರಾಧಿಕಾರಿ ಬಾಲಕನು ಕಲ್ಯಾಣಕ್ಕೆ ಬಂದನೆಂಬುದನ್ನು ಬಿಜ್ಜಳನ ಗೂಢಚಾರರು ತಿಳಿಯಲು ಹೆಚ್ಚು ತಡವಾಗುವುದಿಲ್ಲ. ಈ ಪರಿಸ್ಥಿತಿಯಲ್ಲಿ ನಾವು ಈ ಬಾಲಕನನ್ನು ಮಹಮನೆಯಲ್ಲಿಟ್ಟುಕೊಳ್ಳುವುದು ಅಪಘಾತಕ್ಕೆ ಆಹ್ವಾನವಿತ್ತಂತೆ. ಅಗ್ಗಳದೇವರು ಒಪ್ಪುವುದಾದರೆ ನಾನು ಈಗಲೆ ಈ ಬಾಲಕನನ್ನು ನಗರಕ್ಕೆ ಸಮೀಪವಿರುವ ಒಂದು ರಹಸ್ಯ ಸ್ಥಾನಕ್ಕೆ ಕಳುಹಿಸುತ್ತೇನೆ. ಅಲ್ಲಿ ಬಾಲಕನು ಸುರಕ್ಷಿತವಾಗಿ ಎರಡು ದಿನಗಳು ವಿಶ್ರಮಿಸಿಕೊಳ್ಳಲಿ. ಕರ್ಹಾಡದ ಯಾತ್ರೆಗೆ ಏರ್ಪಡಿಸಲು ನಮಗೆ ಅವಕಾಶವಾಗುವುದು."

ಅಗ್ಗಳ ಉಷಾವತಿಯರು ಇದಕ್ಕೊಪ್ಪಿದರು. ಆದರೆ ಪರಿಚಯವಿಲ್ಲದ ಜನರೊಡನೆ ಹೋಗಲು ಬಾಲಕನು ನಿರಾಕರಿಸಿದರೇನು ಮಾಡುವುದು? ಅಗ್ಗಳನು ಈ ಸಮಸ್ಯೆಯ ಪರಿಹಾರವನ್ನು ಯೋಚಿಸುತ್ತಿದ್ದಂತೆ ಉಷಾವತಿ ಚತುರತೆಯಿಂದ ಪ್ರೇಮಾರ್ಣವನನ್ನು ಒಪ್ಪಿಸಿದಳು.

ಆ ದಿನ ಮುಂಜಾವಿನಲ್ಲಿ ಸಮೀಪದ ಗ್ರಾಮದಿಂದ ಮಹಮನೆಗೆ ಬೇಕಾದ ಕಾಯಿಪಲ್ಲೆಗಳನ್ನು ತಂದಿದ್ದ ಗ್ರಾಮಸ್ಥರು ಮಧ್ಯಾಹ್ನ ಹಿಂದಿರುಗಿದಾಗ ಅವರ ಸಂಗಡಿದ್ದ ಮೂವರು ಬಾಲಕರಲ್ಲಿ ಒಬ್ಬನು ಚಾಲುಕ್ಯರಾಣಿ ಕಾಮೇಶ್ವರಿಯ ಮಗನೆಂಬುದನ್ನು ಯಾರೂ ತಿಳಿಯುವಂತಿರಲಿಲ್ಲ. ಬಾಲಕನು ತೊಟ್ಟಿದ್ದ ಮಾಸಿದ ಅಂಗಿ ಚಲ್ಲಣಗಳು, ಕೊಳೆ ತುಂಬಿ ಕಂಗೆಟ್ಟಿದ್ದ ಮುಖ, ಇವುಗಳು ಅವನು ಗ್ರಾಮವಾಸಿ ಎಂಬುದನ್ನು ಸ್ಪಷ್ಟಗೊಳಿಸಿತ್ತು.

ಉಷಾವತಿಯ ಪ್ರಸಾದನ ನೈಪುಣ್ಯ, ರಾಜಕುಮಾರನನ್ನು ಹಳ್ಳಿಗಾಡಿನ ಬಾಲಕನನ್ನಾಗಿ ಮಾಡಿತ್ತು.

* * *

ತಾನು ಕಲ್ಯಾಣದಲ್ಲಿಲ್ಲದಿದ್ದಾಗ ರಾಜಗೃಹದಲ್ಲಿ ಏನು ನಡೆಯಿತು? ಜಂಗಮ ವೇಷದಲ್ಲಿ ಜಗದೇಕಮಲ್ಲನ ಧರ್ಮೋಪದೇಶಿಯಾಗಿದ್ದ ಬೊಮ್ಮರಸ ಅರ್ಥಾತ್ ಬ್ರಹ್ಮೇಂದ್ರ ಶಿವಯೋಗಿಯೂ, ಅವರ ಶಿಷ್ಯ ಬ್ರಹ್ಮಶಿವ ಪಂಡಿತನೂ ಏನಾದರು? ಈ ವಿಷಯಗಳೊಂದೂ ಅಗ್ಗಳನಿಗೆ ತಿಳಿಯದು.

ಯಾತ್ರಾಶಿಬಿರದಿಂದ ಬಾಡಿಗೆಯ ರಥದಲ್ಲಿ ಮಹಮನೆಗೆ ಬರುತ್ತಿದ್ದಾಗ ನಾಗರಿಕರ ಕಾತರದೃಷ್ಟಿ, ಸಂಯತ ವರ್ತನೆಗಳಿಂದ ಕಲ್ಯಾಣದ ರಾಜಕೀಯ ಪರಿಸ್ಥಿತಿಯಲ್ಲಿ ತಲೆದೋರಿದ್ದ ವಿಚಿತ್ರ ಪರಿವರ್ತನೆಯನ್ನು ಅವನು ತಿಳಿದನು. ಕಲ್ಯಾಣವನ್ನು ಬಿಟ್ಟು ದಕ್ಷಿಣಕ್ಕೆ ವಲಸೆ ಹೋಗುವ ಶರಣರ ನಿರ್ಧಾರವನ್ನು ಚೆನ್ನಬಸವಣ್ಣನವರು ತಿಳಿಸಿದಾಗ ಅವನು ನಿಜವಾಗಿ ಚಕಿತನಾಗಿದ್ದನು. ಕೆಲವೇ

ವಾರಗಳಲ್ಲಿ ಪರಿಸ್ಥಿತಿ ಇಷ್ಟೊಂದು ಕೆಡುವುದೆಂದು ಅವನು ನಿರೀಕ್ಷಿಸಿರಲಿಲ್ಲ.

"ಈ ಎಲ್ಲ ಕಾರಣಗಳಿಂದ ಜಗದೇಕಮಲ್ಲರಸರನ್ನು ನೋಡುವುದು ಸಾಧ್ಯವಾಗದೆ ಹೋದರೆ ಮುಂದೇನು ಮಾಡುವುದು?" ಎಂದು ಯೋಚಿಸುತ್ತ ಅಗ್ಗಳನು, ಮರುದಿನ ಮಧ್ಯಾಹ್ನ ಮಹಮನೆಯ ಅತಿಥಿಶಾಲೆಯಲ್ಲಿ ಕುಳಿತಿದ್ದಾಗ ಮಾಚಿದೇವರು ಅಲ್ಲಿಗೆ ಬಂದು "ಕರ್ಹಾಡಕ್ಕೆ ಹೋಗಲು ರಕ್ಷಕರನ್ನು ಗೊತ್ತು ಮಾಡಿದ್ದೇನೆ. ಅವರು ಜನ ಸಂಚಾರವಿಲ್ಲದ ಅರಣ್ಯ ಮಾರ್ಗಗಳಿಂದ ಪ್ರಯಾಣಮಾಡಿ ಪ್ರೇಮಾರ್ಣವನನ್ನು ಒಂದೇ ವಾರದಲ್ಲಿ ಮಾವನ ಮನೆ ಸೇರಿಸುವರು. ರಾಣಿಯ ದಾಸಿ ಸಿದ್ಧವಾಗಿದ್ದರೆ ನಾಳೆಯೇ ಹೊರಡಬಹುದು," ಎಂದು ಹೇಳಿದರು.

"ಅಣ್ಣನವರು ತಮ್ಮ ಹೊಣೆ ನಿರ್ವಹಿಸಿದಂತಾಯಿತು. ಆದರೆ ಜಗದೇಕಮಲ್ಲರಸರನ್ನು ನೋಡದೆ ದಾಸಿ ಇಲ್ಲಿಂದ ಹೊರಡುವುದಿಲ್ಲ." ಎಂದನು ಅಗ್ಗಳ.

ಮಾಚಿದೇವರ ಕಣ್ಣುಗಳು ಹಠಾತ್ತಾಗಿ ಕೆಂಪೇರಿದವು. ಕೋಪಗೊಂಡವರಂತೆ ಅವರು, "ನೀವು ಜಗದೇಕಮಲ್ಲರಸರನ್ನು ನೋಡುವುದು ರಾಜಕೀಯ ವಿಚಾರ. ಶರಣರು ಅದರಲ್ಲಿ ಪ್ರವೇಶಿಸುವುದಿಲ್ಲ. ನನ್ನ ಪರೋಕ್ಷದಲ್ಲಿ, ನನಗೆ ತಿಳಿಯದಂತೆ ಅದು ನಡೆದರೆ ಒಳ್ಳೆಯದು. ರಾಜಗೃಹದ ತಮ್ಮಡಿಯೊಬ್ಬನು ಬಿಲ್ವಪತ್ರೆಗಾಗಿ ಅಗಾಗ ಇಲ್ಲಿಗೆ ಬರುತ್ತಾನೆ. ಅವನನ್ನು ನಿಮ್ಮ ಹತ್ತಿರ ಕಳುಹಿಸುತ್ತೇನೆ. ಅವನಿಂದ ನಿಮಗೆ ಸಹಾಯವಾದರೆ ನನ್ನ ಅಭ್ಯಂತರವಿಲ್ಲ," ಎಂದು ಹೇಳಿ ಉತ್ತರಕ್ಕಾಗಿ ಎದುರು ನೋಡದೆ ಅಲ್ಲಿಂದ ಹೊರಟು ಹೋದರು.

ವ್ಯಂಗ್ಯದ ಮಿದುನಗೆಯಿಂದ ಅರಳಿತು ಅಗ್ಗಳನ ಮುಖ. "ಎಂತಹ ನಿಷ್ಠುರ ಖಂಡಿತವಾದಿ ಈ ವೃದ್ಧ ಜಂಗಮ ! ಬಲಗೈ ಮಾಡುವ ದಾನ ಎಡದ ಕೈಗೆ ಕೂಡ ತಿಳಿಯಕೂಡದೆಂಬುದು ಅವನ ಇಚ್ಛೆ," ಎಂದು ಭಾವಿಸಿ ತಮ್ಮಡಿಗಾಗಿ ಕಾಯುತ್ತ ಕುಳಿತನು.

ರಾಜಗೃಹದಿಂದ ಬಿಲ್ವದಳಗಳಿಗಾಗಿ ಬರುವ ವ್ಯಕ್ತಿ ಯಾರೆಂಬುದು ಅಗ್ಗಳನಿಗೆ ತಿಳಿಯದು. ಪ್ರಹರಾನಂತರ ಧೋತ್ರ ಕಪಿನಿ ಮುಂಡಾಸುಗಳನ್ನು ಧರಿಸಿ ಅರ್ಧ ಜಂಗಮನಂತೆ ಕಾಣುತ್ತಿದ್ದ ಬ್ರಹ್ಮಶಿವ, ಪತ್ರೆ ತುಂಬಿದ ಜೋಳಿಗೆಯನ್ನು ಕಂಕುಳಿಗೆ ಹಾಕಿಕೊಂಡು ಎದುರಿಗೆ ಬಂದು ನಿಂತಾಗ ಅವನಿಗೆ ಆಶ್ಚರ್ಯವೆನಿಸಿತು.

ವಾಸ್ತವದಲ್ಲಿ ಆಶ್ಚರ್ಯಚಕಿತನಾದವನು ಬ್ರಹ್ಮಶಿವ. ಚಾಲುಕ್ಯರಾಣಿಯ ಮನೆಹೆಗ್ಗಡೆಯನ್ನು ಮಹಮನೆಯ ಅತಿಥಿಶಾಲೆಯಲ್ಲಿ ನೋಡುವುದಾಗಿ ಅವನು ಕನಸಿನಲ್ಲಿಯೂ ಭಾವಿಸಿರಲಿಲ್ಲ. ಮನಸ್ಸಿನಲ್ಲಿ ಹುಟ್ಟಿ ಮುಖದಲ್ಲಿ ಅರಳುತ್ತಿದ್ದ

ಆಶ್ಚರ್ಯ ಸಂತೋಷಗಳನ್ನು ಅದುಮಿಟ್ಟು, ಜೋಳಿಗೆಯಿಂದ ಎರಡು ಬಿಲ್ವದಳಗಳನ್ನು ತೆಗೆದು ಅಗ್ಗಳನ ಮುಂದಿಟ್ಟು, "ನಾನು ಕೂಡಲ ಸಂಗಮಕ್ಕೆ ಯಾತ್ರೆ ಹೋಗುತ್ತೇನೆ. ಶ್ರೀಮಂತರು ದಯಮಾಡಿ ತಮ್ಮ ಕಾಣಿಕೆಯನ್ನು ಕೊಟ್ಟರೆ" –ಎಂದು ಅವನು ಕೈಗಳನ್ನು ಚಾಚಿ ಗಂಭೀರವಾಗಿ ನುಡಿದನು.

ಅಗ್ಗಳನು ಅಷ್ಟೇ ಗಂಭೀರವಾಗಿ, "ನೀವು ಯಾರು, ಅಯ್ಯನವರೇ ನಿಮ್ಮ ಶುಭನಾಮವೇನು ? ನೀವು ಹೋಗುತ್ತಿರುವುದು ಕೃಷ್ಣೆ ಘಟಪ್ರಭೆಗಳ ಸಂಗಮಕ್ಕೋ? ಕೃಷ್ಣ ಮಲಪ್ರಭೆಗಳ ಸಂಗಮಕ್ಕೋ?" ಎಂದು ಕೇಳಿದನು.

ಬ್ರಹ್ಮಶಿವ ಹೇಳಿದನು : "ಸದ್ಯದಲ್ಲಿ ನನ್ನ ಹೆಸರು ಹರೀಶರುದ್ರ. ಪೂರ್ವಾಶ್ರಮದಲ್ಲಿ ಬ್ರಹ್ಮಶಿವ ಪಂಡಿತನಾಗಿದ್ದೆ. ನನ್ನ ಗುರುಗಳು ಬ್ರಹ್ಮೇಂದ್ರ ಶಿವಯೋಗಿ. ಹಿಂದಿನ ಜನ್ಮದಲ್ಲಿ ಅವರು ನಿಜಗಲ್ಲಿನ ದುರ್ಗಾಧಿಪತಿ ಬೊಮ್ಮರಸರಾಗಿದ್ದರಂತೆ. ಅವರ ಗುರು ಅರಸಾದರೂ ದುರ್ಗಾಧಿಪತಿಯಲ್ಲ. ದುರ್ಗಾಧಿಪತಿಯಾದರೂ ಪಂಡಿತನಲ್ಲ. ಪಂಡಿತನಾದರೂ ನನ್ನಂತೆ ಅರ್ಥವಿಲ್ಲದೆ ಮಾತಾಡುವುದಿಲ್ಲ. ನಾನು ಹೋಗುತ್ತಿರುವುದು ತ್ರಿವೇಣೀ ಸಂಗಮಕ್ಕೆ. ನೀವು ಹೇಳಿದ ಮೂರು ನದಿಗಳು ಅಲ್ಲಿ ಸೇರುವುದೋ ಇಲ್ಲವೋ ಆ ಸಂಗಮನಾಥನೊಬ್ಬನಿಗೆ...."

ಬ್ರಹ್ಮಶಿವನ ಪ್ರವಚನ ಮುಗಿಯುವುದಿಲ್ಲವೆಂದು ತಿಳಿದು ಅಗ್ಗಳನು ಸಮೀಪಕ್ಕೆ ಹೋಗಿ ಕೈಯಿಂದ ಅವನ ಬಾಯಿ ಮುಚ್ಚಿ ಕೊಠಡಿಯೊಳಕ್ಕೆ ಎಳೆತಂದು ಬಾಗಿಲು ಹಾಕಿದನು. ಬಳಿಕ ಎದುರಿಗೆ ಕುಳ್ಳಿರಿಸಿಕೊಂಡು, "ನಾನು ರಾಜಗೃಹವನ್ನು ಬಿಟ್ಟಾಗಿನಿಂದ ಇದುವರೆಗೆ ಅಲ್ಲಿ ನಡೆದುದೆಲ್ಲವನ್ನೂ ದಯಮಾಡಿ ನನಗೆ ತಿಳಿಸಿರಿ, ಬ್ರಹ್ಮಶಿವ ಪಂಡಿತರೆ," ಎಂದನು.

ಬ್ರಹ್ಮಶಿವನು ಹೇಳಿದನು : "ಅನುಕ್ರಮವಾಗಿ ಎಲ್ಲವನ್ನೂ ವಿವರಿಸಲು ನಾನೇನು ದಿನಚರಿ ಬರೆದಿಟ್ಟಿರುವೆನೆ, ಅಗ್ಗಳ? ನೆನಪಿನಲ್ಲಿರುವಷ್ಟನ್ನು ಹೇಳುತ್ತೇನೆ. ಜಗದೇಕಮಲ್ಲರಸರು ಈಗ ವೈರಾಗ್ಯನಿಧಿಯಾಗಿದ್ದಾರೆ. ಸ್ನಾನ ಪೂಜೆ ಜಪತಪ ಧರ್ಮೋಪದೇಶಗಳಲ್ಲಿ ದಿನವೆಲ್ಲ ಕಳೆಯುತ್ತಾರೆ. ಬ್ರಹ್ಮೇಂದ್ರ ಶಿವಯೋಗಿ ಅರ್ಥಾತ್ ಬೊಮ್ಮರಸರ ಪ್ರವಚನ ಈಗ ರಾಜಗೃಹದಲ್ಲಿ ಸಂಗೀತ ನರ್ತನಗಳಷ್ಟೇ ಜನಪ್ರಿಯವಾಗಿದೆ. ನೀವು ಹೋದ ಕೆಲವು ದಿವಸಗಳಲ್ಲಿಯೆ ಜಗದೇಕಮಲ್ಲರಸರು, ಗಣಿಕಾ ಪರಿವಾರದ ಹತ್ತು ಮಂದಿ ಹೆಗ್ಗಡಿತಿಯರು ಬೊಮ್ಮರಸರಿಂದ ಶರಣದೀಕ್ಷೆ ಪಡೆದರು. ಆಮೇಲೆ ಒಂದು ವಾರ ವೈಭವದ ದಾಸೋಹ ನಡೆಯಿತು. ಪ್ರತಿ ದಿನ ಸಾವಿರ ಮಂದಿ ಜಂಗಮರು ದಾಸೋಹಕ್ಕೆ ಬರುತ್ತಿದ್ದರು. ಬೊಮ್ಮರಸರ ಗಡ್ಡ

ಮೀಸೆಗಳು ಕೃತಕವಾದರೂ, ಉಳಿದ ವಿಚಾರಗಳಲ್ಲಿ ಅವರು ನಿಜವಾದ ಜಂಗಮ ಸನ್ಯಾಸಿಯೇ ಆಗಿದ್ದಾರೆ. ಕರ್ಣದೇವರಸರು ಈಗೊಂದು ವಾರಕ್ಕೆ ಮೊದಲು ರಾಜಗೃಹದ ತಮ್ಮ ಬಿಡಾರಕ್ಕೆ ಬಂದರು. ಈಗ ಅಲ್ಲಿ ಅವರದೇ ಸರ್ವಾಧಿಕಾರ. ಮೊದಲೆರಡು ದಿನಗಳು ಏನನ್ನೋ ಕಳೆದುಕೊಂಡವನಂತೆ ಪೆಚ್ಚುಮೋರೆ ಹಾಕಿಕೊಂಡು ಮಲಗಿದ್ದವರು ಈಗ ಗೆಲುವಾಗಿದ್ದಾರೆ. ಗಣಿಕಾ ಪರಿವಾರದ ಹೆಗ್ಗಡತಿಯರ ಸರದಿ ಪುನಃ ಪ್ರಾರಂಭವಾಗಿದೆ. ಅವರೊಂದು ದಿನ, 'ಈ ಜಂಗಮಯ್ಯಗಳ ಪ್ರಭಾವದಿಂದ ನನ್ನ ಭಂಡರಾಜ ಯೋಗಿರಾಜನಾಗಿದ್ದಾನೆ,' ಎಂದು ಜಗದೇಕಮಲ್ಲರಸರನ್ನು ಗೇಲಿಮಾಡಿದರಂತೆ. ಪರಿವಾರದವರಿಗೆ ಇದು ನಿತ್ಯಹಾಸ್ಯದ ವಿಷಯವಾಗಿದೆ. ನಿಮ್ಮ ಖಾಸಾ ದಾಸಿ ವಸಂತಾ, ದಿನಕ್ಕೆರೆಡು ಸಾರಿ, 'ಒಡೆಯರು ಎಂದು ಬರೋದು?' ಎಂದು ಕೇಳುತ್ತಿರುತ್ತಾಳೆ. ನಿಮ್ಮೊಡನೆ ಅವಳ ವ್ಯವಹಾರ ಜಗದೇಕಮಲ್ಲರಸರ ರಾಜಕೀಯಕ್ಕಿಂತ ಆತುರದ್ದು ಎಂತ ಕಾಣುತ್ತದೆ."

ಬ್ರಹ್ಮಶಿವನ ಚುಚ್ಚುನುಡಿಗಳನ್ನು ಕೇಳಿಯೂ ಕೇಳದಂತೆ ಅಗ್ಗಳನು, "ಮಂಗಳವೇಡೆಯ ಅಗ್ನಿ ಅಪಘಾತದ ವಿಚಾರ ನಿಮಗೇನಾದರೂ ತಿಳಿದಿದೆಯೆ?" ಎಂದು ಕೇಳಿದನು.

"ನಗರದಲ್ಲಿ ಜನರಾಡಿಕೊಳ್ಳುವುದನ್ನು ಜಗದೇಕಮಲ್ಲರಸರಿಗೆ ತಿಳಿಸಿದೆ, ಅವರು ನಂಬಲಿಲ್ಲ."

"ಯಾವುದನ್ನು ನಂಬಲಿಲ್ಲ?"

"ಅಪಘಾತದಲ್ಲಿ ರಾಣಿ ಕಾಮೇಶ್ವರೀದೇವಿಯವರು ಮಡಿದರೆಂಬುದನ್ನು."

ಅಗ್ಗಳನು ನಿಟ್ಟುಸಿರಿಟ್ಟು ಹೇಳಿದನು : "ನಿಜವಾಗಿ ರಾಣಿಯವರ ಅವಸಾನವಾಯಿತು ಬ್ರಹ್ಮಶಿವ. ಅಗ್ನಿ ಅಪಘಾತ ನಡೆಯುವ ಮೊದಲು ರಾಣಿಯವರು ಜಗದೇಕಮಲ್ಲರಸರಿಗೆ ಒಂದು ರಹಸ್ಯ ಸಂದೇಶ ಕಳುಹಿಸಿದ್ದಾರೆ. ಅದನ್ನು ಅವರಿಗೆ ಮುಟ್ಟಿಸುವುದು ಹೇಗೆ ಎಂದು ಯೋಚಿಸುತ್ತಿದ್ದೇನೆ."

"ಕಾವ್ಯೋಪದೇಶಿಯಾಗಿ ನೀವೇ ರಾಜಗೃಹಕ್ಕೆ ಬರಬಹುದು. ಇಲ್ಲವೇ ಸಂದೇಶವನ್ನು ನನ್ನ ಕೈಗೆ ಕೊಟ್ಟರೆ ರಹಸ್ಯವಾಗಿ ಜಗದೇಕಮಲ್ಲರಸರಿಗೆ ತಲುಪಿಸುತ್ತೇನೆ."

"ಆ ಎರಡು ಮಾರ್ಗಗಳೂ ಈಗ ಸಾಧ್ಯವಲ್ಲ." ಎಂದು ಅಗ್ಗಳನು ಮಂಗಳವೇಡೆಯ ಪಾನಶಾಲೆಯಲ್ಲಿ ನಡೆದ ಘಟನೆಯನು ವಿವರಿಸಿ, "ಈಗ ನಾನು ರಾಜಕೀಯ ಅಪರಾಧಿಯಂತೆ ಮಂಗಳವೇಡೆಯಿಂದ ಓಡಿಬಂದು ಮಹಮನೆಯಲ್ಲಿ ಆಶ್ರಯ ಪಡೆದಿದ್ದೇನೆ. ನಾನು ಇಲ್ಲಿರುವ ವಿಚಾರ ಕರ್ಣದೇವನಿಗೆ

ತಿಳಿದರೆ ನನ್ನನ್ನು ಸೆರೆ ಹಿಡಿಯಲು ಪ್ರಯತ್ನಿಸಬಹುದು. ನಾನು ಕಲ್ಯಾಣಕ್ಕೆ ಬಂದಿರುವ ವಿಚಾರ ರಹಸ್ಯವಾಗಿರಬೇಕು," ಎಂದನು.

ಅಗ್ಗಳನು ಹೇಳಿದನು : "ನಾವು ಜಗದೇಕಮಲ್ಲರಸರಿಗೆ ರಾಣಿಯ ಸಂದೇಶ ಮುಟ್ಟಿಸಿ ಅವರ ಸಲಹೆಯಂತೆ ನಡೆಯಬೇಕಾಗುವುದು. ಸಂದೇಶವನ್ನು ಹೇಗೆ ಮುಟ್ಟಿಸುವುದು ಎಂಬುದೇ ಈಗ ನಮಗೆ ಬಂದಿರುವ ತೊಂದರೆ."

ಬ್ರಹ್ಮಶಿವ ನಕ್ಕು, "ತೊಂದರೆಯೇನಿದೆ? ಸಂದೇಶದ ಓಲೆ ನನಗೆ ಕೊಟ್ಟರೆ ಇಂದೇ ತಲುಪಿಸುತ್ತೇನೆ," ಎಂದನು.

ಅಗ್ಗಳನೆಂದನು, "ಅದು ನೀವು ಭಾವಿಸುವಷ್ಟು ಸುಲಭವಾದ ಕಾರ್ಯವಲ್ಲ, ಪಂಡಿತರೆ. ರಾಣಿಯವರು ಓಲೆ ಬರೆದಿಲ್ಲ. ಸಂದೇಶದ ನುಡಿಗಳು ರಾಣಿಯ ದೂತನಿಗೆ ಮಾತ್ರ ತಿಳಿದಿದೆ. ಅವನನ್ನು ರಾಜಗೃಹಕ್ಕೆ ಕರೆದುಕೊಂಡು ಹೋಗಿ ಜಗದೇಕಮಲ್ಲರಸರ ಮುಂದೆ ನಿಲ್ಲಿಸುವುದೊಂದೇ ನಾವು ಮಾಡಬೇಕಾದ ಕಾರ್ಯ."

ಬ್ರಹ್ಮಶಿವನು ತಲೆಯಾಡಿಸಿ, "ಸದ್ಯದಲ್ಲಿ ಅದು ಆಗದ ಕಾರ್ಯ. ಕರ್ಣದೇವರಸರು ಹಿಂದಿರುಗಿದ ಮೇಲೆ ರಾಜಗೃಹದ ಕಾವಲನ್ನು ಬಲಪಡಿಸಿದ್ದಾರೆ. ಅನುಮತಿ ಪತ್ರವಿಲ್ಲದೆ ಈಗ ಯಾರನ್ನೂ ಒಳಗೆ ಬಿಡುವುದಿಲ್ಲ," ಎಂದನು.

ಅಗ್ಗಳನು ಯೋಚಿಸಿ ಹೇಳಿದನು : "ನಿಮ್ಮ ಅನುಮತಿ ಪತ್ರವನ್ನು ರಾಣಿಯ ದೂತನಿಗೆ ಕೊಟ್ಟರಾಯಿತು."

ಬ್ರಹ್ಮಶಿವನ ಕುಚೋದ್ಯ ಕುಡಿಯಿಟ್ಟಿತು. "ಅನುಮತಿ ಪತ್ರದೊಡನೆ ನನ್ನ ಕಪನಿ, ಮುಂಡಾಸು, ಜೋಳಿಗೆ ಇವನ್ನೆಲ್ಲ ನಿಮ್ಮ ಆ ದೂತನಿಗೆ ಕೊಡಬೇಕಾಗುವುದು. ಇವನ್ನೆಲ್ಲ ಧರಿಸಿ ಕಾವಲುಗಾರರ ಮುಂದೆ ಹರೀಶರುದ್ರನ ನಟನೆ ಮಾಡುವ ಸಾಮರ್ಥ್ಯವಿದೆಯೆ ಅವನಿಗೆ?" ಎಂದು ಕಟಕಿಯಾಡಿದನು.

"ನೀವು ದೂತನ ಉಡುಪನ್ನು ಧರಿಸಲು ಒಪ್ಪುವುದಾದರೆ ನನ್ನ ಅಡ್ಡಿಯಿಲ್ಲ." ಎಂದು ಗಂಭೀರವಾಗಿ ಉತ್ತರಿಸಿದನು ಅಗ್ಗಳ.

ಅಭಿಮಾನದಿಂದ ಎದೆತಟ್ಟಿ ಬ್ರಹ್ಮಶಿವ ಹೇಳಿದನು : "ನಾನು ಕಾರ್ಯವಾಸಿ. ನಾನು ಎರಡು ಸಾರಿ ಮತಾಂತರವಾಗಿದ್ದೇನೆ. ಅನೇಕ ಸಾರಿ ವೇಷ ಬದಲಾಯಿಸಿದ್ದೇನೆ. ಹತ್ತು ಹೆತ್ತವಳಿಗೆ ಒಂದು ಹೆಚ್ಚೇನು ಕಡಿಮೆಯೇನು? ಕರೆಯಿರಿ ರಾಣಿಯ ದೂತನನ್ನು."

ಕೊಂಚ ಹೊತ್ತಿನ ಮೇಲೆ ಉಷಾವತಿಯನ್ನು ಕರೆತಂದು ಅಗ್ಗಳನು, "ಇವರೇ ರಾಣಿಯ ದೂತರು," ಎಂದು ಹೇಳಿದಾಗ ಬ್ರಹ್ಮಶಿವನು ತಬ್ಬಿಬ್ಬಾದನು.

ಜೂಜಾಟದಲ್ಲಿ ವಂಚಿಸಲ್ಪಟ್ಟವನಂತೆ ಕೈಯೆತ್ತಿ ಬೊಬ್ಬಿಟ್ಟು ನಟನೆಮಾಡಿ,

"ನೀವು ನನ್ನನ್ನು ವಂಚಿಸಿದಿರಿ, ಅಗ್ಗಳ. ದೂತನೆಂದು ಹೇಳಿ ದೂತಿಯನ್ನು ಕರೆತಂದಿರಿ ?" ಎಂದನು.

ಅಗ್ಗಳನು ಹೇಳಿದನು : "ನಿಮ್ಮ ಅವಿವೇಕ ನಿಮ್ಮನ್ನು ವಂಚಿಸಿತು, ಬ್ರಹ್ಮಶಿವ ಪಂಡಿತರೆ. ರಾಜದೂತನು ಹೆಂಗಸಾಗಲಿ, ಗಂಡಸಾಗಲಿ, ಪುರುಷನೆಂದು ತಿಳಿದು, ಪುರುಷನಂತೆ ಸಂಬೋಧಿಸುವುದು ರಾಜಕೀಯ ಸಂಪ್ರದಾಯ. ಅದನ್ನು ತಿಳಿಯದೆ ನೀವು ಮೋಸ ಹೋದಿರಿ."

ನೊಂದವನಂತೆ ದೈನ್ಯದಿಂದ ಬ್ರಹ್ಮಶಿವ, "ಈಗೇನು ಮಾಡಬೇಕೆಂದು ಹೇಳುತ್ತೀರಿ ?" ಎಂದು ಪ್ರಶ್ನಿಸಿದನು.

ಅಗ್ಗಳ ನಕ್ಕು ನುಡಿದನು : "ನೀವು ಚಿಕ್ಕವರಾಗಿದ್ದಾಗ ದೊಡ್ಡಾಟದಲ್ಲಿ ಹೆಣ್ಣುವೇಷ ಧರಿಸುತ್ತಿದ್ದಿರಂತೆ. ಆಗ ನನಗೆ ನೋಡಲನುವಾಗಲಿಲ್ಲ. ಈಗ ನೀವು ಕೃಪೆಯಿಂದ ಸಜ್ಜಾಗಿ ಎದುರಿಗೆ ನಿಂತರೆ ನೋಡಿ ಆನಂದಿಸುತ್ತೇನೆ."

ಎಲ್ಲವನ್ನೂ ಗಂಭೀರವಾಗಿ ನಿಂತು ನೋಡುತ್ತಿದ್ದ ಉಷಾವತಿ, "ನಿಮ್ಮ ಈ ನಗೆಯಾಟ ನಿಲ್ಲದೆ ಹೋದರೆ, ರಾಜಗೃಹಕ್ಕೆ ಹೋಗುವ ಯೋಚನೆಯನ್ನೇ ಬಿಡಬೇಕಾಗುವುದು, ಬ್ರಹ್ಮಶಿವ ಪಂಡಿತರೆ," ಎಂದಳು.

ಅಗ್ಗಳನು ಚಕಿತನಾಗಿ ಕೊಠಡಿಯ ಬೆಳಕಿಂಡಿಯ ಕಡೆ ದೃಷ್ಟಿ ಹಾಯಿಸಿದನು. ಸಂಜೆ ಮುಗಿಯುತ್ತ ಬಂದಿತ್ತು, ಅತಿಥಿಗೃಹದ ತಮ್ಮಡಿ ದೀಪ ಹಚ್ಚಿಟ್ಟು ಹೋಗಲು ಬರಬಹುದು. ಈ ನಿರರ್ಥಕ ನಗೆಯಾಟದಲ್ಲಿ ಎಷ್ಟು ಕಾಲ ಕಳೆದೆವು ನಾವು – ಎಂದು ಅವನು ಮನಸ್ಸಿನಲ್ಲಿಯೇ ಅಳುಕಿದನು. ಆದರೆ ಉಪಹಾಸದಲ್ಲಿ ಪ್ರಾರಂಭವಾದ ಸಲಹೆ ವಾಸ್ತವವಾದರೆ? ಬ್ರಹ್ಮಶಿವನ ಉಡುಪುಗಳನ್ನು ಹಾಕಿಕೊಂಡು ರಾಜಗೃಹಕ್ಕೆ ಹೋಗಲು ಉಷಾವತಿ ಸಿದ್ಧವಾಗಿದ್ದಳು. ಆದರೆ ಅವಳನ್ನು ಬುದ್ಧಿಪೂರ್ವಕವಾಗಿ ವಿಪತ್ತಿಗೆ ತಳ್ಳುವುದು ಯುಕ್ತವೆ?

ಏನು ಮಾಡಬೇಕೆಂಬುದನ್ನು ನಿರ್ಧರಿಸಲಾರದೆ ಅಗ್ಗಳನು ಯೋಚಿಸುತ್ತಾ ನಿಂತನು. ಉಷಾವತಿ ಅವನ ಇಂಗಿತವನ್ನರಿತು, ದೃಢಕಂಠದಿಂದ, "ನೀವು ಏನೇ ಹೇಳಿರಿ, ಸಂದೇಶದ ನುಡಿಗಳನ್ನು ನಾನು ಬರೆದುಕೊಡುವುದಿಲ್ಲ. ಪ್ರಭುಗಳನ್ನು ನೋಡಿ ಅದನ್ನು ಅವರಿಗೆ ತಿಳಿಸುತ್ತೇನೆ. ನನ್ನ ವೇಷಾಂತರಕ್ಕೆ ಅನುವುಮಾಡಿಕೊಟ್ಟರೆ ಒಳ್ಳೆಯದು," ಎಂದಳು.

ಅಗ್ಗಳನು ಬ್ರಹ್ಮಶಿವನ ಕಡೆ ತಿರುಗಿ, "ಸಂಚಿನ ಸೂತ್ರಗಳು ಈಗ ಹೆಣ್ಣಿನ ಕೈಯಲ್ಲಿವೆ, ಪಂಡಿತರೆ. ಶಕ್ತಿಯ ನೆಲೆ ಹೆಣ್ಣು ಎಂಬುದು ನನ್ನ ಅನುಭವ. ಉಷಾವತಿ ಈಗ ಶಕ್ತಿ ದೇವತೆ. ಅವಳು ಹೇಳಿದಂತೆ ನಾವು ಮಾಡಬೇಕು.

ಆ ಗಂಟಿನಲ್ಲಿ ನನ್ನ ಬಟ್ಟೆಗಳಿವೆ. ಅವುಗಳಲ್ಲಿ ನಿಮಗೆ ಬೇಕಾದ್ದನ್ನು ತೆಗೆದುಕೊಂಡು ನಿಮ್ಮ ಬಟ್ಟೆಗಳನ್ನು ಹೊರಗೆಸೆದರೆ ನಮ್ಮ ಹೊಣೆ ಮುಗಿಯಿತು," ಎಂದು ಹೇಳಿ ಉಷಾವತಿಯನ್ನು ಕರೆದುಕೊಂಡು ಹೊರಗೆ ಹೋದನು.

ದೀಪ ತೆಗೆಸಿಕೊಂಡು ಪುನಃ ಅಗ್ಗಳನು ಅಲ್ಲಿಗೆ ಬಂದಾಗ ಸಂಗಡಿದ್ದ ವ್ಯಕ್ತಿ ಬ್ರಹ್ಮಶಿವನಂತೆ ವೇಷಧರಿಸಿದ ಉಷಾವತಿಯಾಗಿದ್ದಳು.

ಮಹಮನೆಯಿಂದ ರಾಜಗೃಹಕ್ಕೆ ಹೋಗಲು, ನಗರದ ಅಂಚಿನಲ್ಲಿದ್ದ ಜನನಿಬಿಡವಲ್ಲದ ರಾಜಮಾರ್ಗದಲ್ಲಿ ಸುಮಾರು ಅರ್ಧಪ್ರಹರಕಾಲ ನಡೆಯಬೇಕಾಗಿತ್ತು. ಅಗ್ಗಳ ಬ್ರಹ್ಮಶಿವರು ದಾರಿಯುದ್ದಕ್ಕೂ ಉಷಾವತಿಯ ಸಂಗಡಿದ್ದು, ರಾಜಗೃಹದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ವಿವರಿಸಿದರು.

ಮಹಾದ್ವಾರದ ಬೆಳಕು ಕಂಡಾಗ ಅವರು ರಾಜಮಾರ್ಗದ ಪಾರ್ಶ್ವದಲ್ಲಿ ನಿಂತರು. ಬೀಳ್ಕೊಡುವ ಮುನ್ನ ಅಗ್ಗಳನು, "ಈ ಸಾಹಸದಲ್ಲಿ ನೀನು ಸಿಕ್ಕಿಬಿದ್ದರೆ ಏನು ಮಾಡುವೆ ?" ಎಂದು ಉಷಾವತಿಯನ್ನು ಕೇಳಿದನು.

ರಾಣಿಯವರು ನನಗೆ ಕೊಟ್ಟಿರುವ ಈ ಉಂಗುರದಲ್ಲಿ ವಿಷವಿದೆ. ಭಟರು ನನ್ನನ್ನು ಹಿಡಿಯುವಷ್ಟರಲ್ಲಿ ದೇಹದಿಂದ ಪ್ರಾಣವಾಯು ಹಾರಿಹೋಗುತ್ತದೆ.

ಅಗ್ಗಳನು ಹೇಳಿದನು : "ನೀನು ಚತುರೆಯೆಂದು ಒಪ್ಪಿಕೊಳ್ಳುತ್ತೇನೆ. ಉಷಾವತಿ. ಆದರೂ ನಿನ್ನನ್ನು ಬುದ್ಧಿಪೂರ್ವಕವಾಗಿ ವಿಪತ್ತಿಗೆ ತಳ್ಳುತ್ತಿರುವೆನೆಂದು ಮನಸ್ಸು ಅಳುಕುತ್ತಿದೆ, ಇನ್ನೂ ಕಾಲ ಮೀರಿಲ್ಲ. ಸಂದೇಶವನ್ನು ಬ್ರಹ್ಮಶಿವ ಪಂಡಿತರಿಗೆ ತಿಳಿಸಿ ನಾವು ಹಿಂತಿರುಗಬಹುದು."

ಉಷಾವತಿ ತಲೆಯಾಡಿಸಿ ಉತ್ತರ ಕೊಟ್ಟಳು : ನನ್ನ ಮೇಲಿನ ಪ್ರೇಮ ನಿಮ್ಮನ್ನು ನುಡಿಸುತ್ತಿದೆ, ಅಗ್ಗಳದೇವ. ಚಾಲುಕ್ಯ ರಾಜ್ಯೋದ್ಧಾರದ ಈ ಒಳ ಸಂಚಿಗೆ ಸೇರಿದಾಗಲೇ ನಾವು ನಮ್ಮ ವೈಯಕ್ತಿಕ ಸಂಬಂಧಗಳನ್ನು ಮರೆತೆವಲ್ಲವೆ? ರಾಣಿಯ ಅವಸಾನವಾಗಿ ಈಗಾಗಲೆ ಎಷ್ಟು ದಿನಗಳು ಕಳೆದವು ! ಆದರೂ ಅವರ ಕೊನೆಯ ಸಂದೇಶವನ್ನು ಜಗದೇಕಮಲ್ಲರಸರಿಗೆ ಮುಟ್ಟಿಸಲು ನಾವು ಶಕ್ತರಾಗಿಲ್ಲ. ಏನೇ ಆಗಲಿ, ಈ ದಿನ ನಾನು ರಾಜಗೃಹವನ್ನು ಪ್ರವೇಶಿಸಿ ಜಗದೇಕಮಲ್ಲರಸರನ್ನು ನೋಡಲು ನಿರ್ಧರಿಸಿದ್ದೇನೆ. ಅದಕ್ಕಾಗಿ ವೇಷ ಹಾಕಿಕೊಂಡು ಬಂದದ್ದಾಯಿತು. ಈಗ ಹಿಂದಿರುಗುವುದಿಲ್ಲ."

ಅಗ್ಗಳನು ತುಸು ಗಂಭೀರವಾಗಿ, "ನಿನ್ನ ಸ್ವೇಚ್ಛೆಯಿಂದಲೆ ಈ ಕಾರ್ಯ ಮಾಡುತ್ತಿರುವೆ, ಉಷಾ. ಇದರಲ್ಲಿ ನನ್ನ ಒತ್ತಾಯವೇನೂ ಇಲ್ಲ, ನೆನಪಿರಲಿ," ಎಂದನು.

ಉಷಾ ನಸುನಕ್ಕು ಹೇಳಿದಳು. "ನೀವು ಚಿಂತಿಸುವ ಅಗತ್ಯವಿಲ್ಲ, ಅಗ್ಗಳದೇವ. ನಾನು ನಿಮ್ಮ ಪ್ರಣಯಿನಿಯಾದರೂ ಸ್ವತಂತ್ರಳಾದ ಹೆಣ್ಣು. ರಾಣಿಯವರ ಸೇವೆಯಲ್ಲಿ ನನ್ನ ಪ್ರಾಣವನ್ನು ಸಲ್ಲದ ನಾಣ್ಯದಂತೆ ಬಿಸುಡುವ, ಅಥವಾ ಉಳಿಸಿಕೊಳ್ಳುವ ಸರ್ವ ಸ್ವಾತಂತ್ರ್ಯ ನನಗಿರುತ್ತದೆ," –ಎಂದು ಅವಳು ಅಗ್ಗಳ ಬ್ರಹ್ಮಶಿವರಿಂದ ಬೀಳ್ಕೊಂಡು ರಾಜಗೃಹದ ಮಹಾದ್ವಾರದ ಕಡೆಗೆ ನಡೆದಳು.

* * *

ಅಂದು ಮಹಾದ್ವಾರದಲ್ಲಿ ನಾಲ್ವರು ಭಟರು ಕಾವಲಿದ್ದರು. ಅವರೆಲ್ಲರಿಗೂ ಬ್ರಹ್ಮಶಿವ ಅರ್ಥಾತ್ ಹರೀಶರುದ್ರನ ಪರಿಚಯವಿತ್ತು, ತುಸು ಹೊತ್ತಿನ ಮೇಲೆ ಬಿಲ್ವಪತ್ರೆ ತುಂಬಿದ ಜೋಳಿಗೆಯನ್ನು ಕಂಕುಳಲ್ಲಿ ಇರುಕಿಸಿ ಜಗ್ಗು ಹಾಕುತ್ತ ಮಹಾದ್ವಾರಕ್ಕೆ ಬಂದ ವ್ಯಕ್ತಿ ಹರೀಶರುದ್ರನೆಂದೇ ಅವರು ಭಾವಿಸಿದರು.

ಅವರಲ್ಲೊಬ್ಬನು ಅಣಕದ ದನಿಯಿಂದ, "ಇಂದು ಅಯ್ಯನೋರು ತಡವಾಗಿ ಬರ್ತದಾರ ; ಈಸೊಂದು ಪತ್ರಿ ಬಿಡಿಸಲಿಕ್ಕೆ ಬಾಳಹೊತ್ತು ಇಡಿದಿರಬೇಕು" ಎಂದು ನಗೆಯಾಡಿದನು.

ಕಾವಲುಗಾರರಿಗೆ ಹೇಗೆ ಉತ್ತರ ಕೊಡಬೇಕೆಂಬುದನ್ನು ಬ್ರಹ್ಮಶಿವ ಉಷಾವತಿಗೆ ತಿಳಿಸಿದ್ದನು. ಅದರಂತೆ ಅವಳು ಅಣಕದ ದನಿಯಿಂದ, "ಕೈಲಾಸಕ್ಕೆ ಹೋಗಿ ಬಂದೀನಿ, ಅಣ್ಣ. ಅದಕಾ ತಡಾ ಆತು." ಎಂದು ಉತ್ತರ ಕೊಟ್ಟು ಒಳಗೆ ಹೋದಳು.

ಅಷ್ಟರಲ್ಲಿ ಹೊರಗೆ ಹೋಗಿದ್ದ ನಾಲ್ಕಾರು ಮಂದಿ ಊಳಿಗದವರು ಅಲ್ಲಿಗೆ ಬಂದರು. ಅವರಲ್ಲಿಬ್ಬರು ತುಂಬು ಪ್ರಾಯದ ತರುಣಿಯರು. ಕಾವಲುಗಾರರ ದೃಷ್ಟಿ ಸಹಜವಾಗಿ ಅವರ ಕಡೆ ತಿರುಗಿತು. ಅನುಮತಿ ಪತ್ರವನ್ನು ತೋರಿಸುವ ತೊಂದರೆಯೂ ತಪ್ಪಿತು ಉಷಾವತಿಗೆ.

ಮಹಾದ್ವಾರದಿಂದ ಒಳಗೆ ಹೋಗುತ್ತಲೆ ದೊಡ್ಡ ಉದ್ಯಾನ. ನಡುವೆ ಜಗದೇಕಮಲ್ಲರಸರನ್ನು ಬಂಧನದಲ್ಲಿಟ್ಟಿದ್ದ ದೊಡ್ಡ ಅರಮನೆ. ರಕ್ಷಕ ಸೈನ್ಯದಳದ ಅಧಿಕಾರಿಗಳ ಚಾವಡಿ ಬಿಡಾರಗಳೂ ಅಲ್ಲಿಯೇ ಇದ್ದವು. ಅರಮನೆಯ ಬಲಭಾಗದಲ್ಲಿ ಕರ್ಣದೇವ ವಾಸಮಾಡುತ್ತಿದ್ದ ಧವಳಾರ ಮತ್ತು ಗಣಿಕಾವಾಸದ ಕೊಠಡಿಗಳು. ಎಡಗಡೆಗೆ ಹೆಗ್ಗಡಿತಿಯರ ಪ್ರತ್ಯೇಕ ವಾಸಗೃಹಗಳು ಮತ್ತು ಅತಿಥಿಶಾಲೆ. ಹಿಂಭಾಗದಲ್ಲಿ ಅಡಿಗೆ ಸಾಲು, ಊಟದಮನೆ, ಸ್ನಾನದಮನೆ ಮುಂತಾದವು. ರಾಜಗೃಹದ ಈ ಹರವನ್ನು ಬ್ರಹ್ಮಶಿವನು ಉಷಾವತಿಗೆ ಮೊದಲೇ ವಿವರಿಸಿದ್ದನು. ಅವನು ಹೇಳಿದ್ದಂತೆ ಉಷಾವತಿ ತೋಟವನ್ನು ದಾಟಿ ಅರಮನೆಯ ಎಡಭಾಗಕ್ಕೆ ಬಂದಳು. ಅಲ್ಲಿ

ಶಿಲಾಸನಗಳ ಮೇಲೆ, ಮನೆ ಮುಂದಿನ ಮೊಗಶಾಲೆಗಳಲ್ಲಿ, ಗಣಿಕಾವಾಸದ ಹೆಗ್ಗಡಿತಿಯರು ದಾಸದಾಸಿಯರು ಮಾತಾಡುತ್ತ ಕುಳಿತಿದ್ದರು. ಬ್ರಹ್ಮೇಂದ್ರ ಶಿವಯೋಗಿಗಳ ಅಂತೇವಾಸಿ ಹರೀಶರುದ್ರ ಅವರ ದೃಷ್ಟಿಯಲ್ಲಿ ಉಪಹಾಸದ ವಸ್ತುವಾಗಿದ್ದನು.

ವೇಷಧಾರಿ ಉಷಾವತಿಯನ್ನು ಕಂಡು ಅವರು ತಮ್ಮ ನಗೆಯಾದ 'ಅಣ್ಣ' ಬಂದನೆಂದು ತಿಳಿದು ಕಿಲಕಿಲ ನಕ್ಕರು. "ನಮಗೂ ಇಷ್ಟು ಪತ್ರೆಕೊಟ್ಟು ಹೋಗಿ ಅಣ್ಣಾವ್ರೆ. ನಾವೂ ಪೂಜಿ ಮಾಡ್ತೇವು," ಎಂದು ಕೆಲವರು ಬೊಬ್ಬಿಟ್ಟರು. ಕೆಲವರು ಅವನ ನಡಿಗೆಯನ್ನು ಅನುಕರಿಸಿ ಗೆಳತಿಯನ್ನು ನಗಿಸಿದರು. ಇನ್ನು ಕೆಲವರು ಶೃಂಗಾರ ಗೀತಿಕೆಗಳನ್ನು ಗುನುಗುತ್ತ ಕೈಬೀಸಿ ಕರೆದರು.

ಉಷಾವತಿ ಇದೊಂದನ್ನೂ ಗಮನಿಸದೆ ಮುಂದೆ ಹೋಗುತ್ತಿದ್ದಂತೆ ಎಡವಿ ಬಿದ್ದಳು. ಜೋಳಿಗೆಯಲ್ಲಿದ್ದ ಬಿಲ್ವಪತ್ರೆಗಳು ಚೆಲ್ಲಿದವು, ಉಷಾವತಿ ಎದ್ದುಕುಳಿತು ಚೆಲ್ಲಿದ ಪತ್ರೆಗಳನ್ನು ಆರಿಸಿಕೊಳ್ಳುತ್ತಿದ್ದಂತೆ ಹೆಂಗಸರು ಚಪ್ಪಾಳೆ ತಟ್ಟಿ ನಕ್ಕರು. ಕೆಲವರು ಹತ್ತಿರ ಬಂದು ಪತ್ರೆಗಳನ್ನು ಆರಿಸಿ ಕೊಡುವ ನೆವದಲ್ಲಿ ಉಷಾವತಿಯನ್ನು ಸುತ್ತುಗಟ್ಟಿ ಮುಂಡಾಸು ಕಪನಿಗಳನ್ನು ಎಳೆಯಲು ಮೊದಲು ಮಾಡಿದರು. ಬ್ರಹ್ಮ ಶಿವ ಅರ್ಥಾತ್ ಹರೀಶರುದ್ರನೊಡನೆ ಅವರ ಆ ಹುಡುಗಾಟ ಅವಕಾಶ ಸಿಕ್ಕಾಗಲೆಲ್ಲ ನಡೆಯುತ್ತಿತ್ತು.

ಈ ಲಜ್ಜೆಗೆಟ್ಟ ಹೆಂಗಸರ ಚೇಷ್ಟೆ ಹೀಗೇ ಇನ್ನು ಕೊಂಚಹೊತ್ತು ನಡೆದರೆ ತನ್ನ ಗುಟ್ಟು ಬಯಲಾಗುವುದೆಂದು ಉಷಾವತಿ ತಿಳಿದಳು. ಆದರೆ ಅವರಿಂದ ತಪ್ಪಿಸಿಕೊಳ್ಳುವುದು ಹೇಗೆ?

ಎಳೆದಾಟದಲ್ಲಿ ಉಷಾವತಿಯ ಮುಂಡಾಸು ಕೆಳಗೆ ಬಿದ್ದು, ಮುಡಿ ಬಿಚ್ಚಿದ ತಲೆಗೂದಲು ಹಾರಾಡಿತು. ಮೈಕೈಗಳನ್ನು ಮುಟ್ಟಿ ನೋಡುತ್ತಿದ್ದವಳೊಬ್ಬಳು "ಇದು ಹರೀಶ ರುದ್ರಯ್ಯನವರಲ್ಲ. ಯಾರೋ ಹೆಂಗಸು!" ಎಂದು ಗಟ್ಟಿಯಾಗಿ ಚೀರಿ ಹೇಳಿದಳು.

ಇನ್ನೊಬ್ಬ ಹೆಣ್ಣು ಮೊಗಶಾಲೆಯಿಂದ ದೀಪ ತಂದು ಉಷಾವತಿಯ ಮುಖಕ್ಕೆ ಹಿಡಿದಳು. ಉಷಾವತಿ ದೀಪವನ್ನು ತಳ್ಳಿ ಕೆಳಗುರುಳಿಸಿ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸುವಷ್ಟರಲ್ಲಿ ಕಾವಲುಭಟರ ನಾಯಕನು ಗೊಂದಲ ನಡೆಯುತ್ತಿರುವುದನ್ನು ಕಂಡು ಓಡಿಬಂದು, "ಏನಾಯಿತು?" ಎಂದು ಕೇಳಿದನು. ನಾಲ್ಕಾರು ಮಂದಿ ಹೆಂಗಸರು ಉಷಾವತಿಯನ್ನು ಸುತ್ತುಗಟ್ಟಿ ಹಿಡಿದಿದ್ದರು.

ಹೆಗ್ಗಡಿತಿಯೊಬ್ಬಳು ಮುಂದೆ ಬಂದು ಹೇಳಿದಳು : "ಇವಳು ಯಾವಳೋ

ಧೂರ್ತ ಹೆಂಗಸು ಅಂತ ಕಾಣ್ತದ, ನಾಯಕರೆ. ನಮ್ಮ ಹರೀಶರುದ್ರಯ್ಯನೋರ ಹಾಂಗ ಕಪನಿ ಮುಂಡಾಸು ಹಾಕ್ಕೊಂಡು ಕಂಕುಳಲ್ಲಿ ಜೋಳಗಿ ಹಿಡಿದು ಬಂದಾಳ್ರಿ. ನಾವು ಮೋಸ ಹೋದ್ವಿ."

ನಾಯಕನು ಉಷಾವತಿಯನ್ನು ಬಂಧನದಿಂದ ಬಿಡಿಸಿ ಬೇರೆ ನಿಲ್ಲಿಸಿದನು. ಅವಳ ಮುಂಡಾಸು ಮೊದಲಲ್ಲೇ ಕೆಳಗುರುಳಿತ್ತು. ಎಳೆದಾಟದಲ್ಲಿ ಹರಿದ ಕಪನಿಯನ್ನು ಉಷಾವತಿ ತಾನೇ ತೆಗೆದು ಬಿಸುಡಿದ್ದಳು. ಜೋಳಿಗೆ ದೂರ ಬಿದ್ದಿತ್ತು. ಪಂಜುಗಳ ಬೆಳಕಿನಲ್ಲಿ ನಾಯಕನು ನೋಡಿದ್ದು, ಬಿಳಿಯ ಸೀರೆಯುಟ್ಟಿದ್ದ ಸುಂದರ ತರುಣಿಯೊಬ್ಬಳನ್ನು. ಹರೀಶರುದ್ರನೊಡನೆ ಅವಳಿಗೆ ಯಾವ ಹೋಲಿಕೆಯೂ ಇರಲಿಲ್ಲ.

ನಾಯಕನು ಹೆಂಗಸರ ಕಡೆ ತಿರುಗಿ, "ಇವಳು ನಿಮ್ಮಲ್ಲೇ ಒಬ್ಬಾಕಿ ಅಂತ ಕಾಣತೈತಿ. ಇವಳಿಗೆ ನೀವೇ ವೇಷಕಟ್ಟಿ ರಂಪಮಾಡಿ ನನಗೆ ಹೇಳ್ತಿದೀರಿ," ಎಂದು ಗದರಿಸಿ ಹೇಳಿದನು.

ಹೆಗ್ಗಡಿತಿ ಸಿಟ್ಟಿನಿಂದ, "ಇವಳು ಸತ್ಯವಾಗೂ ಇಲ್ಲಿಯೋಳಲ್ಲ, ನಾಯಕರೆ. ಬೇಕಾರ ಅವಳನ್ನೇ ಕೇಳಿ," ಎಂದಳು.

ನಾಯಕ ಉಷಾವತಿಯನ್ನು ಹತ್ತಿರ ಕರೆದು, "ನೀನು ಯಾರು? ಇವರ ಗುಂಪಿನವಳೆ?" ಎಂದು ಪ್ರಶ್ನಿಸಿದನು.

ಉಷಾವತಿ ತಲೆಯಾಡಿಸಿ ನಿರಾಕರಿಸಿದಳು.

"ನೀನೇನು ಮೂಕಳೆ? ಮಾತಾಡಲು ಬರುವುದಿಲ್ಲವೆ?" –ನಾಯಕನು ಪುನಃ ಪ್ರಶ್ನಿಸಿದನು, ತುಸು ಬಿರುಸಾದ ದನಿಯಿಂದ.

ಪ್ರಶ್ನೆಗಳಿಗೆ ಉತ್ತರ ಕೊಟ್ಟು ವಿಪತ್ತನ್ನು ಹೆಚ್ಚಿಸಿಕೊಳ್ಳುವ ಪ್ರತಿಯಾಗಿ ಮೂಕಾಭಿನಯವೇ ಏಕಾಗಬಾರದು? ಎಂದು ಚಿಂತಿಸಿ ಉಷಾವತಿ ಮೂಗು ಕೆರೆದುಕೊಂಡು ತಲೆಯಾಡಿಸಿದಳು. "ಹಹಃ ಹಿಹಿಃ !" ಎಂದು ಮೂಕಳಂತೆ ಶಬ್ದ ಮಾಡಿದಳು.

"ನಿನಗೆ ಹರೀಶ ರುದ್ರಯ್ಯನವರ ಪರಿಚಯವಿದೆಯೆ?"

ಉಷಾವತಿ ಇಮ್ಮಡಿ ವೇಗದಿಂದ ತಲೆ ಕೊಡವಿದಳು.

"ನೀನು ಇಲ್ಲಿಗೆ ಬಂದದ್ದು ಹೇಗೆ?"

ಉಷಾವತಿ ಮಹಾದ್ವಾರದ ಕಡೆಗೆ ಕೈ ತೋರಿಸಿದಳು.

"ನಿನ್ನ ಅನುಮತಿ ಪತ್ರವೆಲ್ಲಿ?"

ಆಗ ಉಷಾವತಿಗೆ ನೆನಪಾಯಿತು, ಬ್ರಹ್ಮಶಿವ ಅನುಮತಿ ಪತ್ರ ಕೊಡಲಿಲ್ಲವೆಂದು

ಅದು ತನ್ನಲ್ಲಿಲ್ಲದಿರುವುದು ಒಳ್ಳೆಯದೇ ಆಯಿತು ಎಂದು ಭಾವಿಸಿ ಅವಳು ಮೊದಲಿಗಿಂತ ಹೆಚ್ಚು ವೇಗದಲ್ಲಿ ತಲೆಯಾಡಿಸಿದಳು.

"ನಿಜವಾಗಿ ಮೂಕಳೆಂದು ಕಾಣುತ್ತದೆ. ಇವಳು ಇಲ್ಲಿಗೆ ಬಂದದ್ದು ಹೇಗೆ? ಈಗಿವಳನ್ನು ಏನು ಮಾಡುವುದು?" ಎಂದು ನಾಯಕನು ಯೋಚಿಸುತ್ತ ನಿಂತನು. ನಾಯಕನು ತಬ್ಬಿಬ್ಬಾದುದನ್ನು ಕಂಡು ವಿಲಾಸಿನಿಯರ ತಂಡ ಗೊಳ್ಳೆಂದು ನಕ್ಕಿತು.

ಗುಂಪಿನಲ್ಲಿದ್ದ ಹಿರಿಯ ಹೆಗ್ಗಡಿತಿ ತನ್ನ ಸಹವೇಶಿನಿಯರನ್ನು ದುರುಗುಟ್ಟಿ ನೋಡಿ, ನಾಯಕನ ಕಡೆ ತಿರುಗಿ, "ಈ ರಂಕಲಾಡಿ ಹೆಣ್ಣುಗಳ ಒರಟುತನಕ್ಕಾಗಿ ನಾನು ನಿಮ್ಮ ಕ್ಷಮೆ ಬೇಡುತ್ತೇನೆ, ನಾಯಕರೆ. ಈ ಹೆಂಗಸು ಯಾರೋ ನಮಗೆ ತಿಳಿಯದು. ಗಣಿಕಾವಾಸಕ್ಕೆ ಸೇರಿದವಳಲ್ಲವೆಂದು ನಾನು ಖಚಿತವಾಗಿ ಹೇಳಬಲ್ಲೆ. ನಿಜವಾಗಿ ಮೂಕಳೇ ಆಗಿರಬಹುದು ; ಅಲ್ಲದಿರಬಹುದು. ಚಾವಡಿಯಲ್ಲಿ ಕೂಡಿ ಚಡೀ ಏಟು ಕೊಟ್ಟರೆ ಬಾಯಿ ಬಿಡುತ್ತಾಳೆ," ಎಂದಳು.

"ಅದು ಸರಿಯಾದ ಸಲಹೆ," ಎಂದು ನಾಯಕನು ಉಷಾವತಿಯ ಕೈಹಿಡಿದೆಳೆದು ಕೊಂಡು ಅರಮನೆಯ ಚಾವಡಿಗೆ ಹೋದನು. ಹೆಂಗಸನ್ನು ಮನೆಹೆಗ್ಗಡೆಯ ವಶಕ್ಕೊಪ್ಪಿಸಿ ಕೈ ತೊಳೆದುಕೊಳ್ಳುವುದು ಅವನ ಉದ್ದೇಶವಾಗಿತ್ತು.

'ಇವನು ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗುವನೋ ನೋಡೋಣ. ಕೊನೆಗೆ ಉಂಗುರದ ವಿಷ ಇದ್ದೇ ಇದೆ. ಸದ್ಯದಲ್ಲಿ ಮೂಕಳಂತೆ ನಟಿಸುವುದೇ ಸರಿಯಾದ ಉಪಾಯ.' ಎಂದು ಭಾವಿಸಿ ಉಷಾವತಿ ಸಂಗಡ ಹೋದಳು.

ರಾಜಗೃಹದ ಮನೆಹೆಗ್ಗಡೆ ಚಾವಡಿಯಲ್ಲಿ ಚಿಂತಿಸುತ್ತ ಕುಳಿತಿದ್ದನು. ಕರ್ಣದೇವ ಮಂಗಳವೇಡೆಯಲ್ಲಿ ಇದ್ದಷ್ಟು ದಿನವೂ ರಾಜಗೃಹದ ಎಲ್ಲ ಅಧಿಕಾರಗಳೂ ಹೆಗ್ಗಡೆಯ ಅಧೀನವಾಗಿದ್ದವು. ಈಗ ಕರ್ಣದೇವ ಹಿಂದಿರುಗಿ ಅಧಿಕಾರ ಸೂತ್ರಗಳನ್ನು ತನ್ನ ಕೈಗೆ ತೆಗೆದುಕೊಂಡದ್ದರಿಂದ ಮನೆಹೆಗ್ಗಡೆ ಮತ್ತೆ ಆಜ್ಞಾಧೀನ ಕರ್ಮಚಾರಿಯಾಗಿದ್ದನು. ಕೆಲವು ವಾರಗಳಿಂದ ನಿಂತಿದ್ದ ಪಾನಗೋಷ್ಠಿ ಈ ದಿನ ಪುನರಾರಂಭವಾಗಿತ್ತು. ಬ್ರಹ್ಮೇಂದ್ರ ಶಿವಯೋಗಿಗಳ ಪ್ರವಚನ ಕಳೆದೆರಡು ದಿನಗಳಿಂದ ನಡೆದಿರಲಿಲ್ಲ. ಶರಣ ದೀಕ್ಷೆಯಾದ ಮೇಲೆ ಜಗದೇಕಮಲ್ಲರಸರು ಇಂದೇ ಮೊದಲಸಾರಿ ಪಾನಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದಾರೆ. ಈ ಎಲ್ಲ ಘಟನೆಗಳಿಂದ ಮನೆಹೆಗ್ಗಡೆ ಕಳವಳಕ್ಕೀಡಾಗಿದ್ದನು.

ಎಲ್ಲಕ್ಕಿಂತ ಮುಖ್ಯವಾಗಿ ಪಾನಗೋಷ್ಠಿಯನ್ನು ಕುರಿತ ಕರ್ಣದೇವನ ಮತ್ತೊಂದು ಸುಗ್ರೀವಾಜ್ಞೆ ಹೆಗ್ಗಡೆಗೆ ಹೆಚ್ಚು ಕಳವಳವನ್ನುಂಟುಮಾಡಿತ್ತು. ಗಣಿಕಾವಾಸದ ಹೆಗ್ಗಡಿತಿಯರಾರನ್ನೂ ಇಂದು ಪಾನಗೋಷ್ಠಿಗೆ ಕಳುಹಿಸಲಾಗದು. ಅವರ ಕಂಗೆಟ್ಟ

ಮುಖಗಳನ್ನು ನೋಡಿ ನೋಡಿ ನನಗೆ ಬೇಸರವಾಗಿದೆ. ನಗರದಿಂದ ಒಂದೆರಡು ಹೊಸ ಮುಖಗಳನ್ನು ಕರೆಸಲು ಏರ್ಪಡಿಸು," ಎಂದು ಕರ್ಣದೇವ ಹೇಳಿದ್ದನು.

ನಗರದ ಇಂದಿನ ಪರಿಸ್ಥಿತಿಯಲ್ಲಿ ಅದು ಸಾಧ್ಯವಿರಲಿಲ್ಲ. ಮಧುವರಸಾದಿಗಳನ್ನು ಶೂಲಕ್ಕೇರಿಸಿದ್ದು, ಅದರ ಫಲವಾಗಿ ಶರಣರು ನಗರವನ್ನು ಬಿಟ್ಟು ಹೋಗಲು ನಿರ್ಧರಿಸಿರುವುದು, ಇವು ನಗರವಾಸಿಗಳನ್ನು ತಲ್ಲಣಗೊಳಿಸಿದ್ದವು. ಗಣಿಕೆಯರು ಮುಚ್ಚಿದ ಬಾಗಿಲು ತೆಗೆಯುತ್ತಿರಲಿಲ್ಲ. ಚಿಲ್ಲರೆ ಹೆಣ್ಣುಗಳು ಮನೆ ಬಿಟ್ಟು ಹೊರಗೆ ಬರುತ್ತಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಹೊಸ ಮುಖಗಳನ್ನು ಎಲ್ಲಿಂದ ಕರೆಸಲಿ ಎಂದು ಮನೆಹೆಗ್ಗಡೆ ಚಿಂತಿಸುತ್ತಿದ್ದನು. ಕಾವಲು ಭಟರ ನಾಯಕನು ತರುಣಿಯೊಬ್ಬಳನ್ನು ಸಂಗಡ ಕರೆದುಕೊಂಡು ಒಳಗೆ ಬಂದದ್ದನ್ನೂ ಅವನು ಗಮನಿಸಲಿಲ್ಲ.

ಬೆಳ್ಳಿಯ ಮೋಡಗಳ ನಡುವೆ ಬೆಳಗುವ ಚಂದ್ರಲೇಖೆಯಂತೆ ಕಾಣಿಸಿತು ಹೆಗ್ಗಡೆಗೆ ಉಷಾವತಿಯ ಮುಖಮಂಡಲ. ಚಿಂತೆ ಭೀತಿ ಉಪಹಾಸಗಳ ಸಮ್ಮಿಶ್ರಣದಿಂದ ವಿಚಲಿತವಾಗಿದ್ದ ಉಷಾವತಿಯ ಮನಸ್ಸು ವಿಷಣ್ಣತೆಯ ಮೃದುಹಾಸವೊಂದನ್ನು ಸಜ್ಜುಗೊಳಿಸಿತ್ತು ಅದಕ್ಕೆ. ನಾನು ಯೋಚಿಸುತ್ತಿದ್ದ ಸಮಸ್ಯೆಯ ಪರಿಹಾರಕ್ಕಾಗಿ ಗಗನದಿಂದ ಇಳಿದು ಬಂದಳೇ ಈ ಹೆಣ್ಣು ! ಎಂದು ಹೆಗ್ಗಡೆ ಅಚ್ಚರಿಯಿಂದ, "ಯಾರು ಈ ಹೆಂಗಸು ?" ಎಂದು ನಾಯಕನನ್ನು ಕೇಳಿದನು.

ನಾಯಕನು ತೋಟದಲ್ಲಿ ನಡೆದುದನ್ನು ವಿವರಿಸಿ, "ಮೂಕಳೆಂದು ಕಾಣುತ್ತದೆ. ಇವಳ ವಿಚಾರದಲ್ಲಿ ಒಡೆಯರ ಆಜ್ಞೆಯೇನು?" ಎಂದು ಮುಗಿಸಿದನು.

ನಾಯಕನು ಮಾತಾಡುತ್ತಿದ್ದಂತೆ ಹೆಗ್ಗಡೆಯ ಕಣ್ಣುಗಳು ರಾಜಾಂತಃಪುರದ ತಜ್ಞ ಕಾರ್ಯಕರ್ತನಿಗೆ ಉಚಿತವಾದ ಚತುರತೆಯಿಂದ ಉಷಾವತಿಯ ಗುಣದೋಷಗಳನ್ನು ಪರಿಶೀಲಿಸಿ ಪಟ್ಟಿ ಮಾಡಿದವು. ತರುಣಿ, ರೂಪವತಿ, ಅಂಗಾಂಗಗಳು ಚೆನ್ನಾಗಿ ಬೆಳೆದು ಸೌಷ್ಟವ ಲಾವಣ್ಯಗಳಿಂದ ಕೂಡಿವೆ. ವಿಲಾಸ ಜೀವನದ ಪರಿಚಯವಿರಲೂ ಸಾಕು. ಇಷ್ಟೆಲ್ಲ ಗುಣಗಳಿದ್ದೂ ಮೂಕಳೆಂಬ ಒಂದೇ ದೋಷಕ್ಕಾಗಿ ಉಪೇಕ್ಷಿಸಲ್ಪಟ್ಟಿದ್ದಾಳೆ. ಇಂದಿನ ಪಾನಗೋಷ್ಠಿಗೆ ಇವಳನ್ನೇ ಏಕೆ ಕಳುಹಿಸಬಾರದು? ಕರ್ಣದೇವರಸರು ಅಪೇಕ್ಷಿಸಿದ್ದು ಹೊಸ ಮುಖ. ಇವಳಲ್ಲಿ ಎಲ್ಲವೂ ಹೊಸತಾಗಿದ್ದು ಮೂಕತ್ವ ಆ ಹೊಸತನಕ್ಕೆ ವಿಶೇಷ ರೂಪ ಕೊಟ್ಟಿದೆ. ವಾಚಾಲಿ ಹೆಂಗಸರನ್ನು ಜಗದೇಕಮಲ್ಲರಸರು ಯಾವಾಗಲೂ ಒಪ್ಪುತ್ತಿರಲಿಲ್ಲ. ನಾನು ಇವಳನ್ನು ಅಲಂಕರಿಸಿ ಕರೆದುಕೊಂಡು ಹೋಗುವಷ್ಟರಲ್ಲಿ ಕರ್ಣದೇವರಸರು ಕುಡಿದು ಅಮಲೇರಿ, ಸಂಗಡಿದ್ದ ವ್ಯಕ್ತಿ ಹೆಣ್ಣೋಗಂಡೋ ಎಂಬುದನ್ನೂ ತಿಳಿಯುವ

ಸ್ಥಿತಿಯಲ್ಲಿರುವುದಿಲ್ಲ. ಒಂದುದಿನದ ವ್ಯವಹಾರಕ್ಕೆ ಇವಳು ಸಾಕು–ಎಂದು ಅವನು ನಿರ್ಧರಿಸಿಕೊಂಡನು.

"ಇವಳು ಈ ರಾತ್ರಿ ಚಾವಡಿಯಲ್ಲಿರಲಿ. ನಾಳೆ ವಿಚಾರಣೆ ನಡೆಸುತ್ತೇನೆ. ಈಗ ನೀನು ಹೋಗಬಹುದು," ಎಂದು ಹೆಗ್ಗಡೆ ನಾಯಕನನ್ನು ಕಳುಹಿಸಿ, ಉಷಾವತಿಗೆ ಕುಳಿತುಕೊಳ್ಳುವಂತೆ ಸನ್ನೆ ಮಾಡಿದನು. ಉಷಾವತಿ ಬೆದರಿದವಳಂತೆ ಎದುರಿಗಿದ್ದ ಸುಖಾಸನದಲ್ಲಿ ಸರಿದು ಕುಳಿತುಕೊಂಡಳು.

"ನಿನಗೆ ಓದಿ ಬರೆಯಲು ಬರುವುದೆ?"

ಉಷಾವತಿ ತಲೆಯಾಡಿಸಿ ಬರುವುದಾಗಿ ಹೇಳಿದಳು.

ಹೆಗ್ಗಡೆ ಹಲಿಗೆ ಬಳಪಗಳನ್ನು ಮುಂದಿಟ್ಟು, "ಹಾಗಾದರೆ ನೀನು ಯಾರು, ಇಲ್ಲಿಗೆ ಹೇಗೆ ಬಂದೆ ಎಂಬುದನ್ನು ಇದರಲ್ಲಿ ಬರೆ," ಎಂದನು.

ಉಷಾವತಿ ಕೂಡಲೆ ಉತ್ತರ ಬರೆದುಕೊಟ್ಟಳು.

ಹೆಗ್ಗಡೆ ಓದಿಕೊಂಡನು :

"ನಾನು ನಗರದ ಶ್ರೀಮಂತ ವಣಿಕನೊಬ್ಬನ ವಿಧವಾಪುತ್ರಿ. ತಂದೆ ತಾಯಿಗಳ ಪರಿಚಯ ತಿಳಿಸುವುದಿಲ್ಲ. ಇಂದು ಸಂಜೆ ತ್ರಿಪುರಾಂತಕ ದೇಗುಲಕ್ಕೆ ಹೋಗಿದ್ದಾಗ ಧೂರ್ತರು ನನ್ನನ್ನು ಅಪಹರಿಸಿ, ಮೈಮೇಲಿನ ಆಭರಣಗಳನ್ನು ಕಿತ್ತುಕೊಂಡು ಸಮೀಪದ ಅಡವಿಯಲ್ಲಿ ಬಿಟ್ಟುಹೋದರು. ಅರಮನೆಯ ಬೆಳಕು ಕಂಡು ಮಹಾದ್ವಾರಕ್ಕೆ ಬಂದೆ. ತೋಟದಲ್ಲಿದ್ದ ಹೆಂಗಸರು ನನ್ನನ್ನು ಸುತ್ತುಗಟ್ಟಿ ಅಪಹಾಸ್ಯ ಮಾಡುತ್ತಿದ್ದಾಗ ನಾಯಕನು ಬಂದು ಬಿಡಿಸಿ ಇಲ್ಲಿಗೆ ಕರೆದುತಂದ."

ಹೆಗ್ಗಡೆ ಭಾವಿಸಿದನು, ನಿಜವೋ ಸುಳ್ಳೋ. ಘಟನೆ ಅಸಂಭವವಲ್ಲ. ಈಗೆರಡು ತಿಂಗಳಿಂದ ಇಂತಹ ಒಂದೆರಡು ಪ್ರಸಂಗಗಳು ನಗರದಲ್ಲಿ ನಡೆದಿವೆ. ಕಾಲ ಕೆಡುತ್ತಿರುವುದರ ಸೂಚನೆ ಇದು–ಎಂದು. ಉಷಾವತಿಯೊಡನೆ ಅವನು, "ನಾಳೆ ಮುಂಜಾವಿಗೆ ಮೇನೆಯಲ್ಲಿ ನಿನ್ನನ್ನು ತ್ರಿಪುರಾಂತಕ ದೇಗುಲಕ್ಕೆ ಕಳುಹಿಸುತ್ತೇನೆ. ಅಲ್ಲಿಂದ ನೀನು ತಂದೆಯ ಮನೆಗೆ ಹೋಗಬಹುದು. ಅದಕ್ಕೆ ಮೊದಲು, ಈ ರಾತ್ರಿ, ಒಂದು ಕಾರ್ಯದಲ್ಲಿ ನೀನು ನನಗೆ ಸಹಾಯ ಮಾಡಬೇಕು," ಎಂದನು.

ಉಷಾವತಿ ತಲೆಯಾಡಿಸಿ ಒಪ್ಪಿಕೊಂಡಳು.

"ಈ ಅರಮನೆಯಲ್ಲಿ ಯಾರಿರುವರೆಂದು ನಿನಗೆ ತಿಳಿದಿದೆಯೆ?"

ಉಷಾವತಿ ತಲೆಯಾಡಿಸಿ ಇಲ್ಲವೆಂದಳು.

ಹೆಗ್ಗಡೆ ಹೇಳಿದನು : "ತಿಳಿಯದಿರುವುದೇ ಒಳ್ಳೆಯದು. ಅವರು ಚಾಲುಕ್ಯ ರಾಜ್ಯದಲ್ಲಿ ಬಹುದೊಡ್ಡ ವ್ಯಕ್ತಿ. ಪ್ರತಿಷ್ಠೆ ಗೌರವಗಳಲ್ಲಿ ಅವರಷ್ಟು ದೊಡ್ಡವರು

ಮತ್ತಾರೂ ಇರುವುದಿಲ್ಲ. ಈಗ ಅವರು ತಮ್ಮ ಮಿತ್ರರೊಬ್ಬರೊಡನೆ ಪಾನಗೋಷ್ಠಿಯಲ್ಲಿದ್ದಾರೆ. ನೀನು ಅವರನ್ನು ಒಲಿಸಿ, ಈ ರಾತ್ರಿಯನ್ನು ಅವರೊಡನೆ ಕಳೆಯಬೇಕು.

ಹೆಗ್ಗಡೆ ಹೇಳಿದ "ದೊಡ್ಡವ್ಯಕ್ತಿ" ಜಗದೇಕಮಲ್ಲರಸರೇ ಎಂಬುದನ್ನು ಉಷಾವತಿ ತಿಳಿದಳು. ತಾನು ಹುಡುಕಿಕೊಂಡು ಬಂದ ನಿಧಿ ತಾನಾಗಿ ಕರೆಯುತ್ತಿರುವಾಗ ನಿರಾಕರಿಸುವುದು ಸಾಧ್ಯವೆ? ಆದರೆ ಇಂತಹ ನೀತಿಭ್ರಷ್ಟ ಸಲಹೆಗೆ ಕೂಡಲೆ ಒಪ್ಪುವುದು ನಗರದ ವಣಿಕ ಪುತ್ರಿಗೆ–ಅವಳು ವಿಧವೆಯೇ ಆಗಲಿ–ಉಚಿತವಲ್ಲವೆಂದು ಯೋಚಿಸುತ್ತ ಸುಮ್ಮನೆ ನಿಂತಳು.

ಹೆಗ್ಗಡೆ ಪುನಃ ಹೇಳಿದನು : "ನೀನು ಧೂರ್ತರಿಂದ ಅಪಹರಿಸಲ್ಪಟ್ಟೆಯೆಂದು ಕೇಳಿದಾಗ ನಿನ್ನ ಶೀಲಭಂಗವಾಯಿತೆಂದೇ ಜನರು ತಿಳಿಯುವರು. ನನ್ನ ಸಲಹೆಯಂತೆ ನಡೆಯುವುದರಿಂದ ನೀನು ಹೊಸದೇನನ್ನೂ ಕಳೆದುಕೊಳ್ಳುವುದಿಲ್ಲ. ನೀನು ಯಾವುದನ್ನು ಕಳೆದುಕೊಂಡೆಯೆಂದು ಜನರು ತಿಳಿಯುವರೋ ಆ ಶೀಲದ ವಿಕ್ರಮದಿಂದ ನಿನ್ನ ಬಿಡುಗಡೆಯನ್ನು ನೀನೇ ಸಾಧಿಸಿಕೊಳ್ಳುವೆ."

ಆಗಲೂ ಉಷಾವತಿ ಮೌನ. ಅರ್ಥಗರ್ಭಿತವಾಗಿ ಮೂಗನ್ನು ಕೆರೆದುಕೊಳ್ಳುತ್ತ ನಿಂತಿದ್ದಳು ಅವಳು.

ಹೆಗ್ಗಡೆ ಮತ್ತೆ ಹೇಳಿದನು : "ನಾನು ಮೂಕಳು. ನಿಮ್ಮ ಪ್ರಭುಗಳ ಸೇವೆಗೆ ಅರ್ಹಳಲ್ಲ–ಎಂದು ಸಂದೇಹವಲ್ಲವೇ ನಿನಗೆ? ಹೂವುಗಳಿಗೆ ಬಾಯಿಲ್ಲ. ಅವು ಮಾತಾಡುವುದಿಲ್ಲ. ಆದರೂ ಹೂವಿನ ಸೌಂದರ್ಯ ಸುಗಂಧಗಳಿಗೆ ಮನಸೋತು ಜನರು ತಲೆಯಲ್ಲಿ ಮುಡಿಯುವರು, ಕೈಯಲ್ಲಿ ಹಿಡಿಯುವರು, ಮಾಲೆ ಕಟ್ಟಿ ಕೊರಳಿಗೆ ಹಾಕಿಕೊಳ್ಳುವರು. ನೀನು ಕೂಡ ಹೂವಿನಂತೆ ಸೌಂದರ್ಯಮಯಿ, ಸುಗಂಧವತಿ. ಸಹಜ ಸೌಂದರ್ಯಕ್ಕೆ ವಿಲಾಸವಿಭ್ರಮಗಳ ಮೆರುಗು ಹಚ್ಚುವ ಚತುರತೆಯಿದೆ. ನೀನು ಮೂಕಳೇ ಆಗಿರು, ಪ್ರಭುಗಳು ನಿನ್ನನ್ನು ಮೆಚ್ಚುವರೆಂದು ಭರವಸೆ ಕೊಡುತ್ತೇನೆ."

ಹೆಗ್ಗಡೆಯ ವಾದ ವೈಖರಿ, ಮೊನೆಗೊಂಡ ಚಿಗುರು ನುಡಿಗಳು, ಉಷಾವತಿಗೆ ವಿಚಿತ್ರವಾಗಿ ಕೇಳಿಸಿತು. ಮುಖದಲ್ಲಿ ಮಿದುನಗೆ ಮೂಡಿತು. ತಲೆಯಾಡಿಸಿ ಸಲಹೆಗೆ ಒಪ್ಪಿಕೊಂಡಳು.

ಹೆಗ್ಗಡೆ ಆಸನದಿಂದೆದ್ದು ಉಷಾವತಿಯನ್ನು ಅರಮನೆಯೊಳಗಿನ ಕೊಠಡಿಯೊಂದಕ್ಕೆ ಕರೆದುಕೊಂಡು ಹೋಗಿ, "ಇಲ್ಲಿ ನಿನಗೆ ಬೇಕಾದ ಪ್ರಸಾಧನೋಪಕರಣಗಳು, ವಸ್ತ್ರಾಭರಣಗಳು, ಎಲ್ಲವೂ ಇವೆ. ನಿನಗೆ ಬೇಕಾದ

ವಸ್ತುಗಳನ್ನು ತೆಗೆದು ಅಲಂಕರಿಸಿಕೊಂಡು ಅರ್ಧಗಳಿಗೆಯಲ್ಲಿ ಸಿದ್ಧಳಾಗಿರಬೇಕು," ಎಂದು ಹೇಳಿ ಬಾಗಿಲು ಮುಚ್ಚಿಕೊಂಡು ಹೊರಗೆ ಹೋದನು.

* * *

ರಾಜಗೃಹದಲ್ಲಿ ಆ ದಿನ ನಡೆಯುತ್ತಿದ್ದ ಪಾನಗೋಷ್ಠಿ ವಿಚಿತ್ರ ಪರಿಸ್ಥಿತಿಯಲ್ಲಿ, ವಿಶೇಷ ನಿಬಂಧನೆಗಳೊಡನೆ ಪ್ರಾರಂಭವಾಗಿತ್ತು.

ಪಾನಗೋಷ್ಠಿಯ ಆಮಂತ್ರಣವನ್ನು ಅಂಗೀಕರಿಸುವ ಮೊದಲು ಜಗದೇಕಮಲ್ಲನು ಕರ್ಣದೇವನಿಗೆ ಹೇಳಿದ್ದನು–"ದೀಕ್ಷೆ ನಡೆದಾಗ ಬ್ರಹ್ಮೇಂದ್ರ ಶಿವಯೋಗಿಗಳಿಗೆ ಸುರಾಪಾನ ಮಾಡುವುದಿಲ್ಲವೆಂದು ವಚನ ಕೊಟ್ಟಿದ್ದೇನೆ. ಅದರಂತೆ ನಡೆಯುವುದು ನನ್ನ ನಿರ್ಧಾರ. ನಿನಗೆ ಮಧು, ನನಗೆ ಪಾನಕ, ಹೀಗೆ ಎರಡು ಬಗೆಯ ಪಾನೀಯಗಳು ಸಿದ್ಧವಾಗಬೇಕು. ಗಣಿಕಾವಾಸದ ಹೆಗ್ಗಡಿತಿ ದಾಸಿಯರಾರೂ ಪಾನಗೋಷ್ಠಿಯಲ್ಲಿರಲಾಗದು. ನಿನಗೆ ಜೊತೆಗಾತಿಯೊಬ್ಬಳು ಅಗತ್ಯವಾದರೆ ನಗರದಿಂದ ಹೊಸ ಹೆಣ್ಣೊಬ್ಬಳನ್ನು ಕರೆಸಿಕೊಳ್ಳಬಹುದು. ನನ್ನ ಅಡ್ಡಿಯಿಲ್ಲ. ಈ ನಿಬಂಧನೆಗಳಿಗೆ ಒಪ್ಪುವುದಾದರೆ ನಾನು ಬರುತ್ತೇನೆ," ಎಂದು.

"ನಿನ್ನ ಇಷ್ಟದಂತಾಗಲಿ, ಭಂಡರಾಜ. ಅದರಂತೆ ಎಲ್ಲವನ್ನೂ ಏರ್ಪಡಿಸಲು ಹೆಗ್ಗಡೆಗೆ ಹೇಳುತ್ತೇನೆ." ಎಂದು ಕರ್ಣದೇವ ಭರವಸೆ ಕೊಟ್ಟಿದ್ದನು.

ನಿಬಂಧನೆಯಂತೆ ಪೈಜಣ ಕೈಬಳೆಗಳ ಸಪ್ಪಳವಿಲ್ಲದೆ ಗ್ರಾಮಾಂತರದಿಂದ ಬಂದಿದ್ದ ಇಬ್ಬರು ಲಾವಣಿಕಾರರ ನಾಡಗೀತೆಗಳಿಂದ ಪಾನಗೋಷ್ಠಿ ಪ್ರಾರಂಭವಾಯಿತು. ಜಗದೇಕಮಲ್ಲ ಕರ್ಣದೇವರಸರು ದಿಂಬುಗಳು ಹರಡಿದ್ದ ಪರ್ಯಂಕಗಳ ಮೇಲೆ ಕುಳಿತು ಕೇಳುತ್ತಿದ್ದರು.

ಪ್ರಾರಂಭದ ಶಿವಸ್ತೋತ್ರ ತತ್ವಗೀತೆಗಳನ್ನು ಮುಗಿಸಿ ಲಾವಣಿಕಾರರು ಕಾಮೋತ್ತೇಜಕ ಅಶ್ಲೀಲ ಗೀತೆಗಳನ್ನು ಹಾಡಲು ಮೊದಲು ಮಾಡಿದಾಗ ಜಗದೇಕಮಲ್ಲನು ಅಸಹನೆಯಿಂದ ಚಡಪಡಿಸಿದುದನ್ನು ಕಂಡು ಕರ್ಣದೇವ, ಬೇಗ ಮುಗಿಸುವಂತೆ ಹೆಗ್ಗಡೆಗೆ ಆಜ್ಞೆ ಮಾಡಿದನು.

ಲಾವಣಿಕಾರರು ಸಂಭಾವನೆ ಪಡೆದು ಹೊರಗೆ ಹೋದ ಮೇಲೆ ಪಸಾಯಿತರು ಮಧುಪಾತ್ರೆ ಬಟ್ಟಲುಗಳನ್ನು ಪಾರ್ಶ್ವದ ಪೀಠಗಳ ಮೇಲೆ ತಂದಿಟ್ಟು ಸಜ್ಜುಗೊಳಿಸಿದರು. ಅವರಲ್ಲೊಬ್ಬನು ಹಣ್ಣಿನ ಪಾನೀಯ ಮತ್ತು ಮಧು ತುಂಬಿದ ಎರಡು ಬಟ್ಟಲುಗಳನ್ನು ಜಗದೇಕಮಲ್ಲ ಕರ್ಣದೇವರಸರ ಎದುರಿಗಿಟ್ಟು, "ಪ್ರಭುಗಳು ಒಪ್ಪಿಸಿಕೊಳ್ಳಬೇಕು," ಎಂದು ಹೇಳಿ ಹಿಂದೆ ಸರಿದನು.

ಜಗದೇಕಮಲ್ಲನೊಡನೆ ಕರ್ಣದೇವ ಹೇಳಿದನು : "ನೋಡು, ಭಂಡರಾಜ.

ಸ್ಫಟಿಕಶಿಲೆಯ ಈ ಎರಡು ಬಟ್ಟಲುಗಳು ಆಕಾರದಲ್ಲಿ ಒಂದೇ ಆಗಿದ್ದರೂ, ಅವುಗಳಲ್ಲಿ ತುಂಬಿದ ಪಾನೀಯಗಳಲ್ಲಿ ಎಷ್ಟೊಂದು ಅಂತರವಿದೆ. ಒಂದರಲ್ಲಿ ಮಧು, ಇನ್ನೊಂದರಲ್ಲಿ ಹಣ್ಣಿನ ರಸ. ಒಂದು ಮಾನವನನ್ನು ಪಶುವಾಗಿ ಮಾಡುತ್ತದೆ. ಇನ್ನೊಂದು ಮಾನವನನ್ನು ದೇವತ್ವಕ್ಕೇರಿಸದಿದ್ದರೂ ಮಾನವನನ್ನಾಗಿಯೇ ಉಳಿಸುತ್ತದೆ. ಈ ಸ್ಫಟಿಕದ ಬಟ್ಟಲುಗಳಂತೆ ನಾವಿಬ್ಬರೂ ರಾಜವಂಶೀಯರು, ಸಮಾನ ವಯಸ್ಕರು, ರೂಪ ಯೌವನ ಪ್ರತಿಷ್ಠೆ ಗೌರವಗಳಲ್ಲಿ ಸಮಾನರು. ಆದರೂ ನಮ್ಮಿಬ್ಬರಲ್ಲಿ ಎಷ್ಟೊಂದು ಅಂತರ! ನೀನು ಪಟ್ಟಾಭಿಷಿಕ್ತನಾಗಿ, ಅಧಿಕಾರದಿಂದ ವಂಚಿಸಲ್ಪಟ್ಟು, ಬಂಧನದಲ್ಲಿದ್ದರೂ ಶಾಂತಿ ಸಮಾಧಾನಗಳಿಂದ ಚಿರಸುಖಿಯಾಗಿರುವೆ. ನಾನು ಸ್ವತಂತ್ರನಾಗಿ ಅಧಿಕಾರದಲ್ಲಿದ್ದರೂ ಮನಃಶಾಂತಿ ಇಲ್ಲದೆ ಚಿರದುಃಖಿಯಾಗಿ, ಕುಡಿದು ಕುಡಿದು ಮನದಳಲನ್ನು ಮರೆಯಲು ಪ್ರಯತ್ನಿಸುತ್ತಿದ್ದೇನೆ. ಇದರ ಕಾರಣ ನಮ್ಮ ಜೀವನ ವಿಧಾನವೆ, ಕರ್ಮ ವಿಪಾಕವೆ? ಮಂಗಳವೇಡೆಯಿಂದ ಬಂದಾಗಿನಿಂದ ನನಗಿದೇ ಚಿಂತೆ,"–ಎಂದು ನುಡಿದು ನಿಟ್ಟುಸಿರಿಟ್ಟು ಕರ್ಣದೇವ, ಪಾನಕ ತುಂಬಿದ ಬಟ್ಟಲನ್ನು ಜಗದೇಕಮಲ್ಲನಿಗೆ ಕೊಟ್ಟು, ಮಧು ತುಂಬಿದ ಇನ್ನೊಂದು ಬಟ್ಟಲನ್ನು ತಾನು ತೆಗೆದುಕೊಂಡನು. ಇಬ್ಬರೂ ಸ್ವಸ್ತಿಪಾನ ಮಾಡಿದರು.

ಬಟ್ಟಲನ್ನು ಕೆಳಗಿಟ್ಟು ಜಗದೇಕಮಲ್ಲನು ಹೇಳಿದನು : "ಕಳೆದ ಕೆಲವು ವಾರಗಳಿಂದ ಬ್ರಹ್ಮೇಂದ್ರ ಶಿವಯೋಗಿಗಳೊಡನೆ ನಾನು ಈ ವಿಚಾರಗಳನ್ನು ಪ್ರಸ್ತಾಪಿಸಿದ್ದೇನೆ, ಕರ್ಣದೇವ. ಜೀವನ ವಿಧಾನ, ಕರ್ಮವಿಪಾಕ, ಇವೆರಡೂ ಪರಸ್ಪರ ಪೋಷಕವಸ್ತುಗಳು. ಒಂದರಿಂದ ಇನ್ನೊಂದು, ಅದರಿಂದ ಮತ್ತೊಂದು, ಈ ರೀತಿ ಕೊನೆಯಿಲ್ಲದ ಪರಂಪರೆ ಅದು. ಈ ವಿಷಚಕ್ರದಿಂದ ಪಾರಾಗಲು ಕರ್ಮ ವಿಶ್ರಾಂತಿಯೊಂದೇ ದಾರಿ, ಎಂದು ಹೇಳುತ್ತಾರೆ ಅವರು."

"ಕರ್ಮವಿಶ್ರಾಂತಿ ಎಂದರೇನು?" ಎರಡನೆಯ ಸಾರಿ ಬಟ್ಟಲನ್ನು ತುಂಬಿಕೊಂಡು ಕರ್ಣದೇವ ಪ್ರಶ್ನಿಸಿದನು.

"ನಾವು ಒಂದು ಮುಂಜಾವಿನಿಂದ ಇನ್ನೊಂದು ಮುಂಜಾವಿನವರೆಗೆ ಮಾಡುವುದೆಲ್ಲ ಕರ್ಮಗಳೆ. ತತ್ವದರ್ಶಿಗಳು ಅವುಗಳನ್ನು ಪುಣ್ಯಪಾಪಗಳೆಂದು ವಿಭಾಗಿಸುತ್ತಾರೆ. ಯಾವ ಕರ್ಮದಿಂದ ನಮ್ಮ ಅಂತರಾತ್ಮನಿಗೆ ಸುಖವಾಗುವುದೋ, ಅನ್ಯರಿಗೆ ದುಃಖವಾಗುವುದಿಲ್ಲವೋ ಅವುಗಳೆಲ್ಲ ಪುಣ್ಯಕರ್ಮಗಳು. ಯಾವುದರಿಂದ ನಮ್ಮ ಅಂತರಾತ್ಮನಿಗೆ ಸುಖವಾಗುವುದಿಲ್ಲವೋ, ಅನ್ಯರಿಗೆ ದುಃಖವಾಗುವುದೋ ಅವುಗಳೆಲ್ಲ ಪಾಪಕರ್ಮಗಳು. ಪುಣ್ಯ ಪಾಪಗಳ ಈ ದ್ವಂದ್ವದಿಂದ ಮುಕ್ತನಾಗಿ

ಕರ್ಮ ವಿಶ್ರಾಂತಿಯನ್ನು ಪಡೆಯಲೆಳಸುವ ಸಾಧಕನು ಮೊದಲು ಪಾಪಕರ್ಮಗಳನ್ನು ಬಿಡಬೇಕು. ಅದರಲ್ಲಿ ಸಫಲತೆ ಪಡೆದಾಗ ಸಾಧಕನಿಗೆ ಪುಣ್ಯಕರ್ಮಗಳು ಐಚ್ಛಿಕವಾಗುವುವು. ಮನಶ್ಯಾಂತಿ ಲಭಿಸುವುದು. ನಾನು ಬಂಧನದಲ್ಲಿದ್ದರೂ, ಲೋಕ ವ್ಯವಹಾರದಿಂದ ದೂರವಾಗಿದ್ದರೂ ಚಿರಸುಖಿಯಂತೆ ಕಾಣುವುದರ ಮರ್ಮವಿದು."

"ನಿನ್ನ ಮಾತುಗಳು ನನಗೆ ಒಗಟೆಯ ನುಡಿಗಳಂತಿವೆ, ಭಂಡರಾಜ. ಒಂದೂ ಅರ್ಥವಾಗುತ್ತಿಲ್ಲ."

"ನಿಮ್ಮಂಥವರಿಗೆ ಅರ್ಥವಾಗಲೆಂದು ಬಸವಣ್ಣನವರು ಸುಲಭವಾದ ಮಾತುಗಳಲ್ಲಿ ಹೀಗೆ ಹೇಳಿದ್ದಾರೆ–

"ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ, ಕಾಣಿಭೋ !
ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೆ ಮರ್ತ್ಯಲೋಕ,
ಆಚಾರವೇ ಸ್ವರ್ಗ, ಅನಾಚಾರವೇ ನರಕ,
ಕೂಡಲ ಸಂಗಮದೇವಾ, ನೀವೇ ಪ್ರಮಾಣು."

ಬಸವಣ್ಣನವರ ಹೆಸರು ಕೇಳಿ ಕರ್ಣದೇವನು ವಿಚಲಿತನಾಗಿ ಹೇಳಿದನು: ಆ ಮಹಾಮಹಿಮರ ನಿರ್ವಾಸನವೇ ಈಗಿನ ಎಲ್ಲ ಅನರ್ಥಗಳ ಮೂಲ, ಭಂಡರಾಜ. ಬಸವಣ್ಣನವರ ಪುಣ್ಯದಿಂದ ಶಾಂತಿ ಸಮೃದ್ಧಿಗಳ ಮಹಾನಗರವಾಯಿತು ಕಲ್ಯಾಣ. ಅವಿವೇಕಿ ಕ್ರಮಿತನ ಮಾತು ಕೇಳಿ ಅಣ್ಣ ಬಿಜ್ಜಳನು ಅವರನ್ನು ಕಲ್ಯಾಣದಿಂದ ಓಡಿಸಿದ. ಪ್ರಾರಂಭವಾಯಿತು ಅನರ್ಥ ಪರಂಪರೆ!"

ಜಗದೇಕಮಲ್ಲ ಅಚ್ಚರಿಯಿಂದ ಕರ್ಣದೇವನ ಕಡೆ ನೋಡಿದನು. ಈ ಪರಿವರ್ತನೆಯ ಅರ್ಥವೇನು? ಅದು ವಾಸ್ತವವೇ ವಂಚನೆಯೆ? ಎಂದು ಶಂಕಿಸಿತು ವಿವೇಕ.

"ಅನರ್ಥ ಪರಂಪರೆ ! ಯಾವ ವಿಚಾರ ನೀನು ಹೇಳುತ್ತಿರುವುದು?" ಎಂದು ಅವನು ಕರ್ಣದೇವನನ್ನು ಪ್ರಶ್ನಿಸಿದನು.

ಕರ್ಣದೇವ ಹೇಳಿದನು : "ಮಂಗಳವೇಡೆಯ ಅಗ್ನಿದಾಹ, ಚಾಲುಕ್ಯರಾಣಿ ಬೆಂಕಿಯಲ್ಲಿ ಭಸ್ಮವಾದದ್ದು, ವಿಚಾರಣೆ ನಡೆಸದೆ ಮಧುವರಸಾದಿಗಳನ್ನು ಶೂಲಕ್ಕೇರಿಸಿದ್ದು, ಶರಣರನ್ನು ನಾಶಮಾಡುವ ಉದ್ದೇಶದಿಂದ ಮಾಧವನನ್ನು ದಂಡನಾಯಕನನ್ನಾಗಿ ನೇಮಿಸಿರುವುದು, ಇವೆಲ್ಲವೂ ಅನರ್ಥಗಳಲ್ಲವೆ? ಇದರಿಂದ ಕಲ್ಯಾಣದ ನಾಗರಿಕರು ಭಯಗ್ರಸ್ತರಾಗಿದ್ದಾರೆ. ಶರಣರು ಕಲ್ಯಾಣವನ್ನು ಬಿಟ್ಟು ಹೋಗಲು ನಿರ್ಧರಿಸಿದ್ದಾರೆ. ರಾಜ್ಯದ ಸಾಮಂತ ಮನ್ನೆಯರಲ್ಲಿ ಅಸಮಾಧಾನ

ಬೆಳೆಯುತ್ತಿದೆ. ಮುಂದೇನಾಗುವುದೋ ಯಾರಿಗೂ ತಿಳಿಯದು."

ಜಗದೇಕಮಲ್ಲನ ಅಚ್ಚರಿ ಇಮ್ಮಡಿಸಿತು. ಪ್ರಸಕ್ತ ರಾಜಕೀಯವನ್ನು ಕುರಿತ ಮೌನ ಅನಾಸಕ್ತಿಗಳೇ ತನ್ನ ರಕ್ಷಾಕವಚವೆಂದು ಭಾವಿಸಿ, "ಇವೆಲ್ಲ ನನಗೆ ತಿಳಿಯದ ವಿಚಾರಗಳು, ಕರ್ಣದೇವ. ನೀನು ನನ್ನೊಡನೆ ಈ ವಿಚಾರಗಳನ್ನು ಪ್ರಸ್ತಾಪಿಸಿದೆಯೆಂದು ತಿಳಿದರೂ ಬಿಜ್ಜಳರಾಯರು ನಿನ್ನ ಮೇಲೆ ಕೋಪ ಮಾಡುವರು," ಎಂದು ನಯವಾಗಿ ಉತ್ತರಕೊಟ್ಟನು.

ಕರ್ಣದೇವ ಹಠಾತ್ತಾಗಿ ಉತ್ತೇಜಿತನಾದನು. ನಿರಂತರ ಪಾನಾಸಕ್ತರಿಗೆ ಸಹಜವಾದ ಕ್ಷಣಿಕ ಆವೇಶದಿಂದ, "ಬಿಜ್ಜಳರಾಯರು ! ಮಂಗಳವೇಡೆಯ ಅಗ್ನಿದಾಹದಿಂದ ಅವರ ಸ್ವಭಾವದಲ್ಲಿ ಬದಲಾವಣೆಯಾಗಿದೆ, ಭಂಡರಾಜ. ಈಗ ಅವರು ಹಿಂದಿನಂತಿಲ್ಲ. ಬುದ್ಧಿಭ್ರಮೆಯಾದವರಂತೆ ತಮ್ಮ ಹಿತಾಸಕ್ತಿಗಳನ್ನೂ ಮರೆತು ಕಾರ್ಯ ನಡೆಸುತ್ತಿದ್ದಾರೆ. ಮುಂದೆಯೂ ಹೀಗಾದರೆ ಕಲಚೂರ್ಯ ಗೌರವ ಪ್ರತಿಷ್ಠೆಗಳು ಮಣ್ಣುಗೂಡಿದಂತೆಯೆ," ಎಂದು.

ಕರ್ಣದೇವನ ಸಲಹೆಯಿಂದಲೋ, ರಾಜಕೀಯದ ಸುಳಿವು ತಿಳಿದು ಮುನ್ನೆಚ್ಚರಿಕೆಯಿಂದಲೋ ಮನೆಹೆಗ್ಗಡೆ ಈ ಮೊದಲೆ ಅಲ್ಲಿದ್ದ ಪಸಾಯಿತರನ್ನು ಹೊರಗೆ ಕಳುಹಿಸಿದ್ದನ್ನು ಗಮನಿಸಿದ ಜಗದೇಕಮಲ್ಲನು ವಿವೇಕ ಜಾಗರೂಕತೆಗಳನ್ನು ಮರೆತು, ಕುಹಕದ ನಗೆ ಬೀರಿ, "ನಿನ್ನ ಮಾತುಗಳನ್ನು ಕೇಳಿದರೆ ಬ್ರಹ್ಮೇಂದ್ರ ಶಿವ ಯೋಗಿಗಳ ಒಂದು ನುಡಿ ನೆನಪಿಗೆ ಬರುತ್ತದೆ. ಕರ್ಣದೇವ," ಎಂದನು.

"ಯಾವುದು ಆ ನುಡಿ?" ಕರ್ಣದೇವ ಕೇಳಿದನು.

"ದೇವತೆಗಳು ಯಾವನ ವಿನಾಶವನ್ನು ಇಚ್ಛಿಸುವರೋ ಅವನನ್ನು ಮೊದಲು ಉನ್ಮತ್ತನನ್ನಾಗಿ ಮಾಡುವರು ಎಂದು. ಯಸ್ಯೇಚ್ಛಂತಿ ಸುರಾಃ ವಿನಾಶಮಭವತ್ ತಸ್ಯಾದ್ಯ ಬುದ್ಧಿಭ್ರಮಃ–ಬಿಜ್ಜಳರಾಯರ ವಿಚಾರದಲ್ಲಿ ದೇವತೆಗಳು ಕೋಪಗೊಂಡಿದ್ದಾರೆ.

ಕರ್ಣದೇವ ತುಸು ಹೊತ್ತು ಮೌನವಾಗಿ ಯೋಚಿಸುತ್ತಿದ್ದು, ಕೈಯಲ್ಲಿದ್ದ ಪಾನಪಾತ್ರೆಯಿಂದ ಇನ್ನೆರಡು ಗುಟುಕು ಮಧುವನ್ನು ಹೀರಿ, "ಅಣ್ಣನವರ ವಿಚಾರದಲ್ಲಿ ಬ್ರಹ್ಮೇಂದ್ರ ಶಿವಯೋಗಿ ಈ ಮಾತು ಹೇಳಿದರೆ?" ಎಂದನು.

ಜಗದೇಕಮಲ್ಲ ಉತ್ತರ ಕೊಟ್ಟನು : " ಈ ಶಿವಯೋಗಿಗಳು ಹೇಳುವುದೆಲ್ಲ ಪುರಾಣ ಕಥೆಗಳು, ಕರ್ಣದೇವ. ವಾಸ್ತವ ಜಗತ್ತನ್ನೇ ಮರೆಯುತ್ತಾರೆ ಅವರು. ಪ್ರಸ್ತುತ ರಾಜಕೀಯವೆಂದರೆ ಬ್ರಹ್ಮೇಂದ್ರ ಶಿವಯೋಗಿಗಳಿಗೆ ತುಂಬ ಅಸಹನೆ. ಆ ಚಿದಂಬರ ರಹಸ್ಯ ನಮಗೇಕೆ? ಎಂದುಬಿಡುತ್ತಾರೆ. ಈಗಲೂ ವಿಕ್ರಮಾದಿತ್ಯ

ಮಹಾರಾಜರ ಆಳ್ವಿಕೆಯಲ್ಲಿರುವೆನೆಂದು ಅವರು ತಿಳಿದಿದ್ದಾರೆ.

ಪಾತ್ರೆಯನ್ನು ಬರಿದಾಗಿಸಿ ಕೆಳಗಿಟ್ಟು ಕರ್ಣದೇವನೆಂದನು : "ಶಿವಯೋಗಿಗಳೆಲ್ಲ ಇಂತಹ ವಿಚಿತ್ರ ವ್ಯಕ್ತಿಗಳು, ಭಂಡರಾಜ. ಎರಡು ವರ್ಷಗಳ ಹಿಂದೆ ಅಂತಹ ಮಹಾತ್ಮರೊಬ್ಬರ ಅನುಭವವಾಗಿದೆ ನನಗೆ."

"ಯಾರು ಆ ಮಹಾತ್ಮರು?" –ಜಗದೇಕಮಲ್ಲ ಆತುರಗೊಂಡವನಂತೆ ಪ್ರಶ್ನಿಸಿದನು.

ಕರ್ಣದೇವ ಹೇಳಿದನು : "ಆಗ ನಾನು ಸೊನ್ನಲಾಪುರಕ್ಕೆ ಪ್ರವಾಸ ಹೋಗಿದ್ದೆ. ನಗರವೆಲ್ಲ ಯಾತ್ರಿಕರಿಂದ ತುಂಬಿರುವುದನ್ನು ಕಂಡು, 'ಇವರೆಲ್ಲ ಏಕೆ ಇಲ್ಲಿಗೆ ಬಂದಿದ್ದಾರೆ?' ಎಂದು ನಗರ ರಕ್ಷಕ ಅಧಿಕಾರಿಯನ್ನು ಕೇಳಿದೆ. 'ನೀವು ಸಿದ್ಧರಾಮ ಶಿವಯೋಗಿಗಳ ಹೆಸರು ಕೇಳಿಲ್ಲವೆ? ಅವರು ಈ ಪ್ರಾಂತದಲ್ಲಿ ಬಸವಣ್ಣನವರಷ್ಟೇ ಪ್ರಸಿದ್ಧರು. ಅವರ ದರ್ಶನಕ್ಕಾಗಿ ಪ್ರತಿದಿನ ಯಾತ್ರಿಕರು ಬರುತ್ತಾರೆ,' ಎಂದು ಹೇಳಿದ ಅಧಿಕಾರಿ. 'ಒಂದು ಸಾರಿ ನಾವೂ ಅವರನ್ನು ನೋಡಬೇಕು. ಸಂದರ್ಶನಕ್ಕೆ ಏರ್ಪಡಿಸಿರಿ,' ಎಂದು ಅವನಿಗೆ ಹೇಳಿದೆ. ಮರುದಿನ ಪ್ರಾತಃಕಾಲ ನಾವು ಆ ಶಿವಯೋಗಿ ಶರಣನನ್ನು ನೋಡಿದೆವು. ನಗರ ಮಧ್ಯದಲ್ಲಿ ಒಂದು ದೊಡ್ಡ ಕೆರೆ. ಅದರ ತಡಿಯಲ್ಲಿ ಕಲ್ಲು ಮಂಟಪದಲ್ಲಿ ಅವರು ಕುಳಿತಿದ್ದರು. ಸುತ್ತ ಶಿಷ್ಯರ ತಂಡ. ನಾನು ಕೈ ಮುಗಿದು ಕಾಣಿಕೆ ಕೊಟ್ಟು ಎದುರಿಗೆ ಕುಳಿತುಕೊಂಡೆ. 'ಬಂದ ಕಾರಣವೇನು?' ಎಂದು ಅವರು ಕೇಳಿದರು. ನಾನು ಸಮಯಸ್ಫೂರ್ತಿಯಿಂದ, 'ನಿಮ್ಮಿಂದ ಶರಣ ದೀಕ್ಷೆ ಪಡೆಯುವುದಕ್ಕಾಗಿ', ಎಂದು ಉತ್ತರ ಕೊಟ್ಟೆ. ಕೆಲವು ಕ್ಷಣಗಳು ಅವರು ನನ್ನನ್ನೇ ನೋಡುತ್ತಿದ್ದು ಬಳಿಕ.....ಏನು ಹೇಳಿದರು ಗೊತ್ತೆ, ಭಂಡರಾಜ?"

"ಏನು ಹೇಳಿದರು ?"

"ನಿಮ್ಮಂತಹ ಮದ್ಯಪಾಯಿ ಲಂಪಟರಿಗೆ ಶರಣ ಧರ್ಮದಲ್ಲಿ ಸ್ಥಾನವಿಲ್ಲ, ಕರ್ಣದೇವರಸರೆ. ನಿಮ್ಮ ನಡೆ ನುಡಿಗಳನ್ನು ಸುಧಾರಿಸಿಕೊಂಡು, ಒಂದು ವರ್ಷದ ಮೇಲೆ ಪುನಃ ಬಂದು ನೋಡಿದರೆ ಉತ್ತರ ಹೇಳುತ್ತೇನೆ–ಎಂದು."

"ನಿನಗೆ ತಕ್ಕ ಉತ್ತರ, ಕರ್ಣದೇವ. ನಾವು ನಮ್ಮ ನಿಜಸ್ವರೂಪ ಕಾಣಬೇಕಾದರೆ ಶರಣರ ನುಡಿಗಳಲ್ಲಿ." –ನಸುನಕ್ಕು ನುಡಿದನು ಜಗದೇಕಮಲ್ಲ.

ಕರ್ಣದೇವ ತುಸು ಕೋಪದಿಂದ–"ಶರಣರ ನುಡಿಗಳೇ ಏಕೆ? ಕನ್ನಡಿಯ ಮುಂದೆ ನಿಂತರೆ ಕಾಣುವುದಿಲ್ಲವೇ ನಿಜಸ್ವರೂಪ?"

ಜಗದೇಕಮಲ್ಲನೆಂದನು : "ಕನ್ನಡಿಯಲ್ಲಿ ಕಾಣುವುದು ಪ್ರತಿನಿತ್ಯದ ನಮ್ಮ

ಸಾಮಾನ್ಯ ರೂಪ. ಗುಣದೋಷಗಳು ಕಾಣಬೇಕಾದರೆ ಹೆಣ್ಣಿನ ಕಣ್ಣ ಕನ್ನಡಿಯಲ್ಲಿ, ಕಣ್ಣಾಲಿಯಲ್ಲಿನ ನೆರಳು ಕಾಣುವಷ್ಟು ಹತ್ತಿರ ನಿಂತು ನೋಡಬೇಕಾಗುವುದು."

"ಹೆಣ್ಣಿನ ಕಣ್ಣ ಕನ್ನಡಿಯಲ್ಲಿ ! ಹೆಣ್ಣಿನಿಂದ ದೂರವಾದಷ್ಟೂ ನಿನ್ನ ರಸಿಕತೆ ಹೆಚ್ಚುತ್ತಿದೆ, ಭಂಡರಾಜ!" –ಎಂದು ಕರ್ಣದೇವ ಗಹಗಹಿಸಿ ನಕ್ಕನು. ಪಾನಗೋಷ್ಠಿ ಈ ಘಟ್ಟದಲ್ಲಿದ್ದಾಗ ಮನೆಹೆಗ್ಗಡೆ ಉಷಾವತಿಯನ್ನು ಕರೆದುಕೊಂಡು ಅಲ್ಲಿಗೆ ಬಂದನು.

"ಇಷ್ಟು ಹೊತ್ತು ಎಲ್ಲಿ ಹೋಗಿದ್ದೆ, ಹೆಗ್ಗಡೆ? ಮೂವರು ಕೋಣೆಯ ಸಮಿತಿ ನೀನಿಲ್ಲದೆ ಇಷ್ಟು ಹೊತ್ತು ಅಪೂರ್ಣವಾಗಿತ್ತು." ಎಂದನು ಅವನನ್ನು ಕಂಡು ಕರ್ಣದೇವ.

"ದೇವಲೋಕಕ್ಕೆ ಹೋಗಿ ನಿಮಗಾಗಿ ಈ ಅಪ್ಸರೆಯನ್ನು ಹುಡುಕಿ ತಂದೆ ಒಡೆಯರೆ. ಒಪ್ಪಿಸಿಕೊಳ್ಳಬೇಕು," ಎಂದು ಹೆಗ್ಗಡೆ ಉಷಾವತಿಯನ್ನು ಎದುರಿಗೆ ನಿಲ್ಲಿಸಿದನು.

ಹೆಗ್ಗಡೆ ತನಗೆ ಕೊಟ್ಟ ಅಲ್ಪಾವಕಾಶವನ್ನು ಉಷಾವತಿ ಸದುಪಯೋಗಪಡಿಸಿ ಕೊಂಡಿದ್ದಳು. ಈಗ ಅವಳು ಗುಲಾಬಿ ರಂಗಿನ ತೆಳುವಾದ ರೇಷಿಮೆಯ ಸೀರೆಯುಟ್ಟು ನೀಲಿಯ ರವಿಕೆ ತೊಟ್ಟಿದ್ದಳು. ಕೊರಳು ಕೈಗಳಲ್ಲಿ ಮುತ್ತಿನ ಸರಗಳು. ಚಿಕ್ಕಣವಾಗಿ ಬಾಚಿ ಬೆನ್ನ ಮೇಲೆ ಬೀಳುವಂತೆ ಕಟ್ಟಿದ್ದ ಸೋರ್ಮುಡಿಯಲ್ಲಿ ಅರೆಬಿರಿದ ಕನ್ನೈದಿಲೆ, ಹಣೆ ಕದಪುಗಳಲ್ಲಿ ಕಸ್ತೂರಿಯ ರಸದಿಂದ ತಿದ್ದಿ ತೆಗೆದ ತಿಲಕ ಮಕರಿಕೆಗಳು, ತಾಂಬೂಲದಿಂದ ರಂಗಾದ ತುಟಿ.

ಕರ್ಣದೇವ ಅಚ್ಚರಿಯಿಂದ ಅವಳನ್ನು ನೋಡುತ್ತ, "ನಿಜವಾಗಿ ಇವಳು ಅಪ್ಸರೆ ! ಎಲ್ಲಿಂದ ಕರೆದುಕೊಂಡು ಬಂದೆ?" ಎಂದು ಹೆಗ್ಗಡೆಯನ್ನು ಕೇಳಿದನು.

"ಅಪ್ಸರೆಯೋ ಅಲ್ಲವೋ, ಒಡೆಯರು ಪರೀಕ್ಷಿಸಿ ಹೇಳಬೇಕು. ದೇವಭಾಷೆ ನಮ್ಮ ಕಿವಿಗೆ ಬೀಳದಿರಲೆಂದು ಬ್ರಹ್ಮದೇವ ಇವಳನ್ನು ಮೂಕಳಾಗಿ ಮಾಡಿದ್ದಾನೆ, ಅದೊಂದನ್ನು ಬಿಟ್ಟರೆ ಉಳಿದ ವಿಷಯಗಳಲ್ಲಿ....."

–ಹೆಗ್ಗಡೆ ಅರ್ಥಗರ್ಭಿತವಾಗಿ ನಕ್ಕು ಮಾತು ಮುಗಿಸಿದನು.

"ಹೆಗ್ಗಡೆ ನಮಗರ್ಪಿಸಿರುವ ಈ ಮೂಕ ಮದನಿಕೆಯನ್ನೇನು ಮಾಡುವುದು, ಭಂಡರಾಜ?"–ಎಂದನು ಕರ್ಣದೇವ, ಜಗದೇಕಮಲ್ಲನ ಕಡೆ ತಿರುಗಿ.

ಒಂದು ಸಾರಿ ಉಷಾವತಿಯನ್ನು ಆಪಾದಮಸ್ತಕ ನಿಟ್ಟಿಸಿ ಜಗದೇಕಮಲ್ಲನು ಹೇಳಿದನು– "ಭಕ್ತಿಯಿಂದ ಅರ್ಪಿತವಾದ ಎಲ್ಲ ವಸ್ತುಗಳನ್ನೂ ಪ್ರೀತಿಯಿಂದ ಸ್ವೀಕರಿಸುವುದು ಪ್ರಭುಧರ್ಮ, ಕರ್ಣದೇವ. ಕಲ್ಲಿನ ದೇವರಿಗೆ ಹಣ್ಣಾದರೇನು

ಹೂವಾದರೇನು ? ಕೊಟ್ಟಿದ್ದೆಲ್ಲ ಕಾಣಿಕೆ, ಅಟ್ಟಿದ್ದೆಲ್ಲ ನೈವೇದ್ಯ."

"ಜಗದೇಕಮಲ್ಲರು ಒಪ್ಪಿದರೆ ಮುಗಿಯಿತು, ಹೆಗ್ಗಡೆ. ಮೂಕಳಾದರೂ ನಾವಾಡುವ ಮಾತು ಅರ್ಥವಾಗುವುದಲ್ಲವೆ?" ಎಂದು ಕರ್ಣದೇವ ಉಷಾವತಿಯನ್ನು ಸಂಬೋಧಿಸಿ, "ನಿನ್ನ ಹೆಸರೇನು ಚೆಲುವೆ?" ಎಂದು ಕೇಳಿದನು.

ಉಷಾವತಿ ತಲೆಯಾಡಿಸಿದಳು.

"ಅಂದರೆ ಹೆಸರೇ ಇಲ್ಲವೆ?" –ಮತ್ತೆ ಕರ್ಣದೇವನ ಪ್ರಶ್ನೆ.

ಉಷಾವತಿ, ಒಂದು ಸಾರಿ ಮೇಲಿಂದ ಕೆಳಗೆ, ಒಂದು ಸಾರಿ ಎಡದಿಂದ ಬಲಕ್ಕೆ ತಲೆಯಾಡಿಸಿದಳು.

ಕರ್ಣದೇವನಿಗೆ ಅರ್ಥವಾಗಲಿಲ್ಲ. ಹೆಗ್ಗಡೆ ಸಹಾಯಕ್ಕೆ ಬಂದು, "ಹೆಸರಿದೆ, ಹೇಳುವುದಿಲ್ಲ ಎಂದು ಅದರ ಅರ್ಥ, ಒಡೆಯರೆ. ಹೆಣ್ಣು ನಗರದ ಶ್ರೀಮಂತ ವಣಿಕನೊಬ್ಬನ ಮಗಳು. ರಹಸ್ಯ ರಕ್ಷಣೆಗಾಗಿ ಹೆಸರು ಹೇಳುತ್ತಿಲ್ಲ. ಮುಂಜಾವಿಗೆ ಅವಳನ್ನು ಮೇನೆಯಲ್ಲಿ ನಗರಕ್ಕೆ ಕಳುಹಿಸಬೇಕು," ಎಂದನು.

ಉಷಾವತಿ ಕಟಾಕ್ಷದ ಮಿಂಚು ಹಾರಿಸಿ, ನಗುತ್ತ ನಲಿಯುತ್ತ ಕರ್ಣದೇವನ ಹತ್ತಿರ ಹೋಗಿ ಕುಳಿತು, ಪಾನಪಾತ್ರೆಗೆ ಮಧು ತುಂಬಿ, ಕೈಚಾಚಿ ಮುಖದ ಮುಂದೆ ಹಿಡಿದಳು.

ಅವಳ ಒಂದೊಂದು ಚಲನೆಯನ್ನೂ ಆಸಕ್ತಿಯಿಂದ ಎವೆಯಿಕ್ಕದೆ ನೋಡುತ್ತಿದ್ದ ಕರ್ಣದೇವ, ಸುಪ್ರೀತನಾಗಿ ಕೈಯನ್ನು ಚುಂಬಿಸಿ ಬಟ್ಟಲನ್ನು ತೆಗೆದುಕೊಂಡು ಒಂದೇ ಗುಟುಕಿಗೆ ಎಲ್ಲವನ್ನೂ ಕುಡಿದನು.

ಕಥಾನಾಯಕಿಯ ಪ್ರವೇಶದಿಂದ ನಾಟಕ ಕಳೆಯೇರುವಂತೆ ಉಷಾವತಿ ಬಂದ ಮೊದಲು ಪಾನಗೋಷ್ಠಿ ಹೊಸ ರೂಪ ತಾಳುತ್ತಿರುವುದನ್ನು ಕಂಡು ಹೆಗ್ಗಡೆಗೆ ಸಮಾಧಾನವಾಯಿತು. ತುಸು ಹೊತ್ತಿನ ಮೇಲೆ ಅವನು ಕಾವಲು ಭಟರ ಸರದಿ ಬದಲಾವಣೆಯ ನೆವದಿಂದ ಹೊರಗೆ ಹೋದನು.

ಆಮೇಲಿನ ಅರ್ಧಗಳಿಗೆಯಲ್ಲಿ ಉಷಾವತಿ ಅದೆಷ್ಟು ಸಾರಿ ಪಾನಪಾತ್ರೆಯನ್ನು ತುಂಬಿಕೊಟ್ಟಳು, ಅದೆಷ್ಟು ಸಾರಿ ಕರ್ಣದೇವ ಅದನ್ನು ಬರಿದು ಮಾಡಿದನು, ಎಂಬುದನ್ನು ಕುತೂಹಲದಿಂದ ಅವರನ್ನೇ ನೋಡುತ್ತಿದ್ದ ಜಗದೇಕಮಲ್ಲ ಗಮನಿಸಿದ್ದರೆ ಉಷಾವತಿಯ ವರ್ತನೆಯಲ್ಲಿ ಏನೋ ರಹಸ್ಯೋದ್ದೇಶವಿದೆಯೆಂದು ಸಹಜವಾಗಿ ತಿಳಿಯುತ್ತಿದ್ದನು. ಆದರವನು ಜಿಗುಪ್ಸೆಯಿಂದ ಮುಖ ತಿರುಗಿಸಿ, ದಿಂಬಿಗೊರಗಿ ಚಿಂತಾಮಗ್ನನಾಗಿ ಕಣ್ಣು ಮುಚ್ಚಿದನು.

ಕರ್ಣದೇವನ ವರ್ತನೆಗಿಂತ ಅವನು ಪ್ರಾಸಂಗಿಕವಾಗಿ ತಿಳಿಸಿದ ಸುದ್ದಿಗಳು

ಜಗದೇಕಮಲ್ಲನನ್ನು ಚಕಿತಗೊಳಿಸಿದ್ದವು. ಮಂಗಳವೇಡೆಯ ಅಗ್ನಿದಾಹದಲ್ಲಿ ಕಾಮೇಶ್ವರಿಯ ಮೃತ್ಯು, ಮಧುವರಸಾದಿಗಳ ಶೂಲಾರೋಪಣ, ಶರಣರ ಮೇಲೆ ನಡೆಯುತ್ತಿರುವ ದುರಾಗ್ರಹದ ದಬ್ಬಾಳಿಕೆ, ಇವೆಲ್ಲ ಜಗತ್ತಿನಲ್ಲಿ ನಡೆಯುತ್ತಿರುವ ವಾಸ್ತವ ಘಟನೆಗಳು. ಕರ್ಣದೇವ ಹೇಳುವಂತೆ ಬಿಜ್ಜಳನ ಉನ್ಮಾದವೇ ಈ ಎಲ್ಲ ದುರ್ಘಟನೆಗಳ ಕಾರಣ. ಈ ಸುಸಜ್ಜಿತ, ವಿಲಾಸಮಯ ಅರಮನೆಯಲ್ಲಿ ಬಂದಿಯಾಗಿ ನಾನು ವಾಸ್ತವ ಜಗತ್ತನ್ನೇ ಮರೆತಿದ್ದೇನೆ. ಕಾಮೇಶ್ವರಿ ಕಾಣುತ್ತಿದ್ದ ಚಾಲುಕ್ಯ ಪುನಃ ಪ್ರತಿಷ್ಠೆಯ ಕನಸು ಈ ದುರಂತದಲ್ಲಿ ಮುಗಿಯಬೇಕೆ? ತೀವ್ರ ಚಿಂತೆಯ ಆವೇಗದಿಂದ ಜಗದೇಕಮಲ್ಲನು ತನ್ನನ್ನು ತಾನೇ ಮರೆತನು. ತನ್ನ ನಿರುದ್ದೇಶ ಜೀವನದ ನಿರರ್ಥಕ ಘಟನೆಗಳು ಕೆಟ್ಟ ಕನಸಿನ ಕಪ್ಪು ನೆರಳುಗಳಂತೆ ಅವನ ಕಣ್ಣುಗಳ ಮುಂದೆ ಸುಳಿದವು. ನೋಡುತ್ತಿದ್ದಂತೆ ಅವು ಭೂತಾಕಾರವಾಗಿ ಬೆಳೆದು, ತನ್ನನ್ನು ಸುತ್ತುಗಟ್ಟಿ, ಎದೆಯ ಮೇಲೆ ಕುಳಿತು ಪರ್ವತಸಮನಾದ ಭಾರದಿಂದ ಒತ್ತುತ್ತಿರುವಂತೆ ಅವನಿಗೆ ಭಾಸವಾಯಿತು. ಉಸಿರುಕಟ್ಟಿ, ಮೈ ಬೆವರಿತು. ಬಿಡಿಸಿಕೊಳ್ಳಲು ಒದ್ದಾಡಿದನು. ಕೊನೆಗೆ ಭೀಮ ಪರಾಕ್ರಮದಿಂದ ಎರಗಿ ಬಂದ ನೆರಳುಗಳನ್ನು ಸರಿಸಿ ಕಣ್ತೆರೆದಾಗ ಐದಾರು ವರ್ಷದ ಸುಂದರ ಕಾಯದ ಬಾಲಕನೊಬ್ಬನು ಎದುರಿಗೆ ನಿಂತಿರುವುದನ್ನು ಕಂಡನು.

ಯಾರು ಈ ಬಾಲಕ ?

ಎಷ್ಟೊಂದು ತೀಕ್ಷ್ಣತೆ ಅವನ ನೋಟದಲ್ಲಿ !

ಎಂತಹ ಹೃದಯ ವಿದ್ರಾವಕ ವಿಷಣ್ಣತೆ ಅವನ ಮುಖದಲ್ಲಿ !

ಅಗ್ನಿಶಲಾಕೆಯಂತೆ ಆ ದೃಷ್ಟಿ ತನ್ನೆದೆಯ ಸಂದು ಸಂದುಗಳನ್ನು ಸುಡುತ್ತಿರುವಂತೆ ಜಗದೇಕಮಲ್ಲನು ಭಾವಿಸಿದನು.

ಯಾರು ಈ ಬಾಲಕ ?

ನಾನು ಕನಸು ಕಾಣುತ್ತಿರುವೆನೆ?

ಇದು ನನ್ನ ಕನಸೆ? ಅಥವಾ ಈ ಬಾಲಕನ ಕನಸೆ?

ಕಾರ್ಗತ್ತಲಲ್ಲಿ ಮಿಂಚಿನ ಲತೆಯೊಂದು ಬೆಳಗಿದಂತಾಯಿತು ಜಗದೇಕಮಲ್ಲನಿಗೆ. ಬಾಲಕನು ಕಾಮೇಶ್ವರಿಯ ಕ್ಷೇತ್ರಜಪುತ್ರ. ಆ ವಿಚಿತ್ರ ಹೆಣ್ಣಿನ ಅಸೀಮ ಸಾಹಸದ ಫಲವಾಗಿ, ಅರಣ್ಯ ಮಧ್ಯದ ಶಿಬಿರದಲ್ಲಿ, ಮರೆಯಲಾಗದ ಆ ರಾತ್ರಿ ಘಟಿಸಿದ ಅಪೂರ್ವ ಮಿಲನದ ಸಂತಾನ–ಪ್ರೇಮಾರ್ಣವ!

ಈಗ ಅವನೆಲ್ಲಿದ್ದಾನೆ?

ಅಗ್ನಿದಾಹದಲ್ಲಿ ಸುಟ್ಟು ಭಸ್ಮವಾದನೆ?

ಬಾಲಕನು ನಿಂತಿದ್ದ ಸ್ಥಳವೀಗ ಶೂನ್ಯ !

ಹೇಗೆ ಕಾಣಿಸಿಕೊಂಡನೋ ಹಾಗೇ ಮಾಯವಾಗಿದ್ದನು ಅವನು.

ಜಗದೇಕಮಲ್ಲ ಬೆಚ್ಚಿ ಕಣ್ತೆರೆದಾಗ ಉಷಾವತಿ, ಪರ್ಯಂಕದ ಬಳಿ ನಿಂತು ನಿಶ್ಚೇಷ್ಟಿತನಾಗಿ ಮೈಮರೆತು ಮಲಗಿದ್ದ ಕರ್ಣದೇವನ ಹೊದ್ದಿಕೆಯನ್ನು ಸರಿಪಡಿಸುತ್ತಿದ್ದಳು. ಕುಡಿದು ಮತ್ತೇರಿ ಬಿದ್ದಿರಬೇಕು. ಕರ್ಣದೇವನಿಗೆ ಅದು ಪ್ರತಿನಿತ್ಯದ ಘಟನೆಯಾಗಿತ್ತು.

ತನ್ನ ಸೇವಾಕಾರ್ಯವನ್ನು ಮುಗಿಸಿ ಉಷಾವತಿ, ಗಂಭೀರ ಭಾವದಿಂದ ಅರ್ಥಗರ್ಭಿತವಾಗಿ ತನ್ನನ್ನು ನೋಡುತ್ತಿರುವುದನ್ನ ಕಂಡು ಜಗದೇಕಮಲ್ಲನು ವಿಸ್ಮಿತನಾದನು. ಅವಳ ನೋಟದಲ್ಲಿ ವಿಲಾಸದ ಚಂಚಲತೆ ಇರಲಿಲ್ಲ. ದೈನ್ಯದ ನಮ್ರತೆ ಇರಲಿಲ್ಲ. ಪುರುಷನೊಬ್ಬನು ಇನ್ನೊಬ್ಬ ಪುರುಷನನ್ನು ನೋಡುವ ನಿರ್ಲಿಪ್ತ ಸಚೇತಕ ಶಕ್ತಿ ಅದರಲ್ಲಿ ಜಾಗ್ರತವಾಗಿದ್ದಂತೆ ಜಗದೇಕಮಲ್ಲನು ಭಾವಿಸಿದನು.

ನಗರದ ವಣಿಕ್ ಪುತ್ರಿಯೆಂದು ಹೆಗ್ಗಡೆ ಹೇಳಿದ ಪರಿಚಯ ನಿಜವಿರಲಾರದು. ಯಾವುದೋ ರಾಜಕೀಯ ರಹಸ್ಯೋದ್ದೇಶದಿಂದ ಇವಳು ಇಲ್ಲಿಗೆ ಬಂದಿರಬೇಕೆಂದು ಜಗದೇಕಮಲ್ಲನು ತಿಳಿದನು. ಬಾಗಿಲ ಕಡೆ ದೃಷ್ಟಿ ಹಾಯಿಸಿ, ಹೆಗ್ಗಡೆ ಬರುತ್ತಿಲ್ಲವೆಂದು ತಿಳಿದು ಸನ್ನೆಮಾಡಿ ಉಷಾವತಿಯನ್ನು ಹತ್ತಿರ ಕರೆದನು.

ಉಷಾವತಿ ಎದುರಿಗೆ ಬಂದು ನಿಂತಳು. ಆಗಲೂ ಅವಳ ಕಣ್ಣುಗಳಲ್ಲಿ ಹಿಂದಿನಂತೆ ನಿರ್ಲಿಪ್ತ ಸಚೇತಕ ದೃಷ್ಟಿ. ಹಠಾತ್ತಾಗಿ ಜಗದೇಕಮಲ್ಲನು ಅವಳ ಕೈ ಹಿಡಿದೆಳೆದು ಆಲಿಂಗಿಸಿ, ಮುಖವನ್ನು ಎದೆಯ ಮೇಲಿಟ್ಟುಕೊಂಡು, ಕೆನ್ನೆಗಳನ್ನು ಮುದ್ದಿಸುವವನಂತೆ ತಲೆಬಾಗಿ ಪಿಸುದನಿಯಿಂದ, "ನೀನು ಯಾರು? ಇಲ್ಲಿಗೇಕೆ ಬಂದೆ?" ಎಂದು ಕೇಳಿದನು.

ಉಷಾವತಿ ಸಂಭ್ರಮದ ಸೋಗಿನಿಂದ ಪ್ರತಿಚುಂಬನಕ್ಕಾಗಿ ತಲೆಯೆತ್ತಿ ಕೆನ್ನೆಗೆ ಕೆನ್ನೆಹೊತ್ತಿ ಪಿಸುದನಿಯಿಂದ, "ನಾನು ರಾಣಿ ಕಾಮೇಶ್ವರಿಯ ದಾಸಿ. ರಾಣಿಯ ಅಂತ್ಯ ಸಂದೇಶ ಇದರಲ್ಲಿದೆ. ಏಕಾಂತದಲ್ಲಿ ಓದಿಕೊಳ್ಳಿ." ಎಂದು ಕಂಚುಕದ ಮರೆಯಿಂದ ಮಡಿಕೆ ಮಾಡಿದ್ದ ವಸ್ತ್ರವೊಂದನ್ನು ತೆಗೆದು ಜಗದೇಕಮಲ್ಲನಿಗೆ ಕೊಟ್ಟಳು.

ಹೆಜ್ಜೆಯ ಸಪ್ಪಳ ಕೇಳಿ ಅವರು ದೂರ ಸರಿದರು.

ಹೆಗ್ಗಡೆ ಒಳಗೆ ಬಂದಾಗ ಉಷಾವತಿ ಕರ್ಣದೇವನು ಮಲಗಿದ್ದ ಪರ್ಯಂಕದ ಬಳಿ ನಿಂತಿದ್ದಳು. ಜಗದೇಕಮಲ್ಲ ಹೊರಡಲು ಸಿದ್ಧನಾಗಿ ಉತ್ತರೀಯವನ್ನು ಸರಿ ಪಡಿಸಿಕೊಳ್ಳುತ್ತಿದ್ದನು.

ಹೆಗ್ಗಡೆ ಪರ್ಯಂಕದ ಕಡೆ ದೃಷ್ಟಿ ಹಾಯಿಸಿ, "ಒಡೆಯರು ನಿದ್ದೆಮಾಡಿದಂತಿದೆ. ಪ್ರಭುಗಳನ್ನು ಬಿಡಾರಕ್ಕೆ ಬಿಜಯ ಮಾಡಿಸುತ್ತೇನೆ," ಎಂದನು.

"ಇನ್ನು ಮುಂದೆ ಈ ಹಗರಣ ನಮಗೊಪ್ಪುವುದಿಲ್ಲ, ಹೆಗ್ಗಡೆಗಳೆ. ನಾಳಿನಿಂದ ಪ್ರವಚನಕ್ಕೆ ಏರ್ಪಡಿಸಿರಿ," ಎಂದು ಹೇಳಿ ಜಗದೇಕಮಲ್ಲನು ಹೆಗ್ಗಡೆಯೊಡನೆ ಅಲ್ಲಿಂದ ನಿರ್ಗಮಿಸಿದನು.

* * *

ವಾಸಗೃಹದ ಏಕಾಂತದಲ್ಲಿ, ದೀಪದ ಮುಂದೆ ಕುಳಿತು, ಕಡಿತವೊಂದರ ಮರೆಯಲ್ಲಿ ಜಗದೇಕಮಲ್ಲನು ಉಷಾವತಿಯ ಪತ್ರವನ್ನು ಓದಿದನು. ಪತ್ರದ ಒಕ್ಕಣೆ ಮುಂದೆ ಕಂಡಂತಿತ್ತು.

ಪ್ರಭುವರ್ಯರ ಚರಣದಲ್ಲಿ ದಾಸಿಯ ಬಿನ್ನಪ:

ರಾಜಗೃಹದ ಅಲಂಕಾರದ ಕೋಣೆಯಲ್ಲಿ ಕುಳಿತು, ನಿಮ್ಮನ್ನು ನೋಡುವ ಅವಕಾಶ ದೊರಕುವ ನಿರೀಕ್ಷೆಯಿಂದ ಬರೆಯುತ್ತಿದ್ದೇನೆ. ಅಗ್ನಿದಾಹ ನಡೆದ ಹಿಂದಿನ ರಾತ್ರಿ ರಾಣಿಯವರು ತಮ್ಮ ಬಿಡಾರದಲ್ಲಿ ಸಂದೇಶದ ನುಡಿಗಳನ್ನು ನನಗೆ ಪಾಠ ಮಾಡಿಸಿದರು. ಆಮೇಲೆ ಅವರು ಮುಂಜಾವಿನಲ್ಲಿ ಕುಮಾರ ಪ್ರೇಮಾರ್ಣವನನ್ನು ನನ್ನೊಡನೆ ಕಳುಹಿಸಿದರು. ಕುಮಾರನನ್ನು ಕಲ್ಯಾಣಕ್ಕೆ ಕರೆದುಕೊಂಡು ಹೋಗಿ ಚೆನ್ನಬಸವಣ್ಣನವರಿಗೊಪ್ಪಿಸಿ ಸುರಕ್ಷಿತವಾಗಿ ಕರ್ಹಾಡಕ್ಕೆ ಕಳುಹಿಸುವಂತೆ ನಾನು ಪ್ರಾರ್ಥಿಸಿದೆನೆಂದು ತಿಳಿಸಬೇಕಾಗಿ ಆಜ್ಞೆಮಾಡಿದರು. ಮನೆಹೆಗ್ಗಡೆ ಅಗ್ಗಳದೇವರ ಸಹಾಯದಿಂದ ನಾನು ಆ ಕಾರ್ಯ ನಿರ್ವಹಿಸಿದ್ದೇನೆ.

ರಾಣಿಯವರ ಸಂದೇಶವನ್ನು ನಾನು ಮರೆಯಬಹುದೆಂದು, ಅಥವಾ ಸಂದೇಶದ ನುಡಿಗಳನ್ನು ನಿಮ್ಮೆದುರಿಗೆ ಪಠಿಸಲು ಸಾಕಾದಷ್ಟು ಸಮಯ ಸಿಕ್ಕದಿರಬಹುದುದೆಂದು ವಸ್ತ್ರದ ತುಂಡೊಂದರಲ್ಲಿ ಬರೆದಿಟ್ಟುಕೊಂಡೆ. ಪ್ರವಾಸದಲ್ಲಿ ನನ್ನ ಎದೆಕಟ್ಟಾಗಿ ಅದು ಯಾವಾಗಲೂ ನನ್ನ ಮೈ ಮೇಲಿರುತ್ತಿತ್ತು. ಈಗ ಅದನ್ನು ಬಿಚ್ಚಿ ಸಂಗಡ ಇಡುತ್ತಿದ್ದೇನೆ. ಪ್ರಭುವರ್ಯರು ಒಪ್ಪಿಸಿಕೊಳ್ಳಬೇಕು.

ಉಷಾವತಿ.

ಎಂತಹ ಚತುರೆ ಈ ಹೆಣ್ಣು. ನನ್ನನ್ನು ನೋಡುವ ಉದ್ದೇಶದಿಂದಲೆ ವಣಿಕ್ ಪುತ್ರಿಯ ಸೋಗಿನಲ್ಲಿ ರಾಜಗೃಹಕ್ಕೆ ಬಂದಳು. ಮನೆಹೆಗ್ಗಡೆ ಇವಳಿಂದ ವಂಚಿಸಲ್ಪಟ್ಟನೆ? ಅಥವಾ ಒಳಸಂಚಿನಲ್ಲಿ ಅವನೂ ಸೇರಿರುವನೆ? ಎಂದು ಮುಂತಾಗಿ ಯೋಚಿಸುತ್ತ

ಜಗದೇಕಮಲ್ಲನು ಪತ್ರದೊಡನಿದ್ದ ಬಟ್ಟೆಯ ಮಡಿಕೆ ಬಿಚ್ಚಿ, ಸುಕ್ಕುಗಳನ್ನು ಸರಿಪಡಿಸಿ, ಪೀಠದ ಮೇಲಿಟ್ಟು ನೋಡಿದನು. ಬಟ್ಟೆಯ ನಡುವೆ ಕೆಂಪು ಬಣ್ಣದಿಂದ ಗುಂಡಾದ ಅಕ್ಷರಗಳಲ್ಲಿ ಬರೆದಿದ್ದ ಕಾಮೇಶ್ವರಿಯ ಸಂದೇಶ ಈ ರೀತಿ ಇತ್ತು :

ಕುಮಾರ ಸೋಮೇಶ್ವರನ ಪಟ್ಟಾಭಿಷೇಕಕ್ಕಾಗಿ ರಾಜಾತಿಥಿಯಾಗಿ ಮಂಗಳವೇಡೆಗೆ ಹೋಗಿದ್ದ ನನ್ನ ಬಿಡಾರಕ್ಕೆ ಮಾಘ ಶುದ್ಧ ನವಮಿಯಂದು ಸರಿರಾತ್ರಿಯಲ್ಲಿ ಬಿಜ್ಜಳನು ವಂಚನೆಯಿಂದ ಬಂದು ನನ್ನ ಮಾನಹರಣ ಮಾಡಿದನು. ಆ ದಾನವನ ಸ್ಪರ್ಶದಿಂದ ಕಳಂಕಿತವಾದ ದೇಹವನ್ನು ಅಗ್ನಿಯಿಂದ ದಹಿಸಲು ನಿರ್ಧರಿಸಿದ್ದೇನೆ. ನನ್ನ ಭಾಗಕ್ಕೆ ಮರಣವೇ ಮಹಾ ನವಮಿ. ಈ ಸಂದೇಶ ನಿಮಗೆ ತಲಪುವಷ್ಟರಲ್ಲಿ ಈ ಅಭಾಗಿಯ ಮರಣದ ಸುದ್ದಿಯನ್ನು ನೀವು ಕೇಳುವಿರಿ. ಬಿಜ್ಜಳನು ಶರಣಧರ್ಮದ ಪರಮಶತ್ರು. ಚಾಲುಕ್ಯ ರಾಜ್ಯದ ಎಲ್ಲ ಶೈವಮಠಗಳನ್ನು ನಾಶಮಾಡಿ ಶರಣಧರ್ಮವನ್ನು ನಿರ್ಮೂಲಗೊಳಿಸುವುದು ಅವನ ಉದ್ದೇಶ. ಚಾಲುಕ್ಯರ ಹೆಸರನ್ನು ಇತಿಹಾಸದಿಂದ ತೊಡೆದು ಹಾಕಿ ಕಲಚೂರ್ಯ ಸಾಮ್ರಾಜ್ಯವನ್ನು ಸ್ಥಾಪಿಸಲು ಅವನು ಹವಣಿಸುತ್ತಿದ್ದಾನೆ. ಈ ದಾನವರೂಪೀ ನಿರಂಕುಶ ಪ್ರಜಾಪೀಡಕನನ್ನು ವಧಿಸಿ ಚಾಲುಕ್ಯ ರಾಜ್ಯವನ್ನು, ಶರಣಧರ್ಮವನ್ನು, ವಿಪತ್ತಿನಿಂದ ಉದ್ಧರಿಸುವ ಧೈರ್ಯ ಸಾಹಸಗಳು ನಿಮಗಿದೆಯೆ? ಅದರಿಂದ ಮಾತ್ರವೆ ನಾನು ಕಳಂಕ ವಿಮುಕ್ತೆಯಾಗುವೆನು. ನನ್ನ ಆತ್ಮಕ್ಕೆ ಶಾಂತಿ ದೊರಕುವುದು.

ಇತಿ ಚರಣದಾಸಿ ಕಾಮೇಶ್ವರಿ.

ಸಂದೇಶವನ್ನು ಓದುತ್ತಿದ್ದಂತೆ ಜಗದೇಕಮಲ್ಲನ ದೇಹ ಕಂಪಿಸಿತು. ಹೃದಯ ಸ್ತಂಭಿತವಾಯಿತು. ರಕ್ತಚಲನೆಯ ವೇಗ ಹೆಚ್ಚಿ ಬೌಳಿ ಬಂದಂತಾಗಿ ಆಸನದಿಂದೆದ್ದು ತಲ್ಪದ ಬಳಿ ಹೋದನು. ಕೈಯಲ್ಲಿಯ ಓಲೆಗಳನ್ನು ದಿಂಬಿನಡಿಯಲ್ಲಿ ಸುರಕ್ಷಿತವಾಗಿಟ್ಟು ಮಲಗಿದನು. ತುಸು ಹೊತ್ತಿನ ಮೇಲೆ ಸಮುಖದ ಪಸಾಯಿತನು ಒಳಗೆ ಬಂದು ದೀಪಗಳನ್ನು ಆರಿಸಿ ಬಾಗಿಲುಗಳನ್ನು ಭದ್ರಪಡಿಸಿ ಹೋದಾಗಲೂ ಅವನಿಗೆ ನಿದ್ರೆ ಬಂದಿರಲಿಲ್ಲ.

ಎಲ್ಲ ಕಾಲ, ಎಲ್ಲ ದೇಶಗಳ ಪ್ರಭು ಸಾಮಂತ ಶ್ರೀಮಂತರಂತೆ ಜಗದೇಕ ಮಲ್ಲನು, ಪಾಪ ಪುಣ್ಯ ಸ್ವರ್ಗ ನರಕಗಳಲ್ಲಿ ವಿಶ್ವಾಸವಿಲ್ಲದ ವಾಸ್ತವವಾದಿ, ಪ್ರಯೋಜನಶೀಲ, ಶುಷ್ಕ ತಾರ್ಕಿಕನಾಗಿದ್ದನು. ಜಗತ್ಕರ್ತನನ್ನು ನಿರಾಕರಿಸುವ ಮನೋದಾರ್ಢ್ಯವಿಲ್ಲದಿದ್ದರೂ ಅವನ ವರ್ತನೆ ನಾಸ್ತಿಕವಾದಕ್ಕೆ ತೀರ ಸಮೀಪವಾಗಿತ್ತು. ದೈವ–ಧರ್ಮ–ನೀತಿ ಇವೇ ಮುಂತಾದ ಭಾವನೆಗಳು ಮಾನವ ಸಮುದಾಯವನ್ನು

ವಂಚಿಸುವ ಪರಮೋದ್ದೇಶದಿಂದ ಬುದ್ಧಿಜೀವಿ ತಾತ್ವಿಕರು ಕಲ್ಪಿಸಿಕೊಂಡ ಸಾಧನಗಳೊಂದೂ, ಲೋಕಸಂಗ್ರಹದ ಹೊರತಾಗಿ ಅವುಗಳಿಗೆ ಮತ್ತಾವ ನೆಲೆಯೂ ಇಲ್ಲವೆಂದು ಆಗಿನ ಅನೇಕ ಬುದ್ಧಿಜೀವಿಗಳಂತೆ ಜಗದೇಕ ಮಲ್ಲನೂ ನಂಬಿದ್ದನು.

ಜೀವನದಲ್ಲಿ ಜಿಗುಪ್ಸೆಯಿಂದ, ಕುರವತ್ತಿಯ ಸಮೀಪ ತುಂಗಭದ್ರೆಯ ತಟದಲ್ಲಿ ನಿಂತು,

"ಜಾನಾಮಿ ಕರಿಕರ್ಣಾಂತ ಚಂಚಲಂ ಹತಜೀವಿತಂ,
ಮಮ ನಾನ್ಯತ್ರ ವಿಶ್ವಾಸಃ ಪಾರ್ವತೀವಿತೇಶ್ವರಾತ್."
ಉತ್ಸಂಗೇ ತುಂಬಭದ್ರಾಯಾ ತದೇಕ ಶಿವಚಿಂತಯಾ
ವಾಂಛಾಮ್ಯಹಂ ನಿರಾಕರ್ತುಂ ದೇಹಗ್ರಹ ವಿಡಂಬನಂ"*

ಎಂಬ ದೃಢ ನಿರ್ಧಾರದಿಂದ ಜಲಪ್ರವೇಶಮಾಡಿ ಪ್ರಾಣಗಳನ್ನು ತೊರೆದ ಆಹವಮಲ್ಲ ಸೋಮೇಶ್ವರನ ಅನಂತರ ಕಳೆದ ಚಾಲುಕ್ಯ ವಂಶದ ಮೂರು ತಲೆ ಮಾರುಗಳಲ್ಲಿ ಜನತೆಯಂತೆ, ಪ್ರಭು ಸಾಮಂತರ ಧಾರ್ಮಿಕ ಭಾವನೆಯಲ್ಲಿಯೂ ಸಾಕಾದಷ್ಟು ಬದಲಾವಣೆಯಾಗಿತ್ತು. ಭುವನೈಕಮಲ್ಲ ಸೋಮೇಶ್ವರ ಮತ್ತು ಆರನೆಯ ವಿಕ್ರಮಾದಿತ್ಯರ ಧರ್ಮಶ್ರದ್ಧೆ ರಾಜನೀತಿ ಕೌಶಲಗಳು, ಸರ್ವಜ್ಞ ಚಕ್ರವರ್ತಿ ಮುಮ್ಮಡಿ ಸೋಮೇಶ್ವರನ ವಿದ್ಯಾಭಿಮಾನ ಮತ್ತು ಪ್ರಚುರ ಪಾಂಡಿತ್ಯ, ಇವುಗಳು ಪೆರ್ಮ ಜಗದೇಕಮಲ್ಲನ ಕಾಲಕ್ಕೆ ಜೀರ್ಣವಾಗಿ ತ್ರೈಲೋಕಮಲ್ಲ ಮುಮ್ಮಡಿ ತೈಲಪನ ಕಾಲಕ್ಕೆ ನಾಮಾವಶೇಷವಾಗಿ ಉಳಿದವು. ತೈಲಪನಂತೆ ಅವನ ಸಾಮಂತ ಮಾಂಡಲಿಕರು ಸ್ವಾರ್ಥಪ್ರಿಯರೂ ವಿಲಾಸೋಪಭೋಗಗಳಲ್ಲಿ ನಿರತರೂ, ಪ್ರಯೋಜನವಾದಿಗಳೂ ಆಗಿದ್ದರು. ಈ ಧರ್ಮ ಬಾಹಿರ ಅನೀತಿ ವಾತಾವರಣದಲ್ಲಿ ಬೆಳೆದ ಜಗದೇಕಮಲ್ಲನೂ ಅವರಂತೆಯೇ ಆಗಿದ್ದನು. ಚಾಲುಕ್ಯ ಅರಸರ ಈ ವಿಲಾಸ ಪ್ರವೃತ್ತಿ ಬಿಜ್ಜಳನ ರಾಜ್ಯಾಪಹಾರಕ್ಕೆ ಸಹಾಯವಾಯಿತು. ಮುಮ್ಮಡಿ ತೈಲಪನ ಮರಣಾನಂತರ ಬಿಜ್ಜಳನು, ತೈಲಪನ ಸಹೋದರ ಜಗದೇಕಮಲ್ಲನನ್ನು ಹೆಸರಿಗೆ ಸಿಂಹಾಸನದಲ್ಲಿ ಕುಳ್ಳಿರಿಸಿ ತಾನೇ ರಾಜ್ಯವಾಳಲು ಪ್ರಾರಂಭಿಸಿದನು.

ರಾಜಗೃಹದ ವಿಲಾಸ ವೈಭವಗಳ ನಡುವೆ, ರಾಜಬಂದಿಯಾಗಿ ಆರು

---

* ಆನೆಯ ಕಿವಿಯಂತೆ ಚಂಚಲ, ನನ್ನ ಹತಜೀವನ ;
ಪಾರ್ವತೀಪತಿಯನುಳಿದು ಮತ್ತಾವ ದೈವದಲ್ಲಿಯೂ
ನನಗೆ ವಿಶ್ವಾಸವಿಲ್ಲ.
ತುಂಗಭದ್ರೆಯ ಮಡಿಲಲ್ಲಿ, ಶಿವನನ್ನು ಚಿಂತಿಸುತ್ತ
ದೇಹವೆಂಬ ಬೆಂತರನನ್ನು ತೊರೆಯಲಿಚ್ಛಿಸುತ್ತೇನೆ "ವಿಕ್ರಮಾಂಕ ದೇವಚರಿತ" ಸರ್ಗ ೪.

ವರ್ಷಗಳನ್ನು ಕಳೆದ ಮೇಲೆ ಜಗದೇಕಮಲ್ಲನಿಗೆ ವಿವೇಕೋದಯವಾಯಿತು. ತನ್ನ ನಿರುದ್ದೇಶ ವ್ಯರ್ಥಜೀವನಕ್ಕಾಗಿ ಪಶ್ಚಾತ್ತಾಪದಿಂದ ಕೊರಗಿದನು. ಈ ಅನುಕೂಲ ಸನ್ನಿವೇಶದಲ್ಲಿ ಬೊಮ್ಮರಸನು ಜಂಗಮವೇಷದಿಂದ ರಾಜಗೃಹಕ್ಕೆ ಬಂದು, ಚಾಲುಕ್ಯ ಪುನರುದ್ಧಾರಕ್ಕಾಗಿ ರಾಣಿ ಕಾಮೇಶ್ವರಿ ನಡೆಸುತ್ತಿರುವ ಕ್ರಾಂತಿ ಸಂಧಾನವನ್ನು ವಿವರಿಸಿದಾಗ ಸಂತೋಷದಿಂದ ಅದಕ್ಕೊಪ್ಪಿದನು. ತನ್ನ ರಾಜಕೀಯ ಒಳಸಂಚನ್ನು ಮುಚ್ಚಿಡಲು ಬೊಮ್ಮರಸನು ಪ್ರಾರಂಭಿಸಿದ ಶರಣಧರ್ಮವನ್ನು ಕುರಿತ ಪ್ರವಚನಗಳು ಜಗದೇಕಮಲ್ಲನ ಮೇಲೆ ಹೆಚ್ಚು ಪ್ರಭಾವ ಬೀರಿದವು. ಜಾತಿ ಪಂಥಗಳ ವಿರುದ್ಧ ಶರಣರು ಪ್ರಾರಂಭಿಸಿದ್ದ ಕ್ರಿಯಾತ್ಮಕ ಚಳುವಳಿ, ಕಾಯಕ ದಾಸೋಹಗಳ ಬಗೆಗೆ ಅವರು ಅಂಗೀಕರಿಸಿದ್ದ ರಚನಾತ್ಮಕ ನಿಬಂಧನೆಗಳು, ಅನುಭವಮಂಟಪದ ಚರ್ಚಾಗೋಷ್ಠಿ, ಇವು ಕಾಲೋಚಿತವಾದ ಸುಧಾರಣೆಗಳೆಂದು ಅವನಿಗೆ ಅರಿವಾಯಿತು. ಇವೆಲ್ಲಕ್ಕಿಂತ ಮುಖ್ಯವಾದ ಶರಣಧರ್ಮದಿಂದ ಪ್ರಭಾವಿತರಾದ ಸಾಮಂತರು ಮತ್ತು ಜನಸಮುದಾಯ ಚಾಲುಕ್ಯ ಪುನರುದ್ಧಾರದಲ್ಲಿ ವಹಿಸಬಹುದಾದ ಪಾತ್ರ, ಜಗದೇಕಮಲ್ಲನನ್ನು ಹೆಚ್ಚಿಗೆ ಆಕರ್ಷಿಸಿತು. ರಾಜ್ಯೋದಯದಂತೆ ಶರಣಧರ್ಮದ ಅಭ್ಯುದಯವೂ ಅವನ ಕನಸಾಯಿತು.

ಈ ಪರಿಸ್ಥಿತಿಯಲ್ಲಿ ಕಾಮೇಶ್ವರಿಯ ಮರಣವಾರ್ತೆ ಮೇಘವಿಲ್ಲದ ಗಗನದಿಂದ ಸಿಡಿಲೆರಗಿ ಬಂದಂತೆ ಜಗದೇಕಮಲ್ಲನನ್ನು ಸ್ತಂಭಿತಗೊಳಿಸಿತು. ಶೂನ್ಯ ಹೃದಯನಾಗಿ ನಿಶ್ಚೇಷ್ಟಿತನಂತೆ ನಿದ್ರೆಯಿಲ್ಲದೆ ಅವನು ಬಹಳ ಹೊತ್ತು ಮಲಗಿದನು. ಜಗತ್ತಿನ ಕಾರ್ಗತ್ತಲೆ ರಾಶೀಭೂತವಾಗಿ, ಗೋಡೆಕಟ್ಟಿ ಸುತ್ತ ನಿಂತಂತೆ ಭಾವಿಸಿದನು. ರಾಣಿಯ ಸಂದೇಶದ ನುಡಿಗಳು ವಿದ್ಯುತ್ತಿನಿಂದ ಬರೆದ ಲಿಪಿಯಂತೆ ಕಣ್ಣುಗಳ ಮುಂದೆ ಚಲಿಸುವುದನ್ನು ಕಂಡನು.

"ಸರಿರಾತ್ರಿಯಲ್ಲಿ ಬಿಜ್ಜಳನು ವಂಚನೆಯಿಂದ ಬಂದು ನನ್ನ ಮಾನಹರಣ ಮಾಡಿದನು....."

"ಆ ದಾನವನ ಸ್ಪರ್ಶದಿಂದ ಕಳಂಕಿತವಾದ ದೇಹವನ್ನು ಅಗ್ನಿಯಿಂದ ದಹಿಸಲು ನಿರ್ಧರಿಸಿದ್ದೇನೆ...."

ಬಿಜ್ಜಳನ ಅತ್ಯಾಚಾರಕ್ಕೆ ಬಲಿಯಾಗಿ ಕಾಮೇಶ್ವರಿ ಬಿಡಾರಕ್ಕೆ ತಾನೇ ಬೆಂಕಿ ಹಚ್ಚಿರಬೇಕು. ಚಾಲುಕ್ಯ ಕುಲಗೌರವಕ್ಕೆ ಎಷ್ಟೊಂದು ಅಪಮಾನಕರವಾದ ಘಟನೆ ಇದು! ಅಕ್ರಮಶೀಲ ಕ್ಷತ್ರಿಯ ಸಂಪ್ರದಾಯದಂತೆ ಚಾಲುಕ್ಯ ರಾಣಿ ತನ್ನವಳಾಗುವುದರಿಂದ ರಾಜ್ಯಾಪಹಾರ ಪೂರ್ಣವಾಗುವುದೆಂದು ಭಾವಿಸಿದನು ಆ ನಿರಂಕುಶ ದುರಾಚಾರಿ ಬಿಜ್ಜಳ !

“ಈ ದಾನವರೂಪೀ ನಿರಂಕುಶ ಪ್ರಜಾಪೀಡಕನನ್ನು ವಧಿಸಿ, ಚಾಲುಕ್ಯ ರಾಜ್ಯವನ್ನು, ಶರಣಧರ್ಮವನ್ನು ವಿಪತ್ತಿನಿಂದ ಉದ್ಧರಿಸುವ ಧೈರ್ಯ ಸಾಹಸಗಳು ನಿಮಗಿದೆಯೆ?”

ಕಾಮೇಶ್ವರಿಯ ಪ್ರಶ್ನೆಗೆ ತಾನು ಕೊಡಬಹುದಾದದ್ದು ಒಂದೇ ಉತ್ತರವೆಂದು ಜಗದೇಕಮಲ್ಲನಿಗೆ ತಿಳಿದಿತ್ತು. ಬಿಜ್ಜಳನನ್ನು ವಧಿಸುವ ಮುನ್ನ ತಾನು ಕಾರಾಗೃಹದಿಂದ ಮುಕ್ತನಾಗಬೇಕು. ಅದರ ಉಪಾಯವೇನು? ರಾಜ್ಯಲೋಭದ ಆಸೆಯನ್ನು ಮನಸ್ಸಿನಿಂದ ಒಂದೇ ಸಾರಿಗೆ ಕಿತ್ತುಹಾಕಿ ಇದುವರೆಗೆ ಬಿಡುಗಡೆಗಾಗಿ ಪ್ರಯತ್ನಿಸದೆ ಇದ್ದದ್ದು ಈ ಅವಕಾಶಕ್ಕಾಗಿಯೆ? ಆಲಸ್ಯದ ಗಾಢನಿದ್ರೆಯಿಂದ ನನ್ನನ್ನು ಎಚ್ಚರಗೊಳಿಸಲು ಕಾಮೇಶ್ವರಿಯ ಬಲಿದಾನ ಅಗತ್ಯವಾಗಿತ್ತೆ? ಧಿಃಕ್ಕಾರ ನನ್ನ ಹೇಡಿತನಕ್ಕೆ ! ಎಂದು ಅವನು ತನ್ನನ್ನು ತಾನೆ ನಿಂದಿಸಿಕೊಂಡನು.

ರಾತ್ರಿ ಬಹಳ ಹೊತ್ತಾದ ಮೇಲೆ ಅವನಿಗೆ ನಿದ್ರೆ ಹತ್ತಿತ್ತು. ಸೂರ್ಯೋದಯಕ್ಕೆ ಮೊದಲೇ ಎದ್ದು ಸ್ನಾನಾದಿಗಳನ್ನು ಮುಗಿಸಿಕೊಂಡು ಪಸಾಯಿತನನ್ನು ಕರೆದು, “ಗುರುದೇವರು ಎದ್ದಿರುವರೇ ನೋಡಿ ಬಾ,” ಎಂದು ಹೇಳಿದನು.

ಪಸಾಯಿತನು ಪುನಃ ಬಂದು, “ಗುರುದೇವರು ಪೂಜೆಗೆ ಕುಳಿತಿದ್ದಾರೆ,” ಎಂದು ಹೇಳಿದನು.

“ಪೂಜೆ ಮುಗಿದೊಡನೆಯೇ ಅವರನ್ನು ಇಲ್ಲಿಗೆ ಕರೆತರತಕ್ಕದ್ದು,” ಎಂದು ಪಸಾಯಿತನಿಗೆ ಹೇಳಿ ಜಗದೇಕಮಲ್ಲನು ಅಧ್ಯಯನ ಶಾಲೆಗೆ ಹೋದನು. ಪ್ರವಚನಕ್ಕೆ ಬೇಕಾಗುವ ಕೆಲವು ಹೊತ್ತಿಗೆಗಳನ್ನು ಅಲ್ಲಿ ಸಂಗ್ರಹಿಸಿತ್ತು. ದಾಸೋಹದ ಸಂದರ್ಭದಲ್ಲಿ ಚೆನ್ನಬಸವಣ್ಣನವರು ಕಳುಹಿಸಿದ್ದ ವಚನಶಾಸ್ತ್ರದ ಹೊತ್ತಿಗೆಗಳೂ ಅವುಗಳಲ್ಲಿದ್ದವು. ಜಗದೇಕಮಲ್ಲನು ಅವುಗಳಲ್ಲಿ ತನಗೆ ಬೇಕಾದ ಹೊತ್ತಿಗೆಯನ್ನು ಆರಿಸಿ ತೆಗೆದುಕೊಂಡು ಓದುತ್ತ ಕುಳಿತನು.

ಕೊಂಚ ಹೊತ್ತಿನ ಮೇಲೆ ಬೊಮ್ಮರಸ ಅರ್ಥಾತ್ ಬ್ರಹ್ಮೇಂದ್ರ ಶಿವಯೋಗಿ ಅಲ್ಲಿಗೆ ಬಂದಾಗಲೂ ಅವನ ವ್ಯಾಸಂಗ ಮುಗಿದಿರಲಿಲ್ಲ.

“ಏನು ಓದುತ್ತಿದ್ದೀರಿ, ಮಹಾಪ್ರಭು? ವಚನಶಾಸ್ತ್ರದಲ್ಲಿ ನಿಮ್ಮ ಆಸಕ್ತಿ ಅಭಿನಂದನೀಯ,” ಎಂದು ಬೊಮ್ಮರಸನೇ ಮಾತಿಗೆ ಪ್ರಾರಂಭಿಸಿದನು.

ಜಗದೇಕಮಲ್ಲನು ಎದ್ದು ನಮಸ್ಕಾರ ಮಾಡಿ, “ಪ್ರಭುದೇವರ ಒಂದು ವಚನ ಅರ್ಥವಾಗದೆ ರಾತ್ರಿಯೆಲ್ಲ ಯೋಚಿಸುತ್ತ ಮಲಗಿದ್ದೆ, ಗುರುದೇವ. ನಿಮ್ಮಿಂದ ಅದರ ವಿವರಣೆ ಅಪೇಕ್ಷಿಸುತ್ತೇನೆ,” ಎಂದು ಕೈಯಲ್ಲಿದ್ದ ಹೊತ್ತಿಗೆಯನ್ನು ಮುಂದಿಟ್ಟನು.

ಬೊಮ್ಮರಸನು ಹೊತ್ತಿಗೆಯನ್ನು ತೆರೆದು, ಗುರುತು ಮಾಡಿದ್ದ ವಚನವನ್ನು

ಓದಿ, "ಒಂದು ದಿನ ಅನುಭವಮಂಟಪದಲ್ಲಿ ಈ ವಚನವನ್ನು ಕುರಿತು ದೀರ್ಘ ವ್ಯಾಖ್ಯಾನ ನಡೆಯಿತು. ಅದನ್ನು ಸಂಗ್ರಹವಾಗಿ ನಿಮಗೆ ಹೇಳುತ್ತೇನೆ, ಪ್ರಭುಗಳು ದಯಮಾಡಿ ಕುಳಿತುಕೊಂಡರೆ ಒಳಿತು," ಎಂದನು.

ಸಿದ್ಧವಾಗಿದ್ದ ಆಸನಗಳಲ್ಲಿ ಇಬ್ಬರೂ ಕುಳಿತುಕೊಂಡರು. ಜಗದೇಕಮಲ್ಲನು ಪಸಾಯಿತನ ಕಡೆ ತಿರುಗಿ, "ನಮ್ಮ ಅಧ್ಯಯನಕ್ಕೆ ಅಡಚಣೆಯಾಗದಂತೆ ಎಚ್ಚರವಾಗಿರುವಂತೆ ಕಾವಲುಗಾರರಿಗೆ ಹೇಳು. ನಾನು ಕರೆಯುವವರೆಗೆ ಯಾರೂ ಇಲ್ಲಿಗೆ ಬರಲಾಗದು," ಎಂದನು. ಪಸಾಯಿತನು ವಂದಿಸಿ ಹೊರಗೆ ಹೋದನು.

ಕೆಲವು ವಾರಗಳಿಂದ ಗುರುಶಿಷ್ಯರ ಏಕಾಂತ ಅಧ್ಯಯನ ನಿತ್ಯದ ಘಟನೆಯಾಗಿ ಮಂಗಳವೇಡೆಯಿಂದ ಬಂದಮೇಲೆ ಕರ್ಣದೇವನಿಗೆ ವರದಿಯಾಗಿತ್ತು. ಕರ್ಣದೇವನು ಹಾಸ್ಯಮಾಡಿ ನಕ್ಕು, ಗುರುಶಿಷ್ಯರು ಕಾಯವೆರಸು ಕೈಲಾಸಕ್ಕೆ ಹೋಗಲು ಹವಣಿಸುತ್ತಿದ್ದಾರೆ. ಅವರಿಗೆ ತೊಂದರೆಯಾಗದಂತೆ ನಡೆದುಕೊಳ್ಳತಕ್ಕದ್ದು," ಎಂದು ಆಜ್ಞೆಮಾಡಿದ್ದನು.

ಅಧ್ಯಯನ ಶಾಲೆ ಬರಿದಾಯಿತು. ಉಷಾವತಿಯ ಪತ್ರ ಮತ್ತು ರಾಣಿಯ ಸಂದೇಶವನ್ನು ಬೊಮ್ಮರಸನಿಗೆ ಕೊಟ್ಟು ಜಗದೇಕಮಲ್ಲನು, "ನಿನ್ನಿನ ರಾತ್ರಿ ದಾಸಿಯೊಬ್ಬಳು ಇದನ್ನು ತಂದು ಕೊಟ್ಟಳು." ಎಂದನು.

ಬೊಮ್ಮರಸನು ಪತ್ರಗಳನ್ನು ಓದಿ, "ದಾಸಿ ಬಂದ ವಿಚಾರ ನನಗೆ ತಿಳಿದಿತ್ತು. ಆದರೆ ಪ್ರಕರಣ ಇಷ್ಟೊಂದು ಉಗ್ರಾವಸ್ಥೆಗೇರಿದೆಯೆಂದು ನಾನು ಭಾವಿಸಿರಲಿಲ್ಲ," ಎಂದನು.

"ದಾಸಿಯ ವಿಚಾರ ತಿಳಿದದ್ದು ಹೇಗೆ? ಗಣಿಕಾವಾಸದ ಹೆಂಗಸರಿಂದಲೆ?" ಎಂದು ಜಗದೇಕಮಲ್ಲ ಕೇಳಿದನು.

ಬೊಮ್ಮರಸನು ಹೇಳಿದನು : "ಬಿಲ್ವಪತ್ರೆಗಾಗಿ ಮಹಮನೆಗೆ ಹೋಗಿದ್ದ ಬ್ರಹ್ಮಶಿವ ಇಂದು ಮುಂಜಾವಿನಲ್ಲಿ ಹಿಂದಿರುಗಿದ. ಅವನಿಂದ ಎಲ್ಲ ವಿಚಾರವನ್ನೂ ತಿಳಿದೆ. ದಾಸಿ ನಿನ್ನನ್ನು ನೋಡಿದ್ದು ಹೇಗೆ? ಈಗ ಅವಳೆಲ್ಲಿದ್ದಾಳೆ?"

ಜಗದೇಕಮಲ್ಲ ನಡೆದುದನ್ನು ವಿವರಿಸಿ, "ಇಷ್ಟು ಹೊತ್ತಿಗೆ ಮೇನೆಯಲ್ಲಿ ನಗರವನ್ನು ಸೇರಿದ್ದಾಳೆ. ಅವಳ ವಿಚಾರ ಚಿಂತಿಸುವ ಅಗತ್ಯವಿಲ್ಲ. ಈಗ ನಾವೇನು ಮಾಡುವುದು?" ಎಂದು ಪ್ರಶ್ನಿಸಿದನು.

"ಏನು ಮಾಡಬೇಕೆಂದು ನಿನ್ನ ಇಷ್ಟ?"

"ಒಂದು ಪ್ರಶ್ನೆಗೆ ಇನ್ನೊಂದು ಪ್ರಶ್ನೆ ಉತ್ತರವಾಗುವುದಿಲ್ಲ, ಬೊಮ್ಮರಸ. ನಾನು ನಿನ್ನ ಸಲಹೆ ಕೇಳುತ್ತಿದ್ದೇನೆ."

–ತುಸು ಅಸಮಾಧಾನದಿಂದ ನುಡಿದನು ಜಗದೇಕಮಲ್ಲ.

ಕೃತಕ ಗಡ್ಡ ಜಟೆಗಳನ್ನು ಸರಿಪಡಿಸಿಕೊಳ್ಳುತ್ತ ಬೊಮ್ಮರಸನು ಬದಲಿಸಿದ ಕಂಠದಿಂದ ಹೇಳಿದನು : "ರಾಣಿ ಸಂದೇಶವನ್ನು ನಿನಗೆ ಕಳುಹಿಸಿದ್ದಾರೆ. ಅದರಂತೆ ಕಾರ್ಯ ನಡೆಸುವವನು ನೀನು. ನಿನ್ನ ನಿರ್ಧಾರವನ್ನು ತಿಳಿಸಿದರೆ ಅದು ಯುಕ್ತವೇ ಅಯುಕ್ತವೇ ಎಂದು ಹೇಳಿ ಗುರುಮನೆಯ ನನ್ನ ಹೊಣೆಯನ್ನು ಮುಗಿಸುತ್ತೇನೆ."

ಜಗದೇಕಮಲ್ಲನ ಅಸಮಾಧಾನ ತೀವ್ರವಾಯಿತು. ಅವನು ಹೇಳಿದನು : "ಜಂಗಮವೇಷ ಧರಿಸಿದ ಮಾತ್ರಕ್ಕೆ ನೀನು ಗುರುವೂ ಅಲ್ಲ, ನಾನು ಶಿಷ್ಯನೂ ಅಲ್ಲ, ಬೊಮ್ಮರಸ. ರಾಣಿಯ ಆತ್ಮಕ್ಕೆ ಯಾವುದರಿಂದ ಶಾಂತಿ ದೊರಕುವುದೋ ನಾನು ಆ ಕಾರ್ಯ ಮಾಡುತ್ತೇನೆ. ಅದು ನಿನಗೊಪ್ಪಿಗೆಯೆ?"

ಬೊಮ್ಮರಸನ ಮುಖದಲ್ಲಿ ಉಪಹಾಸದ ಕಿರುನಗೆಯೊಂದು ಮಿಂಚಿ ಮರೆಯಾಯಿತು. ಗುರುಮನೆಗೆ ಉಚಿತವಾದ ಶ್ರೀಮದ್ಗಾಂಭೀರ್ಯದಿಂದ ಅವನು ಹೇಳಿದನು : "ಪಟ್ಟಾಭಿಷಿಕ್ತರಾದ ಚಾಲುಕ್ಯ ಚಕ್ರೇಶ್ವರರು ಎಂದಿನಿಂದ ರಾಣಿ ಕಾಮೇಶ್ವರೀದೇವಿಯವರ ಸಂದಾಯಿ ಆದದ್ದು?"

"ಸಂದಾಯಿ!"

"ಅಹುದು, ಜಗದೇಕಮಲ್ಲ, ಸಂದಾಯಿ ರಾಣಿಯ ವಧಾಜ್ಞೆಯನ್ನು ಕಾರ್ಯಗತ ಮಾಡುವ ವಧಕಾರ. ರಾಣಿಯ ಅಂತ್ಯ ಸಂದೇಶದಿಂದ ಉತ್ತೇಜನ ಪಡೆದ ನೀನು ಬಂಧವಿಮುಕ್ತನಾಗಿ ಅತ್ಯಾಚಾರಿಯನ್ನು ವಧಿಸಿದರೆ ಭವಿಷ್ಯ ಇತಿಹಾಸಕಾರರು ನಿನ್ನನ್ನು ಹೆಣ್ಣೊಬ್ಬಳ ಪ್ರೇಮಕ್ಕಾಗಿ ಸ್ಪರ್ಧಿಸಿದ ಕಾಮುಕನೆಂದು ಹಳಿಯುವರು. ರಾಣಿಯನ್ನು ಸ್ವೈರಿಣಿಯೆಂದು ಕರೆಯುವರು. ಅದು ನಿನಗಿಷ್ಟವೆ?"

"ರಾಣಿಯ ವಿಚಾರದಲ್ಲಿ ವಧಾರ್ಹವಾದ ಅತ್ಯಾಚಾರ ನಡೆದಿದೆ. ಅದನ್ನಾದರೂ ನೀನು ಒಪ್ಪುವೆಯಾ?"

"ಒಪ್ಪುತ್ತೇನೆ, ಜಗದೇಕಮಲ್ಲ. ರಾಣಿಯ ಸಂದೇಶದಿಂದ ಅದು ಸ್ಥಿರವಾಗುತ್ತದೆ. ಆದರೆ ಆ ಅಪರಾಧದಲ್ಲಿ ರಾಣಿಯ ಪಾತ್ರವೇನು? ಅತ್ಯಾಚಾರಿಯ ಪಾತ್ರವೇನು? ಕಳೆದೆರಡು ದಿನಗಳಿಂದ ಅಗ್ನಿದಾಹದ ಬಗೆಗೆ ಸಾಕಾದಷ್ಟು ವಿವರಗಳನ್ನು ನಾನು ಸಂಗ್ರಹಿಸಿದ್ದೇನೆ. ತನ್ನ ಅವಿವೇಕದ ಅಂಧ ವಿಶ್ವಾಸದಿಂದ, ವಿಲಾಸಿತೆಯ ಪ್ರದರ್ಶನದಿಂದ, ತನ್ನ ಮೇಲೆ ನಡೆದ ಅತ್ಯಾಚಾರಕ್ಕೆ ರಾಣಿಯೇ ಆಹ್ವಾನ ಕೊಟ್ಟಳು. ಅತ್ಯಾಚಾರದ ಹೊಣೆಯನ್ನು ಆಕ್ರಮಣಕಾರ ಮತ್ತು ಆಕ್ರಮಣಕ್ಕೆ ಗುರಿಯಾದವರು, ಈ ಇಬ್ಬರ ನಡುವೆ ಸಮಾನವಾಗಿ ಹಂಚಬೇಕಾಗುವುದು.

ತಾನೇ ಹಚ್ಚಿದ ಬೆಂಕಿಯಲ್ಲಿ ಅಸುನೀಗಿ, ರಾಣಿ ತನ್ನ ಹೊಣೆಯಿಂದ ಪಾರಾದಳು. ಕೊನೆಗಾಲದಲ್ಲಿ ಅವಳು ಕಳುಹಿಸಿದ ಉದ್ರೇಕದ ಸಂದೇಶದಿಂದ ಉದ್ರಿಕ್ತನಾದ ನೀನು ಪ್ರತೀಕಾರಕ್ಕೆ ತೊಡಗಿದರೆ ಚಾಲುಕ್ಯರಾಜ್ಯದ ಪುನಃಪ್ರತಿಷ್ಠೆಯ ನಮ್ಮ ಮೂಲೋದ್ದೇಶಕ್ಕೆ ಭಂಗ ತಂದಂತಾಗುವುದು. ಅದು ನಿನಗೊಪ್ಪಿಗೆಯೆ ಎಂದು ನನ್ನ ಪ್ರಶ್ನೆ."

ಬೊಮ್ಮರಸನ ಉದ್ದೇಶ ಆಗ ಅರ್ಥವಾಯಿತು ಜಗದೇಕಮಲ್ಲನಿಗೆ. "ಹಾಗಾದರೆ ನಾವು ರಾಣಿಯ ಸಂದೇಶವನ್ನು....." ಎಂದು ಜಗದೇಕಮಲ್ಲನು ನುಡಿಯುತ್ತಿದ್ದಂತೆ ಬೊಮ್ಮರಸನು,

"ಸಂದೇಶವನ್ನು ನಾವು ರಹಸ್ಯವಾಗಿಡಬೇಕು. ಅದರ ಸುಳಿವು ಕೂಡ ಯಾರಿಗೂ ತಿಳಿಯಬಾರದು. ತನ್ನ ಮೇಲೆ ನಡೆಯಬಹುದಾದ ಅತ್ಯಾಚಾರದ ಭಯದಿಂದ ಬಿಡಾರಕ್ಕೆ ಬೆಂಕಿಹಚ್ಚಿ ರಾಣಿ ಕಾಮೇಶ್ವರಿ ಆತ್ಮಹತ್ಯೆ ಮಾಡಿಕೊಂಡಳೆಂದು ಈಗ ಎಲ್ಲರೂ ತಿಳಿದಿದ್ದಾರೆ. ಸಂದೇಶದ ವಿಚಾರ ಪ್ರಕಟವಾಗುವುದರಿಂದ ರಾಣಿಯ ಸತೀತ್ವ ಭಂಗದ ಅಪಮಾನವನ್ನು ನಾವಾಗಿ ಬಯಲಿಗೆಳೆದಂತಾಗುವುದು. ಚಾಲುಕ್ಯ ರಾಣಿಯೊಬ್ಬಳ ಅಪಮಾನವನ್ನು–ಕೆಲವರು ಹೇಳುವಂತೆ ಅವಳು ಸ್ವೈರಿಣಿಯೇ ಆಗಿರಲಿ, ಈ ಸಂದರ್ಭದಲ್ಲಿ ಬಹಿರಂಗ ಪಡಿಸುವುದು ನಮ್ಮ ರಾಜಕೀಯ ಉದ್ದೇಶಕ್ಕೆ ಸಹಾಯಕವಲ್ಲ," ಎಂದು ಮುಗಿಸಿದನು.

ಕೆಲವು ಕ್ಷಣಗಳು ಯೋಚಿಸುತ್ತಿದ್ದು ಜಗದೇಕಮಲ್ಲನು, "ದಾಸಿ ಉಷಾವತಿಯ ಅಜಾಗರೂಕತೆಯಿಂದ ಅದು ಜನರಿಗೆ ತಿಳಿದರೆ," ಎಂದನು.

ಬೊಮ್ಮರಸನು ಹೇಳಿದನು : "ಉಷಾವತಿ ಚತುರೆಯಾದ ಹೆಣ್ಣು. ಇದುವರೆಗೆ ಸಂದೇಶದ ವಿಚಾರವನ್ನು ರಹಸ್ಯವಾಗಿಟ್ಟಿದ್ದ ಅವಳು ಮುಂದೆಯೂ ರಹಸ್ಯವಾಗಿಡುವಳು. ಅಲ್ಲದೆ ಅವಳನ್ನು ಈ ದಿನವೇ ಪ್ರೇಮಾರ್ಣವನ ಸಂಗಡ ಕರ್ಹಾಡಕ್ಕೆ ಕಳುಹಿಸಲು ಮಾಚಿದೇವರು ಏರ್ಪಡಿಸಿದ್ದಾರೆ."

"ಅವರು ಇಂದೇ ಹೊರಡುವರೆಂದು ಯಾರು ನಿನಗೆ ಹೇಳಿದವರು?"

"ಬ್ರಹ್ಮಶಿವ ಪಂಡಿತ".

ಜಗದೇಕಮಲ್ಲನು ನಿಟ್ಟುಸಿರಿಟ್ಟು, ಹಾಗಾದರೆ ನನ್ನ ಪ್ರತೀಕಾರದ ಚಿಂತನೆ ಗಾಳಿಯೊಡನೆ ಸೆಣಸಿದಂತಾಯಿತು," ಎಂದನು.

ಬೊಮ್ಮರಸನ ಮುಖ ಮಿದುನಗೆಯಿಂದ ಅರಳಿತು. ಅವನು ದನಿ ತಗ್ಗಿಸಿ ಹೇಳಿದನು : "ನಿನ್ನ ಸಾಹಸ ಪ್ರತೀಕಾರಗಳಿಗೆ ಭಂಗ ಬರುವುದಿಲ್ಲ, ಜಗದೇಕಮಲ್ಲ. ನಾನು ಎಲ್ಲವನ್ನೂ ಯೋಚಿಸಿ ಕಾರ್ಯವಿಧಾನ ನಿರ್ಧರಿಸಿದ್ದೇನೆ. ಇಂದೋ

ನಾಳೆಯೋ ನಾವು ರಾಜಗೃಹದಿಂದ ಪಾರಾಗುವ ಅವಕಾಶ ದೊರಕುತ್ತದೆ. ಮಾಧವ ನಾಯಕನ ನೇಮಕದಿಂದ ಕರ್ಣದೇವ ಅಣ್ಣನ ಮೇಲೆ ಅಸಮಾಧಾನಗೊಂಡಿದ್ದಾನೆ. ರಾಜಗೃಹದ ರಕ್ಷಣಾ ವ್ಯವಸ್ಥೆ ಸಡಿಲವಾಗುತ್ತಿದೆ. ಬಿಜ್ಜಳನ ಗಮನವೆಲ್ಲ ಶರಣರ ದಮನ ಕಾರ್ಯದಲ್ಲಿ ಮಗ್ನವಾಗಿದೆ. ಮಧುವರಸಾದಿಗಳ ವಧೆಯಿಂದ ನಾಗರಿಕರಲ್ಲಿ ಅಸಮಾಧಾನ ಬೆಳೆಯುತ್ತಿದೆ, ರಾಜಗೃಹದ ಬಂಧನವನ್ನು ಕಿತ್ತೊಗೆಯುವ ಇಂತಹ ಸದವಕಾಶ ಜೀವಿತಕಾಲವೆಲ್ಲ ಕಾದರೂ ನಮಗೆ ದೊರಕುವುದಿಲ್ಲ."

"ನಾವು ಇಲ್ಲಿಂದ ಸುಲಭವಾಗಿ ಪಾರಾಗಬಹುದು, ಆದರೆ ಆಮೇಲೆ ನಾವೇನು ಮಾಡುವುದು?" –ಸಂದೇಹಗ್ರಸ್ತನಂತೆ ಜಗದೇಕಮಲ್ಲನು ನುಡಿದನು.

ಬೊಮ್ಮರಸನು ಪಿಸುದನಿಯಲ್ಲಿ ಹೇಳಿದನು : "ಅದನ್ನು ನೀನು ಮೊದಲೇ ನಿರ್ಧರಿಸಿರುವೆಯಲ್ಲವೇ, ಜಗದೇಕ? ಅದರಂತೆ ಕಾರ್ಯ ನಡೆಯುವುದು. ಆದರೆ ಕಾರಣಗಳು ಬೇರೆ."

ಜಗದೇಕಮಲ್ಲನ ದೃಷ್ಟಿ ಮನಸ್ಸಿನ ಕುತೂಹಲವನ್ನು ಪ್ರಕಟಿಸುತ್ತಿತ್ತು.

ಬೊಮ್ಮರಸನು ಮುಂದುವರಿದು ಹೇಳಿದನು : "ಬಿಜ್ಜಳನ ವಧೆಗೆ ಸಾಕಾದಷ್ಟು ರಾಜಕೀಯ ಕಾರಣಗಳಿವೆ. ಧರ್ಮಾಧಿಕರಣದ ಅಪಚಾರ, ಶರಣರ ಮೇಲೆ ಪ್ರಾರಂಭಿಸಿರುವ ನಿರಂಕುಶ ದಬ್ಬಾಳಿಕೆ, ಪಟ್ಟಾಭಿಷಿಕ್ತನಾದ ಚಾಲುಕ್ಯ ಅರಸನನ್ನು ಬಂಧನದಲ್ಲಿಟ್ಟು ತಾನೇ ಅರಸನಂತೆ ಮೆರೆಯುತ್ತಿರುವುದು, ಮಾಧವ ನಾಯಕನಂತಹ ದುರ್ಮಂತ್ರಿಗೆ ನಗರ ರಕ್ಷಣೆಯ ಅಧಿಕಾರ ವಹಿಸಿ ಸರ್ವಸೇನಾನಾಯಕನಾಗಿ ನೇಮಿಸಿಕೊಂಡಿರುವುದು, ಈ ಕಾರಣಗಳು ಸಾಕು ನಮ್ಮ ಪ್ರತೀಕಾರಕ್ಕೆ."

"ನಿನ್ನ ಆತ್ಮವಿಶ್ವಾಸ ನನಗೆ ಆಶ್ಚರ್ಯವನ್ನುಂಟುಮಾಡುತ್ತಿದೆ, ಬೊಮ್ಮರಸ. ಮರಳ ಮನೆಯಾಗದಿರಲಿ ನಿನ್ನ ಆಶಾಕಲ್ಪನೆ." –ಅವಿಶ್ವಾಸದಿಂದ ನುಡಿದನು ಜಗದೇಕಮಲ್ಲ.

ಬೊಮ್ಮರಸನ ಕಂಠ ಹೆಚ್ಚು ಗಂಭೀರವಾಯಿತು. ಅವನು ಹೇಳಿದನು : "ಈಗ ನೀನು ನಿಜವಾಗಿ ಭಂಡರಾಜನಂತೆ ಮಾತಾಡುತ್ತಿರುವೆ, ಜಗದೇಕ. ಈ ಸಾರಿ ನನ್ನ ಸಂಚು ಸುಳ್ಳಾಗುವುದಿಲ್ಲ. ಬಿಜ್ಜಳನು ತನ್ನ ಕಡೆಯ ಸಾಮಂತರ ರಹಸ್ಯ ಸಭೆಯನ್ನು ಕರೆದಿದ್ದಾನೆ, ಅದಕ್ಕಾಗಿ ರಾಜ್ಯದ ಎಲ್ಲಾ ಮಂಡಲಗಳಿಂದ ಪ್ರತಿನಿಧಿಗಳು ಬರುತ್ತಾರೆ. ಆಗ ನಾವು ವೇಷಾಂತರದಿಂದ ಸಭೆಯಲ್ಲಿರಲು ಹಂಚಿಕೆ ಹೂಡಿದ್ದೇನೆ. ನೀನು ಅಪೇಕ್ಷಿಸುವ ಅವಕಾಶ ಬೇಗ ದೊರಕುತ್ತದೆ."

ಜಗದೇಕಮಲ್ಲನು ಉತ್ತರ ಕೊಡಲಿಲ್ಲ, ಯಾವ ಪ್ರತೀಕಾರದ ಕಲ್ಪನೆಯಿಂದ

ಇರುಳೆಲ್ಲ ಜಾಗರ ಮಾಡಿದನೋ ಅದು ಕೈಗೆ ನಿಲುಕುವಂತಾಯಿತೆಂದು ಅವನ ಉತ್ಸಾಹ ಸಿಡಿದೆದ್ದು ರಕ್ತಸಿಕ್ತವಾದ ಸುರಗಿಯಂತೆ ಕಣ್ಣುಗಳ ಮುಂದೆ ಸುಳಿಯಿತು.

ಬೊಮ್ಮರಸನು ಪುನಃ ದನಿ ತಗ್ಗಿಸಿ, ಮಿಂಚಿನ ಮೊನೆಯಂತೆ ತೀಕ್ಷ್ಣವಾದ ದೃಷ್ಟಿಯಿಂದ ಜಗದೇಕಮಲ್ಲನನ್ನು ನೋಡುತ್ತ ಹೇಳಿದನು : "ಬಿಜ್ಜಳನಂತಹ ಪ್ರಜಾಪೀಡಕನಾದ ರಾಜ್ಯಾಪಹಾರಿಯನ್ನು ಕಳುವಿನಿಂದ ಕೊಂದುಬರುವುದರಲ್ಲಿ ಸಾಮರ್ಥ್ಯವೇನಿದೆ? ಕೃತ್ಯ ಮುಗಿಸಿದೊಡನೆ 'ಹರಳಯ್ಯ ಮಧುವಯ್ಯಗಳ ನೋಯಿಸಿದ ಪರವಾದಿ ಬಿಜ್ಜಳನನ್ನು ಕೊಂದ ನಾವು ವೀರಕುಮಾರರು, ಜಗದೇಕಮಲ್ಲ ಬೊಮ್ಮರಸರು,' ಎಂದು ಬೊಬ್ಬೆಯಿಟ್ಟು ಸಾರುತ್ತ ಬರಬೇಕು. ನಾಗರಿಕ ಕ್ರಾಂತಿಗೆ ಅದು ವೀರ ಕಹಳೆಯಾಗುವುದು."

ಜಗದೇಕಮಲ್ಲನು ಚಮತ್ಕೃತನಾದನು.

ತುಸು ಹೊತ್ತು ಇಬ್ಬರೂ ಮೌನ.

ಆಮೇಲೆ ಜಗದೇಕಮಲ್ಲನು ಮೆಚ್ಚುಗೆಯ ತುಂಬುಕಂಠದಿಂದ ಹೇಳಿದನು: "ನಿನ್ನ ಈ ಜಂಗಮ ವೇಷ ನನ್ನನ್ನು ವಂಚಿಸಿತು, ಬೊಮ್ಮರಸ. ವಾಸ್ತವವಾಗಿ ನೀನು ಸನ್ಯಾಸಿಯಾದೆಯೆಂದು ಭಾವಿಸಿದೆ. ಕ್ರಾಂತಿಯ ಕಿಡಿ ಇನ್ನೂ ನಿನ್ನಲ್ಲಿ ಜೀವಂತವಾಗಿದೆ."

ಬೊಮ್ಮರಸನು ಉತ್ತರಿಸಿದನು : "ಕ್ರಾಂತಿಯಲ್ಲಿ ಅಮರತ್ವ ಅಡಗಿದೆ, ಜಗದೇಕ. ಒಂದು ಸಾರಿ ಹತ್ತಿಸಿಟ್ಟ ಕ್ರಾಂತಿಯ ಸೊಡರು ತನ್ನ ಉದ್ದೇಶ ಸಾಧಿಸುವವರೆಗೆ ಆರುವುದಿಲ್ಲ."

ಹೊರಗೆ ಹೆಜ್ಜೆಯ ಸಪ್ಪಳ ಕೇಳಿಸಿತು. ಜಗದೇಕಮಲ್ಲ ಪಸಾಯಿತನನ್ನು ಹೆಸರು ಹಿಡಿದು ಕರೆದನು.

ಅವನು ಒಳಗೆ ಬಂದಾಗ ಅಧ್ಯಯನ ಮುಗಿದು, ಜಗದೇಕಮಲ್ಲನು ವಚನ ಸಂಗ್ರಹದ ಹೊತ್ತಿಗೆಗಳನ್ನು ಪಾರ್ಶ್ವದ ಪೀಠದ ಮೇಲೆ ಜೋಡಿಸಿಡುತ್ತಿದ್ದನು.

* * *

ಹೆಗ್ಗಡೆ ಮೊದಲೇ ಹೇಳಿದ್ದಂತೆ ರಾಜಗೃಹದ ಮೇನೆ ಉಷಾವತಿಯನ್ನು ಮರುದಿನ ಮುಂಜಾವಿನಲ್ಲಿ ನಗರ ಮಧ್ಯದ ತ್ರಿಪುರಾಂತಕ ದೇಗುಲದ ಹತ್ತಿರ ಬಿಟ್ಟಿತು. ದೇಗುಲದಲ್ಲಿ ಪೂಜಾರಂಭವಾಗಿತ್ತು. ಮಂಗಳ ವಾದ್ಯಗಳು ಮೊಳಗುತ್ತಿದ್ದವು. ಸ್ತ್ರೀ ಪುರುಷರು ಶುಚಿರ್ಭೂತರಾಗಿ ಮಡಿಬಟ್ಟೆಗಳನ್ನುಟ್ಟು, ಕೈಯಲ್ಲಿ ಪೂಜಾದ್ರವ್ಯಗಳನ್ನು ಹಿಡಿದು ಬರುತ್ತಿದ್ದರು.

ಉಷಾವತಿ ಮಹಾದ್ವಾರದಲ್ಲಿ ಕೈಮುಗಿದು ನಿಂತು, ತಾನು ಉದ್ದೇಶಿಸಿದ್ದ

ಕಾರ್ಯ ಸುಗಮವಾಗಿ ನಡೆದದ್ದಕ್ಕಾಗಿ ಪರಶಿವನಿಗೆ ವಂದನೆ ಸಲ್ಲಿಸಿದಳು. ರಾಜ ಗೃಹದ ವೇಷಭೂಷಣಗಳನ್ನು ಅವಳು ಅಲ್ಲಿಯೇ ತೆಗೆದಿಟ್ಟು ಹಿಂದಿನಂತೆ ಬಿಳಿಯ ಸೀರೆ ಕುಪ್ಪಸಗಳನ್ನು ಧರಿಸಿದ್ದರಿಂದ ದೇಗುಲಕ್ಕೆ ಬರುತ್ತಿದ್ದ ಭಕ್ತಾದಿಗಳಾದರೂ ಅವಳನ್ನು ಗಮನಿಸಲಿಲ್ಲ.

ತುಸು ಹೊತ್ತಿನ ಮೇಲೆ ಅವಳು ಮಹಮನೆಯ ಕಡೆಗೆ ಹೋಗುತ್ತಿದ್ದಂತೆ, ನಗರದ ಜಂಗಮ, ಸನ್ಯಾಸಿ, ದೀನ ದರಿದ್ರ, ಸ್ತ್ರೀ ಪುರುಷರು ತಂಡ ತಂಡವಾಗಿ ಅದೇ ದಾರಿಯಲ್ಲಿ ಹೋಗುತ್ತಿರುವುದನ್ನು ಕಂಡು ಅಚ್ಚರಿಯಿಂದ ವೃದ್ಧೆಯೊಬ್ಬಳನ್ನು "ನೀವೆಲ್ಲ ಎಲ್ಲಿಗೆ ಹೋಗುತ್ತಿದ್ದೀರಿ?" ಎಂದು ಕೇಳಿದಳು.

"ಮಹಮನೆಗೆ. ನೀ ಕೂಡ ಅಲ್ಲಿಗೆ ತಾನೆ?" –ವೃದ್ಧೆ ಉತ್ತರ ಕೊಟ್ಟಳು.

"ಏನು ಈ ದಿನ ಅಲ್ಲಿ ವಿಶೇಷ?"

"ತಿಳೀದೇನು ನಿನಗ? ದವಸ, ಧಾನ್ಯ, ದುಡ್ಡು, ಅರಿವೆ –ಎಲ್ಲ ಕೊಡ್ತಾರಂತ ಅಲ್ಲಿ."

"ಕೊಡಲು ಕಾರಣ? ಏನಾದರೂ ಹಬ್ಬವೆ ಇವೊತ್ತು?"

"ನನಗ ತಿಳೀದವ್ವ ಅದೆಲ್ಲ. ಮಹಮನಿ ದಣೇರು ವರ್ಷಕ್ಕೆ ಒಂದ್ಸಾರಿ ಎರಡು ಸಾರಿ ಹಿಂಗ ದಾನಾ ಕೊಡೋದುಂಟು,"–ಎಂದು ವೃದ್ಧೆ ಬಸವಣ್ಣನವರ ಕಾಲದಿಂದ ಮಹಮನೆಯಲ್ಲಿ ಆಗಾಗ ನಡೆಯುತ್ತಿದ್ದ ದಾನ ಧರ್ಮ ದಾಸೋಹಗಳನ್ನು ಬಣ್ಣಿಸಲು ಮೊದಲುಮಾಡಿದಳು. ಉಷಾವತಿ ಹೂಗುಟ್ಟುತ್ತ ನಡೆದಳು.

ಅವರು ಮಹಮನೆಯನ್ನು ಮುಟ್ಟಿದಾಗ ಮಹಾದ್ವಾರದ ಮುಂದಿನ ಬಯಲಿನಲ್ಲಿ ದೊಡ್ಡ ಗುಂಪು ಸೇರಿದ್ದಿತು. ಮಾಚಿದೇವರ ನೇತೃತ್ವದಲ್ಲಿ ಹಲವು ಮಂದಿ ಶರಣರು ಜನರನ್ನು ಜಂಗಮ ಸನ್ಯಾಸಿಗಳು, ದೀನರು, ದರಿದ್ರರು, ಸ್ತ್ರೀಯರು ಎಂದು ಪ್ರತ್ಯೇಕ ಗುಂಪುಗಳಾಗಿ ವಿಭಾಗಿಸಿ, ಒಂದು ಸಾರಿಗೆ ಪ್ರತಿ ಗುಂಪಿಗೆ ಒಬ್ಬರಂತೆ ಐದು ಮಂದಿಯನ್ನು ಒಳಗೆ ಬಿಡುತ್ತಿದ್ದರು.

ಉಷಾವತಿ ಹೆಂಗಸರ ಗುಂಪಿನಲ್ಲಿ ತನ್ನ ಸರದಿಗಾಗಿ ಕಾಯುತ್ತ ನಿಂತಳು. ಮೊದಲೆ ಒಳಗೆ ಹೋಗಿದ್ದವರು ಧಾನ್ಯ ಬಟ್ಟೆ ಮುಂತಾದುವನ್ನು ಕೈಯಲ್ಲಿ ಹಿಡಿದು ಬೇರೆ ಬಾಗಿಲಿಂದ ಹೊರಗೆ ಬರುತ್ತಿದ್ದರು.

ಸ್ವಲ್ಪ ಹೊತ್ತಿನ ಮೇಲೆ ಅವಳು ಮಹಾದ್ವಾರವನ್ನು ದಾಟಿ ಒಳಗೆ ಹೋದಾಗ ಅಲ್ಲಿ ಕಂಡ ದೃಶ್ಯ ಅಚ್ಚರಿಗೊಳಿಸುವಂತಿತ್ತು. ಮೊಗಶಾಲೆ ಅಂಗಣಗಳಲ್ಲಿ ಧಾನ್ಯ ಬಟ್ಟೆ ಪಾತ್ರೆ ಪದಾರ್ಥಗಳು ರಾಶಿ ರಾಶಿಯಾಗಿ ಶೇಖರಿಸಲ್ಪಟ್ಟಿದ್ದವು. ಚೆನ್ನಬಸವಣ್ಣನವರ ಮತ್ತು ಸಕಲೇಶ ಮಾದರಸರ ನೇತೃತ್ವದಲ್ಲಿ ಶರಣರು, ನಾಗಲಾಂಬೆ

ನೀಲಲೋಚನೆಯರ ನೇತೃತ್ವದಲ್ಲಿ ಶರಣೆಯರು, ಬೇಡಲು ಬಂದವರಿಗೆ ಅವುಗಳನ್ನು ಹಂಚುತ್ತಿದ್ದರು. ಅರ್ಥಿಗಳ ಅಪೇಕ್ಷೆ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಪಕ್ಷಪಾತವಿಲ್ಲದೆ ಹಂಚುತ್ತಿದ್ದರು. ಗಮನದಲ್ಲಿಟ್ಟುಕೊಂಡು ಪಕ್ಷಪಾತವಿಲ್ಲದೆ ಹಂಚಿಕೆ ನಡೆಯುತ್ತಿದ್ದುದರಿಂದ ಎಲ್ಲರೂ ತೃಪ್ತಿಯಿಂದ ಹಿಂದಿರುಗುತ್ತಿದ್ದರು.

ಉಷಾವತಿ ಈ ದೃಶ್ಯವನ್ನು ಕೊಂಚ ಹೊತ್ತು ನೋಡುತ್ತಿದ್ದು ಬಳಿಕ ಅಗ್ಗಳನನ್ನು ನೋಡಲು ಅತಿಥಿಶಾಲೆಯ ಕಡೆಗೆ ಹೋದಳು.

ಬಾಗಿಲಲ್ಲಿ ನಿಂತಿದ್ದ ಅಗ್ಗಳನು, "ನಿನಗಾಗಿ ನಾನು ಭೀತನಾಗಿದ್ದೆ, ಉಷಾ. ಈಗ ಸಮಾಧಾನವಾಯಿತು. ರಾಜಗೃಹದಲ್ಲಿ ಏನು ನಡೆಯಿತು? ಜಗದೇಕಮಲ್ಲರಸರಿಗೆ ಸಂದೇಶ ಮುಟ್ಟಿಸಿದೆಯಾ? ಅನುಮತಿ ಪತ್ರ ನಿನಗೆ ಕೊಡಲು ಮರೆತದ್ದಕ್ಕಾಗಿ ಬ್ರಹ್ಮಶಿವ ಪಂಡಿತನಿಗೆ ತಕ್ಕ ಶಾಸ್ತಿ ಆಯಿತು," ಎಂದನು.

"ಅನುಮತಿ ಪತ್ರ ನನ್ನ ಹತ್ತಿರ ಇಲ್ಲದಿದ್ದುದು ಒಳ್ಳೆಯದೇ ಆಯಿತು," ಎಂದು ಪ್ರಾರಂಭಿಸಿ ಉಷಾವತಿ, ಕಳೆದ ರಾತ್ರಿ ತಾನು ರಾಜಗೃಹದ ಮಹಾದ್ವಾರಕ್ಕೆ ಹೋದಾಗಿನಿಂದ, ಮುಂಜಾವಿನಲ್ಲಿ ನಗರಕ್ಕೆ ಬಂದವರೆಗೆ ನಡೆದುದೆಲ್ಲವನ್ನೂ ವಿವರವಾಗಿ ಹೇಳಿದಳು.

ಕೊನೆಗವಳು, "ಈಗ ಬ್ರಹ್ಮಶಿವ ಪಂಡಿತರೆಲ್ಲಿ? ಅವರಿಗೆ ನೀವು ಮಾಡಿದ ಶಾಸ್ತಿಯೇನು?" ಎಂದು ಕೇಳಿದಳು.

ಅಗ್ಗಳನು ನಕ್ಕು ಹೇಳಿದನು : ಶಾಸ್ತಿ ಕಠಿಣವೇನೂ ಅಲ್ಲ. ಮಾಚಿದೇವರು ಪಂಡಿತನಿಗೆ ಕೊಟ್ಟ ತಿಳಿಗೇಡಿ ಪ್ರಶಸ್ತಿಯ ಪುರಶ್ಚರಣ. ನಿನ್ನಿನ ರಾತ್ರಿ ನಾವು ಮಹಮನೆಗೆ ಹಿಂದಿರುಗಿದಾಗಿನಿಂದ, ಮುಂಜಾವಿನಲ್ಲಿ ಪಂಡಿತನು ರಾಜಗೃಹಕ್ಕೆ ಹೋಗುವವರೆಗೆ ನೂರೊಂದು ಸಾರಿ ಅವನನ್ನು ಆ ಹೆಸರಿನಿಂದ ಕರೆದಿದ್ದೇನೆ. ಕೊನೆಗೆ ಅವನು ಇಲ್ಲಿಂದ ಹೊರಟಾಗ ನನ್ನೊಡನೆ ಮಾತಾಡುವಷ್ಟು ಸಹನೆಯೂ ಉಳಿದಿರಲ್ಲಿಲ್ಲ ಅವನಲ್ಲಿ."

ಅಗ್ಗಳನ ರೂಢಾಚರಣೆಯಿಂದ ಕೋಪಗೊಂಡ ಉಷಾವತಿ, "ನಾನು ಪಂಡಿತರ ಸ್ಥಾನದಲ್ಲಿದ್ದರೆ ನಿಮಗೆ ಚನ್ನಾಗಿ ಬುದ್ಧಿ ಕಲಿಸುತ್ತಿದ್ದೆ," ಎಂದಳು.

"ಏನು ಮಾಡುತ್ತಿದ್ದೆ?"

"ರಾಜಗೃಹದಲ್ಲಿ ಪ್ರಭುಗಳ ಕಾವ್ಯೋಪದೇಶಕರಾಗಿ ನೀವು ನಡೆಸಿದ ಭಂಡ ಜೀವನವನ್ನು ಬಹಿರಂಗಪಡಿಸುತ್ತಿದ್ದೆ. ನೀವು ಎಂತಹ ಲಜ್ಜೆಗೇಡಿ ಅತಿ ಕಾಮುಕರೆಂಬುದನ್ನು ಎಲ್ಲರಿಗೂ ಹೇಳುತ್ತಿದ್ದೆ."

"ನಾನು ಲಜ್ಜೆಗೇಡಿಯೂ ಅಲ್ಲ. ಬ್ರಹ್ಮಶಿವನು ತಿಳಿಗೇಡಿಯೂ ಅಲ್ಲ. ನಿನ್ನ

ಸಮಾಧಾನಕ್ಕಾಗಿ ಶಾಸ್ತ್ರಿಯ ಸುಳ್ಳು ಕಥೆ ಹೇಳಿದೆ. ನೀನು ಅನುಮತಿ ಪತ್ರವಿಲ್ಲದೆ ಮಹಾದ್ವಾರವನ್ನು ಪ್ರವೇಶಿಸಿದಾಗ ನಾನು ಭಾವಿಸಿದೆ, ರಾಜಮುದ್ರೆ ಇರಲಿ ಇಲ್ಲದಿರಲಿ, ಸಂತೆಯಲ್ಲಿ ಚಿನ್ನ ಸಲ್ಲುವುದು ಎಂದು. ಹೆಣ್ಣಿನ ಚತುರತೆ ಎಲ್ಲ ಸಂದರ್ಭಗಳಲ್ಲಿಯೂ ಉಪಯುಕ್ತವಾದ ವಸ್ತು,"

–ಎಂದು ಅಗ್ಗಳನು ನಕ್ಕನು. ಉಷಾವತಿಯೂ ನಕ್ಕಳು.

ಶಾಸ್ತ್ರಿಯ ವಿಚಾರ ಅಷ್ಟಕ್ಕೆ ಮುಗಿಯಿತು.

ಉಷಾವತಿ ತನ್ನ ಬಿಡಾರಕ್ಕೆ ಹೋಗಿ ಸ್ನಾನಾದಿಗಳನ್ನು ಮುಗಿಸಿಕೊಂಡು ಬಂದಾಗ ಅಗ್ಗಳನು ಅಲ್ಲಿರಲಿಲ್ಲ. ಹೊರಗೆ ಹೋಗಿ ನೋಡಿದಳು. ಎಲ್ಲಿಯೂ ಅವನು ಕಾಣಲಿಲ್ಲ.

ಕೊಂಚ ಹೊತ್ತಿನ ಮೇಲೆ ಅಗ್ಗಳನು ಹಿಂದಿರುಗಿ, "ಮಾಚಿದೇವರು ಹೇಳಿ ಕಳುಹಿಸಿದ್ದರು, ನೋಡಲು ಹೋಗಿದ್ದೆ. ಗಣಾಚಾರಿ ಶರಣರ ರಕ್ಷಕ ತಂಡ ಈ ದಿನವೇ ಕರ್ಹಾಡಕ್ಕೆ ಹೋಗುವುದು. ಪ್ರೇಮಾರ್ಣವನ ಸಂಗಡ ನೀನೂ ಹೋಗಬೇಕು," ಎಂದನು.

ಉಷಾವತಿ ಹೇಳಿದಳು : "ನಾನು ಯಾವಾಗಲೂ ಸಿದ್ಧಳಾಗಿದ್ದೇನೆ. ಕುಮಾರನನ್ನು ವಿಜಯಾರ್ಕ ದೇವರಿಗೆ ಒಪ್ಪಿಸಿದರೆ ನನ್ನ ಹೊಣೆ ಪೂರೈಸುವುದು."

"ಸಂದೇಶವನ್ನು ಓದಿದಾಗ ಪ್ರಭುಗಳೇನು ಹೇಳಿದರು?"

"ಆ ವಿಚಾರಗಳೊಂದೂ ನನಗೆ ತಿಳಿಯದು."

"ಸಂದೇಶದಲ್ಲಿ ರಾಣಿಯುವರು ಏನು ಹೇಳಿದ್ದರೆಂಬುದನ್ನು ತಿಳಿದಿರಬೇಕಲ್ಲವೆ?"

ಆ ವಿಚಾರ ತಿಳಿದರೂ ತಿಳಿಯದಿದ್ದಂತೆ. "ಸಂದೇಶದ ನುಡಿಗಳನ್ನು ಬಹಿರಂಗ ಪಡಿಸುವ ಸಾಮರ್ಥ್ಯ ನನಗಿರುವುದಿಲ್ಲ."

ಕವಿಸಹಜವಾದ ಅಗ್ಗಳನ ಕುತೂಹಲ ಹಾಗೆಯೇ ಉಳಿಯಿತು.

"ಹೊರಗೆ ನಡೆಯುತ್ತಿರುವ ಧನಧಾನ್ಯ ದಾಸೋಹ ಮುಗಿಯಿತೆ?"

–ಉಷಾವತಿ ಆಸಕ್ತಿಯಿಂದ ಕೇಳಿದಳು.

"ಇನ್ನೇನು ಮುಗಿಯುತ್ತ ಬಂದಂತೆ. ಧನಧಾನ್ಯಗಳನ್ನು ಒಟ್ಟಿಟ್ಟ ಮೊಗಶಾಲೆಗಳು ಬರಿದಾಗುತ್ತ ಬಂದಿವೆ. ನಾಳೆ ಪುನಃ ಪ್ರಾರಂಭವಾಗುವುದು."

"ದಾಸೋಹದ ಕಾರಣ?"

ಅಗ್ಗಳನು ಹೇಳಿದನು : "ಅಪರಿಗ್ರಹ, ಅಸಂಗ್ರಹ, ಇವು ಶರಣಧರ್ಮದ ಎರಡು ಆಧಾರಸ್ತಂಭಗಳು. ಯಾರಿಂದಲೂ ಏನನ್ನೂ ದಾನವಾಗಿ

ತೆಗೆದುಕೊಳ್ಳದಿರುವುದು ಅಪರಿಗ್ರಹ. ಮುಂದೆ ನಮಗೆ ಬೇಕಾಗುವುದೆಂಬ ಲೋಭದಿಂದ ಧನ ಧಾನ್ಯಗಳನ್ನು ಕೂಡಿಡದಿರುವುದು ಅಸಂಗ್ರಹ. ಬಸವಣ್ಣನವರು ಮಂತ್ರಿ ಪದವಿಯನ್ನು ಬಿಟ್ಟು ಮಹಮನೆಗೆ ಬಂದ ಮೇಲೆ ಶರಣರು ಬಿಜ್ಜಳನ ದಬ್ಬಾಳಿಕೆಯನ್ನು ತಡೆಯಲಾರದೆ ಕಲ್ಯಾಣವನ್ನು ಬಿಟ್ಟು ಹೋಗಲು ನಿರ್ಧರಿಸಿರುವುದರಿಂದ, ಅತಿಥಿ ಅಭ್ಯಾಗತರಿಗಾಗಿ, ಕಾಲಕಾಲಕ್ಕೆ ನಡೆಯುವ ದಾಸೋಹಕ್ಕಾಗಿ ಸೇರಿಸಿದ್ದ ಧನ ಧಾನ್ಯ ಪಾತ್ರೆ ಪದಾರ್ಥಗಳನ್ನು ಜಂಗಮ ಸನ್ಯಾಸಿ ದೀನ ದರಿದ್ರರಿಗೆ ಹಂಚುತ್ತಿದ್ದಾರೆ. ನಾಳೆಗೆ ಈ ಕಾರ್ಯ ಮುಗಿಯುವುದು. ಆಮೇಲೆ ಅವರು ಯಾವ ಕ್ಷಣದಲ್ಲಾದರೂ ಕಲ್ಯಾಣವನ್ನು ಬಿಡಬಹುದು."

"ರಾಜಪ್ರಾಸಾದದಂತಿರುವ ಈ ದೊಡ್ಡ ಮನೆ, ಅನುಭವಮಂಟಪ, ಅತಿಥಿ ಶಾಲೆ, ಇವೆಲ್ಲವನ್ನೂ ಬಿಟ್ಟು ಹೋಗುವರೆ?" –ಉಷಾವತಿಯ ಕುತೂಹಲ ಇಮ್ಮಡಿಸಿತ್ತು.

ಅಗ್ಗಳನ ದನಿ ಗಂಭೀರವಾಯಿತು. ಅವನು ಹೇಳಿದನು : "ನಮ್ಮ ಮನೆ ಮಠ ಸಿರಿ ಸಂಪತ್ತುಗಳು ಎಷ್ಟೆ ದೊಡ್ಡದಾಗಿರಲಿ, ಮೃತ್ಯುವಿನ ಕರೆ ಬಂದಾಗ ಬಿಟ್ಟು ಹೋಗಲೇಬೇಕಲ್ಲವೇ ? ಅಂಜದೆ ಅಳುಕದೆ ಮರಣವನ್ನು ಮಾನ್ಯ ಅತಿಥಿಯೆಂದು ತಿಳಿದು ಆದರದಿಂದ ಸ್ವಾಗತಿಸಿ ಬರಮಾಡಿಕೊಳ್ಳುವುದು ಶರಣಧರ್ಮದ ಇನ್ನೊಂದು ತತ್ವ. ಎಂದಾದರೊಂದು ದಿನ ಮಾಡಬೇಕಾದ ಕಾರ್ಯವನ್ನು ಮಹಮನೆಯ ಶರಣರು ಇಂದೇ ಮಾಡುತ್ತಿದ್ದಾರೆ."

"ಅನುಭವಮಂಟಪದ ಸರಸ್ವತೀ ಭಂಡಾರದಲ್ಲಿ ಅನೇಕ ಅಮೂಲ್ಯ ಗ್ರಂಥಗಳು ಸಂಗ್ರಹಿಸಲ್ಪಟ್ಟಿರುವುದೆಂದು ರಾಣಿಯವರು ಹೇಳುತ್ತಿದ್ದರು. ಮುಂದೆ ಅವುಗಳ ಗತಿ?"

"ಸರಸ್ವತೀ ಭಂಡಾರದ ಅಮೂಲ್ಯ ಗ್ರಂಥಗಳನ್ನು, ವಚನ ಸಂಗ್ರಹಗಳನ್ನು, ಸುರಕ್ಷಿತವಾದ ಸ್ಥಳಗಳಿಗೆ ಕಳುಹಿಸುವ ಕಾರ್ಯ ಈಗೊಂದು ವಾರದಿಂದ ನಡೆಯುತ್ತಿದೆ. ಆಗಲೇ ಭಂಡಾರದ ಬಹು ಭಾಗವನ್ನು ಗಾಡಿಗಳ ಮೇಲೆ ಕಳುಹಿಸಿದ್ದಾರೆ."

"ನಾಗಲಾಂಬೆ, ನೀಲಲೋಚನೆ, ಬಾಲಕ ಸಂಗಮನಾಥ, ಉಳಿದ ಶರಣೆಯರು. –ಎಲ್ಲರೂ ಸಂಗಡ ಹೋಗುವರೆ?"

"ಎಲ್ಲರೂ ಒಟ್ಟಿಗೆ ಹೋಗಬೇಕೆಂದು ಚೆನ್ನಬಸವಣ್ಣನವರ ಯೋಚನೆ. ಕಲ್ಯಾಣದ ಶೈವಮಠಗಳ ಜಂಗಮರೂ ಸಂಗಡ ಹೋಗುತ್ತಾರೆ.

ಉಷಾವತಿ ಕೆಲವು ಕ್ಷಣಗಳು ಯೋಚಿಸುತ್ತಿದ್ದು, "ನಾನು ಕರ್ಹಾಡಕ್ಕೆ

ಹೋದ ಮೇಲೆ ನೀವೇನು ಮಾಡುತ್ತೀರಿ?" ಎಂದು ಕೇಳಿದಳು.

"ರಾಜಗೃಹದ ಸಂಚು ಯಾವ ರೀತಿ ಮುಗಿಯುವುದೆಂದು ನೋಡುತ್ತಿದ್ದೇನೆ. ಆಮೇಲೆ ಚೆನ್ನಬಸವಣ್ಣನವರೊಡನೆ ಕಲ್ಯಾಣವನ್ನು ತೊರೆದು ಉಳಿವೆಗೆ ಹೋಗುವುದು."

"ಉಳಿವೆ ! ಎಲ್ಲಿದೆ ಅದು ?"

"ಸಹ್ಯಾದ್ರಿಯ ಒಂದು ರಮ್ಯ ಸ್ಥಾನದಲ್ಲಿ."

"ಎರಡು ದಿನಗಳಿಂದ ಮಹಮನೆಯ ಅನ್ನ ತಿಂದು ನೀವೂ ಅರ್ಧ ಶರಣರೇ ಆದಿರಿ. ಇನ್ನುಳಿದಿರುವುದು ದೀಕ್ಷೆಯೊಂದೇ!" –ಎಂದು ಉಷಾದೇವಿ ನಗೆಯಾಡಿದಳು.

ಕಳೆದೆರಡು ದಿನಗಳಿಂದ ಕಲ್ಯಾಣದ ಶೈವಮಠದಲ್ಲಿ ಉಳಿವೆಯ ವಿಚಾರ ಪ್ರಸ್ತಾಪಿಸಲ್ಪಡುತ್ತಿತ್ತು. ಅದು ಎಲ್ಲಿದೆ? ಕಲ್ಯಾಣದಿಂದ ಎಷ್ಟು ಹರದಾರಿ ದೂರ? ದಾರಿಯಲ್ಲಿ ಯಾವ ಯಾವ ನದಿ ಬೆಟ್ಟಗಳನ್ನು ದಾಟಬೇಕು? ಮಾರ್ಗದ ಕಷ್ಟ ಕಾರ್ಪಣ್ಯಗಳೇನು? ಈ ವಿಚಾರಗಳನ್ನು ಕುರಿತ ಚಿತ್ರ ವಿಚಿತ್ರ ಕಥೆಗಳು ಪ್ರಚಾರವಾಗಿದ್ದವು.

"ಇದುವರೆಗೆ ಯಾರೂ ನೋಡದ, ಕೇಳದ, ರಹಸ್ಯ ಸ್ಥಳ ಅದು. ಚೆನ್ನ ಬಸವಣ್ಣನವರಿಗೆ ಮಾತ್ರ ಅದರ ಮಾರ್ಗ ತಿಳಿದದ್ದು ಹೇಗೆ ? ಯಾವನೋ ಯಕ್ಷ ಕನಸಿನಲ್ಲಿ ಕಾಣಿಸಿಕೊಂಡು ಹೇಳಿರಬೇಕು," ಎಂದು ಕೆಲವರು ಹಾಸ್ಯಮಾಡಿದ್ದರು.

"ಅದು ಬಸವಣ್ಣನವರ ಕಲ್ಪನೆ. ಚೆನ್ನಬಸವಣ್ಣನವರು ಅದಕ್ಕೆ ಬಣ್ಣ ಹಚ್ಚಿಕೊಡು ಕಟ್ಟಿ ದೊಡ್ಡದು ಮಾಡಿದ್ದಾರೆ. ಅವರ ಸವಿನುಡಿಗಳಿಗೆ ಬೆರಗಾಗಿ ಸಂಗಡ ಹೋದವರು ಅರಣ್ಯದಲ್ಲಿ ಅನ್ನವಿಲ್ಲದೆ ಸಾಯಬೇಕಾಗುತ್ತದೆ." ಎಂದು ಕೆಲವರು ಅಮಂಗಲ ನುಡಿದರು.

"ಪುರಾಣಗಳಲ್ಲಿ ಹೇಳುವ ಗೊಂಡವನದ ನಡುವೆ ಇರುವ ಪರ್ವತ ಶೃಂಗವೇ ಉಳಿವೆ. ಯಕ್ಷರು, ವಿದ್ಯಾಧರರು, ಸಿದ್ಧರು, ಅಲ್ಲಿ ಸಂಚರಿಸುತ್ತಾರೆ. ಎತ್ತರವಾದ ಅದರ ಶಿಖರದ ಮೇಲೆ ನಿಂತು ನಾವು ರೆಕ್ಕೆಯಿಲ್ಲದೆ ಕೈಲಾಸಕ್ಕೆ ಹಾರಬಹುದು," ಎಂದು ಕೆಲವರು ಕಟಕಿಯಾಡಿದರು.

"ಕಲ್ಯಾಣದ ಸುಖವಾಸವನ್ನು ಬಿಟ್ಟು ಕಾಣದ ಯಾವುದೋ ವಸ್ತುವನ್ನು ಹುಡುಕಲು ಹೋದರೆ ಕೈಗೆ ಬಂದದ್ದನ್ನು ಬಿಟ್ಟು ಎಟುಕದ ಹಣ್ಣಿಗೆ ಕೈಚಾಚಿದ ಮೋಟರಾಗುವೆವು ನಾವು," ಎಂದು ಕೆಲವರು ವಿವೇಕ ನುಡಿದರು.

ತಮ್ಮ ಸಂಗಡ ಉಳಿವೆಗೆ ಬರುವಂತೆ ಚೆನ್ನಬಸವಣ್ಣನವರು ಕಳುಹಿಸಿದ್ದ

ಆಹ್ವಾನಕ್ಕೆ ಶೈವಮಠಗಳವರು ಕಳುಹಿಸಿದ ಕೆಲವು ಉತ್ತರಗಳು ಅಷ್ಟೇ ವಿಚಿತ್ರವಾಗಿದ್ದವು.

"ನಮಗಿನ್ನೂ ಮರ್ತ್ಯಲೋಕದ ಭೋಗ ಸವೆದಿಲ್ಲ. ನೀವು ಕೈಲಾಸಕ್ಕೆ ಹೋಗಿ ಹಿಂದಿರುಗುವ ಪರಿಯಂತ ನಾವು ಗಿರಿಗುಹೆಗಳಲ್ಲಿ ವಾಸಮಾಡುವೆವು. ನೀವು ಪುನಃ ಮರ್ತ್ಯಕ್ಕೆ ಬಂದಾಗ ನಾವು ಬಂದು ಪೂಜೆಯ ಕೈಗೊಳ್ಳುವೆವು. ನೀವು ಚಿತ್ತೈಸಿ," ಎಂದು ಬರೆದಿದ್ದರು ಒಬ್ಬ ಭೋಗಾಸಕ್ತ ಮಠಪತಿ.

ಇನ್ನೊಬ್ಬ ಮಠದೊಡೆಯರು ತಾವೇ ಮಹಮನೆಗೆ ಬಂದು, "ಕೇಳಯ್ಯ ಚೆನ್ನಬಸವಣ್ಣ. ನೀವು ಒಂದು ಬಾರಿ ಕೈಲಾಸಕ್ಕೆ ಹೋಗಿ ಬಾಹ ಪರಿಯಂತರ ನಾವು ಹತ್ತು ಹತ್ತು ಬಾರಿ ಘಟವ ತೊಟ್ಟು ತೊಟ್ಟು ಬಂದೆವು. ನೀವು ಚಿತ್ತೈಸಿ," ಎಂದು ಹೇಳಿದರು.

"ಇನ್ನೆರಡು ದಿನಗಳು ಮರ್ತ್ಯದಲ್ಲಿದ್ದು ಪೂಜೆಗೊಳ್ಳಬೇಕೆಂದು ನಾವು ಇಚ್ಛೈಸುತ್ತೇವೆ. ಈ ದೇಹ ಜೀರ್ಣವಾದರೂ ಇನ್ನೊಂದು ದೇಹವನ್ನು ಧರಿಸಿ ನೀವು ಪುನಃ ಬಂದಾಗ ನಾವು ಪೂಜೆಗೊಂಡಿಹೆವು. ನೀವು ಎಲ್ಲಿದ್ದರೂ ಶಿವಗಣಂಗಳು ನಮ್ಮ ಪೂಜೆಯ ಮಾಡುವ ಕಾರಣ, ನಿಮ್ಮನ್ನಗಲಿದ ಚಿಂತೆಯಲ್ಲದೆ ನಮಗೆ ಮತ್ತಾವ ಚಿಂತೆಯೂ ಇಲ್ಲ, ಸ್ವಾಮಿಗಳೆ," ಎಂದು ಇನ್ನೊಬ್ಬ ವೃದ್ಧ ಜಂಗಮರು ಮಠದ ಕಾರ್ಯಕರ್ತನ ಮುಖಾಂತರ ಹೇಳಿ ಕಳುಹಿಸಿದ್ದರು.

ಇನ್ನೊಬ್ಬ ಆಚಾರಶೀಲ ಮಠಾಧಿಕಾರಿ ಈ ರೀತಿ ಬರೆದಿದ್ದರು : "ನಾಗಲಾಂಬಿಕೆಯ ಗಣಪರ್ವದಲ್ಲಿ ಪ್ರಭುದೇವರು ನಮಗೆ ಪ್ರಸಾದವನ್ನು ತವನಿಧಿಯಾಗಿ ದಯಪಾಲಿಸಿದ್ದಾರೆ. ನೀವು ಪುನಃ ಬರುವ ಪರಿಯಂತ ಆ ಪ್ರಸಾದ ತೀರದು. ನಾವು ಮಠದ ನೆಲಮಾಳಿಗೆಯಲ್ಲಿ ಯಾರೂ ಕಾಣದ ಹಾಗೆ ಇರುತ್ತೇವೆ. ಮರ್ತ್ಯದ ಪಾಪಿಗಳಿಗೆ ಆ ನೆಲಮಾಳಿಗೆಯ ಬಾಗಿಲು ಕಾಣಿಸದು. ನೀವು ಸುಖದಲ್ಲಿ ಹೋಗಿ ಬನ್ನಿರಿ."

ಇಂತಹ ಹಲವಾರು ಉತ್ತರಗಳನ್ನು ಓದಿ ಕೇಳಿದಾಗ ಚೆನ್ನಬಸವಣ್ಣನವರಿಗೆ ವಿಷಾದವೆನಿಸಿತು. ತಮ್ಮೊಡನಿದ್ದ ಮಾಚಿದೇವ ಸಕಲೇಶ ಮಾದರಸರ ಕಡೆ ತಿರುಗಿ ಅವರು, "ಶರಣಧರ್ಮದ ಅಸ್ತಿತ್ವ ರಕ್ಷಣೆಗಳಿಗಾಗಿ ನಾವು ಈ ಕಾರ್ಯ ಮಾಡಬೇಕಾಗಿದೆ. ಅದನ್ನು ಅರಿತುಕೊಳ್ಳುವ ಸಹನೆಯೂ ಇಲ್ಲ ಇವರಿಗೆ !" ಎಂದು ನುಡಿದು ಮೌನವಾಗಿ ಕುಳಿತರು.

ಸಕಲೇಶ ಮಾದರಸರು ನಸು ನಕ್ಕು ಹೇಳಿದರು : "ನೀವು ಇಷ್ಟಕ್ಕೇಕೆ ಚಿಂತಿಸಬೇಕು, ಚೆನ್ನಬಸವಣ್ಣನವರೆ?"

"ಯೋಗಿ, ಜೋಗಿ, ತಪಸಿ, ಸನ್ಯಾಸಿ ಮೀಮಾಂಸಕ,

ಈ ಲಂಪಟರು ಸುಳಿವರು ಕ್ಷುದೆ ಕಾರಣ.
'ತೋರಿ, ಮಾರಿ,' ಎಂಬ ವ್ಯವಹಾರಿಗಳಿವರು,
ನಿರ್ಣಯ ನಿರ್ಲೇಪಭಕ್ತಿಯುಳ್ಳವರನಲ್ಲದೊಲ್ಲ
ಸಕಲೇಶ್ವರ ದೇವಾ !"

ಆ ವೃದ್ಧ ಜಂಗಮನ ಅನುಭವದ ನುಡಿಗಳು ಚೆನ್ನಬಸವಣ್ಣನವರಿಗೆ ಸ್ಫೂರ್ತಿದಾಯಕವಾಯಿತು. ಅವರು ಭಾವಾವೇಶದಿಂದ ನುಡಿದರು :

"ಬಟ್ಟ ಬಯಲೆಲ್ಲ ಗಟ್ಟಿಗೊಂಡೊಡೆ, ಸ್ವರ್ಗ ಮರ್ತ್ಯ
ಪಾತಾಳಕ್ಕೆ ಠಾವಿನ್ನೆಲ್ಲಿಹುದೊ ?
ಮೇಘಜಲವೆಲ್ಲ ಮುತ್ತಾದಡೆ ಸಪ್ತ ಸಾಗರಂಗಳಿಗೆ
ಉದಕವಿನ್ನೆಲ್ಲಿಹುದೋ ?
ಕಷ್ಟಜೀವಿ ಮನುಜರೆಲ್ಲ ನೆಟ್ಟನೆ ಶಿವಜ್ಞಾನಿಗಳಾದಡೆ
ಮುಂದೆ ಭವದ ಬಳ್ಳಿಗೆ ಬೀಜ ಇನ್ನೆಲ್ಲಿಹುದೊ ?
ನಮ್ಮ ಕೂಡಲಚೆನ್ನ ಸಂಗಯ್ಯನಲ್ಲಿ
ಸಾವಿರಕ್ಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ
ಶರಣ !"

ಸಕಲೇಶ ಮಾದರಸರ ಮುಖದಲ್ಲಿ ಮೆಚ್ಚುಗೆಯ ನಗೆ ಮೂಡಿತು.

ಮಾಚಿದೇವರು ಅನುಮೋದಿಸಿ ತಲೆದೂಗಿದರು.

"ಅನುಭವ ವೃದ್ಧರಾದ ನೀವು ಒಪ್ಪುವುದಾದರೆ, ನಮ್ಮ ಆಹ್ವಾನವನ್ನು ನಿರಾಕರಿಸಿದ ಮಠಾಧಿಪತಿಗಳೆಲ್ಲರಿಗೆ ಈ ವಚನದ ಪ್ರತಿ ಮಾಡಿಸಿ ಉತ್ತರ ಕಳುಹಿಸುತ್ತೇನೆ," ಎಂದರು ಚೆನ್ನಬಸವಣ್ಣನವರು.

ಸಕಲೇಶ ಮಾದರಸರು ಯೋಚಿಸುತ್ತ ಮೌನವಾಗಿದ್ದರು.

ಮಾಚಿದೇವರು ಹೇಳಿದರು : "ಈ ಉತ್ತರ ಪ್ರತ್ಯುತ್ತರಗಳ ಆಲಸ್ಯ ಕಾರ್ಯದಲ್ಲಿ ಕಾಲಹರಣ ಮಾಡಲು ಈಗ ನಮಗೆ ಅವಕಾಶವಿಲ್ಲ, ಚೆನ್ನಬಸವಣ್ಣನವರೆ. ಹೇಳಿ ಕಳುಹಿಸಿ ನಾವು ನಮ್ಮ ಕಾರ್ಯ ಮಾಡಿದ್ದೇವೆ. ಬರುವುದೂ ಬಿಡುವುದೂ ಅವರ ಹೊಣೆ. ಬುದ್ಧಿಃ ಕರ್ಮಾನುಸಾರಿಣೀ ಎಂದು ಕೇಳಿಲ್ಲವೆ ನೀವು ? ನಾಳೆ ದಾಸೋಹ ಮುಗಿದ ತಕ್ಷಣ ನಾವು ಹೊರಡಲು ಸಿದ್ಧರಾಗಿರಬೇಕು. ಅದಕ್ಕಾಗಿ ನಾನು ಎಲ್ಲವನ್ನೂ ಏರ್ಪಡಿಸುತ್ತಿದ್ದೇನೆ."

ಚೆನ್ನಬಸವಣ್ಣನವರು ಒಪ್ಪಿದರು.

* * *

ಮರುದಿನ ಪ್ರಾತಃಕಾಲ ಮಹಮನೆಯ ಧನ ಧಾನ್ಯ ದಾಸೋಹ

ಪುನರಾರಂಭವಾಗಿ ಮುಗಿಯುತ್ತ ಬಂದಿದ್ದಾಗ ಬ್ರಹ್ಮಶಿವ ಪಂಡಿತ ಅಲ್ಲಿಗೆ ಬಂದನು. ಅವನ ಕಪಿನಿ ಮುಂಡಾಸು ಜೋಳಿಗೆಗಳನ್ನು ಕಂಡು ಅಗ್ಗಳನಿಗೆ ಸಮಾಧಾನವಾಯಿತು. ಮೊದಲೇ ಗೊತ್ತಾಗಿದ್ದಂತೆ ಹಿಂದಿನ ಸಂಜೆ ಉಷಾವತಿ ಕರ್ಹಾಡಕ್ಕೆ ಪಯಣಮಾಡಿದ ಮೇಲೆ, ಅಗ್ಗಳನು ಏಕಾಂಗಿಯಾಗಿ, ರಾಜಗೃಹದಲ್ಲಿ ಏನಾಯಿತೆಂಬುದನ್ನು ತಿಳಿಯುವ ಆತುರದಿಂದ ಬ್ರಹ್ಮಶಿವನ ಎದುರು ನೋಡುತ್ತಿದ್ದನು.

ಹಾಸ್ಯ ಪ್ರವೃತ್ತಿಯ ಬ್ರಹ್ಮಶಿವನ ಮುಖ ಯಾವುದೋ ಚಿಂತೆಯಿಂದ ಮಲಿನವಾಗಿರುವುದನ್ನು ಕಂಡು ಅಗ್ಗಳನು, "ಏಕೆ ಪಂಡಿತರೆ, ನಿಮ್ಮ ಗುರುಗಳ ತಪಶ್ಚರ್ಯೆ ನಿರ್ವಿಘ್ನವಾಗಿ ನಡೆಯುತ್ತಿಲ್ಲವೆ ? ಅಪ್ಸರೆಯರಿಂದ ಅಡಚಣೆಯಾಗುತ್ತಿದೆಯೆ ?" ಎಂದು ನಗೆಯಾಡಿದನು.

"ರಾಜಗೃಹದಲ್ಲಿ ಅಪ್ಸರೆಯರ ಕಾಟ ಎಂದಿನಂತಿದ್ದರೂ ಗುರುಗಳ ತಪಶ್ಚರ್ಯೆ ನಿರ್ವಿಘ್ನವಾಗಿ ನಡೆಯುತ್ತಿದೆ, ಅಗ್ಗಳದೇವ. ನಮ್ಮ ಗುರುಗಳಿಗಿರುವ ಒಂದೇ ಒಂದು ಅಡಚಣೆಯೆಂದರೆ, ಕಾಲಾನುಗುಣವಾಗಿ ಬದಲಾವಣೆಯಾಗುವ ಅವರ ಅಸ್ಥಿರ ಮನೋವೃತ್ತಿ." –ತತ್ವಶಾಸ್ತ್ರಿಯಂತೆ ಕೈಯಾಡಿಸುತ್ತ ಬ್ರಹ್ಮಶಿವನು ಉತ್ತರ ಕೊಟ್ಟನು.

"ಏಕೆ? ಈಗೇನಾಗಿದೆ ಅವರಿಗೆ ?"

ಬ್ರಹ್ಮಶಿವ ದನಿ ತಗ್ಗಿಸಿ ಹೇಳಿದನು : "ಬೊಮ್ಮರಸರಿಗೆ ಪುನಃ ವೇಷಾಂತರದ ಹುಚ್ಚು ಹಿಡಿದಿದೆ. ಗಡ್ಡ ಜಟೆಗಳನ್ನು ತೆಗೆದು ಹಾಕಿ, ಇಷ್ಟು ದಿನಗಳ ಪರಿಶ್ರಮದಿಂದ ಗಳಿಸಿದ ಶಿವಯೋಗಿ ಪ್ರಶಸ್ತಿಗೆ ತಿಲಾಂಜಲಿ ಕೊಡಲು ಯೋಚಿಸಿದ್ದಾರೆ."

"ಈಗ ಅವರಿಗೆ ಬೇಕಾದ್ದೇನು?" –ಅಗ್ಗಳ ರಹಸ್ಯವಾಗಿ ಕೇಳಿದನು.

ಬಿಜ್ಜಳರಾಯರ ಪರಿವಾರ ಧರಿಸುವ ಎರಡು ಸಮವಸ್ತ್ರಗಳು. ನಾಟಕದ ಉದ್ದಾನಯ್ಯನಿಂದ ಗಡ್ಡ ಜಟೆಗಳನ್ನು ಕೊಂಡು ತಂದು ಶಿವಯೋಗಿಯನ್ನಾಗಿ ಮಾಡಿದೆ. ಈಗ ಸಮವಸ್ತ್ರಗಳನ್ನು ಎಲ್ಲಿಂದ ತರಲಿ? ಬೆಲೆ ಕೊಟ್ಟರೆ ಸಿಕ್ಕುವ ವಸ್ತುಗಳಲ್ಲ ಅವು," –ಎಂದು ಬ್ರಹ್ಮಶಿವ ತನ್ನ ಚಿಂತೆಯ ಕಾರಣ ಹೇಳಿಕೊಂಡನು.

ಅಗ್ಗಳನು ತಿಳಿದನು, ರಾಜಗೃಹದಿಂದ ತಪ್ಪಿಸಿಕೊಂಡು ಹೊರಗೆ ಬರುವ ಹಂಚಿಕೆ ನಡೆದಿದೆಯೆಂದು. "ರಹಸ್ಯ ವಿಚಾರ, ಇಲ್ಲಿ ಮಾತಾಡಬಾರದು," ಎಂದು ಅವನು ಬ್ರಹ್ಮಶಿವನನ್ನು ಅತಿಥಿಶಾಲೆಯ ವಾಸಗೃಹಕ್ಕೆ ಕರೆದುಕೊಂಡು ಹೋದನು. ಅಲ್ಲಿ ಅವರು ಕೊಂಚ ಹೊತ್ತು ಕಿವಿ ಮಾತಾಡಿದ ಮೇಲೆ ಅಗ್ಗಳನು, ನಿಮ್ಮ ಸಮವಸ್ತ್ರ ಸಮಸ್ಯೆಯ ಪರಿಹಾರ ನನಗೆ ತಿಳಿದಿದೆ," ಎಂದು ಬ್ರಹ್ಮಶಿವನನ್ನು ಮಹಮನೆಯ ವಸ್ತ್ರ ಭಂಡಾರದ ಕೋಣೆಗೆ ಕರೆದುಕೊಂಡು ಹೋದನು.

ಅಲ್ಲಿ ಕರಣಿಕನಾಗಿದ್ದ ಉತ್ತಣ್ಣನೆಂಬ ಶರಣನು ಕಳೆದೆರಡು ದಿನಗಳಿಂದ ಅಗ್ಗಳನಿಗೆ ಪರಿಚಿತನಾಗಿದ್ದನು. ಹರೀಶರುದ್ರ ಅರ್ಥಾತ್ ಬ್ರಹ್ಮಶಿವನ ಪರಿಚಯವೂ ಅವನಿಗಿತ್ತು.

"ನಿಮ್ಮ ವಸ್ತ್ರ ದಾಸೋಹದಲ್ಲಿ ಪಾಲಿಗೆ ಬಂದಿದ್ದೇವೆ, ಉತ್ತಣ್ಣನವರೆ, ನಮಗೇನು ಕೊಡುತ್ತೀರಿ?" –ಅಗ್ಗಳನು ಕೇಳಿದನು, ಅರ್ಥಿಯಾಗಿ ಬಂದವನಂತೆ ವಿನಯ ನಮ್ರತೆಗಳಿಂದ.

"ಕೊಂಚ ಹೊತ್ತಿಗೆ ಮೊದಲು ಬಂದಿದ್ದರೆ ಒಂದೆರಡು ಒಳ್ಳೆಯ ಬಟ್ಟೆಗಳಾದರೂ ಸಿಕ್ಕುತ್ತಿದ್ದವು. ಈಗ ಉಳಿದಿರುವುದು ಅರಮನೆಯ ಚಾವಡಿಗೆ ಕಳುಹಿಸಬೇಕಾದ ಈ ಸಮವಸ್ತ್ರಗಳು ಮಾತ್ರ," –ಎಂದು ಉತ್ತಣ್ಣ ಪಾರ್ಶ್ವದಲ್ಲಿ ಅಡಕವಾಗಿ ಮಡಿಸಿಟ್ಟಿದ್ದ ಬಟ್ಟೆಗಳನ್ನು ತೋರಿಸಿದನು.

"ಸಮವಸ್ತ್ರಗಳು ! ಅವುಗಳನ್ನು ಅರಮನೆಯ ಚಾವಡಿಗೇಕೆ ಕಳುಹಿಸ ಬೇಕು?" –ಅಚ್ಚರಿಗೊಂಡವನಂತೆ ಅಗ್ಗಳನು ಕೇಳಿದನು.

ಉತ್ತಣ್ಣ ಹೇಳಿದನು : "ಇವು ಅರಮನೆಯ ಬೋಯಿಗಳು, ಪಸಾಯಿತರು, ಅಂಗರಕ್ಷಕರು, ದೀವಟಿಗೆಯವರು ಮುಂತಾದ ಪರಿವಾರದ ಜನ ತೊಡುವ ಸಮವಸ್ತ್ರಗಳು. ಚಿಕ್ಕ ಡಣ್ಣಾಯಕರು ಮಂತ್ರಿಗಳಾದಾಗ ಅವರ ಪರಿವಾರದ ಉಪಯೋಗಕ್ಕೆಂದು ಅರಮನೆಯ ಹೆಗ್ಗಡೆ ಇವುಗಳನ್ನು ನಮಗೆ ಕಳುಹಿಸಿದ್ದನು. ಈಗ ಅವುಗಳನ್ನು ಹಿಂದಕ್ಕೆ ಕಳುಹಿಸಬೇಕಾಗಿದೆ."

"ನೀವು ಅನುಮತಿ ಕೊಟ್ಟರೆ ಇದರಲ್ಲಿಯೇ ನಮಗೆ ಬೇಕಾದ್ದನ್ನು ಆರಿಸಿ ಕೊಳ್ಳುತ್ತೇವೆ," –ಅಗ್ಗಳನೆಂದನು, ಅನುನಯದ ನಗೆ ಹಾರಿಸಿ.

"ಆರಿಸಿಕೊಳ್ಳಿರಿ. ಅರಮನೆಯ ಚಾವಡಿಗೆ ಆರು ಕೊರೆಯಾಗಲಿ, ಮೂರು ಹೆಚ್ಚಾಗಲಿ, ಎರಡೂ ಒಂದೇ," –ಎಂದು ಉತ್ತಣ್ಣ ಅರಮನೆಯ ಚಾವಡಿಯ ವೆಚ್ಚದಲ್ಲಿ ತನ್ನ ಔದಾರ್ಯವನ್ನು ಮೆರೆಸಿದನು.

ನೀಲಿ ಕೆಂಪು ಪಟ್ಟೆಗಳಿದ್ದ ಒಂದೇ ಮಾದರಿಯ ಎರಡು ಚಲ್ಲಣ, ಅಂಗಿ ಮತ್ತು ಕುಲಾವಿಗಳನ್ನು ಅಗ್ಗಳನು ಬಟ್ಟೆಯ ರಾಶಿಯಿಂದ ಆರಿಸಿ ಬೇರಿಡುತ್ತಿದ್ದಂತೆ ಮಾಚಿದೇವರು ಅಲ್ಲಿಗೆ ಬಂದು, "ನಾವು ಇಂದೇ ಕಲ್ಯಾಣವನ್ನು ಬಿಡಬಹುದು, ಮುಂದೆ ನೀವೇನು ಮಾಡುವಿರಿ?" ಎಂದು ಕೇಳಿದನು.

"ಕಲಿದೇವನ ದಯದಿಂದ ಕಲ್ಯಾಣದಲ್ಲಿ ನನ್ನ ಮಣಿಹ ಮುಗಿಯಿತು. ನಿಮ್ಮ ಸಂಗಡ ಉಳಿವೆಗೆ ಬರಲು ಅನುಮತಿ ಬೇಡುತ್ತೇನೆ," ಎಂದು ಅಗ್ಗಳ ಕೈಮುಗಿದು ಹೇಳಿದನು.

ಮಾಚಿದೇವರು ಬ್ರಹ್ಮಶಿವನ ಕಡೆ ತಿರುಗಿ, "ನೀನು, ಹರೀಶರುದ್ರ?" ಎಂದರು.

"ಗುರುಗಳು ರಾಜಗೃಹದ ಸುಖವಾಸದಲ್ಲಿ ಇನ್ನೂ ಕೆಲವು ದಿನಗಳಿರಲು ಯೋಚಿಸಿದ್ದಾರೆ. ನಾನು ನಿಮ್ಮ ಸಂಗಡ ಉಳಿವೆಗೆ ಬರುತ್ತೇನೆ," ಎಂದು ಬ್ರಹ್ಮ ಶಿವ ವಿನಯದಿಂದ ಉತ್ತರ ಕೊಟ್ಟನು.

"ಬರುವವರನ್ನು ನಾವು ಬೇಡವೆನ್ನುವುದಿಲ್ಲ, ಬಾರದವರನ್ನು ಬಲಾತ್ಕಾರಿಸುವುದಿಲ್ಲ. ಬರುವ ಇಚ್ಛೆ ನಿಮಗಿದ್ದರೆ ಅಗತ್ಯವಾಗಿ ಬರಬಹುದು. ಅದಕ್ಕಾಗಿ ಈ ದೀವಟಿಗೆಯವರ ಸಮವಸ್ತ್ರಗಳನ್ನು ಆರಿಸಿಕೊಂಡಂತೆ ಕಾಣುತ್ತದೆ. ಈ ಜಮದಂಡಿಗಳನ್ನೂ ತೆಗೆದುಕೊಳ್ಳಿ. ಸಮವಸ್ತ್ರ ಹಾಕಿಕೊಂಡಾಗ ಇವು ಕೈಯಲ್ಲಿ ಇರಬೇಕು. ಕಲಿದೇವರ ದೇವನು ನಿಮ್ಮನ್ನು ರಕ್ಷಿಸುವನು."

–ಎಂದು ಮಾಚಿದೇವರು ಉಗ್ರಾಣದ ಮೂಲೆಯಲ್ಲಿದ್ದ ಎರಡು ದಂಡಗಳನ್ನು ತೆಗೆದು ಅಗ್ಗಳ ಬ್ರಹ್ಮಶಿವರಿಗೆ ಕೊಟ್ಟು ಉತ್ತರಕ್ಕಾಗಿ ಕಾಯದೆ ಅಲ್ಲಿಂದ ತೆರಳಿದರು.

ಬ್ರಹ್ಮಶಿವ ಅಗ್ಗಳರು ಉತ್ತಣ್ಣನಿಗೆ ವಂದಿಸಿ ಅತಿಥಿ ಶಾಲೆಗೆ ಹೋದರು. ಬಟ್ಟೆಯ ಗಂಟು ಮತ್ತು ದಂಡಗಳನ್ನು ಅಲ್ಲಿಟ್ಟು ಬ್ರಹ್ಮಶಿವನು, "ಬೊಮ್ಮರಸರು ಹೇಳಿದ್ದದ್ದು ಇಂತಹ ದೊಣ್ಣೆ ಮತ್ತು ಸಮವಸ್ತ್ರಗಳನ್ನೇ. ಹುಡುಕಾಡದೆ ಅವು ನಮಗೆ ಸಿಕ್ಕಿದವು," ಎಂದನು.

"ಇವು ದೊಣ್ಣೆಗಳಲ್ಲ, ಬ್ರಹ್ಮಶಿವ ಪಂಡಿತರೆ. ಜಮದಂಡಿ ಎಂದು ಮಾಚಿ ದೇವರು ಹೇಳಿದ್ದು ಕೇಳಲಿಲ್ಲವೇ?" ಎಂದನು ನಗುತ್ತ ಅಗ್ಗಳ.

"ಜಮದಂಡಿ ಎಂದರೆ?"

"ಯಮದಂಡ. ರಾತ್ರಿ ಕಾಲದಲ್ಲಿ ದೀವಟಿಗೆಯವರು ಅಂಗರಕ್ಷಕ ಭಟರಂತೆ ಪ್ರಭುಗಳ ಸನಿಹದಲ್ಲಿ ಇರಬೇಕಾಗುತ್ತದೆ. ಕಾರಣ ಅವರಲ್ಲಿ ನಂಬಿಕಸ್ಥರಾದವರಿಗೆ ಪ್ರಭುರಕ್ಷಣೆಗಾಗಿ ಈ ರಹಸ್ಯ ಆಯುಧಗಳನ್ನು ಕೊಡುತ್ತಾರೆ."

–ಎಂದು ಹೇಳಿ ಅಗ್ಗಳನು ದಂಡಗಳ ಹಿಡಿಗಳನ್ನು ಕಳಚಿ ಒಳಗೆ ಅಡಕವಾಗಿ ಜೋಡಿಸಿಟ್ಟಿದ್ದ ಸುರಗಿಗಳನ್ನು ತೆಗೆದು ತೋರಿಸಿದನು.

ಬ್ರಹ್ಮಶಿವ ಬೆಬ್ಬೆರಗಾಗಿ, "ಬೊಮ್ಮರಸರು ಹೇಳಿದ್ದು ಇಂತಹ ಮಾರಕ ಶಸ್ತ್ರಗಳನ್ನಲ್ಲ," ಎಂದನು.

"ನರನೊಂದ ಕೇಳಿದರೆ ಹರನೊಂದ ಕೊಟ್ಟಂತಾಯಿತು. ಈ ವಿಚಾರದಲ್ಲಿ ನಾವು ನಿರುಪಾಯರು, ಪಂಡಿತರೆ. ನೀವು ಇದನ್ನು ಬಹಳ ಎಚ್ಚರದಿಂದ ತೆಗೆದುಕೊಂಡು ಹೋಗಬೇಕು. ಮಹಾದ್ವಾರದಲ್ಲಿ ಕಾವಲುಗಾರರು ಕಂಡರೆ ಪ್ರಾಣಕ್ಕೆ ಸಂಚಕಾರ,"

ಎಂದು ಅಗ್ಗಳ ಎಚ್ಚರಿಸಿದನು.

"ಅದಕ್ಕೊಂದು ಉಪಾಯವಿದೆ?" –ಬ್ರಹ್ಮಶಿವ ಭರವಸೆಯಿಂದ ಹೇಳಿದನು.

"ನಿಮ್ಮ ಉಪಾಯವೇನು?"

ಶುಚಿರ್ಭೂತವಾಗಿ ಮಡಿಯುಟ್ಟು ಪತ್ರೆ ತರುತ್ತಿರುವೆನೆಂಬುದನ್ನು ಡಂಗುರ ಹೊಯ್ದು ಹೇಳುವಂತೆ ದೊಣ್ಣೆಗಳಿಗೆ ಕಾವಿ ಅರಿವೆಯ ಪತಾಕೆಗಳನ್ನು ಕಟ್ಟಿಬಿಡುತ್ತೇನೆ. ಆಗ ಒಬ್ಬರೂ ಹತ್ತಿರ ಬರುವುದಿಲ್ಲ. ಅಲ್ಲದೆ ಮಹಾದ್ವಾರದಲ್ಲಿ ಈ ದಿನ ಕಾವಲಿರುವ ಭಟರ ನಾಯಕ ಗುರುಗಳ ಖಾಸಾಶಿಷ್ಯ."

ಕೊಂಚ ಹೊತ್ತಿನ ಮೇಲೆ ಬ್ರಹ್ಮಶಿವ ಪಂಡಿತ, ಸಮವಸ್ತ್ರಗಳ ಗಂಟನ್ನು ಜೋಳಿಗೆಯಲ್ಲಿಟ್ಟು ಮೇಲೆ ಬಿಲ್ವಪತ್ರೆಗಳನ್ನು ಮುಚ್ಚಿ ಕಾವಿಯ ಪತಾಕೆಗಳನ್ನು ಕಟ್ಟಿದ ಜಮದಂಡಿಗಳನ್ನು ಕೈಯಲ್ಲಿ ಹಿಡಿದು ರಾಜಗೃಹಕ್ಕೆ ಹಿಂದಿರುಗಿದನು.

ಆ ದಿನ ಅಪರಾಹ್ನ ರಾಜಗೃಹದ ಮನೆಹೆಗ್ಗಡೆ, ಚಾವಡಿಯಲ್ಲಿ ಕುಳಿತು ಆ ರಾತ್ರಿ ಕರ್ಣದೇವರಸರ ಸಂಗಡ ಧರ್ಮಾಧಿಕರಣದ ಸಮುಖ ಚಾವಡಿಗೆ ಹೋಗುವ ಭಟರು, ಪಸಾಯಿತರು, ಬೋಯಿಗಳೂ ಮತ್ತು ದೀವಟಿಗೆಯವರ ಪಟ್ಟಿ ಮಾಡುತ್ತ ಕುಳಿತಿದ್ದಾಗ, ಭಟನೊಬ್ಬನು ಓಡಿ ಬಂದು "ಪ್ರಭುಗಳು ಅಸ್ವಸ್ಥರಾಗಿದ್ದಾರೆ," ಎಂದು ಹೇಳಿದನು.

ಹೆಗ್ಗಡೆ ಓಡಿಹೋಗಿ ನೋಡಿದಾಗ ಜಗದೇಕಮಲ್ಲನು ಪ್ರಜ್ಞಾಶೂನ್ಯನಾಗಿ ಪರ್ಯಂಕದ ಮೇಲೆ ಬಿದ್ದಿದ್ದನು. ಬಾಯಿಂದ ಜೊಲ್ಲು ಸುರಿದು ನೊರೆ ಕಟ್ಟಿತ್ತು. ಹೆಗ್ಗಡೆ ಅಲ್ಲಿಯೇ ಇದ್ದ ಔಷಧಿ ಕುಡಿಸಿ, ಮೈಮೇಲೆ ಶಾಲುಹೊದಿಸಿ, ಪ್ರಭುಗಳಿಗೆ ಎಚ್ಚರವಾದ ಕೂಡಲೇ ತಿಳಿಸುವಂತೆ ಭಟನಿಗೆ ಹೇಳಿ ಪುನಃ ಚಾವಡಿಗೆ ಹೋದನು.

ಪ್ರಹರಾನಂತರ ಭಟನು ಬಂದು, ಪ್ರಭುಗಳಿಗೆ ಎಚ್ಚರವಾದುದನ್ನು ತಿಳಿಸಿದಾಗ ಹೆಗ್ಗಡೆ ಕೆಲಸಗಳನ್ನು ಮುಗಿಸಿ ಕುಳಿತಿದ್ದನು.

ಹೆಗ್ಗಡೆಯನ್ನು ಕಂಡ ಕೂಡಲೆ ಜಗದೇಕಮಲ್ಲನು ಬಳಲಿದ ದನಿಯಿಂದ, "ಗುರುದೇವರಿಗೆ ಹೇಳಿ ಕಳುಹಿಸು," ಎಂದನು.

ಬೊಮ್ಮರಸನು ಬಂದಾಗ ಹೆಗ್ಗಡೆಯ ಶುಶ್ರೂಷೆಯಿಂದ ಚೇತರಿಸಿಕೊಂಡಿದ್ದ ಜಗದೇಕಮಲ್ಲನು ಮೆಲ್ಲನೆದ್ದು ಗುರುದೇವರ ಪಾದಗಳಿಗೆ ನಮಸ್ಕರಿಸಿದನು.

ಬೊಮ್ಮರಸನು ಆಶೀರ್ವದಿಸಿ, ಗಂಭೀರ ಕಂಠದಿಂದ, "ಪರಿಶಿವನ ಕೃಪೆಯಿಂದ ಪ್ರಭುಗಳ ಸಂಕಷ್ಟಗಳೆಲ್ಲ ಪರಿಹಾರವಾಗುವುವು. ಇನ್ನು ನೀವು ವಿಶ್ರಮಿಸಿಕೊಳ್ಳಿ. ಮುಂಜಾವಿನವರೆಗೆ ಆಹಾರ ತೆಗೆದುಕೊಳ್ಳದಿದ್ದರೆ ಒಳ್ಳೆಯದು. ಈ ರೋಗಕ್ಕೆ ಲಂಘನಂ ಪರಮೌಷಧಂ," ಎಂದನು.

ಜಗದೇಕಮಲ್ಲನು ಪುನಃ ಪರ್ಯಂಕದ ಮೇಲೆ ಮಲಗಿ ಹೆಗ್ಗಡೆಯನ್ನು ಹತ್ತಿರ ಕರೆದು, "ಆಯಾಸವಾಗುತ್ತಿದೆ. ಮಲಗಿ ನಿದ್ದೆ ಮಾಡುತ್ತೇನೆ. ಗುರುದೇವರು ಹೇಳಿದಂತೆ ಮಂಜಾವಿನವರೆಗೆ ನನಗೆ ಆಹಾರ ಬೇಕಿಲ್ಲ. ಪುನಃ ಪುನಃ ಒಳಗೆ ಬಂದು ತೊಂದರೆ ಮಾಡದಂತೆ ಸಮುಖದ ಭಟರಿಗೆ ಹೇಳಿರಿ," ಎಂದನು.

"ಪ್ರಭುಚಿತ್ತ," ಎಂದು ಹೆಗ್ಗಡೆ ಮುಂಜಾವಿನವರೆಗೆ ಭಟರಾರೂ ಅರಮನೆಯ ಆ ಭಾಗದಲ್ಲಿ ಸುಳಿಯಲಾಗದೆಂದು ಕಟ್ಟಪ್ಪಣೆ ಮಾಡಿದನು.

ತುಸು ಹೊತ್ತಿನ ಮೇಲೆ ಹೆಗ್ಗಡೆಯೂ, ಬ್ರಹ್ಮೇಂದ್ರ ಶಿವಯೋಗಿಯೂ ಅಲ್ಲಿಂದ ಹೊರಗೆ ಹೋದರು.

ಕೈಯಲ್ಲಿದ್ದ ಜಮದಂಡಿಯನ್ನು ಶಿವಯೋಗಿ ಅಲ್ಲಿಯೇ ಮರೆತನು. ದೀವಟಿಗೆ ಯವನ ಸಮವಸ್ತ್ರದ ಗಂಟು, ಬ್ರಹ್ಮಶಿವನ ಚತುರತೆಯಿಂದ ಆಗಲೇ ಅಲ್ಲಿ ಭದ್ರಗೊಳಿಸಲ್ಪಟ್ಟಿತ್ತು.

ಆ ದಿನ ರಾತ್ರಿ ಮೊದಲ ಜಾಮದಲ್ಲಿ ಕರ್ಣದೇವನು ಮೇನೆ ಹತ್ತಿ ಸಮುಖದ ಚಾವಡಿಗೆ ಹೋದಾಗ ಸಂಗಡಿದ್ದ ದೀವಟಿಗೆಯವರಲ್ಲಿ ಇಬ್ಬರು ವೇಷಧಾರಿ ಸಂಚುಗಾರರೆಂಬುದು ಯಾರಿಗೂ ತಿಳಿಯದು.

* * *

ಬಿಜ್ಜಳನು ಕರೆದಿದ್ದ ಸಾಮಂತ ಪ್ರತಿನಿಧಿಗಳ ರಹಸ್ಯ ಸಭೆ ಆ ರಾತ್ರಿ ಧರ್ಮಾಧಿಕರಣದ ಸಮುಖದ ಚಾವಡಿಯಲ್ಲಿ ನಡೆಯಬೇಕಾಗಿತ್ತು. ಆದರೆ ಆಹ್ವಾನಗಳು ಸಕಾಲದಲ್ಲಿ, ತಲುಪದೆ, ಪ್ರವಾಸಕ್ಕೆ ಸಾಕಾದಷ್ಟು ಅವಕಾಶವಿಲ್ಲದೆ, ಅಂತರಂಗದಲ್ಲಿ ಬಿಜ್ಜಳನ ಬಗೆಗೆ ವಿರೋಧದಿಂದ, ಬಹು ಮಂದಿ ಪ್ರತಿನಿಧಿಗಳು ಸಭೆಗೆ ಬರಲಿಲ್ಲ. ಬಿಜ್ಜಳನು ಉದ್ದೇಶಿಸಿದ್ದಂತೆ ರಾಜ್ಯಮಟ್ಟದಲ್ಲಿ ನಡೆಯಬೇಕಾಗಿದ್ದ ಸಭೆ, ಆಗ ಕಲ್ಯಾಣದಲ್ಲಿದ್ದ ಮಂತ್ರಿ ಸಾಮಂತ ಸೈನ್ಯಾಧಿಕಾರಿಗಳ ಸಮಾಲೋಚನಾ ಸಭೆಯಾಗಿ ಪರಿಣಮಿಸಿತು. ಕರ್ಣದೇವ ನಾರಣಕ್ರಮಿತ ಮಾಧವ ನಾಯಕರು ಚರ್ಚೆ ನಿರ್ಧಾರಗಳಲ್ಲಿ ಪ್ರಮುಖ ಪಾತ್ರ ವಹಿಸಿದರು.

ಪ್ರಾರಂಭದಲ್ಲಿ ಬಿಜ್ಜಳನು ಸಭೆಯ ಉದ್ದೇಶವನ್ನು ಸಂಗ್ರಹವಾಗಿ ವಿವರಿಸಿ,

"ಈಗ ಶರಣರು ನಡೆಸುತ್ತಿರುವ ಧರ್ಮಕ್ರಾಂತಿಯ ಚಳುವಳಿ ರಾಜ್ಯವನ್ನು ಇಭ್ಭಾಗವಾಗಿ ಮಾಡಿದೆ. ಪರಂಪರಾಗತವಾದ ವರ್ಣಾಶ್ರಮ ಧರ್ಮವನ್ನು ಅನುಮೋದಿಸುವ ಪ್ರಜೆಗಳು ಮತ್ತು ಸಾಮಂತರು ಒಂದು ಕಡೆ, ವರ್ಣಾಶ್ರಮ ಜಾತಿ ಪಂಥಗಳನ್ನು ವಿರೋಧಿಸುವ ಶರಣಧರ್ಮ ಇನ್ನೊಂದು ಕಡೆ. ವಿಶೇಷವೆಂದರೆ ರಾಜ್ಯದ ಶೈವಮತಗಳು ಸಮಾಜದಲ್ಲಿ ತಮ್ಮ ಹೊಣೆಯನ್ನು ಮರೆತು ಶರಣಧರ್ಮಕ್ಕೆ

ಪ್ರೋತ್ಸಾಹ ಕೊಡುತ್ತಿರುವುದು. ಕೆಲವು ಮಂದಿ ಸಾಮಂತರೂ ಈ ಅಪಾಮಾರ್ಗ ಹಿಡಿದಿದ್ದಾರೆ. ಈ ವಿಷಮ ಪರಿಸ್ಥಿತಿಯಲ್ಲಿ ರಾಜನ ಕರ್ತವ್ಯವೇನು ಎಂಬುದನ್ನು ಈಗ ನಾವು ನಿರ್ಧರಿಸಬೇಕಾಗಿದೆ. ವರ್ಣಾಶ್ರಮ ಧರ್ಮಗಳ ರಕ್ಷಣೆ ರಾಜನ ಕರ್ತವ್ಯ, ನಮ್ಮ ಸಂಸ್ಕೃತಿ ಧರ್ಮಶಾಸ್ತ್ರ ಇತಿಹಾಸಗಳು ಈ ಸತ್ಯವನ್ನು ಘಂಟಾಘೋಷವಾಗಿ ಹೇಳುತ್ತವೆ. ಶರಣರ ಆಕ್ರಮಣದಿಂದ ವರ್ಣಾಶ್ರಮ ಧರ್ಮವನ್ನು ರಕ್ಷಿಸುವುದು ಈಗ ರಾಜನ ಕರ್ತವ್ಯ, ಇದಕ್ಕಾಗಿ ನಾವು ಕೈಗೊಳ್ಳಬೇಕಾದ ಕಾರ್ಯವಿಧಾನವನ್ನು ನಮ್ಮ ಹಿರಿಯ ಸಾಮಂತರೂ, ಮಹಾದಂಡನಾಯಕರೂ ಆದ ಮಾಧವ ನಾಯಕರು ನಿಮಗೆ ತಿಳಿಸುತ್ತಾರೆ," ಎಂದು ಮುಗಿಸಿದನು.

ಮಾಧವ ನಾಯಕನು ಶರಣಧರ್ಮದ ವಿರೋಧಿಯೆಂದು ಹೆಸರಾಗಿದ್ದನು. ದೀರ್ಘಕಾಲದಿಂದ ನಡೆದು ಬಂದಿದ್ದ ಅವನ ದ್ವೇಷಭಾವನೆಯ ವಿಷಲತೆ, ಅನುಕೂಲವಾದ ಸಮಯ ಸನ್ನಿವೇಶಗಳೂ ದೊರೆತು, ಕೆಲವೇ ದಿನಗಳಲ್ಲಿ ದೊಡ್ಡದಾಗಿ ಬೆಳೆದು ಉಗ್ರರೂಪ ತಾಳಿತ್ತು. ಬಿಜ್ಜಳನ ಅನುಮತಿ ಪಡೆದು, ಸಭೆಯಲ್ಲಿದ್ದವರಿಗೆ ವಂದಿಸಿ ಅವನು ಹೇಳಿದನು :

"ಬಿಜ್ಜಳರಾಯರ ಆಶ್ರಯದಲ್ಲಿ ಕಸಪಯಾದಿ ದುರ್ಮಂತ್ರಿಗಳು ಪ್ರಾರಂಭಿಸಿದ ಧರ್ಮಕ್ರಾಂತಿಯ ಚಳುವಳಿಯೇ ಈಗ ನಾವು ಎದುರಿಸಬೇಕಾಗಿರುವ ವಿಷಮ ಪರಿಸ್ಥಿತಿಯ ಕಾರಣ. ಈ ಆತಂಕ ಪರಿಹಾರವಾಗಿ ದೇಶಾದ್ಯಂತ ಸುಖಶಾಂತಿಗಳು ನೆಲೆಸಲು ನಾವು ಏನು ಮಾಡಬೇಕೆಂಬುದನ್ನು ನಾನು ದೀರ್ಘವಾಗಿ ಆಲೋಚಿಸಿದ್ದೇನೆ, ಜನತೆಯಲ್ಲಿ ಧರ್ಮಕ್ರಾಂತಿಯನ್ನು ಹರಡುತ್ತಿರುವ ಶರಣಧರ್ಮದ ಮೂಲೋತ್ಪಾಟನೆಯೇ ಆ ಪರಿಹಾರ ಮಾರ್ಗ. ಶರಣಧರ್ಮಕ್ಕೆ ಪ್ರೋತ್ಸಾಹ ಕೊಡುತ್ತಿರುವ ಎಲ್ಲ ಶೈವಮಠಗಳನ್ನೂ ನಾವು ನಾಶಮಾಡಬೇಕು. ಬೇರನ್ನು ಕಿತ್ತು ಹಾಕಿದರೆ ಗಿಡ ತಾನಾಗಿ ಒಣಗುವುದು. ದೇಶದ ಎಲ್ಲ ಕಡೆ, ಏಕಕಾಲದಲ್ಲಿ ಈ ವಿಧ್ವಂಸ ಕಾರ್ಯ ನಡೆಯಬೇಕು. ಅದರ ಪೂರ್ವಸಿದ್ಧತೆ ಮುಗಿಯಲು ಕೆಲವು ವಾರಗಳಾದರೂ ಬೇಕಾಗುವುದು. ಆದರೆ ರಾಜಧಾನಿ ಕಲ್ಯಾಣದ ಪರಿಸ್ಥಿತಿ, ಹೀಗೆಯೇ ಬಿಟ್ಟರೆ ಇನ್ನೂ ಕೆಡುವ ಸಂಭವವಿರುವುದರಿಂದ, ನಾವು ಕೂಡಲೇ ಕಾರ್ಯಗತ ಮಾಡಬಹುದಾದ ಅವಸರದ ಯೋಜನೆಯೊಂದನ್ನು ರಚಿಸಿದ್ದೇನೆ."

ಇಷ್ಟು ಹೇಳಿ ಮಾಧವ ನಾಯಕನು ಪ್ರತಿಕ್ರಿಯೆಗಾಗಿ ಸಭಾಸದರ ಕಡೆಗೆ ತಿರುಗಿದನು. ಎಲ್ಲರೂ ಮೌನವಾಗಿ ಕೇಳುತ್ತ ಕುಳಿತಿದ್ದರು. ಅನುಮೋದನೆ ವಿರೋಧಗಳ ಸೂಚನೆ ಯಾರ ಮುಖದಲ್ಲಿಯೂ ಕಾಣಲಿಲ್ಲ.

ದೀವಟಿಗೆಯ ಭಟರಿಬ್ಬರು ಸಭಾಗೃಹಕ್ಕೆ ಬಂದು ದೀಪಗಳಿಗೆ ಎಣ್ಣೆ ಹಾಕಿ,

ಬತ್ತಿಗಳನ್ನು ಸರಿಪಡಿಸಲು ಅವಕಾಶವಿತ್ತು ಬಿಜ್ಜಳನು, "ನಿಮ್ಮ ಅವಸರದ ಕಾರ್ಯ ವಿಧಾನವನ್ನು ಸಭಾಸದರಿಗೆ ವಿವರಿಸಿರಿ, ಮಾಧವ ನಾಯಕರೆ," ಎಂದನು.

ಮಾಧವ ನಾಯಕನು ಮುಂದುವರಿದು ಹೇಳಿದನು : "ಕಲ್ಯಾಣದ ಒಂದೊಂದು ಶೈವಮಠವೂ ಕ್ರಾಂತಿಯ ಕೇಂದ್ರ. ಮಠಪತಿಗಳು, ಕಾರ್ಯಕರ್ತರು, ಜಂಗಮ ಸನ್ಯಾಸಿಗಳು, ಗಣಾಚಾರದ ಭಕ್ತರು, ಇವರೆಲ್ಲ ನಗರದಲ್ಲಿ ಅಶಾಂತಿ ಹರಡಲು ಸಮಯ ಕಾಯುತ್ತಿದ್ದಾರೆ. ಮಹಮನೆಯು ಈ ಕ್ರಾಂತಿಯ ಮಹಾಕೇಂದ್ರ. ಅದರ ಅಂಗವಾದ ಅನುಭವಮಂಟಪದ ವಿಚಾರಗೋಷ್ಠಿ, ಧಾರ್ಮಿಕ ಪ್ರಸಾರದ ಸೋಗಿನಲ್ಲಿ ರಾಜನಿಗೆ ವಿರುದ್ಧವಾದ ಕ್ರಾಂತಿಭಾವನೆಗಳನ್ನು ಹರಡುತ್ತಿದೆ. ತಮ್ಮ ಮೇಲೆ ರಾಜನು ದಬ್ಬಾಳಿಕೆ ನಡೆಸುತ್ತಿರುವನೆಂಬ ಅಪವಾದವನ್ನು ಜನರಲ್ಲಿ ಹರಡಿ ಕಲ್ಯಾಣವನ್ನು ಬಿಟ್ಟು ಹೋಗಲು ಈಗ ಶರಣರು ಹವಣಿಸುತ್ತಿದ್ದಾರೆ. ಈ ವಲಸೆಗೆ ನಾವು ಅವಕಾಶ ಕೊಟ್ಟರೆ, ಕಲ್ಯಾಣದ ಕ್ರಾಂತಿ ರಾಜ್ಯದ ಎಲ್ಲ ಕಡೆ ಹರಡಲು ಅನುವು ಮಾಡಿಕೊಟ್ಟಂತಾಗುವುದು ಶರಣರು ಯಾರೇ ಆಗಲಿ, ನಗರವನ್ನು ಬಿಟ್ಟು ಹೋಗದಂತೆ ಆಜ್ಞೆ ಮಾಡಿ, ಚಳುವಳಿಯಲ್ಲಿ ಮುಖ್ಯಪಾತ್ರ ವಹಿಸಿದ ಎಲ್ಲ ಶೈವಮಠಗಳನ್ನೂ ನಾಶಮಾಡುವುದು ಈಗ ನಾವು ಅನುಸರಿಸಬೇಕಾದ ಅವಸರದ ಕಾರ್ಯಕ್ರಮ. ನೀವು ಅನುಮತಿ ಕೊಡುವುದಾದರೆ ನನ್ನ ಮಹಾಸೈನ್ಯ ಒಂದೇ ದಿನದಲ್ಲಿ ಈ ಕಾರ್ಯ ಮಾಡಬಲ್ಲುದು.

ಸಭೆಯಲ್ಲಿ ಗಂಭೀರ ಮೌನ. ಬಿಜ್ಜಳನ ಹೊರತಾಗಿ ಉಳಿದವರೆಲ್ಲ ಸ್ತಂಭಿತರಾಗಿ ಕುಳಿತಿದ್ದರು. ಮಾಧವ ನಾಯಕನ ದ್ವೇಷಸಾಧನೆ ಇಂತಹ ಉಗ್ರರೂಪ ತಾಳುವುದೆಂಬ ಕಲ್ಪನೆಯೂ ಅವರಿಗಿರಲಿಲ್ಲ. ಸಭಾಸದರ ಪ್ರತಿಕ್ರಿಯೆಗಾಗಿ ಕಾಯುತ್ತ ಬಿಜ್ಜಳನು ಸುಮ್ಮನೆ ಕುಳಿತನು. ಸೂಚನೆಯನ್ನು ಅನುಮೋದಿಸಿ ಕಾರ್ಯಾಚರಣೆಯ ಹೊಣೆಯನ್ನು ಮಾಧವ ನಾಯಕನಿಗೆ ವಹಿಸುವುದು ಅವನ ಉದ್ದೇಶವಾಗಿತ್ತು.

ಅಷ್ಟರಲ್ಲಿ ಕರ್ಣದೇವನು ಎದ್ದು ನಿಂತು, "ಈ ವಿಚಾರದಲ್ಲಿ ನಾನು ಮಾತಾಡಬೇಕಾಗಿದೆ," ಎಂದನು.

ಸಭಾಸದರು ಕುತೂಹಲದಿಂದ ಕರ್ಣದೇವನ ಕಡೆ ತಿರುಗಿದರು. "ಸೂಚನೆಯ ಅನುಮೋದನೆಗೆ ಪ್ರಭುಗಳು ಇವನನ್ನೇಕೆ ಆರಿಸಿದರು?" "ಸೋದರನೆಂಬ ಅಭಿಮಾನದಿಂದಲೇ?" "ವಾಗ್ಮಿಯೂ ಚತುರನೂ ಆದ ನಾರಣಕ್ರಮಿತನೇಕೆ ಸುಮ್ಮನೆ ಕುಳಿತಿದ್ದಾನೆ ?" ಎಂದು ಅವರು ತಮ್ಮ ತಮ್ಮಲ್ಲಿ ಆಡಿಕೊಂಡರು. ಕರ್ಣದೇವನು ಚರ್ಚೆಯಲ್ಲಿ ಭಾಗವಹಿಸುವುದು ಬಿಜ್ಜಳನಿಗೂ ಇಷ್ಟವಿರಲಿಲ್ಲ. ರಾಜಕೀಯದಲ್ಲಿ ಚತುರನಲ್ಲವೆಂಬ ಕಾರಣದಿಂದ, "ಹೇಳುವುದನ್ನು ಬೇಗ ಮುಗಿಸು

ಕರ್ಣದೇವ. ಸಭೆಯಲ್ಲಿ ಇನ್ನೂ ಅನೇಕ ಮುಖ್ಯ ವಿಷಯಗಳನ್ನು ಪರ್ಯಾಲೋಚಿಸಬೇಕಾಗಿದೆ," ಎಂದು ಅವನು ಎಚ್ಚರಿಕೆ ಕೊಟ್ಟನು.

"ಮಾಧವನಾಯಕರ ಸಲಹೆಯನ್ನು ನಾನು ವಿರೋಧಿಸುತ್ತೇನೆ," ಎಂದು ಕರ್ಣದೇವನು ಪ್ರಾರಂಭಿಸಿದಾಗ, ಆ ರಾತ್ರಿ ಎರಡನೆಯ ಸಾರಿ ಸಭಾಸದರು ಸ್ತಂಭಿತರಾದರು.

ಮಾಧವ ನಾಯಕನ ಅವಸರ ಕಾರ್ಯಾಚರಣೆಯ ಸಲಹೆ ಬಿಜ್ಜಳನ ಅನುಮೋದನೆ ಪಡೆದಿತ್ತೆಂದು ಸಭಾಸದರು ತಿಳಿದಿದ್ದರು. ಕೆಲವರ ದೃಷ್ಟಿಯಲ್ಲಿ ಅದು ಬಿಜ್ಜಳನ ಸಲಹೆಯೇ ಆಗಿತ್ತು. ಅಣ್ಣನ ಸಲಹೆಯನ್ನು ತಮ್ಮನು ವಿರೋಧಿಸುವುದೆ? ಎಂದಿನಿಂದ ಈ ಭ್ರಾತೃಕಲಹ ? ಎಂದು ಅವರು ವಿಸ್ಮಿತರಾದರು.

ಈ ಆಶ್ಚರ್ಯ ನಿಮಗ್ನ ವಿರುದ್ಧ ವಾತಾವರಣದಲ್ಲಿ ಕರ್ಣದೇವ, ಮಾತು ಮಾತಿಗೆ ಮುಗ್ಗರಿಸಿ, ಸರಿಯಾದ ಶಬ್ದಗಳನ್ನು ಹುಡುಕುತ್ತಾ, ಸೂಚನೆಯನ್ನು ವಿರೋಧಿಸಲು ಕಾರಣಗಳನ್ನು ವಿವರಿಸಿದನು :

"ಬಸವೇಶ ದಂಡನಾಯಕರು ಮಂತ್ರಿಮಂಡಲದಿಂದ ನಿವೃತ್ತರಾಗಿ ಆರು ವರ್ಷಗಳು ಕಳೆದಿದ್ದರೂ ಈಗಲೂ ಅವರು ರಾಜ್ಯದಲ್ಲಿ ಪ್ರಭಾವಶಾಲಿಯಾದ ವ್ಯಕ್ತಿ. ಅವರು ಆಚರಣೆಗೆ ತಂದ ಧಾರ್ಮಿಕ ಆರ್ಥಿಕ ಸುಧಾರಣೆಗಳನ್ನು ಚಾಲುಕ್ಯ ರಾಜ್ಯದ ಪ್ರಜೆಗಳು ಇಂದಿಗೂ ಕೃತಜ್ಞತೆಯಿಂದ ನೆನೆಸಿಕೊಳ್ಳುತ್ತಾರೆ. ಅಂತಹವರನ್ನು 'ಕಸಪಯಾದಿ ದುರ್ಮಂತ್ರಿಗಳು,' ಎಂದು ಕರೆದು ಮಾಧವ ನಾಯಕರು ಸಭೆಗೆ ಅಪಮಾನ ಮಾಡಿದ್ದಾರೆ. ಬಸವೇಶ ದಂಡನಾಯಕರು ಈಗ ಮಂತ್ರಿಮಂಡಲದಲ್ಲಿದ್ದಿದ್ದರೆ, ಈಗ ನಾವು ಎದುರಿಸಬೇಕಾಗಿರುವ ವಿಷಮ ಪರಿಸ್ಥಿತಿ ಉಂಟಾಗುತ್ತಲೇ ಇರಲಿಲ್ಲ.

"ಮಾಧವ ನಾಯಕರು ಹೇಳುವಂತೆ ಶರಣಧರ್ಮದ ಪ್ರಸಾರ ಈ ಪರಿಸ್ಥಿತಿಯ ಕಾರಣವಲ್ಲ. ನಮ್ಮ ಅವಿವೇಕದ ವರ್ತನೆಯಿಂದ ನಾವೇ ಈ ವಿಪತ್ತನ್ನು ತಂದುಕೊಂಡಿದ್ದೇವೆ. ಮಧುವರಸಾದಿಗಳ ವಿಚಾರಣೆಯಲ್ಲಿ ಧರ್ಮಶಾಸ್ತ್ರ ನಿಬಂಧನೆಗಳ ಅಪಚಾರವಾಗಿದೆಯೆಂಬ ಕೂಗು ಕಲ್ಯಾಣದ ನಾಗರಿಕರಲ್ಲಿ ಬೆಳೆಯುತ್ತಿದ್ದಾಗ ಆಪಾದಿತರಿಗೆ ಮರಣದಂಡನೆ ವಿಧಿಸುವ ಆಜ್ಞೆ ಪ್ರಕಟವಾಯಿತು. ಅಮಾನುಷ ಕ್ರೌರ್ಯ ಪ್ರದರ್ಶನದಿಂದ ಮಾಧವ ನಾಯಕರು ದಂಡಾಜ್ಞೆಯನ್ನು ಕಾರ್ಯಗತ ಮಾಡಿದರು. ಈ ಘಟನೆಗಳಿಂದ ಬೆದರಿದ ಶರಣರು ಕಲ್ಯಾಣವನ್ನೇ ಬಿಡಲು ಯೋಚಿಸಿದ್ದು ಸಹಜವಾಗಿದೆ. ಅವರನ್ನು ತಡೆಯುವುದರಿಂದ ಪರಿಸ್ಥಿತಿ ಇನ್ನಷ್ಟು ಕೆಡುವುದು. ಪ್ರಭುಗಳು ಅದಕ್ಕೆ ಅವಕಾಶ ಕೊಡಲಾಗದೆಂದು ಬೇಡುತ್ತೇನೆ.

"ನಗರದ ಶೈವಮಠಗಳೆಲ್ಲವನ್ನು ನಾಶಮಾಡಬೇಕೆಂಬ ಮಾಧವ ನಾಯಕರ ಸಲಹೆ ನನಗೆ ಆಶ್ಚರ್ಯವನ್ನುಂಟುಮಾಡಿದೆ. ರಾಜ್ಯದಲ್ಲಿ ಎಲ್ಲ ಧರ್ಮಗಳನ್ನು ರಕ್ಷಿಸುವುದು ರಾಜನ ಕರ್ತವ್ಯವೆಂಬುದನ್ನು ಮರೆತು ನಾವು, ಮಾಧವನಾಯಕರ ಸಲಹೆಯಂತೆ ನಡೆದರೆ ಚಾಲುಕ್ಯರಾಜ್ಯದ ವಿನಾಶ ಸಮೀಪಿಸಿದಂತೆಯೇ ಎಂದು ತಿಳಿಯಬಹುದು. ಕಲ್ಯಾಣದ ಶೈವಮಠಗಳು ಚಾಲುಕ್ಯರಾಜ್ಯದಲ್ಲಿ ಅತ್ಯಂತ ಪ್ರಭಾವಶಾಲಿ ಸಂಸ್ಥೆಗಳೆಂದು ಹೆಸರಾಗಿವೆ. ದೇಶದ ಬಹುಸಂಖ್ಯಾತ ಪ್ರಜೆಗಳು, ಸಾಮಂತರು ಈ ಮಠಗಳ ಭಕ್ತರಾಗಿದ್ದಾರೆ. ಈ ಮಠಗಳನ್ನು ನಾಶಮಾಡುವುದರಿಂದ ಅವರೆಲ್ಲ ನಮ್ಮ ಶತ್ರುಗಳಾಗುತ್ತಾರೆ. ಅಂತಃಕಲಹ ಪ್ರಾರಂಭವಾಗುತ್ತದೆ. ಶರಣಧರ್ಮದ ಮೇಲಿನ ವಿದ್ವೇಷದಿಂದ ಮಾಧವನಾಯಕರು ಈ ಅವಿವೇಕದ ಕಾರ್ಯಕ್ರಮವನ್ನು ಸೂಚಿಸಿದ್ದಾರೆ. ಸಭೆ ಅದನ್ನು ನಿರಾಕರಿಸಿ, ರಾಜ್ಯದಲ್ಲಿ ಸುಖ ಶಾಂತಿ ಸಮೃದ್ಧಿಗಳನ್ನು ಸ್ಥಾಪಿಸಲು ಸಹಾಯಕವಾದ ಶಾಂತಿಧರ್ಮಗಳ ಮಾರ್ಗವನ್ನು ಅನುಸರಿಸಬೇಕಾಗಿ ಬೇಡುತ್ತೇನೆ."

ಕರ್ಣದೇವನ ವಾದದಲ್ಲಿ ನೈಪುಣ್ಯ ಚತುರೋಕ್ತಿಗಳಿಲ್ಲದಿದ್ದರೂ ಸರಳತೆ ಸದುದ್ದೇಶಗಳ ಪ್ರಾಸಾದಿಕ ಗುಣದಿಂದ ಅದು ಶ್ರೋತೃಗಳನ್ನು ತನ್ನ ಕಡೆಗೆ ತಿರುಗಿಸಿಕೊಂಡಿತು. ಸಭಾಸದರಲ್ಲಿ ಹೆಚ್ಚು ಮಂದಿ ಮನದಲ್ಲೇ ಅದನ್ನು ಮೆಚ್ಚಿಕೊಂಡರು. ಆದರೆ ಬಿಜ್ಜಳನನ್ನು ವಿರೋಧಿಸುವ ಧೈರ್ಯ ಸಾಹಸಗಳು ಅವರಲ್ಲಿ ಯಾರಿಗೂ ಇರಲಿಲ್ಲ. ಮಾಧವ ನಾಯಕನು ಉತ್ತರ ಕೊಡಲು ಎದ್ದು ನಿಂತಾಗ ಅವರು, ವಧಾಪೀಠಕ್ಕೆ ಕಟ್ಟಿದ ಬಲಿಪಶುಗಳಂತೆ ನಿಶ್ಚೇಷ್ಟವಾಗಿ ಸುಮ್ಮನಿದ್ದರು.

ಮಾಧವ ನಾಯಕನು ಹೇಳಿದನು : "ಎಲ್ಲ ವೃತ್ತಿಗಳಂತೆ ಪ್ರಭುತ್ವ ಅಧಿಕಾರಗಳೂ ಶಿಕ್ಷಣ ಅಭ್ಯಾಸಗಳಿಂದ ಕಲಿಯಬೇಕಾದ ಒಂದು ವಿಶಿಷ್ಟ ವೃತ್ತಿ. ಕಲಿತು ಮಾಡಿದ ಕೆಲಸ ಯಶಸ್ವಿಯಾಗಿ ಫಲ ಕೊಡುವುದು. ಬಸವೇಶ ದಂಡನಾಯಕರು ಧಾರ್ಮಿಕ ವಿಚಾರದಲ್ಲಿ ಅನುಭಾವಿಗಳೂ ಶ್ರೇಷ್ಠರೂ ಆಗಿರಬಹುದು. ಆದರೆ ಅವರು ತಮಗೆ ಪರಿಚಯವಿಲ್ಲದ ರಾಜಿಕಕ್ಷೇತ್ರಕ್ಕೆ ಪ್ರವೇಶಿಸಿ ಅನರ್ಥಕ್ಕೆ ಕಾರಣರಾದರು. ಅವರು ಮಹಾಮಂತ್ರಿಯಾಗಿ ಅನುಸರಿಸಿದ ಕಾರ್ಯವಿಧಾನದಿಂದ ಚಾಲುಕ್ಯರಾಜ್ಯದ ಪ್ರಜೆಗಳಲ್ಲಿ ರಾಜಕೀಯ ಧಾರ್ಮಿಕ ಜಾಗೃತಿ ಎಚ್ಚರಗೊಂಡಿತು. ನಾವು ಈಗ ಎದುರಿಸಬೇಕಾಗಿರುವ ವಿಷಮ ಪರಿಸ್ಥಿತಿಗೆ ಈ ಜಾಗೃತಿಯೇ ಮುಖ್ಯ ಕಾರಣ. ಪ್ರಭುತ್ವವು ಕ್ಷತ್ರಿಯನ ಜನ್ಮಸಿದ್ಧವಾದ ಅಧಿಕಾರ. ಬ್ರಹ್ಮ, ವೈಶ್ಯ, ಶೂದ್ರ ವರ್ಣಗಳವರು ಕ್ಷತ್ರಿಯನ ಅಧೀನರಾಗಿ ಅವನು ಹೇಳಿದಂತೆ ನಡೆದುಕೊಳ್ಳಬೇಕು. ಬಸವೇಶ ದಂಡನಾಥರು ಮಂತ್ರಿಯಾಗಿ ತಮ್ಮ ಆಡಳಿತ ನೀತಿಯಿಂದ ಈ ವರ್ಣ ವ್ಯವಸ್ಥೆಗೆ

ಭಂಗ ತಂದರು. ವರ್ಣಭೇದವನ್ನು ನಿರಾಕರಿಸಿ ಸ್ತ್ರೀ ಶೂದ್ರ ಅಸ್ಪೃಶ್ಯರಿಗೂ ಸಮಾನಾಧಿಕಾರ ಕೊಟ್ಟರು. ಅದರಿಂದಾದ ವಿಷಫಲವನ್ನು ನಾವು ಉಣ್ಣಬೇಕಾಗಿದೆ. ಕರ್ಣದೇವರಸರು ಬಿಜ್ಜಳರಾಯರ ಸಹೋದರರೆಂಬ ಕಾರಣದಿಂದ ನಾನು ಅವರನ್ನು ಗೌರವಿಸುತ್ತೇನೆ. ಆದರೆ ಪ್ರಭುತ್ವ ರಾಜಕೀಯಗಳಲ್ಲಿ ಅವರು ಕೇವಲ ಶಿಶು, ಅಭ್ಯಾಸ ಅನುಭವಗಳಿಲ್ಲದ ಹಸುಗೂಸು. ತಮ್ಮ ಬುದ್ಧಿ ಪರಿಮಿತಿಯನ್ನು ತಿಳಿದುಕೊಳ್ಳಲಾರದೆ ಅವರು, ತಮಗೆ ತಿಳಿಯದ ರಾಜಿಕಕ್ಕೆ ಪ್ರವೇಶಿಸಿ ಅಪಹಾಸ್ಯಕ್ಕೆ ಗುರಿಯಾಗಿದ್ದು ವಿಷಾದಕರ. ಅವರು ನನ್ನ ಸಲಹೆಯ ವಿಚಾರದಲ್ಲಿ ಪ್ರಕಟಿಸಿದ ವಿರೋಧಕ್ಕೆ ಅವರ ಅವಿವೇಕ ಅನನುಭವಗಳು ಕಾರಣವೆಂದು ಉಪೇಕ್ಷಿಸುತ್ತೇನೆ,"

"ಅವಿವೇಕ! ಅನನುಭವ! ವ್ಯಕ್ತಿನಿಂದೆ! ಅಧ್ಯಕ್ಷರು ಇದನ್ನು ಅನುಮೋದಿಸುವರೆ?" ಎಂದು ಕರ್ಣದೇವನು ಚಡಪಡಿಸಿ ಎದ್ದು ನಿಂತನು.

ಬಿಜ್ಜಳನು ಮಾತಾಡಲಿಲ್ಲ. ಕರ್ಣದೇವನಿಗೆ ಕುಳಿತುಕೊಳ್ಳುವಂತೆ ಸನ್ನೆ ಮಾಡಿ, ಮಾಧವ ನಾಯಕನ ಮೇಲೆ ಅನುಮೋದನೆಯ ದೃಷ್ಟಿ ಬೀರಿದನು.

ಮಾಧವ ನಾಯಕನು ಮುಂದುವರಿದು ಹೇಳಿದನು : "ಕರ್ಣದೇವರಸರು ರಸಿಕರು, ವಿಲಾಸಪ್ರಿಯರು. ರಾಜಗೃಹದ ಗಣಿಕಾವಾಸ ಅವರಿಗೆ ಅನುಕೂಲವಾದ ಕಾರ್ಯಕ್ಷೇತ್ರ. ಆ ತಾವರೆ ಕೊಳದಲ್ಲಿ ಗಜರಾಜನಂತೆ ವಿಹರಿಸಲಿ ಅವರು. ನನ್ನ ಅಡ್ಡಿಯಿಲ್ಲ. ದಯಮಾಡಿ ಅವರು ರಾಜಿಕದಿಂದ ವಿರಮಿಸಿದರೆ ನಾವು ಉಳಿದುಕೊಳ್ಳುತ್ತೇವೆ."

ಕರ್ಣದೇವನ ಕಣ್ಣುಗಳು ಕಿಡಿಯುಗುಳಿದವು. ಕ್ರೋಧಾವೇಶದಿಂದ ಸಿಡಿದೆದ್ದು ಅವನು, "ಸಾಮಂತ ಸಭೆಯನ್ನು ಕೊಂಡೆಯರ ಪಡಸಾಲೆಯಾಗಿ ಮಾಡುವುದು ನಿಮ್ಮಿಚ್ಛೆಯಾದರೆ ನನಗೆ ಹೋಗಲು ಅನುಮತಿ ಕೊಡಿರಿ. ಒಂದು ಕ್ಷಣವೂ ನಾನಿಲ್ಲಿರುವುದಿಲ್ಲ," ಎಂದು ಸಭೆಯಿಂದ ಹೊರಗೆ ಹೋದನು. ಅವನನ್ನು ಯಾರೂ ತಡೆಯಲಿಲ್ಲ. ಸಮಾಧಾನ ಪಡಿಸಲು ಪ್ರಯತ್ನಮಾಡಲಿಲ್ಲ.

ಸಭೆಯಲ್ಲಿ ಸ್ತಬ್ಧಮೌನ. ಸಭಾಂಗಣದ ಬಾಗಿಲು ಮೊಗಶಾಲೆಗಳಲ್ಲಿ ಕಾದು ನಿಂತಿದ್ದ ಪರಿವಾರದ ಭಟ ಪಸಾಯಿತ ದೀವಟಿಗೆಯವರಲ್ಲಿ ಸ್ವಲ್ಪ ಗೊಂದಲವಾಯಿತು. ಕರ್ಣದೇವನ ಪರಿವಾರದವರು ತಮ್ಮ ಪ್ರಭುವಿನ ಹಿಂದೆ ಹೋದರು. ಅವರಲ್ಲಿ ದೀವಟಿಗೆಯ ಭಟರಿಬ್ಬರು ಅಲ್ಲಿಯೇ ಉಳಿದು, ಬಿಜ್ಜಳನ ಪರಿವಾರದೊಡನೆ ಸೇರಿಕೊಂಡದ್ದನ್ನು ಯಾರೂ ಗಮನಿಸಲಿಲ್ಲ.

ಸಭೆ ಮುಂದುವರಿದು ಮಾಧವ ನಾಯಕನ ಸಲಹೆ ಅಂಗೀಕರಿಸಲ್ಪಟ್ಟಿತು. ನಾರಣಕ್ರಮಿತನು ಸಲಹೆಯ ಪ್ರಯೋಜನ ಸಮರ್ಪಕತೆಗಳನ್ನು ಕುರಿತು ದೀರ್ಘವಾಗಿ

ಮಾತಾಡಿದನು. ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವ ಹೊಣೆ ಮಾಧವ ನಾಯಕನಿಗೆ ವಹಿಸಲ್ಪಟ್ಟಿತು.

ಸಭೆ ಮುಗಿದು ಬಿಜ್ಜಳನು ಅಂದಣವೇರಿ ಕಲಚೂರ್ಯ ಅರಮನೆಗೆ ಹೊರಟಾಗ ಅವನ ಸುತ್ತ ಇದ್ದ ವಿಪುಲ ಪರಿವಾರದಲ್ಲಿ ಇಬ್ಬರು ಹೊಸ ದೀವಟಿಗೆಯವರಿದ್ದುದನ್ನು ತಿಳಿಯುವ ಅವಕಾಶವಾಗಲಿ, ನಿಪುಣತೆಯಾಗಲಿ, ಹೆಗ್ಗಡೆ ಕಾರ್ಯಕರ್ತರಿಗೆ ಉಳಿದಿರಲಿಲ್ಲ.

ಬಿಜ್ಜಳ ಕರ್ಣದೇವರ ನಡುವೆ ಆ ರಾತ್ರಿ ಪ್ರಕಟ ಸಭೆಯಲ್ಲಿ ನಡೆದ ಘರ್ಷಣೆ ಅವರಿಬ್ಬರ ಪರಿವಾರದ ಹೆಗ್ಗಡೆ ಕಾರ್ಯಕರ್ತರನ್ನು ತಲ್ಲಣಗೊಳಿಸಿತ್ತು.

* * *

ಕಲಚೂರ್ಯ ಅರಮನೆಯನ್ನು ಸೇರಿದೊಡನೆಯೇ ಬಿಜ್ಜಳನು ಸರ್ವಾಧಿಕಾರಿ ಚಾವಡಿಯ ವಿಶ್ರಾಂತಿ ಗೃಹದಲ್ಲಿ ಕುಳಿತು ಕರಣಿಕ ಕಾರ್ಯಕರ್ತರಿಗೆ ಹೇಳಿ ಕಳುಹಿಸಿದನು. ಆರೋಗಣೆಗಾಗಿ ಅಂತಃಪುರಕ್ಕೆ ಹೋಗುವ ಮೊದಲು ಅವಸರದ ರಾಜಕಾರ್ಯವನ್ನು ಮುಗಿಸುವುದು ಅವನ ಉದ್ದೇಶವಾಗಿತ್ತು.

ಪ್ರಭುವಿನ ಆಗಮನಕ್ಕಾಗಿ ಕಾದಿದ್ದ ಕರಣಿಕ ಹೆಗ್ಗಡೆಗಳು ಕಾರ್ಯಕರ್ತರು ಓಡುತ್ತ ಅಲ್ಲಿಗೆ ಬಂದರು. ಸಾಮಂತ ಸಭೆಯಲ್ಲಿ ಅಂಗೀಕರಿಸಲ್ಪಟ್ಟ ನಿರ್ಣಯದ ಪ್ರತಿಯನ್ನು ಕರಣಿಕನಿಗೆ ಕೊಟ್ಟ ಬಿಜ್ಜಳನು, "ಇದರಂತೆ ನಿರೂಪಗಳನ್ನು ಕೂಡಲೇ ಸಿದ್ಧಗೊಳಿಸಿ ನನ್ನ ಹಸ್ತಾಕ್ಷರಕ್ಕಾಗಿ ತರತಕ್ಕದ್ದು," ಎಂದು ಹೇಳಿದನು.

ಕರಣಿಕನು ಹೋದ ಮೇಲೆ ಬಿಜ್ಜಳನು ಕಾರ್ಯಕರ್ತನ ಕಡೆ ತಿರುಗಿ, "ಈ ರಾತ್ರಿಯೇ ಮಂಗಳವೇಡೆಗೆ ಹೊರಡಲು ಅವಸರದ ಭಟರಿಬ್ಬರು ಸಿದ್ಧವಾಗಿರಲಿ. ಇನ್ನೆರಡು ಘಳಿಗೆ ಬಿಟ್ಟು ಬಂದರೆ ಪತ್ರ ಕೊಡುತ್ತೇನೆ. ಅಲ್ಲಿಯವರೆಗೆ ಯಾರನ್ನೂ ಒಳಗೆ ಬಿಡದಂತೆ ಕಾವಲುಗಾರರಿಗೆ ಆಜ್ಞೆಮಾಡು," ಎಂದು ಹೇಳಿಕಳುಹಿಸಿದನು.

ಪಾರ್ಶ್ವದಲ್ಲಿ ಪೀಠದ ಮೇಲೆ ಲೇಖನೋಪಕರಣಗಳು ಅಣಿಯಾಗಿದ್ದವು. ಬಿಜ್ಜಳನು ತನಗೆ ಬೇಕಾದ ಕಡತ ಓಲೆಕಂಠಗಳನ್ನು ತಗೆದುಕೊಂಡು ಕುಮಾರ ಸೋಮೇಶ್ವರನಿಗೆ ಪತ್ರ ಬರೆಯಲು ಕುಳಿತನು.

ಆರಂಭದ ಒಕ್ಕಣೆ ಮುಗಿದ ಮೇಲೆ ಮುಂದೇನು ಬರೆಯುವುದೆಂಬ ಯೋಚನೆಗೆ ಮೊದಲಾಯಿತು. ತಾನು ಮಂಗಳವೇಡೆಯಿಂದ ಕಲ್ಯಾಣಕ್ಕೆ ಬಂದ ಮೇಲಿನ ನಾಲ್ಕು ವಾರಗಳ ಅವಧಿಯಲ್ಲಿ ಎಷ್ಟೆಲ್ಲ ಪ್ರಾಮುಖ್ಯ ಘಟನೆಗಳು ನಡೆದವು ! ಧರ್ಮಾಧಿಕರಣದ ವಧಾಜ್ಞೆ, ಅಪರಾಧಿಗಳನ್ನು ಉಳಿಸಲು ನಡೆದ ಪ್ರಯತ್ನಗಳು, ಅಪರಾಧಿಗಳನ್ನು ಶೂಲಕ್ಕೇರಿಸಿದುದು, ವಲಸೆ ಹೋಗಲು ಶರಣರ

ನಿರ್ಧಾರ ; ಕುಮಾರ ಸೋಮೇಶ್ವರನ ಪತ್ರಲೇಖಕ, ಈ ಎಲ್ಲ ವಿಚಾರಗಳನ್ನು ಈಗಾಗಲೆ ವರದಿ ಮಾಡಿರಬಹುದು. ಆದರೆ ಇಂದು ನಡೆದ ಕರ್ಣದೇವನ ವಿರೋಧ ಪ್ರದರ್ಶನ, ಅದರ ವಿವರಣೆಯನ್ನು ಪತ್ರಲೇಖಕನ ವಿವೇಚನೆಗೆ ಬಿಡದೆ ತಾನೇ ಬರೆಯುವುದುತ್ತಮವೆಂದು ಬಿಜ್ಜಳನು ಭಾವಿಸಿದನು. ಕರ್ಣದೇವನ ವರ್ತನೆಯಿಂದ ಒದಗಬಹುದಾದ ವಿಪತ್ತನ್ನು ವಿವರಿಸಿ ತನ್ನ ಅಧೀನಸ್ಥವಾದ ಸೈನ್ಯದೊಡನೆ ಕೂಡಲೇ ಕಲ್ಯಾಣಕ್ಕೆ ಬರುವಂತೆ ಕುಮಾರ ಸೋಮೇಶ್ವರನಿಗೆ ಬರೆಯುವುದು ಬಿಜ್ಜಳನ ಉದ್ದೇಶವಾಗಿತ್ತು.

ಬಿಜ್ಜಳನ ದೊಡ್ಡ ಸೈನ್ಯ ಆಗ ಕಲ್ಯಾಣದಲ್ಲಿತ್ತು. ಮಾಧವ ನಾಯಕನಂತಹ ದಕ್ಷನಾದ ಅಧಿಕಾರಿ ಅದರ ದಂಡನಾಯಕನಾಗಿದ್ದನು. ಆದರೆ ಆ ಸೈನ್ಯದಲ್ಲಿ ಸುಮಾರು ಅರ್ಧದಷ್ಟು ಅಧಿಕಾರಿಗಳು, ಸೈನ್ಯದಳಗಳು, ಕರ್ಣದೇವನ ಅಭಿಮಾನಿಗಳಾಗಿದ್ದರು. ಕರ್ಣದೇವನ ವಿರೋಧ ಉಲ್ಬಣಿಸಿ ಘರ್ಷಣೆ ನಡೆದರೆ, ಅವರು ಕರ್ಣದೇವನ ಕಡೆ ಸೇರಬಹುದೆಂದು ಬಿಜ್ಜಳನು ಹೆದರಿದನು. ಪಟ್ಟಾಭಿಷಿಕ್ತ ಚಾಲುಕ್ಯ ಅರಸು ಜಗದೇಕಮಲ್ಲ. ಅವನನ್ನು ಕರ್ಣದೇವನ ರಕ್ಷಣೆಯಲ್ಲಿಟ್ಟಿದ್ದು ಅವಿವೇಕವೆಂದು ಬಿಜ್ಜಳನು ಭಾವಿಸಿದನು.

"ರಾಜ್ಯಭಾರ ನಿರೂಪಣೆ"ಯ ಅನಂತರ ತನ್ನನ್ನು ಎದುರಿಸುತ್ತಿರುವ ಈ ವಿಷಮ ಪರಿಸ್ಥಿತಿಯ ಮುಖ್ಯ ಕಾರಣ, ಮಂಗಳವೇಡೆಯ ಅಗ್ನಿದಾಹದಿಂದ ತನ್ನಲ್ಲಾದ ಉದ್ರಿಕ್ತ ಪರವರ್ತನೆಯೇ ಎಂದು ಬಿಜ್ಜಳನು ಅರಿತಿದ್ದನು. ಇತರರು ಉನ್ಮಾದವೆಂದು ಭಾವಿಸಬಹುದಾದ ತನ್ನ ಉದ್ರಿಕ್ತ ಮನಃಪ್ರವೃತ್ತಿಯನ್ನು ತಡೆದಿಟ್ಟು ಸಂಯಮ ವಿವೇಚನೆಗಳಿಂದ ನಡೆಯಲು ಕಳೆದೆರಡು ವಾರಗಳಿಂದ ಅವನು ಮಾಡಿದ ಪ್ರಯತ್ನಗಳೆಲ್ಲ ವಿಫಲವಾಗಿದ್ದವು. ಉರಿಯ ನಡುವೆ, ಉರಿ ಬಣ್ಣದ ಸೀರೆಯುಟ್ಟು, ಉರಿಯೊಡನೆ ಉರಿಯಾಗಿ ಬೆಳಗುವ ಅಗ್ನಿಕನ್ನೆಯಂತೆ ಕಾಮೇಶ್ವರಿ ಎದುರಿಗೆ ನಿಂತು ಉರಿಯುವ ಕೈಗಳಿಂದ ತನ್ನನ್ನು....ಮುಂದೆ.....ಮುಂದೆ–ಯಾವುದೋ ಅಗೋಚರ, ಅವ್ಯಕ್ತ ಮಹಾಪ್ರಪಾತದ ತುತ್ತ ತುದಿಗೆ ತಳ್ಳುತ್ತಿರುವುದಾಗಿ ಬಿಜ್ಜಳನು ತಿಳಿದನು.

ಸುಮಾರು ಒಂದು ವಾರಕ್ಕೆ ಮೊದಲು, ಅರಮನೆಯ ಇದೇ ಭಾಗದಲ್ಲಿ, ಇದೇ ಸ್ಥಳದಲ್ಲಿ, ನಡೆದ ಘಟನೆ ಬಿಜ್ಜಳನಿಗೆ ತಟ್ಟನೆ ನೆನಪಾಯಿತು. ಐಯ್ಯಾವಳೆಯ ಐನೂರ್ವರು ಮಹಾಸಂಘದ ಅಧ್ಯಕ್ಷನೆಂದು ಪರಿಚಯ ಹೇಳಿಕೊಂಡ ಆ ಸನ್ಯಾಸಿ, ಹರಳಯ್ಯ ಮಧುವರಸ ಶೀಲವಂತರ ಬಿಡುಗಡೆಗಾಗಿ ಅವನು ಎದುರಿಗೆ ಸುರಿದ ಸುವರ್ಣರಾಶಿ, ಇವು ಬಿಜ್ಜಳನ ಕಣ್ಣ ಮುಂದೆ ನಿಂತವು. ಸನ್ಯಾಸಿಯ

ಸಲಹೆಯನ್ನು ತಾನು ನಿರಾಕರಿಸಿದ ಕಾರಣ.... ಆ ಅಗ್ನಿಕನ್ಯೆ ಕಾಮೇಶ್ವರಿ....ಹೊನ್ನರಾಶಿಯ ಮೇಲೆ ನಿಂತ ಆ ಜ್ವಲಂತಮೂರ್ತಿ......ಕಿಡಿಯುಗುಳುವ ಅವಳ ಕಣ್ಣುಗಳು ಆಗ ಬಿಜ್ಜಳನನ್ನು ನಿಶ್ಚೇಷ್ಟಿತನನ್ನಾಗಿ ಮಾಡಿದ್ದವು.

ಬಿಜ್ಜಳನ ಚಿಂತನೆ ಪ್ರವಾಹವಾಗಿ ಹರಿದು ಸನ್ಯಾಸಿ ಹೇಳಿದ ಒಂದೊಂದು ನುಡಿಯನ್ನೂ ನೆನಪಿಗೆ ತಂದಿತು. ಐನೂರ್ವರ ಮಹಾಸಂಘ ತನ್ನನ್ನು ನಾಸ್ತಿಕನನ್ನಾಗಿ ಪರಿಗಣಿಸಿದ ಕಾರಣವೇನು? ಭುಜಬಲಚಕ್ರವರ್ತಿ, ನಿಶ್ಯಂಕಮಲ್ಲ, ಶನಿವಾರಸಿದ್ಧಿ, ಈ ಬಿರುದುಗಳಿಗೆ ಅವರು ಮಾಡಿದ ಅರ್ಥ ಉಚಿತವೆ? ಬಿಜ್ಜಳನು ತನ್ನನ್ನು ತಾನೇ ಪ್ರಶ್ನಿಸಿಕೊಂಡನು. ಕಾವೇರಿದ್ದ ಅವನ ಬುದ್ಧಿಜ್ವಾಲೆಯು ಉತ್ತರಕೊಟ್ಟಿತು.

ದೈವಬಲವನ್ನು ನಿರಾಕರಿಸಿ, ತನ್ನ ಪುರುಷ ಪ್ರಯತ್ನದಿಂದ ಎಲ್ಲವನ್ನೂ ಸಾಧಿಸುವ ವಿಶ್ವಾಸವುಳ್ಳವನು, ಸಾಧಿಸಿದವನು, ಭುಜಬಲಚಕ್ರವರ್ತಿ.

ಅಂಕೆಶಂಕೆಯಿಲ್ಲದೆ ಸ್ವೇಚ್ಛೆಯಿಂದ ನಡೆಯುವವನು ನಿಶ್ಯಂಕಮಲ್ಲ. ನನ್ನ ಜೀವನದ ಎಲ್ಲ ಘಟನೆಗಳು ಇದರ ನಿದರ್ಶನ.

ಶನಿಗ್ರಹ ಸಾಧನೆಯಲ್ಲಿ ತೊಡಗಿ ಸಿದ್ಧಿ ಪಡೆದವನು ಶನಿವಾರ ಸಿದ್ಧಿ. ರಾಜ್ಯಾಪಹಾರದ ಸಿದ್ಧಿಗಾಗಿ ತಾನು ಪ್ರಾರಂಭಿಸಿದ ಶನಿದೇವತೆಯ ರಹಸ್ಯ ಪೂಜೆಯ ವಿಚಾರ ಐನೂರ್ವರ ಮಹಾಸಂಘಕ್ಕೆ ತಿಳಿದದ್ದು ಹೇಗೆ? ತನ್ನನ್ನು ನಾಸ್ತಿಕನೆಂದು ಹೇಳಲು ಆ ರಹಸ್ಯಪೂಜೆ ಕಾರಣವಾಗಿರಬಹುದೆ?

ಶನಿಗ್ರಹವನ್ನು ಕುರಿತ ಪುರಾಣಕಥೆ ಬಿಜ್ಜಳನ ಮನೋಭೂಮಿಯಲ್ಲಿ ಸುಳಿಯಿತು. ವಿಶ್ವಕರ್ಮನ ಮಗಳಾದ ಸಂಜ್ಞಾದೇವಿ ಸೂರ್ಯನ ಪತ್ನಿ. ವೈವಸ್ವತ, ಯಮ, ಯಮುನೆ, ಇವರು ಅವಳಿ ಮಕ್ಕಳು. ಮುಂದೆ ಅವಳು ಸೂರ್ಯನ ತೇಜಸ್ಸನ್ನು ಸಹಿಸಲಾರದೆ ತನ್ನಂತೆಯೇ ಒಬ್ಬ ಸ್ತ್ರೀ ವ್ಯಕ್ತಿಯನ್ನು ಕಲ್ಪಿಸಿ, ಅವಳನ್ನು ಸೂರ್ಯನ ಬಳಿಬಿಟ್ಟು, ತಾನು ತಂದೆಯ ಮನೆಗೆ ಹೋದಳು. ಸಂಜ್ಞಾದೇವಿಯ ನೆರಳಿನಂತಿದ್ದ ಆ ಕೃತಕ ಹೆಣ್ಣಿನ ಹೆಸರು ಛಾಯಾದೇವಿ ಎಂದು. ಸೂರ್ಯನಿಂದ ಅವಳಿಗೆ ಸಾವರ್ಣಿ ಮತ್ತು ಶನೈಶ್ಚರ ಎಂಬಿಬ್ಬರು ಮಕ್ಕಳು ಹುಟ್ಟಿದರು. ಛಾಯೆಗೆ ತನ್ನ ಮಕ್ಕಳಲ್ಲಿ ಹೆಚ್ಚು ಮಮತೆಯಿತ್ತು. ಸಂಜ್ಞಾದೇವಿಯ ಮಕ್ಕಳನ್ನು ಅವಳು ಉಪೇಕ್ಷಿಸಿದಳು. ಯಮ ಇದನ್ನು ಸಹಿಸಲಾರದೆ ತಂದೆಗೆ ಹೇಳಿದ. ಧ್ಯಾನದೃಷ್ಟಿಯಿಂದ ಮೋಸ ನಡೆಯಿತೆಂದು ತಿಳಿದ ಸೂರ್ಯ, ಛಾಯೆಯನ್ನೂ ಅವಳ ಮಕ್ಕಳನ್ನೂ ತ್ಯಜಿಸಿದ. ಶನಿ ಕೋಪದಿಂದ ತಂದೆಯ ವಿರೋಧಿಯಾಗಿ ನಿಂತು, ಸೂರ್ಯ

ಲೋಕದಲ್ಲಿ ತಂದೆಗಿಂತ ತಾನು ದೊಡ್ಡವನಾಗಲು ಪ್ರಯತ್ನಿಸಿದ. ಅದಕ್ಕಾಗಿ ಅವನು ತನ್ನ ಸುತ್ತ ಚಲಿಸುವ ಉಪಗ್ರಹಗಳನ್ನು ಸೃಷ್ಟಿಸಿಕೊಂಡ. ಧರ್ಮವಿರುದ್ಧವಾದ ಈ ವರ್ತನೆಯನ್ನು ಇತರ ದೇವತೆಗಳು ಖಂಡಿಸಿದರು. ಶನಿಗೆ ಪಾಪಗ್ರಹವೆಂದು ಹೆಸರಾಯಿತು.

ಇಂತಹ ಪಾಪಗ್ರಹವನ್ನು ದೇವತೆಯೆಂದು ಪೂಜಿಸುವ ಸಂಪ್ರದಾಯ ಜನರಲ್ಲಿ ಅಚರಣೆಗೆ ಬಂದದ್ದು ಹೇಗೆ? ಪಶ್ಚಿಮ ತೀರದ ನೌಕಾ ನಿಲ್ದಾಣಗಳಿಗೆ ಬರುತ್ತಿದ್ದ ಯವನ ವರ್ತಕರಿಂದ ಬಿಜ್ಜಳನು ಶನಿಗ್ರಹದ ವಿಚಾರವಾಗಿ ಇನ್ನೂ ಕೆಲವು ಸ್ವಾರಸ್ಯ ವಿವರಗಳನ್ನು ಕೇಳಿದ್ದನು. ಶನಿಯು ರೋಂ ದೇಶೀಯರ ಅಧಿದೇವತೆ. ಶನಿಯ ಆರಾಧನೆಗಾಗಿ ಅವರು ದೊಡ್ಡ ಮಹೋತ್ಸವ ನಡೆಸುತ್ತಿದ್ದರು. ಆ ಸಂದರ್ಭದಲ್ಲಿ ನೀತಿ ಧರ್ಮಗಳನ್ನು ಬಿಟ್ಟು ಸ್ವೇಚ್ಛೆಯಿಂದ ನಡೆದುಕೊಳ್ಳುವುದು ಅವರ ಪದ್ಧತಿ. ಮುಂದೆ ಆ ರಾಜ್ಯದಲ್ಲಿ ಪ್ರಚಾರಕ್ಕೆ ಬಂದ ಈಸಾಯಿ ಧರ್ಮ, ಶನಿಗ್ರಹವನ್ನು ದೈವ ವಿರೋಧಿ ಸೈತಾನನೆಂದು ಕರೆಯಿತು. ರೋಂ ದೇಶದ ಚಕ್ರವರ್ತಿಗಳಲ್ಲಿ ಕುಖ್ಯಾತರಾದ ಟಿಬೂರಸ್, ಕ್ಯಾಲಿಗುಲ, ನೀರೋ ಮೊದಲಾದವರ ಅತಿಕಾಮಿ ಅಗಮ್ಯಾಗಮನದ ಕಥೆಗಳಂತೆ, ಈಸಾಯಿ ಧರ್ಮದ ವಿನಾಶಕ್ಕಾಗಿ ಅವರು ನಡೆಸಿದ ಅಮಾನುಷ ಹಿಂಸಾಕೃತ್ಯದ ಕಥೆಗಳೂ ಬಿಜ್ಜಳನಿಗೆ ಪರಿಚಿತವಾಗಿದ್ದವು. ಅವುಗಳ ನೆನಪಿನಿಂದ ಅವನ ಮುಖದಲ್ಲಿ ಕುಚೋದ್ಯದ ನಗೆ ಮೂಡಿತು.

ಬಿಜ್ಜಳನು ತನಗೆ ತಾನೆ ಹೇಳಿಕೊಂಡನು : "ಸೂರ್ಯನನ್ನು ಶೈವರು ಭರ್ಗನೆಂದು, ವೈಷ್ಣವರು ನಾರಾಯಣನೆಂದು ಪೂಜೆಮಾಡಿದರೆ ಮಾಡಲಿ. ಶನಿಗ್ರಹವೊಂದೇ ನನ್ನ ಆರಾಧ್ಯ ದೇವತೆ. ಶನಿಯ ಅನುಗ್ರಹದಿಂದ ನನ್ನ ರಾಜ್ಯಾಪಹಾರ ಪೂರ್ಣವಾಗಿದೆ. ಈಗ ನನ್ನನ್ನು ವಿರೋಧಿಸುತ್ತಿರುವವರು ಶರಣರು ಮಾತ್ರ. ಶರಣರನ್ನು ನಾಶಮಾಡಲು ಶರಣಧರ್ಮವನ್ನು ನಿರ್ಮೂಲಗೊಳಿಸಲು, ಈಸಾಯಿ ಧರ್ಮದ ವಿನಾಶಕ್ಕಾಗಿ ರೋಂ ದೇಶದ ಅರಸರು ನಡೆಸಿದ ಹಿಂಸಾಕೃತ್ಯಗಳನ್ನು ನಾನು ಚಾಲುಕ್ಯರಾಜ್ಯದಲ್ಲಿ ನಡೆಸುತ್ತೇನೆ. ಇಂದು ಅದರ ನಾಂದಿ. ಕಲ್ಯಾಣದ ಶೈವಮಠಗಳ ದಹನದಿಂದ ಇಂದಿನ ಕಾಳರಾತ್ರಿ ಬೆಚ್ಚಿ ಎಚ್ಚರಗೊಳ್ಳುವುದು. ನೆಲಹತ್ತಿ ಉರಿದು ದಶದಿಕ್ಕುಗಳು ಆರಕ್ತವಾಗುವುವು. ಶನೈಶ್ಚರನಿಗೆ ಇದು ನನ್ನ ಪೂಜೆ."

ಭಾವಾವೇಶದಿಂದ ಬಿಜ್ಜಳನ ದೇಹ ಕಂಪಿಸಿತು. ಗಂಟಲು ಬಿಗಿದಂತಾಯಿತು. ಅವನು ಪ್ರತಿನಿತ್ಯ ಪಠಿಸುತ್ತಿದ್ದ ಸ್ತೋತ್ರದ ನುಡಿಗಳೂ ನೀರವವಾಗಿ ನುಡಿದವು:

ಸುರಾಸುರಾಃ ಕಿಂಪುರುಷೋರಗೇಂದ್ರಾಃ
ಗಂಧರ್ವ ವಿದ್ಯಾಧರ ಪನ್ನಗಶ್ಚ
ಸೀದಂತಿ ಸರ್ವೇ ವಿಷಮಸ್ಥಿತೇನ
ತಸ್ಮೈನಮಃ ಶ್ರೀ ರವಿನಂದನಾಯ ॥೧॥
ದೇಶಾಶ್ಚ ದುರ್ಗಾಣಿ ತಥಾ ಬಲಾನಿ
ಸೇನಾನಿವೇಶಾಃ ಪುರ ಪತ್ತನಾನಿ
ಸೀದುತಿ ಸರ್ವೇ ವಿಷಮಸ್ಥಿತೇನ
ತಸ್ಮೈ ನಮಃ ಶ್ರೀ ರವಿನಂದನಾಯ ॥೨॥
ಸ್ರಷ್ಟಾ ಸ್ವಯಂಭೂ ಭುವನ ತ್ರಯಸ್ಯ
ಪಾತಾ ಹರಿಃ ಸಂಹರತೇ ಪಿನಾಕಿ
ಏಕಸ್ತ್ರಿಧಾ ಋಗ್ ಯಜು ಸಾಮ ಮೂರ್ತಿಃ
ತಸ್ಮೈ ನಮಃ ಶ್ರೀ ರವಿನಂದನಾಯ ॥೩॥*

ಬಾಗಿಲುಗಳಿಗೆ ಹಾಕಿದ್ದ ಜವನಿಕೆ ಸರಿಸಿದಂತಾಗಿ ಬಿಜ್ಜಳನು ತಿರುಗಿ ನೋಡಿದನು. ಕರಣಿಕನು ನಿರೂಪಗಳನ್ನು ಸಿದ್ಧಪಡಿಸಿ ತಂದಿರಬಹುದೇ ? ಮೊದಲು ಅವುಗಳಿಗೆ ಹಸ್ತಾಕ್ಷರ ಮಾಡಿ ಮಾಧವನಾಯಕನಿಗೆ ಕಳುಹಿಸಬೇಕು. ಆಮೇಲೆ ಸೋಮೇಶ್ವರನ ಪತ್ರ.

ಪುನಃ ಅದೇ ಶಬ್ದ, ಜವನಿಕೆಗಳನ್ನು ಸರಿಸಿದಂತೆ.

ಬಿಜ್ಜಳನು ತಲೆಯೆತ್ತಿ ನೋಡಿದನು. ಅಂತಃಗೃಹದ ತೆರೆ ಸರಿದು, ದೇಹವಿಲ್ಲದ ರುಂಡವೊಂದು, ಕಿಡಿಯುಗುಳುವ ಕಣ್ಣುಗಳಿಂದ ತನ್ನನ್ನೇ ನೋಡುತ್ತಿರುವುದನ್ನು ಕಂಡನು. ಕಂದುಬಣ್ಣದ ಕೇಶ, ಸುರಗಿಯ ಮೊನೆಯಂತೆ ತೀಕ್ಷ್ಣವಾದ ಕಣ್ಣುಗಳು, ಇಲಿ ಹೆಗ್ಗಣಗಳಂತೆ ಮುಂದೆ ಚಾಚಿದ ದೊಡ್ಡ ಮೂಗು.

---

*ದೇವದಾನವರು, ಕಿನ್ನರ ಕಿಂಪುರುಷರು, ಗಂಧರ್ವ ವಿದ್ಯಾಧರರು, ಮುಂತಾದವರೆಲ್ಲ, ಯಾವನ ಕ್ರೂರ ದೃಷ್ಟಿಯಿಂದ ನಾಶವಾಗುವರೋ ಆ ಶನೈಶ್ಚರನಿಗೆ ನನ್ನ ನಮಸ್ಕಾರಗಳು ॥೧॥

ದೇಶದುರ್ಗಗಳು, ಸೈನ್ಯ ಬಲ, ಸೇನಾ ನಿವೇಶನಗಳು, ನಗರ ಪಟ್ಟಣಗಳು, ಯಾವನ ಕ್ರೂರದೃಷ್ಟಿಯಿಂದ ನಾಶವಾಗುವವೋ ಆ ಶನೈಶ್ಚರನಿಗೆ ನನ್ನ ನಮಸ್ಕಾರಗಳು ॥೨॥

ಒಂದೇ ಆದ ವೇದ, ಋಗ್ ಯಜುಃ ಸಾಮ ಎಂದು ಮೂರಾಗಿ ಕಾಣುವಂತೆ ಮೂರು ಲೋಕಗಳನ್ನು ಸೃಷ್ಟಿಸುವ ಬ್ರಹ್ಮನೂ, ಸಲಹುವ ಹರಿಯೂ, ಸಂಹಾರ ಮಾಡುವ ಶಿವನೂ ತಾನೇ ಆದ ಶನೈಶ್ಚರನಿಗೆ ನನ್ನ ನಮಸ್ಕಾರಗಳು ॥೩॥

"ನನ್ನ ಆರಾಧ್ಯ ದೇವತೆ ಶನೈಶ್ಚರನು ನನ್ನನ್ನು ಅನುಗ್ರಹಿಸಲು, ಗಗನದ ತನ್ನ ಉನ್ನತಾಸನವನ್ನು ಬಿಟ್ಟು ಭೂಮಿಗಿಳಿದು ಬಂದನೆ ?" ಎಂದು ಅವನ ಹೃದಯ ತವಕಿಸಿತು.

ಬಿಜ್ಜಳನು ಸುಖಾಸನದಿಂದೆದ್ದು ಮಂತ್ರಮುಗ್ಧನಂತೆ ತೆರೆಯ ಬಳಿಗೆ ಹೋಗಿ ನಿಂತನು.

ಆ ದೇಹಹೀನ ರುಂಡ ಮಂದಹಾಸದಿಂದ ತನ್ನನ್ನು ಸ್ವಾಗತಿಸುತ್ತಿರುವಂತೆ ಅವನು ಭಾವಿಸಿದನು. ಅದರ ತುಟಿಗಳು ತೆರೆದವು. ಕಣ್ಣಗಳು ಚಲಿಸಿದವು. ಹಣೆ ಸುರಗಿತು. ಕಂದು ಬಣ್ಣದ ತಲೆಗೂದಲು ನಿಮಿರಿ ನಿಂತಿತು.

ಬಿಜ್ಜಳನು ಬೆಬ್ಬೆರಗಾಗಿ ನೋಡುತ್ತಿದ್ದಂತೆ ಹರಿತವಾದ ಯಾವುದೋ ಒಂದು ವಸ್ತು ತಟ್ಟನೆ ಹೊಟ್ಟೆಯನ್ನು ಇರಿದಂತಾಗಿ ಬೆಚ್ಚಿ ಚೀರಿಡಲು ಬಾಯ್ದೆರೆದನು.

ಬಾಯಿಂದ ಶಬ್ದಹೊರಗೆ ಬರುವಷ್ಟರಲ್ಲಿ, ಚಾವಡಿಯ ಇನ್ನೊಂದು ಕಡೆಯ ತೆರೆ ಸರಿಸಿಕೊಂಡು ಹಿಂದಿನಿಂದ ಬಿಜ್ಜಳನ ಬಳಿ ಬಂದ ಎರಡನೆಯ ದೀವಟಿಗನು, ಕೈಯಲ್ಲಿ ಹಿಡಿದಿದ್ದ ಜಮದಂಡಿಯನ್ನು ಬಲವಾಗಿ ಬೀಸಿದನು.

ಬಿಜ್ಜಳನ ರುಂಡ, ಮುಂಡದಿಂದ ಬೇರೆಯಾಗಿ ನೆಲಕ್ಕುರುಳಿತು.

ಬಳಿಕ ಆ ಇಬ್ಬರು ದೀವಟಿಗೆಯ ಭಟರು ಚಾವಡಿಯ ಹೊರಗಿನ ಮೊಗಶಾಲೆಗೆ ಹೋಗಿ ನಿಂತು, "ಹರಳಯ್ಯ ಮಧುವಯ್ಯಗಳನ್ನು ನೋಯಿಸಿದ ಪರವಾದಿ ಬಿಜ್ಜಳನನ್ನು ಕೊಂದ ವೀರ ಕುಮಾರರು ನಾವು, ಜಗದೇಕಮಲ್ಲ ಬೊಮ್ಮರಸರು !" ಎಂದು ಬೊಬ್ಬಿಟ್ಟರು.

ಅವರು ಧರಿಸಿದ್ದ ಸಮವಸ್ತ್ರಗಳನ್ನು ನೋಡಿ ಮೊಗಶಾಲೆಯಲ್ಲಿದ್ದ ಭಟರು ತಮ್ಮ ಕಡೆಯ ದೀವಟಿಗೆಯವರೆಂದು ಮೊದಲು ಉಪೇಕ್ಷಿಸಿದರು. ಅವರು ಕೈಯಲ್ಲಿ ಹಿಡಿದಿದ್ದ ರಕ್ತಮಯ ಜಮದಂಡಿಗಳನ್ನು ಕಂಡಾಗ, ಅವರು ಬೊಬ್ಬಿಟ್ಟ ನುಡಿಗಳ ಅರ್ಥ ಸಿಡಿಲೆರಗಿದಂತೆ ಸ್ಫುಟವಾದಾಗ, ಭಟರು ಬೆಚ್ಚಿ ಎಚ್ಚೆತ್ತು ಅವರನ್ನು ಹಿಡಿಯಲು ಮುನ್ನುಗ್ಗಿದ್ದರು.

ಅಷ್ಟರಲ್ಲಿ ಆ ಕೊಲೆಗಡುಕ ದೀವಟಿಗರು ಜಮದಂಡಿಗಳನ್ನು ತಿರುಗಿಸುತ್ತ ಅರಮನೆಯ ಮಹಾದ್ವಾರದ ಕಡೆಗೆ ಓಡಿದರು.

* * *

ಮಾಧವ ನಾಯಕನು ಬಿಜ್ಜಳನ ನಿರೂಪವನ್ನು ಆತುರದಿಂದ ಎದುರು ನೋಡುತ್ತಿದ್ದರು. ಆರಿಸಿದ ಸೈನ್ಯ ದಳಗಳು ಸಜ್ಜಾಗಿ ನಿಂತಿದ್ದವು. ಅಂದು ಮಧ್ಯರಾತ್ರಿ, ಎರಡನೆಯ ಪ್ರಹರ ಮುಗಿದ ಘಂಟೆ ಹೊಡೆಯುತ್ತಲೆ, ಕಲ್ಯಾಣದ ಶೈವಮಠಗಳನ್ನು

ನಾಶಮಾಡುವ ಅವಸರದ ಕಾರ್ಯಾಚರಣೆ ಪ್ರಾರಂಭವಾಗಬೇಕಾಗಿತ್ತು.

ತನ್ನ ಹನ್ನೆರಡು ವರ್ಷಗಳ ಕನಸು ಇಂದು ನಿಜವಾಗುವುದೆಂದು ಮಾಧವ ನಾಯಕನ ಉತ್ಸಾಹ ತುತ್ತ ತುದಿಯನ್ನು ಮುಟ್ಟಿತ್ತು. ನಿರೂಪ ಸಿದ್ಧವಾದ ಕೂಡಲೇ ತನಗೆ ತಂದುಕೊಡಲು ಅವಸರದ ಭಟನೊಬ್ಬನನ್ನು ಅವನು ಕಲಚೂರ್ಯ ಅರಮನೆಗೆ ಕಳುಹಿಸಿದ್ದನು. ಇನ್ನೂ ಅವನೇಕೆ ಬರಲಿಲ್ಲ–ಎಂದು ಅವನು ತವಕಿಸುತ್ತ ನಿಮಿಷಗಳನ್ನೆಣಿಸಲು ಪ್ರಾರಂಭಿಸಿದನು.

ತುಸುಹೊತ್ತಿನ ಮೇಲೆ ಅವಸರದ ಭಟನು ಅಲ್ಲಿಗೆ ಬಂದನು. ಆದರೆ ಅವನು ತಂದದ್ದು ನಿರೂಪವನ್ನಲ್ಲ. ಬಿಜ್ಜಳನು ಮಡಿದ ಸುದ್ದಿಯನ್ನು.

"ಅರಮನೆಯಲ್ಲಿ ಭಾರೀಗೊಂದಲ. ಬಿಜ್ಜಳರಾಯರು ಮಡಿದರೆಂದು ಸುದ್ದಿ ಹರಡಿದೆ," ಎಂದು ಅವನು ಹೇಳಿದನು.

ಕೂಡಲೆ ಮಾಧವ ನಾಯಕನು ಸಜ್ಜಾಗಿದ್ದ ಸೈನ್ಯದಳಗಳೊಡನೆ ಕಲಚೂರ್ಯ ಅರಮನೆಗೆ ಹೊರಟನು.

ಅರಮನೆಯ ಹೆಗ್ಗಡೆ ಮಹಾದ್ವಾರದಲ್ಲಿ ಮಾಧವ ನಾಯಕನಿಗೆ ಎದುರಾಗಿ, "ನಡೆಯಬಾರದ್ದು ನಡೆದು ಹೋಯಿತು, ದಂಡನಾಯಕರೆ !" ಎಂದು ವಿಷಾದದಿಂದ ಹೇಳಿದನು.

"ಹಾಗಾದರೆ ಪ್ರಭುಗಳು ಮುಡುಪಿದರೆಂದು ಜನ ಹೇಳುತ್ತಿರುವುದು ನಿಜವೆ?"

"ಪ್ರಭುಗಳು ಕೊಲೆಯಾದರು." ಹೆಗ್ಗಡೆ ಉತ್ತರ ಕೊಟ್ಟನು, ಗದ್ಗದ ಕಂಠದಿಂದ.

"ಕೊಲೆ !"

"ಅಹುದು ಕೊಲೆ. ದೀವಟಿಗರ ವೇಷಧರಿಸಿ ಅಪರಿಚಿತರಿಬ್ಬರು ಅರಮನೆಗೆ ಬಂದು ಪ್ರಭುಗಳನ್ನು ಕೊಲೆ ಮಾಡಿದರು."

"ಕೊಲೆಗಡುಕರನ್ನು ಹಿಡಿದಿರಾ?"

"ಅವರು ಮಹಾದ್ವಾರದ ಬಳಿ ಬಂದಾಗ ಭಟರು ಸುತ್ತುಗಟ್ಟಿದ್ದರು. ಅವರಲ್ಲೊಬ್ಬನು ತಪ್ಪಿಸಿಕೊಂಡನು. ಇನ್ನೊಬ್ಬನು ಸತ್ತನು. ಭಟರಿಬ್ಬರು ಮಡಿದರು. ನಾಲ್ಕು ಮಂದಿಗೆ ಗಾಯಗಳಾಗಿವೆ," –ಎಂದು ಹೆಗ್ಗಡೆ ಮಹಾದ್ವಾರದ ಒಳಾಂಗಣದ ಬಯಲಲ್ಲಿ ಬಿದ್ದಿದ್ದ ದೇಹಗಳನ್ನು ತೋರಿಸಿದನು. ಸಮೀಪದಲ್ಲಿ ಭಟರಿಬ್ಬರು ಕಾವಲಿದ್ದರು.

"ಈಗ ಪ್ರಭುಗಳ ಮೃತದೇಹವೆಲ್ಲಿದೆ? ನಾನದನ್ನು ನೋಡಬಹುದೆ?"– ಮಾಧವ ನಾಯಕನು ಹೆಗ್ಗಡೆಯನ್ನು ಕೇಳಿದನು.

"ಕೃತ್ಯ ನಡೆದ ಹೊನ್ನಮ್ಮನ ಚಾವಡಿಯ ಬಾಗಿಲುಮುಚ್ಚಿ ಭಟರನ್ನು ಕಾವಲಿಟ್ಟಿದ್ದೇನೆ. ಕರ್ಣದೇವರಸರು ಬರುವವರೆಗೆ ನಾವಾರೂ ಒಳಗೆ ಹೋಗುವಂತಿಲ್ಲ."

"ಕರ್ಣದೇವರಸರು!"

–ಅಚ್ಚರಿಗೊಂಡವನಂತೆ ಮಾಧವ ನಾಯಕನು ಪ್ರಶ್ನಿಸಿದನು.

"ಅಹುದು. ಅವರೇ ಈಗ ಕಲ್ಯಾಣದಲ್ಲಿರುವ ಪ್ರಭುಗಳ ಬಂಧು."

–ಹೆಗ್ಗಡೆ ಉತ್ತರ ಕೊಟ್ಟನು.

ಮಾಧವ ನಾಯಕನು ಕೆಲವು ಕ್ಷಣಗಳು ಯೋಚಿಸುತ್ತಿದ್ದು, "ಹೊನ್ನಮ್ಮನ ಚಾವಡಿಯೆಂದರೆ ಎಲ್ಲಿ? ಅದು ಅರಮನೆಯ ಒಂದು ಭಾಗವೆ?" ಎಂದು ಕೇಳಿದನು.

"ಸರ್ವಾಧಿಕಾರಿ ಚಾವಡಿಗೆ ಅದು ಇನ್ನೊಂದು ಹೆಸರು. ವಾರಕ್ಕೆ ಮೊದಲು ಅಲ್ಲಿ ನಡೆದ ಒಂದು ಘಟನೆಯಿಂದಾಗಿ ಪರಿವಾರದ ಜನ ಈಗ ಆ ಚಾವಡಿಯನ್ನು ಆ ಹೆಸರಿಂದ ಕರೆಯುತ್ತಾರೆ."

ಘಟನೆಯೇನೆಂದು ಮಾಧವ ನಾಯಕನು ಪ್ರಶ್ನಿಸಲಿಲ್ಲ. ನಾರಣ ಕ್ರಮಿತನ ಮುಖಾಂತರ ಅವನಿಗೆ ಆ ವಿಚಾರ ತಿಳಿದಿತ್ತು.

ಈ ಮಾತುಗಳು ನಡೆಯುತ್ತಿದ್ದಂತೆ ಮೇನೆಯೊಂದು ಅಲ್ಲಿಗೆ ಬಂದಿತು. ಕರ್ಣದೇವನು ಕೆಳಗಿಳಿದು, "ಹೆಗ್ಗಡೆಯೆಲ್ಲಿ?" ಎಂದು ಭಟರನ್ನು ಪ್ರಶ್ನಿಸಿದನು.

ಹೆಗ್ಗಡೆ ಕೈಮುಗಿದು ತಲೆಬಾಗಿ ಎದುರಿಗೆ ನಿಂತನು. ಅವನ ಕಣ್ಣುಗಳಿಂದ ನೀರು ಧಾರಾಕಾರವಾಗಿ ಸುರಿಯುತ್ತಿತ್ತು.

ಮಾಧವ ನಾಯಕನ ಪ್ರಶ್ನೆಗಳಿಗೆ ಸಮಾಧಾನದಿಂದ ಉತ್ತರ ಕೊಟ್ಟ ಹೆಗ್ಗಡೆ, ಕರ್ಣದೇವನ ಎದುರಿಗೆ ಮಾತಾಡಲೂ ಅಶಕ್ತನಾದನು. ಅದರ ಕಾರಣವಿಷ್ಟೆ,– ಪ್ರಭುಭೃತ್ಯರ ಆತ್ಮೀಯತೆಯಲ್ಲಿ ಕರ್ಣದೇವನಿಗೆ ಒಂದು ಸ್ಥಾನವಿತ್ತು. ಮಾಧವ ನಾಯಕನು ಅದಕ್ಕೆ ದೂರವಾಗಿದ್ದನು.

ಜಗತ್ತಿನ ದೃಷ್ಟಿಯಿಂದ ಕರ್ಣದೇವ ಚತುರನಲ್ಲದಿದ್ದರೂ ಹೆಗ್ಗಡೆಯ ದುಃಖದ ಕಾರಣವನ್ನು ಸುಲಭವಾಗಿ ಅರ್ಥಮಾಡಿಕೊಂಡರು. ಸಹಾನುಭೂತಿಯಿಂದ ಹೆಗ್ಗಡೆಯ ಬೆನ್ನುತಟ್ಟಿ, "ಅಳಬೇಡಿರಿ, ಹೆಗ್ಗಡೆಗಳೆ. ಅಣ್ಣನವರೆಲ್ಲಿದ್ದಾರೆ ತೋರಿಸಿರಿ," ಎಂದು ಹೇಳಿ ಮಾಧವ ನಾಯಕನ ಕಡೆ ತಿರುಗಿ, "ನೀವೂ ಸಂಗಡ ಬನ್ನಿರಿ, ದಂಡ ನಾಯಕರೆ." ಎಂದನು.

ಹೆಗ್ಗಡೆ ಅವರಿಬ್ಬರನ್ನೂ ಸರ್ವಾಧಿಕಾರಿ ಚಾವಡಿಗೆ ಕರೆದುಕೊಂಡು ಹೋಗಿ

ಮುಚ್ಚಿದ್ದ ಬಾಗಿಲನ್ನು ತೆರೆಸಿದನು. ಅಲ್ಲಿ ಅವರು ಕಂಡ ದೃಶ್ಯ ರೌದ್ರ ಬೀಭತ್ಸಗಳ ವ್ಯಂಗ್ಯ ನಿರೂಪಣದಂತಿತ್ತು. ಕೊನೆಗಾಲದ ಒದ್ದಾಟದಲ್ಲಿ ಕೈಕಾಲುಗಳು ತಿರುವು ಮುರುವಾಗಿದ್ದ ಬಿಜ್ಜಳನ ದೇಹ ಒಂದು ಕಡೆ, ಅದರ ಹತ್ತಿರ ಇನಿಸು ದೂರದಲ್ಲಿ ಕಡಿಯಲ್ಪಟ್ಟಿದ್ದ ತಲೆ ಇನ್ನೊಂದು ಕಡೆ, ಬಿದ್ದಿದ್ದವು. ಕಡಿದ ಕೊರಳ, ಇರಿದ ಹೊಟ್ಟೆಯ ಗಾಯಗಳಿಂದ ರಕ್ತ ಹರಿದು ಹೆಪ್ಪು ಕಟ್ಟಿತ್ತು.

ಹೆಗ್ಗಡೆಗೆ ಧೈರ್ಯ ಹೇಳಿದ ಕರ್ಣದೇವ, ಈ ಘೋರ ದೃಶ್ಯವನ್ನು ಕಂಡಾಗ, "ಅಣ್ಣಾ ! ಅಣ್ಣಾ !" ಎಂದು ಚೀರಿದನು. ಕೆಳಗೆ ಬಿದ್ದಿದ್ದ ತಲೆಯನ್ನೆತ್ತಿ ಹಿಡಿದು, "ಎಂಥ ಘೋರ ಮೃತ್ಯು ನಿನಗಾಗಿ ಕಾದಿತ್ತು !" ಎಂದು ಕೊರಗಿ ನುಡಿದನು.

ಅಷ್ಟರಲ್ಲಿ ಹೆಗ್ಗಡೆ ಅಂತಃಗೃಹದಿಂದ ಪ್ರಶಸ್ತವಾದ ಮಂಚವೊಂದನ್ನು ತರಿಸಿ ಚಾವಡಿಯಲ್ಲಿ ಹಾಕಿಸಿ, ಇಬ್ಬರು ಭಟರ ಸಹಾಯದಿಂದ ಬಿಜ್ಜಳನ ದೇಹವನ್ನು ಅದರ ಮೇಲಿಟ್ಟನು. ಕರ್ಣದೇವ ಕೈಯ್ಯಲ್ಲಿದ್ದ ರುಂಡವನ್ನು ಮುಂಡಕ್ಕೆ ಸೇರಿಸಿ ಕಾಲುಗಳ ಮೇಲೆ ತಲೆಯಿಟ್ಟು ಅಳುವುದಕ್ಕೆ ಪ್ರಾರಂಭಿಸಿದನು.

ಅಣ್ಣನ ಅಕಾಲ ಮರಣಕ್ಕಾಗಿ ಅಳುತ್ತಿದ್ದ ತಮ್ಮನನ್ನುಸಮಾಧಾನಪಡಿಸುವ ಸಾಂತ್ವನದ ಮಾತುಗಳನ್ನಾಡುವ ಅವಕಾಶವಾಗಲಿ, ಅನುಕಂಪವಾಗಲಿ, ಆಗ ಅಲ್ಲಿದ್ದ ಹಿರಿಯ ಅಧಿಕಾರಿಗಳಾದ ಹೆಗ್ಗಡೆ ದಂಡನಾಯಕರಿಗಿರಲಿಲ್ಲ. ಚಾವಡಿಯ ನೆಲದ ಮೇಲಿನ ರಕ್ತದ ಕಲೆಗಳನ್ನು ತೊಳೆಸುವುದರಲ್ಲಿ ಹೆಗ್ಗಡೆ ಕರ್ಣದೇವನನ್ನು ಮರೆತನು. ತನ್ನೊಡನೆ ಬಂದಿದ್ದ ಸೈನ್ಯದಳಗಳ ನಿಯಂತ್ರಣದ ಚಿಂತೆಯಲ್ಲಿ ಮಾಧವ ನಾಯಕನು ಹೊರಗೆ ಹೋದನು. ಅವನು ಮಹಾದ್ವಾರದ ಬಳಿ ಬಂದಾಗ ಅರಮನೆಯ ಕಾವಲು ಭಟರಿಗೂ, ಸೈನ್ಯದಳಗಳ ನಾಯಕರಿಗೂ ವಾಗ್ಯುದ್ಧ ಆರಂಭವಾಗಿತ್ತು. ಕಾವಲು ಭಟರು ಸೈನ್ಯದಳಗಳನ್ನು ಒಳಗೆ ಬಿಡಲು ನಿರಾಕರಿಸಿದ್ದರು. ಸೈನ್ಯದಳದವರು ನುಗ್ಗಿ ಒಳಗೆ ಹೋಗಲು ಪ್ರಯತ್ನಿಸುತ್ತಿದ್ದರು.

ಮಾಧವ ನಾಯಕನು ತನ್ನ ಕಡೆಯವರನ್ನು ಜಂಕಿಸಿ, "ತಾನು ಒಳಗೆ ಹೋಗಿ ಬರುವಷ್ಟರಲ್ಲಿ ಇಷ್ಟೆಲ್ಲ ಗೊಂದಲ ಮಾಡುವುದೆ? ಬಿಜ್ಜಳರಾಯರ ಅವಸಾನದಿಂದ ಅರಮನೆ ಈಗ ಸಾವಿನ ಮನೆಯಾಗಿದೆ. ಅಲ್ಲಿಗೆ ನಿಮ್ಮ ಪ್ರವೇಶವನ್ನು ನಿರಾಕರಿಸಿ ಕಾವಲು ಭಟರು ಸೂಕ್ತವನ್ನೇ ಮಾಡಿದರು. ನೀವು ಮುಂಜಾವಿನವರೆಗೆ ಅರಮನೆಯ ಸುತ್ತ ಕಾವಲಿರತಕ್ಕದ್ದು", ಎಂದು ಆಜ್ಞೆ ಮಾಡಿದನು.

ದಳದ ನಾಯಕನನ್ನು ಕರೆದು ರಹಸ್ಯವಾಗಿ, "ನನ್ನ ಅನುಮತಿ ಪತ್ರವಿಲ್ಲದೆ ಅರಮನೆಗೆ ಯಾರನ್ನೂ ಬಿಡಲಾಗದು. ಸಾವಿನ ಸುದ್ದಿ ನಗರದಲ್ಲಿ ಹರಡಿದರೆ

ಗಲಭೆಯಾಗಬಹುದು. ಶಾಂತಿರಕ್ಷಣೆಗೆ ಅಗತ್ಯವಾದ ಸೈನ್ಯದಳಗಳು ಸಿದ್ಧವಾಗಿರುವಂತೆ ಕಾರ್ಯಕರ್ತನಿಗೆ ಸುದ್ದಿ ಕಳುಹಿಸತಕ್ಕದ್ದು," ಎಂದು ಹೇಳಿದನು.

ನಗರ ಅರಮನೆಗಳ ಸುರಕ್ಷತೆಗೆ ಅಗತ್ಯವಾದ ಈ ನಿಯಂತ್ರಣ ಕಾರ್ಯವನ್ನು ಮುಗಿಸಿದ ಮೇಲೆ ಮಾಧವ ನಾಯಕನು ತನ್ನ ಆಪ್ತ ಕಾರ್ಯದರ್ಶಿಯನ್ನು ಕರೆದು, "ಈ ರಾತ್ರಿಯೇ ಮಂಗಳವೇಡೆಗೆ ಅವಸರದ ಓಲೆ ಕಳುಹಿಸಬೇಕಾಗಿದೆ," ಎಂದನು.

ಕಾರ್ಯದರ್ಶಿ ಹೇಳಿದನು : "ಶಿಬಿರದಲ್ಲಿನ ಅವಸರದ ಭಟರಿಗೆ ಸಿದ್ಧವಾಗಿರುವಂತೆ ಹೇಳಿದ್ದೇನೆ. ಅವರಲ್ಲೊಬ್ಬನನ್ನು ಕಳುಹಿಸಬಹುದು."

ಹಾಗಾದರೆ ಮಂಗಳವೇಡೆಯ ಮಂಡಲೇಶ್ವರ ಕುಮಾರ ಸೋಮೇಶ್ವರ ದೇವರಿಗೆ ಕಳುಹಿಸಲು ಇಂದಿನ ಘಟನೆಗಳ ಸಂಕ್ಷಿಪ್ತ ವರದಿಯೊಂದನ್ನು ರಚಿಸಬೇಕಾಗುವುದು."

"ಆಜ್ಞೆ, ಬಿಜ್ಜಳರಾಯರ ಮರಣದ ಸುದ್ದಿ....."

"ಕೊಲೆಯ ವಿವರಗಳನ್ನು ತಿಳಿಸುವ ಅಗತ್ಯವಿಲ್ಲ. ಬಿಜ್ಜಳರಾಯರು ಚಾವಡಿಯಲ್ಲಿದ್ದಾಗ ಅಪರಿಚಿತರಿಬ್ಬರು ಒಳಗೆ ಬಂದು ಅವರನ್ನು ಇರಿದು ಕೊಂದರು ಎಂದು ಬರೆದರೆ ಸಾಕು."

"ಹಾಗೆಯೇ ಮಾಡುತ್ತೇನೆ."

"ಮತ್ತು ಸೋಮೇಶ್ವರ ದೇವರಿಗೆ ನಾನು ಬರೆದಂತೆ ಒಂದು ಪತ್ರ ಬರೆಯಬೇಕು. ವಿಷಯ ಬಹಳ ರಹಸ್ಯವಾದದ್ದು,"

"ವಿಷಯವೇನೆಂಬುದನ್ನು ತಿಳಿಸಿದರೆ ಪತ್ರ ಬರೆಯುತ್ತೇನೆ."

"ಬಿಜ್ಜಳರಾಯರು ಹತರಾದಾಗ ನಿಮಗೆ ಪತ್ರ ಬರೆಯುತ್ತಿದ್ದರು. ಅರ್ಧ ಮುಗಿದ ಆ ಪತ್ರ ನನ್ನ ಹತ್ತಿರ ಇದೆ. ನೀವು ಕಲ್ಯಾಣಕ್ಕೆ ಬಂದಾಗ ಕೊಡುತ್ತೇನೆ. ತಮ್ಮ ಅನಂತರ ಚಾಲುಕ್ಯರಾಜ್ಯದ ಸರ್ವಾಧಿಕಾರವನ್ನು ನಿಮಗೆ ಕೊಡುವುದು ಬಿಜ್ಜಳ ರಾಯರ ಉದ್ದೇಶವಾಗಿತ್ತು. ಅವರು ಅದನ್ನು ನನಗೆ ತಿಳಿಸಿದ್ದರು. ಅವರ ಪತ್ರದಲ್ಲಿ ಅದರ ಸ್ಪಷ್ಟ ಸೂಚನೆ ಇದೆ. ನಿಮ್ಮ ಪೂಜ್ಯ ಪಿತೃವರ್ಯರು ಉದ್ದೇಶಿಸಿದ್ದಂತೆ ಚಾಲುಕ್ಯರಾಜ್ಯದ ಸರ್ವಾಧಿಕಾರವನ್ನು ವಹಿಸಿಕೊಳ್ಳಲು ಅಗತ್ಯವಾದ ಸೈನ್ಯದೊಡನೆ ನೀವು ಕೂಡಲೇ ಕಲ್ಯಾಣಕ್ಕೆ ಪ್ರಯಾಣ ಮಾಡಬೇಕಾಗಿ ನಮ್ರತೆಯಿಂದ ಸೂಚಿಸುತ್ತೇನೆ,' ಎಂದು ಕುಮಾರ ಸೋಮೇಶ್ವರ ದೇವರಿಗೆ ನಾನು ಬರೆದಂತೆ ಬರೆಯಬೇಕು."

ಆಜ್ಞೆಯಂತೆ ವರದಿಯನ್ನೂ ಪತ್ರವನ್ನೂ ಕೂಡಲೇ ಸಿದ್ಧಗೊಳಿಸುವುದಾಗಿ ಕಾರ್ಯಕರ್ತ ಹೇಳಿದನು. ಅವನ ಸ್ವಾಮಿನಿಷ್ಠೆ ದಕ್ಷತೆಗಳಲ್ಲಿ ಮಾಧವ ನಾಯಕನಿಗೆ ಸಂಪೂರ್ಣ ವಿಶ್ವಾಸವಿದ್ದಿತು.

ಕರ್ಣದೇವನೂ, ಮನೆಹೆಗ್ಗಡೆಯೂ ಬಿಜ್ಜಳನ ದೇಹವನ್ನು ಮಂಚದ ಮೇಲಿಡುತ್ತಿದ್ದಾಗ, ಮಾಧವ ನಾಯಕನ ದೃಷ್ಟಿ ಚಾವಡಿಯಲ್ಲಿನ ಲೇಖನೋಪಕರಣ, ಕಾಗದ ಪತ್ರಗಳ ಕಡೆ ತಿರುಗಿತು. ಅವುಗಳನ್ನು ಸರಿಪಡಿಸುವ ನೆವದಲ್ಲಿ ತಾನು ನಿರೀಕ್ಷಿಸುತ್ತಿದ್ದ ರಾಜನಿರೂಪವನ್ನು ಹುಡುಕಿದನು. ಅದು ಅಲ್ಲಿರಲಿಲ್ಲ. ಕುಮಾರ ಸೋಮೇಶ್ವರನಿಗೆ ಬರೆಯಲು ಪ್ರಾರಂಭಿಸಿ ಅರ್ಧ ಮುಗಿದಿದ್ದ ಪತ್ರ ದೊರಕಿತು. ಮುಂದೆ ಉಪಯುಕ್ತವಾಗುವುದೆಂದು ತಿಳಿದು ರಹಸ್ಯವಾಗಿ ತೆಗೆದಿಟ್ಟುಕೊಂಡನು. ಚಾವಡಿಯಿಂದ ಹೊರಗೆ ಬಂದು ಮಹಾದ್ವಾರದ ಬಳಿ ಪಂಜಿನ ಬೆಳಕಿನಲ್ಲಿ ಪತ್ರವನ್ನು ಓದಿದಾಗ ಅವನ ರಾಜಕೀಯ ಜಾಗ್ರತಿ ಎಚ್ಚೆತ್ತಿತು. ಕುಮಾರ ಸೋಮೇಶ್ವರನಿಗೆ ಆ ರಾತ್ರಿಯೇ ಅವಸರದ ಓಲೆ ಕಳುಹಿಸಲು ನಿರ್ಧರಿಸಿ ಅದರಂತೆ ಮಾಡಿದನು.

ಈ ರಾಜಕೀಯ ಶೋಧನೆ ಸಾಧನೆಗಳಲ್ಲಿ ಮಾಧವ ನಾಯಕನು ನಿರತನಾಗಿದ್ದಾಗ, ಕೊಲೆ ನಡೆದ ಸರ್ವಾಧಿಕಾರಿ ಚಾವಡಿಯಲ್ಲಿ ಅಷ್ಟೇ ಸ್ವಾರಸ್ಯವಾದ ಇನ್ನೊಂದು ಪ್ರಸಂಗ ನಡೆಯಿತು.

ಮಾಧವ ನಾಯಕನು ಹೊರಗೆಹೋದ ಕೊಂಚಹೊತ್ತಿನ ಮೇಲೆ ಕರ್ಣದೇವನು ಹೆಗ್ಗಡೆಯನ್ನು ಕರೆದು, "ಕೊಲೆ ನಡೆದದ್ದು ಹೇಗೆ ?" ಎಂದು ಕೇಳಿದನು.

ಭಟರಿಂದ ಕೇಳಿದುದನ್ನು ಹೆಗ್ಗಡೆ ವಿವರಿಸಿದನು.

"ಹಂತಕರು ಅರಮನೆಗೆ ಹೇಗೆ ಬಂದರೆಂಬುದು ತಿಳಿಯದೆ?"

ಪ್ರಭುಗಳು ಸಾಮಂತರ ಸಭೆಯಿಂದ ಹಿಂದಿರುಗಿದಾಗ ಪರಿವಾರದೊಡನೆ ಒಳಗೆ ಬಂದು ಚಾವಡಿಯಲ್ಲಿ ಅವಿತುಕೊಂಡಿರಬೇಕು. ಪರಿವಾರದ ದೀವಟಿಗರಂತೆಯೇ ಅವರು ಸಮವಸ್ತ್ರಗಳನ್ನು ಧರಿಸಿದ್ದರು."

"ಸಾಮಂತ ಸಭೆಯಿಂದ ಹಿಂದಿರುಗಿದ ಅಣ್ಣನವರು ಆರೋಗಣೆಗಾಗಿ ಅಂತಃಪುರಕ್ಕೆ ಹೋಗದೆ ಚಾವಡಿಯಲ್ಲಿ ಕುಳಿತ ಕಾರಣ?"

"ಮಂಗಳವೇಡೆಯಿಂದ ಬಂದ ಮೇಲೆ ಪ್ರಭುಗಳು ಯಾವಾಗಲೂ ರಾಜಕೀಯದಲ್ಲಿ ಆಸಕ್ತರಾಗಿರುತ್ತಿದ್ದರು. ಸರ್ವಾಧಿಕಾರಿ ಚಾವಡಿಯಲ್ಲೇ ಹೆಚ್ಚು ಹೊತ್ತು ಕಳೆಯುತ್ತಿದ್ದರು."

"ಇಂದು ರಾತ್ರಿ ಚಾವಡಿಯಲ್ಲಿ ಅಣ್ಣನವರೇನು ಮಾಡುತ್ತಿದ್ದರು?"

"ಸಮುಖದ ಕರಣಿಕನನ್ನು ಕೇಳಿದರೆ ತಿಳಿಯುತ್ತದೆ."

ಕರ್ಣದೇವನ ಸಲಹೆಯಂತೆ ಹೆಗ್ಗಡೆ ಕರಣಿಕನನ್ನು ಕರೆಸಿದನು. ಬಿಜ್ಜಳನು

ಕೊಟ್ಟಿದ್ದ ನಿರ್ಣಯಗಳ ಪ್ರತಿಯನ್ನೂ, ಅದರಂತೆ ಸಿದ್ಧವಾಗಿದ್ದ ನಿರೂಪಗಳನ್ನೂ ಕರಣಿಕನು ಕರ್ಣದೇವನಿಗೆ ತೋರಿಸಿದನು. ಅವುಗಳನ್ನು ಓದಿದಾಗ ಕರ್ಣದೇವನ ಹುಬ್ಬುಗಳು ಗಂಟಿಕ್ಕಿದವು, ಹಣೆ ಸುಕ್ಕುಗಟ್ಟಿತು. ತೀವ್ರ ಯಾತನೆಯಿಂದ ಎದೆ ಹಿಂಡಿದಂತಾಯಿತು.

ಕಲ್ಯಾಣದ ಎಲ್ಲ ಶೈವಮಠಗಳನ್ನು ಧ್ವಂಸಮಾಡಿ, ಪ್ರತಿಭಟಿಸುವ ಶರಣರನ್ನು ಕರುಣೆಯಿಲ್ಲದೆ ಕೊಲ್ಲಲು ಮಾಧವ ನಾಯಕನಿಗೆ ಅಧಿಕಾರ ಕೊಡುವ ನಿರೂಪಗಳಾಗಿದ್ದವು ಅವು. ಹಿಂದೆ ಎಂದೆಂದೂ ಚಾಲುಕ್ಯರಾಜ್ಯದಲ್ಲಿ ನಡೆಯದಿದ್ದ ಈ ಮಹಾನ್ ಘೋರ ಹತ್ಯೆ, ಅತ್ಯಾಚಾರ ಅಂದು ಮಧ್ಯರಾತ್ರಿ ಆರಂಭವಾಗಬೇಕಾಗಿತ್ತು. ಇನ್ನೊಂದು ಘಳಿಗೆ ತಡವಾಗಿದ್ದರೆ ನಿರೂಪಗಳಿಗೆ ಹಸ್ತಾಕ್ಷರ ಬಿದ್ದು ಮಾಧವ ನಾಯಕನ ಕೈ ಸೇರುತ್ತಿದ್ದವು. ಅಣ್ಣನಿಗೆ ನಿಜವಾಗಿ ಉನ್ಮಾದ. ಇಲ್ಲವೇ ಇಂತಹ ಆಜ್ಞೆಯನ್ನು ಚಿಂತಿಸುವುದಾಗಲಿ, ಕಾರ್ಯಗತಮಾಡುವುದಾಗಲಿ ಸಾಧ್ಯವೆ!

ಕರ್ಣದೇವ ಕರಣಿಕನ ಕಡೆ ತಿರುಗಿ, “ ಈ ನಿರ್ಣಯ ನಿರೂಪಗಳ ವಿಚಾರ ಸದ್ಯದಲ್ಲಿ ರಹಸ್ಯವಾಗಿರಬೇಕು. ಯಾರಾದರೂ ನಿನ್ನನ್ನು ಕೇಳಿದರೆ, ‘ಪ್ರಭುಗಳು ಸಾಮಂತ ಸಭೆಯಿಂದ ಹಿಂದಿರುಗಿದ ಮೇಲೆ ನನಗೇನು ಹೇಳಲಿಲ್ಲ’ ಎಂದು ಉತ್ತರ ಕೊಡಬೇಕು, ತಿಳಿಯಿತೇ. ತಲೆ ಹೋಗುವ ವಿಚಾರ. ಇವು ಸದ್ಯದಲ್ಲಿ ನನ್ನ ಹತ್ತಿರ ಇರಲಿ,” ಎಂದನು.

“ಒಡೆಯರ ಆಜ್ಞೆ,” ಎಂದು ಕರಣಿಕ ಒಪ್ಪಿಕೊಂಡನು.

ಅವನನ್ನು ಕಳುಹಿಸಿ ಕರ್ಣದೇವ, “ಹತನಾದ ಹಂತಕನ ದೇಹವೆಲ್ಲಿದೆ?” ಎಂದನು.

ಬಳಿಕ ಅವರು ಮಹಾದ್ವಾರದ ಒಳಗಿನ ಬಯಲಲ್ಲಿ ಮಡಿದ ಹಂತಕನ ಮತ್ತು ಕಾವಲುಭಟರ ದೇಹಗಳಿದ್ದ ಸ್ಥಳಕ್ಕೆ ಹೋದರು. ಪಂಜಿನ ಬೆಳಕಿನಲ್ಲಿ ಹಂತಕನ ಮುಖ ನೋಡಿದಾಗ ಕರ್ಣದೇವ ಬೆದರಿದನು. ದೊಡ್ಡಾಟದಲ್ಲಿ ಖಳನಾಯಕನ ಪಾತ್ರದಂತೆ ಮುಖಕ್ಕೆ ಬಳಿದಿದ್ದ ಹಸಿರು, ಕೆಂಪು ಬಣ್ಣಗಳ ಚಿತ್ರಣದಲ್ಲಿಯೂ ಹಂತಕನ ಗುರುತು ಹಿಡಿದನು ಕರ್ಣದೇವ. ಅವನು ತನ್ನ ಪಾನಗೋಷ್ಠಿಯ ಗೆಳೆಯ, ಪಟ್ಟಾಭಿಷಿಕ್ತ ಚಾಲುಕ್ಯ ಅರಸು, ಭಂಡರಾಜ ಜಗದೇಕಮಲ್ಲನೆಂಬುದನ್ನು ತಿಳಿದನು.

ರಾಜಗೃಹದಿಂದ ಅವನು ತಪ್ಪಿಸಿಕೊಂಡದ್ದು ಹೇಗೆ? ದೀವಟಿಗರ ಸಮವಸ್ತ್ರ ಅವನಿಗೆಲ್ಲಿ ಸಿಕ್ಕಿತು ? ಅವನ ಸಂಗಡಿದ್ದ ಇನ್ನೊಬ್ಬ ಹಂತಕನಾರು?

ಕರ್ಣದೇವನ ಮನೋಭೂಮಿಯಲ್ಲಿ ಈ ಪ್ರಶ್ನೆಗಳು ಮಿಂಚಿನ ವೇಗದಿಂದ ಉದಯಿಸಿ ಅಸ್ತವಾದವು. ಮಡಿದ ಹಂತಕನು ಯಾರೆಂಬುದು ಪ್ರಕಟವಾದರೆ ಕೊಲೆಯ ಹೊಣೆ, ನಿರ್ಬಂಧಿತ ಅರಸನ ರಕ್ಷಕನಾಗಿದ್ದ ತನ್ನ ಮೇಲೆ ಬೀಳುವುದೆಂದು ಕರ್ಣದೇವ ತಿಳಿದನು.

ಗುರುತು ಹಚ್ಚಲು ಪ್ರಯತ್ನಿಸುವವನಂತೆ ಕೆಲವು ಕ್ಷಣಗಳು ನೆಟ್ಟ ದೃಷ್ಟಿಯಿಂದ ಹಂತಕನನ್ನು ನೋಡುತ್ತಿದ್ದು ಬಳಿಕ ಕರ್ಣದೇವ, "ನೀವು ಹೇಳಿದ್ದು ಸರಿ, ಹೆಗ್ಗಡೆಗಳೆ. ಯಾರೋ ಅಪರಿಚಿತ ಮನುಷ್ಯ. ನಗರದ ನಿವಾಸಿಯಲ್ಲವೆಂದು ಕಾಣುತ್ತದೆ," ಎಂದನು.

ಅವರು ಪುನಃ ಚಾವಡಿಗೆ ಹಿಂದಿರುಗಿದಾಗ ಮಂಚದ ನಾಲ್ಕು ಕಡೆಗಳಲ್ಲಿ ದೀಪಗಳು ಬೆಳಗುತ್ತಿದ್ದವು. ಮೃತದೇಹದ ಮೇಲೆ ಹೂವುಗಳನ್ನು ಹರಡಿತ್ತು. ಅಂತಃಪುರದ ರಾಣಿಯರು, ಹೆಗ್ಗಡತಿಯರು, ದಾಸಿಯರು ಸುತ್ತ ನಿಂತಿದ್ದರು. ಅಳುವಿನ ದನಿ ಎಲ್ಲೆಡೆ ಕೇಳಿ ಬರುತ್ತಿತ್ತು.

"ನೀವು ಇಲ್ಲಿಯೇ ಇರುವುದು ಅಗತ್ಯ, ಹೆಗ್ಗಡೆಗಳೆ. ಯಾರೂ ದೇಹವನ್ನು ಮುಟ್ಟದಂತೆ ಎಚ್ಚರದಿಂದ ನೋಡಿಕೊಳ್ಳಿರಿ. ನಾನು ಬಿಡಾರಕ್ಕೆ ಹೋಗಿ ಪುನಃ ಮುಂಜಾವಿಗೆ ಬರುತ್ತೇನೆ. ಅಂತ್ಯದರ್ಶನಕ್ಕಾಗಿ ಜಗದೇಕಮಲ್ಲರಸರನ್ನು ಸಂಗಡ ಕರೆದುಕೊಂಡು ಬರಬೇಕಾಗುವುದು," ಎಂದು ಹೆಗ್ಗಡೆಗೆ ಹೇಳಿ ಕರ್ಣದೇವ ಮಹಾದ್ವಾರದ ಒಳಗಣ ಬಯಲಿಗೆ ಬಂದನು.

ತನ್ನೊಡನೆ ಬಂದಿದ್ದ ಬೋಯಿಗಳು, ರಕ್ಷಕ ಭಟರು, ಮೇನೆಯನ್ನು ಅಲ್ಲಿ ಬಿಟ್ಟು ಎಲ್ಲಿಯೋ ಹೋಗಿದ್ದರು. ಮೇನೆಯ ಹಿಂದೆ ನಾಲ್ಕಾರು ಮಾರು ದೂರದಲ್ಲಿ ಹತರಾದ ಹಂತಕ ಮತ್ತು ಕಾವಲು ಭಟರ ದೇಹಗಳು ಬಿದ್ದಿದ್ದವು. ಇಬ್ಬರು ಭಟರು ಅಲ್ಲಿ ಕಾವಲಿದ್ದರು.

ಕರ್ಣದೇವ ಭಟರನ್ನು ಕರೆದು, "ನನ್ನ ಬೋಯಿಗಳು ಭಟರು ಎಲ್ಲಿರುವರೋ ಹುಡುಕಿ ಕರೆದುಕೊಂಡು ಬನ್ನಿರಿ," ಎಂದು ಹೇಳಿದನು.

"ನಾನು ಹೋಗಿ ಹುಡುಕುತ್ತೇನೆ, ಒಡೆಯರೆ. ನನ್ನ ಸಂಗಡಿಗ ಇಲ್ಲಿ ಕಾವಲಿರುತ್ತಾನೆ," ಎಂದು ಭಟನು ಬಿನ್ನವಿಸಿಕೊಂಡನು.

"ಅವರು ಅರಮನೆಯ ಅಂಗಣದಲ್ಲಿರುವರೋ ಹೊರಗೆ ಹೋಗಿರುವರೋ ತಿಳಿಯದು. ನೀವು ಒಬ್ಬೊಬ್ಬರು ಒಂದೊಂದು ಕಡೆ ಹೋಗಿ ಹುಡುಕಿರಿ. ನಾನು ಇಲಿಯೇ ಇರುತ್ತೇನೆ. ಸತ್ತ ದೇಹಗಳು ಎದ್ದು ಓಡಿ ಹೋಗುವುದಿಲ್ಲ," ಎಂದನು ಪುನಃ ಕರ್ಣದೇವ.

ಒಡೆಯರು ಹೇಳುವುದು ನಿಜ. ಸತ್ತವರು ಬದುಕಿದ್ದನ್ನು ನಾವೆಲ್ಲೂ ಕೇಳಿಲ್ಲ." ಎಂದು ಭಟರಲ್ಲೊಬ್ಬನು ಮಹಾದ್ವಾರದಿಂದ ಹೊರಗೆ, ಇನ್ನೊಬ್ಬನು ಅರಮನೆಯ ಕಡೆಗೆ ಹೋದರು.

ಮಹಾದ್ವಾರದ ಹೊರಗೆ ಮಾಧವ ನಾಯಕನ ಸೈನ್ಯದಳಗಳು ಪಹರೆಯಿದ್ದವು. ಅರಮನೆಯ ಕಾವಲುಭಟರು ಅಂತಃಪುರ ಚಾವಡಿಗಳ ಬಳಿ ಇದ್ದರು. ಮಹಾದ್ವಾರದ ಒಳಗಿನ ಬಯಲು ನಿರ್ಜನವಾಗಿತ್ತು. ದೇಹಗಳನ್ನು ನೋಡಲು ಹೆಗ್ಗಡೆಯೊಡನೆ ಬಂದಾಗ ಕರ್ಣದೇವ ಇದನ್ನು ಗಮನಿಸಿದ್ದನು.

ಕಾವಲು ಭಟರು ಕಣ್ಮರೆಯಾಗುತ್ತಲೆ ಕರ್ಣದೇವ ಹೆಣಗಳನ್ನು ಮಲಗಿಸಿದ್ದ ಕಡೆ ಹೋಗಿ, ಜಗದೇಕಮಲ್ಲನ ದೇಹವನ್ನು ತೋಳು ಹಿಡಿದೆತ್ತಿ ಹೆಗಲಮೇಲೆ ಹಾಕಿಕೊಂಡು ಮೇನೆಯಲ್ಲಿ ತಂದು ಮಲಗಿಸಿದನು. ಅವನು ಭಾವಿಸಿದುದಕ್ಕಿಂತ ಬಹು ಬೇಗ ಈ ಕಾರ್ಯ ಮುಗಿಯಿತು.

ನಾಲ್ಕು ಮೃತದೇಹಗಳಲ್ಲಿ ಒಂದು ಕಾಣೆಯಾದದ್ದನ್ನು ಮುಚ್ಚಿಡುವುದು ಹೇಗೆ? ಆ ಸಮಸ್ಯೆ ಉದ್ಭವಿಸಿದಾಗ ಪರಿಹಾರ ಯೋಚಿಸಬಹುದೆಂದು ಕರ್ಣದೇವ ತನ್ನನ್ನು ತಾನೇ ಸಮಾಧಾನ ಮಾಡಿಕೊಂಡನು.

ಬೋಯಿಗಳು ಬಂದ ಕೂಡಲೆ ಕರ್ಣದೇವ ಮೇನೆಯಲ್ಲಿ ಕುಳಿತು ರಾಜಗೃಹಕ್ಕೆ ಹೋಗುವಂತೆ ಆಜ್ಞೆ ಮಾಡಿದನು. ಮೇನೆ ಕರ್ಣದೇವನದೆಂದು ತಿಳಿದಿದ್ದ ಸೈನ್ಯದಳಗಳವರು ಅದನ್ನು ತಡೆಯಲಿಲ್ಲ.

ರಾಜಗೃಹ ಸೇರಿದೊಡನೆಯೆ ಕರ್ಣದೇವ ಮೇನೆಯಿಂದಿಳಿದು ಬೋಯಿಗಳನ್ನು ಕಳುಹಿಸಿ ಮನೆಹೆಗ್ಗಡೆಗೆ ಹೇಳಿ ಕಳುಹಿಸಿದನು. ಸಾವಿನಸುದ್ದಿ ಕೇಳಿ ಹೋದ ಕರ್ಣದೇವ ಮುಂಜಾವಿನವರೆಗೆ ಹಿಂದಿರುಗುವುದಿಲ್ಲವೆಂದು ಭಾವಿಸಿ ನಿದ್ರೆ ಮಾಡುತ್ತಿದ್ದ ಹೆಗ್ಗಡೆ ಕಣ್ಣೊರೆಸಿಕೊಂಡು ಬಂದಾಗ ಕರ್ಣದೇವ ಅವನನ್ನು, "ಭಂಡರಾಜ ಏನು ಮಾಡುತ್ತಿದ್ದಾರೆ?" ಎಂದು ಹೇಳಿದನು.

"ಸಂಜೆಯಿಂದ ಅವರಿಗೆ ಸ್ವಸ್ಥವಿಲ್ಲ, ಮಲಗಿದ್ದಾರೆ," ಎಂದನು ಹೆಗ್ಗಡೆ.

"ನಮ್ಮ ಗಣಿಕಾವಾಸ ಅವರಿಗೆ ಬೇಸರವಾಯಿತಂತೆ. ಸ್ವರ್ಗಲೋಕದ ಅಪ್ಸರೆಯರನ್ನು ಹುಡುಕಿಕೊಂಡು ಹೋಗಿದ್ದಾರೆ," –ಎಂದು ಕರ್ಣದೇವ ಹೇಳಿದಾಗ, ಏನೋ ಅನರ್ಥ ನಡೆದಿದೆಯೆಂದು ಹೆಗ್ಗಡೆ ತಿಳಿದನು.

"ಒಂದು ಸಾರಿ ಒಳಗೆ ಹೋಗಿ ನೋಡಿ ಬರುತ್ತೇನೆ." ಎಂದು ಹೆಗ್ಗಡೆ ಹೊರಟಾಗ ಕರ್ಣದೇವ ಅವನ್ನು ತಡೆದು ರಹಸ್ಯವಾಗಿ, "ಜಗದೇಕಮಲ್ಲರಸರು ಮದ್ಯಪಾನ ಮಾಡಿ ಎಚ್ಚರ ತಪ್ಪಿ ಮೇನೆಯಲ್ಲಿ ಮಲಗಿದ್ದಾರೆ. ಅವರನ್ನು ನಾವು

ವಾಸಗೃಹಕ್ಕೆ ಎತ್ತಿಕೊಂಡು ಹೋಗಿ ಮಲಗಿಸಬೇಕು," ಎಂದು ಹೇಳಿದನು.

ಹೆಗ್ಗಡೆಗೆ ಅರ್ಥವಾಯಿತು. ಭಟರನ್ನು ಕಳುಹಿಸಿ, ಉರಿಯುತ್ತಿದ್ದ ದೀಪಗಳನ್ನು ಆರಿಸಿ, ಬಳಿಕ ಅವರಿಬ್ಬರು ಜಗದೇಕಮಲ್ಲನ ದೇಹವನ್ನು ಅರಮನೆಯ ಹಿಂಭಾಗದಲ್ಲಿದ್ದ ವಾಸಗೃಹಕ್ಕೆ ತೆಗೆದುಕೊಂಡು ಹೋಗಿ ಮಂಚದ ಮೇಲೆ ಮಲಗಿಸಿದರು. ಹೆಗ್ಗಡೆ ಸಂಜೆಗೆ ಮೊದಲೇ ಆಜ್ಞೆಮಾಡಿದ್ದಂತೆ ಅರಮನೆಯ ಆ ಭಾಗದಲ್ಲಿ ಕಾವಲು ಭಟರೊಬ್ಬರೂ ಇರಲಿಲ್ಲ. ಜಗದೇಕಮಲ್ಲನ ಪಸಾಯಿತನು ಹೊರಗಿನ ಬಾಗಿಲುಗಳನ್ನು ಭದ್ರಪಡಿಸಿ ಪಾರ್ಶ್ವದ ಮೊಗಶಾಲೆಯಲ್ಲಿ ಮಲಗಿ ನಿದ್ದೆ ಮಾಡುತ್ತಿದ್ದನು. ಕರ್ಣದೇವ ಮತ್ತು ಹೆಗ್ಗಡೆಯ ಹೊರತಾಗಿ ಆಗ ಯಾರೂ ಅಲ್ಲಿ ಎಚ್ಚರವಾಗಿರಲಿಲ್ಲ.

ಕರ್ಣದೇವ ಹೆಗ್ಗಡೆಗೆ ನಡೆದುದೆಲ್ಲವನ್ನೂ ವಿವರಿಸಿ, "ರಾಜಗೃಹದಿಂದ ಜಗದೇಕಮಲ್ಲ ತಪ್ಪಿಸಿಕೊಂಡು ಹೋದ ವಿಚಾರ ಬಯಲಾದರೆ ಅಣ್ಣನವರ ಕೊಲೆಗೆ ನಾವು ಕಾರಣರೆಂದು ಜನ ತಿಳಿಯುವರು. ನಿನ್ನ ತಲೆ ಉರುಳುವುದು. ಚಾಲುಕ್ಯ ಸರ್ವಾಧಿಕಾರಿಯಾಗುವ ನನ್ನ ಆಸೆ ಮಣ್ಣುಗೂಡುವುದು. ನಾವು ಬಹಳ ಎಚ್ಚರದಿಂದ ನಡೆದುಕೊಳ್ಳಬೇಕು. ಮೃತದೇಹದ ಸಮವಸ್ತ್ರಗಳನ್ನು ತೆಗೆದು, ಎಂದಿನ ಉಡಿಗೆಗಳನ್ನು ಹಾಕಿ ಮಂಚದ ಮೇಲೆ ಮಲಗಿಸಬೇಕು. ಸಹಾಯವಿಲ್ಲದೆ ನೀನೊಬ್ಬನೇ ಈ ಕಾರ್ಯ ಮಾಡಬಲ್ಲೆಯಾ?" ಎಂದು ಕೇಳಿದನು.

"ಮಾಡುತ್ತೇನೆ, ನೀವು ದಯಮಾಡಿ ಅರಮನೆಯ ಈ ಭಾಗಕ್ಕೆ ಭಟರಾರೂ ಬರದಂತೆ ನೋಡಿಕೊಂಡರೆ ಸಾಕು," ಎಂದು ಹೆಗ್ಗಡೆ ಒಪ್ಪಿಕೊಂಡನು.

ಅದರಂತೆ ಮೃತದೇಹದ ಗಾಯಗಳನ್ನು ತೊಳೆದು, ಮುಖಕ್ಕೆ ಹಚ್ಚಿದ್ದ ಬಣ್ಣವನ್ನು ಒರೆಸಿ, ಎಂದಿನ ಉಡುಪುಗಳನ್ನು ಹಾಕಿ ಮಂಚದ ಮೇಲೆ ಮಲಗಿಸಲು ಹೆಗ್ಗಡೆಗೆ ಪ್ರಹರ ಕಾಲ ಹಿಡಿಯಿತು. ಶವಾಗಾರದ ಈ ಕಾರ್ಯವನ್ನು ಮುಗಿಸಿ ಅವನು ಅರಮನೆಯ ಚಾವಡಿಗೆ ಹೋದಾಗ ಕರ್ಣದೇವ ಸುಖಾಸನದಲ್ಲಿ ಕುಳಿತೇ ನಿದ್ದೆ ಮಾಡುತ್ತಿದ್ದನು.

ಹೆಗ್ಗಡೆ ಅವನನ್ನು ಎಚ್ಚರಗೊಳಿಸಿ, "ಎಲ್ಲವನ್ನೂ ಮಾಡಿ ಮುಗಿಸಿದ್ದೇನೆ," ಎಂದನು.

"ಈಗ ನೀನು ಸಮುಖದ ಪಸಾಯಿತನನ್ನು ಕರೆದುಕೊಂಡು ವಾಸಗೃಹಕ್ಕೆ ಹೋಗಿ ನೋಡಿ ಜಗದೇಕಮಲ್ಲರಸರು ಸತ್ತರೆಂದು ಬೊಬ್ಬೆ ಎಬ್ಬಿಸಬೇಕು," ಎಂದು ಕರ್ಣದೇವ ಹೇಳಿದನು.

ತುಸುಹೊತ್ತಿನ ಮೇಲೆ ರಾಜಗೃಹದ ಎಲ್ಲ ಕಡೆ ಸುದ್ದಿ ಹರಡಿತು,

ಮೂರ್ಛಾರೋಗದಿಂದ ಅಸ್ವಸ್ಥರಾಗಿ ಮಲಗಿದ್ದ ಜಗದೇಕಮಲ್ಲರಸರು ನಿದ್ರೆಯಲ್ಲಿಯೇ ಅಸು ನೀಗಿದರೆಂದು. ಅರಮನೆಯ ಎಲ್ಲ ಕಡೆ ದೀಪಗಳು ಹೊತ್ತಿಸಲ್ಪಟ್ಟವು. ಗಣಿಕಾ ವಾಸದ ಹೆಗ್ಗಡಿತಿ ದಾಸಿ ಊಳಿಗಿತ್ತಿಯರ ರೋದನ ಎಲ್ಲ ಕಡೆ ಕೇಳಬಂದಿತು.

ಸೂರ್ಯದೇವನು ಪೂರ್ವ ದಿಗಂತದಲ್ಲಿ ಉದಯಿಸುತ್ತಿದ್ದಂತೆ ಪಟ್ಟಾಭಿಷಿಕ್ತ ಚಾಲುಕ್ಯ ಅರಸು ಜಗದೇಕಮಲ್ಲನ ಮರಣದ ಸುದ್ದಿಯನ್ನು ಕರ್ಣದೇವನ ಭಟರು ನಗರದಲ್ಲಿ ಅಧಿಕೃತವಾಗಿ ಪ್ರಕಟಿಸಿದರು.

ಜಗದೇಕಮಲ್ಲ ಮತ್ತು ಬಿಜ್ಜಳರಾಯರ ಅಂತ್ಯಕರ್ಮವು ಆ ದಿನ ಅಪರಾಹ್ನ ನಗರದ ಹೊರಗಿನ ರುದ್ರಭೂಮಿಯಲ್ಲಿ ರಾಜವೈಭವದಿಂದ ನಡೆಯಿತು. ಆಮೇಲಿನ ಇತಿಹಾಸದಲ್ಲಿ ಆ ರಾತ್ರಿಯ ದುರಂತ ಘಟನೆಗಳು ಜನಶ್ರುತಿಯ ದಂತಕಥೆಗಳಾಗಿ ಮಾತ್ರವೇ ಉಳಿದವು. ಬಿಜ್ಜಳನ ವಧೆಯಲ್ಲಿ ಜಗದೇಕಮಲ್ಲ ಬೊಮ್ಮರಸರ ಪಾತ್ರ ಯಾರಿಗೂ ತಿಳಿಯಲಿಲ್ಲ. ಅಂದಿನ ದುರಂತದಿಂದ ತಪ್ಪಿಸಿಕೊಂಡ ಬೊಮ್ಮರಸನು ಮುಂದೆ ನಿಡುಗಲ್ ಗುತ್ತಿ ರಾಜ್ಯಗಳ ಸಾಮಂತನಾಗಿ ಅನೇಕ ವರ್ಷಗಳು ಜೀವಿಸಿದ್ದನು. ಅವನು ತನ್ನ ಒಂದು ಶಾಸನದಲ್ಲಿ, "ಬಿಜ್ಜಗ ಶಿರಚ್ಛೇದಕ," ಎಂದು ತನ್ನನ್ನು ಹೊಗಳಿಕೊಂಡಿದ್ದಾನೆ.

ಬೊಮ್ಮರಸನ ಹೇಳಿಕೆ ಮತ್ತು ಆ ತರುವಾಯ ಪ್ರಚಾರಕ್ಕೆ ಬಂದ ಜನ ಶ್ರುತಿದಂತಕಥೆಗಳ ಆಧಾರದಿಂದ ಕವಿ ಸಂಪ್ರದಾಯದಂತೆ ಪುರಾಣ ಚರಿತ್ರೆಗಳನ್ನು ಬರೆದ ಶರಣ ಕವಿಗಳು, ವಾಸ್ತವಿಕ ವ್ಯಕ್ತಿಗಳ ಹೆಸರು ಪರಿಚಯಗಳನ್ನು ಜನಸಾಮಾನ್ಯರಿಂದ ಮುಚ್ಚಿಡಲು ಉದ್ದೇಶಿಸಿ, ಜಗದೇಕಮಲ್ಲ ಬೊಮ್ಮರಸರ ಹೆಸರುಗಳನ್ನು ಜಗದೇವ–ಮಲ್ಲ–ಬೊಮ್ಮ* ಎಂದು ಪಲ್ಲಟಗೊಳಿಸಿದರು. ಆ ಇಬ್ಬರು "ವೀರಕುಮಾರ"ರ ಸಾಹಸಕ್ಕೆ ಪ್ರಚೋದನೆಯಿತ್ತ ರಾಣಿ ಕಾಮೇಶ್ವರಿ, ಆ ಇಬ್ಬರು ತಾಯಿ ಸೋಮಾಂಬೆ ಅರ್ಥಾತ್ ಸೋಮೇಶ್ವರಿಯಾದಳು. ಈ ಮೂವರನ್ನು ಕುರಿತ ದಂತಕಥೆಗಳು ಆಮೇಲೆ ರಚಿತವಾದವು. ಆ ರಾತ್ರಿಯ ದುರಂತ ಘಟನೆಗಳಿಂದ ಮುಂದೆ ಚಿತ್ರ ವಿಚಿತ್ರ ಹಿಂಸೆಗೊಳಗಾದ ಶರಣರೇ, ಪೂರ್ವ ಯೋಜನೆಯಂತೆ ನಡೆದ ಬಿಜ್ಜಳನ ವಧೆಗೆ ಕಾರಣರೆಂಬ ಪವಿತ್ರ ಸ್ಮೃತಿಗೆ ಕಳಂಕ ಹಚ್ಚುವ ಆತ್ಮದೂಷಣೆಯ ಕಾರ್ಯ ನಡೆಯಿತು.

---

* ಷಡಕ್ಷರ ದೇವನ "ವೃಷಭೇಂದ್ರ ವಿಜಯ"ದಲ್ಲಿ ಜಗದೇವ, ಮಲ್ಲ, ಬೊಮ್ಮ ಎಂಬ ಮೂವರ ಹೆಸರುಗಳೂ ದೊರಕುತ್ತವೆ.

ಚಾಲುಕ್ಯ ಇತಿಹಾಸದ ವಿಷಾದಕರ ದುರದೃಷ್ಟ ಪ್ರಸಂಗಗಳಲ್ಲಿ, ಬಿಜ್ಜಳನ ರಾಜ್ಯಾಪಹಾರ ಮತ್ತು ಅದರ ಪರಿಣಾಮ ರೂಪವಾದ ಅವನ ವಧೆ, ವ್ಯಾಪಕ ಪ್ರತಿಕ್ರಿಯೆಗಳ ಪ್ರಾಮುಖ್ಯ ಘಟನೆ ಎನಿಸಿಕೊಂಡಿತು.

* * * *

# ೬. ಮಹಾಪ್ರಸ್ಥಾನ

ಹೊನ್ನಮ್ಮನ ಚಾವಡಿಯಲ್ಲಿ ಬಿಜ್ಜಳನ ವಧೆ ನಡೆದ ಹಿಂದಿನ ದಿನ ಅಪರಾಹ್ನ ಪಡಿಹಾರಿ ಅಪ್ಪಣ್ಣನು ಕೂಡಲ ಸಂಗಮದಿಂದ ಕಲ್ಯಾಣಕ್ಕೆ ಹಿಂದಿರುಗಿದನು. ರಾಜಧಾನಿಯನ್ನು ಪರಿತ್ಯಜಿಸಿ ಚಾಲುಕ್ಯ ರಾಜ್ಯದ ದಕ್ಷಿಣದ ಅರಣ್ಯ ಪ್ರದೇಶಕ್ಕೆ ವಲಸೆ ಹೋಗಬೇಕೆಂಬ ಶರಣರ ಸಲಹೆಗೆ ಬಸವಣ್ಣನವರು ನೇರವಾದ ಉತ್ತರ ಕೊಡದೆ, ಬೆಡಗಿನ ವಚನವೊಂದನ್ನು ಕಳುಹಿಸಿದ್ದರು

ವಚನ ಈ ರೀತಿಯಿತ್ತು :

ಜೋಳವಾಳಿನವ ನಾನಲ್ಲ, ವೇಳೆಯಾಳಿನವ ನಾನಯ್ಯ.  
ಹಾಳುಗೆಟ್ಟೋಡುವ ಆಳು ನಾನಲ್ಲಯ್ಯ  
ಕೇಳು, ಕೂಡಲು ಸಂಗಮದೇವ,  
ಮರಣವೇ ಮಹಾನವಮಿ.

ಸಕಲೇಶ ಮಾದರಸರು, ಮಾಚಿದೇವರು, ಚೆನ್ನಬಸವಣ್ಣನವರು ಏಕಾಂತ ಗೃಹದಲ್ಲಿ ಸಮಾಲೋಚನೆ ನಡೆಸುತ್ತಿದ್ದಾಗ ಪಡಿಹಾರಿ ಅಪ್ಪಣ್ಣ ಒಳಗೆ ಬಂದು ಕೈಮುಗಿದು ಬಸವಣ್ಣನವರ ಓಲೆಯನ್ನು ಕೊಟ್ಟನು. ಚೆನ್ನಬಸವಣ್ಣನವರು ಓದಿ ಅಪ್ರತಿಭರಾಗಿ ಸಕಲೇಶ ಮಾದರಸರಿಗೆ ಕೊಟ್ಟರು. ಅವರಿಂದ ಅದು ಮಾಚಿದೇವರ ಕೈಸೇರಿತು.

ತುಸು ಹೊತ್ತಿನ ಮೇಲೆ ಚೆನ್ನಬಸವಣ್ಣನವರು ಪಡಿಹಾರಿಯ ಕಡೆ ತಿರುಗಿ, "ಅಣ್ಣನವರು ಮತ್ತೇನೂ ಹೇಳಿ ಕಳುಹಿಸಲಿಲ್ಲವೆ?" ಎಂದು ಕೇಳಿದರು.

"ಇಲ್ಲ, ಹೇಳಿ ಕಳುಹಿಸಲಿಲ್ಲ? –ಪಡಿಹಾರಿ ಉತ್ತರ ಕೊಟ್ಟನು.

"ನೀವು ಸಂಗಮದಲ್ಲಿ ಎಷ್ಟು ದಿನಗಳಿದ್ದಿರಿ?"

ಒಂದು ದಿನ ಮಾತ್ರ. ಸಂಗಮವನ್ನು ಸೇರಿದ ಮರುದಿನವೇ ನಾನು ಪುನಃ ಅಲ್ಲಿಂದ ಹೊರಟೆ."

"ಅಂದರೆ ನೀವು ನಾಲ್ಕು ದಿನಗಳ ಮೊದಲೇ ಸಂಗಮ ಬಿಟ್ಟಿರಬೇಕು. ಪಯಣದಲ್ಲಿ ತಡವಾಗಲು ಕಾರಣ?"

"ಗಂಗಾಂಬಿಕೆ ಅಮ್ಮನವರ ಮೇನೆ, ರಕ್ಷಕ ಭಟರು, ಸಂಗಡ ಇದ್ದುದರಿಂದ ತಡವಾಯಿತು."

ಅಪ್ಪಣ್ಣನ ಉತ್ತರ ಕೇಳಿ ಆ ಮೂವರು ಜಂಗಮರು ಪರಸ್ಪರ ಮುಖ ನೋಡಿಕೊಂಡರು. ಅವರ ಹೃದಯದಲ್ಲಿ ಏಕಕಾಲದಲ್ಲಿ ಒಂದೇ ಭಾವನೆ ಹೊಳೆಯಿತು. ಗಂಗಾಂಬಿಕೆಯ ಮುಖಾಂತರ ಬಸವಣ್ಣನವರು ರಹಸ್ಯ ಸಂದೇಶ ಕಳುಹಿಸಿರಬಹುದೆ? ಅದು ಬಸವಣ್ಣನವರ ಕಾರ್ಯವಿಧಾನವಲ್ಲ. ಆದರೂ ವಿಶೇಷ ಪರಿಸ್ಥಿತಿಯಲ್ಲಿ ವಿಶೇಷ ಕಾರ್ಯವಿಧಾನ ಅನಿವಾರ್ಯವಾಗುವುದು, ಎಂದು ಅವರು ಯೋಚಿಸಿದರು. ಬಸವಣ್ಣನವರ ಅನುಮತಿ ಪಡೆದೇ ಕಲ್ಯಾಣವನ್ನು ಬಿಡಬೇಕೆಂಬುದು ಅವರ ನಿರ್ಧಾರವಾಗಿತ್ತು. ಈ ಕಾರಣದಿಂದ ವಲಸೆ ಹೊರಡುವ ದಿನವಿನ್ನೂ ಗೊತ್ತಾಗಿರಲಿಲ್ಲ.

"ನೀವು ಬಸವಣ್ಣನವರಿಗೆ ಇಲ್ಲಿಯ ಪರಿಸ್ಥಿತಿ ಎಲ್ಲವನ್ನೂ ವಿವರಿಸಿದಿರಾ? –ಮಾಚಿದೇವರು ಅಪ್ಪಣ್ಣನನ್ನು ಕೇಳಿದರು.

"ನಾನು ಕಲ್ಯಾಣವನ್ನು ಬಿಡುವವರೆಗೆ ನಡೆದ ಎಲ್ಲ ವಿಚಾರಗಳನ್ನೂ ಅಣ್ಣನವರಿಗೆ ತಿಳಿಸಿದೆ."

"ಮಧುವರಸಾದಿಗಳನ್ನು ಶೂಲಕ್ಕೇರಿಸಿದ ಸುದ್ದಿ ತಿಳಿದಾಗ ಅವರೇನೆಂದರು?"

"ಸ್ತಂಭಿತರಂತೆ ಸ್ವಲ್ಪ ಹೊತ್ತು ಸುಮ್ಮನೆ ಕುಳಿತಿದ್ದು ಬಳಿಕ, "ಅಧರ್ಮದ ಏಕಾಧಿಪತ್ಯ ಪ್ರಾರಂಭವಾಯಿತು, ಅಪ್ಪಣ್ಣ. ಇನ್ನು ಕಲ್ಯಾಣ ಉಳಿಯುವುದಿಲ್ಲ,' ಎಂದು ಹೇಳಿ ನಿಟ್ಟುಸಿರಿಟ್ಟರು.'

"ಬಿಜ್ಜಳರಾಯರ ವಿಚಾರವಾಗಿ ಅವರೇನೂ ಹೇಳಲಿಲ್ಲವೆ?"

"ನಾನು ಅಣ್ಣನವರ ಸಂಗಡ ಸುಮಾರು ಒಂದು ಪ್ರಹರ ಕಾಲ ಮಾತನಾಡುತ್ತಿದ್ದೆ. ಅವರು ಒಂದು ಸಾರಿಯೂ ಬಿಜ್ಜಳರಾಯರ ಹೆಸರು ಹೇಳಲಿಲ್ಲ."– ಕೆಲವು ಕ್ಷಣಗಳು ಯೋಚಿಸಿ ಅಪ್ಪಣ್ಣ ಉತ್ತರ ಕೊಟ್ಟನು.

"ಅಣ್ಣನವರ ಬದುಕು ಸಂಗಮದಲ್ಲಿ ಹೇಗೆ ನಡೆದಿದೆ?" –ಸಕಲೇಶ ಮಾದರಸರು ಅಪ್ಪಣ್ಣನನ್ನು ಕೇಳಿದರು.

ಅಪ್ಪಣ್ಣ ಹೇಳಿದನು : "ಗುರುಕುಲದ ವಿದ್ಯಾರ್ಥಿ ವಟುಗಳ ಶ್ರಮದಾನದಿಂದ, ಮಲಪ್ರಭೆಯ ತಟದಲ್ಲಿ ಸಂಗಮೇಶ್ವರ ದೇಗುಲದೆದುರಿಗೆ ಮರಬಿದಿರುಗಳಿಂದ ಒಂದು ಕಲ್ಯಾಣಮಂಟಪ ನಿರ್ಮಿತವಾಗಿದೆ. ಅಣ್ಣನವರು ಅಲ್ಲಿ ಪ್ರತಿದಿನ ಮುಂಜಾವಿನಲ್ಲಿ ಎರಡು ಪ್ರಹರಗಳ ಕಾಲ ವಿದ್ಯಾರ್ಥಿ ವಟುಗಳಿಗಾಗಿ, ಸಂಜೆ ಒಂದು ಪ್ರಹರ ಕಾಲ ಗ್ರಾಮಸ್ಥರಿಗಾಗಿ ಪ್ರವಚನ ನಡೆಸುತ್ತಿದ್ದಾರೆ. 'ಗುರುಕುಲದಲ್ಲಿ

ಇದು ನನ್ನ ಕಾಯಕ,' ಎಂದು ಅಣ್ಣನವರು ಹೇಳುತ್ತಾರೆ.

"ಪ್ರವಚನ ಕೇಳಲು ಗ್ರಾಮಸ್ಥರು ಹೆಚ್ಚು ಹೆಚ್ಚಾಗಿ ಬರುತ್ತಿರುವರೆ?"– ಮಾದರಸರು ಪುನಃ ಪ್ರಶ್ನಿಸಿದರು.

"ಮೊದಲೆರಡು ದಿನಗಳು ಹೆಚ್ಚು ಜನರಿರಲಿಲ್ಲವಂತೆ. ಸಮೀಪದ ಗ್ರಾಮಗಳಿಂದ ಜನ ಬರಲು ಈಗ ಪ್ರಾರಂಭವಾಗಿದೆ. ಜನಸಂದಣಿ ದಿನದಿನಕ್ಕೆ ಹೆಚ್ಚುತ್ತಿರುವುದರಿಂದ ಪ್ರವಚನ ಸಭೆಯ ವ್ಯವಸ್ಥೆಗಾಗಿ ಗುರುಕುಲದ ಅಧ್ಯಾಪಕರು, ಗ್ರಾಮಸ್ಥರು ಒಂದಾಗಿ ಸೇವಾಸಮಿತಿ ರಚಿಸಿಕೊಂಡಿದ್ದಾರೆ. ಹೆಂಗಸರು ಮಕ್ಕಳಿಗೆ ಮಂಡಕ್ಕಿ ಪಾನಕ ಹಂಚುವ ಏರ್ಪಾಡು ನಡೆದಿವೆ."

ಕೂಡಲ ಸಂಗಮದಲ್ಲಿ ಬಸವಣ್ಣನವರ ದಿನಚರಿ ಜೀವನದ ಇನ್ನೂ ಅನೇಕ ವಿವರಗಳನ್ನು ಅವರು ಅಪ್ಪಣ್ಣನಿಂದ ತಿಳಿದುಕೊಂಡರು. ಕೊನೆಗೆ ಚೆನ್ನಬಸವಣ್ಣನವರು ಅಪ್ಪಣ್ಣನನ್ನು ವಿಶ್ರಾಂತಿಗಾಗಿ ಮಹಮನೆಯ ಅತಿಥಿಶಾಲೆಗಾಗಿ ಕಳುಹಿಸಿದರು. ಬಸವಣ್ಣನವರು ಉತ್ತರರೂಪವಾಗಿ ಕಳುಹಿಸಿದ್ದ ವಚನದ ಪರಿಶೀಲನೆ ಆಮೇಲೆ ನಡೆಯಿತು.

ಸಕಲೇಶ ಮಾದರಸರು ಹೇಳಿದರು : "ಅನ್ನದ ಹಂಗಿಗಾಗಿ ಬದುಕುವ ಜೋಳವಾಳಿಯಲ್ಲ ನಾನು. ಸಮಯಾಚಾರಕ್ಕಾಗಿ ಪ್ರಾಣಗಳನ್ನಾದರೂ ತ್ಯಜಿಸಲು ಸಿದ್ಧನಾದ ವೇಳೆಯಾಳು. ವಿಪತ್ತು ಎದುರಿಗೆ ನಿಂತಾಗ ಹೆದರಿ ಓಡುವ ಹೇಡಿಯಲ್ಲ ನಾನು. ಮರಣವೇ ಮಹಾನವಮಿ ಎಂದು ತಿಳಿದಿರುವ ಶರಣ ಎಂದು ಬಸವಣ್ಣನವರ ವಚನದ ವಾಚ್ಯಾರ್ಥ. ಬಿಜ್ಜಳನ ದಬ್ಬಾಳಿಕೆಯನ್ನು ನಾವು ಪ್ರಾಣಪಣವಾಗಿ ಪ್ರತಿಭಟಿಸಬೇಕೆಂದು ಬಸವಣ್ಣನವರು ಹೇಳಿದ್ದಾರೆ. ಪ್ರತಿಭಟನೆ ಯಾವ ರೂಪತಾಳಬೇಕೆಂದು ನಿರ್ಧರಿಸಿಕೊಳ್ಳುವುದು ನಮ್ಮ ಹೊಣೆ. ಕಲ್ಯಾಣದಲ್ಲಿಯೇ ಇದ್ದು ಹೋರಾಟ ನಡೆಸುವುದೆ, ಅಥವಾ ನಗರವನ್ನು ತ್ಯಜಿಸಿ ಆಯಕಟ್ಟಿನ ಸ್ಥಳದಲ್ಲಿ ನಿಂತು ಹೋರಾಟ ನಡೆಸುವುದೇ, ಎಂಬುದನ್ನು ನಾವು ಪರಿಶೀಲಿಸಬೇಕಾಗಿದೆ."

ಚೆನ್ನಬಸವಣ್ಣನವರು ಹೇಳಿದರು : "ಮರಣವೇ ಮಹಾನವಮಿ ಎಂಬ ಆರ್ಯಸತ್ಯವನ್ನು ಶರಣರೆಲ್ಲ ಒಪ್ಪುತ್ತಾರೆ. ನಮ್ಮ ಪಾಲಿಗೆ ಮೃತ್ಯುವು ಭಯ ಹುಟ್ಟಿಸುವ ಬೀಭತ್ಸ ಅಂತ್ಯವಲ್ಲ. ಸಾರ್ಥಕ ಜೀವನದ ಸಾರ್ಥಕ ಪರಿಣತಿ. ಮನೆಗೆ ಬಂದ ಸನ್ಮಾನ್ಯ ಅತಿಥಿಯಂತೆ ನಾವು ಮೃತ್ಯುವನ್ನು ಸ್ವಾಗತಿಸಿ ಸತ್ಕರಿಸುತ್ತೇವೆ. ಆದರೆ ಅದಕ್ಕೆ ಮೊದಲು ಜೀವನದ ಸಾರ್ಥಕತೆಗಾಗಿ ನಾವು ಮಾಡಬೇಕಾದ ಕರ್ತವ್ಯವೊಂದಿದೆ. ಇನ್ನೆರಡು ದಿನಗಳಲ್ಲಿ ಕಲ್ಯಾಣ ಮಹಾನಗರ ಶರಣರ ಪಾಲಿಗೆ ಮೃತ್ಯುಪಂಜರವಾಗುವುದು. ನಗರದ ಶೈವಮಠಗಳನ್ನೆಲ್ಲ ನಾಶಮಾಡುವುದು

ಬಿಜ್ಜಳರಾಯರ ಮಹಾ ಸೇನಾನಿ ಮಾಧವ ದಂಡನಾಯಕನ ಉದ್ದೇಶ. ಕಳೆದ ಹತ್ತು ವರ್ಷಗಳಿಂದ ಮಹಮನೆಯಲ್ಲಿ ಸಂಗ್ರಹವಾಗಿರುವ ಶೈವಧರ್ಮ ವಚನ ಶಾಸ್ತ್ರಗಳ ಭಂಡಾರವನ್ನು ಸುರಕ್ಷಿತ ಸ್ಥಾನಗಳಿಗೆ ಕಳುಹಿಸಿ, ಅವುಗಳ ರಕ್ಷಣೆ ಪ್ರಸಾರಗಳಿಗಾಗಿ ಏರ್ಪಡಿಸುವುದು ಮುಂದಿನ ಪೀಳಿಗೆಗೆ ನಾವು ಸಲ್ಲಿಸಬೇಕಾದ ಸೇವೆ. ಶರಣರು ಕಲ್ಯಾಣವನ್ನು ಬಿಟ್ಟು ಹೋಗುತ್ತಿರುವುದು ಈ ಹೊಣೆಯನ್ನು ನಿರ್ವಹಿಸುವ ಮಹದುದ್ದೇಶಕ್ಕಾಗಿ. ನಮ್ಮ ಜೀವನದ ಸಾರ್ಥಕತೆ ಈ ಕಾರ್ಯವನ್ನು ಅವಲಂಬಿಸಿದೆ. ಅದು ಮುಗಿಯಿತೆಂದರೆ ಅಣ್ಣನವರು ಹೇಳುವಂತೆ ಮರಣವೇ ಮಹಾನವಮಿ ನಮಗೆ."

ಅವಸರದ ಸಂದರ್ಭಗಳಲ್ಲಿ ಮಾತಿನ ಮಾಲೆ ಕಟ್ಟುವುದು ಮಾಚಿದೇವರ ಅಭ್ಯಾಸವಾಗಿರಲಿಲ್ಲ, "ನಿಮ್ಮ ಅಭಿಮತವೇ ನನ್ನ ಅಭಿಮತ. ಬಸವಣ್ಣನವರ ಒಪ್ಪಿಗೆ ನಮಗೆ ದೊರಕಿದೆ. ನಾಳೆ ಆರೋಗಣೆ ಮುಗಿಸಿಕೊಂಡು ಅಪರಾಹ್ನದ ವೇಳೆಗೆ ಕಲ್ಯಾಣವನ್ನು ಬಿಡಲು ನಾವು ಸಿದ್ಧರಾಗಬೇಕು," ಎಂದರು.

ಗಂಗಾಂಬಿಕೆಯ ಮಾತುಗಳು ಈ ನಿರ್ಧಾರಕ್ಕೆ ಉಪಶ್ರುತಿಯೆಂದು ಶರಣರು ತಿಳಿದರು. "ಅಣ್ಣನವರು ನಿನ್ನ ಮುಖಾಂತರ ಏನಾದರೂ ವಿಶೇಷ ಸಂದೇಶ ಕಳುಹಿಸಿರುವರೆ, ಅಕ್ಕಾ?" ಎಂದು ಚೆನ್ನಬಸವಣ್ಣನವರು ಕೇಳಿದಾಗ ಗಂಗಾಂಬಿಕೆ, "ನನ್ನನ್ನು ಬೀಳ್ಕೊಡುವಾಗ ಅವರು, 'ಶರಣರ ವಲಸೆಯಲ್ಲಿ ನೀನು ಸಂಗಡಿದ್ದರೆ ಒಳ್ಳೆಯದು. ಸಂಗಮನಾಥನ ಪಾಲನೆ ಪೋಷಣೆಗಳ ಭಾರ ಸಂಪೂರ್ಣವಾಗಿ ಅಕ್ಕ ನಾಗಲಾಂಬೆಯ ಮೇಲೆ ಬೀಳದಂತೆ ನೋಡಿಕೊಳ್ಳತಕ್ಕದ್ದು,' ಎಂದು ಹೇಳಿದರು. ಇದು ಹೊರತಾಗಿ ರಹಸ್ಯ ಸಂದೇಶವೇನೂ ಇಲ್ಲ," ಎಂದು ಉತ್ತರಕೊಟ್ಟಳು.

ವಾಸ್ತವದಲ್ಲಿ ಗಂಗಾಂಬಿಕೆ ಬಸವಣ್ಣನವರ ರಹಸ್ಯ ಸಂದೇಶವೊಂದನ್ನು ಸಂಗಡ ತಂದಿದ್ದಳು. ಅದನ್ನು ಅಷ್ಟೇ ರಹಸ್ಯವಾಗಿ ನೀಲಲೋಚನೆಗೆ ಮುಟ್ಟಿಸುವುದು ಅವಳ ಹೊಣೆಯಾಗಿತ್ತು.

ಆ ದಿನ ಪೂಜೆ ಆರೋಗಣೆಗಳು ಮುಗಿದ ಮೇಲೆ ಗಂಗಾಂಬಿಕೆ ಏಕಾಂತದಲ್ಲಿ ನೀಲಲೋಚನೆಗೆ ಹೇಳಿದಳು–"ನಿನಗೊಂದು ಗುಟ್ಟಾದ ಸುದ್ದಿಯಿದೆ, ಅಕ್ಕಾ."

ನೀಲಲೋಚನೆ ಕಾತರಳಾಗಿ, "ನೀನು ಇದ್ದಕ್ಕಿದ್ದಂತೆ ಹಿಂತಿರುಗಿದಾಗಲೆ ಏನೋ ವಿಶೇಷವಿದೆಯೆಂದು ತಿಳಿದೆ, ಗಂಗಾ. ಅವರು ಏನು ಹೇಳಿ ಕಳುಹಿಸಿದ್ದಾರೆ?" ಎಂದಳು.

"ನಾನು ಅವರ ಸಂಗಡ ಸಂಗಮಕ್ಕೆ ಹೋದದ್ದು ಸರಿಯಲ್ಲ. ಅದರಿಂದ ನಿನ್ನನ್ನು ಪತಿಸೇವೆಯಿಂದ ವಂಚಿಸಿದೆ ಎಂಬುದು ಈಗ ನನಗೆ ಅರಿವಾಗುತ್ತಿದೆ,

ನೀಲಾ. ನನ್ನ ಸರದಿ ಮುಗಿಯಿತು, ಈಗ ನಿನ್ನ ಸರದಿ. ಸಂಗಮನಾಥನ ಪಾಲನೆ ಪೋಷಣೆಗಾಗಿ ನಾನು ಶರಣರ ಸಂಗಡ ಉಳಿವೆಗೆ ಹೋಗುತ್ತೇನೆ. ನೀನು ನಾಳೆಯೆ ಕೂಡಲಸಂಗಮಕ್ಕೆ ಹೋಗು. ಗುರುಕುಲದ ಮೇನೆ ಇಲ್ಲಿಯೇ ಇದೆ. ರಕ್ಷಕ ಭಟರು ಸಂಗಡಿದ್ದಾರೆ. ನಿನ್ನ ಪ್ರವಾಸ ಸುಲಭವಾಗುವುದು." –ಗಂಗಾಂಬಿಕೆ ಅನುನಯದಿಂದ ಹೇಳಿದಳು. ಆದರೆ ಆ ಮಾತಿನ ಹಿಂದಿದ್ದ ವಿಷಣ್ಣತೆಯನ್ನು ನೀಲಲೋಚನೆಯಿಂದ ಮುಚ್ಚಿಡುವುದು ಅವಳಿಗೆ ಸಾಧ್ಯವಾಗಲಿಲ್ಲ.

ನೀಲಲೋಚನೆ ಕೂಡಲೆ ಉತ್ತರ ಕೊಡಲಿಲ್ಲ. ಅನೇಕ ಕ್ಷಣಗಳು ಯೋಚಿಸುತ್ತಿದ್ದು ಬಳಿಕ ಅವಳು, "ನಾನು ಸಂಗಮಕ್ಕೆ ಹೋಗಬೇಕೆಂಬುದು ಅವರ ಇಷ್ಟವೆ? ಆ ಮಾತನ್ನು ಅವರು ಸ್ಪಷ್ಟವಾಗಿ ಹೇಳಿದರೆ?" ಎಂದು ಕೇಳಿದಳು.

"ಅವರ ಮನಸ್ಸಿನ ಹಂಬಲವನ್ನು ನಾನು ತಿಳಿಯಲಾರೆನೆ, ನೀಲಾ? ಪಡಿಹಾರಿ ಅಪ್ಪಣ್ಣನು ಸಂಗಮಕ್ಕೆ ಬಂದಾಗ ಅವರ ಮನಸ್ಸು ನಿನ್ನ ವಿಚಾರದಲ್ಲಿ ಅನುಕಂಪದಿಂದ ತಳಮಳಗೊಂಡಿತ್ತು. ಅವರು ಸಂಗಮಕ್ಕೆ ಹೋದ ಮೇಲೆ ನೀನು ಒಂದು ಸಾರಿಯೂ ಕಲಚೂರ್ಯ ಅರಮನೆಗೆ ಹೋಗಲಿಲ್ಲವೆಂದು ತಿಳಿದಾಗ ಅವರು, 'ನೀಲಳನ್ನು ಕೆಲವು ದಿನಗಳು ಇಲ್ಲಿಗೆ ಕರೆಸಿಕೊಂಡರೆ ಒಳ್ಳೆಯದಲ್ಲವೆ?' ಎಂದು ನನ್ನ ಸಲಹೆ ಕೇಳಿದರು, ನಾನು ಅಪ್ಪಣ್ಣನ ಸಂಗಡ ಕಲ್ಯಾಣಕ್ಕೆ ಹಿಂದಿರುಗಿ ನಿನ್ನನ್ನು ಕಳುಹಿಸುವುದಾಗಿ ಹೇಳಿದಾಗ ಒಪ್ಪಿಕೊಂಡರು."

ಗಂಗಾಂಬಿಕೆಯ ಉತ್ತರದಿಂದ ನೀಲಲೋಚನೆ ಮತ್ತೆ ವಿಚಲಿತೆಯಾದಳು. ಮನಸ್ಸಿನ ವಿಷಣ್ಣಭಾವವನ್ನು ಮುಚ್ಚಿಡಲು ಅವಳು, "ಹಠಾತ್ತಾಗಿ ಎಲ್ಲವನ್ನೂ ಬಿಟ್ಟು ಸನ್ಯಾಸಿಯಂತೆ ಸಂಗಮಕ್ಕೆ ಹೋದ ಅವರಿಗೆ ಈಗ ಪತ್ನಿಯ ಹಂಬಲವೇಕೆ?" ಎಂದು ಕಟಕಿಯಾಡಿದಳು.

ನೀಲಲೋಚನೆಯ ಉದ್ದೇಶ ಗಂಗಾಂಬಿಕೆಗೆ ಅರಿವಾಯಿತು. ಮಿದುನಗೆ ಸೂಸಿ ಅವಳು ಹೇಳಿದಳು : "ಅವರ ಹಂಬಲದ ಕಾರಣ ನಿನ್ನ ಹಂಬಲದ ನೆರಳೆಂಬುದನ್ನು ಮರೆತೆಯ, ನೀಲಾ? ಅವರ ಚಿತ್ತ ಸ್ಫಟಿಕಶಿಲೆಯಂತೆ ನಿರ್ಮಲ. ನಿನ್ನ ವಿರಹಜ್ವಾಲೆ ಅವರಲ್ಲಿ ಪ್ರತಿಬಿಂಬಿಸಿದೆ. ಅದು ಶಾಂತವಾಗಬೇಕಾದರೆ ನೀನು ಸಂಗಮಕ್ಕೆ ಹೋಗಿ ನಾಲ್ಕು ದಿನಗಳು ಅವರ ಸಹವಾಸದಲ್ಲಿರುವುದು ಅಗತ್ಯ. ಅದಕ್ಕಾಗಿಯೇ ನನ್ನ ಈ ಹಂಚಿಕೆ."

ನೀಲಲೋಚನೆ ಅಪ್ರತಿಭೆಯಾದಳು. ಚತುರತೆಯಿಂದ ಯಾವುದನ್ನು ಮುಚ್ಚಿಡಲು ತಾನು ಪ್ರಯತ್ನಿಸಿದಳೋ ಅದು ಗಂಗಾಂಬಿಕೆಗೆ ತಿಳಿಯಿತೆಂದು ಲಜ್ಜೆಯಾಗಿ ನಿಟ್ಟುಸಿರಿಟ್ಟು ಹೇಳಿದಳು : "ನಾನೇ ಚತುರೆಯೆಂಬ ಭಾವನೆಯಿಂದ

ಗರ್ವಿತೆಯಾಗಿದ್ದೆ, ಗಂಗ. ಅದನ್ನು ನೀನು ಕಳೆದೆ. ನಿನ್ನಲ್ಲಿ ಮುಚ್ಚುಮರೆಯೇಕೆ? ಅಂದು ನೀನು ಅವರ ಸಂಗಡ ಸಂಗಮಕ್ಕೆ ಹೋದಾಗ ನಾನು ವಾಸ್ತವದಲ್ಲಿ ಕರುಬಿದೆ. ನನಗಿಂತ ನೀನು ಪುಣ್ಯವತಿಯೆಂದು ಭಾವಿಸಿದೆ. ವಿರಹಜ್ವಾಲೆಯಲ್ಲಿ ಬೆಂದು ಸಾಯಲು ನಿರ್ಧರಿಸಿ, ಮೂರು ದಿನಗಳು ಉಪವಾಸ ಮಾಡಿದೆ. ನಾಗಲಾಂಬೆಯವರು ನನ್ನನ್ನು ಎಚ್ಚರಿಸಿದರು. 'ಹುತ್ತ ಬಡಿದರೆ ಹಾವು ಸಾಯುವುದೇ? ಈ ತನುವಿನ ತಪಸ್ಸಿನಿಂದ ಯಾವ ಫಲವೂ ಇಲ್ಲ,' ಎಂದು ಹೇಳಿ ಮನೋವೇದನೆಯನ್ನು ಸಮಚಿತ್ತ ಸಂಯಮಗಳಿಂದ ಶಾಂತಿಪಥದಲ್ಲಿ ನಡೆಸುವ ಸಂಜೀವನ ವಿದ್ಯೆಯನ್ನು ಕಲಿಸಿದರು. ಈಗ ನಾನು ಎಲ್ಲ ಹಂಬಲದಿಂದ ದೂರವಾಗಿದ್ದೇನೆ. ಇಪ್ಪೆಯ ಹೂವನ್ನು ಅನುಗೊಳಿಸಲು ಇಪ್ಪೆ ಹಿಪ್ಪೆಯಾದಂತೆ ಮನದ ವಾಸನೆಗಳೆಲ್ಲ ಒಂದೊಂದಾಗಿ ಅಳಿಯುತ್ತಿವೆ. ಈಗ ನಾನು ಸಂಗಮಕ್ಕೆ ಹೋಗಿ ಆ ವಾಸನೆಗಳನ್ನು ಪುನಃ ಎಚ್ಚರಿಸಲೇಕೆ? ಭಾವಶೂನ್ಯತೆಯಲ್ಲಿ ನಿಮಗ್ನವಾದ ಮನಸ್ಸನ್ನು ವೇದನೆಯ ತಿರುಗಣೆ ಚಕ್ರದಲ್ಲಿ ಮತ್ತೆ ತೊಡಗಿಸಲೇಕೆ? ಅವರ ಆಹ್ವಾನಕ್ಕೆ ನಾನು ಕಳುಹಿಸಬಹುದಾದ ಉತ್ತರವೊಂದೇ.....

"ನಾನಾರ ಸಾರುವೆನೆಂದು ಚಿಂತಿಸಲೇತಕಯ್ಯ?
ನಾನಾರ ಹೊಂದುವೆನೆಂದು ಭ್ರಮೆ ಪಡಲೇತಕಯ್ಯ?
ನಾನಾರ ಇರುವನರಿವೆನೆಂದು ಪ್ರಲಾಪಿಸಲೇತಕಯ್ಯ?
ಪರಿಣಾಮಮೂರ್ತಿ ಬಸವನ ರೂಪು ಕರಸ್ಥಳದಲ್ಲಿ
ಬೆಳಗಿದ ಬಳಿಕ, ಸಂಗಯ್ಯನ ಹಂಗು ನಮಗೇತಕಯ್ಯ ?"

ನೀಲಲೋಚನೆಯ ಭಾವಾವೇಶವನ್ನು ಕಂಡು ಗಂಗಾಂಬಿಕೆ ವಿಸ್ಮಿತೆಯಾದಳು. ಗೆಳತಿಯ ಮೈದಡವಿ ಅವಳು, "ಈ ನೂರೆಂಟು ದಿನಗಳ ವಿಯೋಗ ಜ್ವಾಲೆಯಿಂದ ನೀನು ಪುಟವಿಟ್ಟ ಚಿನ್ನದಂತಾಗಿರುವೆ, ನೀಲಾ. ನಿನ್ನ ವಾದಕ್ಕೆ ಉತ್ತರ ಕೊಡುವ ಸಾಮರ್ಥ್ಯ ನನಗಿಲ್ಲ. ನಿನ್ನ ಇಷ್ಟವಿದ್ದಂತೆ ಮಾಡು," ಎಂದಳು.

ಅಂದು ಆ ವಿಚಾರ ಅಷ್ಟಕ್ಕೆ ಮುಗಿಯಿತು. ಆದರೆ ನೀಲಲೋಚನೆ ಮಾತ್ರ ಚಿಂತಿಸುತ್ತ ಬಹಳ ಹೊತ್ತು ನಿದ್ರೆಯಿಲ್ಲದೆ ಮಲಗಿದ್ದಳು–"ನಾಳೆ ಶರಣರ ವಲಸೆ ಪ್ರಾರಂಭವಾಗುವುದು. ಗುರುಕುಲದ ರಕ್ಷಕ ಭಟರೊಡನೆ ಅಪ್ಪಣ್ಣ ಸಂಗಮಕ್ಕೆ ಹಿಂದಿರುಗುವನು. ಅವನ ಸಂಗಡ ಕಳುಹಿಸುವ ಉತ್ತರವೇನು?" ಎಂದು

ಬಹಳ ಹೊತ್ತಿನ ಮೇಲೆ ಅವಳಿಗೊಂದು ವಚನ ಹೊಳೆಯಿತು. ಎದ್ದು ಕುಳಿತು, ದೀಪ ಹಚ್ಚಿ, ಲೇಖನೋಪಕರಣಗಳನ್ನು ತೆಗೆದುಕೊಂಡು ಬರೆದಿಟ್ಟಳು. ವಚನ ಈ ರೀತಿಯಿತ್ತು :

"ಇಪ್ಪೆಯ ಹೂವನನುಗೊಳಿಸಲು ಇಪ್ಪೆ ಹಿಪ್ಪೆಯಾಯಿತ್ತು !
ಸರ್ಪನ ಶಿರ ಕಂಠದಲ್ಲಿ ಮೂಗುತಿಯ ಸರಗೊಳಿಸಿದೆನಯ್ಯ,
ನೀವಲ್ಲಿದ್ದರೇನು ? ನಾವಿಲ್ಲಿದ್ದರೇನು ? ನಮ್ಮ ನಿಮ್ಮ
ಸಂಸರ್ಗದಲ್ಲಿ ನಿರುಪಮ ನಿರಾಕಾರ ಮೂರ್ತಿಯಾಗಿ
ನಿರವಯವನೈದಿ ನಿಜಸುಖಿಗಳಾದೆವು !
ಬಸವನಲ್ಲಿ ಎನಗೆ ತೆರಹಿಲ್ಲವಯ್ಯ,
ಭಾವಶೂನ್ಯಳು ನಾನು, ಸಂಗಯ್ಯ!"*

* * *

ಮಹಮನೆಯಲ್ಲಿ ಮರುದಿನ ಮುಂಜಾವಿನಲ್ಲಿಯೇ ವಲಸೆಯ ಸಿದ್ಧತೆ ಪ್ರಾರಂಭವಾಯಿತು. ಪೂರ್ವಾಹ್ನ ಮೊದಲ ಜಾಮ ಮುಗಿಯುವಷ್ಟರಲ್ಲಿ ಶರಣರು ಪೂಜೆ ಆರೋಗಣೆಗಳನ್ನು ಮುಗಿಸಿ ಪ್ರವಾಸಕ್ಕೆ ಬೇಕಾದ ದವಸ ಧಾನ್ಯ ಪಾತ್ರೆ ಪರಿಕರಗಳನ್ನು ಗಾಡಿಗಳಿಗೆ ಹೇರಿ ಹೊರಡಲು ಸನ್ನದ್ಧರಾಗುತ್ತಿದ್ದಂತೆ ಮಹಾದ್ವಾರದಲ್ಲಿ ಹರಹರ ಮಹಾದೇವ ಎಂಬ ಬಹುಧ್ವನಿ ಕೇಳಿಸಿತು. ಸಪಾದಲಕ್ಷದಿಂದ ಕಲ್ಯಾಣಕ್ಕೆ ಯಾತ್ರಾರ್ಥಿಗಳಾಗಿ ಬಂದಿದ್ದ ಸುಮಾರು ನೂರು ಜನರ ಜಂಗಮ ತಂಡವೊಂದು ಮಹಮನೆಯ ಆತಿಥ್ಯವನ್ನು ಬಯಸಿ ಬಂದಿತ್ತು.

ಸಕಲೇಶ ಮಾದರಸ ಮಾಚಿದೇವರು ಅವರನ್ನು ಎದುರುಗೊಂಡು, "ನಾವು ವಲಸೆ ಹೊರಟಿದ್ದೇವೆ. ಅಯ್ಯನವರೆ, ನೀವು ಅಕಾಲದಲ್ಲಿ ಇಲ್ಲಿಗೆ ಬಂದಿರಿ," ಎಂದು ವಿನಯದಿಂದ ಹೇಳಿದರು.

---

* ಶೂನ್ಯ ಸಂಪಾದನೆ ಪುಟ. ೪೫೪ : ಇಪ್ಪೆ=ಹೂವು (ಶ್ಲೇಷಾರ್ಥ) ಇರುವಿಕೆ. ಸಕ್ಕರೆ ತೆಗೆಯಲು ಇಪ್ಪೆ ಹೂವನ್ನು ಕುಟ್ಟಿ ಹಿಂಡಿದ ಮೇಲೆ ಉಳಿಯುವ ಚರಟವು ಹಿಪ್ಪೆ. "ಇಪ್ಪೆ ಹೂವನ್ನು ಹಿಂಡುವಂತೆ ನನ್ನ ಇರುವಿಕೆಯನ್ನು ಮುಕ್ತಿಗೆ ಅನುವುಗೊಳಿಸಲು ವಾಸನೆಗಳನ್ನೆಲ್ಲ ಹಿಂಡಿ ತೆಗೆದು ಹಿಪ್ಪೆಯಾಗಿ ಮಾಡಿದ್ದೇನೆ".... "ಸರ್ಪನೆಂದರೆ ಕುಂಡಲಿ. ಸರ್ಪನ ಶಿರಕಂಠಗಳು ಸಹಸ್ರಾರ ವಿಶುದ್ಧಿ ಚಕ್ರಗಳು. ಮೂಗು ವಾಸನೆಗಳ ಸಂಕೇತ. ಆ ವಾಸನೆಗಳನ್ನು ಹಿಡಿದಿಡುವ ಸಾಧನ ಮೂಗುತಿ..." "ಕುಂಡಲಿನಿಯನ್ನು ವಿಶುದ್ಧಿ ಚಕ್ರಕ್ಕೇರಿಸಿ ವಾಸನೆಗಳನ್ನು ನಾಶಮಾಡಿ ಸಹಸ್ರಾರಕ್ಕೆ ಸರ ಕಟ್ಟಿದ್ದೇನೆ. ನೀವು ಅಲ್ಲಿದ್ದರೇನು? ನಾನು ಇಲ್ಲಿದ್ದರೇನು ? ನನ್ನ ನಿಮ್ಮ ಒಡನಾಟದಲ್ಲಿ ನಿರುಪಮ ನಿರಾಕಾರ ಪರಬ್ರಹ್ಮ ಪ್ರತ್ಯಕ್ಷವಾಗಿದೆ. ಭಾವಶೂನ್ಯಳಾದ ನನಗೆ ಈಗ ನಾನು ಬೇರೆ ನೀವು ಬೇರೆ ಎಂಬ ಪ್ರತ್ಯೇಕ ಭಾವನೆಯಿಲ್ಲ. ನೀವೇ ನಾನು, ನಾನೇ ನೀವು. ನಿಮ್ಮನ್ನು ನೋಡಲು ನಾನು ಸಂಗಮಕ್ಕೆ ಬರುವ ಅಗತ್ಯವೇನಿದೆ?" ಎಂದು ವಚನದ ಭಾವಾರ್ಥ. ಗ್ರಾಮವಾಸಿಗಳೂ ಹಿಪ್ಪೆಯ ಹೂವಿಂದ ಸಕ್ಕರೆ ತೆಗೆದು ತಿನ್ನುವುದುಂಟು. ಸಿಹಿಕಳ್ಳನ್ನೂ ಮಾಡುತ್ತಾರೆ. 'ಆಲೆ ಇಲ್ಲದ ಊರಿಗೆ ಇಪ್ಪೆ ಹೂವೆ ಸಕ್ಕರೆ,' ಎಂಬ ಗಾದೆಯೂ ರೂಢಿಯಲ್ಲಿದೆ.

ತಂಡದ ನಾಯಕನು ಎಲ್ಲರಂತೆ ಕಪಿನಿ ಚೀವರಗಳನ್ನು ಧರಿಸಿದ್ದರೂ ಅವನ ವೇಷ ವಿಚಿತ್ರವಾಗಿತ್ತು. ಕಚ್ಚೆ ಧೋತ್ರ, ನಡುಕಟ್ಟು ಎದೆಪಟ್ಟ, ಅವುಗಳಿಗೆ ಕಟ್ಟಿದ್ದ ಕತ್ತಿ ಕಠಾರಿ ಪರಶು ಗದೆ ಮುಂತಾದ ಆಯುಧಗಳು, ಬೆನ್ನಿಗೆ ಕಟ್ಟಿದ್ದ ಗುರಾಣಿ ಬತ್ತಳಿಕೆಗಳು, ಅವನನ್ನು ವಿಚಿತ್ರ ಯೋಧನನ್ನಾಗಿ ಮಾಡಿದ್ದವು. ಸಿಡಿಲಂತೆ ಕರ್ಕಶವಾದ ಕಂಠದಿಂದ ಅವನು ಪ್ರಾಕೃತದಲ್ಲಿ ಹೇಳಿದನು :

"ನಾವು ಬಸವಣ್ಣನವರ ದರ್ಶನಕ್ಕಾಗಿ ಸಪಾದಲಕ್ಷವನ್ನು ಬಿಟ್ಟು ಮೂರು ತಿಂಗಳಾಯಿತು. ಕಳ್ಳಕಾಕರಿಂದ ತುಂಬಿದ ದುರ್ಗಮ ಪಥದಲ್ಲಿ ಇವರನ್ನು ಸುರಕ್ಷಿತವಾಗಿ ಕರೆದುಕೊಂಡು ಇಂದು ಮುಂಜಾವಿಗೆ ಕಲ್ಯಾಣಕ್ಕೆ ಬಂದೆವು. ಬಸವಣ್ಣನವರು ಕೂಡಲ ಸಂಗಮದಲ್ಲಿರುವುದಾಗಿ ತಿಳಿಯಿತು. ನಿಮ್ಮಲ್ಲಿ ದಾಸೋಹ ಮುಗಿಸಿಕೊಂಡು ನಾವು ಇಂದೇ ಸಂಗಮಕ್ಕೆ ಹೊರಡಲು ಯೋಚಿಸಿದ್ದೇವೆ."

ಸಕಲೇಶ ಮಾದರಸರು ಮೌನ. ಮಾಚಿದೇವರು, "ಕಲ್ಯಾಣದಲ್ಲಿ ನೂರೆಂಟು ಜಂಗಮ ಮಠಗಳಿವೆ. ಅವುಗಳನ್ನೆಲ್ಲ ಬಿಟ್ಟು ನೀವು ಮಹಮನೆಗೆ ಬಂದ ಕಾರಣ?" ಎಂದು ಕುತೂಹಲದಿಂದ ಪ್ರಶ್ನಿಸಿದರು.

ತಂಡದ ನಾಯಕನ ಮುಖ ಮಿದುನಗೆಯಿಂದ ಅರಳಿತು. "ಸಾವಿರ ನಕ್ಷತ್ರಗಳು ಹರಿಸಲಾಗದ ಕತ್ತಲನ್ನು ಒಬ್ಬ ಚಂದ್ರ ಹರಿಸುವನಲ್ಲವೆ? ಕಲ್ಯಾಣದಲ್ಲಿ ಮಹಮನೆಯು ಚಂದ್ರನಂತೆ. ಬಂದ ಜಂಗಮರನ್ನು ನೀವು ಹಿಂದಕ್ಕೆ ಕಳುಹಿಸುವುದಾದರೆ ಉಪವಾಸದಿಂದ ಸಂಗಮಕ್ಕೆ ಹೊರಡಬೇಕಾಗುವುದು," ಎಂದನು ಅವನು.

ಈ ಮಾತುಗಳು ನಡೆಯುತ್ತಿದ್ದಂತೆ ನಾಗಲಾಂಬೆ ಚೆನ್ನಬಸವಣ್ಣನವರು ಅಲ್ಲಿಗೆ ಬಂದರು. "ಬಂದ ಅತಿಥಿ ಜಂಗಮರನ್ನು ಹಿಂದಕ್ಕೆ ಕಳುಹಿಸುವುದು ಮಹಮನೆಗೆ ಸಲ್ಲ. ಇವರನ್ನು ಅತಿಥಿಶಾಲೆಯಲ್ಲಿ ಮೂರ್ತ ಮಾಡಿಸಿರಿ, ಅಣ್ಣ. ಸ್ನಾನ ಪೂಜೆ ಆರೋಗಣೆಗಳಿಗೆ ನಾವು ಸಿದ್ಧಮಾಡುತ್ತೇವೆ," ಎಂದಳು ನಾಗಲಾಂಬೆ.

ಮಾದರಸರಾಗಲಿ, ಮಾಚಿದೇವರಾಗಲಿ ನಾಗಲಾಂಬೆಗೆ ಪ್ರತಿ ಹೇಳುವುದು ಸಾಧ್ಯವಿರಲಿಲ್ಲ, "ವಲಸೆಗೆ ವಿಘ್ನ ತರುವುದು ಶಿವನಿಚ್ಛೆಯಾದರೆ ಹಾಗೆಯೇ ನಡೆಯಲಿ," ಎಂದು ಭಾವಿಸಿ ಅವರು ಸುಮ್ಮನಾದರು.

ಗಾಡಿಗಳಿಗೆ ಹೇರಿದ್ದ ಪಾತ್ರೆ ಪದಾರ್ಥ ಪರಿಕರಗಳನ್ನು ಪುನಃ ಕೆಳಗಿಳಿಸಿದರು. ಅತಿಥಿಗೃಹ ಪಾಕಶಾಲೆಗಳ ಕಾಯಕಕ್ಕೆ ಗೊತ್ತಾಗಿದ್ದ ಶರಣ ಶರಣೆಯರ ತಂಡ ಮುಂಜಾವಿನಲ್ಲಿ ನಗರವನ್ನು ಬಿಟ್ಟು ಸಾಮಾನು ಸರಂಜಾಮುಗಳೊಡನೆ ಆಂಜನೇಯ ಹೊಳೆಯಾಚಿನ ಶಿಬಿರಕ್ಕೆ ಹೋಗಿದ್ದುದರಿಂದ ನಾಗಲಾಂಬೆ ನೀಲಲೋಚನೆ

ಗಂಗಾಂಬಿಕೆಯರೇ ಎಲ್ಲ ಕೆಲಸಕ್ಕೆ ನಿಲ್ಲಬೇಕಾಯಿತು. ನಾನು ನಿಮಗೆ ಸಹಾಯ ಮಾಡುತ್ತೇನೆ ಎಂದು ಬಾಲಕ ಸಂಗಮನಾಥ ಕಾಯಿಪಲ್ಲೆಗಳ ತಟ್ಟೆಗಳನ್ನು ಮುಂದಿಟ್ಟುಕೊಂಡು ಕುಳಿತ.

ಅತಿಥಿ ಜಂಗಮರ ಸ್ನಾನ ಪೂಜೆ ಆರೋಗಣೆಗಳು ಮುಗಿಯಲು ಸಂಜೆಯಾಯಿತು. ಜಂಗಮರು ಸಂತೃಪ್ತರಾಗಿ ನಾಗಲಾಂಬೆ ನೀಲಲೋಚನೆ ಗಂಗಾಂಬಿಕೆಯರನ್ನು ಹರಸಿದರು. ಜಂಗಮರ ಮುಖಂಡನು ನಾಗಲಾಂಬೆಗೆ ವಂದಿಸಿ, "ನಿಮ್ಮನ್ನು ಪರೀಕ್ಷೆ ಮಾಡಲು ನಾವು ಬಂದಂತಾಯಿತು, ಅಕ್ಕನವರೆ. ಬಸವಣ್ಣನವರು ನಿಮ್ಮನ್ನು ಹಡೆದ ತಾಯೆಂದೇ ಗೌರವಿಸುವರೆಂದು ಕೇಳಿದ್ದೆವು. ಆ ಗೌರವಕ್ಕೆ ನೀವು ಎಲ್ಲ ಬಗೆಯಿಂದಲೂ ಅರ್ಹರೆಂಬುದು ಈಗ ನಮಗೆ ಮನವರಿಕೆಯಾಯಿತು," ಎಂದು ಪ್ರಶಂಸಿಸಿದನು.

ಮಾಚಿದೇವರು ಚೆನ್ನಬಸವಣ್ಣನವರನ್ನು ಕರೆದು, "ಈಚೆಗೆ ಕೆಲವು ದಿನಗಳಿಂದ ಸಂಜೆಯಾಗುತ್ತಲೆ ನಗರದ ಮಹಾದ್ವಾರಗಳನ್ನು ಮುಚ್ಚಿಬಿಡುತ್ತಾರೆ. ನಾನು ಇವರನ್ನು ಈಗಲೇ ನಗರದಿಂದ ಹೊರಗೆ ಕರೆದುಕೊಂಡು ಹೋಗಿ ಹೊಳೆ ದಾಟಿಸಿ ಬರುತ್ತೇನೆ. ನೀವು ಅಷ್ಟರಲ್ಲಿ ಪಾತ್ರೆ ಪರಿಕರಗಳನ್ನು ಶುದ್ಧಿಗೊಳಿಸಿ ಗಾಡಿಗಳನ್ನು ತುಂಬಿ ಸಿದ್ಧರಾಗಿದ್ದರೆ ನಾವು ಈ ರಾತ್ರಿಯೇ ಮಹಮನೆಯನ್ನು ಬಿಟ್ಟು ಮಹಾದ್ವಾರದ ಬಳಿ ತಂಗಿದ್ದು ಮುಂಜಾವಿನಲ್ಲಿ ನಗರವನ್ನು ಬಿಡಬಹುದು. ಇಲ್ಲವೆ ಇನ್ನಾವ ವಿಘ್ನಗಳು ಎದುರಿಗೆ ನಿಲ್ಲುವುವೋ? ಈ ಶಾಪಗ್ರಸ್ಥ ಪಾಪಪುರಿಯಲ್ಲಿ ಇನ್ನೊಂದು ದಿನವಿರುವುದೂ ನನಗಿಷ್ಟವಿಲ್ಲ," ಎಂದರು.

ನಗರದ ನೈರುತ್ಯ ಮಹಾದ್ವಾರದಲ್ಲಿ ಕಾವಲಿದ್ದ ಸೈನ್ಯದಳದ ನಾಯಕ ನಾಗರಾಜ ಮಾಚಿದೇವರಿಗೆ ಪರಿಚಿತನು. ಹಿಂದೆ ಅವರು ಚಾಲುಕ್ಯ ಸೈನ್ಯದಲ್ಲಿ ಅಧಿಕಾರಿಯಾಗಿದ್ದಾಗ ನಾಗರಾಜ ಅವರ ಭಟನಾಗಿದ್ದನು. ಕಾಲಕ್ರಮದಲ್ಲಿ ಮಾಚಿದೇವರು ಅಧಿಕಾರ ಬಿಟ್ಟು ಜಂಗಮರಾಗಿ, ನಾಗರಾಜ ನಾಯಕ ಪದವಿಗೇರಿದ್ದರೂ ಹಿಂದಿನ ಪ್ರಭುಭೃತ್ಯ ಸಾಂಕೇತಿಕವಾಗಿ ಉಳಿದುಕೊಂಡು ಬಂದಿತ್ತು. ಮಾಚಿದೇವರೊಡನೆ ಯಾತ್ರಾ ತಂಡವೊಂದು ಬರುತ್ತಿದೆಯೆಂಬ ಸುದ್ದಿ ತಿಳಿದ ಕೂಡಲೆ ಅವನು ಬಾಗಿಲು ಮುಚ್ಚಿಸುವುದನ್ನು ತಡಮಾಡಿ ಯಾತ್ರಾತಂಡ ಹೊರಗೆ ಹೋಗಲು ಅವಕಾಶ ಮಾಡಿಕೊಟ್ಟನು.

"ನಾನು ಇವರನ್ನು ಹೊಳೆ ದಾಟಿಸಿ ಹಿಂದಿರುಗುತ್ತೇನೆ, ನಾಗರಾಜ ದಿಡ್ಡಿಬಾಗಿಲು ತೆರೆದಿರಲಿ," ಎಂದು ಹೇಳಿ ಮಾಚಿದೇವರು ಯಾತ್ರಾತಂಡದೊಡನೆ ಹೋದರು. ಪ್ರಹರಾನಂತರ ಅವರು ಹಿಂದಿರುಗಿದಾಗ ದಿಡ್ಡಿಯ ಬಾಗಿಲ ಹೊರಗೆ

ಪಂಜಿನ ಬೆಳಕಿನಲ್ಲಿ ಶತಪಥ ತಿರುಗಾಡುತ್ತಿದ್ದ ನಾಗರಾಜ, "ಆ ಜಂಗಮರು ಯಾರು ಅಣ್ಣನವರೆ? ತಂಡದ ನಾಯಕನ ವೇಷ ವಿಚಿತ್ರವಾಗಿತ್ತು?" ಎಂದನು.

ಮಾಚಿದೇವರು ಹೇಳಿದರು : "ನೀವು ಸಪಾದಲಕ್ಷ ದೇಶದ ಹೆಸರು ಕೇಳಿಲ್ಲವೆ? ತಂಡದ ನಾಯಕ ಅಲ್ಲಿಯ ಅರಸನ ಸಹೋದರ. ಪದವಿ ಅಧಿಕಾರಗಳನ್ನು ಬಿಟ್ಟು ಕೊಟ್ಟು ಯಾತ್ರಾತಂಡದ ರಕ್ಷಣೆಗಾಗಿ ಸಂಗಡ ಬಂದಿದ್ದಾರೆ. ಬಸವಣ್ಣನವರ ದರ್ಶನಕ್ಕಾಗಿ ಅವರು ಕೂಡಲಸಂಗಮಕ್ಕೆ ಹೊರಟಿದ್ದಾರೆ."

"ತಂಡದ ನಾಯಕ ಎಲ್ಲ ಆಯುಧಗಳನ್ನೂ ಧರಿಸಿದ ಮಾತ್ರಕ್ಕೆ ತಂಡದ ರಕ್ಷಣೆಯಾಗುವುದೆ?" –ನಾಗರಾಜ ನಸುನಕ್ಕು ಪ್ರಶ್ನಿಸಿದ.

"ನಾನು ನಾಯಕನನ್ನು ಆ ಪ್ರಶ್ನೆ ಕೇಳಿದೆ. ಅದಕ್ಕವನು ಕೊಟ್ಟ ಉತ್ತರ ಅವನ ವೇಷದಷ್ಟೇ ವಿಚಿತ್ರವಾಗಿತ್ತು."

"ಏನು ಹೇಳಿದ, ಅಣ್ಣನವರೇ?"

" 'ನಾನು ಈ ಆಯುಧಗಳನ್ನೆಲ್ಲ ಏಕಕಾಲದಲ್ಲಿ ಧರಿಸಿರುವುದು ತೋರಿಕೆಗಾಗಿ; ಜನರನ್ನು ಹೆದರಿಸಲು. ಎಂತಹ ವೀರನೇ ಆಗಿರಲಿ ಒಬ್ಬನು ಏಕಕಾಲದಲ್ಲಿ ಇಷ್ಟೆಲ್ಲ ಆಯುಧಗಳನ್ನು ಉಪಯೋಗಿಸುವುದು ಸಾಧ್ಯವೆ? ನಮ್ಮ ತಂಡದಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ರಜಪೂತರಿದ್ದಾರೆ. ತಂಡದಲ್ಲಿರುವ ಪ್ರತಿಯೊಬ್ಬರಿಗೂ ಆಯುಧಗಳ ಉಪಯೋಗ ಅಭ್ಯಾಸವಾಗಿದೆ. ಸಮಯ ಬಂದಾಗ ಅವರು ತಮ್ಮ ಕೈಯಲ್ಲಿರುವ ದಂಡಗಳಿಂದಲೆ ಶತೃವನ್ನೆದುರಿಸಬಲ್ಲರು,' ಎಂದು."

"ಬಸವಣ್ಣನವರ ಕೀರ್ತಿ ಆ ದೂರದೇಶದವರೆಗೆ ಹರಡಿದ್ದು ಹೇಗೆ, ಅಣ್ಣನವರೆ?"

"ಸಾಧು ಸಂತರೆಂದರೆ ನಮ್ಮವರಿಗೆ ಅಷ್ಟೊಂದು ಆದರ, ನಾಗರಾಜ. ಈಗ ಚಾಲುಕ್ಯರಾಜ್ಯದ ಅರಸು ಯಾರೆಂಬುದು ಕೂಡ ಆ ದೇಶದ ಜನಕ್ಕೆ ತಿಳಿಯದು. ಆದರೆ ಬಸವಣ್ಣನವರ ಹೆಸರನ್ನು ಮಾತ್ರ ಅವರೆಲ್ಲ ಕೇಳಿದ್ದಾರೆ. ಅಂತಹ ಮಹಾತ್ಮರನ್ನು ರಾಜಧಾನಿಯಿಂದ ಹೊರಗೆ ಕಳುಹಿಸಿ ಬಿಜ್ಜಳರಾಯರು ಅನ್ಯಾಯ ಮಾಡಿದರು."

ಮಾಚಿದೇವರು ರಾಜ್ಯ ರಾಜಕೀಯಗಳ ವಿಚಾರ ಹೇಳಿದಾಗ ಮೌನವಾಗಿ ಸುಮ್ಮನಿರುವುದು ನಾಗರಾಜನ ಪದ್ಧತಿಯಾಗಿತ್ತು. ಕಲ್ಯಾಣದ ಸುತ್ತು ಮುತ್ತಿನ ಗ್ರಾಮಪ್ರದೇಶಗಳಲ್ಲಿ ಮಾಚಿದೇವರ ಆಜ್ಞೆ ಆದೇಶಗಳು ರಾಜಾಜ್ಞೆಯಂತೆಯೇ ನಡೆಯುವುದೆಂಬುದು ಅವನಿಗೆ ತಿಳಿದಿತ್ತು. ಗಣಾಚಾರಿ ಭಕ್ತರ ಒಂದು ಸೈನ್ಯದಳವನ್ನೇ ಮಾಚಿದೇವರು ರಚಿಸುತ್ತಿರುವುದಾಗಿ ಜನ ಹೇಳುವುದನ್ನು ಅವನು ಕೇಳಿದ್ದನು. ಈ ಬಗೆಯ ಸುದ್ದಿ ಸುಳುಹುಗಳನ್ನು ಕೇಳಿದರೂ ಕೇಳದಂತಿರುವುದು ಸೈನ್ಯಾಧಿಕಾರಿ

ಅನುಸರಿಸಬೇಕಾದ ಆತ್ಮರಕ್ಷಕ ನೀತಿಯೆಂದು ತಿಳಿದು ಅವನು ಸುಮ್ಮನಿದ್ದನು.

"ನಾಳೆ ಮುಂಜಾವಿಗೆ ನಗರವನ್ನು ತ್ಯಜಿಸಲು ನಾವು ನಿರ್ಧರಿಸಿದ್ದೇವೆ, ನಾಗರಾಜ. ನಮ್ಮ ಗಾಡಿಗಳು, ಶರಣರ ತಂಡ, ಬ್ರಹ್ಮಮುಹೂರ್ತದಲ್ಲಿ ಮಹಮನೆಯನ್ನು ಬಿಟ್ಟು ಮಹಾದ್ವಾರದಲ್ಲಿ ಬಂದು ನಿಲ್ಲುವುದು. ನೀವು ಅರ್ಧ ಘಳಿಗೆ ಮೊದಲು ಬಾಗಿಲು ತೆಗೆಸಿದರೆ, ಜನಸಂದಣಿ ಪ್ರಾರಂಭವಾಗುವ ಮೊದಲೆ ಹೊಳೆದಾಟಲು ಅನುಕೂಲ." –ಹೊರಡುವ ಮೊದಲು ಮಾಚಿದೇವರು ನಾಗರಾಜನಿಗೆ ರಹಸ್ಯವಾಗಿ ಹೇಳಿದರು.

"ಸೂರ್ಯೋದಯಕ್ಕೆ ಬಾಗಿಲು ತೆರೆದು ಸೂರ್ಯಾಸ್ತಕ್ಕೆ ಮುಚ್ಚಬೇಕೆಂದು ರಾಜಾಜ್ಞೆ, ಅಣ್ಣನವರೆ. ನಾಳೆ ನಾನು ಮೂಡಣ ದಿಕ್ಕಿನಲ್ಲಿ ಸೂರ್ಯನ ಬೆಳಕು ಕಂಡ ಕೂಡಲೆ ಬಾಗಿಲು ತೆಗೆಸುತ್ತೇನೆ. ಮಹಮನೆಯ ಗಾಡಿಗಳಿಂದ ಜನ ಸಂಚಾರಕ್ಕೆ ಅಡ್ಡಿಯಾಗದಿರಲೆಂಬುದು ನನ್ನ ಉದ್ದೇಶ." ಎಂದು ನಾಗರಾಜ ಎಚ್ಚರದಿಂದ ಉತ್ತರ ಕೊಟ್ಟನು.

ದಿಡ್ಡಿ ಬಾಗಿಲಿಂದ ನಗರವನ್ನು ಪ್ರವೇಶಿಸಿ ಮಾಚಿದೇವರು ಮಹಮನೆಯ ಕಡೆ ನಡೆದರು. ನಗರ ಮಧ್ಯದ ಅಂಗಡಿ ಬೀದಿಗಳನ್ನು ಅವರು ದಾಟಿ ಹೋಗಬೇಕಾಗಿತ್ತು.

ಅವರು ಅಂಗಡಿ ಬೀದಿಗೆ ಬಂದಾಗ ಜನರು ಅಲ್ಲಲ್ಲಿ ಸಣ್ಣ ಸಣ್ಣ ಗುಂಪುಗಳಾಗಿ ನಿಂತು ಮಾತಾಡುತ್ತಿರುವುದನ್ನು ಕಂಡರು. ಅಂಗಡಿ ಮುಂಗಟ್ಟುಬಾಗಿಲುಗಳನ್ನು ವರ್ತಕರು ಅವಸರವಸರವಾಗಿ ಮುಚ್ಚುತ್ತಿದ್ದರು. ಯಾವುದೋ ಅದೃಶ್ಯ ಅವ್ಯಕ್ತ ಭೀತಿ ನಗರವನ್ನು ಮಸುಗುತ್ತಿರುವಂತೆ ಭಾಸವಾಯಿತು.

ಪರಿಚಿತನಾದ ಹರದನೊಬ್ಬನನ್ನು ಹತ್ತಿರ ಕರೆದು ಮಾಚಿದೇವರು, "ಸುದ್ದಿಯೇನು ಶೆಟ್ಟರೆ? ಪೇಟೆಯ ಜನರೇಕೆ ಬೆದರಿದಂತೆ ಕಾಣುತ್ತದೆ?" ಎಂದು ಕೇಳಿದರು.

"ಜನ ನಿಜವಾಗಿ ಬೆದರಿದ್ದಾರೆ, ಅಯ್ಯನವರೆ. ಏನು ಕಂಡು ಬೆದರಿದರೋ ಯಾರಿಗೂ ತಿಳಿಯದು. ಬೆದರಿಕೆಯ ಕಾರಣ ವಾಸ್ತವದಲ್ಲಿ ಮಕ್ಕಳಾಟದ ಗುಮ್ಮ ಆದರೂ ಆಗಬಹುದು. ಬರುಬರುತ್ತ ಕಲ್ಯಾಣದ ಬದುಕು ವಿಚಿತ್ರವಾಗುತ್ತಿದೆ."

–ಎಂದು ಶೆಟ್ಟಿ ಮಾರ್ಮಿಕವಾಗಿ ಉತ್ತರ ಕೊಟ್ಟನು.

ಮಾಚಿದೇವರು ಕೆಲವು ಕ್ಷಣಗಳು ಯೋಚಿಸುತ್ತಿದ್ದು, "ಈ ಬೆದರಿಕೆ ಪ್ರಾರಂಭವಾದದ್ದು ಹೇಗೆ?" ಎಂದು ಕೇಳಿದರು.

ಶೆಟ್ಟಿ ಹೇಳಿದನು : "ಕೊಂಚ ಹೊತ್ತಿಗೆ ಮೊದಲು ಧರ್ಮಾಧಿಕರಣದ

ಚಾವಡಿಯ ಕಡೆಯಿಂದ ನಾಲ್ವರು ಓಡುತ್ತ ಅಂಗಡಿ ಬೀದಿಗೆ ಬಂದು, 'ಅನಾಹುತ! ಲೂಟಿ ! ಬಾಗಿಲು ಮುಚ್ಚಿರಿ !' ಎಂದು ಕೂಗಿಕೊಂಡರು. ಕೆಲವು ದಿನಗಳಿಂದ ನಗರದಲ್ಲಿ ಮಾಧವ ನಾಯಕನ ಸೈನಿಕರ ತಿರುಗಾಟ ಹೆಚ್ಚುತ್ತಿರುವುದನ್ನು ಕಂಡು ಬೆದರಿದ ಜನ, ನಗರದಲ್ಲಿ ಎಲ್ಲಿಯೋ ಗಲಭೇ ಲೂಟಿ ನಡೆಯುತ್ತಿರಬೇಕೆಂದು ಭಾವಿಸಿ ಅಂಗಡಿಗಳನ್ನು ಮುಚ್ಚುತ್ತಿದ್ದಾರೆ."

ಮಾಚಿದೇವರು ನಕ್ಕು ನುಡಿದರು : "ವಾಣಿಜ್ಯ ವ್ಯವಹಾರಗಳು ಲಕ್ಷ್ಮೀ ಸರಸ್ವತಿಯರಂತೆ, ಶೆಟ್ಟರೆ. ವಾಣಿಜ್ಯದಲ್ಲಿ ಚತುರರಾದ ನೀವು ವ್ಯವಹಾರದಲ್ಲಿ ಮಂದಮತಿಗಳು. ಮಾಧವ ನಾಯಕನ ಸೈನ್ಯ ನಗರಕ್ಕೆ ಬಂದಿರುವುದು ನಿಮ್ಮ ರಕ್ಷಣೆಗಾಗಿಯೇ ಅಲ್ಲವೆ?" ಎಂದರು.

ಹರದನ ಸಂಗಡಿದ್ದ ಗೆಳೆಯ ನಡುವೆ ಬಂದು ಹೇಳಿದನು : "ರಕ್ಷಣೆಗೋ ಭಕ್ಷಣೆಗೋ ಯಾರು ಕಂಡರು, ಅಯ್ಯನವರೆ. ಸರ್ವಾಧಿಕಾರಿಗಳು ಮಾಧವ ನಾಯಕನನ್ನು ಭಾಗಾನಗರದಿಂದ ಕರೆಸಿದ್ದು ಕಲ್ಯಾಣದ ಮಠ ಮಂದಿರಗಳ ವಿನಾಶಕ್ಕಾಗಿಯೇ ಎಂದು ಸುದ್ದಿ ಹರಡಿದೆ. ಈ ಸಂಜೆ ಧರ್ಮಾಧಿಕರಣದ ಚಾವಡಿಯಲ್ಲಿ ರಹಸ್ಯ ಸಭೆ ನಡೆದಾಗ ಆ ವಿಚಾರ ಚರ್ಚಿಸಲ್ಪಟ್ಟಿತಂತೆ."

ಮಾಚಿದೇವರ ತೀವ್ರ ದೃಷ್ಟಿ ಅಪರಿಚಿತ ಹರದನ ಕಡೆ ತಿರುಗಿತು. "ಸಂಜೆ ನಡೆದ ರಹಸ್ಯ ಸಭೆಯ ವಿಚಾರ ಇಷ್ಟು ಬೇಗ ನಿನಗೆ ತಿಳಿದದ್ದು ಹೇಗೆ, ತಮ್ಮ ಹಲ್ಲಿ ಶಕುನ ನುಡಿಯಿತೆ? ಅಥವಾ ನೀನೇ ಹಲ್ಲಿಯಾಗಿ ಸಭಾಂಗಣದ ಸೂರಿನಲ್ಲಿ ಕುಳಿತಿದ್ದೆಯ?" ಎಂದರು ಅವರು.

"ರಾಜಸಭೆಯ ರಹಸ್ಯ, ರಹಸ್ಯವಾಗಿಯೇ ಉಳಿಯುವುದು ಸಭೆ ಮುಗಿಯುವವರೆಗೇ, ಅಯ್ಯನವರೆ. ಆಮೇಲೆ ಅದು ರಹಸ್ಯವೆಂದೇ ಕಿವಿಯಿಂದ ಕಿವಿಗೆ ಪ್ರಚಾರವಾಗುವುದು. ಮಠ ಮಂದಿರಗಳನ್ನು ನಾಶಮಾಡುವ ವಿಚಾರ ಮಾಧವ ನಾಯಕನು ಸಭೆಯ ಮುಂದಿಟ್ಟಾಗ ಕರ್ಣದೇವರಸರು ವಿರೋಧಿಸಿದರಂತೆ, ಮಾತಿಗೆ ಮಾತು ಬೆಳೆದು ಕರ್ಣದೇವರಸರು ಕೋಪದಿಂದ ಸಭೆಯನ್ನು ಬಿಟ್ಟು ಹೋದರಂತೆ."

–ಹರದನು ದನಿ ತಗ್ಗಿಸಿ ಉತ್ತರ ಕೊಟ್ಟನು.

"ಆಮೇಲೆ ಸಭೆಯಲ್ಲಿ ಏನು ನಡೆಯಿತಂತೆ?"

"ಸರ್ವಾಧಿಕಾರಿಗಳು ಸಲಹೆಯನ್ನು ಅನುಮೋದಿಸಿ ಅದನ್ನು ಕಾರ್ಯಗತ ಮಾಡುವ ಹೊಣೆಯನ್ನು ಮಾಧವ ನಾಯಕನಿಗೇ ವಹಿಸಿದರಂತೆ."

"ಮಠ ಮಂದಿರಗಳು ನಾಶವಾದರೆ ನಿಮಗಾದ ನಷ್ಟವೇನು? ಅದಕ್ಕೆ

ನೀವೇಕೆ ಹೆದರಬೇಕು ?"

"ಹೆದರಿಕೆಗೆ ಇನ್ನೊಂದು ಕಾರಣವಿದೆ, ಅಯ್ಯನವರೆ."

"ಯಾವ ಕಾರಣ ಅದು?"

ರಹಸ್ಯಸಭೆ ಮುಗಿದ ಮೇಲೆ ಸರ್ವಾಧಿಕಾರಿಗಳು ಕಲಚೂರ್ಯ ಅರಮನೆಗೆ ಹಿಂದಿರುಗಿದರು. ಆಮೇಲೆ ಅಲ್ಲಿ ಏನೋ ಅನಾಹುತ ನಡೆಯಿತಂತೆ. ಮಾಧವ ನಾಯಕನ ಸೈನಿಕರು ಅರಮನೆಯ ಸುತ್ತ ಕಾವಲಿದ್ದಾರೆ.

"ಅರಮನೆಯಲ್ಲಾದ ಅನಾಹುತವೇನು?"

"ಅನಾಹುತದ ಸುದ್ದಿ ಕೇಳಿ ಜನರು ತಲ್ಲಣಗೊಂಡಿದ್ದಾರೆ. ಅನಾಹುತವೇನೆಂದು ಯಾರಿಗೂ ತಿಳಿಯದು."

"ಅನಾಹುತವೇನೆಂದು ಎಲ್ಲರಿಗೂ ತಿಳಿದಿದೆ. ಬಾಯಿಂದ ಅದನ್ನು ಹೇಳುವ ಧೈರ್ಯ ಯಾರಿಗೂ ಇಲ್ಲ," ಎಂದು ಭಾವಿಸಿ ಮಾಚಿದೇವರು ಪ್ರಕಟವಾಗಿ, "ಈ ರಹಸ್ಯ ನಿಮಗೇಕೆ? ಮನೆಗಳಿಗೆ ಹೋಗಿ ಬಾಗಿಲುಗಳನ್ನು ಭದ್ರಪಡಿಸಿ ಮಲಗಿಕೊಳ್ಳಿ. ಬೆಳಗಾದರೆ ಅದು ತಾನಾಗಿ ತಿಳಿಯುವುದು," ಎಂದು ಹೇಳಿ ಅಲ್ಲಿಂದ ಹೊರಟರು.

ಪ್ರಜೆಗಳ ಸ್ತಬ್ಧತೆ ಹೆಪ್ಪು ಕಟ್ಟಿದಂತೆ ಎಲ್ಲ ಕಡೆ, ಕಿವಿಯಿಂದ ಕೇಳದೆ ಕಣ್ಣಿಂದ ಕಾಣಬಹುದಾದ ಚಿರಮೌನ....ಬೀದಿಗಳಲ್ಲಿ ಜನರ ಸುಳಿವೂ ಇಲ್ಲ. ಹಚ್ಚಿಟ್ಟ ದೀಪಗಳ ಬೆಳಕು ಹೊರಗೆ ಕಾಣದಂತೆ ಎಲ್ಲ ಮನೆಗಳ ಕಿಟಕಿ ಬಾಗಿಲುಗಳು ಮುಚ್ಚಲ್ಪಟ್ಟಿವೆ. ಮಧ್ಯರಾತ್ರಿಯವರೆಗೆ ಬೆಳಕು ಹಚ್ಚಿ ಬಾಗಿಲು ತೆರೆದಿರುತ್ತಿದ್ದ ನಗರದ ಮುಖ್ಯ ಶೈವಮಠಗಳ ಮುಂದೆ ಕೂಡಾ ಕಗ್ಗತ್ತಲು ; ಬಾಗಿಲುಗಳು ಬಂಧಿಸಲ್ಪಟ್ಟಿವೆ. ನಗರದ ಶೈವಮಠಗಳನ್ನು ನಾಶಮಾಡಲು ಬಿಜ್ಜಳನು ನಿರ್ಧರಿಸಿರುವನೆಂದು ಮಾಚಿದೇವರಿಗೆ ತಿಳಿದಿತ್ತು. ಅದರ ಮುನ್‌ಸೂಚನೆಯೋ ಇದು ? ಯಾವುದೋ ಅನಿರೀಕ್ಷಿತ ಅಪಘಾತದಿಂದ ಜನಶೂನ್ಯವಾದ ಹಾಳೂರಲ್ಲಿ ನಡೆಯುತ್ತಿರುವೆನೇ ನಾನು? ಎಂದು ಚಿಂತಿಸುತ್ತ ಮಾಚಿದೇವರು ಮಹಮನೆಯನ್ನು ಸೇರಿದರು.

ಅಲ್ಲಿಯೂ ಅದೇ ಸ್ಥಿತಿ. ನಗರದ ಸ್ತಬ್ಧತೆ ತಮಂಧಗಳು ಮಹಮನೆಯನ್ನೂ ಮಸಗಿದ್ದಂತೆ ಕಂಡಿತು. ಮಹಾದ್ವಾರದ ಬಳಿ ಹೋಗಿ ನೋಡಿದರು. ಬಾಗಿಲು ಹಾಕಿತ್ತು. ಪಾರ್ಶ್ವದ ದಿಡ್ಡಿ ಬಾಗಿಲಿಗೆ ಹೋಗಿ ಮೆಲ್ಲನೆ ತಟ್ಟಿದರು. ಒಳಗಿನಿಂದ, "ಯಾರು?" ಎಂಬ ಧ್ವನಿ ಕೇಳಿಸಿತು, ಬಂದಿರುವವರು ಮಾಚಿದೇವರೇ ಎಂದು ತಿಳಿದ ಮೇಲೆ ಒಳಗಿದ್ದವರು ಬಾಗಿಲು ತೆರೆದರು.

"ದೀಪಗಳನ್ನಾರಿಸಿ ಹೆಬ್ಬಾಗಿಲನ್ನೇಕೆ ಮುಚ್ಚಿದಿರಿ? ಚೆನ್ನಬಸವಣ್ಣನವರೆಲ್ಲಿದ್ದಾರೆ?"

ಅಲ್ಲಿದ್ದ ಭಟರನ್ನು ಕೇಳಿದರು ಮಾಚಿದೇವರು.

"ಚಿಕ್ಕ ದಣ್ಣಾಯಕರ ಆಜ್ಞೆಯಂತೆ ನಾವು ದೀಪಗಳನ್ನು ಆರಿಸಿ ಬಾಗಿಲುಗಳನ್ನು ಭದ್ರಪಡಿಸಿದೆವು, ಅಯ್ಯನವರೆ, ಶರಣರೆಲ್ಲ ಅನುಭವಮಂಟಪದ ಸಭಾಂಗಣದಲ್ಲಿದ್ದಾರೆ," ಎಂದು ಹೇಳಿ ಅವರು ದಿಡ್ಡಿ ಬಾಗಿಲನ್ನು ಪುನಃ ಭದ್ರಗೊಳಿಸಿ ಮಾಚಿದೇವರನ್ನು ಸಭಾಂಗಣಕ್ಕೆ ಕರೆದುಕೊಂಡು ಹೋದರು.

ಸಭಾಂಗಣದಲ್ಲಿ ವೇದಿಕೆಯ ಮೇಲೆ ಎರಡು ದೀಪಸ್ತಂಭಗಳಲ್ಲಿ ಮಾತ್ರ ದೀಪಗಳು ಮಸಕಾಗಿ ಉರಿಯುತ್ತಿದ್ದವು. ಅಧ್ಯಕ್ಷಪೀಠದಲ್ಲಿ ಸಕಲೇಶ ಮಾದರಸರು. ನಾಗಲಾಂಬೆ ನೀಲಲೋಚನೆಯರು ಅಧ್ಯಕ್ಷರ ಎದುರಿಗೆ ಕುಳಿತು ಮೆಲ್ದನಿಯಲ್ಲಿ ವಚನ ಗೀತಗಳನ್ನು ಹಾಡುತ್ತಿದ್ದರು. ಸಭಾಂಗಣದ ಉಳಿದ ಭಾಗವೆಲ್ಲ ಕತ್ತಲು. ವಲಸೆ ಹೊರಡಲು ಸಿದ್ಧರಾಗಿದ್ದ ಶರಣೆಯರು ಅಲ್ಲಿ ಪ್ರತ್ಯೇಕವಾಗಿ ಕುಳಿತು ವಚನಗೀತಗಳನ್ನು ಕೇಳುತ್ತಿದ್ದರು.

ಮಾಚಿದೇವರು ಚೆನ್ನಬಸವಣ್ಣನವರ ಬಳಿ ಹೋಗಿ ಕುಳಿತು, "ನಾನು ಅತಿಥಿಗಳನ್ನು ಹೊಳೆ ದಾಟಿಸಿ ಬರುವಷ್ಟರಲ್ಲಿ ಇಲ್ಲಿ ಏನೋ ನಡೆದಂತಿದೆ!" ಎಂದರು.

ಧ್ಯಾನಮಗ್ನರಂತೆ ಮೌನವಾಗಿ ಕುಳಿತಿದ್ದ ಚೆನ್ನಬಸವಣ್ಣನವರು ಕಣ್ತೆರೆದು ಮಾಚಿದೇವರ ಮೇಲೆ ಭರವಸೆಯ ದೃಷ್ಟಿ ಬೀರಿ, "ಬಂದಿರಾ ಅಣ್ಣ ! ನೀವು ಹೋದ ಮೇಲೆ ತಲ್ಲಣಗೊಳಿಸುವ ಘಟನೆಯೊಂದು ಇಲ್ಲಿ ನಡೆಯಿತು. ಅದರಿಂದಲೆ ದೀಪಗಳನ್ನು ಆರಿಸಿ ಬಾಗಿಲುಗಳನ್ನು ಭದ್ರಪಡಿಸುವಂತೆ ಹೇಳಿದೆ," ಎಂದರು.

"ಏನು ನಡೆಯಿತು?"

"ಸಂಜೆ ಮುಗಿದು ಕತ್ತಲೆ ಕವಿಯುತ್ತಿದ್ದಂತೆ ಮಹಾದ್ವಾರದಲ್ಲಿ ಕಾವಲಿದ್ದ ಶರಣ ಭಟರು, ಮಾಧವ ನಾಯಕನ ಸೈನ್ಯದಳಗಳು ಮಹಮನೆಯನ್ನು ಸುತ್ತುಗಟ್ಟುತ್ತಿರುವುದಾಗಿ ಹೇಳಿದರು. ನಾನೇ ಹೊರಗೆ ಹೋಗಿ ನೋಡಿದೆ. ಮಹಮನೆಯ ಸುತ್ತ ಸುಮಾರು ಐನೂರು ಮಾರು ದೂರದಲ್ಲಿ ಸೈನ್ಯದಳಗಳು ಪಹರೆಯಿದ್ದವು. ತ್ರಿಪುರಾಂತಕ ಕೆರೆಯ ಪಾರ್ಶ್ವದ ಹಾದಿಯಿಂದ ಸೈನ್ಯದಳಗಳು ಬರುತ್ತಿದ್ದವು. ಮಹಮನೆಯನ್ನು ಮುತ್ತುವುದು ಉದ್ದೇಶವೆಂದು ನಾನು ಭಾವಿಸಿದೆ. ದೀಪಗಳನ್ನು ಆರಿಸಿ ಬಾಗಿಲುಗಳನ್ನು ಬಂಧಿಸುವಂತೆ ಆಜ್ಞೆ ಮಾಡಿದೆ. 'ಈ ವಿಪತ್ತಿನಲ್ಲಿ ನಾವೇನು ಮಾಡುವುದು?' ಎಂದು ಸಕಲೇಶ ಮಾದರಸರನ್ನು ಕೇಳಿದೆ. ಅವರು ಹೇಳಿದರು 'ಮಹಮನೆಯನ್ನು ನಾಶಮಾಡುವುದು ಮಾಧವ ನಾಯಕನ ಉದ್ದೇಶವಾದರೆ ಅದನ್ನು ಎದುರಿಸುವ ಶಕ್ತಿ ನಮಗಿಲ್ಲ. ಮಹಮನೆಯೊಡನೆ ನಾವೂ ನಾಶವಾಗಲು

ಸಿದ್ಧರಾಗಬೇಕು. ಹಾಗಲ್ಲದೆ ನಾವು ವಲಸೆ ಹೋಗುವುದನ್ನು ತಡೆಯುವುದಕ್ಕಾಗಿ ಅವರು ಮಹಮನೆಯನ್ನು ಸುತ್ತುಗಟ್ಟಿದ್ದರೆ ಮುಂದೇನಾಗುವುದೆಂದು ಕಾದು ನೋಡಬೇಕಾಗುವುದು,' ಎಂದು. ಆಗ ನಾನು ಶಿವನಿಚ್ಛೆಯಂತೆ ನಡೆಯಲಿ ಎಂದು ನಿಶ್ಚಯ ಮಾಡಿಕೊಂಡು ಇಲ್ಲಿಗೆ ಬಂದೆ. ನಾವು ಎಂತಹ ವಿಪತ್ತಿನಲ್ಲಿ ಬಿದ್ದಿರುವೆವೆಂದು ಅವರಿಗೆ ವಿವರಿಸಿ ವಚನಗಾನವನ್ನು ಕೇಳುತ್ತ ಶಿವನಲ್ಲಿ ಮನವಿಟ್ಟು ಮೌನವಾಗಿ ಕುಳಿತಿರಬೇಕೆಂದು ಹೇಳಿದೆ. ನೀವು ಬಂದ ಕೂಡಲೆ ಇಲಿಗೆ ಕರೆತರಬೇಕೆಂದು ಹೇಳಿ ಶರಣರಿಬ್ಬರನ್ನು ದಿಡ್ಡಿಯ ಬಾಗಿಲ ಬಳಿ ಕಾವಲಿರಲು ಕಳುಹಿಸಿದೆ. ಇದು ಇಲ್ಲಿಯ ಸಮಾಚಾರ."

ಚೆನ್ನಬಸವಣ್ಣನವರ ನುಡಿಗಳಲ್ಲಿ ಭಯದ ಸೂಚನೆಯಿರಲಿಲ್ಲ. ದೃಢಕಂಠದಿಂದ ನಿರ್ಲಿಪ್ತರಂತೆ ಅವರು ನಡೆದುದನ್ನು ಹೇಳಿದರು.

ಮಾಚಿದೇವರು ನಗರದಲ್ಲಿ ತಾವು ಕಂಡಿದ್ದನ್ನು ವಿವರಿಸಿ, "ನಾನು ಬಂದಾಗ ಮಹಮನೆಯ ಸಮೀಪ ಎಲ್ಲಿಯೂ ಸೈನ್ಯದ ಸುಳಿವಿರಲಿಲ್ಲ. ಮಹಮನೆಯನ್ನು ಸುತ್ತುಗಟ್ಟುವುದರಲ್ಲಿ ಮಾಧವ ನಾಯಕನ ಉದ್ದೇಶ ಮೊದಲು ಏನೇ ಇರಲಿ, ಆಮೇಲೆ ಕಲಚೂರ್ಯ ಅರಮನೆಯಲ್ಲಿ ನಡೆದ ಘಟನೆಗಳಿಂದ ಅದು ಬದಲಾವಣೆಯಾಗಿರಬೇಕು. ಅದರಿಂದಲೆ ಅವನು ಸೈನ್ಯದಳವನ್ನು ಹಿಂದಕ್ಕೆ ಕರೆಸಿಕೊಂಡಿದ್ದಾನೆ. ಅರಮನೆಯಲ್ಲಿ ಏನು ನಡೆಯಿತೆಂಬುದು ಯಾರಿಗೂ ತಿಳಿಯದು. ಅದೇನೇ ಇರಲಿ, ಅದರ ಫಲವಾಗಿ ಈ ರಾತ್ರಿ ನಗರದಲ್ಲಿ ಬಿಜ್ಜಳನ ಆಡಳಿತ ಸ್ತಂಭಿತವಾಗಿದೆ. ಮಾಧವ ನಾಯಕನ ಸೈನ್ಯದಳಗಳು, ನಗರ ರಕ್ಷಕ ಪಡೆ, ಕಲಚೂರ್ಯ ಅರಮನೆಯ ಸಮೀಪದಲ್ಲಿವೆ. ಮೊದಲೇ ಗೊತ್ತಾಗಿದ್ದಂತೆ ಮಹಮನೆಯನ್ನು ನಾವು ಕೂಡಲೇ ಬಿಡಬೇಕು."

ಮಾಚಿದೇವರು ಮಾತನಾಡುತ್ತಿದ್ದಂತೆ ಸಕಲೇಶ ಮಾದರಸರು ವೇದಿಕೆಯಿಂದಿಳಿದು ಅಲ್ಲಿಗೆ ಬಂದರು. ಮಾಚಿದೇವರು ಮೊದಲಿಂದ ಎಲ್ಲವನ್ನೂ ಮತ್ತೊಂದು ಸಾರಿ ವಿವರಿಸುವುದು ಅಗತ್ಯವಾಯಿತು.

ಕೊನೆಗೆ ಚೆನ್ನಬಸವಣ್ಣನವರು ಹೇಳಿದರು : "ಈಗ ನಾವು ವಿಷಮ ಸಂಕಟದಲ್ಲಿ ಬಿದ್ದಿದ್ದೇವೆ. ನಾವು ವಲಸೆ ಹೋಗದಂತೆ ತಡೆಯುವುದು ಬಿಜ್ಜಳರಾಯರ ಉದ್ದೇಶವಾದರೆ, ನಗರದ ಮಹಾದ್ವಾರಗಳಿಗೆ ಆಗಲೆ ಆಜ್ಞೆ ಕಳುಹಿಸಲ್ಪಟ್ಟಿರುತ್ತದೆ. ಕಾವಲು ಭಟರು ನಮ್ಮನ್ನು ತಡೆದರೆ ಪುನಃ ಮಹಮನೆಗೆ ಹಿಂದಿರುಗಬೇಕಾಗುವುದು. ಆದ್ದರಿಂದ ಸೂರ್ಯೋದಯದವರೆಗೆ ಕಾದು ನೋಡಿ ಅನಂತರ ಮುಂದೇನು ಮಾಡಬೇಕೆಂಬುದನ್ನು ನಿರ್ಧರಿಸಬಹುದು."

ಅಸಮಾಧಾನದ ಬಿರುದನಿಯಿಂದ ಮಾಚಿದೇವರು ಹೇಳಿದರು : "ನಿಮ್ಮ ಈ ಅಸ್ಥಿರ ಮನೋವೃತ್ತಿ ನನ್ನನ್ನು ಬೇಸರಗೊಳಿಸುತ್ತಿದೆ, ಚೆನ್ನಬಸವಣ್ಣನವರೆ. ಕಲಚೂರ್ಯ ಅರಮನೆಯ ದುರ್ಘಟನೆ ಏನೇ ಇರಲಿ, ಅದರಿಂದ ನಮಗೆ ಸಹಾಯವಾಗುವುದಿಲ್ಲ. ನಮಗೆ ತಿಳಿಯದ ಯಾವುದೋ ಕಾರಣದಿಂದ ಸದ್ಯದಲ್ಲಿ ಸ್ತಂಭಿತವಾಗಿರುವ ಮಾಧವ ನಾಯಕನ ಸೈನ್ಯ ನಾಳೆ ಎಚ್ಚೆತ್ತು ಶೈವಮಠಗಳನ್ನು ನಾಶಮಾಡುವ ಆಜ್ಞೆ ಕಾರ್ಯಗತವಾಗಬಹುದು. ಶಿವನ ಕರುಣೆಯಿಂದ ನಮಗೆ ದೊರಕಿರುವ ಈ ಸದವಕಾಶವನ್ನು ಉಪಯೋಗಿಸಿಕೊಳ್ಳಲು ನಾವು ಅಸಮರ್ಥರಾದರೆ ಕಲ್ಯಾಣದ ಮೃತ್ಯುಪಂಜರದಿಂದ ಪಾರಾಗುವ ಆಸೆಯನ್ನೇ ಕೈಬಿಡಬೇಕಾಗುವುದು. ಅಲ್ಲದೆ...." ಎಂದು ಮಾಚಿದೇವರು ಸಕಲೇಶ ಮಾದರಸರ ಮುಖ ನೋಡಿದರು.

"ನೀವು ಹೇಳುವುದನ್ನೆಲ್ಲ ಹೇಳಿ ಮುಗಿಸಿ ಮಾಚಿದೇವಯ್ಯನವರೇ, ಕೊನೆಯಲ್ಲಿ ನನ್ನ ನಿರ್ಧಾರ ತಿಳಿಸುತ್ತೇನೆ," ಎಂದರು ಸಕಲೇಶ ಮಾದರಸರು.

ಮಾಚಿದೇವರು ಮುಂದುವರಿಸಿ ಹೇಳಿದರು : "ಶರಣರನ್ನು ಉಳಿವೆಗೆ ಸುರಕ್ಷಿತವಾಗಿ ಕರೆದುಕೊಂಡು ಹೋಗುವೆನೆಂಬ ನನ್ನ ಶಪಥವನ್ನು ನೀವು ಕೇಳಿದ್ದೀರಿ. ಆದರೆ ಶರಣರು ಕಲ್ಯಾಣದಲ್ಲಿರುವವರೆಗೆ ನಾನು ನಿರುಪಾಯನು. ನನ್ನ ಈ ಎರಡು ತೋಳುಗಳಿಂದ ನಿಮ್ಮನ್ನು ರಕ್ಷಿಸುವುದು ಸಾಧ್ಯವಲ್ಲ. ನೀವು ಕಲ್ಯಾಣವನ್ನು ಬಿಟ್ಟು ಹೊರಗೆ ಬಂದು ಆಂಜನೇಯ ಹೊಳೆಯನ್ನು ದಾಟಿದರೆ ನನ್ನ ಗಣಾಚಾರದ ಐದು ಸಹಸ್ರ ವೀರಯೋಧರು ನಿಮ್ಮ ಸಹಾಯಕ್ಕೆ ನಿಲ್ಲುವರು. 'ಅವರು ನಿಮ್ಮನ್ನು ಸುರಕ್ಷಿತವಾಗಿ ಉಳಿವೆಗೆ ಕರೆದೊಯ್ಯಲು ಸಮರ್ಥರು."

ಚೆನ್ನಬಸವಣ್ಣನವರು ಮೌನ.

ಸಕಲೇಶ ಮಾದರಸರು ಹೇಳಿದರು : "ಮಾಚಿದೇವರ ಸಲಹೆ ಯುಕ್ತಿಯುಕ್ತವಾಗಿದೆ. ನಾವು ಮೊದಲೆ ಗೊತ್ತು ಮಾಡಿಕೊಂಡಿದ್ದಂತೆ ಮಧ್ಯರಾತ್ರಿಗೆ ಮಹಮನೆಯನ್ನು ಬಿಡುವುದು ಸರಿಯಾದ ಮಾರ್ಗ,"

ಚೆನ್ನಬಸವಣ್ಣನವರು ಒಪ್ಪಿ ಸಭೆ ಮುಗಿಸಲು ಸೂಚನೆ ಕೊಟ್ಟರು. ವಲಸೆಗಾಗಿ ಪಾತ್ರೆ ಪದಾರ್ಥ ಪರಿಕರಗಳನ್ನು ತುಂಬಿದ ಗಾಡಿಗಳು ಸಿದ್ಧವಾಗಿ ನಿಂತಿದ್ದವು. ಅರ್ಧಘಳಿಗೆಯ ಅನಂತರ ಶರಣರೆಲ್ಲ ಮೌನವಾಗಿ ಮಹಮನೆಯನ್ನು ಬಿಟ್ಟರು,– ಮುಕ್ತಜೀವಿಯ ಆತ್ಮಚೈತನ್ಯ ಉತ್ಕ್ರಮಣ ಕಾಲದಲ್ಲಿ ನಿರ್ಲಿಪ್ತ ಭಾವದಿಂದ ದೇಹವನ್ನು ಬಿಡುವಂತೆ, ನಿರ್ಜೀವ ದೇಹ ಕೊನೆಯುಸುರಿಂದ ಕೊನೆಯ ಸಾರಿ ಚಲಿಸುವಂತೆ, ತೆರೆದು ಬಿಟ್ಟ ಮಹಮನೆಯ ಕಿಟಕಿ ಬಾಗಿಲುಗಳು ಮಧ್ಯರಾತ್ರಿಯ ಸುಳಿಗಾಳಿಯಿಂದ ಚಲಿಸಿ ಹಚ್ಚಿಟ್ಟ ದೀಪಗಳು ಆರಿದವು.

ಸ್ತಬ್ಧವು ನಿರ್ಜೀವವೂ ಆಗಿದ್ದ ನಗರದ ಬೀದಿಗಳಲ್ಲಿ ಶರಣರು ಚಲಿಸುವ ದೀಪಗಳಂತೆ ಅವ್ಯಕ್ತ ಅಗೋಚರ ಆತ್ಮಕಾಂತಿಯನ್ನು ಹರಡುತ್ತ ನಡೆದರು. ಮುಂದೆ ಮಡಿವಾಳ ಮಾಚಿದೇವರು, ಸಕಲೇಶ ಮಾದರಸರು ಮತ್ತು ಚೆನ್ನಬಸವಣ್ಣನವರು. ಅವರ ಹಿಂದೆ ಪಾತ್ರೆ ಪರಿಕರಗಳಿಂದ ತುಂಬಿದ ಗಾಡಿಗಳು, ಅವುಗಳ ಹಿಂದೆ ನಾಗಲಾಂಬೆ ನೀಲಲೋಚನೆ ಗಂಗಾಂಬಿಕೆಯರ ನೇತೃತ್ವದಲ್ಲಿ ಶರಣೆಯರು, ಅವರ ಹಿಂದೆ ಸೊಡ್ಡಲ ಬಾಚರಸ, ಪಡಿಹಾರಿ ಉತ್ತಣ್ಣ, ಶೂಲದ ಬೊಮ್ಮಯ್ಯ, ಇವರ ನೇತೃತ್ವದಲ್ಲಿ ಶರಣರು, ಈ ರೀತಿ ನಡೆದಿತ್ತು ಆ ಚರಿತ್ರಾರ್ಹ ವಲಸೆಯ ಯಾತ್ರಾದಳ.

ನಗರದ ನೈರುತ್ಯ ಬಾಗಿಲಿಗೆ ಬರುತ್ತಲೆ ಮಾಚಿದೇವರು ಪೂರ್ವ ಸಂಕೇತದಂತೆ "ಕಲಿದೇವರದೇವ ಪರಾಕ್ !" ಎಂದು ಉಗ್ಗಡಿಸಿದರು. ಪಾರ್ಶ್ವದ ಮಂಟಪದಲ್ಲಿ ಕಾದು ನಿಂತಿದ್ದ ಕಾವಲು ಪಡೆಯ ನಾಯಕ ನಾಗರಾಜನು ಎದುರಿಗೆ ಬಂದು ವಂದಿಸಿ, "ಮೂಡಣ ದಿಕ್ಕಿನಲ್ಲಿ ಅರುಣೋದಯದ ಮುಂಬೆಳಗು ಕಾಣುತ್ತಿದೆಯೇ, ಅಯ್ಯನವರೇ?" ಎಂದನು.

ಮಾಚಿದೇವರು ತಲೆಯೆತ್ತಿ ನೋಡಿದರು. ಮೂಡಣ ದೆಸೆ ಕೆಂಪಡರಿ ನಕ್ಷತ್ರಗಳು ಮಲಿನ ಕಾಂತಿಯಿಂದ ಬೆಳಗುತ್ತಿದ್ದವು. ಅವುಗಳಲ್ಲಿ ಹೆಚ್ಚು ಕಾಂತಿಯಿಂದ ಕೂಡಿದ ನಕ್ಷತ್ರದ ಕಡೆ ತೋರಿಸಿ ಮಾಚಿದೇವರು, "ಆ ಬೆಳ್ಳಿ ಚಿಕ್ಕಿ ಅರುಣೋದಯದ ಸೂಚನೆ!" ಎಂದರು.

"ಹಾಗಾದರೆ ಮಹಾದ್ವಾರವನ್ನು ತೆರೆಯಲು ಆಜ್ಞೆಮಾಡುತ್ತೇನೆ," ಎಂದು ನಾಯಕನು ಕಾವಲು ಭಟರಿಗೆ ಸನ್ನೆ ಮಾಡಿದನು. ಅಗುಳಿ ಅಡ್ಡ ಮರಗಳನ್ನು ತೆರೆದು ಎಂಟು ಜನ ಬೃಹದಾಕಾರದ ಬಾಗಿಲುಗಳನ್ನು ಹಿಂದಕ್ಕೆಳೆದರು.

ಪಾತ್ರೆ ಪರಿಕರಗಳಿಂದ ತುಂಬಿದ ಗಾಡಿಗಳು, ಅನಂತರ ಶರಣ ಶರಣೆಯರು ಮಹಾದ್ವಾರವನ್ನು ದಾಟಿ ಹೊರಗೆ ಹೋಗುತ್ತಿದ್ದಂತೆ ನಾಗರಾಜನು ಮಾಚಿ ದೇವರನ್ನು ಪ್ರತ್ಯೇಕವಾಗಿ ಕರೆದು, "ಶರಣರ ಯಾತ್ರಾದಳ ಹೊರಗೆ ಹೋದ ಕೂಡಲೇ ನಾವು ಮಹಾದ್ವಾರವನ್ನು ಪುನಃ ಮುಚ್ಚಬೇಕಾಗಬಹುದು, ಅಯ್ಯನವರೆ," ಎಂದು ಹೇಳಿ ಮುದ್ರೆಯೊಡೆಯದ ಆಜ್ಞೆಯೊಂದನ್ನು ತೋರಿಸಿದನು.

"ಇದು ಯಾರ ಆಜ್ಞಾಪತ್ರ?"

ಮಾಚಿದೇವರು ಕುತೂಹಲದಿಂದ ಪ್ರಶ್ನಿಸಿದರು.

"ಬಿಜ್ಜಳರಾಯರ ಮಹಾಸೇನಾನಿ ಮಾಧವ ದಂಡನಾಯಕರ ಆಜ್ಞಾಪತ್ರ. ಕೊಂಚ ಹೊತ್ತಿಗೆ ಮೊದಲು ಇದು ನನ್ನ ಕೈಸೇರಿತು. ನಿಮ್ಮನ್ನು ಹೊರಗೆ ಕಳುಹಿಸಿ

ಆಮೇಲೆ ನೋಡಬಹುದೆಂದು ಹಾಗೆಯೇ ಇಟ್ಟಿದ್ದೆ." –ಎಂದು ಹೇಳಿ ನಾಗರಾಜ ಆಜ್ಞೆಯ ಮುದ್ರೆಯೊಡೆದು ನೋಡಿದನು. "ಪುನಃ ಆಜ್ಞೆಮಾಡುವವರೆಗೆ ನಗರದ ಮಹಾದ್ವಾರಗಳನ್ನು ಮುಚ್ಚಿರತಕ್ಕದ್ದು. ನಮ್ಮ ವಿಶೇಷ ಅನುಮತಿಯಿಲ್ಲದೆ ಯಾರನ್ನೂ ನಗರದಿಂದ ಹೊರಗೆ ಹೋಗಲು, ನಗರದೊಳಗೆ ಬರಲು ಬಿಡಕೂಡದು," ಎಂದು ಮಾಧವ ದಂಡನಾಯಕನು ಆಜ್ಞೆ ಮಾಡಿದ್ದನು.

"ನೀವು ಸ್ವಲ್ಪ ತಡವಾಗಿ ಬಂದಿದ್ದರೂ ಈ ಆಜ್ಞೆ ನನ್ನ ಕೈಕಟ್ಟಿ ಬಿಡುತ್ತಿತ್ತು, ಅಯ್ಯನವರೆ. ಶಿವನು ರಕ್ಷಿಸಿದನು," ಎಂದು ನಿಟ್ಟುಸಿರಿಟ್ಟು ನುಡಿದನು ನಾಗರಾಜ.

"ಕಲಿದೇವರ ದೇವನು ನಂಬಿದವರನ್ನು ಕೈಬಿಡುವುದಿಲ್ಲ," ಎಂದು ಮಾಚಿ ದೇವರು ಉತ್ತರಿಸಿದರು.

ಶರಣರೆಲ್ಲ ಮಹಾದ್ವಾರದಿಂದ ಹೊರಗೆ ಹೋದ ಮೇಲೆ ಮಾಚಿದೇವರು ನಾಗರಾಜನಿಂದ ಬೀಳ್ಕೊಳ್ಳುತ್ತ "ಅರಮನೆಯ ದುರ್ಘಟನೆಯ ವಿಚಾರ ಏನಾದರೂ ತಿಳಿಯಿತೆ?" ಎಂದು ಕೇಳಿದರು.

ನಾಗರಾಜ ಪಿಸುದನಿಯಲ್ಲಿ ಹೇಳಿದನು : "ಧರ್ಮಾಧಿಕರಣದ ರಹಸ್ಯ ಸಭೆಯಿಂದ ಅರಮನೆಗೆ ಹಿಂದಿರುಗಿದ ಕೊಂಚ ಹೊತ್ತಿಗೆ ಬಿಜ್ಜಳರಾಯರು ಕೊಲೆಯಾದರಂತೆ. ಕರ್ಣದೇವರಸರು ಬಂಧನದಲ್ಲಿ. ಮಾಧವ ದಂಡನಾಯಕರು ತಾವೇ ಸರ್ವಾಧಿಕಾರಿಯಾಗಲು ಪ್ರಯತ್ನಿಸುತ್ತಿದ್ದಾರೆ. ಶರಣರ ಯಾತ್ರಾದಳವನ್ನು ನೀವು ಬೇಗ ಆಂಜನೇಯ ಹೊಳೆ ದಾಟಿಸಿಬಿಡಿ, ಅಯ್ಯನವರೆ."

ಮಾಚಿದೇವರು ಕೆಲವು ಕ್ಷಣಗಳು ಸ್ತಂಭಿತರಂತೆ ನಿಂತುಬಿಟ್ಟರು. ಬಳಿಕ ಅವರು ಗಂಭೀರವಾಗಿ ಹೆಜ್ಜೆಯಿಡುತ್ತ ಶರಣರ ಯಾತ್ರಾದಳವನ್ನು ಹಿಂಬಾಲಿಸಿದರು.

* * *

ಪೂರ್ವಾಹ್ನ ಮೊದಲ ಜಾಮ ಮುಗಿಯುತ್ತಿದ್ದಂತೆ ಶರಣರ ಯಾತ್ರಾದಳ ಆಂಜನೇಯ ಹೊಳೆಯನ್ನು ದಾಟಿತು. ಹೊಳೆಯಾಚೆಯ ದಡದಲ್ಲಿ ಗಣಾಚಾರದ ಭಕ್ತಯೋಧರ ಮುಂಚೂಣಿ ತಂಡ ಅವರನ್ನು ಸ್ವಾಗತಿಸಲು ಸಿದ್ಧವಾಗಿ ನಿಂತಿತ್ತು. ಮಾಚಿದೇವರನ್ನು ಕಂಡಾಗ ಅವರು, "ಕಲಿದೇವರದೇವ ಉಘೇ ! ಉಘೇ !" ಎಂದು ಜಯಧ್ವನಿ ಮಾಡಿದರು.

ಬಳಿಕ ಅವರು ಶರಣರನ್ನು ಹೊಳೆಯಾಚೆ ಸುಮಾರು ಹರದಾರಿ ದೂರದಲ್ಲಿದ್ದ ತಮ್ಮ ಶಿಬಿರಕ್ಕೆ ಕರೆದುಕೊಂಡು ಹೋದರು, ಅಲ್ಲಿ ಶರಣರಿಗಾಗಿ ಎರಡು ದೊಡ್ಡ ಹಸಿರುವಾಣಿ ಮಂಟಪಗಳು ರಚಿಸಲ್ಪಟ್ಟಿದ್ದವು. ಹಿಂದಿನ ದಿನ ಮುಂಜಾವಿನಲ್ಲಿ ಮಹಮನೆಯನ್ನು ಬಿಟ್ಟಿದ್ದ ಶರಣ ಶರಣೆಯರು ಸ್ನಾನ ಪೂಜೆ ಆರೋಗಣೆಗಳಿಗೆ ಸಿದ್ಧ ಮಾಡುತ್ತಿದ್ದರು.

ಶಿಬಿರದ ನಡುವೆಯಿದ್ದ ಅಶ್ವತ್ಥ ಮರದಡಿಯ ವಿಶಾಲವಾದ ಜಗುಲಿಯ ಮೇಲೆ ಸಕಲೇಶ ಮಾದರಸರು, ಚೆನ್ನಬಸವಣ್ಣನವರು, ಸೊಡ್ಡಲ ಬಾಚರಸರು, ಇವರೇ ಮೊದಲಾದ ಹಿರಿಯ ಶರಣರನ್ನು ಕುಳ್ಳಿರಿಸಿ, ಮಾಚಿದೇವರು ಅವರಿಗೆ ಗಣಾಚಾರದ ಭಕ್ತಯೋಧರ ಪರಿಚಯ ಮಾಡಿಕೊಟ್ಟರು. ಬಳ್ಳಿಗಾವೆ, ಸಿಂಧವಾಡಿ ಕೋಗಲೆ, ವೇಣುಗ್ರಾಮ ಮುಂತಾದ ಕಡೆಗಳಿಂದ ಶರಣರ ರಕ್ಷಣೆಗಾಗಿ ಬಂದಿದ್ದ ಯೋಧರೂ ಅವರ ಸಂಗಡಿದ್ದರು.

ಸಭ್ಯಾಚಾರದ ಈ ಪ್ರಸ್ತಾವನೆ ಮುಗಿದ ಮೇಲೆ ಮಾಚಿದೇವರು ನೆರೆದಿದ್ದವರನ್ನು ಉದ್ದೇಶಿಸಿ ಹೇಳಿದರು : "ಮಹಮನೆಯ ಶರಣರನ್ನು ಕಲ್ಯಾಣದ ಮೃತ್ಯು ಪಂಜರದಿಂದ ಪಾರುಮಾಡಿ ಆಂಜನೇಯ ಹೊಳೆ ದಾಟಿಸುವುದು ನನ್ನ ದೊಡ್ಡ ಹೊಣೆಯಾಗಿತ್ತು. ಕಲಿದೇವರ ದೇವನ ಕರುಣೆಯಿಂದ ಅದನ್ನು ನಿರ್ವಹಿಸಲು ನಾನು ಶಕ್ತನಾದೆ. ಇನ್ನು ಮುಂದೆ ಉಳಿವೆಯನ್ನು ಸೇರುವವರೆಗೆ ಅವರ ರಕ್ಷಣೆಯ ಹೊಣೆ ನನ್ನಂತೆ ಇಲ್ಲಿ ನೆರದಿರುವ ಭಕ್ತಯೋಧರಿಗೂ ಸೇರಿರುತ್ತದೆ. ಉಳಿವೆಯ ಮಾರ್ಗದಲ್ಲಿ ನಾವು ಮುಂದೆ ಮುಂದೆ ಹೋದಂತೆ ನಮ್ಮ ಬಲವೂ ಹೆಚ್ಚುತ್ತದೆ. ಸೊನ್ನಲಾಪುರದ ಸಿದ್ಧರಾಮ ಶಿವಯೋಗಿಗಳು, ಅಬ್ಬಲೂರಿನ ಏಕಾಂತ ರಾಮಯ್ಯನವರು, ಅಣ್ಣಿಗೇರಿಯ ಗೊಗ್ಗಿದೇವರಸರು, ತಾಳಿಕೋಟೆಯ ವಿರುಪರಸರು, ಸಿಂಧನಾಡಿನ ಇಮ್ಮಡಿ ರಾಚಮಲ್ಲರಸರು, ದಶಗಣದ ಸಿಂಗಿದೇವರು, ತಮ್ಮ ಕಡೆಯ ಗಣಾಚಾರಿ ದಳಗಳನ್ನು ಕಳುಹಿಸಿರುವುದಾಗಿ ಸುದ್ದಿ ಬಂದಿದೆ. ಬಿಜ್ಜಳರಾಯರ ಮಹಾಸೈನ್ಯ ಮುಂದೆ ನಮ್ಮನ್ನೇನೂ ಮಾಡಲಾರದು. ವಲಸೆ ಹೊರಡಲು ನಿರಾಕರಿಸಿ ಕಲ್ಯಾಣದಲ್ಲಿ ಉಳಿದ ಜಂಗಮರ ಮತ್ತು ಶರಣರ ವಿಚಾರದಲ್ಲಿ ನನ್ನ ಅನುಕಂಪ ವಿಷಾದಗಳನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದು ನನಗೆ ಅತಿದುಃಖದ ಕರ್ತವ್ಯವಾಗಿದೆ. ಅವರ ರಕ್ಷಣೆಗೆ ಏರ್ಪಡಿಸಲು ಅಸಮರ್ಥನಾದೆನೆಂಬುದು ನನ್ನ ದೊಡ್ಡ ಚಿಂತೆ. ಮಾಧವ ನಾಯಕನ ದಯಾಶೂನ್ಯ ಮಹಾಕ್ರೂರಿ ಸೈನ್ಯದಳಗಳು ಅವರನ್ನು ಮತ್ತಾವ ಹಿಂಸೆಗಳಿಗೆ ಗುರಿಪಡಿಸುವುದೋ ಯಾರು ಬಲ್ಲರು. ಕಲ್ಯಾಣದ ಶೈವಮಠಗಳನ್ನೆಲ್ಲ ನಾಶಮಾಡಿ, ಶರಣ ಧರ್ಮವನ್ನು ನಿರ್ಮೂಲಗೊಳಿಸುವುದು ಬಿಜ್ಜಳನ ಉದ್ದೇಶ. ಅದನ್ನು ಕಾರ್ಯಗತ ಮಾಡಲು ಅವನು ಮಾಧವ ನಾಯಕನನ್ನು ಮಹಾಸೇನಾನಿಯಾಗಿ ನಿಯಮಿಸಿದನು. ಕಲ್ಯಾಣದ ಮೃತ್ಯುಂಪಂಜರದಲ್ಲಿ ಇನ್ನೂ ಉಳಿದಿರುವ ಶರಣರನ್ನು ರಕ್ಷಿಸುವುದು ಕಲಿದೇವರ ದೇವನಿಗೆ ಮಾತ್ರ ಸಾಧ್ಯ."

–ಎಂದು ಹೇಳಿ ಮಾಚಿದೇವರು ಒಂದು ಸಾರಿ ಸಭೆಯ ಸುತ್ತ ದೃಷ್ಟಿ

ಬೀರಿದರು. ಶರಣರು ನೀರವವಾಗಿ ಕಣ್ಣೀರಿಡುತ್ತಿದ್ದರು, ಕಲ್ಯಾಣದಲ್ಲಿ ಉಳಿದ ತಮ್ಮವರಿಗಾಗಿ. ಅವರೆಲ್ಲರ ಅಂತರ್ವಾಣಿ ಏಕಕಾಲದಲ್ಲಿ ನುಡಿಯುತ್ತಿತ್ತು– "ಇದರಲ್ಲಿ ನಮ್ಮ ತಪ್ಪೇನಿದೆ? ಮುನ್ನೆಚ್ಚರಿಕೆಯಿಂದ ಚೆನ್ನಬಸವಣ್ಣನವರು ಎಲ್ಲರಿಗೂ ಸುದ್ದಿ ಕಳುಹಿಸಿದರು. ಗೊತ್ತಾದ ದಿನವನ್ನು ಮುಂದಕ್ಕೆ ಹಾಕಿದರು. ಆಗಲೂ ಅವರು ಸಂಗಡ ಬರಲು ನಿರಾಕರಿಸಿದರೆ ನಾವೇನು ಮಾಡುವುದು?" –ಎಂದು.

ಗಣಾಚಾರಿಯೋಧರ ಪ್ರತಿಕ್ರಿಯೆ ಬೇರೆ ವಿಧವಾಗಿತ್ತು. ಅವರಲ್ಲಿ ಕೆಲವರು ಮುಂದೆ ಬಂದು ಮಾಚಿದೇವರಿಗೆ ಕೈಮುಗಿದು, "ಅಣ್ಣನವರು ಅನುಮತಿಯಿತ್ತು ಆಶೀರ್ವಾದ ಮಾಡಿದರೆ ಕಲ್ಯಾಣದಲ್ಲಿ ಉಳಿದಿರುವ ಶರಣರ ರಕ್ಷಣೆಗಾಗಿ ನಾವು ಇಂದೇ ಹೊರಡುತ್ತೇವೆ. ನಮ್ಮಂತೆ ನೂರು ಮಂದಿ ಯೋಧರು ಈ ಕಾರ್ಯದಲ್ಲಿ ಪ್ರಾಣಾರ್ಪಣ ಮಾಡಲು ಸಿದ್ಧರಾಗಿದ್ದಾರೆ," ಎಂದು ಬಿನ್ನವಿಸಿಕೊಂಡರು.

ಮಾಚಿದೇವರ ಕಂಠ ಹೆಚ್ಚು ಗಂಭೀರವಾಯಿತು. ಅವರು ಹೇಳಿದರು : "ಆ ಕಾರ್ಯ, ಸಾಧ್ಯತೆಯ ಪರಿಮಿತಿಯಲ್ಲಿ ಇದ್ದಿದ್ದರೆ ನಿಮ್ಮ ನಾಯಕನಾಗಿ ನಿಮ್ಮ ಸಂಗಡ ನಾನೂ ಕಲ್ಯಾಣಕ್ಕೆ ಬರುತ್ತಿದ್ದೆ. ನೆನ್ನಿನ ರಾತ್ರಿ ಕಲಚೂರ್ಯ ಅರಮನೆಯಲ್ಲಿ ನಡೆದ ದುರ್ಘಟನೆ ನಗರದ ಪರಿಸ್ಥಿತಿಯನ್ನು ಮತ್ತಷ್ಟು ವಿಷಮಗೊಳಿಸಿದೆ. ಇಷ್ಟು ಹೊತ್ತಿಗೆ ಕಲ್ಯಾಣದ ಮಹಾದ್ವಾರಗಳನ್ನೆಲ್ಲ ಬಂಧಿಸಿ ಮಾಧವ ನಾಯಕನ ಸೈನ್ಯ ದಳಗಳು ಕಾವಲಿರಬಹುದು. ಇನ್ನೆರಡು ದಿನಗಳು ನಗರವನ್ನು ಪ್ರವೇಶಿಸುವುದಾಗಲಿ, ನಗರದಿಂದ ಹೊರಗೆ ಬರುವುದಾಗಲಿ ಯಾರಿಗೂ ಸಾಧ್ಯವಲ್ಲ."

"ಕಲಚೂರ್ಯ ಅರಮನೆಯಲ್ಲಿ ದುರ್ಘಟನೆ ! ಏನದು? ಏನದು ?"

ಎಲ್ಲ ಕಡೆಗಳಿಂದ ಕೂಗು ಕೇಳಿ ಬಂದಿತು. ಶರಣರಂತೆ ಗಣಾಚಾರಿಯೋಧರೂ ಕೇಳಲು ಆತುರರಾಗಿದ್ದರು.

ಮಾಚಿದೇವರು ನುಡಿದರು : "ಆ ದುರ್ಘಟನೆಯ ಸುಳುಹು ತಿಳಿದು, ನೆನ್ನಿನ ರಾತ್ರಿ ನಗರ ಸ್ತಂಭಿತವಾಗಿತ್ತು. ಮಾಧವ ನಾಯಕನ ಮಹಾಸೈನ್ಯ, ನಗರ ರಕ್ಷಕ ದಳಗಳು, ಕಲಚೂರ್ಯ ಅರಮನೆಯ ಸುತ್ತ ಕೇಂದ್ರೀಕೃತವಾಗಿದ್ದವು. ಶರಣರ ಯಾತ್ರಾದಳ ತೊಂದರೆಯಿಲ್ಲದೆ ನಗರವನ್ನು ಬಿಡಲು ಬಹುಮಟ್ಟಿಗೆ ಅದು ಸಹಾಯಕವಾಯಿತು. ಆದರೆ ಆ ದುರ್ಘಟನೆಯೇನೆಂಬುದು ಆಗ ಯಾರಿಗೂ ತಿಳಿಯದು. ನಾವು ಮಹಾದ್ವಾರದಿಂದ ಹೊರಗೆ ಬಂದಾಗ ದೈವಯೋಗದಿಂದ ನನಗೆ ಆ ವಿಚಾರ ತಿಳಿಯಿತು. ಈಗ ನಿಮ್ಮ ಮುಂದೆ ಅದನ್ನು ಮೊದಲ ಸಾರಿ ಹೇಳುತ್ತಿದ್ದೇನೆ."

ಸಭೆಯಲ್ಲಿ ನಿಶ್ಯಬ್ದ. ಎಲ್ಲರೂ ಆತುರದಿಂದ ಮಾಚಿದೇವರ ಮುಖ

ನೋಡುತ್ತಿದ್ದರು. ನುರಿತ ರಾಜಕಾರಿಣಿಯಂತೆ ಮಾಚಿದೇವರು ದನಿ ತಗ್ಗಿಸಿ ಹೇಳಿದರು : "ನೆನ್ನಿನ ಸಂಜೆ ಧರ್ಮಾಧಿಕರಣದ ಚಾವಡಿಯಲ್ಲಿ, ಬಿಜ್ಜಳನ ಅಧ್ಯಕ್ಷತೆಯಲ್ಲಿ ಸೈನ್ಯಾಧಿಕಾರಿಗಳ ರಹಸ್ಯ ಸಭೆ ನಡೆಯಿತು. ಕಲ್ಯಾಣದ ಶೈವ ಮಠಗಳ ನಾಶ ಮತ್ತು ಶರಣರ ನಿರ್ಮೂಲನಕ್ಕಾಗಿ ಮಾಧವ ನಾಯಕನು ರಚಿಸಿದ್ದ ಯೋಜನೆ ಚರ್ಚಿಸಲ್ಪಟ್ಟು ಬಿಜ್ಜಳನ ಅನುಮೋದನೆ ಪಡೆಯಿತು. ಯೋಜನೆಯನ್ನು ಕಾರ್ಯಗತಮಾಡುವ ಹೊಣೆಯನ್ನು ಬಿಜ್ಜಳನು ಮಾಧವ ನಾಯಕನಿಗೊಪ್ಪಿಸಿದನು. ಸಭೆ ಮುಗಿದು ಕಲಚೂರ್ಯ ಅರಮನೆಗೆ ಹಿಂದಿರುಗಿದ ಮೇಲೆ ಸ್ವಲ್ಪ ಹೊತ್ತಿಗೆ, ಅರಮನೆಯ ಚಾವಡಿಯಲಿ, ಬಿಜ್ಜಳನು ಕೊಲ್ಲಲ್ಪಟ್ಟನು."

ಮೇಘವಿಲ್ಲದ ಗಗನದಿಂದ ಸಿಡಿಲೆರಗಿದಂತೆ ಸಭೆಯಲ್ಲಿದ್ದವರು ಸ್ತಂಭಿತರಾದರು. ಬಿಜ್ಜಳನ ವಧೆ! ಮಧುವರಸಾದಿಗಳನ್ನು ಶೂಲಕ್ಕೇರಿಸಿದ, ಶರಣ ಧರ್ಮದ ವಿನಾಶಕ್ಕಾಗಿ ಪಣತೊಟ್ಟ, ಚಾಲುಕ್ಯ ರಾಜ್ಯಾಪಹಾರಿ ಮಹಾ ಮಂಡಲೇಶ್ವರನ ಕೊಲೆ! ಗಣಾಚಾರಿ ಯೋಧರ ತಂಡ ದಶದಿಕ್ಕುಗಳು ಮೊಳಗುವಂತೆ ಜಯಘೋಷ ಮಾಡಿತು :

"ಪರವಾದಿಗೆ ಸರಿಯಾದ ಅಂತ್ಯ!"

"ಮಧುವರಸಾದಿಗಳನ್ನು ಶೂಲಕ್ಕೇರಿಸಿದ ಸರ್ವಾಧಿಕಾರಿಯ ಮೇಲಿನ ಸೇಡು ತೀರಿತು!"

"ಚಾಲುಕ್ಯರಾಜ್ಯ ನಿಷ್ಕಂಟಕವಾಯಿತು!"

–ಎಂಬ ಕೂಗು ಎಲ್ಲ ಕಡೆಯಿಂದ ಕೇಳಿಬಂದಿತು.

ಮಾಚಿದೇವರು ಕೈಯೆತ್ತಿ ಸುಮ್ಮನಿರುವಂತೆ ಸನ್ನೆಮಾಡಿದರು. ಸಭೆ ಶಾಂತವಾದ ಮೇಲೆ ಅವರು ಪುನಃ ಹೇಳಿದರು : "ನಿಮ್ಮ ಈ ಜಯಧ್ವನಿ, ಅರ್ಥವಿಲ್ಲದ ವ್ಯರ್ಥ ಘೋಷಣೆಗಳು, ನನ್ನನ್ನು ದುಃಖಕ್ಕೀಡುಮಾಡಿವೆ. ದಯಮಾಡಿ ಶಾಂತ ಚಿತ್ತದಿಂದ ಸುಮ್ಮನೆ ಕುಳಿತು ನಾನು ಹೇಳುವುದನ್ನು ಮನಮುಟ್ಟಿ ಕೇಳಬೇಕಾಗಿ ಬೇಡುತ್ತೇನೆ. ಬಿಜ್ಜಳನ ವಧೆಯಿಂದ ಶರಣರ ಹಿತಸಾಧನೆಯಾಗುವುದೆಂದು ನೀವು ಭಾವಿಸಿದ್ದರೆ ಅದು ನಿರರ್ಥಕ ಕಲ್ಪನೆ. ಬಿಜ್ಜಳನು ಪರವಾದಿ. ಮಧುವರಸಾದಿಗಳನ್ನು ನಿರ್ದಯನಾಗಿ ಕೊಲ್ಲಿಸಿದನು. ಶರಣಧರ್ಮವನ್ನು ನಾಶಮಾಡಲು ಸಂಕಲ್ಪಿಸಿದ್ದನು. ಇವೆಲ್ಲವನ್ನು ನಾನು ಒಪ್ಪುತ್ತೇನೆ. ಆದರೆ ಈ ಕಾರಣಗಳಿಂದಾಗಿ ಶರಣರು ಅವನ ವಧೆಯನ್ನು ಇಚ್ಛಿಸಲಿಲ್ಲ, ಅದಕ್ಕಾಗಿ ಪ್ರಯತ್ನಿಸಲಿಲ್ಲ. ಬಿಜ್ಜಳನ ಹಿಂಸೆ ಶಿಖರಕ್ಕೆ ಮುಟ್ಟಿದಾಗ, ಸ್ವಧರ್ಮ ರಕ್ಷಣೆಗಾಗಿ ವಲಸೆ ಹೋಗಲು ಶರಣರು ನಿರ್ಧರಿಸಿಕೊಂಡರು. ಬಲಪ್ರದರ್ಶನದಿಂದ ಬಿಜ್ಜಳನನ್ನು ಎದುರಿಸುವ ಮನೋಭಾವ ಯಾವಾಗಲೂ

ಶರಣರಿಗೆ ಇರಲಿಲ್ಲವೆಂಬುದು ಸ್ಪಷ್ಟವಾಗಿದೆ. ಬಿಜ್ಜಳನು ಜೀವಿಸಿದ್ದಿದ್ದರೆ ನಾವು ಎದುರಿಸಬೇಕಾಗಿದ್ದ ಕಷ್ಟಗಳಿಗಿಂತ ಹೆಚ್ಚಿನ ಕಷ್ಟಗಳನ್ನು ಬಿಜ್ಜಳನ ಮರಣದ ಫಲವಾಗಿ ಮುಂದೆ ನಾವು ಅನುಭವಿಸಬೇಕಾಗುತ್ತದೆ. ಆಗಲೇ ಮಾಧವನಾಯಕನು ಬಿಜ್ಜಳನ ಸಹೋದರ ಕರ್ಣದೇವನನ್ನು ಬಂಧಿಸಿಟ್ಟಿದ್ದಾನೆ. ಕುಮಾರ ಸೋಮೇಶ್ವರನೂ ಅವನ ಸಹೋದರರೂ ಮಂಗಳವೇಡೆಯಿಂದ ಕಲ್ಯಾಣಕ್ಕೆ ಹಿಂದಿರುಗಿದಾಗ ಸರ್ವಾಧಿಕಾರಿ ಪದವಿಗಾಗಿ ಹೋರಾಟ ಪ್ರಾರಂಭವಾಗುವುದು. ಎರಡೂ ಸೈನ್ಯಗಳ ಘರ್ಷಣೆಯಲ್ಲಿ ಕಲ್ಯಾಣ ಹಾಳಾಗುವುದು. ಶರಣರು ಮಡಿಯುವರು. ಅವರನ್ನು ರಕ್ಷಿಸಲು ಪ್ರಯತ್ನಿಸುವುದು ಉರಿಯುವ ಬೆಂಕಿಯಲ್ಲಿ ಹಾರಿಬಿದ್ದಂತೆ."

ಮಾಚಿದೇವರ ನುಡಿಗಳಿಂದ ಗಣಾಚಾರಿ ಯೋಧರ ಉತ್ಸಾಹ ಕುಗ್ಗಲಿಲ್ಲ. "ಅದು ಎಂತಹ ಕಠಿಣ ಕಾರ್ಯವೇ ಆಗಿರಲಿ, ಒಂದು ಸಾರಿ ನಾವು ಪ್ರಯತ್ನಿಸಿ ನೋಡುವೆವು. ದಯಮಾಡಿ ಅಣ್ಣನವರು ಅನುಮತಿ ಕೊಡಬೇಕು," ಎಂದು ಅವರು ಮತ್ತೆ ಬಿನ್ನವಿಸಿಕೊಂಡರು.

ಮಾಚಿದೇವರು ಕೊಂಚ ಹೊತ್ತು ಯೋಚಿಸುತ್ತಿದ್ದು, "ಅನುಮತಿ ಕೊಡುತ್ತೇನೆ. ನಗರದ ಪರಿಸ್ಥಿತಿ ಏನಾಗುವುದೆಂಬುದನ್ನು ಎರಡು ದಿನ ಕಾದು ನೋಡಿ ಅನಂತರ ನೀವು ಹೋಗಬೇಕು," ಎಂದರು. ಯೋಧರು ಒಪ್ಪಿದರು. ಪರಿಚಯ ಸಭೆ ಮುಗಿಯಿತು.

ಆ ದಿನ ಅಪರಾಹ್ನ ಶರಣೆಯರಿಗೆ ಗೊತ್ತಾಗಿದ್ದ ಮಂಟಪದಲ್ಲಿ ಗಂಗಾಂಬಿಕೆ ನೀಲಲೋಚನೆಯರು ಆ ವಿಚಾರವಾಗಿ ಮಾತಾಡುತ್ತಿದ್ದರು. ನೀಲಲೋಚನೆ ಹೇಳಿದಳು : "ಅಣ್ಣನ ಕೊಲೆಯ ಸುದ್ದಿ ಕೇಳಿದಾಗಿನಿಂದ ನನ್ನ ಮನಸ್ಸು ತಳಮಳ ಗೊಂಡಿದೆ. ಅಂತ್ಯ ದರ್ಶನಕ್ಕಾಗಿ ಕಲ್ಯಾಣಕ್ಕೆ ಹೋಗಿಬರಲೇ ಎಂದು ಯೋಚಿಸುತ್ತಿದ್ದೇನೆ. ಅಣ್ಣ ಬದುಕಿದ್ದಾಗ ಮಾಡದಿದ್ದ ಕಾರ್ಯವನ್ನು ಈಗೇಕೆ ಮಾಡಬಾರದು ? ಕರ್ಣದೇವನ ಕಾಲುಗಳ ಮೇಲೆ ಬಿದ್ದು ಶರಣರನ್ನು ಬಿಟ್ಟು ಕೊಡುವಂತೆ ಕೇಳುತ್ತೇನೆ. ಕಲ್ಯಾಣದಲ್ಲಿ ಉಳಿದಿರುವ ಶರಣರನ್ನು ಸುರಕ್ಷಿತವಾಗಿ ಹೊರಗೆ ಕರೆತರುತ್ತೇನೆ. ಇಲ್ಲವೆ ಆ ಕಾರ್ಯದಲ್ಲಿ ಪ್ರಾಣಾರ್ಪಣೆ ಮಾಡುತ್ತೇನೆ."

ಇಷ್ಟೆಲ್ಲ ಸಾಹಸ ಹೆಂಗಸಿಗೆ ಸಾಧ್ಯವಲ್ಲವೆಂದು ಗಂಗಾಂಬಿಕೆಗೆ ತಿಳಿದಿತ್ತು. ಆದರದನ್ನು ನೀಲಲೋಚನೆಗೆ ತಿಳಿಯಪಡಿಸುವುದು ಹೇಗೆ ? ಅಣ್ಣನ ದುರಂತ ಮರಣದಿಂದ ಈಗವಳು ಉದ್ರಿಕ್ತೆಯಾಗಿದ್ದಾಳೆ. ಹೆಣ್ಣು ಏನನ್ನು ಮಾಡಬಲ್ಲಳು, ಏನು ಮಾಡಲಾರಳು, ಎಂಬ ಪರಿಜ್ಞಾನ ಅಳಿದಿದೆ ಅವಳಲ್ಲಿ. ಶರಣರ ರಕ್ಷಣೆಯಲ್ಲಿ ಬಲಿದಾನವಾಗುವ ಪರಮೋದ್ದೇಶ ಅವಳನ್ನು ಪ್ರಚೋದಿಸುತ್ತಿದೆ. ಎಂದು ಗಂಗಾಂಬಿಕೆ

ಭಾವಿಸಿ ಪ್ರಕಟವಾಗಿ, "ಶರಣರನ್ನುಳಿಸುವುದು ಸಾಧ್ಯವಾಗಿದ್ದಿದ್ದರೆ ನಾನೂ ನಿನ್ನ ಸಂಗಡ ಬರುತ್ತಿದ್ದೆ, ನೀಲಾ. ಮಾಚಿದೇವರು ಹೇಳಿದ್ದನ್ನು ಕೇಳಲಿಲ್ಲವೆ ? ಮಾಧವ ನಾಯಕನು ಕರ್ಣದೇವನನ್ನು ಸೆರೆಹಿಡಿದಿರುವನಂತೆ. ಈಗಾಗಲೇ ನಗರದಲ್ಲಿ ಎರಡು ಕಡೆಯ ಸೈನ್ಯಗಳಿಗೆ ಹೋರಾಟ ಪ್ರಾರಂಭವಾಗಿದೆ. ನಗರ ದ್ವಾರಗಳು ಬಂಧಿಸಲ್ಪಟ್ಟಿವೆ. ಈ ಪರಿಸ್ಥಿತಿಯಲ್ಲಿ ನಾವು ನಗರಕ್ಕೆ ಹೋಗುವುದೇ ಕಷ್ಟವಾಗಬಹುದು. ಹೋಗುವಷ್ಟರಲ್ಲಿ ಅಣ್ಣನವರ ಅಂತ್ಯಸಂಸ್ಕಾರ ಮುಗಿದಿರಬಹುದು. ಹೆಣ್ಣು ದುಡುಕಿ ಯಾವ ಕಾರ್ಯವನ್ನೂ ಮಾಡಬಾರದು," ಎಂದಳು.

ಅಷ್ಟರಲ್ಲಿ ನಾಗಲಾಂಬೆ ಅಲ್ಲಿಗೆ ಬಂದು, "ಪಡಿಹಾರಿ ಅಪ್ಪಣ್ಣ ಕೂಡಲಸಂಗಮಕ್ಕೆ ಹೊರಟಿದ್ದಾನೆ, ನೀಲಾ. ನೀನು ಸಂಗಡ ಹೋಗುವುದಾದರೆ ಗುರುಕುಲದ ಮೇನೆಯಿದೆ, ರಕ್ಷಕ ಭಟರಿದ್ದಾರೆ." ಎಂದಳು.

ನೀಲಲೋಚನೆ ಅಪ್ರತಿಭೆಯಾದಳು. ಸಂಗಮಕ್ಕೆ ಪತಿದೇವನ ಬಳಿಗೆ ಹೋಗಲೆಳಸದಿರುವ ತಾನು, ಅಣ್ಣನ ಅಂತ್ಯದರ್ಶನಕ್ಕಾಗಿ ಶರಣರನ್ನು ಉಳಿಸುವ ನೆವದಿಂದ ಕಲ್ಯಾಣಕ್ಕೆ ಹೋಗುವುದು ಉಚಿತವೆನಿಸುವುದೇ ಎಂದು ಯೋಚಿಸಿ ಮೌನವಾಗಿದ್ದಳು.

ನಾಗಲಾಂಬೆ ಪುನಃ ಹೇಳಿದಳು : "ಇದು ಚಿಂತಿಸುತ್ತ ಕುಳಿತುಕೊಳ್ಳುವ ಸಮಯವಲ್ಲ, ನೀಲಾ. ಸತೀಧರ್ಮ ನಿನ್ನನ್ನು ಸಂಗಮಕ್ಕೆ ಕರೆಯುತ್ತಿದೆ. ಅದನ್ನು ನಿರಾಕರಿಸುವೆಯಾ ನೀನು?"

ನೀಲಲೊಚನೆ ಅಪ್ರತಿಭೆಯಾದಳು. ಸತೀಧರ್ಮ ! ಎಷ್ಟೆಲ್ಲ ತ್ಯಾಗ ಬಲಿದಾನ ಗಳಿಗೆ ಸಿದ್ಧಳಾಗುತ್ತಾಳೆ ಹೆಣ್ಣು, ಈ ಧಾರ್ಮಿಕ ಆವೇಶದಲ್ಲಿ ! ಪುರುಷರ ಸ್ವಾರ್ಥ, ಹೆಣ್ಣಿನ ದೌರ್ಬಲ್ಯ, ಇವು ಸಹಾಯಕವಾಗಿ ನಿಲ್ಲುತ್ತವೆ ಈ ನಾರೀಮೇಧಕ್ಕೆ. ಇದರಿಂದ ಉದ್ಧಾರವಾಗುವ ಉಪಾಯವೇ ಇಲ್ಲವೇ ಹೆಣ್ಣಿಗೆ? ಸ್ತ್ರೀಯರಿಗೆ ಪುರುಷರೊಡನೆ ಸಮಾನಾಧಿಕಾರವನ್ನು ಬೋಧಿಸುವ ಶರಣಧರ್ಮ ಇದಕ್ಕೊಪ್ಪುವುದೇ? ದೃಢ ನಿರ್ಧಾರದ ಸ್ಥಿರ ಕಂಠದಿಂದ ನೀಲಲೋಚನೆ ಹೇಳಿದಳು : "ಸತೀ ಧರ್ಮ ನನ್ನನ್ನು ಸಂಗಮಕ್ಕೆ ಕರೆಯುತ್ತಿದೆ, ಪತಿಸೇವೆಗಾಗಿ. ಬಂಧುಧರ್ಮ ನನ್ನನ್ನು ಕಲ್ಯಾಣಕ್ಕೆ ಕರೆಯುತ್ತಿದೆ, ಅಣ್ಣನ ಅಂತ್ಯ ದರ್ಶನಕ್ಕಾಗಿ. ಎಲ್ಲ ವಾಸನೆಗಳನ್ನು ಮನಸ್ಸಿನಿಂದ ದೂರ ಮಾಡಿದ ನನಗೆ ಮತ್ತೆ ಈ ಬಂಧನಗಳೇಕೆ ? ನಾನು ನಿಮ್ಮ ಸಂಗಡ ಉಳಿವೆಗೆ ಬರುತ್ತೇನೆ. ನಿಜಶರಣೆಗೆ ಅದೊಂದೇ ಆತ್ಮೋದ್ಧಾರದ ಮಾರ್ಗ. ಸಂಗಮದ ಕರೆಗೆ ಇದು ನನ್ನ ಉತ್ತರ."

–ಎಂದು ಹೇಳಿ ನೀಲಲೋಚನೆ ಮೊದಲೆ ಸಿದ್ಧಪಡಿಸಿ ಇಟ್ಟುಕೊಂಡಿದ್ದ

ಓಲೆಯನ್ನು ನಾಗಲಾಂಬೆಗೆ ಕೊಟ್ಟಳು. ನಾಗಲಾಂಬೆ ಓದಿದಳು. "ಇಪ್ಪೆಯ ಹೂವನನುಗೊಳಿಸಲು...." ಎಂಬ ವಚನದಡಿಯಲ್ಲಿ, "ನಾನಾರ ಸಾರುವೆನೆಂದು ಚಿಂತಿಸಲೇಕಯ್ಯ?" ಎಂಬ ಇನ್ನೊಂದು ವಚನವನ್ನೂ ಸೇರಿಸಿದ್ದಳು ನೀಲಲೋಚನೆ.

"ಇದು ನಿನ್ನ ಅಂತ್ಯ ನಿರ್ಧಾರವೆ?" ನಾಗಲಾಂಬೆ ಗಂಭೀರವಾಗಿ ಪ್ರಶ್ನಿಸಿದಳು. ನೀಲಲೋಚನೆ ತಲೆಯಾಡಿಸಿ ಒಪ್ಪಿಕೊಂಡಳು.

"ಕಲ್ಯಾಣದ ದುರ್ಘಟನೆಯನ್ನು ಬಸವೇಶನಿಗೆ ತಿಳಿಸಲು ಅಪ್ಪಣ್ಣ ಹೋಗುತ್ತಿದ್ದಾನೆ. ಮೊದಲು ಆ ಕಾರ್ಯ ಮಾಡಿ ಆಮೇಲೆ ನಿನ್ನ ಓಲೆ ಕೊಡುವಂತೆ ಅವನಿಗೆ ಹೇಳುತ್ತೇನೆ. ನಿನ್ನ ನಿರ್ಧಾರದ ಅಂತಃಸತ್ವವನ್ನು ಅರಿಯುವ ಆತ್ಮ ವಿಶ್ವಾಸವನ್ನು ಬಸವೇಶನಿಗೆ ಕರುಣಿಸಲಿ ಸಂಗಮನಾಥನು,"

–ಎಂಬ ನಾಗಲಾಂಬೆ ಅಲ್ಲಿಂದ ಹೊರಟಳು.

ನೀಲಲೋಚನೆ ಮೌನ. "ತಾನು ಮಾಡಿದ್ದು ಸರಿಯೆ?" ಎಂಬ ಚಿಂತೆಯಲ್ಲಿ ಮಗ್ನವಾಗಿತ್ತು ಅವಳ ಚಿತ್ತ. ಆ ಮೌನವನ್ನು ಭೇದಿಸಲು ಗಂಗಾಂಬಿಕೆ ಇಚ್ಛೆಸಲಿಲ್ಲ.

* * *

ಪಡಿಹಾರಿ ಅಪ್ಪಣ್ಣನನ್ನು ಕೂಡಲ ಸಂಗಮಕ್ಕೆ ಕಳುಹಿಸಿ ನಾಗಲಾಂಬೆ ಶಿಬಿರಕ್ಕೆ ಬಂದಾಗ ಅಶ್ವತ್ಥ ಕಟ್ಟೆಯ ಬಳಿ ಚೆನ್ನಬಸವಣ್ಣನವರು, ಮಾಚಿದೇವರು, ಇಬ್ಬರು ಹೊಸ ಜಂಗಮರ ಸಂಗಡ ಮಾತಾಡುತ್ತಿರುವುದನ್ನು ಕಂಡು ಸಮೀಪಕ್ಕೆ ಹೋದಳು. ಸೊನ್ನಲಾಪುರದ ಸಿದ್ಧರಾಮೇಶ್ವರ ಶಿವಯೋಗಿ ಮತ್ತು ಮೋಳಿಗೆಯ ಮಾರಯ್ಯ, ಇವರು ಕೊಂಚ ಹೊತ್ತಿನ ಮೊದಲು ಅಲ್ಲಿಗೆ ಬಂದಿದ್ದರು.

ಶಿವಯೋಗಿ ಹೇಳುತ್ತಿದ್ದರು : "ನಿಮ್ಮಿಂದ ವಲಸೆಯ ಸುದ್ದಿ ಬಂದ ದಿವೇ ಹೊರಡಲು ಯೋಚಿಸಿದೆ. ಅಷ್ಟರಲ್ಲಿ ಯಾತ್ರೆಗಾಗಿ ಉಜ್ಜಯಿನಿಗೆ ಹೋಗಿದ್ದ ಏಳು ನೂರು ಎಪ್ಪತ್ತು ಮಂದಿ ಜಂಗಮರು ಸೊನ್ನಲಾಪುರಕ್ಕೆ ಬಂದರು. ಅವರ ಊಟ ಉಪಚಾರ ವಸತಿಗಳಿಗೆ ಏರ್ಪಡಿಸಲು ಒಂದು ದಿನ ನಿಲ್ಲಬೇಕಾಯಿತು. ಮರುದಿನ ಹೊರಟವನು ಈ ದಿನ ಮುಂಜಾವಿನಲ್ಲಿ ಕಲ್ಯಾಣಕ್ಕೆ ಬಂದೆ. ಮೋಳಿಗೆಯ ಮಾರಯ್ಯನವರು ನಗರದ ದುರ್ಘಟನೆಯನ್ನು ವಿವರಿಸಿ ನೀವು ನೆನ್ನಿನ ರಾತ್ರಿಯೇ ನಗರವನ್ನು ಬಿಟ್ಟುದಾಗಿ ತಿಳಿಸಿದರು, ನಮ್ಮನ್ನು ಇಲ್ಲಿಗೆ ಕರೆತಂದರು. ನೀವು ಯಾವ ಉದ್ದೇಶದಿಂದ ವಲಸೆ ಹೊರಟಿರುವಿರೋ ಆ ಕಾರ್ಯ ಸಫಲವಾಗಲೆಂದು ಕಪಿಲ ಸಿದ್ಧಮಲ್ಲಿಕಾರ್ಜುನನಲ್ಲಿ ನಮ್ಮ ಪ್ರಾರ್ಥನೆ."

ಶುಭಾಶಯಗಳಿಗಾಗಿ ವಂದಿಸಿ ಚೆನ್ನಬಸವಣ್ಣನವರು, "ನೀವು ನಮ್ಮ ಸಂಗಡ ಉಳಿವೆಗೆ ಬರುವುದಿಲ್ಲವೆ ?" ಎಂದು ಕೇಳಿದರು.

"ಸೊನ್ನಲಾಪುರದಲ್ಲಿ ನಮ್ಮ ಮಣಿಹವಿನ್ನೂ ಮುಗಿದಿಲ್ಲ, ಚೆನ್ನಬಸವಣ್ಣನವರೆ. ಅದು ಮುಗಿದು ಕಪಿಲ ಸಿದ್ಧಮಲ್ಲಿಕಾರ್ಜುನನ ಅನುಮತಿ ದೊರಕಿದಾಗ ನಾವು ನಿಮ್ಮನ್ನು ಉಳಿವೆಯಲ್ಲಿ ಕಾಣುವೆವು."

–ಕ್ಷಮಾಯಾಚನೆಯ ನಮ್ರಕಂಠದಿಂದ ಶಿವಯೋಗಿ ಸಿದ್ಧರಾಮೇಶ್ವರರು ದೃಢವಾಗಿ ಹೇಳಿದರು.

"ನೀವೇನು ಮಾಡುವಿರಿ, ಮಾರಯ್ಯನವರೆ ? ನಮ್ಮ ಆಹ್ವಾನ ನಿಮಗೆ ಸಕಾಲದಲ್ಲಿ ಮುಟ್ಟಿತಲ್ಲವೆ?" –ಮಾಚಿದೇವರೆಂದರು.

ಮೋಳಿಗೆಯ ಮಾರಯ್ಯನವರ ಮುಖದಲ್ಲಿ ವ್ಯಂಗ್ಯ ಅಭಿಮಾನಗಳ ಮಿದುನಗೆ ಮೂಡಿತು. ಅವರು ಹೇಳಿದರು : "ನಾನೂ ನಿಮ್ಮಂತೆ ಕ್ಷತ್ರಿಯನು, ಮಾಚಿದೇವ. ಶರಣಧರ್ಮದ ಪ್ರಭಾವದಿಂದ ಜಾತಿ ಸೂತಕಗಳು ಅಳಿದರೂ ವರ್ಣಾಶ್ರಮಗಳ ಸೊಗಡು ಇನ್ನೂ ಉಳಿದಿದೆ. ಶರಣರ ರಕ್ಷಣೆಗಾಗಿ ನೀವು ಉಳಿವೆಗೆ ಹೋಗುತ್ತಿರುವಿರಿ. ವಲಸೆ ಹೊರಡಲು ನಿರಾಕರಿಸಿದ ಶರಣರ ಸಹಾಯಕ್ಕಾಗಿ ಇನ್ನು ಕೆಲವು ದಿವಸಗಳು ನಾನು ಕಲ್ಯಾಣದಲ್ಲಿರಲು ನಿರ್ಧರಿಸಿದ್ದೇನೆ."

ಮಾಚಿದೇವರು ಮೌನ. ನನ್ನನ್ನು ಅಪಹಾಸ್ಯ ಮಾಡುವುದು ಮಾರಯ್ಯನ ಉದ್ದೇಶವೇ? ಅನುಭವಮಂಟಪಕ್ಕೆ ಒಂದು ಸಾರಿ ಕೂಡ ಬಾರದಿದ್ದರೂ ಜೀವನದ ಉನ್ನತಾದರ್ಶ ವಿಚಾರ ಸ್ವಾತಂತ್ರ್ಯಗಳಿಂದ ಶರಣರಲ್ಲಿ ಸಿದ್ಧರಾಮೇಶ್ವರ ಶಿವಯೋಗಿಗಳಷ್ಟೇ ಪ್ರಭಾವ ಗೌರವಗಳನ್ನು ಪಡೆದಿದ್ದ ಈ ವಯೋವೃದ್ಧ ಜಂಗಮನ ವಿಚಾರದಲ್ಲಿ ಕ್ಷಣಕಾಲ ತನ್ನಲ್ಲಿ ಸಂದೇಹ ಸುಳಿದುದಕ್ಕಾಗಿ ಮಾಚಿದೇವರು ಲಜ್ಜಿತರಾದರು. ಕೈಯೆತ್ತಿ ನಮಸ್ಕಾರ ಮಾಡಿ ಅವರು, "ಶರಣರ ಬಗೆಗೆ ನಿಮ್ಮ ಭರವಸೆಗಾಗಿ ನಾನು ಕೃತಜ್ಞನು, ಮಾರಯ್ಯನವರೆ. ಈಗ ನನಗೆ ನೆಮ್ಮದಿಯಾಯಿತು. ಮಾಧವ ನಾಯಕನ ಸೈನಿಕರ ದುರಾಕ್ರಮಣದಿಂದ ಶರಣರನ್ನು ರಕ್ಷಿಸುವ ಶಕ್ತಿ ಸಾಮರ್ಥ್ಯಗಳನ್ನು ನಿಮಗೆ ಕರುಣಿಸಲಿ ಕಲಿದೇವರ ದೇವನು," ಎಂದರು.

ಈ ಮಾತುಗಳು ನಡೆಯುತ್ತಿದ್ದಂತೆ ನಾಗಲಾಂಬೆ ಅಲ್ಲಿಗೆ ಬಂದು ಅಭ್ಯಾಗತರ ಕಾಲುಗಳನ್ನು ಮುಟ್ಟಿ ನಮಸ್ಕಾರ ಮಾಡಿದಳು.

"ಶರಣಧರ್ಮಕ್ಕೆ ಎರಡು ಧ್ರುವತಾರೆಗಳನ್ನು ಕೊಟ್ಟ ಆದರ್ಶ ಜನನಿ ನೀನು, ನಾಗಕ್ಕ. ನಿಮ್ಮ ಪ್ರವಾಸ ಶುಭಪ್ರದವಾಗಲಿ," ಎಂದು ಶಿವಯೋಗಿ ಸಿದ್ಧರಾಮೇಶ್ವರರು ನುಡಿದರು.

"ಹೊಗಳಿ ಹೊಗಳಿ ನನ್ನನ್ನು ಹೊನ್ನ ಶೂಲಕ್ಕಿಡಬೇಡಿ, ಅಣ್ಣ. ಶರಣರೆಲ್ಲರ ಸೇವಿಕೆ ನಾನು," ಎಂದು ಹೇಳಿ ನಾಗಲಾಂಬೆ ಮೋಳಿಗೆ ಮಾರಯ್ಯನವರ ಕಡೆ

ತಿರುಗಿ, "ಗಂಗಾದೇವಿಯವರನ್ನೇಕೆ ಸಂಗಡ ಕರೆತರಲಿಲ್ಲ, ಅಣ್ಣ ?" ಎಂದು ಕೇಳಿದಳು.

"ಅವಸರ ಪ್ರವಾಸದ ಆಯಾಸ ಸಹಿಸುವ ಶಕ್ತಿ ಈಗವಳಿಗಿಲ್ಲ, ಅಕ್ಕನವರೆ. ಆರೋಗ್ಯ ಸರಿಯಾಗಿಲ್ಲದೆ ಈಗೆರಡು ದಿನಗಳಿಂದ ಹಾಸಿಗೆ ಹಿಡಿದು ಸಮೀಪ ಗ್ರಾಮದ ಗೌಡರ ಮನೆಯಲ್ಲಿದ್ದಾಳೆ," ಎಂದು ಮಾರಯ್ಯ ಉತ್ತರಿಸಿದರು.

ಶಿಬಿರದ ಗಣಾಚಾರಿ ನಾಯಕನು ಅಪರಿಚಿತರಿಬ್ಬರನ್ನು ಸಂಗಡ ಕರೆತರುತ್ತಿರುವುದನ್ನು ಕಂಡು ನಾಗಲಾಂಬೆ ಅಲ್ಲಿಂದ ಸರಿದಳು.

ಅಪರಿಚಿತರಲ್ಲೊಬ್ಬನ ಕಪಿನಿ ಅಂಗವಸ್ತ್ರಗಳು, ನೀಳವಾದ ಜಟೆ, ಗಡ್ಡ, ಕೈಯಲ್ಲಿ ಹಿಡಿದಿದ್ದ ಕಮಂಡಲು, ಕಂಕುಳಲ್ಲಿದ್ದ ಯೋಗದಂಡ, ಇವು ಅವನು ಯಾವುದೋ ವಿಶಿಷ್ಟ ಸಂಪ್ರದಾಯದ ಶೈವಯತಿ ಎಂಬುದನ್ನು ತಿಳಿಸುತ್ತಿತ್ತು. ಸಂಗಡಿದ್ದ ಯುವಕನು ಅವನ ಸೇವಕನೋ ಅಂತೇವಾಸಿಯೋ ಆಗಿದ್ದನು.

"ಇವರು ಸಿದ್ಧರಾಮೇಶ್ವರ ಶಿವಯೋಗಿಗಳನ್ನು ನೋಡಲು ಬಂದಿದ್ದಾರೆ, ಅಣ್ಣ," ಎಂದು ನಾಯಕನು ಪರಿಚಯ ಹೇಳಿದನು.

ಶೈವಯತಿ ಸಿದ್ಧರಾಮೇಶ್ವರರಿಗೆ ವಂದಿಸಿ, "ನಿಮಗೆ ನನ್ನ ನೆನಪಿದೆಯೆ, ಅಣ್ಣನವರೇ?" ಎಂದು ಕೇಳಿದನು.

ಸಿದ್ಧರಾಮೇಶ್ವರರು ಉತ್ತರ ಕೊಡಲಿಲ್ಲ. ಅವರ ತೀಕ್ಷ್ಣ ದೃಷ್ಟಿ ಅಗ್ನಿಜ್ವಾಲೆಯಂತೆ ಹೊಸಬನ ಮೇಲೆ ಬಿದ್ದಿತ್ತು.

ಮಾಚಿದೇವರು ಅವರನ್ನು ಕಂಡು ಅಚ್ಚರಿಯಿಂದ, "ಕೆಲವು ದಿನಗಳ ಹಿಂದೆ ಮಹಮನೆಯಲ್ಲಿದ್ದ ಬ್ರಹ್ಮೇಂದ್ರ ಶೀವಯೋಗಿಗಳಲ್ಲವೆ ನೀವು? ನಿಮ್ಮ ಸಂಗಡಿರುವವನು ನಿಮ್ಮ ಅಂತೇವಾಸಿ ಹರೀಶ ರುದ್ರ !" ಎಂದರು.

ಅಪರಿಚಿತ ಯತಿ ಕೃತಕ ನಗೆ ಬೀರಿ ತಲೆಯಾಡಿಸಿ ಹೇಳಿದನು : "ನಾನು ಬ್ರಹ್ಮೇಂದ್ರ ಶಿವಯೋಗಿಯಲ್ಲ, ಮಾಚಿದೇವಯ್ಯನವರೆ. ಅವನ ಅವಳೀ ಸಹೋದರ. ಇಬ್ಬರೂ ಏಕಕಾಲದಲ್ಲಿ ದೀಕ್ಷೆ ತೆಗೆದುಕೊಂಡೆವು. ಈಗ ಕೆಲವು ದಿನಗಳ ಹಿಂದೆ ನನ್ನ ಸಹೋದರ ಕಲ್ಯಾಣಕ್ಕೆ ಹೋಗುವುದಾಗಿ ಹೇಳಿ ಆಶ್ರಮ ಬಿಟ್ಟವನು ಇದುವರೆಗೆ ಹಿಂದಿರುಗಿಲ್ಲ. ಹುಡುಕುತ್ತಾ ನಾವಿಲ್ಲಿಗೆ ಬಂದೆವು. ಅವನ ವಿಚಾರ ನಿಮಗೇನಾದರೂ ತಿಳಿದಿದೆಯೆ?"

ವೇಷವಿನ್ಯಾಸಗಳಲ್ಲಿ ಬ್ರಹ್ಮೇಂದ್ರ ಶೀವಯೋಗಿಯಂತೆ ಕಂಡರೂ ಅವನೇ ಬೇರೆ, ಇವನೇ ಬೇರೆ ಎಂದು ಮಾಚಿದೇವರು ತಿಳಿದರು. ನಡೆ ನುಡಿ ಕಂಠಗಳಲ್ಲಿ ಸಾಕಷ್ಟು ವ್ಯತ್ಯಾಸವಿತ್ತು.

ಈ ಅಪರಿಚಿತ ಯತಿ ನಿಜವಾಗಿ ಬ್ರಹ್ಮೇಂದ್ರ ಶಿವಯೋಗಿಯ ಸಹೋದರನೆ? ಅವನ ಪ್ರಶ್ನೆಗೆ ಉತ್ತರ ಕೊಡುವುದು ಉಚಿತವೆ? ಎಂದು ಯೋಚಿಸಿ ಕೊನೆಗೆ ಮಾಚಿದೇವರು ಹೇಳಿದರು : "ಮೂರು ತಿಂಗಳ ಹಿಂದೆ ಅವರೊಂದು ದಿನ ಮಹಮನೆಗೆ ಬಂದರು. ಅನುಭವಮಂಟಪದ ಪ್ರಚಾರ ಸಭೆಗಳಲ್ಲಿ ಶೈವಧರ್ಮವನ್ನು ಕುರಿತು ಕೆಲವು ವಾರಗಳು ಭಾಷಣ ಮಾಡಿದರು. ಅಷ್ಟರಲ್ಲಿ ಚಾಲುಕ್ಯ ಅಧಿಪತಿ ಜಗದೇಕ ಮಲ್ಲರಸರಿಗೆ ಧರ್ಮೋಪದೇಶಕರ ಅವಶ್ಯಕತೆ ಇದೆಯೆಂದು ಕೇಳಿ ನಾವು ಅವರನ್ನು ರಾಜಗೃಹಕ್ಕೆ ಕಳುಹಿಸಿದೆವು. ಆಮೇಲೆ ಅವರ ವಿಚಾರ ತಿಳಿಯದು."

"ನಿಮ್ಮ ಸಂಗಡ ಅವರು ವಲಸೆ ಬರಲಿಲ್ಲವೆ?"

–ಅಪರಿಚಿತ ಯತಿ ಪುನಃ ಕೇಳಿದನು.

"ಬರುವುದಾಗಿ ಹೇಳಿ ಕಳುಹಿಸಿದ್ದರು. ಆದರೆ ಬರಲಿಲ್ಲ. ನೀವವರನ್ನು ಕಲ್ಯಾಣದ ರಾಜಗೃಹದಲ್ಲಿ ಹುಡುಕಿರಿ, ಅಣ್ಣ. ಅವರು ಅಲ್ಲಿಯೇ ಇರಬೇಕು,"

–ಎಂದು ಮಾಚಿದೇವರು ಮುಕ್ತಾಯದ ದನಿಯಿಂದ ಹೇಳಿದರು. ಈ ಸೂಚನೆ ತಿಳಿದು ಕುಹಕದ ನಗೆ ಬೀರಿ ಅಪರಿಚಿತನು, "ನನ್ನ ಮೇಲೆ ಸಿಟ್ಟಾಗಬೇಡಿರಿ, ಅಣ್ಣ. ಬಂದ ಕೆಲಸ ಮುಗಿಸದೆ ಹೊರಡುವ ಅಭ್ಯಾಸವಿಲ್ಲ ನನಗೆ. ಈಗ ನನ್ನ ಸಹೋದರ ರಾಜಗೃಹದಲ್ಲಿಲ್ಲವೆಂದು ತಿಳಿದಿದೆ. ಯಾರ ಧರ್ಮೋಪದೇಶಕನಾಗಿ ಅವನು ಅಲ್ಲಿಗೆ ಹೋದನೋ ಆ ಚಾಲುಕ್ಯ ಚಕ್ರೇಶ್ವರರು ಇಂದು ಮುಂಜಾವಿನಲ್ಲಿ ಸ್ವರ್ಗವಾಸಿಗಳಾದರು. ಆಗಲೇ ಅವರ ಅಂತ್ಯಕರ್ಮಗಳೂ ಮುಗಿದವು," ಎಂದನು.

ನೆನ್ನಿನ ರಾತ್ರಿ ಚಾಲುಕ್ಯ ಸರ್ವಾಧಿಕಾರಿ ಬಿಜ್ಜಳನ ಕೊಲೆ! ಇಂದು ಮುಂಜಾವಿನಲ್ಲಿ ಚಾಲುಕ್ಯ ಅರಸು ಜಗದೇಕಮಲ್ಲನ ಅಂತ್ಯ! ಈ ಎರಡು ವಿಪತ್ತುಗಳೂ ಏಕಕಾಲದಲ್ಲಿ ಕಲ್ಯಾಣಕ್ಕೆ ಒದಗಿದ್ದು ಹೇಗೆ? ಎರಡು ಘಟನೆಗಳಿಗೆ ಪರಸ್ಪರ ಸಂಬಂಧವಿದೆಯೆ?

ಮಾಚಿದೇವರು ಸ್ತಂಭಿತರಾದರು. ಕ್ರಾಂತಿಕಾರಕ ಅಜ್ಞಾತ ಪ್ರಕರಣವೊಂದು ರೂಪುತಳೆದು ಎದುರಿಗೆ ನಿಂತಂತೆ ಚೆನ್ನಬಸವಣ್ಣನವರು ಬೆಬ್ಬೆರಗಾಗಿ ಅಪರಿಚಿತ ಯತಿಯ ಮುಖ ನೋಡುತ್ತಿದ್ದರು.

ಅದುವರೆಗೆ ಮೌನವಾಗಿದ್ದ ಸಿದ್ಧರಾಮೇಶ್ವರರು ಅಪರಿಚಿತನ ಕಡೆ ತಿರುಗಿ ತುಸು ಗಡುಸಾದ ದನಿಯಿಂದ, "ಈ ದುರ್ವಾರ್ತೆ ತಂದ ನೀನು ಯಾರು ಕಪಟ ಜಂಗಮ? ನಿನ್ನ ಈ ವೇಷ ನಮ್ಮನ್ನು ವಂಚಿಸಲಾರದು," ಎಂದರು.

"ಈಗ ಅಣ್ಣನವರ ಮಹಿಮೆ ಅಭಿವ್ಯಕ್ತವಾಯಿತು," ಎಂದು ಹೇಳಿ ಅಪರಿಚಿತನು

ಕಮಂಡಲು, ಯೋಗದಂಡಗಳನ್ನು ಕೆಳಗಿಟ್ಟು, ಗಡ್ಡ ಜಟೆಗಳನ್ನು ಕಿತ್ತೊಗೆದು, "ಈಗ ನೀವು ನನ್ನನ್ನು ಗುರುತಿಸಬಲ್ಲಿರಿ, ಗುರುದೇವ." ಎಂದು ಕೈ ಜೋಡಿಸಿ ಎದುರಿಗೆ ನಿಂತನು.

"ನೀನು ಬಿಜ್ಜಳನ ಸಹೋದರ ಕರ್ಣದೇವನಲ್ಲವೇ? ನಮ್ಮನ್ನು ನೋಡಲು ಇಷ್ಟೆಲ್ಲ ವಂಚನೆಯೇಕೆ ? ಬಾ, ಕುಳಿತುಕೊ," ಎಂದರು ಸಿದ್ಧರಾಮೇಶ್ವರರು.

ನಮ್ರ ಶಿಷ್ಯನಂತೆ ಕರ್ಣದೇವನು ಸಿದ್ಧರಾಮೇಶ್ವರರ ಪಾದಗಳಿಗೆರಗಿ ಎದುರಿಗೆ ಕುಳಿತು, "ಮಾಧವ ನಾಯಕನ ಕಾವಲು ಭಟರಿಗೆ ತಿಳಿಯದಂತೆ ಬರಲು ನಾನು ಈ ವೇಷ ಧರಿಸಬೇಕಾಯಿತು. ನಗರದಲ್ಲಿ ಈಗ ಅವನ ನಿರಂಕುಶಾಧಿಕಾರ ನಡೆಯುತ್ತಿದೆ. ಮಹಾದ್ವಾರಗಳನ್ನೆಲ್ಲ ಬಂಧಿಸಿ, ತನ್ನ ವಿಶೇಷಾನುಮತಿಯಿಲ್ಲದೆ ಯಾರೂ ಹೊರಗೆ ಹೋಗಕೂಡದೆಂದು ಆಜ್ಞೆ ಮಾಡಿದ್ದಾನೆ," ಎಂದನು.

"ಈ ಹಗಲು ವೇಷದ ವಸ್ತುಗಳು ನಿನಗೆಲ್ಲಿ ದೊರಕಿದುವು?"

–ಸಿದ್ಧರಾಮೇಶ್ವರರು ನಗುತ್ತಾ ಪ್ರಶ್ನಿಸಿದರು.

"ರಾಜಗೃಹಕ್ಕೆ ಧರ್ಮೋಪದೇಶಕನಾಗಿ ಬಂದ ಜಂಗಮನೊಬ್ಬನು ಇದನ್ನು ಬಿಟ್ಟು ಹೋಗಿದ್ದನು, ಅಣ್ಣನವರೆ," ಕರ್ಣದೇವ ನಗುದನಿಯಿಂದ ಉತ್ತರಿಸಿದನು. "ಆ ನಿರ್ಮಾಲ್ಯ ನನಗೆ ಸಹಾಯಕವಾಯಿತು. ಮಹಮನೆಯ ಶರಣರೊಡನೆ ವಲಸೆ ಹೋಗುವುದಾಗಿ ಹೇಳಿ ಕಾವಲು ಭಟನೊಬ್ಬನ ಸಹಾಯದಿಂದ ಹೊರಗೆ ಬಂದೆ."

"ನಾವು ಬಂದ ವಿಚಾರ ನಿಮಗೆ ತಿಳಿದದ್ದು ಹೇಗೆ?"

"ರಾಜಗೃಹಕ್ಕೆ ಕಾಯಿಪಲ್ಲೆಗಳನ್ನು ತಂದುಕೊಡುವ ಗ್ರಾಮವಾಸಿಯಿಂದ. ಬಾಂಧವರ ಓಣಿಯಲ್ಲಿ ನೀವು ಮೋಳಿಗೆಯ ಮಾರಯ್ಯನವರ ಸಂಗಡ ಮಾತಾಡುತ್ತಿದ್ದುದನ್ನು ಅವನು ಕಂಡನಂತೆ. ನಗರದಿಂದ ಹೊರಬಿದ್ದ ಕೂಡಲೆ ನಾನು ಅಲ್ಲಿಗೆ ಹೋದೆ. ಆಂಜನೇಯ ನದಿಯಾಚಿನ ಶರಣ ಶಿಬಿರಕ್ಕೆ ನೀವು ಹೋಗಿರುವುದಾಗಿ ಕೇಳಿ ಇಲ್ಲಿಗೆ ಬಂದೆ."

ಸಿದ್ಧರಾಮೇಶ್ವರನು ಸಾಭಿಪ್ರಾಯದಿಂದ ಮೋಳಿಗೆಯ ಮಾರಯ್ಯನವರ ಮುಖ ನೋಡಿದರು. ಮೋಳಿಗೆಯ ಮಾರಯ್ಯ ಮೃದುವಾಗಿ ನಕ್ಕು, "ಕರ್ಣದೇವರಸರು ಶರವೇಗದಿಂದ ನಿಮ್ಮಲ್ಲಿಗೆ ಬಂದಿದ್ದಾರೆ, ಅಣ್ಣನವರೆ. ಅವಸರದ ರಾಜಕಾರ್ಯ ಆಲಸ್ಯವನ್ನು ಸಹಿಸುವುದಿಲ್ಲ," ಎಂದರು.

"ಈಗ ನಮ್ಮಿಂದ ನಿನಗೇನಾಗಬೇಕು, ತಮ್ಮ ?"

ಸಿದ್ಧರಾಮೇಶ್ವರರು ಸಹಾನುಭೂತಿಯ ಮೆಲ್ದನಿಯಿಂದ ಕರ್ಣದೇವನನ್ನು ಪ್ರಶ್ನಿಸಿದರು.

ಕರ್ಣದೇವ ಕೇಳಿದನು : "ಅಣ್ಣನ ದುರ್ಮರಣದಿಂದ ಕಲ್ಯಾಣದ ಪರಿಸ್ಥಿತಿ ಹದಗೆಟ್ಟಿತ್ತು. ಜಗದೇಕಮಲ್ಲನ ಮೃತ್ಯುವಿನಿಂದ ಅದು ವಿಷಮಾವಸ್ಥೆಗೇರುತ್ತದೆ. ಚಾಲುಕ್ಯ ಅರಸೊತ್ತಿಗೆ, ರಾಜ್ಯದ ಸರ್ವಾಧಿಕಾರ, ಇವೆರಡಕ್ಕೂ ಏಕಕಾಲದಲ್ಲಿ ಸ್ಪರ್ಧೆ ಪ್ರಾರಂಭವಾಗುತ್ತದೆ. ಯುದ್ಧವೂ ನಡೆಯುವುದು. ಈ ಸಂದರ್ಭದಲ್ಲಿ ನೀವು ನನಗೆ ನೆರವಾಗಬೇಕಾಗಿ ಬೇಡುತ್ತೇನೆ. ಅಣ್ಣ ಬಿಜ್ಜಳನು ಉದ್ದೇಶಿಸಿದಂತೆ ತೈಲಪ ಮಹಾರಾಜರ ಕ್ಷೇತ್ರಜ ಪುತ್ರ ಕುಮಾರ ಪ್ರೇಮಾರ್ಣವನು ಅರಸೊತ್ತಿಗೆಯೇರಲಿ. ನನಗೆ ರಾಜ್ಯದ ಸರ್ವಾಧಿಕಾರ ಸಿಕ್ಕಿದರೆ ಸಾಕು. ಅದಕ್ಕಾಗಿ ನಿಮ್ಮ ಆಶೀರ್ವಾದ ಬೇಡಲು ಬಂದಿದ್ದೇನೆ."

"ನಮ್ಮ ಆಶೀರ್ವಾದ ನಿನಗೆ ಸರ್ವಾಧಿಕಾರ ಕೊಡಿಸಬಲ್ಲುದೆ, ಕರ್ಣದೇವ? ಎಲ್ಲವನ್ನೂ ತೊರೆದ ನಿರಾಭಾರಿ ಜಂಗಮ ನಾನು." –ಸಿದ್ಧರಾಮೇಶ್ವರರು ನುಡಿದರು ಅನಾಸಕ್ತಿಯಿಂದ.

ಕರ್ಣದೇವ ಅದನ್ನು ಗಮನಿಸಲಿಲ್ಲ. ಉತ್ಸಾಹದ ಭರದಲ್ಲಿ ಮುಂದುವರಿದು ಹೇಳಿದನು : "ಈಗ ಮಾಧವನಾಯಕನು ತಾನೇ ಸರ್ವಾಧಿಕಾರಿಯಾಗಲು ಪ್ರಯತ್ನಿಸುತ್ತಿದ್ದಾನೆ, ಅಣ್ಣನವರೆ. ಸೈನ್ಯದ ಬಹುಭಾಗ ಅವನ ಅಧೀನದಲ್ಲಿದೆ. ಶರಣ ಧರ್ಮದಲ್ಲಿ ಬದ್ಧದ್ವೇಷಿಯಾದ ಅವನು ಸರ್ವಾಧಿಕಾರಿಯಾಗುವುದು ನಿಮಗಿಷ್ಟವೆ? ನೀವು ನನ್ನ ಕಡೆಗಿರುವಿರೆಂದು ತಿಳಿದರೆ ಸಾಕು, ಮಾಧವನಾಯಕನ ಸೈನ್ಯದಲ್ಲಿ ಅರ್ಧಭಾಗ ಅವನನ್ನು ಬಿಟ್ಟು ನನ್ನನ್ನು ಸೇರುವುದು. ಕುಮಾರ ಸೋಮೇಶ್ವರನು ಮಂಗಳವೇಡೆಯಿಂದ ಬರುವಷ್ಟರಲ್ಲಿ ಮಾಧವ ನಾಯಕನನ್ನು ನಾನು ಸೋಲಿಸುವೆನು. ಕಲ್ಯಾಣ ನಿರಾಪದವಾಗುವುದು."

ಸಿದ್ಧರಾಮೇಶ್ವರರ ಮುಖದಲ್ಲಿ ಅವಿಶ್ವಾಸದ ಮಿದುನಗೆ ಮೂಡಿತು. "ನೀನು ಮರಳ ಮೇಲೆ ಮನೆ ಕಟ್ಟುತ್ತಿರುವೆ, ಕರ್ಣದೇವ. ನೀವು ಬಸವಣ್ಣನವರನ್ನು ಹೊರಗೆ ಕಳುಹಿಸಿದಾಗಲೆ ಕಲ್ಯಾಣದ ಸೌಭಾಗ್ಯ ನಾಶವಾಯಿತು. ಪುನಃ ಅದನ್ನು ಹಿಂದಕ್ಕೆ ತರುವೆನೆಂಬುದು ಫಲಿಸದ ಆಸೆ. ಅಲ್ಲದೆ....ಶರಣರ ವಿಚಾರದಲ್ಲಿ ಅಧಿಕಾರದಿಂದ ಮಾತಾಡಬಲ್ಲವರು ಈ ಮಾಚಿದೇವರು ಮತ್ತು ಚೆನ್ನಬಸವಣ್ಣನವರು. ನೀನು ಅವರ ಸಹಾನುಭೂತಿಗಾಗಿ ಪ್ರಯತ್ನಿಸು," ಎಂದರು ಅವರು.

ಚೆನ್ನಬಸವಣ್ಣನವರು ಮೌನವಾಗಿ ಧರ್ಮರಕ್ಷಣೆಗೆ ಮುಂದೆ ಅನುಸರಿಸಬೇಕಾದ ಕಾರ್ಯವಿಧಾನವನ್ನು ಚಿಂತಿಸುತ್ತಿದ್ದರು.

"ಶರಣರು ರಾಜಕೀಯಕ್ಕೆ ಪ್ರವೇಶಿಸುವುದಿಲ್ಲ, ಕರ್ಣದೇವರಸರೆ. ನಮ್ಮಿಂದ ನಿಮಗಾವ ಸಹಾಯವೂ ದೊರಕಲಾರದು."– ನಿರ್ಧಾರಕ ಕಂಠದಿಂದ ಮಾಚಿದೇವರು ಉತ್ತರ ಕೊಟ್ಟರು.

ಕರ್ಣದೇವ ಅಪ್ರತಿಭನಾಗಿ ಚೆನ್ನಬಸವಣ್ಣನವರ ಕಡೆ ನೋಡಿದನು.

"ಮಾಚಿದೇವರ ಅಭಿಪ್ರಾಯವೇ ನನ್ನ ಅಭಿಪ್ರಾಯ, ಒಂದು ಸಾರಿ ಸರ್ಪದ್ರಷ್ಟರಾದವರು ಮುಂದೆ ಯಾವಾಗಲೂ ಹುತ್ತದ ಬಳಿ ಹೋಗುವುದಿಲ್ಲ. ಬಿಜ್ಜಳ ರಾಯರು ನನ್ನನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಂಡು ಕಲಚೂರ್ಯ ರಾಜಿಕದ ಪರಿಚಯ ಮಾಡಿಕೊಟ್ಟಿದ್ದಾರೆ. ನಾವು ಕಲ್ಯಾಣವನ್ನು ಬಿಟ್ಟು ವಲಸೆ ಬರಲು ಆ ದುರದೃಷ್ಟಕರ ಅನುಭವವೇ ಕಾರಣ. ಮುಂದೆ ಶರಣರನ್ನು ರಾಜಿಕದಿಂದ ದೂರವಾಗಿಡಲು ಸರ್ವಪ್ರಯತ್ನ ಮಾಡುತ್ತೇನೆ," ಎಂದರು ಚೆನ್ನಬಸವಣ್ಣನವರು.

"ನಿಮ್ಮ ಉತ್ತರಗಳು ನನ್ನನ್ನು ಸ್ತಂಭಿತಗೊಳಿಸಿವೆ, ಅಯ್ಯಗಳೇ. ಅಣ್ಣನ ಅಪರಾಧಕ್ಕಾಗಿ ತಮ್ಮನನ್ನು ಶಿಕ್ಷಿಸುವುದು ಯಾವ ಧರ್ಮ? ನಾನು ನಿಮ್ಮನ್ನು ಮಂತ್ರಿಯಾಗಲು ಕರೆಯುತ್ತಿಲ್ಲ. ಶರಣರು ರಾಜಿಕಕ್ಕೆ ಪ್ರವೇಶಿಸಲು ಹೇಳುತ್ತಿಲ್ಲ. ನೀವು ದಯಮಾಡಿ ವಲಸೆಯ ನಿರ್ಧಾರವನ್ನು ತ್ಯಜಿಸಿ ಕಲ್ಯಾಣಕ್ಕೆ ಹಿಂದಿರುಗಬೇಕಾಗಿ ನನ್ನ ಪ್ರಾರ್ಥನೆ. ಅದರಿಂದ ನಗರದಲ್ಲಿ ನನ್ನ ಕೈ ಮೇಲಾಗುವುದು. ಮಾಧವ ನಾಯಕನ ದುರಾಡಳಿತವನ್ನು ತಡೆಯಲು ನಾನು ಶಕ್ತನಾಗುವೆನು," ಎಂದು ಕರ್ಣದೇವ ಪುನಃ ಹೇಳಿದನು.

ಚೆನ್ನಬಸವಣ್ಣನವರು ಉತ್ತರ ಕೊಡಲಿಲ್ಲ. ಮುಖ ತಿರುಗಿಸಿ ತಮ್ಮ ಧರ್ಮ ಚಿಂತನೆಯಲ್ಲಿ ಮಗ್ನರಾದರು.

ಅವರ ಪರವಾಗಿ ಮಾಚಿದೇವರು ಉತ್ತರ ಕೊಟ್ಟರು : "ನಾವು ವಲಸೆ ಹೊರಟು ಆಂಜನೇಯ ಹೊಳೆ ದಾಟಿ ಆಗಲೆ ಕೊಂಚ ದೂರ ಬಂದಿದ್ದೇವೆ, ಕರ್ಣದೇವರಸರೆ. ಈಗ ಪುನಃ ಕಲ್ಯಾಣಕ್ಕೆ ಹಿಂದಿರುಗುವುದು, ಬೇಡವೆಂದು ಉಗುಳಿದ್ದನ್ನು ಪುನಃ ತೆಗೆದು ಬಾಯಿಗಿಟ್ಟುಕೊಂಡಂತೆ. ಅಂತಹ ಹೊಲಸು ಶರಣರಿಗೆ ತ್ರಿಕಾಲದಲ್ಲಿಯೂ ಸಲ್ಲ."

ಕರ್ಣದೇವ ಯೋಚಿಸುತ್ತ ಕುಳಿತನು.

ಮೋಳಿಗೆ ಮಾರಯ್ಯನವರು ಅವನ ನೆರವಿಗೆ ಬಂದು ಹೇಳಿದರು : "ಶರಣರು ರಾಜಸತ್ತೆಯಲ್ಲಿ ವಿಶ್ವಾಸ ಕಳೆದುಕೊಂಡಿದ್ದಾರೆ, ಕರ್ಣದೇವರಸರೆ. ಅವರು ವಲಸೆ ಹೊರಟಿರುವುದು ಯಾವ ಒಬ್ಬ ಅರಸನ ಅಥವಾ ಪ್ರಭುತ್ವದ ವಿರುದ್ಧವಾಗಿ ಅಲ್ಲ–ಎಲ್ಲ ಕಾಲ, ಎಲ್ಲ ದೇಶಗಳ ರಾಜಸತ್ತೆಗೆ ತಮ್ಮ ವಿರೋಧದ

ಸಂಕೇತವಾಗಿ. ಪ್ರಜಾಪೀಡಕ ರಾಜಸತ್ತೆ ಅಧಿಕಾರದಲ್ಲಿರುವವರೆಗೆ ನಿರುಪದ್ರವಿಗಳೂ ನಿಸ್ಸಹಾಯಕರೂ ಆದ ಪ್ರಜೆಗಳಿಗೆ ಅರಣ್ಯವೇ ವಾಸಿ. ಅದಕ್ಕಾಗಿ ಶರಣರು ಸಹ್ಯಾದ್ರಿಯ ವನ್ಯಪ್ರದೇಶಗಳಲ್ಲಿ ಆಶ್ರಮಗಳನ್ನು ರಚಿಸಿಕೊಂಡು ಅರಣ್ಯವಾಸಿಗಳಾಗಿ ತಮ್ಮ ಮಣಿಹವನ್ನು ಪೂರೈಸಲು ನಿರ್ಧರಿಸಿದ್ದಾರೆ."

ಮಾರಯ್ಯನವರ ನುಡಿಗಳೂ ಕರ್ಣದೇವನನ್ನು ಮತ್ತೆ ತೊಡಕಿನಲ್ಲಿ ಹಾಕಿದವು. "ನಿಮ್ಮ ಮಾತುಗಳು ನನಗೆ ಅರ್ಥವಾಗುತ್ತಿಲ್ಲ, ಅಣ್ಣನವರೆ," ಎಂದನು ಅವನು.

ಮಾರಯ್ಯನವರು ಮತ್ತೆ ನುಡಿದರು : "ಶರಣರು ತಿಳಿದಿರುವಂತೆ ಮಾನವರಲ್ಲಿ ಎರಡು ವರ್ಗ–ಪ್ರಜಾಪೀಡಕರು, ಪ್ರಜಾಸಾಮಾನ್ಯರು ಎಂದು. ರಾಜನು, ಅವನ ಅಧೀನರಾಗಿ ರಾಜಾಜ್ಞೆಗಳನ್ನು ಕಾರ್ಯಗತ ಮಾಡುವ ಮಂತ್ರಿ ಸಾಮಂತರು, ಅಧಿಕಾರಿ ನಿಯುಕ್ತರು. ಕರಣಿಕ–ಸೈನಿಕ–ಭಟರು, ಇವರು ಮೊದಲ ವರ್ಗ. ಇವರೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಪ್ರಜಾಪೀಡಕರು. ತಾವು ದುಡಿಯದೆ ಬೇರೆಯವರ ದುಡಿತದಲ್ಲಿ ಹೆಚ್ಚಿನ ಭಾಗವನ್ನು ವಂಚನೆಯಿಂದಲೋ ಬಲಾತ್ಕಾರದಿಂದಲೋ ಕಸಿದುಕೊಂಡು ಅದರಿಂದ ಜೀವಿಸುವುದರಿಂದ ಇವರನ್ನು ಪರೋಪಜೀವಿಗಳೆಂದೂ ಕರೆಯುತ್ತಾರೆ. ಕೃಷಿ, ಕಲೆ, ವಾಣಿಜ್ಯ ಮುಂತಾದ ಕಾಯಕಗಳಿಂದ ಜೀವಿಸುವವರೆಲ್ಲ ಎರಡನೆಯ ವರ್ಗ. ಪ್ರಜಾಸಾಮಾನ್ಯರು, ಪ್ರಜಾಪೀಡಕರೆಂದು ಕರೆಯಲ್ಪಡುವ ಮೊದಲನೆಯ ವರ್ಗದವರು, ಪ್ರಜಾಸಾಮಾನ್ಯರೆಂದು ಕರೆಯಲ್ಪಡುವ ಎರಡನೆಯ ವರ್ಗದವರನ್ನು ಸುಲಿದು ತಿನ್ನಲು ರಾಜಸತ್ತೆಯಲ್ಲಿ ಹೆಚ್ಚು ಅವಕಾಶ ಅನುಕೂಲಗಳಿರುವುದರಿಂದ ಶರಣರು ಅದನ್ನು ವಿರೋಧಿಸುತ್ತಾರೆ. ರಾಜಸತ್ತೆಯ ಪ್ರಭಾವಲಯದಿಂದ ಸಾಧ್ಯವಿದ್ದಷ್ಟು ದೂರದಲ್ಲಿರುವುದು ವಲಸೆಯ ಉದ್ದೇಶಗಳಲ್ಲೊಂದು."

"ರಾಜನಿಲ್ಲದ ರಾಜ್ಯವುಂಟೆ ? ನೀವು ಹೇಳುವುದು ಪರಸ್ಪರ ವಿರೋಧವಾಗಿದೆ, ಅಣ್ಣನವರೆ." –ಕರ್ಣದೇವ ಯೋಚಿಸಿ ಹೇಳಿದನು.

ಮಾರಯ್ಯನವರೆಂದರು : "ಪ್ರಜಾಪೀಡೆಗೆ ಎಲ್ಲಿ ಅವಕಾಶವಿರುವುದಿಲ್ಲವೋ, ಅಥವಾ ಗಣನೀಯವಲ್ಲದ ಅಲ್ಪ ಅವಕಾಶ ಮಾತ್ರ ಇರುವುದೋ ಅಂತಹ ರಾಜ್ಯ ಪದ್ಧತಿ ಬೇಕು ಶರಣರಿಗೆ."

"ಯಾವುದಿದೆ ಅಂತಹ ರಾಜ್ಯ ವಿಧಾನ?"

"ಭಾರತದ ಇತಿಹಾಸ ಪುರಾಣಗಳು ಅದಕ್ಕೆ ಉತ್ತರ ಕೊಡುತ್ತವೆ, ಕರ್ಣ ದೇವರಸರೆ. ನಮ್ಮ ದೇಶದಲ್ಲಿ ವೇದಗಳ ಕಾಲದಿಂದ ಗಣರಾಜ್ಯ ಪದ್ಧತಿ ಆಚರಣೆಯಲ್ಲಿತ್ತು. ಪ್ರಜೆಗಳನ್ನು ಪ್ರತಿನಿಧಿಸುವ ಸಮಿತಿ ಸಂಸ್ಥೆಗಳು ರಾಜ್ಯದ

ಆಡಳಿತ ನಡೆಸುತ್ತಿದ್ದವು. ಕಾಲಕ್ರಮದಲ್ಲಿ ಅವು ನಾಶವಾಗಿ ಪ್ರಜಾಪೀಡೆಗೆ ಅನುಕೂಲವಾದ ರಾಜಸತ್ತೆ ಪ್ರಚಾರಕ್ಕೆ ಬಂದಿತು.”

“ಗಣರಾಜ್ಯಗಳು ನಾಶವಾದದ್ದು ಹೇಗೆ?”

“ವರ್ಣವಿಭಜನೆಯ ಅವಿವೇಕ ವಿಧಾನ, ಅದಕ್ಕೆ ಕಾರಣವಾಯಿತು. ಬುದ್ಧಿ ಜೀವಿಯಾದ ಬ್ರಾಹ್ಮಣನ ಅನಾಸಕ್ತಿ, ಶಸ್ತ್ರಜೀವಿಯಾದ ಕ್ಷತ್ರಿಯನ ಸ್ವಾರ್ಥ, ಕೃಷಿ ವಾಣಿಜ್ಯಗಳಿಂದ ಗಳಿಸಿದ ಧನವನ್ನು ಮೇಲಿನ ಎರಡು ವರ್ಣಗಳವರಿಗೆ ಸೂರೆಗೊಡುತ್ತಿದ್ದ ವೈಶ್ಯ ಶೂದ್ರರ ಅಸಹಾಯಕತೆ, ಇವುಗಳಿಂದ ಗಣರಾಜ್ಯಗಳ ವಿನಾಶ ತ್ವರಿತಗೊಂಡು, ಅದರ ಸ್ಥಾನದಲ್ಲಿ ರಾಜಸತ್ತೆ ಪ್ರತಿಷ್ಠಿತವಾಯಿತು. ಈ ಅನರ್ಥಕ್ಕೆ ಕಾರಣವಾದ ವರ್ಣವ್ಯವಸ್ಥೆಯನ್ನು ಮತ್ತು ಅದರ ದುಷ್ಫಲವಾದ ಜಾತಿಪದ್ಧತಿಯನ್ನು ಸಮಾಜದಿಂದ ತೊಡೆದು ಹಾಕುವುದು ಶರಣಧರ್ಮದ ಉದ್ದೇಶ. ಪರಿಮಿತ ವಲಯದಲ್ಲಿ ಶರಣರು ಸಾಧಿಸಿರುವ ಈ ಸುಧಾರಣೆ ದೇಶಾದ್ಯಂತ ಹರಡಿದಾಗ ಪ್ರಜೆಗಳ ಸುಖೀರಾಜ್ಯ ಪ್ರತಿಷ್ಠಿತವಾಗುವುದು.”

“ಆ ಕನಸಿನ ರಾಜ್ಯವನ್ನು ಕಾಣುವುದಕ್ಕಾಗಿಯೇ ಅಣ್ಣನವರು ದೂರದ ಕಾಶ್ಮೀರವನ್ನು ಬಿಟ್ಟು ಕಲ್ಯಾಣಕ್ಕೆ ಬಂದದ್ದು–ಅಲ್ಲವೆ?”

ನುಡಿಯಲ್ಲಿ ಕಟಕಿಯಿದ್ದರೂ ಕಟಕಿಯಾಡುವುದು ಕರ್ಣದೇವನ ಉದ್ದೇಶವಾಗಿರಲಿಲ್ಲ.

ಇದನ್ನು ಅರಿತ ಮಾರಯ್ಯನವರು ನಿರ್ಲಿಪ್ತರಾಗಿ ಉತ್ತರ ಕೊಟ್ಟರು : “ಆ ಹಿರಿಯಾಸೆಯಿಂದಲೇ ನಾನು ರಾಜ್ಯವನ್ನು ತ್ಯಜಿಸಿ ಕಲ್ಯಾಣಕ್ಕೆ ಬಂದೆ, ಕರ್ಣದೇವರಸರೆ. ಆದರೆ ನಾನು ಇಲ್ಲಿ ಕಂಡದ್ದು ಆ ಪ್ರಜಾಪೀಡಕ ರಾಜಸತ್ತೆಯ ಇನ್ನೊಂದು ಭಯಂಕರ ರೂಪವನ್ನು ! ರಾಜ್ಯಾಪಹಾರಿ ಮಂಡಲೇಶ್ವರನೊಬ್ಬನ ನಿರಂಕುಶ ದಬ್ಬಾಳಿಕೆ, ಸ್ವಾರ್ಥ, ಕ್ರೌರ್ಯಗಳಿಂದ ಪ್ರಚೋದನೆ ಪಡೆದು, ಧರ್ಮಾಂಧ ಸಮಾಜ ಆ ದಬ್ಬಾಳಿಕೆಗೆ ಕೊಟ್ಟ ಬೆಂಬಲ, ಅದರ ಫಲವಾಗಿ ಶರಣರ ಮೇಲೆ ನಡೆಸಿದ ಘೋರ ಅತ್ಯಾಚಾರ,–ಈ ಅಪ್ರೀತಕರ ವಸ್ತುವಿನ ದುರಂತ ನಾಟಕವೊಂದು ನನ್ನ ಕಣ್ಣುಗಳ ಮುಂದೆ ಅಭಿನೀತವಾಯಿತು. ಶರಣರು ಅಪೇಕ್ಷಿಸುವ ಸುಖೀರಾಜ್ಯ, ಇನ್ನೂ ದೂರ...ದೂರ....ಬಹು ದೂರದಲ್ಲಿದೆಯೆಂದು ತಿಳಿದೆ.”

ಮಾರಯ್ಯನವರ ನುಡಿಗಳ ಆವೇಗ ನಿರಾಶೆಯ ಭಾವಗಳು ಹೇಮಂತದ ಚಳಿಗಾಳಿಯಂತೆ ಅಲ್ಲಿದ್ದವರನ್ನು ತಲ್ಲಣಗೊಳಿಸಿದವು.

ಆಶಾಹತನಂತೆ ಕರ್ಣದೇವ ಕೊಂಚ ಹೊತ್ತು ತಲೆಬಾಗಿ ಸುಮ್ಮನೆ ಕುಳಿತಿದ್ದನು. ಅನಂತರ ಅವನು ದಢಾರನೆ ಎದ್ದು ಸಿದ್ಧರಾಮೇಶ್ವರರಿಗೆ ವಂದಿಸಿ, “ನಿಮಗೆ

ತೊಂದರೆ ಕೊಟ್ಟಿದ್ದಕ್ಕಾಗಿ ಕ್ಷಮಿಸಿ, ಅಣ್ಣನವರೆ," ಎಂದು ಹೇಳಿ ಉಳಿದ ಶರಣರ ಕಡೆ ತಿರುಗಿ, "ನೀವು ಭಾವಿಸಿದಂತೆ ಕ್ಷತ್ರಿಯನು ಪ್ರಜಾಪೀಡಕನಾಗಬಹುದು. ಆದರೆ ಎಂದಿಗೂ ಹೇಡಿಯಾಗುವುದಿಲ್ಲ. ಶರಣರು ನನಗೆ ಸಹಾಯ ಮಾಡಲಿ, ಮಾಡದಿರಲಿ, ಮಾಧವ ನಾಯಕನ ಸಂಗಡ ನಾನು ಯುದ್ಧಹೂಡುತ್ತೇನೆ. ಗೆದ್ದು ಸರ್ವಾಧಿಕಾರಿಯಾಗುವುದು, ಇಲ್ಲವೇ ಯುದ್ಧದಲ್ಲಿ ಸತ್ತು ವೀರಸ್ವರ್ಗ ಪಡೆಯುವುದು, ಇದು ನನ್ನ ನಿರ್ಧಾರ," ಎಂದು ನುಡಿದು ಅಲ್ಲಿಂದ ಹೊರಟನು.

ಅಂತೇವಾಸಿಯಂತೆ ವೇಷಧರಿಸಿ ಸಂಗಡ ಬಂದಿದ್ದ ಅಂಗರಕ್ಷಕ ಭಟನು, ಕರ್ಣದೇವ ಬಿಸುಟಿದ್ದ ಸನ್ಯಾಸಿಯ ಅಂಗಕಾರ್ಯಗಳನ್ನು ತೆಗೆದುಕೊಂಡು ಹೋಗಲು ಮರೆಯಲಿಲ್ಲ.

ಆ ದಿನ ಸಂಜೆ ಸೂರ್ಯಾಸ್ತವಾಗುತ್ತಿದ್ದಂತೆ ಅವರು ಕಲ್ಯಾಣದ ಈಶಾನ್ಯ ಮಹಾದ್ವಾರಕ್ಕೆ ಬಂದರು. ಅಲ್ಲಿ ಕಾವಲಿದ್ದ ಭಟನಾಯಕನು, "ಅಯ್ಯನವರು ಆಗಲೇ ವಲಸೆಯಿಂದ ಹಿಂದಿರುಗಿದಂತಿದೆ," ಎಂದು ನಗೆಯಾಡಿದನು.

ಯೋಗದಂಡವನ್ನು ಆಡಿಸುತ್ತ ಕರ್ಣದೇವ, "ನನ್ನ ಕಪಿನಿ ಚೀವರಗಳ ಗಂಟನ್ನು ಮಠದಲ್ಲಿ ಮರೆತಿದ್ದೆ, ಭಟನಾಯಕ. ಅಲ್ಲದೆ ರಾಜಗೃಹದ ಹೆಣ್ಣು ಬೆಕ್ಕು ಮರಿ ಹಾಕಿದೆಯಂತೆ. ನಾನು ವಲಸೆ ಹೋದರೆ ಅದನ್ನು ನೋಡಿಕೊಳ್ಳುವವರಾರು? ನಾಲ್ಕು ದಿನ ಬಿಟ್ಟು ಹೋದರಾಯಿತು. ಸಹ್ಯಾದ್ರಿಯ ವನಪ್ರದೇಶ ಅಷ್ಟರಲ್ಲಿ ಎಲ್ಲಿಯೂ ಓಡಿಹೋಗುವುದಿಲ್ಲ," ಎಂದು ತಾನೂ ನಗೆಯಾಡಿದನು.

ಶರಣರ ಸಹಾಯಕ್ಕಾಗಿ ಕರ್ಣದೇವ ನಡೆಸಿದ ಸಂಧಾನ ಈ ರೀತಿ ಮುಗಿಯಿತು.

* * *

ಆಂಜನೇಯ ಹೊಳೆಯಾಚಿನ ಶರಣ ಶಿಬಿರವನ್ನು ಬಿಟ್ಟ ಮಾರನೆಯ ದಿನ ಅಪರಾಹ್ನ ಎರಡನೆಯ ಜಾಮದಲ್ಲಿ ಪಡಿಹಾರಿ ಅಪ್ಪಣ್ಣ, ಕೂಡಲ ಸಂಗಮವನ್ನು ಸೇರಿದನು. ನದೀ ತೀರದಲ್ಲಿ ಸಂಗಮೇಶ್ವರ ದೇಗುಲದೆದುರು ಮರ ಬಿದುರುಗಳಿಂದ ಹೊಸದಾಗಿ ಕಟ್ಟಿದ್ದ ನವಕಲ್ಯಾಣಮಂಟಪದಲ್ಲಿ ಪ್ರವಚನ ಸಭೆ ಪ್ರಾರಂಭವಾಗಿತ್ತು. ಮಂಟಪದ ನಡುವೆ ವೇದಿಕೆಯ ಮೇಲೆ ಕುಳಿತು ಬಸವಣ್ಣನವರು ಭಾಷಣ ಮಾಡುತ್ತಿದ್ದರು. ಸಮೀಪದ ಅಗ್ರಹಾರಗಳ ಶಿಷ್ಯರು, ಗುರುಕುಲದ ವಟು ಅಧ್ಯಾಪಕರು, ಗ್ರಾಮವಾಸಿಗಳು, ಸುತ್ತ ಮೌನವಾಗಿ ಕುಳಿತು ಕೇಳುತ್ತಿದ್ದರು. ಸಮಯಕ್ಕಾಗಿ ಕಾಯುತ್ತ ಸಭೆಯ ಅಂಚಿನಲ್ಲಿ ಅಪ್ಪಣ್ಣ ತಾನೂ ಕುಳಿತನು.

ಕಳೆದೆರಡು ವಾರಗಳಿಂದ ಬಸವಣ್ಣನವರು ಶರಣಧರ್ಮದ

ಆಧಾರಸ್ಥಂಭಗಳಾದ ಷಟ್‌ಸ್ಥಳಗಳ ಬಗ್ಗೆ ವಿವರಿಸಿ ಭಾಷಣ ಮಾಡುತ್ತಿದ್ದರು. ಭಕ್ತ, ಮಹೇಶ್ವರ, ಪ್ರಸಾದಿ, ಈ ಮೂರು ಸ್ಥಳಗಳ ವಿವರಣೆ ಮುಗಿದು ಪ್ರಾಣಲಿಂಗಿ ಸ್ಥಳದ ನಿರೂಪಣೆ ಅಂದು ಪ್ರಾರಂಭವಾಗಿತ್ತು.

ಮೊದಲಲ್ಲಿ ಪ್ರಭುದೇವರ ಕೆಲವು ವಚನಗಳನ್ನು ಆಶ್ರಮದ ವಟುಗಳಿಬ್ಬರು ಹಾಡಿದರು. ಆರಂಭದ ವಚನ ಈ ರೀತಿಯಿತ್ತು :

ಕಕ್ಷೆ, ಕರಸ್ಥಳ, ಕಂಠ, ಉತ್ತಮಾಂಗ, ಮುಖ ಸೆಜ್ಜೆ,
ಅಂಗಸೋಂಕೆಂಬವು ಷಡುಸ್ಥಳದ ದರ್ಶನಾದಿಗಳಿಗೆ
ಬಹಿರಂಗದಲ್ಲಿ ವೇಷ ಲಾಂಛನವಯ್ಯಾ,
ಅಂತರಂಗದಲ್ಲಿ ನಾಲ್ಕು ಸ್ಥಳ–ಬ್ರಹ್ಮರಂಧ್ರ, ಭ್ರೂಮಧ್ಯ,
ನಾಸಿಕಾಗ್ರ, ಚೌಕಮಧ್ಯ, ಇಂತೀ ಸ್ಥಾನಂಗಳನರಿಯರಾಗಿ.
ಬ್ರಹ್ಮರಂಧ್ರದಲ್ಲಿ ಲಿಂಗಸ್ವಾಯತ,
ಭ್ರೂ ಮಧ್ಯದಲ್ಲಿ ಜಂಗಮ ಸ್ವಾಯತ,
ನಾಸಿಕಾಗ್ರದಲ್ಲಿ ಪ್ರಸಾದ ಸ್ವಾಯತ,
ಚೌಕಮಧ್ಯದಲ್ಲಿ ಅನುಭಾವ ಸ್ವಾಯತ,
ಅಷ್ಟದಳ ಕಮಲದಲ್ಲಿ ಸರ್ವ ಸ್ವಾಯತ,
ಇದು ಕಾರಣ ಗುಹೇಶ್ವರಾ, ನಿಮ್ಮ ಶರಣರು ಸದಾ ಸನ್ನಿಹಿತರು *

ಗೀತೆ ಮುಗಿದ ಮೇಲೆ ಬಸವಣ್ಣನವರು ಹೇಳಿದರು :

"ಶೈವಧರ್ಮದ ನಿಬಿಡಾರಣ್ಯದಲ್ಲಿ ಸಂಚರಿಸುತ್ತ ಮುಂದೆ ನಾವೊಂದು ಸುಂದರ ಉದ್ಯಾನವನ್ನು ಕಾಣುತ್ತೇವೆ. ಪುರಾತನರ ತತ್ವಶಾಸ್ತ್ರ ಅನುಭಾವಗಳು ಅಲ್ಲಿ ಚೆಲುವಿನ ಹೂಗಳಾಗಿ ನಮ್ಮನ್ನು ನಲಿಸುತ್ತವೆ ; ತಮ್ಮ ಅನುಪಮ ಪರಿಮಳದಿಂದ ನಮಗೆ ಶಾಶ್ವತವಾದ ಆನಂದವನ್ನು ಕೊಡುತ್ತವೆ. ಷಟ್‌ಸ್ಥಳದ ಕೊನೆಯ ಮೂರು ಹಂತಗಳಾದ ಪ್ರಾಣಲಿಂಗಿ, ಶರಣ, ಐಕ್ಯ ಸ್ಥಳಗಳೇ ಆ ಉದ್ಯಾನ. ಭಕ್ತ, ಮಾಹೇಶ್ವರ, ಪ್ರಸಾದಿ ಎಂಬ ಮೊದಲ ಮೂರು ಸ್ಥಳಗಳು ಕರ್ಮ ಪ್ರಧಾನವಾದರೆ, ಆಮೇಲಿನ ಮೂರು ಸ್ಥಳಗಳು ಜ್ಞಾನ ಪ್ರಧಾನ. ಷಟ್‌ಸ್ಥಳದ ಈ ಎರಡು ವಿಭಾಗಗಳನ್ನು ಕರ್ಮಕಾಂಡ, ಜ್ಞಾನಕಾಂಡ ಎಂದೂ ಕರೆಯಬಹುದು. ಕರ್ಮಕಾಂಡದಲ್ಲಿ, ಸಾಧಕನ ಆಗಿನ ಅವಸ್ಥೆಯಲ್ಲಿ ಅಗತ್ಯವೆಂದು ಹೇಳಲ್ಪಟ್ಟ ವಿಧಿ ನಿಷೇಧಗಳ ಬಂಧನದಿಂದ ಜೀವನನ್ನು ಬಿಡುಗಡೆ ಮಾಡುವುದು ಜ್ಞಾನಕಾಂಡದ ಉದ್ದೇಶ.

* ಪ್ರಭುದೇವರ ವಚನಗಳು ಪುಟ ೯೯

ಭಕ್ತ, ಮಾಹೇಶ್ವರ, ಪ್ರಸಾದಿ, ಈ ಮೂರು ಸ್ಥಳಗಳಲ್ಲಿ, ಸೀಮಿತವಾಗಿದ್ದ ಶರಣಧರ್ಮ, ಪ್ರಾಣಲಿಂಗಿ ಸ್ಥಳದಲ್ಲಿ ಆ ಸೀಮಾಬಂಧನಗಳಿಂದ ಮುಕ್ತವಾಗಿ ವಿಶ್ವದತ್ತ ನಡೆಯುತ್ತದೆ; ಜಾತಿ ಮತ ಕಾಲ ದೇಶಗಳ ಪರಿಮಿತಿಯನ್ನು ದಾಟಿ ತನ್ನ ಪ್ರಭಾವಲಯದಲ್ಲಿ ಮನುಕುಲವನ್ನೇ ಅಳವಡಿಸಿಕೊಳ್ಳುವ ವಿಶ್ವಧರ್ಮವಾಗುತ್ತದೆ.

" 'ಕಕ್ಷೆ, ಕರಸ್ಥಳ, ಕಂಠ' ಎಂದು ಪ್ರಾರಂಭವಾಗುವ ಈ ವಚನದಲ್ಲಿ ಪ್ರಭುದೇವರು ಪ್ರಾಣಲಿಂಗಿ ಸ್ಥಳವನ್ನು ನಿರೂಪಿಸುತ್ತ, ಶರಣಧರ್ಮವನ್ನು ವಿಶ್ವಧರ್ಮವನ್ನಾಗಿ ಮಾರ್ಪಡಿಸುವ ಯುಕ್ತಿಯನ್ನು ಸೂಚಿಸಿದ್ದಾರೆ. ಅಂಗವೆಂದರೆ ಜೀವ, ಲಿಂಗವೆಂದರೆ ಬ್ರಹ್ಮ. ಈ ಜೀವಬ್ರಹ್ಮೈಕ್ಯವನ್ನು ಶರಣಧರ್ಮ ಲಿಂಗಾಂಗ ಸಾಮರಸ್ಯವೆಂದು ನಿರ್ದೇಶಿಸುತ್ತದೆ. ಕ್ರಮ ಕ್ರಮವಾಗಿ ಜೀವಬ್ರಹ್ಮೈಕ್ಯವನ್ನು ಸಾಧಿಸುವುದು ಷಟ್‌ಸ್ಥಳದ ಉದ್ದೇಶ. ಭಕ್ತ, ಮಾಹೇಶ್ವರ, ಪ್ರಸಾದಿ ಸ್ಥಳಗಳಲ್ಲಿ ಹೇಳಲ್ಪಟ್ಟ ವಿಧಿನಿಷೇದ ರೂಪವಾದ ಕರ್ಮಗಳಿಂದ ಸಂಸ್ಕಾರ ವಿಭಿನ್ನವೂ, ನಿವೃತ್ತಿ ಪ್ರಧಾನವೂ ಆದ ಜ್ಞಾನದ ಕಡೆಗೆ ತಿರುಗುತ್ತಾನೆ. ಅಂತರಂಗದಲ್ಲಿ ಬ್ರಹ್ಮವನ್ನು ಅರಿಯುವ ಶಿವಯೋಗ ವಿಧಾನವನ್ನು ತಿಳಿಯದ ಭಕ್ತ ಮಾಹೇಶ್ವರ ಪ್ರಸಾದಿ ಸ್ಥಳದ ಸಾಧಕರು, ಕಂಕುಳು, ಅಂಗೈ, ಕೊರಳು, ಶಿರಸ್ಸು, ಮುಖ, ಈ ಸ್ಥಾನಗಳಲ್ಲಿ, ಬ್ರಹ್ಮನ ಪ್ರತೀಕವಾದ ಲಿಂಗವನ್ನು ಸೆಜ್ಜೆ ಅಥವಾ ಸಂಪುಟದಲ್ಲಿಟ್ಟು, ಆ ಸೆಜ್ಜೆ ಅಂಗಕ್ಕೆ ಸೋಂಕುವಂತೆ ಧರಿಸುವ ವಿಧಾನ ಹೇಳಲ್ಪಟ್ಟಿತು. ಇವು ಬಹಿರಂಗ ಲಾಂಛನಗಳು ಮಾತ್ರ. ಅಂತರಂಗದಲ್ಲಿ ಬ್ರಹ್ಮವನ್ನು ಅಳವಡಿಸಿಕೊಳ್ಳುವ ಶಿವಯೋಗ ವಿಧಾನವನ್ನು ಪ್ರಭುದೇವರು ಈ ವಚನದಲ್ಲಿ ಮುಂದೆ ನಿರೂಪಿಸಿದ್ದಾರೆ.

"ಬ್ರಹ್ಮರಂಧ್ರ, ಹುಬ್ಬುಗಳ ನಡುವಿನ ಸ್ಥಳ, ಮೂಗಿನ ತುದಿ ಮತ್ತು ಚೌಕ ಅಥವಾ ಮೂಲಾಧಾರ ಚಕ್ರ, ಈ ನಾಲ್ಕು ಸ್ಥಾನಗಳಲ್ಲಿ ಪ್ರಾಣಲಿಂಗಿಯು ಬ್ರಹ್ಮವನ್ನು ಅರಿಯಬೇಕು. ಬ್ರಹ್ಮರಂಧ್ರದಲ್ಲಿ ಬ್ರಹ್ಮನ ಪ್ರತಿಕವಾದ ಪರಮಾತ್ಮನು, ಹುಬ್ಬಿನ ನಡುವೆ ಜಂಗಮದ ಸಂಕೇತವಾದ ಜ್ಞಾನ, ಮೂಗಿನ ತುದಿಯಲ್ಲಿ ಆನಂದದ ಗುರುತಾದ ಪ್ರಸಾದ ಮತ್ತು ಮೂಲಾಧಾರದಲ್ಲಿ, ವಿಶ್ರಾಂತಿಯ ಸಂಕೇತವಾದ ಅನುಭಾವ, ಇವು ತಮ್ಮ ನಿಜರೂಪದಿಂದ ಅಭಿವ್ಯಕ್ತವಾಗುತ್ತವೆ. ಹೃದಯದ ಮಧ್ಯದ ಅನಾಹತ ಚಕ್ರವೇ ಈ ಎಲ್ಲ ಸಾಕ್ಷಾತ್ಕಾರಗಳ ಕೇಂದ್ರವೆಂಬುದನ್ನು 'ಅಷ್ಟದಳ ಮಧ್ಯದಲ್ಲಿ ಸರ್ವಸ್ವಾಯತ' ಎಂಬ ನುಡಿ ಸೂಚಿಸುತ್ತದೆ. ಈ ವಿಧಾನದಿಂದ ಬ್ರಹ್ಮವನ್ನು ತನ್ನಲ್ಲಿ ಅಳವಡಿಸಿಕೊಂಡ ಶರಣರಿಗೆ ಮುಕ್ತಿ ಸಮೀಪವಾಗುತ್ತದೆ, ಎಂದು ವಚನದ ತಾತ್ಪರ್ಯ.

"ಮೇಲಿನ ವಚನದಲ್ಲಿ ಸೂಚಿಸಲ್ಪಟ್ಟಿರುವ ಶಿವಯೋಗ ಪ್ರಕ್ರಿಯೆಯನ್ನು

ಪ್ರಭುದೇವರು ಇನ್ನೊಂದು ವಚನದಲ್ಲಿ ಹೀಗೆ ವಿವರಿಸಿದ್ದಾರೆ :

"ಆಧಾರದಲ್ಲಿ ಬ್ರಹ್ಮ ಸ್ವಾಯತವಾದ ;
ಸ್ವಾಧಿಷ್ಠಾನದಲ್ಲಿ ವಿಷ್ಣು ಸ್ವಾಯತವಾದ ;
ಮಣಿಪೂರಕದಲ್ಲಿ ರುದ್ರ ಸ್ವಾಯತವಾದ ;
ಅನಾಹತದಲ್ಲಿ ಈಶ್ವರ ಸ್ವಾಯತವಾದ ;
ವಿಶುದ್ಧಿಯಲಿ ಸದಾಶಿವನು ಸ್ವಾಯತವಾದ ;
ಆಜ್ಞೆಯಲ್ಲಿ ಉಪಮಾತೀತ ಸ್ವಾಯತವಾದ ;
ಇವರೆಲ್ಲರು ಬಯಲಲಿ ಹುಟ್ಟಿ, ಬಯಲಲ್ಲೆ ಬೆಳೆದು,
ಬಯಲ ಲಿಂಗವನೆ ಧರಿಸಿಕೊಂಡು, ಬಯಲನೆ ಆರಾಧಿಸಿ,
ಬಯಲಾಗಿ ಹೋದುದ ಕಂಡೆ ಗುಹೇಶ್ವರಾ ! *

"ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ ಉಪಮಾತೀತರೆಂಬ ಸಾದಾಖ್ಯ ನಾಯಕರು ಅನುಕ್ರಮವಾಗಿ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಎಂಬ ಆರು ಚಕ್ರಗಳಲಿ ಅವತರಿಸಿ ಸಾಧಕನಿಗೆ ಕಾಣಿಸಿಕೊಳ್ಳುವರೆಂಬುದು ಸ್ವಾಯತ ಶಬ್ದಕ್ಕರ್ಥ. ಇವರೆಲ್ಲರೂ ಚಿದಾಕಾಶದ ಬಯಲಲ್ಲಿ ಹುಟ್ಟಿ, ಬಯಲಲ್ಲಿ ಬೆಳೆದು, ಬಯಲ ಲಿಂಗವನೆ ಧರಿಸಿ, ಬಯಲನ್ನೆ ಆರಾಧಿಸಿ, ಬಯಲಾಗಿ ಹೋದುದನ್ನು ಕಂಡೆ ಎಂಬ ತಮ್ಮ ಅನುಭಾವವನ್ನು ಪ್ರಭುದೇವರು ಈ ವಚನದಲ್ಲಿ ನಿರೂಪಿಸಿದ್ದಾರೆ. ಈ ಸರ್ವವ್ಯಾಪಿ, ಸರ್ವಾಲಯ, ಸರ್ವಾತೀತ ಬಯಲು ಯಾವುದು? ಶುದ್ಧ, ಶಾಂತ, ನಿಶ್ಯಂಕ, ನಿರ್ಭಯ, ಪ್ರರಬ್ರಹ್ಮವೇ ಆ ಬಯಲು ಎಂದು ಎಲ್ಲ ಶಾಸ್ತ್ರಗಳು ಘೋಷಿಸುತ್ತವೆ. ಅನುಭಾವಿಗಳು ಇದನ್ನು ನಿರಾಳವೆಂದೂ ಶೂನ್ಯವೆಂದೂ ಕರೆದಿದ್ದಾರೆ. ಸಾಧಕನು ಭಕ್ತ ಮಾಹೇಶ್ವರ ಪ್ರಸಾದಿ ಸ್ಥಳಗಳನ್ನು ದಾಟಿ ಪ್ರಾಣಲಿಂಗಿ ಸ್ಥಳವನ್ನು ಸೇರಿದಾಗ ಅವನಿಗೆ ಮೊದಲ ಸಾರಿ ಪರಬ್ರಹ್ಮದ ಅಸ್ಪಷ್ಟ ಅರಿವು ಮೂಡುತ್ತದೆ.

"ಇಂತಪ್ಪ ಪ್ರಾಣಲಿಂಗಿಯ ನಿಲವನ್ನು ಪ್ರಭುದೇವರು ಇನ್ನೊಂದು ವಚನದಲ್ಲಿ ಹೀಗೆ ಹೇಳಿದ್ದಾರೆ–

"ಕಾಲೇ ಕಂಬಗಳಾದವೆನ್ನ ದೇಹವೇ ದೇಗುಲವಾಯಿತ್ತಯ್ಯ,
ಎನ್ನ ನಾಲಗೆಯೇ ಘಂಟೆ, ಶಿರ ಸುವರ್ಣಕಲಶ, ಇದೇನಯ್ಯಾ !
ಸ್ವರವೇ ಲಿಂಗಕ್ಕೆ ಸಿಂಹಾಸನವಾಗಿರ್ದಿತ್ತಯ್ಯ ! ಗುಹೇಶ್ವರಾ,
ನಿಮ್ಮ ಪ್ರಾಣಲಿಂಗ ಪ್ರತಿಷ್ಠೆ ಪಲ್ಲಟವಾಗದಂತಿಪ್ಪೆನಯ್ಯ !

---

* ಲಿಂಗಲೀಲಾ ವಿಲಾಸ ಚಾರಿತ್ರ, ಪುಟ ೩೧೫.

"ಲಿಂಗಾಂಗಿಯಾದ ಶರಣನ ಪ್ರಾಣವೇ ಲಿಂಗವಾಗಿತ್ತಾಗಿ ಆ ಪ್ರಾಣಲಿಂಗಕ್ಕೆ ಸ್ವರವೆಂಬ ವಾಯುವೇ ಸಿಂಹಾಸನವಾಗಿ, ಕಾಲೇ ಕಂಭವಾಗಿ, ದೇಹವೇ ದೇಗುಲವಾಗಿ, ಶಿರವೇ ಸುವರ್ಣದ ಕಲಶವಾಗಿ, ಪ್ರಾಣದಲ್ಲಿ ಲಿಂಗಪ್ರತಿಷ್ಠೆಯಾದ ಮೇಲೆ ಅವನು ಜೀವನ್ಮುಕ್ತನಾಗುತ್ತಾನೆ. ಸಂಬಂಧ ಪಲ್ಲಟಿಸಿ ಅವನು ಪುನಃ ಜೀವನಾಗುವುದಿಲ್ಲ ಎಂಬುದು ವಚನದ ಫಲಿತಾರ್ಥ.+

"ಆ ಮೇಲಿನ ಮೂರು ವಚನಗಳು ತತ್ವಶಾಸ್ತ್ರ ಅನುಭಾವಗಳ ಕವಿತಾ ರೂಪವಾದ ಮೂರು ಅನುಪಮ ಮುಕ್ತಕಗಳು.

೧

ತೆರೆಯ ಮರೆಯ ಕುರುಹೆಂಬುದೇನೋ?
ಒಳಗೆ ಲಿಂಗದ ಅನುವಿಡಿದ ಬಳಿಕ ಪೂಜಿಸುವನಾರೋ ?
ಪೂಜಿಸಿಕೊಂಬ ದೇವನಾರೋ ?
ಹಿಂದು ಮುಂದು, ಮುಂದು ಹಿಂದಾಯಿತ್ತು !
ಗುಹೇಶ್ವರಾ,
ನಾನು ನೀನು, ನೀನು ನಾನಾದ ಬಳಿಕ
ಮತ್ತೇನುಂಟು ಹೇಳಾ !

೨

ನೆನೆ ನೆನೆಯೆಂದೊಡೆ ಏನ ನೆನೆವೆನಯ್ಯ !
ಎನ್ನ ಕಾಯವೇ ಕೈಲಾಸವಾಗಿತ್ತು !
ಮನ ಲಿಂಗವಾಯಿತ್ತು ! ತನು ಸೆಜ್ಜೆಯಾಯಿತ್ತು !
ನೆನೆವರೆ ದೇವರುಂಟೇ? ನೋಡುವರೆ ಭಕ್ತರುಂಟೇ?
ಗುಹೇಶ್ವರಾ, ಲಿಂಗಲೀಯವಾಯಿತ್ತು !

೩

ಗಿಡುವಿನ ಮೇಲಣ ತುಂಬಿ
ವಿಕಸಿತವಾಯಿತ್ತು ತುಂಬಿ, ನೋಡಾ !
ಆತುಮ ತುಂಬಿ ನೋಡಾ,
ಪರಮಾತುಮ ತುಂಬಿ, ತುಂಬಿ ನೋಡಾ !
ಗುಹೇಶ್ವರನೆಂಬ ಲಿಂಗಕ್ಕೆ ಎರಗಿ
ನಿಬ್ಬೆರಗಾಯಿತ್ತು ತುಂಬಿ ನೋಡಾ !*

---

+ ಪ್ರಭು ದೇವರ ವಚನಗಳು, ಪುಟ ೧೦೦.

* ಲಿಂಗಲೀಲಾ ವಿಲಾಸ ಚಾರಿತ್ರ, ಪುಟ ೩೧೪.

"ಕವಿತೆಯ ಅಮೃತ ಬಿಂದುಗಳಂತೆ ಕಿವಿಗಳಲ್ಲಿ ಪುಟಿಸುವ ಈ ಮೂರು ವಚನಗಳು ಪ್ರಭುದೇವರ ಅನುಭಾವದ ಆಣಿಮುತ್ತುಗಳಂತೆ ಬೆಳಗುತ್ತವೆ. ಅವುಗಳನ್ನು ಅರ್ಥವಿಸುವುದೆಂದರೆ ಮೂಗು ಅರಿತ ಪರಿಮಳವನ್ನು ಬಾಯಿ ಚಪ್ಪರಿಸಿದಂತೆ, ನಾಲಿಗೆ ಅರಿತ ಸಿಹಿಯನ್ನು ಮೂಗು ಆಘ್ರಾಣಿಸಿದಂತೆ, ನಿರರ್ಥಕ ಪರಿಶ್ರಮ. ಆದರೂ ನಿಮಗಾಗಿ ಆ ಕಾರ್ಯ ಮಾಡುತ್ತಿದ್ದೇನೆ,

"ದೇಹವೆಂಬ ತೆರೆಯ ಮರೆಯಲ್ಲಿರುವ ಜೀವನು, ಪರಬ್ರಹ್ಮನ ಅಂಶವೆಂದು ತಿಳಿದು, ಆ ಜೀವ ಬ್ರಹ್ಮರು ಒಂದೇ ವಸ್ತುವೆಂಬ ತತ್ವವನ್ನು ಅನುಭಾವದಿಂದ ಅರಿತಾಗ ಪೂಜಿಸುವ ಭಕ್ತನಾರು? ಪೂಜೆಗೊಂಬ ದೇವನಾರು? ಜೀವನೇ ಬ್ರಹ್ಮ, ಬ್ರಹ್ಮನೇ ಜೀವ, ಎಂಬ ಅದ್ವೈತ ಭಾವನೆ ಉಂಟಾದ ಬಳಿಕ ನೀನು ನಾನೆಂಬ ದ್ವೈತಭಾವನೆ ಉಳಿಯುವುದಿಲ್ಲ–ಎಂದು ಮೊದಲ ವಚನದ ತಾತ್ಪರ್ಯ.

"ಜೀವಾತ್ಮ ಪರಮಾತ್ಮರು ಒಂದೇ ಎಂಬ ಭಾವದಿಂದ ನೆನಪು ಅಳಿದಾಗ 'ನೆನೆ, ನೆನೆ,' ಎಂದರೆ ನಾನು ಯಾರನ್ನು ನೆನೆಯಲಿ. ಅರಿಯಬೇಕಾದ ವಸ್ತುವಾಗಲಿ, ಅರಿಯುವವನಾಗಲಿ ಇಲ್ಲದ್ದರಿಂದ ಈಗ ನನ್ನ ಕಾಯವೇ ಕೈಲಾಸ, ಮನಸ್ಸೇ ಲಿಂಗ, ತನುವೇ ಸೆಜ್ಜೆ. ನೆನೆಯಲು ವಸ್ತುವಿಲ್ಲ, ನೆನೆಯುವ ಭಕ್ತನಿಲ್ಲ. ಆತ್ಮನಲ್ಲಿ ಬ್ರಹ್ಮವೂ ಬ್ರಹ್ಮನಲ್ಲಿ ಆತ್ಮವೂ ಬೆರೆತು, ಎರಡಾಗಿದ್ದದ್ದು ಒಂದೇ ಆಯಿತು, ಎಂದು ಎರಡನೆಯ ವಚನದ ತಾತ್ಪರ್ಯ.

ಮೂರನೆಯ ವಚನ ಕಾವ್ಯಮಯವಾಗಿದೆ. ತುಂಬಿ ಎಂಬ ಪದವನ್ನು ಪ್ರಭುದೇವರು ಈ ವಚನದಲ್ಲಿ ಬೇರೆ ಬೇರೆ ಅರ್ಥದಲ್ಲಿ ಪ್ರಯೋಗಿಸಿದ್ದಾರೆ. ಗಿಡದ ಮೇಲಿನ ಚೆಲುವಾದ ತುಂಬೆ ಹೂವಿನಂತೆ ದೇಹದಲ್ಲಿ ಆತ್ಮವೆಂಬ ಹೂವು ಅರಳಿದೆ, ನೋಡು. ಆತ್ಮನಲ್ಲಿ ಪರಮಾತ್ಮನು, ಪರಮಾತ್ಮನಲ್ಲಿ ಆತ್ಮನು, ಒಂದರೊಡನೊಂದು ಬೆರೆಯುವುದೇ ಆತ್ಮದ ಅರಳುವಿಕೆ. ಈ ಸ್ಥಿತಿಯಲ್ಲಿ ಶರಣನು ಅಖಂಡ ಪರಿಪೂರ್ಣ ಪರಬ್ರಹ್ಮವೇ ತಾನಾಗಿ ಶಿವೋಹಂ ಶಿವೋಹಂ ಎಂದಾಗ ಆ ಅರಿವಿನಿಂದಾದ ಮಹದಹಂಕಾರವನ್ನು ಕಳೆಯಲು ದಾಸೋಹಂ ಭಾವದಿಂದ ಮತ್ತೆ ಆ ಅಖಂಡ ಪರಿಪೂರ್ಣಕ್ಕೆರಗಿ, ಭಾವನಿಬ್ಬೆರಗಾಗಿ, ನಿರಹಂಭಾವದ ಮಹಾಘನಪರಿಪೂರ್ಣತೆಯನ್ನು ಪಡೆಯುವುದು ಎಂದು ಕೊನೆಯ ವಚನದ ಭಾವಾರ್ಥ.

"ಈ ಮೂರು ವಚನಗಳಲ್ಲಿ ಪ್ರಭುದೇವರು ತಮ್ಮ ದಿವ್ಯಾನುಭಾವದ ಸಾರವನ್ನು ನಿರೂಪಿಸಿದ್ದಾರೆ. ಪ್ರಾಣಲಿಂಗಿ ಸ್ಥಳವನ್ನಡರಿದ ಶರಣನು ಈ ವಚನಗಳ ಚಿಂತನ ಮಂಥನಗಳಿಂದ ತನ್ನ ಸಾಧನೆಯ ಮುಂದಿನ ಹಂತಗಳಾದ ಶರಣ ಐಕ್ಯ

ಸ್ಥಳಗಳನ್ನು ಮುಟ್ಟಲು ಶಕ್ತನಾಗಲೆಂಬುದೇ ಅವರ ಕರುಣೆಯ ಉದ್ದೇಶ."

ಈ ರೀತಿ ಪ್ರವಚನ ಸುಮಾರು ಅರ್ಧಪ್ರಹರ ಕಾಲ ನಡೆದ ಮೇಲೆ ಸಭೆಯ ಅಂಚಿನಲ್ಲಿ ಅಪ್ಪಣ್ಣ ನಿಂತಿರುವುದನ್ನು ಬಸವಣ್ಣನವರು ಗಮನಿಸಿ ಸನ್ನೆಮಾಡಿ ಹತ್ತಿರ ಕರೆದು, "ಯಾವಾಗ ಬಂದೆ, ಅಪ್ಪಣ್ಣ ? ಕಲ್ಯಾಣದ ಸುದ್ದಿಯೇನು?" ಎಂದು ಕೇಳಿದರು.

ಅಪ್ಪಣ್ಣ ನಿರುತ್ತರನಾಗಿ ಕಣ್ಣೀರು ಸುರಿಸುತ್ತ ಮೌನವಾಗಿ ನಿಂತನು. ಏನೋ ಅನರ್ಥ ನಡೆದಿದೆಯೆಂದು ತಿಳಿದು ಬಸವಣ್ಣನವರು ತುಸು ಗಂಭೀರವಾಗಿ, "ಏನಾಗಿದೆ ಹೇಳು, ಅಪ್ಪಣ್ಣ? ಆದುದನ್ನು ತಪ್ಪಿಸಲು, ಆಗಬೇಕಾದ್ದನ್ನು ತಡೆಯಲು ಕೂಡಲ ಸಂಗಮದೇವನೊಬ್ಬನಿಗಲ್ಲದೆ ಮತ್ತಾರಿಗೂ ಅಳವಲ್ಲ," ಎಂದರು.

ಬಸವಣ್ಣನವರ ಮೃದು ಕಂಠ, ಅವರ ಮಾತುಗಳಲ್ಲಿ ಅಭಿವ್ಯಕ್ತವಾಗಿದ್ದ ಅನುಕಂಪದ ಹೊಲಬು, ಅಪ್ಪಣ್ಣನಿಗೆ ಚೈತನ್ಯವನ್ನು ಕೊಟ್ಟವು. ಉಕ್ಕಿ ಬರುತ್ತಿದ್ದ ಅಳುವನ್ನು ತಡೆದು ಅವನು ಗದ್ಗದ ಕಂಠದಿಂದ, "ಶರಣರು ಮಹಮನೆಯನ್ನು ಬಿಟ್ಟರು, ಅಣ್ಣನವರೆ. ಕಲ್ಯಾಣವನ್ನು ಶರಣರು ತ್ಯಜಿಸಿದರು. ಅವರು ಆಂಜನೆಯ ಹೊಳೆ ದಾಟಿ, ಗಣಾಚಾರಿ ಯೋಧರ ಶಿಬಿರ ಸೇರಿದ ಮೇಲೆ ನಾನು, ಚೆನ್ನಬಸವಣ್ಣನವರ ಅನುಮತಿ ಪಡೆದು ಇಲ್ಲಿಗೆ ಬಂದೆ. ಶರಣರು ಕಲ್ಯಾಣವನ್ನು ಬಿಟ್ಟ ರಾತ್ರಿ, ಕಲಚೂರ್ಯ ಅರಮನೆಯಲ್ಲಿ..."

ಅಪ್ಪಣ್ಣ ಪುನಃ ತಡವರಿಸಿದನು. ಬಸವಣ್ಣನವರು ತಲೆಯೆತ್ತಿ, "ಕಲಚೂರ್ಯ ಅರಮನೆಯಲ್ಲಿ ಏನಾಯಿತು, ಅಪ್ಪಣ್ಣ?" ಎಂದು ಪುನಃ ಕೇಳಿದರು.

"ಬಿಜ್ಜಳರಾಯರು ಕೊಲೆ ಮಾಡಲ್ಪಟ್ಟರು, ಅಣ್ಣನವರೆ?"

ನುಡಿಯುತ್ತಿದ್ದಂತೆ ಅಪ್ಪಣ್ಣನ ಗಂಟಲು ಕಟ್ಟಿತು, ದೇಹ ಕಂಪಿಸಿತು.

ಈ ಮಾತುಗಳು, ಬಸವಣ್ಣನವರು ಕುಳಿತಿದ್ದ ವೇದಿಕೆಯ ಹತ್ತಿರ ಸಣ್ಣ ದನಿಯಲ್ಲಿ ನಡೆಯಿತಾದರೂ ಒಬ್ಬರಿಂದೊಬ್ಬರಿಗೆ ಹರಡಿ ಕೆಲವೇ ಕ್ಷಣಗಳಲ್ಲಿ ಸಭೆಯಲ್ಲಿ ಎಲ್ಲ ಕಡೆ ಪ್ರಚಾರವಾಯಿತು. ಸ್ತಂಭಿತರಂತೆ ಸಭೆಯಲ್ಲಿದ್ದವರೆಲ್ಲ ಮೌನವಾಗಿ ಕುಳಿತರು.

ಬಸವಣ್ಣನವರು ಕೊಂಚ ಹೊತ್ತು ಯೋಚಿಸುತ್ತಿದ್ದು ಬಳಿಕ, "ನೀನು ಇಲ್ಲಿಯೇ ಕುಳಿತಿರು, ಅಪ್ಪಣ್ಣ. ಪ್ರವಚನ ಮುಗಿದ ಮೇಲೆ ಉಳಿದ ವಿಚಾರ," ಎಂದು ಹೇಳಿ ಅರ್ಧಕ್ಕೆ ನಿಂತಿದ್ದ ಪ್ರವಚನವನ್ನು ಮುಂದುವರಿಸಲು ಸಿದ್ಧರಾದರು.

ಆದರೆ ಶೃತಿ ತಪ್ಪಿದ ವಾಗ್ಗೇಯಕಾರನಂತೆ ಬಸವಣ್ಣನವರು ಹೆಜ್ಜೆ ಹೆಜ್ಜೆಗೆ ತಡವರಿಸಿದರು. ಸರಿಯಾದ ಶಬ್ದಗಳನ್ನು ಹುಡುಕುವುದರಲ್ಲಿ, ಅಗತ್ಯದ

ಉಲ್ಲೇಖನಗಳನ್ನು ನೆನಪಿಸಿಕೊಳ್ಳುವುದರಲ್ಲಿ, ಹೆಚ್ಚು ಹೊತ್ತು ಹಿಡಿಯಲು ಮೊದಲಾಗಿ ಪ್ರವಚನ ಕುಂಟುತ್ತ ಕೊಂಚ ಕಾಲ ನಡೆದ ಮೇಲೆ, ಗುರುಕುಲದ ಪ್ರಾಧ್ಯಾಪಕನು ಮುಗಿಸಲು ಸಲಹೆಯಿತ್ತನು.

"ಕಲ್ಯಾಣದ ಸುದ್ದಿ ಕೇಳಿ ಅಣ್ಣನವರು ವಿಚಲಿತರಾಗಿದ್ದಾರೆ. ಪ್ರವಚನ ಮುಗಿಸುವ ಸೂಚನೆಯನ್ನು ನಾವು ಅನುಮೋದಿಸುತ್ತೇವೆ," ಎಂದು ಸಮೀಪದ ಅಗ್ರಹಾರಗಳಿಂದ ಬಂದಿದ್ದ ಶಿಷ್ಯರು ಹೇಳಿದರು.

ಸಲಹೆ ಬಸವಣ್ಣನವರಿಗೆ ಸೂಕ್ತವಾಗಿ ಕಂಡಿತು. ಪ್ರವಚನದ ವಿಚಾರವನ್ನು ಅಷ್ಟಕ್ಕೆ ನಿಲ್ಲಿಸಿ, ಸಭೆಯಲ್ಲಿದ್ದವರಿಗೆ ಕೈಮುಗಿದು ಅವರು ಹೇಳಿದರು :

"ಕಲ್ಯಾಣದಿಂದ ಬಂದ ದುರ್ವಾರ್ತೆ ಬರಸಿಡಿಲಂತೆ ನನ್ನನ್ನು ಸ್ತಂಭಿತಗೊಳಿಸಿದೆ. ಚಾಲುಕ್ಯರಾಜ್ಯದ ಸರ್ವಾಧಿಕಾರಿ ಮಹಾಮಂಡಲೇಶ್ವರ ಬಿಜ್ಜಳರಾಯರು ಅಪರಿಚಿತ ಕೊಲೆಗಡುಕರಿಂದ ಹತರಾದರು. ಶರಣರು ಕಲ್ಯಾಣವನ್ನು ಬಿಟ್ಟು ಸಹ್ಯಾದ್ರಿಯ ಅರಣ್ಯ ಪ್ರದೇಶಕ್ಕೆ ವಲಸೆ ಹೋದರು. ಅಪ್ಪಣ್ಣನಿಂದ ಈ ದುರ್ವಾರ್ತೆಗಳನ್ನು ಕೇಳಿದಾಗ ನನಗಾದ ಅಪಾರ ದುಃಖವನ್ನು ನಿಮ್ಮ ಮುಂದಿಡುವುದು ಈಗ ನನ್ನ ಉದ್ದೇಶವಲ್ಲ. ಈ ವಿಷಾದಕರ ದುಃಖಪೂರ್ಣ ಸಂದರ್ಭದಲ್ಲಿ ಕೊಲೆಗಡುಕರ ಖಡ್ಗಕ್ಕೆ ಬಲಿಯಾದ ಸರ್ವಾಧಿಕಾರಿ ಬಿಜ್ಜಳರಾಯರ ಗುಣಗಾನ ಮಾಡಿ, ಅವರ ಆತ್ಮಕ್ಕೆ ಕೂಡಲಸಂಗಮ ದೇವನು ಶಾಂತಿ ಸಮಾಧಾನಗಳನ್ನು ಕರುಣಿಸಲೆಂದು ಹಾರೈಸುವುದು ನನ್ನ ಕರ್ತವ್ಯವಾಗಿದೆ," – ಎಂದು ಹೇಳಿ ಬಸವಣ್ಣನವರು ಕೆಲವು ಕ್ಷಣಗಳು ಕಣ್ಣುಗಳನ್ನು ಮುಚ್ಚಿ ಧ್ಯಾನಾಸಕ್ತರಂತೆ ಕುಳಿತರು. ಬಸವಣ್ಣನವರ ದುಃಖದಲ್ಲಿ ತಾವೂ ಭಾಗಿಗಳಾದಂತೆ ಸಭೆಯಲ್ಲಿದ್ದವರೆಲ್ಲ ಮೌನವಾಗಿದ್ದರು. ಅನೇಕರ ಕಣ್ಣುಗಳಲ್ಲಿ ಕಂಬನಿ ಕೂಡಿದವು.

ಬಸವಣ್ಣನವರು ಕಣ್ತೆರೆದು ಮಾತು ಮುಂದುವರಿಸಲು ಸಿದ್ಧರಾದಾಗ ಎಲ್ಲರೂ ವಿಸ್ಮಯಾತುರಗಳಿಂದ ಅವರನ್ನೇ ನೊಡುತ್ತಿದ್ದರು. ಬಸವಣ್ಣನವರು ಹೇಳಿದರು :

"ಈ ವಿಷಾದಕರ ದುರ್ಘಟನೆಗಳ ವಿಚಾರ ಪ್ರಸ್ತಾಪಿಸುವ ಮೊದಲು ಅವುಗಳಿಂದ ವೈಯಕ್ತಿಕವಾಗಿ ನನ್ನ ಮೇಲಾದ ಪರಿಣಾಮವನ್ನು ಕುರಿತು ಬಿಚ್ಚು ಮನದಿಂದ ನಾಲ್ಕು ಮಾತುಗಳನ್ನು ಆಡುವುದು ಅಗತ್ಯವೆಂದು ಭಾವಿಸುತ್ತೇನೆ.

"ಅನಂತಂ ಬತ ! ಮೇವಿತ್ತಂ ಯಸ್ಯಮೇನಾಸ್ತಿ ಕಿಂಚನ ।
ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ಕಿಂಚಿತ್ ಪ್ರದಹ್ಯತೇ॥"

ಎಂದು ಹೇಳಿದ ವಾಗದ್ವೈತಿಯಂತಾಗಿದ್ದೇನೆ ಈಗ ನಾನು. 'ನನ್ನ ಸಂಪತ್ತು

ಅನಂತವಾದರೂ ನನ್ನದಾಗಿ ಏನೂ ಇರುವುದಿಲ್ಲ. ಮಿಥಿಲಾನಗರ ಸುಟ್ಟು ಹೋದರೆ ನನ್ನದೇನೂ ಸುಟ್ಟುಹೋಗುವುದಿಲ್ಲ,' ಎಂದು ಜಂಭದಿಂದ ಹೇಳಿದ ಒಬ್ಬ ಸನ್ಯಾಸಿ ತನ್ನ ಚೀವರ ಕಮಂಡಲುಗಳನ್ನು ಕಳೆದುಕೊಂಡಾಗ ಎರಡು ಕಣ್ಣುಗಳಿಂದಲೂ ಅತ್ತು, ಆಶ್ರಮವಾಸಿಗಳೆಲ್ಲರ ಅಪಹಾಸ್ಯಕ್ಕೆರವಾದನೆಂದು ಆ ಕಥೆ ಮುಗಿಯುತ್ತದೆ.

"ಅಸಂಗ್ರಹ ನಿರ್ಮೋಹ ನಿರ್ಮಮತೆಗಳನ್ನು ಪ್ರಯತ್ನಪೂರ್ವಕವಾಗಿ ಅಭ್ಯಾಸ ಮಾಡಿಕೊಳ್ಳಲು ಪ್ರಯತ್ನಿಸಿದ ನಾನು, ಕಲ್ಯಾಣವನ್ನು ಬಿಟ್ಟು ಕೂಡಲಸಂಗಮಕ್ಕೆ ಬಂದಾಗ ಆ ಎಲ್ಲ ಬಂಧನಗಳಿಂದ ವಿಮುಕ್ತನಾದೆನೆಂದು ಭಾವಿಸಿದ್ದೆ. ಆ ಭ್ರಮೆ ಇಂದು ಹರಿಯಿತು. ಕಲ್ಯಾಣವು ನನ್ನ ಚೀವರ, ಬಿಜ್ಜಳರಾಯರು ನನ್ನ ಕಮಂಡಲು. ಅವೆರಡನ್ನು ಕಳೆದುಕೊಂಡು ಕಣ್ಣೀರಿಡುತ್ತ ಈಗ ನಾನು ನಿಮ್ಮ ಮುಂದೆ ನಿಂತಿದ್ದೇನೆ. ಬಿಜ್ಜಳನಿಲ್ಲದ ಕಲ್ಯಾಣ, ಕಲ್ಯಾಣವನ್ನು ಬಿಟ್ಟ ಶರಣರು, ನನ್ನ ಎಲ್ಲ ಸಾಧನೆ ಸಂಕಲ್ಪಗಳು ವಿಫಲವಾದುದರ ಪ್ರತೀಕ.

"ಆರು ವರ್ಷಗಳ ಹಿಂದೆ ಬಿಜ್ಜಳರಾಯರು ಚಾಲುಕ್ಯ ಅರಸೊತ್ತಿಗೆಯನ್ನು ತಮ್ಮ ಅಂಕೆಯಲ್ಲಿಟ್ಟುಕೊಂಡು, ರಾಜ್ಯವನ್ನೇ ಅಪಹರಿಸಲು ಯೋಚಿಸುತ್ತಿರುವರೆಂಬ ಸಂದೇಹ ಹುಟ್ಟಿದ ಕೂಡಲೆ ನಾನು ಸ್ವಯಂ ಪ್ರೇರಣೆಯಿಂದ ಮಂತ್ರಿ ಪದವಿಯನ್ನು ಬಿಟ್ಟುಕೊಟ್ಟು ಅಧಿಕಾರ ನಿವೃತ್ತನಾದೆ. ಅಲ್ಲಿಂದೀಚೆಗೆ ಬಿಜ್ಜಳರಾಯರೊಡನೆ ನನಗೆ ರಾಜಕೀಯವಾಗಿ ಯಾವ ಸಂಬಂಧವೂ ಇರುವುದಿಲ್ಲ. ರಾಜಕೀಯದಿಂದ ದೂರವಾಗಿದ್ದ, ಧಾರ್ಮಿಕ, ಸಾಮಾಜಿಕ ಕಾರ್ಯಗಳಲ್ಲಿ ದಿನ ದಿನಕ್ಕೆ ಹೆಚ್ಚು ಆಸಕ್ತಿ ವಹಿಸುವುದು ಆಗ ನನ್ನ ಉದ್ದೇಶವಾಗಿತ್ತು. ತ್ರಿಕರಣ ಪೂರ್ವಕವಾಗಿ ನಾನು ಅದರಂತೆ ನಡೆದಿರುವೆನೆಂದು ನಿಮ್ಮ ಮುಂದೆ ನಿಂತು ಧೈರ್ಯವಾಗಿ ಹೇಳುತ್ತೇನೆ. ಈ ಕಾರಣದಿಂದ ಬಿಜ್ಜಳರಾಯರ ರಾಜಕೀಯ ಚಟುವಟಿಕೆಗಳನ್ನು ಕುರಿತು ದೀರ್ಘವಾಗಿ ಪ್ರಸ್ತಾಪಿಸಲು ನಾನು ಅಸಮರ್ಥನೂ, ಅನಧಿಕಾರಿಯೂ ಆಗಿದ್ದೇನೆ.

"ಬಿಜ್ಜಳರಾಯರು ಚತುರರೂ, ದಕ್ಷರೂ ಆದ ಆಡಳಿತಗಾರರು. ಸಮಯೋಚಿತವಾದ ಅವರ ಜಾಣ್ಮೆಯಿಂದ ಚಾಲುಕ್ಯ ರಾಜ್ಯಕ್ಕೆ ಒದಗಿದ್ದ ಅಂತರ್ಯುದ್ಧ, ಅನೇಕ ಆರ್ಥಿಕ ಅಪಘಾತಗಳು ಪರಿಹಾರವಾದವು. ಅದಕ್ಷರೂ, ಅನುಭವವಿಲ್ಲದವರೂ, ವಿಲಾಸಕ್ತರೂ ಆದ ರಾಜರು ಅರಸೊತ್ತಿಗೆ ಏರಿದಾಗ ರಾಜ್ಯಕ್ಕೆ ಆಗುವ ಹಾನಿಯನ್ನು ಧರ್ಮಶಾಸ್ತ್ರಗಳು ವಿಫುಲವಾಗಿ ವರ್ಣಿಸಿವೆ. ಚಾಲುಕ್ಯರಾಜ್ಯ ಅಂತಹ ವಿಪತ್ತಿನಲ್ಲಿದ್ದಾಗ ಬಿಜ್ಜಳರಾಯರು ಅಧಿಕಾರ ಸೂತ್ರ ವಹಿಸಿಕೊಂಡರು. ಹನ್ನೆರಡು ವರ್ಷಗಳ ದಕ್ಷ ಆಡಳಿತದಿಂದ ರಾಜ್ಯದ ಸಂಪತ್ತು

ಸಮೃದ್ಧಿಗಳು ಹೆಚ್ಚಿದವು. ಪ್ರಜೆಗಳು ಸುರಕ್ಷಿತರಾದರು. ಧಾರ್ಮಿಕ ಸ್ವಾತಂತ್ರ್ಯ ದೇಶದಲ್ಲಿ ಪ್ರತಿಷ್ಠಿತವಾಯಿತು. ಅವರ ಅನುಮತಿ ಪಡೆದು ಸ್ಥಾಪಿತವಾದ ಮಹಮನೆ ಅನುಭವಮಂಟಪ ಪ್ರತಿಷ್ಠಾನಗಳು ಅತ್ಯಲ್ಪ ಕಾಲದಲ್ಲಿ ಪ್ರಭಾವಶಾಲಿಯಾಗಿ ಬೆಳೆದು, ನಾವು ಉದ್ದೇಶಿಸಿದ್ದ ಧಾರ್ಮಿಕ, ಸಾಮಾಜಿಕ ಸುಧಾರಣೆಗಳು ಕಾರ್ಯಗತವಾದವು. ಇದಕ್ಕಾಗಿ ಶರಣರು ಯಾವಾಗಲೂ ಬಿಜ್ಜಳರಾಯರಿಗೆ ಕೃತಜ್ಞರಾಗಿದ್ದಾರೆ.

"ಚಾಲುಕ್ಯ ರಾಜ್ಯದ ಎಲ್ಲ ಕಡೆ ಭೀತಿ ಆತಂಕಗಳನ್ನು ಉಂಟುಮಾಡುವ ಈ ಘೋರಕೃತ್ಯ ಯಾವ ರೀತಿ ನಡೆಯಿತು, ಅದರ ಕಾರಣಗಳೇನು, ಹಂತಕರಾರು, ಎಂಬ ವಿವರಗಳೊಂದೂ ಈಗ ನಮಗೆ ತಿಳಿಯದು. ಅವುಗಳೇನೇ ಇರಲಿ, ಚಾಲುಕ್ಯ ಇತಿಹಾಸದಲ್ಲಿ ಇದು ಅತ್ಯಂತ ವಿಷಾದಕರ ದುರ್ಘಟನೆ ಎಂಬುದು ನಿರ್ವಿವಾದ. ಮುಂದೆ ಇದರಿಂದ ಆಗಬಹುದಾದ ದುಷ್ಪರಿಣಾಮಗಳೇನು ಎಂಬುದನ್ನು ಈಗಲೇ ಹೇಳುವುದು ಯಾರಿಗೂ ಸಾಧ್ಯವಿಲ್ಲ. ಚಾಲುಕ್ಯ ರಾಜ್ಯದ ಪುನಃಪ್ರತಿಷ್ಠೆಗಾಗಿ ಪ್ರಯತ್ನಗಳು ನಡೆಯಬಹುದು. ಸರ್ವಾಧಿಕಾರಕ್ಕಾಗಿ ಸ್ಪರ್ಧೆ ಹೋರಾಟಗಳು ಮೊದಲಾಗಬಹುದು. ಇವೆರಡೂ ಅಸಂಭವವಲ್ಲ. ಮುಂದೆ ಒದಗಬಹುದಾದ ಅಶಾಂತ ಪರಿಸ್ಥಿತಿಯಿಂದ ಸಾಮಾನ್ಯ ಪ್ರಜೆಗಳು ಕಷ್ಟಕ್ಕೀಡಾಗುವರು. ಸುವ್ಯವಸ್ಥಿತವಾಗಿ ನಡೆಯುತ್ತಿದ್ದ ನಮ್ಮ ಬದುಕು ದುರ್ಭರವಾಗುವುದು.

"ಸರ್ವಾಧಿಕಾರಿ ಬಿಜ್ಜಳರಾಯರು ಮತ್ತು ಅವರ ಮಂತ್ರಿಮಂಡಲ, ಕಳೆದ ಕೆಲವು ತಿಂಗಳಿಂದ ತಳೆದಿದ್ದ ವಿಚಿತ್ರ ಮನೋಭಾವವೇನೆಂಬುದು ನಿಮಗೆಲ್ಲ ತಿಳಿದಿದೆ. ಅದರ ಫಲವಾಗಿ ಹರಳಯ್ಯ ಮಧುವರಸ ಶೀಲವಂತರ ಮೇಲೆ ವರ್ಣಸಂಕರದ ಮಿಥ್ಯಾಪವಾದ ಹೊರಿಸಲ್ಪಟ್ಟಿತು. ಧರ್ಮಾಧಿಕರಣದಲ್ಲಿ ವಿಚಾರಣೆ ನಡೆದು ಆ ಮೂವರು ಶರಣರು ಶೂಲಕ್ಕೇರಿಸಲ್ಪಟ್ಟರು. ಕಲ್ಯಾಣದ ಶೈವಮಠಗಳನ್ನು ನಾಶಮಾಡಿ ಶರಣಧರ್ಮವನ್ನು ನಿರ್ಮೂಲಗೊಳಿಸಲು ಅಧಿಕಾರಿವಲಯಗಳಲ್ಲಿ ರಹಸ್ಯ ಮಂತ್ರಾಲೋಚನೆಗಳು ನಡೆದವು. ಘಟನೆಗಳಿಂದ ಭಯಭೀತರಾದ ಶರಣರು ಸಹ್ಯಾದ್ರಿಯ ವನಪ್ರದೇಶಗಳಿಗೆ ವಲಸೆ ಹೋಗಲು ನಿರ್ಧರಿಸಿಕೊಂಡರು. ಮಹಮನೆಯ ಶರಣರು ಈ ವಿಚಾರದಲ್ಲಿ ನನ್ನ ಸಲಹೆ ಕೇಳಿದಾಗ ನಾನು, 'ಅನ್ನದ ಹಂಗಿಗಾಗಿ ಬದುಕುವುದಕ್ಕಿಂತ ಸಮಯಾಚಾರಕ್ಕಾಗಿ ಪ್ರಾಣಗಳನ್ನು ತ್ಯಜಿಸಲು ನಾವು ಸಿದ್ಧರಾಗಬೇಕು. ಮರಣವೇ ಮಹಾನವಮಿ,' ಎಂದು ಉತ್ತರ ಕಳುಹಿಸಿದೆ. ಆ ಸಂದರ್ಭದಲ್ಲಿ ನಾನು ಕಳುಹಿಸಿದ ವಚನವಿದು :

'ಜೋಳವಾಳಿನವ ನಾನಲ್ಲ. ವೇಳೆಯಾಳಿನವ ನಾನಯ್ಯ !
ಹಾಳುಗೆಟ್ಟೋಡುವ ಆಳು ನಾನಲ್ಲಯ್ಯ.

ಕೇಳು, ಕೂಡಲ ಸಂಗಮದೇವಾ,

ಮರಣವೇ ಮಹಾನವಮಿ !'

"ವಿಪತ್ತು ಎದುರಾದಾಗ ಹೆದರಿ ಓಡುವುದರಿಂದ ಧೈರ್ಯವಾಗಿ ನಿಂತು ಪರಿಸ್ಥಿತಿಯನ್ನು ಎದುರಿಸುವುದು ಶರಣನ ಕರ್ತವ್ಯವೆಂದು ಸ್ಪಷ್ಟವಾಗಿ ತಿಳಿಸಿದೆ. ಮೃತ್ಯು ಎದುರಾದರೂ ಕಲ್ಯಾಣವನ್ನು ಬಿಡಲಾಗದೆಂದು ಹೇಳಿದೆ. ರಾಜನಿಂದ ನಿರ್ವಾಸಿತನಾಗಿ, ರಾಜಧಾನಿಯಿಂದ ದೂರವಾದ ಈ ಅಪ್ರಸಿದ್ಧ ಗ್ರಾಮದ ಗುರುಕುಲದಲ್ಲಿ ಸರ್ವಸಂಗ ಪರಿತ್ಯಾಗಿಯಾದ ಸನ್ಯಾಸಿಯಂತೆ ಬದುಕು ನಡೆಸುತ್ತಿರುವ ನಾನು ಇದಕ್ಕಿಂತ ಹೆಚ್ಚಿಗೆ ಮಾಡುವುದೇನಿದೆ? ಮೂರು ದಿನಗಳ ಹಿಂದೆ, ತಮ್ಮ ಪೂರ್ವ ನಿರ್ಧಾರದಂತೆ ಶರಣರು ಕಲ್ಯಾಣವನ್ನು ತ್ಯಜಿಸಿ ವಲಸೆ ಹೊರಟ ಸುದ್ದಿ ಕೇಳಿದಾಗ ನನ್ನ ಅಂತರಂಗ ಅಳುಕಿತು, ಭವಿಷ್ಯದ ಭೀತಿಯಿಂದ.

"ಶರಣರು ಕಲ್ಯಾಣವನ್ನು ಬಿಟ್ಟ ದಿನವೇ ಬಿಜ್ಜಳರಾಯರ ಕೊಲೆ ನಡೆದದ್ದು ನಮ್ಮ ದುರಾದೃಷ್ಟ. ಈ ರಾಜಕೀಯ ಘಟನೆಯಲ್ಲಿ ಶರಣರ ಪಾತ್ರವೇನು? ಹತ್ಯೆ ನಡೆಯುವುದೆಂದು ಮೊದಲೇ ತಿಳಿದು ಅವರು ವಲಸೆ ಹೊರಟರೆ? ಇವೇ ಮುಂತಾದ ಪ್ರಶ್ನೆಗಳು ಈ ಸಂಬಂಧದಲ್ಲಿ ಸಹಜವಾಗಿ ಉದ್ಭವಿಸುತ್ತವೆ. ಇವುಗಳಿಗೆ ಸಮರ್ಪಕವಾದ ಉತ್ತರ ಕೊಡಲು ಶರಣರು ಸಿದ್ಧರಾಗಬೇಕು. ಧಾರ್ಮಿಕ ಹಿತಾಸಕ್ತಿಗಳ ಸಾಧನೆಗಾಗಿ ಬಿಜ್ಜಳರಾಯರ ಸರ್ವಾಧಿಕಾರವನ್ನು ಕೊನೆಗಾಣಿಸುವ, ಆ ಸ್ಥಾನದಲ್ಲಿ ಚಾಲುಕ್ಯ ಪ್ರಭುತ್ವವನ್ನು ಪುನಃಪ್ರತಿಷ್ಠಿಸುವ ಉದ್ದೇಶ ಶರಣರಿಗೆ ಯಾವಾಗಲೂ ಇರಲಿಲ್ಲವೆಂದು ನಾನು ದೃಢವಾಗಿ ಹೇಳುತ್ತೇನೆ. ಬಿಜ್ಜಳರಾಯರು ನಮಗೆ ತಿಳಿಯದ ಯಾವುದೋ ರಾಜಿಕ ಸಂಚಿನ ಫಲವಾಗಿ ಕೊಲೆಯಾದರೆಂದು ನನ್ನ ವಿಶ್ವಾಸ. ಬಿಜ್ಜಳರಾಯರ ವಿರುದ್ಧ ಇಂತಹ ಸಂಚು ನಡೆಯುತ್ತಿತ್ತೆಂಬುದು ಎಲ್ಲರಿಗೂ ತಿಳಿದಿತ್ತು. ಶರಣರು ವಲಸೆ ಹೊರಟ ದಿನವೇ ಈ ಕೃತ್ಯ ನಡೆದದ್ದು ಒಂದು ಕಾಕತಾಳೀಯ ಘಟನೆ. ಇದರಿಂದ ಒದಗಬಹುದಾದ ದುಷ್ಪರಿಣಾಮಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಮತ್ತು ರಾಜಕೀಯದಿಂದ ಯಾವಾಗಲೂ ದೂರವಾಗಿರಲು ಶರಣರು ಈಗ ಎಲ್ಲ ಪ್ರಯತ್ನಗಳನ್ನೂ ಮಾಡಬೇಕಾಗಿದೆ. ಅದಕ್ಕೆ ಬೇಕಾದ ಶಕ್ತಿ ಸಂಯಮಗಳನ್ನು ಕೂಡಲ ಸಂಗಮದೇವನು ಅವರಿಗೆ ಕರುಣಿಸಲಿ.

ಈ ವಿಷಾದಕರ ದುಃಖಪೂರ್ಣ ಪ್ರಸಂಗದಲ್ಲಿ ನನ್ನ ಮನವಿಯಿದು–

ನಿಮ್ಮ ಬಂಟರ ಬಂಟ ನಾನಯ್ಯ,

ನಿಮ್ಮ ಲೆಂಕರ ಲೆಂಕ ನಾನಯ್ಯ

ನಾನು ನಿಮ್ಮ ತೊತ್ತಿನ ಪಡುಗವ ತೆಗೆವ ಪಡಿಗತೊತ್ತಯ್ಯ.
ಕೂಡಲ ಸಂಗನ ಶರಣರಿಗೆಲ್ಲ ಸಂಗನ ಬಸವನ ಬಿನ್ನಪ :
ಕವಳಿಗೆ ಸಂದುದು. ನಿಮ್ಮ ಜನಪದದಲ್ಲಿ
ಬೆರೆಸೆಂದು ಕೃಪೆ ಮಾಡಿರಯ್ಯ.
"ಆನು ಮಾಡಿದ ತಪ್ಪನೆಣಿಸಿಹೆನೆಂದಡೆ ಗಣನೆಯಿಲ್ಲ.
ನಡೆದು ತಪ್ಪುವೆನು, ನುಡಿದು ತಪ್ಪುವೆನು,
ಮಾಡಿ ತಪ್ಪುವೆ, ನೀಡಿ ತಪ್ಪುವೆ, ಕೂಡಿ ತಪ್ಪುವೆ,
ಅರಿದು ತಪ್ಪುವೆ, ಮರೆದು ತಪ್ಪುವೆ.
ಎನ್ನ ತಪ್ಪನೊಪ್ಪಮಾಡಿಕೊಂಬುದಲ್ಲದೆ ಚಿತ್ತಕ್ಕೆ ತರಲಾಗದು.
ಕೂಡಲ ಸಂಗಮದೇವಯ್ಯನೆಂಬ ಗಂಡನೆನ್ನ
ಬೆರೆಯಬೇಕೆಂದು ಕರೆಯಲಟ್ಟಿದನು.
ಶಿವಶರಣರೆಲ್ಲರಿಗೆ ಶರಣೆಂದು ಬೀಳ್ಕೊಂಬ ತವಕದಲ್ಲಿದ್ದೆ." *

–ಎಂದು ಬಸವಣ್ಣನವರು ಮುಗಿಸಿದಾಗ ಸಭ್ಯರೆಲ್ಲ ಭಾವಪರವಶರಾಗಿ ಚಲಿಸದೆ ಕುಳಿತಿದ್ದರು. ಪ್ರಾಧ್ಯಾಪಕನು ವಂದನಾರ್ಪಣೆಗಾಗಿ ಎದ್ದು ನಿಂತಾಗ ಅವರಿಗೆ ತಾವೆಲ್ಲಿರುವೆವೆಂಬ ಅರಿವಾಯಿತು.

ಉತ್ತರಾಪಥದ ಪ್ರವಾಸಿ ಜಂಗಮರೊಡನೆ ಅಂದು ಅಪರಾಹ್ನ ಸಂಗಮಕ್ಕೆ ಬಂದಿದ್ದ ಅಗ್ಗಳನು, ಸಭೆ ಚದುರಿ, ವೇದಿಕೆ ತೆರವಾಗುತ್ತಲೆ ಬಸವಣ್ಣನವರ ಬಳಿಗೆ ಬಂದು ನಮಸ್ಕಾರ ಮಾಡಿ, "ಅಣ್ಣನವರಿಗೆ ನನ್ನ ಪರಿಚಯವಿರಬೇಕು. ನೀವು ಕಲ್ಯಾಣವನ್ನು ಬಿಟ್ಟು ಬಂದ ಆ ದುರ್ದಿನ ನಾನು ಮೋಳಿಗೆಯ ಮಾರಯ್ಯನವರ ಆಶ್ರಮದಲ್ಲಿ ನಿಮ್ಮನ್ನು ನೋಡಿದ್ದೆ," ಎಂದು ಬಿನ್ನವಿಸಿಕೊಂಡನು.

ಸುಮಾರು ಮೂರೂವರೆ ತಿಂಗಳ ಹಿಂದೆ ನಡೆದ ಆ ಘಟನೆಗಳನ್ನು ಬಸವಣ್ಣನವರು ನೆನಪಿಗೆ ತಂದುಕೊಂಡು, "ಮೋಳಿಗೆಯ ಮಾರಯ್ಯನವರ ನೇತೃತ್ವದಲ್ಲಿ ರಕ್ಷಕ ಪಡೆಯನ್ನು ಅಡ್ಡಗಟ್ಟಿದವರಲ್ಲಿ ನೀವೂ ಒಬ್ಬರಲ್ಲವೆ? ಆಗ ನಿಮ್ಮ ಸಂಗಡ ಇದ್ದ ಇಬ್ಬರು ಗೆಳೆಯರು ಕ್ಷೇಮವೆ ?" ಎಂದು ಪ್ರಶ್ನಿಸಿದರು.

ಚತುರನಾದ ಅಗ್ಗಳನು ಕೆಲವು ಕ್ಷಣಗಳು ಅಪ್ರತಿಭನಾದನು. ಆ ದಿನ ನಾಗರಿಕರಿಂದ ಬೀಳ್ಕೊಂಡ ಮೇಲೆ ಮೋಳಿಗೆಯ ಮಾರಯ್ಯನವರು ಅಗ್ಗಳನನ್ನೂ

* ಶೂನ್ಯ ಸಂಪಾದನೆ, ಪು. ೪೫೬. ಲೆಂಕ=ಸೇವಕ, ಪಡುಗ=ಉಗುಳುವ ಪಾತ್ರೆ. ಕವಳಿಗೆ=(ಕಪಾಲಿಕಾ) ಭಿಕ್ಷಾಪಾತ್ರೆ.

ಆಗ ಅವನ ಸಂಗಡಿದ್ದ ಬೊಮ್ಮರಸ ಬ್ರಹ್ಮಶಿವರನ್ನೂ ಬಸವಣ್ಣನವರಿಗೆ ಪರಿಚಯ ಮಾಡಿಕೊಟ್ಟಿದ್ದರು. ಆ ಅಲ್ಪ ಘಟನೆಯನ್ನು ನೆನಪಿನಲ್ಲಿಟ್ಟುಕೊಂಡು ಬಸವಣ್ಣನವರು ಪ್ರಶ್ನಿಸಿದ್ದನ್ನು ಕೇಳಿದಾಗ ಅಗ್ಗಳನು ಸಹಜವಾಗಿ ಅಚ್ಚರಿಗೊಂಡನು. ಅಲ್ಲಿಂದೀಚೆಗೆ ನಡೆದ ಘಟನೆಗಳಲ್ಲಿ ತನ್ನ ಹಾಗೂ ತನ್ನ ಗೆಳೆಯರ ಪಾತ್ರವನ್ನು ನೆನೆಸಿಕೊಂಡಾಗ ಭೀತಿ ಆತಂಕಗಳು ತಲೆದೋರದೆ ಇರಲಿಲ್ಲ.

"ನನ್ನ ಗೆಳೆಯರೊಬ್ಬರು ಸ್ವಸ್ಥಳಕ್ಕೆ ಹಿಂದಿರುಗಿದರು. ಇನ್ನೊಬ್ಬರು ಸಂಗಡಿದ್ದಾರೆ," ಎಂದು ಅವನು ಜಂಗಮ ತಂಡದೊಡನೆ ನಾಗರಿಕ ವೇಷದಲ್ಲಿದ್ದ ಬ್ರಹ್ಮಶಿವನನ್ನು ತೋರಿಸಿದನು.

ಈ ಮಾತುಗಳು ನಡೆಯುತ್ತಿದ್ದಂತೆ ಬ್ರಹ್ಮಶಿವನು ಉತ್ತರಾಪಥದ ಜಂಗಮರನ್ನು ವೇದಿಕೆಯ ಸುತ್ತ ನಿಲ್ಲಿಸಿದನು. ವಿಚಿತ್ರ ವೇಷಭೂಷಣಗಳ ಆ ಜಂಗಮರನ್ನು ಏಕಕಾಲದಲ್ಲಿ ಅಲ್ಲಿ ಕಂಡು ಬಸವಣ್ಣನವರು ಅವರೆಲ್ಲರಿಗೆ ಕೈಯೆತ್ತಿ ನಮಸ್ಕಾರ ಮಾಡಿದರು.

ಅವರ ಪರಿಚಯ ಮಾಡಿಕೊಡುತ್ತ ಅಗ್ಗಳನು ಹೇಳಿದನು : "ಈ ಜಂಗಮರು ಉತ್ತಾರಾಪಥದ ಸಪಾದಲಕ್ಷ ದೇಶದಿಂದ ಅಣ್ಣನವರ ದರ್ಶನಕ್ಕಾಗಿ ಕಲ್ಯಾಣಕ್ಕೆ ಬಂದರು. ನೀವು ಕೂಡಲ ಸಂಗಮದಲ್ಲಿರುವುದಾಗಿ ಕೇಳಿ ಆ ದಿನವೇ ಇಲ್ಲಿಗೆ ಪಯಣ ಮಾಡಿದರು. ಕರ್ಹಾಡಕ್ಕೆ ಹೊರಟಿದ್ದ ನಾವು ಅವರ ಸಂಗಡ ಬಂದೆವು.

ಬಸವಣ್ಣನವರ ಮುಖದಲ್ಲಿ ವಿಷಾದದ ನೆರಳು ಸುಳಿಯಿತು. "ಬಂದ ಜಂಗಮಕ್ಕೆ ದಾಸೋಹ ನಡೆಸಲು ಈಗ ನಾನು ಅಸಮರ್ಥನು. ಗುರುಕುಲದ ಪ್ರಾಧ್ಯಾಪಕರಿಗೆ ಇವರು ಬಂದಿರುವ ವಿಚಾರ ತಿಳಿಸಿದರೆ ಒಳ್ಳೆಯದು," ಎಂದರು.

"ಇವರು ಕಲ್ಯಾಣದಲ್ಲಿ ಒಂದು ದಿನ ಮಹಮನೆಯ ಅತಿಥಿಗಳಾಗಿದ್ದು ದಾಸೋಹ ಮುಗಿಸಿಕೊಂಡು ಇಲ್ಲಿಗೆ ಬಂದರು, ಅಣ್ಣನವರೆ. ನಿಮ್ಮ ಪ್ರವಚನ ಕೇಳಿ ದಾಸೋಹಕ್ಕಿಂತ ಹೆಚ್ಚಿನ ತೃಪ್ತಿ ಆಗಿದೆ ಅವರಿಗೆ. ಪ್ರಭುದೇವರ ವಚನಗಳನ್ನು ಪ್ರಾಕೃತಕ್ಕೆ ಅನುವಾದ ಮಾಡಿ ಹೇಳಿದಾಗ ಅವರಿಗಾದ ಆನಂದ ಅಷ್ಟಿಷ್ಟಲ್ಲ," ಎಂದು ಅಗ್ಗಳನು ಸಮಾಧಾನ ಹೇಳಿದನು.

ಬಸವಣ್ಣನವರು ಉತ್ತರ ಕೊಡಲಿಲ್ಲ. ಅನ್ಯಮನಸ್ಕರಾಗಿ ಶೂನ್ಯದ ಕಡೆಗೆ ನೋಡುತ್ತಿದ್ದರು ಅವರು.

ಅಗ್ಗಳನು ಪುನಃ ಹೇಳಿದನು : "ಕಲ್ಯಾಣದ ದುರ್ವಾರ್ತೆಯಿಂದ ನಿಮ್ಮ ಮನಸ್ಸು ಕಲಕಿದೆ, ಅಣ್ಣನವರೆ. ಈಗ ನಾನು ಹೆಚ್ಚು ತೊಂದರೆ ಕೊಡುವುದಿಲ್ಲ. ಈ ಜಂಗಮರಿಗೆ ಪ್ರಾಕೃತದಲ್ಲಿ ನಾಲ್ಕು ಮಾತು ಹೇಳಿದರೆ ಸಾಕು."

ಬಸವಣ್ಣನವರು ಜಂಗಮ ತಂಡಕ್ಕೆ ಕೈ ಮುಗಿದು ಹೇಳಿದರು : "ನೀವು ಉತ್ತರಾಪಥದಿಂದ ದೂರ ದಕ್ಷಿಣದ ಸಂಗಮಕ್ಕೆ ಸಂಗಮನಾಥನ ದರ್ಶನಕ್ಕಾಗಿ ಬಂದದ್ದು ನನಗೆ ಹೆಚ್ಚು ಆನಂದವನ್ನುಂಟುಮಾಡಿದೆ. ಭಕ್ತಿ ಪ್ರಧಾನವಾದ ಶೈವ ಧರ್ಮವು ಭಾರತಕ್ಕೆ ದಕ್ಷಿಣದ ಕಾಣಿಕೆ. ಶರಣರನ್ನು ಉದ್ಧರಿಸಿದಂತೆ ಭಾರತವರ್ಷದ ಜನಸಮುದಾಯವನ್ನೂ ಉದ್ಧರಿಸಬಲ್ಲ ಶಕ್ತಿಯಿದೆ ಅದಕ್ಕೆ. ಉತ್ತರ ದಕ್ಷಿಣ, ಪೂರ್ವ ಪಶ್ಚಿಮಗಳೆಂಬ ಭೇದಭಾವಗಳೆಲ್ಲ ಅಳಿದು, ಶಿವ ಭಕ್ತರೆಲ್ಲ ಒಂದೇ ಎಂಬ ಐಕ್ಯಭಾವನೆ ಜನರಲ್ಲಿ ಮೂಡುವಂತೆ ಕೂಡಲ ಸಂಗಮದೇವನು ಕರುಣಿಸಲಿ. ನನ್ನ ಈ ಸಂದೇಶವನ್ನು ನೀವು ಆಸೇತುಹಿಮಾಚಲವೂ ಹರಡಿರಿ."

ಬಸವಣ್ಣನವರ ಅಸ್ಖಲಿತ ಪ್ರಾಕೃತ ವಾಣಿ ಉತ್ತರಾಪಥದ ಜಂಗಮರನ್ನು ಅಚ್ಚರಿಗೊಳಿಸಿತು. ಅವರ ನಾಯಕನು ಬಸವಣ್ಣನವರಿಗೆ ಕೈಯೆತ್ತಿ ನಮಸ್ಕಾರ ಮಾಡಿ, "ಇಂದು ನಮ್ಮ ಪ್ರವಾಸ ಫಲಿಸಿತು, ಅಣ್ಣನವರೆ. ನಾವು ಧನ್ಯರಾದೆವು," ಎಂದನು. ಎಲ್ಲರ ಕಣ್ಣುಗಳಲ್ಲಿ ಆನಂದಬಾಷ್ಪಗಳು ಸುರಿಯುತ್ತಿದ್ದವು.

ಜಂಗಮ ತಂಡದಿಂದ ಬೀಳ್ಕೊಂಡ ಮೇಲೆ ಬಸವಣ್ಣನವರು ಅಪ್ಪಣ್ಣನಿಂದ ಕಲ್ಯಾಣದ ಘಟನೆಗಳ ಬಗೆಗೆ ವಿವರಗಳನ್ನು ತಿಳಿದುಕೊಂಡರು. ಶರಣರು ಮಹಮನೆಯನ್ನು ಬಿಟ್ಟು ಆಂಜನೇಯ ಹೊಳೆಯಾಚೆಯ ಗಣಾಚಾರಿ ಯೋಧರ ಶಿಬಿರವನ್ನು ಸೇರುವವರೆಗೆ ನಡೆದುದೆಲ್ಲವನ್ನೂ ಅಪ್ಪಣ್ಣ ಹೇಳಿದನು.

ಕೊನೆಗೆ ಬಸವಣ್ಣನವರೆಂದರು : "ನಡೆಯಬಾರದುದು ನಡೆದುಹೋಯಿತು, ಅಪ್ಪಣ್ಣ. ಕೊಲೆಗಡುಕರಾರೇ ಆಗಲಿ, ಪರೋಕ್ಷವಾಗಿ ಅದಕ್ಕೆ ಕಾರಣರೆಂಬ ಅಪವಾದ ಶರಣರಿಗೆ ತಪ್ಪಿದ್ದಲ್ಲ. ಅದೇ ನನ್ನ ಮುಖ್ಯ ಚಿಂತೆ. ನೀನು ಶಿಬಿರವನ್ನು ಬಿಟ್ಟಾಗ ನಗರದ ಸ್ಥಿತಿ ಹೇಗಿತ್ತೆಂಬುದು ತಿಳಿದಿದೆಯೆ?"

"ನನಗೆ ಆ ವಿಚಾರಗಳೊಂದೂ ತಿಳಿಯದು, ಅಣ್ಣನವರೆ. ಇದು ನೀಲಲೋಚನೆ ಅಕ್ಕನವರು ಕಳುಹಿಸಿರುವ ಪತ್ರ," ಎಂದು ಅಪ್ಪಣ್ಣ ಅಂಗಿಯಿಂದ ಓಲೆ ತೆಗೆದುಕೊಟ್ಟನು.

ಬಸವಣ್ಣನವರು ಓಲೆಯನ್ನು ಓದಿಕೊಂಡು ತುಸು ಹೊತ್ತು ಚಿಂತಿಸಿ ಬಳಿಕ ಹೇಳಿದರು : "ತನ್ನನ್ನು ತಾನು ತಿಳಿಯುವುದು ಮುಕ್ತಿಯ ರಾಜಪಥ. ಜನರನ್ನು ಈ ಮಾರ್ಗದಲ್ಲಿ ನಡೆಸುವ ಪರಮೋದ್ದೇಶದಿಂದ ಶರಣಧರ್ಮದ ಸಿದ್ಧಿಸಾಧನೆಗಳೆಲ್ಲ ರೂಪಿತವಾಗಿವೆ. ನೀನು ಆ ಮಾರ್ಗವನ್ನು ಮುಟ್ಟಿದುದು ನನಗೆ ಸಮಾಧಾನವನ್ನುಂಟುಮಾಡಿದೆ," ಎಂದು ನಾನು ಹೇಳಿದುದಾಗಿ ನೀಲಲೋಚನೆಗೆ ತಿಳಿಸು.

ಆಮೇಲೆ ಬಸವಣ್ಣನವರು ತಮ್ಮ ನಿತ್ಯ ಪದ್ಧತಿಯಂತೆ ಅಲ್ಲಿಂದ ಹೊರಟು ನದಿಯ ತೀರದಲ್ಲಿದ್ದ ಇನ್ನೊಂದು ಶಿಲಾಮಂಟಪಕ್ಕೆ ಹೋದರು. ಅವರ ಸೇವೆಗಾಗಿ ನಿಯುಕ್ತನಾಗಿದ್ದ ಗುರುಕುಲದ ವಟು, ಪೂಜೆಗಾಗಿ ಅಲ್ಲಿ ಅಗ್ಗವಣಿ ಬಿಲ್ವಪತ್ರೆಗಳನ್ನು ಸಿದ್ಧಗೊಳಿಸಿ ಕಾದು ಕುಳಿತಿದ್ದನು.

* * *

ನದೀತೀರದ ಬಂಡೆಯೊಂದರ ಮೇಲೆ ಕುಳಿತು ಅಗ್ಗಳನು ಸಂಧ್ಯಾ ಸೂರ್ಯನ ವರ್ಣರಂಜಿತ ಕಿರಣಗಳು ಅಲೆಗಳೊಡನೆ ಕಣ್ಣಾಮುಚ್ಚಾಲೆ ಯಾಡುವುದನ್ನು ನೋಡುತ್ತಿದ್ದನು. ಅವನ ಮನಸ್ಸು ಬಸವಣ್ಣನವರ ಪ್ರವಚನ, ಅವರು ಬೀಳ್ಕೊಳ್ಳುವ ಮುನ್ನ ನುಡಿದ ಎರಡು ಆಶುವಚನಗಳು, ಇವುಗಳನ್ನು ಕುರಿತು ಚಿಂತನಮಂಥನದಲ್ಲಿ ತೊಡಗಿತ್ತು.

ಪ್ರಭುದೇವರ ವಚನಗಳ ವಿವರಣೆಯಲ್ಲಿ ಬಸವಣ್ಣನವರು ಅನುಸರಿಸಿದ ನವ ವಿಧಾನವನ್ನು ಅಗ್ಗಳನು ಗುರುತಿಸಿದನು. ಶರಣಧರ್ಮದಲ್ಲಿ ಮಾತ್ರವೇ ಪ್ರಚಾರದಲ್ಲಿದ್ದ ಪಾರಿಭಾಷಿಕ ಶಬ್ದಗಳ ಪ್ರತಿಯಾಗಿ, ಆಗಿನ ಕಾಲಕ್ಕೆ ಎಲ್ಲರಲ್ಲಿಯೂ ಪ್ರಚಾರದಲ್ಲಿದ್ದ ಅದ್ವೈತ ಪಂಥದ ಪಾರಿಭಾಷಿಕ ಶಬ್ದಗಳನ್ನು ಬಸವಣ್ಣನವರು ಉಪಯೋಗಿಸಿದ್ದರು. ಅದರಿಂದಾಗಿ ವಚನಗಳ ಅರ್ಥ ಅಗ್ಗಳನಿಗೆ ಹೆಚ್ಚು ಪರಿಸ್ಫುಟವಾಗಿತ್ತು.

ಶರಣಧರ್ಮದ ಪ್ರವಚನಕಾರರು ಈ ಮಾರ್ಗವನ್ನೇಕೆ ಅನುಸರಿಸುತ್ತಿಲ್ಲ? ಶರಣಧರ್ಮದ ಪ್ರಗಾಢ ಸರ್ವವ್ಯಾಪಿ ತತ್ವಗಳನ್ನು ಪಾರಿಭಾಷಿಕ ಶಬ್ದಗಳ ಆವರಣದಿಂದ ಮುಚ್ಚಿಡಲು ಏಕೆ ಪ್ರಯತ್ನಿಸುತ್ತಿದ್ದಾರೆ ? ರಹಸ್ಯ ರಕ್ಷಣೆ ಇದರ ಉದ್ದೇಶವೇ? –ಎಂದು ಅವನ ವಿವೇಕ ಪ್ರಶ್ನಿಸಿತು.

ಪ್ರವಚನದಲ್ಲಿ ಬಸವಣ್ಣನವರು ಸೂಚಿಸಿದ ಇನ್ನೊಂದು ವಿಚಾರ ಅಗ್ಗಳನಿಗೆ ಹೆಚ್ಚು ಮೆಚ್ಚುಗೆ ಆಯಿತು. ಪಂಚಶೀಲ ಅಷ್ಟಾವರಣಗಳ ಬಾಹ್ಯ ಲಾಂಛನಗಳಿಗೆ ಪ್ರಾಮುಖ್ಯತೆ ಕೊಡದೆ, ಸಾಧಕನ ಅಂತರಂಗದಲ್ಲಿ ಆಗಬೇಕಾದ ಪರಿವರ್ತನೆಯನ್ನು ಕುರಿತು ಬಸವಣ್ಣನವರು ವಿಸ್ತಾರವಾಗಿ ಪ್ರಸ್ತಾಪಿಸಿದ್ದರು. ಸುಮಾರು ಒಂದು ವರ್ಷಕ್ಕೆ ಹಿಂದೆ ದೇವಗಿರಿಯಲ್ಲಿ ಚೆನ್ನಬಸವಣ್ಣನವರನ್ನು ಕಂಡಾಗಿನಿಂದ ಅಗ್ಗಳನ ಒಲವು ಶರಣಧರ್ಮದ ಕಡೆಗೆ ತಿರುಗಿತ್ತಾದರೂ, ಪಂಚಶೀಲ ಅಷ್ಟಾವರಣಗಳ ಬಾಹ್ಯ ಲಾಂಛನಗಳಿಗೆ ಶರಣರು ಕೊಡುತ್ತಿದ್ದ ಮಹತ್ವ ಅವನನ್ನು ಶರಣದೀಕ್ಷೆಗೆ ವಿಮುಖನನ್ನಾಗಿ ಮಾಡಿದ್ದವು. ಶರಣಧರ್ಮ ವಿಶ್ವಧರ್ಮವಾಗುವ ಒಂದೇ ಒಂದು ಅಡಚಣೆಯೆಂದರೆ ಈ ಬಾಹ್ಯ ಲಾಂಛನಗಳ ಕಠಿಣತೆಯೇ ಎಂದು

ಅಗ್ಗಳನು ನಿರ್ಧರಿಸಿಕೊಂಡನು.

"ದೀಕ್ಷೆಯಾದರೂ ನಾನು ಶರಣನಾಗಲಿಲ್ಲ. ನಿನಗೆ ದೀಕ್ಷೆ ಇಲ್ಲದಿದ್ದರೂ ನಿಜವಾಗಿ ಶರಣನೇ ಆಗಿರುವೆ," ಎಂದು ಬ್ರಹ್ಮಶಿವ ತನ್ನನ್ನು ಹಾಸ್ಯಮಾಡಿ ಹೇಳುತ್ತಿದ್ದದ್ದು ಅಸತ್ಯವಲ್ಲವೆಂದು ಅಗ್ಗಳನು ತಿಳಿದನು.

ಬಿಜ್ಜಳನ ಬಗೆಗೆ ಪರೋಕ್ಷ ವಿನಯವನ್ನು ಮುಗಿಸುತ್ತ ಬಸವಣ್ಣನವರು ಹೇಳಿದ ಎರಡು ಆಶುವಚನಗಳ ಮುಕ್ತಾಯದ ನುಡಿಗಳು ಅಗ್ಗಳನನ್ನು ಅಚ್ಚರಿಗೊಳಿಸಿದ್ದವು.

"ಕವಳಿಗೆ ಸಂದುದು ನಿಮ್ಮ ನಿಜಪದದಲ್ಲಿ
ಬೆರೆಸೆಂದು ಕೃಪೆ ಮಾಡಿರಯ್ಯ."
"ಶರಣರೆಲ್ಲರಿಗೆ ಶರಣೆಂದು ಬೀಳ್ಕೊಂಬ
ತವಕದಲ್ಲಿದ್ದೆ." –ಎಂದು ಬಸವಣ್ಣನವರು ಹೇಳಿದ್ದರು. "ಕವಳಿಗೆ ಸಂದುದು, ನನ್ನ ಭಿಕ್ಷಾ ಪಾತ್ರೆ ತುಂಬಿತು. ಶರಣರೆಲ್ಲರಿಂದ ಬೀಳ್ಕೊಳ್ಳುವ ಅವಸರದಲ್ಲಿದ್ದೇನೆ ನಾನು," ಎಂಬುದರ ಅರ್ಥವೇನು?

ಸಂಗಮವನ್ನು ಬಿಟ್ಟು ಯಾವುದಾದರೊಂದು ಅಜ್ಞಾತ ಅನಿರ್ದಿಷ್ಟ ಸ್ಥಾನಕ್ಕೆ ಹೋಗುವುದು ಬಸವಣ್ಣನವರ ಉದ್ದೇಶವೆ? ವಚನಗಳ ಈ ನಿಗೂಢಾರ್ಥವನ್ನು ತಿಳಿಯಲು ಶರಣರು ಅಸಮರ್ಥರಾದರೆ?

ಕಲ್ಯಾಣದಿಂದ ಶರಣರ ವಲಸೆ, ಕೂಡಲ ಸಂಗಮದಿಂದ ಬಸವಣ್ಣನವರ ನಿಷ್ಕ್ರಮಣ, –ಈ ಘಟನೆಗಳು ಚಾಲುಕ್ಯ ರಾಜ್ಯಕ್ಕೆ ಶುಭಸೂಚಕವಲ್ಲ, ಎಂದು ಭಾವಿಸಿ ಅಗ್ಗಳನು ಅಳುಕಿದನು.

ಅವನಿದ್ದ ಸ್ಥಳದಿಂದ ಬಸವಣ್ಣನವರು ಪೂಜೆಗೆ ಕುಳಿತಿದ್ದ ಶಿಲಾಮಂಟಪ ಕಾಣಿಸುತ್ತಿತ್ತು. ತದೇಕ ದೃಷ್ಟಿಯಿಂದ ಅವನು ಆ ಕಡೆ ನೋಡುತ್ತಿದ್ದಂತೆ ಸೂರ್ಯನು ಅಸ್ತನಾಗಿ ಸುತ್ತ ಕತ್ತಲೆ ಹರಡಿತು. ಮಂಟಪದ ಆಕೃತಿ ಕ್ರಮ ಕ್ರಮವಾಗಿ ಮಂಜು ಮುಸುಕಿದಂತೆ ಅಸ್ಪಷ್ಟವಾಗುತ್ತ ಕೊನೆಗೆ ಹರಡಿದ ಕತ್ತಲೆಯಲ್ಲಿ ಬೆರೆಯಿತು. ಅಗ್ಗಳನು ನಿಡುಸುಯ್ದನು.

ಆಗ ಬ್ರಹ್ಮಶಿವ ಅಲ್ಲಿಗೆ ಬಂದು, "ಅಣ್ಣನವರಂತೆ ನೀನೂ ಧ್ಯಾನಮಗ್ನನಾದೆಯ, ಅಗ್ಗಳ?" ಎಂದನು.

"ಅಂತಹ ಪುಣ್ಯ ನನಗೆಲ್ಲಿಯದು, ಬ್ರಹ್ಮಶಿವ. ಬಿಜ್ಜಳನ ಬಗೆಗೆ ಬಸವಣ್ಣನವರು ಹೇಳಿದುದನ್ನು ಕುರಿತು ಯೋಚಿಸುತ್ತಿದ್ದೆ," ಎಂದು ಅಗ್ಗಳನು ಉತ್ತರ ಕೊಟ್ಟನು.

"ನನ್ನ ಚಿಂತೆ ಬೊಮ್ಮರಸರ ವಿಚಾರದಲ್ಲಿ. ಅವರೇನಾದರು, ಎಲ್ಲಿಗೆ

ಹೋದರು ಎಂಬುದನ್ನು ತಿಳಿಯಲು ಇನ್ನೆರಡು ದಿನಗಳಾದರೂ ನಾವು ಕಲ್ಯಾಣದಲ್ಲಿರಬೇಕಾಗಿತ್ತು," ಎಂದನು ಬ್ರಹ್ಮಶಿವ.

"ನಾವು ಹಾಗೆ ಮಾಡಿದ್ದರೆ ಮಾಧವ ನಾಯಕನ ಸೈನಿಕರಿಗೆ ಸಿಕ್ಕಿಬೀಳುತ್ತಿದ್ದೆವು. ಬಿಜ್ಜಳನ ಅಂತ್ಯಸಂಸ್ಕಾರ ಮುಗಿದ ಕೂಡಲೆ ಮಾಧವ ನಾಯಕನು ನಗರದ ಮಹಾದ್ವಾರಗಳನ್ನು ಮುಚ್ಚಿಸಿ ತನ್ನ ಸೈನಿಕರನ್ನು ಕಾವಲಿಟ್ಟನು. ಬೋನಿಗೆ ಸಿಕ್ಕ ಇಲಿಗಳಂತೆ ನಾವು ನಗರದ ಸೆರೆಮನೆಯಲ್ಲಿ ಕೊಳೆಯಬೇಕಾಗುತ್ತಿತ್ತು."

"ಚಾಲುಕ್ಯ ಸರ್ವಾಧಿಕಾರಿಯ ಶವಸಂಸ್ಕಾರಕ್ಕೆ ಅದೆಷ್ಟೊಂದು ಸೈನ್ಯ ! ಅದೆಷ್ಟೊಂದು ವೈಭವ ! ಚಾಲುಕ್ಯ ಚಕ್ರೇಶ್ವರ ಜಗದೇಕಮಲ್ಲನ ಶವಸಂಸ್ಕಾರ ಅದೊಂದೂ ಇಲ್ಲದೆ ಸಾಮಾನ್ಯ ರೀತಿಯಲ್ಲಿ ಮುಗಿಯಿತು."

"ಮೃತದೇಹವನ್ನು ಕರ್ಣದೇವ ರಹಸ್ಯವಾಗಿ ರಾಜಗೃಹಕ್ಕೆ ತರದೇ ಹೋಗಿದ್ದರೆ ಜಗದೇಕಮಲ್ಲರಸರು ಕೊಲೆಗಡುಕನ ಅನಾಮಿಕ ಸಂಸ್ಕಾರ ಪಡೆಯುತ್ತಿದ್ದರು. ಕರ್ಣದೇವನ ಸಮಯೋಚಿತ ಚತುರತೆ ಅವರನ್ನು ಆ ಅಪಮಾನದಿಂದ ರಕ್ಷಿಸಿತು. ಬೊಮ್ಮರಸನು ಆ ರಾತ್ರಿಯೇ ನಗರದಿಂದ ಪಾರಾಗಿರಬೇಕು,"

ಅಗ್ಗಳನ ಉತ್ತರದಿಂದ ಬ್ರಹ್ಮಶಿವನಿಗೆ ಸಮಾಧಾನವಾಗಲಿಲ್ಲ. "ನಿಡುಗಲ್ ದುರ್ಗದಲ್ಲಿ ರಸವಾದದ ಗೀಳಿಗೆ ಬಿದ್ದಿದ್ದ ಬೊಮ್ಮರಸನನ್ನು ಈ ಒಳಸಂಚಿನಲ್ಲಿ ಸಿಕ್ಕಿಸಿದವನು ನಾನು. ಈಗ ಅವನೇನಾದನೆಂದು ಚಿಂತಿಸಬೇಡವೇ," ಎಂದು ಭಾವಿಸಿ ಅವನು ತುಸು ಹೊತ್ತು ಮೌನವಾಗಿದ್ದು ಬಳಿಕ, "ಮುಂದೆ ನಾವೇನು ಮಾಡುವುದು, ಅಗ್ಗಳ?" ಎಂದನು.

"ಉತ್ತರಾಪಥದ ಜಂಗಮರ ತಂಡ ಕಲ್ಯಾಣ ನೌಕಾಶ್ರಯದ ಮಾರ್ಗವಾಗಿ ಸೋಮನಾಥಕ್ಕೆ ಹೋಗುತ್ತದೆ. ಕರ್ಹಾಡದವರೆಗೆ ನಾವೂ ಅವರ ಸಂಗಡ ಹೋಗುವುದು. ಅದೇ ಸದ್ಯದಲ್ಲಿ ಸುರಕ್ಷಿತವಾದ ಮಾರ್ಗ."

ಬ್ರಹ್ಮಶಿವ ಉತ್ತರ ಕೊಡಲಿಲ್ಲ.

"ಈಗ ಆ ಜಂಗಮಯ್ಯಗಳೆಲ್ಲಿದ್ದಾರೆ ?

–ಅಗ್ಗಳನು ಮತ್ತೆ ಪ್ರಶ್ನಿಸಿದನು.

"ಸ್ನಾನ ಮುಗಿಸಿ ಪೂಜೆಗೆ ಕುಳಿತಿದ್ದಾರೆ. ಅವರಿಗೆ ತೊಂದರೆಯಾಗದಿರಲೆಂದು ನಾನು ನಿನ್ನನ್ನು ಹುಡುಕುತ್ತ ಬಂದೆ," ಎಂದು ಬ್ರಹ್ಮಶಿವ ಸಮೀಪದ ಇನ್ನೊಂದು ಕಲ್ಲಿನ ಮೇಲೆ ಕುಳಿತನು.

ಅಗ್ಗಳನ ದೃಷ್ಟಿ ಬಸವಣ್ಣನವರಿದ್ದ ಶಿಲಾಮಂಟಪದ ಕಡೆ ತಿರುಗಿತು. ಆ ನಿಬಿಡಾಂಧಕಾರದಲ್ಲಿ ನದಿಯ ಜಾಡು ಹಿಡಿದು ಶಿಲಾಮಂಟಪ ಇರುವ ಸ್ಥಳವನ್ನು

ಗುರುತಿಸಬೇಕಾಗಿತ್ತು. ಹೆಪ್ಪುಗಟ್ಟಿದ ಕತ್ತಲೆಯ ಹೊರತಾಗಿ ಅಲ್ಲಿ ಮತ್ತೇನೂ ಕಾಣುತ್ತಿರಲಿಲ್ಲ.

"ಏನು ಯೋಚಿಸುತ್ತಿರುವೆ, ಅಗ್ಗಳ?"

–ತುಸು ಹೊತ್ತಿನ ಮೇಲೆ ಬ್ರಹ್ಮಶಿವ ಕೇಳಿದನು.

"ಪೂಜೆಗೆ ಕುಳಿತ ಬಸವಣ್ಣನವರು ಮಂಟಪವನ್ನು ಬಿಟ್ಟರೆ, ಅಥವಾ ಇನ್ನೂ ಅಲ್ಲಿಯೇ ಇರುವರೇ ಎಂದು. ಕತ್ತಲಲ್ಲಿ ಏನೂ ಕಾಣುತ್ತಿಲ್ಲ," ಅಗ್ಗಳನೆಂದನು.

"ಶರಣರಿಗೆ ಅರಿವಿನ ಕಣ್ಣು ತೆರೆಯುವುದಂತೆ, ಅಗ್ಗಳ. ಕತ್ತಲಲ್ಲಿ ನೀಡುವ ಶಕ್ತಿ ಇದೆಯೋ ಏನೋ ಅವರಿಗೆ!" ಎಂದು ಬ್ರಹ್ಮಶಿವ ನಕ್ಕನು.

"ನಿನ್ನ ಕುಚೇಷ್ಟೆ ನಿಲ್ಲಿಸು, ಬ್ರಹ್ಮಶಿವ....ಮಂಟಪದ ಹತ್ತಿರ ಬೆಳಕು ಕಾಣುತ್ತಿಲ್ಲವೆ ಈಗ?"

"ಅದು ದೀಪವಲ್ಲ, ನಕ್ಷತ್ರ."

ನೋಡುತ್ತಿದ್ದಂತೆ ನಕ್ಷತ್ರದ ಆಕಾರ ದೊಡ್ಡದಾಯಿತು. ಬೆಳಕು ಹೆಚ್ಚಿ ಮಂಟಪ ಮಸಕಾಗಿ ಕಂಡಿತು.

"ಮಂಟಪದಲ್ಲಿ ದೀಪ ಹಚ್ಚಿಟ್ಟಿದ್ದಾರೆ," ಎಂದನು ಬ್ರಹ್ಮಶಿವ.

ಮಂಟಪದಲ್ಲೆಲ್ಲ ಹರಡಿತು ಆ ಬೆಳಕು. ಕತ್ತಲ ತೆರೆಯ ಮೇಲೆ, ಮಿರುಗುವ ಬೆಳ್ಳಿಯ ಬಣ್ಣದಿಂದ ಬರೆದ ಬೃಹದಾಕಾರದ ಚಿತ್ತಾರದಂತೆ ಬೆಳಗಿತು ಆ ಶಿಲಾ ಮಂಟಪ. ಅದರ ನಡುವೆ ಬಸವಣ್ಣನವರು ಪದ್ಮಾಸನದಲ್ಲಿ ಕುಳಿತು ಪೂಜಾಭಾವದಿಂದ ಎಡಗೈಯನ್ನು ಮುಂದೆ ಚಾಚಿದ್ದರು. ಅರೆ ತೆರೆದ ಅವರ ಕಣ್ಣುಗಳ ದೃಷ್ಟಿಜ್ವಾಲೆ ಮುಂಗೈಯಲ್ಲಿ ಮಿರುಗುತ್ತಿದ್ದ ಜ್ಯೋತಿರ್ಮಯ ಲಿಂಗಮೂರ್ತಿಯ ಮೇಲೆ ನೆಟ್ಟಿತ್ತು.

ಅಗ್ಗಳನ ಉದ್ರಿಕ್ತ ಅಂತಃಚಕ್ಷುಗಳು ಈ ಅದ್ಭುತ ಅಭೌಮ ದೃಶ್ಯವನ್ನು ನೋಡುತ್ತಿದ್ದಂತೆ ಮಂಟಪದಲ್ಲಿ ಹರಡಿದ್ದ ಬೆಳಕು, ಬಸವಣ್ಣನವರ ದೃಷ್ಟಿಜ್ವಾಲೆಯೊಡನೆ ಬೆರೆತು, ಕರಸ್ಥಲದಲ್ಲಿ ಕೇಂದ್ರೀಕೃತವಾಗಿ, ಬೃಹದಾಕಾರದ ವಜ್ರದಂತೆ ಬೆಳಗಿತು. ತಿಳಿನೀಲಿ ಬಣ್ಣದ ಅದರ ಕಿರಣ ಮಾಲಿಕೆ, ಬಸವಣ್ಣನವರ ದೇಹದ ಮೇಲೆ ಬಿದ್ದು, ಒಂದುಗೂಡಿ, ಬೆಳಕಿನ ಎಳೆಯಂತೆ ಕಂಡಿತು. ಭಾವಾವೇಶದಿಂದ ಉದ್ದೀಪಿತನಾಗಿ ಸೂಕ್ಷ್ಮಾತಿಸೂಕ್ಷ್ಮವನ್ನು ಕಾಣಲು ತವಕಿಸುತ್ತಿದ್ದ ಅಗ್ಗಳನು, ಆ ಬೆಳಕಿನ ಎಳೆ ಮೂರಾಗಿ ಕವಲೊಡೆದು, ಅದರಲ್ಲಿ ಮಧ್ಯದ ಎಳೆ, ಮಣಿಗಳಂತೆ ಮಿರುಗುವ ತಾವರೆ ಆಕಾರದ ಆರು ಗಂಟುಗಳಿಂದ ಬೆಳಗುತ್ತಿರುವುದನ್ನು ಕಂಡನು. ಮಧ್ಯದ ಎಳೆಯ ಮುಡಿಯಲ್ಲಿ ಸಹಸ್ರ ಸೂರ್ಯಕಾಂತಿಯಿಂದ ಸಹಸ್ರಾರ ಬೆಳಗುತ್ತಿತ್ತು.

ನೋಡಲಾರದೆ ಅಗ್ಗಳನು ಕಣ್ಣುಗಳನ್ನು ಮುಚ್ಚಿದನು.

ಹಠಾತ್ತನೆ ಸಾವಿರ ಸಿಡಿಲುಗಳು ಹೊಡೆದಂತೆ ದೊಡ್ಡ ಶಬ್ದವಾಗಿ ಭೂಮಿ ನಡುಗಿತು. ಅಗ್ಗಳನ ಸಮೀಪದಲ್ಲಿ ಕುಳಿತಿದ್ದ ಬ್ರಹ್ಮಶಿವ ಚೀರುತ್ತ ಎದ್ದು ನಿಂತನು. ಬಿರುಗಾಳಿಗೆ ಸಿಕ್ಕ ಬಾಳೆಯ ಮರದಂತೆ ತೂಗಾಡುತ್ತಿತ್ತು ಅವನ ದೇಹ.

ಅಗ್ಗಳನು ಎದ್ದು ಅವನನ್ನು ಹಿಡಿದು ನಿಲ್ಲಿಸಿ, "ಏನಾಯಿತು, ಬ್ರಹ್ಮಶಿವ ? ಏಕೆ ಬೆದರಿದೆ?" ಎಂದು ಕೇಳಿದನು.

"ಭೂಕಂಪ !.... ಭೂಮಿ ನಡುಗಿತು !.....ಎಂಥ ಮಹಾಶಬ್ದ !"

–ಬ್ರಹ್ಮಶಿವ ತೊದಲುತ್ತ ಹೇಳಿದನು.

"ನನಗೆ ಆ ಶಬ್ದ ಕೇಳಿಸಲಿಲ್ಲ. ನಾನು ಕಂಪಿಸಲಿಲ್ಲ. ಸ್ಥಿರನಾಗಿ ಕುಳಿತು ಭುವಿಗಿಳಿದ ಮಹಾಘನವೊಂದು ಮತ್ತೆ ಗಗನದ ಉನ್ನತ ಸ್ಥಾನ ಸೇರಿದುದನ್ನು ಕಂಡೆ ನಾನು. ಇದು ನನ್ನ ಜೀವನದ ಶ್ರೇಷ್ಠತಮ ಮುಹೂರ್ತ. ಇದುವರೆಗೆ ನಾನು ಜೀವಿಸಿದ್ದದ್ದು, ಇಂದು ಈ ಪವಿತ್ರ ಕ್ಷೇತ್ರಕ್ಕೆ ಬಂದದ್ದು, ಈ ಅನುಭಾವಕ್ಕಾಗಿಯೇ ಎಂದು ತಿಳಿದಿದ್ದೇನೆ,"

–ಎಂದು ನುಡಿದು ಅಗ್ಗಳನು ಸುತ್ತ ನೋಡಿದನು. ವ್ಯಾವಹಾರಿಕ ಜಗತ್ತಿನ ಅರಿವಾಯಿತು ಅವನಿಗೆ ಆಗ. ಹಿಂದಿನಂತೆ ಶಿಲಾಮಂಟಪ ಕತ್ತಲಲ್ಲಿ ಮರೆಯಾಗಿತ್ತು. ನದಿಯ ದಡದಲ್ಲಿ ಪೂಜಾನುಷ್ಠಾನಗಳಿಗೆ ಕುಳಿತಿದ್ದ ಉತ್ತರಾಪಥದ ಜಂಗಮರು ಬೆದರಿ ಎದ್ದು ನಿಂತು ದಿಗ್ಭ್ರಾಂತರಂತೆ ಗಗನದತ್ತ ನೋಡುತ್ತಿದ್ದರು.

ಅಗ್ಗಳನು ಅವರ ಹತ್ತಿರ ಹೋಗಿ, "ಬೆದರುವ ಕಾರಣವಿಲ್ಲ, ಅಯ್ಯನವರೆ, ಅತ್ತ ನೋಡಿರಿ, ಗುರುಕುಲದ ಜನ ದೀಪಗಳನ್ನು ಹಿಡಿದುಬರುತ್ತಿದ್ದಾರೆ," ಎಂದನು.

ಗುರುಕುಲದ ಅಧ್ಯಾಪಕ ವಿದ್ಯಾರ್ಥಿಗಳು ಸಮೀಪದ ಹಳ್ಳಿಯ ನಿವಾಸಿಗಳು ಭಯಗ್ರಸ್ತರಾಗಿ ಮಂಟಪದ ಬಳಿ ಹೋಗುತ್ತಿದ್ದರು.

ಇಷ್ಟು ಹೊತ್ತಾದರೂ ಬಸವಣ್ಣನವರೇಕೆ ಅತಿಥಿಶಾಲೆಗೆ ಹಿಂದಿರುಗಲಿಲ್ಲ? ಅವರ ಸಂಗಡಿದ್ದ ವಟುವೆಲ್ಲಿ? ಎಂಬುದನ್ನು ತಿಳಿಯಲು ತವಕಿಸುತ್ತಿದ್ದರು ಅವರು.

ಆ ಶಿಲಾಮಂಟಪದ ನಡುವೆ, ಹಿಂದಿನ ಗೋಡೆಗೆ ಒರಗಿಸಿದ ಶಿಲಾನಿರ್ಮಿತ ವಿಗ್ರಹದಂತೆ, ಪದ್ಮಾಸನದಲ್ಲಿ ಪೂಜಾಭಾವದಿಂದ ನಿಶ್ಚಲವಾಗಿ ಮೂರ್ತಗೊಂಡಿದ್ದ ಬಸವಣ್ಣನವರನ್ನು ಕಂಡರು ಅವರು. ಮುಂದೆ ಚಾಚಿದ ಬಸವಣ್ಣನವರ ಕರಸ್ಥಳದಲ್ಲಿ, ಬಿಲ್ವಪತ್ರೆಗಳಿಂದ ಅರೆ ಮುಚ್ಚಿದ ಇಷ್ಟಲಿಂಗ ಉರಿಯಿಂಗಿದ ಕೆಂಡದಂತೆ ಬೆಳಗಿತ್ತು. ಅರೆ ಮುಚ್ಚಿದ್ದ ಅವರ ಕಣ್ಣುಗಳ ದೃಷ್ಟಿ, ನಾಸಿಕಾಗ್ರದಲ್ಲಿ ನೆಲೆಸಿ, ಮುಂದೆ ಹರಿಯದೆ ಅಲ್ಲಿಯೇ ಲೀನವಾದಂತೆ ಕಂಡಿತು. ಹಣೆ ಕೊರಳುಗಳ ವಿಭೂತಿ ರುದ್ರಾಕ್ಷಿಗಳು,

ದೀಪಗಳ ಮಂದಕಾಂತಿಯಲ್ಲಿ, ಮೇಘ ಮುಚ್ಚಿದ ಚಂದ್ರಲೇಖೆಗಳಂತೆ ಅಸ್ಫುಟವಾಗಿ ತೋರುತ್ತಿದ್ದವು.

ಆಶ್ಚರ್ಯಚಕಿತರಂತೆ ಅವಾಕ್ಕಾಗಿ, ಸ್ತಂಭಿತರಾಗಿ, ಆ ಗಂಭೀರ ಶಾಂತ ಮಯದೃಶ್ಯವನ್ನು ನೋಡುತ್ತ ನಿಂತರು, ಅವರು.

ಎಲ್ಲ ಕಡೆ ನಿಶ್ಯಬ್ದ. ಆ ಶಬ್ದಶೂನ್ಯ, ಭಾವಶೂನ್ಯ, ಪ್ರಾಣಶೂನ್ಯ ಶಾಂತಿ ಮಹಾಸಾಗರದ ಅಲೆಯಂತೆ, ಕಲಕಲ ನಿನಾದದಿಂದ ಹರಿಯುತ್ತಿತ್ತು ಮಲಪ್ರಭೆ!

ನಿಸರ್ಗದ ಆ ಗಂಭೀರ ಸ್ತಬ್ಧತೆಯನ್ನು ಭೇದಿಸುವ ಗಂಭೀರ ಕಂಠದಿಂದ ನುಡಿದ ಪಂಚಾಕ್ಷರಿಯ ಅಮೃತ ಬಿಂದುಗಳು ಗಾಳಿಯಲ್ಲಿ ತೇಲುತ್ತ ಬಂದವು ಅಲ್ಲಿಗೆ. ತುಸುಹೊತ್ತಿನ ಮೇಲೆ ಪಡಿಹಾರಿ ಅಪ್ಪಣ್ಣ ಕಾಣಿಸಿಕೊಂಡಾಗ ಎಲ್ಲರೂ ಏಕಕಾಲದಲ್ಲಿ, “ಹರ ಹರ ಮಹಾದೇವ!” ಎಂದು ಉಗ್ಗಡಿಸಿದರು.

“ಭಕ್ತಿ ಭಂಡಾರಿ ಬಸವಣ್ಣನವರು ಲಿಂಗೈಕ್ಯರಾದರು. ಜೀವನ್ಮುಕ್ತರಾಗಿ ಬದುಕಿದ ಅವರ ಅಮರ ಆತ್ಮ ಕೂಡಲ ಸಂಗಮದೇವನ ಚರಣಕಮಲಗಳಲ್ಲಿ ಬೆರೆತು ಬಯಲಿಗೆ ಬಯಲಾಯಿತು. ನೀವು ಕೇಳಿದ ಮಹಾಶಬ್ದ ಆ ಪ್ರಳಯದ ನಿರ್ಘೋಷ ! ನೀವು ಕಂಡ ಮಹಾತೇಜ ಆ ಮಹಾಮಿಲನದ ದಿವ್ಯಪ್ರಭೆ ! ಬಸವರಾಜದೇವ, ಉಘೇ, ಉಘೇ !” –ಎಂದು ಪಡಿಹಾರಿ ಅಪ್ಪಣ್ಣ ಘೋಷಿಸಿದನು.

ನದೀತೀರದ ಎಲ್ಲ ಕಡೆ, ಸಾವಿರ ಕಂಠಗಳಲ್ಲಿ ಪ್ರತಿಧ್ವನಿಸಿತು ಆ ಘೋಷಣೆ.

ಆಮೇಲೆ ಅವರು ಮಂಟಪದ ಹತ್ತಿರ ಮೂರ್ಛಿತನಾಗಿ ಬಿದ್ದಿದ್ದ ವಟುವನ್ನು ಕಂಡರು. ಹಣೆ ಮುಖಗಳಿಗೆ ನೀರೆರೆಚಿ ಶೈತ್ಯೋಪಚಾರ ಮಾಡಿದ ಮೇಲೆ ವಟು ಎಚ್ಚೆತ್ತು ಹೇಳಿದನು : ಮಂಟಪದೊಳಗೆ ದೊಡ್ಡ ಬೆಳಕು ಕಾಣಿಸ್ತು, ಅಣ್ಣಾವ್ರ. ಆಮೇಲೆ ಆ ಬೆಳಕು ಆಕಾಶದ ಕಡೆ ನೆಗೆದು ದೊಡ್ಡ ಶಬ್ದ ಆತು. ನಾ ಬಿದ್ದು ಬಿಟ್ಟೆನ್ರಿ!”

ಉಳಿದವರ ವಿವರಣೆಗಳು ಅಷ್ಟೇ ಅಸ್ಪಷ್ಟವಾಗಿದ್ದವು.

ಉತ್ತರಾಪಥದ ಜಂಗಮ ತಂಡದ ನಾಯಕನು ಹೇಳಿದನು : “ನಾನು ಪೂಜೆ ಮುಗಿಸಿ ಕಣ್ತೆರೆದಾಗ ಮಂಟಪದಲ್ಲಿ ನೀಲಿಯ ಬೆಳಕು ಹರಡಿತ್ತು. ಆ ಬೆಳಕಿನ ನಡುವೆ ಬಸವಣ್ಣನವರು ಧ್ಯಾನಮಗ್ನ ಶಂಕರನಂತೆ ನಿಶ್ಚಲರಾಗಿ ಕುಳಿತಿದ್ದರು. ಕ್ರಮ ಕ್ರಮವಾಗಿ ಬೆಳಕು ಹೆಚ್ಚಿತು. ನಾನು ನೋಡಲಾರದೆ ಕಣ್ಣುಗಳನ್ನು ಮುಚ್ಚಿದೆ. ಆಮೇಲೆ ದೊಡ್ಡ ಶಬ್ದವಾಗಿ ಭೂಮಿ ನಡುಗಿತು. ನಾನು ಪುನಃ ಕಣ್ತೆರೆದಾಗ ಎಲ್ಲ ಕಡೆ ಕತ್ತಲೆ ಕವಿದಿತ್ತು. ಮಂಟಪ ಕಾಣುತ್ತಿರಲಿಲ್ಲ.”

ಅಧ್ಯಾಪಕ ವರ್ಗದಲ್ಲಿ ಅನುಭಾವಿಯಂತೆ ಕಾಣುತ್ತಿದ್ದ ವೃದ್ಧ ಜಂಗಮನು ಹೇಳಿದನು : “ಬಸವಣ್ಣನವರ ಭಿಕ್ಷಾಪಾತ್ರೆ ತುಂಬಿತು. ಜೀವನ್ಮುಕ್ತರಾಗಿ ಬದುಕಿದ

ಅವರು, ಇಂದು ಕೂಡಲ ಸಂಗಮದೇವನ ನಿಜಪದದಲ್ಲಿ ಬೆರೆದರು. ಆ ದಿವ್ಯಾನು ಭಾವದ ತೆರೆಯನ್ನು ಭೇದಿಸಲು ನಾವು ಶಕ್ತರಲ್ಲ.”

ಪಡಿಹಾರಿ ಅಪ್ಪಣ್ಣ ನುಡಿದನು : “ನಾನು ಏನನ್ನು ಕಂಡೆ, ಏನನ್ನು ಕಾಣಲಿಲ್ಲ ಎಂಬುದು ನುಡಿಗೆ ಸಿಕ್ಕುವ ವಿಷಯವಲ್ಲ. ಕೂಡಲ ಸಂಗಮದೇವನು ಅಣ್ಣನವರನ್ನು ತನ್ನ ಹೃದಯದಲ್ಲಿ ಇಂಬಿಟ್ಟುಕೊಂಡನು.”

ಆ ರಾತ್ರಿಯೇ ಸಮೀಪದ ಗ್ರಾಮ ನಗರ ಅಗ್ರಹಾರ ಮಠಮಂದಿರಗಳಿಗೆ ಬಸವಣ್ಣನವರ ಲಿಂಗೈಕ್ಯದ ಸುದ್ದಿ ಪ್ರಸಾರಿತವಾಯಿತು. ಮರುದಿನ ಬೆಳಕು ಮೂಡುತ್ತಿದ್ದಂತೆ ಅಂತ್ಯದರ್ಶನಕ್ಕಾಗಿ ಜನರು ತಂಡ ತಂಡವಾಗಿ ಬರಲು ಪ್ರಾರಂಭಿಸಿದರು. ನದಿಯ ದಂಡೆ ಜನರಿಂದ ತುಂಬಿತು.

ಕಲ್ಯಾಣಕ್ಕೆ ಹೊರಟು ದಾರಿಯಲ್ಲಿ ಶಿಬಿರ ಹಾಕಿಕೊಂಡಿದ್ದ ಪಟ್ಟದಕಲ್ ಸೀಮೆಯ ಮಂಡಲಾಧಿಕಾರಿಗೆ ಸುದ್ದಿ ತಿಳಿಯುತ್ತಲೆ, ಆನೆ ಕುದುರೆ ಅಂದಣಗಳನ್ನು ತೆಗೆದುಕೊಂಡು ಸಂಗಮಕ್ಕೆ ಬಂದು, ಗುರುಕುಲದ ಕುಲಪತಿ ಪ್ರಾಧ್ಯಾಪಕರನ್ನು ಭೇಟಿಮಾಡಿ, “ಬಸವಣ್ಣನವರು ಚಾಲುಕ್ಯ ರಾಜ್ಯದ ನಿವೃತ್ತ ಮಹಾಮಂತ್ರಿ, ದಂಡ ನಾಯಕರು. ಅವರ ಅಂತ್ಯಯಾತ್ರೆ ರಾಜಮರ್ಯಾದೆಯಿಂದ ನಡೆಯಬೇಕು. ಕುಲಪತಿಗಳು ಅನುಮತಿ ಕೊಟ್ಟರೆ ನಾನು ಎಲ್ಲವನ್ನೂ ಏರ್ಪಡಿಸುತ್ತೇನೆ,” ಎಂದು ಬಿನ್ನವಿಸಿಕೊಂಡನು.

ಕಲ್ಯಾಣದ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಮಂಡಲಾಧಿಕಾರಿಯ ಸಲಹೆಯನ್ನು ನಿರಾಕರಿಸುವುದು ಉಚಿತವಲ್ಲವೆಂದು ತಿಳಿದು ಕುಲಪತಿಗಳು ಒಪ್ಪಿದರು. ಅದರಂತೆ ಕಾರ್ಯ ನಿರ್ವಹಿಸಲು ಸಾರಂಗಮಠದ ಕಲ್ಯಾಣ ಶಕ್ತಿಪಂಡಿತರ ಅಧ್ಯಕ್ಷತೆಯಲ್ಲಿ ಶಿಷ್ಟರ ತಾತ್ಕಾಲಿಕ ಸಮಿತಿಯೊಂದು ರಚಿತವಾಯಿತು. ಮಧ್ಯಾಹ್ನದ ಸುಮಾರಿಗೆ ಬಸವಣ್ಣನವರ ಪಾರ್ಥಿವ ದೇಹವನ್ನು ದಂಡನಾಯಕನಿಗೆ ಉಚಿತವಾದ ವಸ್ತ್ರಾಭರಣಗಳಿಂದ ಅಲಂಕರಿಸಿ ಅಂದಣದಲ್ಲಿಟ್ಟು ರಾಜಮರ್ಯಾದೆಯೊಡನೆ ಗುರುಕುಲದ ಸುತ್ತ ಮೆರವಣಿಗೆ ಮಾಡಿದರು.

ಗುರುಮಠ ಅಗ್ರಹಾರಗಳ ಜಂಗಮ ಸನ್ಯಾಸಿಗಳು, ಮಂಡಲಾಧಿಕಾರಿ ರಾಜ ಪ್ರತಿನಿಧಿಗಳು, ಮಠಮಂದಿರಗಳ ಸ್ಥಾನಿಕ ಅರ್ಚಕ ಪರಿವಾರದವರು, ಗ್ರಾಮ ನಗರಗಳ ಪ್ರಮುಖ ನಾಗರಿಕರು, ಮೆರವಣಿಗೆಯ ಮುಂಭಾಗದಲ್ಲಿ, ಬಳಿಕ ಅಲಂಕೃತವಾದ ಅಂದಣ, ಅದರ ಹಿಂದೆ ಉತ್ತರಾಪಥದ ಜಂಗಮರು ಮತ್ತು ಅವರೊಡನೆ ಬ್ರಹ್ಮಶಿವ ಅಗ್ಗಳರು, ಕೊನೆಯದಾಗಿ ಗುರುಕುಲದ ಅಧ್ಯಾಪಕ ವಿದ್ಯಾರ್ಥಿಗಳ ನೇತೃತ್ವದಲ್ಲಿ ಅಂತ್ಯ ದರ್ಶನಕ್ಕಾಗಿ ಬಂದಿದ್ದ ಸ್ತ್ರೀ ಪುರುಷ ಆಬಾಲವೃದ್ಧರ

ಜನಸಂದಣಿ, ಈ ಅನುಕ್ರಮದಲ್ಲಿ ಮೆರವಣಿಗೆ ನಡೆಯಿತು. "ಹರ ! ಹರ ! ಮಹಾದೇವ !" "ಬಸವರಾಜದೇವ ಉಘೇ ! ಉಘೇ !" ಎಂಬ ಘೋಷಣೆ ಎಲ್ಲ ಕಡೆ ಕೇಳಿ ಬರುತ್ತಿತ್ತು.

ಮೆರವಣಿಗೆ ನದೀ ತೀರದ ಶಿಲಾಮಂಟಪಕ್ಕೆ ಹಿಂದಿರುಗಿದಾಗ ಕಲ್ಯಾಣ ಶಕ್ತಿ ದೇವರ ಮೇಲ್ವಿಚಾರಣೆಯಲ್ಲಿ ಬಸವಣ್ಣನವರ ಸಮಾಧಿ ಅಲ್ಲಿ ರಚಿತವಾಗಿತ್ತು.

ಮುಕುಟಾಗಮದಲ್ಲಿ ಹೇಳಿರುವ ಸಮಾಧಿ ರಚನಾವಿಧಾನದಂತೆ ಕಲ್ಯಾಣ ಶಕ್ತಿ ಪಂಡಿತರು ಸಮಾಧಿಯನ್ನು ಕಟ್ಟಿಸಿದರು. ಅದಕ್ಕಾಗಿ ಅವರು ಬಸವಣ್ಣನವರ ಅಂಗಾಲ ಮಡಿಕೆಯಿಂದ ಉಂಗುಷ್ಟದ ತುದಿಯವರೆಗಿನ ಅಳತೆ ತೆಗೆದುಕೊಂಡು, ಅದರಂತೆ ಐದು ಅಡಿ ಚೌಕವೂ ಒಂಭತ್ತು ಅಡಿ ಆಳವೂ ಇರುವ ಹಳ್ಳ ತೋಡಿಸಿದರು. ಅದರ ದಕ್ಷಿಣ ಕಡೆಯ ಮೂರಡಿಯನ್ನು ಮೂರು ತತ್ವಗಳ ಸಂಕೇತವಾದ ತ್ರಿಕೋನಾಕೃತಿಯನ್ನು ಅಗೆದು, ಅದಕ್ಕೆ ಎದುರಾಗಿ ಉತ್ತರದ ಕಡೆ ಮೂರಡಿ ಅಗಲವೂ ಅನುಕ್ರಮವಾಗಿ ಮೇಲಿಂದ ಕೆಳಗೆ ಒಂದು ಎರಡು ಮೂರು ಅಡಿ ಎತ್ತರವೂ ಇರುವ ಮೂರು ಪಾವಟಿಗೆಗಳನ್ನು ಮಾಡಿಸಿದರು. ತ್ರಿಕೋನದೆದುರಿಗೆ ವೇದಿಕೆಯನ್ನು ಕಟ್ಟಿದರು.

ಬಳಿಕ ಅದನ್ನು ಸ್ವಚ್ಛಗೊಳಿಸಿ ಸಾರಿಸಿ, ಐದು ಬಣ್ಣಗಳ ಹಿಟ್ಟಿನಿಂದ ನೆಲದ ಮೇಲೆ ಪಂಚಮುದ್ರೆಗಳನ್ನು ಬರೆದು ಕೋನಗಳಲ್ಲಿ ಪಂಚಾಕ್ಷರಿಯನ್ನೂ, ನಡುವೆ ಪ್ರಣವವನ್ನೂ ಅಂಕಿಸಿ, ಎಡ ಬಲಗಳಲ್ಲಿ ಪಂಚಬ್ರಹ್ಮ ಮಂತ್ರಗಳನ್ನು ಬರೆದರು.

ಆಮೇಲೆ ತಗಡಿನಲ್ಲಿ ಮಾಡಿದ ಲಿಂಗಮುದ್ರೆಗಳನ್ನು ನಾಲ್ಕು ಮೂಲೆಗಳಿಗೆ ಜೋಡಿಸಿ ಚಾವಣಿ ಹಾಕಿ, ಮೇಲ್ಕಟ್ಟುಗಳನ್ನು ಕಟ್ಟಿದರು. ಹೊಂಬಾಳೆ, ಮಡಿವಾಳ, ಕಾಯಿ ಹಣ್ಣು, ಹವಳ ಮುತ್ತುಗಳ ಜಾಲರಗಳನ್ನು ಸುತ್ತ ಅಳವಡಿಸಿದರು. ಗೊನೆ ಸಹಿತವಾದ ಬಾಳೆಯ ಕಂಬಗಳನ್ನು ಚಾವಣಿಯ ನಾಲ್ಕು ಮೂಲೆಗಳಿಗೆ ಕಟ್ಟಿದರು. ಕಬ್ಬಿನ ಜಲ್ಲೆ, ಕೆಂದೆಂಗು, ಎಳೆನೀರಗೊನೆಗಳಿಂದ ಚಾವಣಿಯನ್ನು ಅಲಂಕರಿಸಿದರು.

ಬಳಿಕ ಅವರು ಬಸವಣ್ಣನವರ ಪಾರ್ಥಿವ ದೇಹವಿದ್ದ ಅಂದಣಕ್ಕೆ ಬಲವಂದು, ದೇಹವನ್ನು ಅಂದಣದಿಂದ ತಂದು ಪಾವಟಿಗೆಗಳನ್ನು ಇಳಿಸಿ, ವೇದಿಕೆಯ ಮೇಲೆ ಮೂರ್ತಗೊಳಿಸಿದರು. ಚರಲಿಂಗ ಪಾದೋದಕದಿಂದ ಮುಖವನ್ನು ತೊಳೆದರು. ಭಸಿತವಿಟ್ಟು ಹೂಗಳಿಂದ ಅರ್ಚಿಸಿ, ಗಂಧಾಕ್ಷತೆಗಳಿಂದ ಅಲಂಕರಿಸಿ, ಧೂಪವಿಟ್ಟು ಆರತಿ ಬೆಳಗಿದರು. ಆಮೇಲೆ ದೇಹವನ್ನು ತ್ರಿಕೋಣ ಸ್ಥಾನದಲ್ಲಿ ಕುಳ್ಳಿರಿಸಿ, ಭಸಿತದಿಂದ ತುಂಬಿ ಸಮಾಧಿಯನ್ನು ಮುಚ್ಚಿದರು.

ಈ ಕ್ರಿಯೆ ನಡೆಯುತ್ತಿದ್ದಂತೆ ಸಮಾಧಿಯ ಸುತ್ತ ನೆರೆದಿದ್ದ ಜಂಗಮ

ಸನ್ಯಾಸಿಗಳು, ಅಧ್ಯಾಪಕ ವಿದ್ಯಾರ್ಥಿಗಳು, ಅಧಿಕಾರಿ ರಾಜಪ್ರತಿನಿಧಿಗಳು. ನಾಗರಿಕ ಸ್ತ್ರೀ ಪುರುಷರು ಏಕಕಂಠದಿಮದ ನಿರಂತರವಾಗಿ ಪಂಚಾಕ್ಷರಿಯನ್ನು ನುಡಿದರು. ನದೀತೀರದ ಶಿಲಾಖಂಡಗಳಲ್ಲಿ, ತರುಲತೆಗಳಲ್ಲಿ, ನಿಂತ ನೆಲದಲ್ಲಿ, ಹರಿಯುವ ನೀರಲ್ಲಿ ಬೀಸುವ ಗಾಳಿಯಲ್ಲಿ ಮಂತ್ರಘೋಷ ತುಂಬಿತು.

ಭಾವಪರವಶನಾದ ಕವಿಯಂತೆ ಅಗ್ಗಳನು ಹಾಡಿದನು :

ಪಾರ್ಥಿವ ಜಗತ್ತಿನೊಡನೆ ನಿನ್ನ ಸಂಬಂಧ
ಕಳೆದುದು, ಅಣ್ಣಾ !
ಅಂಧಶ್ರದ್ಧೆ ಸಂಪ್ರದಾಯಗಳ ಸಂಕೋಲೆಯಿಂದ
ಬಂಧಿಸಲ್ಪಟ್ಟು ಅಂಗಾಂಗಳೆಲ್ಲ ಜಡವಾಗಿದ್ದ
ಸಮಾಜ ಪುರುಷನನ್ನು ಎಚ್ಚರಗೊಳಿಸಿದೆ ನೀನು !
ಬಂಧನ ಬಿಡಿಸಿ, ಆತ್ಮೋದ್ಧಾರದ ಶುಭಪಥದಲ್ಲಿ
ನಡೆಸಲು ನಿರಂತರವಾಗಿ ಪರಿಶ್ರಮಿಸಿದೆ, ಅಣ್ಣಾ !
ಜೀವನ್ಮುಕ್ತನು ನೀನು !
ಹೋಗು, ಅಮರ ಪಥದ ಮಹಾನ್ ಪಥಿಕ
ನಿನ್ನ ಅಗಲಿಕೆಯ ತೀವ್ರ ವೇದನೆಯನ್ನು
ಹೃದಯದಲ್ಲಿ ಇಂಬಿಟ್ಟು,
ನಿರಂತರ ನಿನ್ನ ನಾಮಸ್ಮರಣೆ ಮಡುತ್ತ
ಬದುಕುವೆನು ನಾನು.
ಚಾಲುಕ್ಯ ರಾಜ್ಯದ ಧರ್ಮಜ್ಯೋತಿಯಾಗಿ,
ಸತ್ಯದ ಸೊಡರಾಗಿ, ನಿತ್ಯದ ನೆಲೆಯಾಗಿ,
ನೀನು ರಚಿಸಿದ ಆದರ್ಶ ಜೀವನದ ಅಮರ ಇತಿಹಾಸ ಅನಂತಕಾಲವೂ ನಿನ್ನ ಜ್ವಲಂತ ಸ್ಮಾರಕವಾಗಿ
ನಿಲ್ಲುವುದು.
ಓಂ ಶಾಂತಿಃ ಶಾಂತಿಃ ಶಾಂತಿಃ

ಈಗಲೂ ಕೂಡಲ ಸಂಗಮವು ಶರಣರಿಗೆ ಪವಿತ್ರ ಯಾತ್ರಾಸ್ಥಳ. ಕಾಶಿ ಕೇದಾರಗಳಿಗಿಂತ ಅದು ಹೆಚ್ಚು ಪವಿತ್ರವೆಂದು ಶರಣರು ಭಾವಿಸುತ್ತಾರೆ. ಕಾಲಕ್ರಮದಲ್ಲಿ ನದಿಯ ಪಾತ್ರ ವಿಸ್ತಾರವಾಗಿರುವುದರಿಂದ ಬಸವಣ್ಣನವರ ಗದ್ದಿಗೆ ನದಿಯಲ್ಲಿ ಮುಳುಗಿ ಅದರ ಮೇಲೆ ಮಂಟಪ ಕಟ್ಟಿದೆ.

* * *

ಉಳಿವೆಗೆ ಹೊರಟ ಶರಣರ ಯಾತ್ರಾದಳ ಕಲ್ಯಾಣವನ್ನು ಬಿಟ್ಟು ಒಂದು ವಾರದ ಮೇಲೆ ಕೃಷ್ಣಾ ನದಿಯ ಉತ್ತರ ದಡದಲ್ಲಿದ್ದ ತಂಗಡಿ ಎಂಬ ಗ್ರಾಮಕ್ಕೆ ಬಂದಿತು. ಆ ದಿನ ರಾತ್ರಿ ಶಿಬಿರದ ಹೊರಗೆ ಬಯಲಲ್ಲಿ ಕುಳಿತು ದಳದ ನಾಯಕರು ಯಾತ್ರೆಯ ಮುನ್ನಡೆಯ ಬಗೆಗೆ ಪರ್ಯಾಲೋಚನೆ ನಡೆಸುತ್ತಿದ್ದರು.

ಮಾಚಿದೇವರು ಹೇಳಿದರು : "ಕೃಷ್ಣೆ ತುಂಬಿ ಹರಿಯುತ್ತಿದೆ. ಪ್ರವಾಹ ಇಳಿಯುವವರೆಗೆ ದಾಟುವುದು ಸಾಧ್ಯವಲ್ಲವೆಂದು ಅಂಬಿಗರು ಹೇಳುತ್ತಾರೆ. ನಾವು ಎರಡು ದಿನ ಇಲ್ಲಿಯೇ ಉಳಿಯಬೇಕಾಗಬಹುದು."

ಚೆನ್ನಬಸವಣ್ಣನವರು ತುಸು ಹೊತ್ತು ಯೋಚಿಸುತ್ತಿದ್ದು, "ನಾವು ಮುನ್ನೆಚ್ಚರಿಕೆಯಿಂದ ಸರಸ್ವತೀ ಭಂಡಾರವನ್ನು ಮೊದಲೇ ಕಳುಹಿಸಿದ್ದು ಉತ್ತಮವಾಯಿತು. ಸಂಗಡ ಹೋದ ಕಿನ್ನರಿ ಬ್ರಹ್ಮಯ್ಯನಿಂದ ಸುದ್ದಿ ಬಂದಿತೆ?" ಎಂದು ಪ್ರಶ್ನಿಸಿದರು.

"ಓಲೆ ಕಡತದ ಹೇರುಗಳೊಡನೆ ಅವರು ಮುರುಗೋಡು ಹಾಯ್ಗಡವನ್ನು ದಾಟಿದುದಾಗಿ ಅಂಬಿಗರು ಹೇಳುತ್ತಾರೆ. ಇನ್ನೆರಡು ದಿನಗಳಲ್ಲಿ ಅವರು ಉಳಿವೆಯ ಮಹಾಮನೆ ಸೇರಬಹುದು," ಎಂದು ಮಾಚಿದೇವರು ಹೇಳಿದರು.

"ಇಲ್ಲಿಂದ ಹರಿದಾರಿ ದೂರದಲ್ಲಿರುವ ತಡಸಿಯ ಹಾಯ್ಗಡವನ್ನು ದುರಸ್ತು ಮಾಡಲು ಬಿಜ್ಜಳರಾಯರು ಹೆಚ್ಚು ಹಣ ವೆಚ್ಚ ಮಾಡಿದರೆಂದು ಕೇಳಿದ್ದೇನೆ. ಪ್ರವಾಹದ ಬಿರುಸು ಅಲ್ಲಿ ಹೇಗಿದೆಯೆಂದು ತಿಳಿಯಿತೆ?"

"ನಾವು ತಡಸದ ಹಾಯ್ಗಡದಿಂದಲೇ ನದಿಯನ್ನು ದಾಟುವುದು, ಚೆನ್ನಬಸವಣ್ಣನವರೆ. ಆದರೆ ಅಲ್ಲಿ ಶಿಬಿರಕ್ಕೆ ಸ್ಥಳ ಅನುಕೂಲವಾಗಿಲ್ಲ," ಎಂದರು ಮಾಚಿದೇವರು.

ಚೆನ್ನಬಸವಣ್ಣನವರು ಮೌನ. ಮತ್ತೊಬ್ಬ ಹಿರಿಯ ಶರಣನು, "ತಡಸದ ಹಾಯ್ಗಡದಿಂದ ಹರಿದಾರಿ ದೂರದಲ್ಲಿ ನಾವು ಶಿಬಿರ ಹಾಕಲು ಕಾರಣ ?" ಎಂದನು.

ಮಾಚಿದೇವರು ಹೇಳಿದರು : "ತಡಸದ ಹಾಯ್ಗಡ ಬಯಲಲ್ಲಿರುವುದರಿಂದ ಶಿಬಿರಕ್ಕೆ ಸಾಕಾದಷ್ಟು ರಕ್ಷಣೆಯಿರುವುದಿಲ್ಲ. ತಂಗಡಿಯ ಹಾಯ್ಗಡದ ವಿಚಾರ ಹಾಗಲ್ಲ. ಸಣ್ಣ ಕಣಿವೆಯೊಂದನ್ನು ಹಾದು ನಾವಿಲ್ಲಿಗೆ ಬರಬೇಕು. ಶಿಬಿರವೆಲ್ಲಿದೆಯೆಂದು ಯಾರಿಗೂ ತಟ್ಟನೆ ತಿಳಿಯುವುದಿಲ್ಲ. ಕಣಿವೆಯಲ್ಲಿ ಗಣಾಚಾರಿ ಯೋಧರ ರಕ್ಷಕ ದಳಗಳು ಕಾವಲಿವೆ."

ನಾಲ್ಕು ದಿನಗಳ ಹಿಂದೆ ಯಾತ್ರಾದಳವನ್ನು ಸೇರಿದ್ದ ಕೂಗಿನಮಾರಿ ತಂದೆ

ಎಂಬ ಮತ್ತೊಬ್ಬ ಹಿರಿಯ ಭಕ್ತನು, "ಈಗ ನಮಗೆ ಇಷ್ಟೆಲ್ಲ ಎಚ್ಚರಿಕೆಯ ಅಗತ್ಯವಿರುವುದಿಲ್ಲ. ಸುಮಾರು ಮೂರು ಸಾವಿರ ಮಂದಿ ಗಣಾಚಾರಿ ಯೋಧರು ಈಗ ನಮ್ಮ ಸಂಗಡಿದ್ದಾರೆ. ಅವರಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ಶಿಕ್ಷಣ ಪಡೆದ ಸೈನಿಕರು. ಬಿಲ್ಲು ಬಾಣ ಕತ್ತಿ ಭಲ್ಲೆಯಗಳನ್ನು ದಕ್ಷತೆಯಿಂದ ಉಪಯೋಗಿಸಬಲ್ಲರು. ಉಳಿದವರು ಗರಡಿ ಸಾಧಕ ಕಲಿತ ಜಟ್ಟಿಗಳು. ಮಾಧವ ನಾಯಕನ ಸೈನ್ಯದೊಡನೆ ಹೋರಾಡುವ ಶಕ್ತಿ ನಮಗಿದೆ," ಎಂದು ಅಭಿಮಾನದಿಂದ ನುಡಿದನು.

"ಹೋರಾಟ ನಮ್ಮ ಉದ್ದೇಶವಲ್ಲ ಮಾರಿ ತಂದೆಗಳೆ," ಮಾಚಿದೇವರು ಹೇಳಿದರು : "ಯಾತ್ರಾದಳ ಕೃಷ್ಣಾ ನದಿಯನ್ನು ದಾಟಿದರೆ ಮುಂದೆ ಉಳಿವೆಯ ಮಾರ್ಗ ಸುರಕ್ಷಿತವಾಗುತ್ತದೆ. ಮಾಧವ ನಾಯಕನ ಸುಶಿಕ್ಷಿತ ಸೈನ್ಯದೊಡನೆ ಹೋರಾಡುವುದು ಗಣಾಚಾರಿ ಯೋಧರಿಗೆ ಸಾಧ್ಯವಲ್ಲ. ನಮ್ಮಲ್ಲಿ ಆನೆ ಕುದುರೆ ರಥಗಳಿರುವುದಿಲ್ಲ. ಗಜತುರಗ ರಥಗಳೆದುರಿಗೆ ಪದಾತಿ ಸೈನ್ಯ ಹೋರಾಡುವುದು ಹರಿಯುವ ನೀರಿಗೆ ಹುಲ್ಲಿಂದ ಕಟ್ಟೆ ಕಟ್ಟಿದಂತೆ, ವಿಫಲವಾಗುವ ವ್ಯರ್ಥ ಸಾಹಸ."

ಮಾಚಿದೇವರ ಅಭಿಪ್ರಾಯವನ್ನು ಅನುಮೋದಿಸಿ ಚೆನ್ನಬಸವಣ್ಣನವರು ಹೇಳಿದರು : "ಅಕಾರಣ ನಾಯಕನ ಸೈನ್ಯ ನಮ್ಮನ್ನು ಬೆನ್ನಟ್ಟಿ ಬಂದರೆ ಆತ್ಮರಕ್ಷಣೆಗಾಗಿ ನಾವು ಹೋರಾಡಲು ಸಿದ್ಧ. ಅಂತಹ ಸಂದರ್ಭದಲ್ಲಿ ನಾನೂ ಶಸ್ತ್ರ ಹಿಡಿಯುತ್ತೇನೆ. ಆದರೆ ಬುದ್ಧಿಪೂರ್ವಕವಾಗಿ ಹೋರಾಟವನ್ನು ಪ್ರಚೋದಿಸುವುದು ನಮಗಿಷ್ಟವಿಲ್ಲ."

ಈ ಮಾತುಗಳು ಮುಗಿಯುತ್ತಿದ್ದಂತೆ ಗಣಾಚಾರಿ ಯೋಧ ದಳಗಳ ಮುಖ್ಯ ನಾಯಕನು ಸೊಡ್ಡಲ ಬಾಚರಸನನ್ನು ಕರೆದುಕೊಂಡು ಅಲ್ಲಿಗೆ ಬಂದನು. "ನಾವು ನಗರವನ್ನು ಬಿಟ್ಟ ಮೇಲೆ ಅಲ್ಲಿ ಏನು ನಡೆಯಿತು ಎಂಬುದು ಇವರಿಗೆ ತಿಳಿದಿದೆ, ಅದನ್ನು ಕೇಳಿ ನಾವು ಮುಂದಿನ ಕಾರ್ಯಕ್ರಮ ನಿರ್ಧರಿಸಬೇಕಾಗುವುದು," ಎಂದು ಅವನು ಹೇಳಿದನು.

ಸಕಲೇಶ ಮಾದರಸರನ್ನು ಶ್ರೀಶೈಲದಲ್ಲಿ ಬಿಟ್ಟು ಸುರಪುರದ ಮಾರ್ಗವಾಗಿ ಉಳಿವೆಗೆ ಬರಲು ನಿಯುಕ್ತನಾಗಿದ್ದ ಸೊಡ್ಡಲ ಬಾಚರಸನು ಹಠತ್ತಾಗಿ ಹಿಂದಿರುಗಿದ್ದನ್ನು ಕಂಡು ಮಾಚಿದೇವರಿಗೆ ಅಚ್ಚರಿ ಆಗಿತ್ತು. ತುಸು ಗಡುಸಾದ ದನಿಯಿಂದ ಅವರು, "ನಿನಗೆ ಗೊತ್ತಾಗಿದ್ದ ಕಾರ್ಯವನ್ನು ಸಂಪೂರ್ಣವಾಗಿ ನಿರ್ವಹಿಸಿದೆಯಾ, ಬಾಚರಸ ?" ಎಂದರು.

ಬಾಚರಸ ಕೈಮುಗಿದು ಹೇಳಿದನು : "ಕೋಪ ಮಾಡಬೇಡಿ, ಅಣ್ಣನವರೆ. ಇದರಲ್ಲಿ ನನ್ನ ಅಪರಾಧವೇನೂ ಇರುವುದಿಲ್ಲ. ಮಹಾದ್ವಾರವನ್ನು ದಾಟಿ ನಗರದಿಂದ ಹೊರಗೆ ಬಂದ ಮೇಲೆ ನಿಮ್ಮಿಂದ ಬೀಳ್ಕೊಂಡು ನಾನು ಮತ್ತು ಸಕಲೇಶ

ಮಾದರಸರು ನಗರದ ಹೊರಗಿರುವ ಶೀಲವಂತರ ಮಠಕ್ಕೆ ಹೋದೆವು. ಮಠಪತಿಯ ಪ್ರಾರ್ಥನೆಯಂತೆ ನಾವು ಸ್ನಾನ ಪೂಜೆ ಆರೋಗಣೆಗಳನ್ನು ಮುಗಿಸಿಕೊಂಡು ಸಂಜೆಯ ಹೊತ್ತಿಗೆ ಮೋಳಿಗೆ ಮಾರಯ್ಯನವರ ಆಶ್ರಮ ಸೇರಿದೆವು. ಅಲ್ಲಿ ಮಾರಯ್ಯನವರಿರಲಿಲ್ಲ.

ಅವರಿಗಾಗಿ ಕಾಯುತ್ತ ಅಲ್ಲಿಯೇ ಕುಳಿತೆವು. ಸೂರ್ಯಾಸ್ತವಾಗಿ ಕೊಂಚ ಹೊತ್ತಿನ ಮೇಲೆ ಸಿದ್ಧರಾಮೇಶ್ವರ ಶಿವಯೋಗಿಗಳೊಡನೆ ಅವರು ಹಿಂದಿರುಗಿದರು. ಸಕಲೇಶ ಮಾದರಸರು ಶ್ರೀಶೈಲಕ್ಕೆ ಹೊರಟಿರುವ ವಿಚಾರ ತಿಳಿದಾಗ ಸಿದ್ಧರಾಮೇಶ್ವರರು 'ಇನ್ನೊಂದು ವಾರದಲ್ಲಿ ಸೊನ್ನಲಾಪುರದಿಂದ ಯಾತ್ರಾತಂಡವೊಂದು ಶ್ರೀಶೈಲಕ್ಕೆ ಹೋಗುತ್ತದೆ. ಸಕಲೇಶ ಮಾದರಸರನ್ನು ನಾನು ಅವರ ಸಂಗಡ ಕಳುಹಿಸುತ್ತೇನೆ. ನೀನು ಉಳಿವೆಯ ಯಾತ್ರಾದಳವನ್ನು ಸೇರಿಕೊಂಡರೆ ಒಳ್ಳೆಯದು,' ಎಂದು ನನಗೆ ಹೇಳಿದರು. ಸಕಲೇಶ ಮಾದರಸರು ಸಲಹೆಯನ್ನು ಅನುಮೋದಿಸಿದರು. ನಾನು ಒಪ್ಪಬೇಕಾಯಿತು. ಮರುದಿನ ಮುಂಜಾವಿನಲ್ಲಿ ಸಕಲೇಶ ಮಾದರಸರೂ ಸಿದ್ಧರಾಮೇಶ್ವರರೂ ಸೊನ್ನಲಾಪುರಕ್ಕೆ ಹೊರಟರು. ನಾನು ಬಾಂಧವರ ಓಣಿಯಲ್ಲಿ ಮಾರಯ್ಯನವರ ಆಶ್ರಮದಲ್ಲಿ ಉಳಿದೆ."

"ನೀನು ಆ ದಿನವೇ ಹೊರಟಿದ್ದರೆ ನಾಲ್ಕು ದಿನ ಮೊದಲೆ ನಮ್ಮನ್ನು ಸೇರಬಹುದಾಗಿತ್ತು. ತಡವಾದ ಕಾರಣ ?"

ಪುನಃ ಮಾಚಿದೇವರು ಪ್ರಶ್ನಿಸಿದರು.

ಬಾಚರಸ ಹೇಳಿದನು : "ಮಾರಯ್ಯನವರು ತಡೆದರು..... ಕಲ್ಯಾಣದಲ್ಲಿ ಇನ್ನೂ ಬಹಳ ಜನ ಶರಣರಿದ್ದಾರೆ. ಅವರನ್ನು ನಗರದಿಂದ ಹೊರಗೆ ಕರೆತಂದು ಸುರಕ್ಷಿತ ಸ್ಥಾನಗಳಿಗೆ ಕಳುಹಿಸಲು ನಿರ್ಧರಿಸಿದ್ದೇನೆ. ಅದಕ್ಕಾಗಿ ಇಂದು ನಗರಕ್ಕೆ ಹೋಗಬೇಕಾಗಿದೆ, ನೀನು ಸಂಗಡಿದ್ದರೆ ಒಳ್ಳೆಯದು. ಶರಣರು ವಲಸೆ ಹೋದ ಮೇಲೆ ನಗರದಲ್ಲಿ ಏನು ನಡೆಯಿತೆಂಬುದನ್ನು ತಿಳಿದು ಮಾಚಿದೇವರಿಗೆ ವರದಿ ಮಾಡಲು ಅನುಕೂಲ, ಎಂದು ಹೇಳಿದರು."

"ಹಾಗಾದರೆ ನೀವು ನಗರದೊಳಗೆ ಹೋಗಿದ್ದಿರಾ ? ಶರಣರನ್ನು ರಕ್ಷಿಸುವುದು ನಿಮಗೆ ಸಾಧ್ಯವಾಯಿತೆ?" –ಅಡ್ಡ ಬಂದು ಚೆನ್ನಬಸವಣ್ಣನವರು ಕೇಳಿದರು.

"ಅದಕ್ಕಾಗಿ ಮೋಳಿಗೆಯ ಮಾರಯ್ಯನವರು ಆ ದಿನವೇ ನಗರಕ್ಕೆ ಹೋಗಿ ಮಾಧವ ನಾಯಕನನ್ನು ನೋಡಿದರು. ಮಾಳವ, ಮೇಧಾಪಥ, ಸೌರಾಷ್ಟ್ರ ದೇಶಗಳ ಅರಸರು ಮಾರಯ್ಯನವರ ಸಂಬಂಧಿಗಳು ಮತ್ತು ಶಿಷ್ಯರು ಎಂದು

ತಿಳಿದಾಗ ಮಾಧವ ನಾಯಕನು ನಗರವನ್ನು ಬಿಟ್ಟು ಹೋಗಲು ಶರಣರಿಗೆ ಅನುಮತಿ ಕೊಟ್ಟನು. ಅದರಂತೆ ಆ ದಿನ ಬಹುಮಂದಿ ಜಂಗಮರು ಮತ್ತು ಭಕ್ತರು ನಗರವನ್ನು ಬಿಟ್ಟರು."

ಶರಣರು ಹರ್ಷಧ್ವನಿ ಮಾಡಿದರು. ಮೋಳಿಗೆಯ ಮಾರಯ್ಯನವರನ್ನು ಪ್ರಶಂಸಿಸುವ ನುಡಿಗಳು ಕೇಳಿಬಂದವು.

ಮಾಚಿದೇವರು ಶರಣರಿಗೆ ಸುಮ್ಮನಿರುವಂತೆ ಸನ್ನೆಮಾಡಿ, "ಈಗ ಕಲ್ಯಾಣದಲ್ಲಿ ಶರಣರು ಯಾರೂ ಇಲ್ಲವೆ?" ಎಂದು ಬಾಚರಸನನ್ನು ಕೇಳಿದರು.

ಬಾಚರಸ ಹೇಳಿದನು : "ಇನ್ನೊಂದು ದಿನ ಅವಕಾಶವಿದ್ದಿದ್ದರೆ ಶರಣರೆಲ್ಲ ನಗರವನ್ನು ಬಿಡುವುದು ಸಾಧ್ಯವಾಗುತ್ತಿತ್ತು. ಆದರೆ ಮರುದಿನವೇ ಕರ್ಣದೇವನ ಸೈನಿಕರಿಗೂ ಮಾಧವ ನಾಯಕನ ಸೈನಿಕರಿಗೂ ಹೋರಾಟ ಪ್ರಾರಂಭವಾಯಿತು. ನಗರವನ್ನು ಬಿಡಲು ಶರಣರಿಗೆ ಕೊಟ್ಟಿದ್ದ ಅನುಮತಿಯನ್ನು ಮಾಧವ ನಾಯಕನು ಹಿಂದಕ್ಕೆ ತೆಗೆದುಕೊಂಡನು.

"ಹೋರಾಟದ ಕಾರಣ?"

–ಚೆನ್ನಬಸವಣ್ಣನವರು ಪ್ರಶ್ನಿಸಿದರು.

"ಚಾಲುಕ್ಯ ಸರ್ವಾಧಿಕಾರಿ ಪದವಿ. ಕರ್ಣದೇವ ಸರ್ವಾಧಿಕಾರಿಯಾಗುವುದು ಮಾಧವ ನಾಯಕನಿಗೆ ಇಷ್ಟವಿರಲಿಲ್ಲ. ವಿರಸ ಬೆಳೆದು ಹೋರಾಟಕ್ಕೆ ಮೊದಲಾಯಿತು. ಎರಡು ದಿನ ಘೋರ ಯುದ್ಧ ನಡೆದು ಕರ್ಣದೇವ ಹತನಾದನು."

"ಯುದ್ಧ ನಡೆದ ದಿನವೂ ನೀವು ನಗರದಲ್ಲಿಯೇ ಇದ್ದಿರಾ?"

"ಹೋರಾಟ ಮೊದಲಾದ ದಿನ ನಗರದ ದ್ವಾರಗಳು ಬಂಧಿಸಲ್ಪಟ್ಟವು. ಮರುದಿನ ಸಂಜೆ ನಾವು, ಕೆಲವು ಮಂದಿ ಶರಣರೊಡನೆ ಕರ್ಣದೇವನ ಸೈನಿಕರ ಸಹಾಯದಿಂದ ಹೊರಗೆ ಬಂದೆವು. ಕರ್ಣದೇವ ಹತನಾದ ವಿಚಾರ ಆಮೇಲೆ ನಮಗೆ ತಿಳಿದದ್ದು. ಆ ದಿನವೇ ನಾನು ಮಾರಯ್ಯನವರ ಅನುಮತಿ ಪಡೆದು ಅಲ್ಲಿಂದ ಹೊರಟೆ."

ಶರಣರು ಮೌನ. ಹೋರಾಟ ನಡೆದಾಗ ನಗರದಲ್ಲಿದ್ದ ಶರಣರಿಗೆ ಆಗಿರಬಹುದಾದ ಕಷ್ಟನಷ್ಟಗಳನ್ನು ಚಿಂತಿಸಿ ಅವರು ತಲ್ಲಣಗೊಂಡಿದ್ದರು.

"ಕರ್ಣದೇವ ಹತನಾದ ಮೇಲೆ ಹೋರಾಟ ನಿಂತಿತೆ ? ಈಗ ನಗರ ಶಾಂತವಾಗಿದೆಯೆ?"

ಬದಲಿಸಿದ ದನಿಯಿಂದ ಮಾಚಿದೇವರು ಬಾಚರಸನನ್ನು ಕೇಳಿದರು.

"ಅದು ನನಗೆ ತಿಳಿಯದು, ಅಣ್ಣನವರೆ. ನಾವು ನಗರವನ್ನು ಬಿಟ್ಟಾಗ ಅಲ್ಲಲ್ಲಿ

ಸಣ್ಣ ಪುಟ್ಟ ಹೋರಾಟಗಳು ನಡೆಯುತ್ತಲೆ ಇದ್ದವು."

ಬಾಚರಸನ ಉತ್ತರ ಶರಣರ ತಲ್ಲಣವನ್ನು ಹೆಚ್ಚಿಸಿತು. "ಕರ್ಣದೇವ ಹತನಾಗಿ ನಗರ ಸಂಪೂರ್ಣವಾಗಿ ತನ್ನ ವಶವಾದ ಬಳಿಕ ಮಾಧವ ನಾಯಕನ ದೃಷ್ಟಿ ಶರಣರ ಕಡೆಗೆ ತಿರುಗುವುದು. ಶರಣಧರ್ಮದ ಉಗ್ರ ವಿರೋಧಿಯಾದ ಅವನಿಂದ ಶರಣರು ಹಿಂಸೆಗೆ ಗುರಿಯಾಗುವುದು ಅಸಂಭವವಲ್ಲ." ಎಂದು ಭಾವಿಸಿ ಚೆನ್ನಬಸವಣ್ಣನವರು ತಳಮಳಗೊಂಡರು.

"ಬೀಳ್ಕೊಡುವಾಗ ಮಾರಯ್ಯನವರು ಏನಾದರೂ ಹೇಳಿದರೆ ?"

ತುಸು ಹೊತ್ತಿನ ಮೇಲೆ ಮಾಚಿದೇವರು ಕೇಳಿದರು.

"ಏನೂ ಹೇಳಲಿಲ್ಲ. ನಾವು ಮಹಾದ್ವಾರದಿಂದ ಹೊರಗೆ ಬರುತ್ತಿದ್ದಾಗ ಕಾವಲು ಪಡೆಯ ನಾಯಕ ನಾಗರಾಜಯ್ಯ...." ಎಂದು ಬಾಚರಸ ಅರ್ಧದಲ್ಲಿ ನಿಲ್ಲಿಸಿದನು.

"ಏನು ಹೇಳಿದ ನಾಗರಾಜ?"

"ಮಾಧವ ನಾಯಕನು ಶರಣರ ಮೇಲೆ ಒಂದು ಅಪವಾದದ ಸುದ್ದಿ ಹರಡುತ್ತಿದ್ದಾನೆ. ಆ ವಿಚಾರದಲ್ಲಿ ಎಚ್ಚರವಾಗಿರುವಂತೆ ಮಾಚಿದೇವರಿಗೆ ತಿಳಿಸು ಎಂದು."

"ಅಪವಾದದ ಸುದ್ದಿಯೇನು?"

"ಬಿಜ್ಜಳನನ್ನು ಕೊಲೆಮಾಡಿದ ಹಂತಕರು, 'ಹರಳಯ್ಯ ಮಧುವಯ್ಯಗಳನ್ನು ನೋಯಿಸಿದ ಪರವಾದಿ ಬಿಜ್ಜಳನನ್ನು ಕೊಂದ ನಾವು ವೀರಕುಮಾರರು, ಜಂಗಮದ ಭೃತ್ಯರು, ಜಗದೇಕಮಲ್ಲ ಬೊಮ್ಮರಸರು,' ಎಂದು ಬೊಬ್ಬಿಡುತ್ತ ಹೊರಗೆ ಬಂದರಂತೆ. ಬಿಜ್ಜಳರಾಯರ ಕೊಲೆಗೆ ಶರಣರು ಕಾರಣರು ಎಂದು ಮಾಧವ ನಾಯಕನ ಕಡೆಯವರು ಪ್ರಚಾರ ಮಾಡುತ್ತಿರುವುದಾಗಿ ನಾಗರಾಜ ಹೇಳಿದನು."

"ಹಂತಕರನ್ನು ಹಿಡಿದರೆ? ಅವರ ವಿಚಾರ ಏನಾದರೂ ತಿಳಿದಿದೆಯೆ?

–ತುಸು ಹೊತ್ತಿನ ಮೇಲೆ ಮಾಚಿದೇವರು ಪುನಃ ಬಾಚರಸನನ್ನು ಪ್ರಶ್ನಿಸಿದರು.

"ಹಂತಕರಲ್ಲೊಬ್ಬನು ಹತನಾದನೆಂದೂ, ಇನ್ನೊಬ್ಬನು ತಪ್ಪಿಸಿಕೊಂಡನೆಂದೂ ಜನ ಹೇಳುತ್ತಾರೆ."

"ಅವರು ಯಾರೆಂದು ತಿಳಿದಿದೆಯೆ ?"

"ತಿಳಿಯದು."

ಶರಣರ ಕಡೆ ತಿರುಗಿ ಮಾಚಿದೇವರು ಹೇಳಿದರು : "ಈ ಎಲ್ಲ ಘಟನೆಗಳು ನಮ್ಮನ್ನು ಹೆಚ್ಚು ತೊಂದರೆಗೆ ಸಿಕ್ಕಿಸುತ್ತವೆ. ಕೊಲೆಯ ಹೊಣೆಯನ್ನು ಶರಣರ

ಮೇಲೆ ಹೊರಿಸಲು ಹವಣಿಸುತ್ತಿರುವ ಮಾಧವ ನಾಯಕನು, ಮುಂದೆ ನಮ್ಮನ್ನು ತಡೆಯಲು ಸೈನ್ಯ ಕಳುಹಿಸಬಹುದು. ನಾವು ಕೂಡಲೇ ಕೃಷ್ಣೆಯನ್ನು ದಾಟಬೇಕು. ತಡಸದ ಹಾಯ್ಗಡ ಇಲ್ಲಿಗಿಂತ ಅನುಕೂಲವಾಗಿದೆಯೇ ಎಂಬುದನ್ನು ತಿಳಿದು ಬರಲು ನಾನು ಈ ರಾತ್ರಿಯೇ ಅಂಬಿಗರನ್ನು ಕಳುಹಿಸುತ್ತೇನೆ. ಅವರು ಹಿಂದಿರುಗಿದ ಮೇಲೆ ಪುನಃ ಸಭೆ ಸೇರಿ ಮುಂದಿನ ಕಾರ್ಯವನ್ನು ನಿರ್ಧರಿಸಬೇಕಾಗುವುದು."

ಸಲಹೆಗೆ ಶರಣರೆಲ್ಲ ಒಪ್ಪಿದರು.

ಆ ದಿನ ರಾತ್ರಿ ಶಿಬಿರದ ಸುತ್ತಮುತ್ತ, ಸಮೀಪದ ಗುಡ್ಡಗಳಲ್ಲಿ, ಗಣಾಚಾರಿ ಯೋಧರ ಕಾವಲು ಹೆಚ್ಚಿಸುವಂತೆ ಮಾಚಿದೇವರು ನಾಯಕನಿಗೆ ಹೇಳಿದರು.

* * *

ಮರುದಿನ ಮುಂಜಾವಿನಲ್ಲಿ ಶರಣೆಯರಿಗೆ ಗೊತ್ತಾಗಿದ್ದ ಗೂಡಾರದಲ್ಲಿ ಮಲಗಿ ನಿದ್ರೆ ಮಾಡುತ್ತಿದ್ದ ನೀಲಲೋಚನೆ ಹಠಾತ್ತಾಗಿ ಎಚ್ಚೆತ್ತಳು. ಪರಿಚಿತವಾದ ಕಂಠವೊಂದು ಅವಳನ್ನು ತನ್ನೆಡೆಗೆ ಕರೆಯುತ್ತಿತ್ತು.

ಶಿಬಿರದ ಗಲಿಬಿಲಿ, ತುಂಬಿ ಹರಿಯುತ್ತಿದ್ದ ಕೃಷ್ಣೆಯ ಅಬ್ಬರ ಇವುಗಳ ನಡುವೆ ಕ್ಷೀಣವಾಗಿ, ಅಸ್ಫುಟವಾಗಿ ಕೇಳಿ ಬರುತ್ತಿದ್ದ ಆ ದನಿಯನ್ನು ನೀಲಲೋಚನೆ ಕೂಡಲೆ ಗುರುತಿಸಿದಳು. ಬಸವಣ್ಣನವರ ಶೃತಿಮಧುರ ಗಂಭೀರ ಕಂಠ, ದೂರದ ಸಂಗೀತದಂತೆ ಅವಳನ್ನುಕರೆಯುತ್ತಿತ್ತು.

ನೀಲಲೋಚನೆ ಎದ್ದು ಕುಳಿತಳು. ರಾತ್ರಿ ಬಹಳ ಹೊತ್ತು ಅವಳಿಗೆ ನಿದ್ರೆ ಬಂದಿರಲಿಲ್ಲ. ಮುಂಜಾವಿನಲ್ಲಿ ಜೋಂಪು ಹತ್ತಿ ಕಣ್ಣು ಮುಚ್ಚಿದಾಗ ಆ ಅಸ್ಫುಟ ದನಿ ಕೇಳಿ ಅವಳು, ನಿದ್ರೆಯ ಯೋಚನೆಯನ್ನೇ ಬಿಟ್ಟು, ಮೈಯೆಲ್ಲ ಕಿವಿಯಾಗಿ, ತೃಷಿತ ಚಾತಕಿಯಂತೆ ಆ ಶಬ್ದರೂಪ ಸುಧೆಯ ಒಂದೊಂದು ಹನಿಯನ್ನೂ ಹಿಡಿಯಲು ಪ್ರಯತ್ನಿಸಿದಳು. ಆದರೆ ಕೊನೆಯವರೆಗೆ ಕರೆ ಅಸ್ಫುಟವಾಗಿಯೇ ಉಳಿಯಿತು.

"ಏಕೆ ನೀಲಾ ? ಆಗಲೆ ಎಚ್ಚರವಾಯಿತೆ?"

–ಮಲಗಿದ್ದಂತೆಯೇ ನಾಗಲಾಂಬೆ ಕೇಳಿದಳು.

ತನಗಾದ ವಿಚಿತ್ರ ಅನುಭವವನ್ನು ನೀಲಲೋಚನೆ ವಿವರಿಸಿದಾಗ ನಾಗಲಾಂಬೆ ಹೇಳಿದಳು : "ಅದರಲ್ಲಿ ವಿಚಿತ್ರವೇನೂ ಇಲ್ಲ. ಬಸವೇಶ ಸಂಗಮದಲ್ಲಿದ್ದರೂ ಅವನ ಮನಸ್ಸು ಶರಣರ ಯಾತ್ರಾದಳದ ಸಂಗಡಿದೆ. ಚಕ್ಕಡಿಯವರು ಮೊದಲಾಗಿ ಮಾಚಿದೇವರವರೆಗೆ ಯಾತ್ರಾದಳದಲ್ಲಿರುವವರೆಲ್ಲ 'ಬಸವಾ!' ಎಂದು ನಾಮಸ್ಮರಣೆ ಮಾಡಿ ಏಳುತ್ತಾರೆ. ಬಸವೇಶನ ವಚನಗೀತೆಗಳು ಎಲ್ಲರ ಬಾಯಲ್ಲಿ ನಲಿಯುತ್ತಿವೆ.

ಭಾವಪರವಶೆಯಾದ ನೀನು ಆ ದನಿ ಕೇಳಿದ್ದು ಆಶ್ಚರ್ಯವೇನೂ ಅಲ್ಲ."

ಅವರು ಎದ್ದು ಗೂಡಾರದಿಂದ ಹೊರಗೆ ಬಂದು ಸ್ನಾನಕ್ಕಾಗಿ ಕಟ್ಟಿದ ಆವಾರದ ಬಳಿ ಹೋದರು. ಕೃಷ್ಣೆಯ ಸಣ್ಣ ಕಾಲುವೆ ಅಲ್ಲಿ ಹರಿಯುತ್ತಿತ್ತು. ಮೊದಲು ನೀಲಲೋಚನೆ ಸ್ನಾನಮಾಡಿ ಮಡಿಯುಟ್ಟು ಹೊರಗೆ ಬಂದಳು.

ಉದಯ ರವಿಯ ಹೊಂಗಿರಣಗಳು ಆ ಪ್ರದೇಶವನ್ನು ಆಲೋಕಮಯವಾಗಿ ಮಾಡಿದ್ದವು. ಕಾಲುದಾರಿಯ ಇಕ್ಕೆಲದಲ್ಲಿ ಬೆಳೆದಿದ್ದ ಹಸಿರು ಹುಲ್ಲು, ಬಣ್ಣ ಬಣ್ಣದ ಕಾಡು ಹೂಗಳು, ಬೆಳಕನ್ನು ಸೆರೆಹಿಡಿದಂತೆ ಮಿರುಗುತ್ತಿದ್ದವು. ನೆಲದ ಆ ಚಲುವಿಕೆ ಮಾರ್ದವಗಳು ತುಳಿತದಿಂದ ಮಲಿನವಾಗದಿರಲೆಂದು ನೀಲಲೋಚನೆ ಮೆಲ್ಲನೆ ಅಡಿಯಿಟ್ಟು ನಡೆದಳು.

"ಅವರು ಕರೆ ಕಳುಹಿಸಿದಾಗ ನಾನೇಕೆ ಸಂಗಮಕ್ಕೆ ಹೋಗಲಿಲ್ಲ? ಈಗ ಅವರಿಗಾಗಿ ಏಕೆ ತಪಿಸುತ್ತಿದ್ದೇನೆ? ನಾನು ಅವರಿಗೆ ಕಳುಹಿಸಿದ ಎರಡು ವಚನಗಳು ನನ್ನ ಅವಿವೇಕ ಉದ್ಧಟತನಗಳ ಸಂಕೇತ, ಸೂರ್ಯನೆದುರು ದೀಪವಿಟ್ಟಂತೆ. ಅವರ ಸಹಧರ್ಮಿಣಿಯಾಗಿ ಆರು ವರ್ಷಗಳನ್ನು ಕಳೆದರೂ ಕಲಚೂರ್ಯ ರಾಜಕನ್ಯೆಯ ಅಭಿಮಾನ ನನ್ನನ್ನು ಕಾಡಿಸುತ್ತಿದೆ. ಆ ವಾಸನೆಯನ್ನು ಕಳೆಯಬಲ್ಲ ಶ್ರೀಚರಣಗಳಿಂದ ದೂರವಾಗಲು ಸಂಕಲ್ಪಿಸಿ ನಾನು ಅಪರಾಧ ಮಾಡಿದೆ!" ಎಂಬ ಚಿಂತೆಯಿಂದ ಭಾರವಾಗಿತ್ತು ಅವಳ ಮನಸ್ಸು.

"ಹುತ್ತವ ಬಡಿದರೆ ಹಾವು ಸಾಯಬಲ್ಲುದೆ, ಅಯ್ಯ?"

ನೀಲಲೋಚನೆ ವಿಸ್ಮಿತೆಯಾದಳು. ಶಿಬಿರದಲ್ಲಿ ಯಾರೋ ಆ ವಚನ ಪಠಿಸುತ್ತಿರಬೇಕು ಎಂದು ಭಾವಿಸಿ ಅವಳು ಎರಡು ಹೆಜ್ಜೆ ಮುಂದೆ ಹೋದಳು, ಆದರೆ ಅದೇ ಪರಿಚಿತ ಶೃತಿಮಧುರ ಕಂಠ.

ಇದು ನನ್ನ ಕಲ್ಪನೆ ! ಭ್ರಾಂತಿ ! ಎಂದುಕೊಂಡಳು ನೀಲಲೋಚನೆ.

ಕೆಲವು ಕ್ಷಣಗಳು ನಿಸರ್ಗ ಸ್ತಂಭಿತವಾಯಿತು. ಶಿಬಿರದ ಎಲ್ಲ ಶಬ್ದಗಳು ಶೂನ್ಯದಲ್ಲಿ ಅಡಗಿದವು. ಪ್ರಭಾತದ ಸೂರ್ಯಲೋಕ ಉಜ್ವಲವಾಗಿ ಆ ಪ್ರದೇಶವನ್ನೆಲ್ಲ ಅರುಣ ಕೋಮಲ ಕಾಂತಿಯಿಂದ ಬೆಳಗಿತು.

ಆ ಪರಿಚಿತ ಶೃತಿಮಧುರ ಗಂಭೀರಕಂಠ ಮತ್ತೆ ಕೇಳಿಸಿತು.

"ಹುತ್ತವ ಬಡಿದರೆ ಹಾವು ಸಾಯುವುದೇ, ಅಯ್ಯ?
ಅಘೋರ ತಪವ ಮಾಡಿದರೇನು ?
ಅಂತರಂಗ ಆತ್ಮಶುದ್ಧಿ ಇಲ್ಲದವರನೆಂತು
ನಂಬುವನಯ್ಯ, ಕೂಡಲ ಸಂಗಮದೇವ?" *

"ನನ್ನ ಬೆಂಬತ್ತಿ ಬರುತ್ತಿದೆ ಆ ಕಂಠ !" ಎಂದು ನೀಲಲೋಚನೆ ತಿರುಗಿ ನೋಡಿದಳು.

ಹಸಿರು ಹುಲ್ಲು ಕಾಡುಹೂಗಳಿಂದ ಚಲುವಾದ ಕೃಷ್ಣಾ ತೀರದ ಆ ನೆಲದ ಮೇಲೆ ಆ ಸುಂದರ ಶ್ರೀಚರಣಗಳು ! ಸಂಗಮಕ್ಕೆ ಹೊರಟು ನಿಂತಾಗ ತಾನು ಅಡಿಗೆರಗಿ ಗೋರೋಚನದಿಂದ ತಿದ್ದಿ ಬರೆದ ಸ್ವಾಸ್ತಿಕ ಚಿಹ್ನೆ ಇನ್ನೂ ಅಳಿಸಿಲ್ಲ?

ನೀಲಲೋಚನೆ ತಲೆಯೆತ್ತಿ ನೋಡಿದಳು.

ಎದುರಿಗೆ ಬಸವಣ್ಣನವರ ದಿವ್ಯ ಮಂಗಳ ವಿಗ್ರಹ.

ಸಂಗಮಕ್ಕೆ ಹೊರಡುವಾಗ ಧರಿಸಿದ್ದ ಆ ವಲ್ಕಲದಂತಹ ಒರಟು ಧೋತ್ರ, ನಿಲುವಂಗಿ, ಉತ್ತರೀಯಗಳು, ಕೊರಳಲ್ಲಿ ಚಂದನದ ಕರಡಿಗೆ, ಹಣೆಯಲ್ಲಿ ವಿಭೂತಿ, ಉಷ್ಣೀಷ ಶಿರಸ್ತ್ರಾಣಗಳಿಲ್ಲದ ಬರಿದಲೆ.

ಗಾಳಿಯಲ್ಲಿ ಸುಳಿಗಾಳಿ ಬರೆದಂತೆ,

ಗಗನದ ತಟಿಲ್ಲತೆ ಕ್ಷಣಾರ್ಧ ಗಗನವನ್ನು ಬೆಳಗಿ ಪುನಃ ಗಗನದಲ್ಲಿ ಅಡಗಿದಂತೆ,

ಉದಕದಿಂದಾದ ವಾರಿಶಿಲೆ ಮತ್ತೆ ಉದಕವನ್ನು ಸೇರಿದಂತೆ.

ಚಂದ್ರನ ಕಳೆ ಉದಯಿಸಿ ಮರಳಿ ಚಂದ್ರನಲ್ಲಿ ಲೀನವಾದಂತೆ,

ಬೆಳಕಿನಲ್ಲಿ ಬೆಳಕಾಗಿ ಅದೃಶ್ಯವಾಯಿತು ಆ ದಿವ್ಯಾಕೃತಿ !

ನೀಲಲೋಚನೆ ಚಿಟ್ಟನೆ ಚೀರಿ ನೆಲಕ್ಕುರುಳಿದಳು.

ನಾಗಲಾಂಬೆ ಗಂಗಾಂಬಿಕೆಯರು ಅವಳನ್ನು ಗೂಡಾರಕ್ಕೆ ಕರೆದುಕೊಂಡು ಹೋಗಿ ಶುಶ್ರೂಷೆ ಮಾಡಿದರು. ಎಚ್ಚೆತ್ತು ಅವಳು, "ಶಿಬಿರದಲ್ಲಿ ಅವರನ್ನು ಕಂಡೆ ಅಕ್ಕ!" ಎಂದು ಆವೇಗದಿಂದ ತೊದಲುತ್ತ ಹೇಳಿದಳು.

ನಾಗಲಾಂಬೆ ಮೌನ.

ಗಂಗಾಂಬಿಕೆ ಕೇಳಿದಳು, "ಯಾರನ್ನು ನೀನು ಕಂಡದ್ದು, ನೀಲಾ ?"

"ನನ್ನ ಸ್ವಾಮಿಯನ್ನು. ಈಗ ಅವರು ಸಂಗಮದಲ್ಲಿಲ್ಲ. ಶಿಬಿರಕ್ಕೆ ಬಂದಿದ್ದಾರೆ, ತುಸು ಹೊತ್ತಿನ ಮೊದಲು ನಾನವರನ್ನು ನೋಡಿದೆ."

ನೀಲಲೋಚನೆಯ ನುಡಿಗಳಲ್ಲಿ ಉನ್ಮನೀಭಾವದ ದೃಢತೆ ಆವೇಶಗಳು ಎದ್ದು ಕಾಣುತ್ತಿದ್ದವು.

---

* ಬಸವೇಶ್ವರ ವಚನಗಳು, ಪುಟ ೩೧.

ಗಂಗಾಂಬಿಕೆಗೆ ಸುಮ್ಮನಿರುವಂತೆ ಸನ್ನೆ ಮಾಡಿ ನಾಗಲಾಂಬೆ, "ಸ್ನಾನ ಮಾಡಿ ಹಿಂದಿರುಗುತ್ತ ನೀನು ಎಡವಿ ಬಿದ್ದೆ, ನೀಲಾ, ಪೆಟ್ಟಾಗಿರಬೇಕು. ಸ್ವಲ್ಪ ಹೊತ್ತು ವಿಶ್ರಮಿಸಿಕೊ," ಎಂದು ಹೇಳಿ ನೀಲಲೋಚನೆಯ ಮೈದಡವಿದಳು.

"ಇದೇನು ಹೇಳುವೆ, ನಾಗತ್ತೆ ? ಜಳಕ ಮಾಡಿ ಬಂದ ನಾನು ಪೂಜೆ ಮುಗಿಸಬೇಡವೇ? ಬೆಳಕಿನೊಳಗಣ ಮಹಾಘನದಂತೆ ಅವರು ಕ್ಷಣ ಮಾತ್ರ ಕಾಣಿಸಿಕೊಂಡು ಮತ್ತೆ ಅದೃಶ್ಯರಾದರು. ಪೂಜೆಗೆ ಕುಳಿತರೆ ಅವರ ಅನ್ವೇಷಣೆ ಸುಲಭವಾಗುವುದು," ಎಂದು ನೀಲಲೋಚನೆ ಎದ್ದಳು.

ನಾಗಲಾಂಬೆ ಗಂಗಾಂಬಿಕೆಯರು ಅವಳನ್ನು ಪಾರ್ಶ್ವದ ಪೂಜಾ ಗೂಡಾರಕ್ಕೆ ಕರೆದುಕೊಂಡು ಹೋದರು. ಪೂಜೆಗೆ ಬೇಕಾದ ಅಗ್ಗವಣಿ ಪತ್ರ ಪುಷ್ಪಗಳು ಅಲ್ಲಿ ಸಿದ್ಧವಾಗಿದ್ದವು. ದೀಪಗಳು ಉರಿಯುತ್ತಿದ್ದವು.

ನೀಲಲೋಚನೆಯನ್ನು ಮಣೆಯ ಮೇಲೆ ಕುಳ್ಳಿರಿಸಿ, ಗಂಗಾಂಬಿಕೆಗೆ ಹತ್ತಿರಿರುವಂತೆ ಹೇಳಿ ನಾಗಲಾಂಬೆ ಹೊರಗೆ ಬಂದಳು.

ಶಿಬಿರದ ನಡುವೆ ಚೆನ್ನಬಸವಣ್ಣನವರ ಗೂಡಾರದ ಎದುರಿಗೆ ಶರಣರ ಸಣ್ಣ ಗುಂಪು ಸೇರಿತ್ತು. ನೋಡುತ್ತಿದ್ದಂತೆ ಮಾಚಿದೇವರು ಚೆನ್ನಬಸವಣ್ಣನವರು ಗೂಡಾರದಿಂದ ಹೊರಗೆ ಬಂದರು. ಸಂಗಡ ಪಡಿಹಾರಿ ಅಪ್ಪಣ್ಣ.

"ಅಪ್ಪಣ್ಣ ಯಾವಾಗ ಸಂಗಮದಿಂದ ಹಿಂದಿರುಗಿದ್ದು? ಅಲ್ಲಿಯ ಸುದ್ದಿಯೇನು?" ಎಂದು ಚಿಂತಿಸುತ್ತ ನಾಗಲಾಂಬೆ ಹತ್ತಿರ ಹೋದಳು.

ಪಡಿಹಾರಿ ಅಪ್ಪಣ್ಣ ತಲೆತಗ್ಗಿಸಿ ಕಣ್ಣೀರು ಸುರಿಸುತ್ತಿದ್ದನು. ಮಾಚಿದೇವರ ಮುಖ ಬಾಡಿತ್ತು. ಚೆನ್ನಬಸವಣ್ಣನವರು ಉದ್ವೇಲಿತ ಮಹಾಸಾಗರದಂತೆ ತಳಮಳಿಸುತ್ತ ಶರಣರ ಕಡೆ ತಿರುಗಿ ಕೈಮುಗಿದು ಕಂಪಿತಕಂಠದಿಂದ ಹೇಳಿದರು :

"ಸಂಗಮದ ದುರ್ವಾರ್ತೆ ಬರಸಿಡಿಲಂತೆ ಹಠಾತ್ತಾಗಿ ಎರಗಿ ಬಂದು ನಮ್ಮನ್ನು ದುಃಖಸಾಗರದಲ್ಲಿ ಮುಳುಗಿಸಿದೆ. ಶರಣರ ಜೀವನಾಡಿಯಂತಿದ್ದ ಬಸವಣ್ಣನವರು ಮೂರು ದಿನಗಳ ಹಿಂದೆ ಸಂಗಮದಲ್ಲಿ ಲಿಂಗೈಕ್ಯರಾದರು. ಕೂಡಲ ಸಂಗಮ ದೇವನು ತನ್ನ ಹೃದಯಮಧ್ಯದಲ್ಲಿ ಅವರನ್ನು ಇಂಬಿಟ್ಟುಕೊಂಡನು."

ನುಡಿಯುತ್ತಿದ್ದಂತೆ ಅವರಿಗೆ ಗಂಟಲು ಹಿಡಿಯಿತು. ಕಣ್ಣೀರು ಉಕ್ಕಿ ಹರಿಯಿತು. ನಾಗಲಾಂಬೆಯು ಹತ್ತಿರ ಹೋಗಿ ಮಗನ ಕೈಹಿಡಿದು, "ಸ್ಥಿರನಾಗು, ಚೆನ್ನ ಬಸವಣ್ಣ. ಬಸವೇಶ ನಿರ್ವಯಲಾದನು. ಈಗ ನೀನು ಶರಣರ ಆಲಂಬನ, ಆದರ್ಶ ! ನೀನು ಹೀಗಾದರೆ ಹೇಗೆ ?" ಎಂದು ಸಂತೈಸಿದಳು.

ಶಕ್ತಿದೇವಿಯ ಸ್ಪರ್ಶವಾದಂತೆ ಚೆನ್ನಬಸವಣ್ಣನವರ ದೇಹದಲ್ಲಿ ಶಕ್ತಿ

ಸಂಚಾರವಾಯಿತು. ಉಕ್ಕಿ ಬರುತ್ತಿದ್ದ ಅಳುವನ್ನು ತಡೆದು ಗದ್ಗದವಾದರೂ ದೃಢಕಂಠದಿಂದ ಭಾವನೆ ಮೊನೆಮೂಡಿ ನುಡಿದರು :

“ಲಿಂಗಜಂಗಮ, ಜಂಗಮಲಿಂಗವೆಂಬುದ ತೋರಿ,
ನಿಜೈಕ್ಯನಾದೆಯಲ್ಲಾ, ನಿಜಗುರು ಬಸವಣ್ಣಾ !
ಪ್ರಸಾದಕಾಯ, ಕಾಯಪ್ರಸಾದವೆಂಬುದ
ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ, ಎನ್ನನಾಗು ಮಾಡಿ,
ಮುಂದುವರಿದೆಯಯ್ಯ ಬಸವಣ್ಣಾ !
ಲಿಂಗಪ್ರಾಣ, ಪ್ರಾಣಲಿಂಗವೆಂಬುದ ಎನ್ನಂತರಂಗದಲ್ಲಿ
ಸ್ಥಾಪ್ಯವ ಮಾಡಿ, ಎನ್ನ ನಿನ್ನಂತೆ ಮಾಡಿ,
ನಿಜಲಿಂಗದೊಳಗೆ ನಿರವಯವಾದೆಯಲ್ಲಾ ಬಸವಣ್ಣಾ !
ಎನ್ನ ಮನವ ಮಹಾತತ್ವದಲ್ಲಿ ಲಯವ ಮಾಡಿ,
ನಿರ್ವಯಲಾಗಿ, ಹೋದೆಯಲ್ಲಾ ನಿಜಲಿಂಗೈಕ್ಯ ಬಸವಣ್ಣಾ !
ನಿನ್ನ ಒಕ್ಕು ಮಿಕ್ಕ ಶೇಷವನಿಕ್ಕಿ ಆಗುಮಾಡಿ
ನಿನ್ನಂತರಂಗದಲ್ಲಿ ಅವ್ವೆ ನಾಗಾಯಿಯನಿಂಬುಗೊಂಡಡೆ,
ಎನ್ನ ಮನ ನಿಮ್ಮ ಪಾದದಲ್ಲಿ ಕೊರಗಿತ್ತಯ್ಯ
ಸಂಗನ ಬಸವಣ್ಣಾ !
ಕೂಡಲ ಚೆನ್ನ ಸಂಗಯ್ಯನಿಗೆ ಸುಜ್ಞಾನವಾಹನವಾಗಬೇಕೆಂದು
ನಿರವಯವಾದೆಯಲ್ಲಾ ಸಂಗನ ಬಸವಣ್ಣಾ !”*

ಚೆನ್ನಬಸವಣ್ಣನವರ ನುಡಿಗಳು ನೆರೆದಿದ್ದ ಶರಣರಿಗೆ ಚೈತನ್ಯ ಕೊಟ್ಟವು. ಗರಿಕೆಯ ಮೊನೆಯಲ್ಲಿ ನಿಂತ ಮಂಜಿನ ಹನಿಯಂತೆ ಕಂಬನಿ ಕಣ್ಣೆವೆಯಲ್ಲಿ ನಿಂತಿತು. ಶರಣನೊಬ್ಬನು, “ಬಸವಣ್ಣನವರ ಬಗೆಗೆ ಅಕ್ಕನಾಗಾಯಿಯವರ ಪರೋಕ್ಷ ವಿನಯವನ್ನು ಕೇಳಲೆಳೆಸುತ್ತೇವೆ,” ಎಂದು ಬಿನ್ನವಿಸಿಕೊಂಡನು.

ನಾಗಲಾಂಬೆ ಹೇಳಿದಳು :

“ನೀವು ಮರ್ತ್ಯಕ್ಕೆ ಬಂದು ನಿಂದರೆ, ಭಕ್ತಿಯ ಬೆಳವಿಗೆ
ದೆಸೆ ದೆಸೆಗೆಲ್ಲಾ ಪಸರಿಸಿತಯ್ಯ, ಬಸವಣ್ಣಾ !
ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ ನಿಮ್ಮ ಭಕ್ತಿಯ
ಬೆಳವಳಿಗೆಯ ಘನವನಾರು ಬಲ್ಲರೊ, ಅಣ್ಣಾ !

---

* ಶೂ. ಸಂ. ಪುಟ ೪೬೫–೪೬೬

ಶಶಿಧರನಟ್ಟಿದ ಮಣಿಹ ಪೂರೈಸಿತ್ತೆಂದು ನೀವು
ಲಿಂಗೈಕ್ಯವಾದರೆ, ಭಕ್ತಿ ನಿಮ್ಮೊಡನೆ ಹೋಯಿತ್ತಯ್ಯ !
ನಿಮ್ಮೊಡನೆ ಸದಾಚಾರ ಹೋಯಿತ್ತಯ್ಯ !
ನಿಮ್ಮೊಡನೆ ಅಸಂಖ್ಯಾತರು ಹೋದರು, ಅಣ್ಣಾ !
ಮರ್ತ್ಯ ಲೋಕದ ಮಹಾಮನೆ ಶೂನ್ಯವಾಯಿತ್ತು, ಬಸವಣ್ಣಾ !
ಎನ್ನನೊಯ್ಯದೆ ಹೋದೆಯಲ್ಲಾ, ಪಂಚ ಪುರುಷ ಮೂರ್ತಿ
ಬಸವಣ್ಣಾ !
ಬಸವಣ್ಣ ಪ್ರಿಯ ಚೆನ್ನ ಸಂಗಯ್ಯಂಗೆ ಪ್ರಾಣಲಿಂಗವಾಗಿ
ಹೋದೆಯಲ್ಲಾ, ಸಂಗನ ಬಸವಣ್ಣಾ !"*

ಚೆನ್ನಬಸವಣ್ಣ ನಾಗಲಾಂಬೆಯರ ನುಡಿಗಳಿಗೆ ಮುಡಿಯಿಟ್ಟಂತೆ ಮಾಚಿದೇವರು ಹೇಳಿದರು :

"ಆಕಾರ ನಿರಾಕಾರವಾಯಿತ್ತಲ್ಲಾ ಬಸವಣ್ಣಾ !
ಪ್ರಾಣ ನಿಃಪ್ರಾಣವಾಯಿತ್ತಲ್ಲಾ, ಬಸವಣ್ಣಾ !
ಲಿಂಗಜಂಗಮದ ಮಾಟಕೂಟ ಸಮಾಪ್ತಿಯಾಯಿತಲ್ಲಾ, ಬಸವಣ್ಣಾ !
ನಿಃಶಬ್ದ ವೇದ್ಯವಾದೆಯಲ್ಲಾ, ಬಸವಣ್ಣಾ !
ಕಲಿದೇವರ ದೇವನ ಹೃದಯಕಮಲದ ಹೊಕ್ಕು,
ದೇವರಿಗೆ ದೇವನಾಗಿ ಹೋದೆಯಲ್ಲಾ, ಸಂಗನ ಬಸವಣ್ಣಾ !"

ಶರಣರೆಲ್ಲ ಉಗ್ಗಡಿಸಿದರು, "ಹರ ಹರ ಮಾಹಾದೇವ ! ಉಘೇ ! ಉಘೇ! ಬಸವೇಶ ! ಬಸವ ಪ್ರಭು ! ಬಸವರಾಜ ಉಘೇ !" ಎಂದು.

ನಾಗಲಾಂಬೆ ಪುನಃ ಪೂಜೆಯ ಗೂಡಾರಕ್ಕೆ ಬಂದಾಗ ಪೂಜೆಗೆ ಕುಳಿತಿದ್ದ ನೀಲಲೋಚನೆಯ ಬೆನ್ನು ಹಿಡಿದು ಆಸರೆಯಾಗಿ ಕುಳಿತಿದ್ದಳು ಗಂಗಾಂಬಿಕೆ. ನಾಲ್ಕಾರು ಮಂದಿ ಶರಣೆಯರು ಸುತ್ತನಿಂತು ಕಣ್ಣೀರಿಡುತ್ತಿದ್ದರು.

ಗಂಗಾಂಬಿಕೆಯ ಬಳಿ ಕುಳಿತು ನಾಗಲಾಂಬೆ, "ಬಸವೇಶ ನಮ್ಮನ್ನಗಲಿದನು, ಗಂಗಾ. ಅಪ್ಪಣ್ಣ ಸಂಗಮದಿಂದ ಹಿಂದಿರುಗಿದನು," ಎಂದಳು.

"ನೀಲಾ ಹೇಳಿದಳು, ಅಕ್ಕಾ ! ಎಂತಹ ಭಾಗ್ಯಹೀನರು ನಾವು !" ಎಂದು ಗಂಗಾಂಬಿಕೆ ಕಣ್ಣೀರಿಟ್ಟಳು.

---

* ಶೂನ್ಯ ಸಂಪಾದನೆ, ಪುಟ ೪೬೪ ಶೂ. ಸಂ. ಪುಟ ೪೬೮

ಕರಸ್ಥಳದಲ್ಲಿ ಬೆಳಗುತ್ತಿದ್ದ ಇಷ್ಟಲಿಂಗದ ಮೇಲೆ ನೆಟ್ಟಿದ್ದ ನೀಲಲೋಚನೆಯ ದೃಷ್ಟಿ ಅಪೂರ್ವಕಾಂತಿಯಿಂದ ಜ್ವಲಿಸಿತು,–ಆರುವ ಮೊದಲು ದೀಪ ನಗುವಂತೆ.

ನಿಮ್ನ ಗಂಭೀರ ಕಂಠದಿಂದ ನೀಲಲೋಚನೆ ಹೇಳಿದಳು :

"ಕಾಮಿತವ ಕಂಗೊಳಿಸಿದ ಗುರುವೇ,
ಕಲ್ಪಿತವ ನಷ್ಟವ ಮಾಡಿದ ಗುರುವೆ,
ಎತ್ತಲಡಗಿದೆಯಯ್ಯ !
ಸುಖ ದುಃಖವನೊಂದು ರೂಪ ಮಾಡಿದ ಗುರುವೆ,
ಎತ್ತಲಡಗಿದೆಯಯ್ಯ ಸಂಗಯ್ಯ ಗುರು ಬಸವಾ !
ಕರಸ್ಥಲ ಬಯಲಾಯಿತ್ತೆನಗೆ, ಎಲೆ ಅಯ್ಯ !
ಕರಸ್ಥಲ ಮನಸ್ಥಲವಾಯಿತ್ತು, ಸಂಗಯ್ಯ !
ಬಸವ ಹೋದನತ್ತ, ನಾನಡಗಿದೆನಯ್ಯ ನಿನ್ನತ್ತ !"*

ನುಡಿಯುತ್ತಿದ್ದಂತೆ ನೀಲಲೋಚನೆಯ ಮಾತು ಅಸ್ಫುಟವಾಯಿತು, ದನಿಯುಡುಗಿತು, ಉಸಿರೆಳೆದು ನಿಶ್ಚೇಷ್ಟಿತೆಯಾಗಿ, ಗಂಗಾಂಬಿಕೆಯ ಎದೆಗೊರಗಿ ತಲೆಯಿಟ್ಟು ಕಣ್ಣು ಮುಚ್ಚಿದಳು.

ಶರಣೆಯರು ಮೆಲ್ದನಿಯಲ್ಲಿ ಪಠಿಸುತ್ತಿದ್ದ ಷಡಕ್ಷರದ ಗಂಭೀರ ನಾದ ಗೂಡಾರವನ್ನೆಲ್ಲ ತುಂಬಿತು.

"ನೀಲಲೋಚನೆ ಪುಣ್ಯವತಿ, ನಾಗತ್ತೆ ! ನನಗೆ ಬರಬಾರದಾಗಿತ್ತೆ ಆ ಮೃತ್ಯು!" ಎಂದು ಹಂಬಲಿಸಿದಳು ಗಂಗಾಂಬಿಕೆ.

"ಅಶುಭವನ್ನಾಡಬೇಡ, ಗಂಗಾ. ಸಂಗಮನಾಥನು ದೊಡ್ಡವನಾದಾಗ ಇಹಲೋಕದಲ್ಲಿ ನಿನ್ನ ಮಣಿಹ ಮುಗಿಯುವುದು," ಎಂದು ನಾಗಲಾಂಬೆ ಎಚ್ಚರಿಸಿದಳು.

ನೀಲಲೋಚನೆ ಲಿಂಗೈಕ್ಯಳಾದ ಸುದ್ದಿ ಕೇಳಿ ಚೆನ್ನಬಸವಣ್ಣನವರು ಮತ್ತೆ ತಳಮಳಗೊಂಡರು. "ನಾನೆಂತಹ ನಿರ್ಭಾಗ್ಯನು ಮಾಚಿದೇವಯ್ಯನವರೆ !" ಎಂದು ಹಂಬಲಿಸಿದರು.

ಆ ದಿನವೆಲ್ಲ ಶಿಬಿರದಲ್ಲಿ ಎಲ್ಲ ಕಡೆ ಷಡಕ್ಷರ ಮಂತ್ರದ ಪುನರಾವರ್ತ ಮತ್ತೆ ಮತ್ತೆ ಕೇಳಿ ಬರುತ್ತಿತ್ತು. ತಂಗಡಿಯ ಹತ್ತಿರ ಕೃಷ್ಣಾ ತೀರದ ಒಂದು ರಮ್ಯ ಸ್ಥಳದಲ್ಲಿ ಶರಣರು ನೀಲಲೊಚನೆಯ ಪಾರ್ಥಿವ ದೇಹವನ್ನು ಭೂಸ್ಥಾಪನೆ ಮಾಡಿ ಸಮಾಧಿ ರಚಿಸಿದರು.

* ಶೂ. ಸಂ. ಪುಟ ೪೭೨–೪೭೩

ಪಡಿಹಾರಿ ಅಪ್ಪಣ್ಣ ಆ ಪುಣ್ಯಾಂಗನೆಯ ಸಮಾಧಿಯನ್ನು ಪ್ರತಿನಿತ್ಯ ಹೂಗಳಿಂದ ಅಲಂಕರಿಸಲು ನಿಯುಕ್ತನಾಗಿ ಅಲ್ಲಿಯೇ ಕೆಲವು ವರ್ಷಗಳಿದ್ದು ಲಿಂಗೈಕ್ಯನಾದನೆಂದು ಐತಿಹ್ಯ ಹೇಳುತ್ತದೆ.

ನೀಲಲೋಚನೆ ಲಿಂಗೈಕ್ಯಳಾದ ಸುದ್ದಿ ಕೇಳಿದ ಸಿದ್ಧರಾಮೇಶ್ವರ ಶಿವಯೋಗಿಗಳು ನುಡಿದ ಪರೋಕ್ಷ ವಿನಯದ ಶ್ರದ್ಧಾಂಜಲಿಯಿದು :

"ತಾಯೆ, ಪರಮಸುಖಾಚಾರ ಮೂರ್ತಿಯನಡಗಿಸಿ
ನೀನೆಯಾದೆಯವ್ವಾ!
ತಾಯೆ, ಮಹಾಜ್ಞಾನ ಕಲ್ಪಿತದಲ್ಲಿ ನೀನೆಯಡಗಿದೆಯವ್ವಾ !
ತಾಯೆ, ನೀಲಮ್ಮನೆಂಬ ಸುಖವಾಸಿ ಮೂರ್ತಿ !
ಕಪಿಲಸಿದ್ಧ ಮಲ್ಲಿನಾಥಯ್ಯಾ,
ನಿಮ್ಮ ತಾಯಿ ನೀಲಮ್ಮ ನೀನಾದಳು !"*

* * *

"ಈ ಎಲ್ಲ ಅನರ್ಥಗಳಿಗೆ ನನ್ನ ಅಚಾತುರ್ಯವೇ ಕಾರಣ. ಈ ಅಪರಾಧಕ್ಕಾಗಿ ನಾನು ಮಾಡಿಕೊಳ್ಳಬೇಕಾದ ಪ್ರಾಯಶ್ಚಿತ್ತವೇನು ?"

–ಎಂದು ಮಾಚಿದೇವರು ಚಿಂತಿಸಿದರು.

ಹೀಗೆ ಎರಡು ದಿನಗಳು ಕಳೆದವು. ಮೂರನೆಯ ದಿನ ಮುಂಜಾವಿನಲ್ಲಿ ತಡಸದ ಹಾಯ್ಗಡಕ್ಕೆ ಹೋಗಿದ್ದ ಅಂಬಿಗರ ನಾಯಕನು ಹಿಂದಿರುಗಿ, "ಹೊಳೀ ಇಳೀತಾ ಬಂದೈತ್ರಿ, ಅಣ್ಣವ್ರ. ಈ ಸಂಜೆ ಹೊತ್ತಿಗೆ ಇನ್ನೂ ಕಡಿಮೆ ಆದಾತು. ನೀವು ಈಗಲೆ ಶಿಬಿರ ಎತ್ತಿದ್ರೆ ಸೂರ್ಯ ನಡುನೆತ್ತೀಗೇರೋ ಹೊತ್ತಿಗೆ ತಡಸ ಸೇರಬೋದು, ಅಲ್ಲಿ ಎಲ್ಲನೂ ಅಣಿಯಾಗೈತಿ," ಎಂದು ವರದಿ ಮಾಡಿದನು.

"ಏನು ಸಿದ್ಧವಾಗಿದೆ ?" ಎಂದು ಮಾಚಿದೇವರು ಕೇಳಿದರು.

"ಎತ್ತುಗಳು, ಚಕ್ಕಡಿಗಳು, ಸಾಮಾನು ಸರಂಜಾಮು ಸಾಗಿಸಲು ನಾಕು ದೊಡ್ಡ ತೆಪ್ಪಗಳು, ಜನಗಳಿಗೆ ನೂರು ದೋಣಿ. ಸಂಜೀ ಮುನ್ನ ನಿಮ್ಮನ್ನ ಆ ದಡ ಸೇರಿಸ್ತೇವು," –ಅಂಬಿಗರ ನಾಯಕ ಉತ್ತರಿಸಿದನು.

ಅಂಬಿಗನ ವರದಿ ಎಷ್ಟು ಉತ್ಸಾಹದಾಯಕವಾಗಿತ್ತೋ ಕಲ್ಯಾಣದಿಂದ ಬಂದ ಸುದ್ದಿ ಅಷ್ಟೇ ಭೀತಿಜನಕವಾಗಿತ್ತು. ಹರದನ ವೇಷದಲ್ಲಿ ಬಂದ ಶರಣನು ಹೇಳಿದನು : "ನಿಮ್ಮನ್ನು ತಡೆಯಲು ಮಾಧವ ನಾಯಕನು ಸೈನ್ಯದೊಡನೆ

---

* ಶೂ. ಸಂ. ಪುಟ ೪೬೪.

ಬರುತ್ತಿದ್ದಾರೆ, ಅಣ್ಣನವರೆ. ಅವನ ಮಂಚೂಣಿ ದಳಗಳು ಇಲ್ಲಿಂದ ಸುಮಾರು ಎರಡು ಹರಿದಾರಿ ದೂರದಲ್ಲಿವೆ. ಇಂದು ಸಂಜೆಗೆ ಅವು ತಂಗಡಿಯ ಗಡಿ ಮುಟ್ಟುವುವು."

"ಸೈನ್ಯ ಎಷ್ಟಿದೆ ಎಂದು ತಿಳಿದಿದೆಯೆ ?"

ಕೆಲವು ಕ್ಷಣಗಳು ಯೋಚಿಸುತ್ತಿದ್ದ ಮಾಚಿದೇವರು ಕೇಳಿದರು.

"ಹತ್ತು ಸಾವಿರ ಎಂದು ಜನರು ಹೇಳುತ್ತಾರೆ. ನನಗೆ ತಿಳಿದಮಟ್ಟಿಗೆ ಸುಮಾರು ಎರಡು ಸಾವಿರ ಪದಾತಿ, ಐನೂರು ಅಶ್ವದಳ, ಇನ್ನೂರು ರಥಗಳು."

ಮಾಚಿದೇವರ ಹೃದಯ ಕಂಪಿಸಿತು. "ಇದರಲ್ಲಿ ನಾಲ್ಕನೆಯ ಒಂದು ಪಾಲು ಸೈನ್ಯವಿದ್ದರೂ ನಮ್ಮ ಗಣಾಚಾರಿ ಯೋಧದಳಗಳು ಧೂಳೀಪಟವಾಗುವವು. ಕಲಿ ದೇವರ ದೇವನೇ ನಮ್ಮನ್ನು ರಕ್ಷಿಸಬೇಕು. ಪ್ರವಾಹ ಇಳಿಯಲಿ, ಇಳಿಯದಿರಲಿ ನದಿಯನ್ನು ದಾಟಿ ಆಚಿನ ದಡ ಸೇರುವುದೊಂದೇ ನಾವು ಉಳಿಯುವ ಉಪಾಯ,"

ಎಂದು ಮನಸ್ಸಿನಲ್ಲಿ ನಿರ್ಧರಿಸಿಕೊಂಡು, ತಮ್ಮ ಆಜ್ಞೆಗಾಗಿ ಕಾದಿರುವಂತೆ ಅಂಬಿಗರ ನಾಯಕನಿಗೆ ಹೇಳಿ, ಕಲ್ಯಾಣದಿಂದ ಬಂದ ಶರಣನನ್ನು ಕರೆದುಕೊಂಡು ಚೆನ್ನಬಸವಣ್ಣನವರ ಬಳಿಗೆ ಹೋದರು.

ಚೆನ್ನಬಸವಣ್ಣನವರು ತಮ್ಮ ಪ್ರಾತಃಕೃತ್ಯಗಳನ್ನು ಮುಗಿಸಿಕೊಂಡು ಮಾಚಿ ದೇವರಿಗಾಗಿ ಕಾಯುತ್ತಿದ್ದರು.

"ನಮ್ಮ ಅಗ್ನಿಪರೀಕ್ಷೆ ಸನ್ನಿಹಿತವಾಗಿದೆ, ಅಣ್ಣನವರೆ," ಎಂದು ಪ್ರಾರಂಭಿಸಿ ಮಾಚಿದೇವರು ಕಲ್ಯಾಣದಿಂದ ಬಂದ ಸುದ್ದಿಯನ್ನು ವಿವರಿಸಿದರು.

"ಹಾಗಾದರೆ ಈ ವಿಷಮ ಸಂಕಟದಿಂದ ನಾವು ಉದ್ಧಾರವಾಗುವುದು ಹೇಗೆ?" ಎಂದು ಚೆನ್ನಬಸವಣ್ಣನವರು ನುಡಿದರು.

"ಕಲಿದೇವರ ದೇವನು ದಾರಿ ತೋರಿಸುವನೆಂದು ನನಗೆ ವಿಶ್ವಾಸವಿದೆ. ನಾವು ಕೂಡಲೆ ಶಿಬಿರವನ್ನು ಬಿಡಬೇಕಾಗಬಹುದು. ಗಣಾಚಾರಿ ದಳದ ನಾಯಕನಿಗೆ ಹೇಳಿ ಕಳುಹಿಸಿದ್ದೇನೆ. ಅವನು ಬಂದ ಮೇಲೆ ಮುಂದಿನ ಕಾರ್ಯವಿಧಾನವನ್ನು ನಿರ್ಧರಿಸಬೇಕು," ಎಂದರು ಮಾಚಿದೇವರು.

ಯಾತ್ರಾದಳದ ಪ್ರವಾಸ ಹಾಗೂ ರಕ್ಷಣಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮಾಚಿದೇವರು ವಹಿಸಿಕೊಂಡಿದ್ದರಿಂದ ಚೆನ್ನಬಸವಣ್ಣನವರು ಹೆಚ್ಚಿನ ವಿವರಗಳನ್ನು ಕೇಳಲು ಹೋಗಲಿಲ್ಲ.

ತುಸು ಹೊತ್ತಿನ ಮೇಲೆ ಮಾಚಿದೇವರು ಬದಲಿಸಿದ ಕಂಠದಿಂದ, "ಸಕಲೇಶ ಮಾದರಸರ ಪರೋಕ್ಷದಲ್ಲಿ ನೀವು ಅನುಭವ ಮಂಟಪದ ಅಧ್ಯಕ್ಷರು : ಶರಣರ

ಅಧಿಕೃತ ಮುಂದಾಳು. ನಿಮ್ಮಲ್ಲಿ ನನ್ನ ಬಿನ್ನಪವೊಂದಿದೆ," ಎಂದರು.

ಚೆನ್ನಬಸವಣ್ಣನವರು ಸಹಜ ವಿನಯದಿಂದ, "ವಯಸ್ಸಿನಂತೆ ನೀವು ಜ್ಞಾನದಲ್ಲಿಯೂ ನನಗಿಂತ ಹಿರಿಯರು, ಅಣ್ಣ. ನನ್ನಲ್ಲಿ ನಿಮ್ಮ ಬಿನ್ನಪವೇ ? ನಿಮ್ಮ ಕರುಣೆ ಆದರಗಳ ಫಲವಾಗಿ ನಾನು ಅಧ್ಯಕ್ಷನಾಗಿದ್ದೇನೆ," ಎಂದರು.

"ಆದರೂ ವಿವೇಕ ತೋರಿಸುವ ಮಾರ್ಗದಲ್ಲಿ ನಡೆಯುವುದು ನನ್ನ ಕರ್ತವ್ಯ. ನನ್ನ ಬಿನ್ನಪವನ್ನು ಕೇಳಿ, ಅದರ ಪರಿಹಾರ ಮಾರ್ಗವನ್ನು ನೀವು ಸೂಚಿಸಬೇಕಾಗಿದೆ," ಎಂದು ಮಾಚಿದೇವರು ಒತ್ತಾಯ ಪಡಿಸಿದರು.

"ನಾನು ಅಧ್ಯಕ್ಷನೆಂಬುದನ್ನು ಮರೆತು, ನೆಚ್ಚಿನ ಗೆಳೆಯನಂತೆ ನೀವು ಹೇಳತಕ್ಕದ್ದನ್ನು ಹೇಳಬಹುದು, ಅಣ್ಣನವರೆ," ಎಂದು ಕೊನೆಗೆ ನುಡಿದರು, ಚೆನ್ನಬಸವಣ್ಣನವರು.

"ಶರಣರ ವಿಚಾರದಲ್ಲಿ ನಾನು ಒಂದು ಅಪರಾಧ ಮಾಡಿದ್ದೇನೆ. ನಾವು ಕಲ್ಯಾಣವನ್ನು ಬಿಟ್ಟಂದಿನಿಂದ ನಡೆದ ಎಲ್ಲ ಅನರ್ಥಗಳಿಗೆ ನನ್ನ ಅವಿವೇಕ ಅಚಾತುರ್ಯಗಳು ಕಾರಣ. ಅದಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಲು ನಿರ್ಧರಿಸಿದ್ದೇನೆ," ಎಂದು ಮಾಚಿದೇವರು ನುಡಿದರು.

"ನಿಮ್ಮ ಅಪರಾಧವೇನು ?" ಎಂದು ಚೆನ್ನಬಸವಣ್ಣನವರು ಸಹಜವಾಗಿ ಪ್ರಶ್ನಿಸಿದರು.

ಮಾಚಿದೇವರು ಹೇಳಿದರು : "ನಾನು ಶರಣದೀಕ್ಷೆ ಪಡೆದು ಅನುಭವ ಮಂಟಪವನ್ನು ಸೇರುವ ಮೊದಲು ಐಯ್ಯಾವಳೆಯ ಐನೂರ್ವರು ಮಹಾಸಂಘದ ಕ್ರಿಯಾಸಮಿತಿಯ ಪ್ರಾಂತೀಯ ಅಧ್ಯಕ್ಷನಾಗಿದ್ದೆ. ಸಂಘದ ಆಜ್ಞೆ ಆದೇಶಗಳನ್ನು ಪ್ರಶ್ನಿಸದೆ, ಪರ್ಯಾಲೋಚಿಸದೆ, ಕಾರ್ಯಗತ ಮಾಡುವುದಾಗಿ ಆಗ ನಾನು ಮಾಡಿದ ಪ್ರತಿಜ್ಞೆಯಂತೆ ನಡೆಯುವುದು ಬದುಕಿರುವವರೆಗೆ ನನ್ನ ಆದ್ಯ ಕರ್ತವ್ಯ. ಈ ನಿಯಮಕ್ಕೆ ಅಧೀನವಾಗಿ ನಾನು ಜಂಗಮ ವೇಷಧಾರಿ ಬೊಮ್ಮರಸನಿಗೆ ಮಹಮನೆಯಲ್ಲಿ ಆಶ್ರಯ ದೊರಕುವಂತೆ ಮಾಡಿ, ಅವನು ಧರ್ಮೋಪದೇಶಿಯಾಗಿ ರಾಜಗೃಹವನ್ನು ಪ್ರವೇಶಿಸುವಂತೆ ಅವಕಾಶ ಕಲ್ಪಿಸಿದೆ. ಮಹಾಸಂಘದ ಸಹಾಯದಿಂದ ಮಧುವರಸಾದಿಗಳನ್ನು ಉದ್ಧರಿಸಲು ಪ್ರಯತ್ನಿಸಿದೆ. ಜಗದೇಕಮಲ್ಲ ಬೊಮ್ಮರಸರು ರಾಜಗೃಹದ ಬಂಧನದಿಂದ ಪಾರಾಗಲು ಬೇಕಾಗಿದ್ದ ದೀವಟಿಗೆಯವರ ಸಮವಸ್ತ್ರ ಜಮದಂಡಿಗಳನ್ನು ಒದಗಿಸಿದೆ. ಚಾಲುಕ್ಯ ಅರಸೊತ್ತಿಗೆಯ ಪುನಃಪ್ರತಿಷ್ಠೆಗಾಗಿ ನಡೆಯುತ್ತಿದ್ದ ರಾಜಕೀಯ ಒಳಸಂಚಿಗೆ ಸಹಾಯಕನಾದೆ. ಅದು ಬಿಜ್ಜಳನ ಕೊಲೆಯಲ್ಲಿ ಪರ್ಯವಸಾನವಾಗುವುದೆಂದು ನಾನು ಭಾವಿಸಿರಲಿಲ್ಲ. ಈ ನನ್ನ

ಅಚಾತುರ್ಯ ಅವಿವೇಕಗಳ ಫಲವಾಗಿ ಈಗ ಬಿಜ್ಜಳನ ಕೊಲೆಯ ಮಿಥ್ಯಾಪವಾದ ಶರಣರ ಮೇಲೆ ಬಂದಿದೆ. ಶರಣಧರ್ಮದ ವಿರೋಧಿಯಾದ ಮಾಧವ ನಾಯಕನು ಈ ಅಪವಾದ ಹರಡಲು ಸರ್ವಪ್ರಯತ್ನ ಮಾಡುತ್ತಿದ್ದಾನೆ. ನನ್ನ ಅಂತರಾತ್ಮನಿಗೆ ವಿರುದ್ಧವಾಗಿ ನಾನು ಈ ಕಾರ್ಯಗಳನ್ನು ಮಾಡಿದೆನೇ? ಅಥವಾ ನನ್ನ ಹೃದಯದಲ್ಲಿ ಇಂಬಿಟ್ಟುಕೊಂಡ ಕಲಿ ದೇವರ ದೇವನೇ ನನ್ನಿಂದ ಈ ಕಾರ್ಯಗಳನ್ನು ಮಾಡಿಸಿದನೇ? ಎಂಬುದನ್ನು ನಿರ್ಧರಿಸಲೂ ನಾನು ಅಸಮರ್ಥನಾಗಿದ್ದೇನೆ. ನೀವು ಶರಣಧರ್ಮದ ಜ್ಞಾನನಿಧಿ. ಇದರಲ್ಲಿ ನನ್ನ ಅಪರಾಧವೇನೆಂಬುದನ್ನು ಪರಿಶೀಲಿಸಿ ನಿಷ್ಪಕ್ಷಪಾತವಾಗಿ ಪ್ರಾಯಶ್ಚಿತ್ತ ವಿಧಿಸಬೇಕಾಗಿ ಬೇಡುತ್ತೇನೆ."

ಚೆನ್ನಬಸವಣ್ಣನವರು ಅಪ್ರತಿಭರಾದರು. ಮಾಚೀದೇವರಂತಹ ಹಿರಿಯ ಶರಣರ ತಪ್ಪುಗಳನ್ನು ನಿರ್ಧರಿಸುವ ವಿವೇಕ ನನಗಿದೆಯೆ? ಎಂದು ಶಂಕಿಸಿತು ಅವರ ಮನಸ್ಸು, ಹೃದಯ.

ಕೊನೆಗೆ ಅವರು ಹೇಳಿದರು : "ನೀವು ಹಿರಿಯ ಅನುಭಾವಿಗಳು, ಮಾಚಿದೇವಯ್ಯನವರೆ. ಬಸವಣ್ಣನವರ ನಿರ್ವಾಸನದ ಅನಂತರ, ಅನಾಥವಾಗಿದ್ದ ಅನುಭವ ಮಂಟಪ ನಿಮ್ಮ ಶಕ್ತಿ ಸಾಮರ್ಥ್ಯಗಳಿಂದ ಕೆಲವು ದಿನಗಳಾದರೂ ತಲೆಯೆತ್ತಿ ನಿಲ್ಲುವಂತಾಯಿತು. ಮಧುವರಸಾದಿಗಳನ್ನು ಉಳಿಸಲು ನೀವು ಮಾಡಿದ ಪ್ರಯತ್ನವನ್ನು ಶರಣರು ಎಂದೂ ಮರೆಯುವುದಿಲ್ಲ. ನಮ್ಮ ವಲಸೆಯ ನಿರ್ಧಾರ ಕಾರ್ಯಗತವಾದದ್ದು ನಿಮ್ಮ ಸಲಹೆ ಸಹಕಾರ ಸಾಹಸಗಳಿಂದ. ನಿಮ್ಮ ಒಪ್ಪು ತಪ್ಪುಗಳನ್ನು ನಿರ್ಧರಿಸಲು ನಾನು ಅರ್ಹನಲ್ಲ. ಆದರೂ ಸಮಯ ಧರ್ಮಕ್ಕೆ ಬದ್ಧನಾಗಿ ಈ ಮಾತುಗಳನ್ನು ಹೇಳುತ್ತಿದ್ದೇನೆ.

"ಬಿಜ್ಜಳನ ಕೊಲೆಯಲ್ಲಿ ಮುಗಿದ ಒಳಸಂಚಿಗೆ ನೀವು ಉದ್ದೇಶಪೂರ್ವಕವಾಗಿ ಸಹಾಯ ಮಾಡಲಿಲ್ಲವೆಂಬುದು ನಿಮ್ಮ ವಿವರಣೆಯಿಂದ ವ್ಯಕ್ತವಾಗಿದೆ. ಐನೂರ್ವರ ಮಹಾಸಂಘದ ಸದಸ್ಯರಾಗಿ ನೀವು ಮಾಡಿದ ಕಾರ್ಯಗಳು ನಿಮಗೂ ನಿಮ್ಮ ಅಂತರಾತ್ಮನಿಗೂ ಸಂಬಂಧಿಸಿದ ವೈಯಕ್ತಿಕ ವಿಚಾರ. ಅದರ ಒಪ್ಪು ತಪ್ಪುಗಳನ್ನು ನಿಮ್ಮ ಇಷ್ಟದೈವ ಕಲಿದೇವರ ದೇವನು ನಿರ್ಧರಿಸಲಿ. ಶರಣಧರ್ಮ ಅದರಲ್ಲಿ ಪ್ರವೇಶಿಸುವುದಿಲ್ಲ. ಐನೂರ್ವರ ಮಹಾಸಂಘ, ಅದರ ಕ್ರಿಯಾರೂಪವಾದ ವೀರಬಣಂಜು ಸಂಘ, ಈ ಎರಡು ಸಂಸ್ಥೆಗಳು ಮೊದಲಿಂದ ಶರಣಧರ್ಮಕ್ಕೆ ಪ್ರೋತ್ಸಾಹವಿತ್ತಿವೆ ; ಶರಣರಿಗೆ ಸಹಾಯ ಮಾಡಿವೆ. ರಾಜಕೀಯ ಸಂಸ್ಥೆಗಳೆಂಬ ಕಾರಣದಿಂದ ಬಸವಣ್ಣನವರು ಅವುಗಳಿಂದ ಪ್ರತ್ಯೇಕವಾಗಿ ನಿಂತರು. ಆದರೆ ಶರಣರಿಗೆ ಸಂಸ್ಥೆಗಳ ಸಂಬಂಧವನ್ನು ನಿರಾಕರಿಸಲಿಲ್ಲ.

"ನಾವು ಕಲ್ಯಾಣವನ್ನು ಬಿಟ್ಟಿದ್ದು ಬಿಜ್ಜಳನ ಕ್ರೌರ್ಯ ದಬ್ಬಾಳಿಕೆಗಳಿಂದ ತಪ್ಪಿಸಿಕೊಳ್ಳುವ ಪರಮೋದ್ದೇಶದಿಂದಲೇ ಎಂಬುದನ್ನು ಸ್ಪಷ್ಟಪಡಿಸಿದ್ದೇವೆ. ಹಿಂಸೆಯನ್ನು ಪ್ರತಿಹಿಂಸೆಯಿಂದ ಎದುರಿಸುವುದು ನಮ್ಮ ಉದ್ದೇಶವಾಗಿದ್ದಿದ್ದರೆ ನಾವು ಕಲ್ಯಾಣವನ್ನು ಬಿಡುವ ಅಗತ್ಯವೇ ಉಂಟಾಗುತ್ತಿರಲಿಲ್ಲ."

"ಪರವಾದಿಗಳು ಇದುವರೆಗೆ ನಮ್ಮ ಮೇಲೆ ಎಲ್ಲ ರೀತಿಯ ಅಪವಾದಗಳನ್ನೂ ಹೊರಿಸಿದ್ದಾರೆ. ಅವುಗಳಿಂದ ಅವರಿಗಾದ ಆಗೇನು? ನಮಗಾದ ಚೇಗೇನು? ಅಂತರಂಗ ಆತ್ಮಶುದ್ಧಿ ಇರುವವರೆಗೂ ಅಪವಾದಗಳಿಗೆ ನಾವೇಕೆ ಹೆದರಬೇಕು? ನೀವು ಈ ವಿಚಾರವನ್ನು ಮರೆಯಬೇಕಾಗಿ ಬೇಡುತ್ತೇನೆ."

ಚೆನ್ನಬಸವಣ್ಣನವರ ಭರವಸೆಯ ನುಡಿಗಳಿಂದ ಮಾಚಿದೇವರ ಸಂದೇಹ ಪರಿಹಾರವಾಗಲಿಲ್ಲ. "ನನ್ನಿಂದ ಅಪರಾಧವಾಗಿದೆ. ಪ್ರಾಯಶ್ಚಿತ್ತ ಮಾಡಿಕೊಳ್ಳದೆ ಹೋದರೆ ಕಲಿದೇವರ ದೇವನು ಒಪ್ಪುವುದಿಲ್ಲ," ಎಂಬ ಚಿಂತೆ ಅವರ ಮನಸ್ಸಿನಲ್ಲಿ ಉಳಿಯಿತು.

ಚೆನ್ನಬಸವಣ್ಣನವರಿಗೆ ಏನು ಹೇಳುವುದು? ಎಂದು ಅವರು ಯೋಚಿಸುತ್ತಿದ್ದಂತೆ ಗಣಾಚಾರಿ ದಳದ ನಾಯಕನನ್ನು ಸಂಗಡ ಕರೆದುಕೊಂಡು ಕಲ್ಯಾಣದ ಶರಣನು ಅಲ್ಲಿಗೆ ಬಂದನು.

ಮಾಚಿದೇವರು ನಾಯಕನಿಗೆ ಪರಿಸ್ಥಿತಿಯನ್ನು ವಿವರಿಸಿ, "ಇಂದು ಸಂಜೆಯೊಳಗಾಗಿ ತಡಸದ ಹಾಯ್ಗಡದಿಂದ ನಾವು ಕೃಷ್ಣೆಯನ್ನು ದಾಟಬೇಕು. ಮಾಧವ ನಾಯಕನ ಮುಂಚೂಣಿ ದಳಗಳು ಅಷ್ಟರಲ್ಲಿ ನಮ್ಮ ಮೇಲೆ ಬಿದ್ದರೆ ನಿಮ್ಮಿಂದ ತಡೆಯುವುದು ಸಾಧ್ಯವೆ?" ಎಂದು ಕೇಳಿದರು.

"ಮಾಧವ ನಾಯಕನ ಸೈನ್ಯದೊಡನೆ ಹೋರಾಡಲು ನಮ್ಮ ಯೋಧರು ಆತುರರಾಗಿದ್ದಾರೆ, ಅಣ್ಣನವರೆ. ಆದರೆ ಸುಸಜ್ಜಿತವಾದ ಆ ಬಹುಸಂಖ್ಯಾತ ಸೈನ್ಯದ ಎದುರಿಗೆ ನಿಂತು ಹೋರಾಡುವುದು ನಮಗೆ ಸಾಧ್ಯವಲ್ಲ. ಅದಕ್ಕಾಗಿ ನಾನೊಂದು ಉಪಾಯ ಯೋಚಿಸಿದ್ದೇನೆ,"

–ಎಂದು ಗಣಾಚಾರಿ ನಾಯಕನು ಹೇಳಿದನು.

"ಉಪಾಯವೇನು?"

ನಾಯಕನು ಹೇಳಿದನು : "ತಂಗಡಿಗೆ ಬರುವ ಕಣಿವೆ ಮತ್ತು ಅದರ ಸುತ್ತು ಮುತ್ತಿನ ಗುಡ್ಡಗಳ ಮೇಲೆ ನಮ್ಮ ಯೋಧದಳಗಳು ಆಯಕಟ್ಟಿನ ಸ್ಥಳಗಳನ್ನು ಆಕ್ರಮಿಸಿಕೊಂಡಿವೆ. ಆ ಸ್ಥಳಗಳು ನಮ್ಮ ವಶದಲ್ಲಿರುವವರೆಗೆ ಶತ್ರು ಸೈನ್ಯ ಎಷ್ಟೇ ಬಲಿಷ್ಠವಾಗಿರಲಿ, ಕಣಿವೆಯನ್ನು ದಾಟಿ ಬಂದು ಶಿಬಿರದ ಮೇಲೆ ಆಕ್ರಮಣ

ನಡೆಸುವುದು ಸಾಧ್ಯವಲ್ಲ. ಈ ಕಾರಣಗಳಿಂದ ನಾವು ಕೂಡಲೆ ತಂಗಡಿಯನ್ನು ಬಿಟ್ಟು ಹೋಗುವುದು ಸರಿಯಲ್ಲ."

"ನದಿ ದಾಟಲು ತಡಸದ ಹಾಯ್ಗಡ ಹೆಚ್ಚು ಅನುಕೂಲವೆಂದು ಅಂಬಿಗರ ನಾಯಕನು ಹೇಳುತ್ತಾನೆ. ನಮಗಾಗಿ ನಾಲ್ಕು ತೆಪ್ಪಗಳು, ನೂರು ದೋಣಿಗಳು ಅಲ್ಲಿ ಸಿದ್ಧವಾಗಿವೆ....ನಾವು ಕೂಡಲೆ ಶಿಬಿರವನ್ನು ಬಿಡದೆ ಹೋದರೆ ಸಕಾಲದಲ್ಲಿ ತಡಸ ಸೇರಲಾಗುವುದಿಲ್ಲ," ಎಂದರು ಮಾಚಿದೇವರು.

"ತಂಗಡಿ ನಮ್ಮ ವಶದಲ್ಲಿರಬೇಕು. ಶರಣರು ತಡಸದ ಹಾಯ್ಗಡದಿಂದ ನದಿಯನ್ನು ದಾಟಬೇಕು. ಈ ಎರಡಕ್ಕೂ ಅನುಕೂಲವಾದ ಉಪಾಯವೊಂದನ್ನು ಯೋಚಿಸಬೇಕು, ಅಣ್ಣನವರೆ. ಇಲ್ಲಿಂದ ತಡಸಕ್ಕೆ ಹೋಗಲು ಅಂಬಿಗರು ಮತ್ತು ಗ್ರಾಮವಾಸಿಗಳು ಮಾತ್ರವೇ ಉಪಯೋಗಿಸುವ ಕಾಲುದಾರಿಯಿದೆ. ಅತ್ಯಗತ್ಯವಾದ ಸಾಮಾನು ಸರಂಜಾಮುಗಳನ್ನು ಎತ್ತುಗಳ ಮೇಲೆ ಹೇರಿಕೊಂಡು ಶರಣರು ರಹಸ್ಯವಾಗಿ ತಡಸದ ಹಾಯ್ಗಡಕ್ಕೆ ಹೋಗಲಿ. ಉಳಿದ ಸಾಮಾನು ಸರಂಜಾಮುಗಳು, ಚಕ್ಕಡಿ ಗೂಡಾರಗಳು, ಈಗಿನಂತೆ ಇಲ್ಲಿಯೇ ಇರಲಿ. ಅದರಿಂದ ಶತ್ರುಗಳು ನಾವು ಇಲ್ಲಿಯೇ ಇರುವೆವೆಂದು ತಿಳಿದು, ಕಣಿವೆಯನ್ನು ದಾಟಿ ಶಿಬಿರದ ಮೇಲೆ ಬೀಳಲು ಪ್ರಯತ್ನಿಸುವರು. ಆಯಕಟ್ಟಿನ ಸ್ಥಳಗಳಲ್ಲಿರುವ ಗಣಾಚಾರಿ ಯೋಧರು ಅವರನ್ನು ಎದುರಿಸಲು ಶಕ್ತರಾಗುವರು."

ಆಗ ಮಾಚಿದೇವರಿಗೆ ನಾಯಕನು ಯೋಚಿಸಿದ ಕೂಟಯುದ್ಧದ ಅರಿವಾಯಿತು. ತಂಗಡಿಯ ಸಮೀಪದ ಸಣ್ಣ ಕಣಿವೆಯಲ್ಲಿ ಶತ್ರು ಸೈನ್ಯವನ್ನು ಸಿಕ್ಕಿಸಿ, ಗುಡ್ಡಗಳ ಮೇಲಿಂದ ಆಕ್ರಮಣ ಮಾಡುವುದು ನಾಯಕನ ಉದ್ದೇಶವೆಂದು ತಿಳಿದರು. "ಉಪಾಯ ಚೆನ್ನಾಗಿದೆ," ಎಂದು ನಾಯಕನನ್ನು ಪ್ರಶಂಸಿಸಿದರು.

ನಾಯಕನು ಉತ್ಸಾಹದಿಂದ ಪುನಃ ಹೇಳಿದನು : "ಶತ್ರುಗಳಿಗೆ ತಮ್ಮ ತಪ್ಪಿನ ಅರಿವಾಗುವಷ್ಟರಲ್ಲಿ ಶರಣರು ನದಿಯನ್ನು ದಾಟಿರಬೇಕು, ಅಣ್ಣನವರೆ. ಆಮೇಲೆ ನಡೆಯುವ ಯುದ್ಧದಲ್ಲಿ ನಮಗೆ ಜಯವಾದರೆ ಗೂಡಾರ ಚಕ್ಕಡಿಗಳನ್ನು ಆ ದಡಕ್ಕೆ ತೆಗೆದುಕೊಂಡು ಹೋಗಬಹುದು. ಇಲ್ಲವೆ ನಮ್ಮೊಡನೆ ಅವು ನಾಶವಾಗುವುವು."

ಶರಣರ ರಕ್ಷಣೆಗಾಗಿ ಗಣಾಚಾರಿ ಯೋಧರು ಪ್ರಾಣಾರ್ಪಣೆಗೆ ಸಿದ್ಧರಾಗಿರುವರೆಂದು ತಿಳಿದು ಮಾಚಿದೇವರು ಚಮತ್ಕೃತರಾದರು. "ನೀವು ಬಲಿದಾನಕ್ಕೆ ಸಿದ್ಧರಾಗಿರುವಿರೆಂದು ತಿಳಿದು ನನ್ನ ಆತ್ಮ ವಿಶ್ವಾಸ ಮತ್ತೆ ಮೂಡುತ್ತಿದೆ, ನಾಯಕ. ಕಲಿ ದೇವರ ದೇವನು ನಿಮ್ಮನ್ನು ರಕ್ಷಿಸುವನು," ಎಂದರು ಅವರು.

ಒಂದೆರಡು ಗಳಿಗೆಗಳಲ್ಲಿ ಅದರಂತೆ ಕಾರ್ಯಾಚರಣೆ ಪ್ರಾರಂಭವಾಯಿತು.

ಅಗತ್ಯವಾದ ಪಾತ್ರೆ ಪದಾರ್ಥ ಬಟ್ಟೆ ಮುಂತಾದವುಗಳನ್ನು ಚೀಲಗಳಲ್ಲಿ ತುಂಬಿ ಎತ್ತುಗಳ ಮೇಲೆ ಹೇರಿದರು. ಸಣ್ಣ ಗಂಟು ಮೂಟೆಗಳನ್ನು ತಲೆಯ ಮೇಲೆ ಹೊತ್ತರು. ಗಣಾಚಾರಿ ದಳದ ಯೋಧರು ತೋರಿಸಿದ ನದೀ ತೀರದ ಕಾಲುದಾರಿಯಲ್ಲಿ ಶರಣರು ತಂಡತಂಡವಾಗಿ ತಡಸದ ಹಾಯ್ಗಡಕ್ಕೆ ಹೊರಟರು.

ಚೆನ್ನಬಸವಣ್ಣನವರು, ಶೂಲದ ಬೊಮ್ಮಯ್ಯ, ಕೂಗಿನ ಮಾರಿತಂದೆ ಮುಂತಾದ ಹಿರಿಯ ಶರಣರ ಮೇಲ್ವಿಚಾರಣೆಯಲ್ಲಿ ಈ ಕಾರ್ಯ ನಡೆಯಿತು. ಮಾಚಿದೇವರು ಮೊದಲೆ ತಡಸಕ್ಕೆ ಹೋಗಿ, ಶರಣರೆಲ್ಲ ಗೊಂದಲವಿಲ್ಲದೆ ಸುರಕ್ಷಿತವಾಗಿ ನದಿಯನ್ನು ದಾಟಲು ಏರ್ಪಡಿಸಿದರು. ಮೊದಲು ಗಣಾಚಾರಿ ಯೋಧರ ರಕ್ಷಕದಳ, ಅವರ ತರುವಾಯ ವೃದ್ಧರಾದ ಜಂಗಮರು ಮತ್ತು ಶರಣೆಯರು, ಕೊನೆಯದಾಗಿ ಶರಣರು, ಈ ರೀತಿ ಅವರು ಕೃಷ್ಣೆಯನ್ನು ದಾಟಿದರು. ಎತ್ತು ಮತ್ತು ಹೇರುಗಳನ್ನು ತೆಪ್ಪಗಳ ಮೇಲೆ ಸಾಗಿಸಿದರು. ಮಧ್ಯಾಹ್ನದ ಸುಮಾರಿಗೆ ಪ್ರಾರಂಭವಾದ ಈ ಕಾರ್ಯ ಸಂಜೆಗೆ ಮುಗಿಯಿತು.

ಆಮೇಲೆ ಮಾಚಿದೇವರು ತಂಗಡಿಗೆ ಹಿಂದಿರುಗಿ ಅಲ್ಲಿ ಅವರಿಗಾಗಿ ಕಾದಿದ್ದ ಚೆನ್ನಬಸವಣ್ಣ, ಕೂಗಿನ ಮಾರಿತಂದೆ, ಶೂಲದ ಬೊಮ್ಮಯ್ಯ, ಮುಂತಾದವರನ್ನು ಸೇರಿಕೊಂಡರು. ಗಣಾಚಾರಿ ಯೋಧರ ಸಂಗಡಿದ್ದು ಹೋರಾಟದಲ್ಲಿ ಸಹಾಯ ಮಾಡುವುದು ಅವರ ಉದ್ದೇಶವಾಗಿತ್ತು.

ಸೂರ್ಯನು ಅಸ್ತನಾಗುತ್ತಿದ್ದಂತೆ ಶತೃಸೈನ್ಯದ ಮುಂಚೂಣಿ ಪಡೆಗಳು ತಂಗಡಿಯ ಹತ್ತಿರ ಬಂದವು. ಶರಣರ ಯಾತ್ರಾದಳವನ್ನು ನಾಶಮಾಡಲು ಪಣತೊಟ್ಟಿದ್ದ ಮಾಧವ ನಾಯಕನು ಅದರ ಸಂಗಡಿದ್ದನು. ಮೊದಲೇ ಅಲ್ಲಿಗೆ ಬಂದಿದ್ದ ಗೂಢಚಾರರು, ಪ್ರವಾಹ ಇಳಿಯುತ್ತಿದೆಯೆಂದೂ, ಈ ರಾತ್ರಿಯೋ ನಾಳೆಯೋ ನದಿದಾಟಲು ಶರಣರು ಪ್ರಯತ್ನಿಸಬಹುದೆಂದೂ ವರದಿ ಮಾಡಿದ್ದರು. ತಡಸದ ಹಾಯ್ಗಡದಿಂದ ಸಂಜೆಗೆ ಮೊದಲೆ ಶರಣರು ಕೃಷ್ಣೆಯ ಆಚಿನ ದಡವನ್ನು ಸೇರಿದ್ದರೆಂಬುದು ಅವರಿಗೆ ತಿಳಿಯದು.

ಶಿಬಿರದಲ್ಲಿ ಎಲ್ಲ ಕಡೆ ದೀಪಗಳು ಉರಿಯುತ್ತಿರುವುದನ್ನು ಕಂಡಾಗ, ಸೈನ್ಯ ಹಿಂದಟ್ಟಿ ಬರುತ್ತಿರುವ ವಿಚಾರ ಶರಣರಿಗೆ ತಿಳಿದಿಲ್ಲವೆಂದೂ, ಹಠಾತ್ತಾಗಿ ಆಕ್ರಮಣ ಮಾಡುವುದರಿಂದ ಶರಣರನ್ನು ನಾಶಮಾಡಬಹುದೆಂದೂ ಭಾವಿಸಿ ಮಾಧವ ನಾಯಕನು ಆಕ್ರಮಣದ ಆಜ್ಞೆಯನ್ನು ಪ್ರಚಾರ ಮಾಡಿದನು.

ಅರ್ಧ ಗಳಿಗೆಯೊಳಗಾಗಿ ಇನ್ನೂರು ರಥಗಳೂ, ಐನೂರು ಮಂದಿ ರಾಹುತರ ದೊಡ್ಡ ಅಶ್ವದಳವೂ ಆಕ್ರಮಣಕ್ಕೆ ಸಿದ್ಧವಾಗಿ ಕಣಿವೆಯ ಮುಖದಲ್ಲಿ

ನಿಂತವು. ಮೊದಲು ರಾಹುತರು ಕಣಿವೆಯನ್ನು ಪ್ರವೇಶಿಸಿ, ಮಾರ್ಗ ನಿರಾಪದವಾಗಿದೆಯೆಂದು ತಿಳಿದ ಮೇಲೆ ರಥಗಳು ಹೋಗಬೇಕೆಂದು ಗೊತ್ತಾಯಿತು.

ಸಂಜೆಯಾಗುತ್ತಿದ್ದಂತೆ ಅಶ್ವಾರೋಹಿಗಳು ಕಣಿವೆಯನ್ನು ಪ್ರವೇಶಿಸಿದರು. ಎರಡು ಕಡೆಯ ಗುಡ್ಡಗಳ ಮೇಲೆ ಅವಿತಿದ್ದ ಗಣಾಚಾರಿ ಯೋಧರು ಅವರನ್ನು ತಡೆಯಲಿಲ್ಲ. ಅಶ್ವಾರೋಹಿ ದಳಗಳು ಕಣಿವೆಯನ್ನು ದಾಟಿ ಶಿಬಿರವಿದ್ದ ಬಯಲಿಗೆ ಬಂದ ಮೇಲೆ ಕಣಿವೆಯನ್ನು ಬಂಧಿಸಿ ಏಕಕಾಲದಲ್ಲಿ ಎರಡು ಕಡೆಗಳಿಂದ ಆಕ್ರಮಣ ನಡೆಸುವುದು ಅವರ ಉದ್ದೇಶವಾಗಿತ್ತು.

ಶಿಬಿರವಿದ್ದ ಬಯಲಿಗೆ ಬಂದ ಕೂಡಲೆ ರಾಹುತರ ಪಡೆಗಳು ಚಕ್ರಾಕಾರವಾಗಿ ಚದುರಿ ನಾಗಾಲೋಟದಿಂದ ಮುನ್ನುಗ್ಗಿದವು, ಶರಣರು ಬೆದರಿ ಗೂಡಾರಗಳಿಂದ ಹೊರಗೆ ಬಂದಾಗ ಭಲ್ಲೆಯಗಳಿಂದ ಇರಿದು ಅವರನ್ನು ನಾಶಮಾಡುವುದು ರಾಹುತರ ಉದ್ದೇಶವಾಗಿತ್ತು.

ಶಿಬಿರ ಜನಶೂನ್ಯವೆಂಬುದು ರಾಹುತರಿಗೆ ತಿಳಿದಿರಲಿಲ್ಲ. ಗಣಾಚಾರಿಯೋಧರು ಗೂಡಾರಗಳಿಗೆ ಅಲ್ಲಲ್ಲಿ ಎಣ್ಣೆ ಹೊಯ್ದು ದೀಪಗಳನ್ನು ಹಚ್ಚಿಟ್ಟು ಹೋಗಿದ್ದರು. ರಾಹುತರಿಗೆ ಅಡಚಣೆಯಾಗಲೆಂದು ಚಕ್ಕಡಿಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸಿದ್ದರು.

ರಾಹುತರ ಆಕ್ರಮಣದ ಮೊದಲರಭಸದಲ್ಲಿಯೇ ದೀಪಗಳು ಉರುಳಿ, ಗೂಡಾರಗಳು ಹತ್ತಿ ಉರಿಯಲು ಮೊದಲಾಯಿತು. ಕ್ಷಣಾರ್ಧದಲ್ಲಿ ಚಕ್ಕಡಿಗಳೂ ಉರಿಯತೊಡಗಿದವು. ಶರಣರು ನದೀತೀರಕ್ಕೆ ಓಡಿಹೋಗಿರಬೇಕೆಂದು ಭಾವಿಸಿ ರಾಹುತರು ಆ ಕಡೆ ಕುದುರೆಗಳನ್ನು ಓಡಿಸಿದರು. ಗಣಾಚಾರಿ ಯೋಧರು ರಚಿಸಿದ್ದ ಸಿಡಿದಾರಗಳೂ ತೋರಿಕೆಯ ಅಡ್ಡಕಟ್ಟೆಗಳೂ ಅಲ್ಲಿ ರಾಹುತರಿಗೆ ಅಡ್ಡಿಯಾದವು. ಅನೇಕ ಕುದುರೆಗಳು ಸಿಡಿದಾರಗಳಿಗೆ ಸಿಕ್ಕು ಮುಗ್ಗರಿಸಿ ಬಿದ್ದವು. ಇನ್ನು ಕೆಲವು ಕುದುರೆಗಳು ಅಡ್ಡಕಟ್ಟೆಗಳನ್ನು ದಾಟಿ ರಾಹುತರೊಡನೆ ನದಿಗೆ ಬಿದ್ದು ಪ್ರವಾಹದಲ್ಲಿ ತೇಲಿಹೋದವು. ಈ ಅನುಕೂಲವಸರಕ್ಕಾಗಿ ಕಾಯುತ್ತಿದ್ದ ಗಣಾಚಾರಿ ಯೋಧರು ಗುಡ್ಡಗಳಿಂದಿಳಿದು ಕತ್ತಿ, ಗದೆ, ದೊಣ್ಣೆ ಮುಂತಾದ ಆಯುಧಗಳನ್ನು ತಿರುಗಿಸುತ್ತ ರಾಹುತರ ಮೇಲೆ ಬಿದ್ದರು. ಅರ್ಧ ಗಳಿಗೆ ಹೋರಾಟ ನಡೆದು ಆಕ್ರಮಣ ನಡೆಸಿದ ಐನೂರು ಮಂದಿ ರಾಹುತರಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ಹತರಾದರು. ಬೆಂಕಿಗೆ ಬೆದರಿದ ಕುದುರೆಗಳೂ ರಾಹುತರನ್ನು ಕೆಳಗೆ ತಳ್ಳಿ ದಿಕ್ಕಾಪಾಲಾಗಿ ಓಡಿದವು. ಬೆದರಿದ ಕುದುರೆಗಳ ಕಾಲುಗಳಿಗೆ ಸಿಕ್ಕು ರಾಹುತರನೇಕರು ಸತ್ತರು. ಅಳಿದುಳಿದವರು ಭೀತಿಯಿಂದ ಕಣಿವೆಯ ಕಡೆ ಓಡಿದರು.

ಅಲ್ಲಿ ಅವರಿಗೆ ಬೇರೊಂದು ಮೃತ್ಯು ಕಾದಿತ್ತು. ಕುದುರೆಗಳ ಹಿಂದೆ ರಥಗಳ ಮೇಲೆ ಬಂದ ಬಿಲ್ಲುಗಾರರು ಎದುರಿಗೆ ಓಡಿ ಬರುತ್ತಿರುವವರು ಶರಣರೆಂದು ಭಾವಿಸಿ ತಡೆಗಟ್ಟಿ ಕೊಂದರು. ತಮಗಾದ ಸೋಲನ್ನು ಮಾಧವ ನಾಯಕನಿಗೆ ವರದಿ ಮಾಡಲು ಒಬ್ಬ ರಾಹುತನೂ ಉಳಿಯಲಿಲ್ಲ.

ರಾಹುತರಿಗಾದ ಗತಿಯೇ ರಥಗಳಿಗೂ ಕಾದಿತ್ತು, ಆ ವಿಧ್ವಂಸಕ ಬಯಲಿನಲ್ಲಿ. ಉರಿಯುತ್ತಿದ್ದ ಶಿಬಿರದ ಹತ್ತಿರ ಬಂದ ಕೂಡಲೆ ಕುದುರೆಗಳು ಬೆದರಿ ನಿಂತವು. ಆಯಕಟ್ಟಿನ ಸ್ಥಳಗಳಲ್ಲಿ ಅವಿತು ನಿಂತಿದ್ದ ಗಣಾಚಾರಿ ಯೋಧರು ಬಾಣಗಳ ಸುರಿ ಮಳೆಗರೆದರು. ಬಾಣ ಯಾವ ಕಡೆಯಿಂದ ಬರುತ್ತಿದೆಯೆಂಬುದನ್ನು ತಿಳಿಯಲೂ ರಥಿಕರು ಶಕ್ತರಾಗಲಿಲ್ಲ. ಅವರಲ್ಲನೇಕರು ರಥಗಳಲ್ಲಿ ಇದ್ದಂತೆಯೆ ಪ್ರಾಣಬಿಟ್ಟರು. ಇನ್ನು ಕೆಲವರು ಬೆಂಕಿಗೆ ಸಿಕ್ಕು ಸತ್ತರು. ಕೆಲವು ರಥಗಳು ನದಿಗೆ ಬಿದ್ದು ಪ್ರವಾಹದಲ್ಲಿ ತೇಲಿಹೋದವು. ಅನೇಕ ಕುದುರೆಗಳೂ ಆಯುಧೋಪಕರಣಗಳೂ ಗಣಾಚಾರಿ ಯೋಧರ ವಶವಾದವು.

ಕಣಿವೆಯ ಮುಖದಲ್ಲಿದ್ದ ಮಾಧವ ನಾಯಕನಿಗೆ ಮಧ್ಯರಾತ್ರಿಯ ಹೊತ್ತಿಗೆ ಪರಾಭವದ ಸುದ್ದಿ ಮುಟ್ಟಿತು. ತಡಸದ ಹಾಯ್ಗಡದಿಂದ ಶರಣರು ಸಂಜೆಗೆ ಮೊದಲೇ ನದಿ ದಾಟಿದರೆಂದು ತಿಳಿಯಿತು. ಕೋಪ–ಉದ್ರೇಕಗಳಿಂದ ತಳಮಳಿಸುತ್ತ ಅವನು, ಸೈನ್ಯಮಧ್ಯದ ತನ್ನ ಗೂಡಾರದಲ್ಲಿ ಸೂರ್ಯೋದಯಕ್ಕಾಗಿ ಕಾಯುತ್ತ ನಿದ್ರೆಯಿಲ್ಲದೆ ರಾತ್ರಿಯನ್ನು ಕಳೆದನು.

ಶಿಬಿರದ ಪಾರ್ಶ್ವದಲ್ಲಿದ್ದ ಸಣ್ಣಗುಡ್ಡದ ಮೇಲೆ ನಿಂತು ಈ ವಿಸ್ಮಯಕರ ಯುದ್ಧವನ್ನು ವೀಕ್ಷಿಸಿದ ಚೆನ್ನಬಸವಣ್ಣ ಮಾಚಿದೇವರು ಇದೇ ಬಗೆಯ ಇನ್ನೊಂದು ಸಂದಿಗ್ಧದಲ್ಲಿ ಬಿದ್ದಿದ್ದರು. ಸದ್ಯದಲ್ಲಿ ಗಣಾಚಾರಿ ಯೋಧರಿಗೆ ಜಯವಾಗಿದ್ದರೂ ಶರಣರು ವಿಪತ್ತಿನಿಂದ ಪಾರಾಗಿಲ್ಲವೆಂದು ಅವರಿಗೆ ತಿಳಿದಿತ್ತು. ನದಿ ದಾಟಿದ ಯಾತ್ರಾದಳ ಮುಂದೆ ಉಳಿವೆಯನ್ನು ಸೇರುವುದು ಹೇಗೆ ? ಎಂದು ಅವರು ಯೋಚಿಸುತ್ತಿದ್ದರು.

ಗಣಾಚಾರಿ ಯೋಧ ದಳಗಳ ನಾಯಕನು ಆಗ ಅಲ್ಲಿಗೆ ಬಂದು, "ತಡಸದ ಹಾಯ್ಗಡ ಶತ್ರುಗಳ ವಶವಾಯಿತು. ಒಂದು ತೆಪ್ಪ ಮತ್ತು ಕೆಲವು ದೋಣಿಗಳನ್ನು ಅವರು ಹಿಡಿದಿದ್ದಾರೆ," ಎಂದು ಹೇಳಿದನು.

"ಹಾಗಾದರೆ ಸೈನಿಕ ಪಡೆಗಳು ನದಿಯನ್ನು ದಾಟಿ ಯಾತ್ರಾದಳದ ಮೇಲೆ ಬೀಳಬಹುದಲ್ಲವೆ?"

–ಚೆನ್ನಬಸವಣ್ಣನವರು ಕಾತರಗೊಂಡು ನುಡಿದರು.

"ಆ ಭಯವಿಲ್ಲ, ಅಣ್ಣನವರೆ. ಪ್ರವಾಹ ಪುನಃ ಹೆಚ್ಚುತ್ತಿದೆ. ಇನ್ನೆರಡು ದಿನಗಳು ನದಿಯನ್ನು ದಾಟುವುದು ಯಾರಿಗೂ ಸಾಧ್ಯವಲ್ಲ."

–ಗಣಾಚಾರಿ ನಾಯಕನು ಉತ್ತರಿಸಿದನು.

"ಕಲಿದೇವರ ದೇವನು ಶರಣರನ್ನು ರಕ್ಷಿಸಿದನು, ನಾಯಕ. ಈ ರಾತ್ರಿಯೇ ಈ ಸ್ಥಳವನ್ನು ಬಿಡುವುದು ನನ್ನ ಉದ್ದೇಶವಾಗಿತ್ತು. ಅದಕ್ಕಾಗಿಯೇ ತೆಪ್ಪ ದೋಣಿಗಳನ್ನು ತರುವಂತೆ ಅಂಬಿಗರಿಗೆ ಹೇಳಿದ್ದೆ. ಈಗ ಆ ಆಸೆ ಮಣ್ಣುಗೂಡಿತು."

–ವಿಷಣ್ಣತೆಯಿಂದ ನುಡಿದರು ಮಾಚಿದೇವರು.

ತುಸು ಹೊತ್ತಿನ ಮೇಲೆ ಗಣಾಚಾರಿ ನಾಯಕನು ನಿಟ್ಟುಸಿರಿಟ್ಟು ಹೇಳಿದನು: "ಕಣಿವೆಗೆ ನುಗ್ಗಿ ಬಂದ ಶತೃ ರಾಹುತರು ನಮ್ಮ ಬಲೆಯಲ್ಲಿ ಸಿಕ್ಕು ಹತರಾದಂತೆ ಈಗ ನಾವು ಶತೃಗಳ ಪಂಜರದಲ್ಲಿ ಸಿಕ್ಕಿ ಬಿದ್ದಿದ್ದೇವೆ, ಅಣ್ಣನವರೆ. ನದಿಯ ಹೊರತಾಗಿ ಉಳಿದೆಲ್ಲ ಕಡೆ ಶತೃ ಸೈನ್ಯ ನಮ್ಮನ್ನು ಸುತ್ತುಗಟ್ಟಿದೆ. ಬೆಳಕು ಹರಿಯುತ್ತಲೆ ಸೈನ್ಯ ನಮ್ಮ ಮೇಲೆ ಬೀಳುತ್ತದೆ. ನದಿ ದಾಟಿ ತಪ್ಪಿಸಿಕೊಳ್ಳಲು ಪ್ರವಾಹ ಅಡ್ಡಿಯಾಗಿದೆ. ಹೋರಾಡಿ ಶತೃವನ್ನು ಸೋಲಿಸುವುದು, ಇಲ್ಲವೇ ಹತರಾಗಿ ವೀರಸ್ವರ್ಗ ಪಡೆಯುವುದು, ಇವೆರಡೇ ಈಗ ನಮಗುಳಿದಿರುವ ಮಾರ್ಗ."

ನಾಯಕನ ನಿರಾಶೆಯ ನುಡಿ ಕೇಳಿ ಮಾಚಿದೇವರ ಚೈತನ್ಯ ಎಚ್ಚೆತ್ತಿತು. ನಸು ನಕ್ಕು ಅವರು ಹೇಳಿದರು : "ನಿರಾಶರಾಗುವ ಕಾರಣವಿಲ್ಲ, ತಮ್ಮ. ಇಂದು ಮುಂಜಾವಿಯಲ್ಲಿ ಶರಣರ ಯಾತ್ರಾದಳವನ್ನು ನದಿ ದಾಟಿಸುವೆವೆಂಬ ಭರವಸೆ ನಮಗಿರಲಿಲ್ಲ. ಕಲಿದೇವರ ದೇವನ ದಯೆಯಿಂದ ಆ ಕಾರ್ಯ ಸುಗಮವಾಗಿ ನಡೆಯಿತು. ನಮ್ಮನ್ನು ನಾಶಮಾಡಲು ಬಂದ ರಾಹುತರು ದೀಪಕ್ಕೆರಗಿದ ಚಿಟ್ಟೆಗಳಂತೆ ತಮ್ಮ ಅವಿವೇಕದಿಂದ ತಾವೇ ನಾಶವಾದರು. ಇದುವರೆಗೆ ನಮ್ಮನ್ನು ರಕ್ಷಿಸಿದ ಆ ಅದೃಷ್ಟ ಶಕ್ತಿ ಮುಂದೆಯೂ ನಮ್ಮನ್ನು ರಕ್ಷಿಸುವುದು. ನಾಳಿನ ಯುದ್ಧದಲ್ಲಿ ನನ್ನ ಎರಡು ನಿಬಂಧನೆಗಳಿವೆ. ಅದರಂತೆ ನೀನು ನಡೆಯಬೇಕು.

ನಾಯಕನು ನಡೆಯುವುದಾಗಿ ಒಪ್ಪಿಕೊಂಡನು.

ಮಾಚಿದೇವರು ಹೇಳಿದರು : "ನಾಳಿನ ದಿನ ನಾವು ಮಾಧವ ನಾಯಕನ ಆಕ್ರಮಣಕ್ಕಾಗಿ ಎದುರು ನೋಡದೆ ಬೆಳಕು ಹರಿಯುವ ಮುನ್ನ ನಾವೇ ಶತೃ ಶಿಬಿರದ ಮೇಲೆ ಆಕ್ರಮಣ ನಡೆಸಬೇಕು. ಇದು ನಿನಗೊಪ್ಪಿಗೆಯಾದರೆ ನನ್ನ ಎರಡನೆಯ ನಿಬಂಧನೆಯನ್ನು ಹೇಳುತ್ತೇನೆ."

"ನಾನು ಕೂಡ ಅದನ್ನೇ ಯೋಚಿಸುತ್ತಿದ್ದೆ, ಅಣ್ಣನವರೆ. ಶತೃವಿಗೆ ವಿಶ್ರಮಿಸಿಕೊಳ್ಳುವ ಅವಕಾಶವನ್ನೂ ಕೊಡದೆ ನಾವೇ ಆಕ್ರಮಣ ಮಾಡುವುದರಿಂದ

ವಿಜಯ ದೊರಕಿದರೂ ದೊರಕಬಹುದು," ಎಂದು ನಾಯಕನು ಮಾಚಿದೇವರ ಸಲಹೆಗೆ ಒಪ್ಪಿಗೆ ಕೊಟ್ಟನು.

ಮಾಚಿದೇವರು ಮುಂದುವರೆಸಿ ಹೇಳಿದರು : "ನಾನು ಮತ್ತು ಚೆನ್ನಬಸವಣ್ಣನವರು ನಾಳಿನ ಯುದ್ಧದಲ್ಲಿ ಶಸ್ತ್ರ ಹಿಡಿದು ನಿಮ್ಮ ಪಾರ್ಶ್ವದಲ್ಲಿ ನಿಂತು ಹೋರಾಡುತ್ತೇವೆ. ಅದಕ್ಕಾಗಿ ನಮಗೆ ಬೇಕಾದ ಕವಚ, ಶಿರಸ್ತ್ರಾಣ, ಕತ್ತಿ, ಗುರಾಣಿ, ಮೊದಲಾದವುಗಳನ್ನು ತಂದು ಕೊಡಬೇಕಾಗುವುದು."

ಮಾಚಿದೇವರ ರಣೋತ್ಸಾಹವನ್ನು ಕಂಡು ನಾಯಕನು ಆಶ್ಚರ್ಯದಿಂದ, "ನೀವು ಹಿಂದೆ ಚಾಲುಕ್ಯ ಸೈನ್ಯದಲ್ಲಿ ಅಧಿಕಾರಿಯಾಗಿದ್ದವರು, ಅಣ್ಣನವರೆ. ಅಭ್ಯಾಸ ಮಾಡಿದ ಅಸ್ತ್ರವಿದ್ಯೆ ನಿಮಗೆ ಮರೆತಿರಲಾರದು. ಆದರೆ ಚಿಕ್ಕ ಡಣ್ಣಾಯಕರು, ಹಿಂದೆ ಯಾವಾಗಲೂ ಶಸ್ತ್ರ ಹಿಡಿದವರಲ್ಲ. ಈಗ ಅವರು ಕತ್ತಿ ಹಿಡಿದು ಹೋರಾಡುವುದೆಂದರೆ....." ಎಂದು ಸಂದೇಹದಲ್ಲಿ ಮುಗಿಸಿದನು.

"ನಾನು ಶಸ್ತ್ರ ಹಿಡಿಯುವುದು ಒಂದು ಗೊತ್ತಾದ ಉದ್ದೇಶದಿಂದ, ನಾಯಕರೆ," ಚೆನ್ನಬಸವಣ್ಣನವರು ಹೇಳಿದರು. "ವಿಪತ್ತು ಎದುರಿಗೆ ನಿಂತಾಗ ಸರ್ವಸಂಗ ಪರಿತ್ಯಾಗಿಯಾದ ಜಂಗಮನೂ ಆತ್ಮರಕ್ಷಣೆಗಾಗಿ ಶಸ್ತ್ರ ಹಿಡಿಯಬೇಕು. ಇದು ಆಪದ್ಧರ್ಮ. ನಾನು ಹೋರಾಡಲು ಶಕ್ತನೆಂದಾಗಲಿ, ನನ್ನಿಂದ ನಿಮಗೆ ಸಹಾಯವಾಗುವುದೆಂದಾಗಲಿ ನಾನು ಭಾವಿಸಿಲ್ಲ. ಆದರೆ ನಾನು ನನ್ನ ಕರ್ತವ್ಯ ಕರ್ಮವನ್ನು ನೆರವೇರಿಸಬೇಕಲ್ಲವೆ?"

ಈ ವಿವರಣೆ ಗಣಾಚಾರಿ ನಾಯಕನಿಗೆ ಅರ್ಥವಾಯಿತೋ ಇಲ್ಲವೋ, ಬೇಕಾದ ತೊಡಿಗೆ ಆಯುಧಗಳನ್ನು ಕೂಡಲೆ ತಂದುಕೊಡಲು ಅವನು ಒಪ್ಪಿಕೊಂಡನು.

ಮರುದಿನ ಸೂರ್ಯೋದಯಕ್ಕೆ ಎರಡು ಗಳಿಗೆ ಇರುವಾಗ ಗಣಾಚಾರಿ ಯೋಧರು ಕಣಿವೆಯ ಆ ಪಾರ್ಶ್ವದಲ್ಲಿದ್ದ ಮಾಧವ ನಾಯಕನ ಶಿಬಿರದ ಮೇಲೆ ದಾಳಿ ಮಾಡಿದರು. ನಿಂತಲ್ಲಿಯೇ ನಿದ್ರಿಸುತ್ತಿದ್ದ ಪದಾತಿಗಳೂ ಇನ್ನೂ ಎದ್ದಿರಲಿಲ್ಲ. ಕುದುರೆಗಳಿಗೆ ಜೀನು ಕಡಿವಾಣ ಚರ್ಮಪೀಠಗಳನ್ನು ತೊಡಿಸುವುದರಲ್ಲಿ ರಾಹುತರು ನಿರತರಾಗಿದ್ದರು. ರಥಿಕರು ಸಾರಥಿಗಳನ್ನು ಹುಡುಕುತ್ತಿದ್ದರು. ಸೂರ್ಯೋದಯಾ ನಂತರ ಕಣಿವೆಯನ್ನು ದಾಟಿ ಶರಣರ ಮೇಲೆ ಆಕ್ರಮಣ ನಡೆಸಬೇಕೆಂದು ಮಾಧವ ನಾಯಕನು ಸೈನ್ಯಾಧಿಕಾರಿಗಳಿಗೆ ಆಜ್ಞೆ ಮಾಡಿದ್ದನು.

ಹಠಾತ್ತಾಗಿ, ಯಾವ ಮುನ್ಸೂಚನೆಯೂ ಇಲ್ಲದೆ, ಕಣಿವೆಯ ಕಡೆಯಿದ್ದ ಶಿಬಿರದ ಅಂಚಿನಲ್ಲಿ ಪ್ರಾರಂಭವಾದ ದಾಳಿ ಅರ್ಧಗಳಿಗೆಯೊಳಗಾಗಿ ಎಲ್ಲ ಕಡೆ

ಹರಡಿತು. ಅನೇಕ ಮಂದಿ ಪದಾತಿಗಳು ಮಲಗಿದ್ದಂತೆಯೇ ಹತರಾದರು. ಕುದುರೆಗಳನ್ನು ಸಜ್ಜುಗೊಳಿಸುತ್ತಿದ್ದಂತೆ ರಾಹುತರನೇಕರು ಮಡಿದರು. ಸಾರಥಿಯನ್ನು ಹುಡುಕುತ್ತಿದ್ದ ರಥಿಕರಿಗೆ ಗಣಾಚಾರಿ ಯೋಧರ ಕತ್ತಿಗಳು ಮೃತ್ಯುವಾದವು. ಗಣಾಚಾರಿ ಯೋಧರು ಶೌರ್ಯ ಸಾಹಸಗಳಿಂದ ಮುನ್ನುಗ್ಗಿ ಶಿಬಿರದ ನಡುವೆ ಇದ್ದ ಮಾಧವ ನಾಯಕನ ಗೂಡಾರವನ್ನು ಸುತ್ತುಗಟ್ಟಿದರು.

ಆಗ ತಾನೆ ಎಚ್ಚೆತ್ತು ಕಣ್ಣೊರೆಸಿಕೊಳ್ಳುತ್ತಿದ್ದ ಮಾಧವ ನಾಯಕನು, ಗಲಭೆಯ ಸದ್ದು ಕೇಳಿ, ತಟ್ಟನೆ ಎದ್ದು ಕತ್ತಿ ಹಿಡಿದು ಹೊರಗೆ ಬಂದನು. ಗಣಾಚಾರಿ ಯೋಧರ ಒಂದು ತಂಡ ಅವನಿಗೆ ಎದುರಾಯಿತು. ಸ್ವಯಂ ಮಾಚಿದೇವರು ಅದರ ಮುಂದಾಳಾಗಿದ್ದರು. ಗಣಾಚಾರಿ ನಾಯಕನೂ ಚೆನ್ನಬಸವಣ್ಣನವರೂ ಸಂಗಡಿದ್ದರು.

ಮಾಧವ ನಾಯಕನನ್ನು ನೋಡುತ್ತಲೆ ಮಾಚಿದೇವರು, "ಕಲಿದೇವರ ದೇವ ಉಘೇ ! ಉಘೇ !" ಎಂದು ಜಯಕಾರ ಮಾಡಿ ಕತ್ತಿಯನ್ನು ಬೀಸುತ್ತ ಮೇಲೆ ಬಿದ್ದರು. ಶರಣರ ನಾಶಕ್ಕಾಗಿ ಪಣ ತೊಟ್ಟಿದ್ದ ಮಾಧವ ನಾಯಕನ ವಿಚಾರವನ್ನು ತಮ್ಮೊಬ್ಬರಿಗೆ ಬಿಡಬೇಕೆಂದು ಮಾಚಿದೇವರು ಮೊದಲೇ ಗಣಾಚಾರಿ ನಾಯಕನಿಗೆ ಹೇಳಿದ್ದರು. ಅದರಂತೆ ಗಣಾಚಾರಿ ಯೋಧರು ಮಾಧವ ನಾಯಕನ ಸಹಾಯಕ್ಕೆ ಬಂದ ಶಿಬಿರ ರಕ್ಷಕರನ್ನು ಹಿಂದಕ್ಕಟ್ಟಿ ಮಾಚಿದೇವ ಮಾಧವ ನಾಯಕರ ಕತ್ತಿ ಕಾಳಗಕ್ಕೆ ಎಡೆಮಾಡಿಕೊಟ್ಟರು.

ಶಸ್ತ್ರಗಳನ್ನು ತ್ಯಜಿಸಿ ಸನ್ಯಾಸಿಯಾಗಿ ಜಂಗಮದೀಕ್ಷೆ ಪಡೆದು ಇಪ್ಪತ್ತು ವರ್ಷಗಳು ಕಳೆದಿದ್ದರೂ ಮಾಚಿದೇವರು ಖಡ್ಗಯುದ್ಧದ ವರಿಸೆ ಪಟ್ಟುಗಳನ್ನು ಮರೆತಿರಲಿಲ್ಲ. ಕಾದಿಟ್ಟ ಆಪದ್ಧನದಂತೆ ಅದು ಅವರಿಗೆ ನೆರವಾಯಿತು. ಕೌಶಲದಿಂದ ಅವರು ಕಾಳಗವನ್ನು ಮೊದಲು ಮಾಡಿದರು.

ಜಂಗಮವೇಷದ ವೃದ್ಧಯೋಧನೊಬ್ಬನು ತನ್ನೊಡನೆ ಸೆಣಸಲು ಮುಂದಾದುದನ್ನು ಕಂಡು ಕ್ಷಣಕಾಲ ಸ್ತಬ್ಧನಾಗಿದ್ದ ಮಾಧವ ನಾಯಕನು, ಆಕ್ರಮಣದ ತೀವ್ರತೆಯಿಂದ ಚಮತ್ಕೃತನಾಗಿ ಮಿಂಚಿನಂತೆ ಹಾರಿ ಕತ್ತಿಯಾಡಿಸುತ್ತ ಪ್ರತಿಭಟಿಸಿದನು. ಪಟ್ಟಿಗೆ ಪಟ್ಟು, ವರಿಸೆಗೆ ವರಿಸೆ, ಈ ಅನುಕ್ರಮದಲ್ಲಿ ಕೊಂಚ ಕಾಲ ಕಾಳಗ ನಡೆಯಿತು. ಕೊನೆ ಕೊನೆಗೆ ಮಾಚಿದೇವರ ಕೈಚಳಕ ಹೆಚ್ಚಿತು. "ಉಘೇ ! ಉಘೇ! ಕಲಿದೇವರ ದೇವ !" ಎಂದು ಬೊಬ್ಬಿಡುತ್ತ ಅವರು ಮುನ್ನುಗ್ಗಿ ಕತ್ತಿಯಿರಿದಾಗ ಮಾಧವ ನಾಯಕನು ಆಹತನಾಗಿ ಕೆಳಗುರುಳಿದನು. ಅವನ ಕೊನೆ ಸಮೀಪಿಸಿದಂತೆ ಕಂಡಿತು. ಅಷ್ಟರಲ್ಲಿ ಶಿಬಿರದ ಮತ್ತೊಂದು ಕಡೆಯಿಂದ ತಮ್ಮ ನಾಯಕನ ರಕ್ಷಣೆಗಾಗಿ

ಓಡುತ್ತ ಬಂದ ಹಲವಾರು ಮಂದಿ ಸೈನಿಕರು ಏಕಕಾಲದಲ್ಲಿ ಮಾಚಿದೇವರ ಮೇಲೆ ಬಿದ್ದು ಗಾಯಗೊಳಿಸಿದರು.

ಕೂಡಲೆ ಗಣಾಚಾರಿ ಯೋಧರೂ ನಾಯಕನೂ ಮಾಚಿದೇವರ ಸಹಾಯಕ್ಕೆ ಹೋದರು. ಆಮೇಲಿನ ತುಮುಲಯುದ್ಧದಲ್ಲಿ ಚೆನ್ನಬಸವಣ್ಣನವರಿಗೂ ಗಾಯಗಳಾದವು. ಸೈನಿಕರು ದಳಬದ್ಧರಾಗಿ ತಮ್ಮ ಮೇಲೆರಗಲು ಬರುತ್ತಿರುವುದನ್ನು ಕಂಡಾಗ ಗಣಾಚಾರಿ ನಾಯಕನು ತನ್ನ ಕಡೆಯವರಿಗೆ ಹಿಮ್ಮೆಟ್ಟಲು ಆಜ್ಞೆ ಮಾಡಿದನು.

ಶಿಬಿರದ ಬೇರೆ ಕಡೆಗಳಲ್ಲಿಯೂ ಇದೇ ಪರಿಸ್ಥಿತಿ ಒದಗಿತ್ತು. ಹಠಾತ್ತನೆ ನಡೆದ ಆಕ್ರಮಣದಿಂದ ತಲ್ಲಣಗೊಂಡಿದ್ದ ಸೈನಿಕರು ಚೇತರಿಸಿಕೊಂಡು ದಳಬದ್ಧರಾಗಿ ಗಣಾಚಾರಿ ಯೋಧರ ಮೇಲೆ ಬಿದ್ದರು. ಸಂಖ್ಯಾಬಲದ ಒತ್ತಡದಿಂದ ಗಣಾಚಾರಿ ಯೋಧರು ಹಿಮ್ಮೆಟ್ಟಬೇಕಾಯಿತು. ಗಾಯಗೊಂಡವರನ್ನು ಎತ್ತಿಕೊಂಡು ಅವರು ಪುನಃ ಕಣಿವೆಯನ್ನು ಪ್ರವೇಶಿಸುತ್ತಿದ್ದಂತೆ ಸೂರ್ಯೋದಯವಾಯಿತು. ಕಣಿವೆಯ ಆಯಕಟ್ಟಿನ ಸ್ಥಳಗಳಲ್ಲಿ ನಿಂತು ಕಾದಾಡುತ್ತ ಮಡಿಯಲು ಅವರು ನಿರ್ಧರಿಸಿ ಕೊಂಡರು. ವಿಜಯದ ಭರವಸೆಯಿಂದ ಪ್ರಾರಂಭವಾದ ಆಕ್ರಮಣ ಕಗ್ಗೊಲೆಯ ಪರಾಜಯದಲ್ಲಿ ಮುಗಿಯಲು ಹೆಚ್ಚು ಹೊತ್ತು ಉಳಿದಿರಲಿಲ್ಲ. ಪದಾತಿಗಳು, ರಾಹುತರು ತಂಡ ತಂಡವಾಗಿ ಅವರ ಮೇಲೆ ಬೀಳಲು ಬರುತ್ತಿದ್ದರು.

ಅಷ್ಟರಲ್ಲಿ, ಸೈನ್ಯಶಿಬಿರದ ಹೊರಗಡೆ ಅಂಚಿನಲ್ಲಿ, "ಹರ ! ಹರ ! ಮಹಾದೇವ! ಎಂಬ ಜಯಘೋಷ ಕೇಳಿಸಿತು. ಕೂಡಲ ಸಂಗಮದಿಂದ, ಅಗ್ಗಳನ ನೇತೃತ್ವದಲ್ಲಿ ಶರಣರ ರಕ್ಷಣೆಗಾಗಿ ಹೊರಟಿದ್ದ ಉತ್ತರಾಪಥದ ಜಂಗಮರ ತಂಡ ತಂಗಡಿಯನ್ನು ಸೇರಿ ಮಾಧವ ನಾಯಕನ ಸೈನ್ಯದ ಮೇಲೆ ಆಕ್ರಮಣ ಮಾಡಲು ಪ್ರಾರಂಭಿಸಿದ್ದರು.

ಆ ಜಂಗಮರ ವಿಚಿತ್ರ ವೇಷಭೂಷಣಗಳು, ವಿಕೃತ ಕಂಠದಿಂದ ಅವರು ಕೂಗುತ್ತಿದ್ದ ಜಯಘೋಷಗಳ ಅಬ್ಬರ, ಅವರು ಹಿಡಿದಿದ್ದ ಖಡ್ಗ ಪರಶು ತೋಮರ ಗದೆ ಭಲ್ಲೆ ಮೊದಲಾದ ಆಯುಧಗಳು, ಇವುಗಳಿಂದ ಸೈನಿಕರು ಬೆಬ್ಬೆರಗಾದರು. ತಂಡದ ನಾಯಕನು ಎರಡೂ ಕೈಗಳಲ್ಲಿ ಪರಶು ಗದೆಗಳನ್ನು ತಿರುಗಿಸುತ್ತ ಮುನ್ನುಗ್ಗುತ್ತಿರುವುದನ್ನು ಕಂಡು ಅವರು, ಶರಣರ ರಕ್ಷಣೆಗಾಗಿ ಶಿವಗಣಗಳ ಮೃತ್ಯು ತಂಡ ಕೈಲಾಸದಿಂದ ಭೂಮಿಗಿಳಿದಿದೆಯೆಂದು ಭಾವಿಸಿದರು. ಸೈನಿಕರಲ್ಲಿ ಕೆಲವರು ಭಯದಿಂದ ಚೀರಿ ರಕ್ತಕಾರುತ್ತ ಸತ್ತರು. ಧೈರ್ಯದಿಂದ ಎದುರಾದವರು ಜಂಗಮರ ಆಯುಧಗಳಿಗೆ ಬಲಿಯಾದರು. ಇನ್ನುಳಿದವರು ಶಸ್ತ್ರಗಳನ್ನು ಬಿಸುಟು ಕಲ್ಯಾಣದತ್ತ ಓಡಿದರು. ಕೆಲವೇ ಕ್ಷಣಗಳಲ್ಲಿ ಮಾಧವ ನಾಯಕನ ಮಹಾಸೈನ್ಯ ದೆಸೆಗೆಟ್ಟ ಸಂತ್ರಸ್ತರ ಗೊಂದಲಪುರವಾಯಿತು.

ಗಾಯಗೊಂಡು ನರಳುತ್ತ ಡೋಲಿಯಲ್ಲಿ ಬಿದ್ದಿದ್ದ ಮಾಧವ ನಾಯಕನಿಗೆ ಹೊಸ ಆಕ್ರಮಣದ ವಾರ್ತೆ ವರದಿಯಾದಾಗ ಸೈನ್ಯ ಕಲ್ಯಾಣಕ್ಕೆ ಹಿಂದಿರುಗುವಂತೆ ಆಜ್ಞೆ ಮಾಡಿದನು. ಪೂರ್ವಾಹ್ನ ಮೊದಲನೆಯ ಪ್ರಹರ ಮುಗಿಯುವಷ್ಟರಲ್ಲಿ ಕಣಿವೆಯಾಚಿನ ಸೈನ್ಯ ಶಿಬಿರ ಜನಶೂನ್ಯವಾಯಿತು. ಸೈನಿಕರು ಬಿಟ್ಟು ಹೋದ ಗೂಡಾರಗಳು, ಚಕ್ಕಡಿಗಳು, ಸಾಮಾನು ಸರಂಜಾಮುಗಳು, ಎತ್ತುಗಳು, ಕುದುರೆಗಳು ಗಣಾಚಾರಿ ಯೋಧರ ವಶವಾದವು.

ಕಾಳಗ ಮುಗಿದ ಮೇಲೆ ಅಗ್ಗಳನೂ, ಜಂಗಮ ತಂಡದ ನಾಯಕನೂ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ ಮಾಚಿದೇವ, ಚೆನ್ನಬಸವಣ್ಣನವರನ್ನು ನೋಡಿದರು.

“ಕಲಿದೇವರ ದೇವನ ಸಹಾಯಕ್ಕಾಗಿ ಕೂಡಲ ಸಂಗಮ ದೇವನು ನಿಮ್ಮನ್ನಿಲ್ಲಿಗೆ ಕಳುಹಿಸಿದನು, ಅಗ್ಗಳ. ನೀವು ಸಮಯಕ್ಕೆ ಸರಿಯಗಿ ಬಂದಿದ್ದರಿಂದ ನಾವು ಉಳಿದು ಕೊಂಡೆವು,” ಎಂದು ಅವರು ಅಗ್ಗಳನನ್ನೂ, ಜಂಗಮ ತಂಡದ ನಾಯಕನನ್ನೂ ಅಭಿನಂದಿಸಿ ವಂದನೆ ಸಲ್ಲಿಸಿದರು.

ಸುತ್ತಲ ಪ್ರದೇಶದಲ್ಲಿ ಸಾಂಕ್ರಾಮಿಕ ಹರಡದಿರಲೆಂದು ಗಣಾಚಾರಿ ಯೋಧರು ಯುದ್ಧದಲ್ಲಿ ಮಡಿದವರೆಲ್ಲರ ಅಂತ್ಯ ಸಂಸ್ಕಾರ ನಡೆಸಿದರು. ಸಂಜೆಯ ಹೊತ್ತಿಗೆ ಈ ಕಾರ್ಯ ಮುಗಿಯಿತು. ಕೃಷ್ಣೆಯ ಎರಡು ತಂಡಗಳಲ್ಲಿದ್ದ ತೆಪ್ಪಗಳೂ ದೋಣಿಗಳೂ ತಂಗಡಿಯ ಹಾಯ್ಗಡಕ್ಕೆ ಬಂದವು. ಹಠಾತ್ತಾಗಿ ಹೆಚ್ಚಿದ್ದ ಪ್ರವಾಹ ಪುನಃ ಇಳಿಮುಖವಾಯಿತು. ಆ ರಾತ್ರಿಯೇ ಗಣಾಚಾರಿ ಯೋಧದಳಗಳೂ, ಅವರ ಸಂಗಡಿದ್ದ ಮಾಚಿದೇವ, ಚೆನ್ನಬಸವಣ್ಣ, ಕೂಗಿನ ಮಾರಿತಂದೆ, ಶೂಲದ ಬೊಮ್ಮಯ್ಯ ಇವರೇ ಮುಂತಾದ ಶರಣರೂ, ಉತ್ತರಾಪಥದ ಜಂಗಮರೂ ನದಿಯನ್ನು ದಾಟಿ ಆಚಿನ ದಡದಲ್ಲಿದ್ದ ಶರಣರ ಯಾತ್ರಾದಳವನ್ನು ಸೇರಿದರು.

ಆಮೇಲಿನ ಕೆಲವು ದಿನಗಳಲ್ಲಿ ಯಾವ ದುರ್ಘಟನೆಯೂ ಇಲ್ಲದೆ ಶರಣರು ಮಲಪ್ರಭಾ ಘಟಪ್ರಭಾ ನದಿಗಳನ್ನು ದಾಟಿದರು. ಅಲ್ಲಿಂದ ಉಳಿವೆಯ ಮಾರ್ಗ ನಿರಾಪದವೆಂದು ತಿಳಿದಿದ್ದ ಮಾಚಿದೇವರು ಕುರುಗೋಡಿನ ಜಲಾಶಯದಲ್ಲಿ ಅಸ್ತ್ರಗಳನ್ನು ತೊಳೆದು ಗಣಾಚಾರಿ ಯೋಧರಿಗೊಪ್ಪಿಸಿ, ಶರಣರಿಂದ ಬೀಳ್ಕೊಂಡು ತಮ್ಮ ಸ್ವಸ್ಥಾನವಾದ ಹಿಪ್ಪರಗಿಗೆ ಹಿಂದಿರುಗಿ ಲಿಂಗೈಕ್ಯರಾದರು.

“ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು, ನೋಡಾ !
ಒಬ್ಬ ಜಂಗಮನ ಅಭಿಮಾನದಿಂದ
ಚಾಲುಕ್ಯ ರಾಯನ ಆಳ್ವಿಕೆ ತೆಗೆಯಿತ್ತು”

–ಎಂದು ಬಸವಣ್ಣನವರು ನುಡಿದಿದ್ದ ಭವಿಷ್ಯ ನಿಜವಾಯಿತು. ಮಾಚಿದೇವರ ಈ ವೀರತ್ವ ಸಾಹಸಗಳ ಫಲವಾಗಿ "ಶರಣ" ಶೈವಧರ್ಮ, ಮುಂದೆ, "ವೀರ" ಶೈವಧರ್ಮವೆಂದು ಹೆಸರಾಯಿತು. ಮಾಚಿದೇವರು ಶರಣರಿಗೆ, "ಆದರ್ಶ" ವೀರರಾದರು.

* * *

ಬಿಜ್ಜಳನ ಮರಣದ ಸುದ್ದಿ ಕೇಳಿ ಕುಮಾರ ಸೋಮೇಶ್ವರನು, ತನ್ನ ಅಧೀನದಲ್ಲಿದ್ದ ದೊಡ್ಡ ಸೈನ್ಯದೊಡನೆ ಮಂಗಳವೇಡೆಯಿಂದ ಹೊರಟು, ಒಂದು ವಾರದ ಅನಂತರ ಕಲ್ಯಾಣಕ್ಕೆ ಬಂದನು. ತಂದೆಯ ಕೊಲೆಗೆ ಕಾರಣರಾದವರನ್ನು ಶಿಕ್ಷಿಸುವುದು, ತಂದೆಯ ಇಚ್ಛೆಯಂತೆ ಚಾಲುಕ್ಯ ರಾಜ್ಯದ ಸರ್ವಾಧಿಕಾರಿ ಆಡಳಿತವನ್ನು ವಹಿಸಿಕೊಳ್ಳುವುದು ಅವನ ಉದ್ದೇಶವಾಗಿತ್ತು. ಈ ವಿಚಾರದಲ್ಲಿ ಮಾಧವ ನಾಯಕನಿಂದ ತನಗೆ ಸಹಾಯವಾಗಬಹುದಾಗಿ ಅವನು ನಿರೀಕ್ಷಿಸಿದ್ದನು. ಆದರೆ ಕಲ್ಯಾಣದ ವಾಸ್ತವ ಪರಿಸ್ಥಿತಿ, ಕಳೆದ ಕೆಲವು ದಿನಗಳಲ್ಲಿ ಬದಲಾವಣೆಯಾಗಿತ್ತು.

ಪಟ್ಟಣಸ್ವಾಮಿ ಮಹಂತಶೆಟ್ಟಿಯ ನೇತೃತ್ವದಲ್ಲಿ ನಾಗರಿಕರು ಸೋಮೇಶ್ವರನನ್ನು ಸ್ವಾಗತಿಸಿದರು. ಆದರೆ ಅವರ ಬಾಡಿದ ಮುಖಗಳು, ಭಯಗ್ರಸ್ತವರ್ತನೆ ಸೋಮೇಶ್ವರನನ್ನು ತಲ್ಲಣಗೊಳಿಸಿದವು. ಚಾಲುಕ್ಯ ಚಕ್ರೇಶ್ವರ ಜಗದೇಕಮಲ್ಲನ ಅವಸಾನ, ಆಮೇಲೆ ನಡೆದ ಹೋರಾಟದಲ್ಲಿ ಕರ್ಣದೇವನ ಮರಣ, ಈ ವಿಚಾರಗಳು ನಡುದಾರಿಯಲ್ಲಿ ಅವನಿಗೆ ವರದಿಯಾಗಿದ್ದವು. ನಾಗರಿಕರ ವಿಷಣ್ಣತೆ, ಅವುಗಳಿಗಿಂತ ಹೆಚ್ಚಿನ ಮತ್ತಾವುದೋ ದುರ್ಘಟನೆಯ ಸೂಚನೆಯೆಂದು ಸೋಮೇಶ್ವರನು ತಿಳಿದನು.

"ಕಳೆದ ಒಂದು ವಾರದಿಂದ ನಾವು ಜೀವದಾಸೆ ತೊರೆದು ಆತುರದಿಂದ ನಿಮ್ಮ ಬರವನ್ನು ನಿರೀಕ್ಷಿಸುತ್ತಿದ್ದೆವು, ಮಹಾಪ್ರಭು. ಮಾಧವ ನಾಯಕನ ಸೈನಿಕರು ನಗರದ ಅರ್ಧಭಾಗವನ್ನು ನಾಶಮಾಡಿದರು. ನಾಗರಿಕರ ಸಿರಿ ಸಂಪತ್ತುಗಳು ಸೂರೆಯಾದವು, ಪ್ರಭುಗಳು ಕೂಡಲೇ ನಗರದ ಸರ್ವಾಧಿಕಾರವನ್ನು ವಹಿಸಿಕೊಂಡು ನಾಗರಿಕರನ್ನು ವಿಪತ್ತಿನಿಂದ ರಕ್ಷಿಸಬೇಕಾಗಿ ಬೇಡುತ್ತೇವೆ." –ಎಂದು ನಾಗರಿಕರು ಕೈಜೋಡಿಸಿ ಬಿನ್ನವಿಸಿಕೊಂಡರು.

ನಗರಾಧಿಕಾರಿಯ ಕಡೆ ತಿರುಗಿ ಸೋಮೇಶ್ವರನು, "ಈ ಬಿನ್ನಪದ ಅರ್ಥವೇನು? ನಗರ ನಾಶವಾದದ್ದು ಹೇಗೆ ? ನಗರ ರಕ್ಷಕರೇನಾದರು ?" ಎಂದು ಕೇಳಿದನು.

ನಗರಾಧಿಕಾರಿಯ ಮುಖ ವಿವರ್ಣವಾಯಿತು. ವಾಸ್ತವವಾಗಿ ನಡೆದುದನ್ನು ತಿಳಿಸುವ ಧೈರ್ಯವಿಲ್ಲದೆ ಸುಮ್ಮನೆ ನಿಂತನು. ಕೊನೆಗೆ ಸೋಮೇಶ್ವರನ ಭರವಸೆ

ಪಡೆದು ಪಟ್ಟಣಸ್ವಾಮಿ ಹೇಳಿದನು :

"ಸರ್ವಾಧಿಕಾರಿ ಬಿಜ್ಜಳರಾಯರ ಅಂತ್ಯಸಂಸ್ಕಾರ ನಡೆದ ದಿನ ರುದ್ರಭೂಮಿಯಿಂದ ಹಿಂದಿರುಗಿದ ಮೇಲೆ ಸರ್ವಾಧಿಕಾರದ ವಿಚಾರದಲ್ಲಿ ಕರ್ಣದೇವರಸರಿಗೂ ಮಾಧವ ನಾಯಕರಿಗೂ ವಿವಾದ ಮೊದಲಾಯಿತು. ಮರುದಿನ ಪ್ರಾತಃಕಾಲ ಕರ್ಣದೇವರಸರು ತಾವೇ ಚಾಲುಕ್ಯ ಸರ್ವಾಧಿಕಾರಿಗಳೆಂದು ನಗರದಲ್ಲಿ ಘೋಷಣೆ ಹೊರಡಿಸಿದರು. ಮಾಧವ ನಾಯಕರು ಅದನ್ನು ವಿರೋಧಿಸಿ, ಕರ್ಣದೇವರಸರಿದ್ದ ರಾಜಗೃಹದ ಮೇಲೆ ದಾಳಿಗೆ ಪ್ರಾರಂಭಿಸಿದರು. ಎರಡು ಕಡೆಯ ಸೈನಿಕರಿಗೆ ಆ ದಿನವೆಲ್ಲ ಹೋರಾಟ ನಡೆಯಿತು. ಕರ್ಣದೇವರಸರು ಮಡಿದರು. ಅವರ ಕಡೆಯ ಸೈನಿಕರು ಮಾಧವ ನಾಯಕರಿಗೆ ಶರಣಾಗತರಾದರು. ಆ ರಾತ್ರಿಯೇ ಯಾವ ವೈಭವವೂ ಇಲ್ಲದೆ ಕರ್ಣದೇವರಸರ ಅಂತ್ಯಸಂಸ್ಕಾರ ನಡೆಯಿತು. ಮಾಧವ ನಾಯಕರು ರಾಜಗೃಹವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಈ ಹೋರಾಟದಲ್ಲಿ ನಗರ ರಕ್ಷಕ ದಳ ಯಾವ ಕಡೆಗೂ ಸೇರದೆ ತಟಸ್ಥವಾಗಿತ್ತು. ಇದನ್ನು ತಮ್ಮ ಮೇಲಿನ ವಿರೋಧ ಪ್ರದರ್ಶನವೆಂದು ತಿಳಿದು ಮಾಧವ ನಾಯಕರು, ಶಸ್ತ್ರಗಳನ್ನು ತ್ಯಜಿಸಿ ಶರಣಾಗತರಾಗುವಂತೆ ರಕ್ಷಕದಳಕ್ಕೆ ಕರೆಯಿತ್ತರು. ದಳದಲ್ಲಿ ಕೆಲವರು ಶರಣಾಗತರಾಗಿ ಜೀವ ಉಳಿಸಿಕೊಂಡರು. ಕೆಲವರು ಆಯುಧಗಳೊಡನೆ ನಗರವನ್ನು ಬಿಟ್ಟೋಡಿದರು. ವಿರೋಧಿಸಿದವರನ್ನು ಮಾಧವ ನಾಯಕರು ಸೆರೆಹಿಡಿದರು. ಮುಖಂಡರನ್ನು ಶೂಲಕ್ಕೇರಿಸಿದರು. ಆಮೇಲೆ ಮಾಧವ ನಾಯಕರು ನಗರದ ಮಹಾದ್ವಾರಗಳನ್ನು ಮುಚ್ಚಿಸಿ, ತಮ್ಮ ಸೈನಿಕರನ್ನು ಕಾವಲಿಟ್ಟರು. ನಗರದ ಎಲ್ಲ ಕಡೆ ಏಕಕಾಲದಲ್ಲಿ ಸೈನಿಕರ ವಿನಾಶ ಕಾರ್ಯ ಪ್ರಾರಂಭವಯಿತು. ಪ್ರಭುಗಳು ನಗರಾಧಿಕಾರಿಯನ್ನು ವಿಚಾರಿಸಿ, ಆ ವಿನಾಶ ಕೃತ್ಯದ ವಿವರಗಳನ್ನು ತಿಳಿದುಕೊಳ್ಳಬೇಕಾಗಿ ಬೇಡುತ್ತೇನೆ."

–ಎಂದು ಪಟ್ಟಣಸ್ವಾಮಿ ಮುಗಿಸಿದನು. ಸೋಮೇಶ್ವರನು ಅಪೇಕ್ಷಿಸಿದ ವಿವರಗಳನ್ನೀಯಲು ನಗರಾಧಿಕಾರಿಯಾಗಲಿ ನಾಗರಿಕರಾಗಲಿ ಸಮರ್ಥರಾಗಲಿಲ್ಲ.

ಕೊನೆಗೆ ಇತರರಿಗಿಂತ ಹೆಚ್ಚು ಧೈರ್ಯಶಾಲಿಯೂ ಮಾತುಗಾರನೂ ಆದ ಹರದನೊಬ್ಬನು ಮುಂದೆ ಬಂದು ಹೇಳಿದನು :

"ಕರ್ಣದೇವರಸರು ಹತರಾಗಿ ನಗರ ತಮ್ಮ ವಶವಾದ ಮೇಲೆ ಮಾಧವ ನಾಯಕರು ನಗರದ ಎಲ್ಲ ಶೈವಮಠಗಳನ್ನೂ ನಾಶಮಾಡುವಂತೆ ಸೈನಿಕರಿಗೆ ಆಜ್ಞೆ ಮಾಡಿದರು. ನಗರದ ಎಲ್ಲ ಕಡೆ ಏಕಕಾಲದಲ್ಲಿ ಪ್ರಾರಂಭವಾಯಿತು ಆ ವಿನಾಶಕಾರ್ಯ. ಅನೇಕ ಮಠ ಮಂದಿರಗಳನ್ನು ಸೈನಿಕರು ನಾಶಮಾಡಿದರು, ಹತ್ತಿರಿದ್ದ ನಾಗರಿಕರ

ಮನೆಗಳೂ ಅಗ್ನಿಯ ಪಾಲಾದವು. ವಿರೋಧಿಸಿದವರನ್ನು ಸೈನಿಕರು ಕೊಂದರು. ಜಪ ತಪ ಅನುಷ್ಠಾನಗಳಲ್ಲಿ ನಿರತರಾಗಿದ್ದ ಜಂಗಮರನ್ನು ಬೀದಿಗೆಳೆದು ತಂದು ವಧಿಸಿದರು. ಸೈನಿಕರ ಹಿಂಸೆ ಅಪಮಾನಗಳಿಂದ ತಪ್ಪಿಸಿಕೊಳ್ಳಲು ಬಹುಮಂದಿ ಶರಣ ಶರಣೆಯರು ಬೆಂಕಿಯಲ್ಲಿ ಬಿದ್ದು ಸತ್ತರು, ಕೆರೆ ಬಾವಿಗಳಿಗೆ ಬಿದ್ದು ಮಡಿದರು. ನಗರದಲ್ಲಿ ಎರಡು ದಿನ ನಡೆಯಿತು ಈ ನರಮೇಧ !"

"ಅದಕ್ಕೆ ಮೊದಲೆ ಬಹು ಮಂದಿ ಶರಣರು ನಗರವನ್ನು ಬಿಟ್ಟು ವಲಸೆ ಹೋಗಿದ್ದರಲ್ಲವೆ?" –ದುಗುಡ ತುಂಬಿದ ದನಿಯಿಂದ ಸೋಮೇಶ್ವರನು ಕೇಳಿದನು.

"ಹತ್ಯೆಯ ಹಿಂದಿನ ರಾತ್ರಿ ಶರಣರ ಒಂದು ದೊಡ್ಡ ಗುಂಪು ಚೆನ್ನಬಸವಣ್ಣನವರ ನೇತೃತ್ವದಲ್ಲಿ ವಲಸೆ ಹೋಗಿದ್ದರು. ಉಳಿದವರಲ್ಲಿ ಹೆಚ್ಚು ಮಂದಿ ಮೋಳಿಗೆಯ ಮಾರಯ್ಯನವರ ಒತ್ತಾಯದಿಂದ ಮರುದಿನ ನಗರವನ್ನು ಬಿಟ್ಟರು. ಆಮೇಲೆ ಹೋರಾಟ ಪ್ರಾರಂಭವಾಗಿ ನಗರದ ಮಹಾದ್ವಾರಗಳನ್ನು ಮುಚ್ಚಿದ್ದರಿಂದ ಸುಮಾರು ಐದು ಸಾವಿರ ಮಂದಿ ಶರಣರು ನಗರದಲ್ಲಿಯೇ ಉಳಿದರು."

"ತಮ್ಮ ಮೇಲೆ ಆಕ್ರಮಣ ನಡೆಯುವುದೆಂದು ಅವರಿಗೆ ಮೊದಲೆ ತಿಳಿದಿತ್ತೆ?"

"ತಿಳಿದಿತ್ತು, ಮಹಾಪ್ರಭು. ಹತ್ಯೆ ನಡೆದ ದಿನ, ಧರ್ಮಾಧಿಕರಣದ ಸಮ್ಮುಖದ ಚಾವಡಿಯಲ್ಲಿ ಸೇರಿದ್ದ ಸಾಮಂತಾಧಿಕಾರಿಗಳ ರಹಸ್ಯ ಸಭೆಯಲ್ಲಿ ಶೈವಮಠಗಳನ್ನು ನಾಶಮಾಡುವ ಯೋಜನೆ ಚರ್ಚಿಸಲ್ಪಟ್ಟು ಸರ್ವಾಧಿಕಾರಿಗಳ ಅನುಮೋದನೆ ಪಡೆಯಿತೆಂದು ಮಾಧವ ನಾಯಕರ ಕಡೆಯವರು ಹೇಳುತ್ತಾರೆ."

–ತಂದೆಯ ಒಪ್ಪಿಗೆಯಿಂದ ಈ ವಿನಾಶ ಕೃತ್ಯ ನಡೆಯಿತೆ? ಸೋಮೇಶ್ವರನಿಗೆ ಅದನ್ನು ನಂಬುವ ಇಚ್ಛೆಯೂ ಇರಲಿಲ್ಲ, ಆದರೂ ಭಯಗ್ರಸ್ತರಾದ ನಾಗರಿಕರು ನಿಜ ಹೇಳುತ್ತಿರುವರೆಂದು ಅವನು ತಿಳಿದನು. ಅಧಿಕಾರಿ ಸಾಮಂತರ ಪರಿಷ್ಕೃತ ವರದಿಗಿಂತ ನಾಗರಿಕರ ಮಾತು ಹೆಚ್ಚು ವಿಶ್ವಾಸಾರ್ಹವೆಂಬುದು ಮಂಗಳವೇಡೆಯ ಘಟನೆಗಳಿಂದ ಅವನಿಗೆ ಅನುಭವವಾಗಿತ್ತು.

ಹರದನು ಮುಂದುವರಿದು ಹೇಳಿದನು : "ಆ ಎರಡು ದಿನಗಳಲ್ಲಿ ನಡೆದ ಅಮಾನುಷ ರಾಕ್ಷಸೀ ಕೃತ್ಯಗಳನ್ನು ನೆನಸಿಕೊಂಡರೆ ಎದೆ ನಡುಗುವುದು. ಚಾಲುಕ್ಯ ರಾಜ್ಯದಲ್ಲಿ ಹಿಂದೆ ಯಾವಾಗಲೂ ಎಲ್ಲಿಯೂ ನಡೆಯದ ದುಷ್ಕೃತ್ಯಗಳು ಕಲ್ಯಾಣದಲ್ಲಿ ನಡೆದವು. ಶರಣರು ಭಕ್ತಿ ಗೌರವಗಳಿಂದ ಕಟ್ಟಿಸಿದ್ದ ಮಹಮನೆ ಅನುಭವಮಂಟಪಗಳು ಬೆಂಕಿಯಿಂದ ನಾಶವಾದವು. ಕಲ್ಯಾಣದ ವಿಖ್ಯಾತ ಶಿಲ್ಪಿಗಳು ದೀರ್ಘ ಪರಿಶ್ರಮದಿಂದ ರಚಿಸಿದ್ದ ಕೆತ್ತನೆಯ ಕಂಬಗಳು, ಶೀಲವಂತ ಬರೆದಿದ್ದ ಭಿತ್ತಿಚಿತ್ರಗಳು ಕುಸುರಿ ಕೆಲಸದ ಭುವನೇಶ್ವರಿ, –ಎಲ್ಲವನ್ನೂ ನಾಶ ಮಾಡಿದರು ಮಾಧವ ನಾಯಕರ

ಸೈನಿಕರು. ಅನುಭವ ಮಂಟಪದ ಶಿಲಾ ಸ್ತಂಭಗಳು ಮಾತ್ರ ಈಗ ನಿಂತಿವೆ ಅಲ್ಲಿ. ಚೆನ್ನಬಸವಣ್ಣನವರ ಮುನ್ನೆಚ್ಚರಿಕೆಯಿಂದ ಶೂನ್ಯ ಸಿಂಹಾಸನ ಉಳಿಯಿತು. ಅವರು ಅದನ್ನು ಬಿಚ್ಚಿಸಿ, ಬಿಡಿಭಾಗಗಳನ್ನು ಪ್ರತ್ಯೇಕವಾಗಿ ವಾರಗಳ ಹಿಂದೆಯೇ ಉಳಿವೆಗೆ ಕಳುಹಿಸಿದ್ದರು.

"ಈ ವಿನಾಶ ಕೃತ್ಯವನ್ನು ಮುಗಿಸಿ ಮಾಧವ ನಾಯಕರ ಸೈನಿಕರು ನಗರದಲ್ಲಿ ಇನ್ನೂ ಉಳಿದಿದ್ದ ಶರಣರನ್ನು, ಹೆಂಗಸರು ಮಕ್ಕಳು ಬಾಲಕರು ವೃದ್ಧರು ಎಂಬ ಕರುಣೆಯೂ ಇಲ್ಲದೆ, ಸಾಮೂಹಿಕವಾಗಿ ವಧೆ ಮಾಡಿದರು. ಕಲ್ಯಾಣದ ಬೀದಿಗಳಲ್ಲಿ ರಕ್ತದ ಕೋಡಿ ಹರಿಯಿತು. ಆಮೇಲೆ, ಸೈನಿಕರ ದೃಷ್ಟಿ ನಾಗರಿಕರ ಮೇಲೆ ಬಿದ್ದಿತು. ಶರಣಧರ್ಮದ ಪ್ರೋತ್ಸಾಹಕರೆಂದು, ಶರಣರ ಮಿತ್ರರೆಂದು, ಶರಣರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತಿದ್ದರೆಂದು ಸೈನಿಕರು ಅನೇಕರನ್ನು ಕೊಂದರು. ಶ್ರೀಮಂತರ ಮನೆ ಮಠಗಳನ್ನು ಸೂರೆ ಮಾಡಿದರು.

"ಇಷ್ಟೆಲ್ಲಾ ಮುಗಿದ ಮೇಲೆ, ನಗರದ ಹೊರಗಿನ ತಮ್ಮ ಶಿಬಿರಗಳಿಗೆ ಹಿಂದಿರುಗಿದರು. ಮರುದಿನ ಅವರು ಶಿಬಿರವೆತ್ತಿ ವಲಸೆ ಹೋದ ಶರಣರನ್ನು ನಾಶಮಾಡಲು ಸೈನ್ಯದೊಡನೆ ದಕ್ಷಿಣಕ್ಕೆ ಹೋದಾಗ ನಮಗೆ ಉಸಿರಾಡುವ ಧೈರ್ಯ ಬಂದಿತು. ಪಟ್ಟಣಸ್ವಾಮಿ ಮಹಂತ ಶೆಟ್ಟರ ಅಧ್ಯಕ್ಷತೆಯಲ್ಲಿ ನಾಗರಿಕ ಸಮಿತಿಗಳನ್ನು ರಚಿಸಿಕೊಂಡು ಇನ್ನೂ ಉರಿಯುತ್ತಿದ್ದ ಬೆಂಕಿಯನ್ನಾರಿಸಿ, ನಗರವನ್ನು ಸ್ವಚ್ಛಗೊಳಿಸುವ ಕಾರ್ಯದಲ್ಲಿ ತೊಡಗಿದೆವು. ನಗರ ರಕ್ಷಕದಳ ಪುನರ್ಘಟಿತವಾಯಿತು," –ಎಂದ ಹರದನು ತನ್ನ ವಿವರಣೆ ಮುಗಿಸಿದನು.

"ಮಾಧವ ನಾಯಕರ ಸೈನ್ಯ ಈಗ ಎಲ್ಲಿದೆ?"

"ಆಂಜನೇಯ ಹೊಳೆ ದಾಟಿ ಕೃಷ್ಣೆಯ ಕಡೆ ಹೋಗುತ್ತಿರುವುದಾಗಿ ಅವರ ಕಡೆಯವರು ಹೇಳುತ್ತಾರೆ. ಸರ್ವಾಧಿಕಾರಿಗಳ ಹತ್ಯೆಗೆ ಶರಣರೇ ಕಾರಣರೆಂದು ಈಗ ಅವರು ನಗರದಲ್ಲಿ ಪ್ರಚಾರ ಮಾಡುತ್ತಿದ್ದಾರೆ."

ಸೋಮೇಶ್ವರನು ಎಲ್ಲವನ್ನೂ ಸಾವಧಾನದಿಂದ ಕೇಳಿದನು. ತನ್ನ ಕಡೆಯ ಸೈನ್ಯಾಧಿಕಾರಿಗಳೊಡನೆ ಪರ್ಯಾಲೋಚನೆ ನಡೆಸಿದನು. ಬಳಿಕ ನಾಗರಿಕರಿಗೆ ಪುನಃ ದರ್ಶನಕೊಟ್ಟು, "ನಾವು ಈ ಎಲ್ಲ ಘಟನೆಗಳ ಬಗೆಗೆ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆವಿಧಿಸುತ್ತೇವೆ. ಇಂದಿನಿಂದ ನಗರ ನಮ್ಮ ರಕ್ಷಣೆಯಲ್ಲಿರುವುದಾಗಿ ತಿಳಿದು ನೀವು ಸಮಾಧಾನದಿಂದ ನಿಮ್ಮ ನಿಮ್ಮ ಕಾರ್ಯಗಳಲ್ಲಿ ನಿರತರಾಗಬಹುದು. ಮಹಾದ್ವಾರಗಳನ್ನು ವಶಕ್ಕೆ ತೆಗೆದುಕೊಂಡು ನಗರದಲ್ಲಿ ಶಾಂತಿ ರಕ್ಷಣೆಗಳು ನೆಲಸುವಂತೆ ಏರ್ಪಡಿಸಲು ನಮ್ಮ ಸೈನ್ಯಾಧಿಕಾರಿಗಳಿಗೆ ಆಜ್ಞೆ ಮಾಡಿದ್ದೇವೆ.

ಆಜ್ಞೆಯ ವಿರುದ್ಧ ನಗರದ ಶಾಂತಿಗೆ ಭಂಗ ತರುವವರು ಯಾರೇ ಆಗಲಿ ಉಗ್ರಶಿಕ್ಷೆಗೆ ಗುರಿಯಾಗುವರು," ಎಂದು ಘೋಷಿಸಿದನು.

ಆಗ ನಾಗರಿಕರಿಗೆ ಸಮಾಧಾನವಾಯಿತು.

ಸೋಮೇಶ್ವರನು ಕಲಚೂರ್ಯ ಅರಮನೆಗೆ ಬಂದಾಗ ಬೇರೊಂದು ಪ್ರಸಂಗ ಎದುರಾಯಿತು. ದರ್ಶನಕ್ಕಾಗಿ ಕಾಯುತ್ತಿದ್ದ ರಾಜಪುರೋಹಿತ ನಾರಣ ಕ್ರಮಿತನು ಕೈಜೋಡಿಸಿ ಎದುರಿಗೆ ನಿಂತು, "ನನ್ನನ್ನು ಅಧಿಕಾರ ನಿವೃತ್ತನನ್ನಾಗಿ ಮಾಡಿ ವಾನಪ್ರಸ್ಥಕ್ಕೆ ಅನುಮತಿ ಕೊಡಬೇಕಾಗಿ ಬೇಡುತ್ತೇನೆ," ಎಂದು ಬಿನ್ನವಿಸಿಕೊಂಡು ಅಧಿಕಾರ ಲಾಂಛನಗಳನ್ನು ಮುಂದಿಟ್ಟನು.

ಕ್ರಮಿತನ ಕಂಗೆಟ್ಟ ಮುಖ, ದೈನ್ಯವರ್ತನೆ, ಸೋಮೇಶ್ವರನನ್ನು ಸ್ತಂಭಿತಗೊಳಿಸಿದವು. ದುರಭಿಮಾನಿ ನಿಷ್ಠುರ ಅಧಿಕಾರಿಯೆಂದು ಹೆಸರಾಗಿದ್ದು ಅವನಲ್ಲಿ ಈ ಪರಿವರ್ತನೆ ತಲೆದೋರಿದ್ದು ಹೇಗೆ? ಎಂದು ಯೋಚಿಸಿ ಸೋಮೇಶ್ವರನು, "ನೀವು ವಾನಪ್ರಸ್ಥಕ್ಕೆ ಹೋಗಲು ಇನ್ನೂ ಸಮಯವಿದೆ. ನಿಮ್ಮನ್ನು ಅಧಿಕಾರ ನಿವೃತ್ತರನ್ನಾಗಿ ಮಾಡಲು ಯಾವ ಕಾರಣವೂ ಇರುವುದಿಲ್ಲ," ಎಂದನು.

ಕ್ರಮಿತನ ವರ್ತನೆ ಹೆಚ್ಚು ಗಂಭೀರವಾಯಿತು. ದೀರ್ಘವಾಗಿ ಉಸಿರೆಳೆದು ದುಗುಡ ತುಂಬಿದ ದನಿಯಿಂದ ಅವನು ನುಡಿದನು : "ಕಳೆದ ಹತ್ತು ದಿನಗಳಿಂದ ನಗರದಲ್ಲಿ ನಡೆದ ಎಲ್ಲ ದುರ್ಘಟನೆಗಳಿಗೆ ನಾನು ಕಾರಣನು, ಮಹಾಪ್ರಭು. ನನ್ನ ಒಂದು ಅವಿವೇಕ ನಿಮ್ಮ ಪೂಜ್ಯ ತಂದೆಯವರಿಗೆ ಮರಣ ತಂದಿತು, ಕಲ್ಯಾಣವನ್ನು ನಾಶ ಮಾಡಿತು. ನಾಗರಿಕರನ್ನು ಸಂಕಷ್ಟಗಳಿಗೆ ಗುರಿಪಡಿಸಿತು. ಈ ಚಿಂತೆ ಪರ್ವತ ಸಮನಾದ ಭಾರದಿಂದ ನನ್ನನ್ನು ತುಳಿಯುತ್ತಿದೆ. ನನ್ನನ್ನು ಬಂಧನದಲ್ಲಿಟ್ಟು ನನ್ನ ಅಪರಾಧಕ್ಕೆ ತಕ್ಕ ದಂಡನೆ ವಿಧಿಸಿರಿ. ಈ ಕಾರ್ಯ ನಿಮ್ಮಿಂದಾಗದಿದ್ದರೆ ನಾನೇ ವಾನಪ್ರಸ್ಥನಾಗಿ ಅರಣ್ಯಕ್ಕೆ ಹೋಗಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆ.

ನುಡಿಯುತ್ತಿದ್ದಂತೆ ಕ್ರಮಿತನ ಕಂಠ ಗದ್ಗದಿತವಾಯಿತು, ದೇಹ ಕಂಪಿಸಿತು, ಕಾಲುಗಳು ಕುಸಿದು ನಿಲ್ಲಲು ಅಸಮರ್ಥನಾದನು. ಆಗ ಸೋಮೇಶ್ವರನು ಅವನ ಕೈಹಿಡಿದು ಭದ್ರಾಸನದಲ್ಲಿ ಕುಳ್ಳಿರಿಸಿ, "ಮಂತ್ರಿಮಂಡಲದಲ್ಲಿ ಹಿರಿಯರಾಗಿ ನಮಗೆ ಮಾರ್ಗದರ್ಶನ ಮಾಡಬೇಕಾದ ನೀವೇ ಹೀಗಾದರೆ ನಮ್ಮ ಗತಿಯೇನು, ಕ್ರಮಿತರೆ? ಕೊಂಚ ಹೊತ್ತು ಇಲ್ಲಿ ವಿಶ್ರಮಿಸಿಕೊಂಡು ಮನಸ್ಸಿಗೆ ಸಮಾಧಾನ ತಂದುಕೊಳ್ಳಬೇಕಾಗಿ ಬೇಡುತ್ತೇನೆ," ಎಂದು ಹೇಳಿದನು.

ಸೋಮೇಶ್ವರನ ನಮ್ರ ವರ್ತನೆ, ಅನುಕಂಪದ ನುಡಿಗಳು, ಬೀಸಣಿಗೆ

ಪಾನೀಯಗಳನ್ನು ಹಿಡಿದು ನಿಂತಿದ್ದ ದಾಸಿಯರ ಸೇವೆ, ಈ ಎಲ್ಲ ಉಪಚಾರಗಳಿಂದ ಕ್ರಮಿತನ ಉದ್ರೇಕ ಶಾಂತವಾಗುತ್ತಿದ್ದಂತೆ ಸೋಮೇಶ್ವರನು, "ಮಹಾದ್ವಾರದಲ್ಲಿ ನನ್ನ ಸ್ವಾಗತಕ್ಕಾಗಿ ಸೇರಿದ್ದ ನಾಗರಿಕರಿಂದ ನಗರದ ದುರ್ಘಟನೆಯನ್ನು ತಿಳಿದೆ. ಅದರ ಕಾರಣರಾರೆಂಬುದನ್ನೂ ಅವರು ಸ್ಪಷ್ಟಪಡಿಸಿದರು. ಆದರೆ ಒಂದು ಸಾರಿಯಾದರೂ ಅವರು ನಿಮ್ಮ ಹೆಸರು ಹೇಳಲಿಲ್ಲ. ಚಿಂತೆಗೀಡಾದ ನಿಮ್ಮ ಮನಸ್ಸು ಇಲ್ಲದುದನ್ನು ಕಲ್ಪಿಸಿಕೊಳ್ಳುತ್ತಿದೆ," ಎಂದು ಸಮಾಧಾನ ಪಡಿಸಿದನು.

ಕ್ರಮಿತನು ಕೊಂಚ ಹೊತ್ತು ಮೌನವಾಗಿ ಕುಳಿತಿದ್ದನು. ಬಳಿಕ ತಲೆಯೆತ್ತಿ ಪಶ್ಚಾತ್ತಾಪದ ದೈನ್ಯಕಂಠದಿಂದ, "ಕೂಡಲ ಸಂಗಮದ ಸುದ್ದಿ ನಿಮಗಿನ್ನೂ ತಿಳಿದಿಲ್ಲವೆ?" ಎಂದನು.

"ಏನಾಯಿತು ಅಲ್ಲಿ?"

–ಕಾತರನಾಗಿ ಕೇಳಿದನು ಸೋಮೇಶ್ವರ.

"ಬಸವಣ್ಣನವರ ಅವಸಾನ!" ನಿಟ್ಟುಸಿರಿಟ್ಟು ಕ್ರಮಿತನು ಹೇಳಿದನು– "ಬಿಜ್ಜಳರಾಯರ ಕೊಲೆಯ ಸುದ್ದಿ ಕೇಳಿ ದುಃಖಾವೇಗದಿಂದ ಬಸವಣ್ಣನವರು ಅಸುನೀಗಿದರು. ತಮ್ಮ ಇಷ್ಟದೈವ ಕೂಡಲ ಸಂಗಮದೇವನಲ್ಲಿ ಐಕ್ಯವಾದರು. ಚಾಲುಕ್ಯ ರಾಜ್ಯದ ಧರ್ಮಜ್ಯೋತಿ ನಂದಿತು, ಸೋಮೇಶ್ವರ ! ಅವರು ಕಲ್ಯಾಣವನ್ನು ಬಿಟ್ಟದಿನವೇ ನಗರದ ಭಾಗ್ಯತಾರೆ ಅಸ್ತವಾಯಿತು!"

ಬಸವಣ್ಣನವರ ಅವಸಾನ!–ತಂದೆಯ ಕೊಲೆಯ ಸುದ್ದಿ ಕೇಳಿ! ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಹೋಗಲು ಯಾರು ಕಾರಣರೋ ಆ ಪ್ರತಿಷ್ಠಾವಂತ ನಿಷ್ಠುರ ವ್ಯಕ್ತಿ, ರಾಜಪುರೋಹಿತ ನಾರಣಕ್ರಮಿತನು ಅವರ ನಿಧನದ ಸುದ್ದಿ ಕೇಳೀ ಕಣ್ಣೀರಿಡುತ್ತಿದ್ದಾನೆ! ಇದು ಕಲ್ಪನೆಯೇ! ಇಹಲೋಕದ ದ್ವೇಷ ದ್ವಂದ್ವಗಳಿಂದ ದೂರವಾದ ಯಾವುದೋ ಕಲ್ಪನಾಲೋಕದಲ್ಲಿರುವೆನೇ ನಾನು? –ಎಂದು ಯೋಚಿಸುತ್ತ ಸೋಮೇಶ್ವರನು ಮೌನವಾಗಿದ್ದನು.

ಆಪ್ತರಲ್ಲಿ ಹೇಳಿಕೊಂಡಾಗ ಮನಸ್ಸಿನ ದುಃಖ ಶಾಂತವಾಗುವುದೆಂದು ಮನಶ್ಶಾಸ್ತ್ರದ ಒಂದು ತತ್ವ. ಬಿಜ್ಜಳನಂತೆಯೇ ತನ್ನ ಅಭಿಮಾನ ಗೌರವಗಳಿಗೆ ಪಾತ್ರನಾಗಿದ್ದ ಸೋಮೇಶ್ವರನೆದುರಿಗೆ ತನ್ನ ದುಗುಡವನ್ನು ತೋಡಿಕೊಂಡದ್ದರಿಂದ ಕ್ರಮಿತನು ಈಗ ಪ್ರಕೃತಸ್ಥನಾಗಿದ್ದನು. ರಾಜಪುರೋಹಿತನಿಗೆ ಸಹಜವಾದ ಹಮ್ಮುಬಿಮ್ಮು ಮತ್ತೆ ಇಣಕುತ್ತಿದ್ದವು. ಎಂದಿನ ಸಲುಗೆಯಿಂದ ಅವನು ಮುಂದುವರಿದು ಹೇಳಿದನು:

"ನನ್ನಿಂದ ಈ ಮಾತುಗಳನ್ನು ಕೇಳಿ ನಿಮಗೆ ಆಶ್ಚರ್ಯವಾಗಿರಬೇಕಲ್ಲವೆ, ಸೋಮೇಶ್ವರ? ಮಧುವರಸನ ಮೇಲಿನ ವೈಯಕ್ತಿಕ ವಿದ್ವೇಷದಿಂದ ನಾನು ವರ್ಣ

ಸಂಕರದ ಆಪಾದನೆ ಹೂಡಿದೆ. ಆ ವಿಷಚಕ್ರದ ಜ್ವಾಲೆ ಹರಡಿ ಬಸವಣ್ಣನವರು ಕಲ್ಯಾಣವನ್ನು ಬಿಟ್ಟರು. ಅವರು ನಗರದಲ್ಲಿದ್ದಿದ್ದರೆ ಧರ್ಮಾಧಿಕರಣದ ವಿಚಾರಣೆ ನಡೆಯುತ್ತಿರಲಿಲ್ಲ. ವೃದ್ಧಮಂತ್ರಿ ಮಂಚಣ ನಾಯಕನು ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲ. ಮಧುವರಸ ಹರಳಯ್ಯ ಶೀಲವಂತರನ್ನು ಶೂಲಕ್ಕೇರಿಸುತ್ತಿರಲಿಲ್ಲ. ಬಿಜ್ಜಳರಾಯರ ಕೊಲೆ ನಡೆಯುತ್ತಿರಲಿಲ್ಲ. ಕಲ್ಯಾಣದ ಶೈವಮಠಗಳು ಉಳಿಯುತ್ತಿದ್ದವು. ಮಾಧವ ನಾಯಕರ ಸೈನಿಕರಿಂದ ನಾಗರಿಕರ ಅಪಮಾನವಾಗುತ್ತಿರಲಿಲ್ಲ. ಈ ಎಲ್ಲ ದುರಂತಗಳಿಗೆ ಕಾರಣನಾದ ನನ್ನನ್ನು ಬಂಧನದಲ್ಲಿಡು, ಸೋಮೇಶ್ವರ. ನನ್ನ ವಧೆಗೆ ಆಜ್ಞೆ ಮಾಡು. ಪ್ರಕೃತಸ್ಥನಾಗಿ ಶಾಂತ ಮನಸ್ಸಿನಿಂದ ನಾನಿದನ್ನು ಹೇಳುತ್ತಿದ್ದೇನೆ."

"ಶರಣರನ್ನು ಶೂಲಕ್ಕೇರಿಸಿದ್ದು ತಂದೆಯ ಕೊಲೆಗೆ ಕಾರಣವೆಂದು ನಿಮ್ಮ ಅಭಿಪ್ರಾಯವೇ? ಮಾಧವ ನಾಯಕನ ಕಡೆಯವರು ನಗರದಲ್ಲಿ ಅದನ್ನೇ ಪ್ರಚಾರ ಮಾಡುತ್ತಿದ್ದಾರೆ," ಎಂದನು.

"ಮಾಧವ ನಾಯಕನ ಆ ಅಸತ್ಯ ಪ್ರಚಾರವನ್ನು ನೀವು ಕೂಡ ನಂಬಿದಿರಾ, ಸೋಮೇಶ್ವರ ?"

–ಕ್ರಮಿತನು ನುಡಿದನು, ತಿರಸ್ಕಾರದ ದನಿಯಿಂದ.

"ಆಪಾದನೆ ಸಕಾರಣವಾದರೆ ಏಕೆ ನಂಬಬಾರದು?"

"ಶರಣರ ಮೇಲಿನ ವಿದ್ವೇಷದಿಂದ ಮಾಧವ ನಾಯಕನು ಈ ಪ್ರಚಾರಕ್ಕೆ ತೊಡಗಿದ್ದಾನೆ. ಆಪಾದನೆ ವಿಶ್ವಾಸಾರ್ಹವಲ್ಲ. ಯಾರೂ ಅದನ್ನು ನಂಬುವುದಿಲ್ಲ."

"ಹಾಗಾದರೆ ನಿಜವಾದ ಕೊಲೆಗಡುಕರಾರು?"

"ಚಾಲುಕ್ಯ ಅರಸು ಜಗದೇಕಮಲ್ಲ ಮತ್ತು ಅವನ ಯೌವನದ ಗೆಳೆಯ ಸಾಮಂತ ಬೊಮ್ಮರಸ."

ಕ್ರಮಿತನ ಉತ್ತರ ಸೋಮೇಶ್ವರನನ್ನು ದಿಗ್ಭ್ರಮೆಗೊಳಿಸಿತು. ಇದೇನು ಉಪಹಾಸವೇ, ವಾಸ್ತವವೇ ? ಅವಿಶ್ವಾಸದ ದನಿಯಿಂದ ಅವನು, "ರಾಜಗೃಹದಲ್ಲಿ ಬಂಧನದಲ್ಲಿದ್ದ ಜಗದೇಕಮಲ್ಲನಿಂದ ಈ ಕಾರ್ಯ ಹೇಗೆ ಸಾಧ್ಯ? ಅವನು ಅಸ್ವಸ್ಥನಾಗಿದ್ದು ಆ ರಾತ್ರಿಯೇ ಮೃತನಾದನಲ್ಲವೆ?" ಎಂದನು.

ಆ ದಿನ ಮೊದಲ ಸಾರಿ ಕ್ರಮಿತನ ಮುಖದಲ್ಲಿ ತಿರಸ್ಕಾರದ ನಗೆ ಮೂಡಿತು. ವಿಶ್ವಾಸದ ದೃಢಕಂಠದಿಂದ ಅವನು ಹೇಳಿದನು : ಅದು ಜನರಲ್ಲಿ ಪ್ರಸಾರವಾದ ಕಥೆ, ಸೋಮೇಶ್ವರ. ವಾಸ್ತವವಾಗಿ ನಡೆದದ್ದು ಬೇರೆ. ಕೊಲೆ ನಡೆದ ಸಂಜೆ ಜಗದೇಕಮಲ್ಲನೂ, ಜಂಗಮ ವೇಷದಿಂದ ರಾಜಗೃಹದಲ್ಲಿ ಧರ್ಮೋಪದೇಶಕನಾಗಿದ್ದ ಬೊಮ್ಮರಸನೂ, ದೀವಟಿಗರ ಸಮವಸ್ತ್ರಗಳನ್ನು ಧರಿಸಿ ಕರ್ಣದೇವನ

ಪರಿವಾರದೊಡನೆ ರಾಜಗೃಹವನ್ನು ಬಿಟ್ಟು ಧರ್ಮಾಧಿಕರಣದ ಸಮುಖದ ಚಾವಡಿಗೆ ಹೋದರು. ಆ ದಿನ ಅಲ್ಲಿ ಸಾಮಂತಾಧಿಕಾರಗಳ ರಹಸ್ಯ ಸಭೆ ಬಿಜ್ಜಳರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ನಗರದ ಶೈವಮಠಗಳನ್ನೆಲ್ಲ ಏಕಕಾಲದಲ್ಲಿ ನಾಶ ಮಾಡಬೇಕೆಂಬ ಮಾಧವ ನಾಯಕನ ಸಲಹೆ ಸಭೆಯಲ್ಲಿ ಚರ್ಚೆಗೆ ಬಂದಾಗ ಕರ್ಣದೇವ ತೀವ್ರವಾಗಿ ವಿರೋಧಿಸಿದನು. ಅಣ್ಣ ತಮ್ಮಂದಿರಿಗೆ ವಾದ ಬೆಳೆದು, ಕೋಪದಿಂದ ಕರ್ಣದೇವ ಸಭೆಯನ್ನು ಬಿಟ್ಟು ರಾಜಗೃಹಕ್ಕೆ ಹಿಂದಿರುಗಿದನು. ದೀವಟಿಗರ ವೇಷಧರಿಸಿದ್ದ ಜಗದೇಕಮಲ್ಲ ಬೊಮ್ಮರಸರು ಸಮುಖದ ಚಾವಡಿಯಲ್ಲಿಯೇ ಉಳಿದರು. ಸಭೆ ಮುಗಿದು ಬಿಜ್ಜಳರಾಯರು ಅರಮನೆಗೆ ಹೋದಾಗ ವೇಷಧಾರೀ ದೀವಟಿಗರು ಪರಿವಾರದೊಡನೆ ತಾವೂ ಅರಮನೆಯನ್ನು ಸೇರಿ, ಅಡಗಿದ್ದು, ಕೊಂಚ ಹೊತ್ತಿನ ಮೇಲೆ ಬಿಜ್ಜಳರಾಯರು ಏಕಾಕಿಯಾಗಿದ್ದಾಗ ಮೇಲೆ ಬಿದ್ದು ಕೊಂದರು. ಇದು ವಾಸ್ತವದಲ್ಲಿ ನಡೆದ ಘಟನೆ."

ಹತ್ಯೆಗೆ ಸಂಬಂಧಿಸಿದ ಈ ವಿವರಗಳನ್ನು ತಿಳಿಸುವುದಕ್ಕಾಗಿಯೇ ಕ್ರಮಿತನು ವೈರಾಗ್ಯದ ಸೋಗಿನಲ್ಲಿ ದರ್ಶನಕ್ಕಾಗಿ ಬಂದನೇ ಎಂದು ಸೋಮೇಶ್ವರನಿಗೆ ಸಂದೇಹ ಹುಟ್ಟಿತು. ಆದರೆ ಆ ದಿನ ಕ್ರಮಿತನ ನುಡಿಗಳಲ್ಲಿ ವಂಚನೆಗೆ ಎಡೆಯಿರಲಿಲ್ಲ. ಪಶ್ಚಾತ್ತಾಪದ ಜ್ವಾಲೆಯಿಂದ ಅವನ ಮನಸ್ಸಿನ ಮಾಲಿನ್ಯ ಕಳೆದು, ಶ್ರೋತ್ರೀಯ ಬ್ರಾಹ್ಮಣನಿಗೆ ಸಹಜವಾದ ಶಾಂತಿ ಶಿಷ್ಟಾಚಾರಗಳು ಕ್ರಮ ಕ್ರಮವಾಗಿ ಬೆಳಕಿಗೆ ಬರುತ್ತಿದ್ದವು. ಕೊಲೆಯ ಬಗೆಗೆ ವಿವರಗಳನ್ನು ತಿಳಿಯುವ ಕುತೂಹಲದಿಂದ ಸೋಮೇಶ್ವರನು, "ಆಮೇಲೆ ಹಂತಕರೇನಾದರು ? ಜಗದೇಕಮಲ್ಲನು ರಾಜಗೃಹಕ್ಕೆ ಹಿಂದಿರುಗಿದ್ದು ಹೇಗೆ ?" ಎಂದು ಕೇಳಿದನು.

ಕ್ರಮಿತನು ಹೇಳಿದನು : "ಹಂತಕರು ಅರಮನೆಯಿಂದ ಹೊರಗೆ ಬಂದಾಗ ಕಾವಲು ಭಟರು ತಡೆದರು. ಹೋರಾಟ ನಡೆಯಿತು. ಇಬ್ಬರು ಭಟರನ್ನು ಕೊಂದು ಜಗದೇಕಮಲ್ಲನು ಮಡಿದನು. ಬೊಮ್ಮರಸ ತಪ್ಪಿಸಿಕೊಂಡನು. ಕೊಂಚ ಹೊತ್ತಿನ ಮೇಲೆ ಕೊಲೆಯ ಸುದ್ದಿ ತಿಳಿದು ಕರ್ಣದೇವ ಅರಮನೆಗೆ ಬಂದನು. ಸತ್ತು ಬಿದ್ದಿದ್ದವರಲ್ಲಿ ಜಗದೇಕಮಲ್ಲನನ್ನು ಗುರುತಿಸಿ ಅವನು, ಶವವನ್ನು ಇಲ್ಲಿಯೇ ಬಿಟ್ಟರೆ ರಾಜಗೃಹದ ರಕ್ಷಕನಾದ ತನ್ನ ಮೇಲೆ ಸಂದೇಹ ಬರಬಹುದೆಂದು ಭಾವಿಸಿ, ಚತುರತೆಯಿಂದ ಶವವನ್ನು ತನ್ನ ಮೇನೆಯಲ್ಲಿಟ್ಟುಕೊಂಡು ರಹಸ್ಯವಾಗಿ ರಾಜಗೃಹಕ್ಕೆ ತೆಗೆದುಕೊಂಡು ಹೋದನು. ಜಗದೇಕಮಲ್ಲನು ಅಸ್ವಸ್ಥನಾಗಿ ಸತ್ತನೆಂದು ಮರುದಿನ ಪ್ರಸಾರವಾಯಿತು. ಮರಣದ ಕಾರಣವನ್ನು ಮುಚ್ಚಿಡುವ ಉದ್ದೇಶದಿಂದ ಅವಸರದಲ್ಲಿ ಅಂತ್ಯಕ್ರಿಯೆ ನಡೆಯಿತು. ಬಿಜ್ಜಳರಾಯರ ಮರಣದಿಂದ ಪ್ರಕ್ಷುಬ್ಧರಾಗಿದ್ದ

ಅರಮನೆಯ ಅಧಿಕಾರಿಗಳು, ರಾಜಭಟರು ಹತನಾದ ಒಬ್ಬ ಹಂತಕನ ದೇಹ ಹಠಾತ್ತಾಗಿ ಮಾಯವಾದುದನ್ನು ಗಮನಿಸಲಿಲ್ಲ."

"ಹಾಗಾದರೆ ತಂದೆಯವರ ಕೊಲೆಯಲ್ಲಿ ಕರ್ಣದೇವರ ಪಾತ್ರವೂ ಇದೆ. ರಾಜವಂಶಗಳ ಬೆನ್ನು ಹಿಡಿದ ಭೇತಾಳನಂತೆ ಈ ಅಣ್ಣತಮ್ಮಂದಿರ ವಿದ್ವೇಷ !"

–ಎಂದನು ಸೋಮೇಶ್ವರ. ಹತ್ಯೆಯ ಸಂಚು ಕರ್ಣದೇವನಿಗೆ ಮೊದಲೇ ತಿಳಿದಿರಬೇಕೆಂದು ಅವನು ಭಾವಿಸಿದನು.

"ಅವಿವೇಕ ಆಲಸ್ಯಗಳ ಹೊರತಾಗಿ ಹತ್ಯೆಯಲ್ಲಿ ಕರ್ಣದೇವನ ಪಾತ್ರವೇನೂ ಇರುವುದಿಲ್ಲ, ಸೋಮೇಶ್ವರ. ನೀವು ಈ ವಿಚಾರದಲ್ಲಿ ನಿಶ್ಚಿಂತರಾಗಬಹುದು," ಕ್ರಮಿತನು ಉತ್ತರ ಕೊಟ್ಟನು–ರಾಜಗೃಹದ ರಕ್ಷಣೆಯಲ್ಲಿ ಕರ್ಣದೇವ ಇನ್ನಷ್ಟು ಜಾಗರೂಕನಾಗಿದ್ದಿದ್ದರೆ ಜಗದೇಕಮಲ್ಲ ಬೊಮ್ಮರಸರು ವೇಷಾಂತರದಿಂದ ಹೊರಗೆ ಬರಲು ಕಷ್ಟವಾಗುತ್ತಿತ್ತು. ತನ್ನ ಅವಿವೇಕವನ್ನು ಮುಚ್ಚಿಡಲು ಕರ್ಣದೇವನು ಜಗದೇಕಮಲ್ಲನ ದೇಹವನ್ನು ಅಪಹರಿಸಿದನು."

ಕ್ರಮಿತನ ಉತ್ತರದಿಂದ ಸೋಮೇಶ್ವರನ ಸಂದೇಹ ಹರಿಯಲಿಲ್ಲ. "ಬೊಮ್ಮರಸನು ರಾಜಗೃಹದ ಧರ್ಮೋಪದೇಶಕನಾದದ್ದು ಹೇಗೆ ?" ಎಂದು ಪುನಃ ಪ್ರಶ್ನಿಸಿದನು.

"ಅದೊಂದು ದೊಡ್ಡ ಕಥೆ, ಸೋಮೇಶ್ವರ," ಕ್ರಮಿತನು ಹೇಳಿದನು– "ಚಾಲುಕ್ಯ ರಾಜಸತ್ತೆಯ ಪುನಃಪ್ರತಿಷ್ಠೆಗಾಗಿ ರಾಣಿ ಕಾಮೇಶ್ವರಿಯ ನೇತೃತ್ವದಲ್ಲಿ ಒಳಸಂಚೊಂದು ನಡೆಯುತ್ತಿತ್ತು. ನಿಡುಗಲ್ಲಿನ ದುರ್ಗಾಧಿಪತಿ ಬೊಮ್ಮರಸನು ಅದರ ನಾಯಕ. ಕಲಚೂರ್ಯ ಪ್ರಭುತ್ವದ ವಿರೋಧಿಗಳಾದ ಸಾಮಂತಾಧಿಕಾರಿ ಮಾಂಡಲಿಕರ ಸಹಕಾರ ಪಡೆಯಲು ಚಾಲುಕ್ಯರಾಜ್ಯದ ದಕ್ಷಿಣ ಮಂಡಲಗಳಲ್ಲಿ ಪ್ರವಾಸ ಮಾಡಿ ದೇವಗಿರಿಯ ಮಾರ್ಗವಾಗಿ ಕಲ್ಯಾಣಕ್ಕೆ ಬರುತ್ತಿದ್ದಾಗ ನಮ್ಮ ಬೇಹುಗಾರರು ಬೊಮ್ಮರಸನ ಸುಳಿವು ತಿಳಿದರು. ರಾಣಿ ಕಾಮೇಶ್ವರಿಯ ಮನೆಹೆಗ್ಗಡೆ ಅಗ್ಗಳದೇವನು ಅವನ ಸಂಗಡಿದ್ದನು. ಬಸವಣ್ಣನವರು ನಗರವನ್ನು ಬಿಟ್ಟ ದಿನ ಅವರು ಕಲ್ಯಾಣಕ್ಕೆ ಬಂದರು. ಆ ದಿನವೇ ಅವರನ್ನು ಸೆರೆಹಿಡಿಯುವುದು ನಮ್ಮ ಉದ್ದೇಶವಾಗಿತ್ತು. ಅಗ್ಗಳ ಸಿಕ್ಕಿದನು. ರಾಜಭಟರ ಅಚಾತುರ್ಯದಿಂದ ಬೊಮ್ಮರಸ ತಪ್ಪಿಸಿಕೊಂಡನು. ಆಮೇಲೆ ಅವನು ಜಂಗಮ ವೇಷದಿಂದ ಜಗದೇಕಮಲ್ಲನ ಧರ್ಮೋಪದೇಶಕನಾಗಿ ರಾಜಗೃಹ ಸೇರಿದನು."

"ಮನೆಹೆಗ್ಗಡೆ ಅಗ್ಗಳನನ್ನೇನು ಮಾಡಿದಿರಿ ?"

"ಬಿಜ್ಜಳರಾಯರು ಅವನನ್ನು ಜಗದೇಕಮಲ್ಲನ ಕಾವ್ಯೋಪದೇಶಕನನ್ನಾಗಿ

ನೇಮಿಸಿ, ರಾಜಗೃಹದಲ್ಲಿ ಬಂಧನದಲ್ಲಿಟ್ಟರು.”

“ನೇಮಕದ ಉದ್ದೇಶ ?”

“ರಾಣಿ ಕಾಮೇಶ್ವರಿಯ ಕ್ಷೇತ್ರದಪುತ್ರ ಕುಮಾರ ಪ್ರೇಮಾರ್ಣವನ ಉತ್ತರಾಧಿಕಾರದ ವಿಚಾರವಾಗಿ ಜಗದೇಕಮಲ್ಲನೊಡನೆ ಸಂಧಾನ ನಡೆಸುವುದಕ್ಕಾಗಿ. ಆದರೆ ಬಿಜ್ಜಳರಾಯರು ಉದ್ದೇಶಿಸಿದ್ದುದೊಂದು, ನಡೆದದ್ದು ಮತ್ತೊಂದು. ಅಗ್ಗಳ ಬೊಮ್ಮರಸರಿಬ್ಬರೂ ರಾಜಗೃಹ ಸೇರಿದ್ದರಿಂದ ಒಳಸಂಚಿಗೆ ಅನುಕೂಲವಾಯಿತು.”

ಕ್ರಮಿತನ ಉತ್ತರಗಳಿಂದ ಸೋಮೇಶ್ವರನು ಪುನಃ ಗೊಂದಲದಲ್ಲಿ ಬಿದ್ದನು. ರಾಣಿ ಕಾಮೇಶ್ವರಿಯನ್ನು ಪಟ್ಟಾಭಿಷೇಕದ ನೆವದಿಂದ ಮಂಗಳವೇಡೆಗೆ ಕರೆಸಿಕೊಳ್ಳಲು ಬಿಜ್ಜಳನು ನಡೆಸಿದ ಸನ್ನಾಹ ಅಗ್ನಿದಾಹದಲ್ಲಿ ಕಾಮೇಶ್ವರಿಯ ಅಪಮೃತ್ಯು, ರಾಣಿಯೊಡನೆ ಬಿಜ್ಜಳನ ಲಂಪಟ ವರ್ತನೆಯನ್ನು ಕುರಿತು ಜನರಲ್ಲಿ ಹರಡಿದ್ದ ಅಪವಾದ, ಈ ಎಲ್ಲ ವಿಚಾರಗಳು ಸೋಮೇಶ್ವರನ ಮನದಲ್ಲಿ ಸುಳಿದವು. ಕಾಮೇಶ್ವರಿಯ ಅಪಮೃತ್ಯು ತಂದೆಯ ಕೊಲೆಗೆ ಕಾರಣವಾಗಿರಬಹುದೆ? ಕೊಲೆ ಮಾಡಿದವರಾರು? ಕಾಮೇಶ್ವರಿಯ ಸಹೋದರ, ಕರ್ಹಾಡದ ಮಂಡಲಾಧಿಪತಿ ವಿಜಯಾರ್ಕನ ಪ್ರೇರಣೆಯಿಂದ ಕೊಲೆ ನಡೆಯಿತೆ? ಎಲ್ಲವೂ ಸಾಧ್ಯ–ಎಂದು ಚಿಂತಿಸಿ ಸೋಮೇಶ್ವರನು, “ಮಂಗಳವೇಡೆಯ ಘಟನೆಗಳು ಜಗದೇಕಮಲ್ಲನಿಗೆ ತಿಳಿದಿತ್ತೆ?” ಎಂದು ಹೇಳಿದನು.

ಕ್ರಮಿತನು ಕೂಡಲೆ ಉತ್ತರ ಕೊಡಲಿಲ್ಲ. ಕೆಲವು ಕ್ಷಣಗಳು ಯೋಚಿಸುತ್ತಿದ್ದು ಬಳಿಕ ಹೇಳಿದನು. “ರಾಣಿ ಕಾಮೇಶ್ವರಿಯನ್ನು ಮಂಗಳವೇಡೆಗೆ ಕರೆಸಿಕೊಳ್ಳಲು ಬಿಜ್ಜಳರಾಯರು ನಡೆಸುತ್ತಿದ್ದ ಸಂಧಾನ ಅಗ್ಗಳನಿಂದ ಜಗದೇಕಮಲ್ಲನಿಗೆ ತಿಳಿದಿರಬೇಕು. ಪಟ್ಟಾಭಿಷೇಕ ಮುಗಿದು ಕಲ್ಯಾಣಕ್ಕೆ ಹಿಂದಿರುಗಿದ ಕರ್ಣದೇವ ಆಮೇಲಿನ ಘಟನೆಗಳನ್ನು ತಿಳಿಸಿರಬಹುದು. ಜಗದೇಕಮಲ್ಲನು ಕರ್ಣದೇವನ ಬಂದಿಯಾಗಿದ್ದರೂ ವಾಸ್ತವದಲ್ಲಿ ಅವರು ಗೆಳೆಯರಂತೆ ಸಲಿಗೆಯಿಂದ ನಡೆದುಕೊಳ್ಳುತ್ತಿದ್ದರು. ಸೆರೆಯಲ್ಲಿಯೂ ಚಾಲುಕ್ಯ ಅರಸರ ಸುಖಜೀವನ, ರಾಜೋಚಿತ ವೈಭವದಿಂದ ನಡೆಯ ಬೇಕೆಂಬುದು ಮೊದಲಿನಿಂದ ಬಿಜ್ಜಳರಾಯರ ಉದ್ದೇಶವಾಗಿತ್ತು.”

‘ತಂದೆಯವರ ಆ ಉದಾರ ವರ್ತನೆಯೇ ಅವರ ಅಂತ್ಯಕ್ಕೆ ಕಾರಣವಾಯಿತು.” –ದೀರ್ಘವಾಗಿ ಉಸಿರೆಳೆದು ಸೋಮೇಶ್ವರ ಹೇಳಿದನು.

“ಜನರು ಹಾಗೆ ತಿಳಿದಿಲ್ಲ, ಸೋಮೇಶ್ವರ. ಲೋಕದೃಷ್ಟಿಯಲ್ಲಿ ಹತ್ಯೆಯ ಕಾರಣ ರಾಜಕೀಯವೂ ಅಲ್ಲ, ಧಾರ್ಮಿಕವೂ ಅಲ್ಲ.”

–ಎಂದು ಹೇಳಿ ಕ್ರಮಿತನು ಅರ್ಥಗರ್ಭಿತವಾಗಿ ಸೋಮೇಶ್ವರನ ಮುಖ ನೋಡಿದನು.

"ಆ ಎರಡರ ಹೊರತಾಗಿ ಮತ್ತಾವ ಕಾರಣವಿದೆ ? ಚಾಲುಕ್ಯ ರಾಜಸತ್ತೆಯ ಪುನಃಪ್ರತಿಷ್ಠೆಗಾಗಿ ಒಳಸಂಚು ನಡೆಯುತ್ತಿತ್ತು. ತಂದೆಯವರ ಆಡಳಿತ ನೀತಿಯಿಂದ ಶರಣರು ಅಸಂತುಷ್ಟರಾಗಿದ್ದರು. ಈ ಎರಡು ಶಕ್ತಿಗಳಲ್ಲಿ ಯಾವುದು ಪ್ರಬಲವಾಗಿ ತಂದೆಯವರನ್ನು ಬಲಿತೆಗೆದುಕೊಂಡಿತೆಂಬುದನ್ನು ನಾವು ಮುಂದೆ ತಿಳಿಯಬೇಕಾಗಿದೆ.

–ಪ್ರಭುವಿಗೆ ಸಹಜವಾದ ದರ್ಪದಿಂದ ಸೋಮೇಶ್ವರ ಹೇಳಿದನು.

"ಪ್ರಬಲವಾದ ಮತ್ತೊಂದು ಶಕ್ತಿಯ ಎದುರಿನಲ್ಲಿ ಧಾರ್ಮಿಕ ರಾಜಕೀಯ ಶಕ್ತಿಗಳು ನಿಸ್ತೇಜವಾದವು, ಸೋಮೇಶ್ವರ. ಎಲ್ಲಕ್ಕಿಂತ ಮಿಗಿಲಾದ ಆ ಮಹಾಶಕ್ತಿ ಬಿಜ್ಜಳರಾಯರನ್ನು ಬಲಿತೆಗೆದುಕೊಂಡಿತು."

–ತತ್ವದರ್ಶಿಯ ಗಾಂಭೀರ್ಯದಿಂದ ಕ್ರಮಿತನು ಉತ್ತರ ಕೊಟ್ಟನು.

ಸೋಮೇಶ್ವರನ ಕುತೂಹಲ ಕೆರಳಿತು. "ಯಾವುದು ಆ ಮಹಾಶಕ್ತಿ ?" ಎಂದನು, ಅವಿಶ್ವಾಸದ ನಗೆಬೀರಿ.

"ಪ್ರೇಮವೇ ಆ ಮಹಾಶಕ್ತಿ, ಸೋಮೇಶ್ವರ!" ಕ್ರಮಿತನು ಹೇಳಿದನು– "ಪ್ರೇಮಮೂಲವಾದ ವೈಯಕ್ತಿಕ ವಿದ್ವೇಷ ಬಿಜ್ಜಳರಾಯರ ಹತ್ಯೆಗೆ ಕಾರಣವಾಯಿತು. ಆರು ವರ್ಷಗಳ ಹಿಂದೆ ಒಂದು ದಿನ ಕಾಮೇಶ್ವರಿ ಸಂತಾನಾಪೇಕ್ಷೆಯಿಂದ ವೇಶ್ಯೆಯ ವೇಷದಲ್ಲಿ, ಜಗದೇಕಮಲ್ಲನ ಮೃಗಯಾಶಿಬಿರಕ್ಕೆ ಹೋಗಿದ್ದಳು. ಆ ಸಂದರ್ಭದಲ್ಲಿ ಕಾಮೇಶ್ವರಿ ತೋರಿದ ಸಾಹಸ ಚತುರತೆಗಳು, ಅವಳಲ್ಲಿ ಜಗದೇಕಮಲ್ಲನ ಅನನ್ಯ ಪ್ರೇಮಕ್ಕೆ ಕಾರಣವಾದುವು. ಅತಿಥಿಯಾಗಿ ಮಂಗಳವೇಡೆಗೆ ಹೋಗಿದ್ದ ರಾಣಿಯೊಡನೆ ಬಿಜ್ಜಳರಾಯರ ಲಂಪಟ ವರ್ತನೆ, ಅಪಮಾನಿತೆಯಾದ ಅವಳು ಬೆಂಕಿಯಲ್ಲಿ ಬಿದ್ದು ಸತ್ತಳೆಂಬ ಜನಾಪವಾದ, ಇವುಗಳನ್ನು ಕೇಳಿ ಉದ್ರೇಕಗೊಂಡ ಜಗದೇಕಮಲ್ಲನು ಈ ಘೋರ ಕೊಲೆಗೆ ಸಿದ್ಧನಾದನು."

ಆ ದಿನ ಸೋಮೇಶ್ವರನು, ಕ್ರಮಿತನೆದುರಿಗೆ ಮೂರನೆಯ ಸಾರಿ ಅಪ್ರತಿಭನಾದನು. ತಂದೆಯ ಬಗೆಗೆ ಮಂಗಳವೇಡೆಯಲ್ಲಿ ಹರಡಿದ್ದ ಅಪವಾದ ಕಲ್ಯಾಣದಲ್ಲಿ ಪೆಡಂಭೂತವಾಗಿ ಎದುರಿಗೆ ನಿಲ್ಲುವುದೆಂದು ಅವನು ಭಾವಿಸಿರಲಿಲ್ಲ. ಅಸಮಾಧಾನದ ಬಿರುದನಿಯಿಂದ ಅವನು,

"ಅಡೆತಡೆಯಿಲ್ಲದ ಜನಾಪವಾದಕ್ಕೆ ನೀವು ಸಲ್ಲದ ಪ್ರಾಮುಖ್ಯತೆ ಕೊಡುತ್ತಿದ್ದೀರಿ, ಕ್ರಮಿತರೆ," ಎಂದನು.

ಅರ್ಥಗರ್ಭಿತವಾದ ತೀವ್ರ ದೃಷ್ಟಿಯಿಂದ ಸೋಮೇಶ್ವರನನ್ನು ನೋಡುತ್ತ

ಕ್ರಮಿತನು ಹೇಳಿದನು : "ಅಗ್ನಿದಾಹದ ಹಿಂದಿನ ರಾತ್ರಿ ಮಂಗಳವೇಡೆಯ ಚಾಲುಕ್ಯ ಬಿಡಾರದಲ್ಲಿ ಏನು ನಡೆಯಿತೆಂಬುದು ಯಾರಿಗೂ ತಿಳಿಯದು, ಸೋಮೇಶ್ವರ. ಆ ರಹಸ್ಯವನ್ನು ಭೇದಿಸುವುದು ನನ್ನ ಉದ್ದೇಶವೂ ಅಲ್ಲ. ಮರುದಿನ ಮುಂಜಾವಿನಲ್ಲಿ ರಾಣಿ ಕಾಮೇಶ್ವರಿಯ ದಾಸಿಯೊಬ್ಬಳು ಕುಮಾರ ಪ್ರೇಮಾರ್ಣವನನ್ನು ಸಂಗಡ ಕರೆದುಕೊಂಡು ಚಾಲುಕ್ಯ ಬಿಡಾರವನ್ನು ಬಿಟ್ಟಳೆಂಬುದು ಅನೇಕರಿಗೆ ತಿಳಿದಿದೆ. ಶರಣರ ಒಂದು ಯಾತ್ರಾದಳದೊಡನೆ ಆ ದಾಸಿ ಕಲ್ಯಾಣಕ್ಕೆ ಬಂದು ಜಗದೇಕಮಲ್ಲನನ್ನು ನೋಡಿ ಕಾಮೇಶ್ವರಿ ಕಳುಹಿಸಿದ್ದ ಸಂದೇಶವನ್ನು ತಲುಪಿಸಿದಳು. ರಾಜಗೃಹದಲ್ಲಿ ನಾನು ನಡೆಸಿದ ಸಂಶೋಧನೆಯಲ್ಲಿ ಈ ಪತ್ರಗಳು ಸಿಕ್ಕವು."

–ಎಂದು ಕ್ರಮಿತನು ರಾಣಿಯ ಸಂದೇಶವಿದ್ದ ಎದೆಕಟ್ಟಿನ ತುಂಡನ್ನೂ, ದಾಸಿ ಉಷಾವತಿ ಜಗದೇಕಮಲ್ಲನಿಗೆ ಬರೆದಿದ್ದ ಪತ್ರವನ್ನೂ ಮುಂದಿಟ್ಟನು. ರಾಣಿಯ ಸಂದೇಶ ಈ ರೀತಿಯಿತ್ತು :

ಕುಮಾರ ಸೋಮೇಶ್ವರನ ಪಟ್ಟಾಭಿಷೇಕಕ್ಕಾಗಿ ರಾಜಾತಿಥಿಯಾಗಿ ಮಂಗಳವೇಡೆಗೆ ಹೋಗಿದ್ದ ನನ್ನ ಬಿಡಾರಕ್ಕೆ ಮಾಘ ಶುದ್ಧ ನವಮಿಯಂದು ಸರಿರಾತ್ರಿಯಲ್ಲಿ ಬಿಜ್ಜಳನು ವಂಚನೆಯಿಂದ ಬಂದು ನನ್ನ ಮಾನಹರಣ ಮಾಡಿದನು. ಆ ದಾನವನ ಸ್ಪರ್ಶದಿಂದ ಕಳಂಕಿತವಾದ ದೇಹವನ್ನು ಅಗ್ನಿಯಿಂದ ದಹಿಸಲು ನಿರ್ಧರಿಸಿದ್ದೇನೆ. ನನ್ನ ಭಾಗಕ್ಕೆ ಮರಣವೇ ಮಹಾನವಮಿ. ಈ ಸಂದೇಶ ನಿಮಗೆ ತಲಪುವಷ್ಟರಲ್ಲಿ ಈ ಅಭಾಗಿನಿಯ ಮರಣದ ಸುದ್ದಿಯನ್ನು ನೀವು ಕೇಳುವಿರಿ. ಬಿಜ್ಜಳನು ಶರಣಧರ್ಮದ ಪರಮಶತೃ. ಚಾಲುಕ್ಯರಾಜ್ಯದ ಎಲ್ಲ ಶೈವಮತಗಳನ್ನೂ ನಾಶಮಾಡಿ ಶರಣಧರ್ಮವನ್ನು ನಿರ್ಮೂಲಗೊಳಿಸುವುದು ಅವನ ಉದ್ದೇಶ. ಚಾಲುಕ್ಯರ ಹೆಸರನ್ನು ಇತಿಹಾಸದಿಂದ ತೊಡೆದು ಹಾಕಿ ಕಲಚೂರ್ಯ ಸಾಮ್ರಾಜ್ಯವನ್ನು ಸ್ಥಾಪಿಸಲು ಅವನು ಹವಣಿಸುತ್ತಿದ್ದಾನೆ. ಈ ದಾನವರೂಪೀ ನಿರಂಕುಶ ಪ್ರಜಾಪೀಡಕನನ್ನು ವಧಿಸಿ ಚಾಲುಕ್ಯ ರಾಜ್ಯವನ್ನು, ಶರಣಧರ್ಮವನ್ನು, ವಿಪತ್ತಿನಿಂದ ಉದ್ಧರಿಸುವ ಧೈರ್ಯ ಸಾಹಸಗಳು ನಿಮಗಿದೆಯೆ? ಅದರಿಂದ ಮಾತ್ರವೇ ನಾನು ಕಳಂಕ ವಿಮುಕ್ತೆಯಾಗುವೆನು. ನನ್ನ ಆತ್ಮಕ್ಕೆ ಶಾಂತಿ ದೊರಕುವುದು.

ಇತಿ ಚರಣದಾಸಿ, ಕಾಮೇಶ್ವರಿ.

ದಾಸಿ ಉಷಾವತಿ ತನ್ನ ಪತ್ರದಲ್ಲಿ, ತಾನು ವೇಷಾಂತರದಿಂದ ರಾಜಗೃಹಕ್ಕೆ ಬಂದು ಜಗದೇಕಮಲ್ಲನಿಗೆ ಸಂದೇಶ ಮುಟ್ಟಿಸಿದ ವಿವರಗಳನ್ನು ತಿಳಿಸಿದ್ದಳು.

ಎರಡು ಪತ್ರಗಳನ್ನೂ ಓದಿದಾಗ ಸೋಮೇಶ್ವರನಿಗೆ ಎಲ್ಲವೂ ಅರ್ಥವಾಯಿತು.

ಹತ್ಯೆಯ ಬಗೆಗೆ ಕ್ರಮಿತನ ಸಂಶೋಧನೆ ಭದ್ರವಾದ ಅಸ್ತಿವಾರ ಮೇಲೆ ನಿಂತಿದೆ ಎಂಬುದನ್ನು ತಿಳಿದು, ಕ್ರಮಿತನ ಕಡೆ ತಿರುಗಿ, "ಇವು ನಿಮಗೆ ದೊರಕಿದ್ದು ಹೇಗೆ?" ಎಂದು ಕೇಳಿದನು.

ಕ್ರಮಿತನು ಹೇಳಿದನು– "ರಾಜಗೃಹ ನಮ್ಮ ವಶವಾದ ಮೇಲೆ ಜಗದೇಕ ಮಲ್ಲರಸರ ಶಯನಾಗಾರದಲ್ಲಿ ಬಟ್ಟೆಗಳ ಅಡಿಯಲ್ಲಿ ರಕ್ತದ ಕಲೆಗಳಿದ್ದ ದೀವಟಿಗ ಸಮವಸ್ತ್ರವೊಂದು ಸಿಕ್ಕಿತು. ಮೃತದೇಹದ ಬಟ್ಟೆಗಳನ್ನು ಬದಲಾಯಿಸಿದವರು ಅಲ್ಲಿ ಅದನ್ನು ಅವಿಚಿಟ್ಟಿದ್ದರು. ಸಮವಸ್ತ್ರದ ಕಿಸೆಯಲ್ಲಿ ಈ ಪತ್ರಗಳಿದ್ದವು."

"ಈ ಸಂಬಂಧದಲ್ಲಿ ಚೆನ್ನಬಸವಣ್ಣನವರು ಕುಮಾರ ಪ್ರೆಮಾರ್ಣವನಿಗೆ ಆಶ್ರಯ ಕೊಟ್ಟದ್ದು, ಅವನನ್ನು ಕರ್ಹಾಡಕ್ಕೆ ಕಳುಹಿಸಲು ಮಾಚಿದೇವರು ಏರ್ಪಡಿಸಿದ್ದು ಯುಕ್ತವೇ ಎಂದು ಯೋಚಿಸುತ್ತಿದ್ದೇನೆ. ಶರಣರು ತಮ್ಮ ವರ್ತನೆಯಿಂದ...."

ಸೋಮೇಶ್ವರನಿಗೆ ಮಾತು ಮುಗಿಸುವ ಅವಕಾಶವನ್ನೂ ಕೊಡದೆ ಕ್ರಮಿತನು ಹೇಳಿದನು : "ಮಾಚಿದೇವ, ಚೆನ್ನಬಸವಣ್ಣನವರು ಧರ್ಮನೀತಿಗಳಿಗೆ ಅನುಸಾರವಾಗಿ ನಡೆದುಕೊಂಡರು, ಸೋಮೇಶ್ವರ, ವಿಪದ್ಗ್ರಸ್ತರಿಗೆ ನೆರವಾಗುವುದು ಮಾನವ ಧರ್ಮ. ಆ ಬಾಲಕನನ್ನೂ ದಾಸಿಯನ್ನೂ ಬಿಜ್ಜಳರಾಯರೇ ಸುರಕ್ಷಿತವಾಗಿ ಕರ್ಹಾಡಕ್ಕೆ ವಿಜಯಾರ್ಕದೇವರ ಬಳಿಗೆ ಕಳುಹಿಸಬೇಕಾಗಿತ್ತು. ಮಾಚಿದೇವರು ಆ ಕಾರ್ಯ ಮಾಡಿದರು. ಅದರಲ್ಲಿ ಯಾವ ರಾಜಕೀಯ ಉದ್ದೇಶವೂ ಇರಲಿಲ್ಲ."

"ಸಂದೇಶದ ನುಡಿಗಳು ಶರಣರಿಗೆ ತಿಳಿದಿದ್ದಿತೆ ?"

"ಜಗದೇಕಮಲ್ಲನಿಗೆ ತಿಳಿಸುವವರೆಗೆ ರಾಣಿಯ ಸಂದೇಶ ರಹಸ್ಯವಾಗಿತ್ತೆಂಬುದನ್ನು ದಾಸಿಯ ಪತ್ರದಿಂದ ತಿಳಿಯಬಹುದು. ದಾಸಿ ಜಗದೇಕಮಲ್ಲನನ್ನು ನೋಡಿದಳೆಂಬುದು ಶರಣರಿಗೆ ತಿಳಿಯದು. ಆಗ ಅವರು ವಲಸೆ ಹೋಗುವ ಸಿದ್ಧತೆಯಲ್ಲಿ ಮಗ್ನರಾಗಿದ್ದರು."

ಆಗ ಸೋಮೇಶ್ವರನು ಉಷಾವತಿಯ ಪತ್ರವನ್ನೂ, ರಾಣಿಯ ಸಂದೇಶವಿದ್ದ ಕಂಚುಕದ ತುಂಡನ್ನೂ ಕೈಯಲ್ಲಿ ಹಿಡಿದು, "ಈಗ ಇವುಗಳನ್ನು ಏನು ಮಾಡಬೇಕೆಂದು ನಿಮ್ಮ ಸಲಹೆ?" ಎಂದನು.

"ಇವುಗಳನ್ನು ನಾನೇ ನಿಮಗೆ ಕೊಡುವುದು ನನ್ನ ಉದ್ದೇಶವಾಗಿತ್ತು, ಸೋಮೇಶ್ವರ. ಆ ಕಾರ್ಯ ಮುಗಿಯಿತು. ನೀವು ಈ ಪತ್ರಗಳನ್ನು ಪ್ರೇಮದ ಸರ್ವವ್ಯಾಪೀ ಶಕ್ತಿಯ ನಿದರ್ಶನವಾಗಿ ನಿಮ್ಮಲ್ಲಿಯೇ ಇಟ್ಟುಕೊಳ್ಳಬಹುದು, ಇಲ್ಲವೇ ನಿಮ್ಮ ತಂದೆಯವರ ಅವಿಚಾರ ವರ್ತನೆಯ ಪ್ರತ್ಯಕ್ಷ ಸಾಕ್ಷ್ಯಗಳೆಂದು ತಿಳಿದು ಸುಟ್ಟು ಹಾಕಬಹುದು. ಇನ್ನು ವಾನಪ್ರಸ್ಥಕ್ಕೆ ಅನುಮತಿ ಬೇಡುತ್ತೇನೆ,"

–ಎಂದು ಕ್ರಮಿತನು ಆಸನದಿಂದೆದ್ದನು.

“ನಿಮ್ಮ ಕಾರ್ಯದಕ್ಷತೆ ಸ್ವಾಮಿನಿಷ್ಠೆಗಳಿಗಾಗಿ ನಾನು ಕೃತಜ್ಞನು, ಕ್ರಮಿತರೆ. ವಾನಪ್ರಸ್ಥ ನಿಮ್ಮ ಉದ್ದೇಶವಾದರೆ ನಾನು ತಡೆಯುವುದಿಲ್ಲ. ಆತ್ಮೋದ್ಧಾರಕ್ಕೆ ಅಡ್ಡಿ ಬರುವುದು ಸಲ್ಲ,” ಎಂದು ಹೇಳಿ ಸೋಮೇಶ್ವರನು ಕ್ರಮಿತನ ಪಾದಗಳನ್ನು ಮುಟ್ಟಿ ನಮಸ್ಕಾರ ಮಾಡಿ, ಬೀಳ್ಕೊಡುವ ಮುನ್ನ, “ಇನ್ನೊಂದು ಪ್ರಶ್ನೆ ಉಳಿದಿದೆ,” ಎಂದನು.

“ಕೇಳಬಹುದು, ಸೋಮೇಶ್ವರ.”

“ತಂದೆಯ ಕೊಲೆಗೆ ಶರಣರು ಕಾರಣವೆಂದು ಮಾಧವ ನಾಯಕನು ಮಾಡುತ್ತಿರುವ ಪ್ರಚಾರದ ಅರ್ಥವೇನು ? ಅದರಲ್ಲಿ ಸತ್ಯವಿದೆಯೆ ?”

ಆರುವ ಮೊದಲು ದೀಪ ಕೊನೆಯ ಸಾರಿ ಮಿನುಗುವಂತೆ ಕ್ರಮಿತನ ಮುಖದಲ್ಲಿ ತಿರಸ್ಕಾರದ ನಗುವೊಂದು ಮಿನುಗಿತು. ಅವನು ಹೇಳಿದನು :

“ಶರಣಧರ್ಮದ ಮೇಲಿನ ವಿದ್ವೇಷವೇ ಮಾಧವ ನಾಯಕನ ಎಲ್ಲ ಚಟುವಟಿಕೆಗಳ ಕಾರಣ. ಬಿಜ್ಜಳರಾಯರು ಅವನನ್ನು ಮಹಾದಂಡ'ನಾಯಕನನ್ನಾಗಿ ನೇಮಿಸಿಕೊಂಡದ್ದೇ ಕಲ್ಯಾಣದ ನಾಶಕ್ಕೆ ಕಾರಣವಾಯಿತು. ಶೈವಮಠ ಮಂದಿರಗಳನ್ನು ನಾಶಮಾಡಿ ಚಾಲುಕ್ಯರಾಜ್ಯದಲ್ಲಿ ಮತೀಯ ಕಲಹದ ವಿಷಬೀಜವನ್ನು ಬಿತ್ತಿದ ದೇಶದ್ರೋಹಿ ಅವನು. ಕೂಡಲೆ ಎಲ್ಲ ಅಧಿಕಾರವನ್ನು ನೀವೇ ವಹಿಸಿಕೊಂಡು ಮಾಧವ ನಾಯಕನನ್ನು ನಿವೃತ್ತನನ್ನಾಗಿ ಮಾಡಿರಿ. ಇಲ್ಲವೇ ಅವನ ಶರಣದ್ವೇಷ ಕಲ್ಯಾಣದಂತೆ ಚಾಲುಕ್ಯರಾಜ್ಯವನ್ನೂ ನಾಶಮಾಡುವುದು.

“ರಾಜಾಂತಃಪುರಗಳ ರಹಸ್ಯ ರಕ್ಷಣೆಯಲ್ಲಿ ನಮ್ಮ ರಾಜಮಹಾರಾಜರು ಚತುರರು, ನಿಷ್ಣಾತರು. ರಾಣಿ ಕಾಮೇಶ್ವರಿಯ ಮಾನಸಂರಕ್ಷಣೆಯ ಉದ್ದೇಶದಿಂದ ಜಗದೇಕಮಲ್ಲ ಬೊಮ್ಮರಸರು ಅರಮನೆಯಿಂದ ಹೊರಗೆ ಬಂದಾಗ ‘ಹರಳಯ್ಯ ಮಧುವಯ್ಯಗಳನ್ನು ನೋಯಿಸಿದ ಪರವಾದಿ ಬಿಜ್ಜಳನನ್ನು ಕೊಂದ ವೀರ ಕುಮಾರರು ನಾವು !’ ಎಂದು ಬೊಬ್ಬಿಟ್ಟುದಾಗಿ ಕಾವಲುಗಾರರು ಹೇಳುತ್ತಾರೆ. ಈ ಅಸತ್ಯ ಪ್ರಚಾರದ ಮರಳು ನೆಲದ ಮೇಲೆ ಅಪವಾದದ ಗೋಪುರ ಕಟ್ಟಲು ಮಾಧವ ನಾಯಕನು ಪ್ರಯತ್ನಿಸುತ್ತಿದ್ದಾನೆ.

“ತಮ್ಮ ಕೊನೆಗಾಲದಲ್ಲಿ ಬಿಜ್ಜಳರಾಯರು ಅನುಸರಿಸಿದ ಕಠೋರ ನೀತಿಯಿಂದ ಶರಣರಿಗೆ ಅನ್ಯಾಯವಾಗಿದೆ. ಹಿಂಸೆ ಅತ್ಯಾಚಾರಗಳಿಗೆ ಅವರು ಗುರಿಯಾಗಿದ್ದಾರೆ. ನಿಮ್ಮ ಆಡಳಿತದಲ್ಲಿ ಶರಣರನ್ನು ನ್ಯಾಯ ಔದಾರ್ಯಗಳಿಂದ ನಡೆಸಿಕೊಳ್ಳಿರಿ.

"ಬಸವಣ್ಣನವರು ಕಲ್ಯಾಣವನ್ನು ಬಿಟ್ಟ ಆ ಚರಿತ್ರಾರ್ಹವಾದ ದಿನ, ನಗರದ ಪಾಂಥನಿವಾಸವೊಂದರಲ್ಲಿ ಅಗ್ಗಳನು ಹೇಳಿದ ಸುಭಾಷಿತ ಇಂದು ನನಗೆ ನೆನಪಿಗೆ ಬರುತ್ತಿದೆ :

"ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು
ಲಕ್ಷ್ಮೀಃ ಸಮಾವಿಶತು ಗಚ್ಛತು ವಾ ಯಥೇಷ್ಟಂ
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ
ನ್ಯಾಯಾತ್ ಪಥಃ ಪ್ರವಿಚಲಂತಿ ಪದಂ ನ ಧೀರಾಃ

"ಬುದ್ಧಿಜೀವಿಗಳು ಹೊಗಳಲಿ, ತೆಗಳಲಿ; ಸಿರಿಸಂಪತ್ತು ಬರಲಿ, ಹೋಗಲಿ; ಇಂದೇ ಮೃತ್ಯು ಎದುರಿಗೆ ನಿಲ್ಲಲಿ, ಅಥವಾ ಯುಗಾಂತರದಲ್ಲಿ ಅದು ಸಂಭವಿಸಲಿ; ಧೀರರು ನ್ಯಾಯದ ಹಾದಿಯಿಂದ ಒಂದು ಹೆಜ್ಜೆ ಕೂಡ ಅತ್ತ ಇತ್ತ ಸರಿಯುವುದಿಲ್ಲ. ತಾವು ಅಂತಹ ಧೀರರೆಂಬುದನ್ನು ತಮ್ಮ ವರ್ತನೆಯಿಂದ ಶರಣರು ಜಗತ್ತಿಗೆ ನಿದರ್ಶನ ಮಾಡಿಕೊಟ್ಟಿದ್ದಾರೆ. ಅವರು ತೋರಿಸಿದ ದಾರಿ ನಮ್ಮ ಜೀವನದ ಹೆದ್ದಾರಿಯಾಗಲಿ,"

–ಎಂದು ಹೇಳಿ ಕ್ರಮಿತನು ಬೀಳ್ಕೊಡುಗೆಯ ವಿನಯಾಚಾರಕ್ಕಾಗಿ ಕಾಯದೆ ಅಲ್ಲಿಂದ ಹೊರಟನು.

ಆ ರಾತ್ರಿಯೇ ಅವನು ತಾನು ಆರ್ಜಿಸಿದ್ದ ಸಿರಿಸಂಪತ್ತುಗಳನ್ನೂ, ಪತ್ನೀ ಪುತ್ರರನ್ನೂ ತ್ಯಜಿಸಿ, ಏಕಾಂಗಿಯಾಗಿ ಕಲ್ಯಾಣವನ್ನು ಬಿಟ್ಟನು. ಆಮೇಲೆ ಇಹಲೋಕದಲ್ಲಿ ಅವನನ್ನು ಯಾರೂ ನೋಡಲಿಲ್ಲ.

* * * *

# ಉಪಸಂಹಾರ

ತಂಗಡಿಯ ಕದನದಲ್ಲಿ ಸೋತು ಗಾಯಗೊಂಡಿದ್ದ ಮಾಧವ ನಾಯಕನು ಎರಡು ದಿನಗಳ ಅನಂತರ ಕಲ್ಯಾಣಕ್ಕೆ ಹಿಂದಿರುಗಿ ನಗರದ ಹೊರಗಿನ ಬಯಲಲ್ಲಿ ಶಿಬಿರ ಹಾಕಿ, ಸಂದರ್ಶನಕ್ಕಾಗಿ ಅನುಮತಿ ಕೇಳಲು ತನ್ನ ಕಾರ್ಯದರ್ಶಿಯನ್ನು ಸೋಮೇಶ್ವರನ ಬಳಿಗೆ ಕಳುಹಿಸಿದನು. ಶರಣರ ಮೇಲೆ ಹಾಗೂ ಕಲ್ಯಾಣದ ನಾಗರಿಕರ ಮೇಲೆ ತಾನು ನಡೆಸಿದ ಹಿಂಸಾಕೃತ್ಯಗಳ ಬಗೆಗೆ ಸೋಮೇಶ್ವರನ ಪ್ರತಿಕ್ರಿಯೆಯನ್ನು ತಿಳಿಯುವುದು ಅವನ ಉದ್ದೇಶವಾಗಿತ್ತು.

ನಿರೀಕ್ಷಿಸಿದ್ದಂತೆ ಸೋಮೇಶ್ವರನು ದರ್ಶನಕ್ಕೆ ಅನುಮತಿ ಕೊಡಲಿಲ್ಲ. ಪ್ರತಿಯಾಗಿ ತನ್ನ ಸೈನ್ಯದಳದ ಮುಖ್ಯಾಧಿಕಾರಿಯನ್ನು ತನ್ನ ಸಂದೇಶದೊಡನೆ ಮಾಧವ ನಾಯಕನ ಶಿಬಿರಕ್ಕೆ ಕಳುಹಿಸಿದನು.

"ಮಹಾದಂಡನಾಯಕ ಪದವಿಯ ಎಲ್ಲ ಅಧಿಕಾರಗಳನ್ನು ಪ್ರಭುಗಳು ತಾವೇ ವಹಿಸಿಕೊಂಡು ನಿಮ್ಮನ್ನು ಸುರಪುರದ ಮಂಡಲಾಧಿಕಾರಿಯಾಗಿ ನೇಮಿಸಿದ್ದಾರೆ," ಎಂದು ಹೇಳಿ ಮುಖ್ಯಾಧಿಕಾರಿಯು ನಿರೂಪವನ್ನು ಕೈಗೆ ಕೊಟ್ಟಾಗ ಮಾಧವ ನಾಯಕನಿಗೆ ಆಕಾಶವೇ ಕಳಚಿಬಿದ್ದಂತಾಯಿತು. ನಗರದ ಎಲ್ಲ ಮಹಾದ್ವಾರಗಳು, ಸಮೀಪದ ಕೋಟೆ ಕೊತ್ತಳಗಳು ಸೋಮೇಶ್ವರನ ವಶದಲ್ಲಿರುವುದೆಂದು ಮುಖ್ಯಾಧಿಕಾರಿಯಿಂದ ತಿಳಿದಾಗ ರಾಜಾಜ್ಞೆಯನ್ನು ಪ್ರತಿಭಟಿಸುವ ಅವಕಾಶವೂ ತಪ್ಪಿತೆಂದು ನಿರ್ಧರಿಸಿದಕೊಂಡನು.

"ಪ್ರಭುಗಳ ಆಜ್ಞೆಯನ್ನು ಶಿರಸಾವಹಿಸಿ ನಡೆಯುತ್ತೇನೆ," ಎಂದು ಮುಖ್ಯಾಧಿಕಾರಿಗೆ ಹೇಳಿಕಳುಹಿಸಿ, ಆ ರಾತ್ರಿಯೇ ರಹಸ್ಯವಾಗಿ ಶಿಬಿರವೆತ್ತಿ, ಉಳಿದಿದ್ದ ತನ್ನ ಅಲ್ಪ ಸೈನ್ಯದೊಡನೆ ವಿಜಯಪುರ ಮಂಡಲದಲ್ಲಿದ್ದ ತನ್ನ ಉಂಬಳಿ ಗ್ರಾಮವಾದ ಮಾಗಳಿಗೆ ಹೋದನು.

ಸೋಮೇಶ್ವರನಿಗೆ ಈ ವಿಚಾರ ವರದಿಯಾದಾಗ, "ದಂಡನಾಯಕರಿಗೆ ವಿಶ್ರಾಂತಿ ಅಗತ್ಯ. ನಾವು ಪುನಃ ಆಜ್ಞೆಮಾಡುವವರೆಗೆ ಅವರು ಅಲ್ಲಿಯೇ ಇರಲಿ," ಎಂದು ಹೇಳಿ ಸುರಪುರಕ್ಕೆ ಬೇರೊಬ್ಬ ಮಾಂಡಲಿಕನನ್ನು ಕಳುಹಿಸಿದನು. ಆಗಲೆ

ಅವನ ಅಸಮಾಧಾನ ಅರ್ಧ ಮುಗಿದಿತ್ತು. ಎರಡು ವರ್ಷಗಳ ಮೇಲೆ ಅವನ ಸಹೋದರ ಮೈಲುಗಿ ಮಂಗಳವೇಡೆಯನ್ನು ಆಕ್ರಮಿಸಿಕೊಂಡು ಅಣ್ಣನ ಮೇಲೆ ಯುದ್ಧ ಹೂಡಿದಾಗ ಸೋಮೇಶ್ವರನು ಮಾಧವ ನಾಯಕನನ್ನು ಹಿಂದಕ್ಕೆ ಕರೆಸಿಕೊಂಡು ಪುನಃ ದಂಡನಾಯಕನನ್ನಾಗಿ ಮಾಡಿದನು.

ತೈಲಪನ ಕಿರಿಯ ಸಹೋದರ ನಾಲ್ವಡಿ ಸೋಮೇಶ್ವರನು ಚಾಲುಕ್ಯ ರಾಜಸತ್ತೆಯ ಪುನಃಪ್ರತಿಷ್ಠೆಗಾಗಿ ಆ ಸಂದರ್ಭದಲ್ಲಿ ಮತ್ತೆ ಪ್ರಯತ್ನಿಸಿದನು. ಗೋವೆಯ ಕದಂಬ ಅರಸು ಜಯಕೇಶಿ, ಬನವಾಸಿ, ಹಾನಗಲ್ಲುಗಳ ಕದಂಬ ವಂಶೀಯ ಸಾಮಂತರು, ಓರಂಗಲ್ಲಿನ ಕಾಕತೀಯರು, ಉಚ್ಚಂಗಿಯ ಪಾಂಡ್ಯರು, ಕರ್ಹಾಡದ ವಿದ್ಯಾಧರ ವಂಶದ ವಿಜಯಾರ್ಕನು, ದೇವಗಿರಿಯ ಯಾದವ ಭಿಲ್ಲಮನು, ಚಾಲುಕ್ಯ ಸೋಮೇಶ್ವರನ ಪಕ್ಷ ವಹಿಸಿ ಸಹಕಾರ ನೀಡಿದರು. ಆಗ ನಡೆದ ಯುದ್ಧಗಳಲ್ಲಿ ಮಾಧವ ನಾಯಕನಿಗೆ ಜಯವಾಯಿತು. ಕಲಚೂರ್ಯ ಸೋಮೇಶ್ವರನ ಕಾಲದ ಒಂದು ಶಾಸನದಲ್ಲಿ ಮಾಧವ ನಾಯಕನು 'ಕಲಚುರಿ ಭೂಪಾಲವಿಪುಳ ರಾಜ್ಯೋದ್ಧರಣಂ,' ಎಂದು ಪ್ರಶಂಸಿಸಲ್ಪಟ್ಟಿದ್ದಾನೆ.

ಕುರುಗೋಡಿನಲ್ಲಿ ಮಾಚಿದೇವರಿಂದ ಬೀಳ್ಕೊಂಡ ಶರಣರ ಯಾತ್ರಾ ತಂಡ, ಚೆನ್ನಬಸವಣ್ಣನವರ ನೇತೃತ್ವದಲ್ಲಿ ಹುಬ್ಬಳ್ಳಿ ಧಾರವಾಡಗಳ ಮಾರ್ಗವಾಗಿ ಯಾವ ದುರ್ಘಟನೆಗಳೂ ಇಲ್ಲದೆ ನಿಧಾನವಾಗಿ ಪಯಣಮಾಡುತ್ತ ಉಳಿವೆಯನ್ನು ಸೇರಿತು. ಗೋವೆಯ ಜಯಕೇಶಿಯ ಸಾಮಂತರಾಗಿದ್ದ ಸೂಪಕಂಪಣದ ಹರಿಯಪ್ಪರಾಣಿ ಮತ್ತು ಬೊಪ್ಪದೇವರಾಣಿ ಎಂಬ ಹೆಗ್ಗಡಿತಿಯರು ಉಳಿವೆಯ ಮಹಮನೆ ಶಿವಪುರಗಳ ರಚನೆಗೆ ಸಹಾಯ ಮಾಡಿದರು. ಅತ್ಯಲ್ಪ ಕಾಲದಲ್ಲಿ ಉಳಿವೆಯ ಮಹಮನೆ, ನಾಡಿನ ಎಲ್ಲ ಕಡೆ ಪ್ರಸಿದ್ಧ ಪಡೆದ ಓರಂಗಲ್, ಕೊಂಡವೀಡು, ಅನಂತಪುರ, ಭಾಗಾನಗರ, ರಾಯಚೂರು, ಹಂಪೆ, ಆನೆಗೊಂದಿ, ಹೊನ್ನಾವರು, ಮಂಗಳೂರು, ಬೆಂಗಳೂರು, ಶ್ರೀರಂಗಪಟ್ಟಣ, ತೆರಕಣಾಂಬಿ ಮುಂತಾದ ಕಡೆಗಳಿಂದ ಶರಣರನ್ನು ಆಕರ್ಷಿಸಿತು. ಅಲ್ಲಿ ಆಗಾಗ ನಡೆಯುತ್ತಿದ್ದ ಗಣಪರ್ವಗಳೂ ಚಾಲುಕ್ಯ, ಹೊಯ್ಸಳ, ಕಾಕತೀಯ ನಾಡುಗಳಲ್ಲಿ ಶರಣಧರ್ಮ ಹರಡಲು ಕಾರಣವಾಯಿತು. ಅಪರಿಮಿತ ಪರಿಶ್ರಮದಿಂದ, ಕಲ್ಯಾಣದ ಅನುಭವಮಂಟಪದಿಂದ ಉಳಿವೆಗೆ ತಂದ ಸರಸ್ವತೀ ಭಂಡಾರವನ್ನು ಚೆನ್ನಬಸವಣ್ಣನವರು ವಿಪುಲವಾಗಿ ವೃದ್ಧಿಗೊಳಿಸಿದರು. ವಚನ ಸಂಗ್ರಹ, ಪ್ರಬಂಧಗಳ ಪ್ರತಿ ಮಾಡಿಸಿ ನಾಡಿನ ಎಲ್ಲ ಶೈವಮಠಗಳಿಗೆ ಹಂಚಿಸಿದರು. ಈ ಜ್ಞಾನ ಪ್ರಸಾರ ಕಾರ್ಯದಲ್ಲಿ ಚೆನ್ನಬಸವಣ್ಣನವರಿಗೆ ಅಗತ್ಯವಾದ ಎಲ್ಲಾ ರೀತಿಯ ಜನ, ಮನ, ಧನ ಸಹಾಯಗಳನ್ನು ಒದಗಿಸಿದ ಓರಂಗಲ್ಲಿನ

ಪ್ರತಾಪರುದ್ರ, ಸೋವೆಯ ಕದಂಬ ಜಯಕೇಶಿ, ಬನವಾಸಿಯ ಕದಂಬ ಸಾಮಂತ ಕಾಮದೇವ, ಉಚ್ಚಂಗಿಯ ವೀರಪಾಂಡ್ಯ–ಮುಂತಾದವರುಗಳು ಇತಿಹಾಸ ಪ್ರಸಿದ್ಧರು.

ಬಸವಣ್ಣನವರ ಕುಮಾರ ಸಂಗಮನಾಥನು ಪ್ರಾಪ್ತವಯಸ್ಕನಾಗುವವರೆಗೆ ಗಂಗಾಂಬಿಕೆ ಜೀವಿಸಿದ್ದು ಅನಂತರ ಲಿಂಗೈಕ್ಯಳಾದಳು. ನಾಗಲಾಂಬೆಯು ಅದಕ್ಕಿಂತ ಹೆಚ್ಚುಕಾಲ ಜೀವಿಸಿದ್ದು ಹೊಯ್ಸಳ ನಾಡಿನ ಬಾಳೆಹೊನ್ನೂರಿನಲ್ಲಿ ಲಿಂಗೈಕ್ಯಳಾದಳೆಂದು ಐತಿಹ್ಯ ತಿಳಿಸುತ್ತದೆ.

ಅಗ್ಗಳ ಬ್ರಹ್ಮಶಿವಪಂಡಿತರು ಉದ್ದೇಶಿಸಿದ್ದಂತೆ ಉತ್ತರಾಪಥದ ಯಾತ್ರಾತಂಡದೊಡನೆ ಪ್ರಯಾಣಮಾಡಿ ಕರ್ಹಾಡಕ್ಕೆ ಹಿಂದಿರುಗಿದರು. ವಿಜಯಾರ್ಕನು ಅವರಿಗೆ ಆಶ್ರಯ ಕೊಟ್ಟನು. ಅಗ್ಗಳನ ಕೆಲವು ಪದ್ಯಗಳು ವಲ್ಲಭದೇವನ "ಸುಭಾಷಿತಾವಳಿ" ಯಲ್ಲಿ ಉದ್ಧೃತವಾಗಿವೆ.

ಕುಮಾರ ಪ್ರೇಮಾರ್ಣವನು ಪ್ರಾಪ್ತವಯಸ್ಕನಾಗುವಷ್ಟರಲ್ಲಿ ಕಲಚೂರ್ಯ ಪರ್ಯಾಯ ಮುಗಿದು ಚಾಲುಕ್ಯ ರಾಜ್ಯವು ಚೂರಾಪಾರಾಗಿ ಒಡೆದುಹೋಗಿತ್ತು. ತೈಲಪನ ಕಿರಿಯ ಸಹೋದರ ನಾಲ್ವಡಿ ಸೋಮೇಶ್ವರನು ಚಾಲುಕ್ಯ ಪುನಃಪ್ರತಿಷ್ಠೆಗಾಗಿ ಆಗಾಗ ಪ್ರಯತ್ನ ನಡೆಸುತ್ತಿದನು. ಈ ಬಗೆಯ ಎಲ್ಲ ರಾಜಕೀಯ ಚಟುವಟಿಕೆಗಳಿಂದ ದೂರವಾಗಿದ್ದ ಪ್ರೇಮಾರ್ಣವನು ಕರ್ಹಾಡದಲ್ಲಿ ತನ್ನ ಬಂಧುಗಳ ಆಶ್ರಯದಲ್ಲಿ ಶಾಂತಿಯುತ ಬದುಕನ್ನು ಕಳೆದನು.

ಮೋಳಿಗೆ ಮಾರಯ್ಯನವರು ಕ್ರಾಂತಿ ಮುಗಿದ ಮೇಲೂ ಕೆಲವು ವರ್ಷಗಳು ಕಲ್ಯಾಣದಲ್ಲಿದ್ದರು. ಒಂದು ವಚನದಲ್ಲಿ ಅವರು ೧೨೦ ವರ್ಷ ಜೀವಿಸಿದ್ದುದಾಗಿ ತಾವೇ ಹೇಳಿಕೊಂಡಿದ್ದಾರೆ.

ಈ ಕಾದಂಬರಿಯಲ್ಲಿ ವರ್ಣಿಸಿದ ಘಟನೆಗಳು ನಡೆದ ಮೇಲೆ ಆರನೆಯ ವರ್ಷದಲ್ಲಿ, ಗೊಂದಲದಲ್ಲಿ ಪ್ರಾರಂಭವಾದ ಕಲಚೂರ್ಯ ಸೋಮೇಶ್ವರನ ಆಳ್ವಿಕೆಯು ಗೊಂದಲದಲ್ಲೇ ಮುಗಿಯಿತು. ಅವನ ಸೋದರರಾದ ಮೈಲುಗಿ, ಸಂಕಮ, ಆಹವಮಲ್ಲ ಮತ್ತು ಸಿಂಘಣರು ಅನುಕ್ರಮವಾಗಿ ಪಟ್ಟಕ್ಕೆ ಬಂದು ಹಲವಾರು ವರ್ಷಗಳು ಆಳಿದರು. ಕೊನೆಕೊನೆಗೆ ಕಲ್ಯಾಣದ ಸುತ್ತುಮುತ್ತಿನ ಪರಿಮಿತಿ ಪ್ರವೇಶ ಮಾತ್ರವೇ ಅವರ ಅಧೀನದಲ್ಲಿತ್ತು. ಕ್ರಿ. ಶ. ೧೧೮೩ ರಲ್ಲಿ, ಬಿಜ್ಜಳನ ಮರಣಾನಂತರ ಹದಿನಾರು ವರ್ಷಗಳ ಅನಂತರ, ಚಾಲುಕ್ಯ ನಾಲ್ವಡಿ ಸೋಮೇಶ್ವರನು ಕೊನೆಯ ಕಲಚೂರ್ಯ ಅರಸು ಸಿಂಘಣನನ್ನು ಯುದ್ಧದಲ್ಲಿ ಸೋಲಿಸಿ ಚಾಲುಕ್ಯ ರಾಜಸತ್ತೆಯನ್ನು ಪುನಃ ಪ್ರತಿಷ್ಠಿಸಿದನು.

* * *

ಕ್ರಿ.ಶ. ಏಳನೇ ಶತಮಾನದಲ್ಲಿ ಮಧ್ಯಭಾರತದ ಕಲಚೂರ್ಯರು ರಾಜ್ಯಭ್ರಷ್ಟರಾಗಿ ದಕ್ಷಿಣ ಭಾರತಕ್ಕೆ ವಲಸೆ ಬಂದರು. ಅವರ ವಂಶೀಯರಿಗೆ ಕಲ್ಯಾಣಿಯ ಚಾಲುಕ್ಯ ಅರಸರ ಆಶ್ರಯ ದೊರಕಿತು. ಅವರಲ್ಲಿ ಪ್ರಖ್ಯಾತನಾದ ಬಿಜ್ಜಳನು ತನ್ನ ಆಶ್ರಯ ದಾತನಾದ ನೂರ್ಮಡಿ ತೈಲಪನನ್ನು ಸೆರೆಯಲ್ಲಿಟ್ಟು ರಾಜ್ಯವನ್ನು ಅಪಹರಿಸಿದನು. ಅವನ ಆಳ್ವಿಕೆಯಲ್ಲಿ ಪ್ರವರ್ಧಮಾನವಾದ ಶರಣಧರ್ಮ ಕೊನೆಕೊನೆಗೆ ಅವನಿಂದಲೆ ಕಷ್ಟಕ್ಕೀಡಾಯಿತು. ಸಂಪ್ರದಾಯಗಳ ಅಂಧಶಕ್ತಿಗೆ ಅಧೀನರಾಗಿ ಅವನತಿಯ ಮಾರ್ಗ ಹಿಡಿದಿದ್ದ ಆಗಿನ ಕಾಲದ ಜನರನ್ನೂ, ಅವರ ಧಾರ್ಮಿಕ ಭರವಸೆಗಳನ್ನೂ ಸುಧಾರಿಸಿ ಅವರನ್ನು ಪ್ರಗತಿಪಥದಲ್ಲಿ ನಡೆಸಿದ ಮಹಾಪರಾಧಕ್ಕಾಗಿ ಶರಣರು ಬಿಜ್ಜಳನ ಆಕ್ರೋಶಕ್ಕೆ ಪಾತ್ರರಾದರು. ಕೊನೆಗೆ ಬಿಜ್ಜಳನ ಹಿಂಸೆಯಿಂದ ಪಾರಾಗಲು ಅವರು ಕಲ್ಯಾಣವನ್ನೇ ಬಿಡಬೇಕಾಯಿತು. ಅದೇ ಸಮಯಕ್ಕೆ ಚಾಲುಕ್ಯ ರಾಜಸತ್ತೆಯ ಪುನರ್‌ಪ್ರತಿಷ್ಠೆಗಾಗಿ ನಡೆಯುತ್ತಿದ್ದ ಸಂಚಿನಲ್ಲಿ ಬಿಜ್ಜಳನು ಹತನಾದನು. ಅವನ ಪುತ್ರರು ಹೆಚ್ಚು ಕಾಲ ಆಳಲು ಶಕ್ತರಾಗಲಿಲ್ಲ.

ಯಾವ ಧರ್ಮವನ್ನು ಬಿಜ್ಜಳನು ಹಿಂಸೆ ದಬ್ಬಾಳಿಕೆಗಳಿಂದ ನಿರ್ಮೂಲಗೊಳಿಸಲು ಪ್ರಯತ್ನಿಸಿ ವಿಫಲನಾದನೋ ಆ ಶರಣಧರ್ಮ ಕಾಲಕ್ರಮದಲ್ಲಿ ಚಾಲುಕ್ಯ ಹೊಯ್ಸಳ ರಾಜ್ಯಗಳ ಪ್ರಭಾವಶಾಲೀ ಧರ್ಮವಾಯಿತು. ಕನ್ನಡನಾಡು ನುಡಿಗಳಿಗೆ ಶರಣರು ಅಪಾರ ಸೇವೆ ಸಲ್ಲಿಸಿದರು. ಬಿಜ್ಜಳನ ಹೆಸರು ಇತಿಹಾಸದಲ್ಲಿ ಇನ್ನೂ ಉಳಿದಿರುವುದು ಆ ಶರಣಧರ್ಮದ ಪ್ರಭಾವದಿಂದಲೆ ಆಗಿದೆ.

ಇದೇನು ಯೋಗಾಯೋಗವೆ ?ವಿಧಿವಿಲಾಸವೆ ? ಕಾಲಕರ್ಮವಿಪಾಕದ ವೈಚಿತ್ರ್ಯವೇ?

ಕಾಲಾಯ ತಸ್ಮೈ ನಮಃ

* * * *

# ಕಡೆಯ ನಾಲ್ಕು ಮಾತು

ಬಿಜ್ಜಳ ಬಸವೇಶ್ವರರನ್ನು ಕುರಿತ ಕಾದಂಬರೀ ಮಾಲಿಕೆಯ ಕೊನೆಯ ಭಾಗವಾದ ಈ ಆರನೆಯ ಹೊತ್ತಿಗೆ, "ಕ್ರಾಂತಿ ಕಲ್ಯಾಣ"ವು ಈಗ ಮಾನ್ಯ ವಾಚಕರ ಮುಂದಿರುತ್ತದೆ.

ಈ ಮಾಲಿಕೆಯ ಮೊದಲ ಕಾದಂಬರಿ "ಉದಯ ರವಿ" ಯಲ್ಲಿ ಬಸವೇಶ್ವರನ ಬಾಲ್ಯ, ವಿವಾಹ, ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿ ನೇಮಕ, ನಿಧಿಶೋಧನೆ, ಈ ಪ್ರಸಂಗಗಳೂ ; ಎರಡನೆಯದಾದ "ರಾಜ್ಯಪಾಲ"ದಲ್ಲಿ, ತೈಲಪ ಬಿಜ್ಜಳರ ನಡುವೆ ನಡೆಯಲಿದ್ದ ಅಂತರ್ಯುದ್ಧವನ್ನು ನಿಲ್ಲಿಸಲು ಬಸವೇಶ್ವರನು ನಡೆಸಿದ ಸಂಧಾನ, ಬನವಾಸಿಯ ರಾಜಪ್ರತಿನಿಧಿಯಾಗಿ ನೇಮಕ, ರಾಜ್ಯಾಪಹಾರವೇ ಬಿಜ್ಜಳನ ಉದ್ದೇಶವೆಂದು ತಿಳಿದಾಗ ಬಸವೇಶ್ವರನ ಪ್ರತಿಭಟನೆ ಮತ್ತು ಅಧಿಕಾರ ನಿವೃತ್ತಿ, ಈ ವಿಚಾರಗಳೂ ; ಮೂರನೆಯದಾದ "ಕಲ್ಯಾಣೇಶ್ವರ"ದಲ್ಲಿ, ಬಸವೇಶ್ವರನಿಂದ ಅನುಭವ ಮಂಟಪದ ಸ್ಥಾಪನೆ, ಅದರ ಅಧ್ಯಕ್ಷ ಸ್ಥಾನಕ್ಕೆ ಅಲ್ಲಮಪ್ರಭುದೇವರ ಆಯ್ಕೆ, ಮತ್ತು ಶೂನ್ಯ ಸಿಂಹಾಸನಾರೋಹಣ, ಬಸವೇಶ್ವರನು ಆಚರಣೆಗೆ ತಂದ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳು–ಇವು ವರ್ಣಿಸಲ್ಪಟ್ಟಿವೆ. ಇದರೊಡನೆ ಈ ಬೃಹತ್ ಕಾದಂಬರಿಯ ಪೂರ್ವಾರ್ಧ ಮುಗಿಯುತ್ತದೆ.

ಐದು ವರ್ಷಗಳ ಅನಂತರ, ಚಾಲುಕ್ಯ ಅರಸೊತ್ತಿಗೆಯ ಪುನರ್‌ಪ್ರತಿಷ್ಠೆಗಾಗಿ ತೈಲಪನ ವಿಧವಾರಾಣೀ ಕಾಮೇಶ್ವರಿಯು ಹೂಡುವ ರಾಜಕೀಯ ಒಳಸಂಚಿನಿಂದ ಮಾಲಿಕೆಯ ನಾಲ್ಕನೆಯ ಭಾಗ, "ನಾಗಬಂಧ" ಪ್ರಾರಂಭವಾಗುತ್ತದೆ. ಈ ಸಂಚಿನ ನಿಜಸ್ವರೂಪ, ಚೆನ್ನಬಸವಣ್ಣನ ನೇತೃತ್ವದಲ್ಲಿ ಶರಣರ ದೇವಗಿರಿ ಯಾತ್ರೆ, ಅಲ್ಲಿಯ ಗುಹೆಯೊಂದರಲ್ಲಿ ಕುಸುಮಾವಳಿಯ ಬಲಿದಾನ, ರಾಷ್ಟ್ರಕೂಟ ಅರಸು ದಂತಿದುರ್ಗನಿಂದ ಕೈಲಾಸನಾಥ ಗುಹಾಲಯದ ರಚನೆಯನ್ನು ಕುರಿತ ಐತಿಹ್ಯ, ಈ ವಿಚಾರಗಳು ಅದರಲ್ಲಿ ನಿರೂಪಿತವಾಗಿವೆ. ಐದನೆಯ ಭಾಗವಾದ "ಮುಗಿಯದ ಕನಸು" ಕಾದಂಬರಿಯಲ್ಲಿ ಸರ್ಪದ್ರಷ್ಟನಾಗಿ ಕಲ್ಯಾಣಕ್ಕೆ ಹಿಂದಿರುಗಿದ ಶೀಲವಂತನನ್ನು ಮರವೆಯಿಂದ ಎಚ್ಚರಿಸಲು ಮಧುವರಸನ ಮಗಳು ಲಾವಣ್ಯವತಿ ಅನುಸರಿಸುವ

ವಿಚಿತ್ರ ಚಿಕಿತ್ಸಾ ವಿಧಾನ, ಲಾವಣ್ಯವತಿ ಶಿಲವಂತರ ವಿವಾಹ, ನಾರಣ ಕ್ರಮಿತನಿಂದ ಆ ವಿವಾಹಕ್ಕೆ ಪ್ರತಿಭಟನೆ, ಬಿಜ್ಜಳನಿಂದ ವರ್ಣಸಂಕರವನ್ನು ಕುರಿತ ಮನವಿಯ ವಿಚಾರಣೆ, ಬಸವೇಶ್ವರನ ದೇಶನಿರ್ವಾಸನ, ಈ ಘಟನೆಗಳನ್ನು ನಿರೂಪಿಸಿದೆ. ಆರನೆಯ ಮತ್ತು ಕೊನೆಯ ಭಾಗವಾದ, "ಕ್ರಾಂತಿ ಕಲ್ಯಾಣ"ದಲ್ಲಿ ಬಸವೇಶ್ವರನ ನಿರ್ವಾಸಾನಂತರ ಕಲ್ಯಾಣದಲ್ಲಿ ತಲೆದೋರಿದ ನಿರಾಶೆಯ ಪರಿಸ್ಥಿತಿ, ತನ್ನ ವಿರುದ್ಧ ನಡೆಯುತ್ತಿದ್ದ ಸಂಚನ್ನು ಎದುರಿಸಲು ಬಿಜ್ಜಳನ ತಂತ್ರ, ಶರಣಧರ್ಮದ ವಿನಾಶಕ್ಕಾಗಿ ಬಿಜ್ಜಳನ ನಿರ್ಧಾರ, ಮಧುವರಸಾದಿಗಳ ಕಗ್ಗೊಲೆ, ಜಗದೇಕಮಲ್ಲ–ಬೊಮ್ಮರಸರಿಂದ ಬಿಜ್ಜಳನ ವಧೆಗೆ ಹೂಡಿದ ಸಂಚು ಕಾರ್ಯಗತವಾದುದು, ಬಿಜ್ಜಳನ ದಬ್ಬಾಳಿಕೆ ದುರಾಡಳಿತಗಳಿಂದ ತಪ್ಪಿಸಿಕೊಳ್ಳಲು ಶರಣರು ಕಲ್ಯಾಣವನ್ನು ಬಿಟ್ಟು ಹೋದದ್ದು, ಅದರಿಂದ ಶರಣರಿಗಾದ ಕಷ್ಟ ಪರಂಪರೆಗಳು, ಪರಿಸಮಾಪ್ತಿ, ಈ ಪ್ರಸಂಗಗಳನ್ನು ವಿವರಿಸಿದೆ. ಇದರೊಡನೆ ಅಖ್ಯಾಯಿಕೆಯ ಉತ್ತರಾರ್ಧ ಮುಗಿಯುತ್ತದೆ. ಈ ಎಲ್ಲ ಘಟನೆಗಳ ಬಗೆಗೆ ಚರಿತ್ರೆ, ಪುರಾಣ, ದಂತಕಥೆಗಳಲ್ಲಿಯೂ ಶರಣರ ವಚನಗಳೇ ಮೊದಲಾದುವುಗಳಲ್ಲಿಯೂ ದೊರಕುವ, ಅನೇಕ ಸಂದರ್ಭಗಳಲ್ಲಿ ಪರಸ್ಪರ ವಿಸಂವಾದಿಯಾದ ಉಲ್ಲೇಖಗಳನ್ನು ಕಲ್ಪನೆಯ ಆಶ್ರಯದಿಂದ ಸಮನ್ವಯಗೊಳಿಸಿ, ಕಲ್ಯಾಣಕ್ರಾಂತಿಯ ಕೊನೆಯ ದಿನಗಳನ್ನು ಪುನರ್ರಚಿಸಲು ಪ್ರಸ್ತುತ ಕಾದಂಬರಿಯಲ್ಲಿ ಪ್ರಯತ್ನಿಸಿದೆ.

ಐತಿಹಾಸಿಕ ವ್ಯಕ್ತಿಗಳಾದ ಜಗದೇಕಮಲ್ಲ–ಬೊಮ್ಮರಸರೇ ಪುರಾಣ ದಂತಕಥೆಗಳ ಜಗದೇವ–ಮಲ್ಲಬೊಮ್ಮರೆಂಬುದು ಈ ಲೇಖಕರ ಗ್ರಹಿಕೆ. ಹೆಸರುಗಳನ್ನು ಪಲ್ಲಟಗೊಳಿಸಿ ವಾಸ್ತವವ್ಯಕ್ತಿಗಳನ್ನು ಸೂಚ್ಯವಾಗಿ ನಿರ್ದೇಶಿಸುವ ಕವಿ ಸಮಯವು ನಮ್ಮಲ್ಲಿ ಹಿಂದಿನಿಂದ ಪ್ರಚಾರದಲ್ಲಿರುವ ಸಂಗತಿಯು ನಮ್ಮ ಪ್ರಾಚೀನ ಸಾಹಿತ್ಯದ ಅಧ್ಯಯನದಿಂದ ತಿಳಿದುಬರುವುದು.

"ಕಲಚುರಿಗಳ ಕರ್ತೃತ್ವವು ಕಟ್ಟುವುದಕ್ಕಿಂತ ಕೆಡಿಸುವ ಕಾರ್ಯದಲ್ಲಿ ಹೆಚ್ಚಾಗಿ ವ್ಯಯವಾದುದರಿಂದ ಅವರ ಕೈವಾಡವನ್ನು ಕನ್ನಡ ನಾಡಿನ ಚಾರಿತ್ರಿಕ ವೃತ್ತಾಂತದಲ್ಲಿ ನಾವು ಮರೆಯುವಂತಿಲ್ಲ."

"ಯುದ್ಧಗಳೂ ಕಲಹಗಳೂ ಆಗಾಗ ನಡೆಯುತ್ತಿರುವಾಗಲೂ ಒಟ್ಟಿನ ಮೇಲೆ ಸುಖಶಾಂತಿಯಿಂದ ಬಾಳಿದ ಕನ್ನಡ ನಾಡಿನಲ್ಲಿ ಕಲಚುರಿಗಳ ಆಕ್ರಮಣದಿಂದ ವಿಷಮ ಪರಿಸ್ಥಿತಿ ನಿರ್ಮಾಣವಾಯಿತು. ರಾಜಕೀಯ ರಂಗದಲ್ಲಿ ಮಾತ್ರವಲ್ಲ, ಇತರ ರಂಗಗಳಲ್ಲಿಯೂ ಇದೇ ಕಾಲಕ್ಕೆ ಗಲಭೆಗಳೆದ್ದವು. ಹಿಂಸಾಮಯ ಅತಿಕ್ರಮಣದಿಂದ ಆರಂಭವಾದ ಕಲಚುರಿ ರಾಜ್ಯಕ್ರಾಂತಿ ಬಗೆಬಗೆಯ ರಾಜಕೀಯ

ಆಂದೋಳನಗಳಿಗೂ, ಪರಿಪರಿಯ ಅತ್ಯಾಚಾರ ಪರಂಪರೆಗೂ ದಾರಿಯನ್ನು ತೋರಿಸಿಕೊಟ್ಟು ಜನಾಂಗವನ್ನು ಅಶಾಂತಿಗೂ ನಾನಾ ಕಷ್ಟಗಳಿಗೂ ಈಡುಮಾಡಿತು."

"....ಶಾಸನಗಳಲ್ಲಿ ಬಿಜ್ಜಳನ ರಾಜ್ಯ ಸಂಪಾದನೆಯ ವಿಧಾನವನ್ನು ಹೀಗೆ ವಿವರಿಸಿದೆ : ಆ ಪೆರ್ಮಾಡಿನೃಪಾಳಂಗಾಪಾದಿತ ಸಕಲ ಕುಲತಲೋರ್ವೀ ರಾಜ್ಯಂ ವ್ಯಾಪಾದಿತ ಚಾಲುಕ್ಯ ಮಹೀಪಾಲಕನಿಕರನಾದನಾ ಬಿಜ್ಜನೃಪಂ.' ಈ ಕಂದಪದ್ಯದಲ್ಲಿಯ 'ವ್ಯಾಪಾದಿತ ಚಾಲುಕ್ಯ ಮಹೀಪಾಲಕನಿಕರನ್' ಎಂದು ಬಿಜ್ಜಳನನ್ನು ವಿಶೇಷಿಸುವ ಪದವನ್ನು ನಾವು ಲಕ್ಷಿಸಬೇಕು. ಇದರಲ್ಲಿ ಬಿಜ್ಜಳನು ಚಾಲುಕ್ಯ ಮನೆತನದ ಅನೇಕ ರಾಜಪುತ್ರರನ್ನು ಕೊಲೆಮಾಡಿದನೆಂದು ಸ್ಪಷ್ಟವಾಗಿ ಹೇಳಿದೆ. ಈ ಕೊಲೆಗಡುಕನ ಕ್ರೂರ ಖಡ್ಗಕ್ಕೆ ಸ್ವತಃ ಮುಮ್ಮಡಿ ತೈಲಪನೂ ಅವನ ಬಾಂಧವರೂ ಆಹುತಿಯಾಗಿರಬೇಕು."

"ಕರ್ನಾಟಕದ ಕಲಚುರಿಗಳು"
ಶ್ರೀ ದೇಸಾಯಿ ಪಾಂಡುರಂಗರಾಯರ, ಎಂ.ಎ.
ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ
ಜೂನ್–ಡಿಸೆಂಬರ್ ೧೯೫೩

ಈ ಉಲ್ಲೇಖಗಳಿಂದ ಚಾಲುಕ್ಯ ಇತಿಹಾಸದಲ್ಲಿ ಕಲಚೂರ್ಯ ಅಂತರಾಯ ಮತ್ತು ಅದರ ಮುಖ್ಯವ್ಯಕ್ತಿ ಬಿಜ್ಜಳನ ಬಗೆಗೆ ಇತಿಹಾಸಕಾರರ ಅಭಿಪ್ರಾಯವೇನೆಂಬುದನ್ನು ಸ್ಥೂಲವಾಗಿ ತಿಳಿಯಬಹುದು. ವಿಲಾಸಾಸಕ್ತನಾಗಿದ್ದ ಮುಮ್ಮಡಿ ತೈಲಪನ ಕಾಲದಲ್ಲಿ ಪ್ರಾರಂಭವಾದ ಈ ರಾಜ್ಯಾಪಹಾರ ಹಂತ ಹಂತವಾಗಿ ಮುಂದುವರಿದು ಬಿಜ್ಜಳನನ್ನು ಕ್ರೌರ್ಯ, ಹಿಂಸೆ, ಅತ್ಯಾಚಾರಗಳ ಅಧಃಪಾತಾಳಕ್ಕೆ ತಳ್ಳಿ, ಕಲ್ಯಾಣದಲ್ಲಿ ರಕ್ತದ ಕೋಡಿ ಹರಿಸಿತು. ಚಾಲುಕ್ಯರಾಜ್ಯದ ಅವಸಾನಕ್ಕೆ ಕಾರಣವಾದ ಈ ದುರಂತ ಕತೆಯನ್ನು ಈ ಕಾದಂಬರೀ ಮಾಲೆಯ ಕೊನೆಯ ಮೂರು ಭಾಗಗಳಲ್ಲಿ ಪುನರ್ಘಟಿಸಲು ಪ್ರಯತ್ನಿಸಿದೆ.

ಬಿಜ್ಜಳನ ಅನಂತರ ನಾಲ್ಕು ನೂರು ವರ್ಷಗಳು ಕಳೆದ ಮೇಲೆ ಯೂರೋಪ್ ಖಂಡದಲ್ಲಿ ಪ್ರಾರಂಭವಾದ ಸಾಹಿತ್ಯ, ವಾಸ್ತುಶಿಲ್ಪ ಮತ್ತು ಕಲೆಗಳ ಪುನರುಜ್ಜೀವನಗಳ ನವಯುಗದ (Renaissance) ಪ್ರವರ್ತಕರಲ್ಲಿ ಒಬ್ಬನಾದ ಇರಾಸ್‌ಮಸ್‌ನು ತನ್ನ ಕಾಲದ ಅರಸರನ್ನು ಕುರಿತು,

"....The Kings are eagles who fatten their eaglets on the flesh of the innocent birds. At this scream of the eagle, the people tremble, the senate yields, the nobility crings, the judges concur,

the divines are dumb, the lawyers assent, the laws and constitution gives way, neither justice nor humanity avail."

ಎಂದು ಹೇಳಿದುದನ್ನು ಬಿಜ್ಜಳನಿಗೆ ಅನ್ವಯಿಸಬಹುದು. ಚಾಲುಕ್ಯ ಅರಸರಲ್ಲಿ ವಿಖ್ಯಾತನಾದ ಆರನೆಯ ವಿಕ್ರಮಾದಿತ್ಯನು ವಿಜ್ಞಾನೇಶ್ವರ ಪಂಡಿತನ ನೇತೃತ್ವದಲ್ಲಿ, ರಾಜ್ಯದ ಶಿಷ್ಠ ಸಾಮಂತ ಪ್ರತಿನಿಧಿಗಳ ಸಹಾಯದಿಂದ ರೂಪಿಸಿ ಆಚರಣೆಗೆ ತಂದಿದ್ದ ಆಡಳಿತ ಪದ್ಧತಿ ಬಿಜ್ಜಳನ ಕಾಲಕ್ಕೆ ನೀರಿನ ಮೇಲನ ಬರಹವಾಗಿ ರಾಜ್ಯಾದ್ಯಂತ ಪ್ರಜಾಪೀಡೆ ತಾಂಡವವಾಡುತ್ತಿತ್ತು. ನಿರಂಕುಶ ದಬ್ಬಾಳಿಕೆಯ ಕಾರ್ಮೋಡ ದೇಶದ ಮೇಲೆ ಹರಡಿತ್ತು. ಮಧುವರಸ ಹರಳಯ್ಯಗಳ ಮೇಲಿನ ವರ್ಣಸಂಕರದ ಆಪಾದನೆ, ಅದರ ವಿಚಾರಣೆಯಲ್ಲಿ ಧರ್ಮಾಧಿಕರಣ ಅನುಸರಿಸಿದ ವಿಧಾನ, ಆ ಸಂದರ್ಭದಲ್ಲಿ ಮತ್ತು ಆ ತರುವಾಯ ಬಿಜ್ಜಳನ ಅಧಿಕಾರಿಗಳು ಶರಣರ ಮೇಲೆ ನಡೆಸಿದ ಹಿಂಸಾಕೃತ್ಯಗಳು, ಇವುಗಳಿಂದ ಆಗಿನ ಪರಿಸ್ಥಿತಿಯ ಒಂದು ಮುಖವನ್ನು ಕಾಣಬಹುದು.

ಬಿಜ್ಜಳನ ಈ ಅಧಃಪತನಕ್ಕೆ ಕಾರಣಗಳೇನೆಂಬುದನ್ನು ತಿಳಿಯಲು ಹೆಚ್ಚು ಶ್ರಮಿಸಬೇಕಾಗಿಲ್ಲ. ಮನಃಶಾಸ್ತ್ರ ಮತ್ತು ಇತಿಹಾಸದ ತುಲನಾತ್ಮಕ ಸಂಶೋಧನೆಯಿಂದ ಅದಕ್ಕೆ ಸಮರ್ಪಕ ಉತ್ತರಗಳನ್ನು ಪಡೆಯಬಹುದು. ಇತಿಹಾಸ ತಜ್ಞರಲ್ಲಿ ವಿಖ್ಯಾತನಾದ ಲಾರ್ಡ್‌ಆಕ್ಟನ್‌ನು ಮಾನವನ ಮೇಲೆ ನಿರಂಕುಶ ಸರ್ವಾಧಿಕಾರದ ಪ್ರಭಾವವನ್ನು ಕುರಿತು,

"Power always corrupts. Absolute power corrupts absolutely. All great men are bad."

ಎಂದು ಹೇಳಿದ್ದಾನೆ.

"In general great poets, artists, and saints, as well as conquerors are strongly sexed."

(Alex Carrel-Man the Unknown.)

ಎಂದು ಮನಃಶಾಸ್ತ್ರ ಹೇಳುತ್ತದೆ.

ವಿಜಯಗರ್ವಿತನೂ ನಿರಂಕುಶ ಸರ್ವಾಧಿಕಾರಿಯೂ ಆಗಿದ್ದ ಬಿಜ್ಜಳನು ಜಗತ್ತಿನ ಎಲ್ಲ ಸರ್ವಾಧಿಕಾರಿಗಳಂತೆ ಧರ್ಮನೀತಿಗಳನ್ನು ತುಳಿದಿಟ್ಟು, ಜನಸಾಮಾನ್ಯರಿಗೆ ಉನ್ಮಾದದಂತೆ ತೋರಬಹುದಾದ ಅಸಂಯತ ಉದ್ರೇಕಪೂರ್ಣ ದಬ್ಬಾಳಿಕೆ ಹಿಂಸಾಕೃತ್ಯಗಳಿಗೆ ತೊಡಗಿದುದು ಸಹಜವಾಗಿದೆ. ಸೋತ ಅರಸರ ಮಡದಿ ಮಕ್ಕಳನ್ನು ಬಲಾತ್ಕಾರದಿಂದ ತಮ್ಮ ಅಂತಃಪುರಗಳಿಗೆ ಸೇರಿಸಿಕೊಳ್ಳುವ

ದುಷ್ಟ ಸಂಪ್ರದಾಯ ಮುಸ್ಲಿಂ ಅರಸರಂತೆ ಹಿಂದೂ ಅರಸರಲ್ಲಿಯೂ ಪ್ರಚಾರದಲ್ಲಿ ಇದ್ದಿತೆಂಬುದಕ್ಕೆ ಇತಿಹಾಸದಲ್ಲಿ ಸಾಕಷ್ಟು ನಿದರ್ಶನಗಳಿವೆ. "ಶಚಿಯನ್ನು ಪಡೆಯದೆ ಇಂದ್ರತ್ವ ಪೂರ್ಣವಾಗುವುದಿಲ್ಲ" ಎಂದು ಹೇಳಿ ನಮ್ಮ ಪುರಾಣಗಳೂ ಇದನ್ನು ಒಂದು ರೀತಿಯಲ್ಲಿ ಅನುಮೋಸಿದಿವೆ. ನೂರ್ಮಡಿ ತೈಲಪನ ಮರಣಾನಂತರ ಬಿಜ್ಜಳನ ವಂಚನೆ ದೌರ್ಜನ್ಯಗಳಿಗೆ ಬಲಿಯಾದ ತೈಲಪನ ರಾಣಿಯೊಬ್ಬಳು ಅವನ ವಧೆಗೆ ಕಾರಣಳಾದದ್ದು ಮಧ್ಯಯುಗದ ರಾಜವಂಶಗಳ ಇತಿಹಾಸದಲ್ಲಿ ಅಸಂಭವ ಘಟನೆಯಲ್ಲ.

ಗೀತೆ ಹೇಳುವಂತೆ ಮತಿಭ್ರಂಶ ವಿನಾಶಗಳಿಗೆ ಕಾರಣವಾದ ಕಾಮ ಕ್ರೋಧ ಲೋಭ ಮೋಹ ಮುಂತಾದ ದುಷ್ಟ ಗುಣಗಳೆಲ್ಲವೂ ಬಿಜ್ಜಳನಲ್ಲಿದ್ದವು. ಕಾಮೇಶ್ವರಿಯ ಮಾತುಗಳಲ್ಲಿ ಅವನು 'ಪ್ರಜಾಪೀಡಕ ಮಾನವರೂಪೀದಾನವ' ನಾಗಿದ್ದನು. ಜನತೆಯ ದೃಷ್ಟಿಯಲ್ಲಿ ಲೋಕಕಂಟಕನಾಗಿದ್ದ ದಾನವೇಶ್ವರ ರಾವಣನನ್ನು "ಪ್ರವರಪುರುಷ"ನನ್ನಾಗಿ ವರ್ಣಿಸಿದ ಒಂದು ವಿಶಿಷ್ಟ ಸಂಪ್ರದಾಯದ ಕವಿಗಳು, ಇತಿಹಾಸ ಶಾಸನಾಧಾರಗಳನ್ನು ಅತ್ತಿಟ್ಟು, ಬಿಜ್ಜಳನನ್ನು "ಆದರ್ಶರಾಜ" ನನ್ನಾಗಿ ವರ್ಣಿಸಿದುದು ಸಹಜವಾಗಿದೆ. ಆದರೆ ಸತ್ಯದೂರವೂ ಅತಿರಂಜಿತವೂ ಆದ ಅಂತಹ ರಚನೆಗಳಿಗೆ ಇತಿಹಾಸದ ದೃಷ್ಟಿಯಿಂದ ಯಾವ ಮೌಲ್ಯವೂ ಇರುವುದಿಲ್ಲ.

ಬಿಜ್ಜಳನ ವಧೆ ಶರಣರ ಪ್ರಚೋದನೆಯಿಂದ ನಡೆಯಿತೆಂಬ ಸತ್ಯದೂರವಾದ ಅತಿರಂಜಿತ ಅಪವಾದ, ವಧೆ ನಡೆದ ಕೆಲವು ವರ್ಷಗಳ ಮೇಲೆ, ಕಲಚೂರ್ಯ ಅಧಿಕಾರ ಅಸ್ತವಾದ ಅನಂತರ, ನಾಲ್ವಡಿ ಸೋಮೇಶ್ವರನ ಕಾಲದಲ್ಲಿ ಪ್ರಚಾರಕ್ಕೆ ಬಂದಿರಬೇಕು. ಪ್ರಜಾಪೀಡಕನೂ ರಾಜ್ಯಾಪಹಾರಿಯೂ ಆಗಿದ್ದ ಬಿಜ್ಜಳನ ವಧೆ ತಮ್ಮ ಪ್ರಚೋದನೆ ಪ್ರೋತ್ಸಾಹಗಳಿಂದ ನಡೆಯಿತೆಂದು ಶರಣರೇ ಜಂಭದಿಂದ ಹೇಳಿಕೊಂಡಿರಬೇಕು. ಕ್ರಿ.ಶ. ೧೧೯೧ ರಲ್ಲಿ ರಚಿತವಾಗಿರಬಹುದಾದ ತೆಲುಗು "ಬಸವ ಪುರಾಣ"ದಲ್ಲಿ ಮೊಟ್ಟಮೊದಲು ಇದರ ಸೂಚನೆ ದೊರೆಯುತ್ತದೆ. ಅದನ್ನು ರಚಿಸಿದ ಪಾಲ್ಕುರಿಕೆ ಸೋಮನಾಥನು, "ಪ್ರಸ್ತುತಿಂಪಂಗ ಸದ್ಭಕ್ತಿ ವಿಸ್ಫುರಣ ಪ್ರಸ್ತುತಿಕೆಕ್ಕಿನ ನಸವುನಿ ಚರಿತ ಚೆಪ್ಪಿತಿ ಭಕ್ತುಲಚೆವಿನ್ನಮಾಡ್ಕಿ," ಎಂದು ಹೇಳಿಕೊಂಡಿದ್ದಾನೆ. ಸ್ತುತಿರೂಪವಾಗಿ ಜನರಲ್ಲಿ ಹರಡಿ ಪ್ರಖ್ಯಾತಿಗೇರಿದ ಬಸವನ ಚರಿತ್ರೆಯನ್ನು ಭಕ್ತರಿಂದ ಕೇಳಿದಂತೆ ನಾನು ಬರೆಯುತ್ತೇನೆ ಎಂಬ ಅವನ ಈ ಹೇಳಿಕೆ ಅರ್ಥಗರ್ಭಿತವಾಗಿದೆ. ಪಾಲ್ಕುರಿಕೆ ಸೋಮನಾಥನು ಬಸವಣ್ಣನವರ ಸಮಕಾಲೀನನಾಗಿದ್ದು ಅವರ ಚರಿತ್ರೆಯನ್ನು ಸ್ವಯಂ ತಿಳಿದವನಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಘಟನೆಗಳು ನಡೆದ ಸ್ಥಳದಿಂದ ಬಹು ದೂರದ

ಪಾಲ್ಕುರಿಕೆಯಲ್ಲಿದ್ದ ಸೋಮನಾಥನು ಭಕ್ತರಿಂದ ಕೇಳಿದ ಈ ಕಥೆ "ಸದ್ಭಕ್ತಿ ವಿಸ್ಫುರಣ ಪ್ರಸ್ತುತಿ" ಗೇರಿದ ಕಥೆಯೆಂಬುದನ್ನು ಗಮನಿಸಿದಾಗ, ಬಸವಣ್ಣನವರು ತಮ್ಮ ಕೊನೆಗಾಲದಲ್ಲಿ ಹೇಳಿರಬಹುದಾದ, "ಹೊಗಳಿ ಹೊಗಳಿ ಹೊನ್ನ ಶೂಲಕಿಕ್ಕಿದರೆನ್ನವರು," ಎಂಬ ವಚನ ಭಾಗ ನೆನಪಿಗೆ ಬರುತ್ತದೆ.

ಬಿಜ್ಜಳನನ್ನು ವಧಿಸಿದ "ಜಗದೇವ"ನನ್ನು ಸೋಮನಾಥನು ದಂಡನಾಯಕ, ಮಂತ್ರಿ ಎಂದು ಕರೆದಿರುವುದೂ ಗಮನಾರ್ಹ. ಆಮೇಲಿನ ಕವಿಗಳ ಕಲ್ಪನೆಯಂತೆ ಜಗದೇವ ಮಲ್ಲಿಬೊಮ್ಮರು ಚಾಲುಕ್ಯ ರಾಜ್ಯದಲ್ಲಿ ಪದವಿ ಪ್ರತಿಷ್ಠೆಗಳನ್ನು ಪಡೆದಿದ್ದರು. ನಾಲ್ಕನೆಯ ಸೋಮೇಶ್ವರನ ಕಾಲಕ್ಕೆ ನಿಡುಂಗಲ್ ಸೀಮೆಯ ಸಾಮಂತನಾಗಿದ್ದ ಬೊಮ್ಮರಸನು ಇವರಲ್ಲೊಬ್ಬನು. ತನ್ನ ಒಂದು ಶಾಸನದಲ್ಲಿ ಇವನು "ಬಿಜ್ಜಗ ಶೀರಚ್ಛೇದಕ" ಎಂದು ತನ್ನನ್ನು ಹೊಗಳಿಕೊಂಡಿದ್ದಾನೆ. ಜಗದೇವ ಎಂದು ಸೋಮನಾಥನು ಹೇಳುವ ಇನ್ನೊಬ್ಬ ದಂಡನಾಯಕನು, ಬಿಜ್ಜಳನು ಸೆರೆಯಲ್ಲಿಟ್ಟಿದ್ದ ಚಾಲುಕ್ಯ ಅರಸು ಜಗದೇಕಮಲ್ಲನೇ ಆಗಿರಬೇಕೆಂದು ನಾವು ನಿಸ್ಸಂದೇಹವಾಗಿ ನಿರ್ಧರಿಸಬಹುದು. ಚಾಲುಕ್ಯ ರಾಜಸತ್ತೆಯ ಪುನಃಪ್ರತಿಷ್ಠೆಗಾಗಿ ನಡೆದ ಈ ರಾಜಕೀಯ ಕೊಲೆಯನ್ನು ಶರಣರ ಪ್ರಚೋದನೆಯಿಂದ ನಡೆಯಿತೆಂದು ಹೇಳಿ, ಅದರ ಸಮರ್ಥನೆಗಾಗಿ ಪುರಾಣ ಸಂಪ್ರದಾಯದ ಕಲ್ಪಿತ ಕಥೆಗಳನ್ನು ಕಟ್ಟುವ ಈ ಕಾರ್ಯ ಮುಖ್ಯವಾಗಿ ಶರಣ ಕವಿಗಳಿಂದಲೇ ನಡೆಯಿತೆಂಬುದು ಖಂಡನಾರ್ಹವಾಗಿದೆ. ವಾಸ್ತವದಲ್ಲಿ ಶಾಂತವಾದಿಗಳೂ ಪ್ರಗತಿಶೀಲರೂ ಆಗಿದ್ದ ಶರಣರು ಬಿಜ್ಜಳನ ರಾಜ್ಯಕಾಲದ ಕೊನೆಯ ದಿನಗಳಲ್ಲಿ ಮತ್ತು ಅವನ ಕೊಲೆಯ ಅನಂತರ ಪ್ರಭುತ್ವದ ದೌರ್ಜನ್ಯ ದಬ್ಬಾಳಿಕೆಗಳ ಫಲವಾಗಿ ಬಗೆ ಬಗೆಯ ಕಷ್ಟನಷ್ಟಗಳಿಗೆ ಗುರಿಯಾದರು. ಕಲ್ಯಾಣದಿಂದ ಚದುರಿ ಹೋಗಿ ಸಹ್ಯಾದ್ರಿಯ ಅರಣ್ಯ ಪ್ರದೇಶಗಳಲ್ಲಿ ಅವರು ಆಶ್ರಯ ಪಡೆಯಬೇಕಾಯಿತು. ಆ ಸಂದರ್ಭದಲ್ಲಿ ಅವರು ಸಂಪೂರ್ಣವಾಗಿ ವಿನಾಶವಾಗದೆ ಹೋದದ್ದು ಅವರ ಧರ್ಮನಿಷ್ಠೆ ಅಂತಃಶ್ರದ್ಧೆಗಳಿಂದಲೇಎಂಬುದು ಈಗ ಸರ್ವತ್ರ ಅಂಗೀಕರಿಸಲ್ಪಟ್ಟಿದೆ.

ಕನ್ನಡ ಸಾಹಿತ್ಯ ಪ್ರಗತಿ, ಸಮಾಲೋಚನೆ ಮತ್ತು ಮೌಲ್ಯ ನಿರ್ಣಯದ ವಿಧಾನವನ್ನು ಕುರಿತು ಯೋಚಿಸಿದಾಗಲೆಲ್ಲ ಭರ್ತೃಹರಿಯ ಒಂದು ಪದ್ಯ ನೆನಪಿಗೆ ಬರುತ್ತದೆ.

ಭೋದ್ಧಾರೋ ಮತ್ಸರಗ್ರಸ್ತಾಃ ಪ್ರಭವಸ್ಮಯದೋಷಿತಾಃ ।
ಅಭೋಧೋಪಹತಾಶ್ಚಾನ್ಯೇ ಲೀನಮಂಗೇ ಸುಭಾಷಿತಃ ॥

ಎಂದು, ಇಲ್ಲಿ ಸೂಚಿತವಾದ ಮೂರು ಅಂತರಾಯಗಳೊಡನೆ

ಜಾತೀಯತೆಯ ವಿರೋಧವನ್ನೂ ಕನ್ನಡ ಲೇಖಕರು ಎದುರಿಸಬೇಕಾಗುತ್ತದೆ. ಶಾರದಾ ಪ್ರಕಟನಾಲಯದ ನನ್ನ ಮಿತ್ರರು ಸಚೇತಕರಾಗಿ, ಕಾಲ ಕಾಲಕ್ಕೆ ನನ್ನನ್ನು ಎಚ್ಚರಿಸದೆ ಹೋಗಿದ್ದರೆ, ನಾಲ್ಕು ವರ್ಷಗಳ ಹಿಂದೆ ಪ್ರಾರಂಭಿಸಿದ ಈ ಕಾದಂಬರೀ ಮಾಲಿಕೆ, ಮೇಲಿನ ಕಾರಣಗಳಿಂದಾಗಿ ಅಪೂರ್ಣವಾಗಿಯೇ ಉಳಿಯುತ್ತಿತ್ತೋ ಏನೋ ! ಅದಕ್ಕಾಗಿ ನಾನು ಆ ನನ್ನ ಮಿತ್ರರಿಗೆ ಕೃತಜ್ಞನಾಗಿದ್ದೇನೆ.

ಈ ಕಾದಂಬರೀ ಮಾಲಿಕೆಯ ರಚನೆಯ ಅವಧಿಯಲ್ಲಿ, ಮೊದಲೇ ಕೆಟ್ಟಿದ್ದ ನನ್ನ ಆರೋಗ್ಯದಿಂದಾಗಿ ಅನೇಕ ಸಾರಿ ನಾನು ಜ್ವರದಿಂದ ಹಾಸಿಗೆ ಹಿಡಿಯುವಂತಾಯಿತು. ಈ ಸಂದರ್ಭಗಳಲ್ಲೆಲ್ಲ ಅಗತ್ಯವಾದ ಚಿಕಿತ್ಸೆ ನಡೆಸಿ, ನಾನು ಉದ್ದೇಶಿಸಿದ ಕಾರ್ಯವನ್ನು ಪೂರೈಸುವ ಶಕ್ತಿಯನ್ನು ಕೊಟ್ಟ ನನ್ನ ಮಾನ್ಯ ಮಿತ್ರರಾದ ಡಾ॥ ಎಂ. ಶಿವರಾಂ ಮತ್ತು ಡಾ॥ ಎಸ್. ಸುಬ್ಬರಾವ್ ಇವರುಗಳಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ.

ಸಹೃದಯರಾದ ವಾಚಕರು ಈ ಬೃಹತ್ ಕಾದಂಬರಿಯ ಹಿಂದಿನ ಐದು ಭಾಗಗಳಂತೆ ಕೊನೆಯ ಈ ಭಾಗವನ್ನೂ ಆದರದಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

**ಬಿ. ಪುಟ್ಟಸ್ವಾಮಯ್ಯ**

ಬೆಂಗಳೂರು ನಗರ
ತಾ॥ ೬–೫–೧೯೬೩

* * * *